ಇರಲಿ; ನಮ್ಮ ಈ ಮೇಲಿನ ಪ್ರತಿಪಾದನದ ಮೇಲಿಂದ ಮಹಾತ್ಮಾ ಗಾಂಧಿಗಳು ಪ್ರಾರಂಭಿಸಿದ ಅಸಹಕಾರಿತೆಯು ಕೇವಲ ಪರಿಪಕ್ವವಾಗಿದೆ ಎಂದು ನಾವಾಗಲಿ, ದೇಶದೊಳಗಿನ ಬಹುಮತವಾಗಲಿ ಹೇಳುತ್ತದೆ ಎಂದು ಯಾರೂ ತಿಳಿಯಬಾರದು. ಅಸಹಕಾರಿತೆಯ ತತ್ವವು ತಾತ್ವಿಕದೃಷ್ಟಿಯಿಂದ ನಿರ್ದೋಷವಾಗಿದ್ದರೂ, ಇಂಗ್ಲಂಡ್, ಐರ್ಲಂಡ್ ಮುಂತಾದ ಶಿಷ್ಟದೇಶಗಳು ಇದನ್ನು ಆಚರಿಸುತ್ತವಾದರೂ ಹಿಂದುಸ್ಥಾನದಲ್ಲಿ ಅದು ಆಚರಣೆಗೆ ಇನ್ನೂ ಸಾಕಷ್ಟು ಪರಿಪಕ್ವವಾಗಿಲ್ಲವೆಂದು ಅನೇಕರ ಅಭಿಪ್ರಾಯವಿದೆ. ಉದಾಹರಣಾರ್ಥವಾಗಿ, ವಿಲಾಯತಿಯಿಂದ ಮೊನ್ನೆ ಬಂದಿರುವ ನಾಮದಾರ ಪಟೇಲರ ಮತಗಳನ್ನು ತೋರಿಸಬಹುದು. ಹಿಂದುಸ್ಥಾನದೊಳಗಿನ ಜನರಿಗೆ ಈಗ ಕೊನೆಯ ಅಸ್ತ್ರವೆಂದರೆ ಅಸಹಕಾರಿತೆಯೆ ಎಂದು ವಿಲಾಯತಿಯೊಳಗಿನ ಲೇಬರಪಾರ್ಟಿಯವರು ಕೂಡ ಹೇಳುತಿದ್ದಾರೆ. ಮತ್ತು ಈ ಮಾತು ನಿಜವೆ ಸರಿ. ಸನದುಶೀರ ಚಳವಳದ ಶಸ್ತ್ರಾಗಾರದೊಳಗಿನ ಅರ್ಜಿ, ವಿಜ್ಞಾಪನೆ, ಡೆಪ್ಯುಟೇಶನು ಮುಂತಾದ ಅಸ್ತ್ರಗಳು ಈಗ ನಿರ್ಜೀವವಾಗಿ ಹೋಗಿದ್ದಾವೆ. ಇವುಗಳನ್ನು ಪ್ರಯೋಗಿಸದೆ ಇದ್ದಲ್ಲಿ ಯಾವ ಫಲವೊ ಅದೇ ಫಲವು ಅವುಗಳನ್ನು ಪ್ರಯೋಗಿಸುವುದರಿಂದಲೂ ಒದಗುತ್ತದೆ. ಪುನಃ ಇದರ ತಾರತಮ್ಯವನ್ನೆ ಹೇಳಬೇಕೆಂದಿದ್ದರೆ ನಿಷ್ಫಲವಾದ ಅಸ್ತ್ರಗಳನ್ನು ಪ್ರಯೋಗಿಸುವುದನ್ನು ಬಿಟ್ಟರೆ ಶ್ರಮವಾದರೂ ಉಳಿಯಬಹುದು! ಈ ಸಂಗತಿಗಳನ್ನು ಪರ್ಯಾಲೋಚಿಸಿ ಗಾಂಧಿಗಳು ಸನದುಶೀರ ಚಳವಳದ ಶಸ್ತ್ರಾಗಾರದಿಂದ ಅಶಸ್ತ್ರ ಪ್ರತಿಕಾರದ—ಅಸಹಕಾರಿತೆಯ ಶಸ್ತ್ರವನ್ನು ಹೊರಗೆ ತೆಗೆದಿದ್ದಾರೆ. "ಅಸಹಕಾರಿತೆಯಿಂದ ಪ್ರಜೆಗಳ ರಾಜನಿಷ್ಠೆಗೆ ಭಂಗಬರುವುದಿಲ್ಲ. ಬಾದಶಹರ ವಿಜಂಟರಾದ ಅಧಿಕಾರಿಗಳು ಕೈಕೊಳ್ಳುವ ತಪ್ಪು ಹಾದಿಗಳನ್ನು ತೋರಿಸಿಕೊಟ್ಟು ಅವರನ್ನು ಸರಿ ದಾರಿಗೆ ತರಲು ಯತ್ನಿಸಿದರೆ ಅದು ಅರಾಜನಿಷ್ಠೆಯಾದೀತೆ? ಆಗಲಿಕ್ಕಿಲ್ಲ" ಈಗಿನ ಅಸಹಕಾರಿತೆಯಾದರೂ ಇದಕ್ಕಿಂತ ಹೆಚ್ಚಿನ ಯಾವ ಕೆಲಸವನ್ನೂ ಮಾಡುವುದಿಲ್ಲ. ಅಸಹಕಾರಿತೆಯ ಈ ಮರ್ಮವನ್ನು ಸರಿಯಾಗಿ ತಿಳಿದುಕೊಂಡ ಇಂಗ್ಲಂಡಿನೊಳಗಿನ ಲೇಬರ ಪಾರ್ಟಿಯು ಅಸಹಕಾರಿತೆಯಲ್ಲಿ ಹಿಂದುಸ್ಥಾನದ ತಂಟೆಗಳ ಪಾಯ ಉಂಟೆಂದು ನಾಮದಾರ ಪಟೇಲರ ಹತ್ತರ ಹೇಳಿದೆ. ಹಿಂದುಸ್ಥಾನದೊಳಗಿನ ರಾಷ್ಟ್ರೀಯ ಪಕ್ಷವೂ ವಿಲಾಯತಿಯೊಳಗಿನ ಲೇಬರ ಪಾರ್ಟಿಯೂ ಇದರ ತಾತ್ವಿಕ ಸ್ವರೂಪದ ಮಟ್ಟಿಗೆ ಒಂದೆ ಮತವನ್ನು ಪ್ರತಿಪಾದಿಸುತ್ತವೆ. ಆದರೆ ಬರುವ ಕೌನ್ಸಿಲುಗಳ ಮೇಲೆ ಬಹಿಷ್ಕಾರ ಹಾಕುವುದು ಇತ್ಯಾದಿ ಸಂಗತಿಗಳು ಲೇಬರ ಪಾರ್ಟಿಗಾಗಲಿ, ಪಟೇಲರಿಗಾಗಲಿ ಮಾನ್ಯವಿಲ್ಲ. ಅಲ್ಲದೆ, ಪಟೇಲರ ಮತದಂತೆ ಪ್ರಕೃತ ಚಳವಳದ ಉಪಕ್ರಮದಲ್ಲಿ ಇನ್ನೊಂದು ಮಹತ್ವದ ನ್ಯೂನತೆ ಉಂಟು. ಖಿಲಾಫತ ಪ್ರಶ್ನೆ, ಪಂಜಾಬ ಪ್ರಕರಣ ಈ ಎರಡು ಸಂಗತಿಗಳಿಗಾಗಿ ಮಾತ್ರ ಅಸಹಕಾರಿತ್ವವನ್ನು ಕೈಕೊಳ್ಳುವುದು ಅಷ್ಟೊಂದು ಪ್ರಶಸ್ತವಲ್ಲ. ಸ್ವಯಂ ನಿರ್ಣಯದ ತತ್ವಕ್ಕನುಸಾರವಾಗಿ ಹಿಂದಿ ಸ್ವರಾಜ್ಯದ ಪ್ರಾಪ್ತ್ಯರ್ಥ ಇದನ್ನು ಆಚರಿಸುವುದು ಯೋಗ್ಯವಾಗಿದೆ ಎಂದು ನಾಮದಾರ ಪಟೇಲರು ತಮ್ಮ ಅಭಿಪ್ರಾಯವನ್ನು ಹೇಳಿರುವರು. ಮತ್ತು ಈ ಅಭಿಪ್ರಾಯವು ಬಹಳ ಸಮರ್ಪಕವೊಂದು ತೋರುತ್ತದೆ. ರಾಜ್ಯಪದ್ಧತಿಯನ್ನು ಸ್ವಯಂ ನಿರ್ಣಯದ ತತ್ವಕ್ಕನುಸಾರವಾಗಿ ಬದಲಾಯಿಸಿಕೊಳ್ಳದೆ ಇದ್ದರೆ ಪಂಜಾಬ ಪ್ರಕರಣದಂಥ ಅನರ್ಥಗಳು ಆಗಾಗ್ಯೆ

[illegible] ಯನ್ನು ಬದಲಾಯಿಸಿ ಉದಾರವಾದ, ಹೆಚ್ಚು ಉತ್ತಮವಾದ ರಾಜ್ಯಕಾರವನ್ನು ಕೊಡಬೇಕೆಂದು ಹಿಂದಿ ದೇಶವು ಕೇಳಿದೆ; ಮತ್ತು ಪಾರ್ಲಿಮೆಂಟು ಈ ಹಕ್ಕನ್ನು ಒಪ್ಪಿಕೊಂಡಿದೆ. ಇಂಥ ಸಂದರ್ಭದಲ್ಲಿ ಅಸಹಕಾರಿತೆಯನ್ನು ಕೈಕೊಳ್ಳುವದೆ ಇದ್ದರೆ ಕಾಂಗ್ರೆಸಿನ ಸುಧಾರಣೆಯ ಯೋಜನೆಯನ್ನು ಸರಕಾರವು ಮತ್ತು ಪಾರ್ಲಿಮೆಂಟು ನಮಗೆ ಆದಷ್ಟು ಬೇಗನೆ ಕೊಡುವಂತೆ ಮಾಡುವುದರಲ್ಲಿ ಕೈಕೊಳ್ಳಬೇಕು. ಮತ್ತು ಈ ವಿಷಯದಲ್ಲಿ ಅಸಹಕಾರಿತ್ವವನ್ನು ಕೈಕೊಳ್ಳುವದೆಂದರೆ ಅದು ಈಗಲ್ಲ. ಹೊಸ ಕೌನ್ಸಿಲುಗಳ ಪ್ರಾಣ ಪ್ರತಿಷ್ಠೆಯಾದ ಮೇಲೆ ಅಲ್ಲಿ ಸ್ವರಾಜ್ಯದ ಬಿಲನ್ನು ತಂದು ಅದಕ್ಕೆ ಒಂದು ವೇಳೆ ವಿಘ್ನವು ಬಂದರೆ ಆಗ ಈ ತತ್ವವನ್ನು ಕೈಕೊಳ್ಳುವುದು ಉಚಿತವೆಂದು ನಾಮದಾರ ಪಟೇಲರು ಹೇಳುತಿದ್ದಾರೆ. ನಾಮದಾರ ಪಟೇಲರ ಈ ವಿಚಾರ ಸರಣಿಯು ದೂರದರ್ಶಿತನದ್ದಾಗಿ ತೋರುತ್ತದೆ.

ನಾಮದಾರ ಪಟೇಲರು ಅಥವಾ ಇತರ ರಾಷ್ಟ್ರೀಯರು ಅಸಹಕಾರಿತೆಯಲ್ಲಿ ಕೆಲವು ವೈಗುಣ್ಯಗಳನ್ನು ಈ ಮೇರೆಗೆ ತೋರಿಸುತ್ತಾರಾದರೂ ಮೇಲಿನ ಶಾಂತಪಕ್ಷದವರಂತೆ ಈ ತತ್ವವನ್ನೆ ನಿಷೇಧಿಸುವುದಿಲ್ಲ. ಇಲ್ಲವೆ ಇದರಿಂದ ದೇಶಕ್ಕೆ ಒಳ್ಳೇದಾಗಲಿಕ್ಕಿಲ್ಲ, ಕೆಟ್ಟದಾದೀತು ಎಂದು ಮೊಡರೇಟರಂತೆ ಶಾಪ ಕೊಡುವುದಿಲ್ಲ. ಮೊಡರೇಟರು ಈ ಸಂದರ್ಭದಲ್ಲಿ ಉಪಯೋಗಿಸಿದ ಭಾಷಾ ಪದ್ಧತಿಯು ಬಹು ವಿಲಕ್ಷಣವಾದ್ದು. ಅವರಿಗೆ ಅನ್ಯರನ್ನು ನಿಷೇಧಿಸಿ ತಮ್ಮ ರಾಜನಿಷ್ಠೆಯನ್ನು ತೋರಿಸಬೇಕೆಂದು ತೋರುತ್ತದೆ. ಇದು ಕೇವಲ ಅನುಚಿತವಾದ್ದು. ಆದರೂ ವೈಸರಾಯರ ಅಪೇಕ್ಷೆಯನ್ನು ಸಫಲಗೊಳಿಸುವ ಸದಭಿಪ್ರಾಯದಿಂದ ಅವರು ಈ ಅನುಚಿತ ಪ್ರಕಾರವನ್ನು ಮಾಡಿದ್ದಾರೆ!

ಸ್ಫುಟ ವಿಚಾರಗಳು.

೧. ವರಿಷ್ಠ ಕೌನ್ಸಿಲಿನಲ್ಲಿ ನಾಮದಾರ ಖಾಪರ್ಡೆಯವರು ಮಧ್ಯಪ್ರಾಂತದೊಳಗಿನ ಸಾಗರದಲ್ಲಿ ದನಗಳನ್ನು ಕೊಲ್ಲುವ ವಿಷಯ ಕೇಳಿದ್ದೂ, ಆ ಪ್ರಶ್ನೆಗೆ ಸರಕಾರದ ಕಡೆಯಿಂದ ಉತ್ತರ ದೊರಕಿದ್ದೂ ವಾಚಕರಿಗೆ ಕಳೆದ ಸಂಚಿಕೆಯಿಂದ ತಿಳಿದೇ ಇದೆ. ಶ್ರೀ. ಖಾಪರ್ಡೆಯವರ ಪ್ರಶ್ನೆಗೆ "ಮಧ್ಯಪ್ರಾಂತದ ಕೌನ್ಸಿಲಿನಿಂದ ಈ ವಿಷಯದ ಮಾಹಿತಿಯನ್ನು ಸಂಗ್ರಹಿಸುವುದು ಒಳ್ಳೇದು" ಎಂದು ವರಿಷ್ಠ ಸರಕಾರವು ಹೇಳುತ್ತಿದ್ದ ಈ ಸಂಧಿಯಲ್ಲಿ ದೈವವಶಾತ್, ಮಧ್ಯಪ್ರಾಂತದ ಕೌನ್ಸಿಲಿನಲ್ಲಿ ಈ ವಿಷಯವು ಚರ್ಚೆಗೆ ಬಂತು. ಸಾಗರದ ಸಮೀಪದಲ್ಲಿರುವ ರತೋನಾ ಎಂಬ ಕಡೆಯಲ್ಲಿ ದಿನ ೧ಕ್ಕೆ ೧೫೦೦ ದನಗಳನ್ನು ಕಡಿಯುವ "ಕಸಾಯಿಖಾನೆ"ಯನ್ನೂ ಚರ್ಮಗಳನ್ನು ಹದಮಾಡುವ ಕಾರಖಾನೆಯನ್ನೂ ತೆರೆಯಲಾಗುತ್ತದೆ. ಮತ್ತು ಚರ್ಮಗಳನ್ನು ಹದಮಾಡುವ ಕೆಲಸವು ಒಂದು ಇಂಗ್ಲಿಷ್ ಕಂಪೆನಿಗೆ ಒಪ್ಪಿಸಲ್ಪಟ್ಟಿದೆ ಎಂದು ಜನವಾರ್ತೆಯು ಉಂಟು, ಇದು ಹೌದೊ ಹೇಗೆ, ಹೌದಾದರೆ ಇಂಥ ಕಸಾಯಿ ಖಾನೆಯನ್ನು ಸರಕಾರವು ತೆರೆಯುವುದಾಗಲಿ ಇಲ್ಲವೆ ಅದಕ್ಕೆ ಉತ್ತೇಜನವನ್ನು ಕೊಡುವುದಾಗಲಿ ಯೋಗ್ಯವೊ ಹೇಗೆ? ಈ ಪ್ರಶ್ನೆಗೆ ಮಧ್ಯಪ್ರಾಂತದ ಕೌನ್ಸಿಲಿನಲ್ಲಿ ಸರಕಾರದ ಕಡೆಯಿಂದ ದೊರಕಿದ ಉತ್ತರವು ಬಹಳ ಪರಿಷ್ಕಾರದ್ದಾಗಿತ್ತು! ದನ ಕಡಿಯುವ ವಿಷಯದಲ್ಲಿ ಜನರೊಳಗೆ ಬಹಳ ತಪ್ಪು ತಿಳುವಳಿಕೆ ಹಬ್ಬಿದೆ ಎಂದು ತೋರುತ್ತದೆ. ಆದ್ದರಿಂದ ಅದರ ಸ್ಪಷ್ಟೀಕರಣವನ್ನು ಮಾಡುವುದು ಒಳ್ಳೇದೆಂದು ಹೇಳಿ ಮಧ್ಯಪ್ರಾಂತದ ಸರಕಾರವು ಕೊಡುವ ಇದರ ವಿವರಣವು ಯಾವುದೆಂದರೆ, ದನಗಳನ್ನು ಈ ಮೊದಲು ನಿರ್ದಯತನದಿಂದಲೂ ಹೊಲಸುತನದಿಂದಲೂ ಕೊಲ್ಲುತ್ತಿದ್ದರು. ಈಗ ಈ ಕಾರಖಾನೆಯನ್ನು ತೆರೆದು ಭೂತದಯೆ ಮತ್ತು ಸ್ವಚ್ಛತೆ ಈ ತತ್ವಗಳಿಗನುಸಾರವಾಗಿ ಅವುಗಳನ್ನು ಕೊಲ್ಲುವ ಕ್ರಮವು ಪ್ರಾರಂಭಿಸಲ್ಪಟ್ಟಿದೆ! ಬೇರೆಬೇರೆ ಕಡೆಗಳಲ್ಲಿ ಅತಿ ಕಠೋರತೆಯಿಂದ (inhumane) ಮತ್ತು ಹೊಲಸುತನದಿಂದ (insanitary) ಕೊಲ್ಲುತ್ತಿದ್ದಕ್ಕಿಂತ ಕ್ಷಣಾರ್ಧದೊಳಗೆ ಈ ಪ್ರಾಣಿಯನ್ನು ನಿಜಧಾಮಕ್ಕೆ ಕಳುಹಿಸುವುದು ಒಳ್ಳೆಯದಲ್ಲವೆ? ಶಾಬಾಸ! ಇದೇ ಭೂತದಯೆ ಮತ್ತು ಸ್ವಚ್ಛತೆ! ಇದಕ್ಕಿಂತಲೂ ಹೆಚ್ಚಿನ ಭೂತದಯೆಯನ್ನು ಇನ್ನಾರಿಂದಲೂ ತೋರಿಸಲು ಸಾಧ್ಯವಿಲ್ಲವೆಂದು ನಾವು ತಿಳಿಯುತ್ತೇವೆ. ಪ್ರಜಾಪಹಾರದ ಶಾಸ್ತ್ರವು ಎಷ್ಟರ ಮಟ್ಟಿನ ಸುಧಾರಣೆಯನ್ನು ಹೊಂದಿದೆ ಎಂದು ನೋಡಬೇಕೆಂದಿದ್ದವರಿಗೆ ಮಧ್ಯಪ್ರಾಂತದಲ್ಲಿ ಏರ್ಪಡುವ "ಕಸಾಯಿಖಾನೆ"ಯು ಒಂದು ಆದರ್ಶವೆಂದು ಹೇಳಬಹುದು. ದನಗಳನ್ನು ಕೊಲ್ಲುವುದೆ

[illegible]

[illegible] ಎಂದರೆ [illegible] [illegible] ಮಾಡುವ [illegible] ಕೊಡುವುದು [illegible] ಅವಶ್ಯಕವಿಲ್ಲ. ಆದರೆ ದನಗಳನ್ನು [illegible] ಹಿಂದೂಗಳು [illegible] ಪ್ರಧಾನ [illegible] ದೇಶ, ದನಗಳು [illegible] ಹುಲ್ಲಿಲ್ಲ, [illegible] ಬರಗಾಲವು ಬಂದೀತು ಎಂದು [illegible] ಸರ್ಕಾರವು ಹೇಳುವ ಸಭ್ಯತೆ [illegible] (ಮೊದಲಾದ) [illegible] ನೆನಪಾಗದೆ ಇರದು. ಎಮ್ಮೆ [illegible] ಬಂದ ದಾಸಿಗೆ "ನಮ್ಮನ್ನು ಕೊಲ್ಲುವುದು ನಿಮ್ಮ ರಥ ಕೆಲಸವೆ?" ಎಂದು ಕೇಳಿದಾಗ ಆ ದಾಸಿಯು, "ಹೋಮ ಹವನಗಳಿಗೆ ಬ್ರಾಹ್ಮಣರು ನಿಮ್ಮನ್ನು ತುಂಡುಮಾಡಿಕೊಂಡು ಹೋಗುವುದರಿಂದ ನಿಮಗೆ ಗಾಯವು ಬೀಳುತ್ತವೆ, ನೋವಾಗುತ್ತದೆ, ನೆತ್ತರವು ಹರಿಯುತ್ತದೆ. ಈ ಎಲ್ಲ ಅನರ್ಥಕ್ಕಿಂತ ಒಮ್ಮೆಯೆ ಕೊಲ್ಲುವುದು—ನಿಮಗೆ ಯಾವ ವೇದನೆಯು ಗೊತ್ತಾಗದಂತೆ ಮಾಡುವುದು, ದಯಾರ್ದ್ರಗಳ ಕೆಲಸವಲ್ಲವೆ?" ಎಂದು ಹೇಳಿದ ಹಾಗೆ ಮದ್ರಾಸು ಪ್ರಾಂತದ ಕೌನ್ಸಿಲಿನಲ್ಲಿ ಹೇಳಲಾಗುತ್ತದೆ! ಈ ಯುಕ್ತಿವಾದವು ನಿಜವಾಗಿ ನಿರ್ದಯತನದ್ದು ಮತ್ತು ಅನ್ಯಾಯಯುಕ್ತತೆಯು, ದೇಶದ ಧರ್ಮಕ್ಕೂ, ಸಂಪತ್ತಿಗೂ ಹಾನಿಕರವಾದ್ದೆಂದು ಹೇಳದೆ ನಿಮ್ಮಿರದಲಾಗದು.

೨. ವರಿಷ್ಠ ಕೌನ್ಸಿಲಿನಲ್ಲಿ ಸೈನ್ಯದ ವಿಷಯವಾಗಿ ಎರಡು ಬೀಲುಗಳು ಬಂದಿದ್ದವು. "ಟೆರ್ರಿಟೋರಿಯಲ್ ಫೋರ್ಸ್" ಎಂದರೆ ಸಹಾಯಕ ಸೈನ್ಯವನ್ನು ಇಡಬೇಕೆಂದು ಹೇಳುವ ಬೀಲು ಒಂದು, ಹಾಗು ಪ್ರಾಂತಿಕ ಸೈನ್ಯವನ್ನು ಇಡಬೇಕೆಂದು ಹೇಳುವ ಬೀಲು ಇನ್ನೊಂದು. ಸಹಾಯಕ ಸೈನ್ಯದ ಬೀಲಿನ ಮೇಲೆ ಭಾಷಣಮಾಡುವಾಗ ಸರ್ ಉಮರ್ ಹಯಾತಖಾನರೆಂಬ ಪಂಜಾಬದ ಸಭಾಸದರೊಬ್ಬರು ತಮ್ಮ ಕೇವಲ ಅಪ್ರಯೋಜಕತನವನ್ನು ವ್ಯಕ್ತಗೊಳಿಸಿದರು. "ಸಹಾಯಕ ಸೈನ್ಯವು ಈ ಹೊತ್ತಿನ ಪರಿಸ್ಥಿತಿಯಲ್ಲಿ ಅವಶ್ಯಕವಾಗಿದೆ. ರಾಜಕೀಯ ಚಳವಳಗಾರರು ದೇಶದಲ್ಲಿ ಕ್ಷೋಭವನ್ನು ಉಂಟುಮಾಡುವ ಈ ಸಮಯದಲ್ಲಿ ಯುರೋಪಿಯನ್ ಮತ್ತು ಎಂಗ್ಲೋ ಇಂಡಿಯನ್ ಹಾಗು ರಾಜನಿಷ್ಠ ಪ್ರಜೆಗಳನ್ನು ಸಂರಕ್ಷಿಸಲು ಇಂಥ ಸೈನ್ಯವು ಅವಶ್ಯಕವಾಗಿ ಬೇಕು" ಎಂದು ಹಯಾತಖಾನರು ತಮ್ಮ ಮುತ್ತುಗಳನ್ನು ಚಲ್ಲಿದರು. ಬ್ರಿಟಿಷ ಸರಕಾರವು ಕೆಲವು ಖಾತೆಗಳನ್ನು ತನ್ನ ಆಡಳಿತೆಯಿಂದ ವಿಭಾಗಿಸಿ ಚಳವಳಗಾರರ ಕೈಗೆ ಕೊಡುವ ಈ ಸಮಯದಲ್ಲಿ ಇಂಥ ಸೈನ್ಯದ ಸಹಾಯವಿಲ್ಲದಿರುವುದು ಯುಕ್ತವಲ್ಲವೆಂದು ಹೇಳಲಿಕ್ಕೂ ಈ ಸರ್. ಸಾಹೇಬರು ಹಿಂಜರಿಯಲಿಲ್ಲ! ರಾಜಕೀಯ ಚಳವಳಗಾರರ ಮೇಲೆ ಕಂಡಕಂಡ ಆರೋಪಣೆಗಳನ್ನು ಹೊರಿಸುವ ಒಂದು ವರ್ಗವಿದೆ; ಆ ವರ್ಗದ ಶಿಖಾಮಣಿತ್ವವು ನಾಲ್ಕೈದು ಬೈಗಳನ್ನು ಬೈದು ತನಗೆ ಅನಾಯಾಸದಿಂದ ಸಿಗುವುದಾದರೆ ಅಂಥ ಸಂದರ್ಭವನ್ನು ತಾನು ಯಾಕೆ ಕಳಕೊಳ್ಳಬೇಕೆಂಬ ಅಭಿಲಾಷೆಯಿಂದ ಈ ಪಂಜಾಬ ಬಹಾದೂರರೂ ಮೇಲಿನಂತೆ ಉದ್ಗಾರ ತೆಗೆದ್ದಾರೆ. ಮಾತಾಡಿದರೂ ನಾಮದಾರ ಶಾಸ್ತ್ರಿ, ಮತ್ತು ಖಾಪರ್ಡೆ ಇವರು ಸದರಿ ಬೀಲಿನೊಳಗಿನ ಪಕ್ಷಪಾತ, ಅಪ್ರಯೋಜಕತೆ, ಅಸಂಪೂರ್ಣತೆ ಮುಂತಾದ ವ್ಯಂಗಗಳನ್ನು ಬಹಿರಂಗಪಡಿಸಿದರು. ಇಡೀ ಬ್ರಿಟಿಷ ಸಾಮ್ರಾಜ್ಯದ ಬೇರೆಬೇರೆ ಅವಯವಗಳಲ್ಲಿ ಸಮಭಾವನೆಯು ಹುಟ್ಟಬೇಕಾದ ಈ ಸಮಯದಲ್ಲಿ ಯುರೋಪಿಯನರಿಗಾಗಿ ಒಂದು, ಹಿಂದಿಗಳಿಗಾಗಿ ಒಂದು ಇಂಥ ವಿಭಜಕ ಸೈನ್ಯಪದ್ಧತಿಯನ್ನು ಪ್ರಾರಂಭಿಸುವುದು ಕೇವಲ ಪಕ್ಷಪಾತದ ಲಕ್ಷಣವಾಗಿದೆ ಎಂದು ಶಾಸ್ತ್ರಿಗಳೂ, ಖಾಪರ್ಡೆ ಮುಂತಾದವರೂ ತಮ್ಮ ಅಭಿಪ್ರಾಯವನ್ನು ಕೊಟ್ಟರು. ಕೊನೆಗೆ ಸದರಿ ಬೀಲು ಸಿಲೆಕ್ಟ ಕಮಿಟಿಗೆ ಒಪ್ಪಿಸಲ್ಪಟ್ಟಿತು.

೩. ಪ್ರಾಂತಿಕ ಸೈನ್ಯದ ಬೀಲು ಕೌನ್ಸಿಲಿನ ಮುಂದೆ ಬಂದಾಗ ನಡೆದ ವಿಷಯವು ಬಹಳ ಮನೋರಂಜಕವಾಗಿತ್ತು. ಹಿಂದಿಗಳ ಸಂರಕ್ಷಣೆಗಾಗಿ ಈ ಪ್ರಾಂತಿಕ ಸೈನ್ಯವು ಅವಶ್ಯಕವೆಂದು ಬೀಲಿನಲ್ಲಿ ನಿರ್ದಿಷ್ಟವಾಗಿತ್ತು. ಈ ಬೀಲು ಮುಂದೆ ಬಂದೊಡನೆ ನಾಮದಾರ ಸುರೇಂದ್ರನಾಥರಿಗೆ ಸ್ವರ್ಗಲಾಭವಾದಷ್ಟು ಸಂತೋಷವಾಯಿತೆಂದು ತೋರುತ್ತದೆ. ರಾಜಕೀಯ ಸುಧಾರಣೆಗಳ ಹೊಸ ಮನ್ವಂತರವು ಪ್ರಾರಂಭವಾಗುವ ಈ ಕಾಲದಲ್ಲಿ ಸೈನ್ಯದ ಧೋರಣದಲ್ಲೂ ಯೋಗ್ಯ ಬದಲಾವಣೆಯಾಗುವುದು, ಸರಕಾರವು ಇಂಥ ಉದಾರಧೋರಣವನ್ನು ಕೈಕೊಳ್ಳುವುದು ಅಭಿನಂದನೀಯವಾದ ಸಂಗತಿಯು, ಎಂದು ಪ್ರಸ್ತಾಪಿಸಿ ಸುರೇಂದ್ರ ಬಾನರ್ಜಿಗಳು ಇದನ್ನು ದೇಶದವರೆಲ್ಲರು ಸ್ವಾಗತೀಕರಿಸಬೇಕೆಂದು ಆಗ್ರಹಪೂರ್ವಕವಾಗಿ ಹೇಳಿದರು. ಬಾನರ್ಜಿಗಳು ವೃದ್ಧ ಮುತ್ಸದಿಗಳಾದರೂ ಈ ಅಲ್ಪದಾನದಿಂದ ಅವರು ಚಿಕ್ಕ ಮಕ್ಕಳಂತೆ ತುಂಬಾ ಸಂತುಷ್ಟರಾಗಿದ್ದಾರೆ. ಯುರೋಪಿಯನರ [illegible] ಮತ್ತು ಹಿಂದಿಗಳಿಗಾಗಿದ್ದ ಈ ಎರಡು ಸೈನ್ಯಗಳು ಪ್ರತ್ಯೇಕವಾಗದೆ ಒಂದೆ ಆಗುವುದು ಒಳ್ಳೇದು; ಒಂದು ವೇಳೆ ಹಾಗೆ ಏಕ್ಯವಾಗುವುದಿಲ್ಲವೆಂದಿದ್ದರೂ ಸರಕಾರದ ಈ ನವಾರಂಭವು ಕೇವಲ ಶ್ಲಾಘನೀಯವಾದ್ದು ಎಂದು ಬಾನರ್ಜಿಗಳು ತಮ್ಮ ಸಂತೋಷದ ಭರದಲ್ಲಿ ಹೇಳಿದರು. ಸರಕಾರವು ಹಿಂದಿ ಸೈನ್ಯದ ಮುಹೂರ್ತದ ಶಿಲೆಯನ್ನು ಹಾಕಹತ್ತಿತೆಂದು ನೋಡಿ ಬಾನರ್ಜಿಗಳ ಹೃದಯವು ಆನಂದದಿಂದ ಗದ್ಗದಿತವಾಯಿತು, ಸಂತೋಷಸಮುದ್ರದಲ್ಲಿ ಮುಳುಗಿಹೋಯಿತು.

೪. ಪ್ರಾಂತಿಕ ಸೈನ್ಯದ ಈ ಬೀಲಿನಿಂದ ನಾಮದಾರ ಸುರೇಂದ್ರನಾಥರಿಗೆ ಸಂತೋಷವಾದರೂ ಅವರ ಹಸ್ತಕರಾದ ನಾಮದಾರ ಶ್ರೀನಿವಾಸ ಶಾಸ್ತ್ರಿಗಳಿಗೆ ಮಾತ್ರ ಇದರಿಂದ ಸಂತೋಷವಾಗಲಿಲ್ಲ. ಪ್ರಾಂತಿಕ ಸೈನ್ಯದ ಬಟಾಣಿ ಕಾಳುಗಳಿಂದ, ಟೆರಿಟೋರಿಯಲ್ ಫೋರ್ಸಿನ ಈ ರೊಟ್ಟಿ ಚೂರಿನಿಂದ ವೃದ್ಧರಾದ ಬಾನರ್ಜಿಗಳು ಸಂತುಷ್ಟರಾದರೂ ನಾಮದಾರ ಶಾಸ್ತ್ರಿಗಳು ಸಂತುಷ್ಟರಾಗಲಿಲ್ಲ. ಅವರಿಗೆ ಬಾನರ್ಜಿಗಳ ಈ ಉತ್ಸಾಹವು ಅಸ್ಥಾನದಲ್ಲಿ ಆಯಿತೆಂದು ಕಂಡುಬಂತು. ಈ ಹೊಸ ಬೀಲಿನ ಪ್ರಕಾರ ಹಿಂದಿಗಳಿಗೆ ಸೈನ್ಯದಲ್ಲಿ ಕೇವಲ ಪ್ರಾಥಮಿಕ ತರಗತಿಯಲ್ಲಿ ಮಾತ್ರ ಪ್ರವೇಶವು ಕೊಡಲ್ಪಟ್ಟಿದೆ. ಇಂಥ ವ್ಯಂಗಗಳು ಇದರಲ್ಲಿ ಅನೇಕ ಇವೆ. ಭೇದವಿಲ್ಲದೆ ಎಲ್ಲ ಸ್ಥಾನಗಳು ಹಿಂದಿಗಳಿಗೆ ದೊರೆಕಬೇಕು. ಜನರು ಹೊಸ ಸುಧಾರಣೆಯ ಪ್ರಕಾರ ಸೈನ್ಯದಲ್ಲಿ ಯಾವ ಯಾವ ಲಾಭಗಳನ್ನು, ಯಾವ ಯಾವ ಹಕ್ಕುಗಳನ್ನು ನಿರೀಕ್ಷಿಸಿದ್ದರೊ ಅವುಗಳಲ್ಲಿ ಈ ಬೀಲಿನಿಂದ ಯತ್ಕಿಂಚಿತ್ತಾದರೂ ಸಾಧ್ಯವಾದಂತೆ ಕಾಣುವುದಿಲ್ಲ. ಹೀಗಿರುವಲ್ಲಿ ನಾಮದಾರ ಬಾನರ್ಜಿಗಳು ಈ ಅಲ್ಪಾರಂಭದಿಂದ ಸಂತೋಷ ಭರಿತರಾಗುವುದು ಶಾಸ್ತ್ರಿಗಳಿಗೆ ಬಹು ವಿಚಿತ್ರವಾಗಿ ತೋರುತ್ತದೆ. ಇರಲಿ. ಸಾರಾಂಶ, ನಾಮದಾರ ಶಾಸ್ತ್ರಿಗಳು ಈ ಹೊಸ ಬೀಲು ಅನ್ನಷ್ಟೊಂದು ಉದಾರ ತತ್ವಗಳಿಂದ ತುಂಬಿಲ್ಲವೆಂಬುದನ್ನು ಕೌನ್ಸಿಲಿನಲ್ಲಿ ಸುಸ್ಪಷ್ಟವಾಗಿ ತೋರಿಸಿಕೊಟ್ಟರು. ಇದು ಸಂತೋಷದ ಮಾತಾಗಿದೆ. ಕೌನ್ಸಿಲಿನಲ್ಲಿ ಬಂದ ಈ ಬೀಲುಗಳು ಮಹತ್ವದವುಗಳಿದ್ದರೂ ಅವುಗಳ ಮೇಲೆ ನಡೆದ ಚರ್ಚೆಯು ಮಾತ್ರ ಅಷ್ಟೊಂದು ಮಹತ್ವದ್ದಲ್ಲ. ಈ ಬೀಲು ಕೂಡ ಸಿಲೆಕ್ಟ ಕಮಿಟಿಗೆ ಒಪ್ಪಿಸಲ್ಪಟ್ಟಿತು.

೫. ಐರ್ಲಂಡಿನಲ್ಲಿ ಈಗ ನಿಜವಾಗಿ ಯಾವ ಪರಿಸ್ಥಿತಿಯುಂಟು ಎಂದು ಕೇಳಿದರೆ, ಅದಕ್ಕೆ ಯಾರಿಂದಲೂ ಸರಿಯಾದ ಉತ್ತರವು ದೊರೆಕಲಿಕ್ಕಿಲ್ಲವೆಂದು ತೋರುತ್ತದೆ. ಸಿನ್ ಫೇನ್ ಪಕ್ಷದವರು ತಮ್ಮ ಪಕ್ಷದ ಸರಕಾರವನ್ನು ಸ್ಥಾಪಿಸಿ, ನ್ಯಾಯ ನಿರ್ಣಯ, ಗುನ್ಹೆಗಳ ತನಿಖಿ, ಜನರ ವಿತ್ತ ಜೀವಿತದ ರಕ್ಷಣೆ ಇತ್ಯಾದಿ ರಾಜ್ಯಭಾರದ ಅಂಗಗಳನ್ನು ಸರಿಯಾಗಿ ನಡಿಸಹತ್ತಿದ್ದಾರೆ. ಮೊದಲಿನ ಸರಕಾರದ ಕೋರ್ಟುಕಚೇರಿಗಳಲ್ಲಿ, ಪೋಲಿಸು ಆಫೀಸುಗಳಲ್ಲಿ ಜನರು ಯಾರೂ ಬರುವುದಿಲ್ಲ. ಆ ಸರಕಾರಿ ಆಫೀಸುಗಳು ಖಾಲಿಯಾಗುತ್ತ ಬರುವಂತೆ ಅಧಿಕಾರಿಗಳು ಕೂಡಾ ನಿರುದ್ಯೋಗಿಗಳಾಗ ಹತ್ತಿದ್ದಾರೆ! ಸಿನ್‌ಫೇನ್ ಸರಕಾರವು ತನ್ನ ಕಾರಭಾರದ ಬಲೆಯನ್ನು ಎಲ್ಲ ಕಡೆಯಲ್ಲಿ ಹಬ್ಬಿಸಿದೆ. ಈ ಹೊಸ ಕಾರಭಾರವು ಜನರಿಗೆ ಎಷ್ಟು ಉಪಯುಕ್ತವಾಗ ಹತ್ತಿದೆ ಎಂದರೆ, ಯುನಿಯನಿಸ್ಟರು ಕೂಡ ಈ ಹೊಸ ಸರಕಾರದ ಸಹಾಯವನ್ನು ತೆಕ್ಕೊಳ್ಳುತ್ತಾರೆಂದು ಹೇಳುತ್ತಾರೆ. ಸಿನ್‌ಫೇನರು ಈ ಮೇರೆಗೆ ಐರ್ಲಂಡಿನ ಕಾರಭಾರವನ್ನು ತಾವೆ ಮಾಡ ಹತ್ತಿದಾಗ ಅಲ್ಲಿಯ ಶಾಂತಪಕ್ಷದವರ ಒಂದು ಪರಿಷತ್ತು ಸೇರಿತು. ಸರ್ವ ಸ್ವಾತಂತ್ರ್ಯವನ್ನು ಕೇಳುವವರು ಸಿನ್‌ಫೇನ್ ಪಕ್ಷದವರು. ಇವರು ಉಗ್ರವಾದಿಗಳು. ಆದರೆ ಶಾಂತಪಕ್ಷದವರ ಮೊನ್ನೆಯ ಪರಿಷತ್ತಿನಲ್ಲಿ ಪಾಸಾದ ಠರಾವುಗಳನ್ನು ನೋಡುವಾಗ ಈ ಎರಡು ಪಕ್ಷಗಳಲ್ಲಿ ನಿಜವಾದ ಯಾವ ಭೇದವೆಂಬುದು ಗೊತ್ತಾಗುವದಿಲ್ಲ. ಯಾಕೆಂದರೆ, ಈ ಶಾಂತ ಪರಿಷತ್ತಿನಲ್ಲಿ ಸಂಪೂರ್ಣ ಸ್ವರಾಜ್ಯ, ಆರ್ಥಿಕ ಸ್ವಾತಂತ್ರ್ಯ ಮತ್ತು ಖಜಾನೆಯ ಮೇಲೆ ಜನತೆಯ ಅಧಿಕಾರ ಇಷ್ಟು ಸಂಗತಿಗಳು ಬೇಕೆಂದು ಠರಾವುಗಳು ಪಾಸಾದವು. ಎಂದ ಮೇಲೆ ಇವರಿಬ್ಬರಲ್ಲಿ ಯಾವ ಭೇದ! ಒಂದು ವೇಳೆ ಭಾಷಾ ಪದ್ಧತಿಯಲ್ಲಿ ಕೆಲವು ಭೇದವಿರಬಹುದೊ ಏನೊ!

ಮಂಗಳೂರು.

ಕಳೆದ ಜುಲಾಯಿ ತಾ ೨೪ಕ್ಕೆ ನೆರದ ಜಿಲ್ಲೆಯ ಗ್ರಾಮ ಉದ್ಯೋಗಸ್ಥರ ಮೀಟಿಂಗಿನಲ್ಲಿ ಸದರಿ ಉದ್ಯೋಗಸ್ಥರ ಕಾಲಕಾಲದ ಬೇಡಿಕೆಗಳನ್ನು ಸರಕಾರಕ್ಕೆ ನಿವೇದಿಸಲು ಪಟೇಲ ರಾ| ಮುಚ್ಚೂರು ದೇವಪ್ಪನವರೂ, ಕುಂಬಳೆ ಪಿಕ್ದಾರ್ ಶಾನುಭೋಗ ರಾ| ಪತ್ತುಮುಡಿ ವಾಸುದೇವಯ್ಯನವರೂ ಪ್ರತಿನಿಧಿಗಳಾಗಿ ಆರಿಸಲ್ಪಟ್ಟರು. ಮೇಲಿನ ಸಭೆಯಲ್ಲಿ ಪಾಸಾದ ವಿಷಯಗಳಲ್ಲದೆ ಈ ಉದ್ಯೋಗಸ್ಥರಿಗೆ ಸಂಬಂಧಪಟ್ಟ ಇತರ ಯಾವ ಸಂಗತಿಗಳಾದರೂ ಸರಕಾರಕ್ಕೆ ತಿಳಿಸತಕ್ಕವುಗಳಿದ್ದರೆ ಅವನ್ನು ಈ ತಿಂಗಳ ತಾ. ೧೫ರ ಒಳಗೆ ತಮಗೆ ತಿಳಿಸಬೇಕಾಗಿ ರಾ| ವಾಸುದೇವಯ್ಯನವರು ಅಪೇಕ್ಷಿಸುತ್ತಾರೆ.

ಬರುವ ಆದಿತ್ಯವಾರ ಸಾಯಂಕಾಲ ೬ ಗಂಟೆಗೆ ರಾಷ್ಟ್ರೀಯ ಬಾಲಿಕಾ ಪಾಠಶಾಲೆಯ ಸಭಾಸದನದಲ್ಲಿ ಮಂಗಳೂರ ವಿದ್ಯಾರ್ಥಿ ಭ್ರಾತೃಸಂಘದ ಆಶ್ರಯದಲ್ಲಿ ಅಸಹಕಾರಿತೆಯನ್ನು ಕುರಿತು ಚರ್ಚಿಸುವ ಭಾಷಣಗಳಾಗುವುವು. ಈ ಸಂದರ್ಭದ ಅಧ್ಯಕ್ಷಸ್ಥಾನವನ್ನು ಸ್ವೀಕರಿಸಲು ಮ| ರಾ| ರಾ| ಗಂಗೊಳ್ಳಿ ಕೃಷ್ಣರಾಯರು ಒಪ್ಪಿರುತ್ತಾರೆ. ಭಾಷಣಗಳನ್ನು ಕೇಳಬರುವವರು ೨ ಆಣೆಯ ಟಿಕೇಟುಗಳನ್ನು ಪಡೆಯಬೇಕಾಗಿದೆ. ಇದರಿಂದ ಉತ್ಪನ್ನವಾದ ಮೊಬಲಗು ಭ್ರಾತೃಸಂಘದ ಫಂಡಿಗೆ ಕೂಡಿಸಲಾಗುವುದು. ಟಿಕೇಟುಗಳು ರಾಷ್ಟ್ರೀಯ ಬಾಲಿಕಾ ಪಾಠಶಾಲೆಯಲ್ಲಿ ದೊರೆಯುತ್ತವೆ.

ಕಳೆದ ಸಂಚಿಕೆಯಲ್ಲಿ ಪ್ರಕಟಿಸಿದಂತೆ ಇಸ್ಲಾಮಿಯಾ ಕ್ಲಬ್ಬಿನಲ್ಲಿ ತಾ. ೮ನೇ ಆದಿತ್ಯವಾರ ಸಭೆಕೂಡಿತು. ಈ ಸಭೆಯಲ್ಲಿ ಮಹಾತ್ಮಾ ಗಾಂಧಿ ಮೊದಲಾದ ದೇಶಭಕ್ತರ ಆಗಮನ ಕಾಲದಲ್ಲಿ ವಂತಿಗೆಯಾದ ಮೊಬಲಗಿನಲ್ಲಿ ಖರ್ಚು ಕಳೆದು ಉಳಿದ ಮೊಬಲಗನ್ನು ಸೆಂಟ್ರಲ್ ಖಿಲಾಫತ್ ಕಮ್ಮಿಟಿಗೆ ಕಳುಹಿಸಬೇಕಾಗಿ ನಿರ್ಧಾರವಾಯಿತು. ಅದರಂತೆ ರೂ. ೫೦೫ ಪ್ರಥಮ ಕಂತಾಗಿ ಕಳುಹಿಸಲ್ಪಟ್ಟಿದೆ.

ಅಮ್ಮೆಂಬಳ ಸುಬ್ರಾಯ ಪೈ ಮೆಮೋರಿಯಲ್ ಫಂಡಿನಿಂದ ೧೯೨೦-೨೧ನೇ ವರುಷದ ಬಗ್ಗೆ ಒಟ್ಟು ೧೦ ಮಂದಿ ವಿದ್ಯಾರ್ಥಿಗಳು ಕೆಳಗಿನ ತರದಲ್ಲಿ ತಿಂಗಳುಗಟ್ಟಲೆ ಸಹಾಯಧನವನ್ನು ಪಡೆಯುತ್ತಾರೆ. ಈ ಪೈಕಿ ಬಿ. ಎ. ಆನರ್ಸ್ ಕಲಿಯುವ ಗುರುಪುರ ವೆಂಕಟರಾಯ ಪೈ ರೂ. ೨೦, ಇಂಜಿನಿಯರಿಂಗ್ ಕಲಿಯುವ ಮುಲ್ಕಿ ನಾರಾಯಣ ಕಾಮತ್ ರೂ. ೧೫, ಮೆಡಿಕಲ್ ಕಲಿಯುವ ಬಿ. ಪದ್ಮನಾಭ ಪೈ, ಕೂಡುಕಟ್ಟೆ ಗೋಪಾಲಕೃಷ್ಣ ರಾವ್, ಪ್ರತಿ ಒಬ್ಬರು ರೂ. ೧೫, ಕಾರ್ಕಳ ಪುರುಷೋತ್ತಮ ಜೋಶಿ, ಕೊಟ್ಟಾರ ರಾಘವೇಂದ್ರ ಪೈ, ಡಾ೦. ವೆಂಕಟೇಶ ಹೆಗ್ಡೆ, ಕುಂಬಳೆ ರಾಘವೇಂದ್ರ ಪೈ, ಇವರಿಗೆಲ್ಲಾ ರೂ. ೧೦ರಂತೆ. ಅಚ್ಯುತ ಶ್ರೀನಿವಾಸ ಭಂಡಾರಕಾರ ರೂ. ೫ ಮತ್ತು ಮುಂಬಾಯಿಯಲ್ಲಿ ನೇಯಿಗೆ ಕೈಗಾರಿಕೆಯನ್ನು ಕಲಿಯುವ ಪಾಣೆಮಂಗಳೂರ ರಾಘವೇಂದ್ರ ಪೈ ರೂ. ೧೦.

ಕಾರ್ಕಳ ಸ್ಪೆಶಲ್ ಸಬ್ ಮೇಜಿಸ್ಟ್ರೇಟ್ ಮ| ರಾ| ಪಿ. ದತ್ತಾತ್ರಿ ರಾವ್‌ರವರಿಗೆ ತಿನ್ನವೆಲ್ಲಿಯ ಸಬ್ ಮೆಜಿಸ್ಟ್ರೇಟರಾಗಿ ವರ್ಗವಾಗಿದೆ.

ಕಲ್ಲಿಕೋಟೆಯ ನೆಡುಂಗಾಡಿ ಬೇಂಕಿನ ಶಾಖೆಯೊಂದು ನಮ್ಮ ಪಟ್ಟಣದಲ್ಲಿ ವಿ.ಕನಕೋಪಿನ ಬಳಿಯ ಕಟ್ಟೋಣದಲ್ಲಿ ಈ ತಿಂಗಳ ತಾ. ೧೧ರಿಂದ ತೆರೆಯೋಣಾಗಿದೆ.

ಮಕ್ಕಳ ಆರೋಗ್ಯಾಭಿವೃದ್ಧಿಯನ್ನು ಕುರಿತು ಯೋಗ್ಯ ಏರ್ಪಾಡುಗಳನ್ನು ಮಾಡಲು ಕಳೆದ ಸೋಮವಾರ ಕೂಡಿದ ಸಭೆಯಲ್ಲಿ ಪಟ್ಟಣದಲ್ಲಿ ಒಬ್ಬ ಲೇಡಿ ಡಾಕ್ಟರಳನ್ನೂ ೬ ಮಂದಿ ನರ್ಸರನ್ನೂ ನೇಮಿಸಬೇಕಾಗಿಯೂ, ಮತ್ತು ಇತರ ಕೆಲಸಗಳನ್ನು ನಿರ್ವಹಿಸಲು ಒಂದು ಕಮ್ಮಿಟಿಯು ನೇಮಕವಾಗಿದೆಯಾಗಿಯೂ, ಈ ಏರ್ಪಾಡುಗಳ ಬಗ್ಗೆ ತಗಲಬಹುದಾದ ಖರ್ಚನ್ನು ವಂತಿಗೆ ಮೂಲಕ ಕೂಡಿಸಬೇಕಾಗಿಯೂ ನಿಶ್ಚಯಿಸಲಾಯಿತೆಂದು ತಿಳಿಯುತ್ತೇವೆ.

ಮ| ರಾ| ನೆಕ್ಕಿಕಾಯಿ ವೆಂಕಟರಾಯರು ಮಂಗಳೂರು ತಾಲೂಕುಬೋರ್ಡ ಮೆಂಬರರಾಗಿ ಮತ್ತು ಮ| ರಾ| ನರಸಿಂಹ ಮರ್ತುರ್ಭಂಡಾರಿಯವರು ಡಿಸ್ಟ್ರಿಕ್ಟ ಬೋರ್ಡ ಮೆಂಬರರಾಗಿ ಚುನಾವಣೆಯಾದ್ದು ಸರಕಾರದಿಂದ ಮಂಜೂರಾಗಿ ಬಂದಿದೆ.

ಮಂಗಳೂರ ಕೋಪರೇಟಿವ್ ಟೌನ್‌ಬೇಂಕಿನ ವರ್ಷಾವಧಿ ಕೂಡತಕ್ಕ ಸಭೆಯು ಬರುವ ತಾ. ೬ನೇ ಸೋಮವಾರ ಮಧ್ಯಾಹ್ನ ೩ ಗಂಟೆಗೆ ಸದರಿ ಬೇಂಕಿನ ಆಫೀಸಿನಲ್ಲಿ ಕೂಡುವುದು.

ಮಂಗಳೂರ ಪೋಲಿಸ್ ಆಸ್ಪತ್ರೆಯ ಡಾಕ್ಟರರಾದ ಮ| ರಾ| ಬಿ. ರಾಮರಾಯರು ಪೋರ್ಟಹೆಲ್ತ್ ಆಫೀಸಿನ ಚಾರ್ಜನ್ನು ಸಹ ನೋಡಬೇಕಾಗಿದೆ.

ಬರುವ ಆದಿತ್ಯವಾರ ೪ ಗಂಟೆಗೆ ರಾಷ್ಟ್ರೀಯ ಬಾಲಿಕಾ ಪಾಠಶಾಲೆಯ ಸಭಾಸದನದಲ್ಲಿ ಥಿಯೋಸೊಫಿಕಲ್ ಸೊಸೈಟಿಯ ಪರವಾಗಿ ಲಾಹೋರಿನ ಶ್ರೀಯುತ ಪಂಡಿತ ಅಮರನಾಥರು ಆರ್ಯಸಮಾಜವೆಂದರೇನು ಎಂಬುದನ್ನು ಕುರಿತು ಭಾಷಣ ಮಾಡುವರು.

ಕಳೆದ ಸಂಚಿಕೆಯಲ್ಲಿ ತಿದ್ದುಪಡಿ:—ಮುಂಬಯಿ ಸ್ಟೀಮ ನೆವಿಗೇಶನ ಕಂಪೆನಿಯ ಸ್ಟೀಮರು ಪ್ರತಿ ಸೋಮವಾರ ಮಂಗಳೂರಿನಿಂದ ಬಿಡಲಾಗುವುದು ಎಂಬ ಬದಲಾಗಿ ಮುಂಬಯಿಯಿಂದ ಎಂದು ತಿಳಿಯಬೇಕಾಗಿದೆ.

[illegible]

([illegible])

[illegible] ಭಾಷ್ಯಗಳನ್ನು ಮಾತ್ರ ಬರೆದಿರುತ್ತಾರೆ ಅಪ್ಪಯ್ಯಾಚಾರ್ಯರು ಪರೋಕ್ಷ ವಾತ್ರವಲ್ಲ ಅಪರೋಕ್ಷ ಟೀಕೆಗಳನ್ನು ಪ್ರಸ್ಥಾನತ್ರಯಗಳ ಮೇಲೆ ಬರೆದು ಲೋಕೋಪಕಾರ ಮಾಡಿರುತ್ತಾರೆ ಮೂಲ ಸಂಸ್ಕೃತ ಭಾಷೆಯಲ್ಲಿಯೂ ತಮಿಳು ಭಾಷೆಯಲ್ಲಿಯೂ ೫೦ ಲಕ್ಷ ಗ್ರಂಥ (೩೨ ಅಕ್ಷರಗಳಿದ್ದರೆ ಒಂದು ಗ್ರಂಥ) ಗಳು ಅಡಗಿರುವ ೧೫೦ ಪುಸ್ತಕಗಳನ್ನು ಸಮಾಧಿಯಿಂದ ಎದ್ದಮೇಲೆ ಅದನಂತರ ರಾತ್ರಿಗಳಲ್ಲಿ ಸ್ವಹಸ್ತದಿಂದ ಬರೆದು ಹಾಕಿದ್ದಾರೆ ಮತ್ತು ಇವರು ಜಾತಿಭೇದ ಎಣಿಸದೆ ಯೋಗ್ಯ ಬ್ರಾಹ್ಮಣೇತರ ಜಾತಿಯ ಶಿಷ್ಯರಿಗೆ ಅಧ್ಯಯೋಗ ರಹಸ್ಯಗಳನ್ನು ಉಪದೇಶಿಸಿದ್ದರು ಆ ಶೈಲಿ ಕೆಲವರು ಈಗಲೂ ಜೀವಿಸಿರುತ್ತಾರೆ ಮನುಷ್ಯರು ಗೃಹಸ್ಥಾಶ್ರಮದಲ್ಲಿ ನಿಂತು ನಿಷ್ಕಾಮ ಕರ್ಮಗಳನ್ನು ಮಾಡಿ ನಾಲ್ಕು ಪುರುಷಾರ್ಥಗಳನ್ನು ಪಡೆಯಲಿಕ್ಕೆ ಸಾಧ್ಯ ಉಂಟೆಂಬುದೂ ಈಗಿನ ಕಾಲದಲ್ಲಿ ಸನ್ಯಾಸವು ಅಷ್ಟು ಪ್ರಶಸ್ತವಲ್ಲವೆಂಬುವುದು ಇವರ ಗ್ರಂಥಗಳಿಂದ ತೋರುವುದು ತಾನು ಅಮೌಲ್ಯವಾದ ಜ್ಞಾನ ಭಂಡಾರವನ್ನು ಬರೆದಿದ್ದರೂ ತನ್ನ ಕ್ರೀರ್ತಿಯು ಜಗತ್ತಿನಲ್ಲೆಲ್ಲಾ ಪ್ರಸಿದ್ಧ ಆಗಬೇಕೆಂದು ಆಶಿಸದೆ ಲೋಕದ ಭಾಷೆಗಳಲ್ಲಿ ವಿಸ್ತರಿಸಿ ಹೇಳಿಕೊಟ್ಟು ಮನುಷ್ಯರನ್ನು ಸಂಸಾರ ಸಮುದ್ರದಿಂದ ಪಾರಗಾಣಿಸುವ ಉದ್ದೇಶದಿಂದ ತಾನು ಬರೆದ ಸಮಸ್ತ ಗ್ರಂಥಗಳನ್ನು ತನ್ನ ಯೋಗ್ಯ ಶಿಷ್ಯರಾದ ಪಂಡಿತ ಗಣಪತಿ ಕೃಷ್ಣಶಾಸ್ತ್ರಿ ಎಂಬ ವಿದ್ವಾಂಸರಿಗೆ ಒಪ್ಪಿಸಿ ಕೊಟ್ಟು ೧೯೦೧ನೇ ಇಸವಿಯಲ್ಲಿ ಸನ್ಯಾಸವನ್ನು ಧರಿಸಿಕೊಂಡ ೧೬ನೇ ದಿನವಾದ ವ್ಯಾಸ ಪೂರ್ಣಿಮೆಯಲ್ಲಿ ನಾರಾಯಣ ಸ್ಮರಣೆಯಲ್ಲಿ ಸ್ವರ್ಗಾರೋಹಣ ಮಾಡಿದರು ಇವರ ಗ್ರಂಥಗಳಲ್ಲಿ ಬಹಳ ಚಿಕ್ಕ ಭಾಗಗಳು ಈ ವರೆಗೂ ಛಾಪಾ ಆಗದೇ ಇರುವುದರಿಂದ, ಈ ಶ್ರೇಷ್ಠ ಮುಖ್ಯ ಗ್ರಂಥಗಳೆಲ್ಲಾ ಪ್ರಚುರವಾಗಿ ವಿದ್ವಾಂಸರು ಅರಿತವಂದ ನಂತರವೇ ಅವರ ಕೀರ್ತಿ ಜಗತ್ತಿನ ನಾಲ್ಕು ಭಾಗಗಳಲ್ಲಿ ಹರಡುವುದ

ನರಿಯೂ ದ್ರಾಕ್ಷೆಯಹಣ್ಣೂ

| ಭಾಮಿನಿ ||

ಅಡವಿಯ ೞ ಅಲೆದಾಡಿ ಬೇಟೆಯ !
ಹ ಡುಕಿ ಬಂಬುಕನೊಬ್ಬ ಸೋತನು !
ಪಡೆಯುದಿರೆ ನರೆ ಬ್ಭೆಯ ಹಳ್ಳಿಗೆ ಸಾರಿ ತಿರುತಿರುಗಿ ||
ಕಡೆಗೆ ಕಂಡನು ದ್ರಾಕ್ಷೆಹಣ್ಣ ಗ |
ಳಡಿತ. ವೆ ರೆಯುವ ಬಳ್ಳಿಯೊಂದನ |
ತಡೆಯ ಲಾರದ ಹರ ಷದಲಿ ಹಿಗ್ಗಿದನ ವ ನದೊಳಗೆ || ೧

"ಭಾಪು! ಬಡವನು ಕೊಬ್ಬರಿಗೆಯನು
ತಾ ಪಡೆವ ಪೋಲು ಹಸಿದ ಹೊಟ್ಟೆಯ |—
ತಾಪದಲಿ ನೊಂದಿರ ವೆನಗೆ ಸವಿಯೂಟ ದೊರೆಯಿತಲಾ
ಈ ಫಲಗಳನ ತಿಂದು ಸಂತಸ !
ನಾ ಪಡೆಯ ವೆನು ವ ನದೊಳಿಹ ಸಂ |
ತಾಪವನ ಪರಿಹರಿಸಿ ಮರಳುವೆನೆ"ಂದು ಹನ್ನೊಳಗೆ || ೨ ||

ಬಗೆದು ನರಿಯಾ ಲತೆಯ ಸಾರ ದು
ಬ್ಬಿಗೆ ಹರ ಷದಲಿ ದ್ರಾಕ್ಷೆಹಣ್ಣನು
ತೆಗೆಯ ನೆಗೆದುದ — ಸಿಗದ ಎತ್ತರದೊಳಗಿಹುದರಿಂದ ||
ಮೊಗವು ಕಂದಿತು ನಗುವು ನಂದಿತ |
ಚಿಗಿಚಿಗಿದು ಫಲಬಾರ! ನೆಲದಲಿ |
ಮಗುಚಿ ಬೀಳಲು ಕೋಪದಲಿ ದ್ರಾಕ್ಷೆಯನು ತೆಗಳಿದುದು || ೩ ||

ಆರು ಬಯಸುವರಯ್ಯ ದ್ರಾಕ್ಷೆಯ !
ತೀರ ಹುಳಿ! ಛೀ! ಹಾಳು ಹಣ್ಣಿದು! |
ಧಾರಿ ಹಸಿದಿಹ ವೇಳೆಯಾದರು ಮುಟ್ಟೆ ನಾನಿದನು, ||
ನಾರಗೆಡಿಪುದ ನಾಲಗೆಯ, ಹೆ
ಮ್ಮಾರಿ! ನೋವನು ತರುವುದೊಡಲಿಗೆ |
ಹಾರಿದೆನದರ ಕ ಲಹ ಹೆಸರಿದಬಾರದೆಂದೆ ನುತ || ೪ ||

ನೂಡಿದು ರೋಷದಿ ತನ್ನ ಹೆಮ್ಮೆಯ
ಬಿಡದೆ ಅಲ್ಲಿಂದೋಡಿ ಛ್ಬೇವಿಯ |
ಹುಡುಕಲಾರಂಭಿಸಿದನವಸರದಲ್ಲಿ ಜಂಬು ಕನು ||
ಬಿಡದೆ ಯತ್ನಿಸಿ ಫಲವ ಸಿಗದಿರೆ |
ಸಡಗರದಿ ಹಳಿವರು ಪರರ್ಕ ಶಾಂ |
ಪಡುವ ದುಃಖವ ತೋರಿಸರು ನರಿಯಂತೆ ಜಗದೊಳಗೆ || ೫ ||

ಟಿ. ಎನ್. ಲಕ್ಷ್ಮಣಶೆಟ್ಟಿ

[illegible]

ವಿಚಾರಣೆ.

[illegible] ಬೋರ್ಡು ಶಾಲೆಗಳ ಉಪಾಧ್ಯಾಯರ [illegible] ಏನೆಂದು ಹೇಳಲಿ! ನಾಲ್ಕು ಮಂದಿ ಉಪಾಧ್ಯಾಯರಿದ್ದರೆ [illegible] ಎಲ್ಲರಿಗೂ ಒಂದೇ ವಿಧವಾಗಿ ರೂ ೧೨ ರಂತೆಯೇ ಸಂಬಳ [illegible] ಮಾಸ್ತರರು ಆ ಶಾಲೆಯ ಉಪಾಧ್ಯಾಯರ ಶಿರೋಮಣಿಯು [illegible] ಅವರ ಅಸಿಸ್ಟಂಟರಷ್ಟೇ ಸಂಬಳ ಕೊಟ್ಟು ಹೊಟ್ಟೆ ಉರಿಸಿದರೆ ಅವರ ಮನಸ್ಸು ನೆಮ್ಮದಿಯಾಗಿದ್ದು, ಶಾಲೆಯ ಕೆಲಸ ನೇರಾಗಿ ನಡೆದೀತೇ ಅವರಿಗೆ ಇಡೀ ಶಾಲೆಯ ಪೂರ್ಣ ಜವಾಬ್ದಾರಿಯನ್ನು ಹೊತ್ತುಕೊಂಡು ಬಾಳುವ ಅವಶ್ಯಕವೇನು ಬಿದ್ದಿದೆ? ಇದರಿಂದ ಕಾಲಕ್ಕೆ ತಕ್ಕ ಕೋಲ ಎಂಬಂತೆ ನಟಿಸುವ ಹಾದಿಯನ್ನು ಹುಡುಕ ತೊಡಗುವರಲ್ಲದೆ ಈ ದೆಸೆಯಿಂದ ಶಾಲೆಯ ಸ್ಥಿತಿಯು ಕೆಟ್ಟು ಮಕ್ಕಳ ವಿದ್ಯಾಭಿವೃದ್ಧಿಗೆ ಬಾಧಕ ತಟ್ಟುವುದು ಎಂಬುದರಿಂದಲೇ ನಾಲ್ಕರು ಉಪಾಧ್ಯಾಯರಿರುವ ಬದಲಿಗೆ ಎಷ್ಟಾದರು, ಹಳೆ ಪಾಲಂಬೂರು ಮುಂತಾದ ಹಲವು ಬೋರ್ಡು ಶಾಲೆಗಳ ಹೆಡ್ ಮಾಸ್ತರರಿಗೆ ಈ ವರುಷದಲ್ಲಿ ಬಡ್ತಿ ಕೊಟ್ಟು, ಹೆಡ್ ಮಾಸ್ತರರಿಗೆ ರೂ ೧೫ರಂತೆ ಸಂಬಳ ಕಾಯಂ ಮಾಡಿರುತ್ತಾರೆ ಇದು ಸಂತೋಷವೇ ಸರಿ ಸದರಿ ಬಡ್ತಿ ಹೊಂದಿದ ಶಾಲೆಗಳ ಹಾಗೆಯೇ ನಾಲ್ವರು ಉಪಾಧ್ಯಾಯರಿದ್ದು ಅಭಿವೃದ್ಧಿಯಾಗಿ ಯೋಗ್ಯ ರೀತಿಯಿಂದ ಕೆಲಸ ನಡೆಯುತ್ತಿರುವ, ಕಡಂದಲೆ ಬೋರ್ಡ ಶಾಲೆಯ ಹೆಡ್ ಮಾಸ್ತರರಿಗೂ ಬಡ್ತಿಯಿಂದ ರೂ ೧೫ರಂತೆ ಸಂಬಳ ಮಾಡಬೇಕಿತ್ತು ಇವರು ಸಹ ಬಡ್ತಿ ಹೊಂದಲಿಕ್ಕೆ ಅರ್ಹರಾಗಿರುತ್ತಾರೆ ಸರಾಸರಿ ಯೋಗ್ಯತೆ ಕೆಲಸದ ಮೇಲಿನ ಉತ್ಸಾಹ ಮುಂತಾದ್ದರಲ್ಲಿ ಪೂರ್ಣ ಯೋಗ್ಯರಾಗಿರುತ್ತಾರೆಂಬುದು ಇಲಾಖೆಯವರಿಗೆ ಪರಾಂಬರಿಕೆ ಇರ ತಕ್ಕದೆ

ಸದರಿಯವರ ಬಡ್ತಿಗಾಗಿ ಮ| ರಾ| ರಾ| ಮಂಗಳೂರ ರೇಂಜ್ ಶಾಲೆಗಳ ಸಬ್ ಅಸಿಸ್ಟಂಟ ಇನ್ಸ್‌ಪೆಕ್ಟರವರು ಶಿಫಾರಸು ಮಾಡಿದ್ದಾರಂತೆ ಮ ರಾ| ರಾ| ತಾಲೂಕ್ ಬೋರ್ಡಿನವರಿಗೆ ಅದು ಇನ್ನೂ ತಲಪಲೇ ಇಲ್ಲವಂತೆ, ಇದೆಲ್ಲಿ ಹೋಯಿತೋ ಬಹಳ ಸೋಜಿಗ ಅದೇನೋ ಹಾಗಿರಲಿ ಒಂದೇ ತರಗತಿಯ ಹಲವು ಶಾಲೆಗಳ ಮಖ್ಯ ಉಪಾಧ್ಯಾಯರು ಬಡ್ತಿ ಹೊಂದಿ ಸಂತೃಪ್ತಿ ಪಡುತ್ತಿರುವಾಗ ಕಡಂದಲೆ ಶಾಲೆಯ ಹೆಡ್ ಮಾಸ್ತರರು ಮಾತ್ರ ಶುಶ್ರೂಷೆಗೆ ಉದ್ಯುಕ್ತ ಮಾಡಿ ಬಡ್ತಿಯನ್ನು ನಿರೀಕ್ಷಿಸಿಕೊಂಡಿದ್ದು ಈಗ ನಿರಾಶರಾಗಿ ಕೊರಗಿಕೊಳ್ಳುವುದ ವಿಷಾದಕರವಲ್ಲವೇ? ಈ ಬಡ ಉಪಾಧ್ಯಾಯರ ಪಾಡ ಇವರಂಥಾ ಕೆಲಸಾಸಕ್ತರಿಗೆ ತಕ್ಕ ಬಡ್ತಿ ಸಿಕ್ಕದಿದ್ದರೆ, ಶ್ರಮಪಟ್ಟು ಕೆಲಸಮಾಡುವರಿ ಇನ್ನು ಮುಂದೆ ಯಾರಿಗೆ ತಾನೆ ಉಲ್ಲಾಸ ಬಂದೀತ ? ಅದಲ್ಲದೆ ಹೆಚ್ಚು ಕಾಲದ ಬೋರ್ಡು ಸರ್ವಿಸಿದ್ದ ಬಹಳ ಪರಿಶ್ರಮದಿಂದ ಕೆಲಸಮಾಡುತ್ತಿರುವ ಬಡ ಉಪಾಧ್ಯಾಯರಿಂದ ಸದರಿ ಹೆಡ್‌ಮಾಸ್ತರರಿಗೆ ಇನ್ನಾದರೂ ಬಡ್ತಿ ಕೊಡ ವಂತೆ ದಯಾಳುಗಳಾದ ಇಲಾಖೆಯವರೂ ಮತ್ತು ಬೋರ್ಡಿನವರೂ ಕೂಡಾ ಗಮನ ಕೊಡುವರಾಗಿ ನಂಬುತ್ತೇನೆ

ಕಂಡದ್ದನ್ನು ಕಂಡಂತೆಯೇ ಹೇಳುವವ ನಾನೊಬ್ಬ.

ಸ್ವಾಮಿ,

ಇಲ್ಲಿಯ ಹೊಸ ಮಾರಿಗುಡಿಗೊಂದು ಸ್ಕೀಮಿನ ರಗಳೆ ನೋಡಿರಿ ೫ ಜನ ಬಂಟರು ೧ ಬ್ರಾಹ್ಮಣ ೧ ಜೈನ ಇದೇನು ಬ್ರಾಹ್ಮಣ ಜಾತಿಯ ಮನೆಗಳು ಇಲ್ಲವೇ? ಹಾಗಾದರೆ ಮಾರಿಯ ಕೆಲಸಕ್ಕೆ ಕೂಡು ವವರು ಯಾವ ಜಾತಿಯವರ ? ಕಂಬಾರರನ್ನು ಆರಿಸಿದ್ದು ಓಟಿನ ಮಹಿಮೆಯೇ? ಗೌಡಸಾರಸ್ವತರನ್ನು ಬಿಟ್ಟು ವಿಶ್ವಕರ್ಮ ಜಾತಿಯವರ ಹಕ್ಕಿನದ ಮಾರಿಗುಡಿ ಹೌದೆಂತಾದರೆ ಸ್ಕೀಮಿಗೆ ಸಿಕ್ಕಿದ ಜಾತಿ ಮೇರೇ ಸರಿಯೆ ? ಇತರ ಜಾತಿಯವರನ್ನು ಸೇರಿಸಿದ್ದಾದರೆ ಮಾರಿಯ ಕೆಲಸ ಸಾಂಗವಾಗಿ ನಡೆದೀತೇ ಇದನ್ನೆಲ್ಲಾ ಪರ್ಯಾಲೋಚಿಸಿ ಹೊಸ ಸ್ಕೀಮನ್ನು ತಯಾರಿಸುವುದು ಉತ್ತಮವಲ್ಲವೇ?

ಕಳೆದ ತಿಂಗಳ ೩೦ ೧ನೇ ಮಂಗಳವಾರ ಇಲ್ಲಿಯ ಬೋರ್ಡು ಹಾಯರ್ ಎಲಿಮೆಂಟರಿ ಶಾಲಾ ವಿದ್ಯಾರ್ಥಿಗಳೆಲ್ಲರೂ ಹಂಚಿಕೊಂಡು ಉದ್ದಿಷ್ಟ ಎಂದು ಮ್ಯಾರಿಗುಡಿಗಳಿಗೆ ಹೋದರು ಮಾರಿಯ ಮುಂಗಡೆ ಪ್ರಾರ್ಥನೆ ನಡೆದವು ಆ ದಿನವೇ ಲೋಕಮಾನ್ಯ ತಿಲಕ ಮಹಾರಾಜರ ಅಪ್ರತ್ಯಕ್ಷ ಪತ್ತನೇ ದಿನ ಈಗ ರಿಸೀವರರಾಗಿ ಹೊಸ ಮಾರಿಗುಡಿಗೆ ಬಂದಿರುವ ಮಂಗಳೂರ ಹೈಕೋರ್ಟು ವಕೀಲರಾದ ಮ| ರಾ| ಛಡೆ ಶ್ರೀಪಭಟ್ಟರವರು ಮಕ್ಕಳನ್ನು ನೋಡಿ ಸಂತೋಷದಿಂದ ರೂ ೧ನ್ನು ಮಕ್ಕಳಿಗೆಲ್ಲಾ ತಿಂಡಿಯನ್ನು ಹಂಚುವ ಉದ್ದೇಶದಿಂದ ಕೊಟ್ಟರ ಕೂಡಲೇ ಮಕ್ಕಳೆಲ್ಲಾ ಕೂಡಿ ತಿಲಕರ ಥಾ ಮಹಾತ್ಮರು ಈ ಹಿಂದೂದೇಶದಲ್ಲಿ ಒಂದಕ್ಕೆ ಹತ್ತು ಜನ್ಮಸಲಿ ಶ್ರೀ ದೇವಿ ಮ ರಾ| ವಕೀಲರವರಿಗೆ ಒಳ್ಳೇದನ್ನು ಕೊಡಲಿ—ಎಂದು ದೇವೀಕೂಡೆ ತಿರಿಗಿ ಪ್ರಾರ್ಥಿಸಿದರ ನಂತರ ರಾ| ಭಟ್ಟರವರು ತಾನು ಕೊಟ್ಟ ಹಣವನ್ನೂ ಬರುವ ಕೃಷ್ಣಾಷ್ಟಮಿ ಮರುದಿನ ಮಕ್ಕಳಿಂದ ನಾನಾ ವಿನೋದಕರವಾದ ಆಟಗಳನ್ನು ಆಡಿಸಿಯೂ ಶ್ರೀ ಕೃಷ್ಣನ ಚರಿತ್ರೆಯನ್ನು ಸಾಂಗವಾಗಿ ಬೋಧಿಸಿಯೂ ತಿಂಡಿಯನ್ನು ಹಂಚುವರೆ ಉಪಯೋಗಿಸಬೇಕೆಂದು ಹೇಳಿದರು ಇದನ್ನೆಲ್ಲಾ ನೋಡುತ್ತಿದ್ದ ಇವರ ಸ್ನೇಹಿತ ಹೊಸ ಪಾತ್ರಿಯಾದ ಹೆಸರುವಾಸಿಯಾದ ವೈದ್ಯ ತಮ್ಮಗೋಪಾಲ ನಾಯ್ಕನೆಂಬವರು ರೂ ೫ ೦—೦ ಆ ದಿನದ ಕೆಲಸಕ್ಕೆ ತಾನು ಕೊಡುವನೆಂದು ವಾಗ್ದಾನವಿತ್ತರ ಇವನ್ನು ಕೇಳಿ ಮಕ್ಕಳಿಗೆಲ್ಲಾ ಈ ಪಾತ್ರಿಯೇ ಕಾಯಂ ಪಾತ್ರಿಯಾಗಲಿ ಎಂದು ಪ್ರಾರ್ಥಿಸಿದರು ಇಂತೂ ಇಂತೂ ಬರುವ ಕೃಷ್ಣಾಷ್ಟಮಿ ಮಾರಣೆ ದಿನ ಎಲ್ಲ ಒಂದಿಹಬ್ಬದಂತೆಯೇ ನಮ್ಮೂರ ಶಾಲೆಯಲ್ಲೂ ಕೂಡಾ ನಡೆಯುವದಾಗಿ ವದಂತಿ ಇದೆ

ಕಾರ್ಕಳ, ಭಕ್ತರು.

ಸ್ವಾಮಿ,

ಕಾರೀಕು ೨೧—೮—೧೯೨೦ರಲ್ಲಿ [illegible] ಮಣಂಬೂರು ಬೋರ್ಡು ಹಾಯರ್ ಎಲಿಮೆಂಟರಿ ಶಾಲೆಯ ವರ್ಧಂತಿ ಉತ್ಸವವು ಗವರ್ನಮೆಂಟ ಸೆಕೆಂಡರಿ ಟ್ರೈನಿಂಗ್ ಶಾಲಾ ಹೆಡ್‌ಮಾಸ್ತರ್ ಮ| ರಾ| ರಾ| ಬಿ. ವೆಂಕಟೇಶರಾವ್ ಬಿ. ಎ. [illegible] ಇವರ ಅಧ್ಯಕ್ಷತೆಯಲ್ಲಿ ನೆರವೇ

[illegible] ಮುಂದಿನ ಅಭಿವೃದ್ಧಿಯನ್ನು [illegible] ಉದ್ದೇಶಗಳ ಕುರಿತು ಯೋಗ್ಯವಾದ ಮತ್ತು [illegible] ಭಾಷಣ ಮಾಡಿದ [illegible] ಹುಡುಗರು [illegible] ಕೊಂಡ [illegible] ಪಾರಿತೋಷಕಗಳು ನಡೆದು ಉತ್ಸವವು ಮುಗಿಯಿತು

ಬಾತ್ಮೀದಾರ

ಅಯ್ಯಾ,

ನಮ್ಮಲ್ಲಿ ನಡದ ಚಿನ್ನದ ವ್ಯಾಪಾರದ ಕಥೆಯನ್ನು ತಮ್ಮ ಪತ್ರ ಮೂಲಕ ಪ್ರಕಟಿಸುವರೆ ಸ್ವಲ್ಪ ಸ್ಥಳ ಕೊಟ್ಟರೆ ಮುಂದೆ ಯಾರೂ ಮೋಸ ಹೋಗದಂತೆ ಎಚ್ಚರಿಕೆಯಾಗುವರು. ಇಲ್ಲಿ ಕೆಲವು ದಿವಸಗಳ ಹಿಂದೆ ಒಬ್ಬನು ತನ್ನ ಕೂಡ ಚಿನ್ನದ ಮಣಿಗಳುಂಟೆಂತ ನಿಜವಾದ ಚಿನ್ನದ ಮಣಿಗಳನ್ನು ನಮ್ಮಲ್ಲಿಯ ಒಬ್ಬ ಕ್ರೈಸ್ತ ಸಾಹುಕಾರಗೆ ಕೊಡಿಸಿ ತಾನು ಅದನ್ನು ಕದ್ದು ತಂದದ್ದೆಂತ ಗುಟ್ಟಿನಿಂದ ತೋರಿಸಿದನಂತೆ ಕ್ರೈಸ್ತ ಸಾಹುಕಾರರೆಂತೂ ಒಬ್ಬ ಹಿಂದು ಸಾಹುಕಾರ ಮಹನೀಯರನ್ನೊಡಗೂಡಿಸಿ ಒಂದೂವರೆ ಸೇರು, ತೂಕದ ಚಿನ್ನದ ಮಣಿಗಳೆಂತ ರೂ. ೨೦೦ ನಗದಿಯಿಂದ ಕೊಟ್ಟು ಕ್ರಯಕ್ಕೆ ಪಡಕೊಂಡರಂತೆ. ಈಗ ಚಿನ್ನದ ಮಣಿಗಳೆಂಬದು ಬರೆ ಹಿತ್ತಾಳೆಯೆಂತ ಗೊತ್ತಾಯಿತು ಇಬ್ಬರು ಸಾಹುಕಾರರ ವಾದವಿವಾದದಲ್ಲಿ ಕಾಸಿ ಚರ್ಚೆ ಬಂದದ್ದರಿಂದ ಹಿತ್ತಾಳೆ ಹೊರಬೀಳಲಿಕ್ಕೆ ಕಾರಣವಾಯಿತು ಮಣಿಗಳು ಕೊಟ್ಟವನೆಂತೂ ಅಂದೆ ರಾತ್ರಿ ಪಲಾಯನ ಮಾಡಿರುವನು ಇದೇ ರೀತಿ ಅನೇಕ ಜನರಿಗೆ ಮೋಸವಾಗಿಯದೆಂದು ತಿಳಿಯುತ್ತೇವೆ ಇನ್ನಾದರೂ ಮೋಸಹೋಗದಂತೆ ತಮ್ಮಲ್ಲಿ ಪ್ರಕಟಿಸಿ ಎಚ್ಚರಿಕೆಯಿರಿಸ ಇರಲಿ

ಪುತ್ತೂರು,
ತಾ 30-8 /20

ವ್ಯಾಪಾರಿ

ಶ್ರೀ ವ್ಯಾಸರಘುಪತೀಭ್ಯಾಂ ನಮಃ
ಶ್ರೀ ಗುರುಭ್ಯೋನಮಃ

ಶ್ರೀ ಸಂಸ್ಥಾನ ಕಾಶೀಮಠಕ್ಕೆ ಸಮ್ಮಂಧಪಟ್ಟ ಶ್ರೀ ರಾಮೇಶ್ವರ, ವಾಲ್ಕೇಶ್ವರ ಇತ್ಯಾದಿ ಮಠಗಳ ಜೀರ್ಣೋದ್ಧಾರದ ಬಗ್ಗೆ ಶ್ರೀ ದೇವಸ್ಥಾನಗಳ ಭಂಡಾರದಿಂದ ಮತ್ತು ಶ್ರೀ ಸಂಸ್ಥಾನದ ಆಯಾಯ ಪೇಟೆಗಳ ಶಿಷ್ಯ ವೃಂದದವರ ಶಕ್ತಿ ವಾಗ್ದಾನ ಮಾಡಿದ ವಂತಿಗೆ ವಿವಜು ಮತ್ತು ತಾ ೩೧ ೮ ೧೯೨೦ರ ವರೆಗೆ ವಸೂಲು ಬಂದ ವಿವರ ತಪಸೀಲು ವಿವರ

ಜಂಷ್ಟ	ಉಳ್ಳಾಲ ಪೇಟೆಯವ	ವಾಗ್ದಾನ ರೂ	ವಸೂಲು ರೂ
೧	ಶ್ರೀ ಲಕ್ಷ್ಮೀನರಸಿಂಹದೇವರ ಭಂಡಾರದಿಂದ	೧೨೫	೧೨೫
೨	ರಾ| ರಾ| ಲಕ್ಷ್ಮಣ ನಾಂತಯ ಕಿಣಿ	೬೦೫	೬೦೫
೩	ವಾಸುದೇವ ಸುಬ್ರಾಯ ಮಲ್ಯ	೨೫೫	೨೫೫
೪	„ ರಾಮಕೃಷ್ಣ ಮಲ್ಯ ಕಂಪೆನಿ	೨೫೫	೨೫೫
೫	„ ಗೋವಿಂದ ಕಿಣಿ ಬ್ರದರ್ಸ್	೧೬೫	೧೬೫
೬	„ ಸುಬ್ರಾಯ ದಾಸಪ್ಪ ನ್ಯಾಕ್	೫೫	
೭	„ ಅಚ್ಯುತ ಕಿಣಿ	೭೫	೭೫
೮	„ ಜನಾರ್ಧನ ಕಿಣಿ	೫೫	೫೫
೯	„ ಶೇಷಗಿರಿ ಕಿಣಿ	೨೫	
೧೦	„ ಸರ್ವೋತ್ತಮ ಕಿಣಿ	೫೫	
೧೧	„ ನಾಗಪ್ಪ ನ್ಯಾಕ್	೪೫	
೧೨	„ ಹರಿ ನ್ಯಾಕ	೧೫	೧೫
೧೩	„ ಲಕ್ಷ್ಮಣ ನ್ಯಾಕ	೧೫	
	ಜುಮುಲಾ ..	೧೭೪೫	೧೫೬೦

(ಮುಂದರಿಯುವದು)

Ullal Venkatraya Ganapathy Kini,
General Adaltedar of
SRI KASI MUTT SAMSTANAN

ತಾ ೨ ೪ ೨೦

ಚಂದಾದಾರರಿಗೆ ಸೂಚನೆ.

[illegible]

ಸನ್ ೧೯೨೦ನೇ ಇಸವಿ ಆಗಸ್ಟ ತಾರೀಖು ೩೧ರಲ್ಲು ಕುಂದಾಪುರದಲ್ಲಿ ಜರಗಿದ ಕುಂದಾಪುರ ತಾಲೂಕಿನ ಶ್ಯಾನಭಾಗರ ಸಭೆಯ ಪ್ರೊಸೀಡಿಂಗ್ಸು—

ಈ ಹೊತ್ತಿನ ಸಭೆಯ ಕಾರ್ಯನಿರ್ವಾಹಕ್ಕಾಗಿ ಗಂಗೊಳ್ಳಿ ಶ್ಯಾನಭೋಗ ಗಣಪಯ್ಯನವರನ್ನು ಅಧ್ಯಕ್ಷರನ್ನಾಗಿ ಆರಿಸಲಾಯಿತು —

ಗ್ರಾಮಸಿಬಂದಿಯನ್ನು ಕಡಿಮೆಮಾಡಬಹುದೇ ಎಂಬ ಹಾಲಿ ಸರಕಾರದವರು ನಡಿಸುವ ಆಲೋಚನೆ ಕುರಿತು ಈ ಮುಂದಿನ ವಿಷಯವನ್ನು ಸರ್ವಾನುಮತದಿಂದ ನಿರ್ಣಯಮಾಡಲಾಯಿತು.

ಸೆಟ್ಲಮೆಂಟು ಆದ್ಮೇಲೆ ಬಂದ ದಿನಾರಭ್ಯ ಶ್ಯಾನಭೋಗರ ಕೆಲಸಗಳು ದಿನೇ ದಿನೇ ವೃದ್ಧಿಯಾಗುತ್ತವೆ ಜೊಯಿಂಟ್ ಪಟ್ಟಿಗಳೂ, ಮೂಲಗೇಣಿ ಪಟ್ಟಿಗಳೂ ಸಿಂಗಲ್ ಪಟ್ಟೆಗಳೂ ಕೂಡಿ ಪಟ್ಟೆಗಳ ಸಂಖ್ಯೆ ಹೆಚ್ಚಾದ್ದರಿಂದ ಎಷ್ಟೋ ಗ್ರಾಮಗಳಲ್ಲಿ ಜಮಾಬಂದಿ ವ ಕಿಸ್ತ ವಸೂಲು ಸಮಯ ಶ್ಯಾನುಭಾಗನು ಬೇರೆ ಜನರ ಸಹಾಯ ಪಡೆಯಬೇಕಾಗುತ್ತದೆ.

ಲೇಂಡರಿಕಾರ್ಡು ಸಿಬಂದಿಯವರ ಕೆಲಸಗಳು ಇನ್ನು ಒಂದು ಕ್ರಮಕ್ಕೆ ಬರಲಿಲ್ಲ. ಆ ಡಿಪಾರ್ಟುಮೆಂಟಿನ ಕೆಲಸಗಳು ದಿನೇ ದಿನೇ ಹೊಸ ಹೊಸ ನಮೂನೆಯಿಂದ ಏರ್ಪಡುತ್ತಾ ಬರುತ್ತವೆ. ಇನ್ನು ಈ ಕೆಲಸಗಳು ಜಾಸ್ತಿಯಾಗುತ್ತಾ ಬರುವುದಲ್ಲದೆ ಕಡಿಮೆಯಾಗುವ ಸಂಭವವಿಲ್ಲ. ಹಳ್ಳಿಗ್ರಾಮಗಳ ಭಾಷೆ ಹೆಚ್ಚಿರುವುದರಿಂದ ಅಲ್ಲಿ ಸರ್ವೇಕಲ್ಲು ಪಹಣಿ ಅಂಥ ವಗೈರೆ ಕೆಲಸಗಳನ್ನು ಸಮರ್ಪಕವಾಗಿ ನಡಿಸುವುದು ಈಗಲೇ ದುಸ್ತರವಾಗಿದೆ.

ಡಾಕ್ಟರಿ ಕೆಲಸಗಳಲ್ಲದೆ ಅನಿರೀಕ್ಷಿತವಾದ ಎಷ್ಟೋ ವಿಷಯಗಳ ಕುರಿತು ಜರೂರಾತಿಯಿಂದ ಸಮರ್ಪಕವಾದ ಅನುಭವವನ್ನು ಶ್ಯಾನಭೋಗನು ಕೊಡಬೇಕಾಗುತ್ತದೆ. ಇಂಥಾ ಸಂಗತಿಗಳಲ್ಲಿ ಈಗ ಇರುವ ಸಿಬಂದಿಯಿಂದಲೇ ತಕ್ಕ ಕಾಲಕ್ಕೆ ಸರಿಯಾಗಿ ಜವಾಬು ಕೊಡಲಿಕ್ಕೆ ಕಷ್ಟವಾಗುತ್ತದೆ. ಅಂಥಾ ಸ್ಪೆಶಲ್ ಕೆಲಸಗಳ ಬಗ್ಗೆ ಮುಂದೆ ಪ್ರತ್ಯೇಕ ಸಿಬಂದಿ ಇದ್ದರೂ ಗ್ರಾಮಗಳಲ್ಲಿ ಅಂಥಾ ಎಲ್ಲಾ ಕೆಲಸಗಳನ್ನು ಶ್ಯಾನಭಾಗನೊಬ್ಬನೇ ನಿರ್ವಹಿಸಬೇಕಾಗಿದೆ.

ರಿವಿನ್ಯೂ ವ ಲೇಂಡರಿಕಾರ್ಡು ವಗೈರೆ ಅನೇಕ ಸಂಗತಿಗಳಲ್ಲಿ ಮೂಲ ರಿಕಾರ್ಡು ಶ್ಯಾನಭಾಗನೇ ಸಂಗ್ರಹಿಸಬೇಕಾದ್ದು. ಮೇಲ್ಪಂಕ್ತಿ ಇದ್ದಾಗ್ಯೂ ಮೂಲ ರಿಕಾರ್ಡು ಸರಿಯಾಗಿ ಆಗದಿದ್ದರೆ ಮೇಲ್ಪಂಕ್ತಿಯಿಂದ ಅವುಗಳ ಸ್ಥಿತಿ ಸಂಪಾದಿಸಿಕೊಂಡು ಹೋಗಲಿಕ್ಕೆ ಎಂದೂ ಸಾಧ್ಯವಲ್ಲ.

ಈ ಎಲ್ಲಾ ಸಂಗತಿಗಳಿಂದ ಶ್ಯಾನಭಾಗರ ಸಿಬಂದಿಯನ್ನು ಈಗಿನದಕ್ಕಿಂತ ಕಡಿಮೆ ಮಾಡಿದರೆ ಕೆಲಸವು ಎಂದೂ ಸರಿಯಾಗಿ ನಡಿಯಲಾರದು. ಇನ್ನು ತರ್ಫಗಳನ್ನು—ದೊಡ್ಡದು ಮಾಡಿದರೆ ಕೆಲಸ ಯಾರಿಂದಲೂ ತೃಪ್ತಿಕರವಾಗಿ ನಡಿಸಿ ಬರಲಿಕ್ಕೆ ಸಾಧ್ಯವಿಲ್ಲ.

ಈ ವಲ್ಲಂಟೆ ೬ ೭ ಸರ್ತಿ ನಡೆದ ಗ್ರಾಮಸಿಬಂದಿ ರಿವಿಜನ್‌ಗಳಲ್ಲಿ ಶ್ಯಾನಭಾಗಿ ಇಸಂ ಏರಿಸುತ್ತಾ ಬಂದದ್ದಲ್ಲದೆ ಎಂದೂ ಕಡಿಮೆ ಮಾಡಿದ್ದುದಿಲ್ಲ. ಇನ್ನು ಕ್ರಮೇಣ ಶ್ಯಾನಭಾಗಿ ಇಸಂಗಳನ್ನು ಏರಿಸುವ ಅವಶ್ಯವೇ ಒದಗಬಹುದು.

ಶ್ಯಾನಭೋಗರ ಸಿಬಂದಿಯನ್ನು ಕಡಿಮೆ ಮಾಡಲಿಕ್ಕೆ ಸಾಧ್ಯವೋ ಎಂಬ ವಿಷಯದಲ್ಲಿ ಲೇಂಡರಿಕಾರ್ಡ ಇಲಾಖೆಯವರ ಅಭಿಪ್ರಾಯವನ್ನು ಸಹಾ ಪಡೆಯಬೇಕೆಂತ ಮಾನ್ಯ ಜಿಲ್ಲಾ ಕಲೆಕ್ಟರ್ ದೊರೆಗಳವರನ್ನು ಈ ಸಭೆಯವರು ಪ್ರಾರ್ಥಿಸುತ್ತಾರೆ.

ಮಾನಿಕವಾದ ಹಕ್ಕಿನ ಕೆಲಸವೆಂಬ ಭರವಸೆಯಿಂದ ಪೆನ್ಶನ್ ಸಹ ಇಲ್ಲದೆ ಈ ವರೆಗೆ ಕಡಿಮೆ ಸಂಬಳದಿಂದ ಕೆಲಸ ಮಾಡಿದವರನ್ನು ಈಗ ಕೆಲಸದಿಂದ ತಪ್ಪಿಸಿದರೆ ಅವರು ಕೇವಲ ಅನ್ಯಾಯ ಹೊಂದುತ್ತಾರೆಂಬ ಸಂಗತಿಯನ್ನು ದಯಾಳು ಕಲೆಕ್ಟರ್ ದೊರೆಗಳವರು ಆಲೋಚಿಸಬೇಕಾಗಿ ಈ ಸಭೆಯವರು ವಿನಯಪೂರ್ವಕ ಪ್ರಾರ್ಥಿಸುತ್ತಾರೆ.

ಗ್ರಾಮಸಿಬಂದಿ ಕಡಿಮೆ ಮಾಡುವ ವಿಷಯ ಮುಲ್ಕಿ ಡಿವಿಜನ್ ಕಾನ್ಫರೆನ್ಸ ಪಟೇಲರು ಹಿಂದಿನ ಕಲೆಕ್ಟರ್ ದೊರೆಗಳವರಿಗೆ ಬರಕೊಂಡ ಮನವಿಯು ಕೇವಲ ಸ್ವಾರ್ಥದ್ದು ವ ಅವರು ಪಟ್ಟ ಅಭಿಪ್ರಾಯವು ಸರಿಯಾದ್ದಲ್ಲ ಮತ್ತು ಸಾರಕ್ಕು ವಿಚಾರ ಪೂರ್ವಕವಾಗಿದ್ದಲ್ಲ. ಅದನ್ನು ಈ ಸಭೆಯವರು ವಿರೋಧಿಸುತ್ತಾರೆ.

ರೂಪಾಯಿ ೮ ಸಾವಿರಕ್ಕೆ ಮೀರಿದ ತೀರ್ವೆಯ ತರ್ಫಗಳಲ್ಲಿ ಒಬ್ಬನೇ ಶ್ಯಾನಭೋಗನಿಂದ ಕೆಲಸ ನಡಿಸಬರಲಿಕ್ಕೆ ಸಾಧ್ಯವಿಲ್ಲದರಿಂದ ಅಂಥಾ ತರ್ಫಗಳನ್ನು ವಿಭಾಗಿಸಬೇಕು, ಇಲ್ಲವೆ ಅಸಿಸ್ಟೆಂಟ್ ಶ್ಯಾನಭಾಗನನ್ನು ನೇಮಿಸಬೇಕು.

ಈ ಎಲ್ಲಾ ಸಂಗತಿಗಳನ್ನು ಮಾನ್ಯ ಕಲೆಕ್ಟರ್ ದೊರೆಗಳವರು ಪರಿಶೀಲಿಸಿ, ಶ್ಯಾನಭೋಗಿ ಇಸಮನ್ನು ಕಡಿಮೆ ಮಾಡದೆ ಇರಬೇಕೆಂದು ಈ ಸಭೆಯವರು ಮಾಡಿದ ಪ್ರಾರ್ಥನೆಯಂತೆ ಠರಾವನ್ನು ಸಹಾ ಏರಿಸಬೇಕಾಗಿ ಈ ಸಭೆಯವರು ನಮ್ರತೆಯಿಂದ ಬೇಡುತ್ತಾರೆ.

ಇದರ ನಕಲನ್ನು ಡಿಸ್ಟ್ರಿಕ್ಟ ಕಲೆಕ್ಟರ್ ದೊರೆಗಳವರಿಗೆ ಕಳುಹಿಸುವ ಅಧಿಕಾರವನ್ನು ಅಧ್ಯಕ್ಷರಿಗೆ ಕೊಡಲಾಯಿತು.

ಹಾಜರಿದ್ದ ಶ್ಯಾನಭೋಗರು ಮರವಂತೆ ಶ್ಯಾನಭಾಗ ಕಿ ವಿಶ್ವೇಶ್ವರಯ್ಯ ಸಹಾ—೩೬ ಜನರು

ದಕ್ಷಿಣ ಕನ್ನಡಾ ದ್ರಾವಿಡ ಬ್ರಾಹ್ಮಣರ ಪರಿಷತ್ತು.

ಬರುವ ಡಿಶಂಬರ ತಾ ೨೭ ಮತ್ತು ೨೮ರಲ್ಲು ದಕ್ಷಿಣಕನ್ನಡಾ ದ್ರಾವಿಡ ಬ್ರಾಹ್ಮಣರ ಪರಿಷತ್ತನ್ನು ಮಂಗಳೂರಲ್ಲಿ ಕೂಡಿಸುವ ಉದ್ದೇಶದಿಂದ ರಾ। ಯು ಸಿ ಕೃಷ್ಣ ಭಟ್ಟರು, ಕಲ್ಯಾಡಿ ಲಕ್ಷ್ಮೀನಾರಾಯಣರಾಯರು, ನೆಲ್ಲಿಕಾಯಿ ವೆಂಕಟರಾಯರು, ಪಾಂಗಾಳ ಸುಬ್ರಾಯರು ವಗೈರೆ ಒಂದು ಉಪಮಂಡಳಿಯು ಮಂಗಳೂರಲ್ಲಿ ಏರ್ಪಟ್ಟಿದೆ. ಉಪಮಂಡಳಿಯು ಬರುವ ಸಪ್ಟಂಬರ ತಾರೀಕು ೧೨ಕ್ಕೆ ರಾ। ಭೀಮ ಕೇಶವಭಟ್ಟರ ಡೊಂಗರಕೇರಿ ಮನೆಯಲ್ಲಿ ಸಾಯಂಕಾಲ ೩ ಗಂಟೆಗೆ ಕೂಡುವುದು. ಮುಂದಿನ ಆಲೋಚನೆ ಬಗ್ಗೆ ಈ ಜಿಲ್ಲೆಯ ಎಲ್ಲಾ ಭಾಗಗಳಿಂದ ಸ್ವಜಾತಿಯ ಗೃಹಸ್ಥರು ದಯಮಾಡಬೇಕಾಗಿ ವಿನಂತಿ

ನೆಲ್ಲಿಕಾಯಿ ವೆಂಕಟರಾವ್,
ಅಧ್ಯಕ್ಷರು

ನೋಟೀಸು.

ದಕ್ಷಿಣ ಕನ್ನಡಾ ಡಿಸ್ಟ್ರಿಕ್ಟ ಜಡ್ಜರ ಕೋರ್ಟಿನಲ್ಲಿ.

O P ನಂಬ್ರ $\frac{}{1920}$

ದೇವು ಬೆಳ್ಚಾಡ—ಅರ್ಜಿದಾರ

ದಕ್ಷಿಣ ಕನ್ನಡಾ ಜಿಲ್ಲಾ ಮಂಗಳೂರು ತಾಲೂಕು ತಲಪಾಡಿ ಗ್ರಾಮದ ದೇವಿಸಂಗನ ಮಗ ಮೃತಪಟ್ಟ ತಿಮ್ಮ ಬೆಳ್ಚಾಡನಿಗೆ ಬರತಕ್ಕ ಸಾಲಮೂಲ ವಗೈರೆಯನ್ನು ವಸೂಲು ಮಾಡುವದು ಸರ್ಟಿಫಿಕೇಟು ಕೊಡಬೇಕಾಗಿ ಸದರಿ ಮೃತನ ತಮ್ಮ ದೇವು ಬೆಳ್ಚಾಡನು ಈ ಕೋರ್ಟಿಗೆ ಅರ್ಜಿ ಕೊಟ್ಟಿರುತ್ತಾನೆ. ಅದಕ್ಕೆ ಆಕ್ಷೇಪ ಇರತಕ್ಕವರು ಇದೇ ಸಪ್ಟಂಬರ ತಿಂಗಳ 11ನೇ ತಾರೀಕಿನ ಶನಿವಾರ ದಿವಸಕ್ಕೆ ಮುಂಚಿತವಾಗಿ ಆರ್ಜಿಯನ್ನು ದಾಖಲುಮಾಡತಕ್ಕದ್ದು

ಮಂಗಳೂರು, ತಾ. 1920 } M N Suvarana
Vakil for petr

ನೋಟೀಸು.

ದಕ್ಷಿಣ ಕನ್ನಡ ಡಿಸ್ಟ್ರಿಕ್ಟ ಕೋರ್ಟಿನಲ್ಲಿ
O P No $\frac{88}{20}$

ಗಿಲ್ಬರ್ಟ ಡಿ ಪಿನಿಹಾಸ್—ಅರ್ಜಿದಾರ

ಸದ್ರಿ ಅರ್ಜಿದಾರನು ಮೃತಪಟ್ಟ ಆತನ ತಂದೆ ಜೆ ಎ ಪಿನಿಹಾಸನ ಸ್ಥಿರ ಚರ ಆಸ್ತಿಯ ಬಗ್ಗೆ ಅರ್ಜಿದಾರನ ಹೆಸರಲ್ಲಿ ಲೆಟರ್ಸ್ ಕೊಡಬೇಕಾಗಿ ಮೇಲ್ಕಂಡ ಕೋರ್ಟಿನಲ್ಲಿ ಅರ್ಜಿ ದಾಖಲು ಮಾಡಿದ್ದಾನೆ. ಸದ್ರಿ ಅರ್ಜಿಯ ತನಖಿಯು ತಾ 19—10—1920ಕ್ಕೆ ಇಟ್ಟಿದೆ. ಸದ್ರಿ ಅರ್ಜಿ ವ್ಯವಹರಣೆಯಲ್ಲಿ ಯಾರಿಗಾದರೂ ಆಕ್ಷೇಪ ಇದ್ದರೆ ಸದ್ರಿ ಕೋರ್ಟಿನಲ್ಲಿ ಸದ್ರಿ ತಾರೀಕಿನ ಒಳಗೆ ಜಾಹೀರು ಮಾಡಿಕೊಳ್ಳತಕ್ಕದ್ದು

Mangalore Dated 7 8 20 } J H A Mascarenhas B A LL B
Pleader for Petitioner

ಪ್ರಕಟನೆ.

ರಾ। ಕುಂದೂರು ಲಕ್ಷ್ಮೀನಾರಾಯಣ ಪುಣಿಂಚತ್ತಾಯರಿಂದ ರಚಿತವಾದ ಭಾಮಿನೀ ಷಟ್ಪದಿ ಪದ್ಯಗಳಿಂದ ಕೂಡಿದ ಲೋಕಮಾನ್ಯರ ಚಿತ್ರಸಹಿತವಾದ 'ಬಾಲಗಂಗಾಧರಸ್ತವ' ಎಂಬ ಪುಸ್ತಕವು 'ಭಾರತಮಾತೆ' ಮತ್ತು 'ಮಹಾತ್ಮ ಗಾಂಧಿ' ಇವರ ಚಿತ್ರಗಳಿಂದೊಡಗೂಡಿ ಸಿದ್ಧವಾಗಿರುತ್ತದೆ

ಪುಸ್ತಕದ ಬೆಲೆ ಆಣೆ ೧ ಅಂಚೆವೆಚ್ಚ ಪ್ರತ್ಯೇಕ ವಿ ಪಿ ಯಾಗಿ ಕಳುಹಿಸುವಾಗ ಚಾರ್ಜು ಹೆಚ್ಚಿಗೆ ಬೀಳುವುದರಿಂದ ಪರಸ್ಥಳದವರು ಹತ್ತು ಪುಸ್ತಕಗಳ ಒಳಗೆ ಎಷ್ಟನ್ನಾದರೂ ತರಿಸಿಕೊಳ್ಳುವಲ್ಲಿ ಪುಸ್ತಕದ, ಯಾ, ಪುಸ್ತಕಗಳ ಬೆಲೆಯ ಸ್ಟಾಂಪನ್ನೂ, ಅಂಚೆಯ ಅರ್ಧಾಣೆಯ ಚೀಟನ್ನೂ ಮುಂದಾಗಿ ಕಳುಹಿಸತಕ್ಕದ್ದು. ಹೆಚ್ಚಿಗೆ ಬೇಕಾದವರಿಗೆ ಮಾತ್ರ ವಿ ಪಿ ದ್ವಾರಾರವಾನಿಸಲಾಗುವದು

ದೊರೆಯುವ ಸ್ಥಳ —

ಪಿ. ಯಲ್. ಪುಣಿಂಚತ್ತಾಯ,
ತ್ರಿಶೂಲೇಶ್ವರ, ಮಂಗಳೂರು

ಅಥವಾ,

ಕೆ ಯಮ್. ದಾಸಪ್ರಭು,
ತ್ರೇಬೀದಿ ಮಂಗಳೂರು

Casuarina Plantation for sale.

Casuarina cocoanut and other plantations on the seashore one compact block of 37 51 acres assessed at as 6 per acre comprised by Patta No 287 S Nos $\frac{99}{3}$ $\frac{138}{2\&1B}$ & 214 in West Tonse Village 5 miles North West of Udipi between Malpe and Hangarkatta. Casuarina trees were planted between 1903 and 1906 with a decent tiled bungalow and 2 tenants houses in the centre. A central place for fish guano factory and trade

Sale price plantation with land Rupees 20 000 casuarina trees only Rs 15,000 or approximate offer

For further particulars apply to

A P Fernandes,
Hildale Ile Urva Post
(S CANARA)

ಮಾರಾಟಕ್ಕಿದೆ.

ದಕ್ಷಿಣ ಕನ್ನಡಾ ಜಿಲ್ಲಾ ಉಡುಪಿ ತಾಲೂಕು ಪಡು ತೋನ್ಸೆ ಗ್ರಾಮದ ಗುಜ್ಜರ ಬೆಟ್ಟನಲ್ಲಿರುವ ಜಬುಕಿನ ಯಾನೆ ಗಾಳಿ ಮರ, ಕಾಡು ತೆಂಗಿನ ವಗೈರೆ ಫಲಮರಗಳ ತೋಟ, ಬಂಗ್ಲೆ, ಒಕ್ಕಲಮನೆಗಳು ವಗೈರೆ ಸರ್ವಾದಿ ಪಟ್ಟಾ ನಂಬ್ರ 287 ಸರ್ವೆ ನಂಬ್ರ $\frac{99}{3}$ $\frac{138}{2\,1B}$ 214 —ಎಕ್ರೆ 37 57 ತೀರ್ವೆ ಎಕ್ರೆಗೆ ಆಣೆ ೬ರ ದರದಲ್ಲಿ ಕ್ರಯ—ಸ್ಥಳ ಸಮೇತ ಸುಮಾರು ಅಂದಾಜು ರೂ 20 000 ಜಬುಕಿನ ಮರಗಳಿಗೆ ಮಾತ್ರ ರೂ 15,000 ವಿಳಾಸ —

ಎ ಪಿ. ಫೆರ್ನಾಂಡಿಸ್,
ಉರ್ವ ಪೋಸ್ಟು ಮಂಗಳೂರು,
ದಕ್ಷಿಣ ಕನ್ನಡಾ ಜಿಲ್ಲಾ

FOUNTAIN PENS.

ಫೌಂಟನ್ ಪೆನ್ನುಗಳು.

14 [illegible] ದ ಮೊನೆಯುಳ್ಳ ಅತ್ಯುತ್ತಮವಾದ ವಿವಿಧ ತರದ ಫೌಂಟನ್ ಪೆನ್ನುಗಳು ಈಗ ತಾನೇ ಬಂದಿವೆ.

ಕಾಮತ್ ಸೇಫ್ಟಿ ಪೆನ್ ಕ್ರಯ	ರೂ	9—8—0
„ ಫೌಂಟನ್ ಪೆನ್		9—0—0

[illegible] ಕೊಳ್ಳುವವರಿಗೆ ಪ್ರತ್ಯೇಕ ದರಗಳು

ಪಿ. ಎಮ್. ಕಾಮತ್ ಎಂಡ್‌ಕೊ.
ಕೆಮಿಸ್ಟ್ಸ್, ಮಂಗಳೂರು.

50 ರೂಪಾಯಿ ಬಹುಮಾನ.

ಈ ಕೆಳಗೆ ದಸ್ಕತು ಮಾಡಿದವರ ಬಾಬತು 1919ನೇ ಇಸವಿಯ ಮತ್ತು ಆ ಮೊದಲಿನ 3 ವರ್ಷಗಳ ಆಳುಗಳಿಗೆ ಯಡ್ವಾನ್ಸ ಹಣ ಸಂದ ಮತ್ತು ಅವರಿಂದ ಹಣ ವಸೂಲು ಬಂದ ಪ್ರತಿ 200ಪೇಜುಗಳುಳ್ಳ ಅಚ್ಚಿನ ಬೂಕುಗಳು 4 ಮತ್ತು ಆ ಸಂಬಂಧದ ಇತರ ಹಳೇ ಬಚ್ಚಿದ ಪುಸ್ತಕಗಳು ಇಟ್ಟಿರುವ ಸಣ್ಣ ಸಂದತವಾದ ಹ್ಯಾಂಡ್ ಬೊಕ್ಸ್ ಇದೇ ಕಳೆದ ಜುಲೈ 23ರಲ್ಲು ಗಾಡಿಯಲ್ಲಿ ಬರುತ್ತಾ ಗುರುವ್ಯಾನ ಕೆರೆಯಲ್ಲೋ, ಚಾರ್ಮಾಡಿಯಲ್ಲೋ ಬಿದ್ದುಹೋಗಿರುತ್ತಿದೆ. ಇದು ಸಿಕ್ಕಿದವರು ಸ್ವದೇಶಾಭಿಮಾನಿ ಆಫೀಸಿಗೆ ತಂದುಕೊಟ್ಟು ತಿಳಿಸಿದಲ್ಲಿ ಮನಃಪೂರ್ವಕವಾಗಿ ಮೇಲ್ಕಂಡ ಬಹುಮಾನವನ್ನು ಕೆಳಗೆ ದಸ್ಕತು ಹಾಕಿದವರು ಕೊಡುವರು.

ISIDORE COLACO,
Wartyhully Estate Saklaspur,
DT HASSAN

The Canara Bank, Limited, Mangalore.

ಕೆನರಾ ಬ್ಯಾಂಕ್ ಲಿಮಿಟೆಡ್, ಮಂಗಳೂರು.

ESTABLISHED JULY 1906. — 1906ನೇ ಜುಲೈ ತಿಂಗಳಲ್ಲಿ ಸ್ಥಾಪಿಸಲ್ಪಟ್ಟಿತು.

Authorised and fully paid up Capital Rs. 300,000—0—0 — ಅಧಿಕಾರಗೊಳಿಸಲ್ಪಟ್ಟು ಪೂರ್ಣವಾಗಿ ಕಟ್ಟಿದ ಮೂಲಧನವು ರೂ. 300,000—0—0

Reserve and other sinking Funds ,, 138772—0—2 — ಕ್ಷೇಮನಿಧಿ ಮತ್ತು ಇತರ ಫಂಡುಗಳು ,, 138,772—0—2

THE BANK RECEIVES FIXED, CURRENT ACCOUNT, & SAVINGS BANK DEPOSITS.

ಕಾಯಂ ಮತ್ತು ಚಾಲ್ತಿ ಠೇವಣಾತಿಗಳೂ, ಸೇವಿಂಗ್ಸ್ ಬೇಂಕ್ ಠೇವಣಾತಿಗಳೂ, ಪಡಕೊಳ್ಳಲಾಗುತ್ತವೆ.

For further particulars apply to the Secretary.

☞ ವಿಶೇಷ ಮಾಹಿತಿ ಬಗ್ಗೆ ಸೆಕ್ರೆಟರಿಗಳಿಗೆ ಬರಕೊಳ್ಳುವದು.

Canara Bank Ltd.,
Mangalore, 10th May 1920.

K. Venkat Rao,
Secretary

ಮೈಸೂರು ಊದುಬತ್ತಿಗಳು.

ಪ್ರಪಂಚದಲ್ಲಿ ಪ್ರಸಿದ್ಧವಾದ ನಾನು ತಯಾರುಮಾಡುವ ಆರೋಗ್ಯಜನಕವಾದ ಊದುಬತ್ತಿ ಮತ್ತು ಇತರಸುಗಂಧ ದ್ರವ್ಯಗಳಿಗೆ ದೇಶಾಭಿಮಾನಿಗಳು ಪ್ರೋತ್ಸಾಹಿಸುವಿರಾಗಿ ನಂಬಿರುತ್ತೇನೆ.

ಊದುಬತ್ತಿಗಳು. 24 ರೂಪಾಯಿ ತೂಕದ ಸೇರು 1ಕ್ಕೆ ರೂ. 12, 6, 3, 2-8-0, 1-0-0.

ಅತಗಜ ಮತ್ತು ಬಿಲ್ಲೆಗಳು. ತೊಲ 1ಕ್ಕೆ ರೂ. 3, 2, 1.

ಬಾಲಗ್ರಹಧೂಪ. ಮಕ್ಕಳಿಗೆ ಬರುವ ಗಾಳಿಚೇಷ್ಟೆಗೆ ಸಂಜೀವನವಾದ ಧೂಪ. ಇದಕ್ಕಿಂತಲೂ ಬೇರೆ ವಿಧವಾದ ಚಿಕಿತ್ಸೆಯೂ ಇಲ್ಲ. ಟಿನ್ 1ಕ್ಕೆ 8 ಆಣೆ.

ಜರದ. ಹೊಗೆಸೊಪ್ಪು ತಿನ್ನತಕ್ಕವರಿಗೆ ಅತಿ ರುಚಿಕರವಾದದ್ದು. ಶೀಸೆ 1ಕ್ಕೆ 6 ಆಣೆ.

ರಾಯಲ್ ಸುಗಂಧಿ. ಶೀಸೆ 1ಕ್ಕೆ 8 ಆಣೆ. ಇದು ಗಂಧದ ಬಿಲ್ಲೆಯನ್ನು ತೇದು ಯಾವಾಗಲೂ ಕೆಡದಂತೆ ಬಹಳ ಸುವಾಸನೆಯಾಗಿ ತಯಾರಿಸಿರುತ್ತೆ. 1 ಶೀಸೆ ಸುಮಾರು 100 ಜನಕ್ಕೆ ಸಾಕಾಗುತ್ತೆ.

ಲೆವೆಂಡರ್. ಶೀಸೆ 1ಕ್ಕೆ 1—4—0.

ವರ್ತನೆಯಾಗಿ ನಮ್ಮ ಸಾಮಾನುಗಳನ್ನು ಕರಿಸಿಕೊಳ್ಳತಕ್ಕವರಿಗೆ ವರುಷಕ್ಕೆ ಎರಡಾವರ್ತಿ ಬಹುಮಾನ ಹಂಚಲ್ಪಡುತ್ತೆ. ಈ ಮೇಲ್ಕಂಡ ಸಾಮಾನುಗಳೆಲ್ಲಾ ಹೋಲ್ ಸೇಲಾಗಿಯೂ ರಿಟೇಲಾಗಿಯೂ ಬಿಕರಿಗೆ ಸಿದ್ಧವಾಗಿರುತ್ತವೆ.

ಟಿ. ಎಲ್. ಉಪಾಧ್ಯಾಯ ಅಂಡ್ ಸನ್ಸ್,
ಸುಗಂಧಕಾರಿ, ಮೈಸೂರು.

ಜಗದ್ವಿಖ್ಯಾತವಾದ ಶ್ರೀ ದೇವೀಪ್ರಸಾದ ಕಂಪೆನಿಯ

ಸುಪ್ರಸಿದ್ಧವಾದ ಮಹೌಷಧಗಳು.

"ಧನ್ವಂತರೀ ಬಾಮ್."

ಶುದ್ಧ ವನಸ್ಪತಿಗಳಿಂದಲೇ ಶಾಸ್ತ್ರೋಕ್ತವಾಗಿ ತಯಾರಿಸಲ್ಪಟ್ಟ ವೇದನಾಹಾರಿ ಮುಲಾಮು. ಇದರಿಂದ ವಾತ, ಕಸ, ಜಗತ, ಉಳುಕು ಘಾಯ, ತಲೆನೋವು, ಸೊಂಟನೋವು, ದೆನ್ನನೋವು, ಮುಂತಾದ ಎಲ್ಲಾ ತರದ ವೇದನೆಗಳು ಅತಿ ಕ್ಷಿಪ್ರದಲ್ಲಿ ಸಂಪೂರ್ಣವಾಗಿ ಗುಣ ಹೊಂದುವವು. ಬಾಟ್ಲಿ ೧ರ ಕಿಮ್ಮತು ೦—೭—೦; ಒಂದು ಡಜನ್ ಬಾಟ್ಲಿಗಳಿಗೆ ರೂ. ೪—೧೨—೦.

"ಗಜಕರ್ಣದ ಮುಲಾಮು"

ಗಜಕರ್ಣ, ಉಸಬು, ಖಜ್ಜಿ, ಪದ್ಮ, ಹುಳಕಡ್ಡಿ, ಸೊಂಟಕಜ್ಜಿ ಮುಂತಾದ ಸಮಸ್ತ ವಿಧವಾದ ಚರ್ಮವ್ಯಾಧಿಗಳು ಬಂದರೆ ಸಹ ಮಾಗಿಸುವದರೊಳಗೆ ನಿಸ್ಸಂದೇಹವಾಗಿ ಇದರಿಂದ ನಿವಾರಣೆಯಾಗುವವು. ಬಾಟ್ಲಿ ೧ಕ್ಕೆ ೦—೫—೦; ಒಂದು ಡಜನಿಗೆ ರೂ. ೩—೮—೦.

ನಮ್ಮ ಔಷಧಗಳ ಗುಣೋನ್ನತಿಯ ಕುರಿತು ಅನೇಕ ಮಹನೀಯರುಗಳಿಂದಲೂ ಡಾಕ್ಟರುಗಳಿಂದಲೂ ಶಿಫಾರಸು ಪತ್ರಗಳು, ಮೆಡಲು ದೊರೆತಿರುವವು. ಜಾಸ್ತಿಯಾಗಿ ಕೊಂಡುಕೊಳ್ಳತಕ್ಕವರಿಗೂ ವ್ಯಾಪಾರಿಗಳಿಗೂ ಯೋಗ್ಯ ಕಮಿಶನು ಕೊಡಲಾಗುವದು, ಕ್ಯಾಟಲಾಗಿಗೂ ವಿಶೇಷ ಮಾಹಿತಿಯ ಬಗ್ಗೂ ಪತ್ರವ್ಯವಹಾರ ಮಾಡೇನ.

ದಿ. ಮ್ಯಾನೇಜರ್ — ಶ್ರೀ ದೇವಿಪ್ರಸಾದ ಕಂಪೆನಿ,
ಪೋಸ್ಟು ಬಾರಕೂರು, ದ. ಕನ್ನಡ.

"ಟಿಶ್ಯುರೆಮಿಡಿಸ್"

ಎಂದರೆ

ಶುಸ್ಲರ್ ಪಂಡಿತರ ಹನ್ನೆರಡು ಲವಣ ಔಷಧಗಳು.

1 ಕಲ್ಕೇರಿಯ ಫ್ಲೋರ್	7 ಕಾಲಿ ಸಲ್ಫ್
2 ಕಲ್ಕೇರಿಯ ಫೋಸ್	8 ಮಗ್ನೆಸಿಯ ಫೋಸ್
3 ಕಲ್ಕೇರಿಯ ಸಲ್ಫ್	9 ನಾಟ್ರಮ್ ಮ್ಯೂರ್
4 ಫೆರಮ್ ಫೋಸ್	10 ನಾಟ್ರಮ್ ಫೋಸ್
5 ಕಾಲಿ ಮ್ಯೂರ್	11 ನಾಟ್ರಮ್ ಸಲ್ಫ್
6 ಕಾಲಿ ಫೋಸ್	12 ಸಿಲಿಸಿಯಾ

ಕ್ರಯ		ರೂ. ಆ. ಪೈ.
ಎರಡು ಡ್ರಾಮಿನ ಸೈಜ್	D ಶೀಸೆ ಒಂದಕ್ಕೆ	0-3-6
ನಾಲ್ಕು ,,	C ,, ,, ,,	0-6-0
ಒಂದು ಟಿನ್ನಿನ	A ,, ,, ,,	0-13-6
ಹನ್ನೆರಡು ಲವಣಗಳ ಎರಡು ಡ್ರಾಮಿನ ಶೀಸೆಗಳುಳ್ಳ ಒಳ್ಳೇ ನವಮೂನೆಯ ಚಿಕ್ಕಪೆಟ್ಟಿಗೆಗೆ		3—0—0
ಹನ್ನೆರಡು ಲವಣಗಳ ಒಂದು ಟಿನ್ನಿನ ಶೀಸೆಗಳುಳ್ಳ ಪೆಟ್ಟಿಗೆಗೆ ಜೀವರಸಾಯನ ವೈದ್ಯ ಶಾಸ್ತ್ರ ಪುಸ್ತಕ ಸಮೇತ		10—0—0

ಜೀವರಸಾಯನ ವೈದ್ಯಶಾಸ್ತ್ರ ಎಂಬ ಹೊಸ ಪುಸ್ತಕವು. ಇದು ಮೇಲೆ ಹೇಳಿದ ಟಿಶ್ಯು ಔಷಧಗಳನ್ನು ಸರ್ವಸಾಧಾರಣವಾದ ಎಲ್ಲಾ ಕಾಹಿಲೆ ಕಸಾಲೆಗಳಲ್ಲಿ ಉಪಯೋಗಿಸುವ ಕ್ರಮವನ್ನು ಸೂಚಿಸುತ್ತದೆ. ಈ ಪುಸ್ತಕವು ಎಲ್ಲರಿಗೂ ಸುಲಭದರದಲ್ಲಿ ಸಿಕ್ಕುವಂತೆ ಪ್ರಕಟಿಸಿದ್ದೇವೆ. ಕ್ರಯ 12 ಆಣೆ ಮಾತ್ರ. ಬೇಕಾಗಿದ್ದವರು ಕೆಳಗಿನ ವಿಳಾಸಕ್ಕೆ ಬರೆಯಬಹುದು.

ಎ. ಫೆರ್ನಾಂಡಿಸ್,
ಎಲೆಕ್ಟ್ರೊ ಹೋಮಿಯೋಪತಿ ಡಿಸ್ಪೆನ್ಸರಿ, ಮಂಗಳೂರು.

ವೈದ್ಯ ವಿದ್ಯ.

ಯಾವದೊಂದು ವ್ಯಾಧಿಯು ಇಲ್ಲದೆ ಸುಖಸಂಪತ್ತು ಗಳಿಂದಿರಬೇಕಾದರೆ ಓದಿರಿ ರಾಜವೈದ್ಯರ,

ವೈದ್ಯ ವಿದ್ಯ

ಎಂಬ ಪುಸ್ತಕವನ್ನು. ಈ ಪುಸ್ತಕಕ್ಕೆ ಯಾವ ಕ್ರಯವನ್ನೂ ಕೊಡಬೇಡಿರಿ. ವಿಳಾಸವನ್ನು ತಿಳಿಸಿದ ಮಾತ್ರಕ್ಕೆ ಬರುವದು.

ವೈದ್ಯ ವಿದ್ಯ.

ವಿಳಾಸ:—ರಾಜವೈದ್ಯ ನಾರಾಯಣಜಿ ಕೇಶವಜಿ,
27. ಜೈನ ಬಜಾರು ರೋಡು, ಮದ್ರಾಸು.

ರೂ. 1,000 ಬಹುಮಾನ.

ಲೋಕಪ್ರಸಿದ್ಧವಾದ ಸಾಲಾಮಿಸ್ರಿ ಮುರಬ್ಬಾ.

(ಗವರ್ನಮೆಂಟನಲ್ಲಿ ರಿಜಿಸ್ಟರ್ ಮಾಡಲ್ಪಟ್ಟಿದೆ).

ನಮ್ಮಿಂದ ಕಳುಹಿಸುವ ಡಾಂಗಿಯನ್ನು ತೆಗೆದುಕೊಳ್ಳುವಾಗ ಡಿ. ಮನ್ನಾಲಾಲ್, ಡಿಲ್ಲಿ ವೈದ್ಯರು, ಎಂದು ಮುದ್ರಿಸಿರುವ ಲೇಬಲು ಇರುವದನ್ನು ನೋಡಿ ತೆಗೆದುಕೊಳ್ಳಿರಿ. ಈ "ಸಾಲಾಮಿಸ್ರಿ ಮುರಬ್ಬಾ" ಸೇವನೆಯಿಂದ — ವೀರ್ಯವು ನೀರಾಗಿ ಇದ್ದರೂ, ಸ್ವಪ್ನಸ್ಖಲನವಾದರೂ, ಮೂತ್ರದೊಂದಿಗೆ ವೀರ್ಯವು ಹೋಗುತ್ತಿದ್ದರೂ,



ಕೈಕಾಲು ಮತ್ತು ಸೊಂಟದಲ್ಲಿ ನೋವಿದ್ದರೂ; ಹಸಿವು ಇಲ್ಲದಿದ್ದರೂ, ಮಲವಿಸರ್ಜನೆಯು ಸರಿಯಾಗಿ ಆಗದಿದ್ದರೂ, ಶರೀರದಲ್ಲಿ ರಕ್ತವು ಕೆಟ್ಟುಹೋಗಿದ್ದರೂ, ಈ ಸಾಲಾಮಿಸ್ರೀ ಮುರಬ್ಬಾ ಸೇವನೆಯಿಂದ ಗುಣವಾಗಿ ಶರೀರವನ್ನು ಒಳ್ಳೇ ಸ್ಥಿತಿಯಲ್ಲಿಡುವುದು. ಮೆದುಳಿಗೆ ಬಲವನ್ನುಂಟುಮಾಡುವುದು, ಹಳೇ ತಲೆನೋವುಗಳನ್ನು ಹೋಗಲಾಡಿಸುವದು, ಧಾತುವನ್ನು ಹೆಚ್ಚಿಸುವುದು, ಸೊಂಟ ನೋವು ಸ್ವಲ್ಪಮಾತ್ರವೂ ಇರಲಾರದು. ಈ ಸಾಲಾಮಿಸ್ರೀ ಎಂಬುದು ಕಾಬೂಲ್ ಕಂಧಹಾರ್ ದೇಶಗಳಲ್ಲಿ ಬೆಳೆಯುತ್ತದೆ.

ಈ ಮುರಬ್ಬಾ ಸೇವನೆಯಿಂದ ಗುಣಹೊಂದಿದ ಅನೇಕ ದೊಡ್ಡ ಮನುಷ್ಯರಿಂದ ರಂಗೂನ್, ಪಿನಾಂಗ್, ಆಫ್ರಿಕ, ಕಲ್ಕತ್ತ, ಮುಂಬಾಯಿ, ಮದ್ರಾಸ್ ಮೊದಲಾದ ಅನೇಕ ಪ್ರಾಂತ್ಯಗಳಿಂದ ಯೋಗ್ಯತಾಪತ್ರಿಕೆಗಳು ಬಂದಿವೆ. ಬೇಕಾದವರು ಅರ್ಧಾಣೆ ಸ್ಟಾಂಪನ್ನು ಕಳಿಸಿ ಅವುಗಳ ಪ್ರತಿಯನ್ನು ನೋಡಬಹುದು. ಅವನ್ನು ಯಾರಾದರೂ ಸುಳ್ಳು ಎಂದು ನಿರ್ಧಾರಪಡಿಸಿದರೆ ಮೇಲೆ ಕಂಡ ಬಹುಮಾನವು ಕೊಡಲ್ಪಡುವುದು. ನಾವು ಹಾಗೆ ಕೊಡದ್ದೆ ನಿರಾಕರಿಸಿದಲ್ಲಿ ಕೋರ್ಟಿನ ಮೂಲಕ ಪಡೆಯಬಹುದು.

ಒಂದು ಡಬ್ಬಾ ಮುರಬ್ಬಾವನ್ನು ೧೫ ದಿನಗಳು ಉಪಯೋಗಿಸುವುದರಿಂದ ಪೂರಾ ಗುಣ ಕೊಡುತ್ತೆ. ೩-೪ ಡಬ್ಬಿಗಳನ್ನು ಉಪಯೋಗಿಸುವುದರಿಂದ ಜನ್ಮಾಂತರದವರೆಗೂ ಗುಣ ಕೊಡುತ್ತೆ. ಉಪಯೋಗಿಸುವ ವಿಧಾನ ಡಬ್ಬಿಯ ಜತೆಯಲ್ಲಿರುವುದು.

ಕ್ರಯ: ಒಂದು ಡಬ್ಬಿಗೆ ರೂಪಾಯಿ 2.

"ಈಗ ಭಾಂಗಿಯ ಚಾರ್ಜು ಹೆಚ್ಚಿರುವುದರಿಂದ ಕೆಲವು ದಿನಗಳ ಮಟ್ಟಿಗೆ ಟಪ್ಪಾಲು ಖರ್ಚು 1 ಡಬ್ಬಿಗೆ 8 ಆಣೆ; 2 ಯಾ 3 ಡಬ್ಬಿಗಳಿಗೆ 12 ಆಣೆ."

ಡಿ. ಮನ್ನಾಲಾಲ್, ಡಿಲ್ಲಿ ವೈದ್ಯರು,
ಸಾಲಾಮಿಸ್ರಿ ಮುರಬ್ಬ ಡಿಪೋ, ಬೆಂಗಳೂರು ಸಿಟಿ.

ಆರ್. ಮಾರ್ಟಿನ್ಸರ

ಸಾರಸಾಪರಿಲ್ಲಾ

ಈ ಸಾರ್ಸಾಪರಿಲ್ಲಾ ಔಷಧವನ್ನು ಪ್ರತಿದಿನವೂ ನಿರಂತರವೂ ತೆಗೆದುಕೊಳ್ಳುವದರಿಂದ ದೇಹದೊಳಗಿನ ರಕ್ತವನ್ನು ಚೆನ್ನಾಗಿ ಶುದ್ಧಿಮಾಡುತ್ತದೆ. ಉಪದಂಶ, ಕೆಟ್ಟ ರಕ್ತಸಂಬಂಧದಿಂದುಂಟಾದ ಎಲ್ಲಾ ತರಹದ ಕಾಹಿಲೆ, ಉಬ್ಬುವದು, ನರಗಳಲ್ಲಿರುವ ನೋವು, ವಾತ, ಸಂಧಿವಾತ, ಮೂತ್ರಸಾರ, ಕೆಮ್ಮು, ಫರಂಗಿಹುಣ್ಣು, ಕಜ್ಜಿ, ಮತ್ತು ಚರ್ಮದ ರೋಗಗಳು, ವಿಷಕಡಿತದಿಂದುಂಟಾದ ವ್ಯಾಧಿ, ಪೆರಾಲಿಸಿಸ್, ಇವೇ ಮೊದಲಾದುವನ್ನು ನಾಶಮಾಡಿ, ರಕ್ತದಲ್ಲಿರುವ ವಿಷವಸ್ತುವನ್ನು ... ಮುಂತಾದ್ದರಿಂದ ಆದ ವ್ಯಥೆಯನ್ನು ಹೋಗಲಾಡಿಸಿ ರಕ್ತವನ್ನು ಚೆನ್ನಾಗಿ ಶುದ್ಧಿಯಾಗಿಟ್ಟು ಮನುಷ್ಯನನ್ನು ಯಾವಾಗಲೂ ಆರೋಗ್ಯದಲ್ಲಿಡುತ್ತದೆ. ಇದು ಶುದ್ಧವಾದ ವನಸ್ಪತಿಗಳಿಂದ ತಯಾರಿಸಲ್ಪಟ್ಟದ್ದಾಗಿರುತ್ತದೆ. ಬಾಟ್ಲಿ ೧ಕ್ಕೆ ಕ್ರಯ ರೂ. ೧-೧೨-೦

ಆರ್ ಮಾರ್ಟಿನ್ಸರ ಎಗ್ಯೂ ಮಿಕ್ಸ್ಚರ್.

ಇದು ಜ್ವರ, ಶೀತಜ್ವರ, ಮಲೇರಿಯಾ, ಚಾಳಿಜ್ವರ, ಸನ್ನಿಪಾತ, ಕೆಟ್ಟ ವಾಯುವಿನಿಂದುಂಟಾದ ರೋಗ ಇವೇ ಮೊದಲಾದ ಎಲ್ಲಾ ತರಹದ ಜ್ವರ ಸಹಾ ಕ್ಷಣದಲ್ಲಿ ನಾಶಮಾಡುತ್ತದೆ. ಎಲುಬುಗಳಲ್ಲಿ ಹರಡಿಕೊಂಡಿರುವ ಜ್ವರವನ್ನು ಸಹ ನಾಶಮಾಡುವದಲ್ಲದೆ ಇದು ಸಿಹಿಯಾಗಿರುವುದರಿಂದ ಸಣ್ಣ ಕೂಸುಗಳು ಸಹ ಕುಡಿಯಲಿಕ್ಕೆ ಇಷ್ಟಪಡುತ್ತವೆ. ಅನೇಕ ಜನ ವಿದ್ವಾಂಸ ವೈದ್ಯರಿಂದ ಗುಣಮಾಡುವದಕ್ಕಾಗದ ಜ್ವರವನ್ನು ಈ ಎರಡೇ ಎರಡು ಬಾಟ್ಲಿಗಳ ಸೇವನೆಯಿಂದ ಹುಷಾರಾಗಿದೆ. ಬಾಟ್ಲಿ ೧ಕ್ಕೆ ರೂ. ೦—೧೪—೦.

ಆರ್ ಮಾರ್ಟಿನ್ಸರ ಮೂಲವ್ಯಾಧಿ ಮುಲಾಮು.

ಮನುಷ್ಯನಿಗೆ ಮೂಲವ್ಯಾಧಿ ಆದಾಗ, ಬಹಳ ಸಲ ರಕ್ತ ಹೋಯ್ಯುವಿಕೆ, ಮರ್ಮಸ್ಥಾನದಲ್ಲಿ ಉರಿಯುವುದು, ಮಲಬದ್ಧತೆ ಇವೇ ಮುಂತಾದ್ದರಿಂದ ವ್ಯಥೆಪಡುತ್ತಾನೆ. ಈ ಔಷಧದ ಒಂದೇ ಒಂದು ಬಾಟ್ಲಿಯ ಉಪಯೋಗದಿಂದ, ರಕ್ತ ಸುರಿಯುವ ಮೂಲವ್ಯಾಧಿ, ಕಂಕುಳಲ್ಲಿ ನೋಯುವ ಮೂಲವ್ಯಾಧಿ ಮತ್ತು ಎಂಥ ತರಹದ ಕಠಿಣವಾದ ಮೂಲವ್ಯಾಧಿಯಾದರೂ ಕೂಡಲೇ ವಾಸಿಯಾಗುತ್ತದೆ. ಇದು ಒಳ್ಳೇ ಔಷಧಗಳಿಂದ ತಯಾರಿಸಲ್ಪಟ್ಟು ತೆಗೆದುಕೊಳ್ಳುವವರಿಗೆ ಏನೊಂದೂ ನೋವನ್ನು ಕೊಡದೆ ತಂಪಾಗಿ ಮಾಡುತ್ತದೆ. ಬಾಟ್ಲಿ ೧ಕ್ಕೆ ರೂ. ೧—೮—೦.

ವಿಳಾಸ:— ಆರ್. ಡಿ. ಕಟ್ಲೆ ಮತ್ತು ಕಂಪೆನಿ,
ನಂಬ್ರ ಡಿ. ಫ್ರಿಯರ್ ರೋಡ್,
ರೈಟ್ ಎಂಡ್ ಕೋ ಹತರ, ಫೋರ್ಟ್, ಮುಂಬಯಿ.

R. D. Kately & Co.
No. D. Frere Road,
Near Wright & Co. Fort, Bombay.

The Canara Banking Corporation, Udipi, (Limited).

ದಿ ಕೆನರಾ ಬೆಂಕಿಂಗ್ ಕೊರ್ಪೋರೇಶನ್, ಉಡ್ಪಿ, ಲಿಮಿಟೆಡ್,

Authorised capital	3,20,000—0—0
Issued and subcribed capital	50,000—0—0
Paid up capital	40,006—1—11
Deposits	67,746—1—7
Reserve and other Funds as on 31-3-20	8,258—9—6

Fixed deposits received for 3, 6, 9, 12, 24 months at 7% the discretion of the Managing Committee. In the case of all deposits interest will be paid quarterly.

Cummulative deposits are received repayable in 45 months. Rs. 50/— per each rupee deposited monthly.

Current deposits opened free of charge and interest will be paid @ 3½% per annum on the lowest balance between the 4th and the last day of each month.

Loans granted on proper securities and pledges.

A dividend of 8% has been declared for the year ending 31—3—1919.

Payments to the Corporation may be made to the credit of the Corporation at the Bank of Madras, and Canara Bank Mangalore.

UDIPI,
17th July 1920.

ಅಧಿಕಾರಗೊಳಿಸಲ್ಪಟ್ಟ ಮೂಲಧನ	ರೂ. 3,20,000—0—0
ಚಂದಾದಾರಿಕೆಗೆ ಅರ್ಪಿಸಿದ ವ ಚಂದಾ ಎತ್ತಿದ ಮೂಲಧನ	,, 50,000—0—0
ಮೌಲ್ಯ ತೆತ್ತ ಮೂಲಧನ	,, 40,006—1—11
ಠೇವಣಾತಿಗಳು...	,, 67,746—1—7
ಕ್ಷೇಮನಿಧಿ ಮತ್ತು ಇತರ ಫಂಡುಗಳು ...	,, 8,258—9—6

ಕಾಯಂ ಠೇವಣಾತಿಗಳು ತಿಂಗಳು 3, 6, 9, 12, 24ರ ಅವಧಿಗಳಿಗೆ ಆಡಳಿತ ಸಭೆಯವರ ಮನಸ್ಸಿನ ಪ್ರಕಾರ ಸಾಲಿಯಾನ್ ಶೇಕಡಾ 7% ದರದಲಿ ಬಡ್ಡಿ ಕೊಡಲ್ಪಡುವದು. ಎಲ್ಲಾ ಠೇವಣಾತಿಗಳ ಮೇಲಣ ಬಡ್ಡಿ 3 ತಿಂಗಳಿಗೊಮ್ಮೆ ಕೊಡಲ್ಪಡುವದು.

ಪ್ರತಿ ತಿಂಗಳಿಗೆ ರೂ. 1ರ ಪ್ರಕಾರ 45 ತಿಂಗಳುಗಳವರೆಗೆ ವಸೂಲು ಕೊಡುವ ಸಂಚಯದ ಠೇವಣಾತಿಗಳಿಗೆ 45 ತಿಂಗಳ ಅಂತ್ಯದಲ್ಲಿ ಪ್ರತಿ ತಿಂಗಳಲ್ಲಿ ವಸೂಲು ಕೊಟ್ಟ ರೂ. 1ಕ್ಕೆ ರೂ. 50/ರಂತೆ ವಾಪಸು ಕೊಡಲ್ಪಡುವದು.

ಚಾಲ್ತಿ ಠೇವಣಾತಿಗಳು ಸಂಘದ ಪರವಾಗಿ ಏನೂ ಖರ್ಚು ಇಲ್ಲದೆ ಪಡಕೊಳ್ಳಲ್ಪಡುವವು. ಪ್ರತಿ ತಿಂಗಳ 4ನೇ ತಾರೀಕಿನಿಂದ ಆಖೈರು ತಾರೀಕುವರೆಗೆ ಯಾವಾಗಾದರೊಂದು ದಿನ ಇರುವ ಅತಿ ಕಡಿಮೆ ಠೇವಣಾತಿ ಮೊಬಲಗಿನ ಮೇಲೆ ಸಾಲಿಯಾನ್ ಶೇಕಡಾ 3½ ದರದಲ್ಲಿ ಬಡ್ಡಿ ಕೊಡಲ್ಪಡುವದು.

ಯೋಗ್ಯ ಜವಾಬ್ದಾರಿಯ ಮತ್ತು ಆಧಿನ ಮೇಲೆ ಸಾಲಗಳು ಕೊಡಲ್ಪಡುತ್ತವೆ.

ಪಾಲುದಾರಿಕರಿಗೆ 31—3—19ನೆ ವರ್ಷಕ್ಕೆ ಶೇಕಡಾ 8% ದರದ ಬಡ್ಡಿ ಕೊಡಲಾಗಿಯದೆ.

ಸಂಘಕ್ಕೆ ಕೊಡಲ್ಪಡುವ ಹಣಗಳನ್ನು ಸಂಘದ ಲೆಖ್ಖಕ್ಕೆ ಮಂಗಳೂರಲ್ಲಿ ಮದ್ರಾಸು ಬೇಂಕಿನಲ್ಲಿ ಮತ್ತು ಕೆನರಾ ಬ್ಯಾಂಕಿನಲ್ಲಿ ವಸೂಲು ಕೊಡಬಹುದು.

Naimpalli Ananda Rao,
Secretary.

BANK OF MADRAS.

ಮದ್ರಾಸ್ ಬ್ಯಾಂಕ್.

ಹೆಡ್ ಆಫೀಸು: ಮದ್ರಾಸ್.

ಮೂಲಧನ	ರೂ. 75,00,000.
ಕ್ಷೇಮನಿಧಿ	45,00,000.

ಸೇವಿಂಗ್ಸ್ ಬ್ಯಾಂಕ್.

— ವರ್ಷಕ್ಕೆ ಸೇಕಡಾ 4ರ ಬಡ್ಡಿ —

ಇದರಲ್ಲಿ ಠೇವಣಾತಿಗಳು ಕೆಳಗಿನ ಶರ್ತಗಳಲ್ಲಿ ಪಡೆಯಲಾದಾವು.

ಒಂದು ವರುಷದ ಅವಧಿಯಲ್ಲಿ ಒಟ್ಟು ರೂ. 5,000ಕ್ಕೆ ಮಿಗದ ಮೊಬಲಗನ್ನು ಠೇವಣಾತಿಯಾಗಿಡಬಹುದು.

ಹೀಗೆ ಠೇವಣಾತಿ ಇಟ್ಟ ಪ್ರತಿ ಹತ್ತು ರೂಪಾಯಿಗಳಿಗೆ ಸೇಕಡಾ 4ರಂತೆ ರೂ. 10,000ಕ್ಕೆ ಮೀರದ ಮೊಬಲಗಿನ ವರೇಗೆ ಬಡ್ಡಿ ಎಣಿಸಲಾಗುವುದು.

ನಿಬಂಧನೆಗಳ ಪ್ರತಿಗಳನ್ನು ಬರೆದು ಬ್ಯಾಂಕಿನಿಂದ ಪಡೆಯಬಹುದು.

ಸಿ. ಎಲ್. ಗೊಡ್ವಿನ್,
ಏಜಂಟ್, ಮದ್ರಾಸ್ ಬ್ಯಾಂಕ್, ಮಂಗಳೂರು.

ಭೃಂಗರಾಜ ತೈಲ.

ಇದನ್ನು ತಲೆಗೆ ಹಚ್ಚಿದರೆ ಎಲ್ಲಾ ತರದ ರೋಗಗಳು ಗುಣವಾಗುತ್ತವೆ. ನರೆತ ಕೂದಲು ಕಪ್ಪಾಗುತ್ತದೆ. ಕೇಶಗಳು ವೃದ್ಧಿಹೊಂದುತ್ತವೆ. ಕಂಠದ ಮೇಲೆ ಎಲ್ಲಾ ಇಂದ್ರಿಯಗಳಿಗೆ ಬಲಕೊಡುತ್ತದೆ. ಚಿತ್ತನಾಶ ಮಾಡುತ್ತದೆ. ನಾಲ್ಕು ಔನ್ಸಿನ ಸೀಸೆ ಒಂದರ ಕ್ರಯ ರೂ. 0—12—0.

ತ್ರಿಫಾಲಾದಿ ತೈಲ—ವಾತ, ಪಿತ್ತ, ಶ್ಲೇಷ್ಮ ಇವುಗಳಿಂದ ಉಂಟಾದ ರೋಗಗಳೆಲ್ಲಾ ಇದನ್ನು ತಲೆಗೆ ಹಚ್ಚಿಕೊಂಡರೆ ಪರಿಹಾರವಾಗುತ್ತದೆ. ಎಲ್ಲಾ ಇಂದ್ರಿಯಗಳಿಗೆ ಬಲಕೊಡುತ್ತದೆ. ನಾಲ್ಕು ಔನ್ಸಿನ ಸೀಸೆ ಒಂದರ ಕ್ರಯ ರೂ. 1.

ಜ್ವರಾಂತಕ ಮಾತ್ರೆ—ಈ ಮಾತ್ರೆಯನ್ನು ಉಪಯೋಗಿಸಿದರೆ ಎಲ್ಲಾ ಜ್ವರಗಳ ಪರಿಹಾರವಾಗುತ್ತದೆ. ಉಪಯೋಗಿಸುವ ಕ್ರಮ, ಮತ್ತು ಗುಣ ತರಿಸಿಕೊಂಡಲ್ಲಿ ಪ್ರಮಾಣಕ ತಿಳಿಸುತ್ತದೆ. 25 ಮಾತ್ರೆಗಳುಳ್ಳ ಸೀಸೆ ಒಂದರ ರೂ. 1.

ಪಂಚಸಾರ ಲೇಹ—ಅಜೀರ್ಣ, ಪಿತ್ತ, ವಾತ, ಶ್ಲೇಷ್ಮ ಇವುಗಳಿಂದ ಉಂಟಾದ ರೋಗಗಳೆಲ್ಲಾ ಇದರಿಂದ ಪರಿಹಾರವಾಗುತ್ತದೆ. ಮತ್ತು ಇಂದ್ರಿಯವನ್ನು ಬಲಪಡಿಸಿ ಅನೇಕ ತರದ ಇಂದ್ರಿಯ ದೋಷಗಳನ್ನು ಗುಣಪಡಿಸುತ್ತದೆ. ಒಂದು ಸೇರಿಗೆ ರೂ. 1—4—0.

ಮೇಲೆ ಬರೆದ ಔಷಧಿಗಳು ಸರ್ವ ವೈದ್ಯರಿಗೂ ಶಿರೋಮಣಿಯಾದ ಶ್ರೀ ಆಯುರ್ಮತಾವಲಂಬಿಗಳಾದ ಶ್ರೀ ಪೂರ್ವಕಾಲದ ಋಷಿ ಪ್ರಣೀತ ವೈದ್ಯಗ್ರಂಥ ಆಧಾರದಿಂದ ಆರಿಸಿ, ಪೂರ್ವರ ಅನುಭವಗಳಿಂದ ನಮ್ಮಿಂದ ತಯಾರಿಸಲ್ಪಟ್ಟಿರುತ್ತವೆ. ಅಪ್ರಚಲಿತ ನಮಗೆ ಎಷ್ಟು ಸ್ವಲ್ಪವಾಗಿ ತೋರುತ್ತದೋ ಅಷ್ಟೇ ಭರವಸೆಯಿಂದ ಈ ಔಷಧಿಗಳು ರೋಗಪರಿಹಾರಕವಾಗಿರುತ್ತವೆ.

ಸೂಚನೆ—ಅಪೇಕ್ಷಿಸುವವರು ಕಬಲಿಗಿಗೆ ಬರೆದು ಮುಕ್ತಗೊಳ್ಳುವುದು. ಉಚಿತವಾಗಿ ಕಳುಹಿಸಲಾದೀತು.

ಆಯುರ್ವೇದಿಕ್ ಮತ್ತು ಹೋಮಿಯೋಪತಿಕ್
ವಿಳಾಸ:—

ಧರ್ಮ ವೈದ್ಯಶಾಲಾ,
ಧರ್ಮಸ್ಥಳ ದಕ್ಷಿಣ ಕನ್ನಡ.

ಸ್ವೋಧಕ ಗ್ರಂಥಮಾಲೆ.

ಗ್ರಂಥಕರ್ತ ಅನುಮತಿಯಿಂದ ಆರಂಭ. } ಸ್ವೋಧಕ ಗ್ರಂಥಮಾಲೆ. (ತ್ರೈಮಾಸಿಕ ಪುಸ್ತಕ). } ವಾರ್ಷಿಕ ಚಂದಾ ಅಂಚೆ ಸಹಿತ ರೂ. 1 ಮಾತ್ರ.

ಪ್ರತಿ ಮೂರು ತಿಂಗಳಿಗೊಮ್ಮೆ ಕನ್ನಡ ಕಥಾ, ಕಾದಂಬರಿ, ನಾಟಕ, ಕಾವ್ಯ, ಪ್ರಬಂಧವೇ ಮೊದಲಾದ ಗ್ರಂಥಗಳಲ್ಲಿ ಅನುಭವಿಗಳಿಂದ ಪೂರ್ಣ ಪುಸ್ತಕವೂ; ಉಲ್ಲೇಖನ, ವಿನೋದ, ಸ್ವಾರಸ್ಯ ವಾರ್ತೆ, ವಿಮರ್ಶೆ ಮತ್ತು ಸ್ವೀಕಾರ ಇತ್ಯಾದಿ ಲೇಖನವೂ ಪ್ರಕಟವಾಗುವವು. ಸಮಸ್ತ ಕನ್ನಡಿಗರೂ ಸಂಗ್ರಹಿಸಿಕೊಳ್ಳಲು ತಕ್ಕದಾಗಿರಬೇಕೆಂದು ಚಂದಾ ಅಂಚೆವೆಚ್ಚದೊಡನೆ ಒಂದೇ ರೂಪಾಯಿ ಇಟ್ಟಿರುತ್ತೇವೆ. [illegible] ಚಂದಾದಾರರಾಗಿ ಸೇರುವುದರ ಮೂಲಕ ಭಾಷಾ ಪ್ರೇಮಿಗಳಾದ ಕನ್ನಡಿಗರೆಲ್ಲರೂ ಪ್ರೋತ್ಸಾಹಿಸಬೇಕಾಗಿ ಸಂಪ್ರಾರ್ಥನೆ.

ವಿಳಾಸ:— ವಿ. ರಂಗಪ್ಪಯ್ಯ, ಸಂಪಾದಕ ಮತ್ತು ಪ್ರಕಾಶಕ,
"ಸದ್ಬೋಧಕ ಗ್ರಂಥಮಾಲೆ" ಕಾರ್ಯಾಲಯ,
ಸುರತಕಲ್, (ದಕ್ಷಿಣ ಕನ್ನಡ).

ಅಥವಾ— S. R. Hebbar & Bros.,
General Merchants, SURATKAL, S. K.

ರಾಜ ವೈದ್ಯರ,

ಮದನಮಂಜರಿ ಮಾತ್ರೆ

ಗಳನ್ನು ಸೇವಿಸುವದರಿಂದ ದೇಹಶಕ್ತಿಯನ್ನು ಕೊಡುವದು. ಹಸ್ತಪ್ರಯೋಗಗಳಿಂದ ಹೋಗಲಾಡಿಸಿಕೊಂಡ ಶಕ್ತಿಯನ್ನು ಪುನಃ ಕೊಟ್ಟು ಪ್ರಿಯಸಮರ್ಥರನ್ನಾಗಿ ಮಾಡುವದು. ಈ ಮಾತ್ರೆಗಳಿಗೆ ಬಂಗಾರದ ಭಸ್ಮಗಳು ಎಷ್ಟು ಮಾತ್ರವೂ ಸಮಾನವಾಗಲಾರದು.

ಕ್ರಿಯಡಬ್ಬಿ 1ಕ್ಕೆ ರೂ. 1—0—0.
ವಿಳಾಸ:

ಮದನಮಂಜರ ಫಾರ್ಮಸಿ,
27. ಜೈನ ಬಜಾರು ರೋಡ್ ಮದ್ರಾಸು.

ವಿಲ್ಲಿಯಮ್ಸ್ ಡೆಂಟೋನ್.

ಅನುಭವಸಿದ್ಧ ಅದ್ವಿತೀಯ ಔಷಧ.

ಅನೇಕ ಉತ್ತಮವಾದ ವನಸ್ಪತಿ ಔಷಧಗಳಿಂದ ತಯಾರಿಸಿದ "ವಿಲ್ಲಿಯಮ್ಸ್ ಡೆಂಟೋನ್" ಎಂಬ ದಂತ ಪುಡಿಯನ್ನು ಸಾವಿರಾರು ಜನರು ಉಪಯೋಗಿಸಿ ಸುಖಹೊಂದಿ ತಮ್ಮ ಹಲ್ಲುಗಳನ್ನು ವೃದ್ಧಾಪ್ಯಕಾಲದ ವರೆಗೆ ಭದ್ರವಾಗಿ ಉಳಿಸಿ ಸಂತೋಷದಿಂದ ಜೀವಿಸುತ್ತಾರೆ.

ಇದನ್ನು ಅನುದಿನ ಪ್ರಾತಃಕಾಲ ಹಲ್ಲುಗಳಿಗೆ ತಿಕ್ಕಿ ಬಾಯಿ ತೊಳೆಯುವದರಿಂದ ಹಲ್ಲುಗಳು ಮುತ್ತಿನಂತೆ ಥಳಥಳಿಸಿ ಬಾಯಿಯ ದುರ್ವಾಸನೆ ಹೋಗಲಾಡಿಸುವದಲ್ಲದೆ, ನಾಲಿಗೆ ಸ್ವಚ್ಛವಾಗುವದೂ, ವಸಡಿನಿಂದ ಕೀವು ಮತ್ತು ರಕ್ತ ಸುರಿಯುವದೂ, ಹಲ್ಲಿನ ಬುಡದಲ್ಲಿ ಸುಣ್ಣ ಕಟ್ಟುವದೂ, ವಸಡು ಬೀಗಿಕೊಂಡು ಆಹಾರ ತಿನ್ನುವರೆ ಆತಂಕವಾಗಿ ಉಪದ್ರವಾಗುವದೂ, ಬೇಗನೆ ಗುಣವಾಗುತ್ತವೆ. ಅಲುಗಾಡುವ ಹಲ್ಲುಗಳು ಬಲವಾಗಿ ಆಹಾರವನ್ನು ಜಗಿದು ತಿನ್ನುವರೆ ಅನುಕೂಲವಾಗಿ ಹೆಚ್ಚು ಕಾಲ ಬದುಕಲು ಅವಕಾಶ ಉಂಟಾಗುತ್ತದೆ.

ಸುಭಪತಿ ವಸ್ತು
ಗುಣ ವಿಶೇಷ! ಕ್ರಯ ಕಮ್ಮಿ! ಹುಡಿ ಹೆಚ್ಚು!!!
ಕ್ರ. ಅಣೆ 5 ಮತ್ತು ಅಣೆ 9.

ಪರವೂರುಗಳಲ್ಲಿ ಏಜಂಟರಾಗಬೇಕೆನ್ನುವವರು ಕೆಳಗಿನ ವಿಳಾಸಕ್ಕೆ ಬರೆಯುವದು.

ಸೋಲ್ ಏಜಂಟ್:— ಎಸ್. ಸೋಜ ಮತ್ತು ಕಂಪೆನಿ,
ಹಂಪನಕಟ್ಟೆ, ಮಂಗಳೂರು.

ಇನ್‌ಫ್ಲ್ಯುಯೇನ್ಜಾ ಜ್ವರಕ್ಕೆ

ಎಮ್ಕೊ.

ಖಾತ್ರಿ ಚಿಕಿತ್ಸೆ!

ಇನ್‌ಫ್ಲ್ಯುಯೆನ್ಜಾ, ನಿಮೋನಿಯಾ, ಮಲೇರಿಯಾ, ಸಾಧಾರಣ ಜ್ವರ, ಚಳಿಚ್ಚು ಚಳಿಚ್ಚು ಬರುವ ಜ್ವರ, ವಿಷಮ ಜ್ವರ, ಕೆಮ್ಮು, ಶೀತ, ಮೊದಲಾದ ಬಾಧ್ಯಗಳಿಗೆ ಖಾತ್ರಿ ಚಿಕಿತ್ಸೆಗಳ ಆವಶ್ಯಕತೆಯು ದಿನೇದಿನೇ ಹೆಚ್ಚಾಗುತ್ತಿರುವ ಕಾರಣ ನಾವು ಈ "ಎಮ್ಕೊ" ಎಂಬ ಅನುಭವಸಿದ್ಧವಾದ ಖಾತ್ರಿ ಔಷಧಿಯನ್ನು ಈಗಷ್ಟೇ ಪ್ರಚಾರಕ್ಕೆ ತಂದಿರುತ್ತೇವೆ. ಮೇಲಿನ ಬಾಧ್ಯಗಳಿಗೆ ಇದು ಖಾತ್ರಿ ಚಿಕಿತ್ಸೆ ಎಂಬದಕ್ಕೆ ಕಳೆದ ಕೆಲವು ವರ್ಷಗಳಿಂದ ನಾವು ಇದನ್ನು ಕೊಟ್ಟು ಗುಣಪಡಿಸಿದ ನೂರಾರು ರೋಗಿಗಳೇ ಸಾಕ್ಷಿ.

ಎಮ್ಕೊ. ಇದು ಎಲ್ಲಾ ರೋಗಾಣುಗಳನ್ನು ಕೊಂದು ಅದರ ವಿಷವನ್ನು ನಾಶಪಡಿಸಿ, ಇನ್‌ಫ್ಲ್ಯುಯೇನ್ಜಾ, ನಿಮೋನಿಯಾ ಮತ್ತು ಅದರಂತಿನ ಇತರ ಸೋಂಕು ರೋಗಗಳು ಹಬ್ಬದಂತೆ ತಡೆಕಟ್ಟಿ ಅದು ಉಲ್ಬಣವಾಗದಂತೆ ಮಾಡುತ್ತದೆ.

ಎಮ್ಕೊ. ಇದು ಇನ್‌ಫ್ಲ್ಯುಯೇನ್ಜಾ ಮೊದಲಾದ ಎಲ್ಲಾ ತರದ ಜ್ವರಗಳನ್ನು ತಪ್ಪದೆ ಗುಣಮಾಡುತ್ತದೆ.

ಎಮ್ಕೊ. ಇದನ್ನು ಹಾನಿಕರವಲ್ಲದ ಔಷಧಿಗಳ ಕೂಟದಿಂದ ಅತಿ ಜಾಗರೂಕತೆಯಿಂದ ತಯಾರಿಸಿರುತ್ತದಾದಕಾರಣ ಜ್ವರ ಇರುವ ಕಾಲದಲ್ಲಿಯೂ ಜ್ವರ ಇಲ್ಲದ ಕಾಲದಲ್ಲಿಯೂ ಏನೂ ಭಯವಿಲ್ಲದೆ ಎಲ್ಲಾ ವಿಧದ ಜ್ವರಗಳಿಗೆ ಇದನು ಕೊಡಬಹುದು. ಹೆಂಗಸರೂ, ಮಕ್ಕಳೂ ಭಯಭೀತಿ ಇಲ್ಲದೆ ಸೇವಿಸಬಹುದು.

ಎಮ್ಕೊ. ಇದಲ್ಲದೆ ಇದು ಕಾಲರಾ ರೋಗಿಗಳನ್ನೂ ಗುಣಪಡಿಸಿರುತ್ತದೆ.

ಕ್ರಯ ಸೀಸೆ 1ಕೆ ರೂ. ೦—೧೨—೦ ಮಾತ್ರ. ಎ. ಪಿ. ಬೇರೆ.

ಪ್ರಮುಖ್ಯ ಏಜಂಟರು:— ದಿ ಇಕ್ಲಿಪ್ಸ್ ಏಜನ್ಸಿ,
ಬಲ್ಮಠ ರಸ್ತೆ, ಮಂಗಳೂರು.

Lose not Hope! Waste not time!!

ಶ್ರೀ ಭವಾನಿಶಂಕರ ಆಯುರ್ವೇದಿಕ್ ಡಿಸ್ಪೆನ್ಸರಿ,

ಬ್ರಹ್ಮಾವರ ದ. ಕನ್ನಡಾ.

ನಮ್ಮ ಡಿಸ್ಪೆನ್ಸರಿಯಲ್ಲಿ ಎಲ್ಲಾ ರೋಗಗಳಿಗೆ ಬೇಕಾಗುವ ಸಿದ್ಧೌಷಧಗಳು ಚೆನ್ನಾಗಿ ಪ್ರಯೋಗಗಳು ಸಿಕ್ಕುತ್ತವೆ. ತರಿಸಿ, ಸ್ನೇಹಿತರಲ್ಲಿ ಪ್ರಚಾರಗೊಳಿಸಿರಿ.

1. ಶತಮೂಲಿಕಾ—ಇದು ನೂರಾರು ಬಗೆಯ ವನೌಷಧಗಳ ಸತ್ವ. ಇದು ನಿರ್ಬಲರನ್ನು ಸಜೀವ ಮಾಡುತ್ತದೆ. 24 ಭಿನ್ನ ಬುಟ್ಟಿಗೆ ರೂ. 3—0—0.

2. ಗರ್ಭಪುಷ್ಟಿಕರಣ—ಇದು ಗರ್ಭಿಣಿಸ್ತ್ರೀಯರ ಸುಖ ಪ್ರಸೂತಾಮೃತ. ಬಾಟ್ಲಿ 1ಕ್ಕೆ ರೂ. 2—0—0.

3. ಸ್ಥಿರಜೀವನಾಮೃತ—ಸರ್ವರೋಗ ನಿವಾರಿಸಿ ಶತವರುಷ ಆಯುಸ್ಸ ಕೊಡುತ್ತದೆ. ಸೇರು 1ಕ್ಕೆ ರೂ. 5—0—0.

ಇದಲ್ಲದೆ ನಮ್ಮಲ್ಲಿ ಸರ್ವರೋಗಕ್ಕೆ ಬೇಕಾಗುವ ಔಷಧಗಳ ಸ್ಟೋಕು ಯಾವಾಗಲೂ ಇರುತ್ತದೆ. ನಮ್ಮ ಕೆಟಲಾಗನ್ನು ಈಗಲೇ ತರಿಸಿರಿ.

M. V. Shanker,
Ugrankar,
Manager.

ಇಂಡಿಯನ್ ಮೋಟರ್ ಸರ್ವಿಸ್.

(ಎ. ಸಿ. ಅಂದ್ರಾದೆ, ಪ್ರೊಪ್ರೈಟರ್.) ಇವರ ಮೋಟರ್ ಬಸ್ಸುಗಳು ಮಂಗಳೂರಿನಿಂದ ಉಪ್ಪಿನಂಗಡಿ ಪುತ್ತೂರಿಗೂ ವ ಅಲ್ಲಿಂದ ವಾಪಸು ಮಂಗಳೂರಿಗೂ ಸಹ ಜುಲಾಯಿ ತಾ. 12ರಿಂದ ಚಲಾವಣೆ ಆಗುವವು.

ಬೇರೆ ಯಾವ ಮಾಹಿತಿ ಬೇಕಾಗಿದ್ದರೆ ನಮ್ಮ ಹಂಪನಕಟ್ಟೆ ಆಫೀಸಿನಲ್ಲಿ ವ ಇತರ ಆಫೀಸುಗಳಲ್ಲಿ ವಿಚಾರಿಸಿದಲ್ಲಿ ತಿಳಿಯಬರುವುದು.

ಹಂಪನಕಟ್ಟೆ, ಮಂಗಳೂರು, ಮಾಧವ ಬಿಲ್ಡಿಂಗ್ಸ್ ಸಮೀಪ, } ಎ. ಸಿ. ಅಂದ್ರಾದೆ
ಪ್ರೊಪ್ರೈಟರ್.

Waaning Tilly

ಜೆನ್ಯುಯಿನ್ ಹಾರ್ಲೆಮ್ ಆಯಿಲ್

(HAARLEM OIL).

ತ್ವರ್ಯದಲ್ಲಿ ನಿಮ್ಮ ಆರ್ಡರುಗಳನ್ನು ಕಳುಹಿಸಿಕೊಳ್ಳಿರಿ.

ಹಾರ್ಲೆಮ್ ಆಯಿಲ್ ಎಂದೆನಿಸಿಕೊಳ್ಳುವ ಈ ಔಷಧವು ನರಸಂಸಾರವನ್ನು ಕಾಡುತ್ತಿರುವ ಎಲ್ಲಾ ಸಾಮಾನ್ಯ ಕಾಯಿಲೆ ಕಸಾರಿಕೆಗಳಿಗೆ ಕೈಕಂಡ ಔಷಧವಾಗಿದೆ. ಇದನ್ನು ಯೂರೋಪ ಅಮೇರಿಕ ಖಂಡಗಳಲ್ಲಿ 300 ವರುಷಗಳಿಂದ ಉಪಯೋಗಿಸುತ್ತಿರುವರು. ಇದರ ಅತಿಶಯ ಸಾಫಲ್ಯವನ್ನು ಕಂಡು ಮಹಾನುಭಾವರು ಇದಕ್ಕೆ "ದೇವಾನುಮೋದಿತ ಔಷಧ" (Medicamentum Gracia Probatum) ಎಂತಲೂ ನಾಮಕರಣ ಮಾಡಿದ್ದಾರೆ. ಮೂತ್ರಗುಡ್ಡು (Kidney,) ಮೂತ್ರಕೋಶ, ಅನ್ನಕೋಶ, ಕಲಿಜೆ (ಯಕೃತ್ತು) ಮೊದಲಾದ ಇಂದ್ರಿಯಗಳಲ್ಲಿಯೂ ನರನಾಡಿಗಳಲ್ಲಿಯೂ ಇರುವ ರೋಗಗಳಿಗೆ ಇದರ ಸಮಾನೌಷಧ ಇನ್ನೊಂದಿಲ್ಲ. ಅಶ್ಮರೀಕಲ್ಲನ್ನಾದರೂ ನೀರು ಮಾಡಿ ಮೂತ್ರಕೋಶದಿಂದ ಹೊರಕ್ಕೆ ಅಟ್ಟಿಬಿಡುವದು. ನೇವಸ, ಕೆಮ್ಮು, ಅಗ್ನಿಮಾಂದ್ಯ, ಹೊಟ್ಟೆನೋವು, ಹೊಟ್ಟೆಯೊಳಗಿನ ಕ್ರಿಮಿಬಾಧೆ, ತಲೆನೋವು, ಕಿವಿನೋವು, ಕಣ್ಣುನೋವು, ನಾನಾ ವಿಧದ ಚರ್ಮರೋಗವ್ರಣಾದಿಗಳು, ಸೂತಕದ ಅಕ್ರಮಗಳು ಈ ಮದ್ದಿನಿಂದ ಬೇಗನೆ ಉಪಶಮನವಾಗುವವು. ಸಾಫಲ್ಯವು ಆಯಾ ದೇಹಪ್ರಕೃತಿಗನುಸಾರವಾಗಿದೆ. ಮೂರೇ ದಿನದ ಚಿಕಿತ್ಸನೆಯಿಂದ ಇನ್‌ಫ್ಲುಯೆಂಜಾ ಮೊದಲಾದ ಎಂಥಾ ಕಠಿಣ ಜ್ವರವಾದರೂ ಮಣಿಯುವದು.

ಚಿಕಿತ್ಸಾ ಕ್ರಮ.

ವ್ಯಾಧಿಯ ಸ್ವಭಾವದ ಮೇಲೆ ಸರ್ತಿಗೆ ೧೫—೩೦ ತೊಟ್ಟು ಔಷಧವನ್ನು ಹಾಲಿನಲ್ಲಿ, ಜೇನುತುಪ್ಪದಲ್ಲಿ, ದ್ರಾಕ್ಷಾರಸದಲ್ಲಿ ಅಥವಾ ಹುಳಿಯು ರುಚಿಯಿಲ್ಲದ ಯಾವದಾದರೊಂದು ಪದಾರ್ಥದಲ್ಲಿ ಬೆರಸಿ ಸೇವಿಸಬಹುದು. ಮಕ್ಕಳಿಗೆ ಅವರವರ ಪ್ರಾಯದಷ್ಟೆ ತೊಟ್ಟು ಔಷಧ ಸಾಕು, ಅಂದರೆ ೬ ವರ್ಷದ ಮಗುವಿಗೆ ೬ ತೊಟ್ಟು, ೧೦ ವರ್ಷದ ಮಗುವಿಗೆ ೧೦ ತೊಟ್ಟು. ಊಟಕ್ಕೆ ಮೊದಲು ಅಥವಾ ಊಟವಾದ ಮೇಲೆ ದಿನಕ್ಕೆ ಎರಡು ಸಾರಿ ಸೇವಿಸಿದರೆ ಸಾಕು. ಒಂದೊಂದು ಸೀಸೆಯ ಜತೆಯಲ್ಲಿ ಇಂಗ್ಲಿಷ ಭಾಷೆಯಲ್ಲಿ ಮುದ್ರಿಸಿದ ದೊಡ್ಡ ಪತ್ರವಿದೆ. ಆಯಾ ರೋಗಕ್ಕೆ ತಕ್ಕ ಚಿಕಿತ್ಸಾಕ್ರಮವು ಅದರಲ್ಲಿ ವಿವರವಾಗಿ ಹೇಳಿಯದೆ. ಮದ್ದಿನ ಸೀಸೆಯನ್ನು ಬಿಗಿಯಾಗಿ ಮುಚ್ಚಿಟ್ಟರೆ ಎಷ್ಟು ವರ್ಷಕ್ಕೂ ಕೆಡುವದಿಲ್ಲ. ಕ್ರಯ ಸೀಸೆ 1ಕ್ಕೆ ಆಣೆ 8 ವಿ. ಪಿ. ಬೇರೆ.

ಸಿಫಾರಸು ಪತ್ರ

ಕೆಲವು ವರ್ಷಗಳ ಹಿಂದೆ ಮಂಗಳೂರಲ್ಲಿದ್ದ ಜರ್ಮನ್ ಮಿಶ್ಯನರಿ ಲೇಡಿ ಮಿಸೆಸ್ ಹೆರ್ಮನ್ ಬ್ರೀಕ್ಲೆಯವರು ಇದೇ ಕಳೆದ ಮಾರ್ಚಿ ತಾ. 10ರಲ್ಲು ಸ್ಟುಟ್‌ಗಾರ್ಟ್ ಪಟ್ಟಣದಿಂದ ವಾನಿಂಗ್‌ಟಿಲ್ಲಿ ಕಂಪೆನಿಯವರಿಗೆ ಈ ರೀತಿ ಬರೆದಿರುತ್ತಾರೆ:—ದಯಮಾಡಿ ನಿಮ್ಮ ಕಂಪೆನಿಯ 25 ಶೀಸೆ ಜೆನ್ಯುಯಿನ್ ಹಾರ್ಲೆಮ್ ಆಯಿಲ್ ಕಳುಹಿಸಿ ಕೊಡಿರಿ. ಇದು ಉತ್ಕೃಷ್ಟವಾದ ಪಾತ್ರ ಔಷಧಿ ಎಂಬುದು ನನ್ನ ಅನುಭವ ಸಿದ್ಧಾಂತ. ನಾನು 1910ನೇ ಇಸವಿಯಲ್ಲಿ ಮಂಗಳೂರಿಗೆ ಹೋಗುವಾಗ ನಿಮ್ಮ ಹಾರ್ಲೆಮ್ ಆಯಿಲಿನ 12 ಶೀಸೆಗಳನ್ನು ಕೊಂಡು ಹೋಗಿದ್ದೆನು. ಇದು ದೇಶೀಯರೊಳಗೆ ಪ್ರಯೋಗಿಸಿದ್ದಲ್ಲಿ ಅತಿ ಸಾಫಲ್ಯವಾಗಿ ಪರಿಣಮಿಸಿತು. ದೇಶೀಯರೊಳಗೆ ಪ್ರಬಲಿಸುವ ಜ್ವರಕ್ಕೆ ಇದು ಅತಿ ಗುಣಕಾರಿಯಾಗಿದೆ ನಂತರ ಕೆಲವು ಕುಟುಂಬಗಳು ಇದನ್ನು ಕುಟುಂಬ ಸಂರಕ್ಷಣೀಯಾಗಿ ಮನೆಮನೆಯಲ್ಲಿ ಇಟ್ಟುಕೊಳ್ಳಲು ತೊಡಗಿದರು. ತನ್ಮಧ್ಯೆ ಯುದ್ಧ ತೊಡಗಿದ್ದರಿಂದ ಹಿಂದೂಸ್ಥಾನದಲ್ಲಿ ಇದರ ವ್ಯಾಪಾರವು ಹ್ಯಾಗಿದೆಂತ ನನಗೆ ಗೊತ್ತಿಲ್ಲ.

ವಿಳಾಸ:— ಹಿಂದೂಸ್ಥಾನದ ಸೋಲ್ ಏಜಂಟರು— ದಿ. ಎಕ್ಲಿಪ್ಸ್ ಏಜನ್ಸಿ, ಬಲ್ಮಠ ರಸ್ತೆ, ಮಂಗಳೂರು.

☞ ವಿಶೇಷ ಸೂಚನೆ:—ವಾನಿಂಗ್‌ಟಿಲ್ಲಿ ಹಾರ್ಲೆಮ್ ಆಯಿಲಿನ ಸೀಸೆಗಳ ಮೇಲೆ Waaning-Tilly Bros ಎಂಬ ದಸ್ಕತು ಇರುವ ಪತ್ರವು ಸುತ್ತಿದೆ. ಅದೇ ನಿಜವಾದ ಹಾರ್ಲೆಮ್ ಆಯಿಲ್ ಎಂತ ತಿಳಿಯತಕ್ಕದ್ದು. ☜

ಆಯುರ್ವೇದ ಶಾಸ್ತ್ರಾನುಸಾರ

ಡಾಕ್ಟರ್ ಎಚ್. ಲಕ್ಷ್ಮೀನಾರ್ಣಪ್ಪಾ ಮತ್ತು ಸನ್ಸ್

ಇವರಿಂದ ತಯಾರಿಸಲ್ಪಟ್ಟ ಸಿದ್ಧೌಷಧಗಳು.

1. ಶತಮೂಲಿಕೆಯ ಸತ್ವವು. ಈ ಮಹೌಷಧಿಯ ಸೇವನೆಯಿಂದ ಕ್ಷಯ, ಅಸ್ಥಿಜ್ವರ, ನಿಂತು ನಿಂತು ಬರುವ ಜ್ವರ, ಬಹುಕಾಲದ ಕಫ, ರಕ್ತವಾಂತಿಯಾಗುವಿಕೆ, ಹೃದಯದ ದುರ್ಬಲತೆ ವಿಸ್ತಾರ (ಕಾಳಜಿ), ಮೂತ್ರಕೋಶದ ವ್ಯಾಧಿಗಳು ವ ಎಲ್ಲ ತರದ ದುರ್ಬಲತೆಯು ನಾಶಹೊಂದಿ, ಶರೀರಕ್ಕೆ ಆರೋಗ್ಯವನ್ನುಂಟುಮಾಡುವದು. ಇನ್‌ಫ್ಲುಯೆಂಜಾ ಜ್ವರಕ್ಕೂ, ಅಶಕ್ತ ಜನರಿಗೂ, ಬತ್ತಿಬರುವ ಸಣ್ಣ ಹುಡುಗರಿಗೂ, ಪ್ರಸೂತರಾದ ಹೆಂಗಸರಿಗೂ, ಶಕ್ತಿ ಪುಷ್ಟಿಯನ್ನೀಡುವ ದಿವ್ಯ ಔಷಧಿಯು ಇಂಗ್ಲಿಷ ಯಾ ಬೇರೆ ಔಷಧದಿಂದ ಗುಣಹೊಂದದ ಅಸಂಖ್ಯ ರೋಗಿಗಳು ಈ ಜೀವನಾಮೃತದ ಸೇವನೆಯಿಂದ ಪೂರ್ಣ ಗುಣಹೊಂದಿ ಸಾವಿನಿಂದ ತಮ್ಮ ಜೀವರಕ್ಷಣೆ ಮಾಡಿಕೊಂಡಿರುವರು. ೧೬ ಔನ್ಸಿನ ಬಾಟ್ಲಿ ೧ಕ್ಕೆ ರೂ. ೨—೧೨—೦ ಟಿ. ಖ. ವಗೈರೆ ಬೇರೆ.

2. ವಿಜಯಸಂಜೀವಿನಿ ತೈಲ. ಕಾಲತಪ್ಪಿ ಬಹಿಷ್ಠೆಯಾಗುವುದು, ಬಹಿಷ್ಠೆಯ ಕಾಲ ನೋವು, ಸಂದುಗಳಲ್ಲಿ ಬೇನೆ, ಉದರಶೂಲೆ, ಗರ್ಭಸ್ರಾವ ಮತ್ತು ಇದಕ್ಕೆ ಸಮ್ಮಂಧ ವ್ಯಾಧಿಗಳಿಗೆ ದಿವ್ಯ ಔಷಧ. ಸ್ತ್ರೀಯರ ರೋಗಗಳಿಗೆ ಇದು ಮುಖ್ಯ ಔಷಧವಾಗಿರುವುದಲ್ಲದೆ, ಸ್ವಾಭಾವಿಕವಾಗಿ ಕಾಲಕಾಲಕ್ಕೆ ಉಂಟಾಗುವ ಹೊಟ್ಟೆನೋವಿಗೆ ಅನುಭವಸಿದ್ಧವಾದ ಔಷಧ. ಕ್ರಯ ಸೀಸೆ ೧ಕ್ಕೆ ರೂ. ೩.

3. ಕೋಲೇರಾ ಗುಳಿಗೆಗಳು. ಇವನ್ನು ವಾಂತಿಭೇದಿಯ ಯಾವ ಸ್ಥಿತಿಯಲ್ಲೂ ಕೊಡಬಹುದು, ಸಕಲ ಗೃಹಗಳಲ್ಲಿಯೂ ಇದನ್ನು ಸಂಗ್ರಹಿಸಿ ಇಡತಕ್ಕದಾಗಿದೆ. ನಾಲ್ಕು ಮಾತ್ರೆಗಳೊಳಗೆ ಗುಣ ಖಂಡಿತ. ಅಜೀರ್ಣದ ರೋಗಕ್ಕೂ ಅತಿಸಾರಕ್ಕೂ ಉತ್ತಮ. ೪೮ ಗುಳಿಗೆಗಳ ಬಾಟ್ಲಿಗೆ ಕ್ರಯ ರೂ. ೧—೦—೦.

4. ವಾತಾಂತಕ. ದೀರ್ಘ ಕಾಲದ ಮತ್ತು ಯಾವ ತರದ ವಾತ, ಪಕ್ಷವಾತ ಮುಂತಾದ ಭೀಕರ ರೋಗಗಳ ಮೇಲೆ ರಾಮಬಾಣ. ಒಂದು ಸಲ ಉಪಯೋಗಿಸುವುದರಲ್ಲಿ ಇದರ ಶ್ರೇಷ್ಠತೆಯು ತಾನಾಗಿಯೇ ಕಂಡುಬರುವುದು. ಕ್ರಯ ಬಾಟ್ಲಿ ೧ಕ್ಕೆ ರೂ. ೧-೮-೦.

ಈ ಔಷಧಿಗಳ ದಿವ್ಯ ಗುಣಗಳ ಬಗ್ಗೆ ಪ್ರಸಿದ್ಧ ವೈದ್ಯರಿಂದಲೂ, ಜಮೀನದಾರರಿಂದಲೂ, ದೊಡ್ಡ ದೊಡ್ಡ ಸಂಸ್ಥೆಗಳಿಂದಲೂ, ಸುವರ್ಣ ಪದಕಗಳೂ, ಸರ್ಟಿಫಿಕೇಟುಗಳೂ ಸಿಕ್ಕಿರುತ್ತವೆ. ಪತ್ರವ್ಯವಹಾರವು ಇಂಗ್ಲಿಷದಲ್ಲಿರಬೇಕು. ಆರ್ಡರ ಕಳುಹಿಸುವಾಗ ಈ ಪತ್ರದ ಉಲ್ಲೇಖ ಮಾಡಿರಿ. ವಿಳಾಸ:—

ಡಾಕ್ಟರ್ ಎಚ್. ಲಕ್ಷ್ಮೀನಾರ್ಣಪ್ಪಾ ಮತ್ತು ಸನ್ಸ್, ಕೋರನೂರ, (ಮಲಬಾರ).

The Indian Tooth ... Specific.

...

STANY BROTHERS, MANGALORE.

ಸೋಗಸಾದ ...

I ಕ್ಲಾಸ್	...	10—0
II ಕ್ಲಾಸ್	...	8—0
III ಕ್ಲಾಸ್	...	6—0

STANY BROTHERS, MANGALORE.

ಅಮೃತಕಲ್ಪ ವೈದ್ಯಶಾಲಾ, ಕಾಸರಗೋಡು.

ಆಯುರ್ವೇದ ವಿಧಿ ಪ್ರಕಾರ ತಯಾರಿಸಲ್ಪಟ್ಟ ಕಷಾಯ, ಚೂರ್ಣ, ಅವಲೇಹ, ... ಘೃತ, ತೈಲ, ಆಸವ ಅರಿಷ್ಟ, ದ್ರಾವಕ ಮೊದಲಾದವುಗಳು, ... ಚಿಕಿತ್ಸೆಗಳ ಎಲ್ಲಾ ಔಷಧಗಳೂ ... ಸಿದ್ಧೌಷಧಗಳೂ ... ಎಲ್ಲಾ ಸಮಯದಲ್ಲಿಯೂ ... ಔಷಧಗಳ ... ಬರುವುದು.

ವೈದ್ಯಶಾಲೆಯ ... ದಾಮೋದರ ನಂಬೀಶನರು ... ಎಲ್ಲಾ ... ವೈದ್ಯಶಾಲೆ ... ಮಂಗಳೂರು ... ಎಲ್ಲಾ ಔಷಧಗಳು ... ವಿ. ಪಿ. ಮೂಲಕ ಕಳುಹಿಸಲಾಗುವದು.

೧. ಅಮೃತಾರಿಷ್ಟ—... ಎಲ್ಲಾ ತರದ ವಿಷಮ ಜ್ವರ (ಇನ್‌ಫ್ಲುಯೆಂಜಾ) ... ಸಿದ್ಧೌಷಧ. ೧೨ ಔನ್ಸಿನ ಬಾಟ್ಲಿ ೧ಕ್ಕೆ ರೂ. ೧-೦-೦.

೨. ವೀರ್ಯಪ್ರಸಾದ ವಟಿ—... ದಿಂದ ... ಪುರುಷರಿಗೆ ... ೩೦ ಮಾತ್ರೆ ... ರೂ. ೧.

೩. ನವನೀತಮಧುಸ್ನುಹಿ—... (ವಿಧಿ ಸಹಿತ) ... ರೋಗಿಯ ... ಗಳ ... ರೂ. ೩.

೪. ವಿಷೂಚಿಕಾ ಸಂಹಾರ—ಎಂಬ ... ಭೇದಿ ... ಈ ಮಾತ್ರೆಯು ... ೩೦ ಮಾತ್ರೆಗಳು ... ರೂ. ೧-೦-೦.

೫. ನಯನದ್ಯುತಿ—... ಎಲ್ಲಾ ತರದ ... ಪಡಿಸುವ ... ರೂ. ೧-೦-೦.

೬. ರಸಾಯನಾಮೃತ—... ಮಾಂದ್ಯ, ... ಮುಂತಾದ ... ಎಲ್ಲಾ ತರದ ... ಗಳಿಗೆ ರೂ. ೧-೦-೦.

ವೈದ್ಯ ವಿ. ಕೆ. ದಾಮೋದರ ನಂಬೀಶನ್, ಅಮೃತಕಲ್ಪ ವೈದ್ಯಶಾಲಾ, ಕಾಸರಗೋಡು, ದ. ಕನ್ನಡ.

ಕೋವಿಲನ್ ಚರಿತ್ರೆ.

ಹೊಸ ನಾಟಕ! ಹೊಸ ನಾಟಕ! ಈ ಗ್ರಂಥವು ಅಪೂರ್ವವಾದ ಹೊಸ ಹೊಸ ವರ್ಣನೆಗಳಿಂದ ಕೂಡಿದೆ ... ಕ್ರಯ ಪ್ರತಿ 1ಕ್ಕೆ ಆಣೆ (...)0.

ವಿಳಾಸ:— D. Srinivasan Pothi, Photographer, Archæological Office, TRIVANDRUM.

ಅಥವಾ

ಶಾರದಾ ಭಾವನ ... ಮಂಗಳೂರು ... ಇವರಲ್ಲಿಯೂ ದೊರಕುವುದು.

Printed & Published by V. S. Kamath at the Mangalore Trading Association's Sharada Press, Mangalore.

Registered No. M. 86.

ಸ್ವದೇಶಾಭಿಮಾನಿ

ಪ್ರತಿ ಶುಕ್ರವಾರವೂ ಪ್ರಕಟಿಸಲ್ಪಡುವುದು.

ರಕ್ತೈರ್ಮಹಾರ್ಹೈಸ್ತುತುಷುರ್ನ ದೇವಾ । ನ ಭೇಜಿರೇ ಭೀಮವಿಷೇಣ ಭೀತಿಮ್ ॥
ಸುಧಾಂ ವಿನಾ ನ ಪ್ರಯಯುರ್ವಿರಾಮಂ । ನ ನಿಶ್ಚಿತಾರ್ಥಾದ್ವಿರಮಂತಿ ಧೀರಾಃ ॥ ೧ ॥

ಬೋರೆಯುಲನುಪಮರತ್ನಗಳು ಸಾ- । ಗರವ ಮಥಿಸಲು ಸುರರಿಗದರಿಂ । ಹರುಷವಾಯಿತೆ! ಮತ್ತೆ ವಿಷವ ಸುಡುತ ಬರುತಿರುವ ॥
ಗರಲಕವರಂಜಿದರೆ! ಸುಧೆಯನು- । ಮರೆತು ಕ್ಷುದ್ರದ್ರವ್ಯ ತೆರದಿ ಕುಳಿತರೆ! । ತೆರಳಬಲ್ಲರೆ! ತೊರೆದು ಧೀರರು ನಿಶ್ಚಿತಾರ್ಥವನು ॥ ೧ ॥

ಪುಸ್ತಕ ೧೪. ಮಂಗಳೂರು, ತಾರೀಖು ೧೨ನೇ ಸಪ್ಟಂಬರ ಶುಕ್ರವಾರ ೧೯೧೩. ಸಂಚಿಕೆ ೩೭.

'ನೈಟ್ರೇಟ್ ಒಫ್ ಸೋಡಾ'

ಹೊಗೆಸೊಪ್ಪು, ಕಬ್ಬು, ತೆಂಗು, ಅಡಕೆ, ಮಾವು, ವೀಳ್ಯದೆಲೆ, ಬತ್ತ, ತರಕಾರಿ ಮೊದಲಾದ ಪೈರುಗಳಿಗೆ ಮತ್ತು ಹೂತೋಟಗಳಿಗೆ ಬಹಳ ಉಪಯುಕ್ತವಾದ ಗೊಬ್ಬರ.

ಈ ಗೊಬ್ಬರವು ಒಂದು ಬಗೆಯ ರಾಸಾಯನಿಕ ಉಪ್ಪು, ಹಲವು ಪ್ರಾಂತ್ಯಗಳಲ್ಲಿ ಇದರ ಉಪಯೋಗದಿಂದ ಹುಲುಸಾದ ಬೆಳೆಯನ್ನು ಪಡೆದಿರುತ್ತಾರೆ.

ಬೆಳೆಗಳಿಗೆ ಅಗತ್ಯವಿರುವ ನೈಟ್ರೋಜನ್ ಅಥವಾ ಸಾರಜನಕವು 15—16% ಅಂದರೆ ಎಣ್ಣೆ ಹಿಂಡಿ ಗೊಬ್ಬರದಲ್ಲಿರುವುದಕ್ಕಿಂತ ಎರಡು ಮೂರು ಪಾಲಷ್ಟು ಜಾಸ್ತಿ ಬೆರತಿರುವದು, ಎಕ್ರೆಗೆ 100—200 ರಾತ್ತಲ ಸಾಕಾಗುವದು.

ಪರಸ್ಪರ ಸಹಾಯಕ ಸಂಘಗಳಿಗೆ ಇದನ್ನು ಹಳಿಯವರಿಗೆ ಒದಗಿಸಿ ಕೊಡುವುದಕ್ಕೆ ಅನುಕೂಲವಾಗುವ ಹಾಗೆ ಏರ್ಪಾಡುಗಳನ್ನು ಮಾಡ ಬಹುದು.

"ಕೃಷಿ ಸುಧಾರಣೆ" ಎಂಬ ಸಚಿತ್ರ ಪುಸ್ತಕವನ್ನು ಕನ್ನಡ ಭಾಷೆಯಲ್ಲಿ ನಮ್ಮಿಂದ ಧರ್ಮಾರ್ಥವಾಗಿ ಪಡೆಯಬಹುದು.

ದಿ ಚಿಲಿಯನ್ ನೈಟ್ರೇಟ್ ಕಮಿಟಿ,
1 ರೋಯಲ್ ಎಕ್ಸ್‌ಚೇಂಜ್ ಪ್ಲೇಸ್, ಕಲ್ಕತ್ತಾ.

The Director, Chilean Nitrate Committee,
(INDIAN DELEGATION),
1, *Royal Exchange Place*, CALCUTTA.

ದೇನೆಯುಂಟಾದಾಗ ಚೇತನವು ಕಡಿಮೆಯಾಗುವುದೆಂಬುದು ಸಕಲರಿಗೂ ತಿಳಿದಿರುವ ವಿಷಯ. ಯೋಚಿಸಿ ನೋಡಿದರೆ ಬಹು ವೇಗದಿಂದ ಶಕ್ತಿಯನ್ನು ಕುಂದಿಸಿ ಬಿಡುವ ತ್ರಾಣವು ಬೇನೆಗಲ್ಲದೆ ಮತ್ತೊಂದಕ್ಕಿರದು. ಅಂಥಾ ಬೇನೆಯನ್ನು ನಿವಾರಣೆ ಮಾಡುವುದಕ್ಕೆ ತಕ್ಕ ಔಷಧವು

ಅಮೃತಾಂಜನ

ಹೊರತು ಮತ್ತೊಂದಿಲ್ಲವೆಂಬುದು ಖಾತ್ರಿ.

ಇದನ್ನು ಉಪಯೋಗಿಸುವುದರಿಂದ ಬೇನೆಯು ಒಂದೇ ಕಡೆಯಲ್ಲಿ ನಿಲ್ಲದು. ಇದು ಯಾವ ತರದ ಶಿತಕವಲ್ಲದರೂ ನೋವನ್ನಾದರೂ ಗುಣಪಡಿಸುವುದು. ಬೇನೆಯನ್ನು ಉಪಶಮನ ಮಾಡುವ ವಿಶೇಷವಾದ ಲಕ್ಷಣಗಳಿಂದ ಕೂಡಿ, ತರ ತರದ ನೋವನ್ನು ಗುಣಪಡಿಸಿ ನಿವಾರಣೆ ಮಾಡುವ ದಿವ್ಯ ಔಷಧ. ಕ್ರಯ ಡಬ್ಬಿ 1ರ 10 ಆಣೆ. ಡಜನ್ 1ಕ್ಕೆ ರೂ. 5—12—0

ಗಜಕರ್ಣದ ಮುಲಾಮು:—ಮೂರು ಸರ್ತಿ ಹಾಗಿಸುವುದರೊಳಗೆ ಗಜಕರ್ಣವು ಖಂಡಿತವಾಗಿ ನಾಶವಾಗುವುದು. ಕ್ರಯ ಡಬ್ಬಿ ಒಂದರ ರೂ. 0—6—0.

ದಂತಮಂಜನ:—ಈ ಉತ್ತಮವಾದ ದಂತಮಂಜನವನ್ನು ಉಪಯೋಗಿಸುವುದರಿಂದ ಹಲ್ಲುಗಳು ಶುದ್ಧ ವಾಗುತ್ತವೆ. ರಕ್ತ ಬರುವುದು ನಿಲ್ಲುತ್ತದೆ. ಹಲ್ಲುಗಳು ಗಟ್ಟಿಯಾಗುತ್ತವೆ. ಇದು ಸುವಾಸನೆಯಿಂದ ಕೂಡಿ ಉತ್ತಮವಾಗಿರುತ್ತದೆ. ಡಬ್ಬಿ ೧ರ ಆಣೆ 2.

ಅಮೃತಾಂಜನ ಡಿಪೊ,

6, 7 ತಂಬುಚೆಟ್ಟಿ ಸ್ಟ್ರೀಟ್, ಜೋರ್ಜ್ ಟೌನ್, ಮದ್ರಾಸು.
109 ಫ್ರೇಯರ್ ರೋಡ್, ಮುಂಬಯಿ.

ಮಂಗಳೂರಲ್ಲಿ—ಊಲನ್ ಮಾರ್ಟ್, ಹಂಪನಕಟ್ಟೆ, ಇವರಲ್ಲಿಯೂ ದೊರಕುವುದು.

ಪ್ರತಿಯೊಬ್ಬ ಕುಟುಂಬಿಕನೂ ಹತ್ತಿರವೇ ಇಟ್ಟುಕೊಳ್ಳತಕ್ಕಾದ

ಸರಸ್ವತಿ ವಿಲಾಸದವರ ಸುದರ್ಶನ ತೈಲ.

ಮುಖ್ಯವಾಗಿ ಕಣ್ಣು ಕುರು, ಕರ್ಣಶೂಲೆ, ಅಸಾಧ್ಯವಾದ ಕುರು, ಪೈಲು ಯಾನೆ ಬಾವು, ಕಠಿಣವಾದ ಗಜಕರ್ಣ, ತುರಿಕಜ್ಜಿ, ಮುಂತಾದ್ದನ್ನು ನಿಸ್ಸಂದೇಹವಾಗಿ ನಿರ್ಮೂಲ ಮಾಡುವ ದಿವ್ಯೌಷಧ.—ಅನುಪಾನ ಪಟ್ಟಿ ಸಮೇತ ಬಾಟ್ಲಿ 1ರ ಕ್ರಯ 0—4—0. ವಿ. ಪಿ. ಬೇರೆ.

ಸರಸ್ವತಿ ವಿಲಾಸದವರ ರಿಂಗ್ವರ್ಮ ಮುಲಾಂ.

ಗಜಕರ್ಣ—ಸೊಂಟಕಜ್ಜಿ, ಕೂದಲು ನಾಶಮಾಡುವ ಹುಳುಗಳ ಮೇಲೆ ರಾಮಬಾಣ ಬಾಟ್ಲಿ 1ರ ಕ್ರಯ 0—5—0. ವಿ. ಪಿ ಬೇರೆ.

ನಮ್ಮ ವಿಳಾಸ:—

ಯಮ್. ಸುಬ್ರಾಯಗಿರಿಭಟ್ಟ ಎಂಡ್ ಸನ್ಸ್,
ಸರಸ್ವತಿ ವಿಲಾಸ ರಥಬೀದಿ, ಮಂಗಳೂರು.

ವಾತಕಷಾಯ

U. B. DUTT & Co. CALICUT.

ಮಳೆಯಾಳ ದೇಶವು ಔಷಧಗಳಿಗೆ ಕೀರ್ತಿಹೊಂದಿದ ಪ್ರದೇಶವು. ಅಲ್ಲಿನ ಕಾಡುಗಳಲ್ಲಿ ಆ ಪ್ರಯಾಸದಿಂದ ದೊರೆತ್ತವೇ ಸಂಸ್ಕೃತ ನಾರುಬೇರುಗಳಿಂದಲಾದ ಅನೇಕ ಉತ್ಕೃಷ್ಟ ಔಷಧಗಳನ್ನು ಸಿದ್ಧಪಡಿಸಿ, ಅನೇಕ ಕಾಲದಿಂದ ಉಪಯೋಗಿಸುತ್ತಿದ್ದೇವೆ. ಇದಕ್ಕೆ ಪ್ರತಿಫಲವಾಗಿ, ಅನೇಕಾನೇಕರು ಆರೋಗ್ಯವನ್ನು ಹೊಂದಿರುವುದಲ್ಲದೆ, ನಮಗೆ ಪ್ರಶಂಸಾಪತ್ರ "ಅರ್ಥ"ಗಳು ಬರುತ್ತಲಿವೆ. ಈ ಭಾಗದಲ್ಲಿ, ಗುಣಹೊಂದಿದವರಿಂದ ನಮಗೆ ಬಂದಿರುವ ಕಾಗದಗಳೂ, ಯೋಗ್ಯತಾಪತ್ರಗಳೂ ಹೇರಳವಾಗಿವೆ.

ಬ್ರಿಟನ್—ಕಲ್ಲಿದ್ದಲು ಮಜೂರರು ತಮ್ಮ ಕೂಲಿಯ ದರಗಳನ್ನು ಹೆಚ್ಚಿಸಬೇಕೆಂದು ಯತ್ನಿಸಿ, ಪುನಃ ಮುಷ್ಕರ ಹಿಡಿಯುವ ಯೋಚನೆ ಮಾಡುತಲಿದ್ದಾರೆ. ಇದಲ್ಲದೆ, ಪೋಲೆಂಡಕ್ಕೆ ಬ್ರಿಟಿಷರು ಯುದ್ಧದಲ್ಲಿ ಸಹಾಯ ಮಾಡದ ಹಾಗೆ ನೋಡಿಕೊಳ್ಳಬೇಕೆಂದು 'ಕೌನ್ಸಿಲ್ ಒಫ್ ಎಕ್ಶನ್' ಎಂಬ ಕಮಿಟಿಯನ್ನು ಏರ್ಪಡಿಸಿದ್ದಾರೆ.

ಅಮೇರಿಕ—ಇಲ್ಲಿ ೧೯೧೪ನೆ ಇಸವಿಯಲ್ಲಿ ಬರೆ ೬,೦೦೦ ಕೋಟ್ಯಾಧೀಶರು ಇದ್ದರು. ಈಗ ಈ ಸಂಖ್ಯೆಯು ೨೦,೦೦೦ಕ್ಕೆ ಏರಿದೆ. ಕೇವಲ ಯುದ್ಧದಿಂದಲೇ ಈ ರೀತಿಯ ದ್ರವ್ಯಸಂಚಯವು ಇಲ್ಲಿ ಆಯಿತಂತೆ

ಕೆನಡಾ—ಈ ದೇಶದಲ್ಲಿ ೨ ಲಕ್ಷ ಪೌಂಡು ಖರ್ಚುಮಾಡಿ ಹುಲ್ಲಿನಿಂದ ಕಾಗದ ಮಾಡುವ ಒಂದು ಕಾರ್ಖಾನೆಯನ್ನು ಇಡಲು ಯತ್ನಿಸಿದ್ದಾರೆ ಇದು ಈ ದೇಶದಲ್ಲಿ ಎರಡನೆ ಕಾರ್ಖಾನೆಯಂತೆ

ಒಳದೇಶ ವರ್ತಮಾನ.

ಓಲ್ ಇಂಡಿಯಾ ಖಿಲಾಫತ್ ಕೊನ್ಫರೆನ್ಸ್—೫ನೇ ತಾರೀಕಿಗೆ ಇದರ ಒಂದು ಅಧಿವೇಶನವು ಕಲ್ಕತ್ತೆಯಲ್ಲಿ ಜರಗಿತು ಇದರಲ್ಲಿ ಖಿಲಾಫತ, ಪಂಜಾಬದ ಅನ್ಯಾಯಗಳು, ಅಸಹಕಾರಿತೆಯ ಆಚರಣೆ ಈ ವಿಷಯದಲ್ಲಿ ಭಾಷಣಗಳು ನಡೆದು ಅಸಹಕಾರಿತೆಯನ್ನು ಧರ್ಮರಕ್ಷಣೆಯ ಸಂಬಂಧ ಆಚರಿಸಬೇಕೆಂದೂ, ಸೆಂಟ್ರಲ್ ಖಿಲಾಫತ್ ಕಮಿಟಿಯವರು ಹಿಜರೆತ್ ಏರ್ಪಾಡನ್ನು ಪ್ರೋತ್ಸಾಹಿಸಿ ಅದಕ್ಕೆ ಪುಷ್ಟಿಕೊಡಬೇಕೆಂದೂ, ಮುಹಾಜಿರೀನರಿಗೆ ತಕ್ಕ ರೀತಿಯಲ್ಲಿ ಸಹಾಯಮಾಡಬೇಕೆಂದೂ ಠರಾವು ಮಾಡಿದ್ದಲ್ಲದೆ ಹಿಂದೀ ಮುಸಲ್ಮಾನ ಸೈನಿಕರನ್ನು ಮುಸಲ್ಮಾನ ರಾಜ್ಯಗಳ ಮೇಲೆ ಯುದ್ಧಕ್ಕೆ ಕೊಂಡುಹೋಗುವಂಥದ್ದು ಸರಕಾರದ ಅನುಚಿತ ಕೆಲಸವೆಂದೂ ಠರಾವು ಮಾಡಿದರು. ಖಿಲಾಫತ ಚಳವಳದ ಬಗ್ಗೆ ೩೦ ಲಕ್ಷ ರೂಪಾಯಿ ಜಮಾಯಿಸಬೇಕೆಂದೂ, ನಿಮ್ಮದಿ ಭಂಗವಾಗದ ರೀತಿಯಲ್ಲಿ ಅಸಹಕಾರಿತೆಯನ್ನು ಆಚರಿಸುವುದಕ್ಕೆ ಬೇಕಾದ ಸ್ವಯಂ ಸೇವಕರನ್ನು ನಿಷ್ಕರ್ಷೆಗೊಳಿಸಬೇಕೆಂದೂ ನಿರ್ಣಯಿಸಿದರು ಸಿಂಧ ಮತ್ತು [illegible] ಪ್ರಾಂತದಲ್ಲಿ ಖಿಲಾಫತದ ಪ್ರಶ್ನೆಯನ್ನು ಆಡಗಿಸಲಿಕ್ಕೆ ಸರಕಾರದವರು ಮಾಡಿದ ಪ್ರಯತ್ನಗಳನ್ನು ಆಕ್ಷೇಪಿಸಿ ಠರಾವಾಯಿತು.

ಓಲ್ ಇಂಡಿಯಾ ಹೋಮ್‌ರೂಲ್ ಲೀಗ್—ಇದರ ಒಂದು ಅಧಿವೇಶನವು ೫ನೆ ತಾರೀಕಿನ ಬಳಿಕ ಅದಕ್ಕೆ ಅಧ್ಯಕ್ಷರಾದ ಮಹಾತ್ಮ ಗಾಂಧಿಯವರ ಸೂಚನೆ ಮೇರೆಗೆ ಈ ಕೂಟದ ಹೆಸರನ್ನು 'ಸ್ವರಾಜ್ಯ ಸಭೆ' ಎಂದು ಬದಲಾಯಿಸಿದರು. ಸ್ವರಾಜ್ಯವನ್ನು ಪಡೆಯುವುದಕ್ಕೆ ಜನರ [illegible] ಎಚ್ಚರಿಸಿ [illegible] ಈ ಸಭೆಯ ಧ್ಯೇಯವಾಗಬೇಕೆಂದು ನಿರ್ಣಯವಾಯಿತು

[illegible] ಎಣ್ಣೆ ಕಂಪೆನಿಗಳ ಮಜೂರರು—ಬರ್ಮಾ ಆಯಿಲ್ ಕಂಪೆನಿ, ಏಸ್ಯಾಟಿಕ್ ಪೆಟ್ರೋಲಿಯಮ್ ಕಂಪೆನಿ, ಸ್ಟೇಂಡರ್ಡ್ ಆಯಿಲ್ ಕಂಪೆನಿ ಇವುಗಳು ತಮ್ಮ ಆಫೀಸುಗಳನ್ನು ಮುಚ್ಚಿ ಮಜೂರರನ್ನು ಹೊರಗೆ ಹಾಕಿ, ಸರಕಾರದವರು [illegible] ತಿಳುವಳಿಕೆ [illegible] ಧಿಕ್ಕರಿಸಿದ್ದರಿಂದ ಆದ ಅನ್ಯಾಯವನ್ನು [illegible] ಮಜೂರರ

[illegible] ಇಂಥ ಸಂಕಟಗಳಲ್ಲಿ ಬಂಡವಾಳಗಾರರ [illegible] ಸರಕಾರ ನಂತರ ತಮಗೆ ಬೇಕಿಸುವುದು ಸರಿಯಲ್ಲವೆಂದು ಸರಕಾರದವರ ಆವಾಹನೆಗೆ ಬರಬೇಕಾಗಿ ಠರಾವು ಮಾಡಿದರು.

ಮುಹಾಜರೀನರು—ಅಫಘಾನಿಸ್ಥಾನಕ್ಕೆ ತಂಡ ತಂಡವಾಗಿ ಹೋದವರ ಪೈಕಿ ಹಲವರು ಅಲ್ಲಿಯ ಕಷ್ಟಗಳನ್ನು ತಾಳಲಾರದೆ ಪಶ್ಚಾತ್ತಾಪದಿಂದ ಪುನಃ ತಮ್ಮ ಊರುಗಳಿಗೆ ಬಂದು ಸೇರಿದರೆಂದೂ ಅವರು ಮಾರಲು ಮಾಡಿದ ಆಸ್ತಿಪಾಸ್ತಿಗಳನ್ನು ಅವರಿಗೆ ಹಿಂದಕ್ಕೆ ಸಿಗುವಂತೆ ನಮ್ಮ ಸರಕಾರದವರು ಸಹಾಯ ಮಾಡುತ್ತಲಿದ್ದಾರೆಂದೂ ತಿಳಿಯುತ್ತೇವೆ. ಕೆಲವರ "ಕೈಯಲ್ಲಿದ್ದ ಕಾಸು ಹೋಯಿತು, ಮೈಯಲಿದ್ದ ಮಾಂಸವೂ ಹೋಯಿತು" ಇನ್ನು ಪುನಃ ಊರು ಸೇರುವುದು ಹೇಗೆ ಎಂದು ಯೋಚಿಸುತಲಿದ್ದಾರಂತೆ. ಅಮೀರರು ತಮ್ಮ ಸ್ವಂತ ಅಧಿಕಾರವು ಅಫಘಾನಿಸ್ಥಾನದಲ್ಲಿ ನೆಲೆಗೊಳ್ಳದೆ ಇರುವುದರಿಂದಲೂ ಬ್ರಿಟಿಷರೊಡನೆ ಒಪ್ಪಂದ ಶರ್ತಗಳಿಗೆ ಬೇಗನೆ ಸಹಿಕೊಡಲಿಕ್ಕೆ ಇರುವುದರಿಂದಲೂ ಈ ಮುಹಾಜರೀನರಿಗೆ ಅಫಘಾನಿಸ್ಥಾನದಲ್ಲಿ ಕೇಳುವವರಿಲ್ಲದೆ ದೀನಾವಸ್ಥೆ ಬಂದಿದೆಯೆಂದು ವರ್ತಮಾನಗಳು ಇವೆ

ಪ್ರಿನ್ಸ್ ಒಫ್‌ವೇಲ್ಸ್ ಸ್ವಾಗತದ ಫಂಡು—ಮದ್ರಾಸಿನ ಈ ಫಂಡಿನಲ್ಲಿ ಇದೇ ೭ನೆ ತಾರೀಕು ವರೆಗೆ ರೂ ೩೩೦೯೦–೬–೦ ಜಮೆ ಆಯಿತಂತೆ

ಲೇಬರ್ ಎನ್‌ಕ್ವಾಯರೀ ಬೋರ್ಡು—ಮದ್ರಾಸು ಇಲಾಖೆಯಲ್ಲಿ ಮಜೂರರ ಸ್ಥಿತಿಗತಿಗಳನ್ನು ಪರ್ಯಾಲೋಚಿಸಿ ಸುಧಾರಣೆಗಳನ್ನು ಸೂಚಿಸುವುದಕ್ಕೆ ಸರಕಾರದವರು ಒಬ್ಬ ಲೇಬರ್ ಕಮಿಶನರನ್ನು ನೇಮಿಸಿದ್ದಲ್ಲದೆ ಹೈಕೋರ್ಟು ಜಡ್ಜ್ ನ್ಯಾಯಮೂರ್ತಿ ಕೆ ಮಾರಿ ಸ್ವಾಮಿ ಶಾಸ್ತ್ರಿಗಳವರು ಅಧ್ಯಕ್ಷರಾಗಿರುವ ಒಂದು ಕಮಿಟಿಯನ್ನು ನೇಮಿಸಿದ್ದರು ಇವರು ಈ ಮೊದಲು ರೌಲೆಟ ಕಮಿಟಿಯ ಮೆಂಬರರಾಗಿದ್ದು ರೌಲೆಟು ಕಾನೂನು ಜಾರಿಗೆ ಬರಲಿಕ್ಕೆ ಕಾರಣಭೂತರು. ಇವರು ಈ ಮಜೂರರ ಕಡೆಗೂ ನಿರ್ದಯರಾಗಿ ನಿರ್ಬಂಧದ ಕಾಯಿದೆಗಳು ಉಂಟಾಗಲಿಕ್ಕೆ ಆಸ್ಪದ ಮಾಡೀರು ಎಂದು ಸರ್ವ ಮಜೂರರ ಸೆಂಟ್ರಲ್ ಬೋರ್ಡಿನವರು ಆಕ್ಷೇಪಿಸಿದ್ದರಿಂದ ಸರಕಾರದವರು ನಿರಾಶರಾಗಿ ಈ ವಿಚಾರದ ಕಮಿಟಿಯನ್ನೇ ರದ್ದು ಪಡಿಸಿದರು

ದಕ್ಷಿಣ ಕನ್ನಡ

ಬಾತಮಿದಾರರಿಗೆ ಸೂಚನೆ—ಬಾತಮಿಗಳನ್ನು ಕಳುಹಿಸುವವರು ಕಾಗದದ ಒಂದೇ ಮೈಯಲ್ಲಿ ಸ್ಪಷ್ಟಾಕ್ಷರದಿಂದ ಬರೆದು ಪ್ರತಿ ಬುಧವಾರದೊಳಗಾಗಿ ನಮಗೆ ತಲ್ಪುವಂತೆ ಕಳುಹಿಸತಕ್ಕದ್ದು ಸ್ಥಳದ ಅಭಾವದಿಂದ ಉದ್ದವಾದ ಲೇಖನಗಳನ್ನು ಪ್ರಕಟಿಸಲು ಅನಾನುಕೂಲವಾಗುವುದರಿಂದ ಬಾತಮಿಗಳನ್ನು ಸಂಕ್ಷೇಪವಾಗಿ ಬರೆಯತಕ್ಕದ್ದೆಂಬ ಸಂಗತಿಯನ್ನು ಲಕ್ಷ್ಯಕ್ಕೆ ತೆಗೆದುಕೊಳ್ಳಬೇಕಾಗಿದೆ

ಪುತ್ತೂರು.—ಕೊಡಿಂಬಳ ಗ್ರಾಮದಲ್ಲಿ ವಾಸವಾಗಿರುವ ಬಂಟರ ಜಾತಿ ಪುಜಾರಿ ತಿಮ್ಮಯ್ಯ ನ್ಯಾಕರೆಂಬವರು ಸದರಿ ಗ್ರಾಮದ ಕೋಳಿವೇಗಿ ಕೃಷ್ಣ ತಿಮ್ಮಯ ಚೌಟರನ್ನು ಒಗಸ್ಟ ತಾ ೩೦ನೆ ಹಗಲು ಕೋವಿಯಿಂದ ಗುಂಡುಹೊಡೆದರಂತೆ ಜಖಂ ಆದವರನ್ನು ಉಪ್ಪಿನಂಗಡಿ ಆಸ್ಪತ್ರೆಗೆ ಚಿಕಿತ್ಸೆ ಬಗ್ಗೆ ತಂದರು ಸದರಿಯವರು ತಾ ೧೭ರಲ್ಲಿ ಮೃತರಾದರು ಶವವನ್ನು ಇಲ್ಲಿಯ ಆಸ್ಪತ್ರೆಗೆ ತಂದಿತ್ತು ಆರೋಪಿಯು ಬಿಟ್ಟು ಪೋಲೀಸ ತನಿಖೆಯು ನಡಿಯುತ್ತದೆ ಸರಾರಿ ಆದವನು ಇಲ್ಲಿಗೆ ಬಂದ ಮೋಟರ ಮೇಲೆ ಮಂಗಳೂರಿಗೆ ಹೋಗುವರೆ ಪ್ರಯತ್ನಿಸುವಾಗ ಇಲ್ಲಿಯ ಸ್ಟೇಶನ್ ಕನಿಷ್ಠ ಬಲ ನಂಬ್ರ ೪೪ಗನೇ ಚಂದಯ್ಯ ಶೆಟ್ಟರು ಈತನನ್ನು ಅನುಮಾನದ ಮೇಲೆ ಹಿಡಿದು ಕೈದುಮಾಡಿ ಇಲ್ಲಿಯ ರಿಮಾಂಡಿನಲ್ಲಿಟ್ಟಿರುವರು

ಕೆದಂಬಾಡಿ ಗ್ರಾಮದಲ್ಲಿ ಆಶ್ಚರ್ಯಕರವಾದ ಕೊಲೆ ಅಮ್ಮಕ್ಕ ನ್ಯಾಕರೆಂಬವರ ಶವವೊಂದು ಹಗ್ಗ ಹಾಕಿ ಮನೆಯಲ್ಲಿ ಸಿಕ್ಕಿದ್ದು ಇವರ ಹೆಂಡತಿ ಕಾವೇರಮ್ಮ ಮತ್ತು ಹೆಂಡತಿಯ ಅಕ್ಕ ಕಲ್ಯಾಣಮ್ಮ ಇವರ ಶವಗಳು ಮನೆ ಒಳಗೆ ಇದ್ದು ಬೀಗ ಹಾಕಿದ್ದದ್ದು ಕೊಲೆಗಳ ಒಗಸ್ಟ ತಾ ೩೦ರಲ್ಲಿ ನಡೆದವಂತ ತಿಳಿಯುತ್ತದೆ. ಪೋಲೀಸ್ ತನಿಖೆ ನಡಿಯುತ್ತದೆ ಕೊಲೆಗಳು ಯಾರಿಂದ ಮಾಡಲ್ಪಟ್ಟದವೆಂಬುದು ಗೊತ್ತಿಲ್ಲ

ಕಾಪು—೧ ಸ್ವದೇಶಾಭಿಮಾನಿಯ ಕಳೆದ ಸಂಚಿಕೆಯ ಕಾಪು ಪತ್ರವ್ಯವಹಾರವನ್ನು ವಾಚಕರು ಓದುವಾಗ (೧) ಕುಂಬಾರರನ್ನು (೨) ನಡೆದೀತೇ ಎಂಬದರ ಬದಲಿಗೆ (೧) ಮೆಂಬರರನ್ನು (೨) ನಡೆಯದೇ ಎಂತ ತಿದ್ದಿ ಓದ ಬೇಕಾಗಿಕೊಂಡಿರುತ್ತೇನೆ ಇವೆರಡು ಅಚ್ಚು ತಪ್ಪಾಗಿರುತ್ತದೆ

೨ ತಾರೀಕು 2೯ನೇ ಮಂಗಳವಾರ ಮ| ರಾ| ಭಟ ಕೇಶವ ಭಟ್ಟರವರ ಸಮಕ್ಷಮ ಶಾಲಾ ಮಕ್ಕಳಿಗೆಲ್ಲಾ ತಿಂಡಿಯನ್ನು ಹಂಚುವುದಾಗಿ ಉಪಾಧ್ಯಾಯರು ನಿಶ್ಚೈಸಿರುತ್ತಾರಾಗಿ ಕೇಳುತ್ತೇನೆ

೩ ಶಾಲಾ ಕಂಪೌಂಡಿನೊಳಗೆ ಬೋರ್ಡಿನವರಿಂದ ಕಟ್ಟಿಸಲ್ಪಡುವ ಬಾವಿಯ ಕೆಲಸವು ಮುಗಿಯುತ್ತಾ ಬಂತು ಕಂಪೌಂಡಿನ ಸುತ್ತಲೂ ಕಲ್ಲಿನ ಮಣ್ಣಿನ ಪಾಗಾರವನ್ನು ಮಾಡಿಸಿದ್ದಾದರೆ ಎಷ್ಟೋ ಉಪಕಾರ

ಮಜೂರರ ವಿಚಾರ.

ಬ್ರಿಟನ್ನಿನಲಿಯಾಗಲಿ ಪಾಶ್ಚಿಮಾತ್ಯ ಪ್ರಪಂಚದ ಸುಧಾರಣೆಗೆ ಬಂದ ಇತರ ರಾಷ್ಟ್ರಗಳಲ್ಲಾಗಲಿ ಮಜೂರ ಜನರು ಒಂದಾಗಿ ತಮ್ಮ ಜೀವನೋಪಾಯಕ್ಕೆ ಸಾಕಷ್ಟು ಮಜೂರಿಯನ್ನು ಪಡೆಯಲು ಯತ್ನಿಸುವುದಲ್ಲದೆ ಅಗತ್ಯ ಬಿದ್ದಾಗ ಬಂಡವಾಳಗಾರರ ದ್ರವ್ಯಸೆಳೆಯುವ ದುರಾಗ್ರಹವನ್ನು ತಗ್ಗಿಸಲು ವಿವಿಧ ರೀತಿಯಿಂದ ಯತ್ನಿಸುತ್ತಿದ್ದಾರೆ ಈ ದೇಶಗಳಲ್ಲಿ ದೊಡ್ಡ ದೊಡ್ಡ ಕಾರ್ಖಾನೆಗಳು ಯಂತ್ರಸಹಾಯದಿಂದ ನಡೆಯುತಿದ್ದು ಒಂದೇ ಸ್ಥಾನದಲ್ಲಿ ಸಾವಿರಾರು ಮಜೂರರು ಒಟ್ಟುಗೂಡಿ ಇರಲು ಸಾಧ್ಯವಾದ್ದರಿಂದ ಈ ರೀತಿ ತಮ್ಮ ಕಾಂಕ್ಷೆಗಳನ್ನು ಮುಷ್ಕರಗಳ ಮೂಲಕ ಪೂರೈಸುವುದಕ್ಕೆ ಎಡೆಯಾಯಿತು ಕೃಷಿ ಮಜೂರರು, ಗಣಿಗಳ ಮಜೂರರು, ಗಿರಣಿ ಮಜೂರರು ಮುಂತಾಗಿ ಬೇರೆಬೇರೆ ವರ್ಗದವರು ಕೂಟ ಕೂಡಿ ತಮಗೆ ಸಿಕ್ಕಿದ ಕೂಲಿಯಲ್ಲಿ ಸ್ವಲ್ಪ ಹಣ ಸಂಚಯ ಮಾಡಿಟ್ಟು ಇಂಥ ಮುಷ್ಕರ [illegible] ತಮ್ಮ ಜೀವನೋಪಾಯಕ್ಕೆ [illegible] ಇಷ್ಟು ಅಲ್ಲ, ಈಚೀಚೆಗೆ ಈ ಮಜೂರ ಪಕ್ಷದವರು ತಮ್ಮ ಕಡೆಯ ಪ್ರತಿನಿಧಿಗಳನ್ನು ಬೇರೆ ಬೇರೆ ದೇಶದ ಪಾರ್ಲಿಮೆಂಟುಗಳಲ್ಲಿ ಚುನಾವಣೆ ಮೂಲಕ ಕಳುಹಿಸಿ ಅವರ ಮೂಲಕ ಸವಲತ್ತುಗಳನ್ನು ಸರಕಾರದಿಂದ ಪಡೆದಿದ್ದಾರೆ ಲೋಕಸತ್ತೆಯು ಪ್ರಚಾರದಲ್ಲಿರುವ ರಾಜ್ಯಗಳಲ್ಲಿ ಈ ರೀತಿಯಲ್ಲಿ ಮಜೂರರು ತಮ್ಮ ಪ್ರತಿನಿಧಿಗಳನ್ನು ಆಯ್ದು ಕಳುಹಿಸಲಿಕ್ಕೆ ಅವಕಾಶವಿದೆ ವಯೋವೃದ್ಧರಾಗಿ ಕೆಲಸಕ್ಕೆ ಯೋಗ್ಯರಿಲ್ಲದೆ ಗೇಯಲಾರದವರಿಗೆ ಸರಕಾರದಿಂದ ಪೆನಶನ್, ಕಡಿಮೆ ಖರ್ಚಿನಿಂದ ಸರಕಾರ ನಿಯುಕ್ತ ಡಾಕ್ಟರರ ಮೂಲಕ ರೋಗ ಚಿಕಿತ್ಸೆ ಮುಂತಾದ ಹಲವು ಬಗೆಯ ಸವಲತ್ತುಗಳನ್ನು ಈ ಮಜೂರರು ಪಡೆಯಲಿಕ್ಕೆ ಈ ಲೋಕಸತ್ತಾತ್ಮಕ ರಾಜ್ಯಭಾರವೇ ಕಾರಣವಾಗಿದೆ ಹೀಗಿದ್ದರೂ ಈ ಮಜೂರರು ಸಮಾಧಾನದಲ್ಲಿದ್ದಾರೆ ಎನ್ನಲು ಬರುವುದಿಲ್ಲ ದಿನವಹಿ ಈ ಮಜೂರರಿಂದ ಹೆಚ್ಚಿನ ಕಾಸು ಗೇಯಿಸುತ್ತಾರೆ, ಇವರಿಗೆ ಇರಲಿಕ್ಕೆ ಆರೋಗ್ಯಕರವಾದ ಮನೆಗಳಿಲ್ಲ, ಇವರಿಗೆ ಸಿಗುವ ಸಂಬಳದ ದರಗಳು ದಿವಸಗಳ ಬೆಲೆಗೂ ತಕ್ಕದ್ದಾಗಿಲ್ಲ, ಇವರ ಮಕ್ಕಳಿಗೆ ವಿದ್ಯಾಭ್ಯಾಸಕ್ಕೆ ಸೌಕರ್ಯಗಳಿಲ್ಲ ಹೆಂಗಸರೂ ಗಂಡಸರೂ ಕಾರ್ಖಾನೆಗಳಲ್ಲಿ ಗೇಯುವಾಗ ಇವರ ಚಿಕ್ಕ ಮಕ್ಕಳ ಆರೈಕೆ ನೋಡುವವರಿಲ್ಲ, ಜೀವನದ ನಿವೃತ್ತಿ ಸಣ್ಣ ಹುಡುಗರೂ ಕೂಡಾ ತಮ್ಮ ಶಕ್ತಿಗೆ ಮೀರಿ ಕಾಯಕಷ್ಟಮಾಡಿ ಬಹಳ ಕಡಿಮೆ ಸಂಬಳ ಹೊಂದತಕ್ಕದ್ದು ಎಂಬ ಮುಂತಾದ ವಿಷಯಗಳು ಈ ಲೋಕಸತ್ತಾತ್ಮಕ ರಾಜ್ಯಗಳಲ್ಲಿ ಈ ಮಜೂರರ ಪ್ರತಿನಿಧಿಗಳ ಮೂಲಕವೂ, ಮಹದೋದ್ದೇಶವಾಗಿ ಈ ಬಡಜನರೊಡನೆ ದಯತೋರಿಸುವ ಶ್ರೀಮಂತರ ಅಥವಾ ಧಾರ್ಮಿಕರ ಮೂಲಕವೂ ಇವರ ಪರವಾಗಿ ಲೇಖನಿಯನ್ನು ಎತ್ತುವ ಪತ್ರಕರ್ತರ ಮೂಲಕವೂ ಕಡೆಗೆ ಸ್ವಾವಲಂಬನಪರರಾದ ಈ ಮಜೂರರ ಮುಷ್ಕರಗಳ ಮೂಲಕವೂ ಸರಕಾರದ ದೃಷ್ಟಿಗೆ ಬಿದ್ದು ಇವರಿಗೆ ಆಗಾಗ ಸೌಕರ್ಯಗಳು ಸಿಗುತ್ತಲೇ ಇವೆ ಅಂದರೆ ಈ ಲೋಕಸತ್ತಾತ್ಮಕ ರಾಜ್ಯಗಳಲ್ಲಿ ಬಂಡವಾಳಗಾರ, ಶ್ರೀಮಂತ ಧಾರಾಳಿಗಳು, ದೀನಜನರ ಅವಸ್ಥೆಯ ಕಡೆಗೆ ಮನಸ್ಸು ಕರಗುವವರು ಎಂದು ಹೇಳಲು ಸಾಧ್ಯವಿಲ್ಲ ಪಾಶ್ಚಾತ್ಯರ ಸುಖಾಕಾಂಕ್ಷೆಗಳ ಭವದ ಸುಖದ ಆಶೆ ಮಾನವೇ ದೊಡ್ಡದು ಇದಕ್ಕೆ ಸರಿಯಾಗಿ ಅವರಿಗೆ ದೈವಬಲವೂ ಶಕ್ತಿಯ ಬಲವೂ ವಿದ್ಯಾಬಲವೂ ಇದ್ದುದರಿಂದ ಇತರ ಖಂಡಗಳಲ್ಲಿಂದ ದ್ರವ್ಯವನ್ನು ಹಿಂಡಿ ಹೀರಿದ ಹಾಗೆ ಅವರ ಕಾಂಕ್ಷೆಗಳು ಹೆಚ್ಚುತ್ತಲೇ ಇವೆ ಹೀಗಾಗಿ ಈ ಮಜೂರರಿಗೂ ಬಂಡವಾಳಗಾರರಿಗೂ ಆಗಾಗ ಜಗಳವಿದ್ದು ಕಡೆಗೆ ಸರಕಾರದ ಮಧ್ಯಸ್ಥಿಕೆಯಿಂದ ಸಮಾಧಾನವಾಗುವುದೂ ಉಂಟು ಈ ಮಹಾಯುದ್ಧ ಕಾಲದಲ್ಲಿ ಬಂಡವಾಳಗಾರರು ಹೇಗೆ ಹಣಮಾಡಿದರು ವ್ಯಾಪಾರ ಚಲಾವಣೆಯ ಅಭ್ಯಂತರಗಳ ದೆಸೆಯಿಂದ ಈ ಯುದ್ಧದಲ್ಲಿ ಸೇರಿದ ರಾಷ್ಟ್ರಗಳಲ್ಲಿ ಆಹಾರ ಸಾಮಗ್ರಿಗೆ ಬೆಲೆ ವಿಪರೀತವಾಗಿ ಏರಿತು ಆ ಸರಿಯಲ್ಲಿ ಮಜೂರಿಯ ದರಗಳು ಏರಲಿಲ್ಲ ಸೈನ್ಯದಲ್ಲಿ ಅನೇಕ ಮಜೂರರು ಸೇರಿ ತಮ್ಮ ಜೀವನೋಪಾಯದ ವೃತ್ತಿಯನ್ನು ತಾತ್ಕಾಲಿಕವಾಗಿ ಬಿಡಬೇಕಾಯಿತು ಅವರು ಮರಳಿ ತಮ್ಮ ದೇಶಗಳಿಗೆ ಬಂದಾಗ ಆಹಾರ ತುಟ್ಟಿ ಧಾರಣೆಯು ಏರು ಯುದ್ಧದ ಆಯಾಸ ಇನ್ನೊಂದು ಕಡೆ ಯುದ್ಧದ ಸಾಮಗ್ರಿಗಳನು ತಯಾರಿಸಿ ಕೊಡುವುದರಲ್ಲಿ ಗಂಟು ಕಟ್ಟಿ ಧನಸಂಪನ್ನರು ಎಂದ ಮನುಷ್ಯರುಗಳಂತ ಈ ಮಜೂರರ ದೃಷ್ಟಿ ಕದಡಿತು ಅಲ್ಲಲ್ಲಿ ಮುಷ್ಕರಗಳಿದ್ದವು ಕಲ್ಲಿದ್ದಲು ಗಣಿಗಳನ್ನು ರೈಲ್ವೆಗಳನ್ನು ಸರಕಾರವೇ ಕೊಂಡುಕೊಂಡು ನಡೆಯಿಸಬೇಕು ಇಲ್ಲವಾದರೆ ಇದ್ದಲಿನ ಧಾರಣೆ ಏರಿ ಬಡಜನರು ಘೋಸಿಯಾಗುತ್ತಾರೆ ಗಣಿಗಳ ಮಾಲೀಕರು ಬೇಲ ತುಂಬಿಕೊಳ್ಳುತ್ತಾರೆ ಎಂದು ಮಜೂರರು ವಾದಿಸತೊಡಗಿದರು ಮುಷ್ಕರಗಳ ದೆಸೆಯಿಂದ ಸಂಬಳದ ದರಗಳ ಏರಿಕೆಯಾಗಿ ಬಂತು ಬೇರೆ ಇನ್ನು ಕೆಲವು ಸವಲತ್ತುಗಳ ಬದಲು [illegible] ದಿನವಹಿ ಮಾಡುವ ಕೆಲಸದ ಅವಧಿ ಕಡಿಮೆಯಾಯಿತು. ಆದರೂ ಬ್ರಿಟಿಷ ಮಜೂರರು ತೃಪ್ತಿಹೊಂದಲಿಲ್ಲ ರಾಜ್ಯ ಆಡಳಿತೆಯ ಸೂತ್ರಗಳನ್ನು ತಾವೇ ಹಿಡಿದುಕೊಂಡರೆ ಮಾತ್ರ ತಮಗೆ ಬೇಕಾದ ಪೂರ್ಣ ಸವಲತ್ತುಗಳನ್ನು ಪಡೆಯಬಹುದು ಎಂದು ಅವರು ತಿಳಿದ [illegible] ಯುದ್ಧವು ಮುಗಿದರೂ ಈಗ ಪುನಃ ಯುದ್ಧವು ಪ್ರಾರಂಭಿಸಬಹುದೆಂಬ ಶಂಕೆಯು ಈ ಯುದ್ಧದಲ್ಲಿ [illegible] ಯುದ್ಧದ [illegible] ದಿಂದ ಲಷ್ಕರಿಗೆ ದಾಖಲು ಮಾಡುವ ಕಾನೂನು ಜಾರಿ ಮಾಡಿದ್ದು ಈ ಸ್ವಾತಂತ್ರ್ಯ ಜನಾಂಗಕ್ಕೆ ಒಗ್ಗಲಿಲ್ಲ ಇಂಥ ಕಾನೂನುಗಳ ಬರುವುದಕ್ಕೆ ಈ ಬಂಡವಾಳಗಾರರ ಪ್ರಾಬಲ್ಯ ಅವರ ಪುಷ್ಟಿಕೆಯ ಬಗ್ಗೆ ಉಂಟಾಗುವ ಯುದ್ಧಗಳೇ ಕಾರಣಗಳೆನ್ನುವ ಈ ಬಗೆಯಲ್ಲಿ [illegible] ಯುದ್ಧಗಳನ್ನು ನಿಲ್ಲಿಸಬೇಕಾದರೆ ರಾಜ್ಯದ ಸೂತ್ರಗಳನ್ನು ಈ ಬಂಡವಾಳಗಾರರಿಂದ ತಪ್ಪಿಸಿಕೊಳ್ಳುವುದೇ ತಕ್ಕ ಉಪಾಯವೆಂದು ಇವರು ತಿಳಿದಿದ್ದಾರೆ ಹೀಗಾಗಿ ಐರ್ಲೆಂಡದಲ್ಲಿ ಸೈನ್ಯಗಳ ಹಿಂದೆಗೆಯಲೂ ಬೊಲಶೆವಿಕ್ ರಶಿಯಾದ ಮೇಲೆ ಯುದ್ಧ ಹೂಡದಿರಲೂ ಬ್ರಿಟಿಷ ಮಂತ್ರಿಕೂಟದವರು ತಪ್ಪಿದಾಗಲೂ ರಶಿಯಾದ ಮೇಲೆ ಯುದ್ಧದ ಶಂಕೆಯು ಬಂದಲ್ಲಿ ನಾವು ಮುಷ್ಕರ ಹಿಡಿದು ಸರ್ವ ಚಲಾವಣೆಯನ್ನು ನಿಲ್ಲಿಸಿ ಬಿಡುವಂತಿದ್ದೇವೆ ಎಂದು ಮಂತ್ರಿಕೂಟದವರಿಗೆ ಎಚ್ಚರಿಸಿದ್ದಲ್ಲದೆ ಈ ವಿಚಾರದ ಕಡೆಗೆ ಲಕ್ಷ್ಯವಿಟ್ಟು ಮುಂದಿನ ಕಾರ್ಯವೇನಾಗಬೇಕೆಂದು ಸೂಚಿಸುವ ಬಗ್ಗೆ ಒಂದು 'ಕೌನ್ಸಿಲ್ ಒಫ್ ಎಕ್ಶನ್' ಕಾರ್ಯನಿರ್ವಾಹಕ ಸಭೆಯನ್ನು ಬ್ರಿಟಿಷ ಮಜೂರರು ಏರ್ಪಡಿಸಿದ್ದಾರೆ

ಬ್ರಿಟಿಷ ರಾಜ್ಯಕಾರ್ಯದಲ್ಲಿ ಪಾರ್ಲಿಮೆಂಟ ಸಭೆಗೆ ಪೂರ್ಣ ಸ್ವತಂತ್ರ ಅಧಿಕಾರವಿದ್ದು ಅದರಲಿ ಯಾವ ತಂಡವು ಬಲವಾಗುತ್ತದೋ ಆ ತಂಡವು ಕಾಯಿದೆ ಪ್ರಕಾರ ರಾಜ್ಯದ ಸೂತ್ರಗಳನ್ನು ಹಿಡಿದುಕೊಳ್ಳುತ್ತದೆ ಅನ್ಯ ರಾಜ್ಯಗಳೊಡನೆ ಯುದ್ಧದಲ್ಲಿ ಪ್ರವೇಶಮಾಡುವುದು ಅಥವಾ ಸಂಧಿಮಾಡುವುದು ಇಂಥ ಮಹತ್ವದ ಕೆಲಸಗಳ ಏರ್ಪಾಡೂ ಈ ಬಗೆಯ ಸೂತ್ರ ಹಿಡಿದವರೇ ಮಾಡತಕ್ಕದ್ದಿದೆ ಒಂದು ತಂಡದವರಿಗೆ ಸಭೆಯಲ್ಲಿ ಬಹುಮತದ ಬಲ ತಪ್ಪಿದರೆ ಅವರು ಆಕ್ಷಣವೇ ಅಂಥಾ ಬಲವು ಒದಗಿದ ತಂಡದವರಿಗೆ ಈ ಸೂತ್ರಗಳನ್ನು ಒಪ್ಪಿಸಿ ರಾಜಕಾರ್ಯದಿಂದ ನಿವೃತ್ತರಾಗುವುದು ಬಹಳ ಕಾಲದಿಂದಲೂ ನಡೆದು ಬಂದ ವಾಡಿಕೆ ಈ ರೀತಿಯಲ್ಲಿ ಅಧಿಕಾರವನ್ನು ನಡಿಸುವ ತಂಡದವರಿಗೆ ಮೇಲೆ ಹೇಳಿದಂತೆ ಎಚ್ಚರಿಸಲು ಈ ಮಜೂರಪಕ್ಷದವರು ಕೈಹಾಕಿ ಅನ್ಯ ರಾಜಕಾರಣದಲ್ಲಿ ಪ್ರವೇಶಿಸಿದ್ದು ಇದೇ ಮೊದಲು ಮಂತ್ರಿಕೂಟದವರು ಮುಖ್ಯವಾಗಿ ಬ್ರಿಟಿಷ ಮಂತ್ರಿವರ್ಯರು 'ಈ ಬಗೆಯ ಹೆದರಿಕೆಯನ್ನು ನಾವು ಮನ್ನಿಸಲಾರೆವು ಬಹುಮತದ ಬಲದಿಂದ ರಾಜಕಾರ್ಯ ನಡಿಸುವವರು ನಿಮ್ಮ ಬೆದರಿಕೆಗೆ ದಿಗಿಲು ಪಡಲು ಕಾರಣವಿಲ್ಲ, ನಿಮ್ಮ ಸಾಮರ್ಥ್ಯವಿದ್ದರೆ ನೋಡೋಣ' ಎಂದು ಪಟಾರಿಸಿದ್ದಾರೆ ಇದರ ಪರಿಣಾಮವೇನಾದೀತೆಂದು ನೋಡಲಿಕ್ಕೆ ಇದೆ

[illegible]

[illegible]

ಮುಖ್ಯ ಲೇಖನಗಳು:—

೧. ಜಾದಾ ರಾಷ್ಟ್ರೀಯ ಸಭೆಯಲ್ಲಿ [illegible] . . . „

೨. [illegible] . . . ೭

೩. [illegible] . . . „

ಮಂಗಳೂರು:—

ವರ್ತಮಾನ ಸಂಗ್ರಹಗಳು:—

ವಿದೇಶ ವೃತ್ತಾಂತ . . . . *

ಸ್ವದೇಶ ವರ್ತಮಾನ . . . . „

ದಕ್ಷಿಣ ಕನ್ನಡ:—

ಪುತ್ತೂರು, ಕಾಪು, ಬಾತಮಿದಾರರಿಗೆ ಸೂಚನೆ . . . . „

ಮದ್ರಾಸಿನ ವಿಚಾರ . . . . „

ಜಾದಾ ರಾಷ್ಟ್ರೀಯ ಸಭೆಯ ಅಧ್ಯಕ್ಷರ ಭಾಷಣ . . . ೮

ಮದರಾಸಿನ ಗವರ್ನರರ ಕಾಯಿದೆಕಾನ್ಸಿಲಿಗೆ ಮಂಬರುಗಳನ್ನು ಕಳುಹುವ ಅಧಿಕಾರವುಳ್ಳವನ್ನು ಕನ್ನಡಜಿಲ್ಲೆಯ ಎಲ್ಲ ವೋಟ್ಟರುಗಳಲ್ಲಿ ವಿಜ್ಞಾಪನೆ . . . . . . „

ಶ್ರೀ ಸಂಸ್ಥಾನ ಕಾಶೀಮಠಕ್ಕೆ ಉಳ್ಳಾಲ ಪೇಟೆಯ ವಂತಿಗೆ ಪಟ್ಟಿ ೯

ಪತ್ರವ್ಯವಹಾರ, 1, 2, 3, ... „

ಸ್ವದೇಶಾಭಿಮಾನಿ.

ಶಕ ೧೮೪೨ ನೆ. ಶ್ರಾ. ಬ॥ ೧೩ ಶುಕ್ರವಾರ.

ಜಾದಾ ರಾಷ್ಟ್ರೀಯ ಸಭೆ.

ಕಳೆದ ಶನಿವಾರ ಕಲಕತ್ತೆಯಲ್ಲಿ ಜಾದಾ ರಾಷ್ಟ್ರೀಯ ಸಭೆಯು ಪ್ರಾರಂಭವಾಯಿತು. ಈ ಅಧಿವೇಶನವು ಈಗ ಎರಡು ತಿಂಗಳಿಂದ ಹಿಂದಿ ಜನತೆಯ ಕುತೂಹಲಕ್ಕೆ ಕಾರಣವಾಗಿತ್ತು. ಮಹಾತ್ಮಾ ಗಾಂಧಿಗಳು ಎರಡು ತಿಂಗಳ ಹಿಂದೆ ಯಾವಾಗ ಅಸಹಕಾರಿತೆಯನ್ನು ಜಾಹೀರ ಪಡಿಸಿ ಅದರ ಕಾರ್ಯಕ್ರಮದ ಬೇರೆ ಬೇರೆ ಮೆಟ್ಟಿಲುಗಳನ್ನು ಪ್ರತಿಪಾದಿಸ ತೊಡಗಿದರೊ, ಹಾಗು ಪಂಜಾಬ ಪ್ರಕರಣದ ವಿಷಯವಾಗಿ ಸರಕಾರಿ ಧೋರಣವು ಯಾವಾಗ ವ್ಯಕ್ತವಾಯಿತೊ, ಆಗ ಕಾಶೀಕ್ಷೇತ್ರದಲ್ಲಿ ನೆರೆದ ಒಲ್ ಇಂಡಿಯಾ ಕೊಂಗ್ರೆಸ್ ಕಮಿಟಿಯು ಇಂಥ ಮಹತ್ವದ ಪ್ರಶ್ನೆಗಳನ್ನು ತಾನೆ ನಿರ್ಣಯಿಸುವುದಕ್ಕಿಂತ ಅದಕ್ಕಾಗಿ ಸ್ಪೆಶಲ್ ಕಾಂಗ್ರೆಸನ್ನು ಕೂಡಿಸುವುದೆ ಉತ್ತಮವೆಂದು ನಿರ್ಣಯಿಸಿತು. ಅಂದಿನಿಂದ ಈ ಜಾದಾ ರಾಷ್ಟ್ರೀಯ ಸಭೆಯ ಕಡೆಗೆ ದೇಶಭಕ್ತರ ದೃಷ್ಟಿಯು ಬದ್ಧವಾಗಿತ್ತು. ಜಾದಾ ರಾಷ್ಟ್ರೀಯ ಸಭೆಯು ಕೂಡಬೇಕೆಂದು ನಿಶ್ಚಿತವಾದ ಬಳಿಕಂತೂ ಅದನ್ನು ಆಮಂತ್ರಿಸಲು ಆಂಧ್ರಪ್ರಾಂತ, ಜಬಲಪೂರ, ಮುಂಬಯಿ ಇತ್ಯಾದಿ ಕಡೆಗಳಲ್ಲಿಯ ಜನರು ತೋರಿಸಿದ ಉತ್ಸಾಹವು ರಾಷ್ಟ್ರೀಯ ಸಭೆಯ ಇತಿಹಾಸದಲ್ಲಿ ನಿಜವಾಗಿ ಅವರ್ಣನೀಯವಾಗಿದೆ. ಇತ್ತಿತ್ತಲಾಗೆ ಹಿಂದಿದೇಶವು ರಾಷ್ಟ್ರೀಯ ಸಭೆಯನ್ನು ಆಮಂತ್ರಿಸಲು ಮಾತ್ರ ಉತ್ಸಾಹವುಳ್ಳದ್ದಾಗಿದೆ ಎಂದಲ್ಲ, ಅದರ ಅಧಿವೇಶನವನ್ನು ಸರ್ವಾಂಗಗಳಿಂದ ಯಶಸ್ವಿಯನ್ನಾಗಿ ಮಾಡಲು ಅದು ಅತ್ಯುತ್ಸಾಹವನ್ನು ತಕೊಳ್ಳುತ್ತಿದೆ ಎಂದು ಹೇಳಲು ನಮಗೆ ಯಾವ ಸಂಕೋಚವೂ ತೋರುವುದಿಲ್ಲ. ಇದಕ್ಕೆ ಕಲಕತ್ತೆಯ ಈ ಅಧಿವೇಶನವನ್ನೆ ಉದಾಹರಿಸಬಹುದು. ಸಭಾಸದರೂ, ಪ್ರೇಕ್ಷಕರೂ ಕೂಡಿ ೧೫,೦೦೦ ಜನರು ಒಳಕೊಳ್ಳುವಷ್ಟು ವಿಸ್ತೃತವಾದ ಮಂಟಪವು ಕಲ್ಕತ್ತೆಯಲ್ಲಿ ತಯಾರಿಸಲ್ಪಟ್ಟಿದೆ. ಈ ಮಂಟಪವು ಕೂಡ ಸಾಲದೆ ಜನಗಳು ಪ್ರಥಮದ ದಿವಸ ಹೊರಗೆ ನಿಂತುಕೊಂಡರು. ಅಷ್ಟು ದೊಡ್ಡ ಜನಸ್ತೋಮವು ನೆರೆದಿತ್ತು. ಬರೆ ಪ್ರತಿನಿಧಿಗಳ ಸಂಖ್ಯೆಯೆ ೫,೦೦೦ಕ್ಕೆ ಮಿಕ್ಕಿ ಹೋಗಿದೆ ಎಂದು ಹೇಳುತ್ತಾರೆ. ಮಂಟಪದ ರಚನೆಯು ಬಹು ಮನೋಹರವಾಗಿತ್ತು. ಭವ್ಯ ಮತ್ತು ವಿಸ್ತೃತವಾದ ಈ ಮಂಟಪದಲ್ಲಿ ವಿದ್ಯುಚ್ಛಕ್ತಿಯ ದೀಪಗಳ ಮತ್ತು ಬೀಸಣಿಗೆಗಳ ಸೌಕರ್ಯವು ಮಾಡಲ್ಪಟ್ಟಿತ್ತು. ಸುಪ್ರಸಿದ್ಧ ದೇಶಭಕ್ತರ ಚಿತ್ರಗಳಿಂದಲೂ, ಸ್ವದೇಶಾಭಿಮಾನೋತ್ತೇಜಕ ವಾಕ್ಯಗಳಿಂದಲೂ ಮಂಟಪವು ಆಕರ್ಷವಾಗಿತ್ತು. ಸಾರಾಂಶ, ಸಭಾ ಮಂಟಪವನ್ನು ಅಲಂಕರಿಸಲು ಮತ್ತು ಪ್ರೇಕ್ಷಕರಿಗೆ ಅನುಕೂಲವಾಗುವಂತೆ ಮಾಡಲು ಸ್ವಾಗತ ಮಂಡಲಕ್ಕೆ ಎಷ್ಟು ಸಾಧ್ಯವಿದೆಯೊ ಅಷ್ಟೆಲ್ಲ ಅದು ಮಾಡಿದೆ ಎನ್ನಬಹುದು. ಅದರಲ್ಲಿ ಪುನಃ ಒಗಪ್ಪಿನ ಬರೆ ಒಂದು ತಿಂಗಳ ಅಲ್ಪಾವಧಿಯಲ್ಲಿ ಇಷ್ಟೆಲ್ಲ ಅನುಕೂಲತೆಗಳನ್ನು ಒದ[illegible] ಪ್ರಾರಂಭವಾಗಲು [illegible] ಪ್ರವಾಹವು ಮಂಟಪದ ಕಡೆಗೆ ಬರುತ್ತಿತ್ತು. [illegible] ಉತ್ಸುಕತೆಯು ಹುಟ್ಟಿಹೋಗಿತ್ತು. ನಿಯೋಜಿತ ಅಧ್ಯಕ್ಷರಾದ ಲಾಲಾ ಲಜಪತರಾಯರು ಸ್ವಾಗತ ಮಂಡಲದ ಮುಖ್ಯಸ್ಥರಾದ ವ್ಯೋಮಕೇಶ ಚಕ್ರವರ್ತಿಗಳೊಡನೆ ಸಭಾ ಮಂಟಪವನ್ನು ಪ್ರವೇಶಿಸಿದಾಗ ಎಲ್ಲ ಸಭಿಕರು ಉತ್ಥಾನಪೂರ್ವಕವಾದ ಸನ್ಮಾನವನ್ನು ಕೊಟ್ಟರು. ಮುಖ್ಯ ಮುಖ್ಯ ಪ್ರತಿನಿಧಿ ಮುಖಂಡರಿಗಾಗಿ ಕುಳಿತುಕೊಳ್ಳಲು ತಯಾರಿಸಿದ ಉಚ್ಚಸ್ಥಾನದ ಮೇಲೆ ಆಯಾ ಮುಖಂಡರೂ, ಸ್ವಾಗತ ಮಂಡಳದ ಮುಖ್ಯಸ್ಥರೂ, ಅಧ್ಯಕ್ಷರೂ ಕುಳಿತ ಬಳಿಕ ಅಲ್ಲಿಯೆ ಎದುರಿಗೆ ತೂಗಹಾಕಿದ ಲೋಕಮಾನ್ಯ ಟಿಳಕರ ಭವ್ಯ ಚಿತ್ರಕ್ಕೆ ಪುಷ್ಪಹಾರವನ್ನು ಹಾಕುವಾಗ ಇಡೀ ಸಭೆಯು ಎದ್ದು ನಿಂತಿತು. ಅನಂತರ ರಾಷ್ಟ್ರಗೀತಗಳನ್ನು ಹಾಡಿದ ಬಳಿಕ ಸ್ವಾಗತಮಂಡಲದ ಮುಖ್ಯಸ್ಥರಾದ ಬೆರಿಸ್ಟರ ಚಕ್ರವರ್ತಿಗಳ ಸ್ವಾಗತಪರವಾದ ಭಾಷಣವಾಯಿತು. ಬೆರಿಸ್ಟರ ಚಕ್ರವರ್ತಿಗಳು ತಮ್ಮ ಭಾಷಣದಲ್ಲಿ ಪಂಜಾಬ ಪ್ರಕರಣ, ಖಿಲಾಫತ್ತಿನ ವಿಷಯಗಳನ್ನು ಉಲ್ಲೇಖಿಸಿದ್ದಾದರೂ ಅಸಹಕಾರಿತೆಯ ನಿಶ್ಚಿತ ಸ್ವರೂಪವನ್ನು ಕುರಿತು ಯಾವದೊಂದು ವಿವಕ್ಷಿತ ಮತವನ್ನು ಕೊಡಲಿಲ್ಲ.

ಸರ್ ಆಶುತೋಷ ಚೌಧರಿಗಳು ಸೂಚಿಸಿದ ಮೇರೆಗೆ ಹಾಗು ಬೇರೆ ಬೇರೆ ಪ್ರಾಂತಗಳ ಮುಖ್ಯ ಮುಖ್ಯ ಪ್ರತಿನಿಧಿಗಳು ಅನುಮತಿಸಿದ ಮೇರೆಗೆ ಲಾಲಾ ಲಜಪತರಾಯರು ಅಧ್ಯಕ್ಷಸ್ಥಾನವನ್ನು ಅಲಂಕರಿಸಿದರು. ಲಾಲಾಜಿಯವರ ಭಾಷಣವು ಫುಲ್ಸ್‌ಕೇಪಿನ ೫೧ ಪುಟ ಉದ್ದವಿತ್ತು. ಅವರು ತಮ್ಮ ಭಾಷಣದಲ್ಲಿ ಲೋಕಮಾನ್ಯ ಟಿಳಕರ ಅಕಾಲ ನಿಧನದ ಕುರಿತು ವಿಷಾದವನ್ನು ಯೋಗ್ಯ ಶಬ್ದಗಳಿಂದ ವ್ಯಕ್ತಗೊಳಿಸಿ, ದೇಶಕ್ಕೆ—ವಿಶೇಷತಃ ರಾಷ್ಟ್ರೀಯ ಸಭೆಗೆ ಅವರ ನಿಧನದಿಂದ ಎಷ್ಟು ಭಯಂಕರವಾದ ಹಾನಿಯುಂಟಾಗಿದೆ ಎಂಬುದನ್ನು ವಿವರಿಸಿ ಹೇಳಿದರು. ಆ ಮೇಲಿನ ಅವರ ಮುಂದಿನ ಭಾಷಣವು ಹಿಂದುಸ್ಥಾನದ ಈಗಿನ ರಾಜಕೀಯ ಪರಿಸ್ಥಿತಿಯ ವಿವರಣವನ್ನು ಕೊಡುತಿತ್ತು. ಹೊಸ ಸುಧಾರಣೆಗಳ ಮನ್ವಂತರವು ಪ್ರಾರಂಭವಾಗುವ ಕಾಲದಲ್ಲಿ ಹಿಂದುಸ್ಥಾನ ಸರಕಾರವು ತನ್ನ ಕಾರ್ಯಕಾರಿ ಕೌನ್ಸಿಲಿನ ೮ ಜಾಗಗಳ ಪೈಕಿ ಮೂರು ಹಿಂದಿಗಳಿಗೆ ಕೊಡಲು ಉಪಕ್ರಮಿಸಿದ್ದು, ಈ ಉಪಕ್ರಮದ ಫಲವೆಂಬಂತೆ ಶರ್ಮಾ ಮತ್ತು ಸಪ್ರು ಇವರಿಬ್ಬರನ್ನು ಹೊಸದಾಗಿ ಕೌನ್ಸಿಲಿನಲ್ಲಿ ತೆಕ್ಕೊಳ್ಳೋಣಾಗಿದೆ, ಹಾಗು ಲೊರ್ಡ ಸಿಂಹರನ್ನು ಬಿಹಾರ ಪ್ರಾಂತದ ಗವರ್ನರ ಹುದ್ದೆಯ ಮೇಲೆ ಕೂಡ್ರಿಸೋಣಾಗಿದೆ. ಈ ಎರಡು ವಿಷಯಗಳು ಬಹಳ ಉತ್ತಮವಾದವುಗಳೆ ಸರಿ. ಈ ಮೂರು ವ್ಯಕ್ತಿಗಳು ಬಹುಮಾನದ ಹೊಸ ಸ್ಥಾನಗಳನ್ನು ಪಡೆದದ್ದಕ್ಕೆ ಅಭಿನಂದನೀಯರಾಗಿದ್ದಾರೆ. ಮಾತ್ರವಲ್ಲ, ಅವರನ್ನು ಆಯಾ ಸ್ಥಾನಗಳ ಮೇಲೆ ನೇಮಿಸಿ ಸರಕಾರವು ತನ್ನ ಗುಣಗ್ರಾಹಕತೆಯನ್ನು ತೋರಿಸಿದ್ದು ಕೂಡ ಶ್ಲಾಘನೀಯವಾಗಿದೆ. ಈ ಹೊಸ ನೇಮಕಗಳ ವಿಷಯದಲ್ಲಿ ಇಷ್ಟೆ ಹೇಳಬಹುದಲ್ಲದೆ ಇದಕ್ಕೆ ಹೆಚ್ಚಿನ ಮಹತ್ವವಾಗಲಿ, ಇದರಿಂದ ಹಿಂದೀದೇಶಕ್ಕೆ ಹೆಚ್ಚಿನ ಪ್ರಯೋಜನವು ಉಂಟಾದೀತೆಂದಾಗಲಿ ಶೋಕಪರ್ಯವಸಾಯಿಯಾದ ಪಂಜಾಬ ಪ್ರಕರಣವನ್ನು ನೆನಪಿಗೆ ತಂದು ಮಾತಾಡುವುದಾದರೆ ಹೇಳಲಾಗುವುದಿಲ್ಲ. ಪಂಜಾಬದಲ್ಲಿ ನಡೆದಂಥ ಅಧಿಕಾರಿಗಳ ಅಮಾನುಷ ಅತ್ಯಾಚಾರಗಳನ್ನು ನಿಲ್ಲಿಸುವ ಸಾಮರ್ಥ್ಯವು ಯಾವ ರಾಜ್ಯಯಂತ್ರದಲ್ಲಿ ಇಲ್ಲವೊ ಇಲ್ಲವೆ ಇನ್ನು ಮುಂದೆ ಇಂಥ ಭಯಂಕರ ಪ್ರಕಾರಗಳ ಪುನಃಸಂಭವದ ಬಗ್ಗೆ ಯಾವ ರಾಜ್ಯಯಂತ್ರವು ಯಾವದೆ ತರದ ನಂಬಿಕೆಯನ್ನು ಹುಟ್ಟಿಸುವುದಿಲ್ಲವೊ ಅಂಥ ರಾಜ್ಯಕಾರಭಾರದಲ್ಲಿ ಒಬ್ಬರಿಬ್ಬರು ಇರುವದರ ಬದಲಿಗೆ ೩—೪ ಹಿಂದಿಗಳಿರುವುದರಿಂದ ಯಾವ ಗುಣವು ಬಂದೀತು? ಪಂಜಾಬ ಪ್ರಕರಣದ ಶೋಕಪರ್ಯವಸಾಯಿ ನಾಟಕವು ಹಿಂದುಸ್ಥಾನದ ರಂಗಭೂಮಿಯ ಮೇಲೆ ಬರುವುದಕ್ಕಿಂತ ಮೊದಲಾದರೆ ವರಿಷ್ಠ ಸ್ಥಾನಗಳಲ್ಲಿ ಹಾಗು ಕಾರ್ಯಕಾರಿ ಮಂಡಲದಲ್ಲಿ ಹಿಂದಿಗಳ ಅಧಿಕ ನೇಮಕಗಳು ಈ ದೇಶಕ್ಕೆ ಗುಣಕಾರಿಯಾದಾವು ಎಂದು ಒಂದು ವೇಳೆ ಜನರು ತಿಳಕೊಳ್ಳಬಹುದಿತ್ತು. ಪರಂತು ಈಚೆಗೆ ಈ ಭ್ರಮೆಯನ್ನು ಜನರು ಕಟ್ಟಿಕೊಳ್ಳಲಿಕ್ಕಿಲ್ಲ, ಎಂದು ಲಾಲಾಜಿಯವರು ಈಗಿನ ಕಾರಭಾರದ ವ್ಯಂಗತೆಯನ್ನು ಸ್ಪಷ್ಟವಾಗಿ ಸಭೆಯ ಮುಂದಿಟ್ಟರು.

ಲಾಲಾಜಿಯವರ ಭಾಷಣದಲ್ಲಿ ಈ ಪಂಜಾಬ ಪ್ರಕರಣವೆ ಮುಖ್ಯವಾಗಿತ್ತು. ಅವರ ಭಾಷಣದ ೪೧ ಪುಟಗಳು ಪಂಜಾ[illegible] ಮತ್ತು [illegible] ಯದು ಪಂಜಾಬ [illegible] ಗಸ್ಥರಾಗಿದ್ದರು. [illegible] ಅನ್ಯಾಯಸಿದ್ಧವಾದ ಸಮಯದಲ್ಲಿ [illegible] ದ್ದಿರಬಹುದು. [illegible] ಯಾವಾಗ [illegible] ಸತ್ಯಾಗ್ರಹದ ನವವನ್ನು ಮುಂದಿಟ್ಟು [illegible] ವಿನ ಸೂಚನೆಗಳನ್ನು, ಡಾಯರ್, ಜೋನ್ಸನ್, ಒಬ್ರಾಯನ್, ಸ್ಮಿಥ್ ಮೊದಲಾದವರ ಕೈಗೆ ಕೊಟ್ಟು, ಈ ಒಡ್ವಾಯರರ ಕಿನ್ನರಗಣವು ನಡಿಸಿದ ಸ್ತ್ರೀಪುರುಷ, ಬಾಲ ಬಾಲಿಕಾ ಮುಂತಾದವರ ವಧೆಯಿಂದ ತನ್ನ ಕರಾಳ ಮನಸ್ಸನ್ನು ಸಂತೋಷಗೊಳಿಸಿಕೊಂಡರು. ಇಂಥ ಈ ಒಡ್ವಾಯರರನ್ನು ಸಾಕ್ಷಿಗೂಡು ಹತ್ತಿಸಿ ಅವರ ಅಪರಾಧದ ವಿಚಾರಣೆಯಾಗಬೇಕು, ಮಾತ್ರವಲ್ಲ, ಅವರನ್ನು ಸರಿಯಾಗಿ ದಂಡಿಸಬೇಕು. ಡಾಯರ್, ಜೋನ್ಸನ್ ಪ್ರಭೃತಿ ನರರಾಕ್ಷಸರನ್ನು ಶಿಕ್ಷಿಸಬೇಕು, ಲಷ್ಕರ ಕಾನೂನಿನ ಹೆಸರಿನಿಂದ ಇನ್ನೂ ಜೈಲಿನಲ್ಲಿ ಬಿದ್ದಿರುವ ಹಿಂದಿಗಳ ಬಿಡುಗಡೆಯಾಗಬೇಕು, ಮಾರ್ಶಲ್ ಲೋ ಮೂಲಕ ಜನಗಳಿಗೆ ಒದಗಿದ ಧನನಷ್ಟವನ್ನು ತುಂಬಿ ಕೊಡಬೇಕು, ಕೊಂಗ್ರೆಸ್ ಕಮ್ಮಿಟಿಯ ಕಮಿಶನರುಗಳ ಮುಂದೆ ಪೋಲಿಸ್ ಅಧಿಕಾರಿಗಳ ಲಂಚದ ಯಾವ ಸಂಗತಿಯು ಹೊರಗೆ ಬಿದ್ದಿದೆಯೊ ಅದರ ವಿಚಾರಣೆಯು ಬಹಿರಂಗವಾಗಿ ಆಗಬೇಕು, ಲಾಲಾಜಿಯವರು ಇದೇ ಮೇರೆಗೆ ಇವರ ಅನೇಕ ಅನ್ಯಾಯಗಳ, ಅಪಕೃತ್ಯಗಳ ಮತ್ತು ಅನೀತಿಗಳ, ಪರಿಮಾರ್ಜನೆಯು ಆಗಬೇಕೆಂದು ಒತ್ತಿಹೇಳಿದ್ದಾರೆ. ಲಾಲಾ ಲಜಪತರಾಯರ ಭಾಷಣದೊಳಗಿನ ಪಂಜಾಬ ಪ್ರಕರಣ ವಿಷಯಕವಾದ ಮಹತ್ವದ ಅನೇಕ ವಿಷಯಗಳು ವಾಚಕರ ಮುಂದೆ ಇಡುವ ಹಾಗಿವೆ. ಆದರೂ ಅವುಗಳನ್ನು ಹಿಂದಿನಿಂದ ಚರ್ಚಿಸೋಣ.

ಅಧ್ಯಕ್ಷರಾದ ಲಾಲಾ ಲಜಪತರಾಯರ ಭಾಷಣದೊಳಗಿನ ಮುಖ್ಯ ವಿಷಯಗಳಲ್ಲಿ ಅಸಹಕಾರಿತೆಯು ಒಂದಾಗಿತ್ತು. ಆದರೆ ನಮ್ಮ ವಾಚಕರನ್ನು ಲಾಲಾಜಿಯವರ ಈ ವಿಷಯದ ಮತದ ಕುರಿತು ಹೆಚ್ಚು ಸಮಯ ಕುತೂಹಲದಲ್ಲಿಡಬೇಕಾದ ಅಗತ್ಯವಿಲ್ಲ. ಲಾಲಾಜಿಯವರು ಪಂಜಾಬಿಗಳು ಮತ್ತು ಆ ಪಂಜಾಬದಲ್ಲೆ ಕಳೆದ ವರ್ಷ ಅಮಾನುಷಕೃತ್ಯಗಳ ಗಲಾಟೆಯು ಎದ್ದದ್ದು, ಮತ್ತು ಇದೇ ಕಾರಣದಿಂದ ಅಸಹಕಾರಿತೆಯು ತನ್ನ ಜನ್ಮವನ್ನು ಎತ್ತಿದದ್ದು, ಮತ್ತು ಈ ಅಸಹಕಾರಿತೆಯನ್ನೆ ಲಾಲಾಜಿಯವರು ಪ್ರತಿಪಾದಿಸಿದ್ದರು, ಮತ್ತು ಅದಕ್ಕಾಗಿ ಹೊಸ ಕೌನ್ಸಿಲುಗಳನ್ನು ಕೂಡ ಬಹಿಷ್ಕರಿಸಬೇಕೆಂದು ಒತ್ತಿ ಹೇಳಿದ್ದರು. ಸಾರಾಂಶ, ಅಸಹಕಾರಿತೆಯ ಅಂಗೀಕಾರದ ವಿಷಯವಾಗಿ ಲಾಲಾ ಲಜಪತರಾಯರ ಮನೋಭೂಮಿಯು ಈ ಮೇರೆಗೆ ಉತ್ತು ಸಂಪೂರ್ಣ ತಯಾರಾಗಿದ್ದರೂ ಅವರು ತಮ್ಮ ರಾಷ್ಟ್ರೀಯ ಸಭೆಯ ವ್ಯಾಸಪೀಠದ ಮೇಲಿಂದ ಅಸಹಕಾರಿತೆಯ ಪುರಸ್ಕಾರವನ್ನು ಮಾಡಿಲ್ಲ. ಲಾಲಾಜಿಗಳ ಈ ವರ್ತನವು ಅನೇಕರಿಗೆ ವಿಚಿತ್ರವಾಗಿ ತೋರಬಹುದು. ಆದರೆ ಅವರೇ ತಮ್ಮ ಭಾಷಣದಲ್ಲಿ ಸೂಚಿಸಿದಂತೆ ಈ ವಿಷಯವನ್ನು ಅವರು ಸಭೆಯ ನಿರ್ಣಯದ ಮೇಲೆ ಬಿಟ್ಟುಕೊಟ್ಟಿದ್ದಾರೆ.

ಲಜಪತರಾಯರು ಈ ವಿಷಯವನ್ನು ರಾಷ್ಟ್ರೀಯ ಸಭೆಯ ನಿರ್ಣಯಕ್ಕೆ ಬಿಟ್ಟುಕೊಟ್ಟದ್ದರಿಂದ ಅವರ ವಿನಯವು ಮಾತ್ರ ವ್ಯಕ್ತವಾಗುತ್ತದೆಂದಲ್ಲ, ಜನತೆಯ ನಿಜವಾದ ಮುಖಂಡನಲ್ಲಿ ಬೇಕಾದರೆ ಅವನಲ್ಲಿ ಲೋಕಮತಾನುವರ್ತಿತ್ವವೆಂಬ ಯಾವ ಗುಣವು ಇರಬೇಕಾದ್ದೊ ಅದು ಲಜಪತರಾಯರಲ್ಲಿ ನೆಲೆಗೊಂಡಿದೆ ಎಂಬುದು ಸ್ಪಷ್ಟವಾಗುತ್ತದೆ. ಇಲ್ಲವಾದರೆ, ಕಾಳ ತಾಳೀ ಯನ್ಯಾಯದಿಂದ ಹೆಸರಿಗೆ ತಕ್ಕ ಅಲ್ಪಸ್ವಲ್ಪ ಸಂಕಟಕ್ಕೆ ಒಳಗಾಗಿ ಆ ಮೇಲೆ ಎಲ್ಲಿಯೊ ಒಂದು ಸಾರಿ ರಾಷ್ಟ್ರೀಯ ಸಭೆಯ ಅಧ್ಯಕ್ಷಪದವನ್ನು ಆಕ್ರಮಿಸಿ ಕಾಯಮ ಮುಖಂಡತನದ ಮುದ್ರೆಯನ್ನು ಹೊಡಕೊಂಡು ಕಂಡ ಕಂಡ ಮತಗಳನ್ನು ಪ್ರತಿಪಾದಿಸುವ ಅನೇಕ ಮಹಾಗ್ರಹಿಗಳು ನಾಕಷ್ಟು ಇದ್ದಾರೆ. ಆದರೆ ಅಂಥವರು ಲಾಲಾ ಲಜಪತರಾಯರು ಲೋಕಸತ್ತಾವಾದಕ್ಕೆ ತಮ್ಮ ವಿನಯಪ್ರಧಾನವಾದ ವರ್ತನದಿಂದ ಕೊಟ್ಟ ಈ ಬಹುಮಾನವನ್ನು ಕಂಡು ತಮ್ಮ ಮನಸ್ಸಿನಲ್ಲಾದರೂ ನಾಚದೆ ಇರಲಾರರೆಂದು ನಾವು ನಂಬಿದ್ದೇವೆ.

[illegible]

[illegible]

[illegible] ಸೋಮವಾರ [illegible] ಪ್ರಥಮತಃ ಅಧ್ಯ [illegible] ದಬು ಪ್ರದರ್ಶಕ [illegible] ಸಭೆಯ ಮುಂದಿಟ್ಟರು. ಈ ಠರಾ [illegible] ದುಃಖಾನುಭವದಿಂದ ಮಾಡುವಾಗ ಅವರ [illegible] ಬಿಂದುಗಳು ಪತನವಾದವು. ಠರಾವಿನಲ್ಲಿ [illegible] ಹಿಂದುಸ್ಥಾನದ ರಾಷ್ಟ್ರೀಯ ಸೇವೆಯು [illegible] ಅರ್ಪಿಸಿಲ್ಪಟ್ಟಿತ್ತು. ಅನಂತರ [illegible] ಪಂಜಾಬ ಪ್ರಕರಣದ ಠರಾವು ಮಹತ್ವದ್ದಾಗಿತ್ತು. ಈ ಠರಾವನ್ನು ಸರ್ ಅಬುತೋಷ ಚೌಧರಿಗಳು ಸಭೆಯ ಮುಂದಿಟ್ಟರು. ಕೊಂಗ್ರೆಸ್ ಕಮಿಟಿಯ ಆಧಾರ ಪ್ರತಿಭಿನ ಹಂಟರ ಕಮಿಟಿ ಮತ್ತು ಹಿಂದುಸ್ಥಾನ ಸರಕಾರ ಇವುಗಳ ಬಹುಮತದ ಅಭಿಪ್ರಾಯ ಕುರಿತು ನಿಷೇಧ, ಕೊಮನ್ಸ ಸಭೆಯ ಆಧಾರ ಹಾಗು ಲೊರ್ಡ್ಸ ಸಭೆಯಲ್ಲಿ ನಡೆದ ಅನುಚಿತ ಪ್ರಕಾರದ ಬಗ್ಗೆ ಅದರ ಪ್ರತಿಷೇಧ, ಇತ್ಯಾದಿ ಸಂಗತಿಗಳು ಸದರಿ ಠರಾವಿನಲ್ಲಿ ನಮೂದಾಗಿದ್ದವು. ಈ ಠರಾವಿನ ಮೇಲೆ ಡೆ. ಬಾಪ್ಟಿಸ್ಟಾ, ಹಕೀಮ ಅಜಮಲ್ ಖಾನ, ಪ್ರೊ. ರಾಮಮೂರ್ತಿ ಇತ್ಯಾದಿ ಪುರುಷರ ಭಾಷಣಗಳಲ್ಲದೆ ಕೆಲವು ಸ್ತ್ರೀವಕ್ತೃಗಳ ಭಾಷಣಗಳು ಕೂಡ ಆಗಿ ಅದು ಸರ್ವಾನುಮತದಿಂದ ಪಾಸಾಯಿತು. "ಪಂಜಾಬ ಪ್ರಕರಣದಲ್ಲಿ ದೋಷಿಗಳಾದ ಅಧಿಕಾರಿಗಳನ್ನು ದಂಡಿಸುವುದರಲ್ಲಿ ಬ್ರಿಟಿಷ್ ಕೆಬಿನೆಟು ಸರಿಯಾದ ಪ್ರತಿಕಾರದ ಮಾರ್ಗವನ್ನು ಕೈಕೊಳ್ಳದೆ ಇದ್ದ ಬಗ್ಗೆ ಕೊಂಗ್ರೆಸ್ ಸಭೆಗೆ ಉಂಟಾಗುವ ನಿರಾಶೆ ಮತ್ತು ವಿಷಾದವನ್ನು ವ್ಯಕ್ತಗೊಳಿಸುವ ಇನ್ನೊಂದು ಸ್ವತಂತ್ರ ಠರಾವನ್ನು ಮಿ. ಯತೀಂದ್ರಲಾಲ ಬಾನರ್ಜಿಗಳು ತಂದರು. ಈ ಠರಾವಿನ ಮೇಲೆ ಭಾಷಣಮಾಡುವಾಗ ಅವರು ಮಿ. ನೊರಟನ್ನರಿಗಳ ಇಲ್ಲಿಯ ನೋಕರಶಾಹಿಯ ಬಗ್ಗೆ ಇರುವ ಸಡಿಲು ಧೋರಣವನ್ನು ಸ್ಪಷ್ಟ ಶಬ್ದಗಳಿಂದ ಟೀಕಿಸಿದರು. ಈ ಠರಾವು ಕೂಡ ಪಾಸಾಯಿತು. ಪಂಜಾಬ ಪ್ರಕರಣ ಮತ್ತು ಅಸಹಕಾರಿತೆಯ ವಿಷಯವನ್ನು ಚರ್ಚಿಸಲಿಕ್ಕೆ ಈ ಸ್ಪೆಶಲ್ ಕೊಂಗ್ರೆಸು ಸೇರಿದೆ. ಅವುಗಳಲ್ಲಿ ಅಸಹಕಾರಿತೆಯ ಠರಾವು ಸಭೆಯ ಮುಂದೆ ಸೋಮವಾರ ದಿವಸ ಬಂದಿಲ್ಲ. ಇದರ, ಕಾರಣವೇನೆಂದರೆ, ಅಸಹಕಾರಿತೆಯ ಕಾರ್ಯಕ್ರಮದ ವಿಷಯದಲ್ಲಿ ಮೊದಲಿನಿಂದಲೆ ಮತಭೇದಗಳುಂಟು. ಅವುಗಳನ್ನು ಸರಿಗೊಳಿಸಿಕೊಳ್ಳದೆ ಸಭೆಯಲ್ಲಿ ಅದರ ಠರಾವನ್ನು ತರುವುದು ಪ್ರಶಸ್ತವಲ್ಲ. ಇದೇ ಕಾರಣದಿಂದ ವಿಷಯನಿಯಾಮಕ ಮಂಡಲದಲ್ಲಿ ಈ ಠರಾವನ್ನು ಕುರಿತು ತೀವ್ರವಾದ ಚರ್ಚೆಯು ನಡೆಯಿತು. ಈ ಚರ್ಚೆಯು ಒಂದೇ ಒಂದು ದಿವಸದಲ್ಲಿ ಮುಗಿಯತಕ್ಕದ್ದಲ್ಲ. ಗಾಂಧಿಗಳ ಪಕ್ಷ, ರಾಷ್ಟ್ರೀಯರ ಪಕ್ಷ, ಬಿಝಿನ್ಸರ ಪಕ್ಷ ಈ ಪ್ರಕಾರ ಮೂರು ಪಕ್ಷಗಳು ಈ ವಿಷಯದಲ್ಲಿ ಉಂಟಾಗಿವೆ. ಈ ಪಕ್ಷಗಳಲ್ಲಿ ಕಡೆಯ ಪಕ್ಷವು ಕೊಂಗ್ರೆಸಿನಲ್ಲಿ ಅಲ್ಪ ಸಂಖ್ಯಾಕವಾದರೂ ಅದಕ್ಕೆ ತನ್ನ ಜಾಗೆಯನ್ನು ಕೊಡುವುದು ಕೊಂಗ್ರೆಸಿನವರ ಕರ್ತವ್ಯವಾಗಿದೆ. ಆದ್ದರಿಂದ ಅಸಹಕಾರಿತೆಯ ಈ ವಾಗ್ಯುದ್ಧವನ್ನು ಮೇಲಿನ ಮೂರು ಪಕ್ಷದವರು ಬಹು ಸಹಕಾರಿತೆಯಿಂದಲೆ ನಡಿಸಿಕೊಂಡಿದ್ದರು. ಇರಲಿ, ಈ ಅಸಹಕಾರಿತೆಯ ಕೊನೆಯ ಫಲಿತಾಂಶವನ್ನೂ ಇತರ ವಿಚಾರಗಳನ್ನೂ ಬರುವ ಸಂಚಿಕೆಯಲ್ಲಿ ಸಾಂಗವಾಗಿ ನಿರೂಪಿಸೋಣ. ಅಂತೂ ಈ ಜಾದಾ ರಾಷ್ಟ್ರೀಯ ಸಭೆಯ ಈ ಅಧಿವೇಶನವು ಸಜೀವವಾಗಿಯೆ ಇತ್ತಲ್ಲದೆ, ನಿರ್ಜೀವವಾಗಿದ್ದಿಲ್ಲವೆಂದು ತಿಳಿಸಲು ನಮಗೆ ಸಂತೋಷವಾಗುತ್ತದೆ.

೩. ಹಗೆ ಅಥವಾ ವೈರವು ಮರಣದ ವರೆಗೆ. ಒಂದು ವ್ಯಕ್ತಿಯ ಮೇಲೆ ವೈರವಿದ್ದರೆ ಅದು ಮರಣ ಹೊಂದುವವರೆಗೆ ಆ ವೈರವು ನಿಲ್ಲುತ್ತದೆ. ಅನಂತರ ಆ ವ್ಯಕ್ತಿಯ ಸಂಗಡವೆ ವೈರಭಾವನೆಯು ಕೂಡ ಲಯಹೊಂದುತ್ತದೆ. ಮಹಾಭಾರತದೊಳಗಿನ ಯುದ್ಧಸಮಾಪ್ತಿಯ ನಂತರ ಶೋಕಪರ್ವವನ್ನು ತೆರೆದು ನೋಡಿದರೆ ಈ ಮಾತಿನ ಪ್ರತೀತಿಯು ಸರಿಯಾಗಿ ಬರುತ್ತದೆ. ಯುಧಿಷ್ಠಿರನೂ, ಅವನ ತಮ್ಮಂದಿರೂ ಮೃತರಾದ ಕೌರವರನ್ನು ಕುರಿತು ಶೋಕಿಸಿದ್ದಾರೆ. ಮೊದಲು ಆ ಕೌರವರೇ ಅವರಿಗೆ ವೈರಿಗಳಾಗಿದ್ದರು. ಆದರೆ ಕೌರವರು ಸತ್ತುಹೋದ ಮೇಲೆ ಪಾಂಡವರು ಅವರ ಬಗ್ಗೆ ಅಶ್ರುಮೋಕ್ಷಣವನ್ನು ಮಾಡಲು ಎಂದೂ ಮರೆಯಲಿಲ್ಲ. ಇದು ಉತ್ತಮ ಪುರುಷರ ಲಕ್ಷಣವು. ಅಲ್ಲ, ಸಾಮಾನ್ಯ ಪುರುಷರ ಲಕ್ಷಣವು ಕೂಡ ಇದೇ ಆಗಿದೆ. ಈ ವಿಚಾರಗಳು ಈ ಹೊತ್ತು ಉದ್ಭವಿಸಲು ಕಾರಣವೇನೆಂದರೆ, ಲೋಕಮಾನ್ಯ ಟಿಳಕರು ನಿಧನ ಹೊಂದಿದ ಬಳಿಕ ಇಡೀ ಹಿಂದುಸ್ಥಾನವು (ಅದರಲ್ಲಿ ಅವರ ಮಿತ್ರರೂ, ಶತ್ರುಗಳೂ ಕೂಡ ಇದ್ದಾರೆ.) ಒಂದೇ ಸ್ವರದಿಂದ ಶೋಕಿಸಿತು; ಅವರ ಗುಣಗೌರವವನ್ನು ಹೊಗಳಿತು, ಮತ್ತು ಅವರ ಶಾಶ್ವತಯಾದ ಸ್ಮಾರಕವನ್ನು ಮಾಡಲು ನಿಶ್ಚಯಿಸಿತು. ನಿಧನ ಹೊಂದಿದ ಮಹಾತ್ಮನಿಗೆ ಈ ಮೇರೆಗೆ ಹಿಂದೂಸ್ಥಾನವು ಬಹುಮಾನ ಕೊಡುತ್ತಿರುವಾಗ ಈ ಸಾರ್ವಜನಿಕ ಪ್ರಕಾರದಲ್ಲಿ ಒಂದೆರಡಾದರೂ ಅಪವಾದಗಳಿರಬೇಕೆಂದೊ ಏನೊ, ಧಾರವಾಡದ ಕಲೆಕ್ಟರರು, ಬಂಗಾಲದ್ದೊಳಗಿನ ಒಬ್ಬ ಅಧಿಕಾರಿಗಳು, ಮುಂಬಯಿಯ ಟಾಯ್ಮ್ಸು, ಲಂಡನಿನ ಟಾಯ್ಮ್ಸು, ಯುನಾಯಟೆಡ್ ಇಂಡಿಯಾ, ಸ್ಟೇಟ್ಸ್ಮನ್ ಇತ್ಯಾದಿ ಮೂರು ನಾಲ್ಕು ವ್ಯಕ್ತಿಗಳು ತಮ್ಮ ಅಂತರಂಗದ ಕರಾಳ ವಿಷವನ್ನು ಹೊರಪಡಿಸಲು ಇದೇ ಸಮಯವೆಂದೆಣಿಸಿ ಟಿಳಕರ ಮೇಲಿನ ತಮ್ಮ ಕುತ್ಸಿತ ಭಾವನೆಯನ್ನು ವ್ಯಕ್ತಗೊಳಿಸಿದರು. ಪೈಕಿ ಧಾರವಾಡದ ಕಲೆಕ್ಟರರು ತನ್ನ ಅವ್ಯಾಪಾರವನ್ನು ಬೇಗನೆ ಹೇಗೆ ಒಪ್ಪಿಕೊಂಡರೆಂಬುದು ವಾಚಕರಿಗೆ ಗೊತ್ತೆ ಇದೆ. ಕಲಕತ್ತೆಯ ಸ್ಟೇಟ್ಸಮನ್ ಎಂಬ ಪತ್ರಿಕೆಯು ಟಿಳಕರ ವಿಷಯವಾಗಿ, ಅವರ ನಿಧನದನಂತರ ಒಂದು ಬಹು ಕುತ್ಸಿತವಾದ ಲೇಖವನ್ನು ಬರೆಯಿತು. ಈ ಕಾರಣದಿಂದ ಅಲ್ಲಿಯ ಪಟ್ಟಣಿಗರು ಈ ಪತ್ರವನ್ನು ಬಹಿಷ್ಕರಿಸ ತೊಡಗಿದರು. ಪಟ್ಟಣಿಗರು ಈ ಪತ್ರವನ್ನು ಬಹಿಷ್ಕರಿಸ ಹತ್ತಿದ ಮೇಲೆ, ಅಲ್ಲಿಯ ಕೊರ್ಪೊರೇಶನಿನ (ಮುನ್ಸಿಪಾಲಿಟಿಯ) ಜಾಹಿರಾತು ಅದರಲ್ಲಿ ಬರುವುದು ಯುಕ್ತವಿದ್ದಿಲ್ಲ. ಕಾರಣ, ಈ ಪತ್ರವನ್ನೆ ಜನರು ಓದುವುದಿಲ್ಲವೆಂದಾದ ಮೇಲೆ 'ಜನರ ಮಾಹಿತಿ ಬಗ್ಗೆ' ಎಂತ ಅದರಲ್ಲಿ ಜಾಹಿರಾತನ್ನು ಕೊಡುವುದು ನಿರರ್ಥಕವಾಗುವುದಿಲ್ಲವೆ? ಈ ನಿರರ್ಥಕತೆಯು ಅಲ್ಲಿಯ ಕೊರ್ಪೊರೇಶನಿನ ಮೆಂಬರರ ಮನಸ್ಸಿಗೆ ಗೋಚರವಾಗಿ ಸದರಿ ಪತ್ರಿಕೆಗೆ ಕೊಡುವ ಜಾಹಿರಾತನ್ನು ನಿಲ್ಲಿಸಬೇಕೆಂಬ ಠರಾವನ್ನು ಅವರು ಕೊರ್ಪೊರೇಶನಿನಲ್ಲಿ ತಂದರು. ಮತ್ತು ಅದು ಬಹುಮತದಿಂದ ಪಾಸಾಯಿತು.. ಕೊರ್ಪೊರೇಶನಿನಲ್ಲಿ ಈ ಪ್ರಕಾರ ಬಹಿಷ್ಕಾರವು ಬಿದ್ದ ಬಳಿಕ ಅದೇ ಸಭೆಯಲ್ಲಿ ಹಾಜರಿದ್ದ ಮಿ. ಜೊನ್ಸರು ಪತ್ರದ ಎಡಿಟರು, ಎದ್ದು ತನ್ನ ವಿಷಾದವನ್ನು ವ್ಯಕ್ತಗೊಳಿಸಿದರು, ಲೋಕಮಾನ್ಯರ ಯೋಗ್ಯತೆಯನ್ನು ಒಪ್ಪಿಕೊಂಡರು; ಹಾಗು ತನ್ನ ದೌರ್ಮನಸ್ಯವನ್ನು ಒಪ್ಪಿಕೊಂಡರು. ಸಾರಾಂಶ, ಮಿ. ಜೊನ್ಸರು ತನ್ನ ಪಾಪಕೃತ್ಯಕ್ಕೆ, ನಮ್ಮ ಧರ್ಮಶಾಸ್ತ್ರದ ಭಾಷೆಯಿಂದ ಹೇಳುವುದಾದರೆ ಸಕಾಷ್ಠಿರ ಪ್ರಾಯಶ್ಚಿತ್ತವನ್ನು ತಕ್ಕೊಂಡರು!

೪. ಇತ್ತಲಾಗೆ ನಾಮದಾರ ಸರ್ ಪಿ. ರಾಜಗೋಪಾಲಾಚಾರ್ಯರ ಸವಾರಿ ಇಲ್ಲಿಗೆ ಚಿತ್ತಯಿಸಿದಾಗ ಬೋರ್ಡ ನವುಕರರು ತಮ್ಮ ಸಂಬಳದ ದರಗಳನ್ನು ಹೆಚ್ಚಿಸಬೇಕೆಂದು ಕೇಳಿಕೊಂಡದ್ದಕ್ಕೆ ಅದು ತೀರಾ ಬೋರ್ಡಿನವರ ಕೈಯಲ್ಲಿದೆ ಎಂದು ಅವರು ಸಮದಾಯಿಸಿದರು. ಅನಂತರ ಡಿಸ್ಟ್ರಿಕ್ಟ್ ಬೋರ್ಡಿನವರು ಈ ಕುರಿತು ಒಂದು ಕಮ್ಮಿಟಿಯನ್ನು ಏರ್ಪಡಿಸಿದರು. ಈ ಕಮ್ಮಿಟಿಯ ರಿಪೋರ್ಟು ಇನ್ನೂ ಪರದೆಯೊಳಗಿಂದ ಹೊರಗೆ ಬರಲಿಲ್ಲವಾದರೂ ಸಾಕಷ್ಟು ಉದಾರವಾಗಿಲ್ಲವೆಂದು ಈ ನವುಕರರಲ್ಲಿ ಸಂದೇಹವುಂಟಾಗಿದೆ. ಸರಕಾರದವರು ತಮ್ಮ ನವುಕರರಿಗೆ ಕೊಟ್ಟ ಹಂಗಾಮಿ ದರಗಳೇ ಸಮಾಧಾನಕರವಾಗಿಲ್ಲವೆಂದು ನೊನಗಜೆಟೆಡ್ ಆಫೀಸರುಗಳು ಅಲ್ಲಲ್ಲಿ ಸಭೆಕೂಡಿ ಮೊರೆ ಇಡುತಲಿದ್ದಾರೆ. ಈ ಸರಕಾರಿ ಆಫಿಸರುಗಳಿಗೆ ಬಡ್ತಿ, ಪೆನಶನ್ ಮುಂತಾದ ಅನುಕೂಲತೆಗಳು ಇದ್ದಷ್ಟು ಬೋರ್ಡ ನವುಕರರಿಗೆ ಇಲ್ಲವೆಂದು ಸರ್ವವಿದಿತವಾಗಿದೆ. ಇಂಥ ಸಂದರ್ಭದಲ್ಲಿ ಇಲಾಖೆಯ ಕೆಲಸವು ಸಂಗವಾಗಿ ನಡೆಯುವಂತೆಯೂ 'ಲೋಕಲ್‌ಸೆಲ್ಫ್ ಗವರ್ನಮೆಂಟ್' ಎಂಬದ್ದು ಇತರರ ನಗೆಗೀಡಾಗದಂತೆಯೂ ಈ ಬಡ ನವುಕರರಿಗೆ ತಕ್ಕ ರೀತಿಯಲ್ಲಿ ಎಲ್ಲೊವೆನ್ಸ್‌ಗಳನ್ನು ಕೊಡುವುದು ಅಗತ್ಯ. ದ್ರವ್ಯಾನುಕೂಲವಿಲ್ಲದೆ ಕೈಬಿಗಿದಿದೆ ಎಂದು ಹೇಳುವುದು ಬಹಳ ಸುಲಭ. ಅಥವಾ 'ನಾವು ೭॥ ಅಥವಾ ೮ ರೂಪಾಯಿಗಳಲ್ಲಿ ಸರ್ವಿಸು ಪ್ರಾರಂಭಿಸಲಿಲ್ಲವೇ ಈಗ ೩೦ ಅಥವಾ ೪೦ ರೂಪಾಯಿ ಸಂಬಳ ಕೇಳುವುದೆಂದರೆ ಏನು ಅನಿಷ್ಟ' ಎಂದು ಕೆಲವರಿಗೆ ತೋರಲೂ ಬಹುದು. ಆದರೆ ಆ ೭॥ ರೂಪಾಯಿಯಲ್ಲಿ ಸರ್ವಿಸು ಪ್ರಾರಂಭಿಸುವಾಗ ಅಕ್ಕಿ ಮುಡಿಗೆ ರೂ. ೩॥ಗೆ ಮಿಕ್ಕ ಬೆಲೆ ಇದ್ದಿಲ್ಲ. ಈಗ ಆ ೩॥ ರೂಪಾಯಿಗೆ ಒಂದು ಕಳಸಿಗೆ ಅಕ್ಕಿ ಕೂಡಾ ದೊರೆಯುವುದಿಲ್ಲ ಎಂಬದನ್ನು ಮರೆಯಬಾರದು. ಈಗ ವರ್ಷಾರ್ಧವು ಮುಗಿಯುತ್ತ ಬಂದದರಿಂದ ಜರೂರಿಲ್ಲದ ಯಾವ ಕಾಮಗಾರಿಗಳನ್ನು ಬಾಕಿ ಇಡಬಹುದು, ಅಥವಾ ಯಾವ ಕಾಮಗಾರಿಗಳಿಗೆ ವಿಂಗಡಿಸಿಟ್ಟ ಹಣದಲ್ಲಿ ಖರ್ಚಾಗದೆ ಉಳಿಯಬಹುದು ಎಂಬದು ಈಗ ಗೊತ್ತು ಹಚ್ಚಲು ಸಾಧ್ಯವಿದೆ. ಹೊಸ ವರ್ಷದಲ್ಲಿ ಹೊಸ ಎಕ್ಸೈಸ ಮೇರೆಗೆ ಬೋರ್ಡುಗಳ ದ್ರವ್ಯಾನುಕೂಲತೆಯು ಹೆಚ್ಚಲಿಕ್ಕಿರುವುದರಿಂದ ಈಗ ಅತ್ಯಾವಶ್ಯಕವಿಲ್ಲದ ಕೆಲವು ಕಾಮಗಾರಿಗಳನ್ನಾದರೂ ಬಾಕಿ ಇಟ್ಟು ಹಸಿದ ಈ ಬಡ ನವುಕರರ ಹೊಟ್ಟೆ ತಣಿಸುವ ಉದಾರ ಬುದ್ಧಿಯನು ಬೋರ್ಡುಗಳು ತಳೆಯಬೇಕೆಂದು ಈ ನವುಕರರ ಪರವಾಗಿ ನಾವು ಕೇಳಿಕೊಳ್ಳುತ್ತೇವೆ. ಅಧಿಕಾರವು ನಮ್ಮ ಕೈಗೆ ಇನ್ನೂ ಕಿಂಚಿತ್ತೇ ಬಂದಿರುವಾಗ ದೇಶೀಯರಾದ ನಾವು ನಮ್ಮ ಕೈ ಕೆಳಗಿನ ನವುಕರರ ಗೋಳನ್ನು ತಣಿಸದೆ ಇದ್ದರೆ ವಿಜಾತೀಯ ಬಿರೊಕ್ರಸಿಯು ಅನುದಾರಿಯೆಂದು ಮರುಗುವುದು ನಿರರ್ಥಕವಲ್ಲವೆ?

ಮಂಗಳೂರು.

ಕಲೆಕ್ಟರ ಆಫೀಸಿನ ಶ್ರಿಜರರಾದ ಮಿ. ಎಸ್. ಡಿ. ಸೋಜರು ಕಾರ್ಕಳ ಸ್ಟೇಶನರ ಸಬ್ ಮೆಜಿಸ್ಟ್ರೇಟರಾಗಿ ನೇಮಕವಾಗಿದ್ದಾರೆ.

ಕಳೆದ ತಿಂಗಳಲ್ಲಿ ಮಂಗಳೂರು ಪಟ್ಟಣದಲ್ಲಿ ಒಟ್ಟು ೧೪೧ ಜನನಗಳು ಮತ್ತು ೧೧೭ ಮರಣಗಳು ಇದ್ದವು.

ಬರುವ ಆದಿತ್ಯವಾರ ರಾಷ್ಟ್ರಿಯ ಬಾಲಿಕಾ ಪಾಠಶಾಲೆಯ ಸಭಾಸದನದಲ್ಲಿ ಮಂಗಳೂರ ಆರ್ಯಸಮಾಜದ ಪರವಾಗಿ ಲಾಹೋರಿನ ಶ್ರೀಯುತ ಪಂಡಿತ ಅಮರನಾಥರು "ಶುದ್ಧಿ ಮತ್ತು ಆರ್ಯಸಮಾಜವೆಂದರೇನು" ಎಂಬ ವಿಷಯಗಳನ್ನು ಎತ್ತಿ ಭಾಷಣ ಮಾಡುವರು.

ಗಟ್ಟ ಮೇಲಾದ ಕಡೆಗಳಿಗೆ ಕೂಲಿಯಾಳುಗಳನ್ನು ಒದಗಿಸಿ ಕೊಡುವ "ಯು. ಪಿ. ಎ. ಎಸ್. ಐ. ಸಂಘದವರಿಗೆ ಮಜೂರರನ್ನು ದೊರಕಿಸಿಕೊಡುವ ಸಂಘ"ದ ಮುಲ್ಕಿ ಕಡೆಯ ಏಜಂಟನಾಗಿ ಎ. ಎಸ್. ಲಕ್ಷ್ಮಂಜಿ ಎಂಬವನು ಕಳೆದ ತಾ. ೩೩-೬-೧೮ರಲ್ಲಿ ಕಾಫಿಪ್ಲೆಂಟರ ಮಿ. ಹುಗೊಸಿನ್ ಎಂಬವರಿಗೆ ಪಾವತಿ ಕೊಡಲು ಮಣ್ಣಬೆಟ್ಟುಗ್ರಾಮದ ಮಿ। ಎಸ್ ಪಿಂಟೋರವರು ತನ್ನ ಕೂಡೆ ವಸೂಲು ಕೊಟ್ಟ ರೂ. ೨೫೯—೬—೯ನ್ನು ಸದರಿಯವರಿಗೆ ವಸೂಲು ಕೊಡದೆ ಬಾಕಿ ಮಾಡಿಕೊಂಡದಲ್ಲದೆ ಸಂಘದ ಲೆಕ್ಕವನ್ನು ಬರಕೊಳ್ಳಲು ತಾನು ಇಟ್ಟುಕೊಂಡಿದ್ದ ಕೆಶ್ ಪುಸ್ತಕದಲ್ಲಿ ಆ ಹಣವನ್ನು ಬರೆಯ ಕೊಳ್ಳದೆ ಕರಾರಿನ ಶರ್ತಗಳನ್ನು ಉಲ್ಲಂಘಿಸಿ ಕ್ರಿಮಿನಲ್ ತಪ್ಪನ್ನು ಮಾಡಿದ ಮೊಕದಮೆಯ ವಿಚಾರಣೆಯು ಮಂಗಳೂರು ಸ್ಟೇಶನರಿ ಸಬ್ ಮೆಜಿಸ್ಟ್ರೆಟರಲ್ಲಿ ನಡೆದು ತನಿಖಿ ಬಗ್ಗೆ ಸೆಶ್ಶನಿಗೆ ಕಮ್ಮಿಟ್ ಮಾಡಲಾಗಿತ್ತು. ಇದರ ವಿಚಾರಣೆಯು ಕಳೆದ ಮಂಗಳವಾರ ಮುಗಿದು ಸದರಿ ಏಜಂಟನಿಗೆ ಒಂದುವರೆ ವರ್ಷದ ಕಠಿಣ ಶಿಕ್ಷೆ ಮತ್ತು ರೂ. ೩೦೦ ಜುರ್ಮಾನೆ ವಿಧಿಸಲಾಗಿದೆ.

ಈ ತಿಂಗಳ ಸೆಶ್ಶನಿನಲ್ಲಿ ತನಖಿಯಾದ ಇನ್ನೊಂದು ಮೊಕದ್ದಮೆಯಲ್ಲಿ ಇಲ್ಲಿಯ ಕಂದಕದ ಬದ್ರಿಯ ಮಹಜೀದಿಯಲ್ಲಿ ನಿದ್ದೆಹೋಗುತ್ತಿದ್ದ ಮಂಜಕಂಡಿಯೆಂಬವರ ಶ್ಯಾಲನ್ನು ಕದ್ದ ಹಳೇ ಅಪರಾಧಿಯಾದ ಹಮ್ಮದಬ್ಯಾರಿ ಎಂಬವಗೆ ೩ ವರ್ಷಗಳ ಕಠಿಣ ಶಿಕ್ಷೆಯು ವಿಧಿಸಲಾಯಿತು.

ಫಿಶ್ಶರಿ ಇಲಾಖೆಯು ಪ್ರಯತ್ನದಿಂದ ದಕ್ಷಿಣ ಕನ್ನಡದಲ್ಲಿ ಒಂದು, ಪೂರ್ವ ಕರಾವಳಿಯಲ್ಲಿ ಒಂದು ಹೀಗೆ ಎರಡು ಕಾರ್ಖಾನೆಗಳು ತೆರೆಯೋಣಾಗುವವು. ಇವು ಮೀನು ಕೆಡದಂತೆ ಅವನ್ನು ಡಬ್ಬಿಗಳಲ್ಲಿ ತುಂಬಿಸಿ ಕಳುಹಿಸುವ ವಿಧಾನವನ್ನು ತೋರಿಸಿಕೊಡಲಿಕ್ಕಿವೆ.

ಚತ್ರಕೋಟಿ ರಾಮಶಾಸ್ತ್ರಿಗಳು ವಿಟ್ಲ ಬಾಗಾಯಿತು ಕೃಷಿಕರ ಸಂಘದ ಬಾಬತು ರೂ. ೨೫,೦೦೦ನ್ನು ದುರ್ವಿನಿಯೋಗ ಪಡಿಸಿದರೆಂಬಿತ್ಯಾದಿ ಆರೋಪಣೆಯ ತನಖಿಯು ಸೆಶ್ಶನಿಗೆ ಕಮ್ಮಿಟ್‌ಮಾಡಲಾಗಿತ್ತಷ್ಟೆ. ಸೆಶ್ಶನಿನಲ್ಲಿ ಇದರ ತನಖಿಯಾಗುವ ವರೇಗೆ ಸದರಿ ಶಾಸ್ತ್ರಿಗಳನ್ನು ರೂ. ೧೦೦೦ದ ಎರಡು ಜಾಮೀನುಗಳ ಮೇಲೆ ಬಿಡಲಾಗುವುದೆಂತ ತಿಳಿಯುತ್ತೇವೆ.

ಮಂಗಳೂರ ಮುನ್ಸಿಪಲ್ ಕೌನ್ಸಿಲಿನಲ್ಲಿ ಮುಂದಕ್ಕೆ ೨೧ ಚುನಾಯಿಸಲ್ಪಟ್ಟ ಮೆಂಬರರೂ ೭ ಸರಕಾರದಿಂದ ನೇಮಕವಾದ ಮೆಂಬರರೂ ಕೂಡಿ ಒಟ್ಟಿಗೆ ೨೮ ಮೆಂಬರರುಗಳಿರಬೇಕಾಗಿ ಸರಕಾರದ ಪ್ರಕಟನೆ ಇದೆ.

ಹೊಸ ಕ್ರಮದಂತೆ ಮಂಗಳೂರ ಮುನ್ಸಿಪಲ್ ಕೌನ್ಸಿಲಿಗೆ ಚುನಾವಣೆಯಾಗತಕ್ಕ ಮೆಂಬರಿಕೆಯ ಸ್ಥಾನಕ್ಕೆ ಕೆಂಟೋನ್ಮೆಂಟ್ ವಾರ್ಡಿನಿಂದ ವಕೀಲ ಮಿ. ಜೆ. ಎಚ್. ಎ. ಮಸ್ಕರೇಂಞಾಸ್ ಮತ್ತು ಮಿ. ಫೆಲಿಕ್ಸ ಅಲ್ಬುಕರ್ಕರು, ಜಪ್ಪು ವಾರ್ಡಿಗೆ ಹಂಚುಸಾಹುಕಾರ ಮಿ. ಪಾಸ್ಕಲ ಅಲ್ಬುಕರ್ಕರು ಉಮೇದ್ವಾರರಾಗಿದ್ದಾರೆ ಎಂದು ಕೊಂಕ್ಣಿ ದಿವೆಯು ಪ್ರಕಟಿಸುತ್ತದೆ.

ಮಂಗಳೂರ ರೆವೆನ್ಯೂ ಡಿವಿಜನಲ್ ಆಫಿಸರರಲ್ಲಿ ತನಖಿ ನಡಯುತ್ತಿದ್ದ ಮಂಗಳೂರ ಕೆಥೊಲಿಕ್ ಕೊಒಪರೇಟಿವ್ ಕ್ರೆಡಿಟ್ ಸೊಸೈಟಿಯ ಸೆಕ್ರೆಟರಿಯಾಗಿದ್ದ ಎ. ಯಂ. ಪಿಂಟೋರವರ ಮೇಲಿನ ಮೊಕದ್ದಮೆಯು ವಿಚಾರಣೆಯಾಗಿ, ರೆವೆನ್ಯೂ ಡಿವಿಜನಲ್ ಆಫಿಸರರು ಸರ್ಕಿಟಿಗೆ ಹೋಗುವುದರಿಂದ, ತಾ. ೧೮ಕ್ಕೆ ಮುಲ್ಕಿಯಲ್ಲಿ ತೀರ್ಮಾನಕ್ಕೆ ಬಾಕಿ ಇಡಲಾಗಿದೆ ಎಂದು ತಿಳಿಯುತ್ತೇವೆ.

[illegible]

... ವಿಷಯದಲ್ಲಿ ತಮ್ಮಂತೆ ಮತಸ್ಥರಾಗಿರುವುದರಿಂದ ... ಭಾಷಣದ ಪ್ರಸ್ತಾವನೆಯಲ್ಲಿ ... ಅಧಿವೇಶನದ ... ರಾಷ್ಟ್ರೀಯ ಸಭೆಯ ... ಶಸ್ತ್ರಸನ್ಯಾಸದ ಕಲ್ಪನೆಯೇ ಒದಗಿದುದು ಯೋಗ್ಯವೆಂದು ಹೇಳಿ ... ಕಾಲದ ಚಳವಳಿಯನ್ನು ಈ ರೀತಿಯಾಗಿ ವರ್ಣಿಸಿದ್ದಾರೆ.—

"ಇಂದಿನ ರಾಜಕಾರಣವು ಬಹಳ ಸಪ್ರಶ್ನಾರ್ಥಕವಾಗಿದ್ದು ಜನತೆಯಲ್ಲಿ ಈ ವಿಷಯದಲ್ಲಿ ವಿಶೇಷ ಮತಭೇದಗಳು ಇರಲಿಲ್ಲ. ಹೀಗಿದ್ದರೂ ಮಾರ್ಗ ... ಎರಡು ಕೈಗಳನ್ನು ಜೋಡಿಸಿ "ದೇಹಿ" ಎಂದು ಸರಕಾರದೊಡನೆ ಬೇಡಿಕೊಳ್ಳುವ ದಿನಗಳು ಆಗಲೇ ಹಿಂದು ಹೋಗಿದ್ದವು. 'ವಿನಯದಿಂದ ಮನವಿ ಮಾಡುವ' ಕಾಲವೂ ದಾಟಿ ಹೋಯಿತು. ಶಾಂತರೀತಿಯ, ಆದರೆ ಬಲವಾದ ಮತ್ತು ಗಂಭೀರವಾದ ಮುಷ್ಟಿಯ ಬಲದಿಂದ ನಮ್ಮ ಸವಲತ್ತುಗಳನ್ನು ಪಡೆಯುವ ಸಮಯವು ಹತ್ತಿರ ಬಂದಿದೆ. ಜನರ ಮನಸ್ಸು ಈ ಕಾಲದಲ್ಲಿ ಭಯಂಕರವಾದ ಒಂದು ಬಗೆಯ ಪ್ರಸವವೇದನೆಯನ್ನು ಅನುಭವಿಸುತ್ತಿದೆ. ಎಂಗ್ಲೊ ಇಂಡಿಯನ್ ಪತ್ರಿಕಾಕಾರರು ಈ ಪ್ರಸವದಲ್ಲಿ ಅನ್ಯಾಯ ಕ್ರಾಂತಿಯ ಮೊಳಕೆ ಬೆಳೆಯುತ್ತಿರುವುದೆಂದು ಜ್ಯೋತಿಷ್ಯವನ್ನು ಹೇಳುತ್ತಿದ್ದಾರೆ. ಅನೇಕರು 'ಕ್ರಾಂತಿ' ಎಂಬ ಶಬ್ದ ಕಿವಿಗೆ ಬಿದ್ದೊಡನೆ ಬೆಚ್ಚಿಬೀಳುತ್ತಿದ್ದಾರೆ. ಬರಿ ಶಬ್ದ ಮಾತ್ರದಿಂದ ನನ್ನ ಎದೆ ತಲ್ಲಣಿಸುವುದಿಲ್ಲ. ಕ್ರಾಂತಿಯ ಭಯಂಕರವಾದ ಗ್ರಹಣ ಸ್ಪರ್ಶವು ದೇಶಕ್ಕೆ ಉಂಟಾಗಿದೆ ಎಂಬುದು ನಿರ್ವಿವಾದ. ಕ್ರಾಂತಿ ದಾಹದಿಂದ ಪೂರ್ಣಗ್ರಾಸವಾಗಿದೆ ಎಂದರೂ ಅನ್ನಬಹುದು. ಯಾಕೆಂದರೆ ಈ ಕ್ರಾಂತಿಯಲ್ಲಿ ಧರ್ಮ, ಸಮಾಜ, ನೀತಿ, ಶಿಕ್ಷಣ, ಅರ್ಥಸಾಧನ, ರಾಜಕಾರಣ ಇವುಗಳೆಲ್ಲವೂ ಸೇರಿಕೊಂಡಿವೆ. ಕ್ರಾಂತಿಯು ನಮಗೆ ಸ್ವಾಭಾವಿಕವಾಗಿ ಬಂದಿಲ್ಲ. ಸ್ವಭಾವತಃ ನಾವು ಮಂದಗಾಮಿಗಳು. ಆದರೆ ಒಮ್ಮೆ ಚಲಿಸತೊಡಗಿದರೆ ನಮ್ಮ ಹೆಜ್ಜೆ ದೂರದೂರಕ್ಕೆ ಹೋಗುತ್ತದೆ. ಸಜೀವವಾದ ಯಾವ ವಸ್ತುವೂ ಅದರ ಜೀವಮಾನದಲ್ಲಿ ಒಂದಲ್ಲ ಒಂದು ಕಾಲದಲ್ಲಿ ಕ್ರಾಂತಿಯ ಆವೇಶಕ್ಕೆ ಒಳಪಡುತ್ತದೆ. ನಮ್ಮ ಇತಿಹಾಸದಲ್ಲಿ ಇದಕ್ಕೆ ನಿದರ್ಶನಗಳು ಸಾಕಷ್ಟು ಇವೆ. ಆದರೆ ಈಗ ತಲೆದೋರಿದ ಕ್ರಾಂತಿಯು ಪರದೇಶಸ್ಥರಾದ ನಮ್ಮನ್ನು ಆಳುವವರೇ ಜವಾಬ್ದಾರರು. ನಮ್ಮ ಅನುಮತಿ ಇಲ್ಲದೆ, ಅಷ್ಟೇ ಅಲ್ಲ ಕೆಲವು ವೇಳೆ ನಮ್ಮ ಇಚ್ಛೆಗಳಿಗೆ ಪ್ರತಿಕೂಲವಾಗಿ ನಮ್ಮ ಸಾಮಾಜಿಕ ಜೀವನದಲ್ಲಿ ಸಾಂಪತ್ತಿಕ ನೂತನ ವಿಧಾನಗಳನ್ನು ತಂದೊಡ್ಡಿ ನಮ್ಮ ಜೀವನವನ್ನು ವಿಲಕ್ಷಣವಾಗಿ ಮಾರ್ಪಡಿಸಿದವರು ಅವರೇ. ಅಂಥಾ ಮಾರ್ಪಾಡುಗಳನ್ನು ನಾವು ಬಯಸಲೂ ಇಲ್ಲ, ಕೇಳಿದ್ದೂ ಇಲ್ಲ. ತಮ್ಮ ಸ್ವಕಾರ್ಯದ ಪೂರ್ತಿಗಾಗಿ ಮತ್ತು ಸ್ವಪ್ರಯೋಜನಕ್ಕಾಗಿ ಅವರು ಈ ಬದಲಾವಣೆಗಳನ್ನು ತಂದೊಡ್ಡಿದರು. ಈ ಸಾಂಪತ್ತಿಕ ಪರಿವರ್ತನೆಗಳೊಂದಿಗೆ ಅವರ ಶಿಕ್ಷಣಪದ್ಧತಿ, ಅವರ ವರ್ತಮಾನ ಪತ್ರಗಳು, ಅವರ ಕಾಯಿದೆ ಕಾನೂನ, ಅವರ ಕೋರ್ಟು ಕಚೇರಿಗಳು ಮುಂತಾದುವುಗಳನ್ನು ತಂದು ನಮ್ಮ ಜೀವನದ ಧ್ಯೇಯಗಳಲ್ಲಿಯೂ ಸಂಪೂರ್ಣ ಅಲ್ಲವಾದರೂ ಬಹಳ ಮಟ್ಟಿಗೆ ನೂತನವಾದ ಬದಲಾವಣೆಗಳನ್ನು ಅವರು ವಿಧಿಸಿರುವರು. ಇಂಥ ಕೆಲವು ಬದಲಾವಣೆಗಳನ್ನು ತೆಗೆದುಬಿಡಲು ಇಂದು ಕಾಂಕ್ಷಿತರಾಗಿದ್ದರೂ ಅದನ್ನು ನೆರವೇರಿಸಲು ನಮ್ಮಿಂದಲೂ ಸಾಧ್ಯವಿಲ್ಲ, ಅವರಿಂದಲೂ ಕೈಸಾಗದು. ಹೇಗಿದ್ದರೂ ಈ ವಿಲಕ್ಷಣವಾದ ಘಟನೆಯು ಅವರು ಬಿತ್ತಿದ ಬೀಜದ ಫಲವಾಗಿದೆ. ಆದರಲ್ಲಿ ಅವರ ಕೈಚಳಕವೇ ಕಾಣುತ್ತಿದೆ. ಇದಕ್ಕೆ ಈಶ್ವರ ನಾವು ಯಾರನ್ನೂ ದೂರುವುದಿಲ್ಲ. ಒಂದು ವೇಳೆ ದೂರುವುದಾದರೆ ಆ ದೂಷಣೆಗೆ ಅವರೇ ಪಾತ್ರರು. ಅವರಲ್ಲಿಯೇ ಕೆಲವರು ಈಗ ಎರಡು ಹೆಜ್ಜೆ ಹಿಂದೆ ತೆಗೆಯಲು ಆಶಿಸುತ್ತಿದ್ದಾರೆ, ಆದರೆ ಅದನ್ನು ಕೈಸಾಗಿಸುವುದು ಅವರಿಂದಲೂ ನಮ್ಮಿಂದಲೂ ಅಸಾಧ್ಯ. ನಮಗೆ ಇಷ್ಟವಿರಲಿ ಇಲ್ಲದಿರಲಿ ಈಗ ಒಮ್ಮೆ ಈ ಪ್ರವಾಹದ ಸೆಳೆತದ ನಡುವಿನಲ್ಲಿ ಸಿಕ್ಕಿಬಿದ್ದ ಮೇಲೆ ದಡ ಸೇರುವ ... ಎಂದು ನಾವು ಗೊತ್ತು ಹಚ್ಚಲೇ ಬೇಕಾದರೂ ಈಗ ಕಾಲು ಹಿಂದೆಗೆಯುವುದು ಸಾಧ್ಯವಿಲ್ಲ. ನಾವು ದಡ ಸೇರುವ ವರೆಗೆ ಕಾಯೋಣ. ನಾವು ಮುಳುಗುವುದು ಸಾಧ್ಯವಿಲ್ಲವೆಂದು ನಮ್ಮಲ್ಲಿ ವಿಚಾರಶೀಲರಾದವರು ಹೇಳುತ್ತಿದ್ದಾರೆ. ನಮ್ಮ ಧ್ಯೇಯದ ಕೊನೆಗಾಣುವುದಕ್ಕೆ ಸಾಮದಿಂದಲೆ ಸಾಧಿಸಬೇಕೆಂದೂ ನಮ್ಮ ಮತ್ತು ನಮ್ಮನ್ನಾಳುವವರೊಳಗೆ ಇರುವ ನಿಕಟ ಸಂಬಂಧವನ್ನು ಪರಸ್ಪರ ಮೈತ್ರಿ, ಮತ್ತು ಸಹಾಯದ ಮಾರ್ಗಗಳಿಂದ ಬಿಗಿಯಬೇಕೆಂದು ನಾವೆಲ್ಲರೂ ಹೃತ್ಪೂರ್ವಕವಾಗಿ ಬಯಸುತ್ತಿದ್ದೇವೆ. ಆದರೆ ನಮ್ಮನ್ನು ಆಳುವ ಜನಾಂಗದಲ್ಲಿ ಕೆಲವರು ಈ ದೇಶದ ವಿದ್ಯಮಾನಗಳನ್ನು ತಂದಿಕ್ಕಿ ಶಕ್ತಿಯ ಪ್ರಭಾವದಿಂದ ನಮ್ಮನ್ನು ಆಳುತ್ತಿದ್ದೇವೆಂದು ಬಹಿರಂಗವಾಗಿಯೂ ಪ್ರಚ್ಛನ್ನೋಕ್ತಿಗಳಿಂದಲೂ ಹೇಳುತ್ತಿದ್ದಾರೆ, ತಮ್ಮ ಬಾಹುಬಲ ಮತ್ತು ಮಾನಸಿಕ ಶಕ್ತಿಯ ಬಲವಿರುವ ವರೆಗೆ ... ಉಪಾಯಗಳಿಂದಲೂ ನಮ್ಮಲ್ಲಿರುವ ಸರ್ವಸ್ವವನ್ನು ಬಳಸಿಕೊಳ್ಳಬೇಕೆಂದು ಪ್ರತಿಪಾದಿಸುತ್ತಲಿದ್ದಾರೆ. ಹೀಗಾದ್ದರಿಂದ ಬ್ರಿಟಿಷ ಮತ್ತು ... ಲೋಕಸತ್ತೆಯ ಪಕ್ಷವೊಂದು, ಉಷ್ಣಿನ ಬಂಗಿಪಕ್ಷವೊಂದು ಇವುಗಳೊಳಗೆ ಹೋರಾಟವು ತೊಡಗಿದೆ. ಈ ಹೋರಾಟದಲ್ಲಿ ನಮ್ಮ ಅಸ್ತಿತ್ವವನ್ನು ಕಾಪಾಡಿಕೊಳ್ಳಬೇಕಾದರೆ ನಮ್ಮಲ್ಲಿರುವ ಮನುಷ್ಯತ್ವದ ಲಕ್ಷಣಗಳನ್ನೆಲ್ಲ ನಾವು ಪ್ರಯೋಗಿಸಬೇಕಾಗುವುದು. ಎಲ್ಲಕ್ಕಿಂತಲೂ ವಿಶೇಷವಾಗಿ ದಕ್ಷತೆ, ಶಾಂತತೆ, ಸರಳತೆ, ಆಚಾರವಿಚಾರದಲ್ಲಿ ದೃಢತ್ವ — ಈ ಗುಣಗಳು ತಮ್ಮ ಪ್ರಭಾವದಿಂದ ರೂಪುಗೊಂಡ ಕಾಣಿಸಿಕೊಳ್ಳಬೇಕಾಗಿ ಇದೆ."

[illegible] ... ಅಂಗೀಕರಿಸುವುದಕ್ಕೆ ಈ ಗಲಾಟೆ ... ಹಾಕಿದ ಬೆಂಕಿಯ ... ಹೇಳಿ, ನ್ಯಾಯಸ್ಥಾನದಲ್ಲಿ ಇದ್ದರು ಅಪರಾಧಿಗಳ ಮೇಲಿನ ಆರೋಪಗಳನ್ನು ಕಾಯಿದೆಯ ದೃಷ್ಟಿಯಿಂದ ಹೇಗೆ ತೀರ್ಮಾನಿಸಬೇಕಾದೀತು ಎಂಬುದನ್ನು ... ಯವರಿಗೆ ಬುದ್ಧಿ ಹೇಳುವ ತೆರದಲ್ಲಿ ಒಡೇರ ಮೇಲಿನ ಆರೋಪಗಳನ್ನು ಒಂದೊಂದಾಗಿ ಎತ್ತಿ ಹೇಳಿದರು. (೧) ಹಿಂದು, ಮುಸಲ್ಮಾನ, ಸಿಕ್ಖ ಈ ಜನಾಂಗಗಳೊಳಗೆ ಭೇದ ಬುದ್ಧಿಯನ್ನು ಕಲ್ಪಿಸಿದ ತಂತ್ರ ಒಂದು, (೨) ಪಂಜಾಬದಲ್ಲಿ ವೀರಕ್ಷತ್ರಿಯ ಸಂಪ್ರದಾಯದವರು ಬೇರೆ, ವಿದ್ಯಾವಂತರು ಬೇರೆ, ಹಳ್ಳಿವಾಸಿಗಳಿಗೂ ಪಟ್ಟಣಿಗರಿಗೂ ಪರಸ್ಪರ ಸಂಬಂಧವಿಲ್ಲ ಎಂದು ಬೋಧಿಸಿ ವೈಮನಸ್ಸಿನ ಬೀಜ ಬಿತ್ತಿದ ತಂತ್ರ ಒಂದು, (೩) ಪಂಜಾಬದಲ್ಲಿ ಜನರನ್ನು ದಾಖಲುಮಾಡುವುದಕ್ಕಾಗಿಯೂ ಯುದ್ಧ ಸಾಲಕ್ಕೆ ವಂತಿಗೆ ಎತ್ತುವುದಕ್ಕಾಗಿಯೂ ತನ್ನ ಅಧಿಕಾರದ ದುರುಪಯೋಗ ಮಾಡಿದ ಆರೋಪ ಒಂದು, (೪) ಮತ್ತು ಈ ಕೆಲಸದಲ್ಲಿ ದುಷ್ಟವರ್ತನವನ್ನು ಕೈಕೊಂಡು ದುಡುಕಿದ ಪೋಲೀಸ ಮತ್ತು ಮೇಜಿಸ್ಟ್ರೇಟ ಅಧಿಕಾರಿಗಳ ದುಷ್ಕೃತ್ಯಗಳನ್ನು ತಿದ್ದಲು ಯುಕ್ತವಾದ ಬದಲಾವಣೆ ಕಲ್ಪಿಸದೆ ಮತ್ತು ಕೆಲವು ಕಡೆಯಲ್ಲಿ ಗಾಳಿಹಾಕಿದ ಆರೋಪ ಒಂದು, (೫) ರಾಜಕೀಯ ಮುಖಂಡರ ... ಕುಂಟಿದವರಾಗಿದ್ದ ಒಡೇರರ ಕಾಲ ನಿಕೃಷ್ಟವನ್ನು ನಿಷ್ಕಾರಣವಾಗಿ ಪೀಡಿಸಲಿಕ್ಕೆ ಕಾನೂನಿನ ದುರುಪಯೋಗ ಮಾಡಿದ ಆರೋಪ ಒಂದು (೬) ಜಂಗೀಕಾನೂನು ಜಾರಿಗೆ ತರುವುದು ಅತ್ಯಾವಶ್ಯಕವೆಂದು ಇಂಡಿಯಾ ಸರಕಾರದವರಿಗೆ ಮುಂಚೆ ತಿಳಿಸಿ ರಾಜದ್ರೋಹದ ಚಳವಳಿಗಳನ್ನು ಈ ಜಂಗೀಕಾನೂನಿನ ವಿಚಾರಣೆಗೆ ಒಳಪಡಿಸಿದ್ದು ಒಂದು (೭) ವಾಸ್ತವವಾಗಿಯೂ ಜನರು ದಂಗೆ ಎಬ್ಬಿಸಿದ್ದಾಗಲೂ ಆ ಚಳವಳಿಯು ಶಾಂತವಾದ ಮೇಲೆಯೂ ಜನರಿಗೆ ಕಠಿಣ ಶಿಕ್ಷೆಗೆ ಗುರುಪಡಿಸಿ ಬುದ್ಧಿ ಕಲಿಸಬೇಕೆಂಬ ದುರಾಗ್ರಹದಿಂದ ಜಂಗೀ ಕಾನೂನನ್ನು ಅಗತ್ಯವಿಲ್ಲದಾಗಲೂ ದೀರ್ಘಕಾಲದ ವರೆಗೆ ಜಾರಿಯಲ್ಲಿ ಇರಿಸಿದ ಆರೋಪ ಒಂದು (೮) ಪಂಜಾಬದ ಜನರಿಗೆ ಭಯಂಕರವಾದ ಮತ್ತು ಗೌರವಕ್ಕೆ ಹಾನಿಕರವಾದ ರೀತಿಯಲ್ಲಿ ದಂಡಿಸುವುದಕ್ಕೆ ಪ್ರೋತ್ಸಾಹ ಕೊಟ್ಟಾಗಲಿ ಅಥವಾ ದಂಡಿಸಿದ ಕೃತ್ಯಗಳ ಕಡೆಗೆ ಕಣ್ಣು ಅದ್ದು ಹಾಕಿ ಆಗಲಿ ವರ್ತಿಸಿದ ಆರೋಪ ಒಂದು (೯) ಜಲಿಯನವಾಲಾ ಬಾಗದಲ್ಲಿ ಆದ ಭಯಂಕರ ಕೊಲೆಯ ನಂತರ ಅದಕ್ಕೆ ಸೈಗುಟ್ಟಿದ್ದು ಮತ್ತು ಜಂಗೀ ಕಾನೂನನ್ನು ಜಾರಿಗೆ ತರುವುದರಲ್ಲಿ ನಿಷ್ಠುರತೆಯಿಂದ ವರ್ತಿಸಿದವರ ಬೆನ್ನು ತಟ್ಟಿ ಆದರ ಜವಾಬ್ದಾರಿಯನ್ನು ತಾನೇ ವಹಿಸಿದ ಆರೋಪ ಒಂದು, (೧೦) ಪಂಜಾಬದ ಜನರ ಮೇಲೆ ಕಾಯಿದೆ ಸಮ್ಮತವಲ್ಲದ ಬಗೆಯ ದಂಡಗಳನ್ನು ಹೊರಿಸಿದ್ದು (೧೧) ಸಕಾಲದಲ್ಲಿ ಅವ್ಯವಸ್ಥೆಗೆ ಬಲಿಯ ನವಾಲಕ್ಕೆ ತಾನು ಸ್ವತಃ ಹೋಗದೆ ತನ್ನ ಕರ್ತವ್ಯಜ್ಞಾನದ ಶೂನ್ಯತೆಯನ್ನು ವ್ಯಕ್ತಗೊಳಿಸಿದ ತಪ್ಪು ಒಂದು (೧೨) ತಾನು ಪಂಜಾಬವನ್ನು ಬಿಟ್ಟು ಹೋಗುವಾಗ ತನ್ನ ಆಡಳಿತ ಕಾಲದಲ್ಲಿ ಜನಗಳಲ್ಲಿ ನೆಮ್ಮದಿ ತತ್ತ್ವ ತನ್ನ ಮೇಲೆ ವಿಶ್ವಾಸವಿತ್ತು ಎಂದು ತೋರ್ಪಡಿಸುವ ಹಾಗೆ ಬಲಾತ್ಕರಿಸಿ ಮಾನಪತ್ರಗಳನ್ನು ಸಂಗ್ರಹಿಸಿಕೊಂಡದ್ದಲ್ಲದೆ ಆ ಪತ್ರಿಕೆ ಒಂದರಲ್ಲಿ ಪ್ರಥಮ ರಚನೆಯಲ್ಲಿ ಇಲ್ಲದ ಮಾತುಗಳನ್ನು ಕುಂಟ ಪಂಕ್ತಿಯಾಗಿ ಸೇರಿಸುವಂತೆ ತನ್ನ ಕೈಕೆಳಗಿನವರಿಂದ ಕುಯುಕ್ತಿ ನಡಿಸಿದ್ದು. ಈ ರೀತಿಯಾಗಿ ಮುದ್ದೆ ಕಡೆಯ ... ಸರಕಾರ ... ಗಳನ್ನು ಕ್ರಮವಾಗಿ ಎತ್ತಿಕೊಂಡರು ... ರೌಲೆಟ ಕಾನೂನು ರದ್ದುಪಡಿಸುವ ಉದ್ದೇಶದಿಂದ ದಂಡನೀತಿಯನ್ನು ಪ್ರಯೋಗಿಸಲು ಜನಗಳು ಚಳವಳಿ ಎಬ್ಬಿಸಿದ್ದು ತಿರಸ್ಕಾರಾರ್ಹವಾದ ಒಳಸಂಚು ಆಗದೆ, ಆದ ಮೊಟ್ಟಮೊದಲ ಕ್ರಿಮಿನಲ್ ಸ್ವಭಾವದ್ದಲ್ಲವಾಗಿದ್ದರೂ ಸತ್ಯಾಗ್ರಹದ ಚಳವಳಿಯ ನಿಮಿತ್ತ ಆ ರೂಪವನ್ನು ಹೊಂದಿತು. ಈ ಚಳವಳಿಯು ರಾಜದ್ರೋಹ ಮತ್ತು ಬ್ರಿಟಿಷರ ದೇಶದ್ರೋಹದ ಯತ್ನವಾಗಿತ್ತು. ರಾಮನವಮಿಯ ದಿನಾಚರಣೆಯ ಕಾಲದಲ್ಲಿ ಹಿಂದು ಮುಸಲ್ಮಾನರ ಐಕ್ಯಮತ್ಯವನ್ನು ವ್ಯಕ್ತಗೊಳಿಸುವುದಕ್ಕೆ ತೋರಿಸಿದ ಚಿಹ್ನೆಗಳು ಈ ಮನಸ್ಸಾಧನೆಯನ್ನು ಸ್ಪಷ್ಟಗೊಳಿಸುತ್ತಿವೆ ... ಉದ್ಧಟ ವರ್ತನದ ನಿಮಿತ್ತ ಅವರ ಮೇಲೆ ... ಬಿದ್ದದ್ದು ಕೋವಿಯ ಪ್ರಯೋಗ ಮಾಡೋಣವೆ ಜನಗಳು ಕ್ರೋಧಿತರಾಗಿ ... ಬಗೆಯ ಲೂಟಿಮಾಡಿದ್ದು ದಂಗೆಯೇ ಆಗುತ್ತಿದೆ ... ಆಗಲೇ ಅಡಗಿಸದಿದ್ದರೆ ಅದು ಹಬ್ಬಿ ... ಸ್ಥಾನದಲ್ಲಿ ಕೆಲವೆ ... ಯುರೋಪಿಯನರ ... ರಕ್ಷೆ ಸಂಚಕಾರ ತೊಡಬೇಕಾಗಿದ್ದದ್ದರಿಂದ ಕಠಿಣ ಶಾಸ್ತಿಯನ್ನು ಸರಕಾರದವರು ಮಾಡಬೇಕಾಯಿತು. ಜಲಿಯನವಾಲಾದಲ್ಲಿ ಈ ರೀತಿ ಕೊಲೆ ಸುಟ್ಟದ್ದರಿಂದ ಒಮ್ಮೆಯೇ ಎಲ್ಲವೂ ಶಾಂತವಾಯಿತು. ಇದಕ್ಕೆ ಸಹಾಯಕವಾಗಿ ಜಂಗೀಕಾನೂನ ಜಾರಿಗೆ ತರಬೇಕಾಯಿತು. ಇಂಥ ಕಠಿಣ ಪ್ರಸಂಗಗಳಲ್ಲಿ ಸಾಮಾನ್ಯ ರೀತಿಯ ಕಾಯಿದೆ ದೃಷ್ಟಿಯಿಂದ ತುಲನೆ ಮಾಡಲು ಸಾಧ್ಯವಿಲ್ಲ ಎಂದು ಮುಖ್ಯವಾಗಿ ಸರಕಾರದವರು ಹೇಳುವ ಹೇಳಿಕೆಯನ್ನು ಲಾಲಾಜಿಯವರ ಸಭೆಯ ಮುಂದಿಟ್ಟು ಆ ವೇಳೆ ಈ ಕಾರಣಗಳು ಬಲವಾದವುಗಳಲ್ಲ ಎಂದು ತೋರಿಸುವುದಕ್ಕೆ ಬ್ರಿಟಿಷ ಆಳಿಕೆಯ ... ಜನತೆಯ ವಿಶ್ವಾಸದ ... ಶಕ್ತಿಯ ಬುನಾದಿಯ ಮೇಲೆ ಆಧರಿಸಿಲ್ಲ. ರೌಲಟ ಕಾನೂನಿಗೆ ಆಕ್ಷೇಪದ ಚಳವಳಿ ಸತ್ಯಾಗ್ರಹದ ಆಚರಣೆ ಇವು ತಕ್ಕ ... ಸರಕಾರದವರ ಉದ್ಧಟತನವನ್ನು ಮುರಿಯುವುದಕ್ಕೆ ಕ್ರಾಂತಿಯಲ್ಲದೆ ಬೇರೊಂದು ಸಾಧನವಿಲ್ಲೆಂದು ಪ್ರತಿಪಾದಿಸಿದಂತಾಗುತ್ತದೆ. ಇಂಥ ವಿಚಾರ ಕ್ರಮವು ಅಪಾಯಕರವೆಂದು ಲಾಲಾಜಿಯವರು ವಿವರಿಸಿದರು.

(ಮುಂದರಿಸಲಾಗುವುದು)

[illegible]

... ನಾನು ಅನುಭವಿಸುವೆ ... ವರ್ಷಗಳ ಅನುಭವ ... ಪತ್ರಿಕೆಗಳ ಎಡಿಟರಾಗಿ ... ವರ್ಷಗಳ ಅನುಭವ; ಹಿಂದೂದೇಶ ರಾಜಕೀಯ ಪರಿಸ್ಥಿತಿಯ ವಿಚಾರದ ವಿದ್ಯಾರ್ಥಿಯಾಗಿ ಸುಮಾರು ೧೦—೧೫ ವರ್ಷಗಳ ಅನುಭವ—ಇವು ... ಸಾಲದೆಂದು ನಾನು ಹೇಳಿಕೊಳ್ಳಬೇಕೆಂದಿಲ್ಲ. ಆತ್ಮಪ್ರಶಂಸೆ ಮಹಾಪಾಪವೆಂದು ಶಾಸ್ತ್ರವು ಹೇಳುತ್ತಿದೆ. ಕಾಯಿದೆ ಕೌನ್ಸಿಲ ಮೆಂಬರಿಯೆಂದರೆ ನನ್ನ ಹಿತ ರಾಜಕೀಯ ಸ್ವಾತಂತ್ರ್ಯಗಳು ... ಕಡಿದಳಿಸುವೆನು ಎಂಬ ಸ್ವಪ್ರತಿಷ್ಠೆಯ ... ತೋರಿಸಲಿಕ್ಕಾಗಿ ನಾನು ಈ ಚುನಾವಣೆಯಲ್ಲಿ ಪ್ರವೇಶಿಸಿದವನಲ್ಲ. ಪ್ರಜಾಪಕ್ಷದ ಬಹುಮತವಷ್ಟಕ್ಕೆ ಈಗಿನ ಸುಧಾರಣೆಯ ಕಾಯಿದೆ ... ದಿಂದ ನಮಗೆ ದೊರೆತ ಅತ್ಯಲ್ಪವಾದ ಆ ಅಂಶಿಕ ಸ್ವರಾಜ್ಯದಲ್ಲಿ ಕೂಡ ಪ್ರಜಾಪಕ್ಷದ ಮೆಂಬರನಾದವನ ಜವಾಬ್ದಾರಿ ಎಷ್ಟು ದೊಡ್ಡದೆಂಬುದನ್ನು ನನಗೆ ದೊರೆದ ಅಲ್ಪವಾದರೂ ಅನುಭವದಿಂದ ನಾನು ತಿಳಿದವನಾದುದರಿಂದ ನನಗಿರುವ ಆ ಅನುಭವವನ್ನು ... ನಮ್ಮ ಜಿಲ್ಲೆಯ ಪ್ರಜಾಹಿತ ಮತ್ತು ದೇಶಹಿತದ ಕರ್ತವ್ಯದಲ್ಲಿ ತೊಡಗಿಸಲು ಇಚ್ಛಿಸಿ ನಿಮ್ಮ ಮುಂದೆ ಬಂದು ನಿಂತಿರುವೆನು.

ಬ್ರಾಹ್ಮಣವರ್ಗದಲ್ಲಿ ನಾನೇ ದೊಡ್ಡವನೆಂದೂ ಹೆಚ್ಚಾದ ಅನುಭವವುಳ್ಳವನೆಂದೂ ಹೆಮ್ಮೆಯಿಂದ ನಾನೀಗ ಮುಂದೆ ಬಂದವನಲ್ಲ. ವರ್ಗದಾರರ ಸಂಖ್ಯೆಯಲ್ಲಿಯಾಗಲಿ, ವೋಟರುಗಳ ಸಂಖ್ಯೆಯಲ್ಲಿಯಾಗಲಿ, ... ಸಂಖ್ಯೆಯಲ್ಲಿಯಾಗಲಿ ದಕ್ಷಿಣ ಕನ್ನಡದ ಬ್ರಾಹ್ಮಣ ವರ್ಗವು ಇತರ ವರ್ಗಗಳಿಗೆ ಕಡಿಮೆಯದಲ್ಲವೆಂದು ಯಾರೂ ಒಪ್ಪಿಕೊಳ್ಳಲೇ ಬೇಕು. ಅಂತೀ ವಂಗಡದಲ್ಲಿ ನನಗೂ ಹೆಚ್ಚಿನ ವಯೋವೃದ್ಧರೂ ... ಅದಕ್ಕೆ ಪ್ರತಿನಿಧಿತ್ವ ಅನುಭವಶಾಲಿಗಳೂ ಆದವರು ಅನೇಕ ಮಂದಿ ಇಲ್ಲದೆ ಇಲ್ಲ, ಆದರೆ ಅಂತವರೊಬ್ಬರೂ ಮುಂದೆ ಬಾರದೆ ಬ್ರಾಹ್ಮಣ ವರ್ಗಕ್ಕೆ ಸೇರಿದವರೂ ಸೇರದವರೂ ಆದ ನನ್ನ ಅನೇಕ ಮಂದಿ ಮಾನ್ಯ ಸನ್ಮಿತ್ರರು ನನ್ನನ್ನು ಈ ಸಂದರ್ಭದಲ್ಲಿ ಧೈರ್ಯವಾಗಿ ಮುಂದೆ ಬಾರೆಂದು ಕರೆದು ನಿಲ್ಲಿಸಿದುದರಿಂದ, ಅಂತವರ ಆಜ್ಞೆಯನ್ನು ಶಿರಸಾವಹಿಸಿ ನಾನು ಈಗ ಮುಂದೆ ಬಂದಿದ್ದೇನೆ. ಈ ವಿಚಾರದಲ್ಲಿ ಸಂಪೂರ್ಣ ಸಹಾನುಭೂತಿಯಿಂದ ನನ್ನ ಚುನಾವಣೆಯಲ್ಲಿ ನನ್ನ ಪರವಾಗಿ ವೋಟು ಕೊಟ್ಟು ಸರ್ವಪ್ರಕಾರದಿಂದಲೂ ನನಗೆ ಸಹಾಯ ಮಾಡಬೇಕೆಂದು ನನ್ನ ಆ ಬ್ರಾಹ್ಮಣ ಬಂಧುಗಳೂ ಬ್ರಾಹ್ಮಣೇತರ ಸೋದರರೂ ಆದ ನಿಮಗೆಲ್ಲರಿಗೂ ಸಾಮಾನ್ಯವಾಗಿಯೂ ವಿಶೇಷವಾಗಿಯೂ ನನ್ನ ಅರಿಕೆ.

ಮಹಾತ್ಮಾ ಗಾಂಧೀಜೀಯವರ ಅಸಹಕಾರದ ತತ್ವವು ಪ್ರಜೆಗಳಾದ ನಮ್ಮ ಗೌರವವನ್ನು ಕಾಪಾಡಿಕೊಳ್ಳುವುದಕ್ಕೆ ಸರ್ವಪ್ರಕಾರದಿಂದಲೂ ತಕ್ಕುದಾದ ಅಸ್ತ್ರವೆಂಬುದನ್ನು ನಾನು ಒಪ್ಪಿಕೊಳ್ಳುವವನಾದರೂ, ಅದರ ಕಾರ್ಯವನ್ನು ಸಮಸ್ತ ಪ್ರಜೆಗಳೂ ಏಕೀಭವಿಸಿ ಕೈಕೊಳ್ಳದಿದ್ದರೆ ಗಾಂಧೀಜೀಯವರೆಷ್ಟು ಹೇಳಿದರೂ, ಒಬ್ಬಿಬ್ಬರ ಪ್ರಯತ್ನದಿಂದ ಉದ್ದೇಶಿಸಿದ ಲಕ್ಷ್ಯದಲ್ಲೊಂದು ಪಾಲು ಕೂಡ ಫಲವು ಉಂಟಾಗದೆಂದು ನನ್ನ ಅಭಿಮತವಿದೆ. ಮೇಲಾಗಿ ಗಾಂಧೀಜೀಯವರ ಆ ಕಾಯಿದೆ ಕೌನ್ಸಿಲ ಬಹಿಷ್ಕಾರ ವಿಚಾರವು ಉಪಾಯದ ವಿಷಯದಲ್ಲಿಯೂ ನನಗೆ ಏಕಮತವಿಲ್ಲ. ಈ ವಿಚಾರವಾದ ನನ್ನ ಆಶಯವನ್ನು ಮುಂದೆ "ಕಂಠೀರವ"ದಲ್ಲಿ ವ್ಯಕ್ತಗೊಳಿಸಿದ್ದೇನೆ.

ನಮ್ಮ ಜಿಲ್ಲೆಯ ಜೈನ ಬಂಧುಗಳಿಗೆ ಒಂದು ವಿಜ್ಞಾಪನೆ. ಕನ್ನಡ ವಾಙ್ಮಯದ ಏಳಿಗೆಗಾಗಿ ಅವರ ಆ ಪೂರ್ವಿಕರು ಪಟ್ಟಿರುವ ಪರಿಶ್ರಮವು ಅಸ್ಪಷ್ಟವಲ್ಲ. ಈಗಲೂ ತಮ್ಮ ಭಾಷೆಯ ಕೈವಾಡ್ಯಕ್ಕರೆಂದರೆ ಅವರೇ. ಅಂತವರ ಸಂಪೂರ್ಣ ಸಹಕಾರವಿಲ್ಲದ ಕರ್ನಾಟಕ ದೇಶದ ಸಾಮಾನ್ಯ ಸೇವಕನಾದ ನನ್ನಂತಹನ ಮನಸ್ಸಿನಲ್ಲಿ ತೋರಿರುವ ಅವರೂ ಅತ್ಯಾದರದಿಂದ ಅಪೇಕ್ಷಿಸುವ ದೇಶದ ಮತ್ತು ಭಾಷೆಯ ಏಕೀಕರಣ ಪೂರ್ವಕವಾದ ಸೇವೆಯ ಪ್ರಯತ್ನವು ಸರ್ವಥಾ ಸಿದ್ಧಿಯಾಗಲಿಕ್ಕಿಲ್ಲ. ಆದ್ದರಿಂದ ನನ್ನ ಆ ಬಂಧುಗಳೂ ಈ ನನ್ನ ಉದ್ಯಮದಲ್ಲಿ ನನಗೆ ಸರ್ವ ಸಹಾಯವನ್ನು ಮಾಡದೇ ಇರಲಾರರೆಂದು ಹಾರೈಸುತ್ತೇನೆ.

ಮೇಲಣ ಸಂಗತಿಗಳ ಸಂಪೂರ್ಣ ಸಮಾಲೋಚನೆಯಿಂದ, ನಿಮ್ಮೆಲ್ಲರ ಪ್ರತಿನಿಧಿಯಾಗಲು ನಾನು ಅರ್ಹನೆಂಬ ಭಾವನೆ ನಿಮ್ಮಲ್ಲಿ ಉಂಟಾಗದೆ ಇರಲಿಕ್ಕಿಲ್ಲವೆಂದು ನಾನು ನಂಬುತ್ತೇನೆ. ಹಾಗಾದರೆ, ಸಹಾಯ ಮಾಡಿ! ಚುನಾವಣೆಯಲ್ಲಿ ವೋಟು ಕೊಡಿ! ... ಸಹಕರಿಸಿ! ... ಲಾರಿ.

ಇಂತು ವಿಜ್ಞಾಪಿಸುವ,
ತಮ್ಮ ವಿಧೇಯ,
ಕಡೇಕಾರು, 4 9 1920 } ಎಸ್. ರಾಮಗೋಪಾಲಕೃಷ್ಣರಾಯ.

Job work in Typewriting

WILL BE UNDERTAKEN
AT THE
Sharada Press, Mangalore.

ಲೋಕಮಾನ್ಯ ಬಾಳಗಂಗಾಧರ ಟಿಳಕರಿಂದ
ರಚಿಸಲ್ಪಟ್ಟ
ಶ್ರೀ ಭಗವದ್ಗೀತಾ ರಹಸ್ಯ (ಕನ್ನಡ)
ಪ್ರತಿ ಒಂದಕ್ಕೆ ರೂ. 3-6-0 ವಿ. ಪಿ. ಖರ್ಚು ಪ್ರತ್ಯೇಕ.
ಶಾರದಾ ಛಾಪಖಾನೆ, ಮಂಗಳೂರು.

ಎಲ್ಲಾ ಬಗೆಯ ಟೈಪ್‌ರೈಟಿಂಗ್ ಕೆಲಸ
ಶಾರದಾ ಛಾಪಖಾನೆಯಲ್ಲಿ
ಸುಲಭವಾದ ದರಗಳಲ್ಲಿ ಮಾಡಲ್ಪಡುತ್ತದೆ.

|| ಶ್ರೀ ವ್ಯಾಸಪಾಷಶೇಭ್ಯಾಂ ನಮಃ ||
|| ಶ್ರೀಗುರುಭ್ಯೋ ನಮಃ ||

ಶ್ರೀ ಸಂಸ್ಥಾನ ಅನಶಿಕ್ಷ ಸಮ್ಮಂಧಪಟ್ಟ ಶ್ರೀ ರಾಮೇಶ್ವರ, ದ್ವಾರ್ಕೇಶ್ವರ ಇತ್ಯಾದಿ ವಗೆ ಜೀರ್ಣೋದ್ಧಾರದ ಬಗ್ಗೆ ಶ್ರೀ ದೇವಸ್ಥಾನಗಳ ಚಂದಾ ಕಲಿದಿ ಮತ್ತು ಶ್ರೀ ಸಂಸ್ಥಾನದ ಆಯಾಯ ಕ್ಷೇತ್ರಗಳ ಚಾತುರ್ಮಾಸ್ಯ ವ್ರತ ಸಮಯದಲ್ಲಿ ಬಂದಿದ್ದ ಐವೇಜು ಮತ್ತು ತಾ ೩೧—೮—೧೯೨೦ರ ವರೆಗೆ ಬಂದ ಐವೇಜಿನ ತಪಶೀಲು ವಿವರ

ಸಂಖ್ಯ		ಬಂಟವಾಳ ಪೇಟೆಯಿಂದ	ಪ್ರಾಗ್ವಾನ ರೂ ಆ	ವಸೂಲು ರೂ ಆ
		ಕಳೆದ ಸಂಚಿಕೆಯ ಒಟ್ಟು ರೂ	೧೭೪೫—೦	೧೫೩೦—೦
೧	ಮ|ರಾ|ರಾ	ಸವೊಗ್ಗ ಮುರಂಗ್ಯ ಬಾಳಿಗ	೨೫—೦	೨೫—೦
೨	,,	ಬಾಟಕ್ಕ ರಾವ ಚಂದ್ರಶೆಪ್ಪ	೨೫೫—೦	೨೫೫—೦
೩	,,	ನಾರಾಯಣ ಶ್ರೀನಿವಾಸಭಂಡಾರಿ	೨೫—೦	೨೫—೦
೪	,,	ಗಣಪತ್ತಿಪ್ಪ ಪ್ರಭು	೨೫—೦	
೫	,,	ಗಣಪತಿ ವೆಂಕಟೇಶ ಕಾಮ್ತಿ	೮—೦	೮—೦
೬	,,	ಪಿ. ಕೇಟ್ರಾನ್ ಬ್ರದರ್ಸ್	೧೦೧—೦	೧೦೧—೦
೭	,,	ಗುರ್ಪು ಸುಬ್ರಾಯಪ್ರಭು	೧೫೧—೦	೧೫೧—೦
೮	,,	ನಂದಾರ ಅನಂತಸ್ವಾನಭಾಗ	೧೦೧—೦	೧೦೧—೦
೯	,,	ಸುಬ್ಬರು ರಾಮಸ್ವಾಕ	೫೦೫—೦	೫೦೫—೦
೧೦	,,	ಬಕ್ಕೂ ರಾಮಚೆಂದ್ರಬಾಳಿಗ	೫೧—೦	೫೧—೦
೧೧	,,	ಬಾಸೂದ ದಾಮೋದರಬಾಳಿಗ	೧೫—೦	
೧೨	,,	ರಾಮಚಂದ್ರ ಮಂಜುನಾಥಪ್ಪೈ	೨೦೧—೦	೨೦೧—೦
೧೩	,,	ಪಡುಕ್ಕ ವೆಂಕಟೇಶಪ್ರಭು	೫೧—೦	೫೧—೦
೧೪	,,	ಹೆಬ್ಬ ಶೆಟ್ಟಿ ನಾರಾಯಣಪ್ಪೈ	೫೧—೦	೫೧—೦
೧೫	,,	ಪಾಂಡುಬಾಳಿಗ	೨೫—೦	೨೫—೦
೧೬	,,	ವೆಂಕಟ್ರಾಯ ಗಣಪತಿಬಾಳಿಗ	೨೮—೦	೨೮—೦
೧೭	,,	ಅಚ್ಯು ಸುಬ್ರಾಯಪ್ಪೈ	೫೧—೦	೫೧—೦
೧೮	,,	ಚೆಡ್ಡು ಶ್ರೀನಿವಾಸಸ್ವಾಮಿಭಾಗ	೫೧—೪	೫೧—೪
೧೯	,,	ವೆಂಕಟ ಶ್ರೀನಿವಾಸಬಾಳಿಗ	೨೫—೦	೨೫—೦
೨೦	,,	ಮಾಧವ ಅಚ್ಯುತಬಾಳಿಗ	೧೫—೦	೧೫—೦
೨೧	,,	ಶ್ರೀನಿವಾಸ ಅನಂತಬಾಳಿಗ	೨—೦	೨—೦
೨೨	,,	ಹರಿ ಗಣಪತಿರಾಮಶ ಬ್ರದರ್ಸ್	೫೫೫—೦	
೨೩	,	ಅನಂತರಾವ ಚಂದ್ರಪ್ರಭು	೧೧—೦	೧೧—೦
೨೪	,	ಸುಬ್ರಾಯ ಶೇಷಗಿರಿಬಾಳಿಗ	೨೫—೦	೨೫—೦
೨೫	,	ಶ್ರೀನಿವಾಸ ವಾಮನಬಾಳಿಗ	೨೫—೦	೨೫—೦
		ಜುಮಾ ರೂಪಾಯಿ	೪೧೩೩—೪	೩೩೪೩—೪

(ಮುಂದರಿಯುವುದು)

ಉಳ್ಳಾಲ ವೆಂಕಟ್ರಾಯ ಕಿಣಿ,
ಜನರಲ್ ಆಡಳಿತದಾರ
ಶ್ರೀ ಕಾಶೀಮಠ ಸಂಸ್ಥಾನ

ಮಂಗಳೂರು,
ತಾ 7 9 20

ಪತ್ರವ್ಯವಹಾರ.

ಅಯ್ಯಾ,

ಬಂಟರ ಯಾ ನಾಡವರ ಸಂಘದ ಉದ್ದೇಶಗಳಿಗನುಸಾರವಾಗಿ ಒಂದು ಕನ್ನಡ ವೃತ್ತಪತ್ರಿಕೆಯನ್ನೂ ಈ ಮೊದಲೇ ಪ್ರಕಟಿಸಬೇಕಿತ್ತು. ಆದರೆ ಅನೇಕ ಕಾರಣಗಳಿಂದ ಸಂಘವು ಸವ್ಯ ನಿಲಬೇಕಾಯಿತು

ಈಚೆಗೆ ಸಂಘದ ಮೆಂಬರರಲ್ಲಿ ಕೆಲವರ ಒಂದು ಛಾಪಖಾನೆಯನ್ನು ಸ್ಥಾಪಿಸಿ ಪಕ್ಷದ ಯೇ ಕನ್ನಡ ವಾರಪತ್ರಿಕೆಯನ್ನೂ ಸಹ ಪ್ರಕಟಿಸಬೇಕೆಂದಿದ್ದಾರೆ ಯಾ ಛಾಪಖಾನೆಯೇ ಆಗಲಿ ಯಾವ ಪತ್ರಿಕೆಯೆ ಆಗಲಿ ಅದು ದೇಶಸೇವೆಗೂ ಛಾಪಾಸೇವೆಗೂ ಆವಶ್ಯಕವಾದದ್ದೇನೋ ನಿಜ — ಆದರೆ ಮೇಲಿನ ಛಾಪಖಾನೆಯನ್ನು ಸ್ಥಾಪಿಸಿರುವ ಮೆಂಬರರ ಪ್ರಾಮುಖ್ಯ ಉದ್ದೇಶವು ಬಹಳ ಅಸ್ಪಷ್ಟವಾಗಿತ್ತು ಅದನ್ನು ಕಂಪೆನಿಯ ತೆರದಲ್ಲಿಯೇ ನಡೆಸುವರೆಂದು ನಾವು ಗ್ರಹಿಸಿದ್ದೆವು ಈಚೆಗೆ ಪ್ರಕಟಿಸಿರುವ ಛಾಪಖಾನೆಯ ಪ್ರಕಟನೆಯಲ್ಲಿ ಅದರಿಂದ ಸಿಕ್ಕುವ ಲಾಭವು ವಿದ್ಯಾಪ್ರಚಾರದ ಧರ್ಮಕಾರ್ಯಕ್ಕೆ ಕೊಡಲಾದೀತೆಂದು ಇತ್ತು ಇದೀಗ ಸ್ವಾರ್ಥತ್ಯಾಗ ಮೆಂಬರು ಒಪ್ಪಿಕೊಂಡ ಇಂಥಾ ಧರ್ಮಕಾರ್ಯಕ್ಕೆ ಒಪ್ಪಿಗೆ ಕೊಟ್ಟದ್ದು ಅತ್ಯಂತ ಶ್ಲಾಘನೀಯವಾದ ವಿಷಯವಾಗಿರುತ್ತದೆ ಇವರ ಉದಾರ ಬುದ್ಧಿಯು ಇತರ ಮೆಂಬರರಿಗೂ ಆದರಣೀಯವಾಗಿರಲಿ!

6 9 20

ಸ್ವಜಾತಿ ಗೃಹಸ್ಥ

ಉಪ್ಪಿನಂಗಡಿ ತಾಲೂಕಿನ ಗ್ರಾಮಉದ್ಯೋಗಸ್ಥರ ಎಸೋಸಿಯೇಶನ್.

ಅಯ್ಯಾ,

ನಮ್ಮ ಕಲಬಿನ ಸಂಗತಿಯಲ್ಲಿಯೂ ವ ಸಾಫ ಮಾಡತಕ್ಕ ಕೆಲಸಗಳ ಸಂಗತಿಯಲ್ಲಿ ಕೂಡಾ ಯಾವ ಯಾವ ತಿದ್ದುಪಡಿಗಳು ಮಾಡುವುದು ಅಗತ್ಯವೆಂಬ ಸಂಗತಿ ಮೇಲು ಆಫೀಸರರ ಕಡೆ ಕೇಳಿಕೊಳ್ಳುವ ಬಗ್ಗೆ ಆಲೋಚಿಸುವರೆ ಈ ಸಂಘದ ಸಭೆಯು ತಾ 19 9 20ನೇ ಆದಿತ್ಯವಾರ ಶ್ಯಾಮ 2 ಘಂಟೆಗೆ ಪುತ್ತೂರಲ್ಲಿ ಕೂಡಬೇಕೆಂತ ನಿಶ್ಚಯಿಸಿರುವುದರಿಂದ ಆ ತಾರೀಕಿಗೆ ಎಲ್ಲರೂ ತಪ್ಪದೆ ದಯಮಾಡಿ ಬರಬೇಕಾಗಿ ಅಪೇಕ್ಷಿಸುತ್ತೇನೆ

ಪುತ್ತೂರು, ಬಿ ಭವಾನಿಶಂಕರರಾವ್
ತಾ 3 9 1920 ಕಾರ್ಯದರ್ಶಿ

ಅಸಹಕಾರಿತೆಯ ತತ್ವದ ಕುರಿತು ಶ್ರೀಯುತ ಎಮ್. ಎಸ್ ಮಾಧವರಾಯರ ಭಾಷಣ.

ಕಳೆದ ತಾ ೪ನೆ ಶನಿವಾರ ಸಾಯಂಕಾಲ ದೇಶೀಯ ಬಾಲಿಕಾ ಪಾಠಶಾಲೆಯ ವಸಂತಮಂದಿರದಲ್ಲಿ ಅಸಹಕಾರ ತತ್ವವನ್ನು ಕುರಿತು ಚರ್ಚಿಸಲು ಒಂದು ಸಭೆಯು ಸೇರಿತು ಶ್ರೀಯುತ ಎಸ್ ಎಸ್ ಮಾಧವರಾಯರು ಒಂದು ಚಿಕ್ಕ ಭಾಷಣವನ್ನು ಮಾಡಿದರು ಅಸಹಕಾರವು ರಾಜಕೀಯ ಮಾರ್ಗಕ್ಕೆ ವಿರುದ್ಧವಲ್ಲವೆಂದು ಒಪ್ಪಿದರು ಆದರೆ ಅದನ್ನು ಈಗ ಆಚರಿಸುವುದು ಖಂಡಿತವಾಗಿಯೂ ಸಾಧ್ಯವಿಲ್ಲವೆಂದು ಇವರ ಅಭಿಪ್ರಾಯ. ಮಾಧವರಾಯರು ಕೇಳುತ್ತಾರೆ — 'ಖಿಲಾಫತ್ತಿನ ಕುರಿತ ಅಥವಾ ಜಾಲಿಯನ್‌ವಾಲದ ಕೊಲೆಯ ಕುರಿತಾಗಲಿ ನಮ್ಮಲ್ಲಿ ಎಷ್ಟು ಮಂದಿ ನಿಜವಾಗಿ ದುಃಖಪಡುತ್ತಾರೆ? ಎಷ್ಟೋ ಮಂದಿ ವಿದ್ಯಾವಂತರು ಗಳನ್ನು ತೊರೆದಿರುವರು?' ನಮ್ಮ ಜನರಲ್ಲಿ ಈ ವಿಷಯಗಳನ್ನು ಕುರಿತ ನಿಜವಾದ ದುಃಖದ ಭಾವವು ಇಲ್ಲವಂತೆ ಆದ ಪರಿಂದ ಈಗ ಅಸಹಕಾರವನ್ನು ಆಚರಿಸ ಪುದು ಖಂಡಿತವಾಗಿಯೂ ಸಾಧ್ಯವಿಲ್ಲವೆಂದು ಹೇಳಿದರು

ಯಾರ ಖಿಲಾಫತ್ತಿನ ಅಥವಾ ಜಾಲಿಯನ್‌ವಾಲದ ಕೊಲೆಯನ್ನು ಕುರಿತು ಓದಿ ಸರಿಯಾಗಿ ತಿಳಿದುಕೊಂಡಿರುವನೋ ಅವನ ಹೃದಯದಲ್ಲಿ ದುಃಖವಿಲ್ಲವೆಂದರೆ ನಾವು ಒಪ್ಪುವುದಿಲ್ಲ ಪವಿತ್ರವಾದ ತನ್ನ ಧರ್ಮಕ್ಕೆ ವಿರುದ್ಧವಾಗಿ ಸರಕಾರದವರು ನಡೆಸಿದ ಅನ್ಯಾಯವನ್ನು ನೋಡಿ ಯಾವ ಮುಸಲ್ಮಾನನ ಎದೆಯು ನಡುಗುವುದಿಲ್ಲ? ಅನೇಕ ವರ್ಷಗಳಿಂದ ನಮ್ಮ ನೆರೆಹೊರೆಯವರಾಗಿ ಬಂಧುಗಳಾದ ಮುಸಲ್ಮಾನರಿಗೆ ಬಂದ ಆಪತ್ತನ್ನು, ಆದರಲ್ಲೂ ಧರ್ಮಸಂಬಂಧವಾದ ಆಪತ್ತನ್ನು ನೋಡಿ ಯಾವ ಹಿಂದುವು ತಾನೆ ಸುಮ್ಮನಿರ ಬಲ್ಲನು? ಜಾಲಿಯನ್‌ವಾಲದ ಆ ಘೋರ ಕೃತ್ಯವನ್ನು ಕೇಳಿ ದುಃಖಪಡದಿರುವುದೂ ಸಾಧ್ಯವೆ?

ಆದರೆ ಅನೇಕ ಮಂದಿ ಈ ವಿಷಯಗಳನ್ನು ಓದಿ ತಿಳಿದುಕೊಂಡಿಲ್ಲವೆನ್ನಬಹುದು ಇದೂ ಸರಿಯಲ್ಲ ರಾಜಕೀಯ ವಿಷಯಗಳಲ್ಲಿ ನಮ್ಮ ಜನರು ಅಷ್ಟೊಂದು ಉತ್ಸಾಹವನ್ನು ತೋರುವುದಿಲ್ಲವೆಂಬುದು ನಿಜವಾಗಿರಬಹುದು ಆದರೆ ಮತಸಂಬಂಧವಾದ ಈ ವಿಷಯವು ಪ್ರತಿ ಒಬ್ಬ ಮುಸಲ್ಮಾನನ ಕಿವಿಯಲ್ಲಿಯೂ ಬಿದ್ದಿದೆ ಅವನಿಂದ ಪ್ರತಿ ಒಬ್ಬ ಹಿಂದುವೂ ಇದನ್ನು ಕೇಳಿರುವನು ಹಳ್ಳಿಹಳ್ಳಿಗಳಲ್ಲಿ ಕೆಲವರಿಗೆ ಗೊತ್ತಿಲ್ಲದಿರಬಹುದು ಆದರೆ ಸ್ವಲ್ಪ ಕಾಲದಲ್ಲಿಯೆ ಈ ವರ್ತಮಾನವು ಅವರಿಗೂ ಸಿಕ್ಕದೆ ಹೋಗುವಂತಿಲ್ಲ ಅವರ ಹೃದಯದಲ್ಲಿಯೂ ದುಃಖವೂ, ಪಶ್ಚಾತ್ತಾಪವೂ ಕೋಪವೂ ತುಂಬದೆ ಹೋಗ ವಂತಿಲ್ಲ

ವಿದ್ಯೆಯಿಲ್ಲದ ಈ ಹಳ್ಳಿಯ ಜನರ ಆಂಗ್ಲವಿದ್ಯೆಯನ್ನು ಪಡೆದ — ತಮ್ಮ ಧರ್ಮಾಚಾರಗಳನ್ನು ಬಿಟ್ಟ — ಪೌರುಷಹೀನರಾದ — ವಿದ್ಯಾವಂತರೆನ್ನಿಸಿಕೊಳ್ಳುವ ಜನರಿಗಿಂತ ಹತ್ತುಪಾಲು ಹೆಚ್ಚಾಗಿ ದುಃಖಪಡದೆ ಇರವುದಿಲ್ಲ ಬಹು ಮಾನದ ಪದವಿಗಳನ್ನೂ ಬಿರುದುಗಳನ್ನೂ ಬಿಡದೆ ಇರಬಹುದು ಕೌನ್ಸಿಲುಗಳಿಗೆ ಉಮೇದ್ವಾರರಾಗಿ ಎಷ್ಟೋ ಮಂದಿ ನಿಲ್ಲಬಹುದು ವಕೀಲರು ಕೆಲಸವನ್ನು ಬಿಡದಿರಬಹುದು ಆದರೆ ಮಹಾತ್ಮಾ ಗಾಂಧಿಯವರು ಇವರನ್ನೆಲ್ಲ ನಂಬಿಕೊಂಡಿಲವೆಂದು ಸ್ಪಷ್ಟವಾಗಿ ಹೇಳಿರುವರು ವಿದ್ಯೆಯಿಲ್ಲದ ಆ ರೈತರು ಎಂದೆ ವಿಷಯಗಳನ್ನು ತಿಳಿಸಿ ಅವರಿಗೆ ಸತ್ಯಾಗ್ರಹವನ್ನು ಬೋಧಿಸಿದರೆ ಅವರೀಗ ಅಸಹಕಾರಕ್ಕೆ ಜಯವನ್ನು ಹೊಂದಿಸಿ ಕೊಡುವರೆಂಬುದಕ್ಕೆ ಸಂಶಯವಿಲ

ಶ್ರೀಯುತ ಮಾಧವರಾಯರ ಹಾಗಿನ ವಿದ್ಯಾವಂತರಿಗೆ ನನ್ನದೊಂದು ವಿಜ್ಞಾಪನೆ ಇಡೀ ಜನಾಂಗವು ವಿದ್ಯಾವಂತರಿಂದಲೇ ಕೂಡಿರುವುದೆಂದು ನಂಬಲಾಗದು ಕೆಲವರ ಹೃದಯದಲ್ಲಿ ಈ ವಿಷಯಗಳನ್ನು ಕೇಳಿ ಹೆಚ್ಚಿನ ದುಃಖವಿಲ್ಲದುದನ್ನು ನೋಡಿ ಯಾರಲ್ಲಿಯೂ ದುಃಖವಿಲ್ಲವೆನ್ನುವುದು ತಪ್ಪು ಜನಾಂಗಕ್ಕೆ ಬಂದ ಸಂಕಷ್ಟಗಳನ್ನು ಕುರಿತು ವಿದ್ಯೆಯಿಲ್ಲದ ಆ ಹೆಚ್ಚಿನ

ಜನರ ಮುಂದೆ ಸರಿಯಾಗಿ ಇರಿಸುವುದು ವಿದ್ಯಾವಂತರ ಕರ್ತವ್ಯ ವಿಷಯಗಳನ್ನು ಒಂದು ವೇಳೆ ತಿಳಿಯದೆ ಅವರು ವೆದ್ದಬೇಕಾದ ತಮ್ಮ ಕರ್ತವ್ಯವನ್ನು ಮಾಡದೆ ಹೋದರೆ ಆ ತಪ್ಪೆಲ್ಲವೂ ವಿದ್ಯಾವಂತರ ತಲೆಯ ಮೇಲೆ ವೃಥಾ ಅಸಹಕಾರವು ನಿಷ್ಫಲವಾಗಿರುವುದೆಂದು ಹೇಳುತ್ತಲಿರುವದರಿಂದ ಪ್ರಯೋಜನವಿಲ್ಲ ದೇಶದ ಸ್ಥಿತಿಯನ್ನು ದೇಶದ ಎಲ್ಲ ಜನರ ಮುಂದೆ ಸರಿಯಾಗಿ ಇರಿಸುವುದೇ ಮುಖ್ಯವಾದುದು

ಮಂಗಳೂರು,
4-9 1920

ಸಭಿಕರಲ್ಲೊಬ್ಬ.

ಸ್ವೀಕಾರ — ಕಾಸರಗೋಡಿನಿಂದ ಪೋಲಿಸಿನವರ ಅತ್ಯಾಚಾರವನ್ನು ಕುರಿತು ಒಂದು ಲೇಖನವು ನಮ್ಮ ಬಳಿಗೆ ಬಂದಿದೆ ಈ ವಿಷಯದಲ್ಲಿ ಸುಪರಿಂಟೆಂಡೆಂಟ ಸಾಹೇಬರಿಗೆ ಬರಕೊಳ್ಳುವುದು ಪ್ರಥಮ ಕೆಲಸ

ಪತ್ರಕರ್ತ

ಪ್ರಕಟನೆ

ರಾ ಪುಂಡೂರು ಲಕ್ಷ್ಮೀನಾರಾಯಣ ಪುಣಿಂಚತ್ತಾಯರಿಂದ ರಚಿತವಾದ ಭಾಮಿನೀ ಷಟ್ಪದಿ ಪದ್ಯಗಳಿಂದ ಕೂಡಿದ ಲೋಕಮಾನ್ಯರ ಚಿತ್ರಸಹಿತವಾದ ಬಾಲಗಂಗಾಧರಸ್ತವ ಎಂಬ ಪುಸ್ತಕವು ಭಾರತಮಾತೆ ಮತ್ತು ಮಹಾತ್ಮಾ ಗಾಂಧಿ ಇವರ ಚಿತ್ರಗಳಿಂದೊಡಗೂಡಿ ಸಿದ್ಧವಾಗಿರುತ್ತದೆ

ಪುಸ್ತಕದ ಬೆಲೆ ಆಣೆ ೧ ಅಂಚೆವೆಚ್ಚ ಪ್ರತ್ಯೇಕ ವಿ ಪಿ ಯಾಗಿ ಕಳುಹಿಸುವಾಗ ಚಾರ್ಜು ಹೆಚ್ಚಿಗೆ ಬೀಳುವುದರಿಂದ ಪರಸ್ಥಳದವರು ಹತ್ತು ಪುಸ್ತಕಗಳ ಒಳಗೆ ಎಷ್ಟನ್ನಾದರೂ ತರಿಸಿಕೊಳ್ಳುವಲ್ಲಿ ಪುಸ್ತಕದ ಯಾ ಪುಸ್ತಕಗಳ ಬೆಲೆಯ ಸ್ಟಾಂಪನ್ನೂ ಅಂಚೆಯ ಅರ್ಧಾಣೆಯ ಚೀಟನ್ನೂ ಮುಂದಾಗಿ ಕಳುಹಿಸತಕ್ಕದ್ದು ಹೆಚ್ಚಿಗೆ ಬೇಕಾದವರಿಗೆ ಮಾತ್ರ ವಿ. ಪಿ ದ್ವಾರಾ ರವಾನಿಸಲಾಗುವದು

ದೊರೆಯುವ ಸ್ಥಳ —

ಪಿ ಯಲ್ ಪುಣಿಂಚತ್ತಾಯ
ತ್ರಿಶೂಲೇಶ್ವರ ಮಂಗಳೂರು
ಅಥವಾ
ಕೆ ಯಮ್ ದಾಸಪ್ರಭು,
ತೇರಬೀದಿ ಮಂಗಳೂರು

ಪ್ರಖ್ಯಾತಿಪಡೆದ ಎಸ್ ವಿ ಸುಗಂಧಪುಡಿ ನಶ್ಯವು.

ಸಾಧಾರಣ ಪುಡಿ ನಶ್ಯವನ್ನು 1 ವಾರ ಹಾಕಿಕೊಳ್ಳುವವರು ಒಂದಾವತಿ ಇದನ್ನು ಹಾಕಿಕೊಂಡರೆ ಸಾಕು ಎಷ್ಟೊ ಆನಂದವಾಗಿರುವದು ಇದರ ವಾಸವು ಮತ್ತು ಪರಿಮಳವು ಎಷ್ಟು ತಿಂಗಳಾದರೂ ಕೆಡದೆ ಹಾಗೆಯೇ ಇರುವದು ಬಾಟ್ಲಿ 1ಕ್ಕೆ 4 ಆಣೆ ಟಪ್ಪಾಲು ಚಾರ್ಜು 1 3 ವರೆಗೆ 4 ಆಣೆ ಒಂದೆ ಸರ್ತಿ 1 ಬಾಟಿಗಳನ್ನು ತರಿಸಿಕೊಂಡರೆ 1 ಬಾಟಿ ಉಚಿತವು

ಉತ್ತಮ ತರದ ಪುಡಿ ನಶ್ಯವು

ಪ್ರಖ್ಯಾತಿಪಡೆದ ಸಾರವಾದ ಹೊಗೆಸೊಪ್ಪಿನಿಂದ ಅದು ತೆಗದು ಅನುಭವಸ್ಥರಿಂದ ತಯಾರಿಸುವವರಿ ವೆಂದಾವರ್ತಿ ಈ ಪುಡಿಯನ್ನು ಉಪಯೋಗಿಸುವವರು ಬೇರೆ ಪುಡಿ ನಶ್ಯವನ್ನು ನಿಶ್ಚಯವಾಗಿಯೂ ಬಯಸರು ಸೇರು 1ಕ್ಕೆ ರೂ 1 ಟಪಾಲು ಚಾರ್ಜು 4 ಆಣೆ

ಎಸ್ ವಿ ದಂತಚೂರ್ಣವು.

ಇದರ ಉಪಯೋಗದಿಂದ ಹಲ್ಲುಗಳ ಶುಭ್ರವಾಗಿ ಬಿಳುಪಾಗಿ ಪ್ರಕಾಶಿಸುವದಲ್ಲದೆ ಸಕಲ ದಂತರೋಗಗಳನ್ನು ನಿವೃತ್ತಿ ಮಾಡಿ ಹಲ್ಲುಗಳನ್ನು ವಜ್ರದಂತೆ ಗಟ್ಟಿಪಡಿಸುವದು ಡಬ್ಬಿ 1ಕ್ಕೆ ಆಣೆ ಟಪ್ಪಾಲು ಚಾರ್ಜು 3 ಡಬ್ಬಿಗಳ ವರೆಗೆ 4 ಆಣೆ ನಮ್ಮ ಕಂಪನಿಯ ಪ್ರೈಸ್ ಕೆಟಲಾಗಿಗೆ ಬರವರೆ ಉಚಿತವಾಗಿ ಕಳುಹಿಸಿಕೊಡುವೆವು ನಮ್ಮ ವಿಳಾಸ —

ತಂತಿ ವಿಳಾಸ — ವಾಸು, ತಿರುಚಿ

ಎಸ್ ವಾಸು ಅಂಡ್ ಕಂಪನಿ,
ಪಾಲಕೆರೆ ತಿರುಚಿನಾಪಳ್ಳಿ

FOUNTAIN PENS.

ಫೌಂಟನ್ ಪೆನ್ನುಗಳು.

14 ಕೆರೆಟ್ ಚಿನ್ನದ ಮೊನೆಯುಳ್ಳ ಅತ್ಯುತ್ತಮವಾದ ವಿವಿಧ ತರದ ಫೌಂಟನ್ ಪೆನ್ನುಗಳು ಈಗ ತಾನೇ ಬಂದಿವೆ

ಕಾಮತ್ ಸ್ಪೆಷ್ಯಲ್ ಪೆನ್ ಕ್ರಯ ರೂ 9—8—0
,, ಫೌಂಟನ್ ಪೆನ್ 9—0—0

ರಖಂ ತರಿಸುವವರಿಗೆ ಪ್ರತ್ಯೇಕ ದರಗಳು

ಪಿ. ಎಮ್. ಕಾಮತ್ ಎಂಡ್‌ಕೊ
ಕೆಮಿಸ್ಟ್ಸ್, ಮಂಗಳೂರು

50 ರೂಪಾಯಿ ಬಹುಮಾನ

ಈ ಕೆಳಗೆ ದಸ್ಕತು ಮಾಡಿದವರ ಬಾಬ್ತು 111ನೇ ಇಸವಿಯ ವರೆ ಆ ಮೊದಲಿನ 3 ವರ್ಷಗಳ ಆಳಿಗ ಬ್ಯಾನ ಹಣ ಸಂದ ಮತ್ತು ಅವರಿಂದ ಹಣ ವಸೂಲು ಒಂದ ಪ್ರತಿ 200ಪೇಜುಗಳುಳ್ಳ ಲೆಕ್ಕದ ಪುಸ್ತಕಗಳು 4 ಮತ್ತು ಆ ಸಂಬಂಧದ ಇತರ ಹಳೇ ಲೆಕ್ಕದ ಪುಸ್ತಕಗಳು ಇಟ್ಟಿರುವ ಸಣ್ಣ ಸುಂದರವಾದ ಹ್ಯಾಂಡ್ ಬೋಕ್ಸ್ ಇದೇ ಕಳೆದ ಜುಲಾಯಿ 23ರಲ್ಲು ಗಾಡಿಯಲ್ಲಿ ಬರುತ್ತಾ ಗುರುಪ್ಪಾನಕೆರೆಯಲ್ಲೋ ಜಾಮರ್ಗಡಿಯಲ್ಲೋ ಬಿದ್ದುಹೋಗಿರುತ್ತಿದೆ ಇದು ಸಿಕ್ಕಿದವರು ಸ್ವದೇಶಾಭಿಮಾನಿ ಆಫೀಸಿಗೆ ತಂದುಕೊಟ್ಟು ತಿಳಿಸಿದಲ್ಲಿ ಮನಃಪೂರ್ವಕವಾಗಿ ಮೇಲ್ಕಂಡ ಬಹುಮಾನವನ್ನು ಕೆಳಗೆ ದಸ್ಕತು ಹಾಕಿದವರು ಕೊಡುವರು

ISIDORE COLACO,
Wartyhully Estate Saklaspur,
DT HASSAN

The Canara Bank, Limited, Mangalore.

ಕೆನರಾ ಬ್ಯಾಂಕ್ ಲಿಮಿಟೆಡ್, ಮಂಗಳೂರು.

ESTABLISHED JULY 1906.	1906ನೇ ಇಸವಿ ಜುಲಾಯಿ ತಿಂಗಳಲ್ಲಿ ಸ್ಥಾಪಿಸಲ್ಪಟ್ಟಿತು.
Authorised and fully paid up Capital Rs. 300,000-0-0	ಅಧಿಕಾರಗೊಳಿಸಲ್ಪಟ್ಟು ಪೂರ್ಣವಾಗಿ ಕೊಟ್ಟ ಮೂಲಧನವು ರೂ. 300,000—0—0
Reserve and other sinking Funds „ 138,697-7-2	ಕ್ಷೇಮನಿಧಿ ಮತ್ತು ಇತರ ಫಂಡುಗಳು „ 138,697—7—2

THE BANK RECEIVES FIXED, CURRENT ACCOUNT, & SAVINGS BANK DEPOSITS

ಕಾಯಂ ಮತ್ತು ಚಾಲ್ತಿ ಠೇವಣಾತಿಗಳೂ, ಸೇವಿಂಗ್ಸ್ ಬ್ಯಾಂಕ್ ಠೇವಣಾತಿಗಳೂ, ಪಡಕೊಳ್ಳಲ್ಪಡುತ್ತವೆ.

For further particulars apply to the Secretary

☞ ವಿಶೇಷ ಮಾಹಿತಿ ಬಗ್ಗೆ ಸೆಕ್ರೆಟರಿಗಳಿಗೆ ಬರಕೊಳ್ಳುವದು

Canara Bank Ltd.,
Mangalore, 1st September 1920.

K. Venkat Rao,
Secretary

ವಿಲ್ಲಿಯಮ್ಸ್ ಡೆಂಟೋನ್.

ಅನುಭವಸಿದ್ಧ ಅದ್ವಿತೀಯ ಔಷಧ

ಅನೇಕ ಉತ್ತಮವಾದ ವನಸ್ಪತಿ ಔಷಧಗಳಿಂದ ತಯಾರಿಸಿದ "ವಿಲ್ಲಿಯಮ್ಸ್ ಡೆಂಟೋನ್" ಎಂಬ ಈ ದಂತ ಪುಡಿಯನ್ನು ಸಾವಿರಾರು ಜನರು ಉಪಯೋಗಿಸಿ ಸುಖಹೊಂದಿ ತಮ್ಮ ಹಲ್ಲುಗಳನ್ನು ವೃದ್ಧಾಪ್ಯಕಾಲದ ವರೆಗೆ ಭದ್ರವಾಗಿ ಉಳಿಸಿ ಸಂತೋಷದಿಂದ ಜೀವಿಸುತ್ತಾರೆ

ಇದನ್ನು ಅನುನಿತ್ಯ ಪ್ರಾತಃಕಾಲ ಹಲ್ಲುಗಳಿಗೆ ತಿಕ್ಕಿ ಬಾಯಿ ತೊಳೆಯುವದರಿಂದ ಹಲ್ಲುಗಳು ಮುತ್ತಿನಂತೆ ಥಳಥಳಿಸಿ ಬಾಯಿಯ ದುರ್ವಾಸನೆ ಹೋಗಲಾಡಿಸುವದಲ್ಲದೆ, ನಾಲಿಗೆ ಸಸ್ಯಗಾಗುವದೂ ವಸಡಿನಿಂದ ಕೀವು ಮತ್ತು ರಕ್ತ ಹೊರಡುವದೂ, ಹಲ್ಲಿನ ಬುಡದಲ್ಲಿ ಸುಣ್ಣ ಕಟ್ಟುವದೂ, ವಸಡು ಬೀಗಿಕೊಂಡು ಆಹಾರ ತಿನ್ನುವರೆ ಆತಂಕವಾಗಿ ಉಪದ್ರವಾಗುವದೂ, ಖಂಡಿತವಾಗಿ ಗುಣವಾಗುತ್ತವೆ ಅಲುಗಾಡುವ ಹಲ್ಲುಗಳು ಬಲವಾಗಿ ಆಹಾರವನ್ನು ಜಗಿದು ತಿನ್ನುವರೆ ಅನುಕೂಲವಾಗಿ ಹೆಚ್ಚು ಕಾಲ ಬಹುಕಲಿಕ್ಕೆ ಆಸ್ಪದ ಉಂಟಾಗುತ್ತದೆ

ಅನುಭವವೇ ಮುಖ್ಯ

ಗುಣ ವಿಶೇಷ! ಕ್ರಯ ಕಮ್ಮಿ!! ಹುಡಿ ಹೆಚ್ಚು!!!

ಕ್ರಯ ಆಣೆ 5 ಮತ್ತು ಆಣೆ 9

ಪರಸ್ಥಳಗಳಲ್ಲಿ ಏಜಂಟರಾಗಲಪೇಕ್ಷೆಯುಳ್ಳವರು ಕೆಳಗಿನ ವಿಳಾಸಕ್ಕೆ ಬರೆಕೊಳ್ಳುವದು

ಹೋಲ್ ಏಜಂಟ್ — ಜೆ ಎಸ್ ಸೋಜ ಮತ್ತು ಕಂಪೆನಿ,

ಹಂಪನಕಟ್ಟೆ ಮಂಗಳೂರು.

BANK OF MADRAS.

ಮದ್ರಾಸ್ ಬ್ಯಾಂಕ್

ಹೆಡ್ ಆಫೀಸು ಮದ್ರಾಸ್.

ಮೂಲಧನ	ರೂ 75,00,000
ಕ್ಷೇಮನಿಧಿ	45,00,000

ಸೇವಿಂಗ್ಸ್ ಬ್ಯಾಂಕ್.

— ವರ್ಷಕ್ಕೆ ನೇಕಡಾ 4ರ ಬಡ್ಡಿ —

ಇದರಲ್ಲಿ ಠೇವಣಾತಿಗಳು ಕೆಳಗಿನ ಶರ್ತಗಳಲ್ಲಿ ಪಡೆಯಲಾದಾವು

ಒಂದು ವರುಷದ ಅವಧಿಯಲ್ಲಿ ಒಟ್ಟು ರೂ ೨ 000ಕ್ಕೆ ಮಿಗದ ಮೊಬಲಗನ್ನು ಠೇವಣಾತಿಯಾಗಿಡಬಹುದು

ಹೀಗೆ ಠೇವಣಾತಿ ಇಟ್ಟ ಪ್ರತಿ ಹತ್ತು ರೂಪಾಯಿಗಳಿಗೆ ನೇಕಡಾ 4ರಂತೆ ರೂ 10 000ಕ್ಕೆ ಮೀರದ ಮೊಬಲಗಿನ ವರೆಗೆ ಬಡ್ಡಿ ಎಣಿಸಲಾಗುವುದು.

ನಿಬಂಧನೆಗಳ ಪ್ರತಿಗಳನ್ನು ಏರಿಯ ಬ್ಯಾಂಕಿನಿಂದ ಪಡೆಯಬಹುದು

ಸಿ ಎಲ್ ಗೊರ್ಡನ್,

ಏಜಂಟ್ ಮದ್ರಾಸ್ ಬ್ಯಾಂಕ್ ಮಂಗಳೂರು

ಜಗದ್ವಿಖ್ಯಾತವಾದ ಶ್ರೀ ದೇವೀಪ್ರಸಾದ ಕಂಪೆನಿಯ

ಸುಪ್ರಸಿದ್ಧವಾದ ಮಹೌಷಧಗಳು.

" ಧನ್ವಂತರೀ ಬಾಮಾ "

ಶುದ್ಧ ವನಸ್ಪತಿಗಳಿಂದಲೇ ಶಾಸ್ತ್ರೋಕ್ತವಾಗಿ ತಯಾರಿಸಲ್ಪಟ್ಟ ವೇದನಾಹಾರಿ ಮುಲಾಮು ಇದರಿಂದ ವಾತ, ಕಫ ಜಗಿತ ಉಳುಕು ಛಳಿಯ ತಲೆನೋವು, ಸೊಂಟನೋವು ದಿನ ನೋವು ಮುಂತಾದ ಎಲ್ಲಾ ತರದ ವೇದನೆಗಳು ಅತಿ ಶೀಘ್ರದಲ್ಲಿ ಸಂಪೂರ್ಣವಾಗಿ ಗುಣಹೊಂದುವವು ಬಾಟ್ಲಿ ಗಿರ ಕಿಮ್ಮತು ೦—೭—೦ ಒಂದು ಡಜನು ಬಾಟ್ಲಿಗಳಿಗೆ ರೂ ೪—೩—೦

"ಗಜಕರ್ಣಾದ ಮುಲಾಮು"

ಗಜಕರ್ಣ ಉಸಿಬು ಬಚ್ಚಿ, ದದ್ರು ಹುಳಕಡ್ಡಿ ಸೊಂಟಕಜ್ಜಿ ಮುಂತಾದ ಸಮಸ್ತ ವಿಧವಾದ ಚರ್ಮವ್ಯಾಧಿಗಳು ಒಂದೆರಡು ಸಾರಿ ಹಾಗಿಸುವದರೊಳಗೆ ನಿಸ್ಸಂದೇಹವಾಗಿ ಇದರಿಂದ ನಿವಾರಣೆಯಾಗುವವು -ಬಾಟ್ಲಿ ಗಿರ್ಕ್ಕೆ ೦—೪—೦ ಒಂದೆ ಡಜನಿಗೆ ರೂ ೩—೮ ೧

ನಮ್ಮ ಔಷಧಗಳ ಗುಣೋನ್ನತಿಯ ಕುರಿತು ಅನೇಕ ಮಹನೀಯರುಗಳಿಂದಲೂ ಡಾಕ್ಟರುಗಳಿಂದಲೂ ತಿಳಿದಿರುವ ಪತ್ರಗಳು, ಮೆಡಲುದೊರೆತಿರುವವು ಜಾಸ್ತಿಯಾಗಿ ಕೊಂಡುಕೊಳ್ಳತಕ್ಕವರಿಗೂ ವ್ಯಾಪಾರಿಗಳಿಗೂ ಯೋಗ್ಯ ಕಮಿಶನ್ನು ಕೊಡಲಾಗುವದು. ಕ್ಯಾಟಲಾಗಿಗೂ ವಿಶೇಷ ಮಾಹಿತಿಯು ಬಗ್ಗೂ ಪತ್ರವ್ಯವಹಾರ ಮಾಡೀರಿ

ದಿ. ಮ್ಯಾನೇಜರ್ — ಶ್ರೀ ದೇವೀಪ್ರಸಾದ ಕಂಪೆನಿ,

ಪೋಸ್ಟು ಬಾಕ್ಸ್ ನಂ. ೩, ಕಲ್ಕತ್ತ.

" ಟಿಶ್ಯುರೆಮಿಡಿಸ್ "

ಎಂಬ

ಶುಸ್ಲರ್ ಪಂಡಿತರ ಹನ್ನೆರಡು ಲವಣ ಔಷಧಗಳು

೧ ಕಲ್ಕೇರಿಯ ಫ್ಲೋರ್	೭ ನ ಸಲ್ಫ್
೨ ಕಲ್ಕೇರಿಯ ಫೋಸ್	೮ ಮಗ್ನೆಸಿಯ ಫೋಸ್
೩ ಕಲ್ಕೇರಿಯ ಸಲ್ಫ್	೯ ನೇಟ್ರಮ್ ಮ್ಯುರ್
೪ ಫೆರ್ರಮ್ ಫೋಸ್	೧೦ ನೇಟ್ರಮ್ ಫೋಸ್
೫ ಕಾಲಿ ಮ್ಯುರ್	11 ನೇಟ್ರಮ್ ಸಲ್ಫ್
೬ ಕಾಲಿ ಫೋಸ್	12 ಸಿಲಿಸಿಯಾ

ಕ್ರಯ

ಎರಡು ಡ್ರಾಮ್ ಸೈಜ್ D ಶೀಶೆ ಒಂದ		36
ನಾಲ್ಕು ,	C ,	6 ೨
ಒಂದು ಔನ್ಸಿನ	A ,	1 6
ಹನ್ನೆರಡು ಲವಣಗಳ ಎರಡು ಡ್ರಾಮಿನ ಶೀಸೆಗಳುಳ್ಳ ಒಳ್ಳೇ ನಮೂನೆಯ ಚಿಕ್ಕಪೆಟ್ಟಿಗೆಗೆ		3—0—1
ಹನ್ನೆರಡು ಲವಣಗಳ ಒಂದು ಔನ್ಸಿನ ಶೀಸೆಗಳುಳ್ಳ ಪೆಟ್ಟಿಗೆಗೆ ಜೀವರಾಯನ ವೈದ್ಯ ಶಾಸ್ತ್ರ ಪುಸ್ತಕ ಸಮೇತ		10— —೨

ಜೀವರಾಯನ ವೈದ್ಯಶಾಸ್ತ್ರ ಎಂಬ ಹೊಸ ಪುಸ್ತಕವು ಇದು ಮೇಲೆ ಹೇಳಿದ ಟಿಶ್ಯು ಔಷಧಗಳನ್ನು ಸರ್ವಸಾಧಾರಣವಾದ ಎಲ್ಲಾ ರೋಗಗಳಲ್ಲಿ ಉಪಯೋಗಿಸುವ ಕ್ರಮವನ್ನು ಸೂಚಿಸುತ್ತದೆ ಈ ಪುಸ್ತಕವು ಎಲ್ಲರಿಗೂ ಸುಲಭ ದರದಲ್ಲಿ ಸಿಕ್ಕುವಂತೆ ಪ್ರಕಟಿಸಿದ್ದೇವೆ ಕ್ರಯ 12 ಆಣೆ ಮಾತ್ರ ಬೇಕಾಗಿದ್ದವರು ಕೆಳಗಿನ ವಿಳಾಸಕ್ಕೆ ಬರೆಯಬಹುದು

ಎ ಫೆರ್ನಾಂಡಿಸ್,

ಫಳ್ನೀರ್ ಹೋಮಿಯೋಪತಿ ಡಿಸ್ಪೆನ್ಸರಿ, ಮಂಗಳೂರು

ವೈದ್ಯವಿದ್ಯೆ.

ಯಾವುದಾದರೂ ವ್ಯಾಧಿಯು ಇಲ್ಲ ಸುಖನಿಂದಿರುವ ಗಳಿಂದದರೊಡನೆ ಒಬ್ಬ ರಾಜವೈದ್ಯರ,

ವೈದ್ಯವಿದ್ಯೆ

ಎಂಬ ಪುಸ್ತಕವನ್ನು ಈ ಪುಸ್ತಕಕ್ಕೆ ಯಾವ ಖರ್ಚನ್ನೂ ಕೊಡಬೇಡಿರಿ, ವಿಳಾಸವನ್ನು ತಿಳಿಸಿದ ಮಾತ್ರಕ್ಕೆ ಬರುವದು

ವೈದ್ಯವಿದ್ಯೆ

ವಿಳಾಸ—ರಾಜವೈದ್ಯ ನಾರಾಯಣಜಿ ಕೇಶವಜಿ,

27 ಜೈನ, ಬಜಾರು ರೋಡು, ಮದ್ರಾಸು.

ರೂ. 1,000 ಬಹುಮಾನ

ಲೋಕಪ್ರಸಿದ್ಧವಾದ ಸಾಲಾಮಿಸ್ರಿ ಮುರಬ್ಬಾ.

(ಗವರ್ನ್‌ಮೆಂಟಿನಲ್ಲಿ ರಿಜಿಸ್ಟರ್ ಮಾಡಲ್ಪಟ್ಟಿದೆ)

ನಮ್ಮಿಂದ ಕಳುಹಿಸುವ ಬಾಂಗಿಯನ್ನು ತಗ್ಗೆಮಕೊಳ್ಳಾಗ ಡಿ ಮನ್ನಾಲಾಲ್, ಡಿಲ್ಲಿ ವೈದ್ಯರು, ಎಂದು ಮುದ್ರಿಸಿರುವ ಲೇಬಲು ಇರುವದನ್ನು ನೋಡಿ ತಗೆದುಕೊಳ್ಳಿರಿ ಈ "ಸಾಲಾಮಿಸ್ರಿ ಮುರಬ್ಬಾ"ದ ಸೇವನೆಯು— ಶರೀರವು ಕೃಶವಾಗಿ ಇದ್ದರೂ ಸ್ವಪ್ನಸ್ಖಲನವಾದರೂ, ಮೂತ್ರದೊಂದಿಗೆ ಧಾತು ಹೋಗುತ್ತಿದ್ದರೂ, ಕೈಕಾಲು ಸಂಧುಸಂಧುಗಳಲ್ಲಿ ನೋವು ಇದ್ದರೂ ಹಸಿವು ಇಲ್ಲದಿದ್ದರೂ, ಮಲವಿಸರ್ಜನೆಯು ಸರಿಯಾಗಿಗದಿದ್ದರೂ, ಶರೀರದಲ್ಲಿ ರಕ್ತವು ಕೆಟ್ಟುಹೋಗಿದ್ದರೂ, ಈ ಸಾಲಾಮಿಸ್ರೀ ಮುರಬ್ಬಸೇವನೆಯಿಂದ ಗುಣವಾಗಿ ಶರೀರವನ್ನು ಕ್ಷೀಣಿಯಲ್ಲಿಡುವುದು ಮುಖಕ್ಕೆ ಬಲವನ್ನುಂಟುಮಾಡುವುದು, ಹಳೇ ತಲೆನೋವುಗಳನ್ನು ಹೋಗಲಾಡಿಸುವುದು, ಧಾತುವನ್ನು ಶೇಖರಿಸುವುದು ಸೊಂಟ ನೋವು ಸ್ವಲ್ಪಮಾತ್ರವೂ ಇರಲಾರದು ಈ ಸಾಲಾಮಿಸ್ರೀ ಎಂಬುದು ಕಾಬೂಲ್ ಕಂದಾರ್ ದೇಶಗಳಲ್ಲಿ ಬೆಳೆಯುತ್ತದೆ

ಈ ಮುರಬ್ಬಾ ಸೇವನೆಯಿಂದ ಗುಣಹೊಂದಿದ ಅನೇಕ ದೊಡ್ಡ ಮನುಷ್ಯರಿಂದ ರಂಗೂನ್, ಪಿನಾಂಗ್, ಆಫ್ರಿಕ, ಕಲ್ಕತ್ತ, ಬೊಂಬಾಯಿ, ಮದ್ರಾಸ್ ಮೊದಲಾದ ಅನೇಕ ಪ್ರಾಂತ್ಯಗಳಿಂದ ಯೋಗ್ಯತಾಪತ್ರಿಕೆಗಳು ಬಂದಿವೆ ಬೇಕಾದವರು ಅರ್ಧಾಣೆ ಸ್ಟಾಂಪನ್ನು ಕಳಿಸಿ ಅವುಗಳ ಪ್ರತಿಯನ್ನು ನೋಡಬಹುದು ಅವನ್ನು ಯಾರಾದರೂ ಸುಳ್ಳು ಎಂದು ನಿರ್ಧಾರಪಡಿಸಿದ್ದರೆ ಮೇಲೆ ಕಂಡ ಬಹುಮಾನವು ಕೊಡಲ್ಪಡುತ್ತದೆ ನಾವು ಹಾಗೆ ಕೇಳಿದ ಶಿಕಾರಿಯಲ್ಲಿ ಕೋರ್ಟು ಮೂಲಕ ಪಡೆಯಬಹುದು

ಒಂದು ಡಬ್ಬಾ ಮುರಬ್ಬಾವನ್ನು ೧೫ ದಿನಗಳು ಉಪಯೋಗಿಸುವುದರಿಂದ ಪೂರಾ ಗುಣ ಕೊಡುತ್ತ, ೩-೪ ಡಬ್ಬಿಗಳನ್ನು ಉಪಯೋಗಿಸುವುದರಿಂದ ಜನ್ಮಾಂತರದವರೆಗೂ ಗುಣ ಕೊಡುತ್ತ ಉಪಯೋಗಿಸುವ ವಿಧಾನ ಡಬ್ಬಿಯ ಜತೆಯಲ್ಲಿರುವುದು

ಕ್ರಯ ಒಂದು ಡಬ್ಬಿಗೆ ರೂಪಾಯಿ ೨

೧ ಈಗ ಭಾಂಗಿಯ ಚಾರ್ಜು ಹೆಚ್ಚಾಗಿರುವುದರಿಂದ ಒಳ ಡಿಮಾಂಡ್ ಪೆಟ್ಟಿಗೆ ಟಪ್ಪಾಲು ಖರ್ಚು 1 ಡಬ್ಬಿಗೆ 8 ಆಣೆ, ೨ ಯಾ ೩ ಡಬ್ಬಿಗಳಿಗೆ 12 ಆಣೆ

ಡಿ. ಮನ್ನಾಲಾಲ್, ಡಿಲ್ಲಿ ವೈದ್ಯರು,

ಸಾಲಾಮಿಸ್ರಿ ಮುರಬ್ಬ ಡಿಪೋ, ಬೆಂಗಳೂರು ಸಿಟಿ

ಆರ್. ಮಾರ್ಟಿನ್ನರ ಲವ್ಹಾ ಎಣ್ಣೆ.

ಇದರ ವಾಸನೆಯು (ಪರಿಮಳವು) ಬಹಳ ಆನಂದಕರವಾಗಿಯೂ ಇರುವುದಲ್ಲದೆ ಬಹಳ ಹೊತ್ತಿನವರೆಗೂ ಇರುತ್ತದೆ ಈ ಎಣ್ಣೆಯನ್ನು ತಲೆಗೆ ಹಾಕಿಕೊಳ್ಳುವುದರಿಂದ ರಕ್ತಾಗಿರ ತಂಪಾಗಿಯೂ ಸುಖಪ್ರದವಾಗಿಯೂ ಆಗುವುದಲ್ಲದೆ, ಮೆದುಳು ಚೆನ್ನಾಗಿ ಒಳ್ಳೆಯದಾಗಿ ಇದನ್ನು ಪ್ರತಿದಿವಸವೂ ಉಪಯೋಗಿಸುತ್ತಿದ್ದರಿಂದ ಕೂದಲುಗಳು ಕಪ್ಪಾಗಿ ಹೊಳೆಯುವಂತೆ ಮಾಡುತ್ತದೆ ಕೂದಲುಗಳಲ್ಲಿ ಹೇನುಗಳು ಮುಂತಾದವು ನಾಶವಾಗಿ ತಲೆಬುರುಡೆಯನ್ನು ಚೆನ್ನಾಗಿ ಬೆಳೆಯುವಂತೆ ಮಾಡುತ್ತದೆ ಗಡ್ಡ ಮತ್ತು ಮೀಸೆಗಳ ಸಹ ಬೆಳೆಯುತ್ತವೆ ಇದನ್ನು ಉಪಯೋಗಿಸಿದ ಜನರು ಇದಕ್ಕಿಂತ ಉತ್ತಮವಾದ ಎಣ್ಣೆಯು ಬೇರೆ ಇಲ್ಲವೆಂದು ಹೇಳುತ್ತಾರೆ

ಕ್ರಯ ಬಾಟ್ಲಿ ಗಿರ್ಕ್ಕೆ ರೂಪಾಯಿ ೧— —೦

ಆರ್ ಮಾರ್ಟಿನ್ನರ ಕೆಮ್ಮಿನ ಔಷಧ

ಒಂದೇ ಒಂದು ಸೀಸೆ ಔಷಧ, ಎಲ್ಲಾ ವಿಧವಾದ ಕೆಮ್ಮು. ಗೂರಲು ಶ್ವಾಸಕಾಸ, ನೆಗಡಿ, ಗಂಟಲುನೋವು, ಎದೆನೋವುಗಳನ್ನು ಗುಣಪಡಿಸುತ್ತಿರುವಲ್ಲಿ ಯಾಕೆ ಈ ರೋಗಗಳಿಂದ ಇನ್ನೊಂದು ದಿನವು ನರಳುತ್ತಿರಬೇಕು? ಒಂದೇ ಒಂದು ಸೀಸೆಯನ್ನು ತರಿಸಿ ಸೇವನಮಾಡಿ ಪರೀಕ್ಷಿಸಿನೋಡಲಿ ಅನಂತರ ಯಾವ್ಯಾವ ಔಷಧಕ್ಕೂ ಗಮನ ಕೊಡದಿರುವಿರಿ ಎಲ್ಲಾ ವಿಧವಾದ ಕೆಮ್ಮುಗಳಿಗೂ ರಾಮಬಾಣವಾಗಿಯೂ, ಎದೆಗೆ ಬಲಕೊಟ್ಟು ಮೇಲ್ಕಂಡ ರೋಗಗಳು ತಲೆದೋರದಂತೆ ಮಾಡುತ್ತವೆ

೬೦ ಮಾತ್ರೆಗಳ ಸೀಸೆ ಒಂದಕ್ಕೆ ರೂ ೧—೮—೦

ಆರ್ ಮಾರ್ಟಿನ್ನರ ಗ್ಲಿಟೋಡಿಯನ್

ಗಂಡಸರಿಗೂ ಮತ್ತು ಹೆಂಗಸರಿಗೂ ಎಲ್ಲಾ ತರದ ಮೇಹರೋಗಗಳಿಗೆ ಎರಡು ಸೀಸೆಗಳ ಔಷಧಿಯನ್ನು ಉಪಯೋಗಿಸುವುದರಲ್ಲಿ ಸಂಪೂರ್ಣವಾಗಿ ಗುಣವಾಗುತ್ತೆ, ಎಷ್ಟು ದಿವಸಗಳ ಹಳೇ ರೋಗವಾಗಿದ್ದರೂ ಸರಿ ಅಥವಾ ಹೊಸತಾಗಿದ್ದರೂ ಸರಿ, ಬಿಳುಪು ಹೋಗುವುದು, ಉರಿಯುವುದು ಮುಂತಾದ್ದೆಲ್ಲಾ ನಿಂತುಹೋಗುವುದಲ್ಲದೆ ಒಂದಾವರ್ತಿ ಸೇವಿಸಿದ ಮಾತ್ರಕ್ಕೇ ಉರಿಮೂತ್ರವನ್ನು ನಿಲ್ಲಿ ಮೂತ್ರವು ಬಿಳುಪಾಗಿ ನಿರ್ಮಲವಾಗುವುದಲ್ಲದೆ ರೋಗದ ಪಟ್ಟನ್ನೇ ಅದಗಿಸಿಬಿಡುತ್ತದೆ ಹಟಿಧಿಯು ಕಾದಿಯುವುದಕ್ಕೆ ರುಚಿಯಾಗಿಯೂ ನಿರ್ಮಲವಾಗಿಯೂ ಇರುತ್ತೆ ಬೆಲೆ ಸೀಸೆ ಒಂದಕ್ಕೆ ರೂ ೨—೦—೦

ವಿಳಾಸ— ಆರ್. ಡಿ. ಕಟ್ಲಿ ಮತ್ತು ಕಂಪೆನಿ,

ನಂಬ್ರ ಡಿ ಫ್ರಿಯರ್ ರೋಡ್,

ರೈಟ್ ಎಂಡ್ ಕೋ ಹತ್ತಿರ, ಫೋರ್ಟ್, ಮುಂಬಯಿ

R. D Kately & Co
No. D Frere Road,
Near Wright & Co. Fort Bombay

The Canara Banking Corporation, Udipi, (Limited).

	Rs	As	Ps.
Authorized Capital	3,50,000	0	0
Issued and Subscribed Capital	50,000	0	0
Paid-up Capital	41,102	0	9
Deposits	80,424	11	10
Reserve and other Funds	10,551	5	2
Investments on Safe Securities	1,26,249	8	5

Fixed Deposits received at 7% Interest payable quarterly Short term Deposits payable at 15 days' notice after 1 month are received @ 6¼% To meet the dowry amount and other marriage expenses the following system of cumulative deposits are introduced on the following scale

Rs 2 or its multiple	for	13 months	will bring	Rs 27	or proportionately	at the end of	14th month
„ 1	do	24	do	„ 25	do	do	25th „
„ 1	do	45	do	„ 50	do	do	46th „
„ 1	do	84	do	„ 102 8-0	do	do	85th
„ 1	do	132	do	„ 182-8-0	do	do	133rd „

ನೌಕರಿ ಸ್ಥಳದಲ್ಲಿ ಪ್ರಶ್ನೆಗಳು:— ಕೇಳಿ ಮತ್ತು [illegible] ಸಭೆಗೆ [illegible] ಅಧಿಕಾರಿಗಳು [illegible] ಕೇಳಿದ ಪ್ರಶ್ನೆಗೆ ಈ ಬಗೆಯ ಉತ್ತರ ದೊರೆತಿತು:— [illegible] ಕೊಡುವಲ್ಲಿ ಹಿಂದಿನ ಕಮ್ಯುನಿಯರ [illegible] ಅನುಭವದ ಫಲದಿಂದ ಪರೀಕ್ಷೆಯಿಂದಲೂ ಆ ಮೇಲೆ ಸ್ಪರ್ಧೆಯ ಪರೀಕ್ಷೆಗಳಿಗೆ ಪುನಃ ಬರೆದು ಅವರ ಪ್ರತ್ಯುತ್ತರ ಬರಬೇಕಾದ್ದರಿಂದಲೂ ಸಂಬಂಧಪಟ್ಟ [illegible] ಯಲ್ಲಿ ಉನ್ನತವರ್ಗದ ಶ್ರೇಣಿಯವರಿಗೆ ಹಾಕ್ತಿ [illegible] ಕಾಯಂ ತೀರ್ಮಾನವಾಯಿತು. ಅನಂತರ ೨೦ ಮಂದಿಯನ್ನೇ [illegible] ಆ ಪೈಕಿ (ದೇಶೀಯರಾದ) ಖಾನಸಾಹೇಬ ಅಹಮ್ಮದ ಖಾಸರನ್ನು ಅವರ ಕಾಯಮಿನ ೩ನೇ ಗ್ರೇಡ ಪೋಲೀಸ ಇನ್ಸ್‌ಪೆಕ್ಟರರಾಗಿ ಮಾಡಿದೆ. ಪೋಲೀಸ ಇನ್ಸ್‌ಪೆಕ್ಟರ [illegible] ಗ್ರೇಡಿಂದ ಸಬ್ ಇನ್ಸ್‌ಪೆಕ್ಟರ ಕೆಲಸಕ್ಕೆ ಇಳಿಸಿಹಾಕಿದೆ. ೨೦ ಪೋಲೀಸ ಕೋನಸ್ಟೇಬಲರನ್ನು ಯಾವುದೊಂದು ಶಿಕ್ಷೆಗೆ ಗುರಿಪಡಿಸಲಿಲ್ಲ. ಗುಜ್ರಾನವಾಲಾದ ಭದಲೀ [illegible] ಸರ್ದಾರ ಖಾನಾ ಬಹದ್ದೂರ ಮಹಮ್ಮದ ಸುಲ್ತಾನ ಅಹಮ್ಮದ ಇವರು ಬಹಳ ಕಾಲ ಸರಕಾರ ಸರ್ವಿಸಿನಲ್ಲಿದ್ದು ಬಹು ಯೋಗ್ಯರೀತಿಯಿಂದ ಕೆಲಸ ಮಾಡಿ ಆಗಲೇ ಪೆನ್ಶನ್ ಹೊಂದಿದ್ದಾರೆ ಆದರೂ ಅವರಿಗೆ ಸರಕಾರವು ತಮ್ಮ ಅಸಮಾಧಾನವನ್ನು ತಿಳಿಯ ಪಡಿಸಿದೆ.

ಗುಜ್ರಾನವಾಲದ ಡೆಪ್ಯುಟಿಕಮ್ಮಿಶನರ ಲೆಪ್ಟಿನೆಂಟ ಕರ್ನಲ್ ಒಬ್ರಾಯನ್, ಕಸೂರಿನ ಸಬ್‌ಡಿವಿಜನಲ್ ಆಫಿಸರರಾದ ಮಿ| ಮಾರ್ಸಡನ್, ಪಂಜಾಬದ ಡೈರೆಕ್ಟರ್ ಒಫ್ ಎಗ್ರಿಕಲ್ಚರ್ ಆದ ಮಿ| ಎಸ್. ಎಚ್. ಜಾಕೋಬ, ಸಾಯಲಕೋಟಿನ ಬ್ರಿಗೆಡ(ಲಷ್ಕರ್) ದ ಜನರಲ್ ಕೆಂಬೆಲ್, ಕೆಪ್ಟನ್ ಡಾಟನ್, ಕರ್ನಲ್ ಮಾಕ್ರೆ ಇವರಲ್ಲಿ ಕೆಲವರಿಗೆ ಸರಕಾರದ ಅಸಮಾಧಾನವನ್ನು ತಿಳಿಸಿದೆ. ಇನ್ನೂ ಕೆಲವರಿಗೆ ತಿಳಿಸಲಿಕ್ಕೆ ಏರ್ಪಾಡು ಮಾಡಿದೆ. (ಈ ಸಂಗತಿಯು ಈ ಆಫಿಸರರಿಗೆ ಶಿಕ್ಷೆ ಎಂಬ ಸಮಾಚಾರವು ಗೊತ್ತಾಗಲಿಲ್ಲ) ಎಕ್ಸ್ಟ್ರಾ ಅಸಿಸ್ಟೆಂಟ ಕಮ್ಮಿಶನರಾದ ಮಿ| ಶೆನ್‌ಹೀರೊ ಎಂಬವರಿಗೆ ಮಾರ್ಶಲ್ ಲೋ ಕಾಲದಲ್ಲಿ ಶಿಕ್ಷೆ ವಿಧಿಸಲಿಕ್ಕೆ ಇದ್ದ ಅಧಿಕಾರವನ್ನು ಕೂಡಲೇ ತೆಗೆದು ಹಾಕಿದೆ. (ಮಾರ್ಶಲ್ ಲೋ ಪಂಜಾಬದಲ್ಲಿ ತೆಗೆದು ಹಾಕಿದ ನಂತರ ಈ ಹುಕುಂ ಬಂತೊ ಎಂಬುದು ಗೊತ್ತಾಗಲಿಲ್ಲ.) ಅಮೃತಸರದ ಕಿಚ್ಲೆನ್ ಮತ್ತು ಮೊಯ್ನಸ್ ಲಿರ್ವಿಂಗ್ ಎಂಬವರು ಲಷ್ಕರಿ ಅಧಿಕಾರಿಗಳ ಕೈ ಸಾಕಷ್ಟು ಬಿಗಿಹಿಡಿಯದೇ ಇದ್ದದ್ದು ತಪ್ಪು ಎಂದು ಆ ಆಫೀಸರರಿಗೆ ತಿಳಿಸಿದೆ. ಬೊಸವರ್ತ ಸ್ಮಿತ್ ಎಂಬವರಿಗೆ ೧೯೨೧ನೆ ಮಾರ್ಚ ಆಖೈರವರೆಗೆ ಕೆಲಸ ಮಾಡಬೇಕೆಂದು ಮನಸ್ಸಿದ್ದರೂ ಪೆನ್ಶನು ಹೊಂದುವದಕ್ಕೆ ಆದಿಯಾಗಿ ರಜೆ ಮೇಲೆ ಕಳುಹಿಸಲಾಯಿತು. ಜನರಲ್ ಡಾಯರನ ವ್ಯವಹಾರ ಮೊದಲೇ ಆಗಿದೆ. ಜನರಲ್ ಬೆಯ್ನ್ಸನ ಕೃತ್ಯವನ್ನು ಮೊದಲೇ ಅವಲೋಕನೆಗೆ ಗುರಿಪಡಿಸಿದ್ದು ಇನ್ನು ಮುಂದೆ ಏನು ಮಾಡಲಿಕ್ಕೂ ಸೂಚಿಸುವುದಿಲ್ಲವೆಂದು ಲಷ್ಕರ್ ಇಲಾಖೆಯವರು ಬರೆಯುತ್ತಾರೆ. ಇನ್ನು ಮುಂದೆ ಇಂಥಾ ಕೃತ್ಯಗಳು ನಡೆಯದಂತೆ ಕೂಲಂಕಷ ಸೂಚನೆಗಳು ಲಷ್ಕರಿ ಆಫಿಸರರಿಗೆ ಕೊಡಲಾಗುವುವು. ಲೆಪ್ಟಿನೆಂಟ ಡೊಡಕಿನ್ ಮತ್ತು ಮೆಜರ್ ಕಾರಬಿ ಇವರ ವರ್ತನವು ತಪ್ಪಾಗುವುದಿಲ್ಲ ಎಂದು ಲಷ್ಕರಿ ಇಲಾಖೆಯವರು ನಿರ್ಧರಿಸಿದ್ದಾರೆ. ಕರ್ನಲ್ ಫ್ರೆಂಕ್ ಜೋನ್ಸನ್ ಇವರಿಗೆ ಟೆರಿಟೋರಿಯಲ್ ಫೋರ್ಸ ಎಂಬ ತಂಗಾಮಿ ಸೈನ್ಯದಲ್ಲಿ ಆಫೀಸರನ ಅಧಿಕಾರವಿತ್ತು. ಆ ಸೈನ್ಯವನ್ನು ಈಗ ಬರಖಾಸ್ತು ಮಾಡಿರುವುದರಿಂದ ಈ ಮನುಷ್ಯನಿಗೆ ಏನೂ ಮಾಡಲು ಸಾಧ್ಯವಿಲ್ಲ. ಇದರಿಂದ ಕುರುಕರ ಒಂದು ಗಾದೆಯು ನೆನಪಾಗುತ್ತದೆ:— “ಸೋಕ ಸಾಟ್, ಆದಾಗಯೂ ಸಾಟ್, ದಸ್ಸ ದೇಕಾವು, ದಸ್ಸ ದಿಖಾಕಾವು, ದಸ್ ಕೇಬಾತ್ ಕ್ಯಾ” ಈ ರೀತಿಯಾಗಿ ಆಫೀಸರರಿಗೆ ಶಾಂತಿಯ ಹುಕುಂ ಆಗಿರುವುದು ಬಲು ವ್ಯಸನಕರ. ಡಾ| ಕೆದಾರನಾಥ, ಗುರುವಯಾಳಸಿಂಗ್, ಮಾಂಚೆರಲಾಲ ಇವರನ್ನು ನಿರ್ಬಂಧಿಸಿದ್ದು ಸರಿಯಲ್ಲವೆಂದು ತಮಗೆ ಪಶ್ಚಾತ್ತಾಪ ಕಂಡಿದ್ದರೂ ಈಗ ಏನೂ ಆ ವಿಷಯದಲ್ಲಿ ಮಾಡಲು ಸಾಧ್ಯವಿಲ್ಲವಂತೆ.

ಜಲಿಯನ ವಾಲಾಬಾಗದಲ್ಲಿ ಜೀವನಷ್ಟ, ಅಂಗ ನಷ್ಟ ಹೊಂದಿದ ವಿಷಯದಲ್ಲಿ ಸರಕಾರದವರು ಅಂಥವರಿಗೆ ಅಥವಾ ಅವರ ಉತ್ತರಾಧಿಕಾರಿಗಳಿಗೆ ಕೊಟ್ಟ ದ್ರವ್ಯಸಹಾಯವು ಈ ರೀತಿಯಾಗಿದೆ:— ಮಿಸ್ಸ ಶರ್‌ವುಡ್ ಇವಳ ಸೊತ್ತು ನಾಶವಾದ್ದಕ್ಕೆ ಬದಲಿ ೧೫೦೦ ರೂಪಾಯಿ ಮಾತ್ರ ಪಡೆದ ಕಾರಣ ಅವಳಿಗೆ ೫೦,೦೦೦ ರೂಪಾಯಿ ಸೆಂಕ್ಷನ್ ಮಾಡಲಾಯಿತು. ಜಲಿಯನ್‌ವಾಲಾ ಬಾಗದ ಆಕೃತ್ಯಗಳಿಂದ ಪ್ರಾಣ ಹೊಂದಿದವರಲ್ಲಿ ೪೦ ಜನರಿಗೆ ದ್ರವ್ಯ ಸಹಾಯ ಸರಕಾರದಿಂದ ಕೊಟ್ಟಿದೆ. ಅತೀ ಹೆಚ್ಚು ಮೊಬಲಗು ೫೦೦, ಅತೀ ಕಡಿಮೆಯಾದದ್ದು ೨೦೦ ಸರಾಸರಿ ೩೪೭ರಂತೆ ಸಿಕ್ಕಿದೆ. ಯುರೋಪಿಯನರಿಗೆ ಅತಿ ಹೆಚ್ಚಿನ ಮೊಬಲಗು ರೂ. ೩೦,೦೦೦ ಅತೀ ಕಡಿಮೆ ಎಂದರೆ ರೂ. ೭೫೦, ಸರಾಸರಿ ೭೨೦೦ರಂತೆ ಸಿಕ್ಕಿದೆ. ಈ ಸಂದರ್ಭದಲ್ಲಿ ಮಡಿದ ಯುರೋಪಿಯನರ ಉತ್ತರಾಧಿಕಾರಿಗಳಿಗೆ ಒಟ್ಟಿಗೆ ೪೫೦,೩೭೫ ರೂಪಾಯಿ ಹಂಚಿದೆ. ಆ ಪೈಕಿ ಅತಿ ಹೆಚ್ಚಿನ ಮೊಬಲಗು ೬೦,೦೦೦ ಅತಿ ಕಡಿಮೆ ಎಂದರೆ ೩೬೦ ಸರಾಸರಿ [illegible] ರೂಪಾಯಿಯಂತೆ ಕೊಟ್ಟಿದೆ. ಖಾಸಗಿ ಜನರಿಂದ ಎಷ್ಟು ದ್ರವ್ಯ ಸಹಾಯ ಈ ಜನಗಳಿಗೆ ಸಿಕ್ಕಿದೆ ಎಂಬುದು ಸರಕಾರದ ಅವಗಾಹನೆಗೆ ಬರಲಿಲ್ಲವಂತೆ.

ವಿಜ್ಞಾಪನೆ.

ವರ್ಷಾವಧಿ ಪೋಲೀಸು ಪಂದ್ಯಾಟಗಳು ಬರುವ ನವಂಬರ ತಿಂಗಳ ಅಂತ್ಯದಲ್ಲಿ ಜರಗುವವು. ವಾಡಿಕೆಯ ಪಂದ್ಯಾಟಗಳಲ್ಲದೆ “ಹೋಕಿ” ಪಂದ್ಯಾಟವನ್ನು ಕೂಡ ಜರಗಿಸುವರೆ ಏರ್ಪಾಡು ಮಾಡಲ್ಪಟ್ಟಿರುವದು. ಪಂದ್ಯಾಟಗಳ ವೆಚ್ಚದ ಬಗ್ಗೆ ವಂತಿಗೆಗಳನ್ನೂ, ಇನಾಮುಗಳನ್ನೂ ಜಿಲ್ಲಾ ಪೋಲೀಸು ಸುಪರಿಂಟೆಂಡೆಂಟರವರಿಗೆ ರವಾನಿಸಿದ್ದಲ್ಲಿ ಅವುಗಳು ಕೃತಜ್ಞತಾಪೂರ್ವಕವಾಗಿ ಸ್ವೀಕರಿಸಲ್ಪಟ್ಟಾವು.

ಪೋಲೀಸ್ ಆಫೀಸರರಿಗೂ ಖಾಸಗಿ ಜನರಿಗೂ ಪೋಲಿಸ್ ಇಲಾಖೆಯಿಂದ ಸಿಕ್ಕಿದ ಇನಾಮುಗಳು ಈ ಸಮಯದಲ್ಲೇ ಹಂಚೋಣವಾಗುವವು.

ಆಯುರ್ವೇದಾಶ್ರಮ.

ವೈದ್ಯರತ್ನ ಪಂಡಿತ ಡಿ. ಗೋಪಾಲಾಚಾರ್ಲು

ಇವರಿಂದ ಸ್ಥಾಪಿತವಾಗಿ ನಡಿಸಲ್ಪಟ್ಟಿರುತ್ತದೆ.

ಪ್ಲೇಗ್, ಕೊಲೇರಾ ಮತ್ತು ಇನ್ಫ್ಲುಯೆಂಜಾ

ಇವಕ್ಕೆ ಮುಖ್ಯವಾದ ಚಿಕಿತ್ಸಾಲಯ.

ಸಕಲ ರೋಗಗಳನ್ನು ದೂರಮಾಡುವ ಗುಣಪಡಿಸುವ ಹಾಗೂ ಆರೋಗ್ಯವನ್ನು ಉಂಟುಮಾಡುವ ಔಷಧಗಳು ಇಲ್ಲಿ ದೊರೆಯುವವು. ಕೆಟಲಾಗನ್ನು ಅಪೇಕ್ಷಿಸುವವರಿಗೆ ಉಚಿತವಾಗಿ ಕಳುಹಿಸುವೆವು.

ಪ್ಲೇಗು ಔಷಧದ ದೊಡ್ಡ ಸೆಟ್ಟಿಗೆ ರೂ.	2—2—0	ಕೊಲೇರಾ ಔಷಧದ ದೊಡ್ಡ ಸೆಟ್ಟಿಗೆ ರೂ.	1—2—0
„ ಸಣ್ಣ „ „	1—6—0	„ ಸಣ್ಣ „ „	0-12—0

ಇನ್ಫ್ಲುಯೆಂಜಾ ಔಷಧದ ಪ್ರತಿ ಸೆಟ್ಟಿಗೆ ರೂ. 1—12—0.

ಎಲ್ಲಾ ಔಷಧಗಳನ್ನು ಕಳುಹಿಸುವಾಗಲೂ ಟಪ್ಪಾಲ ಹಾಸಲು ಮತ್ತು ಪೇಕಿಂಗ್ ಪ್ರತ್ಯೇಕ

ವಿಳಾಸ:— ಮೆನೇಜರ್, ಆಯುರ್ವೇದಾಶ್ರಮ,

ತಂತಿ ವಿಳಾಸ.— ಪಂಡಿತ್, ಮದರಾಸ್ — 55 ಆಚಾರಪ್ಪನ ಬೀದಿ, ಜೋರ್ಜಟೌನ್, ಮದರಾಸ್.

ಪಾಳ್ಯದ ವೆಂಕಟಾಚಲ ಪಂಡಿತರ ಸಿದ್ಧೌಷಧಗಳು.

ಲೋಕಾಮಯಹರ ಕಸ್ತೂರಿ ಮಾತ್ರೆಗಳನ್ನು ಈಗಲಾದರೂ ಪರೀಕ್ಷಿಸಿ ನೋಡಿರಿ!

ಪ್ರತಿವರ್ಷವೂ ಲಕ್ಷಾಂತರ ಸೀಸೆಗಳು ವಿಕ್ರಯವಾಗುತ್ತಿವೆ

ಇಂಡಿಯಾದವರು ಮಾತ್ರವಲ್ಲ, ಬರ್ಮಾ, ಸಿಲೋನ್, ಮಲೆಯ ಸ್ಟೇಟ್, ಗೋವಾ, ಫೀಜಿಐಲೆಂಡ್, ಆಫ್ರಿಕಾ ಮೊದಲಾದ ಕಡೆಯವರು ಕೂಡ ಈ ಸಿದ್ಧೌಷಧಿಯನ್ನು ಉಪಯೋಗಿಸುತ್ತಿರುತ್ತಾರೆ.

ಮಹಾಭಾಗ ಒಂದೇ ಒಂದು ಲೋಕಾಮಯಹರ ಕಸ್ತೂರಿ ಮಾತ್ರೆಯ ಸೀಸೆಯು ನಿಮ್ಮ ಮನೆಯಲ್ಲಿದ್ದರೆ ಸಮಯವನ್ನು ಕಾದು ತೊರೆಯಿರುವುದು ನಿಜವಾಗಿಯೂ ತಪ್ಪುವುದು

ಶೀತ, ಶೀತವಾಯು, ಅಜೀರ್ಣ, ಪಾರ್ಶ್ವವಾಯು, ಜ್ವರ, ಮಂದ, ಮಲಬದ್ಧ, ಕೆಮ್ಮು, ಗಸಬೇನೆ, ಬಲಹೀನತೆ, ಕೆಟ್ಟ ಹವಾ, ಮತ್ತು ಕೆಡುಕಾದ ನೀರಿನಿಂದುಂಟಾಗುವ ವಿಕಾರ ಮಕ್ಕಳ ಎಳವು, ಶ್ವಾಸ ಕೆಮ್ಮು, ವಾಯು, ಇನ್ನೂ ಅನೇಕ ರೋಗಗಳನ್ನು ಈ ಸಿದ್ಧಾಮೃತ ಆಶ್ಚರ್ಯವಾಗುವಂತೆ ಗುಣಪಡಿಸುತ್ತದೆ

ಪ್ರತಿ 6 ಸೀಸೆಗಳನ್ನು ಒಟ್ಟಿಗೆ ತರಿಸಿದರೆ ಟಪಾಲು ಖರ್ಚು ಸೇರಿ 1—5—[illegible]
ಪ್ರತಿ 14 ಸೀಸೆಗಳನ್ನು ಒಟ್ಟಿಗೆ ತರಿಸಿದರೆ ಟಪಾಲು ಖರ್ಚು ಸೇರಿ 2—13—[illegible]
ಪ್ರತಿ 25 ಸೀಸೆಗಳನ್ನು ಒಟ್ಟಿಗೆ ತರಿಸಿದರೆ ಟಪಾಲು ಖರ್ಚು ಸೇರಿ 5—3—

ರಿಜಿಸ್ಟರಾದ ಈ ವ್ಯಾಪಾರದ ಗುರ್ತು ಪ್ರತಿ ಸೀಸೆಯ ಮೇಲೂ ಇರುವುದನ್ನು ನೋಡಿ ಕೊಳ್ಳಬೇಕಾಗಿದೆ

ಅನುಪಾನ ಪತ್ರವು ಪ್ರತಿ ಸೀಸೆಯೊಡನೆಯೂ ಇರುವುದು 2[illegible] ಮಾತೆಗಳುಳ್ಳ ಬುಡ್ಡಿಗೆ 4 ಆಣೆ ಮಾತ್ರ

<u>ಲಕ್ಷ್ಮೀವಿಲಾಸ ರಸ (ಪ್ಲೇಗಿಗೆ)</u>—ಲಕ್ಷಾವಧಿ ಪ್ಲೇಗುರೋಗಿಗಳು ಈ ಲಕ್ಷ್ಮೀವಿಲಾಸ ರಸದಿಂದ ಆರೋಗ್ಯವನ್ನು ಪಡೆದಿರುತ್ತಾರೆ. ಒಂದೇ ಒಂದು ಲಕ್ಷ್ಮೀವಿಲಾಸ ರಸದ ಸೀಸೆಯು ಕೈವಶವಿದ್ದರೆ ಪ್ಲೇಗಿಗೆ ಸರ್ವೋತ್ತಮವಾದ ಸಿದ್ಧೌಷಧಿಯು ಬೇರೊಂದಿಲ್ಲವೆಂದು ನಾವು ಹೇಳುವೆವು. ದಿನಜ್ವರ, ಮೂರರ ನಾಲ್ಕರ ಜ್ವರಗಳು ಸನ್ನಿಪಾತ ಇವುಗಳು ಕೂಡಾ ಗುಣವಾಗುತ್ತವೆ. ಸೀಸೆಗೆ ರೂ 1 5ಕ್ಕೆ ಒಂದು ಇನಾಮು

<u>ಶ್ರೀನಿವಾಸತೈಲ</u>—ಪ್ಲೇಗಿನ ಗಡ್ಡೆ ಕರಗುತ್ತದೆ ಸಂಧಗಳ ನೋವು ಸೇದಲು ಹೋಗುತ್ತದೆ ಸೀಸೆಗೆ 8 ಆಣೆ ೧೦ಕ್ಕೆ ಒಂದು ಇನಾಮು

<u>ವೈಶ್ವಾನರಾಸವ</u>—ಸೇವಿಸಿದ ಮೊದಲನೇ ವೇಳೆಯಿಂದಲೇ ವಾಂತಿಭೇದಿ ಶೀತಭೇದಿ ಅಜೀರ್ಣದ ಭೇದಿಗಳು ಗುಣವಾಗುತ್ತಾ ಬರುತ್ತವೆ ಸೀಸೆಗೆ ರೂ 1 5ಕ್ಕೆ ಒಂದು ಇನಾಮು

<u>ಬಾಲಸುಧೋದಯ</u>—ಮಕ್ಕಳಿಗೆ ಬಲಕಾರಿ ಸಿಹಿಯಾಗಿರುತ್ತದೆ ಮಂದ ಮಲಬದ್ಧ ಅಜೀರ್ಣದ ಭೇದಿ ಕೃಶತ್ವ ಹೊಟ್ಟೆ ದಪ್ಪವಾಗಿರುವುದು, ಹಸಿವಿಲ್ಲದಿರುವುದು ಇವೆಲ್ಲವೂ ಗುಣವಾಗಿ ಮಕ್ಕಳುಳ್ಳವರಾಗುತ್ತಾರೆ ಪುಷ್ಟಿಯ ಚಟುವಟಿಕೆ ಸೀಸೆಗೆ ಆಣೆ 12 ೧ಕ್ಕೆ ಒಂದು ಇನಾಮು ಈ ನಾಲ್ಕಕ್ಕೂ ಟಪಾಲು ಖರ್ಚು ಬೇರೆ

ಸಮಸ್ತ ರೋಗಗಳಿಗೂ ನಮ್ಮಲ್ಲಿ ಆಯುರ್ವೇದೀಯ ಸಿದ್ಧೌಷಧಗಳು ದೊರೆಯುತ್ತವೆ ಕ್ಯಾಟಲಾಗು ಉಚಿತ

ವಿಳಾಸ. ಶ್ರೀ ಸೀತಾರಾಘವ ವೈದ್ಯಶಾಲಾ ಮೈಸೂರು.

ಒಂದು ಕುಪ್ಪಿಯ ಕ್ರಯ ೧೨ ಆಣೆ. ಮಂಗಳೂರು ಏಜಂಟ್,

ಕೇ. ಟೀ. ಡೋಂಗರೆ ಕಂಪೆನಿ, ದಿ. ಉಲನ್‌ಮಾರ್ಟ್, ಮಂಗಳೂರು

ಗಿರಗಾಂ ಮುಂಬಯಿ.

ಶಾಲಿವಾಹನಶಕ ೧೮೪೨ನೆಯ ರೌದ್ರಿ ಸಂದ ದಕ್ಷಿಣಾಯನ ಭಾದ್ರಪದ ಶು| ೧೩ ಶನಿವಾರದಿಂದ ರೌದ್ರಿ ಸಂ| ಭಾ. ಬ| ೪ (ದಕ್ಷಿಣಾಯನ) ಶುಕ್ರವಾರದ ವರೆಗಿನ ಪಂಚಾಂಗ.

(೧೯೨೦ನೆಯ ಸಪ್ಟಂಬರ: ಸಿಂಹ, ಕನ್ಯಾ)

ತಾರೀಖು	ವಾರ	ತಿಥಿ	ಘಳಿಗೆ	ನಕ್ಷತ್ರ	ಘಳಿಗೆ	ಸಂಕ್ರಾಂತಿ	ಸೂರ್ಯ ಉ.	ಸೂರ್ಯ ಅಸ್ತ.
						ದಿ.		
25	ಶನಿ	೧೩	೩ ೫೮	ಧನಿಷ್ಠಾ	೨೨,೪೭	೯	6 22	6 24
26	ರವಿ	೧೪	೫ ೫೬	ಶತಭಿಷಾ	೨೬, ೨	೧೦	6 22	6 24
27	ಸೋಮ	೧೪	೭ ೪	ಪೂ. ಭಾ	೨೮ ೧೫	೧೧	6 22	6 23
28	ಕುಜ	○	೬,೫೦	ಉ. ಭಾ	೨೯ ೦	೧೨	6 22	6 22
29	ಬುಧ	೧	೪,೫೮	ರೇವತಿ	೨೮ ೩೨	೧೩	6 22	6 22
30	ಗುರು	೨	೨ ೩೨	ಅಶ್ವಿನಿ	೨೭ ೧೬	೧೪	6 22	6 21
1	ಶುಕ್ರ	೩	೫೪ ೧೬	ಭರಣಿ	೨೬ ೨	೧೫	6 22	6.20

ಮಂಗಳೂರಿನ ವಾಯುಸ್ಥಿತಿ.

(೧೯೨೦ನೆಯ ಸಪ್ಟಂಬರ)

ತಾರೀಖು Date	Temperature ಉಷ್ಣ (ಕಾವು) Maximum ಹೆಚ್ಚಾದದ್ದು	Minimum ಕಡಿಮೆ	Rainfall ಮಳೆ ದಿನದ ಮಳೆ	ಎಪ್ರಿಲ್ ೧ರಿಂದ
17	84—4	74—8	—	
18	8[illegible]—8	75—5	—	...
19	86—2	75—5	—	...
20	85—2	74—0	—	
21	85—[illegible]	75—8	0—04	
22	86—1	75—6	—	—
23	84—0	75—1	0—03	—

ಮಂಗಳೂರಿನ ಪೇಟೆ ಧಾರಣೆ.

ಜಿನಸು	ಇಂದ ರೂ. ಆ.	ವರೆಗೆ ರೂ. ಆ.
ಮುಸ್ಕಿ ಅಕ್ಕಿ ಮುಡಿ ೧ಕ್ಕೆ	[illegible]— 6	8— 4
ಬತ್ತ ಸುಗ್ಗಿ	— 2	[illegible]— 8
ರಾಶಿ ಮುಡಿ ೧ಕ್ಕೆ	6—14	7— 1
ಅಚ್ಚು ಬೆಲ್ಲಗೆ	9— 2	9— 6
ಗಟ್ಟಿ ಬೆಲ್ಲಗೆ	8— [illegible]	5— 8
ರಂಗೂನ ಬೆಳ್ತಿಗೆ ಗೋಣಿ ೧ಕ್ಕೆ	[illegible]— 0	15— 8
ಗೋಧಿ ಗೋಣಿ ೧ಕ್ಕೆ	24— 0	26— 8
ಹುರಳಿ ಗೋಣಿ ೧ಕ್ಕೆ	13—12	14— 8
ತೊಗರಿ ಗೋಣಿ ೧ಕ್ಕೆ	16— 0	16— 0
ಕಡಲೆ ಗೋಣಿ ೧ಕ್ಕೆ	—	20— 0
ಕಡಲೆಬೇಳೆ ಗೋಣಿ ೧ಕ್ಕೆ	[illegible]— 0	30— 0
ಉದ್ದು ಗೋಣಿ ೧ಕ್ಕೆ	16— 8	18— 0
ಹೆಸರು ಗೋಣಿ ೧ಕ್ಕೆ	16— 0	18— 8
ಊದ ಬೆಲ್ಲ ಖಂಡಿ ೧ಕ್ಕೆ	105 0	110— 0
ಉಪ್ಪು ಗೋಣಿ ೧ಕ್ಕೆ	4—10	5— 4
ಕೊಬ್ರಿ ಖಂಡಿ ೧ಕ್ಕೆ	115— 0	125— 0
ಕೊಬ್ರಿ ಹಿಂಡಿ ಖಂಡಿ ೧ಕ್ಕೆ	4[illegible]— 8	52—0
ಎಳ್ಳಿಂಡಿ ಖಂಡಿ ೧ಕ್ಕೆ	45— 0	46— 4
ಕೊಬ್ರಿ ಎಣ್ಣೆ ಮಣ ೧ಕ್ಕೆ	10— 4	11— 4
ಎಳ್ಳೆಣ್ಣೆ ಮಣ ೧ಕ್ಕೆ	11— 0	11— 4
ಚಿಮಿಣಿಎಣ್ಣೆ ಪೆಟ್ಟಿಗೆ ೧ಕ್ಕೆ	9— 6	9— 9
ಮಾರಿಸ ಸಕ್ಕರೆ ಮಣ ೧ಕ್ಕೆ	13— 8	1[illegible]—12
ಊರ ಮೆಣಸಿನ ಕಾಯಿ ಮಣ ೧ಕ್ಕೆ	8— 0	[illegible]— 8
ಹುಣಿಸೆ ಮುಡಿ ೧ಕ್ಕೆ	10— 0	10— 4
ಕೊತ್ತುಂಬರಿ ಮುಡಿ ೧ಕ್ಕೆ	5— 4	5— 8
ಕಾಫಿ ಖಂಡಿ ೧ಕ್ಕೆ	230— 0	235— 0
ಬೆಳಗೋಟು ಅಡಿಕೆ ಖಂಡಿ ೧ಕ್ಕೆ	100— 0	105— 0
ಹಳೆ ಬೆಳಗೋಟು	95— 0	100— 0
ಕಾಳುಮೆಣಸು ಖಂಡಿ ೧ಕ್ಕೆ	135— 0	140— 0
ಯಾಲಕ್ಕಿ ಮಣ ೧ಕ್ಕೆ	22— 0	25— 0
ಗೇರುಬೀಜ ಮುಡಿ ೧ಕ್ಕೆ	3— 0	3— 8
ಕಬ್ಬಿಣ ಖಂಡಿ ೧ಕ್ಕೆ	... 100— 0	120— 0
ತಾಂಬ್ರ ತಗಡು ಮಣ ೧ಕ್ಕೆ	. 24— 4	25— 0
ತಾಂಬ್ರ ಪಾತ್ರಗಳು ಮಣ ೧ಕ್ಕೆ	... 32— 0	34— 0
ಚೀನಾ ಬೆಳ್ಳಿ ಸೇರು ೧ಕ್ಕೆ	... 31— 8	. .
ಹಿತ್ತಾಳೆ ತಗಡು ಮಣ ೧ಕ್ಕೆ	.. 24— 0	25— 0

[illegible]

...ಬೇರೆಬೇರೆ ಅಧಿಕಾರಿಗಳ ಸ್ವಭಾವ ಈ ಕೃತ್ಯಕ್ಕೆ ಸಾಹಿತ್ಯವನ್ನು ಒದಗಿಸಿ ... ಅವರ ವರ್ತನೆಯನ್ನು ಪತ್ರಿಕೆಗಳಿಗೆ ... ರೀತಿ ... ಹಾಕ್ಕೆ ... ತಂದುಕೊಡುತ್ತದೆ.

ಪರದೇಶ ವರ್ತಮಾನ.

ಮುಂಬಯಿಯ ಪೋಸ್ಟಮೆನ್ಸ್ ಯೂನಿಯನ್— ಈ ಯೂನಿಯನ್ನಿನ ಕಡೆಯಿಂದ ಮದ್ರಾಸಿನಲ್ಲಿರುವ ಡಿರೆಕ್ಟರ್ ಜನರಲ್ ಒಫ್ ಟೆಲಿಗ್ರಾಫ್ಸ್ ಅವರಿಗೆ ... ಕೊಟ್ಟಿದ್ದಾರೆ ... ಪತ್ರಕ್ಕೆ ಉತ್ತರವು ಇನ್ನೂ ಬರಲಿಲ್ಲ. ಒಂದು ವಾರದೊಳಗೆ ಉತ್ತರ ಬಾರದಿದ್ದರೆ ಮುಷ್ಕರವು ಖಂಡಿತವಾಗಿಯೂ ಆರಂಭಿಸುವುದು. ಪೋಸ್ಟ್ಮೆನ್ ಮತ್ತು ಪಿಯೋನ್ಸ್ ಈ ವಿಷಯದಲ್ಲಿ ಏಕಮತವಾಗಿದ್ದಾರೆ. (ಸಹಿ) ಬಾಪ್ಟಿಸ್ಟಾ ಪ್ರೆಸಿಡೆಂಟ್, ... ಮತ್ತು ಎಸ್. ಎಚ್. ಜಬ್ವಾಲಾ ಸೆಕ್ರೆಟರಿಗಳು, ಮುಂಬಯಿ ... ಪೋಸ್ಟ್ಮೆನ್ಸ್ ಯೂನಿಯನ್, ಮುಂಬಯಿ. ಈಗ ... ತಾರೀಕಿನಿಂದ ೧೦೦೦ ಪೋಸ್ಟ್ಮೇನರೂ ಕೆಲಸ ಬಿಟ್ಟು ಮುಷ್ಕರ ಹಿಡಿದಿದ್ದಾರೆ. ಇವರಲ್ಲಿ ಸೆಂಟ್ರಲ್ ಟೆಲಿಗ್ರಾಫ್ ಆಫೀಸಿನ ಜವಾನರು ಸೇರಿದ್ದಾರೆ. ಇವರಿಗೆ ೧೯೧೯ನೇ ಎಪ್ರಿಲ್ ೧ನೇ ತಾರೀಕಿಗೆ ಬರ ... ಸರಕಾರ ಸಂಬಳ ಇನ್ನು ಈಗ ... ರೂಪಾಯಿ ಸಂಬಳ ಮತ್ತು ... ರೂಪಾಯಿ ಮನೆ ಬಾಡಿಗೆ ಕೊಟ್ಟರೂ ಸಾಕಾಗುವುದಿಲ್ಲವೆನ್ನುವುದ ... ಇಂಡಿಯಾ ಸರಕಾರದವರು ಪ್ರಕಟನೆ ಹೊರಡಿಸಿರುವರು

ತಾಲೂಕು ಬೋರ್ಡ ಪ್ರೆಸಿಡೆಂಟರು—ಬೆಂಗ್ಲೂರ್ ಮತ್ತು ಕೊಯಮುತ್ತೂರ ತಾಲೂಕು ಬೋರ್ಡುಗಳಿಗೆ ತಮ್ಮ ಅಧ್ಯಕ್ಷರನ್ನು ಆರಿಸುವ ಅಧಿಕಾರ ಸಿಕ್ಕಿದೆ

ಉಪಾಧ್ಯಾಯರಿಗೆ ಎಲೊವೆನ್ಸ್—ಎಲಿಮೆಂಟರಿ ಶಾಲೆಗಳ ಮೈಕಿ ಬೋರ್ಡ ಮತ್ತು ಮ್ಯುನಿಸಿಪಲ್ ಶಾಲೆಗಳ ಉಪಾಧ್ಯಾಯರಿಗೆ ೪ ರೂಪಾಯಿಯಂತೆ ಹಂಗಾಮಿ ಎಲೊವೆನ್ಸ್ ಕೊಡುವ ಬಗ್ಗೆ ... ಸೆಂಕ್ಷನ್ ಆಗಿದೆ. ಅಪ್ಪೈಕಿ ನಮ್ಮ ಜಿಲ್ಲೆಗೆ ಸುಮಾರು ೩೬೦೦೦ ಸಿಕ್ಕಿದೆಂದು ಕೇಳುತ್ತೇವೆ

ದಕ್ಷಿಣ ಕನ್ನಡಾ ಸೆಂಟ್ರಲ್ ಬೇಂಕು—ಪಬ್ಲಿಸಿಟಿ ಬ್ಯೂರೋ ವಿನ ಪ್ರಕಟನೆಯಲ್ಲಿ ಈ ಸೆಂಟ್ರಲ್ ಬೇಂಕಿಗೆ ಮದ್ರಾಸು ಬೇಂಕಿನಿಂದ ರೂ ... ದ ಓವರ್ ಡ್ರಾಫ್ಟ್ ಅಧಿಕಾರ ಇದೆ ಎಂಬದನ್ನು ಕಾಣಿಸಲು ... ತಪ್ಪಿನಿಂದ ಬಿಟ್ಟುಹೋಯಿತು ಎಂದು ಪಬ್ಲಿಸಿಟಿ ಬ್ಯೂರೋದವರು ಪುನಃ ಪ್ರಕಟಿಸಿ ಕೊಟ್ಟಿದ್ದಾರೆ

ರಾಷ್ಟ್ರೀಯ ಸಭೆಯ ಆಮಂತ್ರಿತರು—ಕರ್ನಲ್ ವೆಡ್ಜ್ ವುಡ್ ಮತ್ತು ಬೆನ್ ಸ್ಪೂರ್ ಇವರಿಬ್ಬರು ಬ್ರಿಟಿಷ ಪಾರ್ಲಿಮೆಂಟಿನ ಮೆಂಬರರಾಗಿದ್ದು ಕಾಂಗ್ರೆಸಿನ ಆಮಂತ್ರಣದ ಮೇರೆಗೆ ಈ ಡಿಸೆಂಬರದಲ್ಲಿ ಹಿಂದು ಸ್ಥಾನವನ್ನು ಸಂದರ್ಶಿಸುವವರಿದ್ದಾರೆ

ಸೀಮೆ ಎಣ್ಣೆ ಕಾರ್ಖಾನೆಯ ಮಜೂರರು—ಇವರ ಮುಷ್ಕರವು ಇನ್ನೂ ಮುಗಿಯಲಿಲ್ಲ. ಲೇಬರ್ ... ಪ್ರಯತ್ನವೂ ಕೈ ಸಾಗಲಿಲ್ಲ ಈಗ ನಮ್ಮ ಗವರ್ನರಾದ ಲಾರ್ಡ್ ವಿಲ್ಲಿಂಗ್ಡನ್ನರು ಸ್ವತಃ ಊಟಕಮಂಡಿನಿಂದ ಮದ್ರಾಸಿಗೆ ಬಂದು ಈ ವಿಷಯದಲ್ಲಿ ಇತ್ಯರ್ಥ ಮಾಡಲು ಯತ್ನಿಸುವವರಿದ್ದಾರೆ.

ಪೋಸ್ಟಲ್ ಇಲಾಖೆಯ ಮೇಲುದ್ಯೋಗಸ್ಥರ ಮನವಿ— [illegible] ... ಮೆಂಬರರಾದ ... ಮೇಲುದ್ಯೋಗಸ್ಥರು ... ಹೋಗಿರುವರು

ಓಲ್ ಇಂಡಿಯಾ ಪೋಸ್ಟಲ್ ಕೋನ್ಫರೆನ್ಸ್— ... ಅಧ್ಯಕ್ಷತೆಯಲ್ಲಿ ಈ ಕೋನ್ಫರೆನ್ಸ್ ದಿಲ್ಲಿಯಲ್ಲಿ ... ಜರಗಲಿಕ್ಕಿರುವುದು.

ಜಬಲಪುರ— ... ಸಾರ್ವಜನಿಕ ಸಭೆ ... [illegible]

[illegible]

[illegible]

... (ಪ್ರಾಫೆಸ್ಟ್) ... ಸರಕಾರ ... ಸಮಯಲ್ಲಿ ... ಪೆಟ್ಟು ತಿಂದ ಪ್ರಾಯದ ಅವಳ ಮಗನನ್ನು ... ಜನರು ... ದಾರಿಯಲ್ಲಿ ಬಂದು ಟಾಣೆಗೆ ಹೋಗುವ ನಮ್ಮ ಧಾವ ಬಂದಿದ್ದಾರಂತೆ. ಹೇಳಿ ಕರಕೊಂಡು ಹೋಗಿ ಅಲ್ಲಿ ತಾಯಿ ... ಕೊಂದ ಮಗನನ್ನು ಗುದ್ದಿನಿಂದ ... ಪೋಲಿಸ್ ... ವಿಧಿಯ ... ಅಪರಾಧಿಯ ಪತ್ತೆಯಾಗಲಿಲ್ಲ ತಾಯಿ ... ಒಂದು ವೇಳೆ ಉದ್ರಕ್ಕೆ ಹೊರಗೆ ಬಂದಿತಂತೆ.

ದಕ್ಷಿಣ ಕನ್ನಡ.

ಉಡುಪಿ:— ಅದಮಾರು ಶ್ರೀಪಾದಂಗಳವರು ಚಾತುರ್ಮಾಸ್ಯವನ್ನು ಉಡುಪಿ ತಮ್ಮ ಮಠದಲ್ಲಿ ಕುಳಿತುಕೊಂಡ ... ಪೂಜೆಯು ಕಳೆದ ತಾ. ೧೦ರಲ್ಲು ನೆರೆದುದಲ್ಲದೆ ತಾ. ೧೫ರಿಂದ ೧೯ರ ವರೇಗೆ ಮಧ್ಯಾಹ್ನದಲ್ಲಿ ಅನೇಕ ಜನರಿಗೆ ಬ್ರಾಹ್ಮಣರ ಸಂತರ್ಪಣೆ ಮತ್ತು ರಾತ್ರೆಯಲ್ಲಿ ಅನೇಕ ತರದ ಗಾಯನ ವಗೈರೆ ನಡೆದಿತ್ತು

ಮುಲ್ಕಿ— ಜಿಲ್ಲೆಯ ಆ ಆಸ್ಪಾಸ್ ಗ್ರಾಮಗಳ ಹುಡುಗರಿಗೆ ಇಂಗ್ಲೀಷ್ ಕಲಿಯುವ ಬುದ್ಧಿಕ್ಕೂ ಬುದ್ಧಿಗೆ ಹೋಗಬೇಕಾಗುತ್ತದೆ ಹೋಗಿ ಬರಲಿಕ್ಕೆ ಬರಲಿಕ್ಕೆ ನಾಲ್ಕು ನಾಲ್ಕು ಮೈಲು ದೂರವಾಗುತ್ತದೆ. ಹುಡುಗರಿಗೆ ಕಲಿಯಲಿಕ್ಕೆ ಸಹ ತೊಂದರೆ, ಊಟದ ಖರ್ಚು ಸಹ ಜಾಸ್ತಿ, ಆದ ಕಾರಣ ಮುಲ್ಕಿಯಲ್ಲಿರುವ ಬೋರ್ಡ ಎಲಿಮೆಂಟರಿ ಶಾಲೆಯನ್ನು ಸೆಕೆಂಡರಿ ಶಾಲೆಯನ್ನಾಗಿ ಮಾಡುವುದನ್ನು ಕುರಿತು ಒಂದು ಸಭೆಯು ಇದೇ ಒಕ್ಟೋಬರ ತಿಂಗಳ ತಾ ೩ನೇ ಆದಿತ್ಯವಾರ ಮಧ್ಯಾಹ್ನ ೩ ಗಂಟೆಗೆ ಮುಲ್ಕಿಯಲ್ಲಿ ಕೂಡುವುದು. ಮುಲ್ಕಿಗೆ ಸಂಬಂಧ ಪಟ್ಟ ಗ್ರಾಮಸ್ಥರೆಲ್ಲರೂ ದಯಮಾಡಿ ಬರಬೇಕಾಗಿ ವಿಜ್ಞಾಪನೆ ಬಹುಮಾನಪಟ್ಟ ಖಾನ್ ಬಹದ್ದೂರ್ ಹಾಜಿ ಅಬ್ದುಲ್ಲಾ ಹಾಜಿ ಕಾಸಿಮ್ ಸಾಹೇಬ ಬಹದೂರರವರು ಶಾಲೆಯಗೋಸ್ಕರ ಸೂಚಿಸಿದ ವಿಷಯವನ್ನು ಸಭೆಯ ಮುಂದಿಡಲಾಗುವುದು

ಬಂಟವಾಳ— ತಾ ೧೮ಕ್ಕೆ ವಿದ್ಯಾ ಇಲಾಖೆಯ ೧೩ನೇ ಸರ್ಕಲಿನ ಇನ್ಸಪೆಕ್ಟರಿಂದ ಮಿ ರನ್ನ ಪೂರ್ಣ ದೊರೆಗಳು ಇಲ್ಲಿಗೆ ಬಂದು ಮಿಶನ್ ಶಾಲೆ ಮತ್ತು ಬೋರ್ಡ್ ಶಾಲೆಯನ್ನು ಸಂದರ್ಶಿಸಿ ಶಾರ್ಕಳ ಕಡೆಗೆ ಸ ... ಬಿಟ್ಟುಕೊಟ್ಟರು ತಾ ೧೯ಕ್ಕೆ ಉಪಾಧ್ಯಾಯರ ಸಭೆ ಕೂಡಿ ಆಗಸ್ಟ ... ಸಂಗತಿಗಳನ್ನು ಚರ್ಚಿಸಿ ಇದೇ ಬರುವ ತಾ ೩೦ಕ್ಕೆ ಮಂಗಳೂರಿನಲ್ಲಿ ಕೂಡುವ ಡಿಸ್ಟ್ರಿಕ್ಟ್ ಬೋರ್ಡ ಮೀಟಿಂಗಿನ ಕಾಲದಲ್ಲಿ ಜಿಲ್ಲೆಯ ಎಲ್ಲಾ ಉಪಾಧ್ಯಾಯರ ಸಂಘದಿಂದ ಡೆಪ್ಯುಟೇಶನ್ ಹೋಗಬೇಕೆಂಬ ನಿರ್ಣಯವಾಯಿತು ಅದರಂತೆ ಬಂಟ್ವಾಳ ಉಪಾಧ್ಯಾಯರ ಸಂಘದ ಕಡೆಯಿಂದ ಒಬ್ಬ ಉಪಾಧ್ಯಾಯರನ್ನು ಕಳುಹಿಸುವುದೆಂತ ನಿರ್ಣಯಿಸಲಾಗಿಯದೆ

ಮಂಗಳೂರು ಮೋಟಾರು ಸರ್ವಿಸಿನವರಿಗೆ ಬೆಳ್ತಂಗಡಿ ವರೆಗೆ ಮೋಟಾರು ಬಸ್ಸು ಚಲಾವಣೆಗೆ ಲೈಸನ್ಸ್ ಸಿಕ್ಕಿರುತ್ತದೆಂತ ವದಂತಿ ಇದೆ ಪ್ರಯಾಣಿಕರಿಗೆ ಇನ್ನಷ್ಟು ಸೌಕರ್ಯವಾಯಿತು

ಮೊಗ್ರಾಲ್ — ಇಲ್ಲಿಯ ಸಹಕಾರಿ ಸಂಘದ ಪ್ರೆಸಿಡೆಂಟರೂ ಎಯಿಡೆಡ್ ಶಾಲೆ ಮೆನೇಜರರೂ ಆ ... ಸಂಘದ ಸೆಕ್ರೆಟರಿಯರೂ ಮೊಗ್ರಾಲ್ ಹಿದಾಯತ್ತುಲ್ ಇಸ್ಲಾಮಿಯಾ ಕ್ಲಬ್ಬನ್ನು ಏರ್ಪಡಿಸಿದವರೂ ಆದ ಮಿ ಯಂ ಸಿ ಮುಹ್ಯುದ್ದೀನ್ ಮದ್ರಾಸ್ ನ್ಯಾಯ ವಿಧಾಯಕ ಸಭೆಯಲ್ಲಿ ಮೆಂಬರರಾಗಿ ನಿಲ್ಲುತ್ತಾರಂತೆ

ಮಾನ್ಯ ಗೃಹಸ್ಥರೇ,

ಹೊಸದಾಗಿ ಏರ್ಪಡುವ ಮದ್ರಾಸು ನ್ಯಾಯವಿಧಾಯಕಸಭೆಗೆ ಇದೇ ಬರುವ ನವಂಬರ ಯಾ ಡಿಸೆಂಬರ ತಿಂಗಳಲ್ಲಿ ನಮ್ಮ ಜಿಲ್ಲೆಯ ಮಹಮ್ಮದೀಯ ಕ್ರೈಸ್ತರ ಹೊರತು ಇತರ ಎಲ್ಲಾ ಜಾತಿಯವರು ಇಬ್ಬರು ಮೆಂಬರರನ್ನು ಆರಿಸಬೇಕಾಗಿರುತ್ತದೆ ಆ ಪೈಕಿ ಒಬ್ಬನು ಬ್ರಾಹ್ಮಣನಲ್ಲದ ಇತರ ಹಿಂದೂ ಜಾತಿಯವನಾಗಿರಲೇ ಬೇಕು

ಆ ಸಭೆಗೆ ಮೆಂಬರನಾಗಿ ಸೇರಬೇಕೆಂದು ನನಗೆ ಕೆಲವು ಆಪ್ತರು ಸೂಚಿಸಿದ ಪ್ರಕಾರ ನಾನು ಒಬ್ಬ ಉಮೇದ್ವಾರನಾಗಿರುತ್ತೇನೆ ಅದಕ್ಕೆ ನಾನು ಯೋಗ್ಯನೆಂದು ತಮಗೆ ತೋರಿದರೆ ತಮಗಿರುವ ಎರಡು ಓಟುಗಳಲ್ಲಿ ಒಂದನ್ನು ನನಗೆ ದಯವಿಟ್ಟು ಕೊಡುತ್ತಲ್ಲದೆ, ಇದೇ ಅಭಿಪ್ರಾಯವಿರುವ ಇತರ ಓಟರರಿಂದಲೂ ಒಂದೊಂದು ಓಟುಗಳನ್ನು ಕೊಡಿಸಬೇಕಾಗಿ ಅಪೇಕ್ಷೆ

ಕಳೆದ ವರುಷ ಸರಕಾರದವರು ಮಾಡಿದ ಆಕ್ಟು ಪ್ರಕಾರವಿದ್ಯೆ, ಕೃಷಿ, ವ್ಯಾಪಾರ, ಕೈಗಾರಿಕೆ, ಆರೋಗ್ಯ, ವೈದ್ಯ, ಅಬ್ಕಾರಿ, ಸಹಕಾರಸಂಘ, ಲೋಕಲ್ ಬೋರ್ಡ, ಮುನ್ಸಿಪಾಲಿಟಿ, ರಿಜಿಸ್ಟ್ರೇಶನ್ ಇತ್ಯಾದಿ ಇಲಾಖೆಗಳು ಹೊಸ ನ್ಯಾಯವಿಧಾಯಕಸಭೆಯ ಆಡಳಿತ ಮೇಲ್ವಿಚಾರಕ್ಕೆ ಒಳಪಡುವುದರಿಂದ ಆ ಸಭೆಯ ಅಧಿಕಾರ ಮತ್ತು ಜವಾಬ್ದಾರಿ ಸಹ ಹೆಚ್ಚಾಗುವುದು

ನಾನು ಮೆಂಬರನಾಗಿ ಆರಿಸಲ್ಪಟ್ಟರೆ, ಸಭೆಯಲ್ಲಿ ನಡೆಯಬಹುದಾದ ಎಲ್ಲಾ ಕಾರ್ಯಗಳಲ್ಲಿಯೂ ನಮ್ಮ ಸಂಸ್ಥಾನದ, ಮುಖ್ಯವಾಗಿ ಈ ಜಿಲ್ಲೆಯ, ಕ್ಷೇಮಾಭಿವೃದ್ಧಿಯು ಪೂರ್ಣವಾಗಿ ನನ್ನಿಂದ ಕೈಲಾಗ ಮಟ್ಟಿಗೆ ಸಾಧಿಸಿ, ಎಲ್ಲಾ ಪಂಗಡದ ಜನರ ಏಳಿಗೆಯ ವಿಷಯ ನಿಷ್ಪಕ್ಷಪಾತವಾಗಿ ಪ್ರಯತ್ನಿಸುವೆನು

ಓಟರರ ಹೆಸರು, ಅವರು ವಾಸಿಸಿರುವ ಗ್ರಾಮ ಮತ್ತು ಅವರ ಹಿಂದಿನ ಹೆಸರು, ಅವರು ಓಟ ಕೊಡತಕ್ಕ ಸ್ಥಳದ ಹೆಸರು ಸಹ ಕಾಣಿಸುವ ಓಟರ ಪಟ್ಟಿಯನ್ನು ಪ್ರತೀ ಗ್ರಾಮಗಳ ಪಟೇಲರಿಗೆ ಸರಕಾರದವರು ಕಳುಹಿಸಿಕೊಡುತ್ತಾರೆ ಇವೆಲ್ಲವನ್ನು ಮತ್ತು ಓಟು ಕೊಡತಕ್ಕ ದಿವಸಗಳನ್ನು ಜಿಲ್ಲಾ ಗಜೇಟಿನಿಂದ ತಿಳಿಯಬಹುದು. ಓಟು ಕೊಡತಕ್ಕ ವಿಧಾನವನ್ನು ಓಟು ಕೊಡತಕ್ಕ ಆಯಾಯ ಸ್ಥಳಕ್ಕೆ ನೇಮಿಸಲ್ಪಡುವ ಉದ್ಯೋಗಸ್ಥರು ವಿವರಿಸುವರು

ಮಂಗಳೂರು,
ತಾ. 10 9 '20

ಅತ್ತಾವರ ರಾಮಯ್ಯ ಪೂಂಜ,
ಮಾಜಿ ಡಿಸ್ಟ್ರಿಕ್ಟ ಜಡ್ಜ.

ಪಂಜಾಬಿನ ಹತ್ಯಾಕಾಂಡದಲ್ಲಿ ಭಾಗಿಗಳು.— ಕೆಲವು ಮುಖ್ಯ ಕ್ರಮಗಳ ಮೇರೆಗೆ ಕಡೆಯ ಅಧಿಕಾರಿಗಳ ... ಸಿಂಹರು ಕೇಳಿದ ಪ್ರಶ್ನೆಗೆ ಈ ಬಗೆಯ ಉತ್ತರ ದೊರಕಿತು — ... ಕಮಿಟಿಯಲ್ಲಿ ಹಂಟರ ಕಮಿಟಿಯ ರಿಪೋರ್ಟನ್ನು ... ಫಲಿತಾಂಶದ ಪರೀಕ್ಷೆಯಿಂದಲೂ ಆ ಮೇಲೆ ಸ್ಥಳೀಯ ಸರಕಾರಗಳಿಗೆ ಪುನಃ ಬರೆದು ಅವರ ಪ್ರತ್ಯುತ್ತರ ಬರಬೇಕಾದ್ದರಿಂದಲೂ ... ಗಲಾಟೆಯಲ್ಲಿ ಉದ್ವೇಗವರ್ತನೆ ತೋರಿಸಿದವರಿಗೆ ಶಾಸ್ತಿ ಮಾಡಲು ಕಾರ್ಯ ವಿಳಂಬವಾಯಿತು. ಅನಂತರ ೨೦ ಮಂದಿಯನ್ನು ಶಿಕ್ಷೆಗೆ ಒಳಪಡಿಸಿರುವರು. ಆ ಪೈಕಿ (ದೇಶೀಯರಾದ) ಖಾನಸಾಹೇಬ ಅಹಮ್ಮದ ಜಾನರನ್ನು ಅವರ ಕಾಯಮಿನ ೩ನೇ ಗ್ರೇಡ ಪೋಲಿಸ್ ಇನ್ಸಪೆಕ್ಟರರಾಗಿ ಮಾಡಿದೆ. ಪೋಲಿಸ್ ಇನ್ಸಪೆಕ್ಟರ ... ಗ್ರೇಡಿಗೆ ... ಕೆಲಸಕ್ಕೆ ಇಳಿಸಿಹಾಕಿದೆ ೨೦ ಪೋಲಿಸ್ ಕಾನಸ್ಟೇಬಲರನ್ನು ಯಾವುದೊಂದು ಶಿಕ್ಷೆಗೆ ಗುರಿಪಡಿಸಲಿಲ್ಲ. ೧ ಜ್ಞಾನ ವಾಡಾದ ಬದಲಿ ಡೆಪ್ಯುಟಿಕಮಿಶನರಾದ ಖಾನಾ ಬಹದ್ದೂರ ಮಹಮ್ಮದ ಸುಲ್ತಾನ ಅಹಮ್ಮದ ಇವರು ಬಹಳ ಕಾಲ ಸರಕಾರ ಸರ್ವಿಸಿನಲ್ಲಿದ್ದು ಬಹು ಯೋಗ್ಯರೀತಿಯಿಂದ ಕೆಲಸ ಮಾಡಿ ಆಗಲೇ ಪೆನ್ಶನ್ ಹೊಂದಿದ್ದಾರೆ ಆದರೂ ಅವರಿಗೆ ಸರಕಾರವು ತಮ್ಮ ಅಸಮಧಾನವನ್ನು ತಿಳಿಯಪಡಿಸಿದೆ

ಗುಜ್ರಾನವಾಲದ ಡೆಪ್ಯುಟಿಕಮಿಶನರ್ ಲೆಪ್ಟಿನೆಂಟ್ ಕರ್ನಲ್ ಒಬ್ರಾಯನ್, ಕಸೂರಿನ ಸಬ್ ಡಿವಿಜನಲ್ ಆಫಿಸರರಾದ ಮಿ। ಮಾರ್ಸ್ಡನ್, ಪಂಜಾಬದ ಡೈರೆಕ್ಟರ್ ಒಫ್ ಎಗ್ರಿಕಲ್ಚರ್ ಆದ ಮಿ। ಎಸ್ ಎಮ್ ಜಾಕಬ, ಸಾಯಲಕೋಟದ ಬ್ರಿಗೆಡ(ಲಷ್ಕರ್) ದ ಜನರಲ್ ಕೆಂಬೆಲ್, ಕೆಪ್ಟನ್ ಡಾಟನ್ ಕರ್ನಲ್ ಮಾಕ್ರೆ ಇವರಲ್ಲಿ ಕೆಲವರಿಗೆ ಸರಕಾರದ ಅಸಮಾಧಾನವನ್ನು ತಿಳಿಸಿದೆ ಇನ್ನೂ ಕೆಲವರಿಗೆ ತಿಳಿಸಲಿಕ್ಕೆ ಏರ್ಪಾಡು ಮಾಡಿದೆ (ಈ ಸಂಗತಿಯು ಈ ಅಧಿಕಾರಿಗೆ ಕೇಳಿತೋ ಎಂಬ ಸಮಾಚಾರವು ಗೊತ್ತಾಗಲಿಲ್ಲ) ಎಕ್ಸ್ಟ್ರಾ ಅಸಿಸ್ಟಂಟ ಕಮಿಶನರಾದ ಮಿ। ಜೆನ್ಹೋರೊ ಎಂಬವರಿಗೆ ಮಾರ್ಶಲ್ ಲೋ ಪ್ರಕಾರ ಶಿಕ್ಷೆ ವಿಧಿಸಲಿಕ್ಕೆ ಇದ್ದ ಅಧಿಕಾರವನ್ನು ಕೂಡಲೇ ತೆಗೆದು ಹಾಕಿದೆ (ಮಾರ್ಶಲ್ ಲೋ ಪಂಜಾಬದಲ್ಲಿ ತೆಗೆದು ಹಾಕಿದ ನಂತರ ಈ ಹುಕುಂ ಬಂತೋ ಎಂಬುದು ಗೊತ್ತಾಗಲಿಲ್ಲ) ಅಮೃತಸರದ ಕಿಚ್ಸ್ ಮತ್ತು ಮಾಯ್ಸ್ ಇರ್ವಿಂಗ್ ಎಂಬವರು ಲಷ್ಕರಿ ಅಧಿಕಾರಿಗಳ ಕೈ ಸಾಕಷ್ಟು ಬಿಗಿಹಿಡಿಯದೇ ಇದ್ದದ್ದು ತಪ್ಪು ಎಂದು ಆ ಅಫಿಸರರಿಗೆ ತಿಳಿಸಿದೆ ಬೋಸವರ್ಥ ಸ್ಮಿತ್ ಎಂಬವರಿಗೆ ೧೯೨೦ನೇ ಮಾರ್ಚ ಅಖೈರವರೆಗೆ ಕೆಲಸ ಮಾಡಬೇಕೆಂದು ಮನಸ್ಸಿದ್ದರೂ ಪೆನ್ಶನು ಹೊಂದುವುದಕ್ಕೆ ಆದಿಯಾಗಿ ರಜೆ ಮೇಲೆ ಕಳುಹಿಸಲಾಯಿತು ಜನರಲ್ ಡಾಯರನ ವಿಷಯ ಮೊದಲೇ ಆಗಿದೆ ಜನರಲ್ ಬೆಯ್ನನ ಕೃತ್ಯವನ್ನು ಮೊದಲೇ ಅವಹೇಳನೆಗೆ ಗುರಿಪಡಿಸಿದ್ದ ಇನ್ನು ಮುಂದೆ ಏನು ಮಾಡಲಿಕ್ಕೂ ಸೂಚಿಸುವುದಿಲ್ಲವೆಂದ ಲಷ್ಕರ್ ಇಲಾಖೆಯವರು ಬರೆಯುತ್ತಾರೆ ಇನ್ನು ಮುಂದೆ ಇಂಥಾ ಕೃತ್ಯಗಳು ನಡೆಯದಂತೆ ಕೂಲಂಕಷ ಸೂಚನೆಗಳು ಲಷ್ಕರಿ ಅಫಿಸರರಿಗೆ ಕೊಡಲಾಗುವುದು ಲೆಫ್ಟಿನೆಂಟ ಡೋಡಕಿನ್ ಮತ್ತು ಫ್ಲೆಚರ್ ಇವರುಗಳ ಇವರ ವರ್ತನೆಯು ತಪ್ಪಾಗುವುದಿಲ್ಲ ಎಂದು ಲಷ್ಕರಿ ಇಲಾಖೆಯವರು ನಿರ್ಧರಿಸಿದ್ದಾರೆ ಕರ್ನಲ್ ಫ್ರೆಂಕ್ ಜೊನ್ಸನ್ ಇವರಿಗೆ ಟೆರಿಟೊರಿಯಲ್ ಫೋರ್ಸ ಎಂಬ ಹಂಗಾಮಿ ಸೈನ್ಯದಲ್ಲಿ ಆಫೀಸರನ ಅಧಿಕಾರವಿತ್ತು ಆ ಸೈನ್ಯವನ್ನು ಈಗ ಬರಖಾಸ್ತ ಮಾಡಿರುವುದರಿಂದ ಈ ಮನುಷ್ಯನಿಗೆ ಏನೂ ಮಾಡಲು ಸಾಧ್ಯವಿಲ್ಲ ಇದರಿಂದ ಹುಡುಕಿದ ಒಂದು ಗಾದೆಯ ನೆನಪಾಗುತ್ತದೆ — ಸೋಕ ಸಾಟ್, ಆದಾಗಯೂ ನಾಟ್, ದಸ್ ಪೇಕಾವ್, ದೇ ..., ದಿಲಾಕಾವ್, ದಸ್ ಕೇಟಾ ... ಕ್ಯಾ ' ಈ ೦ತಿಯಾಗಿ ಆಫಿಸರರಿಗೆ ಶಿಕ್ಷೆಯ ಹುಕುಂ ಆಗಿರುವುದು ಬಲು ವ್ಯಸನಕರ ಡಾ। ಕಿಚ್ಲೂನ ಫಗ ... ಲಾಲ ಸಿಂಗ್ ಮಂಚೆರಲಾಲ ಇವರನ್ನು ನಿರ್ಬಂಧಿಸಿದ್ದು ಸರಿಯಲ್ಲವೆಂದು ತಮಗೆ ಪಶ್ಚಾತ್ತಾಪ ಕಂಡಿದ್ದರೂ ಈಗ ಏನೂ ಆ ವಿಷಯದಲ್ಲಿ ಮಾಡಲು ಸಾಧ್ಯವಿಲ್ಲವಂತೆ.

ಜಲಿಯನ ವಾಲಾಬಾಗದಲ್ಲಿ ಜೀವನಷ್ಟ, ಅಂಗ ನಷ್ಟ ಹೊಂದಿದ ವಿಷಯದಲ್ಲಿ ಸಾಯಾ ಪಟ್ಟರ ಬಂಧುವರಿಗೆ ಅಥವಾ ಅವರ ಉತ್ತರಾಧಿಕಾರಿಗೆ ಕೊಟ್ಟ ದ್ರವ್ಯ ಸಹಾಯವು ಈ ರೀತಿಯಾಗಿದೆ ಮಿಸ್ಸ ಶರ್ವುಡ್ ಎಂಬ ಸೊತ್ತು ... ಬಳೆ ೧೫೦೦ ರೂಪಾಯಿ ಮಾತ್ರ ಪಡೆದ ಕಾರಣ ಅವರಿಗೆ ೫೦,೦೦೦ ರೂಪಾಯಿ ಸೆಂಕ್ಷನ್ ಮಾಡಲಾಯಿತು ದಲಿಯನ್‌ವಾಲಾ ಬಾಗದ ಅತ್ಯಾಚಾರಗಳಿಂದ ಘಾಸಿ ಹೊಂದಿದವರಲ್ಲಿ ೪೦ ಜನರಿಗೆ ದ್ರವ್ಯ ಸಹಾಯ ಸರಕಾರದಿಂದ ಕೊಟ್ಟಿದೆ ಅತೀ ಹೆಚ್ಚು ಮೊಬಲಗು ೫೦೦ ಅತೀ ಕಡಿಮೆಯಾದದ್ದು ೨೦೦, ಸರಾಸರಿ ೩೪೮ರಂತೆ ಸಿಕ್ಕಿದೆ ಯುರೋಪಿಯನರಿಗೆ ಅತಿ ಹೆಚ್ಚಿನ ಮೊಬಲಗು ರೂ ೨೦,೦೦೦ ಅತೀ ಕಡಿಮೆ ಎಂದರೆ ರೂ ೭೫೦, ಸರಾಸರಿ ೭,೩೦೦ರಂತೆ ಸಿಕ್ಕಿದೆ ಈ ಸಂದರ್ಭದಲ್ಲಿ ಮಡಿದ ಯುರೋಪಿಯನರ ಉತ್ತರಾಧಿಕಾರಿಗಳಿಗೆ ಒಟ್ಟಿಗೆ ೪೮೦,೩೦ ರೂಪಾಯಿ ಹಂಚಿದೆ ಆ ಪೈಕಿ ಅತಿ ಹೆಚ್ಚಿನ ಮೊಬಲಗು ೩೦,೦೦೦, ಕಡಿಮೆ ಎಂದರೆ ೩೨೧ ಸರಾಸರಿ ೬೪,೬೧೭ ರೂಪಾಯಿಯಂತೆ ಕೊಟ್ಟಿದೆ ಹಾಗೆ ಜನರಿಂದ ಎಷ್ಟು ದ್ರವ್ಯ ಸಹಾಯ ಈ ಜನಗಳಿಗೆ ಸಿಕ್ಕಿದೆ ಎಂಬದ ಸರಕಾರದ ಅವಗಾಹನೆಗೆ ಬರಲಿಲ್ಲವಂತೆ

ವಿಜ್ಞಾಪನೆ

ವರ್ಷಾವಧಿ ಪೋಲೀಸು ಪಂದ್ಯಾಟಗಳು ಬರುವ ನವಂಬರ ತಿಂಗಳ ಅಂತ್ಯದಲ್ಲಿ ಜರಗುವವು ವಾಡಿಕೆಯ ಪಂದ್ಯಾಟಗಳಲ್ಲದೆ "ಹೋಕಿ' ಪಂದ್ಯಾಟವನ್ನು ಕೂಡ ಜರಗಿಸುವರೆ ಏರ್ಪಾಡು ಮಾಡಲ್ಪಟ್ಟಿರುವದು ಪಂದ್ಯಾಟಗಳ ವೆಚ್ಚದ ಬಗ್ಗೆ ವಂತಿಗೆಗಳನ್ನೂ, ಇನಾಮುಗಳನ್ನೂ ಜಿಲ್ಲಾ ಪೋಲೀಸು ಸುಪರಿಂಟೆಂಡೆಂಟರವರಿಗೆ ರವಾನಿಸಿದ್ದಲ್ಲಿ ಅವುಗಳು ಕೃತಜ್ಞತಾ ಪೂರ್ವಕವಾಗಿ ಸ್ವೀಕರಿಸಲ್ಪಟ್ಟಾವು.

ಪೋಲೀಸ್ ಆಫೀಸರರಿಗೂ ಖಾಸಗಿ ಜನರಿಗೂ ಪೋಲಿಸ್ ಇಲಾಖೆಯಿಂದ ಸಿಕ್ಕಿದ ಇನಾಮುಗಳು ಈ ಸಮಯದಲ್ಲೇ ಹಂಚಲ್ಪಡಾಗುವವು

ಅನುಕ್ರಮಣಿಕೆ.

[illegible]
[illegible]ಗಳು:—
[illegible]ಕಾರಿತೆಯು ಬೆಳೆಯುತ್ತಿದೆ . . . ,,
[illegible] ಅಸಹಕಾರಿತೆಯ ಬೆಳೆಯ ವೃದ್ಧಿಗೆ ಅಧಿಕಾರಿಗಳೇ ಗುಟ್ಟುರವಿಸುತ್ತಿದ್ದಾರೆ . . . [illegible]
[illegible] ನಲ್ಲಿ ಗವರ್ನರರ ಸ್ವಾಗತಕ್ಕೆ ಬಹಿಷ್ಕಾರ . . . [illegible]
[illegible] ಶಾಯರ್ ಕಮ್ಮಿಶನರ್ . . . ,,
[illegible]:
ವರ್ತಮಾನ ಸಂಗ್ರಹಗಳು:—
ಸ್ವದೇಶ ವೃತ್ತಾಂತ . . . [illegible]
ಪರದೇಶ ವರ್ತಮಾನ . . . ,,
ದಕ್ಷಿಣ ಕನ್ನಡ:—
[illegible], ಮಲ್ಕಿ, ಬಂಟ್ವಾಳ ಮೊಗ್ರಾಲ್ . . . ,,
ವರಿಷ್ಠಕೌನ್ಸಿಲಿನಲ್ಲಿ ಪ್ರಶ್ನೆಗಳು . . . [illegible]
ಮಹಾತ್ಮಾ ಗಾಂಧಿಯವರ ಒಂದು ಲೇಖನದ ಭಾಷಾಂತರ . . . [illegible]
ನ್ಯಾಯವಿಧಾಯಕ ಸಭೆಗೆ ಸಾಮಾನ್ಯ ಪ್ರತಿನಿಧಿಗಳನ್ನು ಆರಿಸಿ, ನೇಮಿಸುವದಕ್ಕೆ ಅಧಿಕಾರವುಳ್ಳ ಕೂಟಗಳು . . . ,,
ಶ್ರೀ ಸಂಸ್ಥಾನ ಕಾಶೀಮಠಕ್ಕೆ ಬಂಟ್ವಾಳ ಪೇಟೆಯ ವಂತಿಗೆ ಪಟ್ಟಿ . . . [illegible]
ನಾಟಕ ಪಾರಿತೋಷಿಕ ಸ್ಪರ್ಧೆ . . . ,,

ಸ್ವದೇಶಾಭಿಮಾನಿ.

ಶಕ ೧೮೪೩ ಭಾ. ಶು| ೧೧ ಶುಕ್ರವಾರ

ಒಮ್ಮತವು ಆವಶ್ಯಕವಾದ್ದು

(ನ ಬುದ್ಧಿಭೇದಂ ಜನಯೇತ್ — ಭಗವದ್ಗೀತಾ.)

ಇತಿಹಾಸದ ಪುನರಾವೃತ್ತಿಯಾಗುತ್ತದೆಂದು ಹೇಳುತ್ತಾರೆ, ಅದು ಸುಳ್ಳಲ್ಲ ಒಮ್ಮೆ ಆಗಿ ಹೋದ ವ್ಯಕ್ತಿಗಳು ಪುನರಾವರ್ತಿಸುವುದಿಲ್ಲ, ಆದರೂ ಒಂದು ಸಾರಿ ಸಂಭವಿಸಿದ ಸಂಗತಿಯು ರೂಪಾಂತರದಿಂದಲಾದರೂ ಪುನಃ ಸಂಭವಿಸುತ್ತದೆ ನಮ್ಮ ರಾಷ್ಟ್ರೀಯ ಸಭೆಯ ಇತಿಹಾಸದಲ್ಲೂ ಇದೇ ಮಾತು ಪ್ರತೀತಿಗೆ ಬರುತ್ತದೆ ಮೊತ್ತಮೊದಲು ರಾಷ್ಟ್ರೀಯ ಸಭೆಯು ಕೆಲವು ಕಾಲುಹವಾಲೆಗಳನ್ನು ಠರಾವುಗಳ ರೂಪದಿಂದ ಪಾಸು ಮಾಡಿ ಆ ಠರಾವುಗಳನ್ನು ಸರಕಾರದ ಕಡೆಗೆ ಕಳುಹಿಸುವ ವಾರ್ಷಿಕ ಕ್ರಮವನ್ನು ಇಟ್ಟುಕೊಂಡಿತ್ತು ಇಂಥ ರಾಷ್ಟ್ರೀಯ ಸಭೆಯ ಮುಂದೆ ಮೊದಲೂವೆ 'ಸ್ವರಾಜ್ಯ'ದಂಥ 'ತೀವ್ರ' ಧ್ಯೇಯವು ಯಾವಾಗ ಬಂದಿತ್ತೋ ಆಗ ರಾಷ್ಟ್ರೀಯ ಸಭೆಯ ಅನುಯಾಯಿಗಳಲ್ಲಿ ಇತ್ತಂಡಗಳಾಗಿದ್ದವು. ಎಂದರೆ ರಾಷ್ಟ್ರೀಯ ಸಭೆಗಳಲ್ಲಿ ಒಡಕು ಒಂದಿತ್ತು ನಮಗೆ ಠರಾವುಗಳನ್ನು ಮಾತ್ರ ವ ನಮ್ಮ ಹಳೆ ಸಂಪ್ರದಾಯವೆ ಸಾಕು, ಈ ಸ್ವರಾಜ್ಯದ ಉಪದ್ರವವು ಯಾಕೆ ಎಂದು ಹೇಳುವವರ ತಂಡ ಒಂದು, ಮತ್ತು ಸ್ವರಾಜ್ಯದ ಧ್ಯೇಯವನ್ನು ಮುಂದಿಟ್ಟುಕೊಳ್ಳದಿದ್ದರೆ ಅದು ರಾಷ್ಟ್ರೀಯ ಸಭೆಯೆ ಅಲ್ಲವೆಂದು ವಾದಿಸುವವರದು ಇನ್ನೊಂದು. ಈ ಎರಡು ತಂಡಗಳಲ್ಲಿ ಅನಂತರ ಪುನಃ ಐಕ್ಯವುಂಟಾಗಿ ರಾಷ್ಟ್ರೀಯ ಸಭೆಯ ಅಧಿವೇಶನಗಳು ನಡೆಯಹತ್ತಿದವು ಈಗ ಪುನಹ ಅದರಲ್ಲಿ ಮತಭೇದಗಳುಂಟಾಗ ತೊಡಗಿವೆ ರಾಷ್ಟ್ರವು ಚೇತನಮಯವಾಗಿರುವಾಗ ಇಲ್ಲವೆ ಚೇತನವನ್ನು ಹೊಂದುವ ಹಾದಿಗೆ ಬರುವಾಗ ಅದರ ಮುಂದೆ ದಿನೇ ದಿನೇ ಹೊಸ ಹೊಸ ಪ್ರಶ್ನೆಗಳು ಬರಹತ್ತುತ್ತವೆ ಇಂಥ ಹೊಸ ಪ್ರಶ್ನೆಗಳು ಬರಹತ್ತಿದ ಮೇಲೆ ಆ ಪ್ರಶ್ನೆಗಳ ತೀವ್ರಾತೀವ್ರತೆಯ ಮೇರೆಗೆ ಜನರಲ್ಲಿ ಪುನಃ ಪಕ್ಷಭೇದಗಳು ಉಂಟಾಗುತ್ತವೆ. ಅದರಂತೆಯೆ ಈಗ ಅಸಹಕಾರಿತೆಯ ತತ್ವವು ರಾಷ್ಟ್ರೀಯ ಸಭೆಯ ಮುಂದೆ ಬಂದು ಅದನ್ನು ರಾಷ್ಟ್ರೀಯ ಸಭೆಯು ಅಂಗೀಕರಿಸಿದ್ದರಿಂದ ನಮ್ಮ ದೇಶದಲ್ಲಿ ಕೆಲವು ಮತಭೇದಗಳು ಉಂಟಾಗ ತೊಡಗಿವೆ

ಈ ಮತಭೇದಗಳ ಸ್ವರೂಪವನ್ನು ಹೇಳುವುದೆಂದರೆ ಮುಂದಿನಂತೆ ವಿವರಿಸಬಹುದು ರಾಷ್ಟ್ರೀಯ ಸಭೆಯು ಅಸಹಕಾರಿತೆಯನ್ನು ಅಂಗೀಕರಿಸಿದ್ದು ಯೋಗ್ಯವಾದರೂ ಅದರ ಕಾರ್ಯಕ್ರಮವು ವ್ಯವಹಾರ್ಯವಾಗಿಲ್ಲವಾದ್ದರಿಂದ ಆ ಕಾರ್ಯಕ್ರಮಕ್ಕೆ ಅದು ಇಷ್ಟು ಬೇಗನೆ ಸಮ್ಮತಿಯನ್ನು ಕೊಡುವುದು ಬೇಡವಿತ್ತು ಎಂದು ಕೆಲವರು ವಾದಿಸುತ್ತಿದ್ದಾರೆ, ಹಾಗು ಇನ್ನು ಕೆಲವರು ಅಸಹಕಾರಿತೆಯು ಕೇವಲ ಅಪ್ರಬುದ್ಧವಾದ ಉಪಾಯವೆಂದು ಹೇಳುತ್ತಿದ್ದಾರೆ. ಈ ಎರಡನೆ ಮತವು ರಾಷ್ಟ್ರೀಯ ಸಭೆಯೊಳಗಿನವರದಲ್ಲ, ಅಲ್ಲದೆ ಈ ಪಕ್ಷವು ಇದುವರೆಗೆ ಅನೇಕ ಸಂದರ್ಭಗಳಲ್ಲಿ ಜನತೆಯ [illegible] ಸಂಪ್ರದಾಯವನ್ನು ಕೈಕೊಂಡಿದೆ. ಅದ್ದರಿಂದ ಈ ಪಕ್ಷದ ವಿಚಾರಣೆಯನ್ನು ಮಾಡಿ ಕಾಲ ಮತ್ತು ಸ್ಥಳದ ಅಪವ್ಯಯವನ್ನು ಮಾಡಲು ನಾವು ಇಚ್ಛಿಸುವುದಿಲ್ಲ. ಅಸಹಕಾರಿತೆಯನ್ನು ತತ್ವತಃ ಒಪ್ಪಿ ಅದರ ಕಾರ್ಯಕ್ರಮವನ್ನು ಸ್ವೀಕರಿಸಲು ಸಂಕೋಚಪಡದವರ ಮುಖ್ಯವಾದ ಅಂಬೋಣವು ಅಥವಾ ಅಕ್ಷೇಪವು ಏನಂದರೆ ಬರುವ ಕೌನ್ಸಿಲುಗಳನ್ನು ರಾಷ್ಟ್ರೀಯ ಸಭೆಯು ಬಹಿಷ್ಕರಿಸಿದರೆ ಈ ದೇಶದ ಮುಂದಿನ ಪ್ರಗತಿಗೆ ಬಾಧಕವಾಗುತ್ತದೆ. ಈ ಮಾತು ಕೇವಲ ತಪ್ಪೆಂದು ನಾವು ಹೇಳುವುದಿಲ್ಲ. ಆದರೆ ಮೊಂಟೆಗ್ಯು ಚೆಮ್ಸಫರ್ಡ ಸುಧಾರಣೆಗಳ ರಿಪೋರ್ಟು ಪ್ರಸಿದ್ಧವಾದಂದಿನಿಂದ ರಾಷ್ಟ್ರೀಯ ಸಭೆಯು ಸದರಿ ಸುಧಾರಣೆಗಳು, ನಿರಾಶಾಜನಕ, ಅಪೂರ್ಣ ಎಂದು ಮುಂತಾಗಿ ಹೇಳಿಕೊಂಡೆ ಬಂದಿದೆ ಮಾತ್ರವಲ್ಲ, ಅಮೃತಸರದ ಕೊಂಗ್ರೆಸಿನಲ್ಲಿ ಅಸಹಕಾರ್ಯದ ಠರಾವು ಪಾಸಾಗುವುದೇ ಇತ್ತು ಯಾಕೆಂದರೆ, ಪಂಜಾಬದ ಅನರ್ಥವನ್ನು ಹಾಜರೀದಿಗೆ ತಂದು ಕೊಟ್ಟ ಕೊಂಗ್ರೆಸ ಕಮಿಟಿಯ ರಿಪೋರ್ಟು ಆಗ ತಾನೆ ಜನತೆಯ ಮುಂದೆ ಬಂದಿತ್ತು ಮತ್ತು ಇದರಿಂದ ರಾಷ್ಟ್ರಭಕ್ತರಲ್ಲಿ ಒಂದು ನಮೂನೆಯ ವೇಗವು ಹುಟ್ಟಿತ್ತು ಹಂಟರ ಕಮಿಟಿಯ ರಿಪೋರ್ಟು ಆ ಸಮಯದಲ್ಲಿ ಪ್ರಸಿದ್ಧವಾಗಿದ್ದಿಲ್ಲವಾದರೂ ಅದರ ಸ್ವರೂಪದ ಕಲ್ಪನೆಯು ಜನರಿಗೆ ಸರಿಯಾಗಿ ಮೊದಲೆ ಒಂದಿತ್ತು ಪಾರ್ಲಿಮೆಂಟಿನಲ್ಲಿ ಸುಧಾರಣಾ ಕಾನೂನಿನ ವಾದ ವಿವಾದವು ನಡೆದಾಗ ಬ್ರಿಟಿಷ್ ಮುತ್ಸದಿಗಳ ಔದಾರ್ಯವು ಎಷ್ಟು ದೊಡ್ಡದೆಂಬುವೂ ಕೂಡ ಲೋಕಕ್ಕೆ ಜಾಹೀರೇ ಆಗಿಹೋಯಿತು. ಇಂಥ ಪರಿಸ್ಥಿತಿಯಲ್ಲಿ ರಾಷ್ಟ್ರೀಯ ಪಕ್ಷವು—ಸರಕಾರವು ಕೇಳುವ ಜನತೆಯ ಸಹಕಾರವು ಸಿಗಲಿಕ್ಕಿಲ್ಲವೆಂದು ಠರಾವನ್ನು ಸಭೆಯಲ್ಲಿ ಪಾಸುಮಾಡಿಸಿಕೊಳ್ಳಲಿಕ್ಕೆ ಇತ್ತು ಆದರೆ ಮಹಾತ್ಮಾ ಗಾಂಧಿಗಳಿಗ ಆಗ ಬ್ರಿಟಿಷ ನ್ಯಾಯ ದೇವತೆಯ ಮೇಲೆ ಮತ್ತು ಮುತ್ಸದಿತನದ ಮೇಲೆ ಮೇರು ಪರ್ವತಪ್ರಾಯವಾದ ಭರವಸೆಯು ಇದ್ದದ್ದರಿಂದ ಅಮೃತಸರದ ಅಧಿವೇಶನದಲ್ಲಿ ಅಸಹಕಾರಿತೆಯ ಠರಾವನ್ನು ಅವರು [illegible]ದರು ಪರಂತು ದೇಶದ ದುರ್ದೈವವೇನೆಂದರೆ ಮಹಾತ್ಮಾ ಗಾಂಧಿಗಳ ಭರವಸೆಯ ಮೇರು ಪರ್ವತವು ಈ ಆರು ತಿಂಗಳಲ್ಲಿ ಮೆಲ್ಲಮೆಲ್ಲನೆ ಜೀರ್ಣಾವಸ್ಥೆಯನ್ನು ಹೊಂದುತ್ತ ಒಂದು ಅದು ಕೂಡ ಕೊನೆಗೆ ಒಡೆದು ಹೋಯಿತು. ಇರಲಿ ಈ ಚರಿತ್ರವನ್ನು ನಾವು ಇಲ್ಲಿ ಪ್ರಸ್ತಾಪಿಸಿದ ಕಾರಣವೇನೆಂದರೆ ರಾಷ್ಟ್ರೀಯರಿಗೆ ಅಸಹಕಾರಿತೆಯು ಅವ್ಯಕ್ತರೂಪದಲ್ಲಿ ಗಾಂಧಿಗಳಿಗಿಂತ ಮೊದಲೇ ಉಚಿತವಾಗಿಯೆ ಮಾನ್ಯವಿತ್ತು ಹಾಗು ರಾಷ್ಟ್ರೀಯ ಪಕ್ಷದ ಪ್ರಕೃತದ ಸುಧಾರಣೆಗಳು ಅಪೂರ್ಣ ಮತ್ತು ನಿರಾಶಾಜನಕವೆಂದು ತೋರುತ್ತಲೇ ಇದ್ದವು ಎಂದ ಮೇಲೆ ಅಂಥ ವಿಕಲಾಂಗವಾದ ಮತ್ತು ದೋಷಯುಕ್ತವಾದ ಸುಧಾರಣೆಗಳ ಆಧಾರದಿಂದ ಅಸ್ತಿತ್ವದಲ್ಲಿ ಬರಲಿಕ್ಕಿದ್ದ ಕೌನ್ಸಿಲುಗಳು ಯಾವ ಉಪಕಾರವನ್ನು ಮಾಡಬಲ್ಲವು, ಮತ್ತು ಅಂಥ ವಿಕಲಾಂಗ ಕೌನ್ಸಿಲುಗಳಲ್ಲಿ ಸಭಾಸದರಾಗಿ ಹೋಗುವುದು—ಅಂಗಹೀನ ವಧುವಿನ ಕೈಯನ್ನು ಹಿಡಿಯಲು ನಿಂತ ವರನಂತೆ ನಾಚಿಕೆಯ ಮಾತಲ್ಲವೆ ಎಂದು ರಾಷ್ಟ್ರೀಯರಿಗೆ ಕಾಣುತಿತ್ತು. ಕೌನ್ಸಿಲುಗಳ ಬಹಿಷ್ಕಾರವಾದರೂ ರಾಷ್ಟ್ರೀಯ ಪಕ್ಷದವರಿಗೆ ಕೇವಲ ಅಸಂಕಲ್ಪಿತವಾದ ವಿಷಯವೆಂದು ಎಂದೂ ಹೇಳಲಾಗುವುದಿಲ್ಲ

ಈಗ ಇನ್ನೊಂದು ಪಕ್ಷದವರಿಗೆ ಕೌನ್ಸಿಲುಗಳಲ್ಲಿ ಹೋಗುವುದು ಎಂದರೆ ಸರಕಾರದೊಡನೆ ಜನತೆಯ ಕಡೆಯಿಂದ ವ್ಯಾಜ್ಯ ಮಾಡಲು, ಸರಕಾರದೊಡನೆ ಪ್ರಸಂಗವಿಶೇಷದಲ್ಲಿ ಅಸಹಕಾರ್ಯ ಮಾಡಲು ಹೋಗುವದಾಗಿದೆ ಎಂದು ಕೆಲವರು ಹೇಳುವ ಮಾತಿನಲ್ಲಿಯೂ ಕೆಲವು ಮಟ್ಟಿನ ಅರ್ಥವಿದೆ. ಅಲ್ಲದೆ ಅಮೃತಸರದ ರಾಷ್ಟ್ರೀಯ ಸಭೆಯು ಸದರಿ ಸುಧಾರಣೆಗಳನ್ನು ಅವು ಅಪೂರ್ಣವಾಗಿದ್ದರೂ, ಅಂಗೀಕರಿಸಿ ಬರುವ ಕೌನ್ಸಿಲುಗಳಲ್ಲಿ ಕೊಂಗ್ರೆಸ್ ಕಡೆಯವರು ಕಾರ್ಯಭಾಗವನ್ನು ತೆಕ್ಕೊಳ್ಳಬೇಕು ಎಂದು ಠರಾಯಿಸಿದೆ ಹೀಗಿರುವಲ್ಲಿ ನೋನ್ ಕೊ ಒಪರೇಶನ್ನಿನ ಹೆಸರಿನಿಂದ ಈಗ ಮಾತ್ರ ಕೌನ್ಸಿಲುಗಳನ್ನು ಬಹಿಷ್ಕರಿಸುವುದು ಹೇಗೆ ಎಂದು ರಾಷ್ಟ್ರೀಯ ಪಕ್ಷದವರಲ್ಲಿ ಕೆಲವರು ಈಗಲೂ ವಾದಿಸುತ್ತಿದ್ದಾರೆ ಪರಂತು ಈ ಎಲ್ಲ ಯುಕ್ತಿವಾದಕ್ಕೆ ರಾಷ್ಟ್ರೀಯ ಸಭೆಯಲ್ಲಿ ಅಸಹಕಾರಿತೆಯ ಠರಾವು ಬಹುಮತದಿಂದ ಪಾಸಾಗುವುದಕ್ಕಿಂತ ಮುಂಚೆಯೆ ಅವಕಾಶವಿತ್ತಲ್ಲದೆ ಈಗ ಅಷ್ಟೊಂದು ಎಡೆ ಇಲ್ಲ ರಾಷ್ಟ್ರೀಯ ಸಭೆಯಲ್ಲಿ ಪಾಸಾದ ಠರಾವು ಕಾರ್ಯಕ್ರಮದ ಮಟ್ಟಿಗೆ ದೋಷಾಸ್ಪದವಾದ್ದು ಇರಬಹುದು. ಅದು ಕೇವಲ ನಿರ್ದೋಷವಾಗಿ ಉಂಟು ಎಂದು ಯಾರೂ ಹೇಳುವುದಿಲ್ಲ. ಅಸಹಕಾರಿತೆಯ [illegible]

[illegible] ಭೇದಗಳನ್ನು [illegible] ಸಂಗತಿಗಳನ್ನು [illegible] ರಾಷ್ಟ್ರೀಯ [illegible] ಪ್ರಾಂತ್ಯ ಮಹಾರಾಷ್ಟ್ರ, ಮುಂಬಯಿ ಮುಂತಾದ [illegible] ರಾಷ್ಟ್ರೀಯರು ಬರುವ ಕೌನ್ಸಿಲುಗಳನ್ನು ಬಹಿಷ್ಕರಿಸುವ [illegible]ಮ್ಮ ಉಮೇದುವಾರಿಕೆಯನ್ನು ಹಿಂತೆಗೆಯಹತ್ತಿದ್ದಾರೆ.

ಅಲ್ಲದೆ ಇಲ್ಲಿ ಇನ್ನೊಂದು ಸಂಗತಿಯು ವಿಚಾರಣೀಯವಾಗಿದೆ. ಮಹಾತ್ಮಾ ಗಾಂಧಿಗಳು ಪ್ರಥಮತಃ ಅಸಹಕಾರಿತೆಯ ಉಪಾಯವನ್ನು ಖಿಲಾಫತ್ತು ಮತ್ತು ಪಂಜಾಬ ಪ್ರಕರಣ ಇವುಗಳಿಗೋಸ್ಕರ ಮಾತ್ರ ಯೋಜಿಸಿದ್ದರು. ಪರಂತು ರಾಷ್ಟ್ರೀಯ ದೃಷ್ಟಿಯಿಂದಲೂ ವ್ಯಾಪಕ ಬುದ್ಧಿಯಿಂದಲೂ ವಿಚಾರಮಾಡುವಾಗ ಗಾಂಧಿಗಳ ಈ ಯೋಜನೆಯು ಸದೋಷವಾಗಿತ್ತು. ಅವರ ಅಸಹಕಾರಿತೆಯ ಉಪಾಯವು ತೀವ್ರವಾಗಿದ್ದರೂ ಅವರ ಮುಂದೆ ಮೊದಲು ನಿಶ್ಚಿತವಾದ ಯಾವ ರಾಷ್ಟ್ರೀಯ ಧ್ಯೇಯವೂ ಇದ್ದಿಲ್ಲ. ಪಂಜಾಬ ಪ್ರಕರಣವು ಸುಧಾರಿತವಾದರೆ ಹಾಗು ಖಿಲಾಫತ್ತಿನ ಆಪತ್ತು ಪರಿಹೃತವಾದರೆ ಗಾಂಧಿಗಳ ಅಸಹಕಾರಿತೆಯ ಬಾಣವು ತಿರುಗಿ ಬತ್ತಳಿಕೆಯಲ್ಲಿ ಬಂದು ಬೀಳುತಿತ್ತು ಪರಂತು ರಾಷ್ಟ್ರದ ಹಿತದ ದೃಷ್ಟಿಯಿಂದ ಅಲ್ಪಕಾರ್ಯಕ್ಕೆ ಮಹಾರಂಭದಂತೆ ಇದು, ನಿರರ್ಥಕ ಶ್ರಮದ ಕೆಲಸವಾಗುತಿತ್ತು. ಅಸಹಕಾರಿತೆಯಂಥ ಬ್ರಹ್ಮಾಸ್ತ್ರವನ್ನು ಚಿಲ್ಲರೆಯ ಅಹವಾಲುಗಳ ಮೇಲೆ ಪ್ರಯೋಗಿಸುವುದು ಚಂದವೆ? ಅಸಹಕಾರಿತೆಯಂಥ ಹೇಮಗರ್ಭ ಮಾತ್ರೆಯನ್ನು ಆಗಂತುಕ ಜ್ವರಕ್ಕೆ ತೇದುಕೊಡುವುದೆ? ಈ ಅನೌಚಿತ್ಯವು ಮಹಾತ್ಮಾ ಗಾಂಧಿಗಳ ಲಕ್ಷ್ಯಕ್ಕೆ ಬಂದು ಹಿಂದಿ ಸ್ವರಾಜ್ಯವು ಈ ಉಪಾಯದ ಧ್ಯೇಯವಾಗಿದೆ ಎಂದು ಅವರು ತಮ್ಮ ಯೋಜನೆಯನ್ನು ಸರಿಗೊಳಿಸಿದರು. ಮತ್ತು ಈ ರೀತಿಯಿಂದ ಸರಿಯಾದ ಧ್ಯೇಯಕ್ಕೆ ಸರಿಯಾದ ಉಪಾಯವನ್ನು ಕಲ್ಪಿಸಿ ಅದನ್ನು ರಾಷ್ಟ್ರೀಯ ಸಭೆಯು ದೇಶದ ಮುಂದೆ ಇಟ್ಟಿರುವ ಕಾರಣ ಮೇಲಿನಂತೆ ಅದಕ್ಕೆ ರಾಷ್ಟ್ರೀಯರ ಅನುಕೂಲ್ಯವು ದಿನೇ ದಿನೇ ದೊರಕುತ್ತ ಹೋಗಿದೆ ಈಗ ಕೆಲವರು ರಾಷ್ಟ್ರೀಯ ಐಕ್ಯದ ಮಹತ್ವವನ್ನು ಲಕ್ಷ್ಯಕ್ಕೆ ತಾರದೆ ಈ ಠರಾವನ್ನು ತ್ಯಜಿಸಲು ಉದ್ಯುಕ್ತರಾಗಿದ್ದಾರೆ ಎಂಬುದು ನಿಜ. ಆದರೆ ಮೇಲಿನ ಗೀತಾವಚನದಲ್ಲಿ ಹೇಳಿದಂತೆ ಬುದ್ಧಿಭೇದವನ್ನು ಹುಟ್ಟಿಸಲು ಇದು ಸಮಯವಲ್ಲ ರಾಷ್ಟ್ರಾಜ್ಞೆಯನ್ನು ದೇವತಾಜ್ಞೆಯಂತೆ ಕೈಕೊಳ್ಳುವುದು ಪ್ರತಿ ಒಬ್ಬ ದೇಶಭಕ್ತನ ಕರ್ತವ್ಯವಾಗಿದೆ. ಕೌನ್ಸಿಲುಗಳನ್ನು ಬಹಿಷ್ಕರಿಸುವುದರಿಂದ ಹಿಂದುಸ್ಥಾನದ ಪ್ರಗತಿಯು ಮುಳುಗಿ ಹೋಗುವುದಿಲ್ಲ ನಾಳೆಯ ಚುನಾವಣೆಯು ತಪ್ಪಿಹೋದರೂ ಇನ್ನು ಮುಂದೆ ಚುನ್ನಾವಣೆಗಳು ಬರಲಿಕ್ಕೆ ಇದ್ದಾವೆ ಅವುಗಳಲ್ಲಿ ಸೇರಿ ನಿಮ್ಮ ನಿಮ್ಮ ಪೌರುಷವನ್ನು ತೋರಿಸಬಹುದು ಈಗ ರಾಷ್ಟ್ರಾಜ್ಞೆಗೆ ಮಾನಕೊಡುವುದೇ ಎಲ್ಲರ ಮುಖ್ಯ ಕರ್ತವ್ಯವಾಗಿದೆ. ನಮ್ಮಲ್ಲಿ ನಾವು ಐಕ್ಯವನ್ನು ತೋರಿಸಿಕೊಳ್ಳದೆ ಇದ್ದರೆ ರಾಷ್ಟ್ರಕ್ಕೋಸ್ಕರ ಚಿಲ್ಲರೆ ಸಂಗತಿಗಳನ್ನು ಕೂಡ ತ್ಯಜಿಸಲು ನಾವು ತಯಾರಾಗದೆ ಇದ್ದರೆ ನಮ್ಮ ರಾಷ್ಟ್ರದ ಉದ್ಧಾರವಾಗುವುದೆಂದು ನೆನಸುವುದು ಅಸಾಧ್ಯವಲ್ಲವೆ? ಬೇಕಷ್ಟು ಮತಭೇದಗಳಿರಲಿ, ಬೇಕಷ್ಟು ಪಕ್ಷಭೇದಗಳಿರಲಿ ಅವುಗಳನ್ನು ಒತ್ತಿಬಿಟ್ಟು ಒಮ್ಮತ ಮಾಡಿಕೊಳ್ಳುವುದೆ ಈಗ ರಾಷ್ಟ್ರೀಯರ ಕರ್ತವ್ಯವಾಗಿದೆ. ಈ ಕರ್ತವ್ಯದ ಆವಶ್ಯಕತೆಯು ಮೆಲ್ಲ ಮೆಲ್ಲನೆ ಈಗ ಎಲ್ಲರ ಮನಸ್ಸಿಗೆ ಬರಹತ್ತಿದೆ

ಸ್ಫುಟವಿಚಾರಗಳು.

೧. ರಾಷ್ಟ್ರೀಯ ಸಭೆಯಲ್ಲಿ ಅಸಹಕಾರಿತೆಯ ಠರಾವು ಸ್ಥಾಪಿತವಾದಂದಿನಿಂದ ಅದರ ಪ್ರಾಬಲ್ಯವು ಬೆಳೆಯುತ್ತ ಹೋಗಿದೆ. ಬಂಗಾಲದಲ್ಲಿ ಬಿ. ವ್ಯೋಮಕೇಶ ಚಕ್ರವರ್ತಿ, ಬಿ. ಚಿತ್ತರಂಜನದಾಸ ಮುಂತಾದ ಸುಮಾರು ೨೦ ಜನ ಪ್ರಮುಖರು ಜಾಹೀರ ಪತ್ರಕವನ್ನು ಹೊರಡಿಸಿ ತಂತಮ್ಮ ಉಮೇದುವಾರಿಕೆಯನ್ನು ಹಿಂತೆಗೆದಿದ್ದಾರೆ. ಮಧ್ಯಪ್ರಾಂತ್ಯದಲ್ಲಿ ಎಂ. ಜೋಶಿ [illegible] ಹರು, ಮಹಾರಾಷ್ಟ್ರದಲ್ಲಿ ಶ್ರೀ. ನರಸೋಪಂತ ಕೇಳಕರ, ಮುಂಬ[illegible]

[illegible] ಗಂಗಾಧರರಾವ [illegible] ರಾಜಗೋಪಾಲಾಚಾರ್ಯ [illegible] ಮುಂತಾದವರು ಅಸಹ [illegible] ಕೌನ್ಸಿಲುಗಳ ಬಹಿಷ್ಕಾರ [illegible] ಪ್ರಾಂತದೂ [illegible] ಮತ್ತು [illegible] ಬಿಟ್ಟಿದ್ದೇವೆ. [illegible] ದವರಲ್ಲವೂ [illegible] ವ್ರತ [illegible] ಕೌನ್ಸಿಲಿನ ಬಹಿಷ್ಕಾ [illegible] ಸಭೆಯು [illegible] ಶರೀನಿವಾಸದೊಡನೆ ಅವರು ಅಸ [illegible] ತಮ್ಮ ಹಡಗುಗಳನ್ನು ಸ್ಟೀಕ್ [illegible] ಮದ್ರಾಸಿನಲ್ಲಿ ಮಿ. ಕಸ್ತೂರಿ ರಂಗ ಐಯ್ಯಂ [illegible] ಕೆಲವರು ಈ ಚಳವಳಿಂದ ತಮ್ಮ ಮೈಯನ್ನು [illegible] ದ್ದರು ನಿಜ. ಆದರೆ ಅವರು ಪ್ರಾ. ಕಾಂಗ್ರೆಸ್ [illegible] ಹುದ್ದೆಗಳಿಗೆ ಕೊಟ್ಟಿರುವ ರಾಜಿನಾಮೆಯನ್ನು [illegible] ಚನೆಯಿಂದ ಹಿಂದಕ್ಕೆ ತೆಕ್ಕೊಳ್ಳಬೇಕೆಂದು ಅವ [illegible] ಸೂಚನೆಯಾಗಿಯದೆ. ಮತ್ತು ಅವರು ಅದರಂತೆ [illegible] ಚನೆಮಾಡಿ ತಂತಮ್ಮ ರಾಜಿನಾಮೆಗಳನ್ನು ಹಿಂದಕ್ಕೆ [illegible] ರೆಂದು ನಂಬಲು ಅವಕಾಶವಿದೆ. ಅಂತು ಅಸಹಕಾ [illegible] ಯು ಲತೆಯು ಮೆಲ್ಲ ಮೆಲ್ಲ ನೆಯಾದರೂ ಅವಿಚ್ಛಿನ್ನವಾಗಿ [illegible] ಯುತ್ತಿದೆ.

೨. ಅಸಹಕಾರಿತೆಯು ಇನ್ನಷ್ಟು ವೇಗದಿಂದ ಬೆಳೆಯುವಂತೆ ಸರಕಾರಿ ಉದ್ಯೋಗಸ್ಥರೇ ಕೆಲವಂಶದಿಂದ ಸಹಾಯಮಾಡುತ್ತಾರೆಂದು ಹೇಳಿದರೆ ಅದು ತಪ್ಪಾಗಲಿಕ್ಕಿಲ್ಲ. ಅಸಹಕಾರಿತೆಯ ವೃದ್ಧಿಯಲ್ಲಿ ಅಧಿಕಾರಿಗಳೇ ಸಹಕಾರ್ಯವನ್ನು ತೋರಿಸುತ್ತಿದ್ದ ವಾಚಕರಿಗೆ ಆಶ್ಚರ್ಯಕರವಾಗಿ ತೋರೀತು. ಪರಂತು ವಸ್ತುಸ್ಥಿತಿಯು ಹಾಗೆಯೇ ಇದೆ. ವರಿಷ್ಠ ಕಾಯಿದೆ ಕೌನ್ಸಿಲಿನಲ್ಲಿ ನ್ಯಾಯ ದೊರೆಗಳು ನಾಮದಾರ ಶಾಸ್ತ್ರಿಗಳ ಪಂಜಾಬದ ಠರಾವಿಗೆ ಪ್ರತಿಬಂಧ ಮಾಡಿದರು. ಆದುದರಿಂದ ಶಾಸ್ತ್ರಿಗಳು ತಮ್ಮ ಮಿಕ್ಕ ಠರಾವುಗಳನ್ನೆಲ್ಲ ಹಿಂದಕ್ಕೆ ಎಳೆದರು. ಸಂಕ್ಷೇಪದಿಂದ ಇದರ ವೃತ್ತಾಂತವೇನೆಂದರೆ, ನಾಮದಾರ ಶಾಸ್ತ್ರಿಗಳು ಪಂಜಾಬ ಪ್ರಕರಣದಲ್ಲಿ ಅಪರಾಧಿಗಳೆನಿಸಲ್ಪಟ್ಟ ಡಾಯರ ಪ್ರಭೃತಿ ಅಧಿಕಾರಿಗಳಿಗೆ ಯೋಗ್ಯವಾದ ಶಿಕ್ಷೆಯಾಗಬೇಕು, ಅವರಿಗೆ ಪೆನ್‌ಶನು ಸಿಗಬಾರದು ಎಂಬ ಅರ್ಥದ ಠರಾವನ್ನು ವ. ಕೌನ್ಸಿಲಿನ ಮುಂದೆ ತರುವವರಿದ್ದರು. ಆದರೆ ವೈಸರಾಯರು ಅದನ್ನು ಸ್ವೀಕರಿಸಲಿಲ್ಲ. ಆಗ ಶಾಸ್ತ್ರಿಗಳು ವೈಸರಾಯರ ಈ ಕೃತಿಯ ಮತ್ತು ಧೋರಣದ ನಿಷೇಧಮಾಡುವ ಉದ್ದೇಶದಿಂದ ತಮ್ಮ ಬೇರೆ ಠರಾವುಗಳನ್ನು ಸಹ ಹಿಂದಕ್ಕೆ ಎಳೆದರು. ನಾಮದಾರ ಸಚ್ಚಿದಾನಂದ ಸಿಂಹರು ಕೂಡ ಇದ ಬಗ್ಗೆ ಒಂದು ಠರಾವನ್ನು ತರುವವರಿದ್ದರು. ಅವರೂ ತಮ್ಮ ಠರಾವನ್ನು ಹಿಂತೆಗೆದರು. ಹಾಗೆಯೇ ನಾಮದಾರ ಚಂದಾ, ರಂಗಸ್ವಾಮಿ ಐಯ್ಯಂಗಾರ, ನಾಮದಾರ ಖಾಪರ್ಡೆ ಮುಂತಾದ ಇತರ ಸಭಾಸದರು ಸಹ ಇದೆ ಅಸಹಕಾರಿತೆಯ ಮಾರ್ಗವನ್ನವಲಂಬಿಸಿ ತಂತಮ್ಮ ಠರಾವುಗಳನ್ನು ಹಿಂದಕ್ಕೆ ತೆಕ್ಕೊಂಡರು. ನಾಮಧಾರ ಪಟೇಲರಂತೂ ಇನ್ನೂ ಸರಳವಾದ ಮಾರ್ಗವನ್ನು ಕೈಕೊಂಡು ತಮ್ಮ ಸಭಾಸದತ್ವಕ್ಕನೆ ರಾಜಿನಾಮೆಯನ್ನು ಕಳುಹಿಸಿಕೊಟ್ಟಿದ್ದಾರೆ! ಈ ವೃತ್ತಾಂತದ ಮೇಲಿಂದ ಸ್ಪೆಶಲ್ ಕಾಂಗ್ರೆಸಿನಲ್ಲಿ ಅಸಹಕಾರಿತೆಯ ಠರಾವು ಪಾಸಾದ ಈ ಸುಮುಹೂರ್ತದಲ್ಲಿ ನಾಮದಾರ ಶಾಸ್ತ್ರಿಗಳಂಥ ಶಾಂತ ಪಕ್ಷದ ಧುರೀಣರು ವರಿಷ್ಠ ಕೌನ್ಸಿಲಿನಲ್ಲಿ ಅಸಹಕಾರಿತೆಯ ಬೀಜಾರೋಪಣೆಯನ್ನು ಹೇಗೆ ಮಾಡಿದರೆಂಬುದು ವಾಚಕರಿಗೆ ಗೊತ್ತಾಗುವುದು! ರಾಷ್ಟ್ರೀಯ ಸಭೆಯು ಬರುವ ಕೌನ್ಸಿಲುಗಳಿಗೆ ಬಹಿಷ್ಕಾರ ಹಾಕಬೇಕೆಂದು ಹೇಳುತ್ತವಾದರೆ ನಾಮದಾರ ಶಾಸ್ತ್ರಿಗಳು ಈಗ ಇರುವ ಕೌನ್ಸಿಲನ್ನೆ ಬಹಿಷ್ಕರಿಸ ತೊಡಗಿದ್ದಾರೆ! ಈ ದೃಷ್ಟಿಯಿಂದ ವಿಚಾರಮಾಡುವಾಗ ಶಾಸ್ತ್ರಿಗಳ ಈ ವರ್ತನವು ರಾಷ್ಟ್ರೀಯ ಸಭೆಯ ನೋನ್-ಕೊ-ಒಪರೇಶನಿನ ಠರಾವಿಗಿಂತ ಎಷ್ಟೊ ಸರಸವಾಗಿದೆ!!

೩. ಈ ಮೇರೆಗೆ ಸರಕಾರದೊಡನೆ ಅಸಹಕಾರಿತ್ವವನ್ನು ಪ್ರಾರಂಭಿಸಿದ ಸಭಾಸದರೊಡನೆ ನಾಮದಾರ ಖಾಪರ್ಡೆಯವರು, ಅಸಹಕಾರಿತೆಯನ್ನು ಮಾಡುವ ಉದ್ದೇಶದಿಂದ ತಮ್ಮ ಒಂದು ಠರಾವನ್ನು ಮಾತ್ರ ಮುಂದೆ ತಂದರು. ಗವರ್ನಮೆಂಟ್ ಪ್ರೆಸಿನಲ್ಲಿ ಕೆಲಸಮಾಡುವ ಕಾಮಗಾರರಿಗೆ ಅವರ ಶ್ರಮಕ್ಕೆ ತಕ್ಕಷ್ಟು ಸಂಬಳ ಸಿಗುವುದಿಲ್ಲ, ಅವರ ಕೆಲಸದ ಸಮಯವನ್ನು ಕಡಿಮೆಮಾಡಬೇಕು, ಇತ್ಯಾದಿ ಈ ಸಂಗತಿಗಳನ್ನು ಆಲೋಚಿಸುವ ಉದ್ದೇಶದಿಂದ ಸರಕಾರಿ ಬಿನ್ ಸರಕಾರಿ ಗೃಹಸ್ಥರ ಒಂದು ಕಮಿಟಿಯನ್ನು ನೇಮಿಸಬೇಕೆಂದು ಖಾಪರ್ಡೆಯವರು ತಮ್ಮ ಠರಾವಿನಲ್ಲಿ ಸೂಚಿಸಿದ್ದರು. ಈ ಠರಾವಿನ ಮೇಲೆ ವಾದಪ್ರತಿವಾದಗಳು ನಡೆದವು. ಕೊನೆಗೆ ಸರಕಾರಿ ಸಭಾಸದರೊಬ್ಬರು ಇದನ್ನು ಅಂಗೀಕರಿಸಲಾಗುವುದಿಲ್ಲವೆಂದು ನಿರಾಕರಿಸಿ ದೇಶದಲ್ಲಿ ಈಗ ಪ್ರಾರಂಭವಾಗಿರುವ ಅಸಹಕಾರಿತೆಯು ಬೆಳೆಯಲಿ ತಮ್ಮ ಕಡೆಯಿಂದ ಕೆಲವಂಶವನ್ನು ತೋರಿಸಿದರು. ಅಸಹಕಾರಿತೆಯ ಯುಗವೆಂದರೆ ಇದೇ ಸರಿ! ಸರಕಾರಿ ಪ್ರೆಸ್ಸುಗಳಲ್ಲಿ ಕಷ್ಟ ಪಟ್ಟು ಕೊನೆಗೆ ಮುಷ್ಕರ ಹಾಕಿದ ಜನರ ಹಾಲುಹವಾಲುಗಳನ್ನು ಸರಿಗೊಳಿಸಲು ಯಾವ ಸರಕಾರವು ತಯಾರಿಲ್ಲವೋ ಮತ್ತು ಯಾವ ಸರಕಾರದ ಈ ದುರಾಗ್ರಹದ ದೆಸೆಯಿಂದ ಆ ಮುಷ್ಕರಗಾರರಿಗೇ ಅಲ್ಲ, ಯುನಿವರ್ಸಿಟಿಯ ಟೆಕ್ಸ್ಟ್ ಪುಸ್ತಕಗಳು ಪ್ರಕಟವಾಗದೆ ಇದ್ದದರಿಂದ ವಿದ್ಯಾರ್ಥಿ ವರ್ಗಕ್ಕೆ ಕೂಡ ತೊಂದರೆಯು ಬಂದು ಸಂಭವಿಸಿದೆಯೊ ಅಂಥ ಸರಕಾರದೊಡನೆ ಯಾರಾದರೂ ಯಾವ ಸಹಕಾರಿತೆಯನ್ನು ಮಾಡಿಯಾರು?

೪. ಈ ಮೇರೆಗೆ ವರಿಷ್ಠಕೌನ್ಸಿಲಿನಲ್ಲಿ ಅಕಲ್ಪಿತವಾಗಿ ಅಸಹಕಾರಿತೆಯು ಪ್ರಾರಂಭವಾದ್ದರಿಂದ ಒಂದು ಸಂಗತಿಯು ಆಲೋಚನೆಗೆ ಬರುತ್ತದೆ. ಒಬ್ಬ ಮನುಷ್ಯನ ಗುಣದೋಷಗಳನ್ನು ಅವನ ಜನ್ಮ ಮುಹೂರ್ತದ ಮೇಲೆ ಹೇಗೆ ನಿರ್ಣಯಿಸಬಹುದಾಗುತ್ತದೊ ಹಾಗೆಯೆ ಅವನ ಜೀವನ ಸಮಾಪ್ತಿಯ ಮೇಲೂ ನಿರ್ಧರಿಸಬಹುದಾಗುತ್ತದೆ. ವರಿಷ್ಠ ಕೌನ್ಸಿಲಿನ ಈ ಅಧಿವೇಶನವೆಂದರೆ ಮೋರ್ಲೆಮಿಂಟೊ ಸುಧಾರಣೆಯ ಕೊನೆಯ ಶ್ವಾಸೋಚ್ಛ್ವಾಸವು. ಹಳೆ ಕೌನ್ಸಿಲು ತನ್ನ ಶ್ವಾಸನಿರ್ಗಮನದ ಸಮಯದಲ್ಲಿ—ತನ್ನ ಅವತಾರ ಪರಿಸಮಾಪ್ತಿಯ ಕಾಲದಲ್ಲಿ ಲೋಕನಿಯುಕ್ತ ಸಭಾಸದರೊಡನೆ ಅಸಹಕಾರಿತೆಯನ್ನು ಮಾಡಿದ್ದು ಶುಭವಲ್ಲವೆಂದು ಕೆಲವರು ನಿಮಿತ್ತಜ್ಞರು ಹೇಳುವಾಗ ಇನ್ನು ಇತರ ಸಾಮುದ್ರಿಕ ಶಾಸ್ತ್ರಜ್ಞರು ಗರ್ಭಾವಸ್ಥೆಯಲ್ಲಿದ್ದ ಹೊಸ ಕೌನ್ಸಿಲ್ ಶಿಶುಗಳು ಜನ್ಮವೆತ್ತುವ ಕಾಲದಲ್ಲಿ ಅಸಹಕಾರಿತೆ ಈ ಯೋಗವನ್ನು ಅಧಿಕಾರಿಗಳು ಒದಗಿಸಿ ತಂದದ್ದು ಪ್ರಶಸ್ತವಲ್ಲವೆಂದು ಭವಿಷ್ಯಹೇಳುತಿದ್ದಾರೆ! ಆದರೂ ವೈಸರಾಯರು ತಮ್ಮ ಕೊನೆಯ ಭಾಷಣದಲ್ಲಿ ಜನತೆಯ, ಸಹಕಾರ್ಯವನ್ನು ಅಪೇಕ್ಷಿಸಿದ್ದಾರೆ. ಜನತೆಯು ಮಟ್ಟಿಗೆ ಹೇಳುವುದಾದರೆ ಜನತೆಯು ತನ್ನ ಸಹಕಾರ್ಯವನ್ನು ಕೊಡಲು ಎಂದೂ ತಪ್ಪುವುದಿಲ್ಲ. ಪರಂತು ಅಧಿಕಾರಿಗಳ ತಮ್ಮ ವರ್ತನದಿಂದ ಜನತೆಯ ಸಹಕಾರ್ಯವನ್ನು ತಳ್ಳಿಬಿಡುತ್ತಾರೆ. ಆಗ ನಿರುಪಾಯವಾಗಿ ಅದಕ್ಕೆ "ಯಥಾ ರಾಜಾ ತಥಾ ಪ್ರಜಾ" ಎಂಬ ಸುಪ್ರಸಿದ್ಧ ವಚನಕ್ಕನುಸರಿಸಿ ಅಸಹಕಾರಿತೆಯನ್ನು ಅನುಸರಿಸಬೇಕಾಗುತ್ತದೆ.

೫. ನಮ್ಮ ಈ ಮಾತಿಗೆ ಇತ್ತಲಾಗಿನ ಒಂದು ಉತ್ಕೃಷ್ಟ ದೃಷ್ಟಾಂತವನ್ನು ಕೊಡಬೇಕಿದ್ದರೆ ಸಿಲೋನಿನ ಸುಧಾರಣೆಯ ಸಂಗತಿಯನ್ನು ವಾಚಕರ ಮುಂದಿಡಬಹುದು. ಹಿಂದುಸ್ಥಾನಕ್ಕೆ ಕೊಟ್ಟಂತೆಯೆ ಸಿಲೋನಿಗೂ ಕೆಲವು ಸುಧಾರಣೆಯ ಚೂರುಗಳನ್ನು ಬ್ರಿಟಿಷ ಪಾರ್ಲಿಮೆಂಟು ಬಿಸಾಡಿದೆ. ಆದರೆ ಅಲ್ಲಿಯವರಿಗೆ ಆ ಸುಧಾರಣೆಗಳಲ್ಲಿ ತೃಪ್ತಿ ಇಲ್ಲ. ಅವರು ಸ್ವಯಂ ನಿರ್ಣಯಕ್ಕನುಸಾರವಾಗಿ ತಮಗೆ ಇಂಥಿಂಥ ಸುಧಾರಣೆಗಳನ್ನು, ಹಕ್ಕುಗಳನ್ನು ಕೊಡಬೇಕೆಂದು ಕೇಳಿಕೊಂಡರು; ಹಲವು ವಿಧದಿಂದ ಸನದುಶೀರ ಪ್ರಯತ್ನವನ್ನು ನಡಿಸಿದರು. ತಥಾಪಿ ಅವರ ಕೇಳಿಕೆಗಳ ಕಡೆಗೆ ಸರಕಾರವು ಕಿವಿಗೊಡಲಿಲ್ಲ; ಹಾಗು, ಅರ್ಥಾತ್, ಅವರ ಪ್ರಯತ್ನಕ್ಕೆ ಯಶಸ್ಸು ಬರಲಿಲ್ಲ. ಈ ಮೇರೆಗೆ ಹತಾಶರೂ ಹತಪ್ರಯತ್ನರೂ ಆದ ಸಿಲೋನ ದೇಶಸ್ಥರು ಈಗ ಅಸಹಕಾರಿತೆಯ ಮಾರ್ಗವನ್ನು ಹಿಡಿದಿದ್ದಾರೆ ಮತ್ತು ಅಲ್ಲಿ ಈಗಲೆ ಬರಲಿಕ್ಕಿದ್ದ ಗವರ್ನರರ ಸ್ವಾಗತಕ್ಕೆ ಯಾರೂ ಹೋಗಕೂಡದೆಂದು ನಿರ್ಣಯಿಸಿದ್ದಾರೆ! ಎಂದರೆ ಅಲ್ಲಿಯ ಗವರ್ನರ ದೊರೆಗಳಿಗೆ ಸಿಲೋನಿನ ಬಂದರದ ಮೇಲೆ ಕಾಲಿಟ್ಟ ಕೂಡಲೆ ಒಂದು ಸೂತಕದ ಮನೆಯಲ್ಲಿ ಬಂದಷ್ಟು ವ್ಯಸನವಾದೀತು! ಆದರೆ ಇದು ಇತರರಿಗೆ ವ್ಯಸನಕ್ಕೆ ಕಾರಣವಾದ ವಿಷಯವಲ್ಲ. ಕಾರಣ, ಅಸಹಕಾರಿತೆಯ ಯುಗದಲ್ಲಿ ಸಹಕಾರಿತೆಗೆ ಬರಗಾಲ ಬರುವುದು ಸಹಜವೆ! ಅದರಲ್ಲಿ ಏನೂ ಆಶ್ಚರ್ಯವಿಲ್ಲ.

೬. ಅಸಹಕಾರಿತೆಯ ಈ ಕಾಲದಲ್ಲಿ ಅಪೂರ್ಣವಾದ ಹಿಂದೀ ಸುಧಾರಣೆಗಳ ಜಾರಿಯ ಕೆಲಸವನ್ನು ಸರಕಾರವು ಮುಂದೊತ್ತುತ್ತಲೆ ಇದೆ. ಹೊಸ ಕೌನ್ಸಿಲುಗಳು ಬರುವುದಕ್ಕಿಂತ ಮುಂಚೆ ಸರಕಾರಿ ಅಧಿಕಾರಿಗಳು ಆಯಾ ಸ್ಥಾನದಲ್ಲಿ ಅಧಿಷ್ಠಿತರಾಗಿರಬೇಕಾದ್ದು ನ್ಯಾಯ. ಆದ್ದರಿಂದ ವಿಲಾಯತಿಯಲ್ಲಿ ಹಾಯ್ ಕಮಿಶನರ ಶಿಪ್ ಎಂಬ ಹೊಸ ಉದ್ಯೋಗವನ್ನು ಕಲ್ಪಿಸಿ ಆ ಸ್ಥಾನದ ಮೇಲೆ ಸರ ವಿಲ್ಯಮ್ ಮೆಯರರನ್ನು ಹಿಂದುಸ್ಥಾನ ಸರಕಾರವು ನೇಮಿಸಿದೆ. ಇವರು ಹಿಂದುಸ್ಥಾನಕ್ಕೆ ಅಪರಿಚಿತರಲ್ಲ. ಇವರು ಮೊದಲು ಹಿಂದುಸ್ಥಾನದ ಕೋಶಮಂತ್ರಿಗಳಾಗಿದ್ದರು. ಇವರ ಅಧಿಕಾರಗಳು ಯಾವವೆಂದು ಇನ್ನೂ ಸ್ಪಷ್ಟೀಕರಿಸಲಿಲ್ಲ. ಇವರಿಗೂ ಇಂಡಿಯಾ ಆಫೀಸಿಗೂ ಹೆಚ್ಚಿನ ಸಂಬಂಧವಿಲ್ಲ. ಇರಲಿ, ಈ ಎಲ್ಲ ನೇಮಕಗಳು ಒಂದರ ಹಿಂದೆ ಒಂದು ಬರುವಾಗ ಹಿಂದುಸ್ಥಾನದ ವೈಸರಾಯರ ಸ್ಥಾನಕ್ಕೆ ಯಾರು ಬರುತ್ತಾರೆಂಬುದು ಇನ್ನೂ ನಿಶ್ಚಿತವಾಗಿ ಗೊತ್ತಾಗಲಿಲ್ಲ. ಒಂದು ಎಂಗ್ಲೊ ಇಂಡಿಯನ್ ಪತ್ರವು ಹೇಳುವಂತೆ ಈ ನೇಮಕವು ಹಿಂದಿಗಳಿಗೆ ಬಲು ಆಶ್ಚರ್ಯವನ್ನು ಹುಟ್ಟಿಸುವುದಂತೆ.

ಮಂಗಳೂರು.

ಬರುವ ತಾ. ೨೬ನೇ ಆದಿತ್ಯವಾರ ದಿವಸ ರಾತ್ರಿ ಮಂಗಳೂರು, ಹೊಸ್ಗೆ ಬಾಜಾರದಲ್ಲಿರುವ ಶ್ರೀಜ್ಞಾನೋದಯ ನುಂದಿರದ ಬಳಿಯಲ್ಲಿ ಮೋಗವೀರ ಸತ್ಕಾರ್ಯೋತ್ತೇಜಕ ನಾಟಕ ಮಂಡಳಿಯವರು "ಚಿತ್ರಕಲಾ ದರ್ಬಾರ್" ಎಂಬ ನಾಟಕವನ್ನು ಆಡಿ ತೋರಿಸುವರು. ಇದರಲ್ಲಿ ಸಿಕ್ಕಿದ ಆದಾಯವು ಶ್ರೀಜ್ಞಾನೋದಯ ಸಮಾಜದ ಫ್ರಿ ಲೈಬ್ರರೀ ಬಗ್ಗೆ ವಿನಿಯೋಗಿಸಲ್ಪಡುವುದು. ಮಹನೀಯರು ದಯಮಾಡಿ ಬಂದು ಪ್ರೋತ್ಸಾಹಿಸಬೇಕಾಗಿ ಸದರಿ ನಾಟಕ ಮಂಡಳಿಯ ವಿನಂತಿ ಇದೆ.

ಈ ಜಿಲ್ಲೆಯ ಕಲೆಕ್ಟರರಾದ ಮಿ. ಆರ್. ಎಚ್. ಎಲಿಸರವರು ಬರುವ ತಿಂಗಳ ತಾ. ೫ರಿಂದ ಐದು ಹಸ್ತಗಳ ಪ್ರಿವಿಲೆಜ್ ರಜೆಯನ್ನು ಹೊಂದುವರು. ಇವರ ಬದಲಿಗೆ ಮ| ರಾ| ರಾಯ್‌ಬಹದೂರ ಉದಿಯಾವರ ರಾಮರಾಯರು ಈ ಜಿಲ್ಲೆಯ ಕಲೆಕ್ಟರರಾಗಿ ನೇಮಕವಾಗಿ ತಾರೀಕು ೫ಕ್ಕೆ ಚಾರ್ಜನ್ನು ವಹಿಸಿಕೊಳ್ಳುವರು.

ಕಳದ ಜುಲಾಯಿ ತಿಂಗಳಲ್ಲಿ ಮ| ರಾ| ವಕೀಲ ಬೋಳ ನಾಗೇಶರಾಯರ ಹುಡುಗನ ಕುತ್ತಿಗೆಯ ಆಭರಣವನ್ನು ಕದ್ದ ರಾಮಯ್ಯ ಆಚಾರಿಗೆ ೧೮ ತಿಂಗಳ ಕಠಿಣ ಸಜೆಯೂ ೫೦ ರೂಪಾಯಿ ಜುರುಮಾನೆಯೂ ವಿಧಿಸಲಾಯಿತು. ಜುರುಮಾನೆ ತೆರಲಿಕ್ಕೆ ತಪ್ಪಿದರೆ ಹೆಚ್ಚಿನ ಒಂದು ತಿಂಗಳ ಸಜೆಯನ್ನು ಅನುಭವಿಸಬೇಕಾಗಿದೆ. ಮತ್ತು ಜೈಲಿನಿಂದ ಬಿಡುಗಡೆಯಾದ ಒಂದು ವರ್ಷದ ವರೆಗೆ ಪೋಲೀಸಿನವರ ಸುಪರ್‌ವಿಜನಿನಲ್ಲಿ ಇರಬೇಕಾಗಿದೆ.

ಕಳದ ತಾ. ೨೦ರಲ್ಲಿ ಮಂಗಳೂರ ಡೆಪ್ಯುಟಿ ಕಲೆಕ್ಟರರಿಂದ ಕೆಥೊಲಿಕ ಕೊ-ಒಪರೇಟಿವ್ ಸೊಸೈಟಿಯ ಸೆಕ್ರೆಟರಿಯಾದ ವಿಕ್ಟರ ಪಿಂತೋರವರ ಮೊಕದ್ದಮೆಯ ತೀರ್ಪು ಕೊಡಲಾಯಿತು. ಇದರಂತೆ ಅಪಾದಿತರ ಮೇಲಿನ ಅರೋಪಣೆ ಪೈಕಿ ಮಿ. ಲಾಜರಸ್ ಸಾಯಿಸ್‌ರವರ ಬಾಬ್ತು ರೂ ೨೦೦ ದುರ್ವಿನಿಯೋಗಪಡಿಸಿದೆಂಬ ತಪ್ಪು ಸಾಬಿತಾಗಲಿಲ್ಲ. ಕಂಕನಾಡಿ ಫಾದರ ಮುಲ್ಲರ್ ಅಸ್ಪತ್ರೆ ಬಾಬತು ರೂ ೧೮,೩೦೦ ವಂಚಿಸಿದ್ದು ಮೊದಲಾದ ತಕ್ಷೀರುಗಳು ತನಿಖೆಗೆ ಸೆಶ್ಶನ್ಸ್ ಕೋರ್ಟಿಗೆ ದಿಡೋಣಾಗಿಯದೆ.

ಕಲ್ಕತ್ತೆಯಲ್ಲಿ ಕೂಡಿದ ರಾಷ್ಟ್ರೀಯ ಸಭೆಯು ಹೊಸ ಕೌನ್ಸಿಲುಗಳಿಗೆ ಬಹಿಷ್ಕಾರವನ್ನು ಹಾಕಬೇಕಾಗಿ ನಿರ್ಧರಿಸಿದಂತೆ ನಮ್ಮ ಜಿಲ್ಲೆಯಿಂದ ಮಹಮದೀಯರ ಪರವಾಗಿ ಮದರಾಸ ನ್ಯಾಯವಿಧಾಯಕ ಸಭೆಗೆ ಉಮೇದ್ವಾರರಾಗಿದ್ದ ಮಿ. ಮಹಮದ್ ಪುತ್ತೂರ ಸಾಹೇಬರು ತನ್ನ ಉಮೇದ್ವಾರಿಕೆಗೆ ಸಹಾಯವನ್ನು ಸಹಾನುಭೂತಿಯನ್ನು ತೋರಿಸುತ್ತಿದ್ದ ಮಹಮದೀಯ ವೋಟರಿಗೆ ಮತ್ತು ಮುಸಲ್ಮಾನರಲ್ಲದವರಿಗೆ ತನ್ನ ಅಂತಃಕರಣ ಪೂರ್ವಕದ ಆಭಾರಗಳನ್ನು ಸೂಚಿಸಿ, ತನ್ನ ಉಮೇದ್ವಾರಿಕೆಯನ್ನು ಹಿಂದೆಗೆದಿದ್ದಾರೆ.

ಕಳದ ಬುಧವಾರ ಉಡುಪಿಯ ನಾಮದಾರ ಖಾನ್ ಸಾಹೇಬ ಹಾಜಿ ಅಬ್ದುಲ್ಲಾ ಹಾಜಿ ಖಾಸಿಂ ಸಾಹೇಬರು ಸರಕಾರದಿಂದ ಖಾನ್ ಬಹದೂರ ಎಂಬ ಬಿರುದಿನ ಸನ್ನದನ್ನು ಸ್ವೀಕರಿಸಿದ ದರ್ಬಾರು ಸಾಯಂಕಾಲ ೫ ಘಂಟೆಗೆ ಜರಗಿತು.

ಸರಕಾರಿ ನೌಕರರಿಗೆ ಬರುವ ತಿಂಗಳ ತಾ. ೧೮, ೧೯, ೨೦, ೨೧, ೨೨, ೨೫, ೨೬, ಈ ದಿನಗಳಲ್ಲಿ ಸ್ಪೆಶಲ್‌ಟೆಸ್ಟ ಪರೀಕ್ಷೆಯು ನಡೆಯುವುದು. ಇಲ್ಲಿಯ ಅಸಿಸ್ಟಾಂಟ ಕಲೆಕ್ಟರರಾದ ಮಿ. ಯಲ್. ಜಿ. ಮೆಕ್ಕಯರ್‌ರವರು ಈ ಪರೀಕ್ಷೆಯ ಸುಪರಿಂಟೆಂಡೆಂಟರಾಗಿ ನೇಮಕವಾಗಿದ್ದಾರೆ.

ಉಪ್ಪಿನಂಗಡಿ ತಾಲೂಕಿಗೆ ಮ| ರಾ| ಬೈಂದೂರು ರಾಮರಾವ್, ಮತ್ತು ಮ| ರಾ| ಸರಾಫ ನರಸಿಂಹನಾಯ್ಕರು ಉಪ್ಪಿನಂಗಡಿ ಸರ್ಕಲಿನಿಂದ ಮ| ರಾ| ಕಲ್ಲಿ ಪೂವಣಿ ಹೆಗ್ಗಡೆರು, ಮ| ರಾ| ಕೃಷ್ಣ ಪಡವಟ್ನಾಯರು, ಮ| ರಾ| ನಾರಾಯಣ ಪದ್ಮನಾಭ ಖಾಡಿಲಕರ್ ಗುರುತಿ ಬೆಳ್ತಂಗಡಿ ಸರ್ಕಲಿನಿಂದ, ಮ| ರಾ| ಯಚ್ ಗಣಪತಿರಾವ್ ಮ| ರಾ| ಬೆಳ್ಳಿಪಾಡಿ ದಾಸರೈ, ಮ| ರಾ| ನೂಳಹಳ್ಳಿ ಶಿವರಾಯರು ಪುತ್ತೂರು ಸರ್ಕಲಿನಿಂದ ಕಾಸರಗೋಡು ತಾಲೂಕುಬೋರ್ಡಿಗೆ ಮ| ರಾ| ಕೆ. ರಾಮು ಶೆಟ್ಟಿ, ಮ| ರಾ| ಯಮ್. ವೈಕುಂಠ ಭಕ್ತರು ಮ| ರಾ| ದೊಂಬ್ರಾಣ ವೆಂಕಪ್ಪಪೂಂಜರು ಮಂಜೇಶ್ವರ ಸರ್ಕಲಿನಿಂದ, ಮ| ರಾ| ಶಿರಿಬಾಗಿಲು ರಾಮಯ್ಯ ಆಳ್ವರು, ಮ| ರಾ| ಕುಂಬಳೆ ನರಸಿಂಹ ನಾಯ್ಕರು ಮ| ರಾ| ಶೆಡ್ಡಿ ಸುಂದರರಾಮ ರಾವ್ ಕಾಸರಗೋಡ ಸರ್ಕಲಿನಿಂದ ಕೆ. ಮಹಮ್ಮದ್ ಬ್ಯಾರಿ ಸಾಹೇಬ ಬಹದೂರ್ ಮ| ರಾ| ಕಾಸರಗೋಡು ಮುತ್ತಯ್ಯ ಶೆಟ್ಟಿ, ಬೇಕಲ ಸರ್ಕಲಿನಿಂದ ಮ| ರಾ| ಯಚ್. ಶ್ರೀನಿವಾಸ ಕಮ್ತಿರು ಮತ್ತು ಮ| ರಾ| ರವಿವರ್ಮರಾಜರು ಹೊಸದುರ್ಗ ಸರ್ಕಲಿನಿಂದ ಚುನಾವಣೆಯಾದ್ದು ಮಂಜೂರಾಗಿದೆ.

ರೆವಿನ್ಯು ಇನ್ಸ್‌ಪೆಕ್ಟರರ ಕೆಲಸದ ಸೌಕರ್ಯದ ಬಗ್ಗೆ ಈಗಿರುವ ರೆವಿನ್ಯು ಫಿರ್ಕಗಳ ವಿಸ್ತೀರ್ಣಗಳನ್ನು ಕಡಿಮೆಮಾಡಲಾಗುವುದು. ಇದರಿಂದ ಫಿರ್ಕಗಳು ಹೆಚ್ಚಿನದಾಗಿ ರೂ. ೪೦ರ ಶಲಬಿನ್ನ ೭೫, ರೂ. ೪೦ರ ೧೧೨ ರೆವಿನ್ಯು ಇನ್ಸ್‌ಪೆಕ್ಟರರ ಹುದ್ದೆಗಳು ಮತ್ತು ೧೩೪ ಪೇದೆಗಳ ಹುದ್ದೆ ಹೆಚ್ಚಿಸಲಾದಾವು.

ಇಲ್ಲಿಯ ರಾಷ್ಟ್ರೀಯ ಬಾಲಿಕಾ ಪಾಠಶಾಲೆಯ ಸಭಾಸದನದಲ್ಲಿ ಬರುವ ಆದಿತ್ಯವಾರ, ಮಂಗಳೂರು ಆರ್ಯ ಸಮಾಜದ ಪರವಾಗಿ 'ಸಂಧ್ಯಾಯೋಗ'ವೆಂಬದನ್ನು ಕುರಿತು ಶ್ರೀ ಪಂಡಿತ ಅಮರನಾಥರ ಭಾಷಣವಿರುವುದು.

[illegible]

ಜನರ ಗೊಂದಲವು ಸಾಮಾನ್ಯವಾಗಿ ನಷ್ಟವನ್ನು ಎಳೆದುಕೊಂಡೇ ಬರುವುದು. ೧೨ನೇ ಏಪ್ರಿಲ್—೧೯೧೯ನೇ ದಿನ ಅಮೃತಸರದಲ್ಲಿ ನಡೆದ ಈ ಗೊಂದಲದ ಆಡಳಿತ. ಆ ಕೆಟ್ಟ ದಿನ ಅಹ್ಮದಾಬಾದಿನಲ್ಲಿ ... ಅದೇ. ಕ್ರಮವಿಲ್ಲದೆ ಸಿಕ್ಕಿದುದನ್ನು ನಾಶಮಾಡಿದರು. ಅದರಲ್ಲಿ ... ಯಾಗಲಿ ಪ್ರಯೋಜನವಾಗಲಿ ಇಲ್ಲ. ಅದು ಪಾಪಿಕರ ... ಮಾಡುವಂತಹದು. ಯುದ್ಧವೆಂಬುದರಲ್ಲಿಯೂ ಕ್ರಮವಿದ್ದು ಮಾಡುವ ನಾಶವಿದೆ. ಜನರ ಗೊಂದಲದಿಂದಾಗುವ ನಾಶಕ್ಕಿಂತ ಇದರಲ್ಲಿ ಹೆಚ್ಚಾಗಿ ನಾಶವಿದೆ, ಆದರೂ ಕೆಲವು ಯುದ್ಧಗಳಿಂದ ಸಿಕ್ಕುವ ಶಾಶ್ವತ ಫಲಗಳಿಂದ ನೋಡಹೋಗಿ ಯುದ್ಧಕ್ಕೆ ನಾವು ಶ್ರೇಷ್ಠ ಪದವಿಯನ್ನು ಕೊಡುವುದುಂಟು. ಹಿಂದುಸ್ಥಾನವು ಯುದ್ಧವಿಲ್ಲದೆ ಸ್ವಾತಂತ್ರ್ಯವನ್ನು ಪಡೆದು ಕೊಳ್ಳುತ್ತದಾದರೆ ಕ್ರಮವನ್ನೂ, ಮರ್ಯಾದೆಯನ್ನೂ ... ಸಾಧ್ಯವಿಲ್ಲ. ಅಲ್ಲಿ ಗೊಂದಲವಿಲ್ಲ. ನಿಜವಾದ ಸಾರ್ವಜನಿಕ ಆಡಳಿತ.

ಆದರೆ ಇವತ್ತು ನಾನು ಬರೆಯಬೇಕೆಂದಿರುವುದು ಅಹ್ಮದಾಬಾದಿನಂತಹ ಗೊಂದಲವನ್ನು ಕುರಿತಲ್ಲ. ನನಗೆ ಹೆಚ್ಚಿನ ಪರಿಚಯವುಳ್ಳ ಇನ್ನೊಂದು ಗೊಂದಲದ ಕುರಿತು ಬರೆಯುತ್ತೇನೆ. ಈ ಅರ್ಥದಲ್ಲಿ ನಮ್ಮ ಕಾಂಗ್ರೆಸು ಕೂಡ ಇಂತಹ ಗೊಂದಲದ ನಿದರ್ಶನ. ಬುದ್ಧಿವಂತರಾದ ಸ್ತ್ರೀಪುರುಷರಿಂದ ನಡೆಯಿಸಲ್ಪಡುವುದಾದರೂ ಅದನ್ನು ಹೀಗೆ ಹೇಳಬಹುದು. ನಮ್ಮ ಮೆರವಣಿಗೆ ಇತ್ಯಾದಿಗಳಲ್ಲಿ ಈ ಗೊಂದಲವು ಸಂಶಯವಿಲ್ಲದೆ ಇದೆ. ಖಿಲಾಫತ್ತಿನ ಕುರಿತು ಪಂಜಾಬು, ಸಿಂಧ್, ಮತ್ತು ಮದ್ರಾಸಿನಲ್ಲಿ ತಿರುಗುವಾಗ ಇಂತಹ ಮೆರವಣಿಗೆಗಳು ನನಗೆ ಯಥೇಚ್ಛ ಸಿಕ್ಕಿದವು. ರೈಲ್ವೆ ಸ್ಟೇಶನುಗಳಲ್ಲಿ ಪ್ರಯಾಣಿಕರ ಸಾಮಾನುಗಳನ್ನು ನೋಡದೆ ಹಾಳುಮಾಡುವುದನ್ನು ನೋಡಿ ನನಗೆ ನಾಚಿಕೆಯಾಯಿತು. ದೇಶದ ವೀರರನ್ನು ಪೂಜಿಸುವ ಭರದಲ್ಲಿ ಇವರು ಮಿಕ್ಕುದೆಲ್ಲವನ್ನೂ ಲಕ್ಷ್ಯ ಮಾಡುವುದಿಲ್ಲ. ಈ ಜನರು ಅವರ ವೀರರಿಗೆ ತೊಂದರೆಯಾಗುವಂತಹ ಎಷ್ಟೊ ಗಲಾಟೆಯನ್ನೂ ಬೊಬ್ಬೆಯನ್ನೂ ಮಾಡುವರು. ಒಬ್ಬರನ್ನೊಬ್ಬರು ಮೆಟ್ಟುವರು. ಒಬ್ಬರನ್ನೊಬ್ಬರು ದೂಡುವರು. ಒಂದೇ ಸಮಯದಲ್ಲಿ ಎಲ್ಲರೂ ಗಲಾಟೆಮಾಡಬೇಡಿರೆಂದು ಕೂಗುವರು, ಕ್ರಮವನ್ನು ಕಾಪಾಡಲ್ಕೆ ಉಮೇದ್ವಾರರಾದವರೂ ಎಲ್ಲರೂ ಒಂದೇ ಸಲ ಒಂದೇ ಮಾತನ್ನು ಹೇಳುವರು. ಈ ಉಮೇದ್ವಾರರು ಜನರ ಪೋಲಿಸಿನವರಾಗುವ ಬದಲು ತಾವೂ ಮೆರವಣಿಗೆಯಲ್ಲಿ ಸೇರುವರು. ಅಲ್ಲಲ್ಲಿ ಬಿಟ್ಟುಹೋಗಿರುವ ಈ ಉಮೇದ್ವಾರರ ಸಾಲುಗಳ ಮಧ್ಯದಿಂದ ವೀರರನ್ನು ಹೊರಗೆ ಗಾಡಿಗೆ ತರಬೇಕಾದರೆ ಸಾಕಾಗುತ್ತದೆ. ಐದು ನಿಮಿಷದಲ್ಲಿ ತೀರಬೇಕಾದ ಈ ಕೆಲಸಕ್ಕೆ ಒಂದು ಗಂಟೆ ಬೇಕಾಗುವುದು. ಜನರ ಗುಂಪು ಹಿಂದೆ ಸರಿಯುವ ಬದಲು ವೀರರತ್ತ ಮುಂದೆ ಒತ್ತುವುದು, ವೀರರನ್ನು ರಕ್ಷಿಸಬೇಕಾಗಿ ಬರುವುದು. ಯಾರೇ ಆಗಲಿ ಸಿಕ್ಕಿದ್ದವರು ಗಾಡಿಯನ್ನು ಹಿಡಿಯುವರು. ಹೆಚ್ಚಾಗಿ ಉಮೇದ್ವಾರರೇ ತಪ್ಪುಗಾರರು. ಗಾಡಿಯು ಬದಿ ಹಲಗೆಗಳನ್ನೇರಲಾಗದೆಂದು ವೀರರು ಜನರೊಡನೆ ತರ್ಕಿಸಬೇಕಾಗುವುದು. ಗಾಡಿಯ ಮಾತನು ಎಳೆಯುವರು, ಹೀಗೆ ಎಳೆದು ಹಾಳುಮಾಡದೆ ಇದ್ದುದನ್ನು ನಾನು ಕಂಡದ್ದು ಅಪರೂಪ, ಜನರು ದಾರಿಯ ಬದಿಯಲ್ಲಿ ನಿಂತು ನೋಡುವ ಬದಲು ಎಲ್ಲರೂ ಗಾಡಿಯ ಹಿಂದೆ ಹೋಗುವರು, ತುಂಬ ಗಲಾಟೆಯೇ ಇದರ ಫಲ, ಪ್ರತಿ ಮುಹೂರ್ತವೂ ಯಾವ ಅಪಾಯವಾಗುವುದೋ ಎಂಬ ಹೆದರಿಕೆ. ಇಂತಹ ಸಂದರ್ಭಗಳಲ್ಲಿ ಹೆಚ್ಚಾಗಿ ಅಪಾಯಗಳಾಗದಿರಲು ಇದನ್ನೆಲ್ಲ ನಡೆಯಿಸುವವರ ಬುದ್ಧಿಚಾತುರ್ಯದಿಂದಲ್ಲ. ಜನರು ಎಷ್ಟು ತೊಂದರೆಯಾದರೂ ಸಹಿಸಿ ಸಂತೋಷಪಡುತ್ತಿರಲು ಖಂಡಿತವಾದಿರುವುದೇ ಇದರ ಕಾರಣ. ಪ್ರತಿಯೊಬ್ಬನು ಇನ್ನೊಬ್ಬನನ್ನು ದೂಡುವನಾದರೂ ಇತರರಿಗೆ ಸ್ವಲ್ಪವಾದರೂ ತೊಂದರೆ ಕೊಡಬೇಕೆಂದು ಯಾರ ಮನಸ್ಸಿನಲ್ಲಿಯೂ ಇಲ್ಲ, ಈ ಚಿತ್ರವನ್ನು ಮುಗಿಸಬೇಕಾದರೆ ಕಡೆಗೆ ಸೇರುವ ಸಭೆ ಇದೆ. ಅಲ್ಲಿರುವಷ್ಟು ಅಕ್ರಮ, ಶಬ್ದ, ಒತ್ತಾಟ ಮತ್ತು ಬೊಬ್ಬೆ ಎಲ್ಲಿಯೂ ಇಲ್ಲ, ಚೆನ್ನಾಗಿ ಮಾತಾಡುವವನಿದ್ದರೆ ಮಾತ್ರ ಸೂಜಿ ಬಿದ್ದ ಶಬ್ದವನ್ನು ಕೇಳಬಹುದಾದಷ್ಟು ನಿಶ್ಶಬ್ದ.

ಹೇಗಿದ್ದರೂ ಇದೆಲ್ಲವೂ ಸಾಮಾನ್ಯ ಜನರ ಗೊಂದಲದ ಆಡಳಿತ: ಮಾತಾಡುವವನು ಈ ಜನರ ಹುಚ್ಚಿನಲ್ಲಿ ಸೆರೆಬೀಳುವನು. ಅವನಿಗೂ ಜನರಿಗೂ ಸರಿಬೀಳುವುದಾದರೆ ಎಲ್ಲವೂ ಸರಿಯಾಗುವುದು. ಯಾವಾಗ ಸರಿಬೀಳುವುದಿಲ್ಲವೊ ಆಗ ಅವನ ಅವಸ್ಥೆ ಮುಗಿಯಿತು. ಅಹ್ಮದಾಬಾದಿನಲ್ಲಿ ನಡೆಯುವ ಇಂತಹ ಕೆಲವು ಸಂದರ್ಭಗಳನ್ನು ನೋಡಿ ಜನಸಾಮಾನ್ಯರ ಬುದ್ಧಿಯ ಕುರಿತು ಪಾಠ ಕಲಿಯಬಹುದು.

ಈ ಅಕ್ರಮದಿಂದ ನಾವು ಕ್ರಮವನ್ನು ತರಬೇಕು. ಈ ಗೊಂದಲವನ್ನು ಬಿಟ್ಟು ನಾವು ಸ್ವಲ್ಪ ಬುದ್ಧಿಯ ಆಡಳಿತೆಯನ್ನು ಸ್ವೀಕರಿಸಬೇಕು. ನಾವು ಸಂಗೀತವನ್ನು ತಿರಸ್ಕರಿಸಿದುದು ಇದಕ್ಕೆ ದೊಡ್ಡ ಅಡ್ಡಿ. ಸಂಗೀತದಲ್ಲಿ ಕ್ರಮವಿದೆ. ಸಂಗೀತಕ್ಕೆ ತುಂಬ ಸಾಮರ್ಥ್ಯವಿದೆ. ಇದು ಕೂಡಲೇ ಮನಸ್ಸನ್ನು ಶಾಂತಪಡಿಸುತ್ತದೆ. ಪಾಶ್ಚಾತ್ಯದೇಶದಲ್ಲಿ ಪೋಲೀಸು ಮೇಲಧಿಕಾರಿಯು ಸಂಗೀತವನ್ನಾರಂಭಿಸಿ ಜನರ ಗಲಾಟೆಯನ್ನು ನಿಲ್ಲಿಸಿದುದನ್ನು ನಾನು ಎಷ್ಟೊ ಬಾರಿ ನೋಡಿದ್ದೇನೆ. ನಮ್ಮ ಶಾಸ್ತ್ರಗಳಂತೆ ನಮ್ಮ ಸಂಗೀತವೂ ಕೆಲವರ ಕೈಯಲ್ಲಿಯೇ ಸೇರಿಕೊಂಡಿದೆ. ಎಲ್ಲರಿಗೂ ಅದು ಇದುವರೆಗೆ ಸಿಕ್ಕಿಲ್ಲ. [illegible] — ಉಮೇದ್ವಾರರೊಡನೆಯೂ ಸೇವಾ ಸಮಿತಿಯವರೊಡನೆಯೂ ನನಗೆ ಅಧಿಕಾರವಿದ್ದರೆ, ಅವರು ಒಟ್ಟಿಗೆ ಹಾ[illegible]

[illegible]

ನನ್ನನ್ನು ದೂರುತ್ತಿರುವುದೂ ಅಲ್ಲ, ಸರಕಾರದ ಹೆದರಿಕೆಯೂ ಅಲ್ಲ, ನನ್ನ ತತ್ವದ ಇಷ್ಟವನ್ನು ಜಯಿಸುವುದು. ನನ್ನ ಶಕ್ತಿಯ ಬಲವನ್ನು ಇವರೆಲ್ಲರೂ ತಗ್ಗಿಸಲಾರರು. ನನಗಿರುವ ದೊಡ್ಡ ಅಡ್ಡಿಯು ಈ ಜನರ ಗೊಂದಲದ ಆಡಳಿತ; ಆದರೆ ಅವರಿಗೆ ಕಲಿಸುವುದು ಸುಲಭ, ಅವರ ಮನಸ್ಸಿನಲ್ಲಿ ಕೆಟ್ಟುದಿಲ್ಲ. ಆಗಾಗ ಹುಚ್ಚು ಹಿಡಿಯುವುದಾದರೂ ಬೇಗನೆ ಪಶ್ಚಾತ್ತಾಪ ಪಡುವರು. ನಮ್ಮ ಸರಕಾರದಾದರೂ ತಾನು ಲಾಹೋರು, ಜಾಲಿಯನ್‌ವಾಲಾ ಇತ್ಯಾದಿ ಸ್ಥಳಗಳಲ್ಲಿ ನಡೆಸಿದ ಅನ್ಯಾಯಗಳಿಗಾಗಿ ದುಃಖಪಡುವುದಿಲ್ಲ. ಆದರೆ ಗುಜರಾನ್‌ವಾಲಾದಲ್ಲಿ ಸಾಮಾನ್ಯ ಜನರು ಕಣ್ಣೀರು ಸುರಿಸುವುದನ್ನು ನಾನು ನೋಡಿದ್ದೇನೆ. ಆ ಏಪ್ರಿಲ್ ತಿಂಗಳಲ್ಲಿ ತಾವು ಮಾಡಿದ ಅನ್ಯಾಯವನ್ನು ಪ್ರತಿನಿಷ... ಅವರಲ್ಲಿ ಎಷ್ಟೊ ಮಂದಿ ಒಪ್ಪಿದರು. ನನ್ನ ತತ್ವದ ಮುಖ್ಯ ಉದ್ದೇಶವೇ ಸಹಜವಾದ ಸಾರ್ವಜನಿಕ ಆಡಳಿತೆ. ಇದೇ ಜನಾಂಗವು ಇದರಿಂದ ಬುದ್ಧಿಯನ್ನೂ ಶಿಕ್ಷಣವನ್ನೂ ಅಸ್ವಾರ್ಥತೆಯನ್ನೂ ಹೊಂದುವುದೆಂದು ನಂಬಿ ನಮ್ಮ ಮುಖಂಡರು ನನ್ನ ತತ್ವವನ್ನು ದೂರದೆ ನನಗೆ ಸಹಾಯಮಾಡಬೇಕು.

ನಿಮಿಷ ಮಾತ್ರದಲ್ಲಿ ಅಕ್ರಮದಿಂದ ಕ್ರಮವನ್ನು ತರುವ ಕೆಲವು ದೃಷ್ಟಾಂತಗಳನ್ನು ಇನ್ನೊಂದು ಬಾರಿ ಹೇಳುತ್ತೇನೆ. ಜನರಲ್ಲಿ ನನಗೆ ಮಿತಿಯಿಲ್ಲದ ನಂಬಿಕೆ ಇದೆ. ಅವರು ನಾವು ತೋರಿಸಿದ ಮಾರ್ಗದಲ್ಲಿ ನಡೆಯುತ್ತಾರೆ. ನಮ್ಮ ಮುಖಂಡರು ಅವರಲ್ಲಿ ಸಂಶಯಪಡಬಾರದು. ನನ್ನ ತತ್ವವನ್ನು ದೂರುವುದರ ಅರ್ಥವೇನೆಂದರೆ ಜನರ ಗುಣಗಳಲ್ಲಿ ನಂಬಿಕೆಯಿಲ್ಲವೆನ್ನುವುದೇ. ನಾವು ಕೂಡಲೆ ಆಚರಣೆಗೆ ತರಬೇಕಾದ ಕೆಲವು ಕ್ರಮಗಳನ್ನು ಹೇಳಿ ಈ ಉದ್ದ ಲೇಖನವನ್ನು ಮುಗಿಸುತ್ತೇನೆ.

(೧) ಅಭ್ಯಾಸವಿಲ್ಲದ ಉಮೇದ್ವಾರರನ್ನು ದೊಡ್ಡ ಸಂದರ್ಭಗಳಲ್ಲಿ ಸೇರಿಸಬಾರದು. ಚೆನ್ನಾಗಿ ಅಭ್ಯಾಸ ಇದ್ದವರೇ ಮುಖ್ಯಸ್ಥರಾಗಬೇಕು (೨) ಪ್ರತಿ ಉಮೇದ್ವಾರನೊಡನೆ ಆಚರಿಸತಕ್ಕ ಕ್ರಮಗಳ ಪಟ್ಟಿ ಇರಬೇಕು. (೩) ಕೆಲಸ ಮೊದಲಾಗುವಾಗ ಇವರು ಪುನಃ ... ತಮ್ಮ ಕ್ರಮಗಳನ್ನು ತಿರಿಗಿ ಚೆನ್ನಾಗಿ ತಿಳಿದುಕೊಳ್ಳಬೇಕು. (೪) ಸ್ಟೇಶನಿನ ಬಳಿ ಉಮೇದ್ವಾರರೆಲ್ಲರೂ ಸ್ವಾಗತ ಮಂಡಳಿಯವರಿಂಬೇಕಾದಲ್ಲಿ ಒಟ್ಟು ಸೇರಿ ಇರಬಾರದು. ಜನರ ಗುಂಪಿನಲ್ಲಿ ಅವರನ್ನು ಅಲ್ಲಲ್ಲಿ ನಿಲ್ಲಿಸಬೇಕು. (೫) ಹೆಚ್ಚು ಜನರು ಸ್ಟೇಶನಿನ ಒಳಗೆ ಬರಬಾರದು. ಪ್ರಯಾಣಿಕರಿಗೆ ತೊಂದರೆಯಾಗುವುದು. ಒಳಗಿದ್ದರೂ ಹೊರಗಿದ್ದರೂ ಒಂದೇ ಮರ್ಯಾದೆ. (೬) ಇತರ ಪ್ರಯಾಣಿಕರ ಸಾಮಾನು ಹಾಳುಮಾಡದಂತೆ ಮೊದಲಾಗಿ ಉಮೇದ್ವಾರರು ನೋಡಬೇಕು. (೭) ತಕ್ಕ ಸಮಯಕ್ಕಿಂತ ಮುಂಚಿತವಾಗಿಯೇ ಸ್ಟೇಶನಿನಲ್ಲಿ ಜನರು ತುಂಬಲಾಗದು. (೮) ಪ್ರಯಾಣಿಕರಿಗೆ ಹೋಗಲು ಬೇರೆದಾರಿ ಬಿಡಬೇಕು. (೯) ವೀರರಿಗೆ ಬೇರೆ ದಾರಿ ಬಿಡಬೇಕು. (೧೦) ಉಮೇದ್ವಾರರು ಸಾಲುಕಟ್ಟಿ ನಿಲ್ಲಬಾರದು. ಅದು ನಾಚಿಕೆಗೇಡು. (೧೧) ವೀರರು ಗಾಡಿಯನ್ನೇರುವ ತನಕ ಅಥವಾ ಉಮೇದ್ವಾರರು ಹೇಳುವ ತನಕ ಜನರು ಸುಮ್ಮನೆ ನಿಲ್ಲಬೇಕು. (೧೨) ಜಯಧ್ವನಿಯೆಂದು ಸಿಕ್ಕಿದಂತೆ ಕೂಗಬಾರದು. ತಕ್ಕ ಸಮಯವನ್ನೂ ಸ್ಥಳಗಳನ್ನೂ ನೋಡಬೇಕು. ಮೆರವಣಿಗೆಯಲ್ಲಿ ಹೀಗೆಲ್ಲ ಮಾಡಿದರೆ ಉತ್ಸಾಹವು ತೋರುವುದಿಲ್ಲವೆನ್ನುವುದು ತಪ್ಪು. ... ಇತ್ಯಾದಿಗಳಲ್ಲಿ ಅದು ತೋರುವುದು. ಜನಾಂಗದ ಶಿಕ್ಷಣವು ಈ ಮೆರವಣಿಗೆಗಳಲ್ಲಿ ತೋರುತ್ತದೆ. ತನ್ನ ಪಳ್ಳಿಯಲ್ಲಿ ನಿಶ್ಶಬ್ದವಾಗಿ ಪೂಜಿಸುವ ಮುಸಲ್ಮಾನನು ಶಂಖ ಧ್ವನಿಯಿಂದ ದೇವಸ್ಥಾನಕ್ಕೆ ಹೋಗುವ ಹಿಂದುವಿಗಿಂತ ಭಕ್ತಿಯಲ್ಲಿ ಕಡಿಮೆಯೆಂದು ಹೇಳಲಾಗುವುದಿಲ್ಲ. (೧೩) ಜನರು ಮಾರ್ಗದ ಬದಿಯಲ್ಲಿ ನಿಂತುಕೊಂಡು ನೋಡಬೇಕು, ಗಾಡಿಯ ಹಿಂದೆ ಹೋಗುವವರು ಕ್ರಮದಲ್ಲಿರಬೇಕು. (೧೪) ಜನರ ಗುಂಪು ವೀರರ ಕಡೆಗೆ ಹೋಗಬಾರದು. ಅವರಿಂದ ದೂರ ಹೋಗಬೇಕು. (೧೫) ಹಿಂದಿನಿಂದ ದೂಡುವವರಿದ್ದರೆ ಅವರಿಗೆ ದಾರಿ ಬಿಡುವುದುತ್ತಮ. ತಾವೂ ಮುಂದೆ ದೂಡಬಾರದು. (೧೬) ಹೆಂಗಸರಿದ್ದರೆ ಅವರ ಜಾಗ್ರತೆಯನ್ನು ನೋಡಬೇಕು. (೧೭) ಸಣ್ಣಮಕ್ಕಳನ್ನು ಕರೆದುಕೊಂಡು ಬರಬಾರದು. (೧೮) ಸಭೆಯ ಸಮಯ ಉಮೇದ್ವಾರರು ಸಭೆಯ ಮಧ್ಯದಲ್ಲಿ ಅಲ್ಲಲ್ಲಿ ಕುಳಿತುಕೊಳ್ಳಬೇಕು. ಅವರು ಬಾವುಟ ಇತ್ಯಾದಿ ಸಂಜ್ಞೆಯಿಂದ ಮಾತಾಡಲು ಕಲಿತಿರಬೇಕು. (೧೯) ಕ್ರಮ ಇರಿಸುವುದು ಸಭಿಕರ ಕೆಲಸ ಅಲ್ಲ, ಅವರು ಸುಮ್ಮನೆ ಮಾತಾಡದೆ ಕುಳಿತುಕೊಳ್ಳಬೇಕು. (೨೦) ಎಲ್ಲದಕ್ಕಿಂತ ಮುಖ್ಯವಾಗಿ ಪ್ರತಿಯೊಬ್ಬನೂ ಈ ಉಮೇದ್ವಾರರ ಮಾತನ್ನು ಕೇಳಬೇಕು.

ಈ ಪಟ್ಟಿಯಲ್ಲಿ ಎಲ್ಲವನ್ನೂ ಹೇಳಿದಂತಾಗಲಿಲ್ಲ. ಆದರೆ ಇವನ್ನು ದೃಷ್ಟಾಂತಪೂರ್ವಕ ಸ್ವಲ್ಪ ಆಲೋಚಿಸುವಂತೆ ಬರೆದುದು. ಎಲ್ಲ ದೇಶ ಭಾಷೆ ಪತ್ರಿಕೆಗಳೂ ಈ ಲೇಖನವನ್ನು ಭಾಷಾಂತರಿಸುವರೆಂದು ನನ್ನ ನಂಬಿಗೆ.

ನ್ಯಾಯವಿಧಾಯಕಸಭೆಗೆ ಸಾಮ್ಯಾನ ಪ್ರತಿನಿಧಿಗಳನ್ನು ಆರಿಸಿ ನೇಮಿಸುವುದಕ್ಕೆ ಅಧಿಕಾರವುಳ್ಳ ಕೂಟಗಳು.

ಹಿಂದಿನ ವರುಷದಲ್ಲಿ ೧೨೦ ದಿನಗಳಿಗೆ ಕಡಿಮೆ ಅಲ್ಲದೆ ಮಹಮ್ಮದಿಯರಲ್ಲದ ಇತರ ಆ ಸಮುದಾಯದ ಕೂಟದಲ್ಲಿ ವಾಸವಾಗಿದ್ದು ಅಂಥಾ ಕೂಟದಲ್ಲಿ ವೋಟರನಾಗಿರಲಿಕ್ಕೆ ಈ ಕೆಳಗೆ ಕಾಣಿಸಿದ ಹೆಚ್ಚಿನ ಯೋಗ್ಯತೆ ಉಳ್ಳಂಥಾ ಯುರೋಪಿಯನ್ ಆಂಗ್ಲೊ ಇಂಡಿಯನ್, ಇಂಡಿಯನ್ ಕ್ರೈಸ್ತ ಅಥವಾ ಮಹಮ್ಮದೀಯನಲ್ಲದ ಪ್ರತಿ ಒಬ್ಬ ಮನುಷ್ಯನಿಗೂ ಅಂತಹ ಕೂಟದಲ್ಲಿ ಪ್ರತಿನಿಧಿಗಳ ಚುನಾವಣೆಯಲ್ಲಿ ವೋಟು ಕೊಡುವದಕ್ಕೆ ಹಕ್ಕಿರುವುದು.

[illegible] ಅಥವಾ (b) [illegible] ಅಥವಾ (c) [illegible] ಅಥವಾ (d) [illegible] ಎಸ್ಟೇಟ ... ಅಥವಾ (e) ವರ್ಷಕ್ಕೆ ೩೦ ರೂಪಾಯಿಗೆ ಕಡಿಮೆಯಲ್ಲದ ಕಂದಾಯದ ಭೂಮಿಯನ್ನು ಮದ್ರಾಸ ಎಸ್ಟೇಟ ಆಕ್ಟಿನಲ್ಲಿ ... ರಿಸಿದಂತೆ ರೈತನಾಗಿ ಅನುಭವಿಸುತ್ತಿರಬೇಕು. ಅಥವಾ, ... ರ್ ಕೈಕೆಳಗೆ ಗೇಣಿದಾರನಾಗಿರಬೇಕು. ಅಥವಾ (f) ... ರೂಂದು ಅಸ್ತಿಯ ಮೇಲಿನ ತೆರಿಗೆ, ಕಂಪೆನಿಯ ಮೇಲಿನ ತೆರಿಗೆ ಅಥವಾ ವೃತ್ತಿ ತೆರಿಗೆ ... ರೂಪಾಯಿಗೆ ಕಡಿಮೆ ... ಹಿಂದಿನ ವರ್ಷದಲ್ಲಿ ತನ್ನ ಕೂಟದಲ್ಲಿ ಸೇರಿದ ಮ್ಯುನಿಸಿಪಾಲಿಟಿಯಲ್ಲಿ ಕೊಟ್ಟಿರಬೇಕು. ಅಥವಾ (g) ಹಿಂದಿನ ವರ್ಷದಲ್ಲಿ ಆದಾಯ ತೆರಿಗೆಯನ್ನು ಕೊಟ್ಟಿರಬೇಕು. ಅಥವಾ (h) ... ಸೈನ್ಯದಲ್ಲಿ ಕೆಲಸ ಮಾಡಿದ ಅಥವಾ ... ಗಿದ್ದು ಪೆನ್‌ಶನ್ ಪಡೆಯುತ್ತಿರಬೇಕು.

ಹಿಂದಿನ ವರ್ಷದಲ್ಲಿ ೧೨೦ ದಿನಗಳಿಗೆ ಕಡಿಮೆಯಾಗದೆ ಶಹರಿನ ಅಥವಾ ಗ್ರಾಮದ ಮಹಮ್ಮದೀಯ ಕೂಟದಲ್ಲಿ ವಾಸವಾಗಿದ್ದಂಥಾ ಮತ್ತು ಮದ್ರಾಸ ಶಹರದ ಅಥವಾ ಗ್ರಾಮದ ಕೂಟದಲ್ಲಿ ಪ್ರತಿನಿಧಿಗಳನ್ನು ಚುನಾಯಿಸುವುದಕ್ಕೆ ವಿಧಿಸಿರುವ ಯೋಗ್ಯತೆಗಳಲ್ಲಿ ಯಾವ ಒಂದನ್ನು ಪಡೆದಿರುವಂಥಾ ಪ್ರತಿ ಒಬ್ಬ ಮಹಮ್ಮದೀಯನಿಗೆ ಮಹಮ್ಮದೀಯ ಪ್ರತಿನಿಧಿಯನ್ನು ಚುನಾಯಿಸುವುದಕ್ಕೆ ಯೋಗ್ಯತೆ ಇರುವುದು.

ಇಂಡಿಯಾ ದೇಶದ ಕ್ರೈಸ್ತ ಮತಸ್ಥರು ಇರುವ ಶಹರಿನ ಅಥವಾ ಗ್ರಾಮದ ಕೂಟದ ಪ್ರದೇಶಗಳಲ್ಲಿ ಪ್ರತಿನಿಧಿಗಳನ್ನು ಚುನಾಯಿಸುವುದಕ್ಕೆ ವಿಧಿಸಿರುವ ಯೋಗ್ಯತೆಗಳಲ್ಲಿ ಒಂದನ್ನು ಪಡೆದಂಥಾ ಮತ್ತು ಹಿಂದಿನ ವರುಷದಲ್ಲಿ ೧೨೦ ದಿನಗಳಿಗೆ ಕಡಿಮೆಯಾಗದಂತೆ ಇಂಡಿಯಾ ದೇಶದ ಕ್ರೈಸ್ತ ಮತಸ್ಥರ ಕೂಟಗಳಲ್ಲಿ ವಾಸವಾಗಿದ್ದಂಥಾ ಪ್ರತಿ ಒಬ್ಬ ಇಂಡಿಯನ್ ಕ್ರೈಸ್ತಮತಸ್ಥನಿಗೆ ತಮ್ಮ ಪ್ರತಿನಿಧಿಯನ್ನು ಚುನಾಯಿಸುವ ಯೋಗ್ಯತೆ ಇರುವುದು.

ಈ ನಿಬಂಧನೆಗಳಿಗನುಸಾರವಾಗಿ ತಕ್ಕಾಲದಲ್ಲಿ ಈ ಪಟ್ಟಿಯನ್ನು ತಯಾರುಮಾಡುವ ಉದ್ದೇಶಗೋಸ್ಕರ ಪ್ರತಿನಿಧಿಯನ್ನು ಚುನಾಯಿಸುವದಕ್ಕೆ ಯೋಗ್ಯತೆವುಳ್ಳವರ ಪಟ್ಟಿಯನ್ನು ... ಮೊದಲು ಪ್ರಕಟಿಸುವ ಮುಂಚೆ ವರ್ಷದ ಹಿಂದಿನ ... ಲೆಕ್ಕಗಳನ್ನು ೧೯೦೯ನೇ ಇಸವಿ ಮದ್ರಾಸ ಲೋಕಲ್‌ಬೋರ್ಡ ಆಕ್ಟಿನ ... ತ್ಯನುಸಾರವಾಗಿ ಪರಿಶೋಧಿಸಿ ... ಕಂದಾಯದ ... ನಿರ್ಣಯಿಸಲ್ಪಡುವದು. ಆ ವರುಷದ ಲೆಕ್ಕಗಳು ದೊರೆಯದೆ ಇದ್ದರೆ ಅದರ ಹಿಂದಿನ ದೊರೆಯುವ ಲೆಕ್ಕಗಳನ್ನು ಅನುಸರಿಸಬೇಕು. ೧೯೦೯ನೇ ಇಸವಿ ಮದ್ರಾಸ ಲೋಕಲ್‌ಬೋರ್ಡ ಆಕ್ಟಿನ ... ಪ್ರಕರಣದ ಪ್ರಕಾರ ... ಕಂದಾಯದ ... ನಿರ್ಧರಿಸುವದಕ್ಕೆ ಆಗದೆ ಇದ್ದರೆ ... ಚೆನ್ನಾಗಿ ತನಿಖೆಮಾಡಿ ರಿಜಿಸ್ಟ್ರೇಶನದ ಅಧಿಕಾರಿಯವರು ಈ ಪಟ್ಟಿಯನ್ನು ನಿರ್ಣಯಿಸುವರು.

ಆಸ್ತಿಯನ್ನು ಜತ್ತಾಗಿ ಅನುಭವಿಸುತ್ತಾ ... ಜತ್ತಾಗಿಯೇ ... ಪ್ರತಿನಿಧಿಗಳನ್ನು ಚುನಾಯಿಸುವದಕ್ಕೆ ಯೋಗ್ಯತೆ ಇದೆಯೋ ಇಲ್ಲವೋ ಎಂಬುದನ್ನು ... ಅಂಥಾ ಜತ್ತು ಕುಟುಂಬವನ್ನು ಒಂದಾಗಿ ... ಜತ್ತು ಕುಟುಂಬಕ್ಕೆ ಯೋಗ್ಯತೆ ಇರುವದು ಕಂಡುಬಂದರೆ ಆ ಕುಟುಂಬದಲ್ಲಿ ... ಪ್ರತಿನಿಧಿಗಳನ್ನು ಚುನಾಯಿಸುವದಕ್ಕೆ ಯೋಗ್ಯತೆ ... [illegible]

[illegible]

Registration Officer,
PUTTUR DIVISION.

11-8-20

|| ಶ್ರೀ [illegible] ನಮಃ ||

|| ಶ್ರೀ ಗುರುಭ್ಯೋ ನಮಃ ||

([illegible])

ಶ್ರೀ [illegible] ಶ್ರೀ [illegible] ಶ್ರೀದೇವರು [illegible] ಭಂಡಾರದಿಂದ ಮತ್ತು ಶ್ರೀ [illegible] ಶಿಷ್ಯ [illegible] ವರೆಗೆ ವಸೂಲು [illegible] ವಿವರ.

			ವಾಗ್ದಾನ	ವಸೂಲು
			ರೂ. ಆ.	ರೂ. ಆ.
	ಕೆಳಗಿನ ಸಂಖ್ಯೆಯು ಮುಂದೆ ರೂ.		[illegible]	[illegible]
	[illegible] ಮುಂದಿನ ಬಾಕಿ			
೩೧.	ಒಂಟಿ ಮಾಡು ವರ್ಧಿಂಪ ಶ್ಯಾನಭಾಗ		೧೫–೦	೧೫–೦
೩೨.	,,	ಕಂಟ ಘಾಸಿ ಕೃಷ್ಣ ಪೈ	೧೦–೦	೧೦–೦
೩೩.	,,	[illegible] ವೆಂಕಟೇಶ ಕಮ್ತಿ	೫–೦	೫–೦
೩೪.	,,	ಉಪ್ಪಿ ಕೃಷ್ಣ ಭಟ್ಟರ್ ಸ್ವಾಕ	೫–೦	
೩೫.	,,	ಶ್ರೀಪಾದ ಅನ್ನು ಶೆಣೆ	೧–೦	
೩೬.	,,	ಭಟ್ಟೆ ದಾಮೋದರ ಪ್ರಭು	೫–೦	೫–೦
೩೭.	,,	ಅಮ್ಮಲ ಗೋಪಾಲ ಪೈ	೨೧–೦	
೩೮.	,,	ರಾಮಚಂದ್ರ [illegible] ಕಮಲಾಕ್ಷ	[illegible]–೦	
೩೯.	,,	ವಗ್ಗ ಸುಬ್ರಾಯ ಪೈ	೧–೦	
೪೦.	,,	ಸರ್ವೋತ್ತಮ ರಾಯ ಪೈ	೩–೦	೩–೦
೪೧.	,,	ಕೇಶವ ರಾಯ ಪೈ	೩–೦	೩–೦
೪೨.	,,	ರಾಘವ ರಾಯ ಪೈ	೧–೪	೧–೪
೪೩.	,,	ಚಿಟ್ಟಿ ಮಾಧವ ಪ್ರಭು	೩–೦	
೪೪.	,,	ಮಂಗೇಶ ಶೆಣೈ	೧–೪	೧–೪
೪೫.	,,	ಬಂ. ಅಪ್ಪ ಶ್ಯಾನಭಾಗ	೩೫–೦	೩೫–೦
೪೬.	,,	ರಾಮ ಜನಾರ್ಧನ ಬಾಳಿಗ	೬–೦	೬–೦
೪೭.	,,	ಗಣಪತಿ ಮಾಧವ ಬಾಳಿಗ	೫–೦	೫–೦
೪೮.	,,	ವೆಂಕಟ್ರಾಯ ಪೈ	೭–೦	೭–೦
೪೯.	,,	ಭಟ್ ವೆಂಕಟ್ರಾಯ ಶ್ಯಾನಭಾಗ	೫–೦	೫–೦
೫೦.	,,	ವತ್ತಿ ನರಸಿಂಹ ಶ್ಯಾನಭಾಗ	೫–೦	೫–೦
೫೧.	,,	[illegible] ಬಾಳಿಗ	೧೦–೦	೧೦–೦
೫೨.	,,	ಮಾಧವ ನಾರಾಯಣ ಶ್ಯಾನಭಾಗ	೧೦–೦	೧೦–೦
೫೩.	,,	ಕೈಕೋಡಿ ವಾಸುದೇವ ಕಿಣಿ	೫–೦	೫–೦
೫೪.	,,	ವಾಮನ ಕಿಣಿ	೫–೦	೫–೦
೫೫.	,,	ಉಪೇಂದ್ರ ಪೈ	೫–೦	೫–೦
	ಜುಮ್ಲಾ ರೂಪಾಯಿ		[illegible]–೦	[illegible]–೦

(ಮುಂದರಿಯುವುದು)

ಉಳ್ಳಾಲ ವೆಂಕಟ್ರಾಯ ಗಣಪತಿ ಕಿಣಿ,

ಮಂಗಳೂರು, ತಾ 20 9 20

ಜನರಲ್ ಅಡಳಿತದಾರ,

ಶ್ರೀ ಕಾಶೀಮಠ ಸಂಸ್ಥಾನ

FOR SALE.

Aluminium Ware, Spirit Stoves Boots, Writing Pads, Stationery Cabinet Pathephone with records, Photographic Cameras with apparatus, Magic Lantern with slides, Tennis and Badminton articles Singer Sewing Machines, Novels, Picture Frames, Crockery, Lamps, Door and Window curtains Wooden, Iron and Folding Cots Filter Pianos, Violin Banjo Saddle, Harness Carriage etc etc

Prices on application —

H C Fernandez & Co.

Auction Sale Room

MANGALORE.

ನಾಟಕ ಪಾರಿತೋಷಿಕ ಸ್ಪರ್ಧೆ.

ಬೆಂಗಳೂರುಸಿಟಿ ಅಮೆಚೂರ್ ನಾಟಕ ಮಂಡಲಿಯವರು ಸಾಮಾಜಿಕ ವಿಷಯವಾಗಿ ಕನ್ನಡಭಾಷೆಯಲ್ಲಿ ಸ್ವಕಲ್ಪಿತವಾಗಿ ಬರೆಯುವ ಉತ್ತಮ ನಾಟಕಕ್ಕೆ ರೂ ೨೫೦ರ ಪಾರಿತೋಷಿಕವನ್ನು ಕೊಡುವರು ನಾಟಕವು ೪ ಗಂಟೆಗಳ ಕಾಲದಲ್ಲಿ ಅಭಿನಯಿಸುವಂತಿರಬೇಕು.

ಸ್ಪರ್ಧೆಗಾಗಿ ಬಂದ ನಾಟಕಗಳಲ್ಲ ಬಹುಮಾನಾರ್ಹ ವಾದುದನ್ನು ಆರಿಸುವುದಕ್ಕೆ ಸಂಘದವರು ಪರೀಕ್ಷಕ ಮಂಡಲಿಯೊಂದನ್ನು ನಿಯಮಿಸುವರು ಆ ಮಂಡಲಿಯ ತೀರ್ಮಾನವೇ ಕಡೆ.

'ನಾಟಕಕ್ಕೆ ಸ್ಪರ್ಧಿಸುವವರು ಹೆಚ್ಚಿನ ಮಾಹಿತಿ ಬಗ್ಗೆ ಕೆಳಗಿನ ವಿಳಾಸಕ್ಕೆ ಬರೆದುಕೊಳ್ಳುವುದು

ಬೆಂಗಳೂರು ಸಿಟಿ, ತಾ 7–9–1920

ಬಿ. ಶ್ರೀನಿವಾಸ ಐಯ್ಯಂಗಾರ್,

ಗೌರವ ಕಾರ್ಯದರ್ಶಿಗಳು,

ಅಮೆಚೂರು, ನಾಟಕಮಂಡಲಿ

ರೂ. 20,000ಕ್ಕೆ ಸೋಡ್ತಿ. (Raffle).

ಬಂಟರ ಯಾನೆ ನಾಡವರ ಸಂಘದ ಸಹಾಯಾರ್ಥವಾಗಿ ಇದೇ ಬರುವ ದಶಂಬರ ಆಖೈರಿಗೆ ಪುತ್ತೂರು ಮಹಾಸಭೆಯಲ್ಲಿ ಈ ಸೋಡ್ತಿ ತೆಗೆಯಲಾದೀತು

ರೂ 2500ರಿಂದ ರೂ 5ರ ವರೆಗಿನ

ಇನಾಮುಗಳು 200.

ಟಿಕೇಟು ಮಾರಾಟ ಮಾಡುವವರಿಗೆ ಬೇರೆ ಇನಾಮುಗಳು ಕೂಡ ಇವೆ.

ಟಿಕೇಟು 1ರ ಬೆಲೆ ರೂ. 1.

(ಜಾತಿಗೃಹಸ್ಥರು ಮಾತ್ರ ಕೊಂಡುಕೊಳ್ಳಬಹುದು)

ಪ್ರತಿ ತಾಲೂಕಿನಲ್ಲಿ ಸಹಾಯಕರು ಬೇಕು ಕಮಿಶನ್ ದರದ ಕುರಿತು ಕೆಳಗಿನ ವಿಳಾಸಕ್ಕೆ ಬೇಗನೆ ಬರೆಕೊಳ್ಳಿರಿ

ಸೋಡ್ತಿ ಕಮಿಟಿಕಾರ್ಯದರ್ಶಿ,

ಕೆನರಾ ಛಾಪಖಾನೆ,

ಮಂಗಳೂರು

ನೋಟೀಸು.

ದಕ್ಷಿಣ ಕನ್ನಡಾ ಡಿಸ್ಟ್ರಿಕ್ಟ್ ಕೋರ್ಟಿನಲ್ಲಿ

O P $\frac{95}{1920}$

ಫ್ಲೋರಿಬ್ಯಾರಿ—ಅರ್ಜಿದಾರ

ಮತ್ತು

ಐಸಮ್ಮ—ರೆಸ್ಪೊಂಡೆಂಟಳು

ಮಂಗಳೂರು ತಾಲೂಕು ಕೋಡಿಯಾಲ ಮಾಗಣೆ ತೋಕೂರು ಗ್ರಾಮದಲ್ಲಿರುವ ಮೃತಪಟ್ಟ ಹಮ್ಮದೆಬ್ಯಾರಿಯ ಮ್ಯಾನರ್ ಮಕ್ಕಳು [illegible], ಪತೀಜಮ್ಮ, ಮಮ್ಮಾಟಿ ಇವರ ಗೈ[illegible]ತನ್ನನ್ನು ಗಾರ್ಡಿಯನನಾಗಿ ನೇಮಿಸಿ ಸದರಿ ಮ್ಯಾನರ್‌ರಿಗೆ ಸಮ್ಮಂಧಪಟ್ಟ ಅರ್ಜಿಯಲ್ಲಿ ಕಾಣಿಸಿದ ಸ್ಥಿರಚರ ಸೊತ್ತುಗಳು ಗಾರ್ಡಿಯನನಾಗಿ ತನ್ನ ಸ್ವಾಧೀನ ಕೊಡಬೇಕೆಂತ ವಗೈರೆ ಅರ್ಜಿದಾರನು ಮೇಲಿನ ಅರ್ಜಿಯನ್ನು ದಾಖಲುಮಾಡಿರುತ್ತಾನೆ ಅದ್ದರಿಂದ ಆಕ್ಷೇಪವಿದ್ದವರು 1920ನೇ ಇಸವಿ ಒಕ್ಟೋಬರ ತಾ 2ನೇ ದಿವಸ ಪೂರ್ವಾಹ್ನ 11 ಘಂಟೆಗೆ ಮೇಲ್ಕಂಡ ಕೋರ್ಟಿನಲ್ಲಿ ಹಾಜರಾಗಿ ತಮ್ಮ ಆಕ್ಷೇಪಗಳನ್ನು ಜಾಹೀರು ಮಾಡಿಕೊಳ್ಳತಕ್ಕದ್ದು

Mangalore 22—9—1920

M Madhava Rao,

Vakil for Petitioner

ನೋಟೀಸು.

ಮಂಗಳೂರು ಶಹರದಲ್ಲಿರುವ ಬಿಲ್ಲವರ ಜಾತಿ ಬಸಪ್ಪನ ಮಗ ಕಂಟ್ರಾಕ್ಟರ ದೂಮಪ್ಪನು ಸರ್ವ ಜನರಿಗೆ ತಿಳಿಯಪಡಿಸುವುದೇನಂದರೆ.

"ಹರಿ ಜೀವನದಾಮುಜಿ ಜಾಜಿಲ್ ಮತ್ತು ಕಂಟ್ರಾಕ್ಟರ್ ದೂಮಪ್ಪ" ಎಂಬ ಹೆಸರಿನಿಂದ ನಾವು ನಡಿಸಿ ಬಂದ ಕಂಪೆನಿಯು ಇನ್ನು ಮುಂದೆ ನಡಿಸುವುದು ಅಸಾಧ್ಯವೆಂತ ಕಂಡು ಬಂದದ್ದರಿಂದ ಇದೇ ಸಪ್ಪೆಂಬರ ತಾ ೭ರಲ್ಲು ಗೃಹಸ್ತರಿದ್ದು ಪಂಚಾಯತಿಯಿಂದ ಲೆಖ್ಖಾಚಾರನಾಗಿ ಆಗಿರುವುದರಿಂದ ಸದರಿ ತಾರೀಕಿನಿಂದ ಸದರಿ ಕಂಪೆನಿಯು [illegible]ಕ್ಕೆ ಇರುವುದಿಲ್ಲವೆಂತಲೂ ನಮ್ಮಿಂದ ಹೊರಗೆ ಸಲತಕ್ಕದ್ದು ಏನೊಂದು ಇಲ್ಲವೆಂತ ಈ ಮೂಲಕ ಪ್ರಕಟಿಸಿರುತ್ತೇನೆ

M Dumappa

ಸಿವಿಲ್ ಪ್ರೊಸಿಡ್ಯೂರ್ ಕೋಡಿನ O I r 8ರ ಪ್ರಕಾರ

ನೋಟೀಸು.

ದಕ್ಷಿಣ ಕನ್ನಡಾ ಕಾರ್ಕಳ ಡಿಸ್ಟ್ರಿಕ್ಟ ಮುನ್ಸಿಫ ಕೋರ್ಟಿನಲ್ಲಿ

ಕ್ರಮ ನಂಬ್ರ $\frac{543}{1920}$

ತಂಗಪ್ಪ ಹೆಂಗಸು ಕೂಡಾ—ವಾದಿರು

ಮತ್ತು

ಮೂಡ್ಲಗಿರಿ ಶ್ಯಾನಭಾಗ ಕೂಡಾ—ಪ್ರತಿವಾದಿರು

ಇವರೊಳಗೆ—

ಮಾಳಗ್ರಾಮದ ದುಗಲಾಯ ದೈವದ ಬಂಡಾರದ ಕಡೆಯಿಂದ ಸದರಿ ಬಂಡಾರದ ಹಕ್ಕಿನ ಆಸ್ತಿ ಸ್ವಾಧೀನತೆ ಬಗ್ಗೆ ಪ್ರತಿವಾದಿರ ಮೇಲೆ ದಾಖಲುಮಾಡಿರುವ ದಾವೆಯು ತಾರೀಕು 16—10—20ಕ್ಕೆ ತನಖಿಗೆ ಇಟ್ಟಿರುತ್ತದೆ. ಆ ಕುರಿತು ಏನಾದರೂ ಆಕ್ಷೇಪ ಇದ್ದರೆ ಸದರಿ ಗ್ರಾಮಸ್ಥರು ಅಥವಾ ಸದರಿ ದುಗಲಾಯ ದೈವದ ಬಂಡಾರಕ್ಕೆ ಸಂಬಂಧಪಟ್ಟ ಯಾರಾದರೂ ಅಂಥಾ ಆಕ್ಷೇಪಗಳನ್ನು ಮೇಲ್ಕಂಡ ತಾರೀಕಿನ ಒಳಗೆ ಜಾಹೀರು ಮಾಡಿಕೊಳ್ಳತಕ್ಕದ್ದು

ಕಾರ್ಕಳ, ತಾ ೭ ೯ ೨

K Sinthaya Kamath

Pleader for Plaintiff

ಪ್ರಖ್ಯಾತಿಪಡೆದ ಎಸ್ ವಿ ಸ ಗಂಧಪುಡಿ ನಶ್ಯವು.

ಸಾಧಾರಣ ಪುಡಿ ನಶ್ಯವನ್ನು 1½ ದಸ ಹಾಕಿಕೊಳ್ಳುವವರು ಒಂದಾವರ್ತಿ ಇದನ್ನು ಹಾಕಿಕೊ ಎತೆ [illegible] ಎಷ್ಟೊ ಆನಂದವಾಗಿರುವದು ಇದರ ಖಾರವು ಮತ್ತು ಪರಿಮಳವು ಎಷ್ಟು ತಿಂಗಳಾದರೂ ಕೆಡದೆ ಹಾಗೆಯೆ ಇರುವದು ಬಾಟ್ಲ 1ಕ್ಕೆ 4 ಆಣೆ ಟಪ್ಪಾಲು ಚಾರ್ಜು 1 3 ವರೆಗೆ 4 ಆಣೆ ವಂದೆ ಸತಿ 1 ಬಾಟ್ಲಗಳ ತರಿಸಿಕೊಂಡರೆ 1 ಬಾಟ್ಲ ಉಚಿತವು

ಉತ್ತಮ ತರದ ಪುಡಿ ನಶ್ಯವು

ಪ್ರಖ್ಯಾತಿಪಡೆದ ಖಾರವಾದ ಹೊಗೆಸೊಪ್ಪಿನಿಂದ ಅದು ತೆಗದು ಅನುಭವಸ್ಥರಿಂದ ತಯಾರಿಸಿರುವದರಿಂದ [illegible] ವರ್ತಿ ಈ ಪುಡಿಯನ್ನು ಉಪಯೋಗಿಸಿದವರು ಬೇರೆ ಪುಡಿ ನಶ್ಯವನ್ನು ನಿಶ್ಚಯವಾಗಿಯೂ ಬಯಸರು ಸೇರು 1ಕ್ಕೆ ರೂ 1 ಟಪ್ಪಾಲು ಚಾರ್ಜು 4 ಆಣೆ

ಎಸ್ ವಿ ದಂತಚೂರ್ಣವು

ಇದರ ಉಪಯೋಗದಿಂದ ಹಲ್ಲುಗಳು ಶುಭ್ರವಾಗಿ ಬಿಳುಪಾಗಿ ಪ್ರಕಾಶಿಸುವದಲ್ಲದೆ ಸಕಲ ದಂತರೋಗಗಳನ್ನು ನಿವೃತ್ತಿ ಮಾಡಿ ಹಲ್ಲುಗಳನ್ನು ವಜ್ರದಂತೆ ಗಟ್ಟಿಪಡಿಸುವದು ಡಬ್ಬಿ 1ಕ್ಕೆ 6 ಆಣೆ ಟಪ್ಪಾಲು ಚಾರ್ಜು 3 ಡಬ್ಬಿಗಳ ವರೆಗೆ 4 ಆಣೆ. ನಮ್ಮ ಕಂಪನಿಯ ಇಂಗ್ಲಿಷ್ ಕೆಟಲಾಗನ್ನು ಬರದರೆ ಉಚಿತವಾಗಿ ಕಳುಹಿಸಿಕೊಡುವೆವು ನಮ್ಮ ವಿಳಾಸ —

ತಂತಿ ವಿಳಾಸ — ವಾಸು ತಿರುಚಿ

ಎಸ್ ವಾಸು ಅಂಡ್ ಕಂಪನಿ,

ಪಾಲಕರೆ ತಿರುಚಿನಾಪಳ್ಳಿ

FOUNTAIN PENS.

ಫೌಂಟನ್ ಪೆನ್ನುಗಳು.

14 ಕೆರೆಟ್ ಚಿನ್ನದ ಮೊನೆಯುಳ್ಳ ಅತ್ಯುತ್ತಮವಾದ ವಿವಿಧ ತರದ ಫೌಂಟನ್ ಪೆನ್ನುಗಳು ಈಗ ತಾನೇ ಬಂದಿವೆ.

ಕಾಮತ್ ಸೇಫ್ಟಿ ಪೆನ್ ಕ್ರಯ	ರೂ	9—8—0
,, ಫೌಂಟನ್ ಪೆನ್	,,	9—0—0

ರಖಂ ಕರಿಸುವವರಿಗೆ ಪ್ರತ್ಯೇಕ ದರಗಳು

ಪಿ. ಎಮ್. ಕಾಮತ್ ಎಂಡ್ ಕೊ.

ಕೆಮಿಸ್ಟ್ಸ್, ಮಂಗಳೂರು.

50 ರೂಪಾಯಿ ಬಹುಮಾನ.

ಈ ಕೆಳಗೆ ದಸ್ಕತು ಮಾಡಿದವರ ಬಾಬತು 1919ನೆ ಇಸವಿಯ ವರೆಗಿನ ಆ ಮೊದಲಿನ 3 ವರ್ಷಗಳ ಆಳುಗಳಿಗೆ ಅಡ್ವಾನ್ಸ ಹಣ ಸಂದ ಮತ್ತು ಅವರಿಂದ ಹಣ ವಸೂಲು ಬಂದ ಪ್ರತಿ 250 ಪೇಜುಗಳುಳ್ಳ ಲೆಖ್ಖದ ಚಕ್‌ರೋಲ್ ಬೂಕುಗಳು 4 ಮತ್ತು ಆ ಸಂಬಂಧದ ಇತರ ಹಳೇ ಲೆಖ್ಖದ ಪುಸ್ತಕಗಳು ಇಟ್ಟಿರುವ ಸಣ್ಣ ಸುಂದರವಾದ ಹ್ಯಾಂಡ್ ಬೊಕ್ಸ್ ಇದೇ ಕಳೆದ ಜುಲ್ಯಾ 23ರಲ್ಲು ಗಾಡಿಯಲ್ಲಿ ಬರುತ್ತಾ ಗುರುವ್ಯಾನ ಕೆರೆಯಲ್ಲೋ, ಚಾಮಾನ್ಪತಿಯಲ್ಲೋ ಬಿದ್ದು ಹೋಗಿರುತ್ತಿದೆ ಇದು ಸಿಕ್ಕಿದವರು ಸ್ವದೇಶಾಭಿಮಾನಿ ಆಫೀಸಿಗೆ ತಂದುಕೊಟ್ಟು ತಿಳಿಸಿದಲ್ಲಿ ಮನಃಪೂರ್ವಕವಾಗಿ ಮೇಲ್ಕಂಡ ಬಹುಮಾನವನ್ನು ಕೆಳಗೆ ದಸ್ಕತ್ತು ಹಾಕಿದವರು ಕೊಡುವರು.

ISIDORE COLACO,

Wartyhully Estate Sakleshpur,

DT HASSAN

[illegible] Bank, Limited, Mangalore.

[illegible] ಬ್ಯಾಂಕ್ ಲಿಮಿಟೆಡ್, ಮಂಗಳೂರು.

[illegible] JULY [illegible].	1906ನೇ ಇಸವಿ ಜುಲಾಯಿ ತಿಂಗಳಲ್ಲಿ ಸ್ಥಾಪಿಸಲ್ಪಟ್ಟಿತು.
[illegible] fully paid up Capital Rs. 300,000—0—0	ಅಧಿಕಾರಗೊಳಿಸಲ್ಪಟ್ಟು ಪೂರ್ಣವಾಗಿ ಕೊಟ್ಟ ಮೂಲಧನವು ರೂ. 300,000—0—0
Reserve and other sinking Funds „ 138,697—7—2	ಕ್ಷೇಮನಿಧಿ ಮತ್ತು ಇತರ ಫಂಡುಗಳು „ 138,697—7—2

THE BANK RECEIVES FIXED, CURRENT ACCOUNT, & SAVINGS BANK DEPOSITS.

ಕಾಯಂ ಮತ್ತು ಚಾಲ್ತಿ ಠೇವಣಾತಿಗಳೂ, ಸೇವಿಂಗ್ಸ್ ಬ್ಯಾಂಕ್ ಠೇವಣಾತಿಗಳೂ, ತಕ್ಕೊಳ್ಳಲ್ಪಡುತ್ತವೆ.

For further particulars apply to the Secretary.

ವಿಶೇಷ ಮಾಹಿತಿ ಬಗ್ಗೆ ಸೆಕ್ರೆಟರಿಗಳಿಗೆ ಬರಕೊಳ್ಳುವದು.

Canara Bank Ltd.,
Mangalore, 1st September 1920.

K. Venkat Rao,
Secretary.

ವೈದ್ಯ ವಿದ್ಯ.

ಯಾವದೊಂದು [illegible] ಸುಲಭಸಂಗತ್ಯ ಗೊಂದಲವಿಲ್ಲದ [illegible]

ವೈದ್ಯ ವಿದ್ಯ.

ಎಂಬ ಪುಸ್ತಕವನ್ನು [illegible] ಪುಸ್ತಕಕ್ಕೆ [illegible] ಕೊಡಬೇಕು. [illegible] ತಿಳಿಸಿದ ಮ್ಯಾಕ್ಕೆ ಬರುವದು.

ವೈದ್ಯ ವಿದ್ಯ.

ವಿಳಾಸ—ರಾಜವೈದ್ಯ ನಾರಾಯಣಜಿ [illegible], 27, [illegible] ಬಜಾರು ರೋಡು, ಮದ್ರಾಸು.

ರೂ. 1,000 ಬಹುಮಾನ.

ಲೋಕಪ್ರಸಿದ್ಧವಾದ ಸಾಲಾಮಿಸ್ರಿ ಮುರಬ್ಬಾ

(ಗವರ್ನಮೆಂಟಿನಲ್ಲಿ ರಿಜಿಸ್ಟರ್ ಮಾಡಲ್ಪಟ್ಟಿದೆ).

ಕಳೆದ ಜುಲಾಯಿ ತಿಂಗಳಲ್ಲಿ ಪಣಂಬೂರಿನ ಯಲ್ಲಪ್ಪನೆಂಬ ಸುಮಾರು [illegible] ವರುಷದ ಹುಡುಗನು ಮುಂಬಾಯಿಯಲ್ಲಿ ರಾ [illegible] ಸಾಹುಕಾರರು ಬ್ಯಾಂಕಿಗೆ ಪಾವತಿ ಕೊಡಲು ಕೊಟ್ಟ ರೂ ೧,೨೦೦ ಸಹಿತ ಪರಾರಿಯಾಗಿದ್ದನು. ಕಳೆದ ತಾರೀಕ [illegible]ರಲ್ಲು ಈತನು ಮಂಗಳೂರಲ್ಲಿ ಪೋಲೀಸರ ಕೈಗೆ ಸಿಕ್ಕಿಬಿದ್ದು ನಿನ್ನೆಯ ಸ್ಟೀಮರಿನಲ್ಲಿ ಮುಂಬಯಿಗೆ ಕಳುಹಿಸಲ್ಪಟ್ಟಿರುತ್ತಾನೆ

ಇಲ್ಲಿಗೆ ಕಲೆಕ್ಟರರಾಗಿ ವರ್ಗಹೊಂದಿದ ರಾವಬಹದ್ದೂರ ಯು. ರಾಮರಾಯರು ನಿನ್ನೆ ಸಾಯಂಕಾಲವು ಎಲ್ಲಿಸರಿಂದ ಚಾರ್ಜು ವಹಿಸಿಕೊಂಡರು.

ಮಂಗಳೂರು ಕೋ ಒಪರೇಟಿವ್ ಸ್ಟೋರು
ವರ್ಷಾವಧಿ ಮಹಾಸಭೆ.

ಈ ಸ್ಟೋರಿನ ವರ್ಷಾವಧಿ ಮಹಾಸಭೆಯು ತಾ ೧೦ ೧೦ [illegible]ನೇ ಆದಿತ್ಯವಾರ ಮಧ್ಯಾಹ್ನ [illegible] ಘಂಟೆಗೆ ಸದರಿ ಸ್ಟೋರಿನ ಆಫೀಸಿನಲ್ಲಿ ಜರಗುವದು. ಎಲ್ಲಾ ಮೆಂಬರರು ದಯವಿಟ್ಟು ಬರಬೇಕಾಗಿಯೂ, ಈ ಸ್ಟೋರಿ ಮೆಂಬರಾಗಿ ಸೇರಿದ ಎಲ್ಲಾ ಸಹಕಾರಿಸ್ಟೋರುಗಳು ಮತ್ತು ಸಂಘಗಳು ತಂತಮ್ಮ [illegible] ಸಭೆಯಲ್ಲಿ ಒಬ್ಬ ಪ್ರತಿನಿಧಿಯನ್ನು [illegible] ಸಭೆಗೆ ಕಳುಹಿಸಬೇಕಾಗಿಯೂ ವಿನಂತಿ

ತಾ 28 — 9 — '22
ಮಂಗಳೂರು

ಬೈಂದೂರ ಆನಂದ ರಾವ್,
ಸೆಕ್ರೆಟರಿ

ಆಯುರ್ವೇದಾಶ್ರಮ.

ವೈದ್ಯರತ್ನ ಪಂಡಿತ ಡಿ. ಗೋಪಾಲಾಚಾರ್ಲು

ಇವರಿಂದ ಸ್ಥಾಪಿತವಾಗಿ ನಡಿಸಲ್ಪಟ್ಟಿರುತ್ತದೆ.

ಪ್ಲೇಗ್, ಕೊಲೇರಾ ಮತ್ತು ಇನ್‌ಫ್ಲ್ಯೆಯೆಂಜಾ

ಇವಕ್ಕೆ ಮುಖ್ಯವಾದ ಚಿಕಿತ್ಸಾಲಯ.

ಸಕಲ [illegible] ಆರೋಗ್ಯವನ್ನು [illegible] ಔಷಧಗಳು ಇಲ್ಲಿ ದೊರೆಯುವವು ಕೆಟಲಾಗನ್ನು ಅಪೇಕ್ಷಿಸುವವರಿಗೆ ಉಚಿತವಾಗಿ ಕಳುಹಿಸುವೆವು.

ಪ್ಲೇಗು ಔಷಧದ ದೊಡ್ಡ ಸೆಟ್ಟಿಗೆ ರೂ. 2—2—0 | ಕೊಲೇರಾ ಔಷಧದ ದೊಡ್ಡ ಸೆಟ್ಟಿಗೆ ರೂ. 1—2—0
" ಸಣ್ಣ " " 1—6—0 | " ಸಣ್ಣ " " 0-12—0

ಇನ್‌ಫ್ಲುಯೆಂಜಾ ಔಷಧದ ಪ್ರತಿ ಸೆಟ್ಟಿಗೆ ರೂ. 1—12—0

ಎಲ್ಲಾ ಔಷಧಗಳನ್ನು ಕಳುಹಿಸುವಾಗಲೂ ಟಪ್ಪಾಲ ಹಾಸಲು ಮತ್ತು ಪೇಕಿಂಗ್ ಪ್ರತ್ಯೇಕ.

ವಿಳಾಸ.— ಮೆನೇಜರ್, ಆಯುರ್ವೇದಾಶ್ರಮ,
55 ಆಚಾರಪ್ಪನ ಬೀದಿ,
ಜಾರ್ಜಟೌನ್, ಮದರಾಸ್.

ತಂತಿ ವಿಳಾಸ — ಪಂಡಿತ್, ಮದರಾಸ್.

ಪಾಳ್ಯದ ವೆಂಕಟಾಚಲ ಪಂಡಿತರ ಸಿದ್ಧೌಷಧಗಳು.

ಲೋಕಾಮಯಹರ ಕಸ್ತೂರಿ ಮಾತ್ರೆಗಳನ್ನು ಈಗಲಾದರೂ ಪರೀಕ್ಷಿಸಿ ನೋಡಿರಿ!

ಪ್ರತಿವರ್ಷವೂ ಲಕ್ಷಾಂತರ ಸೀಸೆಗಳು ವಿಕ್ರಯವಾಗುತ್ತಿವೆ.

ಇಂಡಿಯಾದವರು ಮಾತ್ರವಲ್ಲ, ಬರ್ಮಾ, ಸಿಲೋನ್, ಮಲೆಯ ಸ್ಟೇಟ್, ಗೋವಾ, ಫೀಜಿಐಲೆಂಡ್, ಈಸ್ಟಾಫ್ರಿಕಾ ಮೊದಲಾದ ಕಡೆಯವರು ಕೂಡ ಈ ಸಿದ್ಧೌಷಧಿಯನ್ನು ಉಪಯೋಗಿಸುತ್ತಿರುತ್ತಾರೆ

ಮಹಾಭಾಗ ಒಂದೇ ಒಂದು ಲೋಕಾಮಯಹರ ಕಸ್ತೂರಿ ಮಾತ್ರೆಯ ಸೀಸೆಯು ನಿಮ್ಮ ಮನೆಯಲ್ಲಿದ್ದರೆ ಸಮಯವನ್ನು ಕಾದು ಮೋರೆಯುದುಪ್ಪು ನಿಜವಾಗಿಯೂ ತಪ್ಪುವುದು

ಶೀತ, ಶೀತವಾಯು, ಅಜೀರ್ಣ ವಾಕ್ಕುವಾಯು, ಜ್ವರ, ಮಂದ ಮಲಬದ್ಧ, ಕೆಮ್ಮು, ಗಸಬೇನೆ, ಬಲಹೀನತೆ, ಕೆಟ್ಟ ಹವಾ, ಮತ್ತು ಕೆಡುಕಾದ ನೀರಿನಿಂದುಂಟಾಗುವ ವಿಕಾರ ಮಕ್ಕಳ ಎಳವು, ಜ್ವರ, ಕೆಮ್ಮು, ವಾಯು, ಇನ್ನೂ ಅನೇಕ ರೋಗಗಳನ್ನು ಈ ಸಿದ್ಧಾಮೃತ ಆಶ್ಚರ್ಯವಾಗುವಂತೆ ಗುಣಪಡಿಸುತ್ತದೆ

ಪ್ರತಿ 6 ಸೀಸೆಗಳನ್ನು ಒಟ್ಟಿಗೆ ತರಿಸಿದರೆ ಟಪಾಲು ಖರ್ಚು ಸೇರಿ 1—8—0
ಪ್ರತಿ 12 ಸೀಸೆಗಳನ್ನು ಒಟ್ಟಿಗೆ ತರಿಸಿದರೆ ಟಪಾಲು ಖರ್ಚು ಸೇರಿ 2—13—0
ಪ್ರತಿ 25 ಸೀಸೆಗಳನ್ನು ಒಟ್ಟಿಗೆ ತರಿಸಿದರೆ ಟಪಾಲು ಖರ್ಚು ಸೇರಿ 6—3—0

ರಿಜಿಸ್ಟರಾದ ಈ ವ್ಯಾಪಾರದ ಗುರ್ತು ಪ್ರತಿ ಸೀಸೆಯ ಮೇಲೂ ಇರುವುದನ್ನೇ ನೋಡಿ ತೆಗೆದುಕೊಳ್ಳಬೇಕಾಗಿದೆ

ಅನುಪಾನ ಪತ್ರವು ಪ್ರತಿ ಸೀಸೆಯೊಡನೆಯೂ ಇರುವುದು 260 ಮಾತ್ರೆಗಳುಳ್ಳ ಕುಪ್ಪಿಗೆ 4 ಆಣೆ ಮಾತ್ರ

ಲಕ್ಷ್ಮೀವಿಲಾಸ ರಸ (ಪ್ಲೇಗಿಗೆ) — ಲಕ್ಷೋಪಲಕ್ಷ ಪ್ಲೇಗುರೋಗಿಗಳು ಈ ಲಕ್ಷ್ಮೀವಿಲಾಸ ರಸದಿಂದ ಆರೋಗ್ಯವನ್ನು ಪಡೆದಿರುತ್ತಾರೆ ಒಂದೇ ಒಂದು ಲಕ್ಷ್ಮೀವಿಲಾಸ ರಸದ ಸೀಸೆಯು ನಮ್ಮಲ್ಲಿದ್ದರೆ ಪ್ಲೇಗಿಗೆ ಸರ್ವೋತ್ಕೃಷ್ಟವಾದ ಸಿದ್ಧೌಷಧಿಯು ಬೇರೊಂದಿಲ್ಲವೆಂದು ನಾವೇ ಹೇಳುವೆವು ದಿನಜ್ವರ ಮೂರರ ನಾಲ್ಕರ ಜ್ವರಗಳು ಸನ್ನಿಪಾತ ಇವುಗಳು ಕೂಡಾ ಗುಣವಾಗುತ್ತವೆ ಸೀಸೆಗೆ ರೂ 1 ರಕ್ಕೆ ಒಂದು ಇನಾಮು

ಶ್ರೀನಿವಾಸತೈಲ — ಪ್ಲೇಗಿನ ಗಡ್ಡೆ ಕರಗುತ್ತದೆ ಸಂಧುಗಳ ನೋವು ನೀರಿನ ಹೋಗುತ್ತದೆ ಸೀಸೆಗೆ 8 ಆಣೆ 5ಕ್ಕೆ ಒಂದು ಇನಾಮು

ವೈಶ್ವಾನರಾಸವ — ಸೇವಿಸಿದ ಮೊದಲನೇ ವೇಳೆಯಿಂದಲೇ ವಾಂತಿಭೇದಿ ಶೀತಭೇದಿ ಅಜೀರ್ಣದ ಭೇದಿಗಳ ಗುಣವಾಗುತ್ತಾ ಬರುತ್ತವೆ ಸೀಸೆಗೆ ರೂ 1 ರಕ್ಕೆ ಒಂದು ಇನಾಮು

ಬಾಲಸುಧೋದಯ — ಮಕ್ಕಳಿಗೆ [illegible] ಮಲಬದ್ಧ, ಅಜೀರ್ಣದ ಭೇದಿ, ಕ್ಷಯ, ಹೊಟ್ಟೆ ದಪ್ಪವಾಗಿರುವುದು ಹಸಿವಿಲ್ಲದಿರುವುದು ಇವೆಲ್ಲವೂ [illegible] ಮಕ್ಕಳುಳ್ಳವರಾಗುತ್ತಾರೆ ಪುಷ್ಟಿಯ ಚಟುವಟಿಕೆ ಸೀಸೆಗೆ ಆಣೆ 12 ರಕ್ಕೆ ಒಂದು ಇನಾಮು ಈ ನಾಲ್ಕಕ್ಕೂ ಟಪಾಲು ಖರ್ಚು ಬೇರೆ

ಸಮಸ್ತ ರೋಗಗಳಿಗೂ ನಮ್ಮಲ್ಲಿ ಆಯುರ್ವೇದೀಯ ಸಿದ್ಧೌಷಧಿಗಳು ದೊರೆಯುತ್ತವೆ ಕ್ಯಾಟಲಾಗು ಉಚಿತ

ವಿಳಾಸ ಶ್ರೀ ಸೀತಾರಾಘವ ವೈದ್ಯಶಾಲಾ ಮೈಸೂರು

ಒಂದು ಕುಪ್ಪಿಯ ಕ್ರಯ ೧೪ ಆಣೆ. ಮಂಗಳೂರು ಏಜಂಟ್,
ಕೇ. ಟೀ. ಡೋಂಗರೆ ಕಂಪನಿ, ಡಿ. ಉಲನ್‌ಮಾರ್ಟ್ಸ್, ಮಂಗಳೂರು.
ಗಿರಗಾಂ ಮುಂಬಯಿ

[illegible] (ದಕ್ಷಿಣಾಯನ) [illegible]

							[illegible]	
							[illegible]	ಅಸ್ತ.
2	ಶನಿ	೫	೪೯ ೨	ಕೃತ್ತಿಕಾ	೨೧.೫೫	೧೬	6·22	6.20
3	ರವಿ	೬	೪೩.೩೮	ರೋಹಿಣೀ	೧೮.೩೪	೧೭	6·22	6.19
4	ಸೋಮ	೭	೩೭ ೩೨	ಮೃಗಶಿರಾ	೧೪.೩೨	೧೮	6·22	6.18
5	ಕುಜ	೮	೩೧.೩೪	ಆರ್ದ್ರಾ	೧೦.೩೦	೧೯	6 22	6.18
6	ಬುಧ	೯	೨೫.೪೦	ಪುನರ್ವಸು	೬ ೨೮	೨೦	6 22	[illegible]17
7	ಗುರು	೧೦	೨೦.೧೪	ಪುಷ್ಯಾ	೨.೨೭	೨೧	6·22	[illegible]19
8	ಶುಕ್ರ	೧೧	೧೫ ೦	ಮಘಾ	೫೮. ೧೪	೨೨	6·22	6.15

ಮಂಗಳೂರಿನ ವಾಯುಸ್ಥಿತಿ.

(೧೯೨೧ನೆಯ ಸೆಪ್ಟಂಬರ)

Date ತಾರೀಖು	Temperature. ಉಷ್ಣ (ಕಾವು)		Rainfall. ಮಳೆ	
	Maximum ಹೆಚ್ಚಾದದ್ದು	Minimum ಕಡಿಮೆ	ದಿನದ ಮಳೆ	ಏಪ್ರಿಲ್ ೧ರಿಂದ
24	85—1	75—0	0—05	...
25	86—6	75—2	0—43	...
26	87—9	75—8	0—07	...
27	88—6	77—3	—	
28	87—1	75—2	—	
29	87—7	75—4	0—78	—
30	89—1	75—9	0—15	—

ಮಂಗಳೂರಿನ ಪೇಟೆ ಧಾರಣೆ.

ಜಿನಸು	ಇಂದ	ವರೆಗೆ
	ರೂ ಆ	ರೂ. ಆ
ಮಸ್ತಿ ಅಕ್ಕಿಮುಡಿ ಗಳ್ಳೆ	[illegible]— 6	8— 0
ಗುಡ್ಡು, ಸುಗ್ಗಿ	[illegible]— 2	7— 8
ರಾಶಿ ಮುಡಿ ಗಳ್ಳೆ	6—14	7— 1
ಅನ್ನರ್ ಬೆಳ್ತಿಗೆ "	9— 2	9— 6
ಗುಡ್ಡ ಬೆಳ್ತಿಗೆ "	8— [illegible]	8— 8
ರಂಗೂನ ಬೆಳ್ತಿಗೆ ಗೋಣಿ ಗಳ್ಳೆ	1[illegible]— [illegible]	15— 8
ಗೋಧಿ ಗೋಣಿ ಗಳ್ಳೆ	21— 0	20— 8
ಹುರುಳಿ ಗೋಣಿ ಗಳ್ಳೆ	13—12	14— [illegible]
ಕಡಲೆ ಗೋಣಿ ಗಳ್ಳೆ	15— 8	—
ಕೊಡಗು ಗೋಣಿ ಗಳ್ಳೆ	18— 8	—
ಕೊಣಂಬೇಳ ಗೋಣಿ ಗಳ್ಳೆ	[illegible] 0	27— 0
ಉದ್ದು ಗೋಣಿ ಗಳ್ಳೆ	16— 5	18— 0
ಹೆಸರು ಗೋಣಿ ಗಳ್ಳೆ	16— 0	18— 8
ಊರು ಬೆಲ್ಲ ಖಂಡಿ ಗಳ್ಳೆ	105— 0	110— 0
ಉಪ್ಪು ಗೋಣಿ ಗಳ್ಳೆ	4—10	5— 4
ಕೊಬ್ರಿ ಖಂಡಿ ಗಳ್ಳೆ	115— 0	125— 0
ಕೊಬ್ರಿ ಹಿಂಡಿ ಖಂಡಿ ಗಳ್ಳೆ	47— 8	52—0
ಎಳ್ಳಿಂಡಿ ಖಂಡಿ ಗಳ್ಳೆ	45— 0	47— 6
ಕೊಬ್ರಿ ಎಣ್ಣೆ ಮುಡಿ ಗಳ್ಳೆ	10—12	11— 8
ಎಳ್ಳೆಣ್ಣೆ ಮುಡಿ ಗಳ್ಳೆ	11— 0	11— 8
ಬೆಳ್ಳುಳ್ಳಿ ಪಟ್ಟಿಗೆ ಗಳ್ಳೆ	9— 6	9— [illegible]
ಮೋರಿಸ ಸಕ್ಕರೆ ಮುಡಿ ಗಳ್ಳೆ	13— 8	13—12
ಊರ ಮೆಣಸಿನ ಕಾಯಿ ಮುಡಿ ಗಳ್ಳೆ	8— 0	9— 8
ಸಾಸಿವೆ ಮುಡಿ ಗಳ್ಳೆ	10— 0	10— 4
ಕೊತ್ತಂಬರಿ ಮುಡಿ ಗಳ್ಳೆ	—	6— 0
ಕಾಫಿ ಖಂಡಿ ಗಳ್ಳೆ	23[illegible]— 0	235— 0
ಬೆಳಗೋಟು ಅಡಿಕೆ ಖಂಡಿ ಗಳ್ಳೆ	100— 0	105— 0
ಹಳೆ ಬೆಳಗೋಟು	95— 0	100— 0
ಕಾಳುಮೆಣಸು ಖಂಡಿ ಗಳ್ಳೆ	135— 0	140— 0
ಯಾಲಕ್ಕಿ ಮುಡಿ ಗಳ್ಳೆ	22— 0	25— 0
ಗೇರುಬೀಜ ಮುಡಿ ಗಳ್ಳೆ	3— 0	3— 8
ಕಬ್ಬಿಣ ಖಂಡಿ ಗಳ್ಳೆ	100— 0	120— 0
ತಾಂಬ್ರ ತಗಡು ಮುಡಿ ಗಳ್ಳೆ	24— 4	25— 0
ತಾಂಬ್ರ ಪಾತ್ರಗಳು ಮುಡಿ ಗಳ್ಳೆ	32— 0	34— 0
ಹಿತ್ತಾಳೆ ಬೆಳ್ಳಿ ಸೇರು ಗಳ್ಳೆ	31— 8	..
ಹಿತ್ತಾಳೆ ತಗಡು ಮುಡಿ ಗಳ್ಳೆ ...	24— 0	25— 0

[illegible]

[illegible] ... ಮುಂದೊತ್ತುತಿದ್ದಾ[illegible] ಕೇಳುತ್ತೇವೆ.

ಉತ್ತರದೇಶ ವರ್ತಮಾನ.

ಬೀದರ್ ಸಿಂಹರು.— [illegible] ಗವರ್ನರಾಗಿ ನೇಮಕ ಪಟ್ಟಿರುವ [illegible] ಸುಸ್ವಾಗತದ ಮತ್ತು ಅವರು [illegible] ಸಂತೋಷ ಸೂಚಕವಾದ ಒಂದು ತಂತಿಯು ಮೈಸೂರಿನಿಂದ ಅವರಿಗೆ ತಲ್ಪಿತು. ಉಪಕಾರಸ್ಮರಣೆಯ ಪ್ರತ್ಯುತ್ತರವನ್ನು ಲಾರ್ಡ್ ಸಿಂಹರು ತಂತಿ ಮೂಲಕ ತಿಳಿಸಿರುವರು.

ಮುಂಬಯಿಯ ಟಪ್ಪಾಲು ಪೇದೆಗಳ ಮುಷ್ಕರ— ಇದು ಇನ್ನೂ ನಿಲ್ಲಲಿಲ್ಲ. ಟಪ್ಪಾಲು ಇಲಾಖೆಯವರು ಆದಷ್ಟು ಪ್ರಯತ್ನಪಟ್ಟು [illegible] ನೋಡುತ್ತಿದ್ದಾರೆ.

ಮದ್ರಾಸು ಪೋಸ್ಟ್‌ಮನ್ ಯೂನಿಯನ್.— ಇದರ ಪ್ರೆಸಿಡೆಂಟರು [illegible] ಈಗಿನ ಪೋಸ್ಟ್‌ಮನ್ ಮತ್ತು [illegible] ಸಂಬಳದ ದರಗಳು ಏನೇನು ಸಮಾಧಾನಕರವಲ್ಲವಾದ್ದರಿಂದ ಇದೇ ಒಕ್ಟೋಬರ [illegible] ತಾರೀಕಿನೊಳಗೆ ಅವರ ಮನವಿಗಳಿಗೆ ಸಮಾಧಾನಕರವಾದ ಪ್ರತ್ಯುತ್ತರ ಬಾರದಿದ್ದರೆ ಮುಷ್ಕರ ಹಿಡಿಯಬೇಕೆಂದು ನಿಶ್ಚಯಮಾಡಿದ್ದೇವೆ.

ಕೊಡಗು:— ಈ ದೇಶದಲ್ಲಿ ಈ ವರ್ಷ ಮಳೆಯು ತುಂಬಾ ಇದ್ದು ಬೆಳೆಯಾದರೂ ಬಹಳ ಫಲಕಾರಿಯಾಗದೆ ಇದೆ. ಅಲ್ಲಿ ರೂಪಾಯಿಗೆ [illegible] ಸೇರಿನಂತೆ ಧಾರಾಳ ದೊರೆಯುತ್ತದೆ. ಕಳೆದ ವರ್ಷವಾದರೂ ಅಕ್ಕಿ ಬಹಳ ಪ್ರಿಯವಾಗಿತ್ತು, ಇಷ್ಟಾದರೂ ೫ ಸೇರಿಂತ ಕೊಡುವುದು ಸಾಲ್ಪವೆಸೇರ ಆಗಿದೆ. ಇಂಥಾ ಸುಲ್ಪ ಸಾಧನವು ಉದೇಶದ ವ್ಯಾಪಾರಸ್ಥರ ಜೀವನದ ಒಂದನೆ ದಾರಿ. ಸಾಡುವರಿಂದ ತಗೆದುಕೊಳ್ಳುವದಕ್ಕೆ ದೊಡ್ಡ ಸೇರು ತಾವು ಮಾರುವದಕ್ಕೆ ಚಿಕ್ಕ ಸೇರು. ಇದರ ಹೆಸರೆ ಸಣ್ಣಕ್ಕ-ದೊಡ್ಡಕ್ಕ ಎಂತ ಅಳತೆಯಾಗಿದೆ. — ಇಂತಿ ಕೊಡಗಿ

ದಕ್ಷಿಣ ಕನ್ನಡ.

ಕಾರ್ಕಳ— ಇಲ್ಲಿಯ ಕೋಟೆಸೆಟ್ಟರ ಮನೆಯಲ್ಲಿ ತಿರುಪತಿದೇವರ ಮುಡುಪು ಕಳವು ಆಗಿರುತ್ತದೆ. ಪೋಲೀಸು ತನಿಖೆ ನಡಿಯುತ್ತಲಿದೆ. ಸುಮಾರು ರೂ. ೧೫೦ಂಗಳ ವರೇಗೆ ಮುಡುಪಿನಲ್ಲಿದೆಯಂತೆ. ತಿರುಪತಿ ವೆಂಕಟರಮಣನಿಗೆ ನಾಮಕೊಟ್ಟ ಕಳ್ಳನೇ ಕಾಜಾಕಳ್ಳನಲ್ಲವೇ!

ಹಂಗಾರಕಟ್ಟೆ ಬೋರ್ಡುಶಾಲಾ ಮಾಸ್ತರಾದ ರಾ| ಯು ರಾಮಚಂದ್ರರಾಯರನ್ನು ಕಾರ್ಕಳ ಶಾಲೆಗೆ ವರ್ಗಾಯಿಸಿದರು. ವರ್ಗವಾಗಿ ಹೋಗುವ ಸಮಯ ಹಂಗಾರಕಟ್ಟೆ ನಿವಾಸಿಗಳು ಎಂದುಶವನು ಬೆಲೆಬಾಳುವ ಚಿನ್ನದ ಪದಕ ಒಂದನ್ನು ಸದರಿ ಉಪಾಧ್ಯಾಯರಿಗೆ ಇನಾಮಾಗಿತ್ತ ವಾರ್ತೆ ಕೇಳಿ ತುಂಬಾ ಸಂತೋಷವೆ! ಇದಲ್ಲವೆ ಶ್ರದ್ಧೆಯಿಂದ ಕೆಲಸ ಮಾಡತಕ್ಕ ಉಪಾಧ್ಯಾಯರ ಮೇಲೆ ಊರವರಿಗೆ ಇರತಕ್ಕ ಮಮ್ಮತೆ. [illegible] ತಾ [illegible] ತಿಂಗಳು ಇಲ್ಲಿಯ ಬೋರ್ಡುಶಾಲೆಯಲ್ಲಿ ಉಪಾಧ್ಯಾಯ ಕೂಟವು ಜರಗಿತು. ಬರುವ ಸಭೆಯು ನವಂಬರ ತಾ ೨೭ಕ್ಕೆ ಆಗಬೇಕೆಂದು ನಿಶ್ಚಯಿಸಲ್ಪಟ್ಟಿತು. ಅಧ್ಯಕ್ಷಸ್ಥಾನಕ್ಕೆ ಬ್ರಹ್ಮಾವರ [illegible] ಹೆಡ್‌ಮಾಸ್ತರರನ್ನು ಆಮಂತ್ರಿಸಬೇಕಾಗಿ ನಿರ್ಣಯವಾಯಿತು. ಅಂದಿನ ಈ ಕಾಲಾಮಾಸ್ತರ ಮ| ರಾ| ಎನ್ ದೇವರಾಯರು ರಚಿಸಿದ 'ಮಂಗನ ಪಾಠಶಾಲೆ' [illegible] ಓದುವುದು, ರಾ| ಎನ್ ಆನಂದರಾಯರು ಸಹಕಾರ ಸಂಘದ ಕುರಿತು ಉಪನ್ಯಾಸ ಓದುವದು. ಪಾಂಗಾಳ ಶಾಲಾ ಮಾಸ್ತರರೊಬ್ಬರು ಸ್ಥಾನಭೇದಗಳ ಕುರಿತು ೧ನೇ ದರ್ಜೆಯ ಬಾಲಕರಿಗೆ ಪಾಠಕೊಡುವುದು. ಉಬ್ಬಲ ಶಾಲಾಮಾಸ್ತರರೊಬ್ಬರು ಡಿರೆಕ್ಟ ಮೆಥಡ್‌ನಲ್ಲಿ ಅದೇ ಬಾಲಕರಿಗೆ ಕನ್ನಡ ಭಾಷೆಯನ್ನು ಪ್ರಾರಂಭಿಸುವುದು ಮುಂತಾಗಿ ಇದೆ. ಸರ್ವರಿಗೂ ಸುಸ್ವಾಗತ.

ಸುರತ್ಕಲ್:— ಇಲ್ಲಿಯ ಇದ್ದ ವಿದ್ಯಾದಾಯಿನೀ ಶಾಲೆಯನ್ನು [illegible] ಕಲೆಕ್ಟರವರು ತಾ ೨೫-೯-೨೦ರಲ್ಲು ಸಂದರ್ಶಿಸಿ [illegible] ಸಂತೋಷ [illegible]

[illegible] — [illegible]

[illegible] ... ಗ್ರಾಮಗಳಿಗೆ ಪೋಲೀಸ್ ಸಹಾಯ [illegible] ಉಪಕಾರವಿತ್ತು.

ಹಿರೆಬಂಡಾಡಿ— ಈ ಗ್ರಾಮದಲ್ಲಿರುವ ನಂಬ್ರ ೯೦೩ನೇ ಹಿರೆಬಂಡಾಡಿ ಸಹಕಾರಿ ಸಂಘಕ್ಕೆ ಇಲ್ಲಿಯ ಬೋರ್ಡ ಶಾಲಾ ಹೆಡ್ ಮಾಸ್ತರ್ ಪಿ ವೆಂಕಪ್ಪ ಗೌಡರು ಕಾರ್ಯದರ್ಶಿಗಳಾಗಿರುವಾಗ್ಗೆ ಸಂಘದ ಕಾರ್ಯಗಳು ಸರಿಯಾಗಿ ನಡಿಯುತಿದ್ದಿಲ್ಲ. ರಿಕಾರ್ಡುಗಳೆಲ್ಲವೂ ಕ್ರಮವಾಗಿರಲಿಲ್ಲವಾದ್ದರಿಂದ ಬೇಂಕಿನವರು ಹಣ ಈ ಸಂಘಕ್ಕೆ ಕೊಡುತಿದ್ದಿಲ್ಲವಾದ್ದರಿಂದ ಸಂಘವು ಮೌನಾವಸ್ಥೆಯಲ್ಲಿತ್ತು. ಇದಕ್ಕೆ ಮೊದಲಿನ ಕಾರ್ಯದರ್ಶಿಗಳ ಉದಾಸೀನತೆಯೇ ಕಾರಣವಾಗಿತ್ತು.

ಈಗ ಸದರಿ ಕಾರ್ಯದರ್ಶಿಗಳನ್ನು ಕೆಲಸದಿಂದ ತಪ್ಪಿಸಿ ಹಮ್ಮದೆ ಬ್ಯಾರಿಗಳನ್ನು ಕಾರ್ಯದರ್ಶಿಗಳನ್ನಾಗಿ ನೇಮಿಸಿ, ಮಾಸ್ತರ್ ಅನಂತಯ್ಯನವರನ್ನು ಬರವಣಿಗೆ ಕೆಲಸಕ್ಕೆ ಮೊಕರ್ರರ ಮಾಡಿದ ತರುವಾಯ ಸಂಘದ ಕಾರ್ಯಗಳೆಲ್ಲವೂ ಕ್ರಮದಂತೆ ನಡೆಯಲ್ಪಡುತ್ತವೆ. ರಿಕಾರ್ಡುಗಳು ಕ್ರಮವಾಗಿ ಇಡಲ್ಪಟ್ಟಿವೆ. ಈ ಸಂಘವನ್ನು ಕಳೆದ ಅಗೋಸ್ತು ತಿಂಗಳ ತಾರೀಖು ೨೪ಕ್ಕೆ ಪುತ್ತೂರು ಸೆಂಟ್ರಲ್ ಬೇಂಕಿನ ಡಿರೆಕ್ಟರರಾದ ಮ| ರಾ| ರಾ| ಮೊಳಹಳ್ಳಿ ಶಿವರಾಯರವರು ಸಂದರ್ಶಿಸಿ ರಿಕಾರ್ಡುಗಳನ್ನೆಲ್ಲಾ ಪರಿಶೋಧಿಸಿ ಸಮಾಧಾನಪಟ್ಟಿರುವದಲ್ಲದೆ, ಇನ್ನು ಮುಂದೆ ಈ ಸಂಘಕ್ಕೆ ಹಣ ಕೊಡಿಸುವಾ ಎಂದು ಹೇಳಿರುತ್ತಾರೆ. ಮಾತ್ರವಲ್ಲದೆ ಈ ಮಹನೀಯರು ಸಂಘದ ಅನೇಕ ಕ್ರಮಗಳನ್ನು ವಿವರಿಸಿ ಹೇಳಿರುತ್ತಾರೆ. ಆದ್ದರಿಂದ ಈ ಸಂಘವು ಮುಂದೆ ಒಳ್ಳೇ ಸ್ಥಿತಿಗೆ ಬಂದೀತಾಗಿ ನಂಬಿಗೆ ಇದೆ.

ಅಜ್ಜಾವರ— ಇಲ್ಲಿಯ ಕಾಂತಮಂಗ್ಲ ಕಡಲುದಾರಿನ ಕಡಲು ಸಮೀಪ ಇಲ್ಲಿಗೆ ಸುಮಾರು ೪ ಮೈಲು ದೂರ ಆಲೇಟಿ ಗ್ರಾಮದಲ್ಲಿರುವದರಿಂದ ದೂರದ ಪ್ರಮಾಣಿಕರಾದ ಹೊಸದುರ್ಗ, ಕಾಸರಗೋಡು ಅಡೂರು ಮತ್ತು ಮಡಿಕೇರಿ ಪ್ರಮಾಣಿಕರಿಗೆ ಬಹಳ ಕಷ್ಟಗಳಾಗಿರುವದರಿಂದ ಆದಷ್ಟು ಬೇಗನೆ ಡಿಸ್ಟ್ರಿಕ್ಟ ಬೋರ್ಡಿಗೆ ತೆಗೆದುಕೊಳ್ಳುತ್ತಿದ್ದರೆ ಪ್ರಮಾಣಿಕರಿಗೆ ಹೆಚ್ಚಿನ ಅನುಕೂಲವು ಡಿಸ್ಟ್ರಿಕ್ಟಬೋರ್ಡಿಗೆ ಹೆಚ್ಚಿನ ಪ್ರಯೋಜನವು ಆಗುತ್ತಿತ್ತು.

ಸುಳ್ಯ— ಇಲ್ಲಿಯ ಕೆಲಸಿಕಟ್ಟೆ ಪೇಟೆಯಲ್ಲಿ ಜಾನುವಾರುಗಳನ್ನು ರಾತ್ರಿಕಾಲ ಕಟ್ಟಿಹಾಕದೆ ಇರುವದರಿಂದ ಮಾರ್ಗದಲ್ಲಿ ಜಾನುವಾರುಗಳು ಮಲಗಿರುವದರಿಂದ ಪ್ರಮಾಣಿಕರಿಗೆ ಬಹು ಕಷ್ಟ.

ಅರಂತೋಡು— ಇಲ್ಲಿ ಕಾಡಾನೆಗಳ ತಿರುಗಾಟವು ಶುರುವಾಗಿ ಇದೆ. ಆನೆಗಳನ್ನು ವರ್ಷಂಪ್ರತಿ ಹಿಡಿಸುವ ಏಲಿವಾರಿ ಮಾಡದೆ ಇದ್ದರೆ ಬಡವರ್ಗದಾರರಿಗೆ ಬಹಳ ಕಷ್ಟವೇ ಸರಿ. ಇಲ್ಲಿಗೆ ಡಿ. ಎ. ಎ. ಸಿ. ಫೋರೆಸ್ಟು ಆಫೀಸರವರು ತಲ್ಪಿ ವರ್ಗದ ಸರ್ವೆಕಲ್ಲ ಗಡಿಮಾಡಿಕೊಂಡು ಜೊತೆ ರಿಜರ್ವ ಗಡಿಗಳನ್ನು ಕಾಣಿಮಾಡುತ್ತಾರೆ. ರಿಜರ್ವ ಗಡಿಗಳನ್ನು ಮಾಪಡಿಸಿ ಬಡವರ್ಗದಾರರ ಕಷ್ಟಗಳನ್ನು ನಿವೃತ್ತಿಪಡಿಸ್ಯಾರೆ [illegible] ನಂಬಿದ್ದೇವೆ.

ಇಲ್ಲಿ ಒಂದು ಸಣ್ಣದಾದ ಇನ್ಸ್‌ಪೆಕ್ಟರ್ ಶೆಡ್ಡು ಮಾತ್ರ ಇರುವದರಿಂದ ಪ್ರಮಾಣಿಕರಿಗೆ ಬಿಡಾರಕ್ಕೆ ಬಹಳ ತೊಂದರೆಯೇ ಸರಿ. ಆದ್ದರಿಂದ ಇಲ್ಲಿ ಒಂದು ಛತ್ರ ಕಟ್ಟಿಸುತ್ತಿದ್ದರೆ ಬಹಳ ಉಪಕಾರವಾಗುತ್ತಿತ್ತು.

ಅರಂತೋಡಿನಿಂದ ತೋಡಿಕಾನದ ವರೇಗೆ ಗಾಡಿ ಹೋಗುವ ರಸ್ತೆಯು ಲೋಕಲ್ ಫಂಡ್ ಇಲಾಖೆಯವರು ಮಾಡಿಸುತ್ತಾರೆ. ಇದರ ಮಧ್ಯ ಪಯಸ್ವಿನಿ ಹೊಳೆಯು ಇರುವದರಿಂದ ತಲಕಾವೇರಿ ಜಾತ್ರೆ ಸಮಯ ಕುಳಗು ದನ ಜಾನುವಾರು ಸಹಿತ ಸಮಯ ಸಾವಿರಾರು ಪ್ರಮಾಣಿಕರಿಗೆ ದಾಟಿಹೋಗುವದು ಬಹಳ ಕಷ್ಟವೇ ಸರಿ. ಈ ಹೊಳೆಗೆ ಫೋರೆಸ್ಟು ಡಿಪಾರ್ಟಮೆಂಟಿನವರು ಒಂದು ಸಂಕ ಕಟ್ಟಿಸುತ್ತಿದ್ದರೆ ತೋಡಿಕಾನ ರಿಜರ್ವಿನ ದ ಮಡಿಕೇರಿ ರಸ್ತೆಗೆ ಮುಂಗಳನ್ನು ಸಾಗಿಸಲಿಕ್ಕೂ ಪ್ರಮಾಣಿಕರಿಗೂ ಬಹಳ ಅನುಕೂಲವಾಗುತ್ತಿತ್ತು.

ಪುತ್ತೂರು— ರವೆನ್ಯೂ ಡಿವಿಜನಲ್ ಆಫೀಸರರ ಸರ್ಕಿಟ ತಾ ೧ ಕಾಸರಗೋಡು ತಾ ೩ ಮಂಗಳೂರು ತಾ ೬ ಪುತ್ತೂರು.

ಕೋಟೇಶ್ವರ— ಕಳೆದ ತಾ ೧೭-೯ '೨೦ನೇ ಸ್ವದೇಶಾಭಿಮಾನಿಯಲ್ಲಿ ಪ್ರಕಟವಾದಂತೆ ತಾ ೩೬ ೯ '೨೦ನೆ ಆದಿತ್ಯವಾರ ಈ ಉತ್ಸವವು ನ ತ್ರ ಸಹಕಾರಸಂಘದ ಜನರಲ್ ಮೀಟಿಂಗ್ ನಡೆ ಈ ಶಾಲಾ ಕಿಂಡರ್ ಗಾರ್ಟನ್ ಹಾಲಿನಲ್ಲಿ ಜರಗಿದವು. ಇದಕ್ಕೆ ಮಂಗಳೂರಿನ ಕಡೆಯಿಂದ ಆಮಂತ್ರಿಸಲ್ಪಟ್ಟವರಲ್ಲಿ ಕೆಲವರು ಬಂದಿದ್ದರು. ಅಂದಿನ ಸಭೆಗೆ ವೆ| ರಾ| ರಾ| ವಿ ಶ್ರೀನಿವಾಸ ಕಾಮತ್‌ರವರ ಅಧ್ಯಕ್ಷರಾಗಿದ್ದರು. ಆರಂಭದಲ್ಲಿ ಪ್ರಾರ್ಥನೆಗಳಾದ ತರುವಾಯ ವಿದ್ಯಾರ್ಥಿಗಳು ಯಕ್ಷಗಾನದೊಳಗಿನ ಕುಶಲವರ ಕಾಳಗದೊಳಗಿನ ಸೀತೆಗೆ ವನದಲ್ಲಿ ವಾಲ್ಮೀಕಿ ಋಷಿಗಳ ದರ್ಶನವಾಗಿ ಆಶ್ರಯ ದೊರೆತಲ್ಲಿವರೆಗೆ ಬಹಳ ಆಹ್ಲಾದಕರವಾದ ಅರ್ಥ ಹೇಳಿದರು. ಈ ಪ್ರಸಂಗದಲ್ಲಿ ವಾಲ್ಮೀಕಿ ಮುನಿಯ ಅರ್ಥವನ್ನು ಹೇಳಿದ ಇಬ್ಬರು ಚಿಕ್ಕ ವಿದ್ಯಾರ್ಥಿಗಳ ರಾ| ಪಿ ಯಲ್ ಪೂಜಾರಿಯವರಿಂದ ಎರಡು ಪುಸ್ತಕಗಳನ್ನು ಬಹುಮಾನವಾಗಿ ಪಡೆದರು. ಸ್ವಾಗತ ಗೀತವಾದ ತರುವಾಯ ಈ ಶಾಲಾ ಮುಖ್ಯೋಪಾಧ್ಯಾಯರು ಶಾಲಾ ವರದಿಯನ್ನು ಓದಿದರು. ಆಸ್ಥಳದ ಮ| ರಾ| ಯಸ್ ಬಾಬು ಬಿ ಎ ಯಲ್ ಟಿಯವರು ಈ ಶಾಲೆಯನ್ನು ಕೊಂಡಾಡಿದರು. ಮ| ರಾ| ಯ| ಜಿ. ಕೃಷ್ಣರಾವ್‌ರವರು ನೆರೆದಿರುವ ಸ್ಥಳೀಯ ಸದ್ಗೃಹಸ್ಥರಿಗೊಸ್ಕರ ಬೋಧಪ್ರದವಾದ ಭಾಷಣವನ್ನು ಮಾಡಿದರು. ನಂತರ ಅಧ್ಯಕ್ಷರ ಭಾಷಣವು ಸಮಾಪ್ತಿಯಾಗುವುದರೊಳಗೆ ಬೆಲಿಯನ್ ಕೃಷಿ ಇಲಾಖಾ ಪ್ರತಿನಿಧಿಗಳಾದ ವ ರಾ| ಕೋಡಿಯಾಳ ಸಂಜೀವರಾವ್ ಅವರ್ಗಳವರಿಂದ ದ್ವಿತೀಯ ವಾರ್ಷಿಕ ಕೃಷಿ ಶಾಸ್ತ್ರದ ಪರೀಕ್ಷೆಯಲ್ಲಿ ಒಂದನೆ ಯವನಾಗಿದ್ದ ಸುಬ್ಬು ಗಟ್ಟಿಗೆ ರೂ ೪-೮-೦ (ನಾಲ್ಕು) ಮತ್ತು ಟಿ ವೆಂಕಟ್ರಾವ್‌ನಿಗೆ ರೂ ೩-೦-೦ (ಮೂರು) ಇನಾಮು ದೊರಕಿತು. ಅಷ್ಟರಲ್ಲಿ ಸಭಿಕರು ಅಭಿಪ್ರಾಯ ಪಟ್ಟಪ್ರಕಾರ "ಒಂದು ಫಾರ್ಸ್" ಆಡಿ ತೋರಿಸಿದ ತರುವಾಯ ವಂದನೆಗಳಾಗಿ, ವಿದ್ಯಾರ್ಥಿಗಳಿಗೂ ಸಭಿಕರಿಗೂ ಫಲಾಹಾರಾದಿ ಉಪಚಾರಗಳಾದ ತರುವಾಯ ಈ ಸಭಾ ವಿಸರ್ಜನೆಯಾಯಿತು.

ಪ್ರೇಕ್ಷಕ.

ಮಂಗ್ರೂರ್.— [illegible] ಒಂದು ದೊಡ್ಡ ಮೊಸಳೆಯು [illegible] ಅನೇಕ ಜಾನುವಾರುಗಳನ್ನು ಮತ್ತು ಕೆಲವು ಮನುಷ್ಯರಿಗೆ ಉಪದ್ರ ಕೊಡುತ್ತಿತ್ತು. ಅದರ ಉಪದ್ರದಿಂದ ತಾಳಲಾರದೆ ಮಂಗ್ರೂರ್ ಗ್ರಾಮಸ್ಥರು ಒಂದು ಲೈಸನ್ಸ್ ಕೇ. ನಂಬ್ರ ೩೫/೫೨ನೇ ಕಲ್ಲಾ ಲೈಸನ್ಸ್‌ದಾರ ಎಂ ಟಿ ಮಹಮ್ಮದೆಮರ [illegible] ಕೂಡ್ಲು ಹೇಳಿದ್ದರಿಂದ ನಮ್ಮ ಮೇಲೆ ದಯವಿಟ್ಟು, ಅವರು ತಾ ೩೦ನೇ ಸೋಮವಾರ ಹಗಲು ೧೨ ಗಂಟೆಗೆ ಆ ಮೊಸಳೆಯನ್ನು ಗುಂಡು ಹೊಡೆದು ಕೊಂದರು.

ಮದ್ರಾಸು ನ್ಯಾಯವಿಧಾಯಕ ಸಭೆ.

ಕಳೆದ ೨೦ನೆ ತಾರೀಕಿಗೆ ಈ ಹಳೆ ಸಭೆಯ ಕೊನೆಯ ಅಧಿವೇಶನವು ಮದ್ರಾಸಿನಲ್ಲಿ ಜರಗಿತು. ಅದರಲ್ಲಿ ನಡೆದ ಮುಖ್ಯ ಪ್ರಶ್ನೋತ್ತರಗಳ ಸಾರಾಂಶವನ್ನು ಈ ಕೆಳಗೆ ಕೊಟ್ಟಿರುವೆವು:—

ಈ ಸಂಸ್ಥಾನದ ೨೫ ಡಿಸ್ಟ್ರಿಕ್ಟ ಬೋರ್ಡುಗಳ ಪೈಕಿ ೧೬ರಲ್ಲಿ ಬಿನ ಸರಕಾರಿ ಪ್ರೆಸಿಡೆಂಟರು ಇದ್ದಾರೆಂತಲೂ ಆ ಪೈಕಿ ೯ ಬ್ರಾಹ್ಮಣರು ೭ ಇತರರು ಎಂತಲೂ ತಿಳಿದು ಬರುತ್ತದೆ.

ಸಂಸ್ಥಾನದ ಸಣ್ಣ ಬಂದರುಗಳನ್ನು ದುರುಸ್ತಿ ಮಾಡಿ ಚಲಾವಣೆಗೆ ಅನುಕೂಲಿಸುವ ವಿಚಾರವು ಸಂಕಾರದವರಿಂದ ನಡಿಸಲಾಗುತ್ತದಂತೆ.

ಸಾಲ್ಟ್‌ಪೇಟಿನ ಕೊಳ್ಳದ ಅಥವಾ ಮಲಬಾರು ಜಿಲ್ಲೆಯ ಬೇರೆ ಯಾವುದೊಂದ ಕೊಲೆಗಳನ್ನು ೧ನೇ ಗ್ರೇಡಿಗೆ ಏರಿಸುವ ವಿಷಯದಲ್ಲಿ ಸರಕಾರದವರು ನಡಿಸಿದ ತನಿಖೆಯು ಸಂಪೂರ್ಣವಾಗಲಿಲ್ಲ, ಇನ್ನೂ ಬಾಕಿಯಲ್ಲಿದೆ ಎಂದ ತಿಳಿಯುತ್ತೇವೆ.

ಟೊಟ್ಟನಹೆಮ ಸಾಹೇಬರ ರೆವಿನ್ಯೂ ಆಫೀಸುಗಳ ಸಿಬ್ಬಂದಿ ಕಡಿಮೆ ಮಾಡುವ ವಿಷಯದಲ್ಲಿ ಬರೆದ ಸಂಪೂರ್ಣ ರಿಪೋರ್ಟನ್ನು ಪ್ರಕಟಿಸಲು ಸಾಧ್ಯವಿಲ್ಲ, ಆದರೆ ಅದರ ಸೂಚನೆಯಲ್ಲಿದ್ದಂತೆ ಅಲ್ಲಲ್ಲಿ ಸಿಬ್ಬಂದಿ ಕಡಿಮೆ ಮಾಡುವ ಏಲಿವಾರಿ ನಡೆಯುತ್ತಿದೆ. ಅವರಲ್ಲಿ ಮುಖ್ಯಾಂಶಗಳನ್ನು ಪ್ರಕಟಿಸಲು ಯತ್ನಿಸಲಾದೀತು ಎಂದ ಉತ್ತರ ಬಂತು.

ಜ್ಯುಡಿಶಿಯಲ್ ಇಲಾಖೆಯ ಮೇಲುದ್ಯೋಗಸ್ಥರನ್ನು ವಕೀಲರೊಳಗಿಂದ ನಿಯಮಿಸಬೇಕೆಂಬ ವಿಷಯದಲ್ಲಿ ಇನ್ನೂ ಇಂಡಿಯಾ ಸರಕಾರದವರೊಡನೆ ಪತ್ರವ್ಯವಹಾರ ನಡೆಯುತ್ತದೆ ಎಂದು ಉತ್ತರ ಸಿಕ್ಕಿತು. ಅದೇ ರೀತಿಯಲ್ಲಿ ರೆವಿನ್ಯೂ ಬೋರ್ಡನ್ನು ತೆಗೆದು ಹಾಕಬೇಕೆಂಬ ವಿಷಯವು ಇಂಡಿಯಾ ಸರಕಾರದವರಲ್ಲಿ ಬಾಕಿ ಇದೆಯಂತೆ.

ಹಿಂದಿನ ಅಧಿವೇಶನದಲ್ಲಿ ಯುನಾನಿ ಆಯುರ್ವೇದಿಕ ಚಿಕಿತ್ಸಾ ಕ್ರಮವನ್ನು ಶೋಧಿಸಲಿಕ್ಕೆ ಕಮಿಟಿಯನ್ನು ನಿಯಮಿಸಬೇಕೆಂಬ ಠರಾವಿಗೆ ಅನುಗುಣವಾಗಿ ಮೆಂಬರರ ಹೆಸರುಗಳನ್ನು ಸೂಚಿಸುವುದಕ್ಕೆ ನಾಮದಾರ ಮಹಾರಾಜ ರಾಮಚಂದ್ರ [illegible] ಗೆ ಬರೆದಿದೆ. ಅವರ ಉತ್ತರ ಬರಲಿಲ್ಲವೆಂದು ತಿಳಿಯಿತು.

ಬೋರ್ಡ ಮತ್ತು ಮ್ಯುನಿಸಿಪಲ್ ಶಾಲೆಗಳ ಉಪಾಧ್ಯಾಯರಿಗೆ ಒಂದು ಸಂಸ್ಥಾನಿಕ (ಪ್ರೊವಿನ್ಸಿಯಲ್) ಸರ್ವಿಸನ್ನು ಏರ್ಪಡಿಸುವ ವಿಷಯದಲ್ಲಿ ಈ ಉಪಾಧ್ಯಾಯರ ಮನವಿಗಳು ಬಂದಿವೆ. ಆದರೆ ಬೋರ್ಡ ಮತ್ತು ಸರಕಾರಿ ಲೋಕಲ್ ಸೆಲ್ಫ ಗವರ್ನ್‌ಮೆಂಟುಗಳ ಇತ್ತರ್ಥದ ಕಮಿಟಿಯ ರಿಪೋರ್ಟು ಬರುವುದರಿಂದ ಈ ಮನವಿಗಳನ್ನು ವಿಚಾರಿಸಲು ಸಾಧ್ಯವಿಲ್ಲವೆಂದು ಸರಕಾರದ ಕಡೆಯಿಂದ ಉತ್ತರ ಬಂತು.

ಲೋಕಲ್ ಫಂಡು ಮತ್ತು ಮ್ಯುನಿಸಿಪಲ್ ಪ್ರಾಥಮಿಕ ಶಾಲೆಗಳ ಉಪಾಧ್ಯಾಯರುಗಳ ಮನವಿ ಬಂದಿದೆ. ಆ ಪೈಕಿ ಸರಕಾರಿ ಶಾಲೆಗಳ ಉಪಾಧ್ಯಾಯರ ಸಂಬಳದ ದರಗಳನ್ನು ಹೆಚ್ಚಿಸುವ ವಿಷಯವು ವಿಚಾರದಲ್ಲಿದೆ. ಬೋರ್ಡ ಮತ್ತು ಮ್ಯುನಿಸಿಪಲ್ ಉಪಾಧ್ಯಾಯರ ಸಂಬಳಗಳನ್ನು ಏರಿಸುವ ಇದಾಗ್ಯೂ ಸ್ಥಳೀಯ ಸಂಸ್ಥೆಗಳದೇ ಆಗಿದೆ ಎಂದು ಉತ್ತರ ದೊರಕಿತು.

ಪೋಲೀಸ್ ಮತ್ತು ಅಬಕಾರಿ ಸಬ್ ಇನ್‌ಸ್ಪೆಕ್ಟರರುಗಳಿಗೆ ನಿಯಮಿತ ಕಾಲಕ್ಕೆ ಸಂಬಳ ಏರುವ ಕ್ರಮವನ್ನು ಏರ್ಪಡಿಸಬೇಕೆಂದು ಆಯಾ ಇಲಾಖಾ ಅಧಿಕಾರಿಗಳು ಮಾಡಿದ ಮನವಿಯ ಇತ್ಯರ್ಥವಾಗಲಿಲ್ಲ. ವಿಚಾರದಲ್ಲಿ ಬಾಕಿ ಇದೆಯಂತೆ.

[illegible]

ವಿಷಯಗಳು:—

[illegible]

ಮಂಗಳೂರು:—

ಪತ್ರಿಕಾ ಸಂಗ್ರಹಗಳು:—
ವಿದೇಶ ವೃತ್ತಾಂತ ೫
ಸ್ವದೇಶ ವರ್ತಮಾನ ,,

ದಕ್ಷಿಣ ಕನ್ನಡ:—
ಕಾಪು, ಸುರತಕಲ್, ಪಂಜ, ಹಿರೆಬಂಡಾಡಿ, ಅಜ್ಜಾವರ, ಸುಳ್ಯ
ಅರಂತೋಡು, ಪುತ್ತೂರು, ಕೋಟೆಕಾರು ಮೊಗ್ರಾಲ
ಮದ್ರಾಸ ನ್ಯಾಯವಿಧಾಯಕ ಸಭೆ ೫
ಅಸಹಕಾರಿತೆ ೮
ಶ್ರೀ ಕಾಶೀಮಠ ಸಂಸ್ಥಾನ ,
ಪತ್ರವ್ಯವಹಾರ ೧, ೨, ೩, ೪, ೫ ೬
ಶ್ರೀ ಸಂಸ್ಥಾನ ಕಾಶೀಮಠಕ್ಕೆ ಬಂಟ್ವಾಳ ಬೇಟಿಯು ವಂತಿಗೆಪಟ್ಟಿ ೯

ಸ್ವದೇಶಾಭಿಮಾನಿ.

ಶಕ ೧೮೪೨ ಭಾ. ೭। ೪ ಶುಕ್ರವಾರ

ಸ್ಫುಟ ವಿಚಾರಗಳು.

೧. ಕಲಕತ್ತೆಯ ಜಾದಾರಾಷ್ಟ್ರೀಯ ಸಭೆಯಲ್ಲಿ ನೂನ್ ಕೊ ಓಪರೇಶನಿನ ಠರಾವು ಪಾಸಾದ ಬಳಿಕ ಇಲ್ಲಿಯ ಎಂಗ್ಲೊ ಇಂಡಿಯನರಿಗೆ ಸಿಟ್ಟು ಬಂದಿರುವಂತೆಯೆ ವಿಲಾಯತಿಯಲ್ಲಿಯ ಲಂಡನ್ ಟೈಮ್ಸ ಮುಂತಾದ ಸಾಮ್ರಾಜ್ಯವಾದಿಗಳ ಮನೋವೃತ್ತಿಗಳು ಕ್ಷುಬ್ಧವಾಗಿದೆ ಎಂದು ತೋರುತ್ತದೆ ಲಂಡನ್ ಟೈಮ್ಸ ಪತ್ರವು ಬರೆಯುತ್ತದೆ " ಹಿಂದುಸ್ಥಾನದವರು ರಾಷ್ಟ್ರೀಯ ಸಭೆಯಲ್ಲಿ ಅಸಹಕಾರಿತೆಯ ಠರಾವನ್ನು ಪಾಸುಮಾಡಿದ್ದಾರೆ ಹಿಂದುಸ್ಥಾನದವರು ಸ್ವರಾಜ್ಯ ಬೇಗನೆ ಸಿಗಬೇಕೆಂದು ಆಗ್ರಹ ಹಿಡಿಯ ಹತ್ತಿದ್ದಾರೆ ಇಜಿಪ್ತಿನವರಿಗೆ ಸ್ವರಾಜ್ಯವು ಸಿಕ್ಕಿದ ಉದಾಹರಣವನ್ನು ಕಣ್ಣು ಮುಂದಿಟ್ಟುಕೊಂಡು ಹಿಂದುಸ್ಥಾನದವರೂ ಕೂಡ ಅಷ್ಟೆ ಅಲ್ಪ ಅವಧಿಯಲ್ಲಿ ತಮಗ ಸ್ವದೇಶವನ್ನಾಳುವ ಹಕ್ಕು ಸಿಗಬೇಕೆಂದು ನೆನಸುತ್ತಾರೆಂದು ತೋರುತ್ತದೆ ಆದರೆ ಇಜಿಪ್ತಿನ ಪರಿಸ್ಥಿತಿ ಎಲ್ಲಿ ಹಿಂದುಸ್ಥಾನದೊಳಗಿನ ಪರಿಸ್ಥಿತಿ ಎಲ್ಲಿ? ನಾನಾತರದ ಭೇದಗಳಿಂದ ತುಂಬಿಹೋದ ಹಿಂದುಸ್ಥಾನಕ್ಕೆ ಫಕ್ಕನೆ ಸ್ವರಾಜ್ಯವು ಹೇಗೆ ಸಿಕ್ಕೀತು? ಕಾರಬಾರವನ್ನು ನಡಿಸಲು ಬರುವ ಪ್ರತಿನಿಧಿಗಳಿಗೆ ಆ ಪ್ರತಿನಿಧಿಗಳನ್ನು ಚುನಾಯಿಸಿಕೊಡುವ ಮತದಾರರಿಗೆ, ಅವರವರ ಜವಾಬದಾರಿಯ ತಿಳಿವು, ಅವರವರ ಕರ್ತವ್ಯದ ಪರಿಜ್ಞಾನ ಇತ್ಯಾದಿ ಯಾವ ತರದ್ದೂ ಅನುಭವವಿಲದಿರುವ ಹಿಂದುಸ್ಥಾನಕ್ಕೆ ಫಕ್ಕನೆ ಸ್ವರಾ

[illegible] ಕೋರ್ಟು, ಕೌನ್ಸಿಲು, ಪರದೇಶಿಯ ವಸ್ತು [illegible] ಸಂಗತಿಗಳನ್ನು ಆಯಾ ಜನರು ಬಹಿಷ್ಕರಿಸ ಬೇಕಾದರೆ ಯಾವ ಉಪಾಯಗಳನ್ನು ಕೈಕೊಳ್ಳಬೇಕು ಎಂಬುದನ್ನು ಈ ಗೃಹಸ್ಥರು ತೋರಿಸಿ ಕೊಟ್ಟಿದ್ದಾರೆ. ಇವುಗಳ ಪೈಕಿ ಪದವಿಗಳ ಮತ್ತು ಬಹುಮಾನದ ಜಾಗೆಗಳ ಬಹಿಷ್ಕಾರವನ್ನು ಜಾರಿಯಲ್ಲಿ ತರುವುದು ಈ ಕಮಿಟಿಯ ಮತದಂತೆ ಬಹು ಪ್ರಯಾಸದ ಕಾರ್ಯವಾಗಿದೆ. ಯಾಕಂದರೆ, ಈ ಪದವಿಧಾರರು ರಾಜಕೀಯ ಚಳವಳದಲ್ಲಿ ಪ್ರವೇಶಿಸುವವರಲ್ಲ, ಈ ಪದವಿಧಾರಕರಲ್ಲಿ ಸೇಕಡಾ ೮೦ ಕ್ಕಿಂತ ಹೆಚ್ಚಾದವರು ಈ ಪದವಿಗಳೆಂದರೆ ಎರಡನೆ ಜೀವವೆಂದು ತಿಳಕೊಳ್ಳುತ್ತಾರೆ, ಇಂಥ ಪರಿಸ್ಥಿತಿಯಲ್ಲಿ ಇವರನ್ನು ಸರಿಗೊಳಿಸುವುದು ಬಹು ಕಷ್ಟದ ಕಾರ್ಯವು. ಆದರೂ ಅನ್ಯಾಯಮಯವಾದ ಸರಕಾರದಿಂದ ಇಂಥ ಪದವಿಗಳನ್ನು ಪಡಕೊಳ್ಳುವುದು ಭೂಷಣಾವಹವಲ್ಲ ಎಂಬ ಸಂಗತಿಯನ್ನು ಅವರ ಗೋಚರಕ್ಕೆ ತಂದು ಕೊಡಬೇಕು ಪದವಿದಾರರ ಬಳಿಗೆ ಹೋಗತಕ್ಕ ಅಸಹಕಾರವಾದಿಗಳು ಬಲಾತ್ಕಾರದ ಭಾಷೆಯನ್ನಾಗಲಿ ಕೃತಿಯನ್ನಾಗಲಿ ಕೈಕೊಳ್ಳಕೂಡದು ಎಂದು ಹೇಳಿ ಸದರಿ ಗೃಹಸ್ಥರ ಕಮಿಟಿಯು ಶಾಲಾ ಬಹಿಷ್ಕಾರದ ವಿಷಯವಾಗಿ ಹೇಳುತ್ತದೇನೆಂದರೆ, ಈ ಕಾರ್ಯವು ಒಂದು ವಿಧದಿಂದ ಬಹು ಸುಲಭವಾದ್ದೆಂದು ಹೇಳಬಹುದು ಹುಡುಗರನ್ನು ಸಾಲೆಗಳಿಗೆ ಕಳುಹಿಸಿ ಕೊಡುವ ತಂದೆ ತಾಯಿಗಳಿಗೂ ಹಾಗು ಬೆಳದ ಹುಡುಗರಿಗೆ ಈಗಿನ ರಾಜಕೀಯ ಪರಿಸ್ಥಿತಿಯು ಸರಿಯಾಗಿ ಗೊತ್ತಿರಲ ಬೇಕು ಅಲ್ಪಾವಧಿಯಲ್ಲಿ ಸ್ವರಾಜ್ಯವನ್ನು ಪಡೆಯ ಬೇಕಾದರೆ ಸರಕಾರಕ್ಕೆ ನೋಕರರ ಮಂದಿಯು ಸಿಗಬಾರದು ಮತ್ತು ಇದಕ್ಕೆ ಉತ್ತಮ ಉಪಾಯವೆಂದರೆ ಇಂಥ ನೋಕರರನ್ನು ತಯಾರಿಸಿ ಕೊಡುವ ಕೊಲೇಜುಗಳನ್ನು ವಿದ್ಯಾರ್ಥಿಗಳ ಅಭಾವದಿಂದ ಖಾಲಿ ಇಡುವುದೆ ಆಗಿದೆ ಈ ಉಪಾಯವನ್ನು ಕೈ ಕೊಳ್ಳದಿದ್ದರೆ ಧ್ಯೇಯವನ್ನು ಹೊಂದುವುದು ಅಸಾಧ್ಯ ರಾಷ್ಟ್ರೀಯ ಶಿಕ್ಷಣದ ಅವತಾರಕ್ಕೆ ಅವಕಾಶವನ್ನು ಕೊಡುವುದೆಂದರೆ ಈಗಿನ ವಿದ್ಯಾರ್ಥಿಗಳು ಈಗಿನ ಸಾಲೆಗಳನ್ನು ಖಾಲಿ ಹಾಕಬೇಕು ವ್ಯಾಪಾರ ಇಲ್ಲವೆ ಚಿಕ್ಕ ಚಿಕ್ಕ ಕಲಾವಿಷಯಕ ಉದ್ಯೋಗಗಳನ್ನು ಕೈಕೊಳ್ಳಬೇಕು ಇಂಥ ಸ್ಥಿತಿಯು ಒದಗಿದೊಡನೆ ರಾಷ್ಟ್ರೀಯ ಶಿಕ್ಷಣದ ಸಂಸ್ಥೆಗಳು ತಮ್ಮಷ್ಟಕ್ಕೆ ಬರುತ್ತವೆ. ಮತ್ತು ಸರಕಾರಿ ಸಹಾಯ ಪಡಕೊಳ್ಳುವ ಈಗಿನ ಖಾಸಗಿ ಸಾಲೆಗಳು ಕೂಡ ರಾಷ್ಟ್ರೀಯ ಶಿಕ್ಷಣಾಲಯಗಳು ಆಗುತ್ತವೆ ಶಾಲೆಗಳ ವಿಷಯದಲ್ಲಿ ಇಷ್ಟು ಅಭಿಪ್ರಾಯವನ್ನು ಕೊಟ್ಟು ಕಮಿಟಿಯ . ಕೋರ್ಟುಗಳ ಬಹಿಷ್ಕಾರದ ವಿಷಯವಾಗಿಯೂ ಇದೇ ತರದ ವಿಚಾರಸರಣಿಯನ್ನು ಪ್ರದರ್ಶಿಸಿದೆ ಈಗಿನ ಕೋರ್ಟುಗಳ ಮುಖಾಂತರ ಸರಕಾರವು ಬಹಳ ದೊಡ್ಡ ಅಧಿಕಾರವನ್ನು ವ್ಯಾಪಿಸಿದೆ ಅದನ್ನು ಸಂಕೋಚ ಪಡಿಸಲು ಕೋರ್ಟುಗಳನ್ನು ಬಹಿಷ್ಕರಿಸುವುದೆ ಅವರ ಉತ್ತಮ ಉಪಾಯ ಈ ಮೇರಗೆ ವಕೀಲರು ಕೋರ್ಟುಗಳ ಮೆಟ್ಲು ಹತ್ತುವುದನ್ನು ನಿಲ್ಲಿಸಿ ಬಿಟ್ಟರೆ ಅವರು ಮತ್ತೆ ಸಂಪೂರ್ಣ ದೇಶಸೇವಕರಾಗಬಹುದು ಈಗ ಅವರು ತಮ್ಮ ಪುರಸತ್ತಿನ ಸಮಯದಲ್ಲಿ ಮಾತ್ರ ದೇಶ ಸೇವೆಯ ಬದ್ದಿಗಳನ್ನು ಮಾತಾಡುವವರಾಗಿದ್ದಾರೆ ಅವರಲ್ಲಿರುವ ಈ ದೋಷವು ಮೇಲಿನ ಉಪಕ್ರಮದಿಂದ ತನ್ನಷ್ಟಕ್ಕೆ ಮಾಯವಾಗುವುದು ಕೋರ್ಟನಿಂದ ಖಾಲಿಯಾದ ಈ ವಕೀಲರನ್ನೂ, ಇತರ ಯೋಗ್ಯ ಗೃಹಸ್ಥರನ್ನೂ ನೇಮಿಸಿ ಅಲ್ಲಲ್ಲಿ ರಾಷ್ಟ್ರೀಯ ನ್ಯಾಯಾಸನಗಳನ್ನು ತಯಾರಿಸಬೇಕು

೩ ಅಸಹಕಾರಿತೆಯ ಉಪಾಯಗಳ ಚಲಾವಣೆಯನ್ನು ಆಲೋಚಿಸುವ ಕಮಿಟಿಯು ಈ ಮೇರೆಗೆ ಪದವಿ ಸ್ಕೂಲು, ಕೋರ್ಟು ಇವುಗಳ ವಿಷಯವಾಗಿ ಮೇಲಿನಂತೆ ಅಭಿಪ್ರಾಯ ಕೊಟ್ಟು ಕೌನ್ಸಿಲು ಬಹಿಷ್ಕಾರದ ಬಗ್ಗೆ ತನ್ನ ಅಂಬೋಣವನ್ನು ತಿಳಿಪಡಿಸುವಾಗ ಕೌನ್ಸಿಲುಗಳಿಗೆ ಉಮೇದ್ವಾರರಾಗಿ ನಿಂತವರು ಜಾಹೀರು ಪತ್ರಕಗಳನ್ನು ಹೊರಡಿಸಿ ತಾವು ಉಮೇದ್ವಾರರಾಗುವುದಿಲ್ಲವೆಂದು ಸ್ಪಷ್ಟ ತಿಳಿಸಬೇಕು ಅಲ್ಲದೆ ಇದೇ ನವಂಬರದಲ್ಲಿ ಕಮಿಟಿಯು ಮೆಸಪೊಟೋಮಿಯದ ಕಡೆಗೆ ಜನನ್ನು ಹೋಗಗೂಡದಂತೆ ಚಳವಳ ಪ್ರಾರಂಭಿಸಬೇಕೆಂದು ಕೇಳಿದೆ. ವಿದೇಶಿಯ ವಸ್ತುಗಳ ಬಹಿಷ್ಕಾರವನ್ನು ಸಾಧಿಸಲು ಜನರು ಅನಗತ್ಯವಾದ ವಿದೇಶೀಯ ವಸ್ತುಗಳ ದುಂದುಗಾರಿಕೆಯನ್ನು ಬಿಡಬೇಕು ಸ್ವದೇಶೀಗೆ ವಿಶೇಷತಃ ತತ್ಕಾಲಕ್ಕೆ ಅರಿವೆಗೆ ಉತ್ತೇಜನ ಕೊಡುವ ಉದ್ದೇಶದಿಂದ ಕೈಮಗ್ಗಗಳೂ ಪ್ರತಿಯೊಂದು ಊರಲ್ಲಿ ಪ್ರಾರಂಭವಾಗಬೇಕು, ಹತ್ತಿಯಿಂದ ನೂಲನ್ನು ತಯಾರಿಸುವ ಕೈಯಂತ್ರಗಳೂ ಕೂಡ ಅಲ್ಲಲ್ಲಿ ಅಸ್ತಿತ್ವ

[illegible] ಕಾರ್ಯ [illegible] ಗಳನ್ನು [illegible] ವಕೀಲ ಮತ್ತು [illegible] ಆಯಾ ಜನರ ಕಡೆ [illegible] ವಿಷಯವನ್ನು ಸರಿಯಾಗಿ ತಿಳಿಸಿದೆ.

೪. ಅಸಹಕಾರದ ಉಪಾಯ ಯೋಜನೆಯ ಕಮಿಟಿಯು ಈ ಪ್ರಕಾರ ತನ್ನ ಯೋಜನೆಯನ್ನು ತಯಾರಿಸಿ ಜನರ ಮುಂದೆ ಇಟ್ಟಿದೆ. ಇದರ ವಿಚಾರವನ್ನು ಎಂದರೆ ಈ ಉಪಾಯಗಳ ಯೋಗ್ಯಾಯೋಗ್ಯತೆಯನ್ನು ನಿರ್ಣಯಿಸಲು ನಾಳೆ ಶನಿವಾರ ಮುಂಬಯಿಯಲ್ಲಿ ಓಲ್ ಇಂಡಿಯಾ ಕೊಂಗ್ರೆಸ ಕಮಿಟಿಯ ಅಧಿವೇಶನವು ಆಗಲಿಕ್ಕಿದೆ ಅದರಲ್ಲಿ ಅನೇಕ ಕಡೆಗಳಿಂದ ಬರುವ ಮುಖಂಡರು ಯಾವ ಅಭಿಪ್ರಾಯವನ್ನು ಕೊಡುತ್ತಾರೆ ಎಂಬದರ ಕಡೆಗೆ ದೇಶದ ದೃಷ್ಟಿಯು ತಾಗಿದೆ. ಈಗ ತಯಾರಿಸಿರುವ ಯೋಜನೆಯು ಹೇಗೂ ಇರಲಿ, ಆ ಬಗ್ಗೆ ಯಾರೇ ಬೇಕಾದ ಮತಭೇದಗಳನ್ನು ಹೇಳಲಿ, ಪರಂತು ಒಂದು ಮಾತು ನಿಜ ಯಾವುದೆಂದರೆ ಈಗ ದೇಶಕ್ಕೆ ತನ್ನ ಕಷ್ಟ ವಿಮೋಚನೆಗೆ ಯಾವುದಾದರೂ ಒಂದು ತರದ ಅಸಹಕಾರಿತೆಯು ಬೇಕೇಬೇಕು ಎಂದು ದೇಶಕ್ಕೆ ತೋರಹತ್ತಿದೆ.

೫. ಸರಕಾರದೊಡನೆ ಅಸಹಕಾರಿತೆಯನ್ನು ಯಾವ ಯಾವ ರೀತಿಯಿಂದ ಮಾಡಬಹುದೆಂಬುದನ್ನು ಜನರು ಹಲಕೆಲವು ಕಮಿಟಿಗಳ ಆಲೋಚನೆಯ ಬಲದಿಂದ ನಿರ್ಣಯಿಸುತ್ತಿರುವಾಗಲೆ ಮುಂಬಯಿಯಲ್ಲಿ ಪೋಸ್ಟ ಕೆಲಸದ ಮತ್ತು ತಂತಿ ಬಟವಾಡೆಯ ಪೇದೆಗಳು ತಮ್ಮ ಪೋಸ್ಟ ಖಾತೆಯೊಡನೆ ಕಳೆದ ವಾರದಿಂದಲೆ ಅಸಹಕಾರ್ಯವನ್ನು ಪ್ರಾರಂಭಿಸಿದ್ದಾರೆ ಎಂಬುದು ನಮ್ಮ ವಾಚಕರಿಗೆ ಕಳೆದ ಸಂಚಿಕೆಯಿಂದಲೆ ಗೊತ್ತಾಗಿದೆ. ಪೋಸ್ಟ ಕೆಲಸದವರ ಮುಷ್ಕರವು ಈ ವಾರದಲ್ಲೂ ಯಥಾ ಪ್ರಕಾರ ನಡಕೊಂಡೇ ಇದೆ ಕಾಯಮಿನ ಮತ್ತು ಪೂರ್ವಾಭ್ಯಾಸದ ಜನರು ಮುಷ್ಕರ ಹಾಕಿದ್ದರಿಂದ ಟಪಾಲಿನ ವಿಷಯವಾಗಿ ಮುಂಬಯಿಯವರಿಗೆ ತುಂಬಾ ಅನನುಕೂಲತೆಗಳು ಒದಗುತ್ತವೆ ಆದರೂ ಪೋಸ್ಟಿನ ಸರಕಾರವು ಕೆಲವು ಸ್ವಯಂ ಸೇವಕರನ್ನೂ, ಇತರರನ್ನೂ ಹಿಡಿದು ಆದಷ್ಟು ಬಟವಾಡೆಯ ಕೆಲಸವನ್ನು ಮಾಡಹತ್ತಿದೆ. ಈ ಬಗ್ಗೆ ಪರಊರುಗಳಿಂದ ಕೂಡ ಪೋಸ್ಟಮ್ಯಾನರನ್ನು ಅದು ಬರಮಾಡಿದೆ ಎಂದು ಪತ್ರಿಕೆಗಳ ಮೇಲಿಂದ ಗೊತ್ತಾಗುತ್ತದೆ ನಮ್ಮ ದಕ್ಷಿಣ ಕನ್ನಡದಿಂದ ಯಾರಾದರೂ ಈ ಕೆಲಸಕ್ಕೆ ಬರುವವರಿದ್ದರೆ ಬರಲಿ ಎಂಬ ಸೂಚನೆಯು ಇಲ್ಲಿಗೆ ಬಂದಿದೆ ಎಂದು ಕೇಳುತ್ತೇವೆ ಒಂದು ವೇಳೆ ಇದು ಹೌದಾದರೆ ಇಷ್ಟು ದೂರದಿಂದ ಈ ಚಿಲ್ಲರೆಯ ನೋಕರಿಯ ಮೇಲೆ ಕೇವಲ ಅಪರಿಚಿತರನ್ನು ತಂದು ಕೆಲಸ ಮಾಡಿಸಿಕೊಳ್ಳುವುದಕ್ಕಿಂತ ಮುಷ್ಕರಗಾರರ ಅಂಬೋಣದಂತೆ ಅವರ ಸಂಬಳದ ಮತ್ತು ಮನೆಬಾಡಿಗೆಯ ಏರ್ಪಾಡಿ ಮಾಡುವುದು ಸರಕಾರದ ಔದಾರ್ಯಕ್ಕೆ ಒಪ್ಪುವ ಸಂಗತಿಯಲ್ಲವೆ? ಅಲ್ಲದೆ, ಹೊಟ್ಟೆಯ ಸಂಕಷ್ಟ ನಿವಾರಣೆಯ ಬಗ್ಗೆ ಯಾವ ಬಡ ಜನರು ಮುಷ್ಕರವನ್ನು ಹಾಕಿದ್ದಾರೊ ಅಂಥವರಿಗೆ ಎದುರಾಗಿ ಮದತು ಕೊಡುವುದು ಇತರ ಜನರಿಗೂ ಚಂದವಲ್ಲ. ವಿಲಾಯತಿಯಂಥ ಕಡೆಯಲ್ಲಿ ಈ ಕ್ರಮಗಳು ದೃಷ್ಟಿಗೆ ಬೀಳುವುದಿಲ್ಲ. ಇರಲಿ, ಮುಂಬಯಿಯಂಥ ಅತಿ ಖರ್ಚಿನ ಪಟ್ಟಣದಲ್ಲಿ ಬಡ ಪೋಸ್ಟಮ್ಯಾನರು ಕೇಳುವ ಕೇಳಿಕೆಗಳ ಕಡೆಗೆ ಸರಕಾರವು ದುರ್ಲಕ್ಷ್ಯ ಮಾಡುವ ಉದ್ಧಟತನವನ್ನು ತೋರಿಸುವುದು ಕೇವಲ ನಿಷ್ಠುರತನದ ಕೆಲಸವಾಗಿದೆ

೬ ಪರಂತು ಇಂಥ ಧಾರ್ಷ್ಟ್ಯವು ವಿಲಾಯತಿ ಮುಷ್ಕರಗಳ ವಿಷಯವಾಗಿ ಮಾತ್ರ ನಡೆಯುವುದಿಲ್ಲ. ಮುಂಬಯಿಯಲ್ಲಿ ಪೋಸ್ಟಮ್ಯಾನರ ಮುಷ್ಕರವು ಬಿದ್ದಿರುವಂತೆ ವಿಲಾಯತಿಯಲ್ಲಿಯೂ ಕಲ್ಲಿದ್ದಲಿಯ ಖಣಿಗಳಲ್ಲಿ ಕೆಲಸಮಾಡುವವರ ಮುಷ್ಕರವು ಬೇಗನೆ ಸಂಭವಿಸುವಂತೆ ತೋರುತ್ತದೆ. ಯುದ್ಧದ ಈ ಅನಂತರದ ಕಾಲದಲ್ಲಿ ಹಾಗು ರುಶ್ಯಾ ಮತ್ತು ಮಧ್ಯ ಏಸಿಯಾ ಕಡೆಗಳಲ್ಲಿ ಇನ್ನೂ ಅಶಾಂತತೆಯು ನಡಕೊಂಡಿರುವ ಈ ಸಮಯದಲ್ಲಿ ಧಾರಣೆಯು ವಿಪರೀತ ಏರಿಹೋಗಿವೆ, ಮತ್ತು ಇದು ಬಡ ಜನರಿಗೆ ಹೊಟ್ಟೆನ ತೊಂದರೆಗೆ ಕಾರಣವಾಗಿದೆ ಆದ್ದರಿಂದ ಅವರು ತಂತಮ್ಮ ಸಂಬಳವನ್ನು ಏರಿಸಲು ನೆಹುಬವಾಗಿ ಕೇಳಿಕೊಳ್ಳುತ್ತಾರೆ ಅದೆಯ ಇಂಗ್ಲಂಡಿನೊಳಗಿನ ಖಣಿ ಕೆಲಸದ ಮಜೂರರು ತಮ್ಮ ಸಂಬಳವನ್ನು ವಿವಕ್ಷಿತ ಪ್ರಮಾಣದಲ್ಲಿ ಏರಿಸಬೇಕೆಂದು ಮುಖ್ಯ ಮಂತ್ರಿಗಳ

[illegible] ಮಜೂರ [illegible]ದಲ್ಲಿ [illegible] ಮಾಲಿಕರಿಂದ [illegible] [illegible] ಇದು [illegible] ವಿರೋಧಿಸುವ [illegible] ಅವಧಿಯ [illegible] ಈ ಅವಧಿಯಲ್ಲಿ ಖಣಿಯ ಯಜ [illegible] ಪ್ರಕಾರ ಸಂಬಳವನ್ನು ಎಂದರೆ [illegible] ತಾವು ಮುಷ್ಕರವನ್ನು ಹಾಕು [illegible] ಮಜೂರರು ನೋಟೀಸಿನಲ್ಲಿ ಉಲ್ಲೇಖಿಸಿದರು.

[illegible] ಮುಖ್ಯ ಮಂತ್ರಿಗಳಾದ ಮಿ. ಲೊಯ್ಡ್ ಜಾರ್ಜರು ಮಧ್ಯಸ್ಥಿಕೆಯನ್ನು ಮಾಡಬೇಕಾಗಿ ಬಂದಿದೆ. ಲೊಯ್ಡ್ ಜೋರ್ಜರ [illegible] ಅಲ್ಪ ಪುರಸತ್ತು ಸಾಲದು, ಇನ್ನೂ ಒಂದು ವಾರದ ಅವಧಿಯಾದರೂ ಬೇಕೆಂದು ಮಜೂರ ಮುಖಂಡರೊಡನೆ ಮಾತಾಡಿದರು. ಈ ಸಂದರ್ಭದಲ್ಲಿ ಮುಖ್ಯ ವಕ್ತೃಗಳಾಗಿ ಮಜೂರರ ಸಂಘದ ಕಡೆಯಿಂದ ಮಿ. ಸ್ಮಾಯ್ಲಿ ಎಂಬವರು ಕೊಟ್ಟ ಉತ್ತರವು ಇಲ್ಲಿಯ ಉಷ್ಣ ಹವೆಯಲ್ಲಿ ಒಂದು ವೇಳೆ ಕಠಿಣವಾಗಿ ತೋರುತ್ತದಾದರೂ ವಿಲಾಯತಿಯ ಶೀತಲ ಹವೆಯಲ್ಲಿ ಅದು ಸೌಮ್ಯವಾಗಿಯೆ ಇರಬೇಕೆಂದು ಊಹಿಸುತ್ತೇವೆ. "ಒಂದು ವಾರದ ಪುರಸತ್ತಿನ ನೆವದಿಂದ ಸಮಯವನ್ನು ಕಳೆಯ ಹತ್ತಿದರೆ ಖಣಿಗಳಲ್ಲಿಯ ಇದ್ದಲಿಯು ಖರ್ಚಾಗಿ ಹೋಗುತ್ತದೆ. ಬೇರೆ ಖಣಿಗಳನ್ನು ಶೋಧಿಸುವುದೂ ಇಲ್ಲ; ಇಂಥ ಪರಿಸ್ಥಿತಿಯಲ್ಲಿ ನಮ್ಮ ಮಜೂರರ ಮುಷ್ಕರವನ್ನು ನಿಲ್ಲಿಸಲು ಪೃಥ್ವಿಯ ಮೇಲೆ ಯಾವ ಸಾಮರ್ಥ್ಯವು ಇಲ್ಲ", ಮಿ. ಸ್ಮಾಯ್ಲಿಯವರ ಈ ಖಂಡಿತ ಹೇಳಿಕೆಯು ಮುಂದೆ ಕೈ ಗೂಡಿದ. ಲೊಯ್ಡ್ ಜೋರ್ಜರು ಮಜೂರರ ಅಪೇಕ್ಷೆಗಳನ್ನು ಪೂರೈಸುವಂತೆ ಸಂಬಳದ ಯೋಜನೆಯನ್ನು ತಯಾರಿಸಿ ಕೊಡಬಹುದೆಂದು ಆಶ್ವಾಸನವನ್ನು ಕೊಟ್ಟು ತತ್ಕಾಲಕ್ಕೆ ಒಂದು ವಾರದ ಪುರುಸತ್ತನ್ನು ಪಡಕೊಂಡಿದ್ದಾರೆ; ಮತ್ತು ಖಣಿಗಳ ಯಜಮಾನರನ್ನು ಕಂಡು ಈ ವಿಷಯವನ್ನು ಅವರಿಗೆ ತಿಳಿಸಿ ಅವರ ಸ್ವಾರ್ಥಪರತೆ ಹಾಗು ದುರಾಗ್ರಹ ಇವುಗಳಿಗೆ ಸಮಾಧಿಯನ್ನು ಕೊಡಿಸಲು ನಿಶ್ಚಯಿಸಿದ್ದಾರೆ. ಮಿ. ಲೊಯ್ಡ್ ಜೋರ್ಜರ ಪ್ರಯತ್ನಕ್ಕೆ ಯಶಸ್ಸು ಬಂದರೆ ಇಂಗ್ಲೆಂಡಿನ ಮಜೂರರಲ್ಲಿ ಕೊಂಚ ಮಟ್ಟಿಗೆ ಸಮಾಧಾನವಾದೀತೆಂದು ಹೇಳಬಹುದು. ಪ್ರಧಾನಿಗಳಾದ ಈ ಲೊಯ್ಡ ಜೋರ್ಜರ ಸ್ತುತ್ಯ ಅನುಕರಣವನ್ನು ಮುಂಬಾಯಿಯ ಗವರ್ನರರಾದ ಜೋರ್ಜ ಲೊಯ್ಡರು ಬಡ ಪೋಸ್ಟಮ್ಯಾನರಿಗಾಗಿ ಯಾಕೆ ಮಾಡಕೂಡದು?

೨. ಇಂಗ್ಲೆಂಡಿನ ಮಜೂರ ವರ್ಗದಲ್ಲಿ ಹಬ್ಬಿರುವ ಅಸಂತೋಷ ಮತ್ತು ಅಸಮಾಧಾನವು ಈ ಮೇರೆಗೆ ಶಾಂತವಾಗುವ ಚಿಹ್ನವು ತೋರುತ್ತಿದ್ದರೂ ಇಟೆಲಿಯೊಳಗಿನ ಮಜೂರರ ಅಸಂತೋಷವು ಬೆಳೆಯುತ್ತ ಹೋಗಿದೆ. ಇದು ಎಷ್ಟರಮಟ್ಟಿಗೆ ಬೆಳೆದಿದೆ-ಎಂದರೆ ಅದು ರಾಜ್ಯಕ್ರಾಂತಿಯ ಸ್ಥಿತಿಯ ವರೆಗೆ ಬಂದು ತಲ್ಪಿದಂತಾಗಿದೆ ಎಂದು ಹೇಳುತ್ತಾರೆ. ಅಲ್ಲಿಯ ಮಜೂರರು ಕಾರಖಾನೆಗಳನ್ನೆಲ್ಲ ಆಕ್ರಮಿಸಹತ್ತಿದ್ದಾರೆ. ಅವರ ಹೇಳಿಕೆಗಳನ್ನು ಸರಕಾರಿ ಅಧಿಕಾರಿಗಳಿಗೆ ಮಾನ್ಯಮಾಡಬೇಕಾಗಿ ಬಂದಿದೆ. ಮಜೂರ ವರ್ಗದವರ ಈ ಹಾವಳಿಯಲ್ಲಿ, ಅರಾಜಕದ ಭರತಿಯುಂಟಾಗಿ ಇಟಲಿ ದೇಶವು ಸಂಪೂರ್ಣವಾಗಿ ರುಶ್ಯದಂತೆ ಬೋಲ್‌ಶೇವಿಝುಮಿನ ದೀಕ್ಷೆಯನ್ನು ವಹಿಸುತ್ತದೊ ಎಂದು ತೋರಹತ್ತಿದೆ. ಇಟಲಿಯಲ್ಲಿ ಇಂಥ ಶೋಚನೀಯ ಸ್ಥಿತಿಯು ಬರಲು ಮುಗಿದ ಮಹಾಯುದ್ಧವೆ ಕಾರಣವು. ನಿಜವಾಗಿ ನೋಡಿದರೆ ಇಟಲಿಯಲ್ಲಿ ಬೋಲ್‌ಸೇವಿಝುಮಿನ ಪ್ರಾದುರ್ಭಾವವಿಲ್ಲ; ಇಲ್ಲವೆ ಇದು ಸೋಶಲಿಝುಮಿನ ತತ್ವಾನುಸಾರವಾಗಿ ಉಂಟಾದ ಕ್ರಾಂತಿಯೂ ಅಲ್ಲ. ಕಾರಖಾನೆಗಳ ಯಜಮಾನರ ಉಗ್ರಾನಮಯವಾದ್ದೂ ಪ್ರವೃತ್ತಿಯುಂಟೊ. ಅದನ್ನು ಮಾತ್ರ ನಿಷೇಧಿಸುವ ಉದ್ದೇಶದಿಂದಲೇ ಇಟಲಿಯಲ್ಲಿ ಈಗಿನ ಗಲಾಟೆಯು ಉಂಟಾಗಿದೆ ಎಂದು ಹೇಳುತ್ತಾರೆ. ಮತ್ತು ಇದೇ ಕಾರಣದಿಂದ ಮಜೂರರು ದೇಶದೊಳಗಿನ ಸಾಮಾನ್ಯ ಎಲ್ಲ ಕಾರಖಾನೆಗಳನ್ನು ಸ್ವಾಧೀನ ಪಡಿಸಿಕೊಂಡಿದ್ದಾರೆ. ತಮ್ಮ ಕೇಳಿಕೆಗಳನ್ನು ಪೂರೈಸದೆ ಕಾರಖಾನೆಗಳನ್ನು ಬಿಟ್ಟು ಕೊಡುವುದಿಲ್ಲ ಎಂದು ಅವರ ನಿಶ್ಚಯವಿರುತ್ತದೆ. ಸಾರಾಂಶ, ಲೋಕದಲ್ಲೆಲ್ಲಾ ಮಜೂರ ವರ್ಗದ ಅಸಂತೋಷದ ಮಳೆಯು ಬೀಳಹತ್ತಿದೆ!

೪. ಮಜೂರರಲ್ಲಿ ಹಾಗು ಕೆಳಗಿನ ತರಗತಿಯ ನೌಕರರಲ್ಲಿ ಅಸಂತೋಷವು ಉತ್ಪನ್ನವಾಗಲಿಕ್ಕೆ ಧಾರಣೆಯ ಏರೆ ಮುಖ್ಯವಾದ ಕಾರಣವೆಂಬುದು ಹೌದಾದರೂ ಇನ್ನು ಕೆಲವು ಅವಾಂತರ ಕಾರಣಗಳೂ ಇವೆ. ಈ ಧಾರಣೆಯ ಏರಿಗೆ ಸಹಾಯಕವಾದ ಸಂಗತಿಯನ್ನು ವಿಚಾರಿಸಿ ನೋಡಿದರೆ ಈಗಿನ ಕಾಲದ ಸರಕಾರದ ಸ್ವಾರ್ಥದ—ಮುಖ್ಯವಾಗಿ ಪವನಗಳ ಕೃತ್ರಿಮ ಉತ್ಪತ್ತಿಯು [illegible] ಸದೋಷವಾದ್ದೆಂದು ಸುಶಿಕ್ಷಿತರಾಗಿರುವವರು ಹೇಳದೆ ಇರಲಿಕ್ಕಿಲ್ಲ. ಪವನುಗಳ ೧೫ ರೂಪಾಯಿಯ ಕೃತ್ರಿಮ ಬೆಲೆಯು ಬೇಗನೆ ಕಡಿಮೆಯಾಗಲಿಕ್ಕಿದೆ; ಆದ್ದರಿಂದ ಪವನುಗಳಿದ್ದವರು ಸರಕಾರಿ ಖಜಾನೆಗಳಲ್ಲಿ ಅವುಗಳನ್ನು ತಂದು ಕೊಟ್ಟರೆ ಅವರಿಗೆ ೧೫ ರೂಪಾಯಿಯಂತೆ ಬೆಲೆಯು ಸಿಗುವುದೆಂದು ಸರಕಾರವು ನೋಟಿಸನ್ನು ಪ್ರಕಟಿಸಿತು. ಮತ್ತು ಆ ನೋಟೀಸಿನಲ್ಲಿ ತೋರಿಸಿದ ಅವಧಿಯೊಳಗೆ ಜನರು ಪವನುಗಳನ್ನು ಕೊಟ್ಟು ಬೆಲೆಯನ್ನು ಪಡಕೊಂಡಿದ್ದಾರೆನ್ನೋಣ. ಆದರೆ ಬೇಗನೆ ಪವನಿನ ಬೆಲೆಯು ಕಡಿಮೆಯಾಗಲಿಕ್ಕಿದೆ ಎಂದು ಸರಕಾರವು ಏನು ಹೇಳಿತೊ, ಅದರ ಪ್ರತೀತಿಯು ಈ ವರೆಗೆ ಬಂದದ್ದು ಕಾಣುವುದಿಲ್ಲ. ಆದರೆ ಕೆಲವು ದಿವಸಗಳ ಹಿಂದೆ ಒಮ್ಮೆ ಮಾತ್ರ ೧೫ ರೂಪಾಯಿಗೆ ಆಣೆ, ಎರಡು ಆಣೆ ಕಡಿಮೆ ಪವನುಗಳು ಕಟ್ಟೆಯಲ್ಲಿ ಮಾರಲ್ಪಡುತ್ತಿದ್ದವು! ಈ ಕಡಿಮೆಯ ಪ್ರಮಾಣವನ್ನು ಅದಷ್ಟು ಹೆಚ್ಚಿಸಿ ಹೇಳುವುದಾದರೆ ಕೆಲವು ಆಣೆಗಳ ಕಡಿಮೆಯಾಗಿದ್ದವಲ್ಲದೆ ರೂಪಾಯಿ ಗಟ್ಲೆ ಕಡಿಮೆಯಾಗಿರಲಿಲ್ಲ. ಪೇಟೆಯಲ್ಲಿ ಅಥವಾ ಕಟ್ಟೆಗಳಲ್ಲಿ ಈ ಧಾರಣೆ ಇದ್ದದ್ದಕ್ಕೆ ಸರಕಾರವನ್ನು ದೂರುವುದು ಯುಕ್ತವೆ ಎಂದು ಯಾರಾದರೂ ಆಕ್ಷೇಪಿಸಬಹುದು. ಆದುದರಿಂದ ಜನರ ಖಾಸಗಿ ವ್ಯವಹಾರವನ್ನು ಬಿಟ್ಟುಬಿಡೋಣ. ಸರಕಾರವು ಪವನುಗಳನ್ನು ಯಾವ ಬೆಲೆಯಲ್ಲಿ ಕೊಟ್ಟು ತೆಕ್ಕೊಳ್ಳುತ್ತದೆ ಎಂಬುವನ್ನು ನಿರೀಕ್ಷಿಸೋಣ. ಹಾಗೆ ಮಾಡಿದ್ದಲ್ಲಿ ಅಷ್ಟೊಂದು ಸಮಾಧಾನವುಂಟಾಗುವದಿಲ್ಲ: ಸರಕಾರವು ನಮ್ಮಿಂದ ೧೦ ರೂಪಾಯಿಗೆ ಪವನು ಹಾಗು ೫ ರೂಪಾಯಿಗೆ ಅರ್ಧ ಪವನು ತೆಕ್ಕೊಳ್ಳುತ್ತದೆ. ಪರಂತು ಅದು ನಮಗೆ ಅದೇ ಬೆಲೆಯಲ್ಲಿ ಪವನು, ಅರ್ಧ ಪವನುಗಳನ್ನು ಕೊಡುವುದಿಲ್ಲ! ಇತ್ತಲಾಗೆ ಆಯಾ ಖಜಾನೆಗಳಿಗೆ ಬಂದ ಹುಕುಮಿನಲ್ಲಿ ಪವನುಗಳನ್ನು ೧೦ರಂತೆ ಮತ್ತು ಅರ್ಧ ಪವನುಗಳನ್ನು ೫ರಂತೆ ಸ್ವೀಕರಿಸಬಹುದು; ಆದರೆ ಹಿಂತಿರುಗಿ ಅದೇ ದರದಲ್ಲಿ ಕೊಡಕೂಡದು ಎಂದರೆ ಬಟವಾಡೆ ಮಾಡಕೂಡದು ಎಂದು ಬರೆದು ಬಂದಿದೆ ಎಂದು ಕೇಳುತ್ತೇವೆ. ಎಂದಮೇಲೆ ಇದು ಕೇವಲ ವ್ಯಾಪಾರಿ ಧೋರಣವಲ್ಲವೇ? ರಾಜ ಪ್ರಜಾ ಸಂಬಂಧ ವಿದ್ದ ಕಡೆಯಲ್ಲಿ ಇಂಥ ವ್ಯಾಪಾರಿ ಧೋರಣವನ್ನು ಅಂಗೀಕರಿಸುವುದು ಶೋಚನೀಯ ಮತ್ತು ಅಶ್ಲಾಘ್ಯವೆ ಅಲ್ಲ ನಿಷ್ಠುರತನದ್ದೂ ಆಗಿದೆ.

೯. ಈಗ ಒಂದು ವೇಳೆ ಸರಕಾರದ ಕಡೆಗೆ ಪವನುಗಳ ಸಂಗ್ರಹವು ಕಡಿಮೆ ಇರಬಹುದು. ಆದರೆ ಅದನ್ನು ಹೆಚ್ಚಿಸಿಕೊಳ್ಳುವುದು ಎಂದರೆ ವಿಲಾಯತಿಯಿಂದ ಬೇಕಷ್ಟು ಪವನುಗಳನ್ನು ತರಿಸಿಕೊಳ್ಳುವುದು ಅದರ ಕೆಲಸವಾಗಿದೆ. ತಾನು ತನ್ನ ಕರ್ತವ್ಯ ಮಾಡುವದನ್ನು ಬಿಟ್ಟು ಪ್ರಜೆಗಳಿಂದ ತೆಕ್ಕೊಳ್ಳುವಾಗ ಒಂದು ನಮೂನೆ ಕೊಡುವ ಸಂದರ್ಭದಲ್ಲಿ ಬೇರೊಂದು ಧಾಟಿ ಹೀಗಾದರೆ ಜನರ ನಂಬಿಕೆಯು ಕೆಟ್ಟು ಹೋಗುತ್ತದೆ. ಹಾಗೆ ಜನರ ನಂಬಿಕೆಯನ್ನು ಕೆಡಿಸಿಕೊಳ್ಳುವದು—ಹೆಚ್ಚಾಗಿ ಈಗಿನ ಅಸಹಕಾರಿತೆಯ ಯುಗದಲ್ಲಿ ಚಂದವಲ್ಲವೆಂದು ನಾವು ಸರಕಾರಕ್ಕೆ ಪ್ರೇಮ ಪುರಸ್ಸರವಾಗಿ ತಿಳಿಸುವೆವು.

> ಇದೇ ಭಾದ್ರಪದ ಬಹುಳ ಪ್ರತಿಪದ್ ತಾ. ೨೯-೯-'೨೦ನೇ ಬುಧವಾರ ಬೆಳಿಗ್ಗೆ ಘಂಟೆ ೫ಕ್ಕೆ ಸುಪ್ರಸಿದ್ಧ ಆಯುರ್ವೇದ ಡಾಕ್ಟರರಾದ ವೈದ್ಯರತ್ನ ಪಂಡಿತ ಡಿ. ಗೋಪಾಲಾಚಾರ್ಲು ಭಗಂದರದಿಂದ ತಮ್ಮ ೪೯ನೇ ವಯಸ್ಸಿನಲ್ಲಿ ದಿವಂಗತರಾದರೆಂಬ ವರ್ತಮಾನವನ್ನು ತಿಳಿಸಲು ತುಂಬಾ ವಿಷಾದವಾಗುತ್ತಿದೆ.

ಮಂಗಳೂರು.

ಅಸಹಕಾರಿತೆಯ ಚಳವಳವನ್ನು ಜಿಲ್ಲೆಯ ಎಲ್ಲಾ ಭಾಗದ ಜನಸಾಮಾನ್ಯರಲ್ಲಿ ಪಸರಿಸುವ ಉದ್ದೇಶದಿಂದ ಬರುವ ಎರಡು ತಿಂಗಳಲ್ಲಿ ಮ| ರಾ| ವಕೀಲ ಕಾರ್ನಾಡ ಸದಾಶಿವರಾಯರು ಜಿಲ್ಲೆಯ ಮುಖ್ಯ ಭಾಗಗಳನ್ನು ಸಂದರ್ಶಿಸಲಿಕ್ಕಿರುವರಾಗಿಯೂ, ಈ ಕುರಿತು ಅವರು ಆಯಾ ತಾಲೂಕಿನ ಮುಖಂಡರೊಡನೆ ಪತ್ರವ್ಯವಹಾರವನ್ನು ಬೆಳಿಸಿ ಅವರ ಸಹಾಯವನ್ನು ಪಡೆದು ಅಲ್ಲಲ್ಲಿ ಮದ್ರಾಸ ನ್ಯಾಯವಿಧಾಯಕ ಸಭೆಗೆ ವೋಟು ಕೊಡಲು ಹಕ್ಕುಳ್ಳ ಜಿಲ್ಲೆಯ ವೋಟರರ ಸಭೆ ಕೂಡಿಸುವರಾಗಿಯೂ, ಮಹಾತ್ಮ ಗಾಂಧಿಗಳ ಸಂದೇಶದಂತೆ ಇಂಡಿಯನ್ ನೇಶನಲ್ ಕೊಂಗ್ರೆಸ್ ಹಾಗು ಮೊಸಲೆಮ್ ಲೀಗಿನವರು ಹೊಸ ನ್ಯಾಯವಿಧಾಯಕ ಸಭೆಯ ಉಮೇದ್ವಾರರಿಗೆ ವೋಟರರು ತಮ್ಮ ಓಟುಗಳನ್ನು ಕೊಡದಂತೆ ಮಾಡಬೇಕೆಂದು ನಿರ್ಧರಿಸಿದಂತೆ ಈ ಜಿಲ್ಲೆಯ ವೋಟರರು ಉಮೇದ್ವಾರರಿಗೆ ವೋಟು ಕೊಡದಂತೆ ಜಿಲ್ಲೆಯ ದೇಶಾಭಿಮಾನಿಗಳು ಸಾಧಿಸಿ ಈ ಅಸಹಕಾರಿತೆಯ ಚಲನೆಗೆ ಯಶಸ್ಸನ್ನು ತಂದುಕೊಟ್ಟು ಜಿಲ್ಲೆಯ ಹಾಗು ದೇಶದ ಮಾನ ಮತ್ತು ತಮ್ಮ ತಮ್ಮ ಸ್ವಾಭಿಮಾನವನ್ನು ಕಾಪಾಡಿಕೊಳ್ಳತಕ್ಕದೆಂಬವನ್ನು ಯೋಜಿಸುವುದು ಈ ಸಭೆಯುಗಳ ಉದ್ದೇಶವಾಗಿದೆಯಾಗಿಯೂ, ಅಲ್ಲಲ್ಲಿ ನಡಿಯತಕ್ಕ ಸಭೆಗಳ ಕಾರ್ಯಕ್ರಮ ಪಟ್ಟಿಯನ್ನು ಹಿಂದಕ್ಕೆ ಪ್ರಕಟಿಸಲಾಗುವುದಾಗಿಯೂ ಸದರಿಯವರು ತಿಳಿಸುತ್ತಾರೆ.

ಸರಕಾರಿ ಕೋರ್ಟುಗಳ ಬದಲಿಗೆ ಖಾಸಗಿ ಕೋರ್ಟುಗಳನ್ನು ತೆರೆದು ಜನರ ವಾದವಿವಾದಗಳನ್ನು ತೀರ್ಮಾನಿಸುವುದು, ಹುಡುಗರಿಗೆ ತಕ್ಕುದಾದ ಉದ್ಯೋಗಗಳನ್ನು ಕಲ್ಪಿಸಿ ಕೊಡಲು ಯೋಗ್ಯವಾದ ಒಂದು ರಾಷ್ಟ್ರೀಯ ಶಾಲೆಯ ಸ್ಥಾಪಿಸುವುದು ಈ ವಿಷಯಗಳನ್ನು ಆಲೋಚಿಸಲು ಇಸ್ಲಾಮಿಯಾ ಕ್ಲಬ್ಬಿನಲ್ಲಿ ಬರುವ ಆದಿತ್ಯವಾರ ಸಾಯಂಕಾಲ ೫ ಗಂಟೆಗೆ ಒಂದು ಸಭೆ ಕೂಡುವುದು. ಅನಂತರ ಈ ಕ್ಲಬ್ಬಿನಲ್ಲಿ ಸಾಯಂಕಾಲ ೬ ಗಂಟೆಗೆ ಇನ್ನೊಂದು ಸಭೆ ಕೂಡುವುದು. ನಮ್ಮ ಜಿಲ್ಲೆಯ ಕಡೆಯಿಂದ ಮದ್ರಾಸಿನ ಹೊಸ ಸುಧಾರಣಾ ಕೌನ್ಸಿಲಿಗೆ ಉಮೇದುವಾರರಾಗಿ ಎದುರು ಬಂದ ಗೃಹಸ್ಥರಿಗೆ ತಮ್ಮ ಉಮೇದ್ವಾರಿಕೆಗಳನ್ನು ಹಿಂದಕ್ಕೆ ತೆಗೆದುಕೊಳ್ಳಬೇಕೆಂದು ವಿನಂತಿ ಮಾಡಿಕೊಳ್ಳುವ ಸಂಗತಿಯನ್ನು ಪರ್ಯಾಲೋಚಿಸುವುದು ಈ ಸಭೆಯ ಕಾರ್ಯವಾಗಿದೆ. ಅದಕ್ಕೆ ಸಕಲರಿಗೂ ಸುಸ್ವಾಗತವಿದೆ.

ಈ ತಿಂಗಳಿಂದ ಮಂಗಳೂರಿನ Iನೇ ಕ್ಲಾಸು ಬೆಂಚು ಕೋರ್ಟು ಪ್ರತಿ ಮಂಗಳವಾರ ಮತ್ತು ಶುಕ್ರವಾರ IIನೇ ಕ್ಲಾಸ್ ಬೆಂಚು ಕೋರ್ಟು ಪ್ರತಿ ಬುಧವಾರ ಮತ್ತು ಶನಿವಾರ ಸೇರುವುದು.

ಇಲ್ಲಿಯ ಇಂಡಿಯನ್ ಬೊಯಿಸ್ಸನ್ಸ್ಕಾಟ ಎಸೋಸಿಯೇಶನಿನ ಮತ್ತು ಸ್ಟುಡೆಂಟ ಬ್ರದರ ಹುಡ್ಡಿನ ಪರವಾಗಿ ನಾಳೆ ಸಾಯಂಕಾಲ ೫-೩೦ ಗಂಟೆಗೆ ಶ್ರೀರಾಮಕೃಷ್ಣ ವಿದ್ಯಾರ್ಥಿ ಭವನದಲ್ಲಿ ಮ| ರಾ| ರಾ| ಕಾರ್ನಾಡ ಸದಾಶಿವರಾಯರು ಮಹಾತ್ಮಾಗಾಂಧಿ ಮತ್ತು ಅವರ ಸಂದೇಶವೆಂಬುದನ್ನು ಕುರಿತು ಭಾಷಣಮಾಡುವರು. ಈ ಸಂದರ್ಭದಲ್ಲಿ ಮ| ರಾ| ಆರ್. ಯಂ. ರೈ[illegible]ವರು ಅಧ್ಯಕ್ಷರಾಗಲು ಒಪ್ಪಿರುವರು.

ಮದರಾಸಿನ ಮೆಟರನಿಟಿ ಆಸ್ಪತ್ರೆಯ ಹೌಸ ಸರ್ಜನ ಮ| ರಾ| ಎ. ನಾರಾಯಣ ಮೆನೋನರು ಯಂ. ಬಿ. ಬಿ. ಎಸ್. ಯವರು ಮಂಗಳೂರ ವೆನ್‌ಲೊಕ್ ಆಸ್ಪತ್ರೆಯ ಅಸಿಸ್ಟಾಂಟ ಸರ್ಜನರಾಗಿ ವರ್ಗಹೊಂದಿದ್ದಾರೆ.

ಮಂಗಳೂರ ಗವರ್ನಮೆಂಟ ಹಾಯರ ಎಲಿಮೆಂಟರಿ ಟ್ರೈನಿಂಗ್ ಶಾಲೆಯ ಎಗ್ರಿಕಲ್ಚರಲ್ ಅಸಿಸ್ಟಾಂಟರಾದ ಮ| ರಾ| ಕೋಟೂರ ರಾಮರಾಯರಿಗೆ ಹರಪನಹಳ್ಳಿ ರೇಂಜಿನ ಸಬ್ ಅಸಿಸ್ಟಾಂಟರಾಗಿ ನೇಮಕವಾಗಿದೆ.

ವಿಟ್ಲ ಬಾಗಾಯಿತು ಕೃಷಿಕರ ಸಹಕಾರ ಸಂಘದ ಡಿರೆಕ್ಟರರಾದ ಮ| ರಾ| ಚಕ್ರಕೋಡಿ ರಾಮಶಾಸ್ತ್ರಿಗಳ ಮೇಲಿನ ಮೊಕದ್ದಮೆಯ ತನಖಿಯು ಕಳೆದ ತಾ. ೨೭ರಿಂದ ಸೆಶನ್ಸ ಕೋರ್ಟಿನಲ್ಲಿ ನಡಿಯುತ್ತಿದೆ.

ಇಂಟರ ಸ್ಕೂಲ ಜಿಮ್ನಾಸ್ಟಿಕ್ಸ ಸ್ಪೋರ್ಟ್ಸಿನ ಜೂನಿಯರ್ ಕ್ರಿಕೆಟ್ ಮೇಚ್ ಮತ್ತು ಕೊರನೇಶನ್ ಮೇಚುಗಳು ಈ ತಿಂಗಳ ತಾ. ೪ರಿಂದ ಪ್ರಾರಂಭಿಸುವವು. ಸೀನಿಯರ ಕಂಪಿಟೀಶನ್ ಮೇಚಿಗೆ ಗವರ್ನಮೆಂಟು ಮತ್ತು ಅಲೋಸಿಯಸ್ ಕೋಲೇಜು ಇವೆರಡು ಮಾತ್ರ ಸ್ಪರ್ಧಿಸುವುದರಿಂದ ಮೇಚ್ ಆಡುವ ದಿನವನ್ನು ಈ ಕೊಲೇಜುಗಳೇ ನಿರ್ಧರಿಸಬೇಕಾಗಿದೆ. ನವಂಬರ ತಾ. ೧೧ಕ್ಕೆ ಜೂನಿಯರ್ ಮತ್ತು ತಾ. ೧೨ಕ್ಕೆ ಸೀನಿಯರ್ ಜಿಮ್ನಾಸ್ಟಿಕ್ಸ್ ಆಟಗಳು ಜರಗುವವು. ನವಂಬರ ತಾ. ೧೮ಕ್ಕೆ ಜೂನಿಯರ್ ಮತ್ತು ತಾ. ೨೦ಕ್ಕೆ ಸೀನಿಯರ್ ಎತ್ಲೆಟಿಕ್ ಸ್ಪೋರ್ಟ್ಸ್ ಇರುವುವು. ಟೆನ್ನಿಸ್, ಹೊಕ್ಕಿ ಮತ್ತು ಫೂಟ್‌ಬೋಲ್ ಈ ಆಟಗಳು ಜರಗತಕ್ಕ ತಾರೀಕುಗಳು ನಿಶ್ಚಯಿಸಲಾಗಲಿಲ್ಲ.

ಕಳೆದ ಬುಧವಾರ ರಾತ್ರಿ ಹೊಸಕೋರ್ಟು ರಸ್ತೆಯಲ್ಲಿರುವ ಯಸ್. ಬಿ. ಯಸ್. ಲೋಜಿನಲ್ಲಿ ಕಳ್ಳರು ನುಗ್ಗಿ ವಸ್ತ್ರವಗೈರೆ ದೋಚಿಕೊಂಡು ಪಲಾಯನ ಗೈದರಂತೆ.

ಕಳೆದ ಜುಲಾಯಿ ತಿಂಗಳಲ್ಲಿ ಪಣಂಬೂರಿನ ಯಲ್ಲಪ್ಪನೆಂಬ ಸುಮಾರು ೧೭ ವರುಷದ ಹುಡುಗನು ಮುಂಬಾಯಿಯಲ್ಲಿ ರಾ| ಸಕಾರಾಮಶೆಟಿ ಎಂಬ ಸಾಹುಕಾರರು ಬ್ಯಾಂಕಿಗೆ ಪಾವತಿ ಕೊಡಲು ಕೊಟ್ಟ ರೂ. ೧,೨೦೦ ಸಹಿತ ಪರಾರಿಯಾಗಿದ್ದನು. ಕಳೆದ ತಾರೀಕು ೨೬ರಲ್ಲು ಈತನು ಮಂಗಳೂರಲ್ಲಿ ಪೋಲೀಸರ ಕೈಗೆ ಸಿಕ್ಕಿಬಿದ್ದು ನಿನ್ನೆಯ ಸ್ಟೀಮರಿನಲ್ಲಿ ಮುಂಬಯಿಗೆ ಕಳುಹಿಸಲ್ಪಟ್ಟಿರುತ್ತಾನೆ.

ಇಲ್ಲಿಗೆ ಕಲೆಕ್ಟರರಾಗಿ ವರ್ಗಹೊಂದಿದ ರಾವಬಹದ್ದೂರ ಯು. ರಾಮರಾಯರು ನಿನ್ನೆ ಸಾಯಂಕಾಲ ಮಿ. ಎಲ್ಲಿಸರಿಂದ ಚಾರ್ಜು ವಹಿಸಿಕೊಂಡರು.

ಮಂಗಳೂರು ಕೋ-ಒಪರೇಟಿವ್ ಸ್ಟೋರು.

ವರ್ಷಾವಧಿ ಮಹಾಸಭೆ.

ಈ ಸ್ಟೋರಿನ ವರ್ಷಾವಧಿ ಮಹಾಸಭೆಯು ತಾ. ೧೦-೧೦-'೨೦ ನೇ ಆದಿತ್ಯವಾರ ಮಧ್ಯಾಹ್ನ ೩ ಘಂಟೆಗೆ ಸದರಿ ಸ್ಟೋರಿನ ಆಫೀಸಿನಲ್ಲಿ ಜರಗುವದು. ಎಲ್ಲಾ ಮೆಂಬರರು ದಯವಿಟ್ಟು ಬರಬೇಕಾಗಿಯೂ, ಈ ಸ್ಟೋರಿಗೆ ಮೆಂಬರರಾಗಿ ಸೇರಿದ ಎಲ್ಲಾ ಸಹಕಾರಿಸ್ಟೋರುಗಳು ಮತ್ತು ಸಂಘಗಳು ತಂತಮ್ಮ ಆಡಳಿತೆಯ ಸಭೆಯಲ್ಲಿ ಒಬ್ಬ ಪ್ರತಿನಿಧಿಯನ್ನು ಚುನಾಯಿಸಿ ಮೇಲ್ಕಂಡ ಮಹಾಸಭೆಗೆ ಕಳುಹಿಸಬೇಕಾಗಿಯೂ ವಿನಂತಿ.

ತಾ. 28 – 9 – '20) ಬೈಂದೂರ ಆನಂದ ರಾವ್,
ಮಂಗಳೂರು,) ಸೆಕ್ರೆಟರಿ.

[illegible]

... ಪ್ರಯತ್ನಿಸಬೇಕು. ಸರಕಾರದ ಸಹಾಯ ಹೊಂದುವ ಶಾಲೆಗಳಲ್ಲಿ ಕಲಿಯುವ ವಿದ್ಯಾರ್ಥಿಗಳನ್ನು ಶಾಲೆಯಿಂದ ಬಿಡಿಸುವುದು ಸುಲಭ ... ಈ ವಿಷಯದಲ್ಲಿ ಸಮಾಧಾನ ಪಟ್ಟಿದ್ದಾರೆ, ಮತ್ತು ... ಈ ಕುರಿತು ಆಲೋಚನೆ ಮಾಡಲಿಕ್ಕೆ ಅರ್ಹರಿದ್ದಾರೆ. ... ವಿದ್ಯಾಭ್ಯಾಸದಿಂದ ಯಾವ ಸರಕಾರಿ ಉದ್ಯೋಗವನ್ನು ಹೊಂದ ... ತರುಣರು ತವಕಪಡುತ್ತಾರೋ ಅಂಥಾ ಉದ್ಯೋಗವನ್ನು ಪಡೆಯದ ... ಬರುವ ಬಾಧಕವು ಸ್ವರಾಜ್ಯವನ್ನು ಬೇಗನೆ ಪಡೆಯುವದರಿಂದ ... ಈಗಿನ ಶಾಲೆಗಳನ್ನು ಬಹಿಷ್ಕರಿಸಿ ಹೊಸ ರಾಷ್ಟ್ರೀಯ ಶಾಲೆಗಳ ಬಗ್ಗೆ ಅಗ್ರಹವುಂಟಾಗುವಂತೆಯೂ ಯತ್ನಿಸುವುದಲ್ಲದೆ ಈ ವಿಷಯದಲ್ಲಿ ಹದಿನೆಂಟೂ ೧೮ ವರ್ಷದ ಯುವಕರಿಗೂ ... ಯಾಗುವಂತೆ ಮಾಡಬೇಕು. ಈ ವರೆಗೆ ತಮ್ಮ ವಿರಾಮ ಕಾಲದಲ್ಲಿ ಮಾತ್ರ ರಾಜಕೀಯ ವಿಷಯಗಳನ್ನು ಎತ್ತಿಕೊಳ್ಳುತ್ತಿದ್ದ ವಕೀಲರು ಈಗ ತಮ್ಮ ವಕೀಲ ವೃತ್ತಿಗೆ ತಿಲಾಂಜಲಿಕೊಟ್ಟು ತಮ್ಮ ಸಂಪೂರ್ಣ ಸಮಯವನ್ನು ಈ ವಿಷಯಕ್ಕೆ ಕೊಡಬೇಕು. ಸಾಧ್ಯವಿದ್ದಷ್ಟು ಸಿವಿಲ್ ಕ್ರಿಮಿನಲ್ ಮೊಕದ್ದಮೆಗಳನ್ನು ರಾಜಿಯಿಂದ ಮತ್ತು ಪಂಚಾಯತಿಕೆಯಿಂದಲೇ ಇತ್ಯರ್ಥಿಸಬೇಕು. ಇಂಥ ಪಂಚಾಯತಿಕೆಯ ತೀರ್ಪುಗಳನ್ನು ಉಲ್ಲಂಘಿಸುವವರಿಗೆ ಒಂದು ಬಗೆಯ ಬಹಿಷ್ಕಾರವನ್ನು ಜನರು ಹಾಕಬೇಕು.

ಕೌನ್ಸಿಲುಗಳಿಗೆ ಬಹಿಷ್ಕಾರ ಹಾಕುವಂಥಾದ್ದು ಅತ್ಯಾವಶ್ಯಕವಿದಕ್ಕೆ ಬೇಗನೇ ಪ್ರಯತ್ನಗಳು ನಡೆಯಬೇಕು. ಪರರಾಜ್ಯಗಳ ವಸ್ತ್ರ ಒಡವೆಗಳ ಮೇಲೆ ಬಹಿಷ್ಕಾರ ಹಾಕಬೇಕೆಂಬ ಠರಾವು ಬಹಳ ಕಷ್ಟತರದ್ದು ಮತ್ತು ಅದನ್ನು ಸಂಪೂರ್ಣ ಜಾರಿಗೆ ತರಲೂ ಸಾಧ್ಯವಿಲ್ಲ. ಅಂಥಾ ಠರಾವನ್ನು ಮಂಜೂರಮಾಡಲೇ ಬಾರದಿತ್ತು. ಈಗ ಒಪ್ಪಿಕೊಂಡ ಮೇಲೆ ಅದಕ್ಕೆ ಮಟ್ಟಿಗೆ ನಾವು ಅನ್ಯ ದೇಶಗಳ ವಸ್ತುಗಳಿಂದ ಉಪಜೀವನ ಸಾಗಿಸುವುದನ್ನು ಕಡಿಮೆಮಾಡಿಕೊಳ್ಳಲು ಯತ್ನಿಸಬೇಕು. ಕೈಮಗ್ಗಗಳ ಪ್ರಚಾರವು ಎಲ್ಲೆಲ್ಲಿಯೂ ಬರುವಂತೆ ಮಾಡಿ ಬೀದಿಬೀದಿ ಮನೆಮನೆಗಳಲ್ಲಿ ಅವುಗಳ ನೇಯಿಗೆ ಕೆಲಸವನ್ನು ಕಲಿಸಬೇಕು. ಕೊಂಗ್ರೆಸ ಕಮಿಟಿಗಳು ಎಲ್ಲಾ ಕಡೆಗಳಲ್ಲಿ ಚಂದಾಎತ್ತಿ ದ್ರವ್ಯಸಂಚಯಮಾಡಿಟ್ಟು ಅದರ ಮೂಲಕ ಈ ರಾಷ್ಟ್ರೀಯ ಸಭೆಯ ಠರಾವುಗಳ ಜಾರಿ ನಡೆಯುವಂತೆ ಉಮೇದ್ವಾರರು ಸ್ವಯಂಸೇವಕರು ಮುಂತಾದವರನ್ನು ನೇಮಿಸಿ ಈ ತತ್ವಗಳ ಪ್ರಚಾರ ಮಾಡಬೇಕು ಎಂದು ದುಂಡಾಗಿ ಈ ಸಬ್ ಕಮಿಟಿಯವರು ರಿಪೋರ್ಟು ಮಾಡಿರುವರು.

ಶ್ರೀ ಕಾಶೀಮಠ ಸಂಸ್ಥಾನ

ಗೌಡ ಸಾರಸ್ವತ ಬ್ರಾಹ್ಮಣ ಶ್ರೀ ಸಂಸ್ಥಾನ ಕಾಶೀ ಮಠದ ಗುರುಗಳಾದ ಶ್ರೀಮತ್ ಸುಕೃತೀಂದ್ರ ತೀರ್ಥ ಶ್ರೀಪಾದಂಗಳವರು ಮಂಗಳೂರ ಶಿಷ್ಯ ವರ್ಗದ ಅಗ್ರಹದ ಮೇರೆಗೆ ಈ ವರುಷದ ಚಾತುರ್ಮಾಸವನ್ನು ಇಲ್ಲಿ ಕಳೆದರು. ಇದೇ ಕಳೆದ ಭಾದ್ರಪದ ೬ ೧ನೇ ಚಂದ್ರವಾರ ಸಿಮೋಲ್ಲಂಘನ ಮಾಡಿ, ಪಟ್ಟಣದಲ್ಲಿ ದಿಗ್ವಿಜಯ ಉತ್ಸವವನ್ನು ಸಹ ಬೆಳಸಿ ... ಈ ಉತ್ಸವವು ಮೊದಲನೇ ದಿನ ಪೂರ್ತಿ ಹೊಂದದೆ ಎರಡು ಮೂರು ... ನಡೆಯಿತು. ಸ್ವಜಾತಿ ಗೃಹಸ್ಥರು ತಮ್ಮತಮ್ಮ ಅಂಗಡಿ ಮನೆಗಳನ್ನು ಶೃಂಗರಿಸಿ ಮಠದಲ್ಲಿ ನಡೆದ ಬ್ರಾಹ್ಮಣಸಂತರ್ಪಣೆಗೂ ರಾತ್ರಿಯ ಉತ್ಸವಕ್ಕೂ ಕೂಡಿಬಂದಿದ್ದರು. ಅಂತೂ ಉತ್ಸವವು ಎರಡು ದಿನವೂ ಬಹಳ ವಿಜೃಂಭಣೆಯಿಂದಲೇ ಸಾಗಿತು. ಉತ್ಸವವು ಮರಳಿ ತಲ್ಪುತ್ತಲೇ ಶ್ರೀಪಾದಂಗಳವರ ಇಷ್ಟದೇವತೆಯಾದ ಶ್ರೀ ವ್ಯಾಸರಘುಪತಿದೇವರ ಪೂಜೆ ನಡೆಯಿತು. ನಂತರ ಶ್ರೀ ಪಾದಂಗಳವರು ಶಿಷ್ಯವರ್ಗದವರಿಗೆ ಉತ್ತರೋತ್ತರ ಅಭಿವೃದ್ಧಿಯನ್ನು ಬಯಸಿ, ನೆರೆದ ಶಿಷ್ಯರಿಗೆ ಫಲ ಮಂತ್ರಾಕ್ಷತೆಗಳನ್ನು ಇತ್ತರು.

ಬಳಿಕ ಮ. ರಾ। ಉಳ್ಳಾಲ ವೆಂಕಟರಾಯ ಶೆಣೈಗಳು ತಾವು ಮ। ರಾ। ಗಣೇಶ ಶ್ರೀನಿವಾಸಪ್ಪೈಗಳವರೊಡನೆ ಶ್ರೀಮಠದ ಆಡಳಿತೆಯನ್ನು ವಹಿಸಿಕೊಂಡು ನಡಿಸಿದ ಆಡಳಿತೆಯ ಕುರಿತು ವಿವರಿಸಿ ಹೇಳಿದರು. ಶ್ರೀ ಸಂಸ್ಥಾನಕ್ಕೆ ಸಂಬಂಧಪಟ್ಟ ಮಠಗಳ ಜೀರ್ಣೋದ್ಧಾರದ ಕುರಿತು ವಿವರವಾಗಿ ಪ್ರಸ್ತಾಪಿಸಿ ಇಲ್ಲಿಯ ಸಪ್ತಾಹಿಕ ವೃತ್ತಾಂತ ಪತ್ರಿಕೆಗಳಲ್ಲಿ ಪ್ರಕಟವಾದಂತೆಗೆ ವಿವರಗಳು ಮತ್ತು ಈ ವರೆಗೆ ವಾಗ್ದಾನ ಮಾಡಿದ ಯೂ ವಸೂಲಾದ ಮೊಬಲಗಿನ ತಪಸೀಲನ್ನು ತಿಳಿಸಿದರು. ಮುಂಬಾಯಿಯಲ್ಲಿದ್ದ ವಾಲ್ಕೇಶ್ವರ ಮಠದ ಜೀರ್ಣೋದ್ಧಾರದ ಬಗ್ಗೆ ರೂ ೨೫,೦೦೦ ರಾಮೇಶ್ವರ ಮಠದ ಕೊರಪ್ಪ್ರಾಕಾರದಲ್ಲಿರುವ ಶ್ರೀ ಕೋದಂಡರಾಮ ದೇವಸ್ಥಾನದ ಬಗ್ಗೆ ರೂ ೧೫,೦೦೦ ವಿನಿಯೋಗಿಸಬೇಕಾಗಿ ಆದ ತಮ್ಮ ಆಡಳಿತೆಯ ಎಸ್ಟಾಬ್ಲಿ ಬೋರ್ಡಿನ ಸೂಚನೆಯನ್ನು ನೆರದವರ ಮುಂದಿಟ್ಟರು. ಇದಲ್ಲದೆ ಇನ್ನೂ ಮಠಗಳ ಜೀರ್ಣೋದ್ಧಾರದ ಬಗ್ಗೆ ಹೆಚ್ಚಿನ ಹಣವು ಅಗತ್ಯ ಇರುವುದರಿಂದ ವಾಗ್ದಾನ ಮಾಡಿದವರು ತಮ್ಮ ವಂತಿಗೆಯನ್ನು ಬೇಗನೇ ಕೊಡಬೇಕಾಗಿಯೂ ಮತ್ತು ಇನ್ನೂ ಕೊಡಲಿಕ್ಕಿರುವವರು ತಮ್ಮ ಶಕ್ತ್ಯಾನುಸಾರ ಧನವನ್ನು ಸ್ವಯಿರ್ದಲ್ಲಿ ಕೊಟ್ಟು ಈ ಪುಣ್ಯಕಾರ್ಯವನ್ನು ನೆರವೇರಿಸಬೇಕಾಗಿಯೂ ಸೂಚಿಸಿದರು. ಮಠದಲ್ಲಿ ಈಗ ಮಂಗಳೂರ ಪ್ರಸಿದ್ಧ ಶ್ರೀ ಚಿದಂಬರ ಶ್ರೀನಿವಾಸ ಆಚಾರ್ಯರ ಸಂಸ್ಕೃತ ಪಾಠಗಳು ನಡಿಯುತ್ತಿರುವದೆಂಬುದನ್ನು ಸಹ ತಿಳಿಸಿ ತಮ್ಮ ಭಾಷಣವನ್ನು ಕೊನೆಗೊಳಿಸಿದರು.

ನಂತರ ಮ। ರಾ। ಗಣೇಶ ಶ್ರೀನಿವಾಸಪ್ಪೈಗಳು ತಾವು ಕೈಕೊಂಡ ಆಡಳಿತೆಯಲ್ಲಿ ಜಾತಿಬಾಂಧವರೆಲ್ಲರೂ ಸಹಾಯಮಾಡಬೇಕೆಂದು ವಿಜ್ಞಾಪಿಸಿ ದಿಗ್ವಿಜಯದ ಉತ್ಸವ ಮತ್ತು ಸಮಾರಾಧನೆ ಮುಂತಾದವುಗಳಲ್ಲಿ ಉತ್ಸಾಹ ತೋರಿಸಿದ ಗೃಹಸ್ಥರನ್ನು ಯುವಕರನ್ನು ಕೊಂಡಾಡಿ, ಇವರ ಮೇಲೆ ಶ್ರೀ ಪಾದಂಗಳವರ ಆಶೀರ್ವಾದಗಳನ್ನು ಬಯಸಿದರು.

[illegible] ... ಕರ್ತವ್ಯವನ್ನು ಪೂರೈಸಿದರೆಂಬುದು ... ಆದರೆ ... ನಮ್ಮ ಜಿಲ್ಲೆಯು ಪ್ರಥಾರ್ಥಾಯಿತೆಂದು ಹೇಳಲು ಬರುವದಿಲ್ಲ. ಮುಖಾಮುಖಿ ನಮ್ಮಲ್ಲಿಯ ವರೆಗೆ ಬಂದು ಹೋದರೂ ನಮ್ಮ ನಿದ್ರೆಯು ಇನ್ನೂ ನಮ್ಮನ್ನು ಬಿಟ್ಟು ಹೋದಂತೆ ತೋರುವದಿಲ್ಲ. ಇಡೀ ಲೋಕವ ನಡುಗುತ್ತಿರುವ ಈ ದಿನಗಳಲ್ಲಿ ... ಹೀಗಿರುವುದು ಸರಿಯಲ್ಲ.

ಕಾಂಗ್ರೆಸು ಅಸಹಕಾರದ ಠರಾವನ್ನು ಪಾಸುಮಾಡಿತೆಂದು ಪತ್ರಿಕೆಗಳನ್ನು ಓದುವವರೆಲ್ಲರೂ ತಿಳಿದಿರುವರು. ಕಾಂಗ್ರೆಸಿನ ಸಬ್ಜೆಕ್ಟ ಕಮಿಟಿಯಲ್ಲಿ ನಮ್ಮ ಜಿಲ್ಲೆಯ ಪ್ರತಿನಿಧಿಗಳಿಬ್ಬರೂ ಇದ್ದರೆಂದು ಅನೇಕರಿಗೆ ಗೊತ್ತಿರಬಹುದು. ಕಾಂಗ್ರೆಸು ತೀರ್ಮಾನಿಸಿದಂತೆ ಅಸಹಕಾರವನ್ನು ನಾವು ಕೈಕೊಳ್ಳಬೇಕೇ? ಹಾಗಿದ್ದರೆ ನಾವು ಈಗ ಮೊದಲಾಗಿ ಏನೆಲ್ಲ ಮಾಡಬೇಕು ಎಂಬುದನ್ನು ಕುರಿತು ಸ್ವಲ್ಪ ಯೋಚಿಸುವುದು ಅಗತ್ಯವಿದೆ.

ಲೋಕದಲ್ಲಿ ಏನು ನಡೆಯುತ್ತಿದೆ ಎಂದು ನಮ್ಮ ಜನರಿಗೆ ಗೊತ್ತಿಲ್ಲದಿರುವುದೇ ನಮ್ಮ ನಿದ್ರೆ—ಇದನ್ನು ಮೊದಲಾಗಿ ಕಳೆಯಬೇಕು. ನಮ್ಮ ಜಿಲ್ಲೆಯಲ್ಲಿ ಆರು ತಾಲೂಕುಗಳಿವೆ. ಮಂಗಳೂರು, ಉಡುಪಿ, ಕುಂದಾಪುರ, ಕಾರ್ಕಳ, ಕಾಸರಗೋಡು ಮತ್ತು ಪುತ್ತೂರು. ಈ ಆರು ಮುಖ್ಯ ಊರುಗಳಲ್ಲಿಯ ಕೆಲವು ಮಂದಿ ವಿದ್ಯಾವಂತರಾದರೂ ಮುಂದೆ ಬಂದು ಅಲ್ಲಿಯ ಜನರ ಸಭೆಗಳನ್ನು ಸೇರಿಸಿ ಅವರ ಮುಂದೆ ಇದ್ದ ಸಂಗತಿಗಳನ್ನು ಇಂಗಡಿಸ್ಬೇಕು. ಪ್ರತಿ ಗ್ರಾಮಗಳಲ್ಲಿ ಇಂಥ ಸಭೆಗಳನ್ನು ಸೇರಿಸುವುದಿದ್ದರೆ ಬಹಳ ಉತ್ತಮ. ಈ ಗ್ರಾಮದ ಸಭಿಕರು ತಮ್ಮ ಪ್ರತಿನಿಧಿಗಳನ್ನು ಆಯಾ ತಾಲೂಕಿನ ಮುಖ್ಯ ಪಟ್ಟಣಗಳ ಸಭೆಗಳಿಗೆ ಕಳುಹಿಸಬೇಕು. ಈ ಮುಖ್ಯ ಪಟ್ಟಣಗಳ ಸಭಿಕರ ಪ್ರತಿನಿಧಿಗಳಿಂದ ಕೂಡಿದ, ಇಡೀ ಜಿಲ್ಲೆಯ ಅಭಿಪ್ರಾಯವನ್ನು ಕೊಡುವ ಒಂದು ಸಭೆಯು ಆಗತಕ್ಕದ್ದು. ಇದು ಜಿಲ್ಲೆಯ ಮುಖ್ಯ ಪಟ್ಟಣವಾದ ಮಂಗಳೂರಲ್ಲಿರಬಹುದು.

ನಮ್ಮ ಜಿಲ್ಲೆಯು ಅಸಹಕಾರ ತತ್ವವನ್ನು ಸ್ವೀಕರಿಸಲೇ ಬೇಕೆಂದಲ್ಲ. ಆದರೆ ಅದನ್ನು ಕುರಿತು ಸ್ವಲ್ಪವಾದರೂ ಯೋಚಿಸುವುದು ಅತ್ಯಗತ್ಯವಿದೆ. ಅದಕ್ಕೆ ಅಂಥ ಸಭೆಗಳನ್ನು ಸೇರಿಸುವುದು ಮೊದಲನೆಯ ಕೆಲಸ. ಇಷ್ಟನ್ನಾದರೂ ನಾವು ಮಾಡದಿದ್ದರೆ ನಮ್ಮ ನಿದ್ರೆಯು ಇನ್ನೂ ನಮ್ಮನ್ನು ಬಿಟ್ಟಿಲ್ಲವೆನ್ನಬಹುದು. ನಮ್ಮ ಜಿಲ್ಲೆಯ ವಿದ್ಯಾವಂತರೂ ಕೂಡಾ ಇನ್ನೂ ತಮ್ಮ ಕರ್ತವ್ಯವನ್ನು ತಿಳಿದುಕೊಂಡಿಲ್ಲವೆ? ಅಸಹಕಾರ ತತ್ವವನ್ನು ಸ್ವೀಕರಿಸಿ ತಮ್ಮ ಅಸ್ವಾರ್ಥ ಬುದ್ಧಿಯನ್ನು ತೋರಿಸಿದ ಮಹನೀಯರಾದರೂ ಮುಂದೆ ಬಂಬಾರದೇ? ಶ್ರೀಯುತ ಕಾರ್ನಾಡ ಸದಾಶಿವರಾಯರಂತಹ ಸದ್ಗೃಹಸ್ಥರು ಇಂಥ ಸಭೆಗಳನ್ನು ಸೇರಿಸಲು ಯತ್ನಿಸಬೇಕಾಗಿ ನನ್ನ ಸವಿನಯ ವಿಜ್ಞಾಪನೆ.

ಪಟ್ಟಣಿಗ

ಸ್ವದೇಶಾಭಿಮಾನಿ ಪತ್ರಾಧಿಪರೇ

ತಮ್ಮ ತಾ ೨೪ನೇ ಸಾಂಚಿಕೆ ಪತ್ರದಲ್ಲಿ ರಾ। ಎಮ್। ಸಿ ಮುಮ್ಮಿಯವರು ಮದ್ರಾಸ್ ನ್ಯಾಯವಿಧಾಯಕ ಸಭೆಗೆ ಮೆಂಬರನಾಗಿ ನಿಲ್ಲುತ್ತಾರೆಂತಲೂ ೮ ರೀರವ ಪತ್ರದಲ್ಲಿ ನಿಲೇಶ್ವರ ಪಟೇಲ್ ಮುಹಮ್ಮದೆಯರು ನಿಲ್ಲುತ್ತಾರೆಂತಲೂ ಕಾಣುತ್ತದೆ. ಈಗ ಆ ಪ್ರಕಾರ ಇವರಿಬ್ಬರೂ ನಿಲ್ಲುವದಿಲ್ಲವೆಂತಲೂ ಮ। ರಾ। ರಾ। ಮುಹಮ್ಮದ್ ಬೆಮ್ನಾಡ್ ಸಾಹೇಬರು ಎಲ್ಲವರಲ್ಲಿಯೂ ಸದರಿ ಮೆಂಬರಿಕೆಗೆ ಯೋಗ್ಯವಾದವರಾದ್ದರಿಂದ ಸದರಿಯವರು ನಿಲ್ಲುವುದಾದರೆ ನಮ್ಮೆಲ್ಲರಿಗೂ ಅದು ಸಮ್ಮತವೆಂತಲೂ ಪ್ರಕಟಿಸಬೇಕಾಗಿ ಅಪೇಕ್ಷಿಸುತ್ತೇನೆ.

ಇತಿ ಮುಹಮ್ಮದಿಯರಲ್ಲೊಬ್ಬ

ಅಯ್ಯಾ

ಈ ವರ್ಷ ಜಿಲ್ಲೆಯ ಮುಖ್ಯ ಹಳ್ಳಿಗಳಿಗೆ ಬೇಕಾದ ಸಂಕಗಳು ಎಲ್ಲೆಲ್ಲಿ ಬೇಕಾಗಿವೆ ಎಂದು ಗವರ್ನಮೆಂಟಿನವರು ಕೇಳಿರುವಂತೆ—ಇನ್ನದಲ್ಲಿ ದಾಸ್ಕಟ್ಟೆ ಎಂಬ ಹೊಳೆಗೆ ಸಂಕ ಅಗತ್ಯವೆಂದು ಪ್ರೆಸಿಡೆಂಟರು ೧೯೧೭ನೇ ಇಸವಿ ನವಂಬರ ಮೂಲಕ ಡಿಸ್ಟ್ರಿಕ್ಟ ಬೋರ್ಡ ವರ್ತಮಾನ ... ಸಂಕ ಅಗತ್ಯವೆಂದೂ ತತ್ಕಾಲ ಹಣವಿಲ್ಲವೆಂದೂ ಪ್ರೊಸಿಡಿಂಗ್ಸ ಮಾಡಿದ್ದು ಈ ಪ್ರೆಸಿಡೆಂಟರವರಿಗೆ ನೆನಪಿರಬಹುದಾಗಿಯೂ ಈ ವರ್ಷವಾದರೂ ಸದರಿ ಬೋರ್ಡಿನವರು ಸದರಿ ಸಂಕ ಮಂಜೂರು ಮಾಡಬೇಕಾಗಿ ತಮ್ಮ ಪತ್ರಿಕೆ ಮೂಲಕ ಕೇಳಿಕೊಳ್ಳುತ್ತೇನೆ.

ಗ್ರಾಮಸ್ಥರಲ್ಲೊಬ್ಬ

ಸ್ವಾಮಿ

ದಕ್ಷಿಣಕನ್ನಡಾ ಜಿಲ್ಲಾ ಬೋರ್ಡ ಪ್ರೆಸಿಡೆಂಟರ ಹುಕುಮ ಮೇರೆಗೆ ಈ ಜಿಲ್ಲಾ ಬೋರ್ಡ ಶಾಲೆಯ ಉಪಾಧ್ಯಾಯರುಗಳು ಒಂದು ಡೆಪುಟೇಶನ್ ಮುಖಾಂತರ ತಮ್ಮ ಹಾಲವಾಲಿಗಳನ್ನು ಸಲರಿ ಸಬ್ ಕಮಿಟಿಯ ಮೆಂಬರರಿಗೆ ತಂದು ಗವರ್ನಮೆಂಟು ನೌಕರರಿಗೆ ಮಂಜೂರು ಆದ ಪ್ರಕಾರವೇ ಈ ಶಾಲಾ ಉಪಾಧ್ಯಾಯರುಗಳಿಗೆ ಸಹಾ ಬತ್ತ ಕೊಡಬೇಕಾಗಿ (Local Allowance) ಕೇಳಿಕೊಂಡರು. ಈ ಬಗ್ಗೆ ಆಗುವ ಖರ್ಚಿನ ಪೈಕಿ ಈಗ ಬೇಕಾಗುವ ಹಣವನ್ನು ಪ್ರತಿ ಒಬ್ಬನಿಗೆ ಕಳೆದ ಎಪ್ರೀಲಿನಿಂದ ತಿಂಗಳು ೧೦ ರೂ ೪ ನಾಲ್ಕುರ ದರದಲ್ಲಿ ಕೂಡಲೇ ಹಂಚುತ್ತೇವೆಂತಲೂ ಸದರಿ ಗವರ್ನಮೆಂಟು ಹುಕುಮಿನಂತೆ ಕೊಡಲು ಕಡಿಮೆ ಬೀಳುವ ಹಣವನ್ನು ಸದ್ಯದಲ್ಲೇ ಒದಗಿಸಿ ಕೊಡುತ್ತೇವೆಂತಲೂ ಬೋರ್ಡಿನವರು ತಿಳಿಸಿರುತ್ತಾರೆ.

ಅಯ್ಯಾ ಪತ್ರಾಧಿಪತೇ!

ಕೊಲ್ಲನೊಗ್ಗು, ಹಂಚಿನ ಪಲ್ಲತಡ್ಕ, ಬಾಳುಗೋಡು, ಕಲ್ಮಕಾರು, ಈ ಗ್ರಾಮಗಳಿಗೆ ಸೇರಿದವುಗಳಿಗಿದ್ದ ಈಗ ನಾಲ್ಕೂರು ಶಿರಿಭಾಗ್ಯ ಕೇಲಾರುವಲೆ, ಬ್ಲೋಕುಗಳೊಳಗಿರುವ ಕೆಲವು ಭೂಮಿಗಳು ಪೂರ್ವಕಾಲದಲ್ಲಿ ಬೇಸಾಯವಾಗುತ್ತಿದ್ದು ಮಧ್ಯಕಾಲದಲ್ಲಿ ಅಂದರೆ ಮೇಲೆ ತೋರಿಸಿದ ಬ್ಲೋಕುಗಳ ಸೆಟ್ಲಮೆಂಟು ಆಗುವ ಮೊದಲು ಸಾಗುವಳಿ ಮಾಡಲು ಜನರಿಲ್ಲದೆ ಹೋದ್ದರಿಂದ ವಾರೀಸುದಾರರಿಲ್ಲದ ಸದರಿ ಆಸ್ತಿಗಳನ್ನು ರಿಜರ್ವ ಸ್ಥಳವಾಗಿರುವದರ ಬದಲಾಗಿ ಇಂಗ್ಲೀ ಸೆಟ್ಲಮೆಂಟು ಸಮಯ ಅವುಗಳನ್ನು ಸುರಕ್ಷಿತ ಪಡಿಸಿದ ಕಾಡಾಗಿ ಮಾಡಿರುವರು. ಹೊಟ್ಟೆಗಿಲ್ಲದೆ ಬಳಲುವ ಈ ಕಾಲದಲ್ಲಿ ಬಡ ಜನರ ಜೀವನಕ್ಕಾಗಿ ಎಷ್ಟೋ ಸವಲತ್ತುಗಳನ್ನುಂಟು ಮಾಡುತ್ತಿರುವ ದಯಾಳುಗಳಾದ ಮಾನ್ಯ ಕಲೆಕ್ಟರ್ ದೊರೆಗಳವರು ಗಮನಕೊಟ್ಟು ಸದರಿ ಭೂಮಿಗಳನ್ನು ಆಯಾಯ ಸುರಕ್ಷಿತ ಪಡಿಸಿದ ಕಾಡುಗಳಿಂದ ವಿರಹಿತ ಪಡಿಸಿ ದರ್ಖಾಸ್ತಿಗೆ ಕೊಡಿಸುವರೆ ಎಷ್ಟೋ ಗರೀಬ [illegible]

[illegible]

... ಯಂದರೇ ... ಅನುಭವ ... ಮತ್ತಳಿಕ ... (ರೆವಿನ್ಯು ...) ... ಆತ್ಮ ... ಯುದಾಗ ... ಎಂಬದಾಗಿ ... ಬಹುಮುಖ್ಯವಾದುದಾಗಿ ... ಭೋಗರಿಗೆ ಇರುವ ಉದ್ಯೋಗ ಪ್ರಕಾರ ಅಧಿಕಾರ ... ಸಂಗತಿಗಳಲ್ಲಿ ಭೇದ ತೋರಿಸಲಾಗದೆ, ... ದರ ಸಂಗದ ಕೋರಿಕೆ ನೋಡಿದರೆ ಈಗೀಗಲೇ ಹೆಚ್ಚಿನ ... ಕೂಡಿಸಲ್ಪಟ್ಟ ಕೆಲಸ ಹೆಚ್ಚಿಸದ್ದು ಎನಿಸಿದರೆ ಪ್ರಾಕೃತ ಮರ್ಯಾದೆಕ್ಕಿಂತ ಎಷ್ಟೋ ಹೆಚ್ಚು ಮರ್ಯಾದೆಯಿಂದ ನಡೆಸುವುದು ಸರಕಾರದ ನ್ಯಾಯ ಎಂದು ತಿಳಕೊಳ್ಳಬೇಕಾಗುವಲ್ಲಿ ಈಗಿನ ಮೇಲ್ ನೌಕರರು ಮಾತ್ರ ಮೊದಲಿನ ಮರ್ಯಾದೆಗಳ ಪೈಕಿ ಬಹುವಚನದ ಒಂದು ಮರ್ಯಾದೆ ಮಾತ್ರ ಇಟ್ಟು ಬಾಕಿ ಮರ್ಯಾದೆಗಳೆಲ್ಲಾ ದಿಕ್ಕಾಪಾಲಾಗಿ ಮಾಡಿ ಬಿಟ್ಟಿದ್ದಾರೆ. ಈ ರೀತಿ ಮಾಡಿದಕ್ಕೆ ಕಾರಣ ಏನೆಂತ ವಿಚಾರ ಮಾಡಿದ್ದಲ್ಲಿ ನಮಗೆ ಹೇಗೆ ಬರೆದರೂ ನಡಿಸಿದರೂ ಕೇಳುವರೇ ಇಲ್ಲ ಎಂತ ತಿಳಿಯಬಹುದು. ಅಗ್ಗವ ಈಗಿನ ಕೂಡ ಒಂದೇ ಇಂಗ್ಲಿಷ್ ಸರಕಾರವಲ್ಲವೇ?

ಮರ್ಯಾದೆ ಸಂಗತಿ ಮಾತ್ರವಲ್ಲ, ಮೇಲ್ ಆಫೀಸರರ ಸಂಗತಿಯಲ್ಲಿ ಒಬ್ಬ ಶ್ಯಾನಭೋಗನಿಗೆ ರೇವಿನ್ಯು ಇನ್ಸ್‌ಪೆಕ್ಟರ್, ಡಿಪ್ಟಿ ತಹಸಿಲ್ದಾರ್ ಮೇಜಿಸ್ಟ್ರೇಟ, ತಹಸಿಲ್ದಾರ್, ಲೆಂಡ್ ರಿಕಾರ್ಡ ಇನ್ಸ್‌ಪೆಕ್ಟರ್, ಡಿ. ರಿ. ತಹಸಿಲ್ದಾರ ಇಷ್ಟು ಜನರು ಶ್ಯಾನಭೋಗನ ಕೆಲಸದ ಮೇಲ್ತನಿಖೆ ಮಾಡುವವರು. ಇವರ ಪೈಕಿ ಒಬ್ಬರಿಗೆ ಶ್ಯಾನಭೋಗನ ಕೆಲಸ ಸಮರ್ಪಕವಾಗಿ ತೋರದಿದ್ದರೆ, ಶ್ಯಾನಭೋಗನು ಕೆಲಸಕ್ಕೆ ಯೋಗ್ಯನೂ ಅಲ್ಲ, ಕೆಲಸದ ಆಸೆಯೂ ಬೇಡ. ಇತ್ತೀಚಲಾಗಂತು ಇಂಗ್ಲಿ ಇಲಾಖೆಯವರೂ ಅಬ್ಕಾರಿ ಇಲಾಖೆಯವರೂ ಶ್ಯಾನಭೋಗನ ಮೇಲ್ ಆಫೀಸರರೊಳಗೆ ಸೇರಲಿಕ್ಕೆ ಪ್ರಾರಂಭಿಸಿದ್ದಾರೆ.

ಅಯ್ಯಾ! ನಾವೆಂಥಾ ಪಾಪಿಗಳು! ಲೋಕದಲ್ಲಿ ರಾಜಕೀಯ ಯಾ ಸಂಸಾರಿಕ ಸಂಗತಿಗಳಲ್ಲಿ ಅಂದರೆ ಒಂದು ಕಚೇರಿಯಲ್ಲಿ—ಒಬ್ಬ ಹೆಡ್ ಆಫೀಸರಗೆ, ಒಂದು ಶಾಲೆಯಲ್ಲಿ ಒಬ್ಬ ಹೆಡ್ ಮಾಸ್ತರಿಗೆ, ಒಂದು ಕುಟುಂಬದಲ್ಲಿ ಒಬ್ಬ ಯಜಮಾನಗೆ, ಹೆಂಡತಿಯು ಗಂಡಗೆ, ಈ ರೀತಿ ವಿಧೇಯರಾಗಿ ಕೆಲಸ ಮಾಡುವುದು ಕಾಬೇದಾರ ಜನರ ಧರ್ಮ, ಈ ಸೃಷ್ಟಿ ನಿಯಮವೇ. ಆದರೆ ಒಬ್ಬ ಶ್ಯಾನಭೋಗನು ಮಾತ್ರ ಎಷ್ಟು ಜನ ಮೇಲ್ ಆಫೀಸರರಿಗೆ ತೃಪ್ತಿಕರವಾದ ಕೆಲಸ ತೋರಿಸಬೇಕೆಂಬದೂ, ಎಷ್ಟು ಜನರಿಗೆ ವಿಧೇಯನಾಗಿ ನಡಕೊಳ್ಳಬೇಕೆಂಬದೂ ನೂತನ ಸೃಷ್ಟಿ ನಿಯಮವೇ ಆಗಿರಬಹುದು.

ಮೇಲೆ ಕಾಣಿಸಿದ ಮೇಲ್ಆಫೀಸರ ವಿನಹ ಆತನವಿರುದ ಇನ್ನೊಬ್ಬ ಆಫೀಸರು ಶ್ಯಾನಭಾಗನಿಗೆ ಇರುತ್ತಾರೆಂಬುದು ಆಶ್ಚರ್ಯವಾಗಿ ತೋರಬಹುದು. ಗ್ರಾಮ ಉದ್ಯೋಗಸ್ಥರ ಮನ್ನೆಲ್ ಪುಸ್ತಕದಲ್ಲಿ ಕಾಣುತ್ತದೆ. ಇವರೇ ಗ್ರಾಮದ ಪಟೇಲರು. ಸರಕಾರದಿಂದ ಪ್ರಕಟಿಸಲ್ಪಟ್ಟ ಪುಸ್ತಕದಲ್ಲಿ ಆ ರೀತಿ ಕಾಬೇದಾರ ಎಂತಿರುವುದರಿಂದ, ಕೆಲವು ಪಟೇಲರು ಶ್ಯಾನಭಾಗನ ಮೇಲೆ ದೂರಲಿಕ್ಕೆ ಆಸ್ಪದವಾಗಿದೆ. ಶ್ಯಾನಭಾಗನು ಪಟೇಲನ ಕಾಬೇದಾರನಾಗಿರುವುದು ಹಾದಾಚರ, ೨, ೩, ೪, ಗ್ರಾಮಗಳಿರುವ ಒಬ್ಬ ಶ್ಯಾನಭಾಗನಿಗೆ ಬಿಹಾಲ್ ಬರ್ತರಫ್ ಮಾಡುವುದೂ ... ಅಥವಾ ವಿಧಿಸುವುದೂ ಗದರಿಸುವುದೂ ಅವರ ಬುದ್ಧಿಗೆ ಮನಸ್ಸಿಗೆ ಬಂದಂತೆ ನಡಿಸುವ ಅಧಿಕಾರ ಇರುತ್ತಿದ್ದರೆ, ಮೇಲೆ ಕಾಣಿಸಿದ ... ಮೇಲ್ ಆಫೀಸರ ಅಗತ್ಯವೇ ಇರುತ್ತಿದ್ದಿಲ್ಲ. ಇಲ್ಲಿಯೂ ೨, ೩, ೪ ಪಟೇಲರ ಕಾಬೇದಾರನೆಂಬಾದರೆ, ನಮ್ಮಗತಿ ಎತ್ತ ಕಂಡರೂ ಕಷ್ಟವೆ ಸರಿ.

ಇದೇ ಅಗೋಸ್ತ ೧೩ನೇ ಸಾಂಚಿಕೆ ತಮ್ಮ ಪತ್ರದಲ್ಲಿ ಶ್ಯಾನಭಾಗ ಪಟೇಲರ ಕೋರುಸರತಗಳನ್ನು ಕುರಿತು ಉತ್ತ ಸಂಗತಿ ... ಶಿನ ಗ್ರಾಮ ಉದ್ಯೋಗಸ್ಥರ ... ಕಡೆಯುಂಡ ... [illegible] ... ಯನ್ನು ಯಾಕೆ ಅವರು ಮುಂದೆ ಹಾಕಲಿಲ್ಲ ಎಂದ ... ಆಶ್ಚರ್ಯಪಡುತ್ತೇನೆ.

ಪಟೇಲ ಜನರು ಗ್ರಾಮದಲ್ಲಿ ಪ್ರತಿಷ್ಠಿತರೂ ಗೌರವಾರ್ಹರೂ ಆಗಿರುವರೆಂಬುದು ಸರಿ, ಆದರೆ ಸರಕಾರಿ ಪುಸ್ತಕದ ಈ ರೀತಿ ... ಬಿಟ್ಟು ಗಂಟು ಹಾಕಿದ್ದು ಮಾತ್ರ ಸರಿಯಾದದ್ದಲ್ಲ.

ಅಯ್ಯಾ ಪತ್ರ ಸ್ವಲ್ಪ ದೀರ್ಘವಾಯಿತು ... ರದು ಮೇಲಿನ ಸಂಗತಿಗಳಿಗೆ ತಮ್ಮ ಪತ್ರ ವಾಚಕರಲ್ಲಿ ಯಾರಾದರೂ ತಮ್ಮ ಅಭಿಪ್ರಾಯ ವಿವರವಾಗಿ ತಿಳಿಸಿದರೆ, ಅದಕ್ಕೆ ... ಉತ್ತರ ಕೊಡುವದಕ್ಕೆ ಇನ್ನೊಂದು ಸಲ ತಮ್ಮ ಬಳಿಗೆ ಬರಲಿಕ್ಕಿದ್ದೇನೆ.

ಕುಂದಾಪುರ,
ತಾ 31-8-'20.

॥ ಶ್ರೀ ವ್ಯಾಸರಘುಪತೀಭ್ಯಾಂ ನಮಃ ॥
॥ ಶ್ರೀ ಗುರುಭ್ಯೋ ನಮಃ ॥

(ಕಳೆದ ಸಂಚಿಕೆಯಿಂದ ಮುಂದರಿದ್ದು)

ಶ್ರೀ ಸಂಸ್ಥಾನ ಕಾಶೀಮಠಕ್ಕೆ ಸಮ್ಮಂಧಪಟ್ಟ ಶ್ರೀ ರಾಮೇಶ್ವರ, ಕಾಶೀಶ್ವರ, ವ್ಯಾಸಾದಿ ಮಠಗಳ ಜೀರ್ಣೋದ್ಧಾರದ ಬಗ್ಗೆ ಶ್ರೀ ದೇವಸ್ಥಾನಗಳ ಭಂಡಾರದಿಂದ ಮತ್ತು ಶ್ರೀ ಸಂಸ್ಥಾನದ ಭಕ್ತರ ಜೋಳಿಗಳ ಸಮ್ಮಂಧದವರ ಪೈಕಿ ವಾಗ್ದಾನ ಮಾಡಿದ ವಂತಿಗೆ ವಿವರ ಮತ್ತು ತಾ. ೩೧—೮—೧೯೨೦ರ ವರೆಗೆ ವಸೂಲು ಬಂದ ಐವಜಿನ ಪಟ್ಟಿಯ ವಿವರ.

			ವಾಗ್ದಾನ ರೂ. ಆ.	ವಸೂಲು ರೂ. ಆ.
		ಕಳೆದ ಸಂಚಿಕೆಯ ಮುಂದುವರಿದ.	[illegible]—೦	[illegible]—೦
		ಬಂಟ್ವಾಳ ಪೇಟೆಯಿಂದ		
೭೬.	ರಾ|ರಾ|	ಗಣಪತಿ ಲಕ್ಷ್ಮಣ ಪೈ	೫—೦	೫—೦
೭೭.	,,	ಪದವಿನ ಪದ್ಮನಾಭ ಅನಂತ ಪೈ	೨—೦	೨—೦
೭೮.	,,	ಬಿ. ಗೋಪಾಲ ಪೈ	೪—೦	೪—೦
೭೯	,,	ಬಿ. ನಾರಾಯಣ ಶ್ಯಾನಭಾಗ	೨—೦	೨—೦
೮೦	,,	ಬಿ. ಸುಬ್ರಾಯ ಜನಾರ್ಧನ ಬಾಳಿಗ	೨೫—೦	೨೫—೦
೮೧.	,,	ಕಂದಾವರ ಸುಬ್ರಾಯ ಪ್ರಭು	೫—೦	೫—೦
೮೨.	,,	ಗುರುಪುರ ರಂಗ ಪ್ರಭು	೬—೪	೬—೪
೮೩	,,	ಗಣಪತಿ ನಾರಾಯಣ ಬಾಳಿಗ	೨—೦	೨—೦
೮೪	,,	ಗೊಂಡಿಕೊಡಿಪಟ್ಟ ಪ್ರಕಮ್ಮ ಕೊಗ್ಗ ಉಕಲಿ	೧೧—೦	೧೧—೦
೮೫	,,	ಭಾಡಿ ಲಕ್ಷ್ಮೀ ವೆಂಕಟ್ರ ಶ್ಯಾನಭಾಗ	೧೧—೦	
೮೬.	,,	ವಗ್ಗದ ಸ್ವರ ಪೈ	೧೧—೦	೧೧—೦
೮೭.	,,	ಮಿಜಾರು ನರಸಯ್ಯ ಪ್ರಭು	೯—೦	೯—೦
೮೮	,,	ಚಿತ್ರಾಪುರ ಶ್ರೀನಿವಾಸ ಪೈ	೫—೦	೫—೦
೮೯.	,,	ಬಸ್ತಿ ಕೃಷ್ಣಯ್ಯ ಶ್ಯಾನಭಾಗ	೨—೦	೨—೦
೯೦	,,	ಮಿಜಾರ ಮಂಜುನಾಥ ಭಂಡಾರಿ	೨—೦	೨—೦
೯೧.	,,	ತಿಮ್ಮಪ್ಪ ಭಕ್ತ	೧—೦	
೯೨	,,	ಮಾಧವ ಕಮ್ತಿ	೧೧—೦	೧೧—೦
೯೩	,,	ಪೈಲೋಡಿ ದೇವಯ್ಯ ಕಮ್ತಿ	೫—೪	೫—೪
೯೪	,,	ಹೊನ್ನಾವರ ವೆಂಕಟೇಶ ಪೈ	೫—೪	೫—೪
೯೫	,,	ಗಣಪತಿ ಕಮ್ತಿ ವ ಪುಂಡಲೀಕ ಕಮ್ತಿ	೨—೦	೨—೦
೯೬	,,	ಅಟ್ಟೂರ ಶ್ರೀನಿವಾಸ ಬಾಳಿಗ	೫—೦	೫—೦
೯೭.	,,	ವಗ್ಗದ ವಾಮನ ನಾಯಕ	೫—೦	೫—೦
೯೮	,,	ವೆಂಕಟ ಸುಬ್ಬರಾವ್	೪—೦	
೯೯	,,	ಪಕೀರ ವೆಂಕಟೇಶ ಪೈ	೫—೪	೫—೪
೧೦೦.	,,	ಗಣಪತಿ ಮಂಜುನಾಥ ಮಲ್ಯ	೫—೪	೫—೪
		ಜುಮ್ಲಾ ರೂಪಾಯಿ	[illegible]—೪	[illegible]—೪

(ಮುಂದರಿಯುವುದು)

ಉಳ್ಳಾಲ ವೆಂಕಟ್ರಾಯ ಗಣಪತಿ ಶೆಣೈ,
ಜನರಲ್ ಆಡಳಿತೆದಾರ,
ಶ್ರೀ ಕಾಶೀಮಠ ಸಂಸ್ಥಾನ

ಮಂಗಳೂರು,
ತಾ. 20-9-20

ಮುಂದಿನ ಖಾನೇಸುಮಾರೀ ಲೆಕ್ಕ.

೧೯೨೧ನೇ ಇಸವಿ ಮಾರ್ಚಿ ತಿಂಗಳ ೧೮ನೇ ತಾರೀಖಿನ ದಿನ ಇಂಡಿಯಾ ದೇಶದಲ್ಲಿ ೧೦ ವರ್ಷಕ್ಕೆ ಒಂದುಸಾರಿ ತೆಗೆಯುವಂಥ ೬ನೇ ಖಾನೇಸುಮಾರೀ ಲೆಕ್ಕವನ್ನು ತೆಗೆಯುವುದಕ್ಕೆ ತೀರ್ಮಾನವಾಗಿರುತ್ತದೆ

ಪ್ರಪಂಚದಲ್ಲಿರುವ ನಾಗರೀಕತೆಯುಳ್ಳ ಇತರ ದೇಶಗಳ ಸರಕಾರದವರು ಮಾಡುವಂತೆಯೇ ಇಂಡಿಯಾ ಸರಕಾರದವರೂ ಸಹ ೧೦ ವರ್ಷಕ್ಕೆ ಒಂದುಸಾರಿ ಪ್ರಜಾ ಗಣನೆಯನ್ನು ಮಾಡುವುದೂ, ಪ್ರತಿಯೊಬ್ಬರ ವಯಸ್ಸು, ಸ್ತ್ರೀ ಪುರುಷಭೇದ, ಮತ, ಜಾತಿ, ಭಾಷೆ, ಮತ್ತು ಉದ್ಯೋಗ ವಿಚಾರವಾಗಿ ಬರೆದಿಡುವುದೂ ಅವಶ್ಯಕವೆಂದು ತಿಳಿದಿರುವರು. ಈಗಿರುವ ಜನರ ಸ್ಥಿತಿಯನ್ನು ಅಂದಾಜು ಮಾಡಿ ತಿಳಿದ ಕೊಳ್ಳುವುದಕ್ಕೂ, ಅವರ ಧರ್ಮ ವಿಚಾರದಲ್ಲೂ, ಪ್ರಾಪಂಚಿಕ ವಿಚಾರದಲ್ಲೂ, ಕಳೆದ ಹತ್ತು ವರ್ಷಗಳಿಂದ ಆಗಿರುವ ಬದಲಾವಣೆಗಳನ್ನು ಎಚ್ಚರಿಕೆಯಿಂದ ನೋಡುವುದಕ್ಕೂ, ಜನರ ಉಪಯೋಗಕ್ಕೆ ತಕ್ಕ ನಿಬಂಧನೆಗಳನ್ನು ನಿರ್ಣಯಿಸುವುದಕ್ಕೂ ಈ ವಿಷಯಗಳನ್ನು ಪ್ರಕಟಿಸುವುದರಿಂದ ಅವುಗಳಲ್ಲಿ ವಸಿಸಿಟ್ಟಿರುವವರಿಗೆಲ್ಲಾ ಸಾಧ್ಯವಾಗುವುದೆಂದು ಸರಕಾರದವರು ನಂಬಿರುವರು

ಹಿಂದೆ ತೆಗೆದ ಖಾನೇಸುಮಾರೀ ಲೆಕ್ಕಗಳಲ್ಲಿ ಜನರ ಮತ ವಿಚಾರ, ಅವರಲ್ಲಿ ಪರಸ್ಪರವಿರುವ ಪಂಕ್ತಿಗಳ ಅವರ ಸಂಪ್ರದಾಯ ಮುಂತಾದ ವಿಷಯಗಳಿಗೆ ಸಂಬಂಧಪಟ್ಟ ಮನೋರಂಜಕವಾದ ಸಮಾಚಾರಗಳನ್ನು ಸಂಗ್ರಹಿಸಿ ಪ್ರಕಟಿಸುತಿತ್ತು. ಆದರೆ ಈ ಸಾರಿ ಸರಕಾರದವರು ಸಾಧ್ಯವಾದ ಮಟ್ಟಿಗೂ ಜನರ ಹೇಗೆ ಜೀವನ ಮಾಡುತ್ತಾರೋ, ಯಾವ ಯಾವ ಕಸುಬುಗಳನ್ನೂ ಕೈಗಾರಿಕೆ ಕೆಲಸಗಳನ್ನೂ ಅನುಸರಿಸಿರುತ್ತಾರೋ ಎಂಬ ವಿಷಯಗಳನ್ನು ತಿಳಿಯುವುದಕ್ಕೆ ಕುತೂಹಲವುಳ್ಳವರಾಗಿರುವರು. ಈ ದೇಶದಲ್ಲಿ ವ್ಯವಸಾಯಗಾರರೂ, ಶಿಲ್ಪಿಗಾರರೂ ಇತರ ಕಸಬುದಾರರೂ ಹೇಗೆ ಜೀವನ ಮಾಡಿ ತಮ್ಮ ಕೆಲಸಗಳನ್ನೆಲ್ಲಾ ನಡಿಸಿಕೊಂಡು ಹೋಗುವ ವಿಷಯಗಳನ್ನು ಕುರಿತ ಅವುಗಳಿಗೆ ಅನುಸರಿಸುವ ಸಮಾಚಾರಗಳನ್ನು ಕೂಡಿಸಿ ಪ್ರಕಟನೆ ಮಾಡುವುದು ಪ್ರಯೋಜನವಾಗಿರುವುದೆಂದು ಸರ್ವರಿಗೂ ಸ್ಪಷ್ಟವಾಗಿ ತಿಳಿದಿರುತ್ತದೆ. ಆದಾಯದ ತೆರಿಗೆಯನ್ನಾಗಲೀ ಭೂಕಂದಾಯವನ್ನಾಗಲೀ ನಿಷ್ಕರ್ಷಿಸುವುದಕ್ಕೋಸ್ಕರ ಹೀಗೆ ಸಂಗ್ರಹಿಸಿದ ಸಮಾಚಾರವನ್ನು ಉಪಯೋಗಿಸುವುದಿಲ್ಲವೆಂದು ತಿಳಿದ ಕೊಳ್ಳಬೇಕು.

ಈ ಖಾನೇಸುಮಾರೀ ಲೆಕ್ಕವು ಸಾರ್ಥಕವಾಗುವಂತೆ ಮಾಡುವುದಕ್ಕೋಸ್ಕರ ಒಂದು ಕಾನೂನನ್ನು ಜಾರೀಗೆ ತಂದಿರುವರು. ಇದರಲ್ಲಿ ಖಾನೇಸುಮಾರೀ ಲೆಕ್ಕಕ್ಕೆ ಸಂಬಂಧಪಟ್ಟ ಅಧಿಕಾರಿಗಳನ್ನು ನೇಮಕ ಮಾಡುವುದಕ್ಕೂ, ಅವರು ಆ ಕೆಲಸಗಳನ್ನು ಶೋಧಿಸಿ ನಡಿಸುವುದಕ್ಕೂ ನಿಬಂಧನೆಗಳಿರುತ್ತವೆ. ಈ ಕಾನೂನು ಪ್ರಕಾರ ಲೆಕ್ಕ ಮಾಡುವುದಕ್ಕೆ ನೇಮಿಸಲ್ಪಟ್ಟ ಎನ್ಯುಮರೇಟರುಗಳ' ತಮ್ಮ ಕೆಲಸಗಳನ್ನು ಬಹಳ ಆಸಕ್ತಿಯಿಂದ ಮಾಡಬೇಕಾಗಿರುತ್ತದೆ. ಮೇಲಾಗಿ ದೋಣಿಗಳ ಚಿತ್ರಗಳ, ಜೀವಾಲಯಗಳ, ಕಾರಖಾನೆಗಳ ಕಾರ್ಖಾನೆಗಳ ಮತ್ತು ಸ್ಟೇಷನುಗಳ ಸಮೀಪದಲ್ಲಿರುವ ಗ್ರಾಮ ನೌಕರರೂ 'ಎನ್ಯುಮರೇಟರುಗಳಲ್ಲದೆ ಇದ್ದರೂ ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟರು ಹೇಳಿದಂತೆ ತಕ್ಕ ಸಹಾಯಗಳನ್ನೆಲ್ಲಾ ಕೊಡಬೇಕಾಗಿರುತ್ತದೆ

ಪಟ್ಟಿಗಳನ್ನು ಬರೆದು ಸಂಪೂರ್ಣ ಮಾಡುವುದಕ್ಕಾಗಿ ಎನ್ಯುಮರೇಟರುಗಳೂ' ಸುಪರ್ ವೈಸರುಗಳೂ' ಆಗಕ್ಕ ಕೇಳುವ ಎಲ್ಲಾ ಪ್ರಶ್ನೆಗಳನ್ನು ಹಾಕಬಹುದು, ಅಂಥಾ ಪ್ರಶ್ನೆಗಳಿಗೆಲ್ಲಾ ಸರ್ವರೂ ಸತ್ಯವಾಗಿ ಉತ್ತರವನ್ನು ಕೊಡಬೇಕು

ಮನೆಗಳ ಮೇಲೆ ಬಣ್ಣದಿಂದ ಸಂಖ್ಯೆಗಳನ್ನು ಹಾಕುವುದಕ್ಕೆ ಖಾನೇಸುಮಾರೀ ನೌಕರರಿಗೆ ಅಧಿಕಾರವಿರುತ್ತದೆ. ಈ ಗುರುತುಗಳನ್ನು ಅಳಿಸಿದವರು ಶಿಕ್ಷೆಗೆ ಒಳಪಡುವರು

ಪಟ್ಟಿಗಳಲ್ಲಿ ಬರೆದಿರುವ ವಿವರಗಳನ್ನು ನೋಡುವುದಕ್ಕೆ ಯಾರಿಗೂ ಹಕ್ಕಿರುವುದಿಲ್ಲ. ದೇಶದ ಅವಸ್ಥಾ ವಿಷಯಗಳನ್ನು ಸದರಿ ಸವರಾಗಿ ಬರೆದ ಮೇಲೆ ಆ ಪಟ್ಟಿಗಳನ್ನು ನಾಶಮಾಡುವರು. ಆಸ್ತಿಗೆ ಹಕ್ಕು ಬಾಧ್ಯತೆಗಳನ್ನು ಅವರಿಂದ ಸ್ಥಾಪಿಸುವುದಕ್ಕೆ ಕೋರ್ಟುಗಳಲ್ಲಿ ಈ ದಾಖಲೆಗಳನ್ನು ಅಂಗೀಕರಿಸುವುದಿಲ್ಲ

ಹಿಂದೆ ಮಾಡಿದ ಖಾನೇಸುಮಾರೀ ಲೆಕ್ಕಗಳಲ್ಲಿ ಸರಕಾರಿ ನೌಕರರೂ ಸರಕಾರದಲ್ಲಿ ನೌಕರರಿಲ್ಲದಿರುವ ಜನರೂ ಬಹಳ ಅಮೌಲ್ಯವಾದ ಸಹಾಯವನ್ನು ಮಾಡಿದ್ದರಿಂದ ಸರಕಾರದವರು ಅದನ್ನು ಅಂಗೀಕರಿಸಿರುತ್ತಾರೆ. ೧೯೦೧ನೇ ಇಸವಿ ಮತ್ತು ೧೯೧೧ನೇ ಇಸವಿಗಳಲ್ಲಿ ಸಾರ್ಥಕಮಾಡಿದಂತೆ ೧೯೨೧ನೇ ಇಸವಿ ಖಾನೇಸುಮಾರೀ ಲೆಕ್ಕವನ್ನೂ ಸಹ ಜನರು ಸಾರ್ಥಕ ಮಾಡುವುದಕ್ಕೆ ಎಂದಿನಂತೆಯೇ ಸಹಾಯವನ್ನು ಮಾಡುವರೆಂದು ಸರಕಾರದವರ ಇಂಗಿತ ಇರುತ್ತದೆ

ಪಬ್ಲಿಸಿಟಿ ಬ್ಯೂರೋ

ಸ್ವೀಕಾರ.

ಭಕ್ತಿ ಸಂದೇಶ—ತಿಲಕ ಸಂಚಿಕೆ—ಇದರಲ್ಲಿ ಲೋಕಮಾನ್ಯ ತಿಲಕರ ಚರಿತ್ರೆ—ಅವರ ವಿದ್ಯಾಭ್ಯಾಸ, ಅವರ ಸಾರ್ವಜನಿಕ ಕೆಲಸ, ಅವರ ಆಪತ್ತು, ಅವರ ಓರಾಯನ್, ಗೀತಾರಹಸ್ಯ ಮುಂತಾದ ಗ್ರಂಥ ಲೇಖನ ಇವುಗಳು ಸಾಂಗವಾಗಿ ವಿವರಿಸಲ್ಪಟ್ಟಿವೆ. ಮತ್ತು ಅಲ್ಲಲ್ಲಿ ಅವರ ಚಿತ್ರಗಳೂ, ಅವರ ಉಪನ್ಯಾಸಗಳೂ ಕೊಟ್ಟಿವೆ. ಕರ್ನಾಟಕ ಭಾಷೆಯಲ್ಲಿ ಬರೆದ ಲೋಕಮಾನ್ಯರ ಚರಿತ್ರೆಯಲ್ಲಿ ಇದು ಒಂದನೆಯದಾಗಿದೆ ಎಂದು ಹೇಳಬಹುದು. ಇದರಲ್ಲಿ ಕೊಟ್ಟಿರುವ ಲೋಕಮಾನ್ಯರ ಸ್ಮಾರಕ ವಿಷಯದಲ್ಲಿ ಸಂಪಾದಕರ ಸೂಚನೆಯು ಬಹು ಯೋಗ್ಯವಾಗಿದೆ. ಅಲ್ಲದೆ ಈ ಸಂಚಿಕೆಯಲ್ಲಿ ದಕ್ಷಿಣ ಕರ್ನಾಟಕದೊಳಗಿನ ಕವಿಗಳ ತಿಲಕ ಸ್ತುತಿಯು ಉದ್ಗಾರಗಳು ಕೊಟ್ಟಿವೆ. ಸಾರಾಂಶ ಈ ಸಂಚಿಕೆಯು ಲೋಕಮಾನ್ಯ ಟಿಳಕರ ಚರಿತ್ರೆ, ಚಿತ್ರ, ಪದ್ಯ ಮುಂತಾದವುಗಳಿಂದ ಬಹು ಚಿತ್ತಾಕರ್ಷಕವಾಗಿದೆ. ಭಕ್ತಿಸಂದೇಶವೆಂದಿರುವ ಈ ಮಾಸಿಕದ ಹೆಸರನ್ನು ಇನ್ನು ಮುಂದೆ "ಟಿಳಕರ ಸಂದೇಶ"ವೆಂದು ಬದಲಾಯಿಸುವ ಸಂಪಾದಕರ ಆಲೋಚನೆಯು ಕಾಲೋಚಿತವೂ, ಶ್ಲಾಘನೀಯವೂ ಆಗಿದೆ. ಈ ಸಂಚಿಕೆಯನ್ನು ಟಿಳಕ ಭಕ್ತರು ಅವಶ್ಯವಾಗಿ ಸಂಗ್ರಹಿಸತಕ್ಕದೆಂದು ನಮ್ಮ ಶಿಫಾರಸು ಇರುತ್ತದೆ

ಸಿವಿಲ್ ಪ್ರೊಸಿಜ್ಯೂರ್ ಕೋಡಿನ O 1 r 8ರ ಪ್ರಕಾರ

ನೋಟೀಸು

ದಕ್ಷಿಣ ಕನ್ನಡಾ ಕಾರ್ಕಳ ಡಿಸ್ಟ್ರಿಕ್ಟ ಮುನ್ಸಿಫ ಕೋರ್ಟಿನಲ್ಲಿ

ಕ್ರಮ ನಂಬ್ರ $\frac{543}{1920}$

ತಂಗಪ್ಪ ಹಂಗೆ ಕೂಡಾ—ವಾದಿ

ಮತ್ತು

ಮೂಡ್ಲಗಿರಿ ಶ್ಯಾನಭಾಗ ಕೂಡಾ—ಪ್ರತಿವಾದಿ

ಇವರೊಳಗೆ—

ಮಾಳಗ್ರಾಮದ ಮಂಗಲಾಯ ದೈವದ ಭಂಡಾರದ ಕಡೆಯಿಂದ ಸದರಿ ಭಂಡಾರದ ಹಕ್ಕಿನ ಬಗ್ಗೆ ಸ್ಥಾಪನೆಗೆ ಒಗ್ಗ ಪ್ರತಿವಾದಿಯ ಮೇಲೆ ದಾಖಲು ಮಾಡಿದ ದಾವೆಯು ತಾರೀಕು 1੦—10—21ಕ್ಕೆ ತನಖೆಗೆ ಇಟ್ಟಿರುತ್ತದೆ. ಆ ಕುರಿತು ಏನಾದರೂ ಆಕ್ಷೇಪ ಇದ್ದರೆ ಸದರಿ ಗ್ರಾಮಸ್ಥರು ಅಥವಾ ಸದರಿ ಮಂಗಲಾಯ ದೈವ ಭಂಡಾರಕ್ಕೆ ಸಂಬಂಧಪಟ್ಟ ಯಾರಾದರೂ ಅಂಥಾ ಆಕ್ಷೇಪಗಳನ್ನು ಮೇಲ್ಕಂಡ ತಾರೀಕಿನ ಒಳಗೆ ಹಾಜರಿದ್ದು ಮಾಡಿಕೊಳ್ಳತಕ್ಕದ್ದು

ಕಾರ್ಕಳ
ತಾ. 1 2

K. Santhaya Kamath
Pleader for Plaintiff

ಪ್ರಖ್ಯಾತಿಪಡದ ಎಸ್. ವಿ. ಸುಗಂಧಪುಡಿ ನಶ್ಯವು.

ಸಾಧಾರಣ ಪುಡಿ ನಶ್ಯವನ್ನು 1 1 12 ದಿನ ಹಾಕಿಕೊಳ್ಳುವವರು ಒಂದಾವರ್ತಿ ಇದನ್ನು ಹಾಕಿಕೊಂಡರೆ ಸಾಕು. ಎಷ್ಟೋ ಆನಂದವಾಗಿರುವದು ಇದರ ಬಾವವು ಮತ್ತು ಪರಿಮಳವು ಎಷ್ಟು ತಿಂಗಳಾದರೂ ಕೆಡದೆ ಹಾಗೆಯೇ ಇರುವದು. ಬಾಟ್ಲಿ 1ಕ್ಕೆ 4 ಆಣೆ. ಟಪ್ಪಾಲು ಚಾರ್ಜು 1 3 ವರೆಗೆ 4 ಆಣೆ. ಒಂದೇ ಸಾರಿ 12 ಬಾಟ್ಲಿಗಳನ್ನು ತರಿಸಿಕೊಂಡರೆ 1 ಬಾಟ್ಲಿ ಉಚಿತವು

ಉತ್ತಮ ತರದ ಪುಡಿ ನಶ್ಯವು

ಪ್ರಖ್ಯಾತಿಪಡದ ಖಾರವಾದ ಹೊಗೆಸೊಪ್ಪಿನಿಂದ ಇದು ತೆಗೆದು ಅನುಭವಸ್ಥರಿಂದ ತಯಾರಿಸುವದರಿಂದ ಸಾಧಾರಣ ಈ ಪುಡಿಯನ್ನು ಉಪಯೋಗಿಸುವವರು ಬೇರೆ ಪುಡಿ ನಶ್ಯವನ್ನು ಇಚ್ಛಿಸದೆ ಇರುವರು. ತೋಲ 1ಕ್ಕೆ ರೂ 1. ಟಪ್ಪಾಲು ಚಾರ್ಜು 4 ಆಣೆ

ಎಸ್. ವಿ. ದಂತಚೂರ್ಣವು

ಇದರ ಉಪಯೋಗದಿಂದ ಹಲ್ಲುಗಳು ಶುಭ್ರವಾಗಿ ಬಿಳುಪಾಗಿ ಪ್ರಕಾಶಿಸುವದಲ್ಲದೆ ಸಕಲ ದಂತರೋಗಗಳನ್ನು ನಿವೃತ್ತಿ ಮಾಡಿ ಹಲ್ಲುಗಳನ್ನು ವಜ್ರದಂತೆ ಗಟ್ಟಿ ಪಡಿಸುವದು. ಡಬ್ಬಿ 1ಕ್ಕೆ 6 ಆಣೆ. ಟಪ್ಪಾಲು ಚಾರ್ಜು 2 ಡಬ್ಬಿಗಳ ವರೆಗೆ 4 ಆಣೆ. ನಮ್ಮ ಕಂಪನಿಯ ಇಂಗ್ಲಿಷ್ ಕೆಟಲಾಗಿನ ಬೇಕಾದರೆ ಉಚಿತವಾಗಿ ಕಳುಹಿಸಿಕೊಡುವೆವು.

ನಮ್ಮ ವಿಳಾಸ —
ಎಸ್. ವಾಸು ಅಂಡ್ ಕಂಪನಿ,
ಪಾಲಕೆರೆ ತಿರುಚಿನಾಪಳ್ಳಿ

ತಂತಿ ವಿಳಾಸ —
ವಾಸು, ತಿರುಚಿ.

FOR SALE.

Aluminium Ware, Spirit Stoves, Boots, Writing Pads, Stationery Cabinet Pathephone with records, Photographic Cameras with apparatus, Magic Lantern with slides, Tennis and Badminton articles, Singer Sewing Machines, Novels, Picture Frames, Crockery, Lamps, Door and Window curtains, Wooden, Iron and Folding Cots Filter Pianos, Violin, Banjo Saddle, Harness Carriage etc etc

Prices on application —

H C Fernandez & Co,
Auction Sale Room,
MANGALORE

FOUNTAIN PENS.



ಫೌಂಟನ್ ಪೆನ್ನುಗಳು

14 ಕೆರೆಟ್ ಚಿನ್ನದ ಮೊನೆಯುಳ್ಳ ಅತ್ಯುತ್ತಮವಾದ ವಿವಿಧ ತರದ ಫೌಂಟನ್ ಪೆನ್ನುಗಳು ಈಗ ತಾನೇ ಬಂದಿವೆ.

ಕಾಮತ್ ಸೇಫ್ಟಿ ಪೆನ್ ಕ್ರಯ ರೂ 9—8—0

ಫೌಂಟನ್ ಪೆನ್ ,, ,, 9—0—0

ದಯಮಾಡಿ ತರಿಸುವವರಿಗೆ ಪ್ರತ್ಯೇಕ ದರಗಳು

ಪಿ. ಎಮ್. ಕಾಮತ್ ಎಂಡ್ ಕೊ.
ಕೆಮಿಸ್ಟ್ಸ್, ಮಂಗಳೂರು

50 ರೂಪಾಯಿ ಬಹುಮಾನ

ಈ ಕೆಳಗೆ ದಸ್ಕತು ಮಾಡಿದವರ ತಾ. 1 1 1ನೆ ಇಸವಿಯ ಮಾರ್ಚ ಆ ಮೊದಲನೆ ವರ್ಷಾಗಳ ಅಲುಗಂಗ ಯಜಮಾನರ ಹಣ ಸಂಗ್ರಹ ಮತ್ತು ಅವರಿಂದ ಹಣ ವಸೂಲು ಬಂದ ಪ್ರತಿ 200 ಪೇಜುಗಳುಳ್ಳ ಲೆಕ್ಕದ ಚಕ್‌ರೋಲ್ ಬೂಕುಗಳು 4 ಮತ್ತು ಆ ಸಂಬಂಧದ ಇತರ ಹಳೇ ಲೆಕ್ಕದ ಪುಸ್ತಕಗಳು ಇಟ್ಟಿರುವ ಸಣ್ಣ ಸುಂದರವಾದ ಹ್ಯಾಂಡ್ ಬೊಕ್ಸ್ ಇದೇ ಕಳೆದ ಜುಲಾಯಿ 23ರಲ್ಲು ಗಾಡಿಯಲ್ಲಿ ಬರುತ್ತಾ ಗುರುವ್ಯಾನಕೆರೆಯಲ್ಲೋ, ಜಾಮಾರ್ಗದಿಯಲ್ಲೋ ಬಿದ್ದುಹೋಗಿರುತ್ತದೆ. ಇದು ಸಿಕ್ಕಿದವರು ಸ್ವದೇಶಾಭಿಮಾನಿ ಆಫೀಸಿಗೆ ತಂದುಕೊಟ್ಟು ತಿಳಿಸಿದಲ್ಲಿ ಮನಃಪೂರ್ವಕವಾಗಿ ಮೇಲ್ಕಂಡ ಬಹುಮಾನವನ್ನು ಕೆಳಗೆ ದಸ್ಕತು ಹಾಕಿದವರು ಕೊಡುವರು.

ISIDORE COLACO,
Wartyhully Estate Saklaspur,
DT HASSAN

Canara Bank, Limited, Mangalore.

ಕೆನರಾ ಬ್ಯಾಂಕ ಲಿಮಿಟೆಡ್, ಮಂಗಳೂರು.

ESTABLISHED JULY 1906. 1906ನೇ ಇಸವಿ ಜುಲಾಯಿ ತಿಂಗಳಲ್ಲಿ ಸ್ಥಾಪಿಸಲ್ಪಟ್ಟಿತು.

Authorised and fully paid up Capital Rs. 300,000—0—0	ಅಧಿಕಾರಗೊಳಿಸಲ್ಪಟ್ಟು ಪೂರ್ಣವಾಗಿ ಕೊಟ್ಟ ಮೂಲಧನವು ರೂ. 300,000—0—0
Reserve and other sinking Funds ,, 138,697—7—2	ಕ್ಷೇಮನಿಧಿ ಮತ್ತು ಇತರ ಫಂಡುಗಳು 138,697—7—2

THE BANK RECEIVES FIXED, CURRENT ACCOUNT, & SAVINGS BANK DEPOSITS

ಕಾಯಂ ಮತ್ತು ಚಾಲ್ತಿ ಠೇವಣಾತಿಗಳೂ, ಸೇವಿಂಗ್ಸ್ ಬೇಂಕ್ ಠೇವಣಾತಿಗಳೂ, ಪಡಕೊಳ್ಳಲ್ಪಡುಗುತ್ತವೆ.

For further particulars apply to the Secretary

ವಿಶೇಷ ಮಾಹಿತಿ ಬಗ್ಗೆ ಸೆಕ್ರೆಟರಿಗಳಿಗೆ ಬರಕೊಳ್ಳುವದು

Canara Bank Ltd,
Mangalore, 1st September 1920.

K. Venkat Rao,
Secretary.

ವಿಲ್ಲಿಯಮ್ಸ್ ಡೆಂಟೋನ್.

ಅನುಭವಸಿದ್ಧ ಅದ್ವಿತೀಯ ಔಷಧ.

ಅನೇಕ ಉತ್ತಮವಾದ ವನಸ್ಪತಿ ಔಷಧಗಳಿಂದ ತಯಾರಿಸಿದ "ವಿಲ್ಲಿಯಮ್ಸ್ ಡೆಂಟೋನ್" ಎಂಬ ಈ ದಂತ ಪುಡಿಯನ್ನು ಸಾವಿರಾರು ಜನರು ಉಪಯೋಗಿಸಿ ಸುಖಹೊಂದಿ ತಮ್ಮ ಹಲ್ಲುಗಳನ್ನು ವೃದ್ಧಾಪ್ಯಕಾಲದ ವರೆಗೆ ಘಟ್ಟಿಯಾಗಿ ಉಳಿಸಿ ಸಂತೋಷದಿಂದ ಜೀವಿಸುತ್ತಾರೆ.

ಇದನ್ನು ಅನುನಿತ್ಯ ಪ್ರಾತಃಕಾಲ ಹಲ್ಲುಗಳಿಗೆ ತಿಕ್ಕಿ ಬಾಯಿ ತೊಳೆಯುವದರಿಂದ ಹಲ್ಲುಗಳು ಮುತ್ತಿನಂತೆ ಥಳಥಳಿಸಿ ಬಾಯಿಯ ದುರ್ವಾಸನೆ ಹೋಗಲಾಡಿಸುವದಲ್ಲದೆ, ನಾಲಿಗೆ ಸ್ವಚ್ಛವಾಗುವದೂ, ವಸಡಿನಿಂದ ಕೀವು ಮತ್ತು ರಕ್ತ ಹೊರಡುವದೂ, ಹಲ್ಲಿನ ಬುಡದಲ್ಲಿ ಸುಣ್ಣ ಕಟ್ಟುವದೂ, ವಸಡು ಬೀಗಿಕೊಂಡು ಆಹಾರ ತಿನ್ನುವರೆ ಆಶಂಕವಾಗಿ ಉಪದ್ರವಾಗುವದೂ, ಖಂಡಿತವಾಗಿ ಗುಣವಾಗುತ್ತವೆ. ಅಲುಗಾಡುವ ಹಲ್ಲುಗಳು ಬಲವಾಗಿ ಆಹಾರವನ್ನು ಜಗಿದು ತಿನ್ನುವರೆ ಅನುಕೂಲವಾಗಿ ಹೆಚ್ಚು ಕಾಲ ಬದುಕಲಿಕ್ಕೆ ಆಸ್ಪದ ಉಂಟಾಗುತ್ತದೆ

ಅನುಭವವೇ ಮುಖ್ಯ

ಗುಣ ವಿಶೇಷ! ಕ್ರಯ ಕಮ್ಮಿ!! ಹುಡಿ ಹೆಚ್ಚು!!!

ಕ್ರಯ ಆಣೆ 5 ಮತ್ತು ಆಣೆ 9

ಪರವೂರುಗಳಲ್ಲಿ ಏಜಂಟರಾಗಲಪೇಕ್ಷೆಯುಳ್ಳವರು ಕೆಳಗಿನ ವಿಳಾಸಕ್ಕೆ ಬರಕೊಳ್ಳುವದು.

ಹೋಲ್ ಏಜಂಟ್ — ಜೆ. ಎಸ್ ಸೋಜ ಮತ್ತು ಕಂಪೆನಿ,
ಹಂಪನಕಟ್ಟಾ ಮಂಗಳೂರು.

BANK OF MADRAS.

ಮದ್ರಾಸ್ ಬ್ಯಾಂಕ್.

ಹೆಡ್ ಆಫೀಸು ಮದ್ರಾಸ್.

ಮೂಲಧನ	ರೂ 75,00,000
ಕ್ಷೇಮನಿಧಿ	45,00,000

ಸೇವಿಂಗ್ಸ್ ಬ್ಯಾಂಕ್.

— ವರ್ಷಕ್ಕೆ ಸೇಕಡಾ 4ರ ಬಡ್ಡಿ —

ಇದರಲ್ಲಿ ಠೇವಣಾತಿಗಳು ಕೆಳಗಿನ ಶರ್ತಗಳಲ್ಲಿ ಪಡೆಯಲಾದಾವು

ಒಂದು ವರುಷದ ಅವಧಿಯಲ್ಲಿ ಒಟ್ಟು ರೂ 5,000ಕ್ಕೆ ಮಿಗದ ಮೊಬಲಗನ್ನು ಠೇವಣಾತಿಯಾಗಿಡಬಹುದು

ಹೀಗೆ ಠೇವಣಾತಿ ಇಟ್ಟ ಪ್ರತಿ ಹತ್ತು ರೂಪಾಯಿಗಳಿಗೆ ಸೇಕಡಾ 4ರಂತೆ ರೂ 10,000ಕ್ಕೆ ಮೀರದ ಮೊಬಲಗಿನ ವರೇಗೆ ಬಡ್ಡಿ ಎಣಿಸಲಾಗುವುದು

ನಿಬಂಧನೆಗಳ ಪ್ರತಿಗಳನ್ನು ಒರೆದು ಬ್ಯಾಂಕಿನಿಂದ ಪಡೆಯಬಹುದು

ಸಿ ಎಲ್ ಗೊರ್ಡನ್,
ಏಜಂಟ್, ಮದ್ರಾಸ್ ಬ್ಯಾಂಕ್ ಮಂಗಳೂರು

ವೈದ್ಯವಿದ್ಯ

ಯಾವದೊಂದು ವ್ಯಾಧಿಯು ಇಲ್ಲದೆ ಸುಖಸಂಪತ್ತುಗಳಿಂದಿರಬೇಕಾದರೆ ಓದಿ ನೋಡಬೇಕಾದ

ವೈದ್ಯವಿದ್ಯ

ಎಂಬ ಪುಸ್ತಕವನ್ನು ಈ ಪುಸ್ತಕಕ್ಕೆ ಯಾವ ಬೆಲೆಯನ್ನು ಕೊಡಬೇಡಿರಿ. ವಿಳಾಸವನ್ನು ತಿಳಿಸಿದ ಮಾತ್ರಕ್ಕೆ ಬರುವದು.

ವೈದ್ಯವಿದ್ಯ

ವಿಳಾಸ:—ರಾಜವೈದ್ಯ ನಾರಾಯಣಜಿ ಕೇಶವಜಿ,
27, ಜೈನ ಬಜಾರು ರೋಡು, ಮದ್ರಾಸು.

ರೂ. 1,000 ಬಹುಮಾನ.

ಲೋಕಪ್ರಸಿದ್ಧವಾದ ಸಾಲಾಮಿಸ್ರಿ ಮುರಬ್ಬಾ.

(ಗವರ್ನಮೆಂಟಿನಲ್ಲಿ ರಿಜಿಸ್ಟರ್ ಮಾಡಲ್ಪಟ್ಟಿದೆ).

ನಮ್ಮಿಂದ ಕಳುಹಿಸುವ ಬಾಂಗಿಯಲ್ಲಿ ತೆಗೆದುಕೊಳ್ಳುವಾಗ ಡಿ. ಮನ್ನಾಲಾಲ್, ಡಿಲ್ಲಿ ವೈದ್ಯರು, ಎಂದು ಮುದ್ರಿಸಿರುವ ಲೇಬಲು ಇರುವದನ್ನು ನೋಡಿ ತೆಗೆದುಕೊಳ್ಳಿರಿ. ಈ "ಸಾಲಾಮಿಸ್ರಿ ಮುರಬ್ಬಾ"ವಿನ ಸೇವನೆಯಿಂದ—ವೀರ್ಯವು ನೀರಿನಂತೆ ಇದ್ದರೂ ಸ್ವಪ್ನೇಂದ್ರಿಯನಾಶವಿದ್ದರೂ, ಮೂತ್ರದೊಂದಿಗೆ ವೀರ್ಯವು ಹೋಗುತ್ತಿದ್ದರೂ, ಕೈಕಾಲು ಬಾಕ್ಸು ಸೊಂಟದಲ್ಲಿ ನೋವಿದ್ದರೂ, ಹಸಿವು ಇಲ್ಲದಿದ್ದರೂ, ಮಲವಿಸರ್ಜನೆಯು ಸರಿಯಾಗಿ ಆಗದಿದ್ದರೂ, ಶರೀರಬಲವೆಲ್ಲಾ ಕೆಟ್ಟುಹೋಗಿದ್ದರೂ, ಈ ಸಾಲಾಮಿಸ್ರೀ ಮುರಬ್ಬಾ ಸೇವನೆಯಿಂದ ಗುಣವಾಗಿ ದೇಹವನ್ನು ಒಳ್ಳೇ ಸ್ಥಿತಿಯಲ್ಲಿಡುವುದು. ಮೆದುಳಿಗೆ ಬಲವನ್ನುಂಟುಮಾಡುವುದು, ಹಳೇ ತಲೆನೋವುಗಳನ್ನು ಹೋಗಲಾಡಿಸುವುದು, ಧಾತುವನ್ನು ಹೆಚ್ಚಿಸುವುದು, ಸೊಂಟ ನೋವು ಸ್ವಲ್ಪಮಾತ್ರವೂ ಇರಲಾರದು. ಈ ಸಾಲಾಮಿಸ್ರೀ ಎಂಬುದು ಕಾಬೂಲ್ ಕಂದಹಾರ್ ದೇಶಗಳಲ್ಲಿ ಬೆಳೆಯುತ್ತದೆ

ಈ ಮುರಬ್ಬಾ ಸೇವನೆಯಿಂದ ಗುಣಹೊಂದಿದ ಅನೇಕ ದೊಡ್ಡ ಮನುಷ್ಯರಿಂದ ರಂಗೂನ್, ಪಿನಾಂಗ್, ಆಫ್ರಿಕ, ಕಲ್ಕತ್ತ, ಬೊಂಬಾಯಿ, ಮದ್ರಾಸ್ ಮೊದಲಾದ ಅನೇಕ ಪ್ರಾಂತ್ಯಗಳಿಂದ ಯೋಗ್ಯತಾಪತ್ರಿಕೆಗಳು ಬಂದಿವೆ. ಬೇಕಾದವರು ಅರ್ಧಾಣೆ ಸ್ಟಾಂಪನ್ನು ಕಳಿಸಿ ಅವುಗಳ ಪ್ರತಿಯನ್ನು ನೋಡಬಹುದು. ಅವನ್ನು ಯಾರಾದರೂ ಸುಳ್ಳು ಎಂದು ನಿರ್ಧಾರಪಡಿಸಿದರೆ ಮೇಲೆ ಕಂಡ ಬಹುಮಾನವು ಕೊಡಲ್ಪಡುತ್ತೆ. ನಾವು ಹಾಗೆ ಕೊಡದೆ ನಿರಾಕರಿಸಿದಲ್ಲಿ ಕೋರ್ಟು ಮೂಲಕ ಪಡೆಯಬಹುದು

ಒಂದು ಡಬ್ಬಿ ಮುರಬ್ಬವನ್ನು ಗಿ ದಿನಗಳ ಉಪಯೋಗಿಸುವುದರಿಂದ ಪೂರಾ ಗುಣ ಕೊಡುತ್ತೆ. ಎರಡು ಡಬ್ಬಿಗಳನ್ನು ಉಪಯೋಗಿಸುವುದರಿಂದ ಜನ್ಮಾಂತರದವರೆಗೂ ಗುಣ ಕೊಡುತ್ತೆ. ಉಪಯೋಗಿಸುವ ವಿಧಾನ ಡಬ್ಬಿಯ ಜತೆಯಲ್ಲಿರುವುದು

ಕ್ರಯ ಒಂದು ಡಬ್ಬಿಗೆ ರೂಪಾಯಿ 2

"ಈಗ ಭಾಂಗಿಯ ಚಾರ್ಜು ಹೆಚ್ಚಿರುವುದರಿಂದ ಕೆಲವು ದಿನಗಳ ವರೆಗೆ ಟಪಾಲು ಖರ್ಚು 1 ಡಬ್ಬಿಗೆ 8 ಆಣೆ, 2 ಯಾ 3 ಡಬ್ಬಿಗಳಿಗೆ 12 ಆಣೆ."

ಡಿ. ಮನ್ನಾಲಾಲ್, ಡಿಲ್ಲಿ ವೈದ್ಯರು,
ಸಾಲಾಮಿಸ್ರಿ ಮುರಬ್ಬ ಡಿಪೋ, ಬೆಂಗಳೂರು ಸಿಟಿ

ಜಗದ್ವಿಖ್ಯಾತವಾದ ಶ್ರೀ ದೇವೀಪ್ರಸಾದ ಕಂಪೆನಿಯ

ಸುಪ್ರಸಿದ್ಧವಾದ ಮಹೌಷಧಗಳು.

"ಧನ್ವಂತರೀ ಬಾಮ್."

ಶುದ್ಧ ವನಸ್ಪತಿಗಳಿಂದಲೇ ಶಾಸ್ತ್ರೋಕ್ತವಾಗಿ ತಯಾರಿಸಲ್ಪಟ್ಟ ವೇದನಾಹಾರಿ ಮುಲಾಮು ಇದರಿಂದ ವಾತ, ಕಫ, ಜಗತ, ಉಳುಕು ಘಾಯ, ತಲೆನೋವು, ಸೊಂಟನೋವು, ಬೆನ್ನುನೋವು, ಮುಂತಾದ ಎಲ್ಲಾ ತರದ ಬೇನೆಗಳು ಅತಿ ಶೀಘ್ರದಲ್ಲಿ ಸಂಪೂರ್ಣವಾಗಿ ಗುಣಹೊಂದುವವು. ಬಾಟ್ಲಿಗಾದ ಕಿಮ್ಮತ್ತು ೦—೭—೦, ಒಂದು ಡಜನು ಬಾಟ್ಲಿಗಳಿಗೆ ರೂ ೪—೧೨—೦.

"ಗಜಕರ್ಣದ ಮುಲಾಮು"

1 ಮಹಾಮದನ ಕಾಮೇಶ್ವರಿ ಲೇಹ —ಬಹಳ ಶ್ರಮ ಪಟ್ಟು ಕೆಲಸಮಾಡುವ ಲೇಖಕರೂ ಮತ್ತು ಇಂದ್ರಿಯ ದೌರ್ಬಲ್ಯ, ಅಜೀರ್ಣ, ಎದೆನೋವು, ಮಲಬದ್ಧತೆ, ಶರೀರಗ್ಲಾನಿ ಘಳಿತದಿಂದ ಅಶಕ್ತಿ ಮೊದಲಾದ ಪ್ರಕೃತಿಯುಳ್ಳವರೂ ಇದನ್ನು ಸೇವಿಸಿದ್ದಲ್ಲಿ ರಕ್ತಶುದ್ಧಿ, ಧಾತುಪುಷ್ಟಿ ಮತ್ತು ಮುಖದಲ್ಲಿ ಕಾಂತಿಗೊಳಿಸುವುದು

2\. ಮಹಾಜ್ವರಾಂಕುಶ (ಖಾತ್ರಿ ಗುಣ) —ಇನ್‌ಫ್ಲುಯೆಂಜಾ ನಿಮೋನಿಯಾ, ಮಲೇರಿಯಾ, ದಿವಸಕ್ಕೊಮ್ಮೆ, ದ್ವಿತೀಯ ತೃತೀಯ ಚಾತುರ್ಥಿಕ ಜ್ವರಗಳ ಮೇಲೆ ರಾಮಬಾಣ ಬಾಟ್ಲು 1ಕ್ಕೆ ಆಣೆ 8

3 ಬಾಲಗ್ರಹಗುಟಿಕೆ —ಕೂಸು ವ ಮಕ್ಕಳ ಅಪಸ್ಮಾರಕ್ಕೆ ರಾಮಬಾಣ ಡಜನಿಗೆ ಆಣೆ 10

4 ಕೋಲರಾ ಯಾನೆ ವಾಂತಿಬೇದಿ ಗುಟಿಕೆ—ಒಂದೆರಡು ಗುಟಿಕೆಯಿಂದ ವಾಂತಿಬೇದಿ ಕೂಡಲ ಗುಣ ಬರಿ ಅತಿಸಾರ ರಕ್ತಾತಿಸಾರ, ಜ್ವರಕೂಡಿರುವ ರಕ್ತಾತಿಸಾರ, ಗ್ರಹಣಿಯಿಂದ ಯಾ ಹುಳದ ಉಪದ್ರದಿಂದ ಆಗುವ ಹೊರಕಡೆ ಗುಣ ಬಾಟ್ಲು 1ಕ್ಕೆ ಆಣೆ 8

5 ಖಾಸಕುಠಾರ ಗುಟಿಕೆ —ಇದು ಖಾಸಕ್ಕೆ ಸಿದ್ಧ ಔಷಧಿ. ಒಂದೇ ಗುಟಿಕೆಯಿಂದ ಕಫ, ಉಬ್ಬಸ, ಕೆಮ್ಮು, ಇವು ಗುಣ ಡಜನಿಗೆ ಆಣೆ 10

6\. ಮೇಹಕುಠಾರ —ಮೂತ್ರಕೃಚ್ಛ್ರ, ಅಶ್ಮರಿ, ವ್ರಣ ಮೂತ್ರಹೋಗುವಾಗ್ಯೆ ಉರಿಯನ್ನೂ ಕೀವನ್ನೂ ಕೂಡಲ ನಿಲ್ಲಿಸಿ ಪಥ್ಯವಿಲ್ಲದೆ ಖಂಡಿತ ಗುಣಕೊಡುವದು, ಕಠಿಣ ರೋಗಿಗೂ ಕೂಡಾ 8 ದಿವಸದೊಳಗೆ ಗುಣಸಿಕ್ಕುತ್ತದೆ 16 ದಿವಸದ ಔಷಧಿ. ಕ್ರಯ ರೂ 2

7 ಇಚ್ಛಾಭೇದಿ—ಆಯಾಸವನ್ನು ಉಂಟುಮಾಡದ ಸುಖ ವಿರೇಚಕ ಬಾಟ್ಲು 1ಕ್ಕೆ ಆಣೆ 12

8\. ಭೃಂಗರಾಜತೈಲ್ಯ—ತಲೆ ಉರಿ, ಕಣ್ಣು ಉರಿ, ಕಣ್ಣು ನೋವು ನಿದ್ರೆಬಾರದೆ ಇರುವುದು, ಅರ್ಧ ತಲೆನೋವು, ಜ್ಞಾಪಕಶಕ್ತಿ ಕುಂದಿಹೋಗುವುದು, ಕೂದಲು ಉದುರಿ ಹೋಗುವುದು, ತಲೆ ತಿರುಗುವುದು, ಕೂದಲಿನ ಕಪ್ಪು ಬಣ್ಣವನ್ನು ಹೆಚ್ಚಿಸಿ ಉದ್ದವಾಗಿಯೂ ನುಣುಪಾಗಿಯೂ ಮಾಡುವುದು. ಬಾಟ್ಲಿ 1ಕ್ಕೆ ಆಣೆ 12.

9\. ದಂತಮಂಜನ —(ಕರ್ಪೂರ ಮಿಶ್ರ) ಹಲ್ಲಿನ ಕ್ರಿಮಿ ವಸಡುಗಳ ಬೀಗು, ಕೀವು ಯಾ ರಕ್ತ ಬರುವುದು, ಮುಂತಾದ ದಂತ ಸಂಬಂಧವಾದ ಸರ್ವ ಬಾಧೆಗಳನ್ನು ಶಾಂತಪಡಿಸುತ್ತದೆ. ಕರಡಿಗೆ 1ಕ್ಕೆ ಆಣೆ 2

ವಿಳಾಸ.— ಮೂಲ್ಕಿ ಗಣಪಯ್ಯ ಎಂಡ್ ಸನ್ಸ್,
ನೇಟಿವ್ ಡಾಕ್ಟರ್ಸ್, ಮಂಗಳೂರು ದ. ಕ.

ಶ್ರೀಮತ್ **ಕಲ್ಯಾಣ** ಬಂಧುಗಳೇ!

ಈ ಕಡೆ ನೋಡಿರಿ.

ಕಲ್ಯಾಣಕಾರಕವೆಂಬ ಜಿನಭಿಷಗ್ರಂಥಾಧಾರದಿಂದಲೂ ಅನೇಕ ರಾಜವೈದ್ಯರುಗಳಿಂದಲೂ ಪರಿಶೋಧಿಸಿ ತಯಾರಿಸಲ್ಪಟ್ಟ ಅನುಭವ ಸಿದ್ಧೌಷಧಗಳು ಈ ಕೆಳಗಣ ವಿಳಾಸದಾರರಲ್ಲಿ ದೊರೆಯುವವು ಅಪೇಕ್ಷಕರು ಕಲಿಲಾಗಮ್ಮ ತರಿಸಿಕೊಂಡರೆ ಸಮಾಧಾನವಾಗುವದು.

S P RAJA & Co.,
Kalyanakaraka Bishagmandir
POLALY, POST S. C.

ಎಸ್. ಪಿ. ರಾಜಾ ಮತ್ತು ಕಂಪೆನಿ,
ಕಲ್ಯಾಣಕಾರಕ ಭಿಷಗ್ಮಂದಿರ, ಪೋಸ್ಟು ಪೊಳಲಿ, ದ. ಕ.

NETRANAND SAREES

Cheap and Fashionable

Sarees in all brilliant colours with lustrous borders

Liberal Commission for wholesale Orders

ಚಲೋ ಬಣ್ಣದ ಶೀರೆಗಳು! ಬಹಳ ಕಮಿಷನಿಯು!

ವಿವಿಧ ಬಣ್ಣಗಳ ಥಳಥಳಿಸುವ "ನೇತ್ರಾನಂದ" ಶೀರೆಗಳು ಕೆಳಗಿನ ಕಂಪೆನಿಯವರ ಹತ್ತರ ದೊರಕುತ್ತವೆ

ವ್ಯಾಪಾರಸ್ಥರಿಗೆ ಒಳ್ಳೇ ಕಮಿಷನ ಕೊಡುವರು

ನೂರಿನ ಕೆಂಪು (Congo Red) ಹಳದಿ ಮತ್ತು ಇತರ ಬಣ್ಣಗಳು ಕಮ್ಮಿಕ್ರಯದಲ್ಲಿ ದೊರಕುವವು

ವಿಶೇಷ ಮಾಹಿತಿಬಗ್ಗೆ ಕೆಳಗಿನ ವಿಳಾಸಕ್ಕೆ ಬರಕೊಳ್ಳಿ

ಶ್ರೀ ಶೀತಾರಾಮವಿಠ್ಠಲ ಕಂಪೆನಿ,
ಮಿಲಾಗ್ರಿ ಇಗರ್ಜಿ ಎದುರು, ಹಂಪನಕಟ್ಟೆ ಮಂಗಳೂರು.

ಇಲ್ಲಿ ಬನ್ನಿ! ಬೆಲ ನೋಡಿ! ಸಾಮಾನುಗಳನ್ನು ಪರೀಕ್ಷಿಸಿರಿ!

ಶ್ರೀ

ಗಜಾನನ ಮೆಡಿಕಲ್ ಹೊಲ್

ಬಹು ನೂತನ ಅಲೋಪತಿ ಮತ್ತು ಹೊಮಿಯೊಪತಿ

ಔಷಧ ಮಂದಿರ, ರಥಬೀದಿ, ಮಂಗಳೂರು.

ಇಲ್ಲಿಗೆ ಒಂದು ಸಾರಿ ಬಂದು ಪರೀಕ್ಷಿಸಿ!

ಆ ಮೇಲೆ ನೀವು ಬೇರೆಕಡೆ ಹೋಗಲಾರಿರಿ!!

ನಮ್ಮಲ್ಲಿ ಎಲ್ಲಾ ವಿಧವಾದ ಔಷಧ ದ್ರವ್ಯಗಳೂ, ಪೇಟೆಂಟ್ ಇಂಗ್ಲೀಷ ಔಷಧಗಳೂ, ಸುಗಂಧ ದ್ರವ್ಯಗಳೂ, ಸೋಪುಗಳೂ, ಫೌಂಟನ್‌ಪೆನ್‌ಗಳೂ, ಥರಮಾಮಿಟರ್ ಎಂಬ ಅತ್ಯುತ್ತಮ ಉಷ್ಣಮಾಪಕ ಯಂತ್ರಗಳೂ, ತಬ್ಬರಿನ ಪೂವ ಂಟೇಶನ್ ಚೀಲಗಳೂ ಎನ್‌ಕ್ಸ್‌ಪೆ ಮುಂತಾದ ಸರ್ವ ವಿಧವಾದ ಚಿಕಿತ್ಸಕ ಸಾಮಗ್ರಿಗಳೂ ಸ್ಥಿವ್ ಮುಂತಾದವುಗಳಿಗೆ ಉಪಯುಕ್ತವಾದ ಸ್ಪಿರಿಟ್ ದ್ರವವೂ, ನೀಲಗಿರಿಯ ಎಣ್ಣೆ ಎಂಬ ಯುಕಲಿಪ್ಟಸ್ ತೈಲವೂ ಬಹು ಸುಲಭ ಬೆಲೆಗೆ ತಾಜಾ ರೀತಿಯಲ್ಲಿ ದೊರೆಯುವವು

ಹೊಮಿಯೊಪತಿ ಮತ್ತು ಟಿಶ್ಯೂ ಔಷಧಗಳು

ನಿಮಗೆ ತಾಜಾ ಆಗಬೇಕಾದರೆ ನಮ್ಮಲ್ಲಿ ಬನ್ನಿ!

ಬಡವರಿಗೋಸ್ಕರ ಧರ್ಮಾರ್ಥ ಚಿಕಿತ್ಸೆ

ಪ್ರತಿನಿತ್ಯವೂ ಬೆಳಿಗ್ಗೆ ೯ ಗಂಟೆಯಿಂದ ೧೦ ಗಂಟೆಯ ವರೆಗೆ ಬಡವರಿಗೆ ಹೊಮಿಯೊಪತಿ ಮತ್ತು ಟಿಶ್ಯೂ ಔಷಧಗಳನ್ನು ರೋಗಿಯನ್ನು ಪರೀಕ್ಷೆಮಾಡಿ, ಧರ್ಮಾರ್ಥವಾಗಿ ಕೊಡುವೆವು

☞ ಔಷಧಗಳನ್ನು ಶಾಸ್ತ್ರರೀತಿಯಾಗಿ ತಯಾರಿಸುವುದಕ್ಕೆ ನಮ್ಮಲ್ಲಿ ೨೦ ವರ್ಷಗಳ ಅನುಭವವುಳ್ಳವರಿರುವರು

ನಮ್ಮಲ್ಲಿ ಔಷಧಗಳು ಹಗಲಿರುಳು ದೊರೆಯುವವು.

ಸುಲಭ ಬೆಲೆ! ನಗದಿ ವ್ಯಾಪಾರ! ರೋಗಗಳು ಗುಣವಾಗುವುದು ಬೇಗ!

ಇಲ್ಲಿ ಒಂದುಸಾರಿ ಪರೀಕ್ಷಿಸಿ!

ಎಮ್. ರಾಮ ಕಾಮತ್,
ಪ್ರೊಪ್ರೈಟರ್.

"ವೈದ್ಯಾಮೃತ ಮಂದಿರಂ"

ಎಂಬ

ನಮ್ಮ ಆಯುರ್ವೇದ ವೈದ್ಯಶಾಲೆಯಲ್ಲಿ ಶಾಸ್ತ್ರೋಕ್ತವಾಗಿ ತಯಾರಿಸಲ್ಪಟ್ಟ ಎಲ್ಲಾ ತೈಲಗಳೂ, ಆಸವಾರಿಷ್ಟಗಳೂ, ಕಷಾಯಗಳೂ, ದ್ರವದ್ರಾವಕಗಳೂ, ಭಸ್ಮಗಳೂ, ಚೂರ್ಣಗಳೂ, ಮಾತ್ರೆಗಳು ಇತ್ಯಾದಿ ಔಷಧಿಗಳೂ ಮತ್ತು ಕಾಶ್ಮೀರ, ನೇಪಾಲ ದೇಶಗಳಿಂದ ತರಿಸಿದ ಕಸ್ತೂರಿ, ಪಚ್ಚಕರ್ಪೂರ, ಕುಂಕುಮಕೇಸರ ಮುಂತಾದವುಗಳೂ ಸುಲಭವಾದ ಕ್ರಯಕ್ಕೆ ದೊರಕುತ್ತವೆ. ಪರಸ್ಥಳದವರು ರೋಗದ ಪ್ರಕೃತಿಯನ್ನು ವಿಶದವಾಗಿ ಬರೆದು ತಿಳಿಸಿದರೆ ಅಗತ್ಯವಿರುವ ಔಷಧಿಗಳನು ಅನುಪಾನಪತ್ರಿಕೆ ಸಮೇತ ವಿ. ಪಿ. ಮೂಲಕ ಕಳುಹಿಸುವೆವು.

ವಿಳಾಸ — ಕೆ. ಕೆ. ನಾಯರ್
ಎಂಡ್ ಬ್ರದರ್ಸ್,
ವೈದ್ಯಾಮೃತ ಮಂದಿರಂ,
ನೀಲೇಶ್ವರ, ದ ಕನ್ನಡ

ಕ್ಷಿಪ್ರಗುಣಕಾರಿ' ಮಹೌಷಧ'!

ಸಿರಪ್ ವಾಸಕಾ.

ಕೆಮ್ಮು, ಶೀತ, ಜ್ವರ, ಪಕ್ಕೆಗಳ ವೇದನೆ, ರಕ್ತಕಾಸ, ಕ್ಷಯ, ಉಬ್ಬಸ, ಬ್ರೊಂಕಾಯಿಟಿಸ, ನ್ಯೂಮೋನಿಯಾ ಮುಂತಾದ ಶ್ವಾಸಕೋಶದ ಯಾವತ್ತು ರೋಗಗಳಿಗೆ ಅತ್ಯುತ್ತಮವಾದ್ದು ಪ್ರಾಚೀನಾರಭ್ಯ ಕಾಸರೋಗಗಳಿಗೆ ವಿಶೇಷ ಗುಣಕಾರಿ ಎಂದು ಹೆಸರುಗೊಂಡ 'ಆಡಸೋಗೆ' ಎಂಬ ಗಿಡಮೂಲಿಕೆಯಿಂದ ತಯಾರಿಸಲ್ಪಟ್ಟಿದ್ದು, ಇದರಿಂದ ದೂಷಿತವಾದ ಶ್ಲೇಷ್ಮವು ಬೇಗನೆ ಕೆಳವಾಗುವದರಿಂದ ಕೆಮ್ಮು ಬರುವಾಗ ಕಷ್ಟವಾಗುವದಿಲ್ಲ ರುಚಿಯಲ್ಲಿ ಸಿಹಿಯಾಗಿರುವದರಿಂದ ಮಕ್ಕಳಿಗೆ ಇದರ ಸೇವನೆಯಲ್ಲಿ ಬಹು ಪ್ರೀತಿ

ಬಾಟ್ಲಿ 1ರ ಕ್ರಯ ಬರೇ ಒಂದು ರೂಪಾಯಿ ಮಾತ್ರ

ಬೆಂಗಾಲ ಕೆಮಿಕಲ ಮತ್ತು ಫರ್ಮಾಸ್ಯೂಟಿಕಲ ವರ್ಕ್ಸ್ ಕಂಪೆನಿ ಲಿಮಿಟೆಡ್, ಕಲ್ಕತಾ,

ಸೋಲ ಏಜಂಟ್ಸ್ —

ಪಿ ಎ ಪೈ ಬ್ರದರ್ಸ್, ಉಡುಪಿ

ಮಿಜಾರ್ಕಾರ ಬ್ರದರ್ಸ್, ಮಂಗಳೂರು,

ಇವರಲ್ಲಿಯೂ ಸಿಗುವದು

ಪುಸ್ತಕಗಳು.

ವಿಧವ್ಯಶ್ರೀ ೧—೫—೦, ಸುಭದ್ರ ೦—೬—೦, ರಾಮಾಯಣ ಸಂಗ್ರಹ ಬಾಲಕಾಂಡ ೦—೩—೬, ಶ್ಯಾಮಕುಬ್ಜ ೦—೧೦—೦, ಚಿಕ್ಕ ಉಪಾಧ್ಯಾಯರ ಪುಸ್ತಕ ೩—೦—೦, ಧರ್ಮಶಿಕ್ಷೆ ೦—೧೨—೦, ಸಚಿತ್ರ ಆಂಗ್ಲಭಾಷಾ ಪ್ರಕಾಶಿಕಾ ಮೂರು ಭಾಗಗಳುಳ್ಳದ್ದು ೨—೮—೦

ತೆಲಗು ಅಕ್ಷರದ ಸಂಗೀತ ಪುಸ್ತಕಗಳು.

ಸಂಗೀತ ಸ್ವರಾಯಣ ೩—೩—೦, ಗಾಂಧರ್ವಕಲ್ಪವಲ್ಲಿ ೩—೮—೦, ಸಂಗೀತ ಕೃತಿದರ್ಪಣ ಪ್ರಥಮ ಭಾಗ ೨—೨—೦, ಎರಡನೇ ಭಾಗ ೨—೩—೦, ಸಂಗೀತ ಸ್ವರ ಪ್ರಸ್ತಾರಸಾಗರ ೬—೮—೦, ಏಜಂಟರು ಬೇಕಾಗಿದ್ದಾರೆ. ಅವಶ್ಯಕ.

ವಿಳಾಸ:—

ಎಚ್. ಎಸ್. ರಾವ್ ಬ್ರದರ್ಸ್,
ಚಿಕ್ಕಪೇಟೆ, ಬೆಂಗಳೂರು ಸಿಟಿ.

ಗೊನೊಕ್ಯೂರಾ.

ಮೇಹ ರೋಗಕ್ಕೆ (Gonorrhea) ಪರಮೌಷಧವು.

ಎಲ್ಲಾ ವಿಧ ಮೇಹಗಳಲ್ಲಿ, ದಪ್ಪವಾದ ಕೀವಿನಂಥಾ ಮೇಹವು ಹರಿಯುವದಕ್ಕೆ, ಮೂತ್ರಸ್ಥಾನದಲ್ಲಿಯ ಉರಿ, ಹಳದಿವರ್ಣದ ಅಥವಾ ಹಸುರುವರ್ಣದ ಕಾಣ ಉಳ್ಳ ಮೇಹವು ಹರಿಯುವದಕ್ಕೆ, ಮೂತ್ರಮಾಡುವಾಗ ಇಂದ್ರಿಯದಲ್ಲಿ ಉರಿ, ಮುಂತಾದ—ಮೇಹ ಸಂಬಂಧವಾದ ಎಲ್ಲಾ ಗುರುತುರೋಗಗಳಲ್ಲಿ ಉತ್ತಮ ಔಷಧವು. ಇದರ ಸೇವನೆಯಿಂದ ಬಹುಕಾಲದ ಹಳೆ ಮೇಹರೋಗಗಳಾದರೂ

ಖಂಡಿತವಾಗಿ ಗುಣಹೊಂದುವವು.

ಔಷಧ ಸೇವಿಸುವ ಕ್ರಮ— 2 ಘಂಟೆಗೆ ಒಂದಾವರ್ತಿ 5 ಬಿಂದು ಔಷಧವನ್ನು ಒಂದು ಚಮಚದಷ್ಟು ನೀರಿನಲ್ಲಿ ಹಾಕಿ ಸೇವಿಸುವದು. ಕ್ರಯ— ರೂ 1—0—0

ಬೇಕಾಗಿದ್ದವರು ಕೆಳಗಿನ ವಿಳಾಸಕ್ಕೆ ಬರಿಯತಕ್ಕದ್ದು

ವಿಳಾಸ— ಎ. ಪೆರ್ನಾಂಡಿಸ್,
ಇಲೆಕ್ಟ್ರೊ ಹೋಮಿಯೊಪತಿ ಡಿಸ್ಪೆನ್ಸರಿ,
ಮಂಗಳೂರು.

ಮದ್ರಾಸ್ ಸರ್ಕಾರದವರಿಂದ 1920ನೇ ವರ್ಷದ ಪರೀಕ್ಷೆಗಳಿಗೆ ನೇಮಿಸಲ್ಪಟ್ಟಿರುವ

ಕನ್ನಡ ಪಾಠಪುಸ್ತಕಗಳು

	ರೂ	ಆ	ಪೈ		ರೂ	ಆ	ಪೈ
ರಾಮಾಯಣ ಸಂಗ್ರಹ— ಬಾಲಕಾಂಡ.	0	6	0	ಚಂದ್ರಹಾಸ	0	2	0
ಸುಭದ್ರೆ	0	6	0	ಗುಣನಿರೂಪಣೆ	0	6	0
ಪರಿಮಳ...	0	12	0	ನೀತಿಚಿಂತಾಮಣಿ ಭಾಗ I	0	4	0
ಪದ್ಯಸಾರ; ಭಾಗ I	0	8	0	„ „ II	0	3	0
ಅಕ್ಬರ್ ಚರಿತ್ರ	1	1	0	„ „ III	0	4	6
ರಾಜಶೇಖರ ಚರಿತ್ರ	1	0	0	ಹೊಸ ಪುಸ್ತಕಗಳು			
ಸುಮತಿಮದನಕುಮಾರ				ವಿಜಯನಗರ	0	6	0
ಚರಿತ್ರ I	0	8	6	ಸುಶೀಲ	0	1	6
ಅಧಿಕಪಾಠಗಳ ಪುಸ್ತಕ	0	6	0	ಚಂದ್ರಮತಿ	0	8	0
ಸಾವಿತ್ರೀ ಚರಿತ್ರ	0	2	3	ಸಂತಾಪಕ	0	6	0
ರಮಾನಂದ	0	10	0	ಅಬಲಾಸಚ್ಛರಿತ್ರ ರತ್ನಮಾಲೆ	2	0	0
ಸುವ್ರತ	0	13	0	ನಿರ್ಮಲೆ	0	12	0
ಪ್ರಬಂಧಮಂಜರಿ	0	14	0	ಪದತ್ರಯ (ಬಾಲವ್ಯಾಕರಣ)	0	3	6
ಪದಾರ್ಥವಿಜ್ಞಾನಶಾಸ್ತ್ರ	0	14	0	ಹಿಂದೂ ವ್ರತವಿವೇಕ	0	10	0
ಜ್ಯೋತಿಶ್ಶಾಸ್ತ್ರ	1	0	0	ಪದ್ಮಿನಿ	0	12	6
ಪ್ರಹ್ಲಾದ	0	2	0	ದಾಕ್ಷಾಯಣಿ	0	8	0
ಧ್ರುವ	0	2	0	ಮಹಾರಾಣಿ ಲಕ್ಷ್ಮೀಬಾಯಿ	0	12	0

ಇತ್ಯಾದಿ ಎಲ್ಲಾ ಸ್ಕೂಲ್ ಪುಸ್ತಕಗಳೂ ನಮ್ಮಲ್ಲಿ ಸುಲಭ ಬೆಲೆಗೆ ದೊರೆಯುತ್ತವೆ

ಎಂ. ಎಸ್. ರಾವ್ ಕಂಪೆನಿ,
ಪುಸ್ತಕವ್ಯಾಪಾರಿಗಳು, ಬೆಂಗಳೂರು ಸಿಟಿ

ಪ್ರಖ್ಯಾತಿ ಪಟ್ಟ

ಮಂಗಳೂರು ನಶ್ಯದ ಹುಡಿ.

ಸೊಗಸಾದ ಹೊಗೆಸೊಪ್ಪನ್ನು ಉಪಯೋಗಿಸಿ ಬಹಳ ಅನುಭವಸ್ಥರಿಂದ ತಯಾರಿಸಲ್ಪಡುತ್ತದೆ ಈ ನಶ್ಯವು ಒಂದೆರಡು ತಿಂಗಳವರೆಗಾದರೂ ಕೆಡುವುದಿಲ್ಲ

ದಾಟ್ಲಿ 1ರ ಕ್ರಯ 3—4—0 ಹೆಚ್ಚಿಗೆ ಕೊಳ್ಳುವವರಿಗೆ ರೂ 3 ನಾಸಿಕ ಚೂರ್ಣ ಇದು ಕಂಠದ ಮೇಲಿನ ಯಾವತ್ತೂ ರೋಗಗಳನ್ನೂ ಗುಣಪಡಿಸುತ್ತದೆ ತೊಲೆ 1ರ ಕ್ರಯ 0 8 0 ವಿ ಪಿ ಖರ್ಚು ಪ್ರತ್ಯೇಕ ಸ್ಯಾಂಪಲನ್ನು ಅಪೇಕ್ಷಿಸುವವರು 2 ಆಣೆ ಸ್ಟಾಂಪನ್ನು ಕಳುಹಿಸುವದು ರಖಂ ಪಡಕೊಳ್ಳುವವರಿಗೆ ಯೋಗ್ಯವಾದ ಕಮಿಶನ್ ದೊರಕುವುದು

ನಮ್ಮ ವಿಳಾಸ —

ಎಮ್. ಪದ್ಮನಾಭ ಭಂಡಾರಿ ಎಂಡ್ ಕೊ.,
ರಥಬೀದಿ, ಮಂಗಳೂರು



ಜಗತ್ಪ್ರಸಿದ್ಧವಾದ ಅನೇಕ ರೋಗಗಳಿಗೆ ಒಂದೇ ಔಷಧವು.

ಇಂಡಿಯಾ ಸರಕಾರದಲ್ಲಿ ಸನ್ ೧೮೮೭ನೇ ಇಸವಿಯ ೨೫ನೇ ಆಕ್ಟಿನಂತೆ ರಜಿಸ್ಟರ ಮಾಡಲ್ಪಟ್ಟ

ಅರ್ಕುಶಫಾ ಅಥವಾ ಆರೋಗ್ಯಬಿಂದು.

ಈ ಅರ್ಕುಶಫಾ ಎಂಬ ಔಷಧವು ಯಾವತ್ತು ರೋಗಕ್ಕೆ ಮನವರಿಕೆಯಾಗಿ ತಾ. ೧೦-೫-೧೯೦೮ನೇ ಇಸವಿಯಿಂದ ತಾ ೧-೯ ೧೯೧೮ನೇ ಇಸವಿಯವರೆಗೆ ಮೂವತ್ತು ಸಾವಿರ ಬಾಟಲಿಗಳು ಖರ್ಚಾದವು ಮತ್ತು ಸನ್ ೧೯೧೮ನೇ ಇಸವಿ ಅಕ್ಟೋಬರ್ ತಿಂಗಳಲ್ಲಿ ಇನ್‌ಫ್ಲೂಯಂಜಾ ಜ್ವರಕ್ಕೆ ಒಂದೇ ತಿಂಗಳಲ್ಲಿ ಒಂಭತ್ತು ಸಾವಿರ ಬಾಟಲಿಗಳು ಖರ್ಚಾದವು. ಅಂತು ಈವತ್ತಿನ ವರೆಗೆ ಸಣ್ಣ ದೊಡ್ಡ ಬಾಟ್ಲಿಗಳು ಕೂಡಿ ಮೂವತ್ತೊಂಭತ್ತು ಸಾವಿರ ಬಾಟಲಿಗಳು ಖರ್ಚಾದವು ಅಂತ ಮೇಲೆ ಈ ಔಷಧವು ಎಷ್ಟು ಮೌಲ್ಯವಾನ್ ಅದೆ ಇದು ಯಾವತ್ತರು ತಾವೇ ಅನುಭವಕ್ಕೆ ತಂದು ಪ್ರತಿಯೊಬ್ಬರು ತಮ್ಮ ಸಂಗ್ರಹದಲ್ಲಿ ಒಂದು ಬಾಟ್ಲಿ ಇಟ್ಟುಕೊಂಡು ಅವಶ್ಯವೇ ಎಂದು ತಿಳಿದು ಸ್ವೀಕಾರಮಾಡುತ್ತಿರಬೇಕು ಈ ಆರೋಗ್ಯಬಿಂದು ಇಡೀ ಕರ್ನಾಟಕ ದೇಶಕ್ಕೆಲ್ಲಾ ಹೋಗಿ ರೋಗಿಗಳು ಈ ಅರ್ಕುಶಫಾದಿಂದಲೇ ಗುಣಹೊಂದಿದ ಬಗ್ಗೆ ಮತ್ತು ಯಾವತ್ತು ರೋಗಕ್ಕೆ ಉಪಯೋಗ ಆದಪ್ರಯುಕ್ತ ಎಷ್ಟೋ ಇನಾಮು ಸರ್ಟಿಫಿಕೇಟುಗಳು ಸಹ ದೊರೆದಿರುತ್ತವೆ ಅವು ಬರೆಯಲಿಕ್ಕೆ ಜಾಗವು ಸಾಲದು ಇಂಥ ಅಮೂಲ್ಯವಾದ ಈ ಔಷಧವನ್ನು ಎಲ್ಲರೂ ಸ್ವೀಕರಿಸಿ ರೋಗರಹಿತರಾಗುವರೆಂದು ನಂಬುತ್ತೇವೆ ರೋಗದ ಪರೀಕ್ಷೆಯ ಸಲುವಾಗಿ ಬೇರೆ ಡಾಕ್ಟರರ ಮತ್ತು ವೈದ್ಯರ ಜರೂರು ಬೀಳುವುದಿಲ್ಲ ಅಂತು ಮೇಲೆ ಈ ಆರೋಗ್ಯಬಿಂದುವಿನ ಮೇಲೆ ದುರ್ಲಕ್ಷ್ಯಮಾಡದೆ ಕೆಳಗೆ ಬರೆದ ರೋಗಗಳ ಮೇಲೆ ಉಪಯೋಗಮಾಡಿ ರೋಗ ನಿವಾರಣ ಮಾಡಿಕೊಳ್ಳಬೇಕು

ರೋಗದ ನಾಮಗಳು

ಕ್ಷಯರೋಗ, ಹಡದರೋಗ, ಪಾಂಡುರೋಗ, ಗುಲ್ಮರೋಗ, ಮಲರೋಗ ಮಹಾಮಾರಿ, (ಕಾಲರಾ), ಪ್ಲೇಗು, ಚಳಿಜ್ವರ, ವಿಷಮಜ್ವರ, ಇನ್‌ಫ್ಲೂಯಂಜಾ ಜ್ವರ, ಅನೇಕ ಪ್ರಕಾರದ ಜ್ವರ, ಗಂಡಮಾಲೆ, ಶಿವಿಶೂಲೆ, ಮೂಗಿನೊಳಗಿನ ಪಿನಸಿ ಮೊದಲಾದ ರೋಗವು, ಕಣ್ಣಿನೊಳಗೆ ಹೂವು ಬೀಳೋದು ಮತ್ತು ಕಣ್ಣುನೋವು ದಮ್ಮು, ಕೆಮ್ಮು, ಶ್ವಾಸ, ಅಜೀರ್ಣ, ಇದ್ದಲಿಸಿ, ಅಜೀರ್ಣ, ಹೊಟ್ಟೆಶೂಲಿ, ಪಿತ್ತಶೂಲಿ, ಅರದಲೆಶೂಲಿ, ಪಡಶೂಲಿ, ವಾತಶೂಲಿ, ರೇಚ್ಕಿಬಡು, ಗುದ್ದನ್ನನ ಕೀವ, ಹುರುಕು, ಕಜ್ಜಿ, ಗಜಕರ್ಣ ಕಡ್ಡು, ಸಿಸಬು, ಘಾಯವ್ರಣ, ನಾರುಹುಣ್ಣು, ಸ್ತ್ರೀಯರ ಮುಟ್ಟುಶೂಲಿ, ಹಡದ ಸಂದು, ಸಣ್ಣ ಕೂಸುಗಳ ಬಾಲಗ್ರಹ ತೋದಗೆಮ್ಮು ಅದವಿ, ಮುಟ್ಟುದೋಷ, ಹೊಟ್ಟೆ ದೊಡ್ಡದಾಗೋದು, ಮೈ ಹೊರಬೀಳೋದು, ಮತ್ತು ಸಣ್ಣ ಕೂಸುಗಳಿಗೆ ಮೈನ್ನರಿಗೂ ಸಹ ತಿಳಿಯದೆ ಇದ್ದ ಅನೇಕ ರೋಗಗಳು ಬೇಗ ಮತ್ತು ಸರ್ಪದಂಶ ಇದರ ಜೊರತು ಇನ್ನೂ ಅನೇಕ ರೋಗಗಳು ಮಾತ್ರೆಯಿಂದ ಗುಣವಾಗುತ್ತವೆ ಈ ಆರೋಗ್ಯಬಿಂದುವಿನ ಕ್ರಯ ಅಮೌಲ್ಯ ಕಂಡು ಬಂದಲ್ಲಿ ಬಡವರಿಗೂ ಧನವಂತರಿಗೂ ಸರಿಯಾಗಿ ಬಹಳ ಕಡಿಮೆ ಕ್ರಯ ಇಟ್ಟಿರುತ್ತದೆ ಒಂದುಕಾಲುತೊಲೆ ಬಾಟಲಿ ಒಂದಕ್ಕೆ ೭ ರೂಪಾಯಿ ನಮೂನೆ ಉಪ್ಪಿಗೆ ೨ ಆಣೆ, ತೊಲೆದ ಬಾಟ್ಲಿ ಒಂದಕ್ಕೆ ೮ ಆಣೆ. ವಿ ಪಿ ಖರ್ಚು ಬೇರೆ ಬೀಳುವದು. ಒಂದು ಡಜನ್ ಬಾಟ್ಲಿ ತಕ್ಕೊಂಡರೆ ನಾಲ್ಕು ಬಾಟ್ಲಿಗಳನ್ನು ಕಮಿಶನ್ ಕೊಡುತ್ತೇವೆ ಇದಕ್ಕೆ ಎಂಟು ಆಣೆ ಖರ್ಚು ಬರುವದು ೧೨ಂದ ೧೧ ಬಾಟಲಿಗಳ ವರೆಗೆ ತೆಗೆದುಕೊಂಡರೆ ಕಮಿಶನ್ ಇರುವದಿಲ್ಲ ಇದಕ್ಕೆ ನಾಲ್ಕು ಆಣೆ ಖರ್ಚು ಬರುವದು ಒಂದುಕಾಲುತೊಲೆಯ 3 ಬಾಟಲಿಗಳು ಒಂದೆ ಸಾರಿ ತಕ್ಕೊಂಡರೆ ಒಂದು ಬಾಟಲಿ ಕಮಿಶನ್ ಕೊಡುತ್ತೇವೆ ಇದಕ್ಕೆ ಖರ್ಚು ಎಂಟು ಆಣೆ ಬರುವದು ನಮ್ಮ ಔಷಧವು ಪೋಸ್ಟ ಹೊರತು ಬೇರೆ ತರಿಸ್ಕೊಳ್ಳತಕ್ಕದ್ದು ಮತ್ತು ಹೆಚ್ಚಿನ ಮಾಹಿತಿ ನ ಕಟಲಾಗು ದೇಶದಲ್ಲಿ ಪೋಸ್ಟ ಆಫೀಸು ಇರದ ಹೊಂತು ದೊರೆಯಲಿಕ್ಕಿಲ್ಲ ಅನುಭವದ ಪತ್ರಗಳು ಕನ್ನಡ, ಮರಾಠಿ ಮುಂತಾದ ಭಾಷೆಗಳಲ್ಲಿ ಛಾಪಿಸಿರುತ್ತವೆ ಪಸಂದಿ ಪ್ರಕಾರ ಬಾಟ್ಲಿಯು ಜೋಡು ಸಿಗುವವು ನಿಮ್ಮ ವಿಳಾಸ ಇಂಗ್ಲೀಷ್ ಅಥವಾ ಕನ್ನಡದಲ್ಲಿ ನಾಮ ಮತ್ತು ಪೋಸ್ಟ ವಗೈರೆ ಸ್ಪಷ್ಟವಾಗಿ ಬರೆಯುತ್ತಿರಬೇಕು.

ಹೆಚ್. ಎಂ ಮುಲ್ಲಾ, ಸಂಪಾದಕ ಅರ್ಕುಶಫಾ,
೩೩ ಹೆಡ್ ಆಫೀಸ್ ಶಹಾಪೂರ, (ಬೆಳಗಾಂವ)

Mr. ALEX ALVAREZ Dentist.

OF MANDALAY UPPER BURMA

Will attend patients here for the following in Particular —

Charges Moderate

1 Painless extraction of teeth 2 Making of false teeth 3 Filling the teeth with silver, gold, porceline 4 Gold bridge and Crowns 5 Porceline Crowns 6 Cleaning the teeth. 7 Pyorrhoea treatment

Can be consulted at —

The Electro Homoeopthic Dispensry
Hampankatta, MANGALORE

ಮಿ. ಆಲೆಕ್ಸ್ ಅಲ್ವರಿಸ ಧಂತವೈದ್ಯ.

ಇವರು ಹಲ್ಲು ಬೇನೆಯಿಂದ ನರಳುತ್ತಿರುವವರ ಹಲ್ಲುಗಳನ್ನು ಸ್ವಲ್ಪವೂ ನೋಯದಂತೆ ಬಾಧಾರಹಿತ ಕಿತ್ತು ತೆಗೆಯೋದು, ಕೃತ್ರಿಮ ಹಲ್ಲುಗಳನ್ನು ಮಾಡಿ ಇಡೋದು, ಹಲ್ಲುಗಳಲ್ಲಿ ಉಂಟಾದ ರಂಧ್ರಗಳನ್ನು ಬೆಳ್ಳಿ, ಬಂಗಾರ, ಪಿಂಗಾಣಿ ಇವುಗಳಿಂದ ಮುಚ್ಚೋದು ಬಂಗಾರದ ಕೃತ್ರಿಮ ದಂತಮಾಲೆಯನ್ನು ಬುಡ ಸಹಿತ ಇರಿಸೋದು, ಪಿಂಗಾಣಿ ಹಲ್ಲುಮಾಲೆಯನ್ನು ಇಡೋದು ಮತ್ತು ಹಲ್ಲುಗಳನ್ನು ಶುಚಿಮಾಡೋದು ಮುಂತಾದ ದಂತಚಿಕಿತ್ಸೆಯನ್ನು ಪಲೆವಾತ ಚಿಕಿತ್ಸೆಯನ್ನೂ ಮಾಡುವರು. ಇವರು ಹಂಪನಕಟ್ಟೆಯಲ್ಲಿರುವ ಮಿ। ಎ. ಫೆರ್ನಾಂಡಿಸ್, ಇಲೆಕ್ಟ್ರೊ ಹೋಮಿಯೊಪಥಿಕ್ ಡಿಸ್ಪೆನ್ಸರಿಯಲ್ಲಿ ಮೊಕ್ಕಾಂ ಮಾಡಿರುತ್ತಾರೆ

ಮುಫತ್ತು!! ಇಂಥಾದ್ದು ಬೇಕು.

ಗುಲ್ಶನ್ ಜೋಬಿನ್

ಸರಕಾರದಲ್ಲಿ ರಿಜಿಸ್ಟರು ಮಾಡಲ್ಪಟ್ಟ ನಂ. 253.

ಒಂದಾಣೆ ಸ್ಟ್ಯಾಂಪಿನೊಳಗೆ ರುಜುಮಾತು ಶಿಕ್ಕೆಯುಳ್ಳ ರಶೀದು— ಈ 32 ಮಾತ್ರೆಗಳುಳ್ಳ ಬಾಟ್ಲಿಗಳನ್ನು ಖರೀದಿಸುವವರಿಗೆ ಕೊಡಲ್ಪಡುತ್ತದೆ ಈ ಮಾತ್ರೆಗಳನ್ನು ಸೇವಿಸಿ ಗುಣಕೊಡದಿದ್ದರೆ ಮನಸಾಕ್ಷಿಯಾಗಿ ಆ ರಶೀದಿಯೊಳಗೆ ದಸ್ತುಮಾಡಿ ಒಂದು ತಿಂಗಳೊಳಗಾಗಿ ವಾಪಸು ಕೊಟ್ಟರೆ ಬಾಟ್ಲಿಯ ಕ್ರಯವನ್ನು ವಾಪಸು ಮಾಡುತ್ತೇವೆಂದು ಪ್ರತಿಜ್ಞೆಯನ್ನು ನಾವು ದೃಢವಾಗಿ ಮಾಡುತ್ತೇವೆ

ಗುಲ್ಶನ್ ಜೋಬಿನ್.

ಶಕ್ತಿವರ್ಧಕ! ಧಾತುಪೌಷ್ಟಿಕ!! ರೋಗನಿವಾರಕ!!

ಈ ಮಾತ್ರೆಗಳು ಸೇವಿಸಿದ ಪ್ರಥಮ ದಿವಸದಲ್ಲಿಯೇ ಆಶ್ಚರ್ಯಕರವಾದ ಗುಣಗಳನ್ನು ತೋರಿಸುವುದು. ಕಳೆಗುಂದಿದ ಕಪೋಲಗಳಿಗೆ ಪುಷ್ಟಿ ಮತ್ತು ಕಾಂತಿಯನ್ನು ಕೊಟ್ಟು, ಶರೀರಕ್ಕೆ ಧಾತುಪುಷ್ಟಿ, ಸುಖನಿದ್ರೆಗಳನ್ನು ಕೊಡುತ್ತವೆ. ಕಟಿಶೂಲ, ವಾಯುರೋಗ, ಕ್ಷಯ, ಶ್ವಾಸ, ಕಾಸ, ಉದರಶೂಲೆ, ಅಜೀರ್ಣ, ಮೂತ್ರರೋಗ, ಮಲಬದ್ಧತೆ, ಜ್ವರಗಳು, ಮೂಲವ್ಯಾಧಿ, ಅನಿಯಮಿತಋತು. ಇವುಗಳನ್ನು ಸಮೂಲನಾಶಿಸಿ, ರಕ್ತಶುದ್ಧಿಯೂ ವೃದ್ಧಿಯೂ ಕಂಡು ಚರ್ಮವ್ಯಾಧಿಗಳನ್ನು ನಿವಾರಣೆಮಾಡುತ್ತವೆ

ಬಾಟ್ಲಿ 1ಕ್ಕೆ ರೂ 1 3ಕ್ಕೆ ರೂ 2—10—0 ವಿ ಪಿ ಚ ಬೇರೆ

ಏಜಂಟರುಗಳು ಬೇಕು. ಎಲ್ಲ ಸ್ಥಳಗಳಲ್ಲಿ ಸಿಕ್ಕುವುದು.

ವಿಳಾಸ — ದಿ ಗುಲ್ಶನ್ ಜೋಬಿನ್ ಕಂಪೆನಿ, ಬೊಂಬೈ 3.

ಪರಸ್ಪರ ಸಹಕಾರ ಸಂಘಕ್ಕೆ

ಉಪಯುಕ್ತವಾದ,

ಕರಾರು ಫೋರ್ಮುಗಳು	100ಕ್ಕೆ	1—0—0
ರಶೀದಿ „	200ಕ್ಕೆ	1—0—0
ರಿಜಿಸ್ಟ್ರ ನೋಟೀಸು	100ಕ್ಕೆ	1—8—0
ಲೇವಣಾತಿ ಅರ್ಜಿ	100ಕ್ಕೆ	0-12—0

ಇವುಗಳಲ್ಲದೆ ಲೆಕ್ಕಪತ್ರಗಳನ್ನಿಡಲಿಕ್ಕೆ ಬೇಕಾಗಿರುವ ಪುಸ್ತಕಗಳು, ರಿಜಿಸ್ಟರುಗಳು ವಗೈರೆ ಇತರ ಲಿಖಾವಟದ ಸಾಹಿತ್ಯಗಳು ತಯಾರಿರುತ್ತವೆ

ವಿಳಾಸ—

ಮ್ಯಾನೇಜರ್,
ಶಾರದಾ ಛಾಪಖಾನೆ,
ಮಂಗಳೂರು

ಮಲೆಜ್ವರ.

ಮಲೆಜ್ವರಹಾರಿ.

ಮಲಜ್ವರ ಮುಂತಾದ ಆಗಾಗ ಬರುವ ಜ್ವರಗಳಿಗೆ ಉತ್ತಮ ಪರಿಹಾರ ಬೆಲೆ ಆ ೧೨

ವಿಷವಯುಕ್ತವಾದ ಪದಾರ್ಥಗಳು ಒಂದೆ ರೋಗನಿವಾರಣೆಗೆ ಸಹಕಾರಿಯಾದರೂ ಇನ್ನೊಂದು ರೋಗಕ್ಕೆ ಎಡೆಕೊಡುತ್ತವೆ ಅಂಥ ವಿಷಮಯವಾದ ಪದಾರ್ಥಗಳು ಇದರಲ್ಲಿ ಲವಲೇಶವೂ ಇಲ್ಲ

ಹಿಂದುಸ್ಥಾನ ಬರ್ಮಾ ಸಿಂಹಳ ಮುಂತಾದ ಪ್ರದೇಶಗಳ ಬೇರೆ ಬೇರೆ ಕೊನೆಗಳಿಂದಲೂ ಕಳೆದ ೩೦ ವರ್ಷಗಳಲ್ಲಿ ಅಸಂಖ್ಯಾತವಾದ ಶಿಫಾರಸು ಪತ್ರಗಳು ಬಂದಿರುವವು

ಪುನೆಯ ಕೃಷಿಕಾಲೇಜಿನ ಅಧ್ಯಾಪಕರಾದ ಡಾ ಮೇನ್‌ಸಾಹೇಬರು ಈ ರೀತಿಯಾಗಿ ಬರೆದಿರುತ್ತಾರೆ "ಬೇರೆ ಬೇರೆ ವಿಧದ ಜ್ವರಗಳ ಸಂದರ್ಭದಲ್ಲಿ ನಾನು ಈ ಔಷಧವನ್ನು ಪ್ರಯೋಗಿಸಿದಾಗ ಅದರಿಂದ ಕ್ಷಿಪ್ರದಲ್ಲಿ ಗುಣಾಂತರಸಿಕ್ಕಿತು"

ನಮ್ಮ ಏಜಂಟರು ಈ ಮೊದಲೇ ನೇಮಕವಾಗದ ಸ್ಥಳದಲ್ಲಿ ನಮಗೆ ಏಜಂಟರು ಬೇಕು ಕಮಿಶನ್ ಮುಂತಾದ ಶರ್ತಗಳನ್ನು ನಮಗೆ ಬರೆದು ತಿಳಿದುಕೊಳ್ಳಬಹುದು

ಕರ್ನಾಟಕ ಬ್ರದರ್ಸ್,
56 ಗಿರಗಾಂವ, ಮುಂಬಯಿ

Agent —
The Woollen Mart, *Mangalore*

ಲೂಯಿಸರ ಎಲಿಕ್ಸಿರಾ ಫೊರ್ ಹೆಲ್ತ್

ಎಂಬುವ ಪಾನಕವು ಚಾ ಮತ್ತು ಕಾಫಿಗಳಿಗಿಂತ ಅತ್ಯಂತ ಹಿತಕರವಾದ ಪಾನವಾಗಿದ್ದು ಬಹುಮೂತ್ರಪೀಡೆ ಬಾರದಂತೆ ಆರೋಗ್ಯ ಕಾಪಾಡುತ್ತದೆ ಬಾಯಾರಿಕೆ ತಗ್ಗಿಸುತ್ತದೆ ಮೂತ್ರದ ಹಲವು ದೋಷಗಳನ್ನು ಹೋಗಲಾಡಿಸುತ್ತದೆ. ಒಮ್ಮೆ ಉಪಯೋಗಿಸಿದರೆ ಮತ್ತೆ ಇದನ್ನು ಬಿಡರು ಪರೀಕ್ಷಾರ್ಥವಾಗಿ ಒಂದು ಸೀಸೆ ತರಿಸಿರಿ

8 ಔನ್ಸಿನ ಸೀಸೆಗೆ ಕ್ರಯ ರೂ — 3 —) ಮಾತ್ರ

ಡಾಯಬೆಟೊನ್

ಇದು ಬಹುಮೂತ್ರದ ಪೀಡೆಗೆ ಅತ್ಯುತ್ತಮ ಔಷಧ ಪೂರ್ಣ ಗುಣಮಾಡುತ್ತದೆ. ರೋಗಿಗಳಿಗೆ ಅಮೃತಪ್ರಾಯವಾಗಿದೆ 8 ಔನ್ಸಿನ ಸೀಸೆಗೆ ರೂ 5 ಮಾತ್ರ ಪಳಿಂಚೆಹಾಸಲು ವಗೈರೆ ಇದರಲ್ಲಿ ಸೇರಿಲ್ಲ ಸೇವನೆಯ ಸೂಚನೆಗಳು ಸೀಸೆಯೊಂದಿಗೆ ಸಿಗುವವು

P. M. Kamath & Co.
Chemists & General Merchants,
New Court Road, MANGALORE

ಅಥವಾ ಕುಂದಾಪುರದಲ್ಲಿ ಈ ಔಷಧವನು ತಯಾರಿಸುವ ಮಿ। ಕೆ ಆರ್ ಲೂವಿಸರನ್ನು ವಿಚಾರಿಸಿದರೆ ಈ ಔಷಧವನ್ನು ಹೊಂದಬಹುದು.

ಆಯುರ್ವೇದಾಶ್ರಮ.

ವೈದ್ಯರತ್ನ ಪಂಡಿತ ಡಿ. ಗೋಪಾಲಾಚಾರ್ಲು

ಇವರಿಂದ ಸ್ಥಾಪಿತವಾಗಿ ನಡಿಸಲ್ಪಟ್ಟಿರುತ್ತದೆ.

ಪ್ಲೇಗ್, ಕೋಲೇರಾ ಮತ್ತು ಇನ್‌ಫ್ಲುಯೆಂಜಾ

ಇವಕ್ಕೆ ಮುಖ್ಯವಾದ ಚಿಕಿತ್ಸಾಲಯ.

ಸಕಲ ರೋಗಗಳನ್ನು ದೂರಪಡಿಸುವ ಗುಣಪಡಿಸುವ ಹಾಗೂ ಆರೋಗ್ಯವನ್ನು ಉಂಟುಮಾಡುವ ಔಷಧಗಳು ಇಲ್ಲಿ ದೊರೆಯುವವು. ಕೆಟಲಾಗನ್ನು ಅಪೇಕ್ಷಿಸುವವರಿಗೆ ಉಚಿತವಾಗಿ ಕಳುಹಿಸುವೆವು.

ಪ್ಲೇಗು ಔಷಧದ ದೊಡ್ಡ ಸೆಟ್ಟಿಗೆ ರೂ. 2—2—0 | ಕೋಲೇರಾ ಔಷಧದ ದೊಡ್ಡ ಸೆಟ್ಟಿಗೆ ರೂ. 1—2—0
" ಸಣ್ಣ " " 1—6—0 | " ಸಣ್ಣ " " 0—12—0

ಇನ್‌ಫ್ಲುಯೆಂಜಾ ಔಷಧದ ಪ್ರತಿ ಸೆಟ್ಟಿಗೆ ರೂ. 1—12—0.

ಎಲ್ಲಾ ಔಷಧಗಳನ್ನು ಕಳುಹಿಸುವಾಗಲೂ ಟಪ್ಪಾಲ ಹಾಸಲು ಮತ್ತು ಪ್ಯಾಕಿಂಗ್ ಪ್ರತ್ಯೇಕ.

ವಿಳಾಸ:— ಮೆನೇಜರ್, ಆಯುರ್ವೇದಾಶ್ರಮ,
55 ಆಚಾರಪ್ಪನ ಬೀದಿ,
ಜೋರ್ಜಟೌನ್, ಮದರಾಸ್.

ತಂತಿ ವಿಳಾಸ:— ಪಂಡಿತ್, ಮದರಾಸ್.

ಪಾಳ್ಯದ ವೆಂಕಟಾಚಲ ಪಂಡಿತರ ಸಿದ್ಧೌಷಧಗಳು.

ಲೋಕಾಮಯಹರ ಕಸ್ತೂರಿ ಮಾತ್ರೆಗಳನ್ನು ಈಗಲಾದರೂ ಪರೀಕ್ಷಿಸಿ ನೋಡಿರಿ!

ಪ್ರತಿವರ್ಷವೂ ಲಕ್ಷಾಂತರ ಸೀಸೆಗಳು ವಿಕ್ರಯವಾಗುತ್ತಿವೆ.

ಇಂಡಿಯಾದವರು ಮಾತ್ರವಲ್ಲ; ಬರ್ಮಾ, ಸಿಲೋನ್, ಮಲೆಯ ಸ್ಟೇಟ್, ಗೋವಾ, ಫೀಜಿವಲೆಂಡ್, ಆಫ್ರಿಕಾ ಮೊದಲಾದ ಕಡೆಯವರು ಕೂಡ ಈ ಸಿದ್ಧೌಷಧಿಯನ್ನು ಉಪಯೋಗಿಸುತ್ತಿರುತ್ತಾರೆ.

ಮಹಾಭಾಗ, ಒಂದೇ ಒಂದು ಲೋಕಾಮಯಹರ ಕಸ್ತೂರಿ ಮಾತ್ರೆಯ ಸೀಸೆಯು ನಿಮ್ಮ ಮನೆಯಲ್ಲಿದ್ದರೆ ಸಮಯವನ್ನು ಕಾದು ನೋಡಿಯಾದರೂ ನಿಜವಾಗಿಯೂ ತಿಳಿವುದು.

ಶೀತ, ಶೀತವಾಯು, ಅಜೀರ್ಣ, ಪಾರ್ಶ್ವವಾಯು, ಜ್ವರ, ಮಂದ, ಮಲಬದ್ಧ, ಕೆಮ್ಮು, ಗಸೆಬೇನೆ, ಬಲ ಹೀನತೆ, ಹೊಟ್ಟೆ ಹವಾ, ಮತ್ತು ಕೆಡುರಾದ ನೀರಿನಿಂದುಂಟಾಗುವ ವಿಕಾರ, ಮಕ್ಕಳ ಎಳವು, ಜ್ವರ, ಕೆಮ್ಮು, ವಾಯು, ಇನ್ನು ಅನೇಕ ರೋಗಗಳನ್ನು ಈ ಸಿದ್ಧಾತ್ಮಕ ಆಶ್ಚರ್ಯವಾಗುವಂತೆ ಗುಣಪಡಿಸುತ್ತದೆ.

ಪ್ರತಿ 6 ಸೀಸೆಗಳನ್ನು ಒಟ್ಟಿಗೆ ತರಿಸಿದರೆ ಟಪಾಲು ಖರ್ಚು ಸೇರಿ 1—8—0.
ಪ್ರತಿ 12 ಸೀಸೆಗಳನ್ನು ಒಟ್ಟಿಗೆ ತರಿಸಿದರೆ ಟಪಾಲು ಖರ್ಚು ಸೇರಿ 2—13—0.
ಪ್ರತಿ 25 ಸೀಸೆಗಳನ್ನು ಒಟ್ಟಿಗೆ ತರಿಸಿದರೆ ಟಪಾಲು ಖರ್ಚು ಸೇರಿ 6—3—0.

ರಿಜಿಸ್ಟರಾದ ಈ ವ್ಯಾಪಾರದ ಗುರ್ತು ಪ್ರತಿ ಸೀಸೆಯ ಮೇಲೂ ಇರುವುದನ್ನೇ ನೋಡಿ ತೆಗೆದುಕೊಳ್ಳಬೇಕಾಗಿದೆ.

ಅನುಪಾನ ಪತ್ರವು ಪ್ರತಿ ಸೀಸೆಯೊಡನೆಯೂ ಇರುವುದು. 260 ಮಾತ್ರೆಗಳುಳ್ಳ ಕುಪ್ಪಿಗೆ 4 ಆಣೆ ಮಾತ್ರ.

ಲಕ್ಷ್ಮೀವಿಲಾಸ ರಸ (ಪ್ಲೇಗಿಗೆ)—ಲಕ್ಷ್ಮೋಪಲಕ್ಷ ಪ್ಲೇಗುರೋಗಿಗಳು ಈ ಲಕ್ಷ್ಮೀವಿಲಾಸ ರಸದಿಂದ ಆರೋಗ್ಯವನ್ನು ಪಡೆದಿರುತ್ತಾರೆ. ಒಂದೇ ಒಂದು ಲಕ್ಷ್ಮೀವಿಲಾಸ ರಸದ ಸೀಸೆಯು ತಮ್ಮಲ್ಲಿದ್ದರೆ ಪ್ಲೇಗಿಗೆ ಸರ್ವೋತ್ಕೃಷ್ಟವಾದ ಸಿದ್ಧೌಷಧಿಯು ಬೇರೊಂದಿಲ್ಲವೆಂದು ನಾವೇ ಹೇಳುವೆವು. ದಿನಜ್ವರ, ಮೂರರ ನಾಲ್ಕರ ಜ್ವರಗಳು, ಸನ್ನಿಪಾತ ಇವುಗಳು ಕೂಡಾ ಗುಣವಾಗುತ್ತವೆ. ಸೀಸೆಗೆ ರೂ. 1. 5ಕ್ಕೆ ಒಂದು ಇನಾಮು.

ಶ್ರೀನಿವಾಸತೈಲ—ಪ್ಲೇಗಿನ ಗಡ್ಡೆ ಕರಗುತ್ತದೆ. ಸಂದುಗಳ ನೋವು ನೀಗಲು ಹೋಗುತ್ತದೆ. ಸೀಸೆಗೆ 8 ಆಣೆ. 5ಕೆ ಒಂದು ಇನಾಮು.

ವೈಶ್ವಾನರಾಸವ—ಸೇವಿಸಿದ ಮೊದಲನೇ ವೇಳೆಯಿಂದಲೇ ವಾಂತಿಭೇದಿ, ಶೀತಭೇದಿ, ಅಜೀರ್ಣದ ಭೇದಿಗಳು ಗುಣವಾಗುತ್ತಾ ಬರುತ್ತವೆ. ಸೀಸೆಗೆ ರೂ. 1. 5ಕ್ಕೆ ಒಂದು ಇನಾಮು.

ಬಾಲಸುಭೋದಯ—ಮಕ್ಕಳಿಗೆ ಬಲಕಾರಿ, ಸಿಹಿಯಾಗಿರುತ್ತದೆ. ಮಂದ, ಮಲಬದ್ಧ, ಅಜೀರ್ಣದ ಭೇದಿ, ಕ್ಷಯ, ಹೊಟ್ಟೆ ದಪ್ಪವಾಗಿರುವುದು, ಹಸಿವಿಲ್ಲದಿರುವುದು ಇವೆಲ್ಲವೂ ಗುಣವಾಗಿ ಮಕ್ಕಳು ಪುಷ್ಟರಾಗುತ್ತಾರೆ. ಪುಷ್ಟಿಯ ಚಟುವಟಿಕೆ ಸೀಸೆಗೆ ಆಣೆ 12. 5ಕ್ಕೆ ಒಂದು ಇನಾಮು. ಈ ನಾಲ್ಕಕ್ಕೂ ಟಪಾಲು ಖರ್ಚು ಬೇರೆ.

ಸಮಸ್ತ ರೋಗಗಳಿಗೂ ನಮ್ಮಲ್ಲಿ ಆಯುರ್ವೇದೀಯ ಸಿದ್ಧೌಷಧಿಗಳು ದೊರೆಯುತ್ತವೆ. ಕ್ಯಾಟಲಾಗು ಉಚಿತ.

ವಿಳಾಸ: ಶ್ರೀ ಸೀತಾರಾಘವ ವೈದ್ಯಶಾಲಾ ಮೈಸೂರು.

ಒಂದು ಕುಪ್ಪಿಯ ಕ್ರಯ ೧೪ ಆಣೆ. ಮಂಗಳೂರು ಏಜಂಟ್,
ಕೇ. ಟೀ. ಡೋಂಗರೆ ಕಂಪೆನಿ, ಧಿ. ಉಲ್ಲನ್‌ಮಾರ್ಟ್, ಮಂಗಳೂರು.
ಗಿರಗಾಂ ಮುಂಬಯಿ.

ನೋಟೀಸು

ಮಂಗಳೂರ ಶಹರಿನಲ್ಲಿ ಇರುವ ಮಂಜೇಶ್ವರ ದೇವರಾಯರ ಮಗ ಅನಂತಕೃಷ್ಣರಾಯರು ಸದ್ರಿಯವರ ಚಾಲಗೇಣಿ ವಕೀಲ ನಿಸ್ಸಂತತಿಯಾಗಿ ಇತ್ತಲಾಗೆ ಮೃತಪಟ್ಟ ಉಪ್ಪಿನಂಗಡಿ ತಾಲೂಕು ಬಿಟ್ಟಿನಾಗೆ ಕರೋಪಾಡಿ ಗ್ರಾಮದ ಪಂಬತ್ತಜೆ ಕೃಷ್ಣನಾಯ್ಕರ ಮಗ ಅಯ್ಯಪ್ಪನಾಯ್ಕರ ವಾರಿಸ್ತಾರರು ಯಾ ಉತ್ತರಾಧಿಕಾರಿಗಳಿಗೆ ಈ ಮೂಲಕ ತಿಳಿಯಪಡಿಸುವದೇನೆಂದರೆ—

ನನ್ನ ಕ್ರಮಾಗತದ ಬಾಬ್ತು ಸದರಿ ಕರೋಪಾಡಿ ಗ್ರಾಮದ ಸರ್ವೆ ನಂಬ್ರ $\frac{19}{2,3,7,8,9}$ ನೇ ವ ನಂ. 51ನೇಗೆ ಒಳಪಟ್ಟ ಧಾನ ಮುಡಿ ಗದ್ದೆ ಮುಡಿ 8½ ಹಾನೆ 2½ ಬೀಜವರಿ ಗದ್ದೆಗಳು ಬಾಗ್ಯಾತ್ತು ಕಟ್ಟಪುಣಿ ಕೆರೆಮರಗಳು ಹಂಚು ಛಾವಣಿ ಮಾಳಿಗೆ ಮನೆ ಮುಂತಾದ ಕಟ್ಟೋಣಗಳು ವಗೈರೆ ಆಸ್ತಿಯನ್ನು ಸದ್ರಿ ಮೃತಪಟ್ಟ ಅಯ್ಯಪ್ಪನಾಯ್ಕರು ಚಾಲಗೇಣಿಗೆ ಪಡೆದು ಅನುಭವಿಸಿದ ಬಗೆಯಲ್ಲಿ ಸಿದ್ಧಾರ್ಥಿ ಸಂ|ದ ವರೇಗಿನ ಗೇಣಿಯಲ್ಲಿ ವಸೂಲಾದ್ದು ಕಳೆದು ಅಕ್ಕಿಮುಡಿ 10, ಸೇರು 3¾ ನಗದು ರೂ 57-15-3 ಸಹಾ ಬಾಕಿ ಮಾಡಿಕೊಂಡು ಮೃತಪಟ್ಟಿದ್ದಾರೆ. ಆದರಿಂದ ಸದ್ರಿ ಮೃತನ ವಾರಿಸ್ತಾರರು ಯಾ ಉತ್ತರಾಧಿಕಾರಿಗಳು ಈ ನೋಟಿಸ್ ತಾರೀಕಿನಿಂದ ಒಂದು ಹಪ್ತೆ ಒಳಗೆ ಸದರಿ ಚಾಲಗೇಣಿಯನ್ನು ಬಾಕಿ ತಾರೀಕಿನಿಂದ ಶೇಕಡಾ 12½ ರ ಬಡ್ಡಿ ಸಮೇತ ಸದ್ರಿ ಅನಂತ ಕೃಷ್ಣರಾಯರಿಗೆ ಕೊಟ್ಟು ಕ್ರಮ ಪ್ರಕಾರ ರಶೀದಿ ಪಡಕೊಂಡು ಸದರಿ ಚಾಲಗೇಣಿಗೆ ಕಾರಣವಾದ ಸದರಿ ಆಸ್ತಿ ವ ಕಟ್ಟೋಣಗಳು ವಗೈರೆಯನ್ನು ಸದರಿ ಅನಂತ ಕೃಷ್ಣರಾಯರಿಗೆ ಕ್ರಮದಂತೆ ರಿಜಿಸ್ಟ್ರಿ ಸೋಡ್ ಚೀಟ್ ಬರಕೊಟ್ಟು ಆಸ್ತಿ ಸ್ವಾಧೀನತೆ ಬಿಟ್ಟುಕೊಡತಕ್ಕದ್ದು. ಇದಕ್ಕೆ ತಪ್ಪಿದರೆ, ತಕ್ಕ ನ್ಯಾಯ ಸ್ಥಾನಗಳಲ್ಲಿ ಅಗತ್ಯವಿರುವ ವ್ಯವಹರಣೆಗಳಿಗೆ ಸದರಿಯವರನ್ನು ಗುರಿಪಡಿಸಿ ಮೇಲೆ ಕಾಣಿಸಿದ ನಿವೃತ್ತಿಗಳ ಬಗ್ಗೆ ದಾವೆ ಮಾಡೋಣಾದೀತು-ವ- ಈ ಮೂಲಕ ಸದರಿ ಅನಂತ ಕೃಷ್ಣರಾಯರಿಗೆ ಉಂಟಾಗುವ ಯಾವತ್ತು ಖರ್ಚು ನಷ್ಟಗಳಿಗೆ ಸದರಿ ಮೃತನ ವಾರಿಸ್ತಾರರು ಯಾ ಉತ್ತರಾಧಿಕಾರಿಗಳು ಬದ್ಧರಾಗಿರತಕ್ಕದ್ದು ಎಂತ ಕೊಡುವ ನೋಟೀಸು.

ಮಂಗಳೂರು
೬—೧೦—೧೯೨೦. **M. A. Krishna Rau.**

ನೋಟೀಸು.

ದಕ್ಷಿಣ ಕನ್ನಡಾ ಡಿಸ್ಟ್ರಿಕ್ಟ್ ಕೋರ್ಟಿನಲ್ಲಿ.

O. P. No. $\frac{97}{1920}$

ಚನ್ನಪ್ಪಾ—ಅರ್ಜಿದಾರ.

ಮತ್ತು

ಕಾಳಾ ಕೂಡಾ—ರೆಸ್ಪೋಂಡೆಂಟರು.

ಸದರಿ ಅರ್ಜಿದಾರನು ಮೃತಪಟ್ಟ ತ್ಯಾಂಪಪೂಜಾರಿ ಮತ್ತು ಲಿಂಗಪೂಜಾರಿ ಇವರಿಗೆ ಬರತಕ್ಕ ಸಾಲಗಳನ್ನು ವಸೂಲುಮಾಡುವ ಬಗ್ಗೆ ತನಗೆ ಸಕ್ಸೆಶನ ಸರ್ಟಿಫಿಕೇಟು ಕೊಡಬೇಕಾಗಿ ಅಪೇಕ್ಷಿಸಿ ಮೇಲ್ಕಂಡ ಅರ್ಜಿ ದಾಖಲುಮಾಡಿರುತ್ತಾನೆ. ಸದರಿ ಅರ್ಜಿಯು ತನಖಿ ಬಗ್ಗೆ ತಾ. 13-10-'20ಕ್ಕೆ ಇಟ್ಟಿರುತ್ತದೆ. ಆಕ್ಷೇಪಣೆ ಇದ್ದವರು ತಮ್ಮ ಆಕ್ಷೇಪಗಳನ್ನು ಸದರಿ ತಾರೀಕಿನ ಒಳಗೆ ಜ್ಯಾಹೀರುಮಾಡತಕ್ಕದ್ದು.

ಮಂಗಳೂರು,
ತಾ. 2-10-'20. **G. Krishna Rau,**
Vakil for Petitioner.

ಪ್ರಖ್ಯಾತಿಪಡೆದ ಎಸ್. ವಿ. ಸುಗಂಧಪುಡಿ ನಶ್ಯವು.

ಸಾಧಾರಣ ಪುಡಿ ನಶ್ಯವನ್ನು 10-12 ದಿನ ಹಾಕಿಕೊಳ್ಳುವವರು, ಒಂದಾವರ್ತಿ ಇದನ್ನು ಹಾಕಿಕೊಂಡರೆ ಸಾಕು. ಎಷ್ಟೋ ಆನಂದವಾಗಿರುವದು. ಇದರ ಖಾರವು ಮತ್ತು ಪರಿಮಳವು ಎಷ್ಟು ತಿಂಗಳಾದರೂ ಕೆಡದೆ ಹಾಗೆಯೇ ಇರುವವು. ಬಾಟ್ಲಿ 1ಕ್ಕೆ 4 ಆಣೆ. ಟಪ್ಪಾಲ್‌ಚಾರ್ಜು 1-3 ವರಗೆ 4 ಆಣೆ. ವಂದೇ ಸರ್ತಿ 12 ಬಾಟ್ಲಿಗಳನ್ನು ತರಿಸಿಕೊಂಡರೆ 1 ಬಾಟ್ಲಿ ಉಚಿತವು.

ಉತ್ತಮ ತರದ ಪುಡಿ ನಶ್ಯವು.

ಪ್ರಖ್ಯಾತಿಪಡೆದ ಭಾರವಾದ ಹೊಗೆಸೊಪ್ಪಿನಿಂದ ಐದು ತೆಗದ ಅನುಭವಸ್ಥರಿಂದ ತಯಾರಿಸಿರುವದರಿಂದ ವಂದಾವರ್ತಿ ಈ ಪುಡಿಯನ್ನು ಉಪಯೋಗಿಸಿದವರು ಬೇರೆ ಪುಡಿ ನಶ್ಯವನ್ನು ನಿಶ್ಚಯವಾಗಿಯೂ ಬಯಸರು. ಸೇರು 1ಕ್ಕೆ ರೂ. 1. ಟಪ್ಪಾಲುಚಾರ್ಜು 4 ಆಣೆ.

ಎಸ್. ವಿ. ದಂತಚೂರ್ಣವು.

ಇದರ ಉಪಯೋಗದಿಂದ ಹಲ್ಲುಗಳು ಶುಭ್ರವಾಗಿ ಬಿಳುಪಾಗಿ ಪ್ರಕಾಶಿಸುವದಲ್ಲದೆ ಸಕಲ ದಂತರೋಗಗಳನ್ನು ನಿವೃತ್ತಿ ಮಾಡಿ ಹಲ್ಲುಗಳನ್ನು ವಜ್ರದಂತೆ ಗಟ್ಟಿಪಡಿಸುವದು. ಡಬ್ಬಿ 1ಕ್ಕೆ 6 ಆಣೆ. ಟಪ್ಪಾಲು ಚಾರ್ಜು 2 ಡಬ್ಬಿಗಳ ವರಗೆ 4 ಆಣೆ. ನಮ್ಮ ಕಂಪನಿಯ ಇಂಗ್ಲಿಷ್ ಕೆಟಲಾಗಿಗೆ ಬರದರೆ ಉಚಿತವಾಗಿ ಕಳುಹಿಸಿಕೊಡುವೆವು. ನಮ್ಮ ವಿಳಾಸ:—

ತಂತಿ ವಿಳಾಸ:— ವಾಸು, ತಿರುಚಿ.
ಎಸ್. ವಾಸು ಅಂಡ್ ಕಂಪನಿ,
ಪಾಲಕ್ಕರೆ, ತಿರುಚಿನಾಪಳ್ಳಿ.

[illegible]

ಬಾಲಶೆವಿಕರು — [illegible] ಬೊಲಶೆವಿಕರನ್ನು ಹಿಮ್ಮೆಟ್ಟಿಸಿ ಮುಂದೆ ಸಾಗುತ್ತದೆ, ಕ್ರಿಮಿಯದಲ್ಲಿರುವ ಜನರಲ್ ರೆಂಗಲ್ ಸಹಾಯವರನ್ನು ಸದ್ದಿಲ್ಲದೆ ಮುಂದರಿಸುತ್ತಿದ್ದಾರೆ ಎಂದು ವಾರ್ತೆಯು ತಿಳಿಸುತ್ತದೆ. ಹೀಗಾಗಿ ಪೋಲೆಂಡದೊಡನೆ ರಾಜಿಗೆ ಬೊಲಶೆವಿಕರು ಮುಂದರಿಸುತಿದ್ದಾರಂತೆ. ಅದೇ ಸಮಯದಲ್ಲಿ ಬ್ರಿಟಿಷರೂ ಬೊಲಶೆವಿಕರೊಡನೆ ರಾಜಿಯ ಪ್ರಸ್ತಾಪವನ್ನು ಪುನಃ ಎತ್ತಲಿಕ್ಕಿದ್ದಾರೆಂದೂ ಬ್ರಿಟಿಷರು ಬೊಲಶೆವಿಕರ ಶರ್ತಗಳನ್ನು ನ್ಯಾಯಸಮ್ಮತವಾದ್ದೆಂದು ತಿಳಿಯುವುದಾದರೆ ಇಟಲಿ ಮತ್ತು ಜಪಾನದ ಮುಂದೆ ಆ ಶರ್ತಗಳು ವಿಚಾರಕ್ಕೆ ಬರಬಹುದು ಆದರೆ ಫ್ರಾನ್ಸ್ ಈ ವಿಷಯದಲ್ಲಿ ತಟಸ್ಥವಾಗಿದೆ ಎಂದೂ ಒಂದು ಬ್ರಿಟಿಷ ಪತ್ರಿಕೆಯು ಹೇಳುತ್ತದೆ.

ಜಪಾನು ಮತ್ತು ಯುನೈಟೆಡ್ ಸ್ಟೇಟ್ಸ್ — ಯುನೈಟೆಡ್ ಸ್ಟೇಟ್ಸಿಗೆ ಸೇರಿದ ಕೆಲಿಫೋರ್ನಿಯಾ ರಾಜ್ಯದಲ್ಲಿ ಏಸ್ಯಾಖಂಡದ ಜನರನ್ನು ಬರಲೀಸುವುದಿಲ್ಲವೆಂದು ಒಂದು ಕಾನೂನು ಮಾಡಿದ್ದಾರೆ. ಇದನ್ನು ಆಕ್ಷೇಪಿಸಿ ಜಪಾನು ಯುನೈಟೆಡ್ ಸ್ಟೇಟ್ಸಿನ ಸರಕಾರಕ್ಕೆ ಬರದ್ದಲ್ಲಿ ಈ ಒಳದೇಶ ಕಾನೂನು ತಿದ್ದುಪಡಿ ಮಾಡುವ ಅಧಿಕಾರ ತಮಗಿಲ್ಲವೆನ್ನುತಿದೆ. ಈ ವಿಷಯದಲ್ಲಿ ಹಿಂದೂಸ್ಥಾನದ ಜನರ ಪರವಾಗಿ ಬ್ರಿಟನ್ನು ಯುನೈಟೆಡ್ ಸ್ಟೇಟ್ಸಿನೊಡನೆ ತನ್ನ ಪಕ್ಷವಾಗಿ ವಾದಿಸಬೇಕೆಂದು ಜಪಾನು ಬ್ರಿಟಿಷರನ್ನು ಹಾರೈಸುತ್ತಿದೆ. ಅಮೇರಿಕ ರಾಜ್ಯಗಳ ವ್ಯವಸ್ಥೆಯಲ್ಲಿ ಕೈಹಾಕಲು ಬ್ರಿಟನ್ನಿಗೆ ಅಧಿಕಾರವಿಲ್ಲವೆಂದು ಎಂದು ಕೆಲಿಫೋರ್ನಿಯಾ ಹೇಳುತ್ತದೆ. ಇದರ ಪರಿಣಾಮವೇನೆಂದು ನೋಡಬೇಕಾಗಿದೆ. ಇದಲ್ಲದೆ ಅಮೇರಿಕದ ಹಡಗುಗಳಲ್ಲಿ ತಂದ ಸರಕುಗಳಿಗೆ ಸುಂಕ ಕಡಿಮೆಯಾಕಬೇಕು ಎಂದು ಆ ಹಡಗುಗಳ ಮಾಲಿಕರ ಒತ್ತಾಯದಿಂದ ಅಮೇರಿಕದ ಪಾರ್ಲಿಮೆಂಟಿನವರು ಮಾಡಿದ ಠರಾವಿನಿಂದ ಬೇರೆಬೇರೆ ಜನಾಂಗಗಳೊಡನೆ ಮಾಡಿದ ವ್ಯಾಪಾರದ ಒಪ್ಪಂದಗಳಿಗೆ ವಿರೋಧವಾಗುತ್ತದೆ — ಅಂಥಾ ಕಾನೂನನ್ನು ತಾನು ಸಹಿ ಮಾಡಲಾರೆನೆಂದು ಪ್ರೆ। ವಿಲ್ಸನರು ಅಲ್ಲಿಯ ಪಾರ್ಲಿಮೆಂಟ ಸಭೆಗೆ ತಿಳಿಸಿರುವರು. ಯುನೈಟೆಡ ಸ್ಟೇಟ್ಸ್ ಪಾರ್ಲಿಮೆಂಟಿನವರು ಈ ದುರಾಗ್ರಹದಿಂದ ಬೇರೆ ರಾಜ್ಯಗಳೊಡನೆ ವಿವಾದವನ್ನು ಬೆಳಸಲಿಕ್ಕಿದ್ದಾರೂ ಎಂದು ನೋಡಲಿಕ್ಕೆ ಇದೆ.

ಪರದೇಶ ವರ್ತಮಾನ.

ಮುಂಬಯಿ ಪೋಸ್ಟಮೆನರ ಮುಷ್ಕರ — [illegible] ಸಪ್ಟೆಂಬರ್ ೧೯ [illegible]

[illegible]

[illegible] ಮುಷ್ಕರ — [illegible]

[illegible]

ಜಿ. ಐ. ಪಿ. ರೈಲ್ವೆ ನೌಕರರು — [illegible] ವರ್ಕಶಾಪಿನ ೫೦೦ ಮಜೂರರು ತಮ್ಮ ಕೈಕೆ ಕೆಲವರನ್ನು ಕೆಲಸದಿಂದ ತೆಗೆದು ಹಾಕಿದ್ದಕ್ಕಾಗಿ ಮುಷ್ಕರ ಹಿಡಿದರು. ಅವರಿ ಈ ಜನರಿಗೆ ಪುನಃ ಕೆಲಸ ಕೊಟ್ಟದ್ದರಿಂದ [illegible] ಶಾಂತವಾಯಿತು.

ಮುಂಬಯಿ ಟ್ರೇಮವೇ ಮಜೂರರು — ಇವರಿಗೆ ಒಂದು ತಿಂಗಳ ಬೋನಸ್, [illegible] ತಕ್ಕರಾರುಗಳನ್ನು ತೀರಿಸದಿದ್ದರೆ ಮುಷ್ಕರವನ್ನು ಇದೇ ಒನೆ ತಾರೀಕಿನಿಂದ ಹಿಡಿಯುತ್ತೇವೆಂದು ಈ ಮಜೂರರು ತಿಳಿಸಿದ್ದಾರೆ.

ಲೋಕಲ್ ಫಂಡ್ ಅಸಿಸ್ಟಾಂಟ್ ಎಂಜಿನಿಯರುಗಳು — ಇವರು ತಮ್ಮ ಸಂಬಳದ ಮಿತಿಯನ್ನು ರೂ. ೫೦೦ರಿಂದ ಪ್ರಾರಂಭಿಸಿ ವರ್ಷಕ್ಕೆ ೨೫ ರೂಪಾಯಿಯಂತೆ ಏರ್ತಿ ಕೊಟ್ಟು ರೂ. ೫೦೦ರ ವರೆಗೆ ಸಂಬಳ ಸಿಗುವಂತೆ ಮಾಡಬೇಕೆಂದು ಸರಕಾರದವರಿಗೆ ಮನವಿ ಮಾಡಿದ್ದಾರಂತೆ.

ಮೈಸೂರು ಸರಕಾರದವರ ಸಾಲದ ಪ್ರಕಟಣೆ — ೧೦೦ ಲಕ್ಷ ರೂಪಾಯಿ ಸಂಸ್ಥಾನದ ಸುಧಾರಣೆ ಬಗ್ಗೆ ಸಾಲಬೇಕೆಂದು ಕೊಟ್ಟ ಪ್ರಕಟಣೆಗೆ ಉತ್ತರವಾಗಿ ಜನರು ಅದಕ್ಕಿಂತಲೂ ಹೆಚ್ಚು ಮೊಬಲಗು ಕೊಡಲು ಮುಂದೆ ಬಂದು ಸರಕಾರಿ ಬೋಂಡುಗಳನ್ನು ಕೊಂಡುಕೊಂಡಿರುವರಂತೆ.

ದಕ್ಷಿಣಕನ್ನಡಾ ಸೆಂಟ್ರಲ್ ಕೊಓಪರೇಟಿವ್ ಬೇಂಕು — ಇದಕ್ಕೆ ಈ ಮೊದಲು ಇದ್ದ 'ಓವರ್‌ಡ್ರೇಫ್ಟ್' ವಿನಾ ಇನ್ನೂ ರೂ. ೪೦೦೦೦ಕ್ಕೆ ಓವರ್ ಡ್ರೇಫ್ಟ್ ಅಧಿಕಾರ ಬಂದಿದೆ ಎಂದು ರಿಜಿಸ್ಟ್ರಾರರು ತಿಳಿಸಿರುವರು.

ಕಲ್ಕತ್ತಾ ಟ್ರೇಮವೇ ಮಜೂರರು — ಇವರ ಮುಷ್ಕರವು ಇನ್ನೂ ನಿಲ್ಲಲಿಲ್ಲ.

ಅಸ್ಸಾಂ ಟೀ ತೋಟಗಳ ಮಜೂರರ ಗಲಾಟೆ — ಲಖಿಂಪುರ ಜಿಲ್ಲೆಯಲ್ಲಿ ತೋಟಗಳ ಮಜೂರರು ಮುಷ್ಕರ ಹಿಡಿದು ಕೆಲಸ ನಿಲ್ಲಿಸಿದ್ದಲ್ಲದೆ ಮಾರ್ಕೆಟುಗಳನ್ನು ನುಗ್ಗಿ ಅಲ್ಲಿಯ ಮಾರವಾಡಿ ಅಂಗಡಿಗಾರರನ್ನು ಪೀಡಿಸಿ, ಅವರ ವಸ್ತು ಒಡವೆಗಳನ್ನು ಹಾಳುಮಾಡಿ, ಒಂದು ತೋಟದ ಮೆನೆಜರರ ಬಂಗಲೆಯನ್ನು ನೆಲಸಮ ಮಾಡಿದರು. ನಾಲ್ಕೈದು ಮೆನೆಜರುಗಳನ್ನು ಹೊಡೆದು ಗಾಯಮಾಡಿದ್ದಲ್ಲದೆ ಈ ಗಲಭೆಯನ್ನು ವಿಚಾರಿಸಲಿಕ್ಕೆ ಹೋದ ಪೋಲೀಸ್ ಸುಪರಿಂಟೆಂಡೆಂಟರ ಒಂದು ಕೈ ಮತ್ತು ಒಂದು ಕಾಲನ್ನು ಮುರಿದು ಹಾಕಿದ್ದಾರಂತೆ. ಸುಮಾರು ೭೦೦೦ ಮಜೂರರು ಈ ಗಲಭೆಯಲ್ಲಿ ಗಲಾಟೆ ಎಬ್ಬಿಸಿದ್ದರಿಂದ ಆ ಜಿಲ್ಲೆಯ ಡೆಪ್ಯುಟಿ ಕಮಿಶನರರು ಸಹ ಅಲ್ಲಿಗೆ ಸಮಾಧಾನ ಪಡಿಸಲಾರದೆ ಕಡೆಗೆ ಮಿಲಿಟರಿ ಪೋಲೀಸ್ ಮತ್ತು ಲಸ್ಕರನ್ನೂ ತರಿಸಬೇಕಾಯಿತಂತೆ. ಈ ಕೂಲಿಯವರು ಹೆಚ್ಚಾಗಿ ಬರಹಂಪುರದ ಕಡೆಯ ತೆಲುಗು ಜನರು. ಸಂಬಳದ ದರಗಳನ್ನು ಹೆಚ್ಚಿಸಬೇಕೆಂಬ ನೆವದಿಂದ ಈ ರೀತಿ ಗಲಾಟೆ ಎಬ್ಬಿಸಿದರೆಂದು ತಿಳಿಯುತ್ತದೆ. ಈ ಜನರ ಪೈಕಿ ೫೦ ಮುಖಂಡರನ್ನು ಕೈದು ಮಾಡಿ ಡಿಬ್ರುಘರ ಎಂಬಲ್ಲಿಗೆ ಕೊಂಡು ಹೋದಾಗ ೩೦೦೦ ಕೂಲಿಯವರು ಇವರನ್ನು ಹಿಂಬಾಲಿಸಿ ಕೆಲಸಬಿಟ್ಟು ಡಿಬ್ರುಘರಕ್ಕೆ ಹೋಗಿದ್ದಾರಂತೆ. ಲಸ್ಕರು ಅಲ್ಲಿಗೆ ಹೋದಂದಿನಿಂದ ಸ್ವಲ್ಪ ಗಲಭೆ ಕಡಿಮೆಯಾಗಿದೆಯಂತೆ.

ಬೆಂಗಳೂರಿನ ಬಿನ್ನಿಮಿಲ್ಸಿನ ಮಜೂರರು — ಇವರು ತಮಗೆ ಸಿಗುವ ದರಗಳನ್ನು ಹೆಚ್ಚಿಸಬೇಕೆಂತಲೂ ರಜೆ ಪಡದಾಗ ಅರ್ಧ ಸಂಬಳ ಕೊಡಬೇಕೆಂತಲೂ ಕೇಳಿ ಆ ನೆವದಿಂದ ಸುಮಾರು ೪೦೦ ಜನರು ಕೆಲಸ ನಿಲ್ಲಿಸಿದ್ದಾರೆ.

ರಾಷ್ಟ್ರೀಯ ಶಾಲೆಗಳು — ಮುಂಬಯಿಯ ಮಾಂಡ್ವಿಯಲ್ಲಿ ಮಾಂಡ್ವಿ ರಾಷ್ಟ್ರೀಯ ಶಿಕ್ಷಣ ಮಂಡಲವೆಂಬ ಹೆಸರಿನ ಒಂದು ಸಂಸ್ಥೆಯನ್ನು ಸ್ಥಾಪಿಸಿ ಅದು ರಾಷ್ಟ್ರೀಯ ಶಿಕ್ಷಣ ಪ್ರಚಾರ ಮತ್ತು ಅದಕ್ಕೆ ಬೇಕಾದ ವಸ್ತುಗಳನ್ನು ತಯಾರಿಸಬೇಕಾಗಿ ನಿರ್ಣಯಿಸಿ ರೂ. ೧೪೦೦೦ ವಂತಿಗೆಯಾಯಿತು. ಮಿ। ಚೋಟಾನಿ ಎಂಬವರು ೧೦,೦೦೦ ರೂಪಾಯಿ ವಾಗ್ದತ್ತ ಮಾಡಿದರು.

ದಕ್ಷಿಣ ಕನ್ನಡ.

ಹೊಸದುರ್ಗ: — ಇಲ್ಲಿಯ ಬೆಳೆಕಟಾವು ಮುಗಿಯುತ್ತಾ ಬರುತ್ತ. ಮೇಘರಾಜನ ಅಧಿಕಾರವು ಸಾಯಂಕಾಲದಿಂದ ಪ್ರತಿ ದಿವಸವೂ ನಡಿಯುತ್ತಾ ಇರುತ್ತದೆ.

ಇತ್ತಲಾಗೆ ಏರ್ಪಡಿಸಿದ ಕಾಸರಗೋಡ ತಾಲೂಕು ಬೋರ್ಡ ಆಫೀಸು ಇದೇ ತಿಂಗಳ ೧ನೇ ತಾರೀಕಿನಿಂದ ಕಾಸರಗೋಡಿನಲ್ಲಿ ತೆರೆಯಲಾಗಿದೆ. ಜರಗುವ ಮೊದಲನೆ ಮೀಟಿಂಗಿನಲ್ಲಿ ಈ ಹೊಸದುರ್ಗ ಟೌನಿಗೆ ಅಗತ್ಯವಾಗಿರುವಂಥಾ ದೀಪಸ್ತಂಭಗಳ ವಿಷಯ ಮುಂದಿಟ್ಟರೆ ಆ ಮಹಾನುಭಾವರಿಗೆ ರಾತ್ರಿಕಾಲದಲ್ಲಿ ರೈಲ್ವೆಗಾಡಿ ಪ್ರಯಾಣಿಕರು ವ ಇತರ ಮಾರ್ಗಸ್ಥರೂ ಹೆಚ್ಚಿನ ಉಪಕಾರಸ್ಮರಣೆ ತೋರಿಸುವರು.

ಬೋಕ್ಕಾಡಿ: — ತಾರೀಕು ೩—೧೦—೨೦ರಲ್ಲಿ ಸಾಯಂಕಾಲ ೪ ಘಂಟೆಗೆ ಮುಡ್ನೂರು ಪಡ್ನೂರು, ಕೆಳಂತ್ಯ, ಬಾಳ್ತಿಲ, ಐವರ್ನಾಡು, ಕಲ್ಮಡ್ಕ, ಪಂಜಿಕಲ್ಲು, ಅರಂತೋಡು ಮತ್ತು ಅಜ್ಜಾವರ ಮಹಾಜನರ ದುಃಖಪ್ರದರ್ಶಕ ಸಭೆಯೊಂದು ನೆರದಿತ್ತು. ಕೂಡಿದ್ದ ನೂರಾರು ಮಂದಿ ಎದ್ದುನಿಂತು ಶ್ರೀದೇವರನ್ನು ಪ್ರಾರ್ಥಿಸಿ ಐದನೇ ಜೋರ್ಜ ಚಕ್ರವರ್ತಿಗಳಿಗೆ ಜಯವಾಗಲೆಂದು ದೇವರನ್ನು ಪ್ರಾರ್ಥಿಸಿದನಂತರ ತಿಲಕರವರ ಆತ್ಮಕ್ಕೆ ಶ್ರೀದೇವರು ಶಾಂತಿಯನ್ನು ಕೊಡಲಿ ಎಂದು ಪುನಹಾ ದೇವರನ್ನು ಪ್ರಾರ್ಥಿಸಿ ಪುಷ್ಪಮಾಲೆಗಳಿಂದ ಪನ್ನೀರೆ ಅಲಂಕರಿಸಲ್ಪಟ್ಟ ತಿಲಕರವರ ಪಟವನ್ನು ಎತ್ತರವಾಗಿ ಇಟ್ಟು ಸಭೆಯು ಪ್ರಾರಂಭವಾಯಿತು. ಆಗ ರಾ। ಅಜ್ಜನಗದ್ದೆ ಗಣಪಯ್ಯನವರು ಅಧ್ಯಕ್ಷಸ್ಥಾನವನ್ನು ಅಲಂಕರಿಸಿದರು. ಈ ಸಭೆಗೆ ಬರುವರೆ ಅನಾನುಕೂಲವಾದ ಜನರಿಂದ ಬಂದ ಕಾಗದಗಳನ್ನು ಓದಲಾಯಿತು. ಅಧ್ಯಕ್ಷರ ಭಾಷಣಗಳು ನಡದ ನಂತರ ಈ ಸಭೆಕೂಡುವ ಉದ್ದೇಶವನ್ನು ಮ। ರಾ। ರಾ। ಮುರಿದ್ದಹಾಡಿ ಕೃಷ್ಣಯ್ಯನವರು ವಿವರಿಸಿ ಹೇಳಿದ್ದ ಬಳಿಕ ರಾ। ಎಮ್. ಗಣಪಯ್ಯನವರಿಂದ ಲೋಕಮಾನ್ಯ ತಿಲಕರವರ

[illegible] ತಿಂಗಳು ಕುಡಿಯ ಮಕ್ಕಳು [illegible] ಬಂದು ಪ್ರತಿನಿಧಿ [illegible] ಅಮರ ಮತ್ತು ಸುಳ್ಯ ಮಾಗಣೆಗಳ ಮುಖ್ಯಸ್ಥರಾದ ಮತ್ತು ಕುಡಮಾನ ತಿಂಗಳು ತಲಕ್ಕಾವೇರ [illegible] ಸಮಾಜ ಪ್ರಮುಖರು [illegible] ಬಹಳ ಕಷ್ಟವಾಗುವ ಸುಳ್ಯದಲ್ಲಿ ಒಂದು ಛತ್ರ ಕಟ್ಟಿಸುವುದು ಅಗತ್ಯವೆಂತಲೂ ಇನ್ನು ಅನೇಕ ಮಹನೀಯರು ಚೆಲೋ ರೀತಿಯಲ್ಲಿ ಭಾಷಣ ಮಾಡಿದ್ದರು. ವಂತಿಗೆ ಪಟ್ಟಿ ತಯಾರಿಸಿ ಕೂಡಿದ ಸಭಿಕರಿಂದ ರೂ. ೯೭೦—೦—೦ ವಾಗ್ದಾನವಾಯಿತು. ಈ ಮೊದಲು ನಡದ ಸಂಪಾಜೆ ಮೀಟಿಂಗಿನಲ್ಲಿ ರೂ. ೧೩೪—೮—೦ [illegible] ತಿರುಗಾಡಿ ವಾಗ್ದಾನ ಮಾಡಿಸಿಕೊಂಡ, ರೂ. ೬೯೯—೧—೦ ಕೂಡಾ ೯೬೬—೯—೦ ವಾಗ್ದಾನ ಮಾಡಿರುವುದಲ್ಲದೆ ರೂ. ೭—೦—೦ ವಸೂಲು ಆಗಿರುತ್ತದೆ. ಸುಳ್ಯದಲ್ಲಿ ಒಂದು ಛತ್ರ ಕಟ್ಟಿಸುವುದು ವಗೈರೆ ಠರಾವುಗಳು ಸುಳ್ಯದಲ್ಲಿ ತಾ. ೫—೧೦—'೨೦ಕ್ಕೆ ಜರಗುವ ಮಹಾಸಭೆಗೆ ಒಳಪಟ್ಟು ಪಾಸಾದವು. ಸಭಿಕರಿಗೆ ಸಕ್ಕರೆ ತಾಂಬೂಲಾದಿಗಳಿಂದ ಸತ್ಕರಿಸಿ ಲೋಕಮಾನ್ಯ ತಿಲಕರವರ ಆತ್ಮಕ್ಕೆ ಶ್ರೀದೇವರು ಶಾಂತಿಯನ್ನು ಕೊಡಲಿ ಎಂದು ಪ್ರಾರ್ಥಿಸಿ ಸಭೆಯು ಮುಕ್ತಾಯವಾಯಿತು.

ಕುಂಬಳೆ: — ಇಲ್ಲಿಯ ಬೆಂಚ್ ಮೆಜಿಸ್ಟ್ರೇಟ್ ವ ಕಾಸರಗೋಡು ತಾಲೂಕುಬೋರ್ಡ ಮೆಂಬರರಾಗಿ ಈಚೆಗೆ ಚುನಾವಣೆ ಹೊಂದಿದ ಮೊಗ್ರಾಲ ಕಸಬಾ ಗ್ರಾಮದ ಪಟೇಲ್ ಎಸ್. ಕೆ. ಮಹಮ್ಮದ್ ಸಾಹೇಬ ಬಹದ್ದೂರರವರು ಪಟೇಲ ಕೆಲಸಕ್ಕೆ ರಾಜಿಕೊಟ್ಟಿರುವುದರಿಂದ ಅಲ್ಲಿಯ ಸಾಹುಕಾರ ಎಮ್. ಎ. ಮಮ್ಮಿಯವರು ಸದರಿ ಕೆಲಸಕ್ಕೆ ನಿಶಿಕ್ತರಾಗಿರುವರು.

ಈ ಬಡರಿನ ರಸ್ತೆಗಳ ಜಂಕ್ಷನ್ ಬಳಿ ಸಾಲುಮರದ ಪೈಕಿ ೧ ಆಲದ ಮರವು ಅಡಿಯಿಂದ ಕುಂಬಾಗಿದ್ದು ಅಲ್ಲಿರುವ ಅಂಗಡಿಸಾಲುಗಳಿಗೂ ಜನರಿಗೂ ಹೆಚ್ಚಿನ ಅಪಾಯಕರ ಸ್ಥಿತಿಯಲ್ಲಿದೆ. ಸಂಬಂಧಪಟ್ಟವರು ಇದನ್ನು ತ್ವರಿತದಲ್ಲೇ ಕಡಿಸಿಹಾಕಿಸುವುದು ಉತ್ತಮ.

ಸುಳ್ಯ: — ಮಳೆಯು ಬಹಳ ಜೋರಾಗಿ ಸುರಿಯುತ್ತದೆ, ಬೇಸಾಯಗಾರರ ಬೆಳೆ ಬಹಳ ಹಾಳಾಗಿ ಹೋಯಿತು.

ಸುರತಕಲ್: — ಇಲ್ಲಿಯ 'ಹಿಂದೂ ವಿದ್ಯಾದಾಯಿನಿ' ಶಾಲೆಯಲ್ಲಿ ಎಂದಿನಂತೆ ಈ ವರ್ಷವೂ ಬರುವ ನವರಾತ್ರಿಗೆ 'ದಸರಾ ಮಹೋತ್ಸವ'ವನ್ನು ಬಲು ವಿಜೃಂಭಣೆಯಿಂದ ಜರಗಿಸಬೇಕೆಂದು ಇಲ್ಲಿನ ಉಪಾಧ್ಯಾಯರುಗಳು ನಿರ್ಣಯಿಸಿರುವರು. ತಾ. ೧೬ನೇ ಮೂಲಾನಕ್ಷತ್ರ ಮೊದಲ್ಗೊಂಡು ಮಹಾನವಮಿ ವರೆಗೆ ಮಧ್ಯಾಹ್ನ ಸಾಯಂಕಾಲಗಳಲ್ಲಿ ಶ್ರೀ ಶಾರದಾ ಪೂಜೆ ಮಹಾನವಮಿ ದಿನ ತತ್ಸಂಬಂಧ ಮಹಾಸಭೆ, ವಿದ್ಯಾರ್ಥಿಗಳ ಚಿತ್ರ ಕಲಾಕೌಶಲ ಕೈನಾಣಿಕೆಗಳ ವಸ್ತುಪ್ರದರ್ಶನ, ಇವೇ ಮೊದಲಾದ ಕಾರ್ಯಕ್ರಮಗಳು ನೆರವೇರತಕ್ಕದ್ದಾಗಿವೆ. ಸಕಲರಿಗೂ ಸುಸ್ವಾಗತವಿದೆ.

ಕಾಪು: — ಇಲ್ಲಿಯ ಬಾವಟೆ ಕಂಭದ ಸಮೀಪದಲ್ಲಿರುವ ಬಂಡೆಕಲ್ಲಿನ ಮೇಲೆ ನಿಂತುಕೊಂಡು ಇಬ್ಬರು ಗಾಳಹಾಕಿ ಮೀನನ್ನು ಹಿಡಿಯುತ್ತಾ ಇದ್ದರು. ಅಷ್ಟರಲ್ಲಿ ಒಬ್ಬ ಬ್ಯಾರಿಯು ಕಾಲು ಜಾರಿ ಕೆಳಕ್ಕೆ ಬಿದ್ದನು. ಇನ್ನೊಬ್ಬನು ಕೂಗಿದನು. ಆಸ್ಥಾನಿಕ ಜನರು ಬಹಳ ಪ್ರಯತ್ನ ಪಟ್ಟರು. ಬ್ಯಾರಿಯ ಹೆಣ ೧ ದಿನ ಸಿಕ್ಕಲೇ ಇಲ್ಲ. ಮೊನ್ನೆ ತಾ. ೧ನೇ ದಿನ ಸಿಕ್ಕಿತು. ಆ ಬಾವಟೆ ಕಂಭದ ಸಮೀಪ ಸಾಧಾರಣ ಎರಡು ವರ್ಷಕ್ಕೊಮ್ಮೆ ಒಂದೊಂದು ಮರಣ ಸಂಭವಿಸುತ್ತಾ ಇದೆ. ಇದೊಂದು ವಿಚಿತ್ರ.

ಬೋರ್ಡ ಶಾಲಾ ಮಾಸ್ತರರಿಗೆ ಬಟವಾಡೆಯಾಗುವ ಪ್ರತಿ ಮನಿಯಾರ್ಡರುಗಳಿಗೆ ಮೊಕ್ತ್ಯಾರು ಪಟ್ಟಿ ಜನರ ಸಾಕ್ಷಿ ವಿನಹಾ ಕೊಡಕೂಡದೆಂದು ಎಲ್ಲಾ ಬ್ರಾಂಚು ಪೋಸ್ಟಮಾಸ್ತರರುಗಳಿಗೆ ಒಂದು ಪರ್ಮಿಲಾರು.

ದಕ್ಷಿಣ ಕನ್ನಡಾ ಸೆಂಟ್ರಲ್ ಕೊಓಪರೇಟಿವ್ ಬೇಂಕು, ಲಿಮಿಟೆಡ್.

ಸದರಿ ಬೇಂಕಿನ ಎಲ್ಲಾ ಮೆಂಬರರ ಮಹಾಸಭೆಯು 1920ನೇ ಇಸವಿ ಒಕ್ಟೋಬರ ತಿಂಗಳ 24ನೇ ತಾರೀಕು ಆದಿತ್ಯವಾರ ಹಗಲು ಘಂಟೆ 9ಕ್ಕೆ ಮಂಗಳೂರು ಕೊಓಪರೇಟಿವ್ ಸ್ಟೋರಿನ ಉಪ್ಪರಿಗೆಯಲ್ಲಿ ಕೂಡುವುದು. ಮೆಂಬರರು ಆ ಸಭೆಗೆ ಬರಬೇಕಾಗಿ ಅಪೇಕ್ಷಿಸೋಣಾಗುತ್ತದೆ.

ಪುತ್ತೂರು, ದಕ್ಷಿಣಕನ್ನಡಾ ಜಿಲ್ಲಾ
ತಾ. 2—10—1920.

ಎಮ್. ಅನಂತರಾವ್,
ಕಾರ್ಯದರ್ಶಿ.

ನೋಟೀಸು.

ಕಾಸರಗೋಡು ತಾಲೂಕು ಬಾಯಾರು ಗ್ರಾಮದ ನಿಡುವಜೆ ಪುರುಷೋತ್ತಮ ಭಟ್ಟರ ಮಗ ಕೃಷ್ಣ ಭಟ್ಟರಿಗೆ—

ಉಪ್ಪಿನಂಗಡಿ ತಾಲೂಕು ಪುತ್ತೂರು ಕಸಬಾ ಪೇಟೆಯಲ್ಲಿರುವ ಗುರ್ಪುರ ಸಂಕಪ್ಪಾಚಾರಿ ಮಗ ರುದ್ರಾಚಾರಿ ರೂ. 100—0—0ಕ್ಕೆ ಈ ಮೊದಲು ಬರಕೊಟ್ಟ ಡಿಮಾಂಡು ನೋಟಿನ ಐವಜು ವಸೂಲು ಕೊಡಬೇಕಾಗಿ ರಿಜಿಸ್ಟ್ರಿ ನೋಟೀಸು ಪಟ್ಟ ನಂತರ ನನ್ನ ಕೈಯಲ್ಲಿದ್ದ ಸದರಿ ನೋಟು ಬೇರೆ ಇದ್ದಿದ ಪಟ್ಟಿಗಳೂ ಕೂಡಾ ಬಿಸಾಡಿಹೋಗಿಯದೆ. ಅದು ಯಾರಿಗಾದರೂ ಸಿಕ್ಕಿದೊಡನೆ ನನಗೆ ಕೊಟ್ಟಲ್ಲಿ ಆ ಬಗ್ಗೆ ಅವರಿಗೆ ರೂ. 4—0—0 ಇನಾಮು ಕೊಡುವ ಬಗ್ಗೆ ನಾನು ಸಿದ್ಧವಿದ್ದೇನೆ.

ತಾ. 5—10—1920. ಬಾಯಾರುಗ್ರಾಮದ ನಿಡುವಜೆ ಪುರುಷೋತ್ತಮ ಭಟ್ಟರ ಮಗ ಕೃಷ್ಣ ಭಟ್ಟನ ರುಜು.

[illegible]

ದಯಾನಂದ ... [illegible]

ಇಂಗ್ಲೆಂಡಿನ ... [illegible]

... ಬರೆದ ಪತ್ರಗಳು ...

... ... ಸಿಂಹರ ಸ್ವಾಗತವು ...

... ... ಗಲ್ಲಿಗೆ ...

... ಹಿಂದುಸ್ಥಾನದ ಬರುವ ವೃತ್ತಪತ್ರಿಕೆಗಳು ...

ಸುದ್ದಿಗಳು:—

ವರ್ತಮಾನ ಸಂಗ್ರಹಗಳು:—

ವಿದೇಶ ವೃತ್ತಾಂತ

ಸ್ವದೇಶ ವರ್ತಮಾನ

ದಕ್ಷಿಣ ಕನ್ನಡ:—

ಹೊಸದುರ್ಗ, ಬೆಳ್ತಂಗಡಿ, ಕುಂಬಳೆ, ಸುಳ್ಯ, ಸುರತ್ಕಲ್, ಕಾಪು,

ಮದ್ರಾಸು ಕಾಯಿದೆ ಕೌನ್ಸಿಲು ... ೮

ಕಾರ್ಕಳ ತಾಲೂಕಿನ ಜ್ಞಾನ ಭಾಂಡಾರ ಪುಸ್ತಕ ... ,,

ಸಹಕಾರಿ ಕಾರ್ಯನಿರ್ವಾಹಕ ಪಂಚಾಯತಿನ ಠರಾವುಗಳು ... ೯

ಸ್ವದೇಶಾಭಿಮಾನಿ.

ಶಕ ೧೮೪೨ ಭಾ. ಬ। ೧೧ ಶುಕ್ರವಾರ.

ಗವರ್ನರ ಸಾಹೇಬರ ಸ್ವಸ್ತಿವಾಚನ.

ಲೊಡ್೯ ವಿಲಿಂಗ್‌ಡನ್ ದೊರೆಗಳು ಮದ್ರಾಸ್ ಕೌನ್ಸಿಲಿನ ಅಧಿವೇಶನವನ್ನು ಮುಗಿಸುವಾಗ ಉಪದೇಶದ ಕೆಲವು ಮಾತುಗಳನ್ನು ಹೇಳಿದರು. ಈ ವರ್ಷ ಹಿಂದುಸ್ಥಾನದೊಳಗಿನ ಮೊರ್ಲೆಮಿಂಟೊ ಸುಧಾರಣೆಯ ಇತರ ಕೌನ್ಸಿಲುಗಳು ಅಂತ್ಯವಾಗುವಂತೆ ಮದ್ರಾಸಿನ ಈ ಕೌನ್ಸಿಲು ಕೂಡ ಅವಸಾನ ಹೊಂದುತ್ತದಾದ ಕಾರಣ ವಿಲಿಂಗ್‌ಡನ ದೊರೆಗಳು ಕೌನ್ಸಿಲಿನ ಕಾರಭಾರವನ್ನು ಕುರಿತು ಸಂಕ್ಷೇಪದಿಂದ ಎಲ್ಲ ಗೋಷವಾರಿಯನ್ನು ಹೇಳಿ, ಕೌನ್ಸಿಲಿನ ಕಾನೂನಿನ ಎಲ್ಲ ಕಾರಭಾರಗಳನ್ನು ಸರಕಾರಿ, ಬಿನ್‌ಸರಕಾರಿ ಸಭಾಸದರು ಪರಸ್ಪರ ಸಹಕಾರ್ಯದಿಂದ ಹೇಗೆ ಹೇಗೆ ಯಶಸ್ವಿತೆಗೆ ಕೊಂಡುಹೋದರು ಮತ್ತು ಈ ಕರ್ತವ್ಯದಿಂದ ಅವರೆಲ್ಲರೂ ಹೇಗೆ ಸ್ತುತಿಪಾತ್ರರಾಗಿದ್ದಾರೆ ಎಂಬುದರ ಸ್ವಸ್ತಿವಾಚನವನ್ನು ಮಾಡಿದರು. ಯಜ್ಞಸಮಾಪ್ತಿಯಾಗಿ ಅವಭೃತದ ಕಾಲದಲ್ಲಿ ಶಾಂತಿಸೂಕ್ತದಿಂದ ಸ್ವಸ್ತಿವಾಚನವನ್ನು ಮಾಡುವುದಿರುತ್ತದೆ. ಅದೇ ಕ್ರಮವನ್ನು ರಾಜ್ಯಕರ್ತರು ಇತ್ತಲಾಗೆ ಈ ಕೌನ್ಸಿಲುಗಳ ಪರಿಸಮಾಪ್ತಿಯ ಸಂದರ್ಭದಲ್ಲಿ ಅನುಕರಿಸಹತ್ತಿದ್ದಾರೆ. ಇದು ಬಹಳ ಒಳ್ಳೆ ಸಂಗತಿ ಎಂದೇ ಹೇಳಬೇಕು. ನಮ್ಮ ವಿಲಿಂಗ್‌ಡನ್ ದೊರೆಗಳಿಗೆ ಕೌನ್ಸಿಲ್‌ಕಾರ್ಯದ ಅನುಭವವು ಇತರ ಗವರ್ನರರಿಗಿಂತ ಎಷ್ಟೋ ಹೆಚ್ಚು ಇದೆ. ಇವರು ಮುಂಬಯಿಯಲ್ಲಿ ಕೆಲವು ಕಾಲ ಗವರ್ನರರಾಗಿದ್ದರು. ಮತ್ತು ಅವರೇ ಇಲ್ಲಿ ಬಂದು ಒಂದು ವರ್ಷಕ್ಕಿಂತಲೂ ಹೆಚ್ಚಿನ ಸಮಯವಾಯಿತು. ಎಂದ ಮೇಲೆ ವಿಲಿಂಗ್‌ಡನ್ ದೊರೆಗಳಿಗೆ ಸಾಧಾರಣ ಏಳು ವರ್ಷದ ಕೌನ್ಸಿಲ್ ಅನುಭವವಿದೆ. ಎಂಬುದಕ್ಕೆ ಅಡ್ಡಿ ಇಲ್ಲ. ಇಷ್ಟು ದೊಡ್ಡ ಅನುಭವದ ರಾಶಿಯು ಅವರಿಗೆ ಮಾರ್ಗದರ್ಶಕವಾಗಿರುವುದರಿಂದ ಅವರು ಎಂದಿಗೂ ದಾರಿ ತಪ್ಪಿಬೀಳುವುದಿಲ್ಲ.

ಆದರೂ ಅವರ ಎಲ್ಲ ಆಲೋಚನೆಗಳು ಎಲ್ಲರಿಗೆ ಸರಿಬೀಳುವಂತಿದ್ದಾವೆಂದು ಎಂದೂ ಹೇಳಲಾಗುವುದಿಲ್ಲ. ಇದಕ್ಕೆ ಅವರ ಭಾಷಣದೊಳಗಿನ ಕೆಲವು ವಿಚಾರಗಳೆ ಮುಖ್ಯ ದೃಷ್ಟಾಂತಗಳೆಂದು ಹೇಳಬಹುದು. ಸರಕಾರ ಮತ್ತು ಜನತೆ ಇವರಲ್ಲಿ ಪರಸ್ಪರ ಸಹಕಾರವಿರುವುದು ಎಷ್ಟು ಉಚಿತ, ಹಿತಾವಹ ಮತ್ತು ಮುಂದೆ ಬರತಕ್ಕ ಸುಧಾರಣೆಗಳ ಯಶಸ್ವಿತೆಗೆ ಅವಶ್ಯಕ, ಈ ಸಂಗತಿಯನ್ನು ನಿರ್ದೇಶಿಸಿ ಲೊ॥ ವಿಲಿಂಗ್‌ಡನರು ಈ ಸಂದರ್ಭದಲ್ಲಿ ಅಸಹಕಾರಿತೆಯ ಉಲ್ಲೇಖವನ್ನು ಮಾಡಿದರು. ಇದರ ಕುರಿತು ದೊರೆಗಳ ಮುಖ್ಯ ಸೂತ್ರವೇನೆಂದರೆ, ಅಸಹಕಾರಿತೆಯ ಕಾರ್ಯಕ್ರಮವು ಸನದುಶೀರಲ್ಲ ಗಾಂಧಿಗಳು ಮತ್ತು ಅವರ ಸ್ನೇಹಿತರು ಈ ಅಸಹಕಾರಿತೆಯನ್ನು ಪ್ರಾರಂಭಿಸುವಾಗ ಸರಕಾರವನ್ನು ಕುಂಠಿಸಿ ಅದನ್ನು ದುರ್ಬಲಪಡಿಸಬೇಕೆಂದು ಹೇಳಿ [illegible] ... ಯು ಪ್ರಾರಂಭವಾದಾಗ ... [illegible] ... ಗಾಂಧಿಗಳು ಸತ್ಯಾಗ್ರಹವ ಹಿಂದುಸ್ಥಾನದಲ್ಲಿ ... ಹೂಡಿದರೆ ಅದಕ್ಕೆ ಮೊದಲನೆ ಫಲವು ಬಂದದ್ದು ಪಂಜಾಬದ ಗಲಾಟೆಯು. ಈ ಸಂಗತಿಯು ಎಲ್ಲರಿಗೆ ಗೊತ್ತಿರುವುದರಿಂದ ಈ ಚಳವಳದ ಸ್ತೋಮವನ್ನು ಯಾರೂ ಬೆಳೆಸಲಿಕ್ಕಿಲ್ಲ ... ಚಳವಳದ ಪುನಸ್ಕರಣವನ್ನು ಯಾರೂ ಮಾಡಲಿಕ್ಕಿಲ್ಲ ಎಂದು ಕೂಡ ಗವರ್ನರ ದೊರೆಗಳು ಬರವಸೆ ಪಟ್ಟಿದ್ದಾರೆ. ಸದರಿ ಚಳವಳಿವು ಸನದುಶೀರಲ್ಲವೆಂಬುದಕ್ಕೆ ಗವರ್ನರ ದೊರೆಗಳು ಮಾಜಿ ಎಡ್ವೊಕೇಟ್ ಜನರಲ್‌ರಾದ ಶಿ. ಎಸ್. ಶ್ರೀನಿವಾಸ ಐಯ್ಯಂಗಾರರ ವೇದಾಧಾರವನ್ನು ಕೊಟ್ಟಿದ್ದಾರೆ. ಸಾರಾಂಶ, ಲೊ॥ ವಿಲಿಂಗ್‌ಡನರು ಕೌನ್ಸಿಲಿನ ಹೊರಗೆ ಹರಡಿಕೊಂಡಿದ್ದ ಅಸಹಕಾರಿತೆಯ ವಾದವನ್ನು ಕೌನ್ಸಿಲಿನ ಒಳಗೆ ತಂದು ಹಾಕಿದರು. ನಿಜವಾಗಿ ನೋಡಿದರೆ ಕೌನ್ಸಿಲಿನಲ್ಲಿ ೧೦ ಅಥವಾ ೨೦ ನಿಮಿಷದ ಭಾಷಣದಿಂದ ಒಂದು ಚಳವಳವು ಸನದುಶೀರೊ ಅಲ್ಲವೊ ಎಂಬುದನ್ನು ಸಮರ್ಥಿಸಲು ಸಾಧ್ಯವಿಲ್ಲ. ಆದರೆ ಶ್ರುತಿಯು ಇಲ್ಲವೆ ಬೈಬಲಿನಂಥ ಧರ್ಮಗ್ರಂಥವು ಇಂಥಿಂಥ ಸಂಗತಿಯು ಪಾಪಮಯವಾದ್ದೆಂದು ಹೇಳುವಂತೆ ಗವರ್ನರ ದೊರೆಗಳು ಮಹಾಧಿಕಾರಿಗಳಾಗಿರುವುದರಿಂದ ಈ ಸಂದರ್ಭದಲ್ಲಿ ಅದು ಸನದುಶೀರಲ್ಲ ಎಂದು ಹೇಳಿದ ಮಾತು ಮಾನ್ಯವಾದೀತೋ ಏನೊ! ಅನ್ಯಥಾ, ಅಸಹಕಾರಿತೆ ಎಂದರೆ ಏನು, ಅದರಲ್ಲಿ ಅದರ ಉತ್ಪಾದಕರು ಪ್ರಸಾರಕರು ಮತ್ತು ಅನುಯಾಯಿಗಳು ಯಾವ ಯಾವ ಸಂಗತಿಗಳನ್ನು ಸೇರಿಸಿಕೊಂಡಿದ್ದಾರೆ, ಇಂಥ ಚಳವಳವನ್ನು ಬೇರೆ ದೇಶಗಳಲ್ಲಿ ರಾಜನಿಷ್ಠಪ್ರಜೆಗಳು ಆಚರಿಸುತ್ತಿದ್ದರೊ ಇಲ್ಲವೊ, ಈಗಲೂ ಆಚರಿಸುತ್ತಿದ್ದಾರೋ ಇಲ್ಲವೊ ಮತ್ತು ಹಾಗೆ ಅವರು ಆಚರಿಸುವುದಾದರೆ ಆಯಾ ರಾಷ್ಟ್ರಗಳಲ್ಲಿ ಅವರು ಅರಾಜನಿಷ್ಠರಾಗಿದ್ದಾರೋ ಹೇಗೆ ಇತ್ಯಾದಿ ಸಂಗತಿಗಳನ್ನು ಸಮದೃಷ್ಟಿಯಿಂದ ಚರ್ಚಿಸದೆ ಸೂತ್ರರೂಪದಿಂದ ಹೇಳಿ ಹೋದ ಮಾತು ತಕ್ಕಮಟ್ಟಿನ ತಿಳವಳಿಕೆ ಇರುವವರಿಗೆ ಥಕ್ಕನೆ ಮಾನ್ಯವಾಗಲಿಕ್ಕಿಲ್ಲ.

ಲೊಡ್೯ ವಿಲಿಂಗ್‌ಡನರ ಭಾಷಣದ ವಿಷಯವಾಗಿ ನಮಗೆ ಹೆಚ್ಚೇನು ಹೇಳಬೇಕಾದ ಅಗತ್ಯವಿಲ್ಲ. ಯಾಕೆಂದರೆ, ಅಧಿಕಾರಿ ವರ್ಗದವರು ಜನತೆಯ ಚಳವಳದ ಕಡೆಗೆ ಯಾವ ದೃಷ್ಟಿಯಿಂದ ನೋಡುವ ವಹಿವಾಟನ್ನು ಇಟ್ಟುಕೊಂಡಿದ್ದಾರೆಂಬುದು ಜನರಿಗೆ ಗೊತ್ತೇ ಇದೆ. ೧೦-೧೨ ವರ್ಷಗಳ ಹಿಂದೆ 'ಸ್ವರಾಜ್ಯ'ವೆಂಬ ಶಬ್ದವನ್ನು ಉಚ್ಚರಿಸುವುದು, 'ಸ್ವದೇಶಿ'ಯ ಚಳವಳವನ್ನು ಮಾಡುವುದು ಇದೆಲ್ಲ ರಾಜದ್ರೋಹಕರವಾಗಿಯೆ ಇತ್ತು. ಇಷ್ಟು ಹಿಂದಿನ ಉದಾಹರಣೆ ಬೇಡ—ಈ ಸಂಸ್ಥಾನದಲ್ಲಿ ಹೋಮ್‌ರೂಲಿನ ಚಳವಳವು ಪ್ರಾರಂಭವಾದಾಗ ಲೊಡ್೯ ಪೆಂಟ್‌ಲಂಡ್ ದೊರೆಗಳು ಸಹ ಇಂಥ ಮಾತುಗಳನ್ನೆ ಉಚ್ಚರಿಸಿದ್ದರು. ಅದರಂತೆಯೆ ಈಗಲೂ ವೈಸರಾಯರೂ, ವಿಲಿಂಗ್‌ಡನ್ ಮೊದಲಾದ ಇತರ ಅಧಿಪತಿಗಳೂ ಸನದಶೀರ ಚಳವಳಕ್ಕೆ ಅರಾಜಕವೆಂಬ ಹೆಸರನ್ನು ಕೊಡುತಿದ್ದಾರೆ. ಇದು ಪೂರ್ವ ಪರಂಪರೆಗೆ ಸರಿಯಾಗಿಯೆ ಇದೆ. ಆದರೆ ಇಲ್ಲಿ ಒಂದು ಸಂಗತಿಯು ವಿಚಾರಣೀಯವಾಗಿದೆ. ಯಾವುದೆಂದರೆ, ಅಸಹಕಾರಿತೆಯು ಸನದುಶೀರಾಗಲಿ, ಗೈರಸನದುಶೀರಾಗಲಿ ಅದು ಒಳ್ಳೆದೆಂದು ಯಾರೂ ಹೇಳುವುದಿಲ್ಲ; ಅದರ ಉತ್ಪಾದಕರಾದ ಸ್ವತಃ ಗಾಂಧಿಗಳೂ ಕೂಡ ಹೇಳುವುದಿಲ್ಲ. ನಿರುಪಾಯವಾಗಿ, ಮನಸ್ಸಿಲ್ಲದೆ, ಔಷಧದಂತೆ ಜನತೆಗೆ ಅದನ್ನು ಸೇವಿಸಬೇಕಾಗಿದೆ. ಜನತೆಯ ಮೇಲೆ ಇಂಥ ಪ್ರಸಂಗವು ಯಾಕೆ ಬಂತು, ಇದನ್ನು ಅಧಿಕಾರಿಗಳಾದ ನೀವು ಆಲೋಚಿಸಬೇಕು. ಒಂದು ವರ್ಷದ ಹಿಂದೆ, ಎಂದರೆ ಯುದ್ಧದ ಸಮಯದಲ್ಲಿ ಇದೇ ಜನತೆಯು ನಿಮ್ಮ ಅಪೇಕ್ಷೆಗಿಂತಲೂ ಹೆಚ್ಚಿನ ಸಹಾಯವನ್ನು ನಿಮಗೆ ಕೊಟ್ಟಿದ್ದಿಲ್ಲವೆ? ನೀವು ಹೇಳಿದ ತ್ಯಾಗವನ್ನು ಅದು ಮಾಡಿರಲಿಲ್ಲವೆ? ಆದರೆ ಈ ಎಲ್ಲದಕ್ಕೆ ನೀವು ಕೊಟ್ಟ ಪ್ರತಿಫಲವು ರೌಲೆಟ್ ಎಕ್ಟು ಮತ್ತು ಪಂಜಾಬದ ಅನರ್ಥ! ಈ ಪ್ರತಿಫಲಗಳನ್ನು ಕೊಡುವುದರ ಬದಲು ರಾಜನಿಷ್ಠವಾದ ಪ್ರಜೆಯ ಮೇಲಿನ ಕೃತಜ್ಞತೆಯಿಂದ ಸಹಕಾರಿತೆಯನ್ನು ನೀವೆ ಮೊದಲು ಅವಲಂಬಿಸಿಕೊಂಡಿದ್ದರೆ ಈ ಹೊತ್ತು ಗಾಂಧಿಗಳಿಗೆ ಇಲ್ಲವೆ ರಾಷ್ಟ್ರೀಯ ಸಭೆಗೆ ಅಸಹಕಾರಿತೆಯ ಕಠಿಣತಪಶ್ಚರ್ಯೆಯನ್ನು ಅಂಗೀಕರಿಸುವುದು ಅಗತ್ಯವಿರಲಿಲ್ಲ. ಮತ್ತು ಇದು ಸನದುಶೀರಲ್ಲ, ಇದು ಅರಾಜಕವೆಂದು ಕಂಠಶೋಷಣಮಾಡಿಕೊಳ್ಳುವುದು ಅಗತ್ಯವಿರಲಿಲ್ಲ.

[illegible] ... ವೇಶನದಲ್ಲಿ ... ಬಂದ ... ದೀಲು ... ದೀಲು ... ದೀಲುಗಳು ... ಸ್ವರೂಪವನ್ನು ಹೊಂದಿದರೂ ... ಕೆಲಸವು ಬರುವ ಹೊಸ ಕೌನ್ಸಿಲಿನಮೇಲೆ ಹೊಂದಿಕೊಂಡಿದೆ. ಆದರೆ ಬರುವ ಹೊಸ ಕೌನ್ಸಿಲನ್ನು ಬಹಿಷ್ಕರಿಸುವ ಯತ್ನವು ಒಂದು ಕಡೆಯಲ್ಲಿ ನಡೆಯುವಾಗ ಈ ಕೌನ್ಸಿಲಿನ ವೃತ್ತಾಂತವನ್ನು ತಿಳಿದುಕೊಳ್ಳುವ ಆತುರತೆಯು ವಾಚಕರಲ್ಲಿ ಕಡಿಮೆಯಾಗುತ್ತ ಬರುವುದು ಸಹಜವೆ. ಕಾರಣ, ಅಸಹಕಾರಿತೆಯ ಪ್ರಸಾರವು ದಿನೇದಿನೇ ಹಿಂದಿಗಳಲ್ಲಿ ಹೆಚ್ಚು ಹೆಚ್ಚು ಹಬ್ಬುತ್ತಲಿದೆ.

೨. ಅದು ಎಷ್ಟರಮಟ್ಟಿಗೆ ಪಸರಿಸಹತ್ತಿದೆ ಎಂದರೆ ಲೊಡ್೯ ಸಿಂಹರು ಹಿಂದಿಗಳಲ್ಲಿ ಮೊದಲನೆಯ ಗವರ್ನರರು; ಈಗಿನ ಕಾಲದ ರಾಜಕೀಯ ಬಹುಮಾನಗಳಲ್ಲಿ ಇದು ಉಚ್ಚತರಗತಿಯದು; ಆದರೂ ಕೂಡ ಜನರು ಈಗ ಇಂಥ ಬಹುಮಾನಕ್ಕೆ ಈ ಅಸಹಕಾರಿತೆಯಿಂದ ಅಷ್ಟೊಂದು ಮಹತ್ವವನ್ನು ಈಗ ಕೊಡದವರಾಗಿದ್ದಾರೆ. ಇಲ್ಲವಾದರೆ, ಲೊ॥ ಸಿಂಹರು ಮೊದಲನೆಯ ಹಿಂದಿ ಗವರ್ನರರಾಗಿ ಹಿಂದುಸ್ಥಾನಕ್ಕೆ ಬರುವಾಗ ಅವರನ್ನು ಮುಂಬಯಿಯ ಸುಪ್ರಸಿದ್ಧ ಬಂದರದಲ್ಲಿ ಜನರು, ಕಡೆಗೆ ಮುನ್ಸಿಪಾಲಿಟಿಯವರಾದರೂ, ಸ್ವಾಗತೀಕರಿಸಬೇಕಿತ್ತಲ್ಲವೆ? ಆದರೆ ಲೊ॥ ಸಿಂಹರು ಇಂಥ ಸ್ಟೀಮರಿನ ಮೇಲೆ ಬಂದು ಇಂಥ ಮೈಲ್‌ಗಾಡಿಯ ಮೇಲೆ ಸಿಮ್ಲದ ಕಡೆಗೆ ತೆರಳಿದರು, ಇಷ್ಟೆ ವರ್ತಮಾನವು ಪ್ರಕಟವಾಗಿದೆ. ಎಸೋಸಿಯೆಟೆಡ್ ಪ್ರೆಸ್ಸಿನ ಬಾತಮಿದಾರರಿಗೆ ನಾಲ್ಕು ಹೆಚ್ಚು ಮಾತುಗಳನ್ನು ಬರೆಯೋಣವೆಂತ ನೆನಸಿದರೆ ಪಾಪ! ಅವರೇನು ಬರೆಯುವರು! ಯಾವ ಸ್ವಾಗತವೂ ಇಲ್ಲದ ಮೇಲೆ, ಯಾವ ಉತ್ಸಾಹವೂ ಇಲ್ಲದ ಮೇಲೆ ಬಾತಮಿದಾರರಾದರೂ ಯಾವ ಬಾತಮಿಯನ್ನು ಕೊಟ್ಟಾರು! ಕಾಲವು ಬದಲಾಗಿದೆ ಎಂಬುದಕ್ಕೆ ಇದೊಂದು ಬಲವತ್ತರವಾದ ಸಾಕ್ಷಿಯು! ಲೊ॥ ಸಿಂಹರನ್ನು ಸತ್ಕರಿಸಲಿಲ್ಲವೆಂಬುದರ ಮೇಲಿಂದ ಜನರು ಸಿಂಹರನ್ನು ಪ್ರೀತಿಸುವುದಿಲ್ಲ. ಅವರಿಗೆ ದೊರಕಿದ ಬಹುಮಾನವು ಜನರ ಸಂತೋಷಕ್ಕೆ ಕಾರಣವಾಗಲಿಲ್ಲವೆಂದು ಯಾರೂ ತಿಳಿಯಬಾರದು. ಲೊ॥ ಸಿಂಹರ ವೈಯುಕ್ತಿಕ ಬಹುಮಾನಕ್ಕೆ ಇಡೀ ಹಿಂದುಸ್ಥಾನವು ಸಾಭಿಮಾನದ ಸಂತೋಷದಲ್ಲಿ ಮುಳುಗಿರಬೇಕು, ಮತ್ತು ಮುಳುಗಿದೆ. ಆದರೆ ಇದು ಸಿಂಹರ ವ್ಯಕ್ತಿಪರವಾದ ಪ್ರಶ್ನೆಯಲ್ಲ, ಅವರು ಸೇರಿಕೊಂಡ ನೋಕರಶಾಹಿಯ ಪ್ರಶ್ನೆ ಮತ್ತು ಆ ನೋಕರಶಾಹಿಯೊಡನೆ ಸಂಬಂಧದ ಪಾಶವನ್ನು ಕೂಡಿದಷ್ಟು ಸಡಲಿಸಬೇಕೆಂದು ಅಸಹಕಾರಿಯಾದ ಹಿಂದುಸ್ಥಾನದ ಪ್ರಯತ್ನವು ನಡೆದಿರುವುದರಿಂದ ಹಿಂದಿ ಜನರು ಲೊ॥ ಸಿಂಹರ ವಿಷಯದ ತಮ್ಮ ಸಂತೋಷವನ್ನು ಮನಸ್ಸಿನಲ್ಲೆ ಇಟ್ಟುಕೊಂಡಿದ್ದಾರಲ್ಲದೆ ಸಿಂಹರ ವಿಷಯದಲ್ಲಿ ನಿಜವಾಗಿ ವಿಮನಸ್ಕರಾಗಲಿಲ್ಲ. ನಿಜವಾದ ಪರಿಸ್ಥಿತಿಯು ಹೀಗಿರುವುದರಿಂದ ದೇಶದ ಮನಸ್ಸಿನ ಗುಟ್ಟನ್ನು ಅರಿತ ಸಿಂಹರು ಮುಂಬಯಿಯಲ್ಲಿ ಒಂದೆರಡು ದಿವಸ ನಿಲ್ಲುವ ಪ್ರಯಾಸವನ್ನು ತೆಕ್ಕೊಳ್ಳದೆ ಅಂತೆಯೇ ಮೈಲು ಗಾಡಿ ಹತ್ತಿ ಮುಂದಕ್ಕೆ ಪ್ರಯಾಣವನ್ನು ಬೆಳೆಸಿದರು!

೩. ಮೇಲಿನ ಈ ಉದಾಹರಣದ ಮೇಲಿಂದ ಹಿಂದಿಗಳಲ್ಲಿ ಅಸಹಕಾರಿತೆಯು ಎಷ್ಟರಮಟ್ಟಿಗೆ ಹಬ್ಬುತ್ತಿದೆ ಎಂಬುದು ಈಗ ಎಲ್ಲ ಲೋಕಕ್ಕೆ ತಿಳಿಯುತ್ತ ಬಂದದ್ದರಿಂದ ... ಟೈಮ್ಸಿನಂಥ ಕೆಲವು ಪತ್ರಿಕೆಗಳು ತಮ್ಮ ಕಣ್ಣಿಗೆ ... [illegible] ಕಟ್ಟಿಕೊಳ್ಳುತ್ತವೆ ನಿಜ. ಆದರೂ ... ಇಂಗ್ಲಂಡಿನೊಳಗಿನ ಕೆಲವು ದೂರದರ್ಶಿ ... [illegible] ಈ ಎಲ್ಲ ಸಂಗತಿಗಳನ್ನು ... [illegible]

[illegible] ಮಾಡುವಾಗಿದೆ. [illegible] ಅತ್ಯಾಚಾರ [illegible] ದು, ಅಥವ ಸಮ [illegible] ಶಕ್ತಿಯನ್ನು ನಿರೀಕ್ಷಿಸಿದವರು [illegible] ಸದರಿ ಗಝೇಟಿನ [illegible] ಇಲ್ಲಿಯ ಸ್ವಾತಂತ್ರ್ಯಕ್ಕೆ ಬೇಕೆಂದು ಏಕಾತ್ಮ ಸ್ವರೂಪವನ್ನು [illegible] ಎಂದು ಊಹಿಸ ಬೇಕಾಗಿದೆ. ಆದರೂ ಸದರಿ ಪತ್ರಿಕೆಯು ತನ್ನ ದೃಷ್ಟಿ ಮತ್ತು ಮನಸ್ಸು ವಿಶಾಲಮಾಡಿಕೊಂಡು ಮಿ. ಮೊಂಟೆಗ್ಯುಗಳಿಗೆ ತಮ್ಮ ರಾಜಕಾರಣದ ಧೋರಣವನ್ನು ವಿಶಾಲಮಾಡಲು ಆಲೋಚನೆಯನ್ನು ಕೊಟ್ಟಿದೆ. ಇದು ಸಮಾಧಾನದ ಮಾತಾಗಿದೆ. ಹಿಂದುಸ್ಥಾನದ ಸದ್ಯದ ಪರಿಸ್ಥಿತಿಯನ್ನು ಪುನರಾಲೋಚಿಸಿ ಜನರ ಅಸಮಾಧಾನವನ್ನು ಪರಿಹರಿಸಲು ಅವರ ಸಂಕಷ್ಟಗಳನ್ನು ನಿಷ್ಪಕ್ಷಪಾತ ದೃಷ್ಟಿಯಿಂದ ವಿಮರ್ಶಿಸಿ ಅವರ ನ್ಯಾಯವಾದ ಆಕಾಂಕ್ಷೆಗಳನ್ನು ಪೂರಯಿಸಬೇಕೆಂದು ಅದು ಮೊಂಟೆಗ್ಯುಗಳನ್ನು ಉಪದೇಶಿಸಿದೆ. ಸದರಿ ಪತ್ರಿಕೆಯ ಮತದಂತೆ ಭಯಂಕರ ರಾಜದ್ರೋಹಿಗಳನ್ನು ಸಮಾಧಾನಪಡಿಸುವುದು ಅಸಾಧ್ಯವಾದರೂ ಜನತೆಯ ನಿಜವಾದ ಸಂಕಷ್ಟಗಳನ್ನು ನಿವಾರಿಸುವುದು ಸರಕಾರದ ಕರ್ತವ್ಯವಾಗಿದೆ. ಪೆಲ್‌ಮೆಲ್‌ಗಝೇಟಿನ ಈ ಮಾತಿನಲ್ಲಿ ಕೆಲವು ಸ್ಪಷ್ಟೀಕರಣವು ಆವಶ್ಯಕವಾಗಿದೆ. ಹಿಂದುಸ್ಥಾನದೊಳಗಿನ ಭಯಂಕರ ರಾಜದ್ರೋಹಿಗಳನ್ನು ಸಮಾಧಾನಪಡಿಸುವುದು ಅಸಾಧ್ಯವೆಂದು ಅದು ಹೇಳುತ್ತದೆ. ಆದರೆ ಹಿಂದುಸ್ಥಾನದಲ್ಲಿ ಅಂಥದೊಂದು "ಭಯಂಕರ ರಾಜದ್ರೋಹ"ವೆಂದು ನಾವು ನೆನಸುವುದಿಲ್ಲ. ಪಂಜಾಬ ಪ್ರಾಂತದಲ್ಲಿ ಅತ್ಯಾಚಾರಗಳನ್ನು ನಡಿಸಿದ ಅಧಿಕಾರಿಗಳನ್ನು ಸರಿಯಾಗಿ ಶಿಕ್ಷಿಸಿ ಆ ಬಗ್ಗೆ ನ್ಯಾಯನೀತಿಯನ್ನು ಮಾಡಿರಿ ಎಂದು ಹೇಳುವುದು ಭಯಂಕರವಾದ ರಾಜದ್ರೋಹವೆ? ಅಥವಾ ಖಿಲಾಫತಿನ ಪ್ರಶ್ನೆಯಲ್ಲಿ ನ್ಯಾಯಬುದ್ಧಿಯನ್ನು ವ್ಯಕ್ತಪಡಿಸಿರಿ ಎಂದು ಕೇಳುವುದು 'ಭಯಂಕರ ರಾಜದ್ರೋಹ'ವೆ? ಇಲ್ಲವೆ ಬ್ರಿಟಿಷ್ ಸಾಮ್ರಾಜ್ಯದೊಳಗೆ ನಿಂತು ಸಮಧಾನದಿಂದ ಸಾಮ್ರಾಜ್ಯ ಸೇವೆಯನ್ನು ಮಾಡಲು ಸಂತೋಷ ಮತ್ತು ಉತ್ತೇಜನವನ್ನು ಕೊಡುವ ಅಂತರ್ಗತ ಸ್ವರಾಜ್ಯವನ್ನು ಕೇಳುವದು "ಭಯಂಕರ ರಾಜದ್ರೋಹ"ವೆ? ಈ ಮೂರು ಸಂಗತಿಗಳು ನಿಜವಾಗಿ ರಾಜದ್ರೋಹದವುಗಳಲ್ಲ. ಮತ್ತು ಇವುಗಳನ್ನಲ್ಲದೆ ಹಿಂದುಸ್ಥಾನವು ಈಗ ರಾಷ್ಟ್ರೀಯ ಸಭೆಯ ಮುಖಾಂತರ ಬೇರೆ ಸಂಗತಿಗಳನ್ನು ಕೇಳುವುದಿಲ್ಲ ಎಂದ ಮೇಲೆ ಪೆಲ್‌ಮೆಲ್‌ಗಝೇಟು ಯಾವುದನ್ನು ಉದ್ದೇಶಿಸಿ "ಭಯಂಕರ ರಾಜದ್ರೋಹಿಗಳು" ಎಂಬ ಭಯಂಕರ ಶಬ್ದ ಪ್ರಯೋಗವನ್ನು ಮಾಡಿದೆ? ಇರಲಿ. ಮಿ. ಮೊಂಟೆಗ್ಯುಗಳು ಸದರಿ ಪತ್ರಿಕೆಯ ಕೋರಿಕೆಯ ಮೇರೆಗೆ ಇಲ್ಲಿಯ ಸಂಕಷ್ಟಗಳನ್ನು ಪರಿಹರಿಸಲು ಇನ್ನು ಮುಂದೆ ಉಪೇಕ್ಷೆ ಮಾಡಲಿಕ್ಕಿಲ್ಲವೆಂದು ಹಿಂದಿಗಳು ಕೂಡ ನೆನಸಿದ್ದಾರೆ.

೪. ಹಿಂದುಸ್ಥಾನಕ್ಕೆ ಈ ಮೇರೆಗೆ ಇಷ್ಟು ಶೋಚನೀಯ ಸ್ಥಿತಿಯು ಬಂದಿರುವುದರಿಂದ ಅದಕ್ಕೆ ಯಾವ ಯಾವ ಮಾತ್ರೆಯನ್ನು ತೇದುಕೊಡಬೇಕೆಂಬುದೆ ಈಗ ಈ ರಾಷ್ಟ್ರದ ಎಲ್ಲ ಹಿತವಾದಿಗಳ ಮುಂದೆ ಮಹತ್ವದ ಪ್ರಶ್ನೆಯಾಗಿದೆ. ವಿಲಾಯತಿಯೊಳಗಿನ ಕೆಲವು ಜನರು ಮಿ. ಮೊಂಟೆಗ್ಯುಗಳನ್ನು ಹಿಂದುಸ್ಥಾನದ ವೈಸರಾಯರನ್ನಾಗಿ ನೇಮಿಸುವುದು ಒಳ್ಳೇದು, ಕಾರಣ ಅವರ ಧೋರಣವು ಬಹು ಉದಾರವಾಗಿದ್ದು, ಲೊ. ಕೆನಿಂಗ್, ರಿಪನ್, ಹಾರ್ಡಿಂಜ ಮುಂತಾದವರಿಂದ ಹಿಂದುಸ್ಥಾನವು ಹೇಗೆ ಸಮಾಧಾನದಲ್ಲಿತ್ತೊ ಹಾಗೆಯೆ ಮೊಂಟೆಗ್ಯುಗಳ ಉದಾರತೆಯಿಂದ ಸಮಾಧಾನವನ್ನು ಹೊಂದಬಹುದು ಎಂದು ಸೂಚಿಸುತಿದ್ದಾರೆ. ವಿಲಾಯತಿಯವರ ಈ ಅಭಿಪ್ರಾಯವು ನಮ್ಮೊಳಗಿನ ಕೆಲವರಿಗೂ ಮಾನ್ಯವಾಗಿ ಅವರು ಕೂಡ ಅದನ್ನೆ ಬಹು ಉತ್ತಮ ರೀತಿಯಿಂದ ಮತ್ತು ಮಹತ್ವದ ಶಕ್ತಿಯಿಂದ ಪುರಸ್ಕರಿಸುತಿದ್ದಾರೆ. ಪರಂತು ಮೊಂಟೆಗ್ಯು ದೊರೆಗಳಿಗೆ ಈ ಸೂಚನೆಯು ಎಷ್ಟರ ಮಟ್ಟಿಗೆ ಸಮ್ಮತವಿದೆ ಎಂಬುದು ಮಾತ್ರ ಗೊತ್ತಾಗುವದಿಲ್ಲ. ಭಕ್ತರು ತಮ್ಮ ಭಕ್ತಿಯ ಭರದಲ್ಲಿ "ನೀವು ಅಂಥವರು, ಇಂಥವರು" ಎಂದು ಬಂದು ವೇಳೆ ಹೇಳುತ್ತಿದ್ದರೂ ಕೊಂಚ ವಿವೇಕವಿರುವವನಿಗೆ ತನ್ನ ನಿಜವಾದ ಸಾಮರ್ಥ್ಯವು ಗೊತ್ತಿರುತ್ತದೆ. ಹಾಗೆಯೆ ಮಿ. ಮೊಂಟೆಗ್ಯುಗಳಿಗೆ [illegible] ಉದಾರ [illegible] ನಮ್ಮ ವಿದ್ಯಾರ್ಥಿ [illegible] ಹಿಂದುಸ್ಥಾನದ ಸಂತುಷ್ಟವಾಗಬಹುದು,' ಎಂದು ಹೇಳಿ ವೈಸರಾಯರಾಗಲು ಅವರನ್ನು ಕೆಲವರು ಒತ್ತಾಯಪಡಿಸಿದರೂ ಅವರು ಈ ಜವಾಬದಾರಿಯನ್ನು ಹೊತ್ತುಕೊಂಡಾರೆಂದು ನಾವು ನೆನಸುವುದಿಲ್ಲ. ಯಾಕೆಂದರೆ, ಭಾರತಮಂತ್ರಿತ್ವದ ಹುದ್ದೆಯು ಒಂದು ಲೆಕ್ಕದಲ್ಲಿ ವೈಸರಾಯರ ಸ್ಥಾನಕ್ಕಿಂತ ಕೊಂಚ ಮೇಲೆಯೆ ಇದೆ. ಅಂಥ ಹುದ್ದೆಯನ್ನು ಆಕ್ರಮಿಸಿಕೊಂಡಿರುವಾಗ ಈ ಮೂರು ನಾಲ್ಕು ವರ್ಷಗಳಲ್ಲಿ ಹಿಂದುಸ್ಥಾನಕ್ಕೆ ಎಷ್ಟು ಸಮಾಧಾನವು ಸಿಕ್ಕಿದೆ ಎಂಬುದು ಸ್ವತಃ ಮೊಂಟೆಗ್ಯುಗಳಿಗೆ ಸರಿಯಾಗಿ ಗೊತ್ತಿರಬೇಕಲ್ಲದೆ ಅವರ ಈ ಅಂಧಭಕ್ತರಿಗೆ ಅದರ ಕಲ್ಪನೆ ಇರಲಿಕ್ಕಿಲ್ಲ. ಸುಧಾರಣಾ ಎಕ್ಟು, ಪಂಜಾಬ ಗಲಾಟೆ, ಖಿಲಾಫತ್ತು ಮೊದಲಾದ ಜ್ವಲಿಸುತ್ತಿರುವ ಈ ಪ್ರಶ್ನೆಗಳು ಇವರ ಕಾಲದಲ್ಲೆ ಉದ್‌ಭವಿಸಿ ಅವ್ಯವಸ್ಥೆಯನ್ನು ಹೊಂದಿದ್ದಾವೆ, ಎಂದ ಮೇಲೆ ಬಲು ಜಾಣರಾದ ಮಿ. ಮೊಂಟೆಗ್ಯುಗಳು ಈ ಆಲೋಚನೆಗೆ ಕಿವಿಗೊಡಲಿಕ್ಕಿಲ್ಲವೆಂದು ನಾವು ನೆನಸುತ್ತೇವೆ.

೫. ಇಂಥ ಪರಿಸ್ಥಿತಿಯಲ್ಲಿ ಪೂರ್ವಾಪರ ಆಲೋಚನೆಯನ್ನು ಮಾಡದ ಕೆಲವರು ಹಿಂದೂಸ್ಥಾನದ ವೈಸರಾಯರ ಸ್ಥಾನಕ್ಕೆ ಯುವರಾಜರ (ಪ್ರಿನ್ಸ್ ಒಫ್ ವೆಲ್ಸರ) ಹೆಸರನ್ನು ಸೂಚಿಸುತ್ತಿದ್ದಾರೆ. ಇದಂತೂ ಬಹಳ ಆಶ್ಚರ್ಯವೆ. ರಾಜತಂತ್ರವು ತಂಗಳನ್ನದ ಊಟದಂತೆ ನೀರಸವಾದ್ದೆಂದು ಹೇಳುತ್ತಾರೆ. ತಂಗಳನ್ನದ ಊಟದಲ್ಲಿ ರುಚಿಹುಟ್ಟಿಸಬೇಕಾದರೆ 'ಕದನ್ನಮತ್ಯುಷ್ಣತಯಾ ವಿರಾಜತೇ' ಎಂದು ಹೇಳಿದ ಹಾಗೆ ಅದನ್ನು ಆಗಾಗ್ಗೆ ಹೇಗೆ ಬಿಸಿಮಾಡುತ್ತಿರಬೇಕೊ ಹಾಗೆಯೆ ಆಳಿಕೆಯಲ್ಲಿ ಆಕರ್ಷಕತೆಯನ್ನು ಹುಟ್ಟಿಸಬೇಕಾದರೆ ಅಪೂರ್ವ ಸಂಗತಿಗಳನ್ನು ಮಾಡಬೇಕಾಗುತ್ತದೆ. ಈ ದೃಷ್ಟಿಯಿಂದ ವಿಚಾರ ಮಾಡುವಾಗ ಯುವರಾಜರು ಹಿಂದೂಸ್ಥಾನಕ್ಕೆ ವೈಸರಾಯರಾಗಿ ಲಭಿಸುವುದು ಒಂದು ಅಪೂರ್ವವಾದ ಸಂಗತಿಯೇ ಸರಿ. ಪರಂತು ಹಿಂದೂಸ್ಥಾನದ ಸೆರಗಿನಲ್ಲಿ ಈ ಪುಣ್ಯವು ಬಿದ್ದೀತೆಂದು ನೆನಸಲು ತುಂಬಾ ತೊಂದರೆಗಳು ಬಂದು ನಿಲ್ಲುತ್ತವೆ. ರಾಜಪುತ್ರರು ಹಾಗು ಸ್ವತಃ ಬಾದಶಹರು ಹಿಂದೂಸ್ಥಾನಕ್ಕೆ ಬರಬೇಕಾದರೆ ಇಲ್ಲಿ ಮೊದಲನೆದಾಗಿ ಜನತೆಯ ಸಮಾಧಾನವು ಮುಖ್ಯವಾಗಿ ಇರಬೇಕಾದ್ದು. ಅಂಥ ಸಮಾಧಾನವನ್ನು ಇಲ್ಲಿಯ ಬಿರೊಕ್ರಸಿಯು ಭಂಗ ಪಡಿಸಿದೆ. ಇದೇ ಸಮಯದಲ್ಲಿ ರಾಜಪುತ್ರರು ಕೆಲವು ದಿವಸದ "ಸನ್ಮಾನನೀಯ ಅತಿಥಿ"ಗಳಾಗಿ ಬರುವುದನ್ನು ಕೂಡಾ ನಿಲ್ಲಿಸಿದ್ದಾರೆ. ಹೀಗಿರಲು ಅವರನ್ನು ಈ ತೊಂದರೆಯಲ್ಲಿ ತಂದು ಹಾಕುವದು ಅನುಚಿತವಲ್ಲವೆ? ಈ ಅನೌಚಿತ್ಯವು, 'ಹಿಂದು' ಪತ್ರಿಕೆಯ ವಿಲಾಯತಿ ಬಾತಮಿದಾರನ ಹೇಳಿಕೆಯನ್ನು ನೋಡುವಾಗ ಇನ್ನಷ್ಟು ಬೇಸರದ್ದಾಗಿ ತೋರುತ್ತದೆ. ರಾಜಪುತ್ರರು ಇಲ್ಲಿ ವೈಸರಾಯರಾಗಿ ಬರುವುದಾದರೆ ಈಗಿನ ಚೆಮ್ಸ್‌ಫರ್ಡ ದೊರೆಗಳೆ ಒಂದು ವರ್ಷ ಹೆಚ್ಚಿಗೆ ಇಲ್ಲಿ ಕಳಿತುಕೊಳ್ಳಬೇಕು. ಆ ಮೇಲೆ ರಾಜಪುತ್ರರು ವೈಸರಾಯರಾಗಿ ದಯಮಾಡಿಸ್ಯಾರು ಎಂದು ಸದರಿ ಬಾತಮಿದಾರನು ಉಲ್ಲೇಖಿಸಿದ್ದಾನೆ. ಪಂಜಾಬದ ಅನರ್ಥಕ್ಕೆ ಸೂತ್ರಧಾರರಲ್ಲವಾದರೂ ಮುಖ್ಯ ಜವಾಬದಾರರಾಗಿರುವ ನಮ್ಮ ಚೆಮ್ಸ್‌ಫರ್ಡದೊರೆಗಳನ್ನು, ಅವರ ಮುದತ್ತು ತುಂಬುವುದಕ್ಕಿಂತ ಮುಂಚೆಯೆ ಯಾಕೆ ಹಿಂದಕ್ಕೆ ಕರೆಯುವುದಿಲ್ಲವೆಂದು ಹಿಂದೂಸ್ಥಾನದ ಜನರು ಹೇಳುತ್ತಿರುವಾಗ ಪುನಃ ಅವರ ಮುದತ್ತನ್ನು ಒಂದೊಂದು ವಿಧದಿಂದ ಏರಿಸುವುದು ಇನ್ನಷ್ಟು ವ್ಯಸನಕರವಲ್ಲವೆ! ಮುಂದೆ ಬಹಳ ಒಳ್ಳೆಯದಾಗಲಿಕ್ಕಿದೆ ಎಂದು ಹೇಳಿ ಈಗ ಅಪ್ರಿಯ ಸಂಗತಿಯನ್ನು ಮುಂದರಿಸುವುದು ಎಂದೂ ಹಿತಾವಹವಲ್ಲ. ಈಗಿನ ಸ್ಥಿತಿಯಲ್ಲಿ ರಾಜಪುತ್ರರನ್ನು ಇಲ್ಲಿ ಕಳುಹಿಸುವುದು ಒಳ್ಳೆಯದಲ್ಲವೆಂದಿದ್ದ ಮೇಲೆ ಇನ್ನು ಒಂದು ವರ್ಷದ ವರೇಗೆ ಇದೇ ವೈಸರಾಯರನ್ನು ಇಲ್ಲಿಯೇ ಇಟ್ಟು ಅವರು ಯಥಾ ಪ್ರಕಾರ ತಮ್ಮ ಧೋರಣದಿಂದ ಜನರ ಅಸಂತೋಷವನ್ನು ಹೆಚ್ಚಿಸುತ್ತಿದ್ದಲ್ಲಿ ಅಂಥ ಇಕ್ಕಟ್ಟಿನ ಪರಿಸ್ಥಿತಿಯಲ್ಲಿ ರಾಜಪುತ್ರರನ್ನು ವೈಸರಾಯರ ಸ್ಥಾನಕ್ಕೆ ಕಳುಹಿಸುವುದು ಉಚಿತವೇ? ರಾಜಪುತ್ರರು ಇಲ್ಲಿ ವೈಸರಾಯರಾಗಿ ಅವಶ್ಯ ಬರಬೇಕು; ಆದರೆ ಮೊದಲು ಹಿಂದೂಸ್ಥಾನದ ಮೇಲೆ ಸ್ವರಾಜ್ಯದ ಮಳೆಯನ್ನು ಸುರಿಸಬೇಕು. ಈ ಮೇರೆಗೆ ಬೇರೆ ಭಾಗಗಳೊಡನೆ ಸಮತೆಯನ್ನು ಹೊಂದಿದ ಹಿಂದೂಸ್ಥಾನದ ವೈಸರಾಯರೆಂದು ಹೇಳಿಸಿಕೊಳ್ಳುವುದು ಅವರಿಗೇ ಭೂಷಣ. ಇಲ್ಲವಾದರೆ ಪರತಂತ್ರ ರಾಜ್ಯದ ವೈಸರಾಯರೆಂಬ ಮಾತು ಯಾವ ಭೂಷಣದ್ದು! ಇರಲಿ; ಹಿಂದೂಪತ್ರಿಕೆಯ ಬಾತಮಿದಾರನು ರಾಜಪುತ್ರರ ವೈಸರಾಯತನದ ಶುಭವಾರ್ತೆಯಿಂದ ವಾಚಕರಲ್ಲಿ ಮೊದಲು ಆಸೆಯನ್ನು ಹುಟ್ಟಿಸಿ ಕೊನೆಗೆ "ಈ ವರ್ತಮಾನವನ್ನು ನಾನು ನಂಬುವುದಿಲ್ಲ" ಎಂದು ಬರೆದು ಇಲ್ಲಿಯವರ ಆಶಾಭಂಗ ಮಾಡಿದ್ದಾನೆ!

ಮಂಗಳೂರು.

ಕಳೆದ ಸೋಮವಾರ ಇಲ್ಲಿಯ ಸೆಂಟ್ ಏನ್ಸ ಶಾಲೆಯಲ್ಲಿ ಕಲಿಯುತ್ತಿದ್ದ ಸುಮಾರು ೭ ವರುಷ ಪ್ರಾಯದ ಕಥೋಲಿಕ ಬಾಲಿಕೆಯು ಸದರಿ ಕೊನವೆಂಟಿನ ಮಾದರಿಗಳೊಟ್ಟಿಗೆ ಬೆಂದೂರಲ್ಲಿರುವ ಮಾದರಿಗಳ ಕೊನವೆಂಟಿಗೆ ಹೋಗಿದ್ದಳು. ಹುಡುಗಿಯು ಈ ಕೊನವೆಂಟಿನ ಅಂಗಣದಲ್ಲಿ ಚಂಡಿನಿಂದ ಆಡುತ್ತಾ ಇದ್ದು ಪಕ್ಕನೆ ಅಲ್ಲಿದ್ದ ಆವರಣ ವಿರಹಿತವಾದ ಬಾವಿಯಲ್ಲಿ ಬಿದ್ದು ಪ್ರಾಣಘಾತವಾಯಿತು.

ಚಿತ್ರಕೋಡಿ ಶ್ಯಾಮ ಶಾಸ್ತ್ರಿಗಳವರ ಮೇಲಿನ ಮೊಕದ್ದಮೆಯು ಸೆಶ್ಶನ್‌ಕೋರ್ಟಿನಲ್ಲಿ ತನಿಖಿ ಮುಗಿದು ಅವರಿಗೆ ಮೂರು ವರ್ಷಗಳ ಕಠಿಣ ಸಜೆ ಮತ್ತು ರೂ. ೩೦೦ ಜುರುಮಾನೆ, ಜುರುಮಾನೆ ತೆರಲು ತಪ್ಪಿದರೆ ಒಂದು ವರುಷದ ಹೆಚ್ಚಿನ ಶಿಕ್ಷೆ ವಿಧಿಸಿದೆ. ಬಾಡಿಗೆಯ ಮೊಕದಮೆಯಲ್ಲಿ ಡಿಪ್ಯುಟಿ ಕಲೆಕ್ಟರರಿಂದ ಕೊಡೋಣಾದ ಮೂಲ ತೀರ್ಪು ರದ್ದು ಮಾಡಲಾಗಿದೆ.

ವಿ. ಯಂ. ಪಿಂಟೋರವರ ಮೇಲಿನ ಮೊಕದ್ದಮೆಯು ತಾ. ೧೮ಕ್ಕೆ ಸೆಶ್ಶನ ಕೋರ್ಟಿನಲ್ಲಿ ತನಖಿಯಾಗತಕ್ಕದಿದೆ.

ಉಪ್ಪಿನಂಗಡಿ ತಾಲೂಕಿನ ತಹಶೀಲದಾರರಾದ ಮ| ರಾ| ಬಿ. ಕೃಷ್ಣಾಚಾರ್ಯರು ಒಂದು ತಿಂಗಳ ಪ್ರಿವಿಲೇಜ ರಜೆಯನ್ನು ಹೊಂದಿರುವುದರಿಂದ ಅವರ ಹುದ್ದೆಯಲ್ಲಿ ಮ| ರಾ| ರಗಡೆ ಶಿವರಾಯರ ನೇಮಕವಾಗಿದೆ.

ಈ ತಿಂಗಳ ಡಿಸ್ಟ್ರಿಕ್ಟ ಬೋರ್ಡಿನ ಅಧಿವೇಶನವು ತಾ. ೨೦ಕ್ಕೆ ಕೂಡುವುದು.

ಕಳೆದ ತಿಂಗಳಲ್ಲಿ ಮಂಗಳೂರ ಪಟ್ಟಣದಲ್ಲಿ ಒಟ್ಟು ೧೩೮ ಜನನಗಳು ಮತ್ತು ೭೦ ಮರಣಗಳಿದ್ದವು.

ಖಾನೆಸುಮಾರಿ ಇಲಾಖೆಯ ಸುಪರಿಂಟೆಂಡೆಂಟರು ಈ ವಾರದಲ್ಲಿ ಇಲ್ಲಿಗೆ ಒಂದು ಹಿಂತೆರಳಿದರು.

ಬರುವ ತಾ. ೧೬ನೇ ಶನಿವಾರ ದಿನ ಮಹನೀಯರಾದ ಸಿ. ರಾಜಗೋಪಾಲಾಚಾರ್ಯ, ಡಾಕ್ಟರ್ ಟಿ. ಎಸ್. ಎಸ್. ರಾಜನ್, ಮೌಲ್ವಿ ಮುರ್ತುಜಾ ಪಾಶಾ ಸಾಹೇಬ ಮತ್ತು ಡಾಕ್ಟರ್ ವರದರಾಜುಲು ನ್ಯಾಡು ಇವರು ನಮ್ಮ ಮಂಗಳೂರ ಪಟ್ಟಣವನ್ನು ಸಂದರ್ಶಿಸುವರು. ಅಸಹಕಾರಿತೆ—ವಿಶೇಷವಾಗಿ ಹೊಸ ಕೌನ್ಸಿಲುಗಳ ಬಹಿಷ್ಕಾರ—ಇದನ್ನು ಕುರಿತು ಇವರ ಭಾಷಣಗಳಾಗುವವು. ಅಸಹಕಾರಿತೆಯ ಸೂತ್ರಗಳನ್ನು ಜಾರಿಗೆ ತರುವುದನ್ನು ಕುರಿತು ಕಳೆದ ಆದಿತ್ಯವಾರ ಇಸ್ಲಾಮಿಯಾ ಕ್ಲಬ್ಬಿನಲ್ಲಿ ಕೂಡಲಿಕ್ಕಿದ್ದ ಸಭೆಯು ಅಂದು ನೆರೆಯದೆ ಈ ಮಹನೀಯರು ದಯಮಾಡಿದ ಸಮಯದಲ್ಲೆ ಸದರಿ ವಿಷಯವನ್ನು ಆಲೋಚಿಸಲು ಬಾಕಿ ಇಡಲಾಯಿತು.

ಈ ತಿಂಗಳ ತಾ. ೧೮ರಿಂದ ಮಂಗಳೂರ ನಿವಾಸಿಕರು ಕೊಡತಕ್ಕ ಮುನ್ಸಿಪಲ್ ಸುಂಕ ಮತ್ತು ತೆರಿಗೆಯ ದರವನ್ನು ಮುನ್ಸಿಪಾಲಿಟಿಯವರು ತಬ್ದಿಲ್ ಮಾಡಲು ಆಲೋಚಿಸಿದ್ದಾರೆ. ಸ್ಥಿರಾಸ್ತಿಯ ಮೇಲಿನ ತೆರಿಗೆಯು. ಆಸ್ತಿಯ ವಾರ್ಷಿಕ ಮೌಲ್ಯದ ಶೇಕಡಾ ೧೦ರಂತೆ, ಗಾಡಿಮೇಲಿನ ತೆರಿಗೆ ಅರ್ಧ ವರ್ಷಕ್ಕೆ ರೂ. ೪ರಂತೆ ವಿಧಾಯಿಸಲಿಕ್ಕಿರುವರು. ವೃತ್ತಿ ತೆರಿಗೆ, ವಾಹನ ಮತ್ತು ಜೀವಜಂತುಗಳ ಮೇಲಿನ ತೆರಿಗೆ ವಗೈರೆಯನ್ನು ನಮೂದಿಸುವ ಹೊಸ ಪಟ್ಟಿಗಳನ್ನು ಮುನ್ಸಿಪಲ್ ಆಫೀಸಿನಿಂದ ಪಡೆದು ತಿಳಕೊಳ್ಳಬಹುದು. ಈ ತೆರಿಗೆಗಳ ಕುರಿತು ಆಕ್ಷೇಪಣೆಗಳಿದ್ದರೆ ಅವುಗಳನ್ನು ಮುನ್ಸಿಪಾಲಿಟಿಗೆ ಈ ತಿಂಗಳ ಅಂತ್ಯದಲ್ಲಿ ತಿಳಿಸಿದರೆ ಆ ಕುರಿತು ಆಲೋಚಿಸಲಾಗುವುದೆಂತ ಮುನ್ಸಿಪಾಲಿಟಿಯವರು ನೋಟೀಸು ಪ್ರಕಟಿಸಿರುವರು.

ಇಂಟರಸ್ಕೂಲ ಜಿಮ್ನಾಸ್ಟಿಕ್ ಸ್ಪೋರ್ಟ್ಸಿನ ಜೂನಿಯರ್ ಕ್ರಿಕೇಟ್ ಮೇಚ್‌ನಲ್ಲಿ ಎಲ್ಲೋಸಿಯುಸ್ ಕೊಲೇಜಿನವರು ಗೆದ್ದರು.

ಬರುವ ಆದಿತ್ಯವಾರ ಬೆಳಿಗ್ಗೆ ೮ ಗಂಟೆಗೆ ಕೆನರಾ ಹೈಸ್ಕೂಲ್ ಹೊಸ್ಟೆಲಿನ ಎದುರಿನ ಕಟ್ಟಡದಲ್ಲಿರುವ ಥಿಯೋಸೊಫಿಕಲ್ ಲೋಜಿನಲ್ಲಿ ಮ| ರಾ| ಶ್ರೀನಿವಾಸ ಅಯ್ಯಂಗಾರರು Group soul ಎಂಬದನ್ನು ಕುರಿತು ಭಾಷಣಮಾಡುವರು.

ಅಸಹಕಾರ ತತ್ವವನ್ನು ಜಿಲ್ಲೆಯ ನಿವಾಸಿಕರಲ್ಲಿ ಪಸರಿಸುವ ಉದ್ದೇಶದಿಂದ ರಾ| ಕಾರ್ನಾಡ ಸದಾಶಿವರಾಯರು ಕಳೆದ ತಾ. ೬ರಲ್ಲಿ ಉಡುಪಿಯತ್ತ ಕಡೆಗೆ ತೆರಳಿರುತ್ತಾರೆ.

ಕಳೆದ ತಾ| ೧ರಲ್ಲಿ ಕಂಕನಾಡಿಯಲ್ಲಿ ಕಾರಪೆಂಟರ ಯುವಜಿನ ಸೋಜರ ಸುಮಾರು ಮೂರು ವರುಷದ ಮಗುವು ತನ್ನ ತಾಯಿಯು ಮಾರ್ಕೆಟಿನಿಂದ ತಂದು ಕುಕ್ಕೆಯಲ್ಲಿಟ್ಟ ಮೀನನ್ನು ಬಾಯಿಗೆ ಹಾಕಿತು. ಮೀನಿಗೆ ಜೀವವಿದ್ದು ಅದು ಮಗುವಿನ ಗಂಟಲನ್ನು ಹೊಕ್ಕಿಕೊಂಡು ಪ್ರಾಣವನ್ನು ಅಪಹರಿಸಿತು.

[illegible]

ಪ್ರಾಥಮಿಕ ಶಿಕ್ಷಣವೆಂಬ ಮಾತನ್ನು ವ್ಯಾಖ್ಯಾನಿಸುವಾಗ ಅದರಲ್ಲಿ ವೃತ್ತಿಗಳಿಗೆ ಸಂಬಂಧವಾದ ಮೂಲ ಅಭ್ಯಾಸಗಳನ್ನು ಕಲಿಸುವುದು ಎಂಬುದನ್ನು ಸೇರಿಸಬೇಕು ಎಂದು ತಂದ ಸೂಚನೆಯು ಆ ರೀತಿಯಲ್ಲಿ ಮುಂದಿನ ಆಡಳಿತ ಕಾರ್ಯ ಮಾಡಲು ಆಕ್ಷೇಪವಿಲ್ಲ, ಆದರೆ ಈಗಲೇ ಅಂಥ ನಿರ್ಬಂಧಗಳನ್ನು ಹಾಕುವುದು ಅಗತ್ಯವಲ್ಲವೆಂದೂ ತರಬೇತಾದ ಉಪಾಧ್ಯಾಯರು ಸಿಕ್ಕಿದ ಹಾಗೆ ಅಂಥಾ ವೃತ್ತಿ ಸಂಬಂಧವಾದ ಶಿಕ್ಷಣವನ್ನು ಕೊಡಲು ಸಾಧ್ಯವಿದೆ ಎಂದೂ ಸರಕಾರದ ಕಡೆಯಿಂದ ಉತ್ತರ ಬಂದದರಿಂದ ಪಾಸಾಗಲಿಲ್ಲ.

ಪ್ರಾಥಮಿಕ ಶಾಲೆಯಲ್ಲಿ ಕಲಿಯುವ ವಿದ್ಯಾರ್ಥಿವೇತನದನ್ನು ಒಪ್ಪಿಸತಕ್ಕವರಿಂದ ೧೧ ಎಂತಲೂ ಇನ್ನೊಬ್ಬರು ೬ರಿಂದ ೧೩ ಎಂತಲೂ ಸೂಚಿಸಿದರು. ಆದರೆ ಇದನ್ನು ಆಯಾಯ ಕೌನ್ಸಿಲಿಗೆ ಬಿಡುವುದೇ ಯೋಗ್ಯ, ಅವರು ಆಯಾ ಪ್ರದೇಶದ ಸ್ಥಿತಿಗತಿಯನ್ನು ಅನುಸರಿಸಿ ಈ ನಿರ್ಣಯವನ್ನು ಮಾಡಬಹುದು ಎಂದು ಹೇಳಿದ್ದರಿಂದ ಈ ಸೂಚನೆಯೂ ಬಿದ್ದುಹೋಯಿತು.

ಡಿಸ್ಟ್ರಿಕ್ಟ್ ಕೌನ್ಸಿಲಿನ ಪ್ರೆಸಿಡೆಂಟರನ್ನು ಸರಕಾರದವರು ನೇಮಿಸಲೂ ಬಹುದು, ಅಥವಾ ಕೌನ್ಸಿಲಿನೊಳಗಿನಿಂದ ಒಬ್ಬನನ್ನು ಆರಿಸಲು ಅಧಿಕಾರ ಕೊಡಬಹುದು ಎಂದು ಮಸೂದೆಯಲ್ಲಿತ್ತು. ಅದಕ್ಕೆ ಬದಲಾಗಿ ಚೆಯರ್‌ಮನ್ನರನ್ನು ಆರಿಸಲಿಕ್ಕೆ ಈಗ ಮ್ಯುನಿಸಿಪಾಲಿಟಿಗಳಲ್ಲಿರುವ ಅಧಿಕಾರವನ್ನು ಈ ಕೌನ್ಸಿಲುಗಳಿಗೆ ಕೊಡಬೇಕೆಂದು ತಂದ ವಾದವು ಇಷ್ಟು ಬೇಗನೇ ಅಂಥಾ ಅಧಿಕಾರವನ್ನು ಕೊಡಲು ಸಾಧ್ಯವಿಲ್ಲವೆಂದು ಸರಕಾರದವರು ಹೇಳಿದ್ದರಿಂದ ಪಾಲಿಯಾ[illegible].

ಜಿಲ್ಲಾ ಕಲೆಕ್ಟರು, ತಮ್ಮ ಹುದ್ದೆಯ ಬಲದಿಂದಲೇ ಇದರಲ್ಲಿ ಒಬ್ಬ ಮೆಂಬರರಾಗಿರಬೇಕೆಂಬ ನಿಬಂಧನೆಯನ್ನು ತೆಗೆದು ಹಾಕುವುದೂ ಯೋಗ್ಯವೆಂತ ಬಂದ ಸೂಚನೆಯನ್ನು ಮೆಂಬರರು ಚರ್ಚಿಸದೆ ಹಿಂದೆಗೆದರು.

ಶಾಲಾ ಇನ್‌ಸ್ಪೆಕ್ಟರರ ಜತೆಯಲ್ಲಿ ಅಸಿಸ್ಟೆಂಟ್ ಇನ್‌ಸ್ಪೆಕ್ಟರರೂ ಈ ಕೌನ್ಸಿಲಿಗೆ ಹುದ್ದೆದಾರ ಮೆಂಬರರಾಗಿರುವುದು ಅಗತ್ಯವಿಲ್ಲವೆಂದು ತಂದ ಸೂಚನೆಯೂ ಬಿದ್ದುಹೋಯಿತು.

ಸರಕಾರಿ ಉದ್ಯೋಗಸ್ಥರು ಈ ಕೌನ್ಸಿಲಿನ ಪ್ರೆಸಿಡೆಂಟರ ಕೆಲಸಕ್ಕೆ ಉಮೇದ್ವಾರರಾಗಿ ನಿಲ್ಲದಂತೆ ನಿರ್ಬಂಧವಿರಬೇಕೆಂಬ ಸೂಚನೆಯೂ ಮಂಜೂರಾಗಲಿಲ್ಲ.

ಡಿಸ್ಟ್ರಿಕ್ಟ್ ಕೌನ್ಸಿಲಿನ ವ್ಯವಹಾರಕ್ಷೇತ್ರದಲ್ಲಿ ಮ್ಯುನಿಸಿಪಾಲಿಟಿಗಳನ್ನು ವಿರಹಿತಪಡಿಸಬೇಕೆಂಬ ತಂದ ಸೂಚನೆಯಲ್ಲಿ ಮ್ಯುನಿಸಿಪಾಲಿಟಿ ಮತ್ತು ಲೋಕಲ್ ಬೋರ್ಡುಗಳ ವ್ಯವಹಾರಕ್ಷೇತ್ರದೊಳಗೆ ಇರುವ ಪರಿಸ್ಥಿತಿಯಲ್ಲಿ ವ್ಯತ್ಯಾಸವಿದೆ, ಮ್ಯುನಿಸಿಪಾಲಿಟಿಯ ಒಳಗೆ ಅಂಥಾ ಬೇರೆ ಒಂದು ಕಮ್ಮಿಟಿಯನ್ನು ಮಾಡಲು ಸಾಧ್ಯವಿದೆ ಎಂದು ಅಭಿಪ್ರಾಯ ತೋರಬಂದಿತ್ತು. ಆದರೆ ಜಿಲ್ಲೆಯ ಒಂದು ಗಡಿಯೊಳಗೆ ಬೇರೆಬೇರೆ ಕಮ್ಮಿಟಿಗಳು ಇರುವುದು ಯೋಗ್ಯವಲ್ಲವೆಂಬ ಕಾರಣದಿಂದ ಈ ಸೂಚನೆಯೂ ಬಿದ್ದುಹೋಯಿತು.

ಶಿಕ್ಷಣ ತೆರಿಗೆಯನ್ನು ಎತ್ತುವುದಕ್ಕೆ ಈ ಬಿಲಿನಲ್ಲಿ ಜಮೀನು ತೆರಿಗೆಯ ಸೇಕಡಾ ೨೫ರಷ್ಟು ಮತ್ತು ಮ್ಯುನಿಸಿಪಾಲಿಟಿಗಳಲ್ಲಿ ಕಂಪೆನಿಗಳು ಮತ್ತು ಜನರ ವೃತ್ತಿ ಇವುಗಳ ಮೇಲಣ ಕಂದಾಯದ ಸೇಕಡಾ ೨೫ರಷ್ಟು, ಯೂನಿಯನ್ನುಗಳಲ್ಲಿ ಮನೆ ತೆರಿಗೆಯ ಸೇಕಡಾ ೨೫ರಷ್ಟು ಮಿತಿಯನ್ನು ಇಟ್ಟಿತ್ತು. ಜಮೀನು ತೆರಿಗೆ ಈಗಲೇ ಬಹಳ ಹೆಚ್ಚಿದೆ, ಇದರ ಮೇಲೆಯೂ ಇನ್ನು ಭಾರವನ್ನು ವಹಿಸುವುದೆಂದರೆ ವರ್ಗದಾರರಿಗೆ ಅನ್ಯಾಯವಾದೀತು ಎಂದು ವಾದ ಬಂತು. ಹೀಗೆ ಕೈ ಹಿಂದೆ ಎಳೆದರೆ ಶಿಕ್ಷಣದ ಬಗ್ಗೆ ಬೇಕಾದ ದ್ರವ್ಯಸಂಚಯವೇ ಸಿಗುವುದಕ್ಕೆ ಕಷ್ಟವಾದೀತು, ಇದಲ್ಲದೆ ಈ ಬಗೆಯ ಸೆಸ್ಸಿನ ಎರಡರಷ್ಟನ್ನು ಸರಕಾರವು ಸಹಾಯ ಧನವಾಗಿ ಕೊಡಬಹುದು ಎಂದು ಹೇಳಿದ್ದರಿಂದ ಈ ವಾದವು ನಿಂತುಹೋಯಿತು. ಸೇಕಡಾ ೧೦ರಿಂದ ೩೦ ವರೆಗಿನ ಆದಾಯ ತೆರಿಗೆಯನ್ನು ಎತ್ತಬಹುದೆಂದು ತಂದ ಸೂಚನೆಯು ಇಂಡಿಯಾ ಸರಕಾರವು ಲೋಕಲ್ ಬೋರ್ಡುಗಳಿಗಾಗಲೀ ಇತರ ಸ್ಥಳೀಯ ಸಂಸ್ಥೆಗಳಿಗಾಗಲೀ ಆದಾಯ ತೆರಿಗೆಯನ್ನು ಹೊಂದುವ ಅಧಿಕಾರವಿಲ್ಲವೆಂದು ನಿರ್ಧರಿಸಿದ್ದಾರೆಂದು ತಿಳಿಸಿದ್ದರಿಂದ ಬಿದ್ದುಹೋಯಿತು. ಇದಲ್ಲದೆ ಹೊಸ ಮ್ಯುನಿಸಿಪಲ್ ಎಕ್ಟಿನಲ್ಲಿಯೂ ಈಗ ಮಂಜೂರಾಗತಕ್ಕ ಹೊಸ ಲೋಕಲ್‌ಬೋರ್ಡ್ ಎಕ್ಟಿನಲ್ಲಿಯೂ ಯಾವ ಹೊಸ ತೆರಿಗೆಗಳು ಸೂಚಿಸಲು ಬೃಹತ್ ಅವುಗಳ ಕಾಲಂಶದ ವರೆಗೆ ಈ ಹೊಸ ಸೆಸ್ಸಿನ ಮಿತಿಯನ್ನು ಏರಿಸಬಹುದು ಎಂದು ನಿರ್ಣಯವಾಯಿತು. ಆದರೆ ಸರಕಾರದ ಸಹಾಯ ಧನವು ಈ ಹೊಸ ತೆರಿಗೆಯ ಎರಡರಷ್ಟು ಆಗಬೇಕು ಎಂದು ನಿರ್ಣಯ ಮಾಡಲಿಕ್ಕೆ ಸಾಧ್ಯವಿಲ್ಲ, ಅದು ಸರಕಾರದ ಆದಾಯದ ಮೇಲೆ ಹೊಂದಿದೆ, ಆದ್ದರಿಂದ ಇಷ್ಟು ಪಕ್ಷಕ್ಕೆ ಈ ಹೊಸ ತೆರಿಗೆಯಷ್ಟು ಹಣವನ್ನು ಕೊಟ್ಟೇವು ಎಂದು ನಿರ್ಬಂಧಪಡಿಸಬೇಕಲ್ಲದೆ [illegible] ಸರಕಾರವು [illegible] ಎಂದು ಹೇಳಿದರು.

ಈ [illegible] ಮತ್ತು [illegible] ಪಾಠಶಾಲೆಗಳಲ್ಲಿ [illegible]

[illegible]

ಒಂದು ವಾದ ಈ ಚರ್ಚೆಯ ಕಾಲದಲ್ಲಿ ಬಂತು. ಫೀಸು ಕಡಿಮೆ ಮಾಡಿ ಮಾಡುವುದಾದರೆ ಒಟ್ಟಿಗೆ ಇಡೀ ಸಂಸ್ಥಾನದಲ್ಲಿ ಸುಮಾರು ೩೪ ಲಕ್ಷ ರೂಪಾಯಿ ಕಡಿಮೆಯಾದೀತು, ಆದರೆ ಅದಕ್ಕೆ ಬದಲಾಗಿ ಸರಕಾರದಿಂದ ೩೧ ಲಕ್ಷ ಹೊಸ ತೆರಿಗೆಯಿಂದ ೨೧ ಲಕ್ಷ ಆದಾಯ ಬರುತ್ತದೆ ಎಂದು ಸರಕಾರದ ಕಡೆಯಿಂದ ಉತ್ತರ ಬಂದದರಿಂದ ಈ ಸೂಚನೆಯು ಮಂಜೂರಾಗಲಿಲ್ಲ.

ಮುಸಲ್ಮಾನರಿಗೆ ಅವರ ಮತ ಬೋಧನೆಯು ಸಿಗದೆ ಇದ್ದ ಶಾಲೆಗೆ ಕಳುಹಿಸಲಿಕ್ಕೆ ಮುಸಲ್ಮಾನ ರಕ್ಷಕರು ಬದ್ಧರಲ್ಲ, ಶಾಲೆಗಳಲ್ಲಿ ವಾಗುವಿಕ ಹಿರಿಯರ ಮಕ್ಕಳಿಗೆ ಅನ್ಯವಾದ ಮತದ ಬೋಧನೆಯನ್ನು ಒತ್ತಾಯದಿಂದ ಕೊಡುತ್ತಿರುವ ಶಾಲೆಯಲ್ಲಿ ಮಕ್ಕಳನ್ನು ಕಳುಹಿಸಲು ಹಿರಿಯರಿಗೆ ನಿರ್ಬಂಧಿಸಕೂಡದು ಎಂದು ಬಿಲ್ ಮಸೂದೆಯಲ್ಲಿತ್ತು. ಇದರಲ್ಲಿ ಮುಸಲ್ಮಾನರಿಗೆ ಮಾತ್ರ ಕೊಟ್ಟಿರುವ ಅನುಕೂಲತೆಯನ್ನು ಇತರ ಮತದವರಿಗೂ ಕೊಡಬೇಕೆಂದು ಒಂದು ವಾದ ಎದ್ದಿತು. ಮುಸಲ್ಮಾನರಿಗೆ ಅವರ ಧರ್ಮಶಾಸ್ತ್ರದ ಮೇರೆಗೆ ಮತಬೋಧನೆ ಅಗತ್ಯವಿದೆ ಎಂದು ಹೇಳುವಷ್ಟು ಸ್ಪಷ್ಟವಾದ ನಿರ್ಬಂಧವು ಬೇರೆ ಮತದವರಿಗಿಲ್ಲ ಎಂದು ನಾಮದಾರ ಡೆವಿಡ್ಸನ್ ಸಾಹೇಬರು ಸರಕಾರದ ಪರವಾಗಿ ಹೇಳಿದರು. ಆಯಾಯ ಮತದ ಬೋಧನೆಯನ್ನು ಕೊಡುವುದು ಯೋಗ್ಯವೆಂದು ಹೇಳುವುದಾದರೂ ಅದು ಎಲ್ಲಾ ಜಾತಿ ಮತಗಳ ಮಕ್ಕಳಿಗೆ ಸಾಧ್ಯವಿಲ್ಲವೆಂದು ನಾಮದಾರ ಮೆಕ್‌ಫೈಲ್ ಸಾಹೇಬರು (ಮದ್ರಾಸು ಕ್ರಿಶ್ಚನ್ ಕಾಲೇಜಿನ ಪ್ರೊಫೆಸರು) ಪ್ರತಿಪಾದಿಸಿದರು. ಈ ಸೂಚನೆಯು ಬಿದ್ದುಹೋದಂತೆ ಮತಬೋಧನೆಯ ಚರ್ಚೆಯು ಅಲ್ಲಿಗೆ ಅಂತ್ಯವಾಗಲಿಲ್ಲ. ಅನ್ಯಮತಬೋಧನೆಯನ್ನು ನಿರ್ಬಂಧದಿಂದ ಕೊಡದಂತೆ ಇನ್ನೊಂದು ನಿಬಂಧನೆ ಇತ್ತು. ಇದರ ಮೇರೆಗೆ ೧೦ ಮಂದಿ ರಕ್ಷಕರು ಈ ಅನ್ಯ ಮತಬೋಧನೆಯನ್ನು ಕುರಿತು ಆಕ್ಷೇಪಿಸಿದ್ದಲ್ಲಿ ಮಕ್ಕಳ ಮನೆಗಳ ಸಮೀಪದಲ್ಲಿ ಬೇರೆ ಶಾಲೆಯ ಅನುಕೂಲತೆ ಇಲ್ಲವಾದರೆ ಆ ಮಕ್ಕಳನ್ನು ಈ ಅನ್ಯಮತಬೋಧನೆಯನ್ನು ಕೇಳಲು ಒತ್ತಾಯಪಡಿಸಬಾರದಂತೆ ಡಿಸ್ಟ್ರಿಕ್ಟ್ ಕೌನ್ಸಿಲುಗಳು ಆ ಶಾಲೆಗಳಿಗೆ ಹೇಳಿ ಕರಾರು ಮಾಡಿಕೊಳ್ಳಬೇಕು ಎಂದು ಈ ಕಾಯಿದೆ ನಿಬಂಧನೆಯಲ್ಲಿತ್ತು. ಹೆತ್ತವರು ತಾವಾಗಿಯೇ ಅಪೇಕ್ಷಿಸದಿದ್ದರೆ ಅನ್ಯ ಮತಬೋಧನೆಯನ್ನು ಕೇಳಲಿಕ್ಕೆ ಮಕ್ಕಳಿಗೆ ಒತ್ತಾಯವಿರಕೂಡದು ಎಂದು ಸೂಚನೆ ಬಂತು. ಈಗ ೬೦ ವರ್ಷಗಳಿಂದ ನಡೆದು ಬಂದ ಕ್ರಮಕ್ಕೆ ಪ್ರತಿಕೂಲವಾದ ಏರ್ಪಾಡನ್ನು ಈಗ ಸೂಚಿಸುವುದು ಸರಿಯಲ್ಲವೆಂದು ವೆ.ಮೆಕ್‌ಫೈಲರು ಮಿಶ್ಯನ್ ಪಕ್ಷವನ್ನು ಹಿಡಿದು ವಾದಿಸಿದರು.

ಈ ನಿಬಂಧನೆಯು ಮಿಶ್ಯನ್ ಶಾಲೆಗಳಿಗೆ ಅನುಕೂಲವಾಗಿದೆ, ಇದರ ನಂತರದ ನಿಬಂಧನೆಗಳಲ್ಲಿ ಹೇಳುವ ಮೇರೆಗೆ ಡಿಸ್ಟ್ರಿಕ್ಟ್ ಕೌನ್ಸಿಲಿನೊಡನೆ ಈ ಮತಬೋಧನೆ ವಿನಾಯಿತಿಯ ಒಪ್ಪಂದ ಮಾಡಲು ಶಾಲೆಗಳು ಒಪ್ಪದಿದ್ದರೆ ಆಕ್ಷೇಪಿಸುವವರ ಮಕ್ಕಳ ಬಗ್ಗೆ ಪ್ರತ್ಯೇಕ ಶಾಲೆಗಳನ್ನು ಕೌನ್ಸಿಲಿನವರು ಏರ್ಪಡಿಸಬೇಕೆಂದು ಕ್ರಮವಿದೆ, ಅಂದರೆ ಮಿಶ್ಯನ್ ಶಾಲೆಗಳು ಈ ಕರಾರಿಗೆ ಒಪ್ಪದಿದ್ದರೂ ಅವುಗಳಿಗೆ ಸರಕಾರದ ಅಥವಾ ಕೌನ್ಸಿಲಿನ ದ್ರವ್ಯ ಸಹಾಯ ಸಿಗಲೇಬೇಕೆಂದು ಅರ್ಥವಾಗುತ್ತದೆ. ಇದು ಸರಿಯಲ್ಲವೆಂದು ನಾಮದಾರ ರಾಮಚಂದ್ರ ಅಯ್ಯರ್ ಹೇಳಿದರು. ೧೧,೫೦೦೦ ಮಕ್ಕಳು ಮಿಶ್ಯನ್ ಶಾಲೆಗಳಲ್ಲಿ ಕಲಿಯುತ್ತಿವೆ. ಇವುಗಳಲ್ಲಿ ಕ್ರೈಸ್ತರಲ್ಲದ ಅಂತವರು ಅತ್ಯಧಿಕವೆಂದು ನಾಮದಾರ ಡೆವಿಡಸನರು ಉತ್ತರಕೊಟ್ಟರು. ಇದರಲ್ಲಿ ಇನ್ನೊಂದು ನೂತನವಾದ ವಾದ ಬಂತು. ಹಿಂದೂಮುಸಲ್ಮಾನರಿಗೆ ಕ್ರೈಸ್ತ ಮತಬೋಧನೆ ಧರ್ಮಕ್ಕೆ ವಿರೋಧವೆಂದಾದರೆ ಕ್ರೈಸ್ತ ಮತದವರಿಗೆ ಮತಬೋಧನೆಯಿಲ್ಲದ ಶಿಕ್ಷಣವು ಧರ್ಮಕ್ಕೆ ವಿರೋಧವೆಂದು ನಾಮದಾರ ದೇವದಾಸರು (ಕ್ರೈಸ್ತರೊಬ್ಬರು) ಯುಕ್ತಿವಾದವನ್ನು ಮಾಡಿದರು. ಇದಲ್ಲದೆ ಮಿಶ್ಯನ್ ಶಾಲೆಗಳಲ್ಲಿ ಇತರ ಶಿಕ್ಷಣವು ಬಹಳ ಉಚ್ಚ ತರಗತಿಯದಿದ್ದು ಕ್ರೈಸ್ತರಲ್ಲದವರು ಸುಖಗುಟ್ಟಿದ್ದೇ—ಅತ್ಯಂತ ಸಂತೋಷದಿಂದ ತಮ್ಮ ಮಕ್ಕಳನ್ನು ಆ ಶಾಲೆಗೆ ಕಳುಹಿಸುತ್ತಾರೆ, ಮಿಶ್ಯನಿನವರು ಈ ಉಚ್ಚ ಶಿಕ್ಷಣದ ಬಗ್ಗೆ ಹೇರಳ ಖರ್ಚು ಮಾಡುತ್ತಿದ್ದಾರೆ. ಅವರು ಕೊಡುವ [illegible]

[illegible]

೧೦ನೆ ಒಕ್ಟೋಬರ್ ೭ನೆ ತಾರೀಕಿಗೆ ಜರಗಿದ ಸಹಕಾರಿ ಕಾರ್ಯನಿರ್ವಾಹಕ ಪರಿಷತ್ತಿನ ಠರಾವುಗಳು.

ಮಂಗಳೂರಲ್ಲಿ ಸೆಂಟ್ರಲ್ ಬೇಂಕಿನ ಆಫೀಸಿನಲ್ಲಿ ಜರಗಿದ ಈ ಸಭೆಯಲ್ಲಿ ೨೪ ಪ್ರತಿನಿಧಿಗಳು ಹಾಜರಿದ್ದರು. ಈ ಕೆಳಗಿನ ಠರಾವುಗಳನ್ನು ಸ್ವೀಕಾರ ಮಾಡಲಾಯಿತು —

೧. ಸಂಘಗಳಲ್ಲಿಯೂ ಸೆಂಟ್ರಲ್ ಬೇಂಕಿನಲ್ಲಿಯೂ ಬಡ್ಡಿಯ ದರಗಳನ್ನು ಇಳಿಸುವ ಆ ವಿಷಯದಲ್ಲಿ ಮ. ರಾ. ರಿಜಿಸ್ಟ್ರಾರರಿಂದ ಬಂದ ಸರ್ಕ್ಯುಲರಿನ ಸೆಂಟ್ರಲ್ ಬೇಂಕಿನವರಿಗೂ ಸಹಿತ ಪತ್ರವ್ಯವಹಾರವನ್ನು ಓದಲಾಯಿತು ಮೂಲ ಸಂಘಗಳು ಮೆಂಬರರಿಗೂ ಮೆಂಬರರಲ್ಲದವರಿಗೂ ಒಂದು ವರ್ಷದ ಒಳಗಿನ ಠೇವಣಾತಿಗಳಿಗೆ ಸೇಕಡಾ ೭ರಂತೆ ಬಡ್ಡಿ, ೧ ವರ್ಷಕ್ಕೆ ಮಿಕ್ಕಿದ ವಾಯಿದೆಗೆ ಮೆಂಬರರಿಗೆ ಮಾತ್ರ ೮ರಂತೆ ಕೊಡಬಹುದು. ಸೆಂಟ್ರಲ್ ಬೇಂಕಿನಲ್ಲಿ ಮೆಂಬರರ ಠೇವಣಾತಿಗಳಿಗೆ ಮತ್ತು ಮೆಂಬರರಲ್ಲದವರ ಠೇವಣಾತಿಗಳಿಗೆ ಇಲ್ಲಿಯ ದರಗಳಲ್ಲಿ ವ್ಯತ್ಯಾಸ ಮಾಡಕೂಡದು. ಈ ಠೇವಣಾತಿಗಳಿಗೆ ೧ ವರ್ಷಕ್ಕಿಂತ ಕಡಿಮೆ ವಾಯಿದೆಗೆ ರೂ. ೬ರಂತೆ, ೧ ವರ್ಷಕ್ಕೆ ಮಿಕ್ಕಿ ೨ ವರ್ಷದೊಳಗಿನ ಠೇವಣಾತಿಗಳಿಗೆ ಸೇಕಡಾ ೬½, ಎರಡು ವರ್ಷಗಳಿಗೆ ಮಿಕ್ಕಿದ ವಾಯಿದೆಯ ಠೇವಣಾತಿಗಳಿಗೆ ಸೇಕಡಾ ೭ರಂತೆ ದರಗಳನ್ನು ಇಡುವುದು ಯೋಗ್ಯ. ಸಂಘಗಳು ತಮ್ಮ ಹಣವನ್ನು ಸೆಂಟ್ರಲ್ ಬೇಂಕುಗಳಲ್ಲಿ ಠೇವಣಾತಿಯಾಗಿರಿಸಿದಾಗ ಸೇಕಡಾ ೭ರಂತೆ ಬಡ್ಡಿ ಪಡೆಯಬೇಕು, ಸಂಘಗಳ ಕ್ಷೇಮನಿಧಿಗೆ ಮೊದಲಿನಂತೆ ಸೇಕಡಾ ೬½ ದರದಲ್ಲಿ ಬಡ್ಡಿ ಕೊಡಬೇಕು. ಮೂಲ ಸಂಘಗಳು ಮೆಂಬರರಿಗೆ ೧ ರೂಪಾಯಿಗೆ ೧½ ಪೈಗಳಂತೆ ಅಥವಾ ಸೇಕಡಾ ರೂ. ೧೦ ೧೫ರಂತೆ ಬಡ್ಡಿ ಹೊರಿಸಬೇಕು. ಸೆಂಟ್ರಲ್ ಬೇಂಕು ಕೊಟ್ಟ ಸಾಲಗಳಿಗೆ ಮೂಲ ಸಂಘಗಳು ೮½ರಂತೆ ತೆರಬೇಕು. ವಾಯಿದೆ ದಾಟಿದ ಸಾಲಗಳಿಗೆ ಮೂಲ ಸಂಘಗಳು ೧೫-೧೦ರಂತೆ ಅಂದರೆ ೨½ ಪೈಗಳ ಮೇರೆಗೆ ಬಡ್ಡಿ ಎಣಿಸಬೇಕು. ಸೆಂಟ್ರಲ್ ಬೇಂಕಿನಿಂದ ಮೂಲಸಂಘಗಳು ಪಡೆದ ಸಾಲಗಳು ವಾಯಿದೆ ದಾಟಿದ್ದರೆ ಸೇಕಡಾ ೧೨½ರಂತೆ ದಂಡನೆ ಬಡ್ಡಿ ಎಣಿಸಬೇಕು. ಮೂಲ ಸಂಘಗಳಲ್ಲಿ ಮೆಂಬರರ ಪಾಲು ಬಂಡವಾಳಕ್ಕೆ ಈಗಿನ ದರದಲ್ಲಿಯೆ ಮುನಾಫೆ ಕೊಡಬೇಕು.

ಈ ಹೊಸ ದರಗಳನ್ನು ಹೊಸ ಸಾಲಗಳಿಗೆ ಮಾತ್ರ ಲಗಾವು ಮಾಡಬೇಕು. ಆದರೆ ಹಳೇ ಸಾಲಗಳ ವಾಯಿದೆ ಮುಂದರಿಸಿದ ಸಂದರ್ಭದಲ್ಲಿ ಹೊಸ ದರಗಳನ್ನು ಎಣಿಸಬೇಕು. ಈ ಹೊಸ ದರಗಳು ಮಂಜೂರಾಗುವ ತಾರೀಕಿನಿಂದ ಜಾರಿಗೆ ಬರಬೇಕಾಗಿದೆ.

೧೦ ರೂ ೧೫ ಆನೆ ದಂಡದಲ್ಲಿ ಬಡ್ಡಿಯ ಕ್ರಮವನ್ನು ಜಾರಿಗೆ ತರುವ ಮನಸ್ಸಿಲ್ಲದ ಸಂಘಗಳಿಗೆ ಸೆಂಟ್ರಲ್ ಬೇಂಕಿನಿಂದ ಸಾಲ ಸಿಗುವುದೂ ಮೊದಲು ಕೊಟ್ಟ ಸಾಲಗಳಿಗೆ ವಾಯಿದೆ ಮುಂದರಿಸುವುದೂ ಸಾಧ್ಯವಿಲ್ಲವೆಂದು ನಿರ್ಣಯಿಸಲಾಯಿತು.

೨. (೧) ಈಗ ಇರುವ ಇನ್ಸ್‌ಪೆಕ್ಟರರ ಫಿರ್ಕಗಳು ದೊಡ್ಡವಾಗಿದ್ದು ಈಗ ಜಿಲ್ಲೆಯಲ್ಲಿ ಅಲ್ಲಲ್ಲಿ ಎದ್ದಿರುವ ಬಿನಪತ್ತಿನ ಸಂಘಗಳ ಮೇಲ್ವಿಚಾರಣೆ ನಡೆಸುವುದಕ್ಕೆ ಅವರಿಗೆ ಬಹಳ ಕಷ್ಟಕರವಾಗಿ ಪರಿಣಮಿಸಿರುವುದರಿಂದ ಬಿನ್‌ಪತ್ತಿನ ಈಗಿನ ಸಂಘಗಳ ಅಭಿವೃದ್ಧಿಯನ್ನು ಕಾಯುವುದಕ್ಕೂ ಜಿಲ್ಲೆಯಲ್ಲಿ ಇಂಥ ಬೇರೆ ಸಂಘಗಳನ್ನು ಸ್ಥಾಪನೆ ಮಾಡುವುದಕ್ಕೂ ಎರಡು ಇನ್ಸ್‌ಪೆಕ್ಟರುಗಳನ್ನು ಪ್ರತ್ಯೇಕಿಸುವ ಅಗತ್ಯವು ಕಾಣುತ್ತದೆ (೨) ಮೊಗವೀರರ ಸಂಘಗಳನ್ನೂ ಗಾಣಿಗ ಫೆಕ್ಟರಿ ಸಂಘಗಳನ್ನೂ ಕೋ ಒಪರೇಟಿವ ಇಲಾಖೆಯು ಕೈಕೆಳಗಿಂದ ತೆಗೆದು ಫಿಶ್ಶರಿಸ್ ಇಲಾಖೆಯವರ ಮೇಲ್ವಿಚಾರದಲ್ಲಿ ಇಡುವಂತೆ ಏರ್ಪಾಡು ಆಗುತ್ತಿದೆ ಎಂದು ಕೇಳಿ ಈ ಕ್ರಮದಿಂದ ಈ ಸಂಘಗಳು ಇನ್ನಷ್ಟು ವೃದ್ಧಿಗೆ ಬರಲಿಕ್ಕೆ ಎಡೆಯಾದೀತೆಂದು ತೋರುತ್ತದೆ (೩) ಈ ಸಂಘಗಳನ್ನು ಬಿಟ್ಟರೂ ಇನ್ನೂ ಬೇರೆ ಸಂಘಗಳ ಸಂಖ್ಯೆ ೨೨೪ ಇರುವುದರಿಂದ ಒಟ್ಟಿಗೆ ೯ ಇನ್ಸ್‌ಪೆಕ್ಟರುಗಳು ಬೇಕಾಗಿದ್ದಾರೆ ಆದ್ದರಿಂದ ಇನ್ನೊಬ್ಬ ಇನ್ಸ್‌ಪೆಕ್ಟರರನ್ನು ಹೆಚ್ಚಿಗೆ ನೇಮಿಸುವುದಲ್ಲದೆ ಈಗ ಇರುವ ರಿಜರ್ವ್ ಇನ್ಸ್‌ಪೆಕ್ಟರರನ್ನು ಆ ಕೆಲಸಕ್ಕೆ ಹಚ್ಚಿ ಅಸಿಸ್ಟಾಂಟ ರಿಜಿಸ್ಟ್ರಾರರ ಆಫೀಸು ಸಿಬಂದಿಯಿಂದಲೇ ರಿಜರ್ವ್ ಇನ್ಸ್‌ಪೆಕ್ಟರರನ್ನು ವಿಂಗಡಿಸಬೇಕೆಂದು ಇಲಾಖೆಯವರಿಗೆ ಕೇಳಿಕೊಳ್ಳುವಂತೆ ನಿರ್ಣಯಿಸಲಾಯಿತು.

೩ (a) ಈ ಕೆಳಗಿನ ಸಂಘಗಳನ್ನು ವಿಭಜಿಸಬೇಕೆಂದು ನಿರ್ಣಯಿಸಲಾಯಿತು — ಕನ್ನಡ ಕ್ಷತ್ರಿಯ, ಐವರ್ನಾಡು, ಅರಂತೋಡು ಗಂಗೊಳ್ಳಿ, ಬಂಟ್ವ ಇಳಂತಿಲ, ಗುರುಪುರ, ಕಿನ್ನಿಕಂಬಳ

(b) ಮರವಂತೆ ಗಂಗೊಳ್ಳಿ ಟವನ್ ಬೇಂಕು, ಪುತ್ತಿಗೆ, ಬೈತಂಪಳ್ಳಿ, ಉದಯಾವರ ಬಿಲ್ಲವರ ಸಂಘ, ಕೋಟೆ ಬಿಲ್ಲವರ ಸಂಘ, ಕೊಡಕಾಟ, ದಕ್ಷಿಣ ತ್ರಿಕರ್ಪೂರ, ಮಾಣಿ ಇವು ಹೊರತು ಹೆಚ್ಚಿಗೆ ಹೊಸ ಸಂಘಗಳನ್ನು ಸ್ಥಾಪಿಸುವ ವಿಷಯವನ್ನು ಮುಂದಿನ ಸಮ್ಮೇಲನದಲ್ಲಿ ಪ್ರಸ್ತಾಪಿಸಬಹುದೆಂದೂ ಕಾರ್ಕಳ ತಾಲೂಕಿನಲ್ಲಿ ಅನುಕೂಲ ಸ್ಥಳಗಳಲ್ಲಿ ಇನ್ನೂ ೬ ಸಂಘಗಳನ್ನು ಪರೊ ಸ್ಥಾಪಿಸಿ ಕಾರ್ಕಳದಲ್ಲಿ ಸ್ಥಾಪಿಸಲಿಕ್ಕಿರುವ ಯೂನಿಯನ್ನು ಬಲಪಡಿಸಬೇಕೆಂದೂ ಈಗ ಜಿಲ್ಲೆಯಲ್ಲಿರುವ ಯೂನಿಯನ್ನುಗಳನ್ನು ವಿಭಜಿಸುವ ವಿಷಯವನ್ನು ಮುಂದೆ ಆಲೋಚಿಸಬಹುದೆಂದು ನಿಶ್ಚಯಿಸಲಾಯಿತು.

೪ ಅತ್ತಾವರ ಮತ್ತು ಪೊಳಲಿಕಟ್ಟೆ ಸಂಘಗಳನ್ನು ಈ ವರ್ಷದಲ್ಲಿ ಮುಚ್ಚುವುದೇ ಯೋಗ್ಯವೆಂದು ನಿಶ್ಚಯಿಸಲಾಯಿತು.

೫ ದೇಲಂಪಾಡಿ ಸಂಘವನ್ನು ಕಾಸರಗೋಡು ಯೂನಿಯನ್ನಿನಿಂದ ಪುತ್ತೂರು ಯೂನಿಯನ್ನಿಗೂ ಬಾಳಕುದುರು ಸಂಘವನ್ನು ಉಡುಪಿ ಯೂನಿಯನ್ನಿನಿಂದ ಕುಂದಾಪುರ ಯೂನಿಯನ್ನಿಗೂ ಸಂಯೋಜಿಸುವುದು ಯೋಗ್ಯವೆಂದು ನಿರ್ಣಯಿಸಲಾಯಿತು.

೬. ದೀರ್ಘವಾಯಿದೆ ಮತ್ತು ಚಿಕ್ಕ ವಾಯಿದೆಯ ಸಾಲುಗಳು ಯಾವುವೆಂದು ನಿರ್ಧರಿಸುವ ಆಗತ್ಯ ಕಂಡಿದ್ದರಿಂದ ಈ ಕೆಳಗಿನ ಸಾಲಗಳು ಚಿಕ್ಕವಾಯಿದೆಯ ಸಾಲಗಳಾಗಿ ಎಣಿಸಲ್ಪಡಬೇಕೆಂದು ನಿರ್ಣಯಿಸಲಾಯಿತು.

ಪಿ ಎ ಪೈ ಬ್ರದರ್ಸ್, ಉಡುಪಿ

ಮಿಜಾರ್ಕಾರ ಬ್ರದರ್ಸ್, ಮಂಗಳೂರು,

ಇತರಲ್ಲಿಯೂ ಸಿಗ ವ ಮ

ಗೊನೊಕ್ಯೂರಾ.

ಮೇಹ ರೋಗಕ್ಕೆ (Gonorrhea) ಪರಮೌಷಧವು

ಎಲ್ಲಾ ತರದ ಮೇಹಗಳಲ್ಲಿ, ದಪ್ಪವಾದ ಕೀವಿನಂಥಾ ಮೇಹವು ಹರಿಯುವದಕ್ಕೆ, ಮೂತ್ರದ್ವಾರದಲ್ಲಿಯ ಉರಿ, ಹಳದಿವರ್ಣದ ಅಥವಾ ಹಸುರುವರ್ಣದ ಕಿವಿನ ಜರಿಯುಳ್ಳ ಮೇಹವು ಹರಿಯುವದಕ್ಕೆ, ಮೂತ್ರಮಾಡುವಾಗ ಇಂದ್ರಿಯದಲ್ಲಿ ಉರಿ, ಮುಂತಾದ ಮೇಹ ಸಮ್ಮಂಧವಾದ ಎಲ್ಲಾ ಘುರುಕುರೋಗಗಳಲ್ಲಿ ಉತ್ತಮ ಔಷಧವು ಇದರ ಸೇವನೆಯಿಂದ ಎಷ್ಟುಕಾಲದ ಹಳೆ ಮೇಹರೋಗಗಳಾದರೂ ಖಂಡಿತವಾಗಿ ಗುಣಹೊಂದುವವು.

ಔಷಧ ಸೇವಿಸುವ ಕ್ರಮ— 2 ಘಂಟೆಗೆ ಒಂದಾವರ್ತಿ 5 ಬಿಂದು ಔಷಧವನ್ನು ಒಂದು ಔಂಸಷ್ಟು ನೀರಿನಲ್ಲಿ ಹಾಕಿ ಸೇವಿಸುವದು ಕ್ರಯ — ರೂ 1—0—0.

ಬೇಕಾದವರು ಕೆಳಗಿನ ವಿಳಾಸಕ್ಕೆ ಬರೆಯತಕ್ಕದ್ದು

ವಿಳಾಸ — ಎ. ಫೆರ್ನಾಂಡಿಸ್,

ಇಲೆಕ್ಟ್ರೊ ಹೋಮಿಯೊಪೆತಿ ಡಿಸ್ಪೆನ್ಸರಿ,

ಮಂಗಳೂರು.

The Canara Bank, Limited, Mangalore.

ಕೆನರಾ ಬ್ಯಾಂಕ್ ಲಿಮಿಟೆಡ್, ಮಂಗಳೂರು.

ESTABLISHED JULY 1906. 1906ನೇ ಇಸವಿ ಜುಲಾಯಿ ತಿಂಗಳಲ್ಲಿ ಸ್ಥಾಪಿಸಲ್ಪಟ್ಟಿತು.

Authorised and fully paid up Capital Rs. 300,000—0—0	ಅಧಿಕಾರಿಗಳಿಂದ ಸಲ್ಲತಕ್ಕ ಪೂರ್ಣವಾಗಿ ಕೊಟ್ಟ ಮೂಲಧನವು ರೂ. 300,000—0—0
Reserve and other sinking Funds „ 138,697—7—2	ಕ್ಷೇಮನಿಧಿ ಮತ್ತು ಇತರ ಫಂಡುಗಳು „ 138,697—7—2

THE BANK RECEIVES FIXED, CURRENT ACCOUNT, & SAVINGS BANK DEPOSITS

ಖಾಯಂ ಮತ್ತು ಚಾಲ್ತಿ ಠೇವಣಾತಿಗಳೂ, ಸೇವಿಂಗ್ಸ್ ಬೇಂಕ್ ಠೇವಣಾತಿಗಳೂ, ಪಡಕೊಳ್ಳಲಾಗುತ್ತವೆ.

For further particulars apply to the Secretary.

☞ ವಿಶೇಷ ವರ್ತಮಾನದ ಬಗ್ಗೆ ಸೆಕ್ರೆಟರಿಗೆ ಬರಕೊಳ್ಳುವದು

Canara Bank Ltd.,
Mangalore, 1st September 1920.

K. Venkat Rao,
Secretary

Date	[illegible]	[illegible]	[illegible]	[illegible]	[illegible]	[illegible]	[illegible]	[illegible]
16	[illegible]	[illegible]	[illegible]	[illegible]	[illegible]	[illegible]	6-23	6.12
17	[illegible]	[illegible]	[illegible]	[illegible]	[illegible]	[illegible]	6-23	6.11
18	[illegible]	[illegible]	[illegible]	[illegible]	[illegible]	[illegible]	6-23	6 11
19	[illegible]	[illegible]	[illegible]	[illegible]	[illegible]	[illegible]	6 23	6.10
20	[illegible]	[illegible]	[illegible]	[illegible]	[illegible]	[illegible]	6 23	6. 9
21	[illegible]	[illegible]	[illegible]	[illegible]	[illegible]	[illegible]	[illegible]	6. 9
22	[illegible]	[illegible]	[illegible]	[illegible]	[illegible]	[illegible]	6-24	6. 8

ಮಂಗಳೂರಿನ ವಾಯುಸ್ಥಿತಿ.

(ಸಪ್ಟೆಂಬರ್ ತಿಂಗಳು)

Date ತಾರೀಖು	Temperature. ಉಷ್ಣ (ಕಾವು) Maximum ಹೆಚ್ಚಿನದು	Minimum ಕಡಿಮೆ	Rainfall. ಮಳೆ ದಿನದ ಮಳೆ	ಏಪ್ರಿಲ್ ನಿಂದ
8	79—9	73—2	0—87	...
9	84—4	75—8	0—05	...
10	84—9	74—8	—	..
11	87—3	76—1	—	...
12	88—1	78—5	—	.
13	87—9	75—0	—	—
14	88—3	75—4	—	—

ಪಾಳ್ಯದ ವೆಂಕಟಾಚಲ ಪಂಡಿತರ ಸಿದ್ಧೌಷಧಗಳು.

ಲೋಕಾಮಯಹರ ಕಸ್ತೂರಿ ಮಾತ್ರೆಗಳನ್ನು ಈಗಲಾದರೂ ಪರೀಕ್ಷಿಸಿ ನೋಡಿರಿ!

ಪ್ರತಿವರ್ಷವೂ ಲಕ್ಷಾಂತರ ಸೀಸೆಗಳು ವಿಕ್ರಯವಾಗುತ್ತಿವೆ.

ಇಂಡಿಯಾದವರು ಮಾತ್ರವಲ್ಲ, ಬರ್ಮಾ, ಸಿಲೋನ್, ಮಲೆಯ ಸ್ಟೇಟ್, ಗೋವಾ, ಫೀಜಿಲೆಂಡ್, ಆಫ್ರಿಕಾ ಮೊದಲಾದ ಕಡೆಯವರು ಕೂಡ ಈ ಸಿದ್ಧೌಷಧಿಯನ್ನು ಉಪಯೋಗಿಸುತ್ತಿರುತ್ತಾರೆ

ಮಹಾಭಾಗ ಒಂದೇ ಒಂದು ಲೋಕಾಮಯಹರ ಕಸ್ತೂರಿ ಮಾತ್ರೆಯ ಸೀಸೆಯು ನಿಮ್ಮ ಮನೆಯಲ್ಲಿದ್ದರೆ ಸಮಯವನ್ನು ಕಾದು ದೊರೆಯುವುದು ನಿಜವಾಗಿಯೂ ತಪ್ಪುವುದು

ಶೀತ, ಶೀತವಾಯು, ಅಜೀರ್ಣ, ಪಾರ್ಶ್ವವಾಯು, ಜ್ವರ, ಮಂದ, ಮಲಬದ್ಧ, ಕೆಮ್ಮು, ಗಸವೇನೆ, ಬಲಹೀನತೆ, ಕೆಟ್ಟ ಹವಾ, ಮತ್ತು ಶೀತದಿಂದ ಸಿರಿಸಿಂದುಂಟಾಗುವ ವಿಕಾರ, ಮಕ್ಕಳ ಎಳವು, ಜ್ವರ, ಕೆಮ್ಮು, ವಾಯು, ಇವಲ್ಲ ಅನೇಕ ರೋಗಗಳನ್ನು ಈ ಸಿದ್ಧೌಷಧ ಆಶ್ಚರ್ಯವಾಗುವಂತೆ ಗುಣಪಡಿಸುತ್ತದೆ

ಪ್ರತಿ 6 ಸೀಸೆಗಳನ್ನು ಒಟ್ಟಿಗೆ ಕರಿಸಿದರೆ ಟಪಾಲು ಖರ್ಚು ಸೇರಿ 1—8—0
ಪ್ರತಿ 12 ಸೀಸೆಗಳನ್ನು ಒಟ್ಟಿಗೆ ತರಿಸಿದರೆ ಟಪಾಲು ಖರ್ಚು ಸೇರಿ 2—13—0
ಪ್ರತಿ 25 ಸೀಸೆಗಳನ್ನು ಒಟ್ಟಿಗೆ ತರಿಸಿದರೆ ಟಪಾಲು ಖರ್ಚು ಸೇರಿ 5—3—0

ರಿಜಿಸ್ಟರಾದ ಈ ವ್ಯಾಪಾರದ ಗುರ್ತು ಪ್ರತಿ ಸೀಸೆಯ ಮೇಲೂ ಇರುವುದನ್ನೇ ನೋಡಿ ತೆಗೆದುಕೊಳ್ಳಬೇಕಾಗಿದೆ ಅನುಪಾನ ಪತ್ರವು ಪ್ರತಿ ಸೀಸೆಯೊಡನೆಯೂ ಇರುವುದು. 480 ಮಾತ್ರೆಗಳುಳ್ಳ ಕುಪ್ಪಿಗೆ 4 ಆಣೆ ಮಾತ್ರ

<u>ಲಕ್ಷ್ಮೀವಿಲಾಸ ರಸ</u> (ಪ್ಲೇಗಿಗೆ)—ಲಕ್ಷೋಪಲಕ್ಷ ಪ್ಲೇಗುರೋಗಿಗಳು ಈ ಲಕ್ಷ್ಮೀವಿಲಾಸ ರಸದಿಂದ ಆರೋಗ್ಯವನ್ನು ಪಡೆದಿರುತ್ತಾರೆ ಒಂದೇ ಒಂದು ಲಕ್ಷ್ಮೀವಿಲಾಸ ರಸದ ಸೀಸೆಯು ತಮ್ಮಲ್ಲಿದ್ದರೆ ಪ್ಲೇಗಿಗೆ ಸರ್ವೋತ್ತಮವಾದ ಸಿದ್ಧೌಷಧಿಯು ಬೇರೊಂದಿಲ್ಲವೆಂದು ತಾವೇ ಹೇಳುವಿರಿ ದಿನಜ್ವರ ಮೂರರ ನಾಲ್ಕರ ಜ್ವರಗಳು, ಸನ್ನಿಪಾತ ಇವುಗಳು ಕೂಡಾ ಗುಣವಾಗುತ್ತವೆ ಸೀಸೆಗೆ ರೂ 1 ರಿಕ್ಕೆ ಒಂದು ಇನಾಮು

<u>ಶ್ರೀನಿವಾಸತೈಲ</u>—ಪ್ಲೇಗಿನ ಗಡ್ಡೆ ಕರಗುತ್ತದೆ ಸಂಧುಗಳ ನೋವು ನೀಗಲು ಹೋಗುತ್ತದೆ ಸೀಸೆಗೆ 8 ಆಣೆ ರಿಕೆ ಒಂದು ಇನಾಮು.

<u>ವೈಶ್ವಾನರಾಸವ</u>—ಸೇವಿಸಿದ ಮೊದಲನೇ ವೇಳೆಯಿಂದಲೇ ವಾಂತಿಭೇದಿ, ಶೀತಭೇದಿ, ಅಜೀರ್ಣದ ಭೇದಿಗಳು ಗುಣವಾಗುತ್ತಾ ಬರುತ್ತವೆ ಸೀಸೆಗೆ ರೂ 1 ರಿಕ್ಕೆ ಒಂದು ಇನಾಮು.

<u>ಬಾಲಸುಧೋದಯ</u>—ಮಕ್ಕಳಿಗೆ ಬಲಕಾರಿ, ಸಿಹಿಯಾಗಿರುತ್ತದೆ ಮಂದ, ಮಲಬದ್ಧ, ಅಜೀರ್ಣದ ಭೇದಿ, ಕೃಶತ್ವ, ಹೊಟ್ಟೆ ದಪ್ಪದಾಗಿರುವುದು, ಹಸಿವಿಲ್ಲದಿರುವುದು ಇವೆಲ್ಲವೂ ಗುಣವಾಗಿ ಮಕ್ಕಳುಳ್ಳವರಾಗುತ್ತಾರೆ ಪುಷ್ಟಿಯ ಚಟುವಟಿಕೆ ಸೀಸೆಗೆ ಆಣೆ 12 ರಿಕ್ಕೆ ಒಂದು ಇನಾಮು

ಈ ನಾಲ್ಕಕ್ಕೂ ಟಪಾಲು ಖರ್ಚು ಬೇರೆ

ಸಮಸ್ತ ರೋಗಗಳಿಗೂ ನಮ್ಮಲ್ಲಿ ಆಯುರ್ವೇದೀಯ ಸಿದ್ಧೌಷಧಿಗಳು ದೊರೆಯುತ್ತವೆ ಕ್ಯಾಟಲಾಗು ಉಚಿತ

ವಿಳಾಸ. ಶ್ರೀ ಸೀತಾರಾಘವ ವೈದ್ಯಶಾಲಾ ಮೈಸೂರು.

ಒಂದು ಕುಪ್ಪಿಯ ಕ್ರಯ ೧೧ ಆಣೆ. ಮಂಗಳೂರು ಏಜಂಟ್,

ಕೇ. ಟೀ. ಡೋಂಗರೆ ಕಂಪೆನಿ. ದಿ. ಉಲನ್ ಮಾರ್ಟ್, ಮಂಗಳೂರು.

ಗಿರಿಗಾಂವ. ಮುಂಬಯಿ.

ಮಂಗಳೂರಿನ ಪೇಟೆ ಧಾರಣೆ.

ಜೀನಸು	ಇಂದ	ವರೆಗೆ
	ರೂ ಆ.	ರೂ ಆ.
ಮಸ್ಸಿ ಅಕ್ಕಿಮುಡಿ ೧ಕ್ಕೆ	7— 4	8— 0
ಗುಡ್ಡ, ಸುಗ್ಗಿ	7— 1	7— 6
ರಾಶಿ ಮುಡಿ ೧ಕ್ಕೆ	6—12	6—14
ಅವ್ವಲ್ ಬೆಳ್ತಿಗೆ „	9— 2	9— 6
ಗುಡ್ಡ ಬೆಳ್ತಿಗೆ „	8— 0	8— 8
ರಂಗೂನ ಬೆಳ್ತಿಗೆ ಗೋಣಿ ೧ಕ್ಕೆ	17— 0	18— 0
ಗೋಧಿ ಗೋಣಿ ೧ಕ್ಕೆ	21— 0	24— 0
ಹುರುಳಿ ಗೋಣಿ ೧ಕ್ಕೆ	14— 4	14—10
ಕಡಲೆ ಗೋಣಿ ೧ಕ್ಕೆ	15— 8	16— 0
ಕೊಣಿ ಗೋಣಿ ೧ಕ್ಕೆ	18—8	
ತೊಗರಿಬೇಳೆ ಗೋಣಿ ೧ಕ್ಕೆ	21— 0	28— 0
ಉದ್ದು ಗೋಣಿ ೧ಕ್ಕೆ	16— 8	18— 0
ಹೆಸರು ಗೋಣಿ ೧ಕ್ಕೆ	16— 0	18— 8
ಊರು ಬೆಲ್ಲ ಖಂಡಿ ೧ಕ್ಕೆ	110— 0	120— 0
ಉಪ್ಪು ಗೋಣಿ ೧ಕ್ಕೆ	4—10	5— 2
ಕೊಬ್ಬರಿ ಖಂಡಿ ೧ಕ್ಕೆ	135— 0	140— 0
ಕೊಬ್ರಿ ಹಿಂಡಿ ಖಂಡಿ ೧ಕ್ಕೆ	๑2— 0	56— 0
ಎಳ್ಳೆಂಡಿ ಖಂಡಿ ೧ಕ್ಕೆ	47— 6	50— 0
ಕೊಬ್ರಿ ಎಣ್ಣೆ ಮಣ ೧ಕ್ಕೆ	11— 4	11— 8
ಎಳ್ಳೆಣ್ಣೆ ಮಣ ೧ಕ್ಕೆ	11— 0	11— 8
ಚಿಮಿಣಿಎಣ್ಣೆ ಪೆಟ್ಟಿಗೆ ೧ಕ್ಕೆ	9— 6	9— 9
ಮೋರಿಸ ಸಕ್ಕರೆ ಮಣ ೧ಕ್ಕೆ	12— 8	12—10
ಊರ ಮೆಣಸಿನ ಕಾಯಿ ಮಣ ೧ಕ್ಕೆ	8— 0	9— 8
ಸಾಸಿವೆ ಮುಡಿ ೧ಕ್ಕೆ	10— 0	10— 0
ಕೊತ್ತುಂಬರಿ ಮುಡಿ ೧ಕ್ಕೆ	6— 0	6— 4
ಕಾಫಿ ಖಂಡಿ ೧ಕ್ಕೆ	220— 0	230— 0
ಬೀಗೋಟು ಅಡಿಕೆ ಖಂಡಿ ೧ಕ್ಕೆ	100— 0	115— 0
ಬೀಗೋಟು	95— 0	100— 0
ಕಾಳುಮೆಣಸು ಖಂಡಿ ೧ಕ್ಕೆ	135— 0	140— 0
ಬೆಳ್ಳುಳ್ಳಿ ಮಣ ೧ಕ್ಕೆ	22— 0	25— 0
ನೀರುಳ್ಳಿ ಮುಡಿ ೧ಕ್ಕೆ	3—12	3—14
ಶುಂಠಿ ಖಂಡಿ ೧ಕ್ಕೆ	100— 0	120— 0
ಹಿತ್ತಾಳೆ ತಗಡು ಮಣ ೧ಕ್ಕೆ	24— 4	25— 0
ತಾಮ್ರ ತಾಕ್ಲನೆಗಳು ಮಣ ೧ಕ್ಕೆ	32— 0	34— 0
ಸೀಸ ಚೆಕ್ಕೆ ಸೇರು ೧ಕ್ಕೆ	31— 8	
ಹಿತ್ತಾಳೆ ತಗಡು ಮಣ ೧ಕ್ಕೆ	24— 0	25— 0
	—	—

ವಿದೇಶ ವರ್ತಮಾನ.

ಮೊಲಿಶವಿಕ ಚಳವಳ—[illegible] ಬಂದ ಬೊಲಿಶವಿಕ ಪ್ರತಿನಿಧಿ ಗಳೊಂದಿಗೆ [illegible] ಮಂತ್ರಿಗಳಲ್ಲಿ ಒಬ್ಬರು [illegible] ವಾಯುನ್ನು [illegible] [illegible] ಇದೇ ೭ನೇ ತಾರೀಕಿಗೆ [illegible] [illegible] ಇದು ಅವರ ಮನೋ [illegible] [illegible] ಹೋದದ್ದು ಎಂದು [illegible] ಗವರ್ನರ [illegible] ಹೋಗುತ್ತಿದ್ದಾರಂತೆ. ಬೊಲಿಶವಿಕ ಸೈನ್ಯವು ಆ [illegible] ಗಡಿಯಲ್ಲಿ [illegible] ಎಂಬಲ್ಲಿಗೆ ಬರುತ್ತಾ ಇದೆ. [illegible] ಈ ಸೈನ್ಯವನ್ನು ಎದುರಿಸಲಿಕ್ಕೆದ್ದಾರೊ ಅಥವಾ [illegible] ಬಿಟ್ಟುಕೊಡುವರೊ ಎಂದು ನೋಡಲಿಕ್ಕೆ ಇದೆ. [illegible] ಒಂದು ಸೈನ್ಯವು [illegible] ಅಲ್ಲಿ ಇವರಿಗೆ ಬಂದು [illegible] ಇದೇ [illegible] ತಿಳಿಸುತ್ತಾನೆ. ಆದರೆ [illegible] [illegible] ಯುದ್ಧದಲ್ಲಿ ಈ ಬೊಲಿಶವಿಕರು ಇನ್ನೂ ಹಿಮ್ಮೆಟ್ಟುತ್ತಲೇ ಇದ್ದಾರಂತಲೂ [illegible] ಬೊಲಿಶವಿಕ ಪ್ರತಿನಿಧಿಗಳು [illegible] ಕಡೆಯಿಂದ ಕೇಳಿಸುತ್ತಿದೆ.

ಬೊಲಿಶವಿಕರು ಬ್ರಿಟಿಷ ಕೈದಿಗಳನ್ನು ಬಿಡುಗಡೆ ಮಾಡಬೇಕು ಮತ್ತು [illegible] ಮಧ್ಯ ಏಷ್ಯ ಮತ್ತು ಅಫಘಾನಿಸ್ಥಾನ ಇವುಗಳಲ್ಲಿ ನಡಿಸುವ ಒಳಸಂಚನ್ನು [illegible] ಆದರೆ ರಷ್ಯದ ಕೈದಿಗಳನ್ನು ಬಿಟ್ಟುಕೊಡಲಿಕ್ಕೂ ಬೊಲಿಶವಿಕರೊಡನೆ ವ್ಯಾಪಾರ ವಹಿವಾಟುಗಳನ್ನು ನಡೆಸುವುದಕ್ಕೂ ಎಂದೆಂದಿಗೂ ಸಾಧ್ಯವಿಲ್ಲವೆಂದು [illegible] ಬ್ರಿಟಿಷ ಪರವಾಗಿ ಖಂಡಿತ ಅಭಿಪ್ರಾಯವನ್ನು ಬೊಲಿಶವಿಕ ಪ್ರತಿನಿಧಿ [illegible] ಬ್ರಿಟಿಷ ಸರಕಾರದವರು ಇನ್ನೂ ಬೊಲಿಶವಿಕ ವಿರೋಧಿಗಳಾದ [illegible] ಸಹಾಯಮಾಡುತ್ತಿದ್ದಾರೆ. ಅನೇಕ [illegible] ಸ್ಥಳಗಳಲ್ಲಿ ನಿರ್ಬಂಧದಲ್ಲಿ ಇರಿಸಿದ್ದಾರೆ, ಇವರನ್ನು ಬಿಡುಗಡೆ ಮಾಡುವುದಾದರೆ ತಮ್ಮಲ್ಲಿರುವ ಬ್ರಿಟಿಷ ಕೈದಿಗಳನ್ನು ಬಿಟ್ಟು ಕೊಡುವುದಲ್ಲದೆ ಬಾಕೂ ಪ್ರಾಂತದಲ್ಲಿಯು ಇವರು ಹಿಡಿದ ಬ್ರಿಟಿಷ ಕೈದಿಗಳನ್ನು ಬಿಡುಗಡೆ ಮಾಡುವಂತೆ ತಾವು ಸಹಾಯಮಾಡುತ್ತೇವೆಂದು [illegible] ಪ್ರತ್ಯುತ್ತರ ಕೊಟ್ಟಿರುವನು.

ಸಿಸಿಲಿಯಲ್ಲಿ ಕೃಷಿಕರ ಚಳವಳ—ಇಲ್ಲಿ ಹಲವು ಕಡೆಗಳಲ್ಲಿ [illegible] ಗೇಯುವ ಆಸ್ತಿ [illegible] ಕೂಲಿಯಾಳುಗಳು ತಮ್ಮ ಕೈವಶ ಮಾಡಿಕೊಂಡು ಧನಿಗಳಿಗೆ ಬರೇ ಗೇಣಿ ಮಾತ್ರ ಕೊಡುವ ಹಾಗೆ ನಿರ್ಣಯಿಸಿರುವರಂತೆ.

ಲೀಗ್ ಒಫ್ ನೇಶನ್ಸ್—ಇದರ ದೊಡ್ಡದೊಂದು ಅಧಿವೇಶನವು ನವಂಬರ ತಿಂಗಳಲ್ಲಿ ಜಿನಿವಾ ಎಂಬಲ್ಲಿ ಕೂಡಲಿಕ್ಕಿದೆ. ಇದಕ್ಕೆ ೪೧ ರಾಜ್ಯಗಳ ಪ್ರತಿನಿಧಿಗಳು ಬರಲಿಕ್ಕಿರುವರು. ಇನ್ನೂ ಕೆಲವು ಚಿಕ್ಕ ರಾಜ್ಯಗಳು ಇದರಲ್ಲಿ ದಾಖಲಾಗಲು ತವಕದಿಂದಿವೆಯಂತೆ.

ಪೋರ್ತುಗಲ್—ಇಲ್ಲಿ ಟಪ್ಪಾಲು, ಟೆಲಿಗ್ರಾಫ್, ರೈಲ್ವೆ ನಾನಾ ಸರ್ವೀಸುಗಳಲ್ಲಿ ಮುಷ್ಕರ ಉಂಟಾಗಿ ಕೆಲಸ ನಿಂತುಹೋಗಿದೆ ಎಂದು ಪೋರ್ತುಗಲಿನಿಂದ ಬಂದ ಪ್ರಯಾಣಿಕರು ಹೇಳುತ್ತಾರಾಗಿ ಸ್ಪೇನದೇಶದ ರಾಜಧಾನಿಯಾದ ಮದ್ರಿದದಿಂದ ತಂತಿ ವರ್ತಮಾನವು ತಿಳಿಸುತ್ತಿದೆ. ಆದರೆ ಇದು ಬಹಳ ಮಟ್ಟಿಗೆ ಅತಿಶಯೋಕ್ತಿ, ಅಲ್ಲಲ್ಲಿ ಮುಷ್ಕರ ಎದ್ದದ್ದೇನೊ ಹೌದು, ಆದರೆ ಗಲಾಟೆ ವಿಶೇಷವಾಗಿಲ್ಲವೆಂದು ಲಂಡನಿನಲ್ಲಿರುವ ಪೋರ್ತುಗಲಿನ ಪ್ರತಿನಿಧಿಗಳು ಹೇಳುತ್ತಿದ್ದಾರೆ. ನಿಜಸ್ಥಿತಿಯು ಇನ್ನೂ ಗೊತ್ತಾಗಿಲ್ಲ.

ಒಳದೇಶ ವರ್ತಮಾನ.

ರೈಲ್ವೆ ಅವಘಡ—ಇದೇ ೭ನೇ ತಾರೀಕಿಗೆ ಮದ್ರಾಸಿನಿಂದ ಬೆಂಗಳೂರಿಗೆ ಹೋಗುವ ಮೈಲು ಬಂಡಿಯು ಆರ್ಕೊಣಂ ಮತ್ತು ಮಿನ್ನಲ್ ಸ್ಟೇಶನುಗಳ ನಡುವೆ ಹಾದುಹೋಗುವಾಗ ಯಾರೊ ಅಧಮರು ರೈಲ್ವೆ ಕಂಬಿಗಳನ್ನು ತೆಗೆದುಬಿಟ್ಟಿದ್ದರಿಂದ ಎಂಜಿನು ಮತ್ತು ಅದರ ಒತ್ತಿಗೆ ಇರುವ ಗಾಡಿಯು ಕವಚಿಬಿದ್ದು ಅವುಗಳ ಹಿಂದಿನ ಎರಡು ಗಾಡಿಗಳು ಒಂದಕ್ಕೊಂದು ಹೊಡೆದು ಜಜ್ಜಿದಂತಾಯಿತು. ರಾತ್ರೆ ೧೦-೩೦ಕ್ಕೆ ಈ ಅವಘಡವು ಸಂಭವಿಸಿದ್ದರಿಂದ ೧೩ ಮಂದಿ ಮಡಿದರು; ೧೫ ಮಂದಿಗೆ ವಿಶೇಷ ಗಾಯತಗಲಿದೆ. ಮಗಚಿಬಿದ್ದ ಬಂಡಿಯ ಬದಿಯ ಹಲಿಗೆಗಳನ್ನು ಗರಗಸದಿಂದ ಕೊಯ್ದು ಕೆಲವರನ್ನು ಹೊರಪಡಿಸಬೇಕಾಯಿತು. ಗಾಯಪಟ್ಟವರನ್ನು ಮರುದಿನ ಬೆಳಗ್ಗೆ ಮದ್ರಾಸಿನ ಜನರಲ್ ಆಸ್ಪತ್ರೆಗೆ ಸ್ಪೆಶಲ್ ಬಂಡಿಯಲ್ಲಿ ಒಯ್ದರು. ಅಸಂತುಷ್ಟರಾದ ಕೆಲವು ರೈಲ್ವೆ ಕೂಲಿಯಾಳುಗಳು ಈ ದುಷ್ಕೃತ್ಯವನ್ನು ಮಾಡಿರಬಹುದು ಎಂದು ಅಭಿಪ್ರಾಯಪಡುತ್ತಾರೆ.

ಕಲ್ಕತ್ತೆಯ ಗೆಸ್ ಕಂಪೆನಿಯ ಮಜೂರರು—೭ನೆ ತಾರೀಕಿಗೆ ಈ ಮಜೂರರು ಮುಷ್ಕರ ಹಿಡಿದು ಕೆಲಸ ನಿಲ್ಲಿಸಿದರು. ೧೧೦೦ ಮಜೂರರು ಈ ಮುಷ್ಕರದಲ್ಲಿ ಸೇರಿದ್ದಾರಂತೆ. ಹೀಗಾದ್ದರಿಂದ ಕಲ್ಕತ್ತೆಯಲ್ಲಿ ಬೀದಿಯಲ್ಲಿ ಉರಿಸುತ್ತಿದ್ದ ಬೀದಿಲಾಂದ್ರಗಳನ್ನು ಕಡಿಮೆಮಾಡಬೇಕಾಯಿತು. ಸಂಬಳದ ದರಗಳನ್ನು ಹೆಚ್ಚಿಸಬೇಕೆಂಬ ನೆವವೇ ಈ ಮುಷ್ಕರಕ್ಕೆ ಕಾರಣವಾಯಿತಂತೆ.

ಮುಂಬಯಿಯ ಮುಷ್ಕರಗಳು—ಇಲ್ಲಿಯ ಟ್ರಾಮವೇ ನವುಕರರ ಮುಷ್ಕರವು ನಿಲ್ಲಲಿಲ್ಲ. [illegible] ಇವರಿಗೆ ಸಂಬಳಗಳನ್ನು ಹೆಚ್ಚಿಸಿರುತ್ತ ಇವರು ಹಟಸಾಧನಮಾಡುವುದು ಸರಿಯಲ್ಲ, ಇವರು ಈಗ ಕೇಳುವ ಹೆಚ್ಚಿನ ದರಗಳನ್ನು ಕೊಡಲು ಸಾಧ್ಯವಿಲ್ಲವೆಂದು ಕಂಪೆನಿಯ ಅಧಿಕಾರಿಗಳು ಹೇಳಿದರು. ಹೀಗಾದ್ದರಿಂದ ಸೇಕಡಾ ೫೦ ಮಂದಿ ಮಜೂರರು ಕೆಲಸ ನಿಲ್ಲಿಸಿಬಿಟ್ಟಿದ್ದಾರೆ. ಗೇಸ್ ಕಂಪೆನಿಯ ಮಜೂರರ ಮುಷ್ಕರವು ನಿಲ್ಲಲಿಲ್ಲ. ಟಪ್ಪಾಲು ಮತ್ತು ಟೆಲಿಗ್ರಾಫ ಪೇದೆಗಳು ಪುನಃ ಕೆಲಸಕ್ಕೆ ಹಾಜರಾಗಲಿಲ್ಲ. ಮುಂಬಯಿಯ ಮಜೂರರ ಯೂನಿಯನ್ನುಗಳು ಮಹಾಸಭೆ ಸೇರಿ ಈ ಟಪ್ಪಾಲು ಮತ್ತು ತಂತಿ ಇಲಾಖೆಯ ಪೇದೆಗಳಿಗೆ ತಮ್ಮ ದಿನಕೂಲಿಯಿಂದ ಒಂದು ದಿನದ ಕೂಲಿಯನ್ನು ಶೇಖರಿಸಿ ಸಹಾಯಧನವಾಗಿ ಕೊಡಬೇಕೆಂದು ಮಿ। ಬ್ಯಾಪ್ಟಿಸ್ಟರ ಅಧ್ಯಕ್ಷತೆಯಲ್ಲಿ ನಿರ್ಣಯಮಾಡಿದರಂತೆ. ಮುಂಬಯಿಯ ದೇಶೀಯ ವರ್ತಕರ ಚೇಂಬರಿನಿಂದ ಇಂಡಿಯಾ ಸರಕಾರದವರಿಗೆ ಈ ಮುಷ್ಕರದ ಮೂಲಕ ವ್ಯಾಪಾರವರ್ಗಕ್ಕೂ ಇತರ ಜನಗಳಿಗೂ ಉಂಟಾದ ಸಂಕಷ್ಟಗಳನ್ನು ನಿವೇದಿಸಿದ್ದಕ್ಕೆ ಹೀಗೆ ಪ್ರತ್ಯುತ್ತರ ಬಂದಿದೆ. ೧೯೧೯ನೆ ಎಪ್ರಿಲ್ ತಿಂಗಳಿಂದ ಈ ವರೆಗೆ ಸಾಧಾರಣ ಸೇಕಡಾ ೧೪೦ರಷ್ಟು ಅಂಶದಲ್ಲಿ ದರಗಳನ್ನು ಹೆಚ್ಚಿಸಿದ್ದರೂ ಈ ನವುಕರರು ಮುಷ್ಕರ ಹಿಡಿದಿರುವುದರಿಂದ ಇನ್ನೂ ಅವರು ಕೇಳಿದಂತ ಹೆಚ್ಚಿನ ಸಲಹೆಗಳನ್ನು ಕೊಡಲು ಸಾಧ್ಯವಿಲ್ಲ, ಈಗ ಉಂಟಾದ ಅಡಚಣೆಗಳ ಪರಿಹಾರಕ್ಕೆ ಬೇರೆ ರೀತಿಯಿಂದ ಸರಕಾರದವರು ಯತ್ನಿಸುತ್ತಿದ್ದಾರೆಂದು ಇಂಡಿಯಾ ಸರಕಾರದವರು ತಿಳಿಸಿರುವರು.

ಮುಂಬಯಿಯ ಭಿಕ್ಷುಗಳ ಉಪಟಳ—ಈ ಭಿಕ್ಷುಗಳು [illegible] [illegible]ನ್ನು ತಗ್ಗಿಸುವುದಕ್ಕೆ ಉಪಾಯಗಳನ್ನು ಸೂಚಿಸುವ ಉದ್ದೇಶದಿಂದ ಮುಂಬಯಿ ಸರಕಾರದವರು ಒಂದು ಕಮ್ಮಿಟಿಯನ್ನು ನೇಮಿಸಿದ್ದರು. ಈ ಕಮ್ಮಿಟಿಯವರು ಒಂದು ಹೊಸ ಕಾನೂನನ್ನು ಏರ್ಪಡಿಸಬೇಕೆಂದೂ ಅದನ್ನು ಇಡೀ ಸಂಸ್ಥಾನಕ್ಕೆ ಲಗಾವು ಮಾಡಬೇಕೆಂದೂ ಸೂಚಿಸಿರುವರು. ಬಹಿರಂಗವಾಗಿ ರಸ್ತೆಗಳಲ್ಲಿ ಭಿಕ್ಷೆ ಎತ್ತುವುದು ಕ್ರಿಮಿನಲ್ ತಕ್ಸೀರಾಗಬೇಕೆಂತಲೂ ಮುಂಬಯಿ ಶಹರದ ಮಜಿಸ್ಟ್ರೇಟರೂ ಸಂಸ್ಥಾನದ ಇತರ ಭಾಗಗಳಲ್ಲಿ ೨ನೆ ಕ್ಲಾಸು ಮಜಿಸ್ಟ್ರೇಟರ ಅಧಿಕಾರಕ್ಕೆ ಕಡಿಮೆಯಾಗದ ಅಧಿಕಾರಿಗಳೂ ಇಂಥ ಮೊಕದ್ದಮೆಗಳನ್ನು ವಿಚಾರಿಸಿ ಶಿಕ್ಷೆ ಕೊಡಬಹುದೆಂದೂ ಕಾಯಪುಷ್ಟರಾದ ಮತ್ತು ರೋಗರಹಿತರಾದ ಭಿಕ್ಷುಗಳನ್ನು ಸರಕಾರಿ ಮಂಜೂರಾತಿ ಹೊಂದಿದ ವೃತ್ತಿಗೃಹ (ವರ್ಕ್‌ಹೌಸ್)ದಲ್ಲಿ ಬಲಾತ್ಕಾರದಿಂದ ಈ ಮಜಿಸ್ಟ್ರೇಟರು ಕೆಲಸಕ್ಕೆ ಹಚ್ಚಬೇಕೆಂತಲೂ, ರೋಗಪೀಡಿತರನ್ನು ಅವರ ಗೋಸ್ಕರವೇ ನಿರ್ಮಿಸಿದ ಆಲಯಗಳಿಗೆ ಅಟ್ಟಬೇಕೆಂದೂ, ಎಳೇ ವಯಸ್ಸಿನ ಭಿಕ್ಷುಕ ಹುಡುಗರಿಗೂ ಇಂಥ ಮಕ್ಕಳ ವಸತಿಗೃಹವನ್ನು ನಿರ್ಮಿಸಿ ಅಲ್ಲಿಗೆ ದಾಖಲು ಮಾಡಬೇಕೆಂತಲೂ ಸೂಚಿಸಿದ್ದಾರೆ. ಗ್ರಾಮಪಂಚಾಯತುಗಳು ಏರ್ಪಟ್ಟಲ್ಲಿ ಈ ಅಧಿಕಾರವನ್ನು ಅವುಗಳಿಗೆ ಕೊಡಬಹುದಾಗಿಯೂ ಈ ಕಮ್ಮಿಟಿಯ ಅಭಿಪ್ರಾಯ. ನಿಜವಾದ ಸಾಧು ಅಥವಾ ಫಕೀರರನ್ನು ಈ ಕಾನೂನಿನಿಂದ ವಿರಹಿತಪಡಿಸುತ್ತಿದ್ದರೂ ಕೃತಕವೇಷಧಾರಿಗಳಿಗೆ ಈ ಕಾನೂನಿನ ನಿರ್ಬಂಧವನ್ನು ಹಾಕಬೇಕೆಂದು ಈ ಕಮ್ಮಿಟಿಯವರು ಹೇಳುತ್ತಾರೆ. ಅಗತ್ಯವಿರುವ ಸ್ಥಳಗಳಲ್ಲಿ ವರ್ಕ್ ಹೌಸುಗಳನ್ನು ಸ್ಥಾಪಿಸಿ ಅವುಗಳ ಅರ್ಧಾಂಶ ಖರ್ಚನ್ನು ಸರಕಾರದವರೂ ಉಳಿದದ್ದನ್ನು ಸ್ಥಾನಿಕ ಸಂಸ್ಥೆಗಳೂ ವಹಿಸುವಂತೆಯೂ ಅಲ್ಲಲ್ಲಿ ಧರ್ಮಿಷ್ಠ ಜನಗಳು ಉದಾರಬಿಟ್ಟ ಸದಾವರ್ತಗಳನ್ನು ಶೇಖರಿಸಿ ಈ ಸತ್ಕಾರ್ಯಕ್ಕೆ ಅನುಕೂಲಿಯಾಗುವಂತೆ ಮಾಡಬೇಕೆಂದು ಈ ಕಮ್ಮಿಟಿಯವರು ರಿಪೋರ್ಟುಮಾಡಿದ್ದಾರೆ.

ಹಿಂದು ಉಪಾಧ್ಯಾಯಿನಿಯರು—ಇವರ ಸಂಖ್ಯೆ ಸಾಕಷ್ಟು ಇಲ್ಲದ ಈಗ ಇರುವ ಟ್ರೈನಿಂಗ್ ಶಾಲೆಗಳ ಉಪಯೋಗವನ್ನು ಅನೇಕ ಸ್ತ್ರೀಯರು ಹೊಂದಲು ಮುಂದು ಬರುವುದಿಲ್ಲ, ಕೆಲವರಿಗೆ ತಮ್ಮ ಹಳ್ಳಿಗಳಲ್ಲಿ ೩ನೆ ಯಾ ೪ನೆ ದರ್ಜೆಗಿಂತ ಹೆಚ್ಚಿನ ಶಿಕ್ಷಣ ಸಿಗಲಾರದ ಇಂಥವರನ್ನು ಈ ವರೆಗೆ ಟ್ರೈನಿಂಗ್ ಶಾಲೆಗಳಲ್ಲಿ ದಾಖಲು ಮಾಡುತ್ತಿರಲೂ ಇಲ್ಲ, ಇಂಥವರಲ್ಲಿ ಅನೇಕರು ಸ್ವಾಭಾವಿಕವಾಗಿ ವಿಚಕ್ಷಣತೆಯುಳ್ಳವರಾದ್ದರಿಂದ ಅವರಿಗೆ ಕಲಿಸುವಿಕೆಯ ಟ್ರೈನಿಂಗ್ ಆಗುವ ಮೊದಲು ಒಂದು ವರ್ಷ ಟ್ರೈನಿಂಗ ಶಾಲೆಯಲ್ಲಿ ಒಂದು [illegible] ಕ್ಲಾಸನ್ನು ತೆರೆದು ಓದು ಬರಹಗಳ ಅನುಭವ ಮಾಡುವಂತೆಯೂ ಆ ಕಾಲದಲ್ಲಿ ಅವರಿಗೆ ತಿಂಗಳಿಗೆ ೧೦॥ ರೂಪಾಯಿಯ ರಿತಿಯಿಂದ ಡಿರೆಕ್ಟರರ ಸೂಚನೆ ಮೇರೆಗೆ ಸರಕಾರದವರು ವೇತನಗಳನ್ನು ಕೊಡಲು ಏರ್ಪಾಡು ಮಾಡಿದ್ದಾರೆ.

ದೇಶೀಯ ಲಷ್ಕರಿನವರಿಗೆ ಹಜ್ ಯಾತ್ರೆಗೆ ಸೌಕರ್ಯ—ಕಳೆದ ವರ್ಷ ಮಾಡಿದಂತೆ ಈ ವರ್ಷವೂ ಅನ್ಯದೇಶಗಳಲ್ಲಿ ಕೆಲಸಮಾಡುತ್ತಿದ್ದ ಹಿಂದೀ ಲಷ್ಕರಿನವರಿಗೆ ಬ್ರಿಟಿಷ ಸರಕಾರದವರು ಹಜ್ಜ ಯಾತ್ರೆಗೆ ಅನುಕೂಲತೆಗಳನ್ನು ಒದಗಿಸಿ ಕೊಟ್ಟಿದ್ದರಿಂದ ಇಂಡಿಯನ್ ಮೆಡಿಕಲ್ ಸರ್ವಿಸಿಗೆ ೨ ಮಂದಿ, ಹಿಂದೀ ಅಫಿಸರರ ಪೈಕಿ ೫೨ ಮಂದಿ, ಮತ್ತು ಸಿಪಾಯಿಗಳ ಪೈಕಿ [illegible] ಜನರು ಈ ಯಾತ್ರೆಯನ್ನು ಮುಗಿಸಿ ಬಂದರೆಂದು ಪಬ್ಲಿಸಿಟಿ ಬಿರೋದವರು ತಿಳಿಸುತ್ತಾರೆ. ಈ ಲಷ್ಕರಿನವರ ಪೈಕಿ ಕೆಲವರು ಕೆಂಪು ಸಮುದ್ರದ ಬಳಿಯಲ್ಲಿಯೂ ಇನ್ನೂ ಕೆಲವರು ಇಜಿಪ್ತದಲ್ಲಿಯೂ ಯುದ್ಧಕಾಲದಲ್ಲಿ ಸರ್ವಿಸುಮಾಡುತ್ತಿದ್ದರಂತೆ.

ಸರಕಾರಿ ನವುಕರರು—ಸರಕಾರಿ ನವುಕರರು ಜನತೆಯ ಅಥವಾ ಯಾವುದೊಂದು ಸ್ಥಳೀಯ ಸೌಕರ್ಯದ ಬಗ್ಗೆ ಚಂದಾ ಎತ್ತದಂತೆ ನಿರ್ಬಂಧದ ಹುಕುಂ ಬಂದಿದೆ.

ಮಡಿಕೇರಿ:—ಸೆಂಟ್ರಲ್ ಹೈಸ್ಕೂಲಿನಲ್ಲಿ ಕೊಡಗಿನ ಕಮಿಶನರ ಪಿ. ಸಿ. ಎ. ಸ್ಕೋಟರ್ ಬಿ. ಸಿ. ಎಸ್. ಇವರ ಅಧ್ಯಕ್ಷತೆಯಲ್ಲಿ ಬಹು ಸಂಭ್ರಮದಿಂದ 'ಸ್ಕೌಟ ಡೇ' ಆಚರಣೆ ನಡೆಯಿತು. ವಿಚಿತ್ರ ರೀತಿಯಿಂದ ಅಲಂಕರಿಸಿದ ಹಾಲಿನಲ್ಲಿ ಬಂದು ನೆರೆದ ಜನಸಂದಣಿಯು ಕೆಳ್ಳಿಂದ ಸಾಸಿವೆ ಚೆಲ್ಲಲು ಎಡೆ ಸಿಕ್ಕುತ್ತಿದ್ದಿಲ್ಲ. ಕಾರ್ಯಾರಂಭದಲ್ಲಿ ಸ್ಕೌಟ ಟ್ರೂಪಿನ ಸೆಕ್ರೆಟರಿಯವರು ಈ ಬೋಯ್ ಸ್ಕೌಟರ ಅಭ್ಯಾಸಗಳು, ಚಟುವಟಿಕೆಗಳು ಮುಂತಾದ್ದನ್ನು ಕುರಿತು ಬರೆದ ರಿಪೋರ್ಟನ್ನು ಓದಿದರು. ಶಾಲಾ ಹೆಡ್‌ಮಾಸ್ತರರು ಈ ಚಟುವಟಿಕೆಯನ್ನು ಕುರಿತು ಒಂದು ಚಿಕ್ಕ ಭಾಷಣಮಾಡಿದರು. ಆ ಮೇಲೆ ಅಧ್ಯಕ್ಷರು ತಮಗೆ ಮೊತ್ತಮೊದಲು ಈ ಚಟುವಟಿಕೆಯಲ್ಲಿ ವಿಶ್ವಾಸವಿರಲಿಲ್ಲ, ಆದರೆ ಮಿ। ಲಿಟ್ಲ್‌ಹೇಲ್ಸ್ ಸಾಹೇಬರು ಈ ಸಂಸ್ಥಾನಕ್ಕೆ ಬಂದಾಗ ಅದನ್ನು ಕುರಿತು ಪ್ರಶಂಸೆ ಮಾಡಿದ ಮೇಲೆ ತನ್ನ ಕಣ್ಣು ತೆರೆಯಿತು; ಮಿ। ಮೆಂಡಿಸರು ಇಲ್ಲಿಗೆ ಡಿರೆಕ್ಟರರ ಸೂಚನೆ ಮೇರೆಗೆ ಬಂದು ಈ ಚಟುವಟಿಕೆಯನ್ನು ಸ್ಥಾಪನೆಮಾಡಿದರು. ಲೊರ್ಡ ವಿಲ್ಲಿಂಗಡನ್ನರು ಇಲ್ಲಿಗೆ ಚಿತ್ತೈಸಿದಾಗ ಈ ಸ್ಕೌಟರು ಅವರನ್ನು ಎದುರುಗೊಳ್ಳುವ 'ಗಾರ್ಡ ಒಫ್ ಒನರ್' ಆಗಿದ್ದು ಇವರ ಧೋರಣವನ್ನು ಗವರ್ನರ್ ಸಾಹೇಬರು ತುಂಬಾ ಹೊಗಳಿದ್ದಾರೆ, ಹಿಂದುಸ್ಥಾನದ ಬೇರೆ ಬೇರೆ ಕಡೆಯ ಸ್ಕೌಟು ಟ್ರೂಪುಗಳನ್ನು ಬೇಡನ್ ಪವಲರ ಸಂಸ್ಥೆಯಲ್ಲಿ ಸೇರಿಸಿಕೊಳ್ಳುವುದು ಒಳ್ಳೇದಾದೀತು, ಈಗ ಕೊಡಗಿನಲ್ಲಿ ಅಲ್ಲಲ್ಲಿ ಈ ಚಟುವಟಿಕೆಯು ಏಳುವುದು ಒಳ್ಳೇದು ಎಂದು ವಿಸ್ತರಿಸಿ ಭಾಷಣಮಾಡಿದರು. ಇದರನಂತರ ಒಂದು ಅಬಕಾರಿ ಮೊಕದ್ದಮೆಯಲ್ಲಿ ಒಬ್ಬ ಸ್ಕೌಟನು ಕೆಲಸ ಮಾಡಿದ್ದಕ್ಕೆ ಅವನಿಗೆ ಬಹುಮಾನದ ಇನಾಂ ಕೊಟ್ಟರು. ಆ ಮೇಲೆ ಒಂದು ಇಂಗ್ಲಿಷ ಮತ್ತು ಒಂದು ಕನ್ನಡ ನಾಟಕವನ್ನು ಈ ಸ್ಕೌಟರು ಆಡಿ ತೋರಿಸಿದರು.

ಫ್ರೇಜರಪೇಟೆ (ಕೊಡಗು)—ಬರುವ ನವಂಬರ ತಾರೀಖು ೧೪ನೇ ಭಾನುವಾರ ಕೊಡಗು ಡಿಸ್ಟ್ರಿಕ್ಟ ಕುಶಾಲುನಗರ (ಫ್ರೇಜರ್ ಪೇಟೆ)ದಲ್ಲಿ ನಡಿಯುವ ರಥೋತ್ಸವ ಕಾಲದಲ್ಲಿ ಮೂರು ದಿವಸಗಳವರೆಗೆ ದನಗಳ ಜಾತ್ರೆಯು ನಡಿಸಲ್ಪಡುತ್ತ ಒಳ್ಳೇ ದನಗಳನ್ನು ತಂದವರಿಗೆ ಸರಕಾರದವರಿಂದ ಬಹುಮಾನಗಳು ಕೊಡಲ್ಪಡುವವು.

ಡಿಸ್ಟ್ರಿಕ್ಟ್ ಬೋರ್ಡ್ ಮೀಟಿಂಗು.

ಕಳೆದ ತಿಂಗಳ ೨೭ನೇ ತಾರೀಕಿಗೆ ಜರಗಿದ ಮೀಟಿಂಗಿನಲ್ಲಿ ಬೆಳ್ತಂಗಡಿ ಬಂಗಲೆಯ ಕಂಪೌಂಡಿನಲ್ಲಿ ಮೋಟರ್ ಶೆಡ್ಡು ಕಟ್ಟಿಸುವುದಕ್ಕೆ ರೂ. ೪೩೦ ಉಪ್ಪಿನಂಗಡಿಯಲ್ಲಿ ಟೋಲ್‌ಗೇಟ್ ಶೆಡ್ ಕಟ್ಟಿಸುವುದಕ್ಕೆ ರೂ. ೭೦೦ರ ಅಂದಾಜು ಪಟ್ಟಿಗಳನ್ನು ಮುಂದಿನ ವಿಚಾರಕ್ಕೆ ಬಾಕಿ ಇಡಲಾಯಿತು. ಮಂಗಳೂರು ಸೋಮೇಶ್ವರ ರಸ್ತೆಯಲ್ಲಿ ಸೇತುವೆಗಳ ದುರುಸ್ತಿಗೆ ರೂ. ೧೮೩೦ನ್ನು ಸೆಂಕ್ಷನ್ ಮಾಡಿ ಕೆಲಸವನ್ನು ಮಾತ್ರ ತತ್ಕಾಲಕ್ಕೆ ಮನ್ನಾ ಇಡಲಾಯಿತು. ಕಾಸರಗೋಡು [illegible] ಕಂಡಿಗಳ ಬದಿಗಳಲ್ಲಿ ಕಲ್ಲು ಕಟ್ಟಿಸಿದ್ದದ್ದು ಹಾಳಾದ್ದಲ್ಲಿ ದುರುಸ್ತಿ ಮಾಡಿಸಲಿಕ್ಕೆ ರೂ. ೬೦೦, ಉಡುಪಿಯಲ್ಲಿ ಕಾಣಿಯೂರ ಮಠದ ಹಿಂದಿನಿಂದ ಕೋಡಿನ ದುರುಸ್ತಿಗೆ ರೂ. ೨೫೦ ಸೆಂಕ್ಷನ್ ಮಾಡಿ ಈ ಚೆಲ್ಲರೆ ಸನಿಟರಿ ಗ್ರಾಂಟ ಬಗ್ಗೆ ಸರಕಾರದವರ ಬಳಿಯಲ್ಲಿ ಕಳುಹಿಸುವ ಪಟ್ಟಿಯಲ್ಲಿ ಈ ಮೊಬಲಗನ್ನು ಸೇರಿಸಲು ನಿರ್ಣಯಿಸಲಾಯಿತು. ಬೈಂದೂರು ಮತ್ತು ಮೂಡಬಿದ್ರೆ ಆಸ್ಪತ್ರೆಗಳಲ್ಲಿ ಎಮರ್ಜೆನ್ಸಿ ವಾರ್ಡಗಳನ್ನು ಕಟ್ಟಿಸುವ ಬಗ್ಗೆ ರೂ. [illegible] ರೂ. [illegible] ಸೆಂಕ್ಷನ್ ಮಾಡಿ ಆಸ್ಪತ್ರೆ ಕಟ್ಟೋಣಗಳ ಬಗ್ಗೆ ಸಹಾಯ ಕೇಳುವ ಪಟ್ಟಿಯಲ್ಲಿ ಸೇರಿಸಬೇಕೆಂದು ನಿರ್ಣಯಿಸಲಾಯಿತು. ಕುಂದಾಪುರ ತಾಲೂಕಿನ ಹೊಂಗಾರ [illegible] [illegible] ಒಂದು [illegible] ಮತ್ತು ಮಟ್ಟುಗಳ ಬಗ್ಗೆ [illegible] ರೂ. ೬೦೦೦ [illegible] ಬಾಕಿ ಇಡಲಾಯಿತು.

ಕುಂದಾಪುರ ತಾಲೂಕಿನಲ್ಲಿ ೫೮/೬ ಮೈಲಿನಲ್ಲಿ ರಸ್ತೆಯ ಬದಿಗಳನ್ನು ಕಟ್ಟಿಸುವುದಕ್ಕೆ ರೂ. ೪೬೭, ಉಡುಪಿಯ ಛತ್ರದ ಬಳಿಯಲ್ಲಿ ೨ ದಾರಿಗಳ ಬಗ್ಗೆ ರೂ. ೧೫೨೦, ಕಾಸರಗೋಡು ಆಸ್ಪತ್ರೆಯ ಕಂಪೌಂಡಿನ ಬಾವಿಯ ದುರುಸ್ತಿಗೆ ರೂ. ೨೫೦೦, ಭದ್ರಗಿರಿಯಿಂದ ಕಂಕಲ್ಲು ಕಟ್ಟೆ ವರೆಗಿನ ರಸ್ತೆಯ ವಿಶೇಷ ದುರುಸ್ತಿಗೆ ರೂ. ೨೦೦೦, ಡಿಸ್ಟ್ರಿಕ್ಟಬೋರ್ಡಿನ ಬಂಗ್ಲೆ ಮತ್ತು ಇನ್ಸ್‌ಪೆಕ್ಷನ ಛತ್ರಗಳಲ್ಲಿ ಕುರ್ಚಿ ಮೇಜು ವಗೈರೆಗೆ ರೂ. ೧೫೦೦, ಶಂಕರನಾರಾಯಣ ಆಸ್ಪತ್ರೆಯಲ್ಲಿ ಎಮರ್ಜೆನ್ಸಿ ವಾರ್ಡಿನ ಬಗ್ಗೆ ರೂ. ೩೫೦೦, ಮಂಗಳೂರು ಸೋಮೇಶ್ವರ ರಸ್ತೆಯ ಮೇಲೆ ಚಾಚಿರುವ ಕೊಂಬೆಗಳನ್ನು ತೆಗಿಸುವುದಕ್ಕೆ ೩೧೧ರಿಂದ ೬೦।೪ರ ವರೆಗೆ ರೂ. ೭೩೬।। ರೂಪಾಯಿ, ಬಿಸಲಿಘಾಟ ರಸ್ತೆಯ ನಂಬ್ರ ೨ Aಯಲ್ಲಿ ಮಳೆಯಿಂದ ಹಾಳಾದ ಅಂಶದ ದುರುಸ್ತಿಗೆ ರೂ. ೨೦೦, ಕುಂದಾಪುರ ತಾಲೂಕಿನ ತ್ರಾಸಿ ಗ್ರಾಮದಲ್ಲಿ ೭೫ನೆ ಮೈಲಿಯಲ್ಲಿ ಮಳೆಯಿಂದ ಹಾಳಾದ ರಸ್ತೆಯ ದುರುಸ್ತಿಗೆ ೬೦೦ ರೂ, ಕಿನ್ನಿಗೋಳಿ ಬೆಳ್ಮಣ್ಣು ರಸ್ತೆ ಮಾಡಿಸುವುದಕ್ಕೆ ರೂ. ೨೬೫೦, ಸೆಂಕ್ಷನ್‌ಮಾಡಲಾಯಿತು.

ಡಿಸ್ಟ್ರಿಕ್ಟಬೋರ್ಡಿನ ಸಬ್‌ಕಮ್ಮಿಟಿಯ ಸೂಚನೆ ಮೇರೆಗೆ ಲೋಕಲ್‌ಫಂಡು ನವುಕರರ ಸಂಬಳದ ದರಗಳನ್ನು ಹೆಚ್ಚಿಸುವುದಕ್ಕೆ ಸಾಧ್ಯವಾಗುವಂತೆ ಮಂಗಳೂರು ಮಡಿಕೇರಿ ರಸ್ತೆಯ ಬಗ್ಗೆ ಕೊಡಲು ಒಪ್ಪಿದ ರೂಪಾಯಿ ೧೬೩೦೦ನ್ನು ಈಗಲೇ ಸರಕಾರದವರು ಕೊಡುವುದಲ್ಲದೆ ಇನ್ನು ಕಡಿಮೆಬೀಳುವ ಮೊಬಲಗನ್ನು ಸರಕಾರದವರು ಗ್ರೆಂಟುಮೂಲಕ ಕೊಡಬೇಕಾಗಿ ಕೇಳುವಂತೆ ನಿರ್ಣಯವಾಯಿತು.

೧೯೨೧ನೆ ಎಪ್ರಿಲ್ ೧ನೆ ತಾರೀಕಿನಿಂದ ಸಡ್ಡಾಯದಿಂದ ದಾಖಲುಹಾಕುವ ಕ್ರಮವನ್ನು ಜಾರಿಯಲ್ಲಿ ತರಲಿಕ್ಕೆ ಠರಾವಾಯಿತು.

ಸ್ಥಳೀಯ ಆಸ್ಪತ್ರೆಗಳಲ್ಲಿ ಮತ್ತು ಮದ್ರಾಸು ಆಸ್ಪತ್ರೆಗಳಲ್ಲಿ ತರಬೇತು ಹೊಂದಿದ ಸೂಲಗಿತ್ತಿಯರು ಮೂರು ವರ್ಷದ ವರೆಗೆ ಅವರಿಗೆ ಕೊಟ್ಟ [illegible] ಗ್ರಾಮಗಳಲ್ಲಿ ತಮ್ಮ ಕೆಲಸ ಮಾಡುವುದಾದರೆ ತಿಂಗಳಿಗೆ ರೂ. ೯ ಮತ್ತು ಅವರು ಸೂಲಗಿತ್ತಿತನ ನಡೆಸಿದ ಪ್ರತಿ ಒಂದು ಸಂದರ್ಭದಲ್ಲಿ ಆಣೆ ೮ ಸಹ ಅವರಿಗೆ ಕೊಡಬಹುದೆಂದು ಜಿಲ್ಲಾ ಮೆಡಿಕಲ್ ಮತ್ತು ಸೆನಿಟರಿ ಆಫೀಸರರಿಗೆ ತಿಳಿಸಲು ಠರಾವಾಯಿತು.

ಬೋರ್ಡ ಸೆಕೆಂಡರಿ ಶಾಲೆಗಳ ವಿದ್ಯಾರ್ಥಿಗಳ ಆರೋಗ್ಯಪರೀಕ್ಷೆಯ ಅಂದಾಜುಪಟ್ಟಿಗಳನ್ನು ಆಲೋಚನೆ ಬಗ್ಗೆ ಬಾಕಿ ಇಡಲಾಯಿತು.

ಕೊಳಗುಂದದ ಜಾನುವಾರು ಸಂತೆಯನ್ನು ಸಬ್ಬಿಜು ನಂತರ ಮಾಡದೇ ಹಾಗಿಯೂ ಆ ಕಾಲದಲ್ಲಿ ಅಲ್ಲಿ ಗೋಚರಾದಿನ ಫೀಸು ಮಾಫಿ ಮಾಡುವುದಾಗಿಯೂ ಜಿಲ್ಲಾಕಲೆಕ್ಟರ ದೊರೆಗಳು ಬರೆದ ಪತ್ರವನ್ನು ಓದಿ ಎಡೆ ಇಡಲಾಯಿತು.

ಧರ್ಮಸ್ಥಳದ ಮಲ್ಲಾರಿಮಡಿ ಹೊಳೆಯ ಬದಿಯಲ್ಲಿ ರಸ್ತೆಯನ್ನು ಬೇರೆ ದಾರಿಯಾಗಿ ಕಡಿಯುವ ವಿಷಯವನ್ನು ಆಲೋಚನೆಗೆ ಬಾಕಿ ಇಡಲಾಯಿತು.

ಉಪ್ಪಿನಂಗಡಿ ಆಸ್ಪತ್ರೆಯಲ್ಲಿ ಎಮರ್ಜೆನ್ಸಿವಾರ್ಡಿನ ಬಗ್ಗೆ ಸರಕಾರ ಸಹಾಯ ಅಪೇಕ್ಷಿಸುವಂತೆ ಠರಾವುಮಾಡಿದರು.

ಮೂರು ಅಸಿಸ್ಟಂಟ ಇಂಜನಿಯರುಗಳಿಗೂ ಸರ್ಕಿಟುಹೋಗುವಾಗ ಅವರ ಆಫಿಸು ರೆಕಾರ್ಡ ಸಾಗಿಸುವ ಬಗ್ಗೆ ಕಾಯಂ ಎಲೋವನ್ಸ ರೂ. ೨೦ ಕೊಡಿಸುವ ವಿಷಯವನ್ನೂ ಬಾಕಿ ಇಡಲಾಯಿತು.

ಕಾಸರಗೋಡು ಸೆಕೆಂಡರಿ ಶಾಲೆಯ ಫರ್ನಿಚರ್ ಬಗ್ಗೆ ೧೫೫೫ ರೂ. ಮತ್ತು ಪುಸ್ತಕ ಪಠ ವಗೈರೆ ಬಗ್ಗೆ ಕೂಡ ವಿದ್ಯಾಖಾತೆಯ ಡಿರೆಕ್ಟರರಿಗೆ ಬರೆದು ಸಂಪೂರ್ಣ ಗ್ರೆಂಟು ಹೊಂದುವಂತೆ ನಿರ್ಣಯಮಾಡಿದರು.

ಅದೇ ಶಾಲೆಯಲ್ಲಿ ೫ನೆ ದರ್ಜೆಯಲ್ಲಿ ಕಲಿಯುವ ಒಬ್ಬ ಪಂಚಮ ವಿದ್ಯಾರ್ಥಿಗೆ ಫೀಸು ಮಾಫಿಮಾಡಲಾಯಿತು.

ಕಾಸರಗೋಡು ಸೆಕೆಂಡರಿ ಶಾಲೆಯ ಉಪಾಧ್ಯಾಯರ ಇನಮುಗಳು ಆ ಶಾಲೆಯ ಹೆಡ್‌ಮಾಸ್ತರರ ಮತ್ತು ಇನ್ಸ್‌ಪೆಕ್ಟರರ ಸೂಚನೆಯಂತೆ ಮಂಜೂರು ಮಾಡಲಾಯಿತು.

ದಕ್ಷಿಣ ಕನ್ನಡ.

ಕಾಪು:—ಹೊಸ ಮಾರಿಗುಡಿಯ ರಿಸೀವರ್ ಮಿ। ರಾ। ರಾ। ವಕೀಲ [illegible] ಭಿಡೆಯವರ ೬ ತಿಂಗಳ ಆಡಳಿತೆಯಲ್ಲಿ ೩೩೦೦ ಚಿಲ್ಲರೆ ರೂಪಾಯಿ ಜಮೆ ಆಯಿತೆಂಬ ವರ್ತಮಾನ ಕೇಳಿ ತುಂಬಾ ಸಂತೋಷಪಡುತ್ತೇವೆ. ಅವರಿಗೆ ದೇವಿ ತುಂಬಾ ಕೃಪೆ ಇಡಲಿ.

ಸದರಿ ೧-೩ ಸ್ಕೀಮ್ ಮಾಗೋಡೆಯು ಈ ಮುಂಚೆ ಪ್ರಕಟವಾದ್ದು ಸರಿಯಷ್ಟೆ. ಅದೇ ಪ್ರಕಾರ ೭ ಜನರನ್ನು ತಾರೀಕು ೩೦—೯—೨೦ರಲ್ಲಿ ಕೋರ್ಟಿನಿಂದ ಬೋರ್ಡ ಮೆಂಬರರಾಗಿ ಕಾಯಂ ಮಾಡಿದ ಸಂಗತಿಯನ್ನು ತಿಳಿಸುವದರ ತುಂಬಾ ಸಂತೋಷಪಡುತ್ತೇವೆ.

ಆದರೆ ಬರುವ ನವರಾತ್ರಿಯಲ್ಲಿ ಪದ್ಧತಿ ಪ್ರಕಾರ ಆಗುವ ಚಂಡಿಕಾ ಹೋಮ ದಿವಸ ಬ್ರಾಹ್ಮಣ ಸಂತರ್ಪಣೆ ನಡಿಸುವ ವಿಷಯದಲ್ಲಿ ಸಂದೇಹ ಉಂಟೆಂಬ ವರ್ತಮಾನವಿರುವುದು ಸರಿಯಷ್ಟೆ. ಆ ಪ್ರಕಾರ ವರ್ತಿಸಿದ್ದಲ್ಲಿ ಸ್ಥಳಕ್ಕೆ ಕೊರತೆ ಬರುವುದಲ್ಲದೆ ಪರಸ್ಥಳದಿಂದ ಭಕ್ತರಾಗಿ ಬರುವ ಅನೇಕರಿಗೆ ತೊಂದರೆ ಮ ಕಷ್ಟಕ್ಕೆ ಕಾರಣವಾದ್ದರಿಂದ ಆ ರೀತಿ ಮಾಡದೆ ಮೊದಲಿಗಿಂತಲೂ ಉನ್ನತವಾದ ರೀತಿಯಲ್ಲಿ ನಡಿಸಿಯಾರೆಂದು ನನ್ನ ಕೋರಿಕೆ.

ಈ ರೀತಿ ಸತ್ಕಾರ್ಯದಲ್ಲಿ ವ್ಯಯ ಮಾಡಿದ ಸಂದರ್ಭದಲ್ಲಿ ಭಜಕರು ಇನ್ನು ಮುಂದೆ ಬುಧಜನ ಬಂತೆಂಬ ಸಂಗತಿ ಹೇಳಿದ್ದಕ್ಕೆ ಸಾರ್ಥಕವಾಗುವುದು. ಇಲ್ಲದಿದ್ದರೆ ಸದರೆ ಇನ್ನೂ ಬಿಡಲಿಲ್ಲ ಎಂಬುದು ನಿಜವಾಗುವುದು.

ಇಲ್ಲಿ ನೀವು ದೇವಸ್ಥಾನದ ಓಡು ಕುರಿತು ಮೊತ್ತೇಸರರಿಗೂ ಫೇಟೆಯವರಿಗೂ ಜಗಳ ಖಂಡಾಗಿ ಇಲ್ಲದ ಸಾಧನೆಯನ್ನು ಮಾಡಿ ಇದ್ದದ್ದನ್ನು ಕಳಕೊಂಡು, ಇಬ್ಬರ ಜಗಳ ಮೂರನೆಯವರಿಗೆ ಆದಾಯ ಎಂಬಂತೆ ಮಾಡಿ ದೇವರ ಓಡೆಯನ್ನು ಮೂರನೆಯವರಿಗೆ ಮಾಡಿದ್ದು ವಿಷಾದಕರವಲ್ಲವೇ?

ಅಳದಂಗಡಿ—ಕಾರ್ಕಳ ತಾಲೂಕಿನ ಮಾಗಣೆ ಶ್ಯಾನುಭೋಗರ ಸಭೆಯಲ್ಲಿ ಹಲವರು ಕೂಡಿ ಮಾಡಿದ ನಿರ್ಧಾರಗಳಂತೆ ಪತ್ರವ್ಯವಹಾರಕರೂ, ಕಾರ್ಯದರ್ಶಿಗಳೂ, ಖಜಾನಜಿಯರೂ ತಮ್ಮ ತಮ್ಮ ಕರ್ತವ್ಯಗಳನ್ನು ಚಟುವಟಿಕೆಯಿಂದ ನಿರ್ವಹಿಸುವವರಲ್ಲವೆ. ಇನ್ನು ಮುಂದಿನ ಉಪಸಭೆಯು ಎಲ್ಲಿ, ಯಾವಾಗ, ಕೂಡುವುದೆಂಬುದನ್ನು ನಿಶ್ಚಯಿಸಿ ತಮ್ಮ ಪತ್ರಿಕೆಯಲ್ಲಿ ಶೀಘ್ರ ಪ್ರಕಟಿಸಿ, ತಾಲೂಕಿನ ಎಲ್ಲಾ ಶ್ಯಾನಭಾಗರೂ, ವ ಅನತ್ಯವಿದ್ದರೆ ಪಟೇಲರೂ ಕೂಡುವಂತೆ ತಕ್ಕ ವಿಲೆವಾರಿ ಮಾಡಿ ಈ ಸಭೆಯ ಸಮುದ್ದೇಶವನ್ನು ಸಫಲಗೊಳಿಸುವವರಾಗಿ ನಂಬಿದ್ದೇನೆಂದೂ ಈ ಮೊದಲಿನ ಸಭೆಗೆ ಬಾರದ ಶ್ಯಾನುಭಾಗರೂ ವ್ಯಸನವಿಲ್ಲದೆ ಮುಂದಿನ ಸಂಪತ್ತಿನಲ್ಲಿ ಅಧಿಕಸಂಖ್ಯೆಯಿಂದ ಮೆಂಬರರಾಗಿ ನೆರೆದು, ಹಿಂದುಳಿದ ಈ ತಾಲೂಕಿನ ಮಾನವನ್ನು ಮೇಲೆತ್ತುವಂತೆ ಶ್ರೀ ದೇವರು ಅನುಗ್ರಹಿಸಲೆಂದು ಒಬ್ಬ ಬಾತ್ಮೀದಾರರು ಬರೆಯುತ್ತಾರೆ.

ಪುತ್ತೂರು:—ರೆವಿನ್ಯೂ ಡಿವಿಜನಲ್ ಆಫೀಸರು ೧೫ ತಾರೀಖು ೧೬, ೧೭ನೇ ತಾರೀಕುಗಳಲ್ಲಿ, ೧೯, ೨೦ನೆ ತಾರೀಕಿಗೆ ಮಂಗಳೂರು, ೨೧ರಿಂದ [illegible] ವರೆಗೆ ಪುತ್ತೂರು, ೨೮ರಿಂದ ೩೧ರ ವರೆಗೆ ಕಾಸರಗೋಡು, [illegible] ಮತ್ತು ನವಂಬರ ೧ನೆ ತಾರೀಕಿನಲ್ಲಿ ಪೆರ್ಲ, ೨, ೩ನೆ ತಾರೀಕುಗಳಲ್ಲಿ [illegible] [illegible] ತಾರೀಕಿಗೆ ಪುತ್ತೂರಿಗೆ ಬರುವರು.

[illegible]

ಅನುಕ್ರಮಣಿಕೆ

[illegible] ಮುಷ್ಕರಗಳು
[illegible]
[illegible] ಮುಷ್ಕರಗಳು
[illegible]
[illegible] ಮದ್ರಾಸು ಮುನ್ಸಿಪಾಲಿಟಿ
[illegible] ಪ್ರೆಸಿಡೆಂಟರ ಉದ್ಘಾಟನ
[illegible] ಮುನ್ಸಿಪಲ್ ಕಾರ್ಯಕ್ರಮ
[illegible]ರು:—
[illegible] ಸಂಗ್ರಹಗಳು—
[illegible] ವೃತ್ತಾಂತ
[illegible]ದೇಶ ವರ್ತಮಾನ
[illegible] ಬೋರ್ಡ ಮೀಟಿಂಗ್
[illegible]ಕನ್ನಡ:—
[illegible] ಪತ್ರಿಕೆಗಳು, ಅಖಂಡಗಳ
[illegible]ಬಣ್ಣದ ಬುಟ್ಟಿ
[illegible] ಪಾಠಶಾಲೆಯ ಉಪಾಧ್ಯಾಯರುಗಳಿಗೆ
[illegible] ತಾಲೂಕು ಬೋರ್ಡಿಗೆ ಉಮೇದ್ವಾರರು
[illegible]

ಸ್ವದೇಶಾಭಿಮಾನಿ.

ಶಕ ೧೮೪೩ ಆ. ಶು ೩ ಶುಕ್ರವಾರ.

ಸಂಡರಲೆಂಡರ ಎಚ್ಚರಿಕೆ.

ಒಂದು ಜನಾಂಗವು ಇನ್ನೊಂದು ಜನಾಂಗವನ್ನು ಆಳುವುದು ಒಳ್ಳೆದೊ ಕೆಟ್ಟದ್ದೊ ಎಂಬೀ ಪ್ರಶ್ನೆಯನ್ನು ಇತ್ತಲಾಗಿನ ಸುಧಾರಿಸಿದ ದೃಷ್ಟಿಯಿಂದ ವಿಚಾರಿಸಿ ನೋಡಿದರೆ ಆ ಪಶ್ನೆಗೆ 'ಯೋಗ್ಯವಲ್ಲ' ವೆಂಬ ಉತ್ತರವೆ ಬರುತ್ತದೆ. ಪ್ರೆಸಿಡೆಂಟ ವಿಲ್‌ಸನರ ಸ್ವಯಂ ನಿರ್ಣಯದ ತತ್ವವು ಇತ್ತಲಾಗೆ ಹುಟ್ಟಿದ್ದು. ಈ ತತ್ವವು ಲೋಕದೊಳಗಿನ ಎಲ್ಲ ರಾಷ್ಟ್ರಗಳಿಗೆ ತಮ್ಮ ಕಾರಭಾರವನ್ನು ತಾವೇ ನಡಿಸಬೇಕು ಎಂದು ಕಲಿಸುತ್ತದೆ. ಒಬ್ಬನು ತನ್ನ ನಿರ್ಣಯವನ್ನು ತಾನೆ ಮಾಡಿಕೊಳ್ಳುವುದೆಂಬುದೇ ಸ್ವಯಂನಿರ್ಣಯ. ಇತ್ತಲಾಗೆ ಹುಟ್ಟಿದ ಈ ಸ್ವಯಂನಿರ್ಣಯದಂತೆ, ಒಂದು ಜನಾಂಗವು ಇನ್ನೊಂದನ್ನು ಆಳುವುದು ವಿಸಂಗತವಾಗುತ್ತದೆ. ಮತ್ತು ಅದು ಅಷ್ಟೊಂದು ಪ್ರಶಸ್ತವೂ ಅಲ್ಲ. ಯಾಕೆಂದರೆ, ಆಳಿಕೆಯು—ಅಧಿಕಾರಬಲವು ಮನುಷ್ಯನ ಕಣ್ಣು ಕಟ್ಟಿಬಿಡುತ್ತದೆ; ಅವನಲ್ಲಿ ವಿಸ್ಮೃತಿಯನ್ನು ಹುಟ್ಟಿಸುತ್ತದೆ; ಸ್ವಪ್ರತಿಷ್ಠೆ ಮತ್ತು ಸ್ವಾರ್ಥಸಾಧನೆ ಇವುಗಳಿಗೆನೆ ಆಸ್ಪದ ಕೊಟ್ಟು ಆ ಅಧಿಕಾರಬಲವು ವಿವೇಕಶಕ್ತಿಯನ್ನು ಮರೆಪಡಿಸುತ್ತದೆ. ಇದು ಅಧಿಕಾರದ ಸಹಜ ಧರ್ಮವು. ಅದರಲ್ಲಿ ಯಾರ ಅಪರಾಧವಿಲ್ಲ; ಆದ್ದರಿಂದಲೆ ಯಾರನ್ನೂ ದೂರಿಯೂ ಫಲವಿಲ್ಲ. ಆದರೂ ಇಂಥ ಪರಿಸ್ಥಿತಿಯಲಿ, ಆಳುವ ಜನಾಂಗವನ್ನು ಆಗಾಗ್ಗೆ ಎಚ್ಚರಿಸುವುದು ಸುಪ್ರಬುದ್ಧರಾದ ಜನರ ಕರ್ತವ್ಯವಾಗಿದೆ. ಈ ಉತ್ತಮ ಕರ್ತವ್ಯವನ್ನು ಸಂಡರಲೆಂಡರೆಂಬ ಸದ್‌ಗೃಹಸ್ಥರು ಇತ್ತಲಾಗೆ ಆಚರಿಸಿದ್ದಾರೆಂದು ತಿಳಿಸಲು ನಮಗೆ ತುಂಬಾ ಸಂತೋಷವಾಗುತ್ತದೆ.

ಡೊ. ಜೆ. ಟಿ. ಸಂಡರಲೆಂಡರು ಒಬ್ಬ ಅಮೇರಿಕನ್ ಮಿಶನರಿಗಳು. ಇವರು 'ಮೊಡರ್ನರಿವ್ಯೂ' ಎಂಬ ಒಂದು ಘನವಾದ ಮಾಸಿಕ ಪುಸ್ತಕದ ಈ ತಿಂಗಳ ಸಂಚಿಕೆಯಲ್ಲಿ ಉತ್ತಮವಾದ ಮೂರು ಲೇಖಗಳನ್ನು ಬರೆದು ಹಿಂದುಸ್ಥಾನದ ರಾಜ್ಯಕರ್ತರನ್ನು ಎಚ್ಚರಿಸಲು ಚಲೋ ಪ್ರಯತ್ನ ಮಾಡಿದ್ದಾರೆ. ಸಂಡರಲೆಂಡರು ಅಮೇರಿಕನ್ ಗೃಹಸ್ಥರಾದ ಕಾರಣ ಹಿಂದುಸ್ಥಾನದವರೂ ಅಲ್ಲ; ಅಲ್ಲವೆ ಇಂಗ್ಲಂಡಿನವರೂ ಅಲ್ಲ. ಅರ್ಥಾತ್ ಈ ಮೇರೆಗೆ ಶಾಸ್ಯರೂ ಶಾಸಕರೂ ಅಲ್ಲದ ಸಂಡರಲೆಂಡರಿಗೆ ಈ 'ಅವ್ಯಾಪಾರೇಷು ವ್ಯಾಪಾರವ' ಯಾಕೆ ಎಂದು ಒಂದು ವೇಳೆ ಅನೇಕರು ಕೇಳಬಹುದು. ಅನೇಕರು ಯಾರೂ ಕೇಳದಿದ್ದರೂ ರಾಜ್ಯಕರ್ತರಾದವರೂ ತಮ್ಮ ಮನಸ್ಸಿನಲ್ಲಿ ಕೇಳಬಹುದು. ಆದರೆ ಈ ಪ್ರಶ್ನೆಯ ಉತ್ತರವು ಬಹಳ ಸುಲಭವಿದೆ. ಹಿಂದುಸ್ಥಾನದ ಜನರಿಗೆ ಕಲಿಯತಕ್ಕ ಅಂಶಗಳು ಇನ್ನೂ ಅನೇಕ ಇದ್ದಾವೆ, ಮತ್ತು ಅವುಗಳನ್ನು ಕಲಿಸುವುದು ತಮ್ಮ ಕರ್ತವ್ಯವೆಂದು ಹೇಗೆ ಇಂಗ್ಲಿಷರು ತಿಳಕೊಳ್ಳುತ್ತಾರೊ ಹಾಗೆಯೆ ಸಂಡರಲೆಂಡರಾದರೂ ಕೆಲಕೆಲವು ವಿಷಯದಲ್ಲಿ ತಪ್ಪಿ ನಡೆಯುವ ಇಂಗ್ಲಿಷರನ್ನು ಕಲಿಸುವುದು, ಎಚ್ಚರಿಸುವುದು ತಮ್ಮ ಕರ್ತವ್ಯವೆಂದು ತಿಳಿಯುತ್ತಿರಬಹುದು. ಮತ್ತು ಸಂಡರಲೆಂಡರು ಹೀಗೆ [illegible] ಅದು ಇಂಗ್ಲಿಷರ ಪರೋಪಕಾರಿಯಾದ ದೃಷ್ಟಿಯಿಂದ ಅಲ್ಲ [illegible] ಅಲ್ಲ. ಇರಲಿ.

[illegible] ತೋರಿಸುವಾಗ ಅವರು [illegible] ಮುಷ್ಕರವುಗಳ ಮೇಲೆ ರಾಜದ್ರೋಹದ [illegible] ಮುದ್ರಣದವುಗಳ ಮೊಹರನ್ನು ಒತ್ತಿ ಜನರ ಆಕಾಂಕ್ಷೆಗಳನ್ನು ಒತ್ತಿ ಬಿಡುವುದು, ಜನರ ಪ್ರಯತ್ನಗಳನ್ನು ಒತ್ತಿ ಬಿಡುವುದು, ಇದೇ ಒತ್ತಾಟ. ಇಂಥ ಒತ್ತಾಟವನ್ನು ರಾಜ್ಯಕರ್ತರು ಯಾವ ದೇಶದಲ್ಲೂ ಮಾಡಬಾರದು. ಯಾಕೆಂದರೆ, ಒತ್ತಾಟವು ಕ್ರಾಂತಿಗೆ ದಾರಿಯಾಗಿದೆ. ಇದಕ್ಕೆ ಅಮೇರಿಕದ ಉದಾಹರಣವು ಇತಿಹಾಸ ಪ್ರಸಿದ್ಧವಾದ್ದು. ಅಮೇರಿಕದೊಳಗಿನ ರಾಜಕೀಯ ಮತ್ತು ಸಾಮಾಜಿಕ ಅಸಂತೋಷವನ್ನು ತಗ್ಗಿಸಲು ಇಂಗ್ಲಂಡಿನ ೩ನೆಯ ಜೊರ್ಜನು ಯತ್ನಿಸಿದನು. ಪರಂತು ಅದು ನಿಷ್ಫಲವಾಗಿ ಇದರಿಂದಲೆ ಮುಂದೆ ಅಮೇರಿಕವು ಸ್ವತಂತ್ರವಾಯಿತು. ಇಟಲಿಯಲ್ಲಿ ಒಸ್ಟ್ರಿಯವು ಕೂಡ ಒತ್ತಾಟದ ಪ್ರಭಾವದಿಂದ ಕಲಿತ ನೀತಿ ಪಾಠವು ಇದೇ ತರದ್ದು. ಇಂಥ ಅನುಭವಗಳು ಈ ಲೋಕದಲ್ಲಿ ಇದು ವರೆಗೆ ಅನೇಕ ರಾಷ್ಟ್ರಗಳಿಗೆ—ಮೊನ್ನೆ ಸ್ವತಃ ರುಶ್ಯಕ್ಕೆ ಕೂಡ—ಬಂದು ಹೋಗಿವೆ. ಒತ್ತಾಟದಿಂದ ಜನತೆಯ ನ್ಯಾಯ್ಯ ಆಕಾಂಕ್ಷೆಗಳನ್ನು ನಿಲ್ಲಿಸಲು ಯತ್ನಿಸುವುದು ವ್ಯರ್ಥವಾಗಿದೆ. ದೇಶದೊಳಗಿನ ರಾಜದ್ರೋಹವನ್ನು ತೆಗೆದುಹಾಕಬೇಕಾದರೆ ಆ ರಾಜದ್ರೋಹವು ಯಾವ ಕಾರಣದಿಂದ ಮತ್ತು ಯಾವ ಸಂಗತಿಯ ನ್ಯೂನತೆಯಿಂದ ಉತ್ಪನ್ನವಾಗಿದೆಯೊ ಆ ನ್ಯೂನತೆಯನ್ನೆ ಹೋಗಲಾಡಿಸಬೇಕು. ಹಾಗು ಆ ಕಾರಣವನ್ನು ಪರಿಹರಿಸಬೇಕು. ಇದೇ, ಮುಖ್ಯ ಉಪಾಯ, ಹೊರತು ಒತ್ತಾಟವಲ್ಲವೆಂದು ಲೊರ್ಡ ಬೇಕನನೆ ಹೇಳಿರುವನು. ಇಮರ್ಸನನಂತೂ ಹಗೆಯಿಂದ ಹಗೆಯು ಬೆಳೆಯುವಂತೆ ಬಲಾತ್ಕಾರವು ಬಲವನ್ನು ಹುಟ್ಟಿಸುತ್ತದೆ ಎಂದು ಹೇಳುತ್ತಾನೆ. ಸಾರಾಂಶ, ರಾಜ್ಯಕರ್ತರು ಒತ್ತಾಟದ ಶಸ್ತ್ರವನ್ನು ಉಪಯೋಗಿಸುವುದು ಅವರಿಗೆನೆ ಬಾಧಕವಾಗಿದೆ.

ಡೊ. ಸಂಡರಲೆಂಡರು ಒತ್ತಾಟವು ಉಪಾಯವು ಜಾಣತನದ್ದಲ್ಲನೆಂದು ಸಪ್ರಮಾಣವಾಗಿ ತೋರಿಸಿ ಇನ್ನೊಂದು ಲೇಖದಲ್ಲಿ ಹಿಂದುಸ್ಥಾನದೊಳಗಿನ ಒತ್ತಾಟದ ಅತಿ ಮುಖ್ಯವಾದ, ಬಹು ಸುಪ್ರಸಿದ್ಧವಾದ ಮತ್ತು ಅತಿ ಈಚೆಯ ಉದಾಹರಣವನ್ನು—ಜಲಿಯನ್ ವಾಲಾಬಾಗಿನೊಳಗಿನ ಕೊಲೆಯನ್ನು—ತೋರಿಸಿಕೊಟ್ಟಿದ್ದಾರೆ. ಜಲಿಯನ್‌ವಾಲಾ ತೋಟದಲ್ಲಿ ಡಾಯರ ಮತ್ತು ಅವನ ಮೇಳದವರು ಯಾವ ಅಮಾನುಷಕೃತ್ಯವನ್ನು ಮಾಡಿಟ್ಟಿದ್ದಾರೊ ಅದು ಎಲ್ಲರಿಗೆ ತಿಳಿದೇ ಇದೆ. ತಾವು ಬಹಳ ಸುಧಾರಿಸಿದವರು ನಾಗರಿಕರು, ಹಿಂದಿಗಳು ಬಹಳ ಅಸಂಸ್ಕೃತರು, ರೀತಿನೀತಿ ಇಲ್ಲದವರು ಎಂದು ಇಂಗ್ಲಿಷರು ತಿಳಕೊಳ್ಳುತ್ತಾರೆ. ಮತ್ತು ಹಿಂದಿಗಳ ಅನಾಗರಿಕತೆಯ ಬಗ್ಗೆ ಹಾಗು ಮುಠ್ಠಾಳತನದ ಬಗ್ಗೆ ಕಲ್ಕತ್ತೆಯ ಬ್ಲೇಕ್-ಹೊಲಿನ ಕಥೆಯನ್ನು ಹೇಳುತಿದ್ದಾರೆ. ಈಗ ಸಂಡರಲೆಂಡರು ಕಲಕತ್ತೆಯ ಕಾಲ್ಪನಿಕವಾದ (ಇತಿಹಾಸದಲ್ಲಿ ಆಧಾರವಿಲ್ಲದ) ಆ ಬ್ಲೇಕ್‌ಹೊಲ್ ಮತ್ತು ಪಂಜಾಬಿನ ಈ ಜಲಿಯನ್‌ವಾಲಾಬಾಗ್ ಇವುಗಳಲ್ಲಿಯ ಸಂಗತಿಗಳನ್ನು ಸರಿಹೋಲಿಸಿ ಯಾವುದು ಸರಸ ಮತ್ತು ಯಾವುದು ನೀರಸ ಎಂಬದನ್ನು ತೋರಿಸಿ ಕೊಟ್ಟಿದ್ದಾರೆ! ಹಿಂದಿಗಳು ಅನಾಗರಿಕರು, ಯುದ್ಧದ ಸಮಯ, ಪರಸ್ಪರ ಶತ್ರುತ್ವ, ಮತ್ತು ಅದೂ ನೂರು ವರ್ಷದ ಹಿಂದೆ ಇಂಥ ಪರಿಸ್ಥಿತಿಯಲ್ಲಿ ಒಂದು ಕೋಣೆಯಲ್ಲಿ ೧೪೬ ಬಿಳೆ ಜನರನ್ನು ಗಾಳಿ ನೀರು ಇಲ್ಲದೆ ಕೊಂದರು ಎಂದರೆ ಕೋಣೆಯಲ್ಲಿ ಹಾಕಿ ಅವರನ್ನು ಸಾಯುವಂತೆ ಮಾಡಿದರು ಇದು ಬ್ಲೇಕ್ ಹೊಲಿನ ಸಂಗತಿ. (ಬ್ಲೇಕ್ ಹೋಲಿನ ಕಥೆಯು ಹಸಿ ಸುಳ್ಳು ಎಂದು ಸಿದ್ಧವಾಗಿದೆ, ಅದನ್ನು ಅಂಗೀಕರಿಸಿದರೂ ಮೇಲಿನಂತೆ ಅದರ ನಿವಾರಣೆ ಇದೆ.) ಜಲಿಯನ್‌ವಾಲಾ ಬಾಗಿನ ಸಂಗತಿಯು ಹೇಗಿದೆ ನೋಡಿರಿ. ಸುಧಾರಿಸಿದ ಸರಕಾರದ ಒಬ್ಬ ಸುಧಾರಿಸಿದ ಸೈನಿಕನು ತನ್ನ ಸಹಾಯಕರನ್ನು ತೆಕ್ಕೊಂಡು ತೋಟದಲ್ಲಿ ಸೇರಿ, ಇದೇ ಸರಕಾರದ ಅಶಸ್ತ್ರ ಪ್ರಜೆಗಳ ಮೇಲೆ—ಹೆಂಗಸರು, ಗಂಡಸರು, ಮಕ್ಕಳು ಇವರ ಮೇಲೆ—ಕೋವಿಮದ್ದು ಖರ್ಚಾಗುವ ತನಕ ೧೬೫೦ ಗುಂಡುಗಳನ್ನು ಹಾರಿಸಿ ಸುಮಾರು ೨೦೦೦ ಪ್ರಾಣಗಳನ್ನು ಅಪಹರಿಸಿದನು! ಸರಕಾರಿ ಲೆಕ್ಕದಿಂದ ಪ್ರಾಣಹಾನಿಯ ಸಂಖ್ಯೆ ೫೦೦ ಹಾಗು ಗಾಯವಾದವರ ಸಂಖ್ಯೆ ೨೦೦೦ ಇಷ್ಟನ್ನೆ ಇಟ್ಟುಕೊಂಡರೂ ಈ ಸಂಗತಿಯು ಎಷ್ಟು ಭಯಜನಕವಾಗಿದೆ! ಈ ಎರಡೂ ಸಂಗತಿಗಳ ತಾರತಮ್ಯವನ್ನು ನೋಡಿ ಮಿ. ಸಂಡರಲೆಂಡರು ಎರಡು ಸವಾಲುಗಳನ್ನು ಕೇಳಿದ್ದಾರೆ. ಬ್ಲೇಕ್ ಹೊಲಿನ ಚಿಲ್ಲರೆ ಸಂಗತಿಯಿಂದ ಹಿಂದುಸ್ಥಾನವು ಮುಠ್ಠಾಳು ಎಂಬ ಹೆಸರಿಗೆ ಪಾತ್ರವಾಗುತ್ತದಾದರೆ ಜಲಿಯನ್‌ವಾಲಾ ಬಾಗಿನೊಳಗಿನ ಭಯಂಕರ ಮತ್ತು ಪ್ರಚಂಡ ಕೊಲೆಯು ಬ್ರಿಟಿಷರ ಅನಾಗರಿಕತೆಯನ್ನು ರುಜುಪಡಿಸುವುದಿಲ್ಲವೆ? ಬ್ಲೇಕ್ ಹೊಲಿನ ದೃಷ್ಟಾಂತವನ್ನು ತೋರಿಸಿ ಹಿಂದುಸ್ಥಾನವು ತನ್ನನ್ನು ಆಳಿಕೊಳ್ಳಲು ಅಪಾತ್ರವೆಂದು ಹೇಳಲು ಇಂಗ್ಲಂಡಿಗೆ ಅಧಿಕಾರವುಂಟೆಂತಾದರೆ ಜಲಿಯನವಾಲಾ ಬಾಗಿನೊಳಗಿನ ಭಯಂಕರ ಕೃತ್ಯದ ದೃಷ್ಟಾಂತವನ್ನು ತೋರಿಸಿ ಇಂಗ್ಲಂಡಿನಲ್ಲಿ ಹಿಂದುಸ್ಥಾನವನ್ನು ಆಳುವ ಪಾತ್ರತೆಯು ಹುಟ್ಟಲಿಲ್ಲವೆಂದು ಹೇಳಲು ಲೋಕಕ್ಕೆ ಅಧಿಕಾರವಿಲ್ಲವೆ? ಈ ಸವಾಲುಗಳಿಗೆ ಅಸ್ತಿಪಕ್ಷದಿಂದಲೆ ಉತ್ತರವು ಸಿಕ್ಕಿತೆಂದು ಸಂಡರಲೆಂಡರು ಬರೆದಿರುವರು.

[illegible] ಎಚ್ಚರಿಕೆಯ ಪರಿಣಾಮವು [illegible] ನಾವು ಧರವಸೆ [illegible]

ಸ್ಫುಟ ವಿಚಾರಗಳು.

೧. ಹಿಂದುಸ್ಥಾನದ ಆಯಾಯ ಇತ್ತಲಾಗೆ ಬೇರೆ ಬೇರೆ ಸ್ಥಳಗಳಲ್ಲಿ ಬೇರೆ ಬೇರೆ ಉದ್ಯೋಗಸ್ಥರ ಮುಷ್ಕರಗಳು ಹೆಚ್ಚುತ್ತ ನಡೆದಿವೆ. ಮುಂಬಯಿ, ಕಲಕತ್ತಾ, ಖರಗಪೂರ, ಬೆಂಗಳೂರ ಮುಂತಾದ ಕಡೆಗಳಲ್ಲಿ ಹಲವು ವಿಧದ ಉದ್ಯೋಗಸ್ಥರು ಕಾರ್ಯ ನಿವೃತ್ತರಾಗಿ ಕುಳಿತಿದ್ದಾರೆ. ಮುಂಬಯಿಯಲ್ಲಿ ಈಗ ಒಂದು ತಿಂಗಳಿಂದ ಪೋಸ್ಟ ಖಾತೆಯ ಮತ್ತು ತಂತಿ ಬಟುವಾಡೆಯವರು ಮುಷ್ಕರವನ್ನು ಹಾಕಿದ್ದಾರಷ್ಟೆ. ಆ ಮುಷ್ಕರವು ಪೋಸ್ಟ ಖಾತೆಯ ಅಧಿಕಾರಿಗಳ ದುರಾಗ್ರಹದ ದಸೆಯಿಂದ ಇನ್ನೂ ಅಂತ್ಯವಾಗಲಿಲ್ಲ. ಪೋಸ್ಟ ಮತ್ತು ಟೆಲಿಗ್ರಾಫ್ ಖಾತೆಯ ಡೈರೆಕ್ಟರ ಜನರಲ್‌ರು ಈ ಮುಷ್ಕರದ ಸಮಯದಲ್ಲಿ ಮುಂಬಯಿಗೆ ಬಂದಿದ್ದರು, ಆದರೆ ಅವರು ಮುಷ್ಕರದಾರರ ಕೇಳಿಕೆಗಳನ್ನು ಪೂರಯಿಸಲು ಬಂದವರಲ್ಲ; ಸರಕಾರವು ಈ ಮುಷ್ಕರದ ಸಮಯದಲ್ಲಿ ಯಾವ ಬೇರೆ ತಾತ್ಕಾಲಿಕ ವ್ಯವಸ್ಥೆಯನ್ನು ಮಾಡಿದೆಯೊ ಅದು ಹೇಗೆ ನಡೆದಿದೆ ಎಂಬುದನ್ನು ನೋಡಲು ಬಂದಿದ್ದರು! ಮುಂಬಯಿಯ ಪೋಸ್ಟ ಮೇನರ ಈ ಮುಷ್ಕರದ ಸುತ್ತು, ಅಲ್ಲಿಯ ಗೆಸ್ ಮತ್ತು ಟ್ರಾಮವೆ ಕೂಲಿಗಳ ಮುಷ್ಕರದಿಂದ ದೊಡ್ಡದಾಗುತ್ತಾ ಬಂದಿದೆ. ಇದೇ ಮೇರೆಗೆ ಕಲಕತ್ತೆಯಲ್ಲಿ ಕೂಡ ಗೆಸ್ ಕಂಪೆನಿಯ ಕಾಮಗಾರರು ಮುಷ್ಕರವನ್ನು ಪ್ರಾರಂಭಿಸಿದ್ದಾರೆ. ಅದರಿಂದ ಅಲ್ಲಿ ಮುನಿಸಿಪಾಲಿಟಿಯ ದೀಪಗಳಿಗೆ ತೊಂದರೆ ಬಂದು ಪಟ್ಟಣದ ದೊಡ್ಡ ಭಾಗವು ಕತ್ತಲೆಯಲ್ಲಿ ನಿಮಗ್ನವಾಗಿದೆ! ಈ ಮೇರೆಗೆ ಇತರ ಕಡೆಗಳಲ್ಲಿ ಹೊಟ್ಟೆಯ ನ್ಯೂನತೆಯ ದೆಸೆಯಿಂದ ಮುಷ್ಕರಗಳು ಬೀಳುತ್ತಿರುವಾಗ ಮೈಸೂರಿನ ಬೆಂಗಳೂರ ಪಟ್ಟಣದಲ್ಲಿ ಗವರ್ನಮೆಂಟ್ ಪ್ರೆಸ್ಸಿನವರು ಬೇರೊಂದು ಕಾರಣದಿಂದ ಮುಷ್ಕರವನ್ನು ಹಾಕಿದ್ದಾರೆಂದು ಪ್ರಕಟವಾಗಿದೆ. ಬೆಂಗಳೂರಿನ ಗವರ್ನಮೆಂಟ್ ಪ್ರೆಸ್ಸಿನವರಲ್ಲಿ ಕೆಲವರು ಮೇಲಾಫೀಸರರೊಂದಿಗೆ ಅವಿಧೇಯತೆಯಿಂದ ವರ್ತಿಸಿದ ಕಾರಣ ಸಾಧಾರಣ ೧೫೦ ಕಾಮಗಾರರನ್ನು ಅವರ ಕೆಲಸದಿಂದ ದೂರ ಮಾಡಿದ್ದಲ್ಲಿ ಅವರ ಮೇಲೆ ಸಹಾನುಭೂತಿಯನ್ನು ತೋರಿಸುವುದಕ್ಕಾಗಿ ಉಳಿದವರು ಮುಷ್ಕರವನ್ನು ಹಾಕಿದ್ದಾರೆ.

೨. ಈ ಮೇರೆಗೆ ಮುಂಬಯಿ, ಕಲಕತ್ತಾ, ಬೆಂಗಳೂರು ಇಷ್ಟು ಕಡೆಗಳಲ್ಲಿ ಮುಷ್ಕರಗಳು ಬಿದ್ದಿರುವಾಗ ಖರಗಪುರದಲ್ಲಿ ಬಂಗಾಲ ನಾಗಪುರ ರೈಲಿನ ಕಾಮಗಾರರು ಭಯಂಕರವಾದ ಮುಷ್ಕರವನ್ನು ಹಾಕಿರುವರು. ಈ ಕಾಮಗಾರರಲ್ಲಿ ಗಾರ್ಡ, ಬ್ರೇಕ್‌ಮೆನ್, ಪೋರ್ಟರ್, ಡ್ರ್ಯಾವರ್, ಶಂಟರ್, ಫಾಯರ್‌ಮೆನ್ ಇತ್ಯಾದಿ ರೈಲಿನ ಎಲ್ಲ ತರದ ಕೆಳಗಿನ ಕಾಮಗಾರರಿದ್ದು ಅವರ ಸಂಖ್ಯೆಯು ಸಾಧಾರಣ ೧೧,೦೦೦ಕ್ಕೆ ಕಡಿಮೆ ಇಲ್ಲ. ಈ ವಿಧವಾಗಿ ಇಷ್ಟು ಜನರು ಮತ್ತು ಇಷ್ಟು ಬಗೆಯ ಕಾಮಗಾರರು ಮುಷ್ಕರದ ಮೌನವ್ರತವನ್ನು ಹಿಡಿದುದರಿಂದ ಬಂಗಾಲ ನಾಗಪುರ ರೈಲಿನ ಗಾಡಿಗಳು ಓಡಿಯಾಡುವುದನ್ನು ತಾ. ೮ರಲ್ಲಿ ನಿಲ್ಲಿಸ ಬೇಕಾಯಿತು. ಇದರಿಂದ ಕಲಕತ್ತಾ, ಮದ್ರಾಸು, ಮುಂಬಾಯಿ ಈ ಮೈಲುಗಳು ಹೊರಡಲಿಲ್ಲ. ರೈಲ ಅಧಿಕಾರಿಗಳು ರಿಝರ್ವಡ್ ಜನರ ಸಹಾಯದಿಂದ ಮೆಲ್ಲಮೆಲ್ಲನೆ ಗಾಡಿಗಳ ಏರ್ಪಾಡುಗಳನ್ನು ಮಾಡಹತ್ತಿದ್ದಾರೆ. ಮುಷ್ಕರವು ಬಿದ್ದಿರುವ ಖರಗಪುರದಲ್ಲಿ ಪೋಲಿಸರ ಸಹಾಯವು ಬಂದಿದೆ. ಪರಂತು ಮುಷ್ಕರಗಾರರು ಇದುವರೆಗೆ ಬಹು ಶಾಂತರೀತಿಯಿಂದ ನಡಕೊಳ್ಳುತಿದ್ದ ಕಾರಣ ಪೋಲಿಸ ಬಹಾದ್ದರರಿಗೆ ಹೆಚ್ಚಿನ ಪರಿಶ್ರಮ ತೆಕೊಳ್ಳಬೇಕಾಗಲಿಲ್ಲವೆಂದು ಪ್ರಕಟವಾಗಿದೆ. ಇರಲಿ. ಈ ರೈಲು ಕಾಮಗಾರರು ಮುಷ್ಕರ ಹಾಕಲಿಕ್ಕೆ ಸಂಬಳ, ವೊರ್ ಎಲೊವೆನ್ಸ ಮುಂತಾದ ಈಗಿನ ಸುಪ್ರಸಿದ್ಧ ಸಂಗತಿಗಳು ಕಾರಣವಾದಂತೆ ಬೇರೆ ಒಂದೆರಡು ವಿಶಿಷ್ಟ ಸಂಗತಿಗಳೂ ಕಾರಣವಾಗಿವೆ. ಈ ರೈಲಿನ ಒಬ್ಬ ಯುರೋಪಿನ ಟ್ರೆಫಿಕ್ ಇನ್ಸಪೆಕ್ಟರನು ಕೆಲವು ದಿವಸಗಳ ಹಿಂದೆ ಒಬ್ಬ ಹಿಂದಿ ಕಾಮಗಾರನನ್ನು ಬೈದು ಅತಿಕ್ರಮಿಸಿದ್ದನು. ಈ ವಿಷಯವು ಮೆಜಿಸ್ಟ್ರೇಟರ ಮುಂದೆ ಬಂದು ಅವರು ಟ್ರೇಫಿಕ್ ಇನ್‌ಸ್ಪೆಕ್ಟರನನ್ನು ಅಪರಾಧಿಯನ್ನಾಗಿ ವಿಧಿಸಿದರು. ಇತ್ತಲಾಗೆ ರೈಲಅಧಿಕಾರಿಗಳು ತಮ್ಮ ಕಡೆಯಿಂದ ಒಂದು ಶಿಕ್ಷೆಯನ್ನು ಕೊಡುವ ಉದ್ದೇಶದಿಂದ ಅವನನ್ನು ಬೇರೆ ಕಡೆ ವರ್ಗಾಯಿಸಿದ್ದರು. ಇಷ್ಟು ಪೂರ್ವದ ಸಂಗತಿ. ಅನಂತರ ಆ ಯುರೋಪಿಯನ್ ಆಸಾಮಿಯನ್ನು ಅಧಿಕಾರಿಗಳು ವರ್ಗ ಮಾಡುವುದನ್ನು ನಿಲ್ಲಿಸಿದರು. ಈಗ ಈ ಮುಷ್ಕರದವರು ತಮ್ಮ ಮುಷ್ಕರಕ್ಕೆ ಇದನ್ನು ಪ್ರಧಾನ ಕಾರಣವನ್ನಾಗಿ ಇಟ್ಟುಕೊಂಡಿದ್ದಾರೆ. ಮುಷ್ಕರಗಾರರ ಮತದಿಂದ ಆ ಟ್ರೆಫಿಕ್ ಇನ್ಸಪೆಕ್ಟರನನ್ನು ಪೂರ್ವವತ್ ಸರಿಯಾಗಿ ಶಿಕ್ಷಿಸದ ಹೊರತು ಮತ್ತು ಇತರ ಸಂಬಳದ ಸಂಗತಿಗಳನ್ನು ನ್ಯಾಯ್ಯ ಮಾಡಿದ ಹೊರತು ಅವರು ಮುಷ್ಕರವನ್ನು ನಿಲ್ಲಿಸಲಿಕ್ಕಿಲ್ಲವೆಂದು ತೋರುತ್ತದೆ.

೩. ... ಎಂದವಾಗಿ ಬೇರೆ ಬೇರೆ ಶಾಲೆಗಳಲ್ಲಿ ಮುಷ್ಕರವನ್ನು ಹೂಡಿರುವುದು ಮುಂಬಯಿ ಸಂಸ್ಥಾನದ ಪ್ರಾಥಮಿಕ ಶಾಲೋಪಾಧ್ಯಾಯರ ಕೆಲಸ ಇದೇ ಪ್ರಸಂಗದಲ್ಲಿ ಬಂದು ಒದಗುತ್ತಿದೆ. ಎರಡು ಮೂರು ತಿಂಗಳಿಂದ ಮುಂಬಯಿ ಸಂಸ್ಥಾನದ ಬೇರೆ ಬೇರೆ ಸರಕಾರಿ ಶಾಲೆಗಳಲ್ಲಿ ಸಂಬಳದ ಈ ಯುದ್ಧ ನಡೆಯುತ್ತಾ ಬಂದಿದೆ. ಹೊಸ ಸ್ಕೂಲುಗಳು ಬಂದು ಸೇರಿ ಎಲ್ಲ ಶಾಲೆಗಳಲ್ಲಿ ಸಂಬಳದ ಪ್ರಶ್ನೆ ಕಾಣುತ್ತಿದೆ. ಆದರೆ ಸರಕಾರವು ಮಾತ್ರ ಈ ಉಪಾಧ್ಯಾಯರ ಸಂಬಳ ಏರಿಸುವ ಏರ್ಪಾಡನ್ನು ಮಾಡಲಿಲ್ಲ! ಇದರಿಂದ ಉಪಾಧ್ಯಾಯರಿಗೆ ಬಹಳ ಕಷ್ಟ ಅನುಭವಿಸಬೇಕಾಗುತ್ತದೆ ಎಂಬುದು ಅವರಿಗೆ ಗೊತ್ತಿಲ್ಲದೆ ಇಲ್ಲ. ಇದರ ತಿಳುವಳಿಕೆಯು ಕೂಡ ಬರುವಂತಾಗಿಲ್ಲ. ಈ ಪರಿಸ್ಥಿತಿಯಲ್ಲಿ ಅಲ್ಲಿಯ ಉಪಾಧ್ಯಾಯರು ತಮ್ಮ ಸಂಬಳದ ಪ್ರಶ್ನೆಯನ್ನು ಮೇಲಧಿಕಾರಿ ಮತ್ತು ಸರಕಾರ ಇವರ ಮುಂದಿಡಲು ಬಹು ವಿಧದಿಂದ ಪ್ರಯತ್ನ ಮಾಡಿದರು. ಆಗ ಎಲ್ಲಿಯೊ ಕೊಂಚ ಕಮ್ಮಿ ಬಿಟ್ಟು ಅನ್‌ಟ್ರೈಂಡ್ ಉಪಾಧ್ಯಾಯರಿಗೆ ರೂ. ೨೦ ಎಂದು ಮುಂತಾದ ಒಂದು ಅಲ್ಪ ಸ್ಕೇಲಿನ ಪ್ರಸ್ತಾವವು ಶಾಯದೆ ಕೌನ್ಸಿಲಿನಲ್ಲಿ ಸರಕಾರಿ ಕೌನ್ಸಿಲರರ ಬಾಯಿಯಿಂದ ಬರಹತ್ತಿತು. ಪರಂತು ಉಪಾಧ್ಯಾಯರು ಕನಿಷ್ಠ ತರಗತಿಯ ಸಂಬಳವು ರೂ. ೩೦ ಇರಬೇಕೆಂದು ಮೊದಲಿನಿಂದ ಕೇಳಿಕೊಳ್ಳುತ್ತಿರುವಾಗ ಸರಕಾರವು ರೂ. ೨೦ ಕೊಡುವ ಔದಾರ್ಯವನ್ನು ತೋರಿಸುತ್ತದೆ. ಇದು ಎಷ್ಟು ಶೋಚನೀಯವಾದ ವಿಷಯವು! ಆದರೆ ಅಲ್ಲಿಯ ಶಾಲಾ ಮಾಸ್ತರರು ಸರಕಾರವು ತಮ್ಮ ಅಪೇಕ್ಷೆಯ ಸಂಬಳವನ್ನು ಕೊಡದಿದ್ದರೆ ಮುಷ್ಕರವನ್ನು ಹಾಕಬೇಕೆಂದು ಆಲೋಚಿಸಿದ್ದಾರೆಂದು ತಿಳಿಯುತ್ತದೆ! ಶಾಲೋಪಾಧ್ಯಾಯರ ಮೇಲೆ ಮುಷ್ಕರ ಹಾಕುವಂಥ ಶೋಚನೀಯ ಪ್ರಸಂಗವು ಬರುವುದು ವಿದ್ಯಾಇಲಾಖೆಗೆ ನಿಜವಾಗಿ ಲಾಂಛನಾಸ್ಪದವಾದ ಸಂಗತಿ.

೪. ಖಿಲಾಫತ್ತಿನ ಪ್ರಶ್ನೆಯನ್ನು ಹಿಂದಿಮುಸಲ್ಮಾನರ ಕಡೆಯಿಂದ ಇಂಗ್ಲಂಡ, ಫ್ರಾನ್ಸ್, ಇಟಲಿ ಮುಂತಾದ ಯುರೋಪದೊಳಗಿನ ಮಿತ್ರಸಂಘದವರ ಮುಂದೆ ಇಡುವ ಉದ್ದೇಶದಿಂದ ಹೋದ ಮಿ. ಮಹಮ್ಮದ ಅಲ್ಲಿ ಮೊದಲಾದವರು ಕಳೆದ ವಾರ ಮುಂಬಯಿಗೆ ಬಂದು ತಲಪಿದರು. ಮಿ. ಮಹಮ್ಮದ ಅಲ್ಲಿ ಮುಂತಾದವರು ಮ. ಗಾಂಧಿಗಳ ಅಧ್ಯಕ್ಷತೆಯಲ್ಲಿ ಭಾಷಣಗಳನ್ನು ಕೊಟ್ಟರು. ಮಹಮ್ಮದ ಅಲ್ಲಿಗಳು ವಿಲಾಯತಿಯಲ್ಲಿ ತಮ್ಮ ಮಂಡಲದ ಪರವಾಗಿ ಕೆಲಸ ಮಾಡುವಾಗ ತಮಗೆ ಬಂದ ಅನುಭವಗಳನ್ನು ಹೇಳಿದರು. ಅವರ ಮತದಂತೆ ಫ್ರಾನ್ಸ್ ಮೊದಲಾದ ಇತರ ಜನಾಂಗಗಳು ಅಷ್ಟೊಂದು ಅಡ್ಡಿಯನ್ನು ಮಾಡುವದಿಲ್ಲ, ಮಿ. ಲೊಯ್ಡ ಜೋರ್ಜರ ಧೂರ್ತತನವೆ ಖಿಲಾಫತ್ತಿಗೆ ಮುಖ್ಯವಾದ ಆಪತ್ತಾಗಿದೆ. ಇಂಗ್ಲಂಡಿನೊಳಗಿನ ಪತ್ರಿಕೆಗಳು ಖಿಲಾಫತ್ತಿನ ವಿಷಯವನ್ನಾಗಲಿ ಇಲ್ಲವೆ ಹಿಂದುಸ್ಥಾನದ ಇತರ ಪ್ರಶ್ನೆಗಳನ್ನಾಗಲಿ ತಾವು ಚರ್ಚಿಸುವುದಿಲ್ಲ. ಅಂಥ ವಿಷಯಗಳ ಲೇಖನಕ್ಕೂ ಎಡೆ ಕೊಡುವುದಿಲ್ಲ, ಇಷ್ಟು ಭಯಂಕರವಾದ ಪಕ್ಷಪಾತವು ಅಲ್ಲಿ ತುಂಬಿಕೊಂಡಿದೆ. ಎಂದು ಮುಂತಾದ ಅಭಿಪ್ರಾಯಗಳನ್ನು ಹೇಳಿ ಮಿ. ಮಹಮ್ಮದ ಅಲ್ಲಿಗಳು ಹಿಂದೀದೇಶಕ್ಕೆ ಮುಂದಿನ ಮಹತ್ವದ ಸೂಚನೆಯನ್ನು ಕೆಂಬಹುನಾ ಉಪದೇಶವನ್ನು ಕೊಟ್ಟಿರುವರು: “ಖಿಲಾಫತ್ತೆ ಎಂದಲ್ಲ, ಹಿಂದುಸ್ಥಾನದ ಯಾವ ಕಷ್ಟವಾದರೂ ದೂರವಾಗಬೇಕಾದರೆ ಹಿಂದುಸ್ಥಾನಕ್ಕೆ ತನ್ನ ಕಾರಭಾರವನ್ನು ನಡಿಸುವ ಅಧಿಕಾರವು ಬೇಕು. ಈ ಅಧಿಕಾರವಿಲ್ಲದೆ ಹಿಂದುಸ್ಥಾನವು ಎಂದೂ ಯಶಸ್ವಿಯಾಗದು. ಹಿಂದುಸ್ಥಾನಕ್ಕೆ ಇಂಥ ಅಧಿಕಾರವು ಪ್ರಾಪ್ತವಾಗಬೇಕಾದರೆ, ಹಿಂದು ಮುಸಲ್ಮಾನರು ಒಟ್ಟಿಗೆ ಸೇರಬೇಕು. ಈ ಇಬ್ಬರ ಐಕ್ಯದಲ್ಲೆ ಈ ವಿಸ್ತೃತ ದೇಶದ ಮುಕ್ತಿಯು ಇದೆ. ಹಿಂದುಸ್ಥಾನಕ್ಕೆ ಸ್ವರಾಜ್ಯವು ದೊರಕದೆ ಖಿಲಾಫತ್ತಾಗಲಿ, ಇತರ ಆಪತ್ತುಗಳಾಗಲಿ ಮಾಯವಾಗಲಿಕ್ಕಿಲ್ಲ. ಆದ್ದರಿಂದ ಎಲ್ಲರೂ ಹಿಂದುಸ್ಥಾನದ ಸ್ವರಾಜ್ಯದ ಗೋಸ್ಕರ ಪ್ರಯತ್ನ ಮಾಡಬೇಕು. ಅಸಹಕಾರಿತೆಯ ಉಪಾಯವನ್ನು ಕೂಡ ಹಿಂದಿ ಸ್ವರಾಜ್ಯದ ಪ್ರಾಪ್ತಿಗಾಗಿಯೆ ಯೋಜಿಸಬೇಕು.” ಮಹಮ್ಮದ ಅಲ್ಲಿಗಳ ಈ ಸಂದೇಶವು ಎಲ್ಲರೂ ಮನನ ಮಾಡುವಹಾಗಿದೆ.

೫. ಹಿಂದುಸ್ಥಾನದಲ್ಲಿ ಅಸಹಕಾರಿತೆಯ ಕೆಲವು ಕ್ರಮಗಳನ್ನು ಆಚರಿಸಿ ಇಲ್ಲಿಯ ನೋಕರಶಾಹಿ (ಬಿರೊಕ್ರಸಿ)ಯನ್ನು ದುರ್ಬಲಪಡಿಸಬೇಕು, ನೋಕರಶಾಹಿಗೆ ಅರ್ಧಾಂಗವುಂಟಾಗುವಂತೆ ಮಾಡಿ ಅದರ ಅನ್ಯಾಯದ ಅಧಿಕಾರಗಳನ್ನು ಸಂಪೂರ್ಣದಲ್ಲಿ ತರಬೇಕೆಂದು ಹಿಂದುಸ್ಥಾನದ ಜನರು ಯಾವ ಪ್ರಯತ್ನ ಮಾಡಿಕೊಂಡಿದ್ದರೊ ಅದು ಯೋಗ್ಯವಲ್ಲ, ಅದು ಕೇವಲ ತಪ್ಪು, ಅದು ಕೇವಲ ಅರಾಜಕತೆ, ಎಂದು ಮುಂತಾಗಿ ಅಧಿಕಾರಿವರ್ಗದವರು ಪ್ರತಿಪಾದಿಸುತ್ತಿರುವ ಈ ಸಮಯದಲ್ಲಿ ಇದೇ ಬ್ರಿಟಿಷ್ ಸಾಮ್ರಾಜ್ಯದ ಹೊಟ್ಟೆಯೊಳಗಿರುವ ಐರ್ಲಂಡು ಗವರ್ನಮೆಂಟನ್ನು ದುರ್ಬಲಪಡಿಸಿ ರಾಜ್ಯಕಾರಭಾರದ ಹಲವು ಮಹತ್ವದ ಖಾತೆಗಳನ್ನು ಹೇಗೆ ತಾನೆ ನಡಿಸಹತ್ತಿದೆ. ಈ ಸಂಗತಿಯು ನಮ್ಮ ವಾಚಕರಿಗೆ ಮೊದಲೇ ಗೊತ್ತಾಗಿದೆ. ಐರ್ಲಂಡಿನಲ್ಲಿ ಎಷ್ಟು ಖೂನಿಗಳಾದವು, ಎಷ್ಟು ಸರಕಾರಿ ಕಟ್ಟೋಣಗಳು ಸುಟ್ಟು ಹೋದವು, ಎಷ್ಟು ಕಡೆಗಳಲ್ಲಿ ದಂಗೆಗಳಾದವು, ಎಷ್ಟು ರಕ್ತಪಾತವಾಯಿತು, ಇದನ್ನೆಲ್ಲಾ ವರ್ಣಿಸಹತ್ತಿದರೆ ಅದೊಂದು ದೊಡ್ಡ ಗ್ರಂಥವೆ ಆದೀತು. ದೇಶ ಶಾಂತತೆಯ ದೃಷ್ಟಿಯಿಂದ ವಿಚಾರಮಾಡುವಾಗ ಐರ್ಲಂಡಿಗೆ ಇದೊಂದು ಮಹಾನಷ್ಟವೆ ಎಂಬುದಕ್ಕೆ ಸಂದೇಹವಿಲ್ಲ. ಆದರೂ “ಸ್ವಾತಂತ್ರ್ಯಕ್ಕೆ ಬೇಕಾದ ಬೆಲೆಯನ್ನು ಕೊಡಬಹುದು” ಎಂಬ ಗಾದೆಗನುಸಾರವಾಗಿ ಐರ್ಲಂಡಿನವರು ಎಷ್ಟು ಕಷ್ಟಬಂದರೂ, ಎಷ್ಟು ನಷ್ಟ ಸಂಭವಿಸಿದರೂ ಸ್ವದೇಶಕ್ಕೆ ಹೋಮ್‌ರೂಲನ್ನು ಪಡೆಕೊಳ್ಳಲು ನಿಶ್ಚಯಿಸಿದ ಕಾರಣ ಈ ಹಾನಿ ನಷ್ಟದ ವಿಚಾರವನ್ನು ಮನಸ್ಸಿಗೆ ತರುವುದೇ ಇಲ್ಲ. ಐರ್ಲಂಡಿನಲ್ಲಿ ಈ ಪ್ರಕಾರ ಘೋರ ಅನರ್ಥ ನಡೆಯುತ್ತಿರುವದು ಮಿ. ಎಸ್‌ಕ್ವಿಥ (ಮಾಜಿ ಮುಖ್ಯಮಂತ್ರಿ)ರಿಗೆ ಸಹ ಒಪ್ಪುವದಿಲ್ಲ. ಅವರು ಐರ್ಲಂಡಿಗೆ ಅಸ್ತಿತ್ವ ಕೆನಡಾ ಇವುಗಳಿಗೆ ಕೊಟ್ಟಿರುವ ವಿಧದ ಸ್ವಾತಂತ್ರ್ಯವನ್ನು ಕೊಡುವುದೇ ಉಚಿತವೆಂದು ಬರೆದು ಪ್ರಕಟಿಸಿದ್ದಾರೆ. ಐರ್ಲಂಡಿನಲ್ಲಿ ಸಿನ್‌ಫೇನ್ ಪಕ್ಷವು ಪ್ರಬಲವಾಗಿ ಅದು ಬ್ರಿಟಿಷ್ ಸಾಮ್ರಾಜ್ಯದ ಹೊಟ್ಟೆಯಿಂದ ಹೊರಗೆ ಬರಲು ಈ ವಿಧವಾಗಿ ಪ್ರಯತ್ನಿಸುವುದು ನ್ಯಾಯವೆ ಮತ್ತು ಸಹಜವೆ ಎಂದು ಮಿ. ಎಸ್‌ಕ್ವಿಥರು ಹೇಳಹತ್ತಿದ್ದಾರೆ. ಐರ್ಲಂಡಿನ ಪಕ್ಷವನ್ನು ಹಿಡಿದು ಕಾದಾಡಲು ಎಸ್‌ಕ್ವಿಥರಂಥ ಬ್ರಿಟಿಷ ವಕೀಲರೆ ಅವರಿಗೆ ದೊರಕಿದ ಮೇಲೆ ಐರ್ಲಂಡಿನಲ್ಲಿ ಸರಕಾರವು ದುರ್ಬಲವಾಗಹತ್ತುವುದು ಆಶ್ಚರ್ಯವೆ? ಪರಂತು ಈ ಸಂದರ್ಭದಲ್ಲಿ ಖೇದದ ಮಾತು ಯಾವುದೆಂದರೆ, ಐರ್ಲಂಡಿನವರನ್ನು ತಗ್ಗಿಸಲು ಜನರಲ್ ಡಾಯರನು ಸೊಂಟಕಟ್ಟುವುದಿಲ್ಲ; ಇಲ್ಲವೆ ಅಸಹಕಾರಿತೆಯು ಮಹಾ ಮೂರ್ಖತೆಯ ಉಪಾಯವೆಂದು ಹೇಳುವ ಚೆಮ್ಸ್‌ಫರ್ಡ ದೊರೆಗಳು ಅಥವಾ ಲೋ. ವಿಲಿಂಗ್‌ಡನರು ತಮ್ಮ ಸದುಪದೇಶದ ಪಾರ್ಸಲನ್ನು ಐರ್ಲಂಡಿಗೆ ಕಳುಹಿಸಿ ಕೊಡುವುದಿಲ್ಲ!

೬. ಮದ್ರಾಸಿನಲ್ಲಿ ಡಾ| ಟೀ. ಎಂ. ನಾಯರ ಮುಂತಾದ ಪ್ರಭೃತಿಗಳು ಹೊತ್ತಿಸಿದ ಜಗಳದ ಕಿಡಿಗೆ ಮ್ಯುನಿಸಿಪಲ್ ಕೊರೊಪೊರೇಶನ್ ಚಲೋ ವ್ಯವಹಾರಕ್ಷೇತ್ರವಾಗಿದೆ ಎಂಬಂತೆ ಪರಿಣಮಿಸಿದೆ. ಪ್ರೆಸಿಡೆಂಟರನ್ನು ಹೊಸ ಎಕ್ಟಿನ ಮೇರೆಗೆ ಚುನಾಯಿಸುವಾಗಲೂ, ಕೊರೊಪೊರೇಶನ್ ಎಂಜಿನಿಯರ್, ರೆವಿನ್ಯೂ ಆಫಿಸರ, ಮತ್ತು ಹೆಲ್ತ್ ಆಫಿಸರುಗಳನ್ನು ಅವರವರ ಹಂಗಾಮಿ ಕೆಲಸದಲ್ಲಿ ಕಾಯಂ ಮಾಡುವ ಪ್ರಶ್ನೆ ಬಂದಾಗಲೂ ಈ ಜ್ವಾಲೆಯು ಧಾರಾಳವಾಗಿ ಕಾಣಿಸಿಕೊಂಡಿತು. ಬ್ರಾಹ್ಮಣೇತರ ಮುಖಂಡರೆನಿಸಿದ ಸರ್ ಪಿ. ತ್ಯಾಗರಾಯ ಚೆಟ್ಟಿಯವರು ಅಧ್ಯಕ್ಷಸ್ಥಾನದ ಕೋಡುಗಲ್ಲನ್ನು ಹತ್ತಿ ನಿಂತರು. ಕೊರೊಪೊರೇಶನ್ ಎಂಜಿನಿಯರ್ ಕ್ರೈಸ್ತರಾದ್ದರಿಂದ ಜ್ವಾಲೆಯಿಂದ ಹಾರಿ ಆಚೆಗೆ ಬೀಳಲು ಕಷ್ಟವಾಗಲಿಲ್ಲ. ರೆವಿನ್ಯೂ ಆಫಿಸರು ಈ ಹಂಗಾಮಿ ಅಧಿಕಾರದ ಬಟ್ಟೆಯನ್ನು ಕಳಚಿಬಿಟ್ಟು ತನ್ನ ಕಾಯಂ ಸರಕಾರಿ ಕೆಲಸಕ್ಕೆ ಸೇರಿ ತನ್ನನ್ನು ಉಳಿಸಿಕೊಂಡರು. ಹೆಲ್ತ್ ಆಫಿಸರರು ತನ್ನ ಕಾರ್ಯ ಧುರೀಣತೆಯಿಂದ ನಿಷ್ಪಕ್ಷಪಾತಿಗಳಾದ ಹಲವು ಯುರೋಪಿಯನ್ ಮತ್ತು ಇತರ ಮೆಂಬರರ ದಪ್ಪ ಕಂಬಳಿಯನ್ನು ಹೊದ್ದುಕೊಂಡದ್ದರಿಂದ ಈ ಜ್ವಾಲೆಯು ಆಗ ಅವರನ್ನು ರೋಮ ಬಾಧಿಸದೆಹೋಯಿತು. ಆದರೆ ತಾನು ಉಳಿಸಿಕೊಂಡೆ ಎಂಬ ಸಂತೋಷದಿಂದ ಅವರು ಮುಖವನ್ನು ಕಂಬಳಿಯೊಳಗಿಂದ ಹೊರಗೆ ಹಾಕಲು ಯತ್ನಿಸಿದೊಡನೆ ಬೆಂಕಿಯ ನಾಲಗೆಯು ಅವರ ಮೀಸೆ ಹುಬ್ಬುಗಳನ್ನು ಸ್ವಲ್ಪ ಉರಿಸಿ ಬಿಟ್ಟಂತೆ ಕಾಣುತ್ತದೆ. ಈ ರೆವಿನ್ಯೂ ಆಫಿಸರರೂ ಹೆಲ್ತ್ ಆಫಿಸರರೂ ಬ್ರಾಹ್ಮಣರು. ಹೆಲ್ತ್ ಆಫಿಸರರು ಕೊರೊಪೊರೇಶನ್ ನಿಬಂಧನೆಗಳಿಗೆ ವಿರೋಧವಾಗಿ ಕೊರೊಪೊರೇಶನ್ ಹಣದಿಂದ ಕೊರೊಪೊರೇಶನ್ ಬಗ್ಗೆ ಎತ್ತುಗಳನ್ನು ಕೊಂಡುಕೊಳ್ಳುವುದರಿಂದ ಬಹಳ ನಷ್ಟ ತಗಲಿತು ಎಂದು ಚಾರ್ಜುಗಳ ಕೊಳ್ಳಿಯೊಂದನ್ನು ಇವರ ಮೇಲೆ ಮಿ| ಶಣಿಕಾಚಲಂ ಚೆಟ್ಟಿಯವರು ಎಸೆದುಬಿಟ್ಟರು. ಈ ಮ್ಯುನಿಸಿಪಲ್ ಕೌನ್ಸಿಲರರು ಈ ಬಗ್ಗೆ ತುಂಬಾ ಸಾಹಸ ಪಟ್ಟು ಜೇರಿಳ ರುಜುವಾತುಗಳನ್ನು ಸಂಗ್ರಹಿಸಿದ್ದರು. ಕೊಳ್ಳಿಯ ಉರಿಯು ಗಾಳಿಗೆ ಒಮ್ಮೆ ಪ್ರಜ್ವಲಿಸಿದಂತೆ ಕಾಣಿಸಿದರೂ ಅಲ್ಲೆ ನೊಂದಿಹೋಯಿತು. ಹೆಲ್ತ್ ಆಫಿಸರರು ಕೊಟ್ಟ ಪ್ರತ್ಯುತ್ತರದಿಂದ ಬಹುಮತವು ಈ ಹೆಲ್ತ್ ಆಫಿಸರರ ಕಡೆಗೆ ತಿರುಗಿತು. ಹೀಗಾಗಿ ಈ ಠರಾವು ಬಿದ್ದುಹೋಯಿತು.

೭. ಈ ಸಂದರ್ಭದಲ್ಲಿ ಚರ್ಚೆ ಮಾಡುವಾಗ ಈ ತಣಿಕಾಚಲರ ಕಡೆಗೆ ಪ್ರೆಸಿಡೆಂಟರು ಬಹಳ ರಿಯಾಯಿತಿ ತೋರಿಸಿ ಕಾಲದ ಮಿತಿಮೀರಿ ಮಾತನಾಡಲು ಬಿಟ್ಟದ್ದನ್ನೂ ಒಬ್ಬಿಬ್ಬರಿಗೆ ಕ್ರಮ ತಪ್ಪಿ ಮಾತು ತಡಿಸಿದ್ದನ್ನೂ ನೋಡಿ ಮೆಂಬರರೆಲ್ಲ ಕ್ಷೋಭದಿಂದ ತುಂಬಿದರು. ಪ್ರೆಸಿಡೆಂಟರ ಈ ಧೋರಣವನ್ನು ಆಕ್ಷೇಪಿಸುತಿದ್ದಾಗ ನೀವು ಪೋಕರಿ ವರ್ತನವನ್ನು ಯಾಕೆ ಅನುಸರಿಸುತ್ತೀರಿ ಎಂದು ಪ್ರೆಸಿಡೆಂಟರು ಗರ್ಜಿಸಿದರು. ‘ಪೋಕರಿತನ’ ಎಂಬ ಅಸಭ್ಯಮಾತನ್ನು ಉಪಯೋಗಿಸಿದ್ದು ಸರಿಯಲ್ಲ, ಅದನ್ನು ಹಿಂತೆಗೆಯಬೇಕೆಂದು ಒಬ್ಬಿಬ್ಬರು ವಾದಮಾಡಿದರು. ಒಬ್ಬಿಬ್ಬರು ಮೀಟಿಂಗಿನಿಂದ ಎದ್ದುಹೋದರು. ಅಂತು ಮೀಟಿಂಗು ಎಂಬದು ಕಡೆಗೆ ಸಭ್ಯರ ಸಮ್ಮೇಲನದ ಸ್ಥಿತಿಯಿಂದ ಮೀನು ಮಾರ್ಕೆಟಿನ ಸ್ಥಿತಿಗೆ ಸಮೀಪಿಸಿತು. ಈಗ ಕೆಲವು ಮೆಂಬರರು ಮುಂದಿನ ಸಭೆಯಲ್ಲಿ ಪ್ರೆಸಿಡೆಂಟರ ಧೋರಣವನ್ನು ಆಕ್ಷೇಪಿಸಿ ಒಂದು ಠರಾವನ್ನು ತರುತ್ತೇವೆಂದು ಪ್ರಕಟಿಸಿರುವರು. ಸಾಮಾನ್ಯ ಮ್ಯುನಿಸಿಪಾಲಿಟಿಗಳಲ್ಲಿ ಇಂಥ ವರ್ತನವು ಅಪೂರ್ವವಲ್ಲ, ಆಗಾಗ ಸಂತೆಯ ಕ್ರಮವನ್ನೆ ಮೀಟಿಂಗುಗಳು ಅವಲಂಬಿಸುತ್ತವೆ ಎಂಬದು ಅನುಭವದ ಮಾತು. ಆದರೆ ಸಂಸ್ಥಾನದ ಮ್ಯುನಿಸಿಪಾಲಿಟಿಗಳಿಗೆ ಶಿಖರಪ್ರಾಯವಾದ ಈ ಕೊರೊಪೊರೇಶನ್ನಿನಲ್ಲಿ ಈ ಬಗೆಯ ಗಲಾಟೆ ಏಳುವುದು ತುಂಬಾ ವಿಷಾದಕರ.

೮. ಇದರಲ್ಲಿ ಒಂದು ಸಂಗತಿಯು ಸ್ಪಷ್ಟವಾಗಿ ಹೊಳೆಯುತ್ತಿದೆ. ಕಾರ್ಯಕ್ರಮದ ಸರಿಯಾದ ಜ್ಞಾನವಿಲ್ಲದ ಪ್ರೆಸಿಡೆಂಟರಾಗಲಿ ಚೆಯರ್ಮನರಾಗಲಿ ಬಂದೊಡನೆ ಆ ನವ್ಕರರಲ್ಲಿ ಕೆಲವರಿಗೆ ಸುಗ್ಗಿಯಕಾಲ; ಕೆಲವರಿಗೆ ದುಷ್ಕಾಲವಾಗುತ್ತದೆ. ಈ ಪ್ರೆಸಿಡೆಂಟರು ಎಲ್ಲಿ ತಪ್ಪಿ ಬೀಳುತ್ತಾರೆ, ಅವರನ್ನು ಹೇಗೆ ತಮ್ಮ ಕೈವಶ ಮಾಡಿಕೊಳ್ಳಬಹುದು ಎಂದು ನವುಕರರಲ್ಲಿ ಅನೇಕರು ಹೊಂಚಿಕೊಂಡಿರುತ್ತಾರೆ. ಈ ಕಾಲದಲ್ಲಿ ಖಾಸಗಿ ದ್ವೇಷಗಳ ಮುಯ್ಯಿಗೆ ಎಡೆ ಸಿಗುತ್ತದೆ. ಕೆಲವರು ಈ ದ್ವೇಷಾಮುಯ್ಯಿಗಳ ಗಂಡಿಯಿಂದ ನುಸುಳಿಬಿಡುತ್ತಾರೆ. ಬಲಹೀನರಾದವರು ಕೆಲವರು ಬುದ್ಧಿಯವರು ಅಲ್ಲಿ ಸಿಲುಕಿ ತಮ್ಮ ಸರ್ವಿಸಿಗೆ ಬರೆ ಹಾಕಿಕೊಳ್ಳುವುದೂ ಉಂಟು. ಹೊಸ ಪ್ರೆಸಿಡೆಂಟರು ಆರಿಸಲ್ಪಟ್ಟೊಡನೆ ಈ ನವುಕರರೊಳಗಿನ ಬೇರೆ ಬೇರೆ ತಂಡಗಳೂ ಕೌನ್ಸಿಲರೊಳಗಿನ ಪಕ್ಷಗಳೂ ಹೊಂಚಿಕೊಂಡಿದ್ದು ಇವರನ್ನು ತಮ್ಮ ಬಲೆಯಲ್ಲಿ ನಿಬಂಧಿಸಲು ಯತ್ನಿಸುತ್ತಾರೆ. ಕಾರ್ಯಕ್ರಮಗಳ ಅನುಭವವಿದ್ದು ದೇಹದಲ್ಲಿ ದಾರ್ಢ್ಯವೂ ಬುದ್ಧಿಯಲ್ಲಿ ವಿಚಕ್ಷಣತೆಯೂ ಇದ್ದ ಪ್ರೆಸಿಡೆಂಟರು ಈ ಬಲೆಗಳನ್ನು ಕಂಡೂ ಕಾಣದಂತೆ ನಟಿಸಿ ಅವುಗಳನ್ನು ಅಲ್ಲಲ್ಲಿ ಛೇದಿಸಿ ಹೋಗುತ್ತಾರೆ. ಆದರೆ ಇಂಥವರು ಅತಿ ವಿರಳ. ಅನೇಕರು ತಮ್ಮ ಉತ್ಸಾಹದೊಂದಿಗೆ ಕಾರ್ಯಕ್ರಮದ ತಿಳುವಳಿಕೆ ಇಲ್ಲದೆ ದುಡುಕುತಿದ್ದು ಒಮ್ಮೆ ಕೈಸುಟ್ಟುಕೊಂಡ ಮೇಲೆ ಆ ಸಿಟ್ಟಿಗೆ ಸಿಕ್ಕಿದವರನ್ನು ಬಲಿ ಹಾಕಲು ಯತ್ನಿಸುತ್ತಾರೆ. ಅಥವಾ ಕಾರ್ಯಕ್ರಮದ ಅನುಭವವುಳ್ಳ ಮತ್ತು ಕುಯುಕ್ತಿಯಲ್ಲಿ ನಿಪುಣರಾದ ನವುಕರರ ಮೇಲಾಗಲಿ ಅಥವಾ, ಕುಟಿಲರಾದ ಇತರ ಕೌನ್ಸಿಲರುಗಳ ಮೇಲಾಗಲಿ ಕಾರ್ಯಭಾರವನ್ನು ಹೊತ್ತುಹಾಕಿ ಬಾಹ್ಯ ಗೌರವವನ್ನು ಮಾತ್ರ ತಾವಿಟ್ಟುಕೊಳ್ಳುತ್ತಾರೆ. ಇದರಿಂದ ಈ ಕಡೆಗೆ ವಾದ್ಯ ಬಾರಿಸುವಾಗ ದೇವರನ್ನು ಹೊತ್ತ ಬಸವನು ಈ ಬಹುಮಾನವು ತನಗೆಂದು ನೆನಸಿ ತಲೆ ಅಲ್ಲಾಡಿಸುತ್ತಿದ್ದರೂ ಇದು ಥೇಟ್ ಬಸವ ಎಂದು ಕಂಡವರು ಕೈಮುಸುಕಿನೊಳಗೆ ನಗುವುದಕ್ಕೆ ಎಡೆಯಾಗುತ್ತದೆ. ಇದು ಸ್ಥಾನಿಕ ರಾಜ್ಯಭಾರ ಕ್ರಮದ ದೊಡ್ಡದೊಂದು ಕೊರತೆಯೆಂದು ಹೇಳಬೇಕಾಗಿದೆ

ಮಂಗಳೂರು.

ಮಂಗಳೂರ ತಾಲೂಕು ಬೋರ್ಡಿಗೆ ಮಂಗಳೂರ ಇಲೆಕ್ಟೊರಲ್ ಸರ್ಕಲಿನಿಂದ ಮ| ರಾ| ಕೊಡಿಯಾಲ ಗೌರಿಶಂಕರ ರಾವ್ ಮತ್ತು ಮ| ರಾ| ಯಲ್ಲೂರು ಸಂಜೀವ ರಾಯರು ಉಮೇದ್ವಾರರಾಗಿರುವರು. ಚುನಾವಣೆಯು ನವಂಬರ ತಾ. ೨೯ಕ್ಕೆ ಮಂಗಳೂರ ಡಿಪ್ಯುಟಿ ತಹಸಿಲ್‌ದಾರರಲ್ಲಿ ನಡೆಯುವುದು.

ಬರುವ ಆದಿತ್ಯವಾರ ಸಾಯಂಕಾಲ ೪-೩೦ಗಂಟೆಗೆ ದೇಶೀಯ ಬಾಲಿಕಾ ಪಾಠಶಾಲೆಯ ಸಭಾಸದನದಲ್ಲಿ ಇಲ್ಲಿಯ ಥಿಯೋಸೊಫಿಕಲ್ ಸೊಸೈಟಿಯ ಪರವಾಗಿ ಬ್ರಹ್ಮಶ್ರೀ ಆತ್ಮಾರಾಮ ಶಾಸ್ತ್ರಿಗಳು ‘ಧರ್ಮ’ ಎಂಬ ವಿಷಯವನ್ನು ಎತ್ತಿ ಕನ್ನಡದಲ್ಲಿ ಉಪನ್ಯಾಸ ಮಾಡುವರು.

ಆಯುರ್ವೇದ ಭೂಷಣ ಎಮ್. ವಿ. ಶಾಸ್ತ್ರಿಗಳ ಗೋಪಾಲ ಭೇಷಜಾಶ್ರಮದಲ್ಲಿ ಕಳೆದ ಆದಿತ್ಯವಾರ ಮದ್ರಾಸಿನ ವೈದ್ಯರತ್ನ ಪಂಡಿತ ಡಿ. ಗೋಪಾಲಾಚಾರ್ಲುಗಳ ಮರಣದ ದುಃಖಸಂತಾಪವನ್ನು ಸೂಚಿಸುವುದಕ್ಕಾಗಿ ರಾವಸಾಹೇಬ ಕೆ. ರಂಗರಾಯರ ಅಧ್ಯಕ್ಷತೆಯಲ್ಲಿ ಒಂದು ಸಭೆಯು ಸೇರಿತು. ವೇ| ಮಹಮದ್ ಪುತ್ತೂರು ಸಾಹೇಬ, ವೇ| ಅನಂತ ಉಪಾಧ್ಯಾಯ, ರಾ| ಬಿ. ಆರ್. ಹರಿದಾಸ ಮುಂತಾದ ಗೃಹಸ್ಥರು ಬಂದಿದ್ದರು. ಆಯುರ್ವೇದ ಭೂಷಣ ಎಮ್. ವಿ. ಶಾಸ್ತ್ರಿಗಳು ಸ್ವರ್ಗಸ್ಥ ಗೋಪಾಲಚಾರ್ಯರ ಜೀವನಚರಿತ್ರೆಯನ್ನು ಸಂಕ್ಷೇಪದಿಂದ ವಿವರಿಸಿದರು. ಆಯುರ್ವೇದವನ್ನು ಪ್ರಚಾರಗೊಳಿಸಿ ರೋಗಪೀಡೆ ಪರಿಹರಿಸಲು ಗೋಪಾಲಾಚಾರ್ಯರು ಹೇಗೆ ಪ್ರಯತ್ನಪಟ್ಟರು ಎಂಬದನ್ನು ಶ್ರೀ. ಆತ್ಮಾರಾಮ ಶಾಸ್ತ್ರಿಗಳು ವಿವರಿಸಿ ಹೇಳಿದರು. ಅಧ್ಯಕ್ಷರು ಸ್ವರ್ಗಸ್ಥ ಗೋಪಾಲಾಚಾರ್ಯರ ಮಹತ್ವವನ್ನು ಬಹು ಸಮರ್ಪಕವಾಗಿಯೂ ಸಯುಕ್ತಿಕವಾಗಿಯೂ ಪ್ರತಿಪಾದಿಸಿದರು. ಕೊನೆಗೆ ಮೃತರ ಕುಟುಂಬಕ್ಕೆ ದುಃಖಪ್ರದರ್ಶಕ ಠರಾವನ್ನು ಕಳಿಸಲು ನಿಶ್ಚಯವಾಗಿ ಸಭೆಯು ಮುಕ್ತಾಯವಾಯಿತು.

ಮಂಗಳೂರು ತಾಲ್ಲೂಕು ಬೋರ್ಡಿನ ಈ ತಿಂಗಳಿನ ಅಧಿವೇಶನವು ಬರುವ ತಾರೀಕು 29ನೇ ಸೋಮವಾರ 3ಗಂಟೆಗೆ ಸದರಿ ತಾಲೂಕು ಬೋರ್ಡ್ ಆಫೀಸಿನಲ್ಲಿ ಕೂಡುವುದು.

ಕೆಥೊಲಿಕರ ಧರ್ಮಗುರು ಪೋಪ ಸಾಹೇಬರ ಪ್ರತಿನಿಧಿಗಳಾದ ಈಸ್ಟ್ ಇಂಡಿಯಾ ಡೆಲಿಗೆಟ್ ಆಪೋಸ್ತಲ ಡೊಕ್ಟರ ಪಿಯೊತ್ರೊ ಫ್ಯಾಜಾನಿಯವರು ಮಂಗಳೂರ ಪಟ್ಟಣಕ್ಕೆ ಬಂದಿರುವರು. ಇವರಿಗೆ ಜಿಲ್ಲೆಯ ಕೆಥೊಲಿಕ ಸಮಾಜದ ಕಡೆಯಿಂದ ಅಲ್ಲಲ್ಲಿ ಸ್ವಾಗತ ಸನ್ಮಾನಗಳು ನಡಿಯುತ್ತಿವೆ. ಇಲ್ಲಿಯ ಕೆಥೊಲಿಕ ಸಮಾಜದವರು ತಮ್ಮ ಅಭಿವೃದ್ಧಿಯನ್ನು ಸೂಚಿಸಿ ಕೊಟ್ಟ ಮಾನಪತ್ರದಲ್ಲಿ ಇಲ್ಲಿ ಒಟ್ಟು 1,11,557 ಕೆಥೋಲಿಕರೂ 117 ಪಾದ್ರಿಗಳೂ 64 ಸಣ್ಣ ದೊಡ್ಡ ಇಗರ್ಜಿಗಳೂ ಇರುವುದಾಗಿ ತಿಳಿದು ಬರುತ್ತದೆ.

ಮಿ. ಯಚ್. ಮೊರ್ಗನರವರ ಡಿಸ್ಟ್ರಿಕ್ಟ ಬೋರ್ಡ ಮೆಂಬರಿಕೆಯ ಅವಧಿಯು ಮುಗಿದು ಈ ಪದವಿಗೆ ರಾ| ಯಚ್. ಕೊರಗಪ್ಪನವರ ನೇಮಕ ಸರಕಾರದವರಿಂದ ಆಗಿದೆ. ಮ. ರಾ. ಪಿ. ಕೃಷ್ಣನ್ ನಂಬಿಯಾರರು ಪುನಃ ಡಿಸ್ಟ್ರಿಕ್ಟ ಬೋರ್ಡ ವೈಸ ಪ್ರೆಸಿಡೆಂಟರಾಗಿ ನೇಮಕವಾದ್ದಾರೆ.

ಕಳೆದ ಸಂಚಿಕೆಯಲ್ಲಿ ಸೂಚಿಸಿದಂತೆ ಅಸಹಕಾರಿತೆ—ವಿಶೇಷವಾಗಿ ಹೊಸ ಕೌನ್ಸಿಲುಗಳಿಗೆ ಬಹಿಷ್ಕಾರವನ್ನು ಕುರಿತು ಮಹನೀಯರಾದ ಸಿ. ರಾಜಗೋಪಾಲಾಚಾರ್ಯ ಮೊದಲಾದ ಪ್ರಭೃತಿಗಳ ಭಾಷಣಗಳು ಇಸ್ಲಾಮಿಯಾ ಕ್ಲಬ್ಬಿನಲ್ಲಿ ನಾಳೆ ಸಾಯಂಕಾಲ ೬ ಗಂಟೆಗೆ ನಡಿಯುವುವು.

ಕೊರನೇಶನ್ ಕ್ರಿಕೆಟ್ ಮೇಚು ಸೈಂಟ್ ಅಲ್ಲೊಸಿಯಸ್ ಕೊಲೇಜಿಗೂ ಮಂಗಳೂರ ಕ್ರಿಕೆಟ್ ಟೀಮಿಗೂ ನಡೆದು ಮಂಗಳೂರ ಕ್ರಿಕೆಟ್ ಟೀಮಿನವರು ಗೆದ್ದರು.

ಜಿಲ್ಲಾ ಕಲೆಕ್ಟರರು ತಾ. 15ರಿಂದ 19ರ ವರೆಗೆ ಬೆಳ್ತಂಗಡಿ ತಾ. 20 ಮಂಗಳೂರು, ಈ ರೀತಿ ಸಕೀಟು ಬೆಳೆಸುವರು.

ಮಂಗಳೂರ ಬ್ರಹ್ಮ ಸಮಾಜದ ವರ್ಧಂತಿ ಉತ್ಸವವು ತಾ. 17ರಿಂದ ಪ್ರಾರಂಭಿಸುವುದು.

[illegible]

... ಸ್ವೀಕರಿಸಿದ್ದರು ... ಸರಕಾರಿ ... ಇಂಗ್ಲಿಷ್ ... ಗೊತ್ತಿದ್ದಿಲ್ಲ. ... ಬುದ್ಧಿಶಾಲಿಗಳಾಗಿದ್ದರು. ಇವರ ... [illegible] ... ಹುದ್ದೆಯ ಮೇಲೆ ... ನೇಮಕವಾಗಿತ್ತು. ಈ ಕಾರಣದಿಂದ ಇವರ ಮೇಲೆ ತಾಲೂಕಿನ ಜವಾಬುದಾರಿಯು ಬಂದಿತ್ತು. ... ದೊಡ್ಡ ಹುದ್ದೆಯ ಕೆಲಸವನ್ನು ನಡಿಸಬೇಕಾದ ... ಇವರಿಗೆ ಕಲೆಕ್ಟರ ದೊರೆಗಳ ಭೇಟಿಯನ್ನು ಆಗಾಗ್ಗೆ ಮಾಡಿಕೊಳ್ಳಬೇಕಾಗುತ್ತಿತ್ತು. ಆದರೆ ವೆಂಕೋಬರಾಯರಿಗೆ ಇಂಗ್ಲಿಷು ಬಾರದು. ಕಲೆಕ್ಟರ ದೊರೆಗಳಿಗೆ ಹಿಂದುಸ್ಥಾನಿ ತಿಳಿಯದು. ... ಸರಕಾರದ ಅಧಿಕಾರಿಗಳಿಗೆ ಹಿಂದುಸ್ಥಾನಿಯು ... ಬರುತ್ತಿತ್ತು. ಆದರೆ ಪಾರ್ಲಿಮೆಂಟಿನ ಕೈಕೆಳಗೆ ಈ ದೇಶದ ಆಡಳಿತವು ಬಂದು ಕೆಲವು ವರ್ಷಗಳು ದಾಟಹೋಗಿದ್ದರಿಂದ ಸಾಹೇಬ ಜನರಿಗೆ ಹಿಂದುಸ್ಥಾನಿ ಕಲಿಯುವ ಅಭ್ಯಾಸವು ಬಿಟ್ಟುಹೋಗಿತ್ತು. ಮತ್ತು ವೆಂಕೋಬರಾಯರ ಕಲೆಕ್ಟರರಾದವರೂ ಹಿಂದುಸ್ಥಾನಿಯನ್ನು ಬಿಟ್ಟು ಬಿಟ್ಟದ್ದರಿಂದ ಈ ಅಭ್ಯಾಸವನ್ನು ಕಲಿತಿರಲಿಲ್ಲ. ಇಂಥ ಪರಿಸ್ಥಿತಿಯಲ್ಲಿ ನಮ್ಮ ವೆಂಕೋಬರಾಯರಿಗೆ ದೊರೆಗಳ ಬಂಗ್ಲೆಗೆ ಹೋಗುವುದೆಂದರೆ ಪ್ರಯಾಸದ ಕೆಲಸವಾಗುತ್ತಿತ್ತು.

ಆದರೂ ವೆಂಕೋಬರಾಯರು ಬಹು ಬುದ್ಧಿಶಾಲಿಗಳು. ಇಂಗ್ಲಿಷನ್ನು ಕೆಲವು ಮಟ್ಟಿಗಾದರೂ ಕಲಿಯದೆ ನಿವೃತ್ತಿ ಇಲ್ಲವೆಂದು ಅವರಿಗೆ ತೋರಿಹೋಯಿತು. ಅವರು ಬಹಳ ಪ್ರಯತ್ನ ನಡಿಸಿದರು. ಚಿಕ್ಕದೊಡ್ಡ ಪುಸ್ತಕಗಳನ್ನು ತಂದು ಮನೆಯಲ್ಲಿ ಇಡಹತ್ತಿದರು. ಭಾಷಾಂತರ ಪಾಠಮಾಲೆಯ ಪುಟಗಳನ್ನು ಮಗುಚಿದರು. ಡಿಕ್ಷನರಿಯೊಳಗಿನ ಪುಟಪುಟಗಳನ್ನೆ ಬಾಯಿಪಾಠಮಾಡಹತ್ತಿದ್ದರು. ... ಗಳಿಗೆ, ತಪ್ಪಾಗಲಿ, ಕಂಡಕಂಡವರೊಡನೆ ಈ ವೆಂಕೋಬರಾಯರು ಇಂಗ್ಲಿಷ ಭಾಷೆಯನ್ನು ನುಡಿಯಲು ಪ್ರಾರಂಭಿಸಿದರು. ಈ ಮೇರೆಗೆ ಹಲವು ದಾರಿಗಳಿಂದ ಪ್ರಯತ್ನ ನಡಿಸಿದ್ದಲ್ಲಿ ವೆಂಕೋಬರಾಯರಿಗೆ ಇಂಗ್ಲಿಷು ಕೆಲವು ಮಟ್ಟಿಗೆ ಬಾರದು ... ಸ್ವಲ್ಪ ಸಮಯದೊಳಗೆನೆ ವೆಂಕೋಬರಾಯರು ಇಂಗ್ಲಿಷ್ ಭಾಷೆಯಲ್ಲಿ ಸರಿಯಾಗಿ ವ್ಯವಹಾರಮಾಡತೊಡಗಿ ಒಳ್ಳೆ ಪ್ರಾವೀಣ್ಯವನ್ನು ಸಂಪಾದಿಸಿದರು. ಈ ಸ್ಥಿತಿಯಲ್ಲಿ ಅವರಿಗೆ ಕಲೆಕ್ಟರ ದೊರೆಗಳ ಬಂಗಲೆಗೆ ಹೋಗುವುದೆಂದರೆ ಬಹಳ ಸಂತೋಷದ್ದಾಗಿ ತೋರಹತ್ತಿತು. ಕಲೆಕ್ಟರ ದೊರೆಗಳಿಗೂ ವೆಂಕೋಬರಾಯರ ಈ ಬುದ್ಧಿಸೂಕ್ಷ್ಮತೆ ಮತ್ತು ದೃಢಪ್ರಯತ್ನ ಇವುಗಳನ್ನು ಕಂಡು ಬಹಳ ಸಂತೋಷವಾಯಿತು. ಇನ್ನು ವೆಂಕೋಬರಾಯರು ತಮ್ಮ ತಾಲೂಕು ಆಫೀಸಿನ ಕೆಲಸವನ್ನು ಬಹು ಉತ್ತಮ ರೀತಿಯಿಂದ ಮತ್ತು ನಿರಾಕ್ಷೇಪವಾಗಿ ಮಾಡುವುದರಿಂದಂತೂ ಕಲೆಕ್ಟರರು ಇವರಿಗೆ ತಕ್ಕ ಮರ್ಯಾದೆಯನ್ನು ಸಲಾಯಿಸುತ್ತಿದ್ದರು. ಹೆಚ್ಚೇಕೆ, ವೆಂಕೋಬರಾಯರು ತಮ್ಮ ಕರ್ತವ್ಯದಕ್ಷತೆಯಿಂದ ಮತ್ತು ಬುದ್ಧಿಸಾಮರ್ಥ್ಯದಿಂದ ಕಲೆಕ್ಟರ ಮೊದಲಾದ ಮೇಲಾಧೀಕಾರರನ್ನು ಒಲಿಸಿಕೊಂಡಿದ್ದರು.

(ವೆಂಕೋಬರಾಯರಿಗೆ ಒಲಿದುಹೋದ ಮೇಲಾಧೀಕಾರರು ಅವರಿಗೆ ಬೇಗ ಬೇಗನೆ ಮೇಲಧಿಕಾರಗಳನ್ನು ಕೊಟ್ಟು ಅವರನ್ನು ಕೊನೆಗೆ ಅಸಿಸ್ಟಂಟ್ ಕಲೆಕ್ಟರರನ್ನಾಗಿ ಮಾಡಿದರು. ಈ ಹುದ್ದೆಗೆ ತಕ್ಕಂತೆ ಅಧಿಕಾರವೂ ಸಂಬಳವೂ ವೆಂಕೋಬರಾಯರಿಗೆ ಸಮೃದ್ಧವಾಗಿ ದೊರೆಕಹತ್ತಿ ಸರಕಾರಿ ದ.ಬಾರಿನಲ್ಲಿ ಅವರ ವರ್ಚಸ್ಸು ಸ್ಥಾಪಿತವಾಯಿತು.

(ವೆಂಕೋಬರಾಯರಿಗೆ ಹೆಚ್ಚು ಮಕ್ಕಳಿದ್ದಿಲ್ಲ. ಒಬ್ಬನೆ ಒಬ್ಬ ಮಗನಿದ್ದನು. ಅವನನ್ನು ಅವರು ಇಲ್ಲಿಯ ಇಂಗ್ಲಿಷ ವಿದ್ಯಾಪೀಠದ ಕೊನೆಯ ಮೆಟ್ಟಿನ ವರೆಗೆ ಹತ್ತಿಸಿದರು. ಈ ಮೇರೆಗೆ ಮಗನು ಎಮ್. ಎ. ಪಾಸಾದ ಮೇಲೆ ಅವನನ್ನು ಇಂಗ್ಲಂಡಿಗೆ ಕಳುಹಿಸಿಕೊಟ್ಟರು. ಅಲ್ಲಿ ಆ ಮಗನು ಐ. ಸಿ. ಯಸ್. ಪರೀಕ್ಷೆಗೆ ಪಾಸಾಗಿ ಪಂಜಾಬ ಸಂಸ್ಥಾನದೊಳಗಿನ ಒಂದು ಜಿಲ್ಲೆಗೆ ಕಲೆಕ್ಟರನಾಗಿ ಬಂದನು. ಇತ್ತ ವೆಂಕೋಬರಾಯರ ಸಂಬಂಧಿಕರಲ್ಲಿ ಕೆಲವು ಯೋಗ್ಯ ಜನರು ವೆಂಕೋಬರಾಯರ ಮಾತು ಮತ್ತು ಮೇಲಾಧೀಕಾರರ ಹುಕುಮು ಇವುಗಳ ಬಲದಿಂದ ತಾಲೂಕ ಕಚೇರಿಯಲ್ಲಿ, ಕಸ್ಟಮ್ ಆಫೀಸಿನಲ್ಲಿ ಮತ್ತು ಪೋಲೀಸ್ ಇಲಾಖೆಯಲ್ಲಿ ಕೆಲಸವನ್ನು ಕೈಕೊಂಡಿದ್ದರು. ಸಾರಾಂಶ ಸ್ವತಃ ವೆಂಕೋಬರಾಯರು ಅವರ ಮಗನವರು, ಅವರ ಸಂಬಂಧಿಕರು ಸರಕಾರಿ ಹುದ್ದೆಗಳನ್ನು ಕೈಕೊಂಡು ಸರಕಾರದ ಮತ್ತು ಸ್ವಂತ ತಮ್ಮ ಸೇವೆಯನ್ನು ನಡಿಸಿಕೊಂಡಿದ್ದರು.

ಅಷ್ಟರಲ್ಲಿ ವೆಂಕೋಬರಾಯರು ಪೆನ್‌ಶನ್ ಪಡೆಯುವ ಅವಧಿಯು ಬಂತು. ಅವರಿಗೆ ಪ್ರಾಯವು ೬೦ ಆಗಿದ್ದರೂ ಅವರನ್ನು ನೋಡುವಾಗ ಅವರು ೫೦ರೊಳಗಿನವರೆಂದು ತೋರುತ್ತಿದ್ದರು. ಇದೊಂದು ಕಾರಣ, ಇನ್ನೊಂದು ಮುಖ್ಯ ಕಾರಣವು ಯಾವುದೆಂದರೆ, ವೆಂಕೋಬರಾಯರ ಬುದ್ಧಿ, ವೆಂಕೋಬರಾಯರ ಸಮಯಸೂಚಕತೆ ಮತ್ತು ಮುಖ್ಯವಾಗಿ ವೆಂಕೋಬರಾಯರ ವಿನಯ ಈ ಗುಣಗಳಿಂದ ಅವರ ಮೇಲಾಧಿಕಾರರು ಅವರ ಕೆಲಸದ ಮುದತನ್ನು ಇನ್ನೂ ೩-೪ ವರ್ಷಗಳಿಂದ ಬೆಳೆಸುವ ಆಲೋಚನೆ ಮಾಡಿ ವೆಂಕೋಬರಾಯರಿಗೆ ಅದರಂತೆ ಹುಕುಂ ಕಳುಹಿಸಿಕೊಟ್ಟರು! ವೆಂಕೋಬರಾಯರಿಗೆ ಪರಮ ಸಂತೋಷವಾಯಿತು. ಅವರೂ ಅದನ್ನೇ ಬಯಸಿಕೊಂಡಿದ್ದರು! ತನ್ನ ಅಮೂರ್ತವಾಗಿರುವ ಅಪೇಕ್ಷೆಯು ಈ ಮೇರೆಗೆ ಪ್ರತ್ಯಕ್ಷ ಮೂರ್ತಿಯನ್ನು ಹೊಂದಿದ ಮೇಲೆ ಯಾರಿಗೆ ತಾನೆ ಆನಂದವಾಗಲಿಕ್ಕಿಲ್ಲ! ಅವರು ಸರಕಾರದ ಈ ಔದಾರ್ಯದಿಂದ ಆನಂದಿತರಾದರು. ಪರಂತು ಸರಕಾರವು ಅವರನ್ನು ಇಷ್ಟರಿಂದಲೆ ಬಿಡಲಿಲ್ಲ. ಸ್ವಲ್ಪ ಸಮಯದೊಳಗೆ ಬಾದಶಹರ ಜನ್ಮೋತ್ಸವದ ಸಮಾರಂಭದಲ್ಲಿ ಸರಕಾರವು ನಮ್ಮ ಎಮ್. ಆರ್. ಆರ್. ವಾಲ್ಯು ಎಂಬವರ ... ವೆಂಕೋಬರಾಯರನ್ನು ದಿವಾನಬಹದ್ದೂರರನ್ನಾಗಿ ಮಾಡಿತು! ಈ ಹೊಸ ಹೆಸರನ್ನು ಪಡಕೊಳ್ಳಲು ಅವರು ಹೊರಗಿನ ಜನರಿಗೆ ತೋರುವಂತ ಹೆಚ್ಚಿನ ಯಾವ ಪ್ರಯತ್ನವನ್ನೂ ಮಾಡಿದ್ದಿಲ್ಲ. ಆದರೂ ಅವರ ಮನಸ್ಸೂ ಇತರ ಅಧಿಕಾರಿಗಳ ಮನಸ್ಸೂ ಈ ವಿಷಯವನ್ನು ಬಾಯಿಯು, ಕಣ್ಣೆನ್ನು ... ಯಾವ ಸಹಾಯವನ್ನೂ ಕಕ್ಕೊಳ್ಳದ ಮಾಡಾಡುತ್ತಿದ್ದವು! ಇದು ... ಒಂದು ರೂಪ, ಆಕಾರ ಇಲ್ಲದ ಒಂದು ಅಪೇಕ್ಷೆ ಇತ್ತು. ಅದು ಈ ಮೇರೆಗೆ ಒಂದು ದಿನ ಮೂರ್ತಸ್ವರೂಪ ಹೊಂದಿದರಿಂದ ನಮ್ಮ ವೆಂಕೋಬರಾಯರು ದಿವಾನಬಹದ್ದೂರ ವೆಂಕೋಬರಾಯರಾದರು! ಸಾರಾಂಶ ವೆಂಕೋಬರಾಯರು ... ಸಂಪತ್ತು, ಬಹುಮಾನ, ಅಲ್ಲದೆ ಸರಕಾರಿ ನೌಕರಿಯಲ್ಲಿ ತೊಡಗಿದ ಆಪ್ತವರ್ಗ ಈ ಎಲ್ಲ ಕಾರಣಗಳಿಂದ ಆನಂದಸಾಗರದಲ್ಲಿ ಮುಳುಗಿಹೋದರು. ... ವರ್ಷಗಳು ದಾಟಿದ ಮೇಲೆ ಅವರು ಪೆನ್‌ಶನನ್ನು ಪಡೆದರು.

ಪೆನ್‌ಶನನ್ನು ಪಡೆದ ಮೇಲೆ ವೆಂಕೋಬರಾಯರು ಸಂತೋಷದಲ್ಲಿ ಇರುತ್ತಿದ್ದರು. ಅವರಿಗೆ ಮೇಲೆ ಹೇಳಿದಂತೆ ಯಾವ ಕೊರತೆಯೂ ಇದ್ದಿಲ್ಲ. ಈ ... ದಿ. ಬ. ವೆಂಕೋಬರಾಯರು ಸುಖಸಮಾಧಾನದಲ್ಲಿ, ಆನಂದದಲ್ಲಿ ... [illegible]

[illegible] ... ಪರಾಮರ್ಶೆ ಇತ್ತು, ಬೇಗನೆ ತನ್ನ ಮೇಲೆ ಹೇಗಾಯಿತು, ಅದೂ ತನಗೆ ಗೊತ್ತಿಲ್ಲದೆ ಹೇಗಾಯಿತು ಈ ಬಗೆ ಅವರಿಗೆ ಕಾಂಡಾ ವ್ಯಸನವಾಯಿತು. ವೆಂಕೋಬರಾಯರು ಎಂದರು:—ಸರಕಾರದ ಮೇಲೆ ಇಟ್ಟ ಭಯಭಕ್ತಿಯ ಪ್ರಸಾದವೆಂದು ನಾನು ಈ ಪದವಿಯನ್ನು ಸ್ವೀಕರಿಸಿದ್ದೆನು! ಇದಕ್ಕಾಗಿ ನಾನು ಎಷ್ಟೋ ಶ್ರಮ ಪಟ್ಟಿದ್ದೆನು! ಈ ಭೂಲೋಕದಲ್ಲಿ ನನಗೆ ಇಷ್ಟು ಪ್ರೀತಿಪಾತ್ರವಾದ ವಸ್ತುವು ಇನ್ನೊಂದು ಇದ್ದಿಲ್ಲ! ಆದುದರಿಂದಲೆ ನನ್ನ ಆ ಬಿಲ್ಲೆಯನ್ನು ಒಂದು ಉತ್ತಮವಾದ ಕವಾಟಿನಲ್ಲಿ ಇಟ್ಟಿದ್ದೆನು! ಆ ಬಹುಮಾನ ಪತ್ರವನ್ನು ಉಚ್ಚಸ್ಥಾನದಲ್ಲಿ ತೂಗಹಾಕಿದ್ದೆನು! ಅವೆರಡನ್ನು ನಾನು ಯಾಕೆ ಕಳುಹಿಸ ಕೊಡ್ಲಿ! ಆಗಾಂಧಿಗಳ ನೊನ್-ಕೊಒಪರೇಶನ ಗಲಾಟೆಯು ನನ್ನ ಇದುವರೆಗಿನ ಪರಿಶ್ರಮ, ಕೀರ್ತಿ, ವರ್ಚಸ್ಸು ಮುಂತಾದ ಅನೇಕ ಸಂಗತಿಗಳ ಮೇಲೆ ನೀರುಚೆಲ್ಲಿತಲ್ಲ! ನಾನು ಆ ಬಿಲ್ಲೆ ಮತ್ತು ಆ ಪತ್ರಿಕೆ ಇವುಗಳನ್ನು ಕಳುಹಿಸುವ ಮೊದಲು ಇನ್ನೊಮ್ಮೆ ಆಲೋಚನೆ ಮಾಡಬಾರದಿತ್ತೆ! ಇನ್ನೇನು ಮಾಡಲಿ! ಬಿಲ್ಲೆಯಿಂದ ಶೂನ್ಯವಾದ ಕವಾಟು, ಬಹುಮಾನ ಪತ್ರಿಕೆಯಿಂದ ರಹಿತವಾದ ಆ ಆಣಿ ಇವುಗಳನ್ನು ಹೇಗೆ ನೋಡಲಿ! ಈ ದುರ್ಬುದ್ಧಿಯು ನನಗೆ ಏಕೆ ಬಂತು? 'ಆ ಕವಾಟು ಮತ್ತು ಆ ಚೌಕಿಯು ಶೂನ್ಯಗೃಹದಂತೆ ಈಗ ಉದಾಸೀನವಾಗಿ ಇದ್ದೀತಲ್ಲವೆ? ಆ ಸ್ಥಾನವನ್ನು ಒಮ್ಮೆ ನೋಡೋಣ! ಎಂದು ಆಲೋಚಿಸಿದೊಡನೆ ವೆಂಕೋಬರಾಯರ ದೇಹವು ಆ ಭರದಲ್ಲಿ ವೇಗದಿಂದ ಅಲ್ಲಾಡಿತು.

ಕೂಡಲೆ ವೆಂಕೋಬರಾಯರು ಕಣ್ಣು ಬಿಚ್ಚಿದರು. ಸುತ್ತು ಮುತ್ತಲು ಕತ್ತಲೆ. ಇದರ ಅರ್ಥವೇನೆಂದು ಅವರಿಗೆ ಗೊತ್ತಾಗಲಿಲ್ಲ. ಕೂಡಲೆ ತುಕ್ರನನ್ನು ಎಬ್ಬಿಸಿ ದೀಪವನ್ನು ಹಚ್ಚಿಸಿ ಕವಾಟಿದ್ದಲ್ಲಿಗೆ ಹೋಗಿ ನೋಡಹತ್ತಿದರು. ಅವರ ಬಿರುದು ಬಿಲ್ಲೆಯು ತನ್ನ ಮಂದಿರದಲ್ಲಿ ಸ್ವಸ್ಥವಾಗಿತ್ತು. ಮತ್ತು ಬಹುಮಾನಪತ್ರವು ತೂಗಿಕೊಂಡಿತ್ತು. ಕಣ್ಣು ಬಿಚ್ಚಿಬಿಚ್ಚಿ ನೋಡಿದರು. ಎಲ್ಲವು ಸರಿಯಾಗಿದ್ದದ್ದು ಅವರಿಗೆ ಖಚಿತವಾಯಿತು; ಆಗ ತನಗೆ ಇಂಥ ಶೋಚನೀಯ ಸಂದರ್ಭದಲ್ಲಿ ತಂದು ಹಾಕಿದ್ದು ನಿದ್ದೆಯೊಳಗಿನ ಸ್ವಪ್ನಾವಸ್ಥೆಯೆಂಬುದು ಅವರಿಗೆ ದೃಢವಾಯಿತು.

ಆಗ ವೆಂಕೋಬರಾಯರು ಇನ್ನು ಮುಂದೆ ನಿದ್ದೆಯನ್ನು ಮಾಡಲೆ ಬಾರದೆಂದು ನಿಶ್ಚಯಿಸಿದರು. ಜಾಗೃತಾವಸ್ಥೆಯ ವ್ಯವಹಾರದಲ್ಲಿ ಯಾವ ಅನುಚಿತ ಸಂಗತಿಯನ್ನು ತಾನು ಮಾಡುವುದಿಲ್ಲವೊ ಮತ್ತು ಮಾಡಲಿಕ್ಕಿಲ್ಲವೊ ಅಂಥದ್ದನ್ನು, ಬುದ್ಧಿಯು ನಿದ್ದೆಯಲ್ಲಿ ಪರವಶವಾದ ಕಾರಣ ತಿಳಿಯದ ಥಕ್ಕನೆ ಮಾಡಬೇಕಾಗಿ ಬರುತ್ತದೆ. ಅದ್ದರಿಂದ ಇಂಥ ಅನಿಷ್ಟ ಸಂದರ್ಭವನ್ನು ತಪ್ಪಿಸಿಕೊಳ್ಳಲು ಉತ್ತಮ ಮಾರ್ಗವೆಂದರೆ ಇನ್ನು ಮುಂದೆ ನಿದ್ದೆಯೊಡನೆ ಅಸಹಕಾರಿತೆಯನ್ನು ಮಾಡುವುದೆ ಎಂದು ಅವರು ನಿಶ್ಚಯಿಸಿದರು! 'ಅವರು ಈಗ ತಮ್ಮ ಈ ನಿಶ್ಚಯದ ಮೇರೆಗೆ ನಡಕೊಳ್ಳುತ್ತಿದ್ದಾರೆ!

ಮೂಲ ಪಾಠಶಾಲೆಯ ಉಪಾಧ್ಯಾಯರುಗಳಿರಾ—

ದಕ್ಷಿಣ ಕನ್ನಡಾ ಜಿಲ್ಲೆಯಲ್ಲಿರುವ ಮೂಲ ಪಾಠಶಾಲೆ ಉಪಾಧ್ಯಾಯರುಗಳ ಒಂದು ಸಂಘವನ್ನು ಏರ್ಪಡಿಸಬೇಕೆಂಬ ಆಸೆಯು ನನ್ನನ್ನು ಬಹು ದಿವಸಗಳಿಂದ ಪೀಡಿಸುತ್ತಿರುವುದು. ಕೆಲವು ಬೋರ್ಡುಶಾಲೆಯ ಮಾಸ್ತರರು ಕಳದ ತಾ. ೨೨ರಲ್ಲಿ ಮಂಗಳೂರಿನಲ್ಲಿ ಸೇರಿ ಸೆಲರಿ ಸಬ್ ಕಮಿಟಿಯವರ ಕೂಡೆ ತಮ್ಮ ಹಾಲತು ವಾಲೆಯನ್ನು ಹೇಳಿಕೊಳ್ಳುವ ಬಗ್ಗೆ ತಯಾರಿಸಿದ ಡಿಪುಟೇಶನಿನಲ್ಲಿಯೂ ನಾನೊಬ್ಬನಾಗಿದ್ದೆ. ಡಿಪುಟೇಶನಿನ ಫಲವೇನಾಯಿತೆಂಬುದನ್ನು ಕಳದ ವಾರದ ಪತ್ರಿಕೆಯಲ್ಲಿ ತಿಳಿಸಿದ್ದೆ.

ಆ ದಿನ ಹಾಜರು ಇಲ್ಲದೆ ಇದ್ದ ಉಪಾಧ್ಯಾಯರುಗಳ ಸಲುವಾಗಿ ಇನ್ನೂ ಕೆಲವು ಮಾತುಗಳನ್ನು ಈ ಪತ್ರ ಮುಖಾಂತರ ತಿಳಿಸಲು ಎಡೆಕೊಟ್ಟದಕ್ಕೆ ನಾನೊಬ್ಬನೇ ಅಲ್ಲ, ಜಿಲ್ಲೆಯ ಎಲ್ಲಾ ಉಪಾಧ್ಯಾಯರುಗಳೂ ಪತ್ರಾಧಿಪರ ಉಪಕಾರವನ್ನು ಎಂದೆಂದಿಗೂ ಮರೆಯುವುದು ಎಂಬ ನನ್ನ ಭರವಸೆ.

ಸಪ್ಟಂಬರ ೨೨ನೇ ಸಾಯಂಕಾಲ ಹಾಜರು ಇದ್ದ ಉಪಾಧ್ಯಾಯರು ಕೂಡಿ ಈ ಕೆಳಗಿನ ಸಂಗತಿಗಳನ್ನು ನಿರ್ಣಯಿಸಿದೆವು

(೧) ತಿಂಗಳು ಒಂದರ ರೂ. ೪ ಸಂಬಳದಂತೆ ಮಂಜೂರಾದ ಭತ್ತೆಯು ಬಡ ಉಪಾಧ್ಯಾಯರ ಕೈಗೆ ಈ ವರೆಗೂ ಸಿಕ್ಕದೆ ಇದ್ದುದನ್ನು ನೋಡಿದರೆ ಪಟ್ಟಣವಾಸಿಗಳಾದ ಜಿಲ್ಲಾ ಪ್ರಮುಖರಿಗೆ ಹಳ್ಳಿಶಾಲೆ ಉಪಾಧ್ಯಾಯರುಗಳ ದುಸ್ಥಿತಿಯು ತಿಳಿಯಬರಲಿಲ್ಲವೆಂತ ಗ್ರಹಿಸಲು ಕಾರಣವಾಗುವುದರಿಂದ ಬಡ ಉಪಾಧ್ಯಾಯರಿಗೂ ಜಿಲ್ಲಾ ಪ್ರಮುಖರಿಗೂ ಪರಸ್ಪರ ಸಂಬಂಧ ವ ಪರಿಚಯ ಉಂಟು ಮಾಡಬೇಕು.

(೨) ಉಪಾಧ್ಯಾಯರುಗಳೆಲ್ಲರೂ ಆಗಾಗ್ಗೆ ಕೂಡಿ ತಮ್ಮ ಸ್ಥಿತಿಯನ್ನು ವೃದ್ಧಿಗೊಳಿಸಲು ತಕ್ಕ ಉಪಾಯವನ್ನು ಯೋಚಿಸುವುದು ಅಗತ್ಯ.

(೩) ಮುಂದಿನ ಜನಾಂಗದ ಏಳಿಗೆಗೆ ಕಾರಣಭೂತರಾದ ಮೂಲ ಪಾಠಶಾಲಾ ಉಪಾಧ್ಯಾಯರುಗಳ ವ್ಯಸನಕರವಾದ ದುರವಸ್ಥೆಯನ್ನು ಹೋಗಲಾಡಿಸಲು ಅಲ್ಲಲ್ಲಿ ಉಪಾಧ್ಯಾಯರುಗಳು ಒಟ್ಟಾಗಿ ಚರ್ಚಿಸಿ ತಮ್ಮ ಕೋರಿಕೆಗಳನ್ನು ನೆರವೇರಿಸುವ ಬಗ್ಗಾಗಿ ಪ್ರಜಾಪ್ರತಿನಿಧಿಗಳನ್ನಿಸಿಕೊಂಡು ಸರಕಾರದವರ ಕೂಡೆ ಪಂಚಾಯತಿವಹಿಸುವ ಸ್ಥಳೀಕ ಪ್ರಮುಖರಿಂದ ತಕ್ಕ ಸೂಚನೆಗಳನ್ನು ಪಡೆಯುವುದು ವ ಅಂಥ ಮಹಾನುಭಾವರ ದಯೆಯನ್ನು ಸಂಪಾದಿಸುವುದು. ಇತ್ಯಾದಿ.

(೪) ಈ ಉದ್ದೇಶಗಳನ್ನು ನೆರವೇರಿಸುವುದು ಬಹು ಸುಲಭವಾದುದಲ್ಲ ವ ಒಬ್ಬಿಬ್ಬರು ಈ ಕುರಿತು ಪ್ರಯತ್ನಿಸಿದರೂ ಸಾಲದು. ಈ ಬಗ್ಗಾಗಿ ಆ ದಿನ ಕೂಡಿದ ಉಪಾಧ್ಯಾಯರುಗಳ ಪೈಕಿ ಪ್ರತಿ ಒಂದು ತಾಲೂಕಿಗೆ ಒಬ್ಬಿಬ್ಬರನ್ನು ಕಾರ್ಯದರ್ಶಿಗಳಾಗಿ ಆರಿಸಿಯದೆ. ಸದರಿಯವರು ತಮ್ಮ ತಮ್ಮ ತಾಲೂಕುಗಳಲ್ಲಿ ಬೇರೆ ಮೂಲಪಾಠಶಾಲಾ ಉಪಾಧ್ಯಾಯರುಗಳ ಸಂಘವನ್ನು ಏರ್ಪಡಿಸಲು ಪ್ರಯತ್ನಿಸಬೇಕು. ಈ ಸಂಘವು ತಿಂಗಳಿಗೊಮ್ಮೆ ಪ್ರತಿ ತಾಲೂಕಿನ ಮುಖ್ಯ ಪಟ್ಟಣದಲ್ಲಿ ಕೂಡುತ್ತಿದ್ದರೆ ಉತ್ತಮ. ಆಯಾಯ ತಾಲೂಕಿನ ಉಪಾಧ್ಯಾಯರುಗಳ ಏಳಿಗೆಗೆ ಬೇಕಾದ ಎಲ್ಲಾ ಸಂಗತಿಗಳನ್ನು ಕುರಿತು ಚರ್ಚಿಸಿ ನಿರ್ಧರಿಸಿದ ಸಂಗತಿಗಳನ್ನು 'ಅಂಥಿನ ಪ್ರೊಸಿಡಿಂಗ್ಸ್ ರೂಪದಲ್ಲಿ' ತಯಾರು ಮಾಡಿ ಒಂದು ಪ್ರತಿಯನ್ನು ಆಯಾಯ ರೇಂಜಿನ ಸ್ಕೂಲ ಸಬ್ ಅಸಿಸ್ಟಾಂಟ್ ಇನಸ್ಪೆಕ್ಟರರಿಗೂ ಇನ್ನೊಂದನ್ನು ಪ್ರೆಸಿಡೆಂಟರಿಗೆ ಕಳುಹಿಸುವುದಲ್ಲದೆ ಮತ್ತೊಂದು ಪ್ರತಿಯನ್ನು ಆ ದಿವಸ ಜಿಲ್ಲಾ ಕಾರ್ಯದರ್ಶಿಯಾಗಿ ಚುನಾಯಿಸಲ್ಪಟ್ಟ ನನಗೂ ಕಳುಹಿಸಬೇಕೆಂತಲೂ ನಿರ್ಣಯಿಸಲ್ಪಟ್ಟಿತು.

(೫) ಪ್ರತಿ ಒಂದು ತಾಲೂಕಿನ ಕಾರ್ಯದರ್ಶಿಗಳು ತಮ್ಮ ತಮ್ಮ ತಾಲೂಕು ಸಂಘಗಳನ್ನು ಶೀಘ್ರವಾಗಿ ಸ್ಥಾಪಿಸಲು ಸಾಕಷ್ಟು ಪ್ರಯತ್ನ ಮಾಡಲೇ ಬೇಕು. ತಾಲೂಕು ಸಂಘಗಳು ಬಲವಾಗಿ ... ಜಿಲ್ಲಾ ಸಂಘವನ್ನು ಕೂಡಲೇ ಆರಂಭಿಸುವುದು ಯುಕ್ತವಾದುದಲ್ಲ ಆದುದರಿಂದ ಅದನ್ನು ಸ್ಥಗಿತದಲ್ಲಿ ತಾಲೂಕು ಸಂಘಗಳನ್ನು ... [illegible]

[illegible] ... ಗೌರವದ ... [illegible] ... ಸ್ವಲ್ಪ ಚಿಂತಿಸಿ ... [illegible]

... ಸಂಘವನ್ನು ... ತಾಲೂಕು ... ಉಪಾಧ್ಯಾಯರುಗಳು ... ಮೀಟಿಂಗ್ ಕೊಡಬೇಕೆಂದು ಅಪೇಕ್ಷಿಸಿಯದೆ.

ಉಪಾಧ್ಯಾಯರುಗಳೆಲ್ಲರೂ ತಪ್ಪದೆ ಬರಬೇಕಾಗಿ ಬೇಡುತ್ತೇನೆ, ಅಂತು ಈ ತಾಲೂಕಿನ ಎಲ್ಲಾ ಶಾಲೆಗಳ ಮುಖ್ಯ ಉಪಾಧ್ಯಾಯರುಗಳು ಹಿತವಾಗಿ ಬರುವರಾಗಿ ನಂಬಿದ್ದೇನೆ.

ಇಂತಿ ನಿಮ್ಮೆಲ್ಲರ ವಿಧೇಯ ಸೇವಕ.

A. N. HEBBAR

Head Master,

4—10—'20. Barkur.

ಮಂಗಳೂರ ತಾಲೂಕು ಬೋರ್ಡಿಗೆ ಉಮೇದ್ವಾರರು.

ಮಂಗಳೂರು ತಾಲೂಕು ಬೋರ್ಡಿಗೆ ಮಂಗಳೂರು ಸರ್ಕಲಿನಿಂದ ವಕೀಲರು ಸಂಜೀವರಾಯರು ಪೊಟರರಿಗೆ ಕಳುಹಿಸುವ ವಿನಂತಿ ಪತ್ರವನ್ನು ನಮ್ಮ ಬಳಿಗೆ ಕಳುಹಿಸಿದ್ದಾರೆ. ಅದರಲ್ಲಿ ತಾನು ೧೦೦ ರೂಪಾಯಿ ತೀರ್ವೆಕೊಡುವ ವರ್ಗದಾರನಾಗಿದ್ದು, ಕೃಷಿ ಇಲಾಖೆಯವರ ಹೊಸ ಕ್ರಮಗಳನ್ನು ಪ್ರಚುರ ಪಡಿಸುವ ಉದ್ದೇಶ್ಯ ತನ್ನ ಸ್ವಂತ ಭೂಮಿಯಲ್ಲಿ ಕಬ್ಬು, ಭತ್ತ ವಗೈರೆ ಸಾಗುವಳಿ ಮಾಡುತ್ತೇನೆಂದೂ, ತಾನು ಮದ್ರಾಸು ಎಂಜನಿಯರಿಂಗ್ ಕಾಲೇಜಿನಲ್ಲಿ ಕಲಿತು ಎಂಜನಿಯರ ಇಲಾಖೆಗಳಲ್ಲಿ ಕೆಲವು ವರ್ಷಗಳ ಹಿಂದೆ ವರೆಗೆ ಉದ್ಯೋಗದಲ್ಲಿದ್ದುದರಿಂದ ಆರಿವು ಮಾಹಿತಿಯು ತಾಲೂಕು ವ ಡಿಸ್ಟ್ರಿಕ್ಟ ಬೋರ್ಡುಗಳು ಮಾಡಿಸುವ ಕಾಮಗಾರಿಗಳಲ್ಲಿಯೂ, ಹೊಸ ರಸ್ತೆಗಳು, ಶಾಲೆಗಳು ಏರ್ಪಡಿಸುವುದರಲ್ಲಿಯೂ ಪ್ರಯೋಜನಕ್ಕೆ ಬರ್ಬಹುದೆಂಬ ನಂಬಿಕೆಯಿಂದ ತಾನು ಮೆಂಬರನಾಗುವರೆ ಉಮೇದ್ವಾರನಾಗಿದ್ದೇನೆಂತಲೂ ಬರೆಯುತ್ತಾರೆ. ಇಂಥವರು ತಾಲೂಕು ಬೋರ್ಡಿನಲ್ಲಿ ಮೆಂಬರರಾಗಿ ಬರುವುದು ಪ್ರಯೋಜನಕಾರಿಯಾದುದಾದ್ದರಿಂದ ಇವರು ಯಶಸ್ವಿಯಾಗಲೆಂದು ನಾವು ಬೇರೆ ಹೇಳಬೇಕಾದ್ದಿಲ್ಲ.

ವಿನಂತಿ.

ಮಹನೀಯರೇ,

ನಮ್ಮ 'ವಿದ್ಯಾದಾಯಿನಿ' ಶಾಲೆಯಲ್ಲಿ ಎಂದಿನಂತೆ ಈ ವರ್ಷವೂ ಬರುವ ನವರಾತ್ರಿಗೆ 'ದಸರಾ ಮಹೋತ್ಸವ, ಶಾರದಾ ಪೂಜೆ'ಗಳನ್ನು ಜರಗಿಸಬೇಕೆಂದು ನಿಶ್ಚಯಿಸಿರುವೆವು. ತಾ. ೧೮ನೇ ಮೂಲಾ ನಕ್ಷತ್ರ ದಿನ ಶಾರದಾ ಸ್ಥಾಪನೆಯಾಗಿ ಮಹಾನವಮಿ ವರೆಗೆ ಪ್ರಾತಃ ಸಾಯಂಕಾಲಗಳಲ್ಲಿ ಶ್ರೀ ಶಾರದಾ ಪೂಜೆ, ಮಹಾನವಮಿ ದಿನ ತತ್ಸಂಬಂಧವಾದ ಮಹಾ ಸಭೆ, ಇವೆಲ್ಲಾ ಮೊದಲಾದ ಕಾರ್ಯಕ್ರಮಗಳು ನೆರವೇರಲಿರುತ್ತವೆ. ಇವೇ ಕಾರ್ಯಕ್ರಮಗಳಿಗೂ ತಾವೆಲ್ಲರೂ ಸಕಾಲಗಳಲ್ಲಿ ದಯಮಾಡಿ ಬರುವುದು ಮಾತ್ರವಲ್ಲದೆ ಮಹಾ ಸಭೆಗಂತೂ ಅಗತ್ಯ ಚಿತ್ತೈಸಿ ನಮ್ಮನ್ನು ಪ್ರೋತ್ಸಾಹಗೊಳಿಸಿ, ಶ್ರೀ ಶಾರದಾ ಅನುಗ್ರಹಕ್ಕೆ ಪಾತ್ರರಾಗಬೇಕೆಂದು ಕೋರುವ,

ತಮ್ಮ ವಿಧೇಯ ಮಿತ್ರ

H. Damodar Rao.

ಹೊಸಬೆಟ್ಟು, *Ag. Hd. Master.*

ಪ್ರಕಟಣೆ.

ಪುತ್ತೂರು ಸೆಂಟ್ರಲ್ ಬೇಂಕಿನಲ್ಲಿ ಪಾಲು ಪಡೆದ ಖಾಸಗಿ ಮೆಂಬರರು ಯಾರಾದರೂ ತಮ್ಮ ಪಾಲುಗಳನ್ನು ಟ್ರನ್ಸ್‌ಫರ್ ಮಾಡಲು ಇಚ್ಛಿಸುವಲ್ಲಿ ಅಂಥಾ ಪಾಲುಗಳನ್ನು ಮಂಗಳೂರು ಸರಕಾರಿ ನವುಕರರ ಸಂಘದವರೂ ಮಂಗಳೂರು ಟವನ್ ಬೇಂಕಿನವರೂ ಆ ಪಾಲುಗಳ ಸಂಪೂರ್ಣ ಮೌಲ್ಯವನ್ನು ತೆತ್ತು ಟ್ರನ್ಸ್‌ಫರ್ ಮಾಡಿಕೊಳ್ಳಲು ಸಾಧ್ಯವಿದೆ. ಈ ಕುರಿತು ಈ ಕೆಳಗಿನ ವಿಳಾಸಕ್ಕೆ ಬರೆದು ಅನುಭವ ಪಡೆಯಬಹುದು.

ಉ. ಮಂಗೇಶರಾವ್

ಕಾರ್ಯದರ್ಶಿ, ಮಂಗಳೂರು ತಾಲೂಕು ಯೂನಿಯನ್.

ದಿ ಕೆನರಾ ಕೆಥೋಲಿಕ್ ಇಕೊನೊಮಿಕ್ ಲೀಗ್,

ಮಂಗಳೂರು, ದ. ಕ.

ನೋಟಿಸು.

ಕೆನರಾ ಕೆಥೋಲಿಕರಲ್ಲಿರುವ ಕಷ್ಟಸಂಕಷ್ಟಗಳನ್ನು ತಿಳಿದುಕೊಂಡು ಅವನ್ನು ತಕ್ಕುದಾದ ಅಧಿಕಾರಿಗಳ ಗಣನೆಗೆ ತಂದು ಅವುಗಳಿಂದ ನಿವೃತ್ತಿ ಪಡಿಯುವ ಮುಖ್ಯ ಉದ್ದೇಶ್ಯದಿಂದ, ಮೇಲಿನ ಸಂಘವು ಸ್ಥಾಪಿಸಲ್ಪಡಲಿಕ್ಕಾಗಿಯದೆ. ಈ ಸಂಘದ ಉದ್ದೇಶ್ಯಗಳಲ್ಲಿ ಸೇರಿಸಬಹುದಾದ ಬೇರೆ ಸಂಗತಿಗಳೂ ನಡತೆ ಬಗ್ಯೆ ಅವಶ್ಯವಿರುವ ನಿಯಮಗಳೂ ನಿರ್ಣಯಿಸುವರೆ ಈ ಏರ್ಪಾಟಿನ ಮೇಲೆ ವಾತ್ಸಲ್ಯವಿರುವ ಕೆನರಾ ಕೆಥೋಲಿಕರ ಒಂದು ಸಭೆಯು ಇದೇ ಬರುವ ಆದಿತ್ಯವಾರ ತಾ. 17 ಕ್ಕೆ ಬೆಳಿಗ್ಯೆ 9-30 ಘಂಟೆ ಸಮಯಕ್ಕೆ ಕೊಡಿಯಾಲ್ ಬೈಲ್ ಸೈಂಟ್ ಮೇರಿಸ್ ಧರ್ಮಗುರು ಹಾಸ್ಟೆಲಿನಲ್ಲಿ ಕೂಡುವದು. ಇದಕ್ಕೆ ಕೈಕೊಡಲು ಅಪೇಕ್ಷೆವುಳ್ಳವರ ಬರೋಣವು ನಿರೀಕ್ಷಿಸಲಾಗಿಯದೆ.

ಎಸ್. ಇ. ಡಿ'ಕೂಂಞಾ, ಸೆಕ್ರೆಟರಿ.

ಮಂಗಳೂರು, ಪ್ರೊವಿಜನಲ್ ಕಮಿಟಿ.

ತಾ. 14—10—1920.

ಸಹಕಾರಿಯ ಸಹಕಾರ.

(ವಿಚಾರಿಯು ಆಗಲೇ ಯೂನಿಯನ್ ಮಹಾಸಭೆ ಮುಗಿದು ಮನೆಗೆ [illegible] ಸ್ವಲ್ಪ ಹೊತ್ತಿನ ಮೇಲೆ ಬಂದನು. ಅಷ್ಟರಲ್ಲಿ ವಿಚಾರಿಯು ಎದುರು ಬಂದು)—

ವಿಚಾರಿ—ಬನ್ನಿರಿ, ಮಹಾಸಭೆ ಹ್ಯಾಗೆ ನಡೆಯಿತು?

ಸಹಕಾರಿ—ಸ್ವಾಮಿ, ಮಹಾಸಭೆ ಆಗಲೇ ಯೂನಿಯನ್ ಮಹಾಸಭೆ ಮುಗಿದು ಬಂದೆ. ಆ ಯೂನಿಯನ್ನಿನ ಕೆಲಸ, ಸೆಂಟ್ರಲ್ ಬೇಂಕಿನ ಕೆಲಸ, ಅಂದರೆ ನಮ್ಮ ಸಹಕಾರಿ ಸಂಘಗಳಿಗೆ ಪ್ರಾಣ [illegible].

ವಿಚಾರಿ—ಸ್ವಾಮಿ! ತಮ್ಮ ಮಾತಿನ ಅರ್ಥವಾಗಲಿಲ್ಲವಲ್ಲ! ಯೂನಿಯನ್ ಅಂದರೇನು, ಸೆಂಟ್ರಲ್ ಬೇಂಕು ಅಂದರೇನು, ಸಹಕಾರಿ ಸಂಘವೆಂದರೇನು, ದೊಡ್ಡ ದೊಡ್ಡ ಶಬ್ದಗಳನ್ನು ಎತ್ತುತ್ತಿರಲ್ಲ!

ಸಹಕಾರಿ—ನಿಮ್ಮ ಗ್ರಾಮದಲ್ಲಿ ಸಹಕಾರಿ ಸಂಘವಿಲ್ಲವೇ?

ವಿಚಾರಿ—ಸಹಕಾರಿ ಸಂಘವು ನಮ್ಮ ಗ್ರಾಮದಲ್ಲಿಲ್ಲ.

ಸಹಕಾರಿ—ಹಾಗಾದರೆ ನೀವು ಸಂಘವನ್ನು ನಿಮ್ಮ ಹಳ್ಳಿಯಲ್ಲಿ ಮಾಡಲು ಯತ್ನಿಸಬೇಡಿರಿ. ಈಗ ನಾವು ನಡೆಯುವ ಕಷ್ಟವೇ ಸಾಕು.

ವಿಚಾರಿ—ಅದೇನು? ಸಹಕಾರಿ ಸಂಘದಿಂದ ಕಷ್ಟ ಬಂತೇ?

ಸಹಕಾರಿ—ಅಲ್ಲ, ಅಲ್ಲ, ಇಲ್ಲಿ ಸ್ವಲ್ಪ ಕುಳಿತುಕೊಳ್ಳಿರಿ. ನಿಮಗೆ ಅದರ ಚರಿತ್ರೆಯನ್ನು ಹೇಳುತ್ತೇನೆ.

(ಇಬ್ಬರೂ ಸ್ವಸ್ಥಾನದಲ್ಲಿ ಕುಳಿತುಕೊಂಡರು).

ಬೊಲಶೆವಿಕರು—ಇವರು ಪೋಲೆಂಡಿನೊಡನೆ ಯುದ್ಧ ನಿಲ್ಲಿಸಿ ರಾಜಕೀಯ ಕಲಹಗಳ ದೆಸೆಯಿಂದ ತೊರೆದ ಮಧ್ಯ ಏಷ್ಯದಲ್ಲಿ ತಮ್ಮ ಚಟುವಟಿಕೆಯನ್ನು ತುಂಬಾ ತೋರಿಸುತ್ತಿದ್ದಾರೆ. ಬೊಖಾರಾದ ಅಮೀರರನ್ನು ಪಟ್ಟದಿಂದಿಳಿಸಿ ಆ ಪ್ರದೇಶವನ್ನು ವಶಮಾಡಿಕೊಂಡದ್ದಲ್ಲದೆ ಈಗ ಅಫಘಾನಿಸ್ಥಾನದ ಕಡೆಗೆ ಮುಂದೊ ತ್ತುತ್ತಿದ್ದಾರೆ. ತಮ್ಮ ಸೈನ್ಯ ಸರಂಜಾಮು ಅವರ ದೇಶವನ್ನು ದಾಟಿ ಮುಂದೊತ್ತುವದಕ್ಕೆ ಅಡ್ಡಿಪಡಿಸಬಾರದೆಂದು ಅಮೀರನಿಗೆ ಬೊಲಶೆವಿಕರು ತಿಳಿಸಿದ್ದಾರೆ. ಜಮಾಲ್ ಪಾಶಾ ಎಂಬವರು ಅಫಘಾನಿಸ್ಥಾನಕ್ಕೆ ಬರುವ ಸೈನ್ಯದ ನಾಯಕರಾಗುವರು ಎಂಬದಾಗಿ ವದಂತಿ ಇದೆ. ಅಮೀರರ ಕಡೆಯಿಂದ ವಕೀಲರು ಈ ಬೊಲಶೆವಿಕ ಸೈನ್ಯದ ನಾಯಕರಿಗೆ ಭೇಟಿಮಾಡಲು ಹೋಗಿರುವರಂತೆ.

ಪೋಲೆಂಡ—ಪೋಲೆಂಡವು ಈ ಯುದ್ಧದಲ್ಲಿ ತನ್ನ ಸ್ವಾತಂತ್ರ್ಯ ಸಿಕ್ಕಿದ್ದರಿಂದ ತೃಪ್ತಿಹೊಂದದೆ ಲಿಥುವೇನಿಯದ ರಾಜಧಾನಿಯನ್ನು ವಶ ಮಾಡಿಕೊಂಡಿದೆ. ಇದಕ್ಕೆ ಲಿಥುವೇನಿಯದವರು ಆಕ್ಷೇಪಿಸಿ ವಿಶ್ವ ಪಕ್ಷದವರಿಗೆ ತಿಳಿಸಿದ್ದಾರೆ.

ಐರ್ಲೆಂಡ—ಇವರ ಅಸ್ವಸ್ಥತೆಯು ಇನ್ನೂ ನಿಲ್ಲಲಿಲ್ಲ. ಕೋರ್ಕದ ಲೋರ್ಡ ಮೇಯರ್ (ಮುನ್ಸಿಪಲ್ ಚೇರ್ಮನರು) ಆಗಿದ್ದ ಮೇಕ್‌ಸ್ವಿನೀ ೭೫ ದಿವಸ ಬ್ರಿಟಿಷರ ಜೈಲಿನಲ್ಲಿ ಉಪವಾಸವಿದ್ದು ಈಗ ಮರಣ ಶಯ್ಯೆಯಲ್ಲಿ ಪವಡಿಸಿದರು.

ಗ್ರೀಸ್—ಈ ದೇಶದ ದೊರೆಗೆ ಒಂದು ಮಂಗನು ಕಚ್ಚಿ ಅದರ ವಿಷ ದಿಂದ ಅವರು ಪ್ರಾಣಾಂತಿಕ ಕಾಯಿಲೆಯಲ್ಲಿದ್ದಾರೆ.

ಒಳದೇಶ ವರ್ತಮಾನ.

ಸರಕಾರಿ ಕ್ವಿನೀನು—ಮದ್ರಾಸಿನ ಸಿಂಕೋನಾ ಇಲಾಖೆಯಿಂದ ಮದ್ರಾಸು ಸಂಸ್ಥಾನದೊಳಗಿನ ಆಸ್ಪತ್ರೆಗಳಿಗೆ ಒದಗಿಸುತ್ತಿದ್ದ ಕ್ವಿನೀನಿಗೆ ಬೆಲೆಯನ್ನು ಪೌಂಡಿಗೆ ೩೩ ರೂಪಾಯಿಯಿಂದ ೧೮ಕ್ಕೆ ಇದೇ ಒಕ್ಟೋಬರ್ ೧ನೇ ತಾರೀಕಿಗೆ ಇಳಿಸಿಯದೆ ಎಂದು ಪ್ರಕಟನೆ ಇದೆ.

ಪೈರುಗಳ ಸ್ಥಿತಿ—ಗತ ವರ್ಷದಲ್ಲಿ ಸಪ್ಟಂಬರ್ ಆಖೈರ್ ಒಳಗೆ ೬೧೫,೬೦೦ ಎಕ್ರೆ ವಿಸ್ತೀರ್ಣದಲ್ಲಿ ಎಳ್ಳನ್ನು ಬಿತ್ತಿದ್ದು ಮಳೆಯ ಸಹಾಯ ಕಡಿಮೆಯಾದ್ದರಿಂದ ಈ ವರ್ಷ ಬರೆ ೪೯೯,೦೦೦ ಎಕ್ರೆ ಸ್ಥಳದಲ್ಲಿ ಮಾತ್ರ ಅದನ್ನು ಬಿತ್ತಿದ್ದಾರೆ ಎಂದು ತಿಳಿಯುತ್ತೇವೆ. ಆದರೆ ಈ ಜಿಲ್ಲೆಯಲ್ಲಿ ಮಾತ್ರ ೧೯೧೯ನೇ ಇಸವಿಯಲ್ಲಿ ೫೦೦ ಎಕ್ರೆಗೆ ಬಿತ್ತಿದ್ದು ಈ ವರ್ಷ ೧೧೧೦೦ ಎಕ್ರೆಯಲ್ಲಿ ಎಳ್ಳನ್ನು ಬಿತ್ತಿರುವರಂತೆ. ಇಡೀ ಸಂಸ್ಥಾನದಲ್ಲಿ ಕಬ್ಬಿನ ಪೈರು ಸುಮಾರು ೪೩೦೦ ಎಕ್ರೆ ಹೆಚ್ಚಿಗೆ ಸ್ಥಳದಲ್ಲಿ ಬಿತ್ತಲ್ಪಟ್ಟಿದೆ; ಅಂದರೆ ೯,೩೦೦ ಎಕ್ರೆಯಲ್ಲಿ ಪೈರು ಇದೆ. ಬತ್ತದ ಪೈರಿನಲ್ಲಿಯೂ ೭೦೬,೦೦೦ ಎಕ್ರೆ ವಿಸ್ತೀರ್ಣ ಕಡಿಮೆಯಾಗಿದೆ; ಆದರೆ ನಮ್ಮ ಜಿಲ್ಲೆಯಲ್ಲಿ ೫,೦೦೦ ಎಕ್ರೆ ಹೆಚ್ಚಿದೆ. ನೆಲಗಡಲೆಯನ್ನು ೧೩೩,೨೦೦ ಎಕ್ರೆ ಹೆಚ್ಚು ವಿಸ್ತಾರದಲ್ಲಿ ಪೈರು ಮಾಡಿದೆ. ಹತ್ತಿಯ ಪೈರು ೫೫,೪೦೦ ಎಕ್ರೆ ಕಡಿಮೆಯಾಗಿದೆ.

ಅಲೀಘಡದ ವಿದ್ಯಾರ್ಥಿಗಳ ಚಳವಳಿ—ಅಲೀಘಡ ಕೊಲೇಜಿನ ಮುಸಲ್ಮಾನ ವಿದ್ಯಾರ್ಥಿಗಳು ಮಹಾತ್ಮಾ ಗಾಂಧಿ, ಶೌಕತ ಅಲ್ಲಿ, ಮಹಮ್ಮದ ಅಲ್ಲಿ ಇವರ ಬೋಧನೆಯಿಂದ ಉನ್ನತ್ತರಾಗಿ ಆ ಕೊಲೇಜಿನ ಅಧಿಕಾರಿಗಳು ಸರಕಾರ ಸಹಾಯ ಮತ್ತು ಮಂಜೂರಾತಿಯನ್ನು ಧಿಕ್ಕರಿಸಬೇಕೆಂದು ಸಭೆ ಸೇರಿ ಸೂಚಿಸಿದಾಗ ಪ್ರಿನ್ಸಿಪಾಲರು ವಿವಿಧ ರೀತಿಯಿಂದ ಸಮಾಧಾನಿಸಿದರೂ ಬಹಳ ಮಟ್ಟಿಗೆ ಸಾಧ್ಯವಾಗಲಿಲ್ಲ. ಈಗ ಮಹಮ್ಮದ ಅಲ್ಲಿಯವರೇ ಸ್ವತಃ ಪ್ರಿನ್ಸಿಪಾಲರಾಗಿ ಒಂದು ನೆಟ ನಲ್ [illegible] ಕೊಲೇಜನ್ನು ಸ್ಥಾಪಿಸಲು ನಿಶ್ಚೈಸಿ ಚಂದಾ ಎತ್ತಲಿಕ್ಕೆ ಮವರು. ಅನೇಕ ವಿದ್ಯಾರ್ಥಿಗಳ ಹೆತ್ತವರೂ ರಕ್ಷಕರೂ ತಮ್ಮ ಮಕ್ಕಳನ್ನು ಮನೆಗಾದರೂ ಕರಯಿಸಿಕೊಳ್ಳಬೇಕೆಂದು ಅಲೀಘಡಕ್ಕೆ ಪತ್ರಮುಖೇನ ತಿಳಿಸಿದ್ದಾರೆ.

ಬಕ್ಕಿಂಗ್ಹಾಮ ಮಿಲ್ಲಿನವರ ಮುಷ್ಕರ—ಮದ್ರಾಸು ಶಹರಿನಲ್ಲಿ ಇರುವ ಈ ಕಾರ್ಖಾನೆಯ ನೌಕರರಲ್ಲಿ ಕೆಲವರಿಗೆ ಸಿಗಬೇಕಾದ ಬಡ್ತಿ ಸಿಗಲಿಲ್ಲವೆಂಬ ಕಾರಣದಿಂದ ಅಸಮಾಧಾನವುಂಟಾಯಿತು. ಆ ಖಾಲಿ ಇರುವದನ್ನು ಬೇರೆಯವರಿಗೆ ಕೊಟ್ಟಾಗ ಅವರು ಅಂಗೀಕರಿಸಲು ಸಮ್ಮತಿಸಲಿಲ್ಲ. ಇದಕ್ಕಾಗಿ ಅವರನ್ನು ಕೆಲಸದಿಂದ ತೆಗೆದುಹಾಕಲು, ಹಂಗಾಮಿ 'ವೀವಿಂಗ್' ಮಾಸ್ತರ್ ಬೆಂಟ್ಲಿಯವರ ಈ ಕಾರ್ಯಕ್ರಮವನ್ನು ಸಹಿಸಲಾರದೆ ಮಜೂರರು ಒಟ್ಟುಕೂಡಿ ಅವರಿಗೆ ಮುತ್ತಿಗೆಹಾಕಿ ಅವರ ಮೇಲೆ ಕೈಗೆ ಸಿಕ್ಕಿದ್ದನ್ನು ಎಸೆಯ ತೊಡಗಲು, ಬೆಂಟ್ಲಿ ತಮ್ಮ ಕೈಯಲ್ಲಿದ್ದ ಪಿಸ್ತೂಲನ್ನು ಎತ್ತಿದರು. ಅದನ್ನು ಜನರು ಕಸುಕೊಂಡರು. ಆ. ಪೋಲೀಸ್ [illegible] ಅವರು ಅಲ್ಲಿಗೆ ಬಂದು ಗಲಾಟೆ ನಿಲ್ಲಿಸಿದರು. ಈಗ ಈ ಮುಷ್ಕರಗಾರರನ್ನು ಕಾರ್ಖಾನೆಯೊಳಗೆ ಬಾರದಂತೆ ಮಾಡಿದ್ದಾರೆ.

ಲಾಹೋರಿನ ವಿದ್ಯಾರ್ಥಿಗಳು—ಇಲ್ಲಿಯ ಕೊಲೇಜುಗಳ ವಿದ್ಯಾರ್ಥಿಗಳಲ್ಲಿ ಸುಮಾರು ೧೦೦೦ ಮಂದಿ ಗೋಲ್ಡ ಎಂಬಲ್ಲಿ ಸಭೆ ಸೇರಿ ಅಸಹಕಾರಿತೆಯನ್ನು ಕುರಿತು ಚರ್ಚಿಸಿ, ಡಾ! ಕಿಚಲೂ, ಶ್ರೀಮತಿ ಸರಳಾದೇವಿ ಚೌಧುರಾಣಿ, ಶ್ರೀಯುತ ಪಂಡಿತ ರಾಮಭಜದತ್ತ ಮುಂತಾದ ಮುಖಂಡರೊಂದಿಗೆ ದೊಡ್ಡ ಮೆರವಣಿಗೆಯಾಗಿ ಹೋಗಿ [illegible] [illegible]

[illegible] ಯುವಕರು ಅಧಿಕಾರಿಗಳ [illegible] ಪ್ರತಿನಿಧಿಗಳಿಗೆ ಅಸಹಕಾರತೆಯನ್ನು [illegible] ಸಾಧಿಸಿದರು.

ಸೇವಾ ಲೀಗ್—ಇವರ ಪದ್ಧತಿಯು ಈ ಕಡೆಯಲ್ಲಿ ಅಸಹಕಾರಿತೆಯನ್ನು ಕೈಕೊಳ್ಳುವದಾಗಿ ಸುಮಾರು ೨೦೦೦ ಪ್ರತಿನಿಧಿಗಳೂ ೫೦೦೦ ಪ್ರೇಕ್ಷಕರೂ ಇದ್ದು ಠರಾವು ಮಾಡಿದರು. ಪ್ರೇಕ್ಷಕರಲ್ಲಿ ಯುದ್ಧ ಕ್ಷೇತ್ರದಿಂದ ನಿವೃತ್ತರಾದ ಜನಗಳೂ ಇದ್ದರಂತೆ. ಕೆಲವರು ತಮಗೆ ಸಿಕ್ಕಿದ ಬಿರುದುಗಳನ್ನು ಸರಕಾರದ ಬಳಿಗೆ ಹಿಂದಕ್ಕೆ ಕಳುಹಿಸಲು ತೀರ್ಮಾನ ನಡಿಸಿರುವರಂತೆ.

ಮದರಾಸಾ-ಇ-ಆಜಾಮ್ ಕೋಲೇಜು—ಮದರಾಸಿನ ಮುಸಲ್ಮಾನರ ಬಗ್ಗೆ ಏರ್ಪಡಿಸಿದ ಕೋಲೇಜಿನ ವಿದ್ಯಾರ್ಥಿಗಳು ಅಸಹಕಾರಿತೆಯನ್ನು ಕುರಿತು [illegible] ಪ್ರಿನ್ಸಿಪಾಲರು [illegible] 'ನಿಮಗೆ ಅಲೀಘಡದ ನಿಮ್ಮ ಬಂಧುಗಳಂತೆ ವರ್ತಿಸಬೇಕೆಂದಿದ್ದರೆ ಬೇಗನೆ ತಿಳಿಸಿರಿ. ಈ ಚಳವಳಿಯಲ್ಲಿ ಕೈಹಾಕುವದು ಸರಿಯಲ್ಲ. ಇದರಿಂದ ನಿಮಗೆ ಒಂದು ಬಗೆಯ ಲಾಂಛನವೇ ಬಂದೀತಲ್ಲದೆ ಬೇರೇನೂ ಇಲ್ಲ' ಎಂದು ಬೋಧಿಸಿದರು. ತರುಣರು ಕೂಡಲೆ ತಮ್ಮ ಧರ್ಮಗುರುಗಳೂ ಮಹಮ್ಮದಲ್ಲಿ ಮೊದಲಾದವರೂ ಬಂದು ನಿಶ್ಚಿತ ಅಭಿಪ್ರಾಯವನ್ನು ಹೇಳಲು ಬರುತ್ತೇವೆಂದಿದ್ದಕ್ಕೆ ಅಷ್ಟು ಸಮಯ ಕೊಡ ಲಾರೆನೆಂದು ಪ್ರಿನ್ಸಿಪಾಲರು ಹೇಳಿದರಂತೆ. ಈಗ ತತ್ಕಾಲದಲ್ಲಿ ತರುಣರು ಯಾವುದೊಂದನ್ನು ಇತ್ಯರ್ಥಿಸಲಿಲ್ಲವೆಂದು ತಿಳಿದುಬರುತ್ತದೆ.

ದಕ್ಷಿಣ ಕನ್ನಡ.

ಸ್ವೀಕಾರದ ಪ್ರಕಟಣೆಗಳು.

'ಕರೋಡಿ ಸುಬ್ಬರಾಯರ ಶೀಘ್ರಬೋಧನೆ' ಎಂಬ ಲೇಖನವು ಪ್ರಕಟನೆಗೆ ಬಂದಿರುವುದು. ಅನ್ಯ ಪತ್ರಿಕೆಗಳಲ್ಲಿ ಬಂದ ಲೇಖನಕ್ಕೆ ಈ ಪತ್ರಿಕೆಯಲ್ಲಿ ಪ್ರತ್ಯುತ್ತರವನ್ನು ಪ್ರಕಟಿಸಲು ನಾವು ಕೈಕೊಡುವುದಿಲ್ಲ, ಅದೇ ಪತ್ರಿಕೆಗಳಲ್ಲಿ ಆ ಉತ್ತರವನ್ನು ಪ್ರಕಟಿಸಲು ಯತ್ನಿಸುವದು ಯುಕ್ತ. (ಪತ್ರಕರ್ತ)

ತಿದ್ದುಪಡಿ:—ನಮ್ಮ ೮—೧೦—೨೦ನೇ ತಾರೀಕಿನ ಸಂಚಿಕೆಯಲ್ಲಿ ೮ನೆ ಪಾನಿನಲ್ಲಿ ಕಾರ್ಕಳ ತಾಲೂಕು ಮಾಗಣೆ ತಾನುಭಾಗದ ಪಂಕ್ತಿನ ಪ್ರೊಸಿಡಿಂಗ್ಸಿನ (h) ಕಲಮಿನಲ್ಲಿ 'ಉದ್ಯೋಗಗಳ' ಎಂಬದರ ಬದಲಾಗಿ 'ಉಗ್ರಾಣಗಳು' ಎಂದು ಓದಬೇಕೆಂತ ಆ ಬಾಬ್ತುದಾರರು ತಿಳಿಸಿರುವರು.

ಪುತ್ತೂರು:—ಶ್ರೀ ಶಾರದಾ ವಾಚನಮಂದಿರದ ೧೩ನೆ ವರ್ಷ ವರ್ಧಂತಿಯ ಸಮಾರಂಭವು ಇದೇ ತಾ. ೩೧—೧೦—೨೦ ಅಪರಾಹ್ನ ಗಂಟೆ ೪ಕ್ಕೆ ಶ್ರೀ ವೆಂಕಟರಮಣ ದೇವಸ್ಥಾನದ ಬಳಿ ಶ್ರೀವರದೇಂದ್ರ ಸಭಾಸದನದ ಮಾಳಿಗೆಯಲ್ಲಿ ಡಿಸ್ಟ್ರಿಕ್ಟ್ ಮುನಸೀಫ್ ಮ! ರಾ! ರಾ! ಡಿ. ಎಸ್. ರಾಜಾರಾವ್ ಅವರ್ಗಳ್ ಬಿ. ಎ. ಬಿ. ಎಲ್ ಇವರ ಅಧ್ಯಕ್ಷತೆಯಲ್ಲಿ ಜರಗುವುದು. 'ತಿಲಕಸಂದೇಶ'ದ ಸಂಪಾದಕರಾದ ಶ್ರೀಯುತ ದತ್ತಾತ್ರಯ ಕೃಷ್ಣ ಭಾರದ್ವಾಜ ವಿದ್ಯಾಭೂಷಣ ಇವರು 'ಹಿಂದೂ ವೈಭವ' ಎಂಬ ವಿಷಯವನ್ನೆತ್ತಿ ಭಾಷಣ ಮಾಡುವರು.

ಕುಂಬಳಕೋಡು:—ಇಲ್ಲಿಯ ಸಹಕಾರ ಸಂಘದ ಮಹಾಸಭೆಯು ಹೇರಂಜಾಲ ಬೋರ್ಡುಶಾಲೆಯಲ್ಲಿ ಇದೇ ತಿಂಗಳ ೧೦ನೆ ತಾರೀಕಿಗೆ ಜರಗಿತು. ಜನರಲ್ ಅಸಿಸ್ಟಂಟ ರಜಿಸ್ಟ್ರಾರ ರಾ! ಕೆ. ಎಲ್. ಭಂಡಾರಿಯವರೂ ಸಹಕಾರ ಇಲಾಖೆ ಇನ್ಸ್‌ಪೆಕ್ಟರರೂ ಸುಮಾರು ೩೦೦ಕ್ಕೆ ವಿಾರಿದ ಮೆಂಬರ ಮತ್ತು ಮೆಂಬರಲ್ಲದ ಜನಸ್ತೋಮವು ನೆರೆದಿದ್ದರು. ವಾದ್ಯಘೋಷದಿಂದ ಸಭಿಕರು ಸಂಘದ ಅಧ್ಯಕ್ಷರವರ ಮನೆಯಿಂದ ಸಭಾಸ್ಥಾನಕ್ಕೆ ಬಂದು ನೆರೆದ ನಂತರ ಅಧ್ಯಕ್ಷರು ಸಹಕಾರ ಪ್ರಚಾರ ಮತ್ತು ಸಹಕಾರದ ಮಹತ್ವವನ್ನು ಕುರಿತು ಚಿಕ್ಕ ಭಾಷಣವನ್ನು ಮಾಡಿದರು. ಅನಂತರ ಮಹಾಸಭೆಯ ಕಾರ್ಯಕ್ರಮವೆಲ್ಲ ಸರಿಯಾಗಿ ನೆರವೇರಿತು. ಬಂದವರೆಲ್ಲ ಅನೇಕರಿಗೆ ಅಧ್ಯಕ್ಷರು ಊಟಉಪಚಾರಗಳಿಂದಲೂ ತಾನು ತಯಾರಿಸಿರುವ ಸಹಕಾರ ಪದ್ಯಗಳ ಪಠನದಿಂದಲೂ ರಾತ್ರಿ ಮೃದಂಗ ಸೇವೆಯಿಂದಲೂ ಆನಂದಗೊಳಿಸಿದರು.

ಪಡಂಗಾಡಿ:—ಈ ಗ್ರಾಮದಲ್ಲಿ ಗುರುವಾಯನ ಕೆರೆಯಿಂದ ವೇಣೂರಿಗೆ ಹೋಗುವ ರಸ್ತೆಬದಿ ಕನ್ನಡಿ ಕಟ್ಟೆ ಎಂಬಲ್ಲಿ ಮೂರನೇ ಮೈಲು ಕಲ್ಲಿನ ಎದುರಿಲ್ಲಿ ಗುರುವಾರ ಸಂತೆ ನೇಮಕವಾಗಬೇಕಾಗಿ ಬೆಳ್ತಂಗಡಿ ಡಿಪ್ಯುಟಿ ತಹಸೀಲ್ದಾರರವರ ಸನ್ನಿಧಾನಕ್ಕೆ ಈ ಮೊದಲು ರಿಪೋರ್ಟು ಮಾಡಿರುತ್ತದೆ. ಈ ವಿಷಯದಲ್ಲಿ ಅಧಿಕಾರಿಗಳು ಸಹಾಯ ಮಾಡುವರೆಂದು ನಂಬುತ್ತೇನೆ.

ಸುಳ್ಯ:—೫—೧೦—೨೦ರಲ್ಲಿ ಸಾಯಂಕಾಲ ೪ ಘಂಟೆಗೆ ಮುದ್ದೂರು ಪಟ್ನೂರು, ಐವರ್ನಾಡು, ಅರಂತೋಡು, ಸಂಪಾಜೆ, ಅಜ್ಜಾವರ, ಉಬ್ರಂಗಳ, ಮಿತ್ತೂರು, ಅಮರಮುಡ್ನೂರು, ಮುತ್ತು ಸುಳ್ಯ ಗ್ರಾಮಗಳ ಮಹಾಜನರ ದುಃಖ ಪ್ರದರ್ಶಕ ಸಭೆಯೊಂದು ನೆರೆದಿತ್ತು. ಕೂಡಿದ ನೂರಾರು ಮಂದಿ ಎದ್ದು ನಿಂತು ಶ್ರೀ ದೇವಪ್ಪ ಐವನೆ ಜೋರ್ಜ ಚಕ್ರವರ್ತಿಗಳಿಗೆ, ಜಯವಾಗಲೆಂದೂ ಲೋ! ತಿಲಕರವರ ಆತ್ಮಕ್ಕೆ ಶಾಂತಿಯನ್ನು ಕೊಡಲಿ ಎಂದು ಪ್ರಾರ್ಥಿಸಿ ಲೋ! ತಿಲಕರವರ ಪಟವನ್ನು ಎತ್ತರವಾಗಿ ಇಟ್ಟು ಸಭೆಯು ಪ್ರಾರಂಭವಾಯಿತು. ಆಗ ಮ! ರಾ! ರಾ! ಅಮಯದ್ಯ ಸುಬ್ಬಯ್ಯನವರು ಲೋ! ತಿಲಕರವರ ಜೀವನ ಚರಿತ್ರೆಯನ್ನು ತುಳುಭಾಷೆಯಿಂದ ಸಭಿಕರ ಮನಸ್ಸು ಬಹಳ ಸಂತೋಷವಾಗುವಂತೆ ಹೇಳಿದ್ದಲ್ಲದೆ ಅನೇಕ ಮಹನೀಯರ ಉಪನ್ಯಾಸಗಳು ಆದ್ದವು. ಕಳೆದ ಟೊಕ್ಕಾಡಿ ಸಭೆಯಲ್ಲಿ ಆದ ಠರಾವುಗಳೆಲ್ಲಾ ಈ ಸಭೆಯಲ್ಲಿ ಮಂಜೂರುಮಾಡಲಾಯಿತು. ಕೂಡಿದ ಸಭಿಕರಿಂದ ತಿಲಕರವರ ಸ್ಮಾರಕ ಫಂಡಿಗೆ ರೂ. ೬೯-೮-೦ ವಾಗ್ದಾನವಾಗಿ ಈ ಪೈಕಿ ರೂ. ೫೭-೪-೦ ವಸೂಲಿ ಕೂಡ ಆಯಿತು. ಈ ವರೇಗೆ ಸದರಿ ಫಂಡಿಗೆ ರೂ. ೧೦೪೭—೧ ವಾಗ್ದಾನವಾದ್ದು ತುಂಬಾ ಸಂತೋಷ. ಕೂಡಿದ ಸಭಿಕರಿಗೆ ಮ! ರಾ! ರಾ! ಯು. ಯು. ನಿಯಾ ಸಾಹೇಬರ ಕಡೆಯಿಂದ ಸಕ್ಕರೆ, ಬಾಳೆಹಣ್ಣು ಮತ್ತು ತಾಂಬೂಲಾದಿಗಳಿಂದ ಸತ್ಕರಿಸಿ ಸಭೆಯು ವಿಸರ್ಜನೆಯಾಯಿತು. ಇಲ್ಲಿಯ ಪೋಸ್ಟ್ ಆಫೀಸಿಗೆ ೪೦ ಗ್ರಾಮಗಳು ಇದ್ದು ಇಬ್ಬರು ಪೋಸ್ಟುಮೇನುಗಳಿಂದ ಒಂದು ವಾರದಲ್ಲಿ ಸಿಕ್ಕುವ ೫೫ ದಿವಸಗಳಲ್ಲಿ ವರ್ತಮಾನ ಪತ್ರಿಕೆಗಳನ್ನು ಪಾರ್ಸೆಲು ಮತ್ತು ಕಾಗದ ವಗೈರೆ ಸಾವಿರಾರು ಕೆಲಸಗಳನ್ನು ಈ ಕಾಡುಪ್ರಾಂತ್ಯದ ಗ್ರಾಮಗಳಲ್ಲಿ ಮಾಡುವದು ಬಹಳ ಕಷ್ಟವೇ ಸರಿ. ಈ ಸಂಗತಿಯನ್ನು ಕಳೆದ ಜಮಾಬಂದಿ ಸಮಯ ನಡದ ಕನಫರೆನ್ಸಿನಲ್ಲಿ ಹೇಳಿಕೊಂಡದ್ದು ಅರಣ್ಯರೋದನವಾದ್ದು ತುಂಬಾ ವಿಷಾದಕರ.

ಇಲ್ಲಿ ಆಗಾಗ್ಗೆ ಕಾರ್ಡು ಕವರು ವಗೈರೆ ಸಿಕ್ಕದೆ ಜನರಿಗೆ ಬಹಳ ಕಷ್ಟವಾಗುವದರಿಂದ ಈ ಕಡೆಗೆ ಪೋಸ್ಟಲ ಆಫೀಸಿನ ಮೇಲಧಿಕಾರಿಗಳು ನೋಡಬಾರದೆ?

ಜಾಲ್ಸೂರು:—ಇಲ್ಲಿ ಹುಲಿಗಳ ಉಪದ್ರವು ದಿನೇ ದಿನೇ ಹೆಚ್ಚಾಗುತ್ತ ಬರುತ್ತಿದೆ.

ಸಂಪಾಜೆ:—[illegible] ಸಮಯದ ಪೋಲಿಸ ಸುಪರಿಂಟೆಂಡೆಂಟ ದೊರೆಗಳವರ ಅಧೀನಕ್ಕೆ [illegible] ಬಂದರೆ [illegible] ಡಿಸ್ಟ್ರಿಕ್ಟ ಪೋಲಿಸ ಸುಪರಿಂಟೆಂಡೆಂಟ ದೊರೆಗಳವರ ಆಫೀಸಿನಿಂದಲೇ ಪರಿಹಾರವಾದರೆ ಇಲ್ಲಿಂದ ೬೫ ಮೈಲು ದೂರ ಇರುವ ಮಂಗಳೂರಿಗೆ ಹೋಗಿ ಬರುವುದು ಬಹು ಕಷ್ಟವೇ ಸರಿ. ಆದುದರಿಂದ ಮೊದಲು ಇದ್ದಂತೆಯೇ ಆಯಾಯ ಸ್ಟೇಶನುಗಳಲ್ಲಿಯೇ ಇಡುವ ಹಾಗೆ ಹುಕುಂ ಆಗುತ್ತಿದ್ದರೆ ಬಡವರಿಗೆ ತುಂಬಾ ಉಪಕಾರವಾಗುತ್ತಿತ್ತು.

ಅರಂತೋಡು:—ಇದೇ ತಿಂಗಳ ತಾ. ೩೧-೧೦-೨೦ನೇ ಆದಿತ್ಯವಾರ ಹಗಲು ಘಂಟೆ ೨ರ ಸಮಯಕ್ಕೆ ದಿವಂಗತರಾದ ಲೋಕಮಾನ್ಯ ತಿಲಕರವರ ಮಹಾ ಪ್ರಸಂಗವಾದ ಸಭೆಯು ಕೂಡುವುದರಿಂದ ಇಲ್ಲಿಯವರು ದಯವಿಟ್ಟು [illegible] ವಿನಂತಿ.

ಬಿಜೂರು:—ಇದೇ ತಾ. ೧೧—೧೦—೨೦ನೇ ಸೋಮವಾರ ಬೆಳಗ್ಗೆ ೯ ಘಂಟೆಗೆ ಬಿಜೂರು ಬೋರ್ಡು ಎಲಿಮೆಂಟರಿ ಶಾಲೆಯಲ್ಲಿ, ಇಲ್ಲಿಯ ಸಹಕಾರ ಸಂಘದ ೧೯೨೦ನೇ ವರ್ಷದ ೧ನೇ ಮಹಾ ಸಭೆಯು ಮ! ರಾ! ಬಿಜೂರು ಪಟೇಲ್ ಬವಲಾಡಿ ಸೂರಪ್ಪಯ್ಯನವರ ಅಧ್ಯಕ್ಷತೆಯಲ್ಲಿ ನೆರವೇರಿತು.

ಈ ಸಭೆಗೆ ಮ. ರಾ. ಆನರರಿ ಅಸಿಸ್ಟಂಟ್ ರಿಜಿಸ್ಟ್ರಾರರಾದ ಕೆ. ಎಲ್. ಭಂಡಾರಿಯವರೂ, ಸಹಕಾರ ಸಂಘಗಳ ಇನ್ಸ್‌ಪೆಕ್ಟರಾದ, ಮ! ರಾ! ಸಂಗೊಳ್ಳಿ ನರಸಿಂಹಾಚಾರ್ಯರವರೂ ಬಂದಿದ್ದರು.

ಈ ಸಂಘದ ಎಲ್ಲಾ ರೂಲ್ಸುಗಳನ್ನು ಹೊಸ ಮಾದರಿ ಉಪಕ್ರಮದಂತೆ ತಿದ್ದುಪಡಿ ಮಾಡಬೇಕೆಂತಲೂ, ಮ! ರಾ! ಅಸಿಸ್ಟಂಟ ರಜಿಸ್ಟ್ರಾರವರ ಸೂಚನೆಯಂತೆ ಬಡ್ಡಿಯ ದರವನ್ನು ಶೇಕಡಾ ರೂ. ೧೦—೧೫—೦ಕ್ಕೆ ಏರಿಸಬಹುದೆಂತಲೂ, ವಾಯಿದೆ ಕಳೆದ ಸಾಲಗಳ ಮೇಲೆ ಶೇಕಡಾ ರೂ. ೧೫—೧೦—೦ರಂತೆ ದಂಡನೆ ಬಡ್ಡಿ ವಿಧಿಸಬಹುದೆಂತಲೂ ನಿರ್ಣಯಿಸಲಾಗಿದೆ. ಮತ್ತು ಸಂಘದ (ಮೆಂಬರರ) ಉಪಯೋಗದ ಬಗ್ಗೆ ಎರಡು ಕಬ್ಬಿನ ಗಾಣಗಳನ್ನು ತರಿಸಬೇಕಾಗಿ ಸಹಾ ನಿರ್ಣಯಿಸಿಯದೆ.

ಸುಬ್ರಹ್ಮಣ್ಯ:—ಈ ಮಲೆನಾಡು ಪ್ರಾಂತ್ಯದಲ್ಲಿ ಕಾಡಾನೆಗಳ ಕಾಟವು ದಿನೇ ದಿನೇ ಹೆಚ್ಚುತ್ತಾ ಬರುತ್ತದೆ. ಸುಬ್ರಹ್ಮಣ್ಯಕ್ಕೆ ಸಮೀಪವಿರುವ ಬಾಳುಗೋಡು ಗ್ರಾಮದಲ್ಲಿ ೮ ದಿವಸಗಳ ಹಿಂದೆ ಕಾಡಾನೆಗಳು ಬೈಲುಗಳಿಗೆ ಇಳಿದು ೮-೧೦ ತೆಂಗಿನ ಮರಗಳನ್ನೂ ಸ್ವಲ್ಪಾಂಶ ಅಡಿಕೆ ತೋಟವನ್ನೂ ನಿರ್ಮೂಲ ಪಡಿಸಿದ್ದಲ್ಲದೆ ಸಾಧಾರಣ ೫-೬ ಎಕ್ರೆ ಸ್ಥಳದಲ್ಲಿದ್ದ ಬೆಳೆಯನ್ನು ಪೂರ್ಣ ನಾಶಪಡಿಸಿರುತ್ತವೆ. ಹೀಗೆಯೇ ಕಳ್ಳುಬ್ಬಿರು, ಕೊಲ್ಲಮೊಗರು, ಹರಿಹರ, ಬಳ್ಳಕ್ಕ, ಸುಬ್ರಹ್ಮಣ್ಯ, ಕೆದಿ, ಬಿಳಿನಾಲೆ, ಕೈಂಟಿರು, ಶಿರಾಡಿ, ಇವೇ ಮೊದಲಾದ ಗ್ರಾಮಗಳಲ್ಲಿಯೂ ಕೂಡಾ ಈ ಆನೆಗಳ ಹಾವಳಿಯು ಮಳೆಗಾಲ ಪ್ರಾರಂಭದಿಂದಲೇ ಸುರು ಆಗಿ ಬೆಳೆಯುವ ದವಸ ಧಾನ್ಯಗಳು ಮುಕ್ಕಾಲು ಪಾಲು ಆನೆಗಳಿಗೆ ಹುತ್ತಾಗಿ ಹೋದ್ದರಿಂದ ಈ ನಷ್ಟ ಕಷ್ಟಗಳನ್ನು ಸಹಿಸಿಕೊಂಡು ಭೂಕಂದಾಯವನ್ನು ಕೆತ್ತು ಅನುಕಷ್ಟದಿಂದ ಜೀವಿಸುವಂಥಾ ಬಡ ಬಗ್ಗರ ಗೋಳನ್ನು ದೇವರೇ ಸಂಕಾರಾದವರು ಕೇಳದಿರುವುದು ಬಹಳ ವ್ಯಸನಕರವೇ ಸರಿ!

ರಾತ್ರಿ ರಸ್ತೆಗಳಲ್ಲಿ ಸಹ ಮನುಷ್ಯರ ಭಯವಿಲ್ಲದೆ ಹಗಲು ಹೊತ್ತಿನಲ್ಲಿಯೇ ಆನೆಗಳು ನಿರ್ಭಯವಾಗಿ ತಿರುಗಾಡುತ್ತವೆ—ಒಂದು ವಾರದ ಹಿಂದೆ ಕ್ವಾಡಿದು ಗ್ರಾಮದ ಕೆಲವು ಬಲ್ಲ ಗೌಡರು ಕಾರ್ಯಾರ್ಥವಾಗಿ ಸುಬ್ರಹ್ಮಣ್ಯಕ್ಕೆ ಬಂದವರು ಹಿಂತಿರುಗಿ ಮನೆಗೆ ಹೋಗುವಾಗ ಹಾದಿ ಬೀದಿಯಲ್ಲಿ ಆನೆಯು ಕಂಡು ಸಿಕ್ಕಿ ಬಿದ್ದುದರಿಂದ ಓಡಿ ದೈವತ್ತಿಯಿಂದ ತಪ್ಪಿಸಿಕೊಂಡರು. ಇವರು ಒಬ್ಬ ಧಾಂಡಿಗ ಯುವಕನಾದ್ದರಿಂದ ಜೀವ ತಪ್ಪಿಸಿಕೊಂಡರೇ ಹೊರತು ಸಾಧಾರಣ ವಿಸ್ಮಯದಿಂದ ಸಾಧ್ಯವಾಗುತ್ತಿರಲಿಲ್ಲ. ಆದರೂ ಓಡುವಾಗ ಬಿದ್ದು ಮೈಯೆಲ್ಲಾ ಜಖಂ ಆಗಿ ಸುಮಾರು ೧೫ ದಿವಸಗಳ ಚಿಕಿತ್ಸೆಯು ಇವರಿಗೆ ಬೇಕಾಗುವುದು.

ಈ ರೀತಿ ನಷ್ಟ ಕಷ್ಟಗಳನ್ನು ಪಡಿಸುವಂಥಾ ಈ ಪ್ರಾಣಿಗಳನ್ನು ಸರಕಾರದವರು ರೈತರ ಅನುಕೂಲಕ್ಕನುಸಾರವಾಗಿ ಬೇಟೆಯಾಡಿಸಿ ಆಗಾಗ್ಗೆ ನಾಶಪಡಿಸದ್ದರಿಂದ ರೈತರೇ ಬ್ಲೋಕಿನಲ್ಲಿ ಕೂಡಾ ಇಂಥಾ ಮೃಗಗಳನ್ನು ಗುಂಡು ಹೊಡೆದು ನಾಶಪಡಿಸುವದೆ ಸರಕಾರದವರು ಹುಕುಂ ದಯಪಾಲಿಸುವುದೇ ಸದರಿ ಜಂತುಗಳ ನಾಶಕ್ಕೆ ಸುಲಭೋಪಾಯವಲ್ಲವೆ?

ಉಬರಡ್ಕ ಮಿತ್ತೂರು—ಇಲ್ಲಿ ಕಾಡುಹಂದಿಗಳ ಉಪದ್ರವಗಳಿಂದ ಬೆಳೆ ಬಹಳ ನಷ್ಟ. ಅಲ್ಲಲ್ಲಿ ತೆಂಗಿನಕಾಯಿ ಅಡಿಕೆ ವಗೈರೆ ಚಿಲ್ಲರೆ ಕಳವುಗಳೂ ಆಗುತ್ತವೆ. ಪೋಲೀಸ ಇಲಾಖೆಯವರು ದಯವಿಟ್ಟಲ್ಲಿ ಸ್ವಲ್ಪ ಶಾಂತಿಯಾಗುವುದೆಂದು ಭರವಸೆ!

ಕಾಸರಗೋಡು:—ಬಹುಕಾಲ ಹೀನ ಸ್ಥಿತಿಯಲ್ಲಿದ್ದುದ್ದ, ಶ್ರೀ ಮಲ್ಲಿಕಾರ್ಜುನ ದೇವಸ್ಥಾನದ ಶಿರಗಳಿಂತೂ ಜೀರ್ಣೋದ್ಧಾರವಾಗುತ್ತವೆಂಬ ಸಂಗತಿ ಪರಮಾನಂದಕರ. ಆದರೆ ಮೊನ್ನೆ ತಾನೆ ಹೊಸತಾಗಿ ಕಟ್ಟಿಸಿದ ಹತ್ತು ಜನಸಮಸ್ತರ ಶ್ರೀ ವೆಂಕಟರಮಣ ದೇವಸ್ಥಾನದ ಕೆರೆಯು ಕೆಲಸವೆಂತು ಅರ್ಧದಲ್ಲಿಯೇ ಮಾತ್ರಾಯಿತೊಂದಿ ದಿನೇ ದಿನೇ ನಿಕೃಷ್ಟವಾಗುತ್ತಾ ಬರುತ್ತಿದೆ. ಹಾಗೆ ಅರ್ಧದಲ್ಲಿಯೇ ನಿಲ್ಲಿಸುವದಾದರೆ ಈ ಕೆರೆಯ ವಿಷಯದಲ್ಲಿ ಸುಮ್ಮನೆ ದ್ರವ್ಯವೆಚ್ಚ ಮಾಡಿದುದು ಅನಾವಶ್ಯಕವು. ಈ ವಿಷಯದಲ್ಲಿ ಇನ್ನಾದರೂ ಶಿಗಾಕೊಡುತಿದ್ದರೆ ಕೆರೆ ಕಟ್ಟಿಸಿದುದಕ್ಕೆ ಒಂದು ಪ್ರಯೋಜನ. ಇಲ್ಲವಾದರೆ ಗುಡ್ಡೆಗೆ ಮಣ್ಣು ಹೊತ್ತಂತೆಯೇ ಸರಿ.

ಬೀದಿಗಳಲ್ಲಿ ಸಾಧಾರಣ, ಒಂದು ಯಾ ೨ ಫರ್ಲಾಂಗುಗಳಿಗೆ ಒಂದರಂತೆ ಲೋಕಲ್‌ಫಂಡ್ ಲಾಟಾನುಗಳು ಅಂದರೆ ಇಡೀ ಊರಿನಲ್ಲಿ ಹೆಚ್ಚಾದರೆ ೧೬ ಯಾ ೨೦ ಲಾಟಾನುಗಳು ಇರಬಹುದು. ಈ ೨೦ ಲಾಟಾನುಗಳಿಗೆ ದಿನಕ್ಕೆ ಒಟ್ಟು ॥ ಕುಡ್ತಿ, ಯಾ, ಹೆಚ್ಚಾದರೆ, ಒಂದು ಕುಡ್ತಿ ಎಣ್ಣೆ ಬೇಕಾಗುತ್ತದೋ ಇಲ್ಲವೋ? ಯಾವಾಗ ನೋಡಿದರೂ ಬೀದಿಯಲ್ಲಿ ಕತ್ತಲೆ. ಅದರಲ್ಲಂತೂ ಮಳೆಬರುತ್ತಿದ್ದರೆ ಕೇಳುವುದೇ ಬೇಡ. ರಾತ್ರಿಕಾಲದಲ್ಲಿ ಅತ್ತಿತ್ತ ಹೋಗುವ ಬಡಜನರು ಮಾತ್ರಭೂಮಿಗೆ ಆಗಾಗ್ಗೆ ಸಾಷ್ಟಾಂಗವೆರಗುವುದೇ ಸರಿ. ಈ ಸಂಗತಿಗಳನ್ನು ಪರಾಂಬರಿಸಿ ಒಂದೊಂದು ಫರ್ಲಾಂಗಿಗೆ ೨ರಂತೆ ಯಾದರೂ ಲಾಟಾನುಗಳನ್ನು ಇರಿಸಿ, ಕನಿಷ್ಠಪಕ್ಷಕ್ಕೆ ರಾತ್ರಿ ೧೨ ಘಂಟೆಯ ತನಕವಾದರೂ ಉರಿಯುವಂತೆ ನಡಿದರೆ ಬಹಳ ಉಪಕಾರವಾಗುತಿತ್ತು.

ಕೆಲಕಾಲದ ಹಿಂದೆ ಇಲ್ಲಿಂದ ಪುತ್ತೂರಿಗೂ ಮಡಕೇರಿಗೂ ಹೋಗುವರು ಒಂದೇ ಮೋಟಾರ್ ಬಸ್ ಟ್ರಾಫಿಕ್ ತೆರೆಯಬೇಕೆಂತ ಇಲ್ಲಿಯ ಕೆಲ ಜನಮಾನ್ಯಗೃಹಸ್ಥರು ಆಗಾಗ್ಗೆ ಆಲೋಚಿಸುತ್ತಿದ್ದರು, ಹಾಗೆ ಇಲ್ಲಿಂದ ಸೀದಾ ಪುತ್ತೂರಿಗೂ ಅಲ್ಲಿಂದ ಮಡಕೇರಿಗೂ ಬಸ್ ಟ್ರಾಫಿಕ್ ನಡುತ್ತಿದ್ದರೆ, ಪ್ರಯಾಣಿಕರು ಇಲ್ಲಿಂದ ಮಂಗಳೂರಿಗೆ ಹೋಗಿ ಅಲ್ಲಿಂದ ಈ ತಾಲೂಕಿನ ಡಿವಿಜನಲ್ ಹೆಡ್ ಕ್ವಾರ್ಟರಾದ ಪುತ್ತೂರಿಗೆ ಹೋಗಿ ಅನಾವಶ್ಯಕವಾಗಿ ಸಮಯವನ್ನೂ ಕಳೆಯುತ್ತಿರ ಬೇಕಾಗಿರಲಿಲ್ಲ. ಅನೇಕರು ಈ ಕಷ್ಟವನ್ನು ಈಗಲೂ ಅನುಭವಿಸುತ್ತಿದ್ದಾರೆ ಇಂಥಾ ಒಂದು ಕಂಪೆನಿಯನ್ನು ಇಲ್ಲಿ ಶೀಘ್ರದಲ್ಲಿಯೇ ಏರ್ಪಡಿಸಿದ್ದರೆ [illegible] ಎಷ್ಟೋ ಜನರು ಇಲ್ಲಿಂದ ಪುತ್ತೂರಿಗೂ ಪುತ್ತೂರಿಂದ ಇಲ್ಲಿಗೂ [illegible] ಯಾಗುವ ಸಂಭವವಿದೆ. ಇದಕ್ಕೆ ಈ ಊರಿನವರ ಪ್ರೋತ್ಸಾಹವೂ ಸಿಕ್ಕೀತು.

[illegible]

[illegible], ಮಂಗಳೂರು.

[illegible] 1906ನೇ [illegible] ಸ್ಥಾಪಿಸಲ್ಪಟ್ಟಿತು.

[illegible] paid up Capital Rs. 300,000—0—0	ಅಧಿಕಾರಗೊಳಿಸಲ್ಪಟ್ಟು ಪೂರ್ಣವಾಗಿ ತೆತ್ತ ಮೂಲಧನವು ರೂ. 300,000—0—0
Reserve and other sinking Funds „ 138,697—7—2	ಕ್ಷೇಮನಿಧಿ ಮತ್ತು ಇತರ ಫಂಡುಗಳು „ 138,697—7—2

THE BANK RECEIVES FIXED, CURRENT ACCOUNT, & SAVINGS BANK DEPOSITS

[illegible] ಸೇವಿಂಗ್ಸ್ ಬ್ಯಾಂಕ್ ಠೇವಣಾತಿಗಳೂ, ಪಡಕೊಳ್ಳಲಾಗುತ್ತವೆ.

For further particulars apply to the Secretary.

ವಿಶೇಷ ಮಾಹಿತಿ ಬಗ್ಗೆ ಸೆಕ್ರೆಟರಿಗಳಿಗೆ ಬರಕೊಳ್ಳುವದು.

Canara Bank Ltd.
Mangalore 1st September 1920.

K. Venkat Rao,
Secretary.

[illegible]	[illegible]	[illegible]	[illegible]	[illegible]	[illegible]	[illegible]	[illegible]	[illegible]
30	[illegible]	[illegible]	[illegible]	[illegible]	[illegible]	[illegible]	6·25	6·4
31	[illegible]	[illegible]	[illegible]	[illegible]	[illegible]	[illegible]	6·26	6·4
1	[illegible]	[illegible]	[illegible]	[illegible]	[illegible]	[illegible]	6·26	6·3
2	[illegible]	[illegible]	[illegible]	[illegible]	[illegible]	[illegible]	6·26	6·3
3	ಬುಧ	[illegible]	[illegible]	[illegible]	[illegible]	[illegible]	6·27	6·3
4	ಗುರು	[illegible]	[illegible]	[illegible]	[illegible]	[illegible]	6·27	6·2
5	ಶುಕ್ರ	[illegible]	[illegible]	[illegible]	[illegible]	[illegible]	6·27	6·2

ವೈದ್ಯ ವೆಂಕಟಾಚಲ ಪಂಡಿತರ ಸಿದ್ಧೌಷಧಗಳು.

[illegible] ಕಸ್ತೂರಿ ಮಾತ್ರೆಗಳನ್ನು ಈಗಲಾದರೂ ಪರೀಕ್ಷಿಸಿ ನೋಡಿರಿ!

ಪ್ರತಿವರ್ಷವೂ ಲಕ್ಷಾಂತರ ಸೀಸೆಗಳು ವಿಕ್ರಯವಾಗುತ್ತಿವೆ.

[illegible] ಮಾತ್ರವಲ್ಲ; ಬರ್ಮಾ, ಸಿಲೋನ್, ಮಲೆಯ ಸ್ಟೇಟ್, ಗೋವಾ, [illegible], ಆಫ್ರಿಕಾ ಮೊದಲಾದ ಕಡೆಯವರು ಕೂಡ ಈ ಸಿದ್ಧೌಷಧಿಯನ್ನು ಉಪಯೋಗಿಸುತ್ತಿರುತ್ತಾರೆ.

[illegible] ಒಂದು [illegible] ಕಸ್ತೂರಿ ಮಾತ್ರೆಯ ಸೀಸೆಯು ನಿಮ್ಮ ಮನೆಯಲ್ಲಿದ್ದರೆ ಸಮಯವನ್ನು [illegible] ತಪ್ಪುವದು.

[illegible] ಅಜೀರ್ಣ, ಪಾರ್ಶ್ವವಾಯು, ಜ್ವರ, ಮಂದ, ಮಲಬದ್ಧ, ಕೆಮ್ಮು, [illegible], ಬಲಹೀನತೆ, [illegible], ಮಕ್ಕಳ [illegible] ಜ್ವರ, ಕೆಮ್ಮು, ವಾಯು, ಇನ್ನೂ ಅನೇಕ ರೋಗಗಳನ್ನು [illegible] ಗುಣಪಡಿಸುತ್ತದೆ.

ಪ್ರತಿ 6 ಸೀಸೆಗಳನ್ನು ಒಟ್ಟಿಗೆ ತರಿಸಿದರೆ ಟಪಾಲು ಖರ್ಚು ಸೇರಿ 1—3—0.
ಪ್ರತಿ 12 ಸೀಸೆಗಳನ್ನು ಒಟ್ಟಿಗೆ ತರಿಸಿದರೆ ಟಪಾಲು ಖರ್ಚು ಸೇರಿ 2—13—0.
ಪ್ರತಿ 25 ಸೀಸೆಗಳನ್ನು ಒಟ್ಟಿಗೆ ತರಿಸಿದರೆ ಟಪಾಲು ಖರ್ಚು ಸೇರಿ 5—3—0.

ರಿಜಿಸ್ಟರಾದ ಈ ವ್ಯಾಪಾರದ ಗುರ್ತು ಪ್ರತಿ ಸೀಸೆಯ ಮೇಲೂ ಇರುವುದನ್ನು ನೋಡಿ ತೆಗೆದುಕೊಳ್ಳಬೇಕಾಗಿದೆ.
ಅನುಪಾನ ಪತ್ರವು ಪ್ರತಿ ಸೀಸೆಯೊಡನೆಯೂ ಇರುವುದು. [illegible] ಕುಪ್ಪಿಗೆ 4 ಆಣೆ ಮಾತ್ರ.

ಲಕ್ಷ್ಮೀವಿಲಾಸ ರಸ (ಪ್ಲೇಗಿಗೆ) — [illegible] ಪ್ಲೇಗುರೋಗಿಗಳು ಈ ಲಕ್ಷ್ಮೀವಿಲಾಸ ರಸದಿಂದ ಆರೋಗ್ಯವನ್ನು ಪಡೆದಿರುತ್ತಾರೆ. ಒಂದೇ [illegible] ಲಕ್ಷ್ಮೀವಿಲಾಸ ರಸದ ಸೀಸೆಯು ತಮ್ಮಲ್ಲಿದ್ದರೆ ಪ್ಲೇಗಿಗೆ ಸರ್ವೋತ್ಕೃಷ್ಟವಾದ ಸಿದ್ಧೌಷಧಿಯು ಬೇರೊಂದಿಲ್ಲವೆಂದು [illegible] ಹೇಳುವಿರಿ. [illegible] ಸೀಸೆಗೆ ರೂ. 1. 5ಕ್ಕೆ ಒಂದು ಇನಾಮು.

ಶ್ರೀನಿವಾಸತೈಲ — [illegible] ಸೀಸೆಗೆ 8 ಆಣೆ. 6ಕ್ಕೆ ಒಂದು ಇನಾಮು.

ವೈಶ್ವಾನರ [illegible] — [illegible] ವಾಂತಿಭೇದಿ, [illegible], ಅಜೀರ್ಣದ ಭೇದಿಗಳು ಗುಣವಾಗುತ್ತಾ ಬರುತ್ತವೆ. ಸೀಸೆಗೆ ರೂ. 1. 5ಕ್ಕೆ ಒಂದು ಇನಾಮು.

ಬಾಲಸುಧೋದಯ — ಮಕ್ಕಳಿಗೆ ಬಲಕಾರಿ, [illegible]. ಮಂದ, ಮಲಬದ್ಧ, ಅಜೀರ್ಣದ ಭೇದಿ, [illegible] ಹೊಟ್ಟೆ ದಪ್ಪವಾಗಿರುವುದು, [illegible] ಮಕ್ಕಳುಳ್ಳವರಿಗೆ [illegible] ಸೀಸೆಗೆ ಆಣೆ 12. 5ಕ್ಕೆ ಒಂದು ಇನಾಮು.

ಈ ನಾಲ್ಕಕ್ಕೂ ಟಪಾಲು ಖರ್ಚು ಬೇರೆ.

ಸಮಸ್ತ ರೋಗಗಳಿಗೂ ನಮ್ಮಲ್ಲಿ ಆಯುರ್ವೇದೀಯ ಸಿದ್ಧೌಷಧಿಗಳು ದೊರೆಯುತ್ತವೆ. ಕ್ಯಾಟಲಾಗು ಉಚಿತ.

ವಿಳಾಸ: ಶ್ರೀ ಸೀತಾರಾಘವ ವೈದ್ಯಶಾಲಾ ಮೈಸೂರು.

ಮಂಗಳೂರಿನ ವಾಯುಸ್ಥಿತಿ.

(೧೯೨೦ನೆಯ ಅಕ್ಟೋಬರ)

ತಾರೀಖು Date	Temperature. ಉಷ್ಣ (ಕಾವು) Maximum ಹೆಚ್ಚಿನದು	Minimum ಕಡಿಮೆ	Rainfall. ಮಳೆ ದಿನದ ಮಳೆ	ಏಪ್ರಿಲ್ ೧ರಿಂದ
22	88—8	75—7	—	...
23	88—1	73—3	0—21	...
24	87—9	76—6	—	...
25	89—8	75—2	0—04	...
26	81—4	75—8	—	...
27	91—3	75—3	—	—
28	91—4	76—3	—	—

ಮಂಗಳೂರಿನ ಪೇಟೆ ಧಾರಣೆ.

ಜಿನಸು		ಇಂದ ರೂ. ಆ.	ವರೆಗೆ ರೂ. ಆ.
ಮಸ್ಕತಿ ಅಕ್ಕಿಮುಡಿ ೧ಕ್ಕೆ	...	7—4	7—14
ಗುಡ್ಡು, ಸುಗ್ಗಿ	...	7—1	7—2
ರಾಶಿ ಮುಡಿ ೧ಕ್ಕೆ	...	6—10	6—12
ಅನ್ವಲ್ ಬೆಳ್ತಿಗೆ „	...	9—0	9—2
ಹೊಸ ರಾಶಿ „	...	6—2	6—6
ಗುಡ್ಡು ಬೆಳ್ತಿಗೆ „	...	8—0	8—2
ರಂಗೂನ ಬೆಳ್ತಿಗೆ ಗೋಣಿ ೧ಕ್ಕೆ	...	16—8	17—0
ಗೋಧಿ ಗೋಣಿ ೧ಕ್ಕೆ	...	20—0	22—0
ಹುರುಳಿ ಗೋಣಿ ೧ಕ್ಕೆ	...	14—8	15—4
ಕಡಲೆ ಗೋಣಿ ೧ಕ್ಕೆ	...	15—8	16—0
ಕೊಗಿರಿ ಗೋಣಿ ೧ಕ್ಕೆ	...	—	20—0
ತೊಗರಿಬೇಳೆ ಗೋಣಿ ೧ಕ್ಕೆ	...	21—0	28—0
ಉದ್ದು ಗೋಣಿ ೧ಕ್ಕೆ	...	16—8	18—0
ಹೆಸರು ಗೋಣಿ ೧ಕ್ಕೆ	...	16—0	18—8
ಊರು ಬೆಲ್ಲ ಖಂಡಿ ೧ಕ್ಕೆ	...	110—0	120—0
ಉಪ್ಪು ಗೋಣಿ ೧ಕ್ಕೆ	...	4—10	5—2
ಕೊಬ್ಬರಿ ಖಂಡಿ ೧ಕ್ಕೆ	...	135—0	140—0
ಕೊಬ್ರಿ ಹಿಂಡಿ ಖಂಡಿ ೧ಕ್ಕೆ	...	52—0	56—0
ಎಳ್ಳಿಂಡಿ ಖಂಡಿ ೧ಕ್ಕೆ	...	47—0	52—8
ಕೊಬ್ರಿ ಎಣ್ಣೆ ಮಣ ೧ಕ್ಕೆ	...	11—4	11—8
ಎಳ್ಳೆಣ್ಣೆ ಮಣ ೧ಕ್ಕೆ	...	11—0	11—8
ಚಿಮಿಣಿಎಣ್ಣೆ ಪೆಟ್ಟಿಗೆ ೧ಕ್ಕೆ	...	9—6	9—9
ಮೋರಿಸ ಸಕ್ಕರೆ ಮಣ ೧ಕ್ಕೆ	...	11—12	—
ಊರ ಮೆಣಸಿನ ಕಾಯಿ ಮಣ ೧ಕ್ಕೆ	...	8—0	9—8
ಸಾಸಿವೆ ಮುಡಿ ೧ಕ್ಕೆ	...	10—0	10—0
ಕೊತ್ತಂಬರಿ ಮುಡಿ ೧ಕ್ಕೆ	...	5—8	—
ಕಾಫಿ ಖಂಡಿ ೧ಕ್ಕೆ	...	220—0	230—0
ಬೀಗೋಟು ಅಡಿಕೆ ಖಂಡಿ ೧ಕ್ಕೆ	...	100—0	115—0
ಬೀಗೋಟು	...	95—0	100—0
ಕಾಳುಮೆಣಸು ಖಂಡಿ ೧ಕ್ಕೆ	...	135—0	140—0
ಮೂಲಂಗಿ ಮಣ ೧ಕ್ಕೆ	...	22—0	25—0
ಗೇರುಬೀಜ ಮುಡಿ ೧ಕ್ಕೆ	...	3—12	3—14
[illegible] ಖಂಡಿ ೧ಕ್ಕೆ	...	100—0	120—0
[illegible] ಮಣ ೧ಕ್ಕೆ	...	24—4	25—0
[illegible] ಮಣ ೧ಕ್ಕೆ	...	32—0	34—0
[illegible] ೧ಕ್ಕೆ	...	31—8	
[illegible] ಮಣ ೧ಕ್ಕೆ	...	24—0	25—0

ಹಿಂದು ಕುಟ್ಟಿಯ ಕ್ರಯ ಗಳ ಅಣ್ಣೆ, ಮಂಗಳೂರು ಏಜಂಟ್,

ಕೇ. ಟೀ. ಡೋಂಗರೆ ಕಂಪೆನಿ, ವಿ. ಉಲನ್ ಮಾರ್ಟ್, ಮಂಗಳೂರು.

ಗಿರಗಾಂ, ಮುಂಬಯಿ.

ವಿದೇಶೀ ವರ್ತಮಾನ.

[illegible]

...ತ್ತೇವೆಂದು ತಿಳಿಸಿದ್ದಾರೆ. ಕಲ್ಲಿದ್ದಲಿನ ಮಾಲೀಕರಿಂದ ಒಂದು ಬಗೆಯ ಮಂದಿ ಕೆಲಸ ಕಲ್ಪಿಸಿದ್ದಾರೆ. ಈ ಕಾರಣದಿಂದ ಹಲವು ಕಾರ್ಖಾನೆಗಳು ಮುಚ್ಚಿಕೊಳ್ಳ ತೊಡಗಿವೆ. ಇಂಜಿನಿಯರಿಂಗ್ ಮಜೂರರು ಸುಮಾರು ೧೦ ಲಕ್ಷಕ್ಕೆ ಮಿಕ್ಕು ಕೆಲಸವಿಲ್ಲದೆ ಅಲೆಯುತ್ತಿದ್ದಾರೆ. ಇವರ ಕೂಟಗಳಲ್ಲಿ ಇವರು ಸಂಗ್ರಹಿಸಿದ ಹಂತಿಗೆಯ ಬಲದಿಂದ ಈ ಮಜೂರರ ಜೀವನವು ಈಗ ಸಾಗಬೇಕಾಗಿದೆ. ಕಲ್ಲಿದ್ದಲ ಮಜೂರರು ಈ ರೀತಿಯಾಗಿ ಕೆಲಸ ನಿಲ್ಲಿಸಿದ ನಂತರ ತಮ್ಮ ಫಂಡಿನಿಂದ ೩ ತಿಂಗಳು ಕಾಲ ಬೇಕಾಗುವ ಜೀವನಾಂಶವನ್ನು ಪಡೆದರು. ಈಗ ರೈಲ್ವೆಯವರೂ ಅವರೊಂದಿಗೆ ಸಮ್ಮತರಾಗಿ [illegible] ಮಜೂರರೂ ಮುಷ್ಕರ ಹೂಡಿದರೆಂದರೆ ಇದರ ಫಲಿತಾಂಶವು ಭಯಂಕರವಿದೆ. ಮಂತ್ರಿಮಂಡಲವು ಹೇಳಿದ ಮಾತಿನಲ್ಲಿ ಈ ಮುಷ್ಕರಗಾರರಿಗೆ ಒಂದಿಷ್ಟಾದರೂ ಬಿಟ್ಟುಕೊಡಲಾರರು, ಜನತೆಯು ತಮ್ಮ ಬೆಂಬಲಕ್ಕೆ ಇದೆ ಎಂದು ಭಾವನೆಯಾಗುತ್ತಿದೆ.

ಬೊಲಶೆವಿಕರು—ಇವರು ಪೋಲೆಂಡದೊಡನೆ ಯುದ್ಧ ನಿಲ್ಲಿಸಿ ರಾಜಿಯ ಶರ್ತಗಳ ರಚನೆಯಾಗುತ್ತಿರುವಾಗ ಮಧ್ಯ ಆಶ್ಯದಲ್ಲಿ ತಮ್ಮ ಚಟುವಟಿಕೆಯನ್ನು ತೋರಿಸತೊಡಗಿದ್ದಾರೆ. ಬೋಖಾರಾದ ಅಮೀರರನ್ನು ಪಟ್ಟದಿಂದೋಡಿಸಿ ಆ ಪ್ರದೇಶವನ್ನು ವಶಮಾಡಿಕೊಂಡದ್ದಲ್ಲದೆ ಈಗ ಅಫಘಾನಿಸ್ಥಾನದ ಕಡೆಗೆ ಮುಂದೊತ್ತುತ್ತಿದ್ದಾರೆ. ತಮ್ಮ ಸೈನ್ಯ ಸಂಬಂಧವಾಗಿ ಅವರ ದೇಶವನ್ನು ದಾಟಿ ಮುಂದೊತ್ತುವದಕ್ಕೆ ಆತಂಕ ಕಲ್ಪಿಸಕೂಡದೆಂದು ಅಮೀರನಿಗೆ ಬೊಲಶೆವಿಕರು ತಿಳಿಸಿದ್ದಾರೆ. (ಜಮಾಲ್ ಪಾಶಾ ಎಂಬವರು) ಅಫಘಾನಿಸ್ಥಾನಕ್ಕೆ ಬರುವ ಸೈನ್ಯದ ನಾಯಕರಾಗುವರು ಎಂಬದಾಗಿ ವದಂತಿ ಇದೆ. ಅಮೀರನ ಕಡೆಯಿಂದ ವಕೀಲರು ಈ ಬೊಲಶೆವಿಕ ಸೈನ್ಯದ ನಾಯಕರಿಗೆ ಭೇಟಿಮಾಡಲು ಹೋಗಿರುವರಂತೆ.

ಪೋಲೆಂಡ—ಪೋಲೆಂಡವು ಈ ಯುದ್ಧದಲ್ಲಿ ತನ್ನ ಸ್ವಾತಂತ್ರ್ಯ ಸಿಕ್ಕಿದ್ದರಿಂದ ತೃಪ್ತಿಹೊಂದದೆ ಲಿಥುವೇನಿಯದ ರಾಜಧಾನಿಯನ್ನು ವಶ ಮಾಡಿಕೊಂಡಿದೆ. ಇದಕ್ಕೆ ಲಿಥುವೇನಿಯದವರು ಆಕ್ಷೇಪಿಸಿ ಸಿಟ್ಟು ಪಟ್ಟವರಾಗಿ ತಿಳಿಸಿದ್ದಾರೆ.

ಐರ್ಲೆಂಡ—ಇವರ ಅಸ್ವಸ್ಥತೆಯು ಇನ್ನೂ ನಿಲ್ಲಲಿಲ್ಲ. ಕೋರ್ಕದ ಲೋರ್ಡ ಮೇಯರ (ಮುನ್ಸಿಪಲ್ ಚೇರ್ಮನರು) ಆಗಿದ್ದ ಮೇಕ್‌ಸ್ವಿನೀ ೭೫ ದಿವಸ ಬ್ರಿಟನದ ಜೈಲಿನಲ್ಲಿ ಉಪವಾಸವಿದ್ದು ಈಗ ಮರಣ ಶಯ್ಯೆಯಲ್ಲಿ ಪವಡಿಸಿದರು.

ಗ್ರೀಸ್—ಈ ದೇಶದ ದೊರೆಗೆ ಒಂದು ಮಂಗನು ಕಚ್ಚಿ ಅದರ ವಿಷದಿಂದ ಅವರು ಪ್ರಾಣಾಂತಿಕ ಸ್ಥಿತಿಯಲ್ಲಿದ್ದಾರೆ.

ಸ್ವದೇಶ ವರ್ತಮಾನ.

ಸರಕಾರಿ ಕ್ವಿನೀನು—ಮದ್ರಾಸಿನ ಸಿಂಕೋನಾ ಇಲಾಖೆಯಿಂದ ಮದ್ರಾಸು ಸಂಸ್ಥಾನದೊಳಗಿನ ಆಸ್ಪತ್ರೆಗಳಿಗೆ ಒದಗಿಸುತ್ತಿದ್ದ ಕ್ವಿನೀನಿಗೆ ಬೆಲೆಯನ್ನು ರತ್ತಲಿಗೆ ೩೩ ರೂಪಾಯಿಯಿಂದ ೧೮ಕ್ಕೆ ಇದೇ ಒಕ್ಟೋಬರ್ ೧ನೇ ತಾರೀಕಿಗೆ ಇಳಿಸಿಯದೆ ಎಂದು ಪ್ರಕಟನೆ ಇದೆ.

ಪೈರುಗಳ ಸ್ಥಿತಿ—ಗತ ವರ್ಷದಲ್ಲಿ ಸಪ್ಟಂಬರ್ ಆಖೈರ್ ಒಳಗೆ ೬೧೫,೬೦೦ ಎಕ್ರೆ ವಿಸ್ತೀರ್ಣದಲ್ಲಿ ಎಳ್ಳನ್ನು ಬಿತ್ತಿದ್ದು ಮಳೆಯ ಸಹಾಯ ಕಡಿಮೆಯಾದ್ದರಿಂದ ಈ ವರ್ಷ ಬರೆ ೪೮೯,೦೦೦ ಎಕ್ರೆ ಸ್ಥಳದಲ್ಲಿ ಮಾತ್ರ ಅದನ್ನು ಬಿತ್ತಿದ್ದಾರೆ ಎಂದು ತಿಳಿಯುತ್ತೇವೆ. ಆದರೆ ಈ ಜಿಲ್ಲೆಯಲ್ಲಿ ಮಾತ್ರ ೧೯೧೯ನೇ ಇಸವಿಯಲ್ಲಿ ೫೦೦ ಎಕ್ರೆಗೆ ಬಿತ್ತಿದ್ದು ಈ ವರ್ಷ ೧೧೧೦೦ ಎಕ್ರೆಯಲ್ಲಿ ಎಳ್ಳನ್ನು ಬಿತ್ತಿರುವರಂತೆ. ಇದೇ ಸಂಸ್ಥಾನದಲ್ಲಿ ಕಬ್ಬಿನ ಪೈರು ಸುಮಾರು ೯೩೦೦ ಎಕ್ರೆ ಹೆಚ್ಚಿಗೆ ಸ್ಥಳದಲ್ಲಿ ಬಿತ್ತಲ್ಪಟ್ಟಿದೆ; ಅಂದರೆ ೯೭,೩೦೦ ಎಕ್ರೆಯಲ್ಲಿ ಪೈರು ಇದೆ. ಬತ್ತದ ಪೈರಿನಲ್ಲಿಯೂ ೬೦೬,೦೦೦ ಎಕ್ರೆ ವಿಸ್ತೀರ್ಣ ಕಡಿಮೆಯಾಗಿದೆ; ಆದರೆ ನಮ್ಮ ಜಿಲ್ಲೆಯಲ್ಲಿ ೫,೦೦೦ ಎಕ್ರೆ ಹೆಚ್ಚಿದೆ. ನೆಲಗಡಲೆಯನ್ನು ೧೩೩,೨೦೦ ಎಕ್ರೆ ಹೆಚ್ಚು ವಿಸ್ತಾರದಲ್ಲಿ ಪೈರು ಮಾಡಿದೆ. ಹತ್ತಿಯ ಪೈರು ೫೫,೪೦೦ ಎಕ್ರೆ ಕಡಿಮೆಯಾಗಿದೆ.

ಅಲೀಘಡದ ವಿದ್ಯಾರ್ಥಿಗಳ ಚಳವಳಿ—ಅಲೀಘಡ ಕಾಲೇಜಿನ ಮುಸಲ್ಮಾನ ವಿದ್ಯಾರ್ಥಿಗಳು ಮಹಾತ್ಮಾ ಗಾಂಧಿ, ಶೌಕತ ಅಲ್ಲಿ, ಮಹಮ್ಮದ ಅಲ್ಲಿ ಇವರ ಬೋಧನೆಯಿಂದ ಉನ್ಮತ್ತರಾಗಿ ಆ ಕಾಲೇಜಿನ ಅಧಿಕಾರಿಗಳು ಸರಕಾರ ಸಹಾಯವನ್ನು, ಮಂಜೂರಾತಿಯನ್ನು ಧಿಕ್ಕರಿಸಬೇಕೆಂದು ಸಭೆ ಸೇರಿ ಸೂಚಿಸಿದಾಗ ಪ್ರಿನ್ಸಿಪಾಲರು ವಿವಿಧ ರೀತಿಯಿಂದ ಸಮಾಧಾನಿಸಿದರೂ ಬಹಳ ಮಟ್ಟಿಗೆ ಸಾಧ್ಯವಾಗಲಿಲ್ಲ. ಈಗ ಮಹಮ್ಮದ ಅಲ್ಲಿಯವರೇ ಸ್ವತಃ ಪ್ರಿನ್ಸಿಪಾಲರಾಗಿ ಒಂದು ನೆಶನಲ್ ಕಾಲೇಜನ್ನು ಸ್ಥಾಪಿಸಲು ನಿಶ್ಚಯಿಸಿ ಚಂದಾ ಎತ್ತುತ್ತಿರುವರು. ಅನೇಕ ವಿದ್ಯಾರ್ಥಿಗಳ ಹೆತ್ತವರೂ ರಕ್ಷಕರೂ ತಮ್ಮ ಮಕ್ಕಳನ್ನು ಮನೆಗಾದರೂ ಕರೆಯಿಸಿಕೊಳ್ಳಬೇಕೆಂದು ಅಲೀಘಡಕ್ಕೆ ಪತ್ರಮುಖೇನ ತಿಳಿಸಿದ್ದಾರೆ.

ಬಕ್ಕಿಂಗ್ಹಾಮ ಮಿಲ್ಲಿನವರ ಮುಷ್ಕರ—ಮದ್ರಾಸ ಶಹರಿನಲ್ಲಿ ಇರುವ ಈ ಕಾರ್ಖಾನೆಯ ಮಜೂರರಲ್ಲಿ ಕೆಲವರಿಗೆ ಸಿಗಬೇಕಾದ ಬಡ್ತಿ ಸಿಗಲಿಲ್ಲವೆಂಬ ಕಾರಣದಿಂದ ಅಸಮಾಧಾನವುಂಟಾಯಿತು. ಆ ಖಾಲಿ ಹಣವನ್ನು ಬೇರೆಯವರಿಗೆ ಕೊಡಲ್ಪಡಲು ಅವರು ಅಂಗೀಕರಿಸಲು ಸಮ್ಮತಿಸಲಿಲ್ಲ. ಇದಕ್ಕಾಗಿ ಅವರನ್ನು ಕೆಲಸದಿಂದ ತೆಗೆದುಹಾಕಲು, ಹಿಂಗಾಡು 'ಶೀವಿಂಗ್' ಮಾಸ್ತರ್ ಬೆಂಟ್ಲಿಯವರ ಈ ಕಾರ್ಯಕ್ರಮವನ್ನು ಸಹಿಸಲಾರದೆ ಮಜೂರರು ಬಿಟ್ಟುಕೊಡದೆ ಅವರಿಗೆ ಮುತ್ತಿಗೆಹಾಕಿ ಅವರ ಮೇಲೆ ಕೈಗೆ ಸಿಕ್ಕಿದ್ದನ್ನು ಎಸೆಯ ತೊಡಗಲು, ಬೆಂಟ್ಲಿ ತನ್ನ ಕೈಯಲ್ಲಿದ್ದ ಪಿಸ್ತೂಲನ್ನು ಎತ್ತಿದರು. ಅದನ್ನು ಜನರು ಕಸುಕೊಂಡರು. ಆ ಮೇಲೆ ಪೋಲೀಸಿನವರು ಅಲ್ಲಿಗೆ ಬಂದು ಗಲಾಟೆ ನಿಲ್ಲಿಸಿದರು. ಈಗ ಈ ಮುಷ್ಕರಗಾರರನ್ನು ಕಾರ್ಖಾನೆಯೊಳಗೆ ಬಾರದಂತೆ ಮಾಡಿದ್ದಾರೆ.

ಲಾಹೋರಿನ ವಿದ್ಯಾರ್ಥಿಗಳು—ಇಲ್ಲಿಯ ಕಾಲೇಜುಗಳ ವಿದ್ಯಾರ್ಥಿಗಳಲ್ಲಿ ಸುಮಾರು ೧೦೦೦ ಮಂದಿ ಗೋಲ್ಡ ಎಂಬಲ್ಲಿ ಸಭೆ ಸೇರಿ ಅಸಹಕಾರಿತೆಯನ್ನು ಕುರಿತು ಚರ್ಚಿಸಿ, ಡಾ. ಕಿಚಲೂ, ಶ್ರೀಮತಿ ಸರಳಾದೇವಿ ಚೌಧುರಾಣಿ, ಶ್ರೀಯುತ ಫಣೀಂದ್ರನಾಥದತ್ತ ಮುಂತಾದ ಮುಖಂಡರೊಂದಿಗೆ ದೊಡ್ಡ ಮೆರವಣಿಗೆಯಾಗಿ ಹೋಗಿ, ಸರಕಾರ ಗ್ರಾಂಟನ್ನು [illegible]

...ವಂದ [illegible] ಯುವಕರು [illegible] ಸರಕಾರಕ್ಕೆ ಪ್ರಕಟಿಸುವವರೆಗೆ ಅಸಹಕಾರಿತೆಯನ್ನು ಆಚರಿಸಬೇಕೆಂದು ನಿರ್ಧರಿಸಿದರು.

ಸೀಕ್ ಲೀಗ್—ಇವರ ಆಧಿವೇಶನವು [illegible] ಅಸಹಕಾರಿತೆಯನ್ನು ಒಪ್ಪಿಕೊಂಡಿದ್ದಾಗಿ, ಸುಮಾರು ೩೦೦೦ ಪ್ರತಿನಿಧಿಗಳೂ ೫೦೦೦ ಸ್ತ್ರೀಯರೂ ಇದ್ದು ಠರಾವು ಮಾಡಿದರು. ಪ್ರೇಕ್ಷಕರಲ್ಲಿ ಯುದ್ಧ ಸೈನ್ಯದಿಂದ ನಿವೃತ್ತರಾದ ಜವಾನರೂ ಇದ್ದರಂತೆ. ಕೆಲವರು ತಮಗೆ ಸಿಕ್ಕಿದ ಬಿರುದುಗಳನ್ನು ಸರಕಾರದ ಬಳಿಗೆ ಹಿಂದಕ್ಕೆ ಕಳುಹಿಸಲು ತಯಾರು ನಡೆಸಿರುವರಂತೆ.

ಮದರಸಾ-ಇ-ಅಜಾಮ್ ಕಾಲೇಜು—ಮದರಾಸಿನ ಮುಸಲ್ಮಾನರ ಬಗ್ಗೆ ಪ್ರವರ್ತಿಸಿದ ಕಾಲೇಜಿನ ವಿದ್ಯಾರ್ಥಿಗಳು ಅಸಹಕಾರಿತೆಯನ್ನು ಕುರಿತು ಗುಟ್ಟಿನಿಂದ ಸಭೆಸೇರಿ ಚರ್ಚಿಸಿದ ವರ್ತಮಾನ ತಿಳಿದು ಅದರ ಪ್ರಿನ್ಸಿಪಾಲರು 'ನಿಮಗೆ ಆಲೀಘಡದ ನಿಮ್ಮ ಬಂಧುಗಳಂತೆ [illegible] ಈ ಚಳವಳದಲ್ಲಿ ಕೈಹಾಕುವುದು ಸರಿಯಲ್ಲ. ಇದರಿಂದ ನಿಮಗೆ ಒಂದು ಬಗೆಯ ಲಾಂಛನವೇ ಬರದೇ ಹೊರತು ಬೇರೇನೂ ಇಲ್ಲ' ಎಂದು ಬೋಧಿಸಿದರು. ತರುವಾಯ ತಮಗೆ ತಮ್ಮ ಧರ್ಮಗುರುಗಳೂ ಮಹಮ್ಮದಲ್ಲಿ ಮೊದಲಾದವರೂ ಬಂದ ವಿನಾ ಖಂಡಿತ ಅಭಿಪ್ರಾಯವನ್ನು ಹೇಳಲು ಬರುವುದಿಲ್ಲವೆಂದದಕ್ಕೆ ಅಷ್ಟು ಸಮಯ ಕೊಡಲಾರೆನೆಂದು ಪ್ರಿನ್ಸಿಪಾಲರು ಹೇಳಿದರಂತೆ. ಈಗ ತತ್ಕಾಲದಲ್ಲಿ ಈ ತರುಣರು ಯಾವುದೊಂದನ್ನು ನಿಶ್ಚಯಿಸಲಿಲ್ಲವೆಂದು ತಿಳಿದುಬರುತ್ತದೆ.

ದಕ್ಷಿಣ ಕನ್ನಡ.

ಸ್ವೀಕಾರದ ಪ್ರಕಟಣೆಗಳು.

'ಕರೋಡಿ ಸುಬ್ಬರಾಯರ ಭೀಷ್ಮಬೋಧನೆ' ಎಂಬ ಲೇಖನವು ಪ್ರಕಟನೆಗೆ ಬಂದಿರುವುದು. ಅನ್ಯ ಪತ್ರಿಕೆಗಳಲ್ಲಿ ಬಂದ ಲೇಖನಕ್ಕೆ ಈ ಪತ್ರಿಕೆಯಲ್ಲಿ ಪ್ರತ್ಯುತ್ತರವನ್ನು ಪ್ರಕಟಿಸಲು ನಾವು ಕೈಕೊಡುವುದಿಲ್ಲ, ಅದೇ ಪತ್ರಿಕೆಗಳಲ್ಲಿ ಆ ಉತ್ತರವನ್ನು ಪ್ರಕಟಿಸಲು ಯತ್ನಿಸುವುದು ಯುಕ್ತ. (ಪತ್ರಕರ್ತ)

ತಿದ್ದುಪಡಿ:—ನಮ್ಮ ೮—೧೦—೨೦ನೇ ತಾರೀಕಿನ ಸಂಚಿಕೆಯಲ್ಲಿ ೮ನೆ ಪಾನಿನಲ್ಲಿ ಕಾರ್ಕಳ ತಾಲೂಕು ಮೂಗಳ ಶಾನುಭೋಗರ ಏರ್ಪಾಡಿನ ಪ್ರೊಸೀಡಿಂಗ್ಸಿನ (h) ಕಲಮಿನಲ್ಲಿ 'ಉದ್ಯೋಗಗಳ' ಎಂಬದರ ಬದಲಿಗೆ 'ಉಗ್ರಾಣಗಳು' ಎಂದು ಓದಬೇಕೆಂತ ಆ ಬಾತ್ಮೀದಾರರು ತಿಳಿಸಿರುವರು.

ಪುತ್ತೂರು:—ಶ್ರೀ ಶಾರದಾ ವಾಚನಮಂದಿರದ ೧೪ನೆ ವರ್ಷ ವರ್ಧಂತಿಯು ಸಮಾರಂಭವು ಇದೇ ತಾ. ೩೧—೧೦—೨೦ ಅಪರಾಹ್ನ ಗಂಟೆ ೪ಕ್ಕೆ ಶ್ರೀ ವೆಂಕಟರಮಣ ದೇವಸ್ಥಾನದ ಬಳಿ ಶ್ರೀವಾದೀಂದ್ರ ಸಭಾಸದನದ ಮಾಳಿಗೆಯಲ್ಲಿ ಡಿಸ್ಟ್ರಿಕ್ಟ್ ಮುನಸೀಫ್ ಮ। ರಾ। ರಾ। ಬಿ. ಎಸ್. ರಾಜಾರಾವ್ ಅವರ್ಗಳ್ ಬಿ. ಎ. ಬಿ. ಎಲ್ ಇವರ ಅಧ್ಯಕ್ಷತೆಯಲ್ಲಿ ಜರಗುವುದು. 'ತಿಲಕಸಂದೇಶ'ದ ಸಂಪಾದಕರಾದ ಶ್ರೀಯುತ ದತ್ತಾತ್ರಯ ಕೃಷ್ಣ ಭಾರದ್ವಾಜ ವಿದ್ಯಾಭೂಷಣ ಇವರು 'ಹಿಂದೂ ವೈಭವ' ವೆಂಬ ವಿಷಯವನ್ನೆತ್ತಿ ಭಾಷಣ ಮಾಡುವರು.

ಕುಂಬದಕೋಣೆ:—ಇಲ್ಲಿಯ ಸಹಕಾರ ಸಂಘದ ಮಹಾಸಭೆಯು ಹೆರಂಜಾಲ ಬೋರ್ಡುಶಾಲೆಯಲ್ಲಿ ಇದೇ ತಿಂಗಳ ೧೨ನೆ ತಾರೀಕಿಗೆ ಜರಗಿತು. ಓನರರಿ ಅಸಿಸ್ಟಾಂಟು ರಿಜಿಸ್ಟ್ರಾರ ರಾ। ಕೆ. ಎಲ್. ಭಂಡಾರಿಯವರೂ ಸಹಕಾರ ಇಲಾಖೆ ಇನ್ಸ್‌ಪೆಕ್ಟರರೂ ಸುಮಾರು ೩೦೦ಕ್ಕೆ ಮೀರಿದ ಮೆಂಬರ ಮತ್ತು ಮೆಂಬರಲ್ಲದ ಜನಸ್ತೋಮವು ನೆರೆದಿದ್ದರು. ವಾದ್ಯಘೋಷದಿಂದ ಸಭಿಕರು ಸಂಘದ ಅಧ್ಯಕ್ಷರವರ ಮನೆಯಿಂದ ಸಭಾಸ್ಥಾನಕ್ಕೆ ಬಂದು ನೆರೆದ ನಂತರ ಅಧ್ಯಕ್ಷರು ಸಹಕಾರ ಪ್ರಚಾರ ಮತ್ತು ಸಹಕಾರದ ಮಹತ್ವವನ್ನು ಕುರಿತು ಚೆಲೋ ಭಾಷಣವನ್ನು ಮಾಡಿದರು. ಅನಂತರ ಮಹಾಸಭೆಯ ಕಾರ್ಯಕ್ರಮವೆಲ್ಲ ಸರಿಯಾಗಿ ನೆರವೇರಿತು. ಬಂದವರೆಲ್ಲ ಅನೇಕರಿಗೆ ಅಧ್ಯಕ್ಷರು ಊಟಉಪಚಾರಗಳಿಂದಲೂ ತಾನು ತಯಾರಿಸಿರುವ ಸಹಕಾರ ಪದ್ಯಗಳ ಪಠನದಿಂದಲೂ ರಾತ್ರಿ ಮೃದಂಗ ಸೇವೆಯಿಂದಲೂ ಆನಂದಗೊಳಿಸಿದರು.

ಪಡಂಗಾಡಿ:—ಈ ಗ್ರಾಮದಲ್ಲಿ ಗುರುವಾಯನ ಕೆರೆಯಿಂದ ವೇಣೂರಿಗೆ ಹೋಗುವ ರಸ್ತೆಬದಿ ಕನ್ನಡಿ ಕಟ್ಟೆ ಎಂಬಲ್ಲಿ ಮೂರನೇ ಮೈಲು ಕಲ್ಲಿನ ಎದುರಲ್ಲಿ ಗುರುವಾರ ಸಂತೆ ನೇಮಕಮಾಡ ಬೇಕಾಗಿ ಬೆಳ್ತಂಗಡಿ ತಿಮ್ಮಟಿ ಕಲೆಕ್ಟರ ದೊರೆಯವರ ಸನ್ನಿಧಾನಕ್ಕೆ ಈ ಮೊದಲು ರಿಪೋರ್ಟ ಮಾಡಿರುತ್ತದೆ. ಈ ವಿಷಯದಲ್ಲಿ ಅಧಿಕಾರಿಗಳು ಸಹಾಯ ಮಾಡುವರೆಂದು ನಂಬುತ್ತೇನೆ.

ಸುಳ್ಯ:—೫—೧೦—೨೦ರಲ್ಲಿ ಸಾಯಂಕಾಲ ೪ ಘಂಟೆಗೆ ಮುಡ್ನೂರು, ಪಡ್ನೂರು, ಐವರ್ನಾಡು, ಅರಂತೋಡು, ಸಂಪಾಜೆ, ಆಲೆಟ್ಟಿ, ಉಬ್ರಂಗಳ, ಮಿತ್ತೂರು, ಅಜ್ಜಾವರ, ದುಗ್ಗಲಡ್ಕ, ಸುಳ್ಯ ಗ್ರಾಮಗಳ ಮಹಾಜನರ ದುಃಖ ಪ್ರದರ್ಶಕ ಸಭೆಯೊಂದು ನೆರೆದಿತ್ತು. ಕೂಡಿದ ನೂರಾರು ಮಂದಿ ಎದ್ದು ನಿಂತು ಶ್ರೀ ದೇವರನ್ನು ಐದನೇ ಜೋರ್ಜ ಚಕ್ರವರ್ತಿಗಳಿಗೆ ಜಯವಾಗಲೆಂದೂ ಲೋ। ತಿಲಕರವರ ಆತ್ಮಕ್ಕೆ ಶಾಂತಿಯನ್ನು ಕೊಡಲಿ ಎಂದು ಪ್ರಾರ್ಥಿಸಿ ಲೋ। ತಿಲಕರವರ ಪಟವನ್ನು ಎತ್ತರವಾಗಿ ಇಟ್ಟು ಸಭೆಯು ಪ್ರಾರಂಭವಾಯಿತು. ಆಗ ಮ। ರಾ। ರಾ। ಅಜ್ಜಾವರ ಸುಬ್ಬಯ್ಯನವರು ಲೋ। ತಿಲಕರವರ ಜೀವನ ಚರಿತ್ರೆಯನ್ನು ತುರುಮಾತಿನಿಂದ ಸಭಿಕರ ಮನಸ್ಸು ಬಹಳ ಸಂಕೋಚವಾಗುವಂತೆ ಹೇಳಿದ್ದಲ್ಲದೆ ಅನೇಕ ಮಹನೀಯರ ಉಪನ್ಯಾಸಗಳು ಇದ್ದವು. ಕಳೆದ ಬೊಕ್ಕಾಡಿ ಸಭೆಯಲ್ಲಿ ಆದ ಠರಾವುಗಳೆಲ್ಲ ಈ ಸಭೆಯಲ್ಲಿ ಮಂಜೂರುವಾದಾಯಿತು. ಕೂಡಿದ ಸಭಿಕರಿಂದ ತಿಲಕರವರ ಸ್ಮಾರಕ ಫಂಡಿಗೆ ರೂ. ೬೯-೮-೦ ವಾಗ್ದಾನವಾಗಿ ಈ ಪೈಕಿ ರೂ. ೫-೪-೦ ವಸೂಲಿ ಕೂಡ ಆಯಿತು. ಈ ವರೇಗೆ ಸದರಿ ಫಂಡಿಗೆ ರೂ. ೧೦೪೬—೧ ವಾಗ್ದಾನವಾದ್ದು ತುಂಬಾ ಸಂತೋಷ. ಕೂಡಿದ ಸಭಿಕರಿಗೆ ಮ। ರಾ। ರಾ। ಯಂ. ಯಂ. ಮೊನು ಸಾಹೇಬರ ಕಡೆಯಿಂದ ಸಕ್ಕರೆ, ಬಾಳೆಹಣ್ಣು ಮತ್ತು ತಾಂಬೂಲಾದಿಗಳಿಂದ ಸತ್ಕರಿಸಿ ಸಭೆಯು ಮುಕ್ತಾಯವಾಯಿತು. ಇಲ್ಲಿಯ ಪೋಸ್ಟ ಆಫೀಸಿಗೆ ೪೦ ಗ್ರಾಮಗಳು ಇದ್ದು ಇಬ್ಬರು ಪೋಸ್ಟುಮೇನುಗಳಿಂದ ಒಂದು ವಾರದಲ್ಲಿ ಕೇವಲ ೫॥ ದಿವಸಗಳಲ್ಲಿ ವರ್ತಮಾನ ಪತ್ರಿಕೆಗಳನ್ನು ಪಾರ್ಸೆಲು ಬುಕ್ಕು ಕಾಗದ ವಗೈರೆ ಸಾವಿರಾರು ಕೆಲಸಗಳನ್ನು ಈ ಕಾಡುಪ್ರಾಂತ್ಯದ ಗ್ರಾಮಗಳಲ್ಲಿ ಮಾಡುವದು ಬಹಳ ಕಷ್ಟವೇ ಸರಿ. ಈ ಸಂಗತಿಯನ್ನು ಕಳೆದ ಜಮಾಬಂದಿ ಸಮಯ ನಡೆದ ಕಲ್ಪತ್ತಿನಲ್ಲಿ ಹೇಳಿಕೊಂಡದ್ದು ಅರಣ್ಯರೋಧನವಾದ್ದು ತುಂಬಾ ವಿಷಾದಕರ.

ಇಲ್ಲಿ ಆಗಾಗ್ಗೆ ಕಾರ್ಡು ಕವರು ವಗೈರೆ ಸಿಕ್ಕದೆ ಜನರಿಗೆ ಬಹಳ ಕಷ್ಟವಾಗುತ್ತಿರುವದರಿಂದ ಈ ಕಡೆಗೆ ಪೋಸ್ಟಲ ಆಫೀಸಿನ ಮೇಲಧಿಕಾರಿಗಳು ನೋಡಬಾರದೆ?

ಕಾಲ್ಸೂರು:—ಇಲ್ಲಿ ಹುಲಿಗಳ ಉಪದ್ರವ ದಿನೇ ದಿನೇ ಹೆಚ್ಚಾಗುತ್ತ ಬರುತ್ತಿದೆ.

ಸಂಪಾಜೆ:—[illegible] ರಿಂದ ಸಮ್ಮಂದ [illegible] ಇದಕ್ಕೆ ಪೋಲಿಸ ಸುಪರಿಂಟೆಂಡೆಂಟ [illegible] ಇಲ್ಲಿಂದ ೬ ಮೈಲು ದೂರ ಇರುವ ಮಂಗಳೂರಿಗೆ ಹೋಗಿ ಬರುವುದು ಬಹಳ ಕಷ್ಟವೇ ಸರಿ. ಆದುದರಿಂದ ಮೊದಲು ಇದ್ದಂತೆಯೇ ಆಯಾಯ [illegible] ಇಡುವ ಹಾಗೆ ಹುಕುಂ ಆಗುತ್ತಿದ್ದರೆ ಬಡವರಿಗೆ ತುಂಬಾ ಉಪಕಾರವಾಗುತ್ತಿತ್ತು.

ಅರಂತೋಡು:—ಇದೇ ತಿಂಗಳ ತಾ. ೩೧-೧೦-೨೦ನೇ ಆದಿತ್ಯವಾರ ಹಗಲು ಘಂಟೆ ೨ರ ಸಮಯಕ್ಕೆ ದಿವಂಗತರಾದ ಲೋಕಮಾನ್ಯ ತಿಲಕರವರ ದುಃಖ ಪ್ರದರ್ಶಕವಾದ ಸಭೆಯು ಕೂಡುವುದರಿಂದ ಇಲ್ಲಿಯವರು ದಯವಿಟ್ಟು ಬರಬೇಕಾಗಿ ವಿನಂತಿ.

ಬಿಜೂರು:—ಇದೇ ತಾ. ೧೧—೧೦—೨೦ನೇ ಸೋಮವಾರ ಬೆಳಿಗ್ಗೆ ೯ ಘಂಟೆಗೆ ಬಿಜೂರು ಬೋರ್ಡು ಎಲಿಮೆಂಟರಿ ಶಾಲೆಯಲ್ಲಿ, ಇಲ್ಲಿಯ ಸಹಕಾರ ಸಂಘದ ೧೯೨೦ನೇ ವರ್ಷದ ೧ನೇ ಮಹಾ ಸಭೆಯು ಮ। ರಾ। ಬಿಜೂರು ಪಟೇಲ್ ಬವಲಾಡಿ ತೂರಪ್ಪಯ್ಯನವರ ಅಧ್ಯಕ್ಷತೆಯಲ್ಲಿ ನೆರವೇರಿತು.

ಈ ಸಭೆಗೆ ಮ. ರಾ. ಆನರರಿ ಅಸಿಸ್ಟಾಂಟ್ ರಿಜಿಸ್ಟ್ರಾರರಾದ ಕೆ. ಎಲ್. ಭಂಡಾರಿಯವರೂ, ಸಹಕಾರ ಸಂಘಗಳ ಇನ್ಸ್‌ಪೆಕ್ಟರಾದ, ಮ। ರಾ। ಗಂಗೊಳ್ಳಿ ನರಸಿಂಹಾಚಾರ್ಯರವರೂ ಬಂದಿದ್ದರು.

ಈ ಸಂಘದ ಎಲ್ಲಾ ರೂಲ್ಸುಗಳನ್ನು ಹೊಸ ಮಾದರಿ ಉಪಕ್ರಮದಂತೆ ತಿದ್ದುಪಡಿ ಮಾಡಬೇಕೆಂತಲೂ; ಮ। ರಾ। ಅಸಿಸ್ಟಾಂಟು ರಿಜಿಸ್ಟ್ರಾರವರ ಸೂಚನೆಯಂತೆ ಬಡ್ಡಿಯ ದರವನ್ನು ಶೇಕಡಾ ರೂ. ೧೦—೧೫—೦ಕ್ಕೆ ಏರಿಸಬಹುದೆಂತಲೂ, ವಾಯಿದೆ ಕಳೆದ ಸಾಲಗಳ ಮೇಲೆ ಶೇಕಡಾ ರೂ. ೧೫—೧೦—೦ರಂತೆ ದಂಡನೆ ಬಡ್ಡಿ ವಿಧಿಸಬಹುದೆಂತಲೂ ನಿರ್ಣಯಿಸಲಾಗಿದೆ. ಮತ್ತು ಸಂಘದ (ಮೆಂಬರರ) ಉಪಯೋಗದ ಬಗ್ಗೆ ಎರಡು ಕಟ್ಟಿನ ಗಾಣಗಳನ್ನು ತರಿಸಬೇಕಾಗಿ ಸಹಾ ನಿರ್ಣಯಿಸಿಯದೆ.

ಸುಬ್ರಮಣ್ಯ:—ಈ ಮಲೆನಾಡು ಪ್ರಾಂತ್ಯದಲ್ಲಿ ಕಾಡಾನೆಗಳ ಕಾಟವು ದಿನೇ ದಿನೇ ಹೆಚ್ಚುತ್ತಾ ಬರುತ್ತದೆ. ಸುಬ್ರಮಣ್ಯಕ್ಕೆ ಸಮೀಪವಿರುವ ಬಾಳುಗೋಡ ಗ್ರಾಮದಲ್ಲಿ ೮ ದಿವಸಗಳ ಹಿಂದೆ ಕಾಡಾನೆಗಳು ಬೈಲುಗಳಿಗೆ ಇಳಿದು ೮-೧೦ ತೆಂಗಿನ ಮರಗಳನ್ನೂ ಸ್ವಲ್ಪಾಂಶ ಅಡಿಕೆ ತೋಟವನ್ನೂ ನಿರ್ಮೂಲ ಪಡಿಸಿದ್ದಲ್ಲದೆ ಸಾಧಾರಣ ೫-೬ ಎಕ್ರೆ ಸ್ಥಳದಲ್ಲಿದ್ದ ಬೆಳೆಯನ್ನು ಪೂರ್ತಿ ನಾಶ ಪಡಿಸಿರುತ್ತವೆ. ಹೀಗೆಯೇ ಕಲ್ಮಕ್ಕಾರು, ಕೊಲ್ಲಮೊಗರು, ಹರಿಹರ, ಬಳ್ಳಕ್ಕ, ಸುಬ್ರಮಣ್ಯ, ಕಿಮ, ಬಳಿನಾಲೆ, ಕೊಂಬಾರು, ಶಿರಾಡಿ, ಇವೇ ಮೊದಲಾದ ಗ್ರಾಮಗಳಲ್ಲಿಯೂ ಕೂಡಾ ಈ ಆನೆಗಳ ಹಾವಳಿಯು ಮಳೆಗಾಲ ಪ್ರಾರಂಭದಿಂದಲೇ ಸುರು ಆಗಿ ಬೆಳೆಯುವ ದವಸ ಧಾನ್ಯಗಳು ಮುಕ್ಕಾಲು ಪಾಲು ಆನೆಗಳಿಗೆ ತುತ್ತಾಗಿ ಹೋದ್ದರಿಂದ ಈ ನಷ್ಟ ಕಷ್ಟಗಳನ್ನು ಸಹಿಸಿಕೊಂಡು ಭೂಕಂದಾಯವನ್ನು ಕೆಟ್ಟು ಅನುಕಷ್ಟದಿಂದ ಜೀವಿಸುವಂಥಾ ಬಡ ಬಗ್ಗರ ಗೋಳನ್ನು ದೇಶೀಯರು ಸರಕಾರದವರು ಕೇಳದಿರುವುದು ಬಹಳ ವ್ಯಸನಕರವೇ ಸರಿ!

ರಾತ್ರಿ ರಸ್ತೆಗಳಲ್ಲಿ ಸಹ ಮನುಷ್ಯರ ಭಯವಿಲ್ಲದೆ ಹಗಲು ಹೊತ್ತಿನಲ್ಲಿಯೇ ಆನೆಗಳು ನಿರ್ಭಯವಾಗಿ ತಿರುಗಾಡುತ್ತವೆ—ಒಂದು ವಾರದ ಹಿಂದೆ ಕ್ಯಾನಕ್ಕಿದು ಗ್ರಾಮದ ಕೆದಲ ಬಲ್ಲಾಳ ಗೌಡರು ಕಾರ್ಯಾರ್ಥವಾಗಿ ಸುಬ್ರಮಣ್ಯಕ್ಕೆ ಬಂದವರು ವಾಪಾಸು ಮನೆಗೆ ಹೋಗುವಾಗ ಹಾದಿ ಬೀದಿಯಲ್ಲಿ ಆನೆಯು ಕಂಡು ಸಿಕ್ಕಿ ಬಿದ್ದವರೆಂದು ಓಡಿ ಯುಕ್ತಿಯಿಂದ ತಪ್ಪಿಸಿಕೊಂಡರು. ಇವರು ಒಬ್ಬ ಧಾಂಡಿಗ ಯುವಕನಾದ್ದರಿಂದ ಜೀವ ತಪ್ಪಿಸಿಕೊಂಡರೇ ಹೊರತು ಸಾಧಾರಣ ಮನುಷ್ಯರಿಂದ ಸಾಧ್ಯವಾಗುತ್ತಿರಲಿಲ್ಲ. ಆದರೂ ಓಡುವಾಗ ಬಿದ್ದು ಮೈಯಲ್ಲಾ ಜಖಂ ಆಗಿ ಸುಮಾರು ೧೫ ದಿವಸಗಳ ಚಿಕಿತ್ಸೆಯು ಇವರಿಗೆ ಬೇಕಾಗುವುದು.

ಈ ರೀತಿ ನಷ್ಟ ಕಷ್ಟಗಳನ್ನು ಪಡಿಸುವಂಥಾ ಈ ಪ್ರಾಣಿಗಳನ್ನು ಸರಕಾರದವರು ಸೈಕರ ಸಮಯಕ್ಕನುಸಾರವಾಗಿ ಬೇಟೆಯಾಡಿಸಿ ಆಗಾಗ್ಗೆ ನಾಶಪಡಿಸದ್ದರಿಂದ ರೈಯತರು ಬಿಲ್ಲೇಕನಲ್ಲಿ ಕೂಡಾ ಇಂಥಾ ಮೃಗಗಳನ್ನು ಗುಂಡು ಹೊಡೆದು ನಾಶಪಡಿಸುವರೆ ಸರಕಾರದವರು ಹುಕುಂ ದಯಪಾಲಿಸುವುದೇ ಸದರಿ ಜಂತುಗಳು ನಾಶಕ್ಕೆ ಸುಲಭೋಪಾಯವಲ್ಲವೆ?

ಉಬರಡ್ಕ ಮಿತ್ತೂರು—ಇಲ್ಲಿ ಕಾಡುಹಂದಿಗಳ ಉಪದ್ರವಗಳಿಂದ ಬೆಳೆ ಬಹಳ ನಷ್ಟ. ಅಲ್ಲಲ್ಲಿ ತೆಂಗಿನಕಾಯಿ ಅಡಿಕೆ ವಗೈರೆ ಚಿಲ್ಲರೆ ಕಳವುಗಳೂ ಆಗುತ್ತವೆ. ಪೋಲೀಸು ಇಲಾಖೆಯವರು ದಯವಿಟ್ಟಲ್ಲಿ ಸ್ವಲ್ಪ ಶಾಂತಿಯಾಗುವುದೆಂದು ಭರವಸೆ!

ಕಾಸರಗೋಡು:—ಬಹುಕಾಲ ಹೀನ ಸ್ಥಿತಿಯಲ್ಲಿರುತ್ತಿದ್ದ ಶ್ರೀ ಮಲ್ಲಿಕಾರ್ಜುನ ದೇವಸ್ಥಾನದ ಕೆರೆಗಳೆಂತೂ ಜೀರ್ಣೋದ್ಧಾರವಾಗುತ್ತವೆಂಬ ಸಂಗತಿ ವರ್ತಮಾನಪತ್ರ ಆದರೆ ಮೊನ್ನೆ ತಾನೆ ಹೊಸತಾಗಿ ಕಟ್ಟಿಸಿದ ಹತ್ತು ಐವತ್ತು ಸಮಸ್ತರ ಶ್ರೀ ವೆಂಕಟರಮಣ ದೇವಸ್ಥಾನದ ಕೆರೆಯ ಕೆಲಸವೆಂತು ಅರ್ಧದಲ್ಲಿಯೇ ಮಳೆಬಿದ್ದುಹೊಂದಿ ದಿನೇ ದಿನೇ ನಿಶ್ಚಯವಾಗುತ್ತಾ ಬರುತ್ತಿದೆ. ಹಾಗೆ ಅರ್ಧದಲ್ಲಿಯೇ ನಿಲ್ಲಿಸುವುದಾದರೆ ಈ ಕೆರೆಯ ವಿಷಯದಲ್ಲಿ ಸುಮ್ಮನೆ ದ್ರವ್ಯವೆಚ್ಚ ಮಾಡಿದುದು ಅನಾವಶ್ಯಕವು. ಈ ವಿಷಯದಲ್ಲಿ ಇನ್ನಾದರೂ ನಿಗಾತೆಗೆದುಕೊಳ್ಳುತ್ತಿದ್ದರೆ ಕೆರೆ ಕಟ್ಟಿಸಿದುದಕ್ಕೆ ಒಂದು ಪ್ರಯೋಜನ. ಇಲ್ಲವಾದರೆ ಗುಡ್ಡೆಗೆ ಮಣ್ಣು ಹೊತ್ತಂತೆಯೇ ಸರಿ.

ಬೀದಿಗಳಲ್ಲಿ ಸಾಧಾರಣ, ಒಂದು ಯಾ ೨ ಫರ್ಲಾಂಗುಗಳಿಗೆ ಒಂದರಂತೆ ಲೋಕಲ್‌ಫಂಡ್ ಲಾಟೀನುಗಳು ಅಂದರೆ ಇಡೀ ಊರಿನಲ್ಲಿ ಹೆಚ್ಚಾದರೆ ೧೩ ಯಾ ೨೦ ಲಾಟೀನುಗಳು ಇರಬಹುದು. ಈ ೨೦ ಲಾಟೀನುಗಳಿಗೆ ದಿನಕ್ಕೆ ಒಟ್ಟು ॥ ಕುಪ್ಪಿ ಯಾ, ಹೆಚ್ಚಾದರೆ, ಒಂದು ಕುಪ್ಪಿ ಎಣ್ಣೆ ಬೇಕಾಗುತ್ತದೋ ಇಲ್ಲವೋ? ಯಾವಾಗ ನೋಡಿದರೂ ಬೀದಿಯಲ್ಲಿ ಕತ್ತಲೆ. ಅದರಲ್ಲಿಯೂ ಮಳೆಬರುತ್ತಿದ್ದರೆ ಹೇಳುವುದೇ ಬೇಡ. ರಾತ್ರಿಕಾಲದಲ್ಲಿ ಅತ್ತಿತ್ತ ಹೋಗುವ ಬಡಜನರು ಮಾತೃಭೂಮಿಗೆ ಆಗಾಗ್ಗೆ ಸಾಷ್ಟಾಂಗವೆರಗುವುದೇ ಸರಿ. ಈ ಸಂಗತಿಗಳನ್ನು ಪರಾಂಬರಿಸಿ ಒಂದೊಂದು ಫರ್ಲಾಂಗಿಗೆ ೨ರಂತೆ ಯಾದರೂ ಲಾಟೀನುಗಳನ್ನು ಇರಿಸಿ, ಕನಿಷ್ಠಪಕ್ಷಕ್ಕೆ ರಾತ್ರಿ ೧೨ ಘಂಟೆಯ ತನಕವಾದರೂ ಉರಿಯುವಂತೆ ಮಾಡಿದರೆ ಬಹಳ ಉಪಕಾರವಾಗುತ್ತಿತ್ತು.

ಕೆಲಕಾಲದ ಹಿಂದೆ ಇಲ್ಲಿಂದ ಪುತ್ತೂರಿಗೂ ಮಡಿಕೇರಿಗೂ ಹೋಗುವರೆ ಒಂದೇ ಮೋಟಾರ್‌ಬಸ್ ಟ್ರಾಫಿಕ್ ತೆರೆಯಬೇಕೆಂತ ಇಲ್ಲಿಯ ಕೆಲ ಜನವಾಸ್ತವ್ಯರು ಆಗಾಗ್ಗೆ ಆಲೋಚಿಸುತ್ತಿದ್ದರು. ಹಾಗೆ ಇಲ್ಲಿಂದ ಸೀದಾ ಪುತ್ತೂರಿಗೂ ಅಲ್ಲಿಂದ ಮಡಿಕೇರಿಗೂ ಬಸ್ ಟ್ರಾಫಿಕ್ ಇಡುತ್ತಿದ್ದರೆ, ಪ್ರಯಾಣಿಕರು ಇಲ್ಲಿಂದ ಮಂಗಳೂರಿಗೆ ಹೋಗಿ ಅಲ್ಲಿಂದ ಆ ತಾಲೂಕಿನ ಡಿವಿಜನಲ್ ಹೆಡ್ ಕ್ವಾರ್ಟರಾದ ಪುತ್ತೂರಿಗೆ ಹೋಗಿ ಅನಾವಶ್ಯಕವಾಗಿ ಸಮಯವನ್ನು ಕಳೆಯುವುದು ಬೇಡವಿತ್ತು. ಅನೇಕರು ಈ ಕಷ್ಟವನ್ನು ಈಗಲೂ ಅನುಭವಿಸುತ್ತಿರುತ್ತಾರೆ. ಇಂಥಾ ಒಂದು ಕಂಪೆನಿಯನ್ನು ಇಲ್ಲಿ ಶೀಘ್ರದಲ್ಲಿಯೇ ಇಡುತ್ತಿದ್ದರೆ ದಿನ ಒಂದಕ್ಕೆ ಎಷ್ಟೋ ಜನರು ಇಲ್ಲಿಂದ ಪುತ್ತೂರಿಗೂ ಪುತ್ತೂರಿಂದ ಇಲ್ಲಿಗೂ ಹೋಗಿಬರಲು ಅನುಕೂಲವಾಗುವ ಸಂಭವವಿದೆ. ಇದಕ್ಕೆ ಈ ಊರಿನವರ ಪ್ರೋತ್ಸಾಹವೂ ಸಿಕ್ಕೀತು.

ಸ್ವದೇಶಾಭಿಮಾನಿ.

[illegible] ಶುಕ್ರವಾರ.

ಸ್ಫುಟ ವಿಚಾರಗಳು.

೧. ಈಗ ಎಷ್ಟೋ ಸಮಯದಿಂದ ನಿರೀಕ್ಷಣೆಯಲ್ಲಿದ್ದ ಇಂಗ್ಲಂಡಿನೊಳಗಿನ ಗನಿಗಳಲ್ಲಿ ಕೆಲಸಮಾಡುವವರ ಮುಷ್ಕರವು ಪ್ರಾರಂಭವಾಗಿದೆ. ಈ ಮುಷ್ಕರವು ಬಿದ್ದೀತು, ಬಿದ್ದೀತು ಎಂದು ಈಗ ಎಷ್ಟೋ ಸಮಯದಿಂದ ವಾರ್ತೆಗಳು ಬರುತಿದ್ದವು. ಆದರೂ ಅಧಿಕಾರಿಗಳ ಬುದ್ಧಿವಂತಿಕೆ ಮತ್ತು ದೂರದರ್ಶಿತೆಯ ಬಲದಿಂದ ಮುಷ್ಕರದ ಅಸಹ್ಯಪ್ರಸಂಗವು ಬರಲಿಕ್ಕಿಲ್ಲವೆಂಬ ಆಸೆಯು ಇತ್ತು. ಆದರೆ ಅಪರಿಹಾರ್ಯವಾದ ಮುಷ್ಕರವು ಬಂದೇ ಬಿಟ್ಟಿತು. ಇದರ ಮೇಲಿಂದ ಅಧಿಕಾರಿಗಳ ಬುದ್ಧಿವಂತಿಕೆ ಮತ್ತು ದೂರದರ್ಶಿತ್ವದ ಉಪಯೋಗವು ಹೆಚ್ಚಿನ ಮಟ್ಟಿಗೆ ಆಗಲಿಲ್ಲವೆಂದು ಕಷ್ಟದಿಂದ ಹೇಳಬೇಕಾಗುತ್ತದೆ! ಈ ಮುಷ್ಕರದಿಂದ ವಿಲಾಯತಿಯೊಳಗಿನ ಇದ್ದಲಿನ ಗನಿಗಳು ನಿಂತುಹೋಗಿವೆ. ಹಾಗು ಸಾಧಾರಣವಾಗಿ ಹತ್ತು ಲಕ್ಷ ಕೂಲಿಗಾರರು ಕೆಲಸವಿಲ್ಲದೆ ತಿರುಗುತಿದ್ದಾರೆ. ಕೆಲಸವಿಲ್ಲದೆ ತಿರುಗುತ್ತಿರುವ ಈ ಮುಷ್ಕರಗಾರರ ಜಂಗಡದಲ್ಲಿ ಬೇರೆ ಕಾರ್ಖಾನೆಯ ಜನರು ಬಂದು ಸೇರುವ ಸಂಭವವು ತೋರುತ್ತಿದೆ. ಗನಿಗಳ ಉತ್ಪನ್ನದಿಂದ ಯಾವ ಹೆಚ್ಚು ಹಣವು ಉಳಿಯುತ್ತದೊ ಅದರಿಂದ ಕೆಲವನ್ನು ಈಗಿನ ಧಾರಣೆಯ ಏರಿನಲ್ಲಿ ತಮಗೆ ಕೊಡಬೇಕೆಂದು ಮಜೂರರ ಅಂಬೋಣವಿತ್ತು. ಈ ನ್ಯಾಯವಾದ ಅಂಬೋಣವನ್ನು ಗನಿಯ ಮಾಲಿಕರು ತಿರಸ್ಕರಿಸಿದ್ದರಿಂದ ಹಾಗು ಅಧಿಕಾರಿಗಳು ಇದರ ಮಧ್ಯಸ್ಥಿಕೆಯಲ್ಲಿ ನಿಃಪಕ್ಷಪಾತತನದಿಂದ ನಡ[illegible] ಕಡೆಗೆ ಉಪಾಯವಿಲ್ಲದೆ ಗನಿ ಕಾಮಗಾರರಿಗೂ ಮುಷ್ಕರವನ್ನು ಹಾಕಬೇಕಾಗಿದೆ. ಸರಕಾರವು ಗನಿಕಾಮಗಾರರ ಅಂಬೋಣವನ್ನು ಮಾನ್ಯಮಾಡದೆ ಇದ್ದರೆ ಈ ಮುಷ್ಕರವು ಥಟ್ಟನೆ ಮುಗಿದು ಹೋಗಲಿಕ್ಕಿಲ್ಲ, ಬಹು ಸಮಯ ನಿಂತೀತೆಂದು ತೋರುತ್ತದೆ. ಈ ಜನರಿಗೆ ರೇಲ್ವೆಯ ಜನರೂ, ಟ್ರಾನ್ಸ್‌ಪೋರ್ಟ ಕಡೆಯ ಜನರೂ ಸೇರಬಹುದು. ಈ ಮೇರೆಗೆ ಮುಷ್ಕರದ ಕ್ಷೇತ್ರವು ಬೆಳೆಯುತ್ತ ಹೋದ ಕಾರಣ ಇಂಗ್ಲಂಡಿನಲ್ಲಿ ಜನರಿಗೆ ಅನೇಕ ತೊಂದರೆಗಳು ಒದಗಹತ್ತಿವೆ. ಆದರೂ ಜನರ ಮೇಲೆ ಈ ಮುಷ್ಕರದ ದುಷ್ಪರಿಣಾಮವುಂಟಾಗದಂತೆ ಅಲ್ಲಿಯ ಸರಕಾರವು ಅವಶ್ಯ ಜಾಗ್ರತೆಯನ್ನು ತೆಕ್ಕೊಳ್ಳುತಿದೆ. ಗನಿ ಕಾಮಗಾರರು ಮುಷ್ಕರವನ್ನು ಹಾಕುವ ಸಂಗತಿಯು ಸಾಧಾರಣವಾಗಿ ಮೊದಲೆ ಗೊತ್ತಾಗಿದ್ದರಿಂದ ಜನರ ಉಪಯೋಗಕ್ಕೆ ಬೇಕಾದ ಇದ್ದಲನ್ನು ಮೊದಲೇ ತಕ್ಕ ಮಟ್ಟಿಗೆ ಸಂಗ್ರಹದಲ್ಲಿಟ್ಟಿದ್ದರು. ಜನರು ಧೈರ್ಯವನ್ನು ಕುಂದಿಸಿಕೊಳ್ಳಬಾರದೆಂದು ಅಧಿಕಾರಿಗಳು ಜಾಹೀರನಾಮೆಯನ್ನು ಹೊರಡಿಸಿ ಜನರನ್ನು ಉಪದೇಶಿಸುತಿದ್ದಾರೆ. ಜನರ ಊಟದ ಮತ್ತು ತಿಂಡಿಯ ಸಾಮಾನುಗಳನ್ನು ಅಲ್ಲಲ್ಲಿ ತಲಪಿಸುವ ಏರ್ಪಾಡುಗಳು ಆಗುತ್ತಿವೆ. ಸಕ್ಕರೆಯ ಉಪಯೋಗವನ್ನು ಕಡಿಮೆ ಮಾಡಹತ್ತಿದ್ದಾರೆ. ಭಕ್ಕರಿಗಳ ಕ್ರಯವು ಏರಿದೆ. ಆದರೂ ಸ್ವಯಂ ಸೇವಕರ ಸಹಾಯ್ಯವು ಆಗಹತ್ತಿದೆ. ಹಾಗು ದಂಗೆ ಮೊದಲಾದ ಗಲಭೆಗಳು ಉಂಟಾಗದಂತೆ ಸೈನ್ಯದ ಸಿದ್ಧತೆಯು ಕೂಡ ಪ್ರಾರಂಭವಾಗಿದೆ. ಈ ಮೇರೆಗೆ ಮುಷ್ಕರದ ದುಷ್ಪರಿಣಾಮವು ಸಂಭವಿಸದಂತೆ ತಕ್ಕ ವ್ಯವಸ್ಥೆಗಳು ಇಂಗ್ಲಂಡಿನಲ್ಲಿ ಆಗುತ್ತಿವೆ.

೨. ಇಂಗ್ಲಂಡಿನಲ್ಲಿ ಮುಷ್ಕರಗಳು ಬಿದ್ದಿರುವಂತೆಯೆ ನಮ್ಮ [illegible] ಬಿದ್ದಿವೆ. ಮುಂಬಯಿಯಲ್ಲಿ ಪೋಸ್ಟಮನ್ ಮತ್ತು [illegible] ಹಾಗು ಟ್ಯಾಕ್ಸ ಮತ್ತು ಟ್ರಾಮ್ [illegible]

[illegible] ಈ ಮುಷ್ಕರ [illegible] ಅನನುಕೂಲತೆಗಳನ್ನು ಸಹಿಸಬೇಕಾಗುತ್ತದೆ. ಜನರ ಅಸ್ವಾಸ್ಥ್ಯವನ್ನು ಸರಕಾರವು ಲಕ್ಷ್ಯಕ್ಕೆ ತರುವುದೂ ಇಲ್ಲ. ಹಾಗು ನ್ಯಾಯ ಪ್ರಕಾರವಾಗಿ ಕೇಳಿದ ಸಂಬಳವನ್ನು ಕೊಟ್ಟು ಮುಷ್ಕರಗಾರರನ್ನು ಸಮಾಧಾನ ಪಡಿಸುವುದೂ ಇಲ್ಲ. ಇಂಥ ಶೋಚನೀಯ ಸ್ಥಿತಿಯು ಬಂದು ಒದಗಿದೆ. ಮುಂಬಯಿಯಲ್ಲಿ ಪ್ರಾರಂಭವಾದ ಈ ಮುಷ್ಕರವು ಸರಿಯಾದ ಪ್ರತಿಫಲದಿಂದ ನಿವೃತ್ತವಾಗದೆ ಇದ್ದರೆ ಜನರಿಗೆ ಇನ್ನೂ ಅನೇಕ ಅನನುಕೂಲತೆಗಳನ್ನು ಸಹಿಸಬೇಕಾಗಿ ಬಂದೀತು. ಇಂಥ ಭಯಂಕರ ಸ್ಥಿತಿಯು ದೇಶದ ಮೇಲೆ ಬಂದು ಒದಗುವುದು ಬಹು ಶೋಚನೀಯವಾಗಿದೆ.

೩. ಮುಂಬಯಿಯ ಹಾಗು ಈ ದೇಶದ ಇತರ ಕಡೆಗಳಲ್ಲಿಯ ಮಜೂರ ವರ್ಗದಲ್ಲಿ ಈ ಮೇರೆಗೆ ಜಾಗೃತಿಯು ಹುಟ್ಟಿರುವ ಸಮಯದಲ್ಲಿ ಈ ದೇಶದೊಳಗಿನ ಮಜೂರರ ಪರಿಸ್ಥಿತಿಯನ್ನು ಸಂದರ್ಶಿಸುವ ಉದ್ದೇಶದಿಂದ ವಿಲಾಯತಿಯೊಳಗಿನ ಮಜೂರರ ಸಂಘದ ಪರವಾಗಿ ಕರ್ನಲ್ ವೆಜ್‌ವುಡರು ತಮ್ಮ ಪತ್ನೀ ಸಮೇತ ಹೊರಟವರು ಕಳೆದ ವಾರ ಮುಂಬಯಿಗೆ ಬಂದು ತಲಪಿದರು. ವಿಲಾಯತಿಯ ಮಜೂರರು ಸಂಘಟನೆಯ ಶಕ್ತಿಯಿಂದ ಮತ್ತು ವ್ಯವಸ್ಥಿತವಾದ ಕಾರ್ಯಪದ್ಧತಿಯಿಂದ ತಮ್ಮ ಸಂಸ್ಥೆಯಲ್ಲಿ ಇತ್ತಲಾಗೆ ಬಲವಾದ ಸಾಮರ್ಥ್ಯವನ್ನು ತಂದಿದ್ದಾರೆ. ಅಲ್ಲಿ ಅವರ ಈ ಸಂಸ್ಥೆಗೆ ಎಷ್ಟರ ಮಟ್ಟಿಗೆ ಬಲವು ಪ್ರಾಪ್ತವಾಗಿದೆ ಎಂದರೆ ವಿಲಾಯತಿಯ ಮುಂದಿನ ಚುನಾವಣೆಯಲ್ಲಿ ಈ ಮಜೂರ ಪಕ್ಷವೆ ಯಶಸ್ವಿಯಾಗಿ ಅಧಿಕಾರಾರೂಢವಾಗುವ ಸಂಭವವಿದೆ. ಇಂಥ ಮಹತ್ವವನ್ನು ಪಡೆದಿರುವ ಪಕ್ಷದವರು ಕರ್ನಲ್ ವೆಜ್‌ವುಡ್ ದೊರೆಗಳನ್ನು ಇಲ್ಲಿಯ ದೇಶಸ್ಥಿತಿ ಮತ್ತು ವಿಶೇಷತಃ ಮಜೂರರ ಪರಿಸ್ಥಿತಿ ಇವುಗಳನ್ನು ತಿಳಿದುಕೊಳ್ಳಲು ಕಳುಹಿಸಿ ಕೊಟ್ಟಿದ್ದಾರೆ. ಅವರು ಮುಂಬಯಿ ಬಂದರಕ್ಕೆ ಇಳಿದೊಡನೆ ಮುಂಬಯಿಕರರು ಮತ್ತು ಮುಷ್ಕರ ಹಾಕಿದ ಮಜೂರರು ಪ್ರೇಮಪೂರ್ವಕವಾಗಿ ದೊರೆಗಳ ಸ್ವಾಗತವನ್ನು ಮಾಡಿದರು. ವೆಜವುಡ್ ದೊರೆಗಳು ವಿಲಾಯತಿಯೊಳಗಿನ ಮಜೂರ ಪಕ್ಷದ ಸಹಾನುಭೂತಿಪರವಾದ ಸಂದೇಶವನ್ನು ಮುಂಬಯಿಕರರಿಗೆ ತಿಳಿಸಿದ್ದಾರೆ. ವೆಜವುಡ್‌ರು ನಾಗಪುರದ ರಾಷ್ಟ್ರೀಯ ಸಭೆಯು ಜರಗುವ ತನಕ ಈ ದೇಶದಲ್ಲಿ ನಿಂತು ರಾಷ್ಟ್ರೀಯ ಸಭೆಗೆ ಹಾಜರಾಗತಕ್ಕವರಿದ್ದಾರೆ. ವೆಜವುಡ್‌ರಂಥ ಗೃಹಸ್ಥರು ಈ ದೇಶಕ್ಕೆ ಬರುವುದರಿಂದ ಇಲ್ಲಿಯ ಪ್ರಜೆಗಳಿಗೂ ವಿಲಾಯತಿಯ ಜನತೆಗೂ ಈ ಮೇರೆಗೆ ಎರಡೂ ಕಡೆಯವರಿಗೂ ಪ್ರಯೋಜನವಾದೀತೆಂದು ನೆನಸುತ್ತೇವೆ. ಜನರು ಕೈಕೊಂಡಿರುವ ಸ್ವರಾಜ್ಯ ಚಳವಳವನ್ನು ಹೇಗೆ ನಿರ್ಬಾಧವಾಗಿ ನಡಿಸಬೇಕು ಎಂಬೀ ವಿಷಯದಲ್ಲಿ ಅವರಿಂದ ಯೋಗ್ಯ ಆಲೋಚನೆಯನ್ನು ಸ್ವೀಕರಿಸಬಹುದು. ಹಾಗು ಇಲ್ಲಿಯವರ ಸ್ಥಿತಿಯು ಎಷ್ಟರ ಮಟ್ಟಿಗೆ ನಿಕೃಷ್ಟವಾಗಿದೆ ಎಂಬುದನ್ನು ವಿಲಾಯತಿಯವರು ಇಂಥ ಸದ್ಗೃಹಸ್ಥರಿಂದ ತಿಳಿದುಕೊಳ್ಳಬಹುದು. ಇರಲಿ. ಕರ್ನಲ ವೆಜ್‌ವುಡ್ ಮತ್ತು ಅವರ ದೊರೆಸಾನಿ ಇವರಿಬ್ಬರಿಗೂ ಈ ದೇಶದ ನವ ಪ್ರಯಾಣವು ಸುಖಕರವಾಗಲಿ, ಮತ್ತು ಅವರ ಆಗಮನದಿಂದ ಈ ದೇಶಕ್ಕೆ ಅವರ ಆಲೋಚನೆಯ ಮತ್ತು ಅನುಭವದ ಫಲವು ಸಿಗಲಿ ಎಂದು ಪ್ರಾರ್ಥಿಸುವೆವು.

೪. ಎರಡು ತಿಂಗಳನಂತರ ಯಾವ ನಾಗಪುರದಲ್ಲಿ ಇಲ್ಲಿಯ ಜನತೆಯ ವರಿಷ್ಠ ಸಭೆಯಾದ ಕೊಂಗ್ರೆಸು ಸೇರಲಿಕ್ಕಿರುವುದೊ ಆ ನಾಗಪುರದಲ್ಲಿ ಇಲ್ಲಿಯ ಅಧಿಕಾರಿಗಳಲ್ಲಿ ವರಿಷ್ಠರಾದ ವೈಸರಾಯರ ಆಗಮನವು ಕಳೆದ ವಾರ ಆಗಿತ್ತು. ವೈಸರಾಯರು ನಾಗಪುರವನ್ನು ಸಂದರ್ಶಿಸುವ ಸಂಗತಿಯು ಅಲ್ಲಿಯವರಿಗೆ ಮೊದಲೆ ಗೊತ್ತಾಗಿದ್ದರಿಂದ ಅಲ್ಲಿಯ ಡಿ. ಕೌನ್ಸಿಲು ಅವರಿಗೆ ಮಾನಪತ್ರವನ್ನು ಕೊಡಕೂಡದೆಂದು ಮೊದಲೆ ನಿಶ್ಚಯಿಸಿತ್ತು. ಆದ್ದರಿಂದ ವೈಸರಾಯರು ನಾಗಪುರಕ್ಕೆ ಬಂದ ಸಂದರ್ಭದಲ್ಲಿ ಜನರ ಕಡೆಯಿಂದ ಒಂದು ವಿಶೇಷ ಉತ್ಸಾಹವು ವ್ಯಕ್ತವಾಗುತ್ತಿರಲಿಲ್ಲ. ಅಧಿಕಾರಿಗಳ ಆಜ್ಞೆಯ ಮೇರೆಗೆ ಅಪವಾದಕ್ಕೆ ತಕ್ಕ ಕೆಲವು ಸ್ವಾಗತದ ಏರ್ಪಾಡು ಆಗಿತ್ತು. ಸರಕಾರಿ ಸ್ವಾಗತವನ್ನು ಸ್ವೀಕರಿಸಿದ ಬಳಿಕ ವೈಸರಾಯರು ನಾಗಪುರದಲ್ಲಿ ಸರಕಾರಿ ಇಂಜಿನಿಯರಿಂಗ ಸ್ಕೂಲನ್ನು ತೆರೆಯುವಾಗ ಒಂದು ಚಿಕ್ಕ ಭಾಷಣವನ್ನು ಕೊಟ್ಟರು. ವೈಸರಾಯರು ನಾಗಪುರದ ಎಂಜಿನಿಯರಿಂಗ್ ಸ್ಕೂಲಿನ ಸ್ಥಿತಿ ಮತ್ತು ಕಾರ್ಯ ಇವುಗಳನ್ನು ವಿಶದ ಪಡಿಸುವ ತಮ್ಮ ಚಿಕ್ಕ ಭಾಷಣದಲ್ಲಿ ಒಂದು ದೊಡ್ಡ ವಿಷಯವನ್ನು ಪ್ರಸ್ತಾಪಿಸಿದರು. ಹಿಂದುಸ್ಥಾನ ಸರಕಾರವು ಹಿಂದುಸ್ಥಾನದ ಔದ್ಯೋಗಿಕ ವಿಷಯದಲ್ಲಿ ಯಾವ ಉದಾರವಾದ ಧೋರಣವನ್ನು ಇಟ್ಟುಕೊಂಡಿದೆ ಎಂಬುದನ್ನು ವೈಸರಾಯರು ವ್ಯಕ್ತಪಡಿಸಿದರು: ಶಾಸ್ತ್ರೀಯ ಹಾಗು ಔದ್ಯೋಗಿಕ ವಿಷಯದ ಉಚ್ಚತರಗತಿಯ ಸಂಸ್ಥೆಯನ್ನು ಸ್ಥಾಪಿಸಿ ಅದನ್ನು ನಿರ್ವಹಿಸುವಷ್ಟು ಪಾತ್ರತೆಯು ಈಗಿನ ಸಮಯದಲ್ಲಿ ಯಾವ ಪ್ರಾಂತದಲ್ಲಿಯೂ ಇಲ್ಲವೆಂದು [illegible] ಮಾಡಿ [illegible] ವಿಷಯ [illegible]

[illegible] ಮತ್ತು [illegible] ಎಂದು [illegible] ವಿಷಯಗಳ ಮತ್ತು ಸಂಶೋಧನೆ ಕಾರ್ಯಗಳನ್ನು ನಿರ್ವಹಿಸುವ ಸಂಸ್ಥೆಗಳನ್ನು ಸ್ಥಾಪಿಸಲು [illegible] ಇತ್ಯಾದಿ ಸಂಗತಿಗಳನ್ನೆ ಸರಕಾರಿ ಅಧಿಕಾರಿಗಳು ಹೇಳುತ್ತ ಹೋದರೆ ಹಾಗು ಯೋಜನೆಯು ತಯಾರಾಗುತ್ತದೆ, ತಯಾರಾಗುತ್ತದೆ ಎಂದು ಜಪಿಸಹತ್ತಿದರೆ ಇದರಿಂದ ಜನತೆಗೆ ನಿಜವಾಗಿ ಸಮಾಧಾನವಾಗುವದಿಲ್ಲ. ಇಲ್ಲಿ ಶಾಸ್ತ್ರೀಯ ಮತ್ತು ಔದ್ಯೋಗಿಕ ಶಿಕ್ಷಣವನ್ನು ಪ್ರಾರಂಭಿಸಿರಿ ಎಂದು ಜನರು ಸಾವಂತೆ ಸರಕಾರದ ಬಳಿಗೆ ಎದೆ ಒಡಕೊಂಡು ಹೇಳಿ ಎಷ್ಟೋ ಸಮಯವಾಯಿತು. ಪರಂತು ಸರಕಾರವು ಕಮಿಶನು ಕೂಡ್ರಿಸುತ್ತದೆ, ಆ ಕಮಿಷನಿನ ರಿಪೋರ್ಟು ಪರಿಶೀಲಿಸುತ್ತದೆ, ಯೋಜನೆಯನ್ನು ತಯಾರಿಸುತ್ತದೆ ಮುಂತಾದ ರೀತಿಯ ಆಶಾವರ್ಧಕವಾದ ಸ್ಥಿತಿಯಲ್ಲಿ ಜನರನ್ನು ಅದು ಇಡುತ್ತಿದೆ ಹೊರತು ಕಾರ್ಯ ರೂಪದಲ್ಲಿ ಬಂದದ್ದು ಏನೂ ಕಾಣುವುದಿಲ್ಲ.

೫. ಹಿಂದೀ ಶಿಕ್ಷಣದ ವಿಷಯವಾಗಿ ಸರಕಾರದ ಈ ಶಿಥಿಲ ವರ್ತನವನ್ನು ನೋಡಿ ಮಹಾತ್ಮಾ ಗಾಂಧಿ ಮುಂತಾದ ಮುಖಂಡರು ತಮ್ಮ ಅಸಹಕಾರಿತೆಯ ಚಳವಳದಲ್ಲಿ ಈಗಿನ ಸರಕಾರಿ ಶಿಕ್ಷಣದ ಬಹಿಷ್ಕಾರವನ್ನು ಇಟ್ಟುಕೊಂಡಿದ್ದಾರೆ. ಶಿಕ್ಷಣ ಬಹಿಷ್ಕಾರದ ಚಳವಳವು ಕೌನ್ಸಿಲಿನ ಬಹಿಷ್ಕಾರದಷ್ಟು ವೇಗದಿಂದ ಪಸರಿಸಲಿಲ್ಲವಾದರೂ ಅಲೀಗಡದಲ್ಲಿಯ ಮಹಮ್ಮದೀಯರ ಕೊಲೇಜು ಮತ್ತು ಲಾಹೋರಿನ ವಿದ್ಯಾಸಂಸ್ಥೆಗಳು ಇವುಗಳಲ್ಲಿ ನಡೆಯುತ್ತಿರುವ ಸಂಗತಿಗಳನ್ನು ಪರ್ಯಾಲೋಚಿಸುವಾಗ ಬಹಿಷ್ಕಾರದ ಈ ಅಂಗವು ಕೂಡ ಕ್ರಮೇಣ ದೇಶ ತುಂಬಾ ಹಬ್ಬುವುದೆಂದು ತೋರಹತ್ತಿದೆ. ಅಲೀಗಡದ ಕೊಲೇಜಿನೊಳಗಿನ ಎಲ್ಲ ವಿದ್ಯಾರ್ಥಿಗಳು ಕೊಲಜಿನ ಪ್ರಿನ್ಸಿಪಾಲರಿಗೆ 'ಈ ಕೊಲೆಜಿನ ಸರಕಾರಿ ಗ್ರಾಂಟನ್ನು ಬಿಟ್ಟುಬಿಡಬೇಕು, ಯುನಿವರ್ಸಿಟಿಯ ಸಂಬಂಧವನ್ನು ತಪ್ಪಿಸಬೇಕು, ಮತ್ತು ಇದನ್ನು ರಾಷ್ಟ್ರೀಯ ಶಿಕ್ಷಣದ ಸಂಸ್ಥೆಯನ್ನಾಗಿ ಮಾಡಬೇಕು' ಎಂದು ನೋಟೀಸು ಮೂಲಕ ತಿಳಿಸಿದ್ದಾರಲ್ಲದೆ, ಕೊಲೇಜಿನ ಅಧಿಕಾರಿಗಳು ಮತ್ತು ಪ್ರಿನ್ಸಿಪಾಲರು ಹಾಗೆ ಮಾಡಲು ಒಪ್ಪಿಕೊಳ್ಳದಿದ್ದರೆ ತಾವೇ ಈ ಕಾರ್ಯವನ್ನು ಸೆಂಟ್ರಲ್ ಖಿಲಾಫತ್ ಕಮಿಟಿಯ ಆಶ್ರಯದ ಕೆಳಗೆ ಮಾಡೇವೆಂದು ಪ್ರಕಟಿಸಿದ್ದಾರೆ. ವಿದ್ಯಾರ್ಥಿಗಳ ಬರೆ ಪ್ರಕಟನೆಯ ಮೇಲೆಯೆ ಈ ಪ್ರಕರಣವು ನಿಲ್ಲದೆ ಸ್ವತಂತ್ರವಾದ ಎಂದರೆ ಸರಕಾರಿ ಸಂಬಂಧವಿಲ್ಲದ ಮಹಮ್ಮದೀಯ ಯುನಿವರ್ಸಿಟಿಯನ್ನು ಸ್ಥಾಪಿಸಲು ಅನೇಕ ಮಹಮ್ಮದೀಯ ಮುಖಂಡರ ಬಲವಾದ ಉದ್ಯೋಗವು ನಡೆದಿದೆ. ಈ ಕಾರ್ಯದಲ್ಲಿ ಬೇರೆ ಬೇರೆ ಪ್ರಾಂತದ ಖಿಲಾಫತ್ ಕಮಿಟಿಗಳೂ, ಮುಖಂಡರೂ ಉತ್ತೇಜನವನ್ನೂ, ಉತ್ಸಾಹವನ್ನೂ ಕೊಡುತಿದ್ದಾರೆ. ಈ ಎಲ್ಲ ಸಂಗತಿಗಳ ಮೇಲಿಂದ ಅಲೀಗಡ ಕೊಲಜು ಇನ್ನು ಮುಂದೆ ಸ್ವತಂತ್ರವಾದ ಯುನಿವರ್ಸಿಟಿಗೆ ಸೇರುವುದೆಂದು ತೋರಹತ್ತಿದೆ. ಅಲೀಗಡದಲ್ಲಿ ಈ ಮೇರೆಗೆ ಚಳವಳವುಂಟಾದಂತೆ ಲಾಹೋರಿನಲ್ಲೂ ವಿದ್ಯಾರ್ಥಿಗಳು ಚಳವಳದ ಉಪಕ್ರಮವನ್ನು ಮಾಡತೊಡಗಿದ್ದಾರೆ. ಅಲ್ಲದೆ ಬೇರೆ ಬೇರೆ ಕಡೆಗಳಲ್ಲಿ ಹೈಸ್ಕೂಲುಗಳ ಮೇಲೆ, ಕೊಲಜುಗಳ ಮೇಲೆ ವಿದ್ಯಾರ್ಥಿಗಳು ಮೆಲ್ಲಮೆಲ್ಲನೆ ಬಹಿಷ್ಕಾರವನ್ನು ಹಾಕ ತೊಡಗಿದ್ದಾರೆ. ಸಾರಾಂಶ, ಈ ವಿಧವಾಗಿ ಶಿಕ್ಷಣ ಸಂಸ್ಥೆಗಳ ಮೇಲೆ ಬಹಿಷ್ಕಾರವು ಪ್ರಾರಂಭವಾಗಿದೆ.

೬. ಈಗಿನ ಸರಕಾರಿ ಶಾಲೆಗಳ ಮತ್ತು ಕೊಲಜುಗಳ ಮೇಲಿನ ಬಹಿಷ್ಕಾರದ ಚಳವಳವು ಪ್ರಾರಂಭವಾಗುವಷ್ಟರೊಳಗೆ ಬರುವ ಕೌನ್ಸಿಲುಗಳ ಮೇಲೆ ಹಾಕತಕ್ಕ ಬಹಿಷ್ಕಾರದ ಚಳವಳವು ಆಗಲೆ ಕಾರ್ಯರೂಪದಲ್ಲಿ ಬರಹತ್ತಿದೆ. ಬರುವ ಕೌನ್ಸಿಲುಗಳಿಗೆ ಕೊಂಗ್ರೆಸ್ ಪಕ್ಷದವರು ಯಾರೂ ಉಮೇದವಾರರಾಗಿ ನಿಲ್ಲಬಾರದು, ವೋಟರುಗಳು ಎಂದರೆ ಮತದಾರರು ಯಾರಿಗೂ ಮತಗಳನ್ನು ಕೊಡ ಬಾರದು ಎಂದು ಎಲ್ಲ ಜನರಿಗೆ ಬೋಧಿಸುವ ಕೌನ್ಸಿಲ್ ಬಹಿಷ್ಕಾರದ ಚಳವಳವು ಈಗ ಹಿಂದುಸ್ಥಾನದ ಎಲ್ಲ ಭಾಗಗಳಲ್ಲಿ ಪ್ರಾರಂಭವಾಗಿದೆ. ಆಯಾ ಭಾಗದ ಮುಖಂಡರು ಫೊರ್ಮುಗಳನ್ನು ತಯಾರಿಸಿಕೊಂಡು ವೋಟರುಗಳು ಎಂದರೆ ಮತದಾರರು ಇದ್ದಲ್ಲಿಗೆ ಹೋಗಿ ಮುಂದಿನ ಕೌನ್ಸಿಲು ಉಮೇದುವಾರರಿಗೆ ತಾವು ಮತ ಕೊಡುವುದಿಲ್ಲವೆಂದು ಅವರಿಂದ ದಸ್ಕತುಗಳನ್ನು ತೆಕ್ಕೊಳ್ಳುತಿದ್ದಾರೆ. ಇತರ ಭಾಗಗಳಲ್ಲಿ ಪ್ರಾರಂಭವಾದ ಈ ಕ್ರಮವು ನಮ್ಮ ಜಿಲ್ಲೆಯಲ್ಲೂ ಪ್ರಾರಂಭವಾಗಿದೆ. ಕಳೆದ ಹಿಂದಿನ ವಾರ ಇಲ್ಲಿಗೆ ಮ. ರಾ. ಸ. ರಾಜ ಗೋಪಾಲಾಚಾರ್ಯ ಮುಂತಾದವರು ಬಂದು ಬೋಧಿಸಿದ ಮೇರೆಗೆ ಈ ಜಿಲ್ಲೆಯಲ್ಲಿ ಮತದಾರರ ದಸ್ಕತುಗಳನ್ನು ಪಡಕೊಳ್ಳಲು, ಹಾಗು ಅಲ್ಲಲ್ಲಿ ಈ ವಿಷಯವನ್ನು ತಿಳಿಸಿಕೊಡಲು, ಮತ್ತು ಹಳ್ಳಿಯೊಳಗಿನ ಮತದಾರರ ಕಡೆಗೆ ಹೋಗುವುದಕ್ಕಾಗಿ ಇಂಥಿಂಥ ಗೃಹಸ್ಥರನ್ನು ಏರ್ಪಡಿಸಲು ಮ॥ ರಾ॥ [illegible] ಸದಾಶಿವರಾವ್ ಮ॥ ರಾ॥ ಅತ್ತಿಬೈಲು [illegible] ಇವರು ಜಿಲ್ಲೆಯಲ್ಲಿ [illegible] ಈ ಮೇರೆಗೆ [illegible] ಕೌನ್ಸಿಲ್ ಬಹಿಷ್ಕಾರದ ಕ್ರಮವು [illegible]

ಪ್ರಕಟಣೆ.

ಸಂ 1920ನೇ ಇಸವಿ ಆಗೋಸ್ತು 26ನೇ ತಾರೀಕಿನ ಫೋರ್ಟ್ ಸೈಂಟ್ ಜೋರ್ಜ್ ವಿಶೇಷ ಗಜೇಟಿನಲ್ಲಿ (ಗಜೇಟ್ ಎಕ್ಸ್ಟ್ರಾರ್ಡಿನರಿಯಲ್ಲಿ) ಪ್ರಕಟಸೋಣಾದ ಆದೇ ತಾರೀಕಿನ ನಂಬ್ರ 149-Bನೇ ಪ್ರಕಟನೆಯಲ್ಲಿ ಮದ್ರಾಸು ನ್ಯಾಯವಿಧಾಯಕ ಸಭೆಯ ಜನರಲ್ ಮತ್ತು ಸ್ಪೆಶಿಯಲ್ ಕೊನ್‌ಸ್ಟಿಟ್ಯು ಯೆನ್ಸಿಗಳ ಬಗ್ಗೆ ಮೆಂಬರರ ಚುನಾವಣೆ ಕುರಿತು ವಿಧಿಸೋಣಾದ ಕ್ರಮಗಳ ಪೈಕಿ 3 (1)ನೇ ಕ್ರಮದ ಮೇರೆಗೆ ಈ ಕೆಳಗೆ ಕಾಣಿಸಿದ ಕೊನ್‌ಸ್ಟಿಟ್ಯುಯೆನ್ಸಿಗಳ ಬಗ್ಗೆ ಮೆಂಬರರ ಚುನಾವಣೆ ಕುರಿತು ಹಲವು ಕಾರ್ಯಗಳನ್ನು ಜರಗಿಸುವ ಬಗ್ಗೆ—ರಿಟರ್ನಿಂಗ್ ಆಫೀಸರರಾದ ದಕ್ಷಿಣ ಕನ್ನಡಾ ಜಿಲ್ಲಾ ಕಲೆಕ್ಟರವರು ಇದರ ಅಡಿಯಲ್ಲಿ ತೋರಿಸಲ್ಪಟ್ಟಿರುವ ಪ್ರಕಾರ ತಾರೀಕುಗಳನ್ನು ಮತ್ತು ಅವಶ್ಯವಿರುವಲ್ಲಿ ಕಾಲಗಳನ್ನು ವ ಸ್ಥಳಗಳನ್ನು ಸಹಾ ನಿರ್ಣಯಿಸಿರುತ್ತಾರೆ. ಮತ್ತು ಸದರಿ ಕೊನ್‌ಸ್ಟಿಟ್ಯುಯೆನ್ಸಿಗಳು ತಮ್ಮ ಮೆಂಬರರನ್ನು ನೇಮಿಸಬೇಕೆಂದು ಈ ಮೂಲಕ ತಿಳಿಸುತ್ತಾರೆ.

ಇಲೆಕ್ಟೊರಲ್ ರೋಲಿನಲ್ಲಿ ಯಾವ ಪೋಲಿಂಗ್ ಸ್ಟೇಶನಿನ ಅಡಿಯಲ್ಲಿ ಒಬ್ಬ ಇಲೆಕ್ಟರನ ಹೆಸರು ನಮೂದಿಸಲ್ಪಟ್ಟಿರುವದೋ ಅಂಥಾ ಸ್ಟೇಶನಿನಲ್ಲಿಯೇ ಹೊರತು ಬೇರೆ ಯಾವುದೊಂದು ಸ್ಟೇಶನಿನಲ್ಲಿ ಸದರಿ ಇಲೆಕ್ಟರನಿಗೆ ಓಟು ಕೊಡುವರೆ ಬಡೋಣಾಗಲಿಕ್ಕಿಲ್ಲ.

ಚುನಾಯಿಸಲ್ಪಡ ಬೇಕಾದ ಜನರ ಸಂಖ್ಯೆ.	ಯಾವ ಯಾವ ಕೊನ್‌ಸ್ಟಿಟ್ಯುಯೆನ್ಸಿಗಳ ಬಗ್ಗೆ ಚುನಾಯಿಸಬೇಕಾದ್ದು	ರಿಟರ್ನಿಂಗ್ ಆಫೀಸರರ ಮುಂದೆ ನೋಮಿನೇಶನ್ ಪೇಪರುಗಳನ್ನು ಹಾಜರು ಮಾಡಬೇಕಾದ ತಾರೀಕು, ಸಮಯ ಮತ್ತು ಸ್ಥಳ.	ನೋಮಿನೇಶನ್ ಪೇಪರುಗಳನ್ನು ಪರಿಶೋಧನೆ ಮಾಡುವ ತಾರೀಕು, ಮತ್ತು ಸ್ಥಳ.	ಪೋಲ್ ಇದ್ದ ಸಂಗತಿಯಲ್ಲಿ ಇಲೆಕ್ಟರರ ಓಟುಗಳನ್ನು ತೆಗಿಯುವ ತಾರೀಕು ಸ್ಥಳ ವ ಸ್ಥಳಗಳು ಮತ್ತು ಸಮಯ.	ರಿಟರ್ನಿಂಗ್ ಆಫೀಸರರು ಓಟುಗಳನ್ನು ಲೆಖ್ಖ ಮಾಡ ಲಿಕ್ಕೆ ಶುರು ಮಾಡುವ ತಾರೀಕು, ಸ್ಥಳ ವ ಘಂಟೆ.
1	2	3	4	5	6
ಎರಡು	ಮಹಮ್ಮದೀಯರಲ್ಲದ -ರೂರಲ್- ದಕ್ಷಿಣ ಕನ್ನಡಾ.	ಮಂಗಳೂರಲ್ಲಿ ಕಲೆಕ್ಟರವರ ಆಫೀಸಿನಲ್ಲಿ 1920 ನೇ ಇಸವಿ ಆಕ್ಟೋಬರ ತಾರೀಕು 30ರಲ್ಲು ಪೂರ್ವಾಹ್ನ 11 ಘಂಟೆಯಿಂದ ಅಪರಾಹ್ನ 1 ಘಂಟೆ ವರೆಗೆ ಮತ್ತು ಅಪರಾಹ್ನ 2 ಘಂಟೆಯಿಂದ 4 ಘಂಟೆ ವರೆಗೆ.	ಮಂಗಳೂರಲ್ಲಿ ಕಲೆಕ್ಟರವರ ಆಫೀಸಿನಲ್ಲಿ 1920ನೇ ಇಸವಿ ಆಕ್ಟೋಬರ ತಾರೀಕು 30ರಲ್ಲು	ಲಗ್ತ ಇರುವ ಶೆಡ್ಯೂಲಿನಲ್ಲಿ ನಮೂದಿಸಿದ ಸ್ಥಳಗಳಲ್ಲಿ 1920ನೇ ಇಸವಿ ನವಂಬರ ತಾರೀಕು 30ರಲ್ಲು ಬೆಳಗ್ಗೆ 7 ಗಂಟೆಯಿಂದ 11 ಗಂಟೆ ವರೇಗೆ ಮತ್ತು ಮಧ್ಯಾಹ್ನ 12 ಘಂಟೆಯಿಂದ ಸ್ಯಾಮ 6 ಘಂಟೆ ವರೆಗೆ	ಮಂಗಳೂರಲ್ಲಿ ಕಲೆಕ್ಟರರವರ ಆಫೀಸಿನಲ್ಲಿ 1920ನೇ ಇಸವಿ ದಶಂಬರ ತಾರೀಕು 4ರಲ್ಲು ಪೂರ್ವಾಹ್ನ 10 ಘಂಟೆಗೆ
ಒಂದು	ಮಹಮ್ಮದೀಯ -ರೂರಲ್- ದಕ್ಷಿಣ ಕನ್ನಡಾ.	ಡಿ	ಡಿ	ಡಿ	ಡಿ

South Kanara Collector's Office.
Camp, Belthangadi, 16th October 1920.

U. RAMA RAO,
Returning Officer,
and Collector of South Kanara

ಶಾರದಾ ಛಾಪಖಾನೆ, ಮಂಗಳೂರು.

ದೇಶಾಭಿಮಾನಿಯ ಸಂಚಿಕೆಯು ಇಲ್ಲವ
ಕಳುಹಿಸಿಕೊಟ್ಟ ಬಾತ್ಮೀಪತ್ರಗಳನ್ನು
ಗಲಿಲ್ಲ.

ನೋಟೀಸು.

ಯುನ್ಸ್ ಕಂಪೆನಿ ಲಿಮಿಟೆಡ್ ಮಂಗಳೂರು—
೧೦೦ ಮೌಲ್ಯದ ೧೦೦೦ ಪಾಲುಗಳು
ವಿಕ್ರಯಿಸಲು ಸಿದ್ಧವಿರುವ ಈ ಕಂಪೆನಿಯ
ಗಿನ ವಿಳಾಸಕ್ಕೆ ಬರಕೊಳ್ಳ ಬಹುದು.

ಕೆ. ಬಿ. ಕಾಮತ್,
ಛಾಪಖಾನೆ, ರಥವೀದಿ, ಮಂಗಳೂರು.

ನೋಟೀಸು

ಜನರಿಗೂ ತಿಳಿಯಪಡಿಸುವುದೇನಂದರೆ
ತಾರೀಕು 18ರ ಶನಿವಾರ ಮೂಡ
ಪೇಟೆಯಲ್ಲಿ ದೀಪಾವಳಿ ಉತ್ಸವದ ಸಂಭ್ರ
ಸಂತೆಯೂ ಪ್ರದರ್ಶನವು ನಡೆಯುತ್ತದೆ.
ಕರಿ, ಎತ್ತು, ಎಮ್ಮೆ, ಕೋಣ, ಕುರಿ, ಆಡು,
ಮೊದಲಾದ ರಾಸುಗಳು ಇರುವವರು ತಂದು ಪ್ರದರ್ಶನಕ್ಕೆ ಇಡ
ಬಹುದು. ಪ್ರದರ್ಶನದಲ್ಲಿ ಆಯಾ ತರಹದ ಜಾನುವಾರುಗಳಲ್ಲಿ
ಅತ್ಯುತ್ತಮವಾದುವುಗಳಿಗೆ ಇನಾಮುಗಳು ಕೊಡಲ್ಪಡುವುವು.

(sd) C. A. SOUTER,
Commissioner,

ಪ್ರಕಟಣೆ.

ಮದ್ರಾಸು ನ್ಯಾಯವಿಧಾಯಕ ಸಭೆಗೂ ಇಂಡಿಯನ್ ಲೆಜಿಸ್ಲೇಟಿವ್ ಎಸೆಂಬ್ಲಿಗೂ ಮೆಂಬರರ ಚುನಾವಣೆಯು 1920ನೆ ಇಸವಿ ನವಂಬರ ತಾರೀಕು 30ರಲ್ಲು ಜರಗುವುದೆಂದೂ ಆಯಾಯ ಕೊನ್'ಸ್ಟಿಟ್ಯೂಯನ್ಸಿಗಳು ತಮ್ಮ ಮೆಂಬರರನ್ನು ನೇಮಿಸ ಬೇಕೆಂದೂ ಈ ಕೆಳಗೆ ಕಾಣಿಸಿದ ಕೊನ್'ಸ್ಟಿಟ್ಯೂಯನ್ಸಿಗಳ ಬಗ್ಗೆ ರಿಟರ್ನಿಂಗ್ ಆಫೀಸರರಾದ ಮಲಬಾರ ಜಿಲ್ಲೆಯ ಕಲ್ಲೆಕ್ಟರರ್ರು ಈ ಮೂಲಕ ತಿಳಿಸುತ್ತಾರೆ.

2. ಪ್ರತಿ ಒಂದು ಕೊನ್'ಸ್ಟಿಟ್ಯೂಯೆನ್ಸಿಯ ಬಗ್ಗೆ ಚುನಾವಣೆಯಾಗ ತಕ್ಕ ಮೆಂಬರರ ಸಂಖ್ಯೆ, ಚುನಾವಣೆಯ ತಾರೀಕು, ಮತ್ತು ಚುನಾವಣೆಯ ಇತರ ವಿಧಾನಗಳನ್ನು ಇವರ ಅಡಿಯಲ್ಲಿ ಮತ್ತು ಓಟು ಕೊಡಬೇಕಾದ ಸಂದರ್ಭದಲ್ಲಿ ಇಲೆಕ್ಟರರ ಓಟುಗಳನ್ನು ತೆಗಿಯುವ ಸ್ಥಳವನ್ನು ಇವರ ಲಗ್ತ ಇರುವ ಶೆಡ್ಯೂಲಿನಲ್ಲಿ ಕಾಣಿಸಿಯದೆ.

ಕೊನ್'ಸ್ಟಿಟ್ಯೂಯನ್ಸಿಯ ಹೆಸರು	ಚುನಾಯಿಸಬೇಕಾದ ಜನರ ಸಂಖ್ಯೆ	ನೊಮಿನೇಶನ್ ಪೇಪರುಗಳನ್ನು ಹಾಜರು ಮಾಡಬೇಕಾದ ಸ್ಥಳ, ತಾರೀಕು ಮತ್ತು ಸಮಯ	ನೊಮಿನೇಶನ್ ಪೇಪರುಗಳನ್ನು ಪರಿಶೋಧಿಸುವ ತಾರೀಕು	ಇಲೆಕ್ಟರರ ಓಟುಗಳನ್ನು ತೆಗಿಯುವ ತಾರೀಕು.	ಓಟುಗಳನ್ನು ಲೆಕ್ಕದಾಖಲೆಕ್ಕೆ ಕುರು ಮಾಡುವ ಸ್ಥಳ, ತಾರೀಕು ಮತ್ತು ಸಮಯ.
1	2	3	4	5	6
ಇಂಡಿಯನ್ ಲೆಜಿಸ್ಲೇಟಿವ್ ಎಸೆಂಬ್ಲಿ ಮುಹಮ್ಮದೀಯ ರ ಲ್ಲದ — ರೂರಲ್-ವೆಸ್ಟ್'ಕೋಸ್ಟ್ ಮತ್ತು ನೀಲಗಿರಿ ಮುಹಮ್ಮದೀಯ — ರೂರಲ್ ವೆಸ್ಟ್'ಕೋಸ್ಟ್ ಮತ್ತು ನೀಲಗಿರಿ.	ಒಂದು ಒಂದು	1920ನೆ ಇಸವಿ ಒಕ್ಟೋಬರ 30ನೆ ತಾರೀಕಿನ ಬೆಳಗ್ಗೆ 11 ಗಂಟೆಯಿಂದ ಶ್ಯಾಮ 1 ಗಂಟೆ ವರೆಗೆ ಮತ್ತು ಶ್ಯಾಮ 2 ಗಂಟೆಯಿಂದ 4 ಘಂಟೆಯ ವರೆಗೆ ಕಲ್ಲಿಕೋಟೆಯ ಹಜೂರು ಆಫೀಸಿನಲ್ಲಿ	1920ನೆ ಇಸವಿ ಅಕ್ಟೋಬರ ತಾರೀಕು 30	1920ನೆ ಇಸವಿ ನವಂಬರ 30ನೆ ತಾರೀಕಿನ ಬೆಳಗ್ಗೆ 7 ಗಂಟೆಯಿಂದ 11 ಘಂಟೆ ವರೆಗೆ ಮತ್ತು ಮಧ್ಯಾಹ್ನ 12 ಘಂಟೆಯಿಂದ ಶ್ಯಾಮ 6 ಗಂಟೆ ವರೆಗೆ	ಕಲ್ಲಿಕೋಟೆಯ ಹಜೂರು ಆಫೀಸಿನಲ್ಲಿ 1920ನೇ ದಶಂಬರ 4ನೇ ತಾರೀಕಿನ ಬೆಳಗ್ಗೆ 10 ಗಂಟೆಗೆ

E. F. THOMAS,

Collector and Returning Officer.

MALABAR.

ಈ ಸಂಚಿಕೆಯ ಪುರವಣಿ.

ನೋಟೀಸು.

'ಪ್ರಖ್ಯಾತಿಪಟ್ಟ ಬಾಸೆಲ್ ಮಿಶನ್ ಒಟ್ಟೆಗಳ ಏಲಂ'

ಮೂರು ದಿನಗಳು ಮಾತ್ರ

ಚೆಕ್ಕುಗಳು, ಮೇಜು ದುಪ್ಪಟಿ, ತುವಾಲು, ಕೈವಸ್ತ್ರ, ಬನಿಯನ್ (ಗಂಜಿಫ್ರಾಕ್) ಮುಂತಾದ ಬಗೆಬಗೆಯ ಸರಕುಗಳು ನವಂಬರ ತಿಂಗಳ ೨, ೩, ೪ನೇ ತಾರೀಕು ಅಂದರೆ ಮಂಗಳವಾರ, ಬುಧವಾರ ಮತ್ತು ಗುರುವಾರ ಮಾತ್ರ ಬಹು ಕಡಿಮೆ ದರದಲ್ಲಿ ಬಲ್ಮಠದಲ್ಲಿರುವ ಕಾಮನ್‌ವೆಲ್ಥ ವೀವಿಂಗ್ ಫ್ಯಾಕ್ಟರಿಯಲ್ಲಿ ಮಾರೋಣಾಗುವವು.

ಈ ಅಪೂರ್ವ ಸಂದರ್ಭವನ್ನು ಕಳಕೊಂಡು ಪಶ್ಚಾತ್ತಾಪ ಪಡಬೇಡಿರಿ

ಶರ್ತ: ನಗದಿ

ಕಾಮನ್‌ವೆಲ್ಥ ವೀವಿಂಗ್ ಫ್ಯಾಕ್ಟರಿ.

(ಗತ)

ಬಾಸೆಲ್ ಮಿಶನ್ ವೀವಿಂಗ್ ಎಸ್ಟಾಬ್ಲಿಶ್‌ಮೆಂಟ್,

ಬಲ್ಮಠ ಮಂಗಳೂರು

ಶಾರದಾ ಛಾಪಖಾನೆ ಮಂಗಳೂರು

ನೋಟೀಸು.

ಮದ್ರಾಸು ವಿಧಿಸ್ಥಾಪನೆ ಸಭೆಗೆ ಆರಿಸೋಣ ವಿಧಿವಿಧಿಗಳಲ್ಲಿ, 3 (1) ವಿಧಿಯ ಪ್ರಕಾರ (ವಿಧಿಸ್ಥಾಪನೆ ಸಭೆ) ಪಶ್ಚಿಮ ಸಮುದ್ರಕರ ಇಂಡಿಯಾ ಕ್ರೈಸ್ತರವರ ಭಾಗಕ್ಕೆ ಒಬ್ಬರನ್ನು ಏರ್ಪಡಿಸಲ್ಪಡುವದೆಂದು ಇದರಿಂದ ಪ್ರಕಟಿಸಪಡಿಸಲಾಗುತ್ತದೆ

ಕೆಳಗೆ ಕಾಣುವ, ತಾರೀಕು ಘಂಟೆ ಸ್ಥಳ ಇವುಗಳು ನಿಯಮಿಸೋಣ, ಹೆಸರು ಪಟ್ಟಿ, ಲೆಖ್ಖಿಸುವದು ಇವುಗಳಿಗೆ ನಿರ್ಧರಿಸಲ್ಪಟ್ಟಿವೆ

1 ರಿಟರ್ನಿಂಗ ಆಫೀಸರಿಗೆ ನಿಯಮನ ಪತ್ರಗಳನ್ನು ಕೊಡುವದು

ಕೊಯಂಮುತ್ತೂರು ಕಲೆಕ್ಟರವರ ಆಫೀಸಿನಲ್ಲಿ 1920ನೆ ಇಸವಿ ಅಕ್ಟೋಬರ ತಿಂಗಳು 30ನೆ ತಾರೀಕಿನಲ್ಲಿ ಮದ್ಯಾನ್ಹ ಘಂಟೆ 3ರಿಂದ 5 ಘಂಟೆ ವರೇಗೆ.

2 ನಿಯಮನ ಪತ್ರಗಳನ್ನು ಪರಿಶೋಧನೆ ಮಾಡುವದು—

ಕೊಯಂಮುತ್ತೂರು ಕಲೆಕ್ಟರವರ ಆಫೀಸಿನಲ್ಲಿ 1920ನೆ ಇಸವಿ ಅಕ್ಟೋಬರ ತಿಂಗಳು 30ನೆ ತಾರೀಕಿನಲ್ಲಿ ಮಧ್ಯಾನ್ಹ 3 ಘಂಟೆಯಿಂದ 5 ಘಂಟೆ ವರೇಗೆ

3 ಪಟ್ಟಿ (ಪೋಲ್) ಏರ್ಪಡಿಸಬೇಕಾದ್ದಲ್ಲಿ ಪಟ್ಟಿ (ಪೋಲ್) ಏರ್ಪಡಿಸುವ ತಾರೀಕು ಮತ್ತು ಘಂಟೆ.

1920ನೆ ಇಸವಿ ನವಂಬರ ತಿಂಗಳು 30ನೇ ತಾರೀಕಿನಲ್ಲಿ ಬೆಳಿಗ್ಗೆ 7 ಘಂಟೆಯಿಂದ 11 ಘಂಟೆ ವರೆಗೆ ಮತ್ತು ಮಧ್ಯಾನ್ಹ 12 ಘಂಟೆಯಿಂದ ಶ್ಯಾಮ 6 ಘಂಟೆ ವರೇಗೆ

4 ಪಟ್ಟಿ ಏರ್ಪಡಿಸುವ ಸ್ಥಳಗಳು—

ಇದಕ್ಕೆ ಶೇರಿಸಿ ಇರುವ ಪಟ್ಟಿ ನೋಡಿ

5 ವೋಟುಗಳು ರಿಟರ್ನಿಂಗ ಆಫೀಸರಿಂದ ಲೆಖ್ಖಿಸಲ್ಪಡುವುದು. 1920ನೆ ಇಸವಿ ಡಿಶಂಬರ ತಿಂಗಳು ತಾರೀಕ 6ನೆ ಸೋಮವಾರ ಬೆಳಿಗ್ಯೆ 11 ಘಂಟೆಗೆ

ಕೊಯಂಮುತ್ತೂರು ಕಲೆಕ್ಟರ್ ಆಫೀಸು
ತಾರೀಕು 19–10–1930

ಎಫ್. ಬಿ. ಈವಾನ್ಸ್
ಕಲಕ್ಟರರು ವ ರಿಟರ್ನಿಂಗ ಆಫೀಸರರು

ಶೆಡ್ಯೂಲ್.

ಮುನ್ಸಿಪಾಲಿಟಿ ವ ತಾಲೂಕು	ಪೋಲಿಂಗ್ ಸ್ಟೇಶನಿನ ಹೆಸರು	ಇಲೆಕ್ಟರರ ವೋಟುಗಳು ತೆಗಿಯುವ ಸ್ಥಳ
1	2	3
ಮಂಗಳೂರು ಮುನಿಸಿಪಾಲಿಟಿ	1 ಕೊಡಿಯಾಲಬೈಲ್ ಈಸ್ಟ್ ವಾರ್ಡ್	ಒಂಟೆರ ಹೋಸ್ಟೆಲ್
	2 ಗೋಳಿಕಟ್ಟ ವಾರ್ಡ್	ಮ್ಯುನಿಸಿಪಲ್ ಆಫೀಸು
	3 ಸೆಂಟ್ರಲ್ ವಾರ್ಡ್	ಗ್ರಾಮ ಮುನ್ಸಿಫ್ ಕೋರ್ಟು
	4 ಮಾರ್ಕೆಟು ವಾರ್ಡ್	ಬ್ರಾಹ್ಮಣ ಹುಡುಗಿಯರ ಶಾಲೆ
	5 ಕೋರ್ಟ ವಾರ್ಡ್	ಮಿಲಾಗ್ರಿ ಶಾಲ
	6 ಕೆಂಟೋನ್‌ಮೆಂಟು ವಾರ್ಡ್	ಡಿಸ್ಟ್ರಿಕ್ಟ ಬೋರ್ಡು ಇಂಜನಿಯರ ಆಫೀಸ
	7 ಪೋರ್ಟು ವಾರ್ಡ್	ಮುನ್ಸಿಪಲ್ ನೀರೇಶ್ವಾಲ್ಯ ಶಾಲ
	8 ಜಪ್ಪು ವಾರ್ಡ್	ಮುನ್ಸಿಪಲ್ ಬೋಳಾರ ಶಾಲೆ
	9 ಕೊಡಿಯಾಲಬೈಲ್ ವೆಸ್ಟ್ ವಾರ್ಡ್	ಮುನ್ಸಿಪಲ್ ಕುದ್ರೋಳಿ ಶಾಲ

...ದಾತರಿಗೆ ವಿನಂತಿ.

...ದೇಶಾಭಿಮಾನಿಯ ಸಂಚಿಕೆಯು ಇಲ್ಲದ... ಕಳುಹಿಸಿಕೊಟ್ಟ ಬಾಕ್ಕೀಪತ್ರಗಳನ್ನು... ...ಗಲಿಲ್ಲ

ನೋಟೀಸು.

...ಮುನ್ಸ್ ಕಂಪೆನಿ ಲಿಮಿಟೆಡ್ ಮಂಗಳೂರು... ...೧೦೦ರ ಮೌಲ್ಯದ ೧೦೦೦ ಪಾಲುಗಳು... ...ವಿಕ್ರಯಿಸಲು ಸಿದ್ಧವಿರುವ ಈ ಕಂಪೆನಿಯ... ...ಗಿನ ವಿಳಾಸಕ್ಕೆ ಬರಕೊಳ್ಳಬಹುದು.

ಕೆ. ಬಿ ಕಾಮತ್.
...ದಾ ಭಾಷಾಲಯನೆ, ರಥಬೀದಿ, ಮಂಗಳೂರು.

ನೋಟೀಸು

ಜನರಿಗೂ ತಿಳಿಯಪಡಿಸುವುದೇನೆಂದರೆ... ತಾರೀಕು 13ರ ಲಾಗಾಯತು ಮೂರು... ...ಪೇಟೆಯಲ್ಲಿ ದೀಪಾವಳಿ ಉತ್ಸವದ ಸಂಧರ್ಭ... ...ಸಂತೆಯೂ ಪ್ರದರ್ಶನವೂ ನಡೆಯುತ್ತದೆ. ಅಲ್ಲಿ ಹಸು, ಕರು, ಹೋರಿ, ಎತ್ತು, ಎಮ್ಮೆ, ಕೋಣ, ಕುರಿ, ಆಡು, ಮೊದಲಾದ ರಾಸುಗಳು ಇರುವವರು ತಂದು ಪ್ರದರ್ಶನಕ್ಕೆ ಇಡಬಹುದು. ಪ್ರದರ್ಶನದಲ್ಲಿ ಆಯಾ ತರಹದ ಜಾನುವಾರುಗಳಲ್ಲಿ ಅತ್ಯುತ್ತಮವಾದುವುಗಳಿಗೆ ಇನಾಮುಗಳು ಕೊಡಲ್ಪಡುವುವು.

(ಸಹಿ) C A SOUTER.
Commissioner

...ಯಲ್ಲಿ ಸುಮಾರು ೫೦೦೦ ರೂಪಾಯಿಗಳ ಮಟ್ಟಿಗೆ ವಾಗ್ದಾನಗಳಾದವು

ಮದ್ರಾಸು ಪ್ರಾಂತಿಕ ಹೊಸ ನ್ಯಾಯವಿಧಾಯಕ ಸಭೆಗೆ ಉಮೇದ್ವಾರರಿಗೆ ವೋಟುಗಳನ್ನು ಕೊಡಲು ಹಕ್ಕುಳ್ಳ ಮಂಗಳೂರು ...

(ಪುತ್ತೂರು), ಕೂಂಭಾಟ ಕೃಷ್ಣಯ್ಯ (ಮಜ್ಜಿನ), ಮಂಜೇಶ್ವರ ಶ್ರೀನಿವಾಸ ಪ್ರಭು (ಉಡುಪಿ) ಹೀಗೆ ೮ ಡಿರೆಕ್ಟರರು ಆರಿಸಲ್ಪಟ್ಟರು

ಬರುವ ತಿಂಗಳ ತಾ. ೬ನೇ ದಿನ ಮಧ್ಯಾಹ್ನ ... ಕುಂದಾಪುರದಲ್ಲಿ ಜಿಲ್ಲೆಯ ... ಹೋಲಿನಲ್ಲಿ ಆ ತಾಲೂಕಿನ ಮಹಾ ಜನರ ಸಭೆಯೊಂದು ಕೂಡುವುದು. ಈ ಜಿಲ್ಲೆಯ ಇತರ ತಾಲೂಕುಗಳಲ್ಲಿರುವಂತೆ ... ಮುದ್ರಣಾಲಯಗಳು ...

ಮುನ್ಸಿಪಾಲಿಟಿವ ತಾಲೂಕು	ಪೋಲಿಂಗ್ ಸ್ಟೇಶನಿನ ಹೆಸರು	ಇಲೆಕ್ಟರರ ವೋಟುಗಳು ತೆಗೆಯುವ ಸ್ಥಳ
ಮಂಗಳೂರು ತಾಲೂಕು	1. ಮುಲ್ಕಿ	ಡಿಪ್ಯುಟಿ ತಹಶಿಲ್‌ದಾರರ ಆಫೀಸು
	2. ಸುರತ್ಕಲು	ಮುಸಾಫರಿ ಬಂಗ್ಲೆ
	3. ಬಜಪೆ	ಛತ್ರ
	4. ಗುರುಪುರ	ಗ್ರಾಮ ಕೋರ್ಟು
	5. ಮಂಗಳೂರು	ತಾಲೂಕು ಕಚೇರಿ
	6 ಫರಂಗಿಪೇಟೆ	ಗ್ರಾಮ ಕೋರ್ಟು
	7 ಬಂಟ್ವಾಳ	ಡಿಪ್ಯುಟಿ ತಹಶಿಲ್‌ದಾರರ ಕಚೇರಿ
	8 ಕಾವಳ ಕಟ್ಟೆ	ತಾಲೂಕು ಬೋರ್ಡು ಶಾಲಾ ಕಟ್ಟೋಣ, ಕಾವಳ ಪಡೂರು ಗ್ರಾಮ
	9 ಸಿದ್ಧಕಟ್ಟೆ	ಸಂಗಬೆಟ್ಟು ಗ್ರಾಮದ ಮುಸಾಫರಿ ಬಂಗ್ಲೆ
ಉಪ್ಪಿನಂಗಡಿ ತಾಲೂಕು	1 ಬೆಳ್ತಂಗಡಿ	ಡಿಪ್ಯುಟಿ ತಹಶಿಲ್ದಾರರ ಕಚೇರಿ
	2 ಕಡಬ	ಮುಸಾಫರಿ ಬಂಗ್ಲೆ
	3 ಪುತ್ತೂರು	ತಾಲೂಕು ಕಚೇರಿ
	4 ಶಿರಾಡಿ	ಮುಸಾಫರಿ ಬಂಗ್ಲೆ
	5 ಉಪ್ಪಿನಂಗಡಿ	ಮುಸಾಫರಿ ಬಂಗ್ಲೆ
	6 ವಿಟ್ಲ	ಡಿ
ಕಾಸರಗೋಡು ತಾಲೂಕು	1 ಬಾಯಾರು	ಮುಸಾಫರಿ ಬಂಗ್ಲೆ
	2 ಕಾಸರಗೋಡು	ತಾಲೂಕು ಕಚೇರಿ
	3 ಕುಂಬಳೆ	ಮುಸಾಫರಿ ಬಂಗ್ಲೆ
	4 ಮಂಜೇಶ್ವರ	ಡಿ
	5 ಪೆರ್ಡಾಲ	ಬದಿಯಡ್ಕ ಡಿ
ಕುಂದಾಪುರ ತಾಲೂಕು	1 ಬೈಂದೂರು	ಲೋಕಲ್ ಫಂಡು ಬಂಗ್ಲೆ
	2 ಕಿರಿಮಂಜೇಶ್ವರ	ಡಿ
	3 ಗಂಗೊಳ್ಳಿ	ತಾಲೂಕು ಬೋರ್ಡು ಶಾಲೆ
	4 ವಂಡ್ಸೆ	ಫೋರೆಸ್ಟು ಬಂಗ್ಲೆ
	5 ಶಂಕರನಾರಾಯಣ	ಲೋಕಲ್ ಫಂಡು ಬಂಗ್ಲೆ
	6 ಕುಂದಾಪುರ	ಡಿವಿಜನಲ್ ಆಫೀಸು
	7 ಹುಣ್ಸೆಮಕ್ಕಿ	ತಾಲೂಕು ಬೋರ್ಡು ಶಾಲೆ
ಉಡುಪಿ ತಾಲೂಕು	1 ಶಿರಿಯಾರ	ಲೋಕಲ್ ಫಂಡು ಬಂಗ್ಲೆ
	2 ಹಂಗಾರಕಟ್ಟೆ	ತಾಲೂಕು ಬೋರ್ಡು ಶಾಲೆ
	3 ಬ್ರಹ್ಮಾವರ	ಲೋಕಲ್ ಫಂಡು ಬಂಗ್ಲೆ
	4 ಕೊಕ್ಕರ್ಣೆ	ಡಿ
	5 ಉಡುಪಿ	ತಾಲೂಕು ಕಚೇರಿ
	6 ಕಾಪು	ಲೋಕಲ್ ಫಂಡು ಬಂಗ್ಲೆ
	7 ಶಿರ್ವ	ತಾಲೂಕು ಬೋರ್ಡು ಶಾಲೆ
	8 ಪಡುಬಿದ್ರೆ	ಲೋಕಲ್ ಫಂಡು ಬಂಗ್ಲೆ
ಕಾರ್ಕಳ ತಾಲೂಕು	1 ಅಜೆಕಾರು	ಲೋಕಲ್ ಫಂಡು ಬಂಗ್ಲೆ
	2 ಬೈಲೂರು	ಡಿ
	3 ಬೆಳ್ಮಣು	ಡಿ
	4 ಕಾರ್ಕಳ	ತಾಲೂಕು ಕಚೇರಿ
	5 ನೆಲ್ಲಿಕಾರು	ಛತ್ರ
	6 ಮೂಡಬಿದ್ರೆ	ಲೋಕಲ್ ಫಂಡು ಬಂಗ್ಲೆ
	7 ವೇಣೂರು	ಡಿ

ಶೆಡ್ಯೂಲ್.

ಮುನ್ಸಿಪಾಲಿಟಿ ವ ತಾಲೂಕು	ಪೋಲಿಂಗ್ ಸ್ಟೇಶನಿನ ಹೆಸರು	ಇಲೆಕ್ಟರರ ವೋಟುಗಳು ತೆಗಿಯುವ ಸ್ಥಳ
1	2	3
ಮಂಗಳೂರು ಮುನಿಸಿಪಾಲಿಟಿ	1 ಕೊಡಿಯಾಲಬೈಲ್ ಈಸ್ಟ್ ವಾರ್ಡ್	ಒಂಟರ ಹೋಸ್ಟೆಲ್
	2 ಗೋಳಿಕಟ್ಟ ವಾರ್ಡ್	ಮ್ಯುನಿಸಿಪಲ್ ಆಫೀಸು
	3 ಸೆಂಟ್ರಲ್ ವಾರ್ಡ್	ಗ್ರಾಮ ಮುನ್ಸಿಫ್ ಕೋರ್ಟು
	4 ಮಾರ್ಕೆಟು ವಾರ್ಡ್	ಬ್ರಾಹ್ಮಣ ಹುಡುಗಿಯರ ಶಾಲೆ
	5 ಕೋರ್ಟು ವಾರ್ಡ್	ಮಿಲಾಗ್ರಿ ಶಾಲೆ
	6 ಕೆಜೂನ್‌ವೆಂಟು ವಾರ್ಡ್	ಡಿಸ್ಟ್ರಿಕ್ಟ ಬೋರ್ಡು ಇಂಜಿನಿಯರ ಆಫೀಸು
	7 ಪೋರ್ಟ ವಾರ್ಡ್	ಮ[illegible]ಪಲ್ [illegible] ಶಾಲೆ
	8 ಜಪ್ಪು ವಾರ್ಡ್	ಮ[illegible]ಪಲ್ ಬೋಳಾರ ಶಾಲೆ
	9 ಕೊಡಿಯಾಲಬೈಲ್ ವೆಸ್ಟ್ ವಾರ್ಡ್	ಮುನ್ಸಿಪಲ್ ಕದ್ರೋಳಿ ಶಾಲ
ಮಂಗಳೂರು ತಾಲೂಕು	1 ಮ[illegible]ಲ್ಕಿ	ಡಿಪ್ಯುಟಿ ತಹಶಿಲ್‌ದಾರರ ಆಫೀಸು
	2 ಸ[illegible]ರತ್ಕಲ	ಮುಸಾಫರಿ [illegible]ಂಗ್ಲೆ
	3 ಒಜಪೆ	ಛತ್ರ
	4 ಗುರುಪುರ	ಗ್ರಾಮ ಕೋರ್ಟ
	5 ಮಂಗಳೂರ	ತಾಲೂಕು ಕಚೇರಿ
	6 ಫರಂಗಿಪೇಟೆ	ಗ್ರಾಮ ಕೋರ್ಟು
	7 ಒಂಟ್ವಾಳ	ಡಿಪ್ಯುಟಿ ತಹಶಿಲ್‌ದಾರರ ಕಚೇರಿ
	8 ಕಾವಳ ಕಟ್ಟೆ	ತಾಲೂಕು ಬೋರ್ಡು ಶಾಲಾ ಕಟ್ಟೋಣ, ಕಾವಳ ಪಡೂರು ಗ್ರಾಮ
	9 ಸಿದ್ಧಕಟ್ಟೆ	ಸಂಗಬೆಟ್ಟು ಗ್ರಾಮದ ಮುಸಾಫರಿ ಬಂಗ್ಲೆ
ಉಪ್ಪಿನಂಗಡಿ ತಾಲೂಕು	1 ಅರಂತೋಡು	ಮುಸಾಫರಿ ಬಂಗ್ಲೆ
	2 ಬೆಳ್ಳಾರೆ	ಡಿ
	3 ಬೆಳ್ತಂಗಡಿ	ಡಿಪ್ಯುಟಿ ತಹಶಿಲ್ದಾರರ ಕಚೇರಿ
	4 ಧರ್ಮಸ್ಥಳ	ಹೆಗಡೆರ ಧರ್ಮಸ್ಥಳ ಕಚೇರಿ
	5 ಜಾಲ್ಸೂರು	ಮುಸಾಫರಿ ಬಂಗ್ಲೆ
	6 ಕಡಬ	ಡಿ
	7 ಮಾಡ್ನೂರು	ಕಾವು ಮ[illegible]ಸಾಫರಿ [illegible]ಂಗ್ಲ
	8 ಪುತ್ತೂರ	ತಾಲೂಕು ಕಚೇರಿ
	9 [illegible]	ಮ[illegible]ಸಾಫರಿ [illegible]ಂಗ್ಲೆ
	10 ಸ[illegible]ಬ್ರಮಣ್ಯ	[illegible] ಫಂಡ್ ಛತ್ರ
	11 ಉಪ್ಪಿನಂಗಡಿ	ಮುಸಾಫರಿ [illegible]ಂಗ್ಲೆ
	12 [illegible]	ಡಿ
ಕಾಸರಗೋಡು ತಾಲೂಕು	1 [illegible]	ಮ[illegible]ಸಾಫರಿ [illegible]
	2 [illegible]	ಡಿ
	3 [illegible]	[illegible] ಗ್ರಾಮ [illegible]
	4 [illegible]	ಡಿಪ್ಯುಟಿ [illegible]
	5 [illegible]	ತಾ[illegible] ಕಚೇರಿ
	6 [illegible]	ಗ್ರಾಮ [illegible]
	7 [illegible]	ಮುಸಾಫರಿ [illegible]
	8 ಮಂಜೇಶ್ವರ	ಡಿ

[illegible] ಆಸ್ಪತ್ರೆಯಲ್ಲಿರುವ [illegible] ಕುಂದುಕೊರತೆಗಳನ್ನು [illegible] ಉಪಾಯಗಳನ್ನು ಕಂಡು ಹಿಡಿಯಲು [illegible] ತಕ್ಕದಾದ ಆಲೋಚನೆಗಳನ್ನು [illegible] ದ ಮಗ್ಗದ ಮಾಲಿಕರು ಯಾವ ಸಹಾಯವನ್ನು [illegible] ಆಲೋಚಿಸಲು ಪಟ್ಟಣದೊಳಗಿನ ಮಗ್ಗದ ಮಾಲಿ[illegible] ಡ್ವಾನ್ಸ್‌ಮೆಂಟ ಎಸೋಸಿಯೇಶನಿನ ಜೋಯಿಂ[illegible] ಮ[illegible] ಮೂಡಬಿದ್ರೆ ಶಂಕರನಾರಾಯಣ[illegible] ಬರುವ ತಾ. ೧ನೇ ಸೋಮವಾರ ಸಾಯಂಕಾಲ[illegible] [illegible]ರಬೇಕಾಗಿ ಸದ್ದರಿ ಸೆಕ್ರೆಟರಿಯವರು ಅಪೇಕ್ಷಿಸು[illegible]

[illegible]ಗಳನ್ನು [illegible] ಬೇಕೆಂಬದನ್ನು [illegible] [illegible]ದ ಕಾರ್ನಾಡ ಸದಾಶಿವರಾವ್ [illegible] [illegible] ಅರೆಬೈಲು ಭೋಜರಾವ್ ಇವರು ಜಿಲ್ಲೆಯ[illegible] [illegible]ಯಣ ಬೆಳೆಸುವರು. [illegible] [illegible]ಗಳೂರು ಮತ್ತು ಅರ್ಕುಳ, ತಾ [illegible] [illegible]ನೇ [illegible] ಕುಂಬಳೆ ೩ ಮಂಜೇಶ್ವರ ೪, [illegible]

[illegible]ಂಡರಿ ಶಾಲೆಯ ವರ್ಧಂತಿ ಉತ್ಸವವು ಕಳೆದ [illegible] ಕಲಕ್ಟರಾದ ರಾಯಿಬಹದ್ದೂರ, ಯು. [illegible]ಕ್ಷತೆಯಲ್ಲಿ ಬಹಳ ವಿಜೃಂಭಣೆಯಿಂದ ಜರಗಿತು. [illegible] ಓದಿದನಂತರ ಹಿಂದುಸ್ಥಾನದ ಇತಿಹಾಸ[illegible] ಕಾಲದೊಂದು ಪ್ರಸಂಗವನ್ನು ಎತ್ತಿ [illegible] ಹುಡುಗರು ಅಭಿನಯಿಸಿದರು [illegible]ನೆರದ ಗೃಹಸ್ಥ[illegible] [illegible]ತ್ರಮ ಸಾನಜೆಲೇಟುವವರು ಮೇಲಿನ ನಾಟಕದಲ್ಲಿ [illegible] ಬಾಲಕನಿಗೆ ಒಂದು ಪದಕವನ್ನು ಉಚಿತವಾಗಿ[illegible] ಸಭಿಗ ವಂದನೆಗಳನ್ನು ಅರ್ಪಿಸುತ್ತಲೇ ಸಭೆಯು[illegible]

[illegible]ವೃದ್ಧಿ [illegible] ಮುಖಂಡ ಗೃಹಸ್ಥರಲೊಬ್ಬರಾದ[illegible] [illegible] ಅಪಾನಿ ಸಾಹೇಬರವರು ಡಾಕ್ಟರ ಪಿ.[illegible] [illegible] ಕಳೆದ ಆದಿತ್ಯವಾರ ದಿನ ಊರ ಮಹನೀಯ[illegible] [illegible]ಸಿ ತವ[illegible] ಕಾಯಿಲೆಯನ್ನು ಯೋಗ್ಯ ಚಿಕಿತ್ಸೆ[illegible] [illegible]ಗ್ಯಾಗಿ ಒಂದು ಚಿನ್ನದ ಪದಕವನ್ನು ಉಚಿತವಾಗಿ[illegible]

ಕೋರ್ಟಿನಲ್ಲಿ ತನಖಿಯಾಗುತ್ತಿದ್ದ [illegible] [illegible] ಮೊಕದ್ದಮೆಯಲ್ಲಿ [illegible] ಒಂದು [illegible] ಕಠಿಣ ಸಜೆ ಮತ್ತು ರೂ ೩೦೦ ಜುರು[illegible], ತಪ್ಪಿ[illegible] ಒಂ[illegible] ವರ್ಷ ಹೆಚ್ಚಿನ ಸಜೆಯು ವಿಧಿ[illegible] [illegible] [illegible]

[illegible] ಗ್ರಾಮ [illegible] ತು ಕೋರ್ಟುಗಳು

[illegible]ತ್ರೀದಾರರಿಗ ವಿನಂತಿ

ಸ್ವದೇಶಾಭಿಮಾನಿಯ ಸಂಚಿಕೆಯು ಇಲ್ಲದ [illegible] ಕಳುಹಿಸಿಕೊಟ್ಟ ಬಾತ್ಮೀಪತ್ರಗಳನ್ನು [illegible]ವಾಗಲಿಲ್ಲ

ನೋಟೀಸು

[illegible]ಷ್ಯೆಯನ್ಸ್ ಕಂಪೆನಿ ಲಿಮಿಟೆಡ್ ಮಂಗಳೂರು— [illegible] ೧೦೦ ಮೌಲ್ಯದ ೧೦೦೦ ಪಾಲುಗಳ[illegible]ನ್ನು ವಿಕ್ರಯಿಸಲು ಸಿದ್ಧವಿರುವ ಈ ಕಂಪೆನಿಯ [illegible]ಗಿನ ವಿಳಾಸಕ್ಕೆ ಬರಕೊಳ್ಳಬಹುದು

ಕೆ ಬಿ ಕಾಮತಾ,

[illegible]ಂದಾ ಫಾರ್ಮಸಿ, ರಥಬೀದಿ, ಮಂಗಳೂರು.

ನೋಟೀಸು

[illegible] ಜನರಿಗೂ ತಿಳಿಯಪಡಿಸುವುದೇನಂದರೆ [illegible]ರ ತಾರೀಕು ೧೬ರ ಲಾಗಾಯಿತು ಮೂರು [illegible]ಪೇಟೆಯಲ್ಲಿ ದೀಪಾವಳಿ ಉತ್ಸವದ ಸಂಭ[illegible]ದವಾಗಿ ಜಾನುವಾರುಗಳ ಸಂತೆಯೂ ಪ್ರದರ್ಶನವು ನಡೆಯುತ್ತದೆ. ಅಲ್ಲಿ ಹಸು, ಕರು, ಹೋರಿ, ಎತ್ತು, ಎಮ್ಮೆ, ಕೋಣ, ಕುರಿ, ಆಡು, ಮೊದಲಾದ ದಾನುಗಳು ಇರುವವರು ತಂದು ಪ್ರದರ್ಶನಕ್ಕೆ ಇಡಬಹುದು. ಪ್ರದರ್ಶನದಲ್ಲಿ ಆಯಾ ತರಹದ ಜಾನುವಾರುಗಳಲ್ಲಿ ಅತ್ಯುತ್ತಮವಾದುವುಗಳಿಗೆ ಇನಾಮುಗಳು ಕೊಡಲ್ಪಡುವುವು.

(sd) C A SOUTER,
Commissioner.

[illegible] ತೋರಿಸುವವರಾದರು. ದೇವಸ್ಥಾನದ ಭಂಡವಾಳಕ್ಕೆ ಕೂಡಿದ ಸಭೆಯಲ್ಲಿ ಸುಮಾರು ೨೦೦೦ ರೂಪಾಯಿಗಳ ಮಟ್ಟಿಗೆ ವಾಗ್ದಾನಗಳಾದವು.

ಮದ್ರಾಸು ಪ್ರಾಂತಿಕ ಹೊಸ ನ್ಯಾಯವಿಧಾಯಕ ಸಭೆಗೆ ಉಮೇದ್ವಾರರಾಗಿ ವೋಟುಗಳನ್ನು ಕೊಡಲು ಹಕ್ಕಿರುವ ಮಂಗಳೂರು ಪಟ್ಟಣದ ಎಲ್ಲಾ ವೋಟರುಗಳ ಸಭೆಯು ಬರುವ [illegible] ತಿಂಗಳ ತಾರೀಕು ೬ನೇ ಶನಿವಾರ ದಿನ ಸಾಯಂಕಾಲ 6-30 ಘಂಟೆಗೆ [illegible] [illegible]

[illegible] ಕೃಷ್ಣರಾವ (ಬಂಟ್ವಾಳ) ಮೊಳಹಳ್ಳಿ ಶಿವರಾವ್ (ಪುತ್ತೂರು), ಕೊಂಭಾಟ ಕೃಷ್ಣಯ್ಯ (ಮಲ್ಕಿನ), ಮೆಂಡೇಶ್ವರ ಶ್ರೀನಿವಾಸ ಪ್ರಭು (ಉಡುಪಿ) ಹೀಗೆ ೮ ಡಿರೆಕ್ಟರರು ಆರಿಸಲ್ಪಟ್ಟರು

ಬರುವ ತಿಂಗಳ ತಾ. ೩ನೇ ದಿನ ಮಧ್ಯಾಹ್ನ [illegible] ಕುಂದಾಪುರದಲ್ಲಿ ಅಲ್ಲಿಯ ಎಡ್ವರ್ಡ ಹೋಲಿನಲ್ಲಿ ಆ ತಾಲೂಕಿನ ಮಹಾ ಜನರ ಸಭೆಯೊಂದು ಕೂಡುವುದು. ಈ ಜಿಲ್ಲೆಯ ಇತರ ತಾಲೂಕುಗಳಲ್ಲಿ [illegible] [illegible] ಮುದ್ರಣಾಲಯಗಳು [illegible]

ಮುನ್ಸಿಪಾಲಿಟಿ ವ ತಾಲೂಕು	ಪೋಲಿಂಗ್ ಸ್ಟೇಶನಿನ ಹೆಸರು	ಇಲೆಕ್ಷನ್ ಪೋಲುಗಳು ತೆಗೆಯುವ ಸ್ಥಳ
ಕಾಸರಗೋಡು ತಾಲೂಕು (ಮುಂದರಿಸಿದ್ದು)	9. ಪಳ್ಳಿಕೆರೆ	ಬೇಕಲ ಮುಸಾಫರಿ ಬಂಗ್ಲೆ
	9. ಪೆರ್ಡಾಲ	ಬದಿಯಡ್ಕ ಡಿ
	11. ತ್ರಿಕರಪುರ ಬಡಗು	ಸಬ್ ರಿಜಿಸ್ಟ್ರಿ ಆಫೀಸು
ಕುಂದಾಪುರ ತಾಲೂಕು	1. ಬೈಂದೂರು	ಲೋಕಲ್ ಫಂಡು ಬಂಗ್ಲೆ
	2. ಕೊಲ್ಲೂರು	ಡಿ
	3. ಕಿರಿಮಂಜೇಶ್ವರ	ಡಿ
	4. ಗಂಗೊಳ್ಳಿ	ತಾಲೂಕು ಬೋರ್ಡು ಶಾಲೆ
	5. ವಂಡ್ಸೆ	ಫೋರೆಸ್ಟು ಬಂಗ್ಲೆ
	6. ಶಂಕರನಾರಾಯಣ	ಲೋಕಲ್ ಫಂಡು ಬಂಗ್ಲೆ
	7. ಸಿದ್ದಾಪುರ	ತಾಲೂಕು ಬೋರ್ಡು ಶಾಲೆ
	8. ಕುಂದಾಪುರ	ಡಿವಿಜನಲ್ ಆಫೀಸು
	9. ಹುಣ್ಸೆಮಕ್ಕಿ	ತಾಲೂಕು ಬೋರ್ಡು ಶಾಲೆ
	10. ಹಾಲಾಡಿ	ಲೋಕಲ್ ಫಂಡು ಬಂಗ್ಲೆ
	11. ಅಲ್ಬಾಡಿ	ಡಿ
ಉಡುಪಿ ತಾಲೂಕು	1. ಕೋಟ	ಲೋಕಲ್ ಫಂಡು ಬಂಗ್ಲೆ
	2. ಶಿರಿಯಾರ	ಡಿ
	3. ಹಂಗಾರಕಟ್ಟೆ	ತಾಲೂಕು ಬೋರ್ಡು ಶಾಲೆ
	4. ಬ್ರಹ್ಮಾವರ	ಲೋಕಲ್ ಫಂಡು ಬಂಗ್ಲೆ
	5. ಕೊಕ್ಕರ್ಣೆ	ಡಿ
	6. ಪೆರ್ಡೂರು	ಡಿ
	7. ಉಡುಪಿ	ತಾಲೂಕು ಕಚೇರಿ
	8. ಹಿರಿಯಡ್ಕ	ಲೋಕಲ್ ಫಂಡು ಬಂಗ್ಲೆ
	9. ಕಾಪು	ಡಿ
	10. ಶಿರ್ವ	ತಾಲೂಕು ಬೋರ್ಡು ಶಾಲೆ
	11. ಪಡುಬಿದ್ರೆ	ಲೋಕಲ್ ಫಂಡು ಬಂಗ್ಲೆ
ಕಾರ್ಕಳ ತಾಲೂಕು	1. ಹೆಬ್ರಿ	ಲೋಕಲ್ ಫಂಡು ಬಂಗ್ಲೆ
	2. ಅಜೆಕಾರು	ಡಿ
	3. ಬೈಲೂರು	ಡಿ
	4. ಬೆಳ್ಮಣ್ಣು	ಡಿ
	5. ಕಾರ್ಕಳ	ತಾಲೂಕು ಕಚೇರಿ
	6. ನೆಲ್ಲಿಕಾರು	ಛತ್ರ
	7. ಮೂಡಬಿದ್ರೆ	ಲೋಕಲ್ ಫಂಡು ಬಂಗ್ಲೆ
	8. ವೇಣೂರು	ಡಿ
	9. ಬಡಗ ಕಾರಂದೂರು	ಅಳ್ದಂಗಡಿ ಅರಮನೆ

ಶಾರದಾ ಛಾಪಖಾನೆ, ಮಂಗಳೂರು.

ಹೋಮಿಯೋಪಥಿಕ್ ,, 2 ಡ್ರಾಮಿನ ,, ,, 0-3-6

ಮಂಗಳೂರು ಟ್ರೇಡಿಂಗ್ ಎಸೋಸಿಯೇಶನ್.
(ಶಾರದಾ ಛಾಪಖಾನೆ)
ರಥಬೀದಿ, ಮಂಗಳೂರು.

THE WORLD RENOWNED HAARLEM OIL.

OF THE ORIGINAL INVENTOR—CLASS TILLY.

Avoid Imitations—Write or call for the papers dealing with the history of the origin HAARLEM OIL.

—Available only for:— **The Bombay Stores,** *Mangalore,*

Sole distributors for India, Burma and Ceylon.

ಲೋಕ ಪ್ರಸಿದ್ಧವಾದ

ಚೊಕ್ಕ ಹಾರ್ಲೆಮ್ ತೈಲ ಕಲ್ಪಕನಾದ ಕ್ಲೆಸ್ ಟಿಲ್ಲಿಯ ಜೆನ್ಯುಇನ್ ಯಾನೆ ತಾಜಾ ಹಾರ್ಲೆಮ್ ತೈಲವು.

ಬಾಟ್ಲಿ 1ಕ್ಕೆ ಕ್ರಯ ಬರೇ ೮ ಆಣೆ ಮಾತ್ರ ರಖಂ ಗಿರಾಕಿಗಳಿಗೆ ಪ್ರತ್ಯೇಕ ದರ. ಕೃತ್ರಿಮ ಹಾರ್ಲೆಮ್ ತೈಲವನ್ನು ತ್ಯಜಿಸಿ ಮೂಲ ಶೋಧಿತನಾದ ಕ್ಲೆಸ್ ಟಿಲ್ಲಿಯ ಹಾರ್ಲೆಮ್ ತೈಲ ಯಾವುದು? ಎಂಬುದನ್ನು ತಿಳಿಯಪಡಿಸುವ ಪತ್ರಗಳನ್ನು ಕರೆಯಿಸಿ.

ದೊರಕುವ ವಿಳಾಸ:— **ಧಿ. ಬೊಂಬೇ ಸ್ಟೋರ್ಸ್,**

ಮಂಗಳೂರು. (ದ. ಕನ್ನಡ)

ಇಂಡಿಯಾ, ಬರ್ಮಾ ಮತ್ತು ಸಿಲೋನು ಪ್ರಾಂತ್ಯಗಳಲ್ಲಿ ಕ್ಲೆಸ್ ಟಿಲ್ಲಿಯ ತಾಜಾ ಹಾರ್ಲೆಮ್ ತೈಲವನ್ನು ಮಾರಾಟ ಮಾಡಲು ಸಂಪೂರ್ಣ ಸ್ವತಂತ್ರ ಪಡೆದ ಏಜಂಟರು.

"ಕಾಮಶಾಸ್ತ್ರ"

ಉತ್ತಮವಾದ ಈ ಪುಸ್ತಕವು ಅನುಕೂಲವಾಗಿ ತಮ್ಮ ದೇಹದ ವಿಷಯಕ್ಕೆ ಮತ್ತು ಆರೋಗ್ಯ ಅನುಕೂಲಕ್ಕೆ ತಕ್ಕ ಈ ಬರಿಯುವಲ್ಲಿ ಅಂಚೆಯ ಹಾಸಲು ಸಹಾ ನಿರೀಕ್ಷಿಸದೇ ಕಳುಹಿಸುವೆವು.

ಮತ್ತು

ಪ್ರಸಿದ್ಧವಾದ ಅತಂಕನಿಗ್ರಹ ಗುಳಿಗೆಗಳನ್ನು ಯಾವಾಗಲೂ ತಮ್ಮ ಪ್ರಿಯಪುತ್ರರ ಹಾಗೆ ಭಾವಿಸಿ ಉಪಯೋಗಿಸುವಲ್ಲಿ ನಿರಾಧಾರವಾದ ಆಲೋಚನೆಗಳನ್ನು ಹೋಗಲಾಡಿಸಿ ಅಮೃತದ ಹಾಗೆ ದೇಹದಾರ್ಢ್ಯವನ್ನುಂಟು ಮಾಡಿಸುತ್ತಾ ಇರುವುದು. ಕ್ರಯ ರೂ. 1. ಎಚ್ಚರಿಗೆಯಿಂದ ಮರೆಯಬಾರದು.

ವಿಳಾಸ:—

ವೈದ್ಯಶಾಸ್ತ್ರಿ ಮಣಿಶಂಕರ ಗೋವಿಂದಜೀ,

ಆತಂಕನಿಗ್ರಹ ಔಷಧಾಲಯ, 157, ಬ್ರಾಡ್ವೇ, ಮದರಾಸು.

Local Agents: **Raphael & Co.,**

Brito Buildings,

Hampankatta, MANGALORE.

ಶ್ರೀಮತ್ ಕಲ್ಯಾಣ ಬಂಧುಗಳೇ!

ಈ ಕಡೆ ನೋಡಿರಿ.

ಕಲ್ಯಾಣಕಾರಕವೆಂಬ ಬೆನಥಿಷಗ್ರಂಥಾಧಾರದಿಂದಲೂ ಅನೇಕ ರಾಜವೈದ್ಯರುಗಳಿಂದಲೂ ಪರಿಶೋಧಿಸಿ ತಯಾರಿಸಲ್ಪಟ್ಟ ಅನುಭವ ಸಿದ್ಧೌಷಧಗಳು ಈ ಕೆಳಗಣ ವಿಳಾಸದಾರರಲ್ಲಿ ದೊರೆಯುವವು. ಅಪೇಕ್ಷಕರು ಕೆಟಲಾಗನ್ನು ತರಿಸಿಕೊಂಡರೆ ಸಮಾಧಾನವಾಗುವದು.

S. P. RAJA & Co.,

Kalyanakaraka Bishagmandir.

POLALY, POST S. C

ಎಸ್. ಪಿ. ರಾಜಾ ಮತ್ತು ಕಂಪೆನಿ,

ಕಲ್ಯಾಣಕಾರಕ ಭಿಷಗ್ಮಂದಿರ, ಪೋಸ್ಟು ಪೊಳಲಿ, ದ. ಕ.

NETRANAND SAREES

Cheap and Fashionable

Sarees in all brilliant colours with lustrous borders.

Liberal Commission for wholesale Orders.

ಚಲೋ ಬಣ್ಣದ ಶೀರೆಗಳು! ಬಹಳ ಕಮ್ಮಿ ಕ್ರಯ!

ವಿವಿಧ ಬಣ್ಣಗಳ ಥಾಹಾಜೊಡದ "ನೇತ್ರಾನಂದ"ಕರವಾದ ಶೀರೆಗಳು ಕೆಳಗಿನ ಕಂಪೆನಿಯವರ ಹತ್ತರ ದೊರಕುತ್ತವೆ.

ವ್ಯಾಪಾರಸ್ಥರಿಗೆ ಒಳ್ಳೇ ಕಮಿಶನ ಸಿಕ್ಕುವದು.

ಸೂರಿನ ಕೆಂಪು (Congo Red) ಹಳದಿ ಪೂಕ್ತು ಇತರ ಬಣ್ಣಗಳು ಕಮ್ಮಿಕ್ರಯದಲ್ಲಿ ದೊರಕುವವು.

ವಿಶೇಷ ಮಾಹಿತಿಬಗ್ಗೆ ಕೆಳಗಿನ ವಿಳಾಸಕ್ಕೆ ಬರಕೊಳ್ಳಿರಿ.

ಶ್ರೀ ಶೀತಾರಾಮವಿಠ್ಠಲ ಕಂಪೆನಿ,

ಮಿಲಾಗ್ರಿ ಇಗರ್ಜೆ ಎದುರು, ಹಂಪನಕಟ್ಟೆ ಮಂಗಳೂರು.

ಮಲೇರಿಯಾ ಜ್ವರ.

ಮಲೆಜ್ವರಹಾರಿ.

ಮಲೆಜ್ವರ ಮುಂತಾದ ಆಗಾಗ ಬರುವ ಜ್ವರಗಳಿಗೆ ಉತ್ತಮ ಪರಿಹಾರ. ಬೆಲೆ ೮. ೧೨.

ವಿಷಮಯವಾದ ಪದಾರ್ಥಗಳು ಒಂದು ರೋಗ ನಿವಾರಣೆಗೆ ಸಹಕಾರಿಯಾದರೂ, ಇನ್ನೊಂದು ರೋಗಕ್ಕೆ ಎಡೆಕೊಡುತ್ತವೆ. ಅಂಥ ವಿಷಮಯವಾದ ಪದಾರ್ಥಗಳು ಇದರಲ್ಲಿ ಲವಮಾತ್ರವೂ ಇಲ್ಲ.

ಹಿಂದುಸ್ಥಾನ, ಬರ್ಮಾ, ಸಿಂಹಳ ಮುಂತಾದ ... ಗಳ ಬೇರೆ ಬೇರೆ ಕೊನೆಗಳಿಂದಲೂ ಕಳೆದ ೨೦ ವರ್ಷಗಳಲ್ಲಿ ಅಸಂಖ್ಯಾತವಾದ ಶಿಫಾರಸು ಪತ್ರಗಳು ನಮಗೆ ಬಂದಿವೆ.

ಪುನೆಯ ಕೃಷಿಕೊಲೇಜಿನ ಅಧ್ಯಾಪಕರಾದ ಡಾ| ಮನ್‌ಸಾಹೇಬರು ಈ ರೀತಿಯಾಗಿ ಬರೆದಿರುತ್ತಾರೆ:—"ಈ, ಬೇರೆ ಬೇರೆ ವಿಧದ ಜ್ವರಗಳ ಸಂದರ್ಭದಲ್ಲಿ ನಾನು ಈ ಔಷಧವನ್ನು ಪ್ರಯೋಗಿಸಿದಾಗ, ಅದರಿಂದ ಶೀಘ್ರದಲ್ಲಿ ಗುಣಾಂಶ ಸಿಕ್ಕಿತು."

ನಮ್ಮ ಏಜಂಟರು ಈ ವರೆಗೆ ನೇಮಕವಾಗದ ಸ್ಥಳದಲ್ಲಿ ನಮಗೆ ಏಜಂಟರು ಬೇಕು. ಕಮಿಶನ್ ಮುಂತಾದ ಶರ್ತಗಳನ್ನು ನಮಗೆ ಬರೆದು ತಿಳಕೊಳ್ಳಬಹುದು.

ಕರ್ಣಾಟಕ ಬ್ರದರ್ಸ್,

65 ಗಿರಗಾಂವ, ಮುಂಬಯಿ.

Agent:—

The Woollen Mart, *Mangalore.*

ಲೂಯಿಸರ ಎಲಿಕ್ಷಿರ್ ಫೊರ್ ಹೆಲ್ತ್.

ಎಂಬುವ ಪಾನಕವು ಚಾ ಮತ್ತು ಕಾಫಿಗಳಿಗಿಂತ ಅತ್ಯಂತ ಹಿತಕರವಾದ ಪಾನವಾಗಿದ್ದು ಬಹುಮೂತ್ರಪೀಡೆ ಬಾರದಂತೆ ಆರೋಗ್ಯ ಕಾಪಾಡುತ್ತದೆ. ಬಾಯಾರಿಕೆ ತಗ್ಗಿಸುತ್ತದೆ. ಮೂತ್ರದ ಹಲವು ದೋಷಗಳನ್ನು ಹೋಗಲಾಡಿಸುತ್ತದೆ. ಒಮ್ಮೆ ಉಪಯೋಗಿಸಿದರೆ ಮತ್ತೆ ಇದನ್ನು ಬಿಡರು. ಪರೀಕ್ಷಾರ್ಥವಾಗಿ ಒಂದು ಸೀಸೆ ತರಿಸಿರಿ.

8 ಔನ್ಸಿನ ಸೀಸೆಗೆ ಕ್ರಯ ರೂ. 2—8—0 ಮಾತ್ರ.

ಡಾಯಬೆಟೋನ್.

ಇದು ಬಹುಮೂತ್ರದ ಪೀಡೆಗೆ ಅತ್ಯುತ್ತಮ ಔಷಧ. ಪೂರ್ಣ ಗುಣಮಾಡುತ್ತದೆ. ರೋಗಿಗಳಿಗೆ ಅಮೃತಪ್ರಾಯವಾಗಿದೆ. 8 ಔನ್ಸಿನ ಸೀಸೆಗೆ ರೂ. 5 ಮಾತ್ರ. ಅಂಚೆಹಾಸಲು ವಗೈರೆ ಇದರಲ್ಲಿ ಸೇರಿಲ್ಲ. ಸೇವನೆಯ ಸೂಚನೆಗಳು ಸೀಸೆಯೊಂದಿಗೆ ಸಿಗುವುವು.

P. M. Kamath & Co.

Chemists & General Merchants,

New Court Road, MANGALORE.

ಅಥವಾ ಕುಂದಾಪುರದಲ್ಲಿ ಈ ಔಷಧವನ್ನು ತಯಾರಿಸುವ ಮಿ| ಕೆ. ಆರ್. ಲೂವಿಸರನ್ನು ವಿಚಾರಿಸಿದರೆ ಈ ಔಷಧವನ್ನು ಹೊಂದಬಹುದು.

ನೇಟಿವ್ ಡೊಕ್ಟರ್ಸ್ ಮುಲ್ಕಿ ಗಣಪಯ್ಯ ಎಂಡ್ ಸನ್ಸರವರ

ಖ್ಯಾತಿಯಿಂದ ಗುಣಪಡಿಸುವ ಔಷಧಗಳು.

1. ಮಹಾಮದನ ಕಾಮೇಶ್ವರಿ ಲೇಹ:—ಬಹಳ ಶ್ರಮಪಟ್ಟು ಕೆಲಸಮಾಡುವ ಲೇಖಕರೂ ಮತ್ತು ಇಂದ್ರಿಯ ದೌರ್ಬಲ್ಯ, ಅಜೀರ್ಣ, ಎದೆನೋವು, ಮಲಬದ್ಧತೆ, ಶರೀರಗಳ ಘಾಸಿತದಿಂದ ಅಶಕ್ತಿ ಮೊದಲಾದ ಪ್ರಕೃತಿಯುಳ್ಳವರೂ ಇದನ್ನು ಸೇವಿಸುವಲ್ಲಿ ರಕ್ತಶುದ್ಧಿ, ಧಾತುಪುಷ್ಟಿ ಮತ್ತು ಮುಖದಲ್ಲಿ ಕಾಂತಿಗೊಳಿಸುವುದು.

2. ಮಹಾಜ್ವರಾಂಕುಶ (ಖಾತ್ರಿ ಗುಣ):—ಇನ್‌ಫ್ಲುಯೆಂಜಾ ನಿಮೊನಿಯಾ, ಮಲೇರಿಯಾ, ದಿವಸಕ್ಕೊಮ್ಮೆ, ದ್ವಿತೀಯ ತೃತೀಯ ಚಾತುರ್ಥಿಕ ಜ್ವರಗಳ ಮೇಲೆ ರಾಮಬಾಣ. ಬಾಟ್ಲಿ 1ಕ್ಕೆ ಆಣೆ 8.

3. ಬಾಲಗ್ರಹಗುಟಿಕೆ:—ಕೂಸು ವ ಮಕ್ಕಳ ಅಪಸ್ಮಾರಕ್ಕೆ ರಾಮಬಾಣ. ಡಜನಿಗೆ ಆಣೆ 10.

4. ಕೊಲೆರಾ ಯಾನೆ ವಾಂತಿಬೇದಿ ಗುಟಕೆ:—ಒಂದೆರಡು ಗುಟಿಕೆಯಿಂದ ವಾಂತಿಬೇದಿ ಕೂಡಲೆ ಗುಣ. ಬರಿ ಅತಿಸಾರ ರಕ್ತಾತಿಸಾರ, ಜ್ವರಕೂಡಿರುವ ರಕ್ತಾತಿಸಾರ, ಗ್ರಹಣಿಯಿಂದ ಯಾ ಹುಳದ ಉಪದ್ರದಿಂದ ಆಗುವ ಹೊರಕಡೆ ಗುಣ. ಬಾಟ್ಲಿ 1ಕ್ಕೆ ಆಣೆ 8.

5. ಶ್ವಾಸಕುಠಾರ ಗುಟಿಕೆ:—ಇದು ಶ್ವಾಸಕ್ಕೆ ಸಿದ್ಧ ಔಷಧಿ. ಒಂದೇ ಗುಟಿಕೆಯಿಂದ ಕಫ, ಉಬ್ಬಸ, ಕೆಮ್ಮು, ಇವು ಗುಣ. ಡಜನಿಗೆ ಆಣೆ 10.

6. ಮೇಹಕುಠಾರ:—ಮೂತ್ರ ಕೃಚ್ಛ್ರ, ಅಶ್ಮರಿ, ವ್ರಣ ಮೂತ್ರಹೋಗುವಾಗ್ಯೆ ಉರಿಯನ್ನೂ ಕೀವನ್ನೂ ಕೂಡಲೆ ನಿಲ್ಲಿಸಿ ಪಥ್ಯವಿಲ್ಲದೆ ಖಂಡಿತ ಗುಣಕೊಡುವದು; ಕಠಿಣ ರೋಗಿಗೂ ಕೂಡಾ ೭ ದಿವಸದೊಳಗೆ ಗುಣಸಿಕ್ಕುತ್ತದೆ. 16 ದಿವಸದ ಔಷಧಿ. ಕ್ರಯ ರೂ. 2.

7. ಇಚ್ಛಾ ಭೇದಿ:—ಆಯಾಸವನ್ನು ಉಂಟುಮಾಡದ ಸುಖ ವಿರೇಚಕ. ಬಾಟ್ಲಿ 1ಕ್ಕೆ ಆಣೆ 12.

8. ಭೃಂಗರಾಜತೈಲ:—ತಲೆ ಉರಿ, ಕಣ್ಣು ಉರಿ, ಕಣ್ಣು ನೋವು, ನಿದ್ರೆಬಾರದೆ ಇರುವುದು, ಅರ್ಧ ತಲೆನೋವು, ಜ್ಞಾಪಕಶಕ್ತಿ ಕುಂದಿಹೋಗುವುದು, ಕೂದಲು ಉದುರಿ ಹೋಗುವುದು, ತಲೆ ತಿರುಗುವುದು; ಕೂದಲಿನ ಕಪ್ಪು ಬಣ್ಣವನ್ನು ಹೆಚ್ಚಿಸಿ ಉದ್ದವಾಗಿಯೂ ನುಣುಪಾಗಿಯೂ ಮಾಡುವುದು. ಬಾಟ್ಲಿ 1ಕ್ಕೆ ಆಣೆ 12.

9. ದಂತಮಂಜನ:—(ಕರ್ಪೂರ ಮಿಶ್ರ) ಹಲ್ಲಿನ ಕ್ರಿಮಿ ವಸಡುಗಳ ಬೀಗು, ಕೀವು ಯಾ ರಕ್ತ ಬರುವುದು, ಮುಂತಾದ ದಂತ ಸಂಬಂಧವಾದ ಸರ್ವ ಬಾಧೆಗಳನ್ನು ಶಾಂತಪಡಿಸುತ್ತದೆ. ಕರಡಿಗೆ 1ಕ್ಕೆ ಆಣೆ 2.

ವಿಳಾಸ:— ಮುಲ್ಕಿ ಗಣಪಯ್ಯ ಎಂಡ್ ಸನ್ಸ್,

ನೇಟಿವ್ ಡಾಕ್ಟರ್ಸ್, ಮಂಗಳೂರು. ದ. ಕ.

ಇಲ್ಲಿ ಬನ್ನಿ! ಬೆಲೆ ನೋಡಿ! ಸಾಮಾನುಗಳನ್ನು ಪರೀಕ್ಷಿಸಿರಿ!

ಶ್ರೀ

ಗಜಾನನ ಮೆಡಿಕಲ್ ಹೊಲ್

ಬಹು ನೂತನ ಅಲೋಪತಿ ಮತ್ತು ಹೊಮಿಯೊಪತಿ

ಔಷಧ ಮಂದಿರ, ರಥಬೀದಿ, ಮಂಗಳೂರು.

ಇಷ್ಟಿಗೆ ಒಂದು ಸಾರಿ ಬಂದು ಪರೀಕ್ಷಿಸಿ!

ಆ ಮೇಲೆ ನೀವು ಬೇರೆಕಡೆ ಹೋಗಲಾರಿರಿ!!

ನಮ್ಮಲ್ಲಿ ಎಲ್ಲಾ ವಿಧವಾದ ಔಷಧ ದ್ರವ್ಯಗಳೂ, ಪೇಟೆಂಟ್ ಇಂಗ್ಲೀಷ ಔಷಧಗಳೂ, ಸುಗಂಧ ದ್ರವ್ಯಗಳೂ, ಸೋಪುಗಳೂ, ಫೌಂಟನ್‌ಪೆನ್‌ಗಳೂ, ಥರಮಾಮೀಟರ್ ಎಂಬ ಅತ್ಯುತ್ತಮ ಉಷ್ಣಮಾಪಕ ಯಂತ್ರಗಳೂ, ರಬ್ಬರಿನ ಫೊಮೆಂಟೇಶನ್ ಚೀಲುಗಳೂ, ಐಸ್ ಕ್ಯಾಪ್ ಮುಂತಾದ ಸರ್ವ ವಿಧವಾದ ಚಿಕಿತ್ಸಕ ಸಾಮಗ್ರಿಗಳೂ ಸ್ಟವ್ ಮುಂತಾದವುಗಳಿಗೆ ಉಪಯುಕ್ತವಾದ ಸ್ಪಿರಿಟ್ ದ್ರವವೂ, ನೀಲಗಿರಿಯ ಎಣ್ಣೆ ಎಂಬ ಯೂಕಲಿಪ್ಟಸ್ ತೈಲವೂ ಬ. ಸುಲಭ ಬೆಲೆಗೆ ತಾಜಾ ರೀತಿಯಲ್ಲಿ ದೊರೆಯುವವು.

ಹೊಮಿಯೊಪತಿ ಮತ್ತು ಟಿಶ್ಯೂ ಔಷಧಗಳು

ನಿಮಗೆ ತಾಜಾ ಆಗಬೇಕಾದರೆ ನಮ್ಮಲ್ಲಿ ಬನ್ನಿ!

ಬಡವರಿಗೋಸ್ಕರ ಧರ್ಮಾರ್ಥ ಚಿಕಿತ್ಸೆ

ಪ್ರತಿನಿತ್ಯವೂ ಬೆಳಿಗ್ಗೆ ೯ ಗಂಟೆಯಿಂದ ೧೦ ಗಂಟೆಯ ವರೆಗೆ ಬಡವರಿಗೆ ಹೊಮಿಯೊಪತಿ ಮತ್ತು ಟಿಶ್ಯೂ ಔಷಧಗಳನ್ನು ರೋಗಿಯನ್ನು ಪರೀಕ್ಷೆ ಮಾಡಿ, ಧರ್ಮಾರ್ಥವಾಗಿ ಕೊಡುವೆವು.

☞ ಔಷಧಗಳನ್ನು ಶಾಸ್ತ್ರರೀತಿಯಾಗಿ ತಯಾರಿಸುವುದಕ್ಕೆ ನಮ್ಮಲ್ಲಿ ೨೦ ವರ್ಷಗಳ ಅನುಭವವುಳ್ಳವರಿರುವರು.

ನಮ್ಮಲ್ಲಿ ಔಷಧಗಳು ಹಗಲಿರುಳು ದೊರೆಯುವವು.

ಸುಲಭ ಬೆಲೆ! ನಗದಿ ವ್ಯಾಪಾರ! ರೋಗಿಗಳು ಗುಣವಾಗುವುದು ಬೇಗ!

ಇಲ್ಲಿ ಒಂದುಸಾರಿ ಪರೀಕ್ಷಿಸಿ!

ಎಮ್. ರಾಮ ಕಾಮತ್,

ಪ್ರೊಪ್ರೈಟರ್.

ಇಂಡಿಯನ್ ಮೋಟರ್ ಸರ್ವಿಸ್.

ಈ ಸರ್ವಿಸಿನ ಮೋಟರ ಬಸ್ಸಗಳು ಮಂಗಳೂರಿನಿಂದ ಬಂಟ್ವಾಳಕ್ಕೂ, ಬೆಳ್ತಂಗಡಿಗೂ, ಪುತ್ತೂರಿಗೂ, ಗುರುಪುರಕ್ಕೂ ವ ಕಾರ್ಕಳ ಮಾರ್ಗವಾಗಿ ಉಡುಪಿಗೂ ವ ಆಯಾಯ ಸ್ಟೇಶನುಗಳಿಂದ ವಾಪಾಸು ಮಂಗಳೂರಿಗೂ ಚಲಾವಣೆ ಆಗುವವು.

ಬೇರೆ ಯಾವ ಮಾಹಿತಿ ಬೇಕಾಗಿದ್ದರೆ ನಮ್ಮ ಕದ್ರಿ ವ ಹಂಪನಕಟ್ಟೆ ಆಫೀಸುಗಳಲ್ಲಿ ವ ಇತರ ಬ್ರೇಂಚ್ ಆಫೀಸುಗಳಲ್ಲಿ ವಿಚಾರಿಸಿದಲ್ಲಿ ತಿಳಿಯಬರುವದು.

ಹಂಪನ ಕಟ್ಟೆ, ಮಂಗಳೂರು, ಮಾಧವ ಬಿಲ್ಡಿಂಗ್ಸ್, ಸವಿನಯ, } ಎ. ಟಿ. ಅಂದ್ರಾದೆ ಪ್ರೊಪ್ರೈಟರ್.

ಪುಸ್ತಕಗಳು.

... ರಾಮಾಯಣ ಸಂಗ್ರಹ ಬಾಲ ಕಾಂಡ ..., ಶ್ಯಾಮಶಾಸ್ತ್ರಿ ..., ಚಿಕ್ಕ ಉಪಾಧ್ಯಾಯರ ... ಚರಿತ್ರೆ ..., ಸಟೀಕ ಆಂಗ್ಲ ಭಾಷಾಪ್ರಕಾಶ ಪುಸ್ತಕ ಭಾಗಗಳು ...

ತೆಲುಗು ಅಕ್ಷರದ ಸಂಗೀತ ಪುಸ್ತಕಗಳು.

ಸಂಗೀತ ಸಂಪ್ರದಾಯ ..., ಗಾಂಧರ್ವ ಕಲ್ಪವಲ್ಲಿ ..., ಸಂಗೀತ ಸ್ವಯಂಬೋಧ ಪ್ರಥಮ ಭಾಗ ..., ಎರಡನೇ ಭಾಗ ...,

ಸಂಗೀತ ಸ್ವರ ಪ್ರಸ್ತಾರಸಾಗರ ... ಅಡ್ವಾನ್ಸ್ ಅವಶ್ಯಕ.

ವಿಳಾಸ:—

ಎಚ್. ಎಸ್. ರಾವ್. ಬ್ರದರ್

ಚಿಕ್ಕಪೇಟೆ, ಬೆಂಗಳೂರು ಸಿಟಿ.

ಮದ್ರಾಸ್ ಸರ್ಕಾರದವರಿಂದ 1920ನೇ ವರ್ಷದ ಶಾಲೆಗಳಿಗೆ ಗೊತ್ತುಮಾಡಲ್ಪಟ್ಟಿರುವ

ಕನ್ನಡ ಪಾಠಪುಸ್ತಕಗಳು

	ರೂ.	ಆ.	ಪೈ.		ರೂ.	ಆ.	ಪೈ.
ರಾಮಾಯಣ ಸಂಗ್ರಹ—ಬಾಲಕಾಂಡ.	0	6	0	ಚಂದ್ರಹಾಸ	0	2	0
ಸುಭದ್ರೆ	0	6	0	ಗುಣನಿಧಾನಕಥೆ	0	6	0
ಪರಿಮಳ	0	12	0	ನೀತಿಚಿಂತಾಮಣಿ ಭಾಗ I	0	4	0
ಪದ್ಯಸಾರ ಭಾಗ I	0	8	0	„ II	0	3	0
... ಚರಿತ್ರೆ	1	1	0	„ III	0	4	6
ರಾಜಶೇಖರ ಚರಿತ್ರೆ	1	0	0	ಹೊಸ ಪುಸ್ತಕಗಳು			
ಸುಮತಿಮದನಕುಮಾರ ಚರಿತ್ರೆ I	0	8	6	ವಿಕಟವಲ್ಲರಿ	0	6	0
ಅಧಿಕಪಾಠಗಳ ಪುಸ್ತಕ	0	6	0	ಸುಶೀಲ	0	1	6
ಸಾವಿತ್ರೀ ಚರಿತ್ರೆ	0	2	3	ಚಂದ್ರಮತಿ	0	8	0
ರಮಾನಂದ	0	10	0	ಸಂತಾಪಕ	0	6	0
ಸುವ್ರತ	0	13	0	ಅಬಲಾಸಚ್ಚರಿತ್ರ ರತ್ನಮಾಲೆ	2	0	0
ಪ್ರಬಂಧಮಂಜರಿ	0	14	0	ನಿರ್ಮಲೆ	0	12	0
ಪದಾರ್ಥವಿಜ್ಞಾನಶಾಸ್ತ್ರ	0	14	0	ಪದತ್ರಯ (ಬಾಲವ್ಯಾಕರಣ)	0	3	6
ಜ್ಯೋತಿಶ್ಶಾಸ್ತ್ರ	1	0	0	ಹಿಂದೂ ವ್ರತವಿವೇಕ	0	10	6
ಪ್ರಹ್ಲಾದ	0	2	0	ಪದ್ಮಿನಿ	0	12	6
ಧ್ರುವ	0	2	0	ಪಾಶ್ಚ್ಯಾಯಿಕೆ	0	8	0
				ಮಹಾರಾಣಿ ಲಕ್ಷ್ಮೀಬಾಯಿ	0	12	0

ಇತ್ಯಾದಿ ಎಲ್ಲಾ ಸ್ಕೂಲ್ ಪುಸ್ತಕಗಳೂ ನಮ್ಮಲ್ಲಿ ಸುಲಭ ಬೆಲೆಗೆ ದೊರೆಯುತ್ತವೆ.

ಎಂ. ಎಸ್. ರಾವ್ ಕಂಪೆನಿ,

ಪುಸ್ತಕವ್ಯಾಪಾರಿಗಳು, ಬೆಂಗಳೂರು ಸಿಟಿ.

ಪ್ರಖ್ಯಾತಿ ಪಟ್ಟ

ಮಂಗಳೂರು ನಶ್ಯದ ಹುಡಿ.

ಸೊಗಸಾದ ಹೊಗೆಸೊಪ್ಪನ್ನು ಉಪಯೋಗಿಸಿ ಒಳ್ಳೇ ಅನುಭವಸ್ಥರಿಂದ ತಯಾರಿಸಲ್ಪಡುತ್ತದೆ. ಈ ನಸ್ಯವು ಒಂದೆರಡು ತಿಂಗಳವರೆಗಾದರೂ ಕೆಡುವುದಿಲ್ಲ.

ರಾತ್ತಲ 1ರ ಕ್ರಯ 3—4—0. ಹೆಚ್ಚಿಗೆ ತರಿಸುವವರಿಗೆ ರೂ. 3 ನಾಸಿಕ ಚೂರ್ಣ ಇದು ಶಿರದ ಮೇಲಿನ ಯಾವತ್ತು ರೋಗಗಳನ್ನು ಗುಣಪಡಿಸುತ್ತದೆ. ತೊಲೆ 1ರ ಕ್ರಯ 0-8-0. ವಿ. ಪಿ. ಖರ್ಚು ಪ್ರತ್ಯೇಕ. ಸ್ಯಾಂಪಲನ್ನು ಅಪೇಕ್ಷಿಸುವವರು 2 ಆಣೆ ಸ್ಟಾಂಪನ್ನು ಕಳುಹಿಸುವದು. ರಖಂ ಪಡೆಕೊಳ್ಳುವವರಿಗೆ ಯೋಗ್ಯವಾದ ಕಮಿಶನ್ ದೊರಕುವುದು.

ನಮ್ಮ ವಿಳಾಸ:—

ಎಸ್. ಪದ್ಮನಾಭ ಭಂಡಾರಿ ಎಂಡ್ ಕೊ.,

ರಥಬೀದಿ, ಮಂಗಳೂರು.

ಮುಫತ್ತು!! ಇಂಥಾದ್ದು ಬೇಕು.

ಗುಲ್ಷನ್ ಜೋಬನ್

ಸರಕಾರದಲ್ಲಿ ರಿಜಿಸ್ಟರು ಮಾಡಲ್ಪಟ್ಟ ನಂ. 253.

ಒಂದಾಣೆ ಸ್ಟಾಂಪಿನೊಳಗೆ ರುಜುವಾತು ಶಿಕ್ಷೆಯುಳ್ಳ ರಶೀದು— 32 ಮಾತ್ರೆಗಳುಳ್ಳ ಬಾಟ್ಲಿಗಳನ್ನು ಖರೀದಿಸುವವರಿಗೆ ಕೊಡಲ್ಪಡುತ್ತದೆ. ಈ ಮಾತ್ರೆಗಳನ್ನು ಸೇವಿಸಿ ಗುಣಹೊಂದದಿದ್ದರೆ ಮನಸಾಕ್ಷಿಯಾಗಿ ಆ ರಶೀದಿಯೊಳಗೆ ದಸ್ತಖತುಮಾಡಿ ಒಂದು ತಿಂಗಳೊಳಗಾಗಿ ವಾಪಸು ಕೊಟ್ಟರೆ ಬಾಟ್ಲಿಯ ಕ್ರಯವನ್ನು ವಾಪಸು ಮಾಡುತ್ತೇವೆಂದು ಪ್ರತಿಜ್ಞೆಯನ್ನು ನಾವು ದೃಢವಾಗಿ ಮಾಡುತ್ತೇವೆ.

ಗುಲ್ಷನ್ ಜೋಬನ್.

ಶಕ್ತಿವರ್ಧಕ! ಧಾತುಪೌಷ್ಟಿಕ!! ರೋಗನಿವಾರಕ!!!

ಈ ಮಾತ್ರೆಗಳು ಸೇವಿಸಿದ ಪ್ರಥಮ ದಿವಸದಲ್ಲಿಯೇ ಆಶ್ಚರ್ಯಕರವಾದ ಗುಣಗಳನ್ನು ತೋರಿಸುವುದು. ಕಳೆಗುಂದಿದ ಕಪೋಲಗಳಿಗೆ ಪುಷ್ಟಿ ಮತ್ತು ಕಾಂತಿಯನ್ನು ಕೊಟ್ಟು ಶರೀರಕ್ಕೆ ಧಾತುಪುಷ್ಟಿ ಸುಖನಿದ್ರೆಗಳನ್ನು ಕೊಡುತ್ತವೆ. ಕಟಿಶೂಲ, ವಾಯುರೋಗ, ಕ್ಷಯ, ಶ್ವಾಸ, ಕಾಸ, ಉದರಶೂಲೆ, ಅಜೀರ್ಣ, ಮೂತ್ರರೋಗ, ಮಲಬದ್ಧತೆ, ಜ್ವರಗಳು, ಮೂಲವ್ಯಾಧಿ, ಅನಿಯಮಿತಋತು ಇವುಗಳನ್ನು ಸಮೂಲನಾಶಿಸಿ, ರಕ್ತಶುದ್ಧಿಯೂ ವೃದ್ಧಿಯೂ ಹೊಂದು ಸರ್ವವ್ಯಾಧಿಗಳನ್ನು ನಿರ್ನಾಮಮಾಡುತ್ತವೆ.

ಬಾಟ್ಲಿ 1ಕ್ಕೆ ರೂ. 1. 3ಕ್ಕೆ ರೂ. 2—10—0. ವಿ. ಪಿ. ಖ. ಬೇರೆ.

ಏಜಂಟರುಗಳು ಬೇಕು. ಎಲ್ಲ ಸ್ಥಳಗಳಲ್ಲಿ ಸಿಕ್ಕುವದು.

ವಿಳಾಸ:—ದಿ, ಗುಲ್ಷನ್ ಜೋಬನ್ ಕಂಪೆನಿ, ಬೊಂಬಾಯಿ 3.



ಜಗತ್ಪ್ರಸಿದ್ಧವಾದ ಅನೇಕ ರೋಗಗಳಿಗೆ ಒಂದೇ ಔಷಧವು.

ಇಂಡಿಯಾ ಸರಕಾರದಲ್ಲಿ ಸನ್ ೧೮೬೭ನೇ ಇಸವಿಯ ೨೫ನೇ ಆಕ್ಟಿನಂತೆ ರಿಜಿಸ್ಟರು ಮಾಡಲ್ಪಟ್ಟ

ಅರ್ಕಶಫಾ ಅಥವಾ ಆರೋಗ್ಯಬಿಂದು.

ಈ ಅರ್ಕಶಫಾ ಎಂಬ ಔಷಧವು ಯಾವತ್ತು ರೋಗಕ್ಕೆ ಮಹದುಪಕಾರಿಯಾಗಿ ಸಾ. ೧೦-೮-೧೯೦೮ನೇ ಇಸವಿಯಿಂದ ತಾ. ೧-೯-೧೯೧೮ನೇ ಇಸವಿಯವರೆಗೆ ಮೂವತ್ತು ಸಾವಿರ ಬಾಟಲಿಗಳು ಖರ್ಚಾದವು. ಮತ್ತು ಸನ್ ೧೯೧೮ನೇ ಇಸವಿ ಅಕ್ಟೋಬರ್ ತಿಂಗಳಲ್ಲಿ ಇನ್‌ಫ್ಲುಯಂಜಾ ಜ್ವರಕ್ಕೆ ಒಂದೇ ತಿಂಗಳಲ್ಲಿ ಒಂಭತ್ತು ಸಾವಿರ ಬಾಟಲಿಗಳು ಖರ್ಚಾದವು. ಅಂತು ಈವತ್ತಿನ ವರೆಗೆ ಸಣ್ಣ ದೊಡ್ಡ ಬಾಟ್ಲಿಗಳು ಕೂಡಿ ಮೂವತ್ತೊಂಭತ್ತು ಸಾವಿರ ಬಾಟಲಿಗಳು ಖರ್ಚಾದವು. ಅಂಥ ಮೇಲೆ ಈ ಔಷಧವು ಎಷ್ಟು ಮೌಲ್ಯವಾನ ಇದೆ ಇದು ಜನರು ತಾವೇ ಅನುಭವಕ್ಕೆ ತಂದು ಪ್ರತಿಯೊಬ್ಬರು ತಮ್ಮ ಸಂಗ್ರಹದಲ್ಲಿ ಒಂದು ಬಾಟ್ಲಿ ಇಟ್ಟುಕೊಂಡು ಅಮೃತವೇ ಎಂದು ತಿಳಿದು ಸ್ವೀಕಾರಮಾಡುತ್ತಿರಬೇಕು. ಈ ಆರೋಗ್ಯಬಿಂದು ಇಡೀ ಕರ್ನಾಟಕ ದೇಶಕ್ಕೆಲ್ಲಾ ಹೋಗಿ ರೋಗಿಗಳು ಈ ಅರ್ಕಶಫಾದಿಂದಲೇ ಗುಣಹೊಂದಿದ ಬಗ್ಗೆ ಮತ್ತು ಯಾವತ್ತು ರೋಗಕ್ಕೆ ಉಪಯೋಗ ಆದಪ್ರಯುಕ್ತ ಎಷ್ಟೋ ಇನಾಮು ಸರ್ಟಿಫಿಕೇಟುಗಳು ಸಹ ದೊರೆದಿರುತ್ತವೆ. ಅವು ಬರೆಯಲಿಕ್ಕೆ ಜಾಗದವು ಸಾಲದು, ಇಂಥ ಅಮೂಲ್ಯವಾದ ಈ ಔಷಧವನ್ನು ಎಲ್ಲರೂ ಸ್ವೀಕರಿಸಿ ರೋಗರಹಿತರಾಗುವಿರೆಂದು ನಂಬುತ್ತೇನೆ. ರೋಗದ ಪರೀಕ್ಷೆಯ ಸಲುವಾಗಿ ಬೇರೆ ಡಾಕ್ಟರರ ಮತ್ತು ವೈದ್ಯರ ದವಾಖಾನೆ ಬೇಕಾಗುವದಿಲ್ಲ. ಅಂದ ಮೇಲೆ ಈ ಆರೋಗ್ಯಬಿಂದುವಿನ ಮೇಲೆ ಮುಲಾಕ್ಷಮಾಡದ ಕೆಳಗೆ ಬರೆದ ರೋಗಗಳ ಮೇಲೆ ಉಪಯೋಗಮಾಡಿ ರೋಗನಿವಾರಣ ಮಾಡಿಕೊಳ್ಳಬೇಕು.

ರೋಗದ ನಾಮಗಳು.

ಕ್ಷಯರೋಗ, ಹಡದರೋಗ, ಪಾಂಡುರೋಗ, ಗುಲ್ಮರೋಗ, ಮಲರೋಗ, ಮಹಾಮಾರಿ, (ಕಾಲರಾ), ಪ್ಲೇಗು, ಚಳಿಜ್ವರ, ವಿಷಮಜ್ವರ, ಇನ್‌ಫ್ಲುಯಂಜಾ ಜ್ವರ, ಅನೇಕ ಪ್ರಕಾರದ ಜ್ವರ, ಗಂಡಮಾಲೆ, ಕಿವಿಶೂಲೆ, ಮೂಗಿನೊಳಗಿನ ಪೀನಸಿ, ಮೊದಲಾದ ರೋಗವು, ಕಣ್ಣಿನೊಳಗೆ ಹೂವು ಬೀಳೋಣ ಮತ್ತು ಕಣ್ಣುನೋವು, ದಮ್ಮು, ಕೆಮ್ಮು, ಶ್ವಾಸ, ಅಡಗ್ಗಿ, ಇದ್ದಲಿಸಿ, ಅಜೀರ್ಣ, ಹೊಟ್ಟೆಶೂಲಿ, ಮೈಶೂಲಿ, ಅರದಲೆಶೂಲಿ, ಪಡಶೂಲಿ, ವಾತಶೂಲಿ, ರಕ್ತಪಿತ್ತ, ಗುದ್ದಮ್ಮನ ಬೇನೆ, ಹುರಕು, ಕಜ್ಜಿ, ಗಜಕರ್ಣ, ಕಮ್ಮು, ಇಸಬು, ಘಾಯವ್ರಣ, ನಾರುಹುಣ್ಣು, ಸ್ತ್ರೀಯರ ಮುಟ್ಟು ಶೂಲಿ, ಹಡದ ನಂತು, ಸಣ್ಣ ಕೂಸುಗಳ ಬಾಲಗ್ರಹ, ತೊಡಗೆಮ್ಮು, ಅರವಿ, ಮುಟ್ಟುದೋಷ, ಹೊಟ್ಟೆ ದೊಡ್ಡದಾಗೋಣ, ಮೈ ಹೊರಬೀಳೋಣ, ಮತ್ತು ಸಣ್ಣ ಕೂಸುಗಳಿಗೆ ವೃದ್ಧರಿಗೂ ಸಹ ತಿಳಿಯದ ಇಂಥ ಅನೇಕ ರೋಗಗಳು, ಚೇಳು ಮತ್ತು ಸರ್ಪದಂಶ ಇದರ ಹೊರತು ಇನ್ನೂ ಅನೇಕ ರೋಗಗಳು ಖಾತ್ರಿಯಿಂದ ಗುಣವಾಗುತ್ತವೆ. ಈ ಆರೋಗ್ಯಬಿಂದುವಿನ ಕ್ರಯ ಅಮೌಲ್ಯ ಕಂಡು ಬಂದಲ್ಲಿ ಬಡವರಿಗೂ ಧನವಂತರಿಗೂ ಸರಿಯಾಗಿ ಬಹಳ ಕಡಿಮೆ ಕ್ರಯ ಇಟ್ಟಿರುತ್ತದೆ. ಒಂದುತೊಲೆ ತೂಕದ ಬಾಟಲಿ ಒಂದಕ್ಕೆ 2 ರೂಪಾಯಿ. ನಮೂನೆ ಉದ್ದಿಶ್ಯ ... ತೂಕದ ಬಾಟ್ಲಿ ಒಂದಕ್ಕೆ 8 ಆಣೆ. ವಿ. ಪಿ. ಖರ್ಚು ಬೇರೆ ... ಒಂದು ಡಜನ್ ಬಾಟ್ಲಿ ತೆಕ್ಕೊಂಡರೆ ನಾಲ್ಕು ಬಾಟ್ಲಿಗಳನ್ನು ಕಮಿಶನ್ ಕೊಡುತ್ತೇವೆ. ಇದಕ್ಕೆ ಎಂಟು ಆಣೆ ಖರ್ಚು ಬರುವದು. ೧೨ಂದ ೧೧ ಬಾಟಲಿಗಳ ವರೆಗೆ ತೆಗೆದುಕೊಂಡರೆ ಕಮಿಶನ್ ಇರುವದಿಲ್ಲ. ಇದಕ್ಕೆ ನಾಲ್ಕು ಆಣೆ ಖರ್ಚು ಬರುವದು. ಒಂದುತೊಲೆಯ 3 ಬಾಟಲಿಗಳು ಒಂದ ಸಾರಿ ತೆಕ್ಕೊಂಡರೆ ಒಂದು ಬಾಟಲಿ ಕಮಿಶನ್ ಕೊಡುತ್ತೇವೆ. ಇದಕ್ಕೆ ಖರ್ಚು ಎಂಟು ಆಣೆ ಬರುವದು. ನಮ್ಮ ಔಷಧವು ಪೋಟ ಹೊದಟಿರ ... ಮತ್ತು ಬಾಟ್ಲಿನ ... ಅನುಪಾನ ಪತ್ರಗಳು ಕನ್ನಡ, ಮರಾಠಿ, ಮುಸಲ್ಮಾನ ಭಾಷೆಗಳಲ್ಲಿ ಛಾಪಿಸಿರುತ್ತವೆ. ಪಸಂದಿ ಪ್ರಕಾರ ಬಾಟ್ಲಿಯು ಸೋಬತ ಸಿಗುವವು. ನಿಮ್ಮ ವಿಳಾಸ ಇಂಗ್ಲೀಷ್ ಅಥವಾ ಕನ್ನಡದಲ್ಲಿ ನಾವು ಮತ್ತು ಪೋಸ್ಟ್ ವಗೈರೆ ಸ್ಪಷ್ಟವಾಗಿ ಬರೆಯುತ್ತಿರಬೇಕು.

ಹೆಚ್. ಎಂ. ಮುಲ್ಲಾ, ಸಂಪಾದಕ ಅರ್ಕಶಫಾ,

83 ಹೆಡ್ ಆಫೀಸ್ ಶಹಾಪೂರ, (ಬೆಳಗಾಂವ).

Mr. ALEX ALVAREZ Dentist.

OF MANDALAY, UPPER BURMA.

Will attend patients here for the following in Particular:—

Charges Moderate.

1. Painless extraction of teeth. 2. Making of false teeth. 3. Filling the teeth with silver, gold, porceline. 4. Gold bridge and Crowns. 5. Porceline Crowns. 6. Cleaning the teeth. 7. Pyorrhoea treatment.

Can be consulted at:—

The Electro Homoeopthic Dispensry,
Hampankatta, MANGALORE.

ಮಿ. ಆಲೆಕ್ಸ್ ಆಲ್ವರಿಸ್ ದಂತವೈದ್ಯ.

ಇವರು ಹಲ್ಲು ಬೇನೆಯಿಂದ ನರಳುತ್ತಿರುವವರ ಹಲ್ಲುಗಳನ್ನು ಸ್ವಲ್ಪವೂ ನೋಯದಂತೆ ಬುಡಸಹಿತ ಕಿತ್ತು ತೆಗೆಯೋಣ, ಕೃತ್ರಿಮ ಹಲ್ಲುಗಳನ್ನು ಮಾಡಿ ಇಡೋಣ, ಹಲ್ಲುಗಳಲ್ಲಿ ಉಂಟಾದ ರಂಧ್ರಗಳನ್ನು ಬೆಳ್ಳಿ, ಬಂಗಾರ, ಪಿಂಗಾಣಿ ಇವುಗಳಿಂದ ಮುಚ್ಚೋಣ, ಬಂಗಾರದ ಕೃತ್ರಿಮ ದಂತಮಾಲೆಯನ್ನು ಬುಡ ಸಹಿತ ಇರಿಸೋಣ, ಪಿಂಗಾಣಿ ಹಲ್ಲುಮಾಲೆಯನ್ನು ಇಡೋಣ ಮತ್ತು ಹಲ್ಲುಗಳನ್ನು ಶುಚಿಮಾಡೋಣ ಮುಂತಾದ ದಂತಚಿಕಿತ್ಸೆಯನ್ನು, ಕಲಿವಾಶಿ ಚಿಕಿತ್ಸೆಯನ್ನೂ ಮಾಡುವರು. ಇವರು ಹಂಪನಕಟ್ಟೆಯಲ್ಲಿರುವ ಮಿ। ಎ. ಫೆರ್ನಾಂಡಿಸ್, ಇಲೆಕ್ಟ್ರೊ ಹೋಮಿಯೊಪೆಥಿಕ್ ಡಿಸ್ಪೆನ್ಸರಿಯಲ್ಲಿ ಮುಕ್ಕಾಂ ಮಾಡಿರುತ್ತಾರೆ.

BANK OF MADRAS.

ಮದ್ರಾಸ್ ಬ್ಯಾಂಕ್.

ಹೆಡ್ ಆಫೀಸು: ಮದ್ರಾಸ್.

ಮೂಲಧನ	ರೂ. 75,00,000.
ಕ್ಷೇಮನಿಧಿ	„ 45,00,000.

ಸೇವಿಂಗ್ಸ್ ಬ್ಯಾಂಕ್.

— ವರ್ಷಕ್ಕೆ ಸೇಕಡಾ 4ರ ಬಡ್ಡಿ —

ಇದರಲ್ಲಿ ಠೇವಣಾತಿಗಳು ಕೆಳಗಿನ ಶರ್ತಗಳಲ್ಲಿ ಪಡೆಯಲ್ಪಡುವವು.

ಒಂದು ವರುಷದ ಅವಧಿಯಲ್ಲಿ ಒಟ್ಟು ರೂ. 5,000ಕ್ಕೆ ಮಿಗದ ಮೊಬಲಗನ್ನು ಠೇವಣಾತಿ ಯಾಗಿಡಬಹುದು.

ಹೀಗೆ ಠೇವಣಾತಿ ಇಟ್ಟ ಪ್ರತಿ ಹತ್ತು ರೂಪಾಯಿಗಳಿಗೆ ಸೇಕಡಾ 4ರಂತೆ ರೂ. 10,000ಕೆ ಮೀರದ ಮೊಬಲಗಿನ ವರೇಗೆ ಬಡ್ಡಿ ಎಣಿಸಲಾಗುವುದು.

ನಿಬಂಧನೆಗಳ ಪ್ರತಿಗಳನ್ನು ಬರೆದು ಬ್ಯಾಂಕಿನಿಂದ ಪಡೆಯಬಹುದು.

ಸಿ. ಎಲ್. ಗೋರ್ಡನ್,

ಏಜಂಟ್, ಮದ್ರಾಸ್ ಬ್ಯಾಂಕ್, ಮಂಗಳೂರು.

"ವೈದ್ಯಾಮೃತ ಮಂದಿರಂ"

ಎಂಬ

ನಮ್ಮ ಆಯುರ್ವೇದ ವೈದ್ಯಶಾಲೆಯಲ್ಲಿ ಶಾಸ್ತ್ರೋಕ್ತವಾಗಿ ತಯಾರಿಸಲ್ಪಟ್ಟ ಎಲ್ಲಾ ತೈಲಗಳೂ, ಆಸವಾರಿಷ್ಟಗಳೂ, ಕಷಾಯಗಳೂ, ದ್ರವದ್ರಾವಕಗಳೂ, ಭಸ್ಮಗಳೂ, ಚೂರ್ಣಗಳೂ, ಮಾತ್ರೆಗಳು ಇತ್ಯಾದಿ ಔಷಧಿಗಳೂ ಮತ್ತು ಕಾಶ್ಮೀರ, ನೇಪಾಲ ದೇಶಗಳಿಂದ ತರಿಸಿದ ಕಸ್ತೂರಿ, ಪಚ್ಚ ಕರ್ಪೂರ, ಕುಂಕುಮಕೇಸರ ಮುಂತಾದವುಗಳೂ ಸುಲಭವಾದ ಕ್ರಯಕ್ಕೆ ದೊರಕುತ್ತವೆ. ಪರಸ್ಥಳ ದವರು ರೋಗದ ಪ್ರಕೃತಿಯನ್ನು ವಿಶದವಾಗಿ ಬರೆದು ತಿಳಿಸಿದರೆ ಅಗತ್ಯವಿರುವ ಔಷಧಿಗಳನ್ನು ಅನುಪಾನಪತ್ರಿಕೆ ಸಮೇತ ವಿ. ಪಿ. ಮೂಲಕ ಕಳುಹಿಸುವೆವು.

ವಿಳಾಸ:— ಕೆ. ಕೆ. ನಾಯರ್

ಎಂಡ್ ಬ್ರದರ್ಸ್,

ವೈದ್ಯಾಮೃತ ಮಂದಿರಂ,

ನೀಲೇಶ್ವರ, ದ. ಕನ್ನಡ.

ಕ್ಷಿಪ್ರಗುಣಕಾರಿ! . ಮಹೌಷಧ!!

ಸಿರಪ್ ವಾಸಕಾ.

ಕೆಮ್ಮು, ಶೀತ, ಜ್ವರ, ಪಕ್ಕೆಗಳ ವೇದನೆ, ರಕ್ತಕಾಸ, ಕ್ಷಯ, ಉಬ್ಬಸ, ಬ್ರಾಂಕಾಯಿಟಿಸ, ನ್ಯುಮೋನಿಯಾ ಮುಂತಾದ ಶ್ವಾಸಕೋಶದ ಯಾವತ್ತು ರೋಗಗಳಿಗೆ ಅತ್ಯುತ್ತಮವಾದದ್ದು. ಪ್ರಾಚೀನಪ್ರಖ್ಯ ಕಾಸರೋಗಗಳಿಗೆ ವಿಶೇಷ ಗುಣಕಾರಿ ಎಂದು ಹೆಸರುಗೊಂಡ "ಆಡುಸೋಗೆ" ಎಂಬ ಗಿಡದ ಎಲೆಯಿಂದ ತಯಾರಿಸಲ್ಪಟ್ಟಿದ್ದು, ಇದರಿಂದ ದೂಷಿತವಾದ ಶ್ಲೇಷ್ಮವು ಬೇಗನೆ ತೆಳುವಾಗುವದರಿಂದ ಕೆಮ್ಮು ಬರುವಾಗ ಕಷ್ಟವಾಗುವದಿಲ್ಲ. ರುಚಿಯಲ್ಲಿ ಸಿಹಿಯಾಗಿರುವದರಿಂದ ಮಕ್ಕಳಿಗೆ ಇದರ ಸೇವನೆಯಲ್ಲಿ ಬಹಳ ಪ್ರೀತಿ.

ಬಾಟ್ಲಿ 1ರ ಕ್ರಯ ಬರೇ ಒಂದು ರೂಪಾಯಿ ಮಾತ್ರ.

ಬಂಗಾಲ ಕೆಮಿಕಲ ಮತ್ತು ಫರ್ಮಾಸ್ಯೂಟಿಕಲ ವರ್ಕ್ಸ್ ಕಂಪೆನಿ ಲಿಮಿಟೆಡ್, ಕಲ್ಕತ್ತಾ,

ಸೋಲ ಏಜಂಟ್ಸ್ —

ಪಿ. ಎ. ಪೈ ಬ್ರದರ್ಸ್, ಉಡುಪಿ.

ಮಿಜಾರ್ಕಾರ ಬ್ರದರ್ಸ್, ಮಂಗಳೂರು,

ಇವರಲ್ಲಿಯೂ ಸಿಗುವದು.

ಗೊನೊಕ್ಯೂರಾ.

ಮೇಹ ರೋಗಕ್ಕೆ (Gonorrhea) ಪರಮೌಷಧವು.

ಎಲ್ಲಾ ತರದ ಮೇಹಗಳಲ್ಲಿ, ದಪ್ಪನಾದ ಕೀವಿನಂಥಾ ಮೇಹವು ಹರಿಯುವದಕ್ಕೆ, ಮೂತ್ರದ್ವಾರದಲ್ಲಿಯ ಉರಿ, ಹಳದಿವರ್ಣದ ಅಥವಾ ಹಸುರುವರ್ಣದ ಕಠಿಣ ಉರಿಯುಳ್ಳ ಮೇಹವು ಹರಿಯುವದಕ್ಕೆ, ಮೂತ್ರಮಾಡುವಾಗ ಇಂದ್ರಿಯದಲ್ಲಿ ಉರಿ ಮುಂತಾದ ಮೇಹ ಸಮ್ಮಂಧವಾದ ಎಲ್ಲಾ ಚುರುಕುರೋಗಗಳಲ್ಲಿ ಉತ್ತಮ ಔಷಧವು. ಇದರ ಸೇವನೆಯಿಂದ ಎಷ್ಟುಕಾಲದ ಹಳೆ ಮೇಹರೋಗಗಳಾದರೂ

ಖಂಡಿತವಾಗಿ ಗುಣಹೊಂದುವವು.

ಔಷಧ ಸೇವಿಸುವ ಕ್ರಮ— 3 ಘಂಟೆಗೆ ಒಂದಾವರ್ತಿ 5 ಬಿಂದು ಔಷಧವನ್ನು ಒಂದು ಚಮಚದಷ್ಟು ನೀರಿನಲ್ಲಿ ಹಾಕಿ ಸೇವಿಸುವದು. ಕ್ರಯ:— ರೂ. 1—0—0.

ಬೇಕಾದವರು ಕೆಳಗಿನ ವಿಳಾಸಕ್ಕೆ ಬರೆಯತಕ್ಕದ್ದು.

ವಿಳಾಸ:— ಎ. ಫೆರ್ನಾಂಡಿಸ್,

ಇಲೆಕ್ಟ್ರೊ ಹೋಮಿಯೊಪೆತಿ ಡಿಸ್ಪೆನ್ಸರಿ,

ಮಂಗಳೂರು.

[illegible] Mangalore.
[illegible], ಮಂಗಳೂರು.

[illegible] 1906ರ [illegible] ಸ್ಥಾಪಿಸಲ್ಪಟ್ಟಿತು.

Authorised and fully paid up Capital Rs. 300,000—0—0	ಅಧಿಕಾರಿಗಳಿಂದ ಪೂರ್ಣವಾಗಿ ಕೊಟ್ಟ ಮೂಲಧನವು ರೂ. 300,000—0—0
Reserve and other sinking Funds „ 138,697—7—2	ಕ್ಷೇಮನಿಧಿ ಮತ್ತು ಇತರ ಫಂಡುಗಳು 138,697—7—2

THE BANK RECEIVES FIXED, CURRENT ACCOUNT, & SAVINGS BANK DEPOSITS.

ಕಾಯಂ ಮತ್ತು ಚಾಲ್ತಿ ಠೇವಣಾತಿಗಳೂ, ಸೇವಿಂಗ್ಸ್ ಬೇಂಕ್ ಠೇವಣಾತಿಗಳೂ ತಕ್ಕೊಳ್ಳಲಾಗುತ್ತವೆ.

For further particulars apply to the Secretary.

ವಿಶೇಷ ಮಾಹಿತಿ ಬಗ್ಗೆ ಸೆಕ್ರೆಟರಿಗಳಿಗೆ ಬರಕೊಳ್ಳುವದು.

[illegible] Bank Ltd.,
Mangalore, 1st September 1920.

K. Venkat Rao,
Secretary.

ಪಾಳ್ಯದ ವೆಂಕಟಾಚಲ ಪಂಡಿತರ ಸಿದ್ಧೌಷಧಗಳು.

ರೋಗಾಮಯಹರ ಕಸ್ತೂರಿ ಮಾತ್ರೆಗಳನ್ನು ಈಗಲಾದರೂ ಪರೀಕ್ಷಿಸಿ ನೋಡಿರಿ!

ಪ್ರತಿವರ್ಷವೂ ಲಕ್ಷಾಂತರ ಸೀಸೆಗಳು ವಿಕ್ರಯವಾಗುತ್ತಿವೆ,

ಇಂಡಿಯಾದವರು ಮಾತ್ರವಲ್ಲ; ಬರ್ಮಾ, ಸಿಲೋನ್, ಮಲೆಯ ಸ್ಟೇಟ್, ಗೋವಾ, ಫೀಜಿಐಲೆಂಡ್, ಆಫ್ರಿಕಾ ಮೊದಲಾದ ಕಡೆಯವರು ಕೂಡ ಈ ಸಿದ್ಧೌಷಧಿಯನ್ನು ಉಪಯೋಗಿಸುತ್ತಿರುತ್ತಾರೆ.

ಮುಖ್ಯವಾಗಿ, ಒಂದೇ ಒಂದು ರೋಗಾಮಯಹರ ಕಸ್ತೂರಿ ಮಾತ್ರೆಯ ಸೀಸೆಯು ನಿಮ್ಮ ಮನೆಯಲ್ಲಿದ್ದರೆ ಸಮಯವನ್ನು ಕಾದು ಮರೆಯುವುದು ಸುಲಭವಾಗಿಯೂ ತಪ್ಪುವುದು.

ಶೀತ, ಶೀತವಾಯು, ಅಜೀರ್ಣ, ಪಾರ್ಶ್ವವಾಯು, ಜ್ವರ, ಮಂದ, ಮಲಬದ್ಧ, ಕೆಮ್ಮು, ಗಸವೇನೆ, ಬಲಹೀನತೆ, ಕಟ್ಟು ಜವಾ, ಮತ್ತು ಕಡುಕಾದ ಹೀರಿಸಿಂದುಂಟಾಗುವ ವಿಕಾರ, ಮಕ್ಕಳ ಎಳವು, ಜ್ವರ, ಕೆಮ್ಮು, ವಾಯು, ಇವೂ ಅನೇಕ ರೋಗಗಳನ್ನು ಈ ಸಿದ್ಧಾಮೃತ ಆಶ್ಚರ್ಯವಾಗುವಂತೆ ಗುಣಪಡಿಸುತ್ತದೆ.

ಪ್ರತಿ 6 ಸೀಸೆಗಳನ್ನು ಒಟ್ಟಿಗೆ ತರಿಸಿದರೆ ಟಪಾಲು ಖರ್ಚು ಸೇರಿ 1—8—0.
ಪ್ರತಿ 12 ಸೀಸೆಗಳನ್ನು ಒಟ್ಟಿಗೆ ತರಿಸಿದರೆ ಟಪಾಲು ಖರ್ಚು ಸೇರಿ 2—13—0.
ಪ್ರತಿ 25 ಸೀಸೆಗಳನ್ನು ಒಟ್ಟಿಗೆ ತರಿಸಿದರೆ ಟಪಾಲು ಖರ್ಚು ಸೇರಿ 5—3—0.

ರಿಜಿಸ್ಟರಾದ ಈ ವ್ಯಾಪಾರದ ಗುರ್ತು ಪ್ರತಿ ಸೀಸೆಯ ಮೇಲೂ ಇರುವುದನ್ನು ನೋಡಿ ತಗೆದುಕೊಳ್ಳಬೇಕಾಗಿದೆ.
ಅನುಪಾನ ಪತ್ರವು ಪ್ರತಿ ಸೀಸೆಯೊಡನೆಯೂ ಇರುವುದು. 280 ಮಾತ್ರೆಗಳುಳ್ಳ ಬುಡ್ಡಿಗೆ 4 ಆಣೆ ಮಾತ್ರ.

ಲಕ್ಷ್ಮೀವಿಲಾಸ ರಸ (ಕ್ಷೇಗಿಗೆ)—ಲಕ್ಷೋಪಲಕ್ಷ ಕ್ಷಯರೋಗಿಗಳು ಈ ಲಕ್ಷ್ಮೀವಿಲಾಸ ರಸದಿಂದ ಆರೋಗ್ಯವನ್ನು ಪಡೆದಿರುತ್ತಾರೆ. ಒಂದೇ ಒಂದು ಲಕ್ಷ್ಮೀವಿಲಾಸ ರಸದ ಸೀಸೆಯು ತಮ್ಮಲ್ಲಿದ್ದರೆ ಕ್ಷೇಗಿಗೆ ಸರ್ವೋತ್ತಮವಾದ ಸಿದ್ಧೌಷಧಿಯು ಬೇರೊಂದಿಲ್ಲವೆಂದು ತಾವೇ ಹೇಳುವಿರಿ. ದಿನವ್ಯರ, ಮೂರರ ನಾಲ್ಕರ ಜ್ವರಗಳು, ಸನ್ನಿಪಾತ ಜ್ವರಗಳು ಕೂಡಾ ಗುಣವಾಗುತ್ತವೆ. ಸೀಸೆಗೆ ರೂ. 1. 5ಕ್ಕೆ ಒಂದು ಇನಾಮು.

ಶ್ರೀನಿವಾಸತೈಲ—ಕ್ಷೇಗಿನ ಗಡ್ಡೆ ಕರಗುತ್ತದೆ. ಸಂಧಿಗಳ ನೋವು ನೀಗಲು ಹೋಗುತ್ತದೆ. ಸೀಸೆಗೆ 8 ಆಣೆ. 5ಕೆ ಒಂದು ಇನಾಮು.

ವೈಶ್ವಾನರಾಸವ—ಸೇವಿಸಿದ ಮೊದಲನೇ ವೇಳೆಯಿಂದಲೇ ವಾಂತಿಭೇದಿ, ಶೀತಭೇದಿ, ಅಜೀರ್ಣದ ಭೇದಿಗಳು ಗುಣವಾಗುತ್ತಾ ಬರುತ್ತವೆ. ಸೀಸೆಗೆ ರೂ. 1. 5ಕ್ಕೆ ಒಂದು ಇನಾಮು.

ಬಾಲಸುಧೋದಯ—ಮಕ್ಕಳಿಗೆ ಬಲಕರ, ಸಿಹಿಯಾಗಿರುತ್ತದೆ. ಮಂದ, ಮಲಬದ್ಧ, ಅಜೀರ್ಣದ ಭೇದಿ, ಕ್ಷಯ, ಹೊಟ್ಟೆ ದಪ್ಪವಾಗಿರುವುದು, ಹಸಿವಿಲ್ಲದಿರುವುದು ಇವೆಲ್ಲವೂ ಗುಣವಾಗಿ ಮಕ್ಕಳು ಪುಷ್ಟರಾಗುತ್ತಾರೆ. ತೃಪ್ತಿಯ ಚಟುವಟಿಕೆ ಸೀಸೆಗೆ ಆಣೆ 12. 5ಕ್ಕೆ ಒಂದು ಇನಾಮು.

ಈ ನಾಲ್ಕಕ್ಕೂ ಟಪಾಲು ಖರ್ಚು ಬೇರೆ.

ಸಮಸ್ತ ರೋಗಗಳಿಗೂ ನಮ್ಮಲ್ಲಿ ಆಯುರ್ವೇದೀಯ ಸಿದ್ಧೌಷಧಿಗಳು ದೊರೆಯುತ್ತವೆ. ಕ್ಯಾಟಲಾಗು ಉಚಿತ.

ವಿಳಾಸ: ಶ್ರೀ ಸೀತಾರಾಘವ ವೈದ್ಯಶಾಲಾ ಮೈಸೂರು.

ಒಂದು ಕುಪ್ಪಿಯ ಕ್ರಯ ಗಳ ಆಣೆ. ಮಂಗಳೂರು ಏಜಂಟ್,
ಕೇ. ಟೀ. ಡೋಂಗರೆ ಕಂಪೆನಿ. ದಿ. ಉಲನ್‌ನಾರ್ಟ್, ಮಂಗಳೂರು.
ಗಿರಿಗಾಂ, ಮುಂಬಯಿ.

[illegible]

[illegible]

[illegible]	[illegible]	[illegible]	[illegible]	[illegible]	[illegible]	[illegible]	[illegible]	ಅಸ್ತ.
6	[illegible]	[illegible]	[illegible]	[illegible]	[illegible]	[illegible]	6·28	6. 2
7	[illegible]	[illegible]	[illegible]	ಉತ್ತರಾ	[illegible]	[illegible]	6·28	6. 2
8	[illegible]	[illegible]	[illegible]	ಹಸ್ತ	[illegible]	[illegible]	6·29	6. 2
9	[illegible]	[illegible]	[illegible]	ಚಿತ್ರಾ	[illegible]	[illegible]	6·29	6. 1
10	ಬುಧ	●	[illegible]	ಸ್ವಾತಿ	[illegible]	[illegible]	6·29	6. 1
11	ಗುರು	[illegible]	[illegible]	ವಿಶಾಖ	[illegible]	[illegible]	6·30	6. 1
12	ಶುಕ್ರ	[illegible]	[illegible]	ಅನುರಾಧಾ	[illegible]	[illegible]	6·30	6. 1

ಮಂಗಳೂರಿನ ವಾಯುಸ್ಥಿತಿ.
(೧೯೨೦ನೆಯ ನವಂಬರ)

Date ತಾರೀಖು	Temperature. ಉಷ್ಣ (ಶಾವು) Maximum ಹೆಚ್ಚಾಗಿ	Minimum ಕಡಮೆ	Rainfall. ಮಳೆ ದಿನದ ಮಳೆ	ಎಪ್ರಿಲ್ ೧ರಿಂದ
29	91—5	77—6	—	...
30	91—6	72—8	0—87	...
31	88—4	74—9	0—32	...
1	89—8	75—2	0—30	...
2	89—3	76—3	—	...
3	90—8	76—2	—	—
4	90—3	76—0	—	—

ಮಂಗ್ಳೂರಿನ ಪೇಟೆ ಧಾರಣೆ.

ದೇನಸು		ಇಂದ ರೂ. ಆ.	ವರೆಗೆ ರೂ. ಆ.
ಮಸ್ಕತಿ ಅಕ್ಕಿಮುಡಿ ಗಳ್ಕೆ	...	7— 4	7—14
ಗುಡ್ಡು, ಸುಗ್ಗಿ	...	6— 10	6—14
ರಾತಿ ಮುಡಿ ಗಳ್ಕೆ	...	6— 6	6—10
ಹೊಸ ರಾತಿ „	...	6— 2	6— 6
ಅವ್ವಲ್ ಬೆಳ್ತಿಗೆ „	...	9— 0	9— 2
ಗುಡ್ಡು ಬೆಳ್ತಿಗೆ „	...	8— 0	8— 2
ರಂಗೂನ ಬೆಳ್ತಿಗೆ ಗೋಣಿ ಗಳ್ಕೆ	...	16— 8	17— 8
ಗೋಧಿ ಗೋಣಿ ಗಳ್ಕೆ	...	19— 0	22— 0
ಹುರುಳಿ ಗೋಣಿ ಗಳ್ಕೆ	...	14— 8	15— 4
ಕಡಲೆ ಗೋಣಿ ಗಳ್ಕೆ	...	15— 8	16— 0
ತೊಗರಿ ಗೋಣಿ ಗಳ್ಕೆ	...	19— 8	20— 0
ತೊಗರಿಬೇಳೆ ಗೋಣಿ ಗಳ್ಕೆ	...	21— 0	28— 0
ಉದ್ದು ಗೋಣಿ ಗಳ್ಕೆ	...	16— 8	18— 0
ಹೆಸರು ಗೋಣಿ ಗಳ್ಕೆ	...	18— 0	18— 8
ಊದು ಬೆಲ್ಲ ಖಂಡಿ ಗಳ್ಕೆ	...	107— 0	110— 0
ಉಪ್ಪು ಗೋಣಿ ಗಳ್ಕೆ	...	4— 6	5— 0
ಕೊಬ್ಬರಿ ಖಂಡಿ ಗಳ್ಕೆ	...	150— 0	160— 0
ಕೊಬ್ಬರಿ ಹಿಂಡಿ ಖಂಡಿ ಗಳ್ಕೆ	...	48— 0	50— 0
ಎಳ್ಳಿಂಡಿ ಖಂಡಿ ಗಳ್ಕೆ	...	40— 0	41— 4
ಕೊಬ್ಬರಿ ಎಣ್ಣೆ ಮಣ ಗಳ್ಕೆ	...	11— 4	11— 6
ಎಳ್ಳೆಣ್ಣೆ ಮಣ ಗಳ್ಕೆ	...	11— 0	11— 8
ಹರಳೆಣ್ಣೆ ಪೆಟ್ಟಿಗೆ ಗಳ್ಕೆ	...	9— 6	9— 9
ಮಾರಿಷ ಸಕ್ಕರೆ ಮಣ ಗಳ್ಕೆ	...	10— 4	10— 8
ಊರ ಮೆಣಸಿನ ಕಾಯಿ ಮಣ ಗಳ್ಕೆ	...	8— 0	8— 8
ಸಾಸಿವೆ ಮುಡಿ ಗಳ್ಕೆ	...	10— 0	10— 0
ಕೊತ್ತಂಬರಿ ಮುಡಿ ಗಳ್ಕೆ	...	6— 8	—
ಕಾಫಿ ಖಂಡಿ ಗಳ್ಕೆ	...	220— 0	230— 0
ಅಡಿಗೋಲು ಅಡಕೆ ಖಂಡಿ ಗಳ್ಕೆ	...	100— 0	115— 0
ಬಂಗೋಲು	...	95— 0	100— 0
ಕಾಳುಮೆಣಸು ಖಂಡಿ ಗಳ್ಕೆ	...	135— 0	140— 0
ಯಾಲಕ್ಕಿ ಮಣ ಗಳ್ಕೆ	...	22— 0	25— 0
ಗೇರುಬೀಜ ಮುಡಿ ಗಳ್ಕೆ	...	3— 8	3—12
ಕಬ್ಬಿಣ ಖಂಡಿ ಗಳ್ಕೆ	...	100— 0	120— 0
ತಾಂಬ್ರ ತಗಡು ಮಣ ಗಳ್ಕೆ	...	23— 4	24— 0
ತಾಂಬ್ರ ಪಾತ್ರಗಳು ಮಣ ಗಳ್ಕೆ	...	32— 0	34— 0
ಹಿತ್ತಾಳೆ ತಗಡು ಮಣ ಗಳ್ಕೆ	...	31— 8	[illegible]
ಹಿತ್ತಾಳೆ ತಗಡು ಮಣ ಗಳ್ಕೆ	...	24— 0	25— 0

ಪರದೇಶ ವರ್ತಮಾನ.

[illegible] ಮುಷ್ಕರ—ಇದರಲ್ಲಿ ಬ್ರಿಟಿಷ [illegible] ಸಹಿತನಾಗಿ [illegible] ಅವರ ಮೇರೆಗೆ [illegible] ಹೆಚ್ಚು [illegible] ವೃತ್ತಿಗೆ ಪ್ರಾಂಭವಾಯಿತು [illegible] ಈ ಶರ್ತಗಳನ್ನು ವಿವರಿಸಿ ಅವರ [illegible] ಈ ಸ್ಟೈಕ ಚೇಲ್ಸಿದ ಮಜೂರರು [illegible] ಇದೆ. ಅವರ ಬಹುಮತದ ಈ [illegible] ವಾಜೂರರ ಪ್ರತಿನಿಧಿಗಳು [illegible] ಮುಷ್ಕರದಿಗಿ [illegible] ಹೆಚ್ಚಿನ ಚಳವಳ ಅಗತ್ಯ [illegible] ಅಂತು ಇದು ಅಲ್ಲಿಯೇ ಶಾಂತವಾಗುವುದೆಂಬ [illegible]

ಗ್ರೀಸ್—ಇಲ್ಲಿಯ ರಾಜರು ಪರಲೋಕವಾಸಿಯಾದವರು ಈಗ ಪಟ್ಟಕ್ಕೆ ಬರತಕ್ಕ ಯುವರಾಜರು ಅಲ್ಲಿ [illegible] ರಿಂದ ತಪ್ಪಾಲ ರಾಜಪ್ರತಿನಿಧಿಯಾಗಿ ಒಬ್ಬರನ್ನು ಕಾರ್ಯಭಾರ ನಡೆಸುವುದಕ್ಕೆ ಅವರೇ ಆರಿಸಿದ್ದಾರೆ. ಯುವರಾಜನು [illegible] ಅಧಿಕಾರವನ್ನು ವಹಿಸಿಕೊಳ್ಳುವ ಸಂಭವವಿಲ್ಲವೆಂದು ವರ್ತಮಾನ ಪತ್ರಿಕೆಗಳು ಸಾರುತ್ತವೆ.

ಬೊಲ್ಶೆವಿಕರು—ಪೋಲೆಂಡಕ್ಕೂ ಬೊಲಶೆವಿಕರಿಗೂ ಸಂಧಾನವು ಆಯಿತು. ಅತ್ತ ಟ್ರೀಸವರ ಸಹಿಯೂ ಆಯಿತು ಎಂದು ಕೇಳಿಸುತ್ತದೆ

ಪೋಲೆಂಡ್—ಇವರು ಲಿಥುವೇನಿಯದಲ್ಲಿ ಪ್ರವೇಶಿಸಿ ಅದರ ಮುಖ್ಯ ರಾಜಧಾನಿಯನ್ನು ಹಿಡಿದು ವಸಂಧಿಯಿಸಿರುವುದರಿಂದ ಲೀಗ್ ಒಫ್ ನೇಶನ್ಸ್ ಕೂಟದವರು ಇತ್ತಂಡದವರನ್ನು ಕರೆಸಿ ಅಲ್ಲಿಯ ಪ್ರಜೆಗಳು ಯಾವ ಅಧಿಕಾರಕ್ಕೆ ಒಳಗಾಗಲು ಸಮ್ಮತಿಸುತ್ತಾರೋ ಅವರೇ ಅಧಿಕಾರ ನಡೆಯಿಸಬೇಕೆಂದು ತಿಳಿಸಲು ಆಲೋಚಿಸಿದ್ದಾರೆ

ಬ್ರಿಟಿಷ ಪಾರ್ಲಿಮೆಂಟು—ಮದ್ರಾಸ ಸಂಸ್ಥಾನದಲ್ಲಿ ಬ್ರಾಹ್ಮಣರಿಗೆನ ಸರಕಾರದವರು ಪ್ರೋತ್ಸಾಹಿಸಿ ದೊಡ್ಡ ಹುದ್ದೆಗಳಿಗೆ ನೇಮಿಸುತ್ತಾರೆಂಬ ಪ್ರಶ್ನೆಯು ಬ್ರಿಟಿಷ ಪಾರ್ಲಿಮೆಂಟಿನಲ್ಲಿ ಕೂಡಾ ಬಂತು ಇಂಡಿಯಾ ಸೆಕ್ರೆಟರಿಯವರು ಇದ ತಪ್ಪು ಗ್ರಹಿಕೆಯೆಂದು ವಾದಿಸಿದರು

ಮೆಸೊಪೊಟೆಮಿಯದಲ್ಲಿ ೧೯೨೦—೨೧ನೆ ವರ್ಷಕ್ಕೆ ಮಾಡಿದ ಅಂದಾಜು ೧೦ ಮಿಲ್ಲಿಯು ಪೌಂಡು ಹೆಚ್ಚಿಗೆ ಖರ್ಚಾಯಿತೆಂತಲೂ, ಕಳೆದ ನವ್ಹಂಬರ ಅಪ್ರೀಲ ವರೆಗೆ ೬ ತಿಂಗಳಿಗೆ ಒಟ್ಟಿಗೆ ೧೩ ಮಿಲ್ಲಿಯು ಪೌಂಡು ವೆಚ್ಚವಾಯಿತೆಂತಲೂ ಪಾರ್ಲಿಮೆಂಟಿನಲ್ಲಿ ಕೇಳಿದ ಸವಾಲುಗಳಿಗೆ ಉತ್ತರಿಸಿತ್ತು

ಒಳದೇಶ ವರ್ತಮಾನ.

ಅಲೀಘರದ ಗಲಾಟೆ—ಇಲ್ಲಿ ಯೂನಿವರ್ಸಿಟಿ ಕೊಲೇಜಿನ ವಿದ್ಯಾರ್ಥಿಗಳು ಸರಕಾರದ ಸಹಾಯವನ್ನು ಅದ್ಯಾಕೆ ಕಮಿಟಿಯವರು ತ್ಯಜಿಸದಿದ್ದರೆ ತಾವು ಮುಷ್ಕರ ಹಿಡಿಯುತ್ತೇವೆಂದು ತಿಳಿಸಿದ್ದರಿಂದ ಕಮ್ಮಿಟಿಯವರ ಸಭೆಸೇರಿ ಅದರಲ್ಲಿ ಮಹಮ್ಮದ ಅಲ್ಲಿ, ಡಾ। ಅನ್ಸಾರಿ ಮೊದಲಾದ ಅಸಹಕಾರಿಗಳೂ ಇದ್ದು ಬಹಳ ಚರ್ಚೆ ನಡೆಯಿತು ಕಡೆಗೆ ಈ ಅಸಹಕಾರಿಗಳ ಮತಕ್ಕೆ ವಿರೋಧವಾಗಿ ಟ್ರಸ್ಟಿಗಳ ಬಹುಮತ ವಿದ್ದಹಾಗೆ ಕಂಡಿತು. ಅನೇಕಾನೇಕ ಹಿರಿಯರು ಗಾಬರಿಯಾಗಿ ತಮ್ಮ ಮಕ್ಕಳನ್ನು ಹಿಂದೆ ಕರೆಯಿಸಲು ಪ್ರಿನ್ಸಿಪಾಲರಿಗೆ ಪತ್ರ ಬರೆದಿದ್ದರು ಬಹುಮತವನ್ನು ಉಲ್ಲಂಘಿಸಿ ವಿದ್ಯಾರ್ಥಿಗಳೂ ಮಹಮ್ಮದ ಅಲ್ಲಿಯವರೂ ಕೊಲೇಜು ಕಂಪೌಂಡನ್ನು ಬಿಟ್ಟು ಹೋಗದ್ದರಿಂದ ಕೊಲೇಜಿಗೆ ಒಂದು ತಿಂಗಳ ರಜೆಕೊಡಬೇಕಾಯಿತು ಟ್ರಸ್ಟಿಗಳು ಪದೇ ಪದೇ ಎಚ್ಚರಿಸಿದರೂ ಕೇಳದೆ ಮಹಮ್ಮದಅಲ್ಲಿಯವರು ತಮ್ಮ ರಾಷ್ಟ್ರೀಯ ಯೂನಿವರ್ಸಿಟಿಯನ್ನು ಇದೇ ಕಟ್ಟಡದಲ್ಲಿ ಸ್ಥಾಪಿಸಲಿಕ್ಕಿದ್ದೇನೆ ಎಂದು ತಿಳಿಸಿದರಿಂದ ಜಿಲ್ಹೆಯ ಕಮಿಶನರ್ ಮತ್ತು ಪೋಲೀಸಿನವರ ಫೌಜು ಅಲ್ಲಿಗೆ ಬಂದು ಈ ಕೂಟದವರಿಗೆ ಎಚ್ಚರಿಸಿದ್ದರಿಂದ ಮಹಮ್ಮದಅಲ್ಲಿಯವರು ಸಮೀಪದಲ್ಲಿ ಬಾಡಿಗೆಗೆ ಮಾಡಿಕೊಂಡ ಕಟ್ಟಡಕ್ಕೆ ವಿದ್ಯಾರ್ಥಿಗಳ ಸಮೇತ ಹೋದರು

ಹಿಂದೂ ಯೂನಿವರ್ಸಿಟಿ, ಬನಾರಸ್—ಇಲ್ಲಿಯೂ ಹಿಂದು ವಿದ್ಯಾರ್ಥಿಗಳು ಇದೇ ಬಗೆಯ ಚಳವಳವನ್ನು ಎಬ್ಬಿಸಿಯಾರು ಎಂಬ ಸಂದೇಹದಿಂದ ಪಂಡಿತ ಮಾಲವಿಯಜೀಯವರು ಅವರನ್ನು ಸಭೆ ಸೇರಿಸಿ ಬಹಳವಾಗಿ ಬೋಧಿಸಿ ವಿದ್ಯಾರ್ಥಿಗಳು ಈ ಚಳವಳದಲ್ಲಿ ಕೈ ಹಾಕಬಾರದೆಂದು ಕೇಳಿಕೊಂಡಿದ್ದಾರೆ

ಮುಂಬಯಿ—ಇಲ್ಲಿಯ ಟಪ್ಪಾಲುಪೇದೆಗಳ ಟ್ರಮವೇಯವರ ಮುಷ್ಕರಗಳು ನಿಲ್ಲಲಿಲ್ಲ

ಕಲ್ಕತ್ತೆ—ಇಲ್ಲಿ ಬಂದರದ ಕೂಲಿಗಳೂ ತಮಗೆ ಸಿಗುವ ದರಗಳನ್ನು ಏರಿಸಬೇಕೆಂದು ಮುಷ್ಕರ ಹಿಡಿದಿದ್ದಾರೆ.

ಕೊಡಗು—ಗಾಳಿಬೀಡುಸ್ಕೂಲ್:—ಈ ಸ್ಕೂಲಲ್ಲಿ ಇದೆ ತಾ ೧೭ನೇ ಆದಿತ್ಯವಾರ ಬೆಳಗ್ಗೆ ೮ ಘಂಟೆಗೆ ಮ। ರಾ। ರಾ। ಪಾಂಡಿರ ಪಟೇಲ್ ಮಾದಪ್ಪನವರು. ಮೊಣ್ಣಂಗೇರಿ ಗ್ರಾಮದ ಪಟೇಲ್ ಬೆಳ್ಯಪ್ಪಗೌಡರು ರಾ ರಾ ಕೆರ್ಳದನ ಕಾರ್ಯಪ್ಪನವರು, ಕೊಟ್ಟೆ ದೇವಯ್ಯನವರು, ಮ। ರಾ। ರಾ। ಬ್ರಹ್ಮಶ್ರೀ ಕೃಷ್ಣಯ್ಯ, ಗಾರ್ಡ್ ಸುಬ್ರಾಯರು ವಗೈರೆ ಅನೇಕ ಜನ ಮಹನೀಯರು, ಶಾಲಾ ವಿದ್ಯಾರ್ಥಿಗಳು ಸಭೆ ಸೇರಿ ಪ್ರಾರಂಭದಲ್ಲಿ ಶ್ರೀಮಾನ್ ದಿವಂಗತ ಟಿಳಕ್ ಪ್ರಕ್ಯಾತ [illegible] ಯವರ ಮತ್ತು ಇವರ ಧರ್ಮ ಪತ್ನಿಯವರ ಪಟಗಳನ್ನು ದಿವಂಗತರಾದ ಎಡ್ವರ್ಡ್ ಮುಹರ್ರಾಜರ ಚಿತ್ರ ಸಹಾ ಎತ್ತರವಾಗಿಟ್ಟು ಪುಷ್ಪ ಭಂಡಾರವನ್ನು ಶೃಂಗರಿಸಿ ಶಾರದಾ ಪೂಜೆ ಶುರುಮಾಡಿ ೧೧ ಘಂಟೆಗೆ ಮಂಗಳಾರತಿ ವಗೈರೆ ತೀರಿ [illegible] ವಿದ್ಯಾರ್ಥಿಗಳಿಂದ ಚಲೋ ರೀತಿಯಲ್ಲಿ ಉಪಾಧ್ಯಾಯರ ಪದ್ಯಗಳನ್ನು ಹೇಳಿಸಿದರು. ಗಾರ್ಡ್ ಸುಬ್ರಾಯರು ಸಂಗೀತ ಕೀರ್ತನೆ, ರಾಜ ಗೀತೆ ವಗೈರೆ ಹಾಡಿ, ಸಂತೋಷ ಉಂಟುಮಾಡಿದರು, ಬಳಿಕ ಗಂಧ ಪ್ರಸಾದ ವಗೈರೆ ಕೊಟ್ಟು ಅವಲಕ್ಕಿ ವಗೈರೆ ವಿದ್ಯಾರ್ಥಿಗಳಿಂದ ಕೊಡಿಸಲ್ಪಟ್ಟ ಫಲಹಾರಾದಿಗಳನ್ನು ಎಲ್ಲರು ಸ್ವೀಕರಿಸಿದರು. ನಂತರ ಮ। ರಾ। ಕೃಷ್ಣಯ್ಯನವರು, ಮ। ರಾ। ರಾ। ಕೇಲಾಜೆ ರಾಮ ಚಂದ್ರಯ್ಯನವರು ಪ್ರಯತ್ನ ಪಟ್ಟು ಸುಳ್ಯದಲ್ಲಿ ಕಟ್ಟಿಸುವ ಛತ್ರದ ವಿಷಯವಾಗಿ ದಿವಂಗತರಾದ ಲೋಕಮಾನ್ಯ ಬಾಲ ಗಂಗಾಧರ ತಿಲಕರ ವಿಷಯವಾಗಿ ಕೆಲವು ಭಾಷಣ ಮಾಡಿದ್ದಲ್ಲದೆ, ಈ ಛತ್ರ ಗ್ರಾಮದಲ್ಲಿ ಸಹಾ ಮಹಾತ್ಮರ [illegible] ಒಂದು [illegible] ಮಂದಿರವನ್ನು ತೆರೆವರೆ ವಿದ್ಯಾರ್ಥಿ [illegible] ಅನೇಕ [illegible] ಬಹಳ ಉಪಕಾರ [illegible] ಎಂಬ ವಗೈರೆ [illegible] ಮಹಾತ್ಮರ [illegible] ಮನನ

[illegible] ಪ್ರಾರ್ಥನೆ [illegible] ಮಕ್ಕಳು [illegible] ಬೆಳಕು ಕೆರಳಿಸುವವರಾಗಿ ವಿದ್ಯಾರ್ಥಿಗಳು [illegible] ಆಗಲಿ ಎಂದು ಲೋಕಮಾನ್ಯರ ಆತ್ಮಕ್ಕೆ ಶಾಂತಿ ಉಂಟಾಗ್ಗಲೆಂದು ಶ್ರೀ ದೇವರನ್ನು ಎಲ್ಲರು ಐಕ್ಯಮತ್ಯದಿಂದ ಪ್ರಾರ್ಥಿಸಿದರು

ದಕ್ಷಿಣ ಕನ್ನಡ.

ಕೋಟೆಕಾರು:—ಇಲ್ಲಿ ಹಾಯರ್ ಎಲಿಮೆಂಟರಿ ಶಾಲೆಯಲ್ಲಿ ಕಳೆದ ೩ ವರ್ಷದಿಂದ ನಡೆಯುತ್ತಲಿರುವ ಚರಿಯನ್ ಸ್ಪಿಟ್ರಿಟ್ ಕಮಿಟಿಯು [illegible] ವರ [illegible] ಕೆಳಗಿರುವ ಕೃಷಿ ಸ್ಕೂಲಿಗೆ ಆ ಇಲಾಖಾ ಡೈರೆಕ್ಟರ ದೊರೆಗಳಾದ [illegible] ಮೇಳೆ ಮತ್ತು ಅವರ ಪತ್ನಿಯೂ ಕೂಡಾ ಅಪೂರ್ವ ದರ್ಶನವನ್ನು ತಾ. ೩೦—೧೦—'೨೦ಕ್ಕೆ ಕೊಟ್ಟರು ಇವರು ಒಂದು ತಾಸಿನ ವರೆಗೆ ಸದರಿ ಕ್ಲಾಸನ್ನು ಸಂಭಾಗಿ ಪರೀಕ್ಷಿಸಿ ಹುಡುಗರಿಂದ ಸಿಕ್ಕಿದ ಉತ್ತರಗಳನ್ನು ಕೇಳಿ ಬಹಳವಾಗಿ ಅವರನ್ನು ಕೊಂಡಾಡಿದರು ಇವರು ಈ ದಿನ ಶಾಲಾ ತೋಟವನ್ನು ಪರೀಕ್ಷಿಸಿ ಇದರ ನಿರ್ವಾಹತ್ವದ ವಿಷಯವು ಶಾಲಾಧಿಕಾರಿಯ ಪ್ರಯತ್ನದ ವಿಷಯವೂ ಚಲೋ ಅಭಿಪ್ರಾಯ ಪಟ್ಟದ್ದಲ್ಲದೆ ಈ ಕ್ಲಾಸಿನ ಹುಡುಗರಿಗೆ ಫಲಹಾರ ಹಂಚಲಿಕ್ಕೆ ರೂಪಾಯಿ ೫ನ್ನು ಉದಾರ ಮನಸ್ಸಿನಿಂದ ಸಮರ್ಪಿಸಿದರು ಮಾರಣೆ ದಿನ ಬೆಳಗ್ಗೆ ಇವರೆಲ್ಲರ ಭಾವ ಚಿತ್ರವನ್ನು ತೆಗಿಯಲಿಕ್ಕೆ ಬರಬೇಕೆಂತ ಅಪೇಕ್ಷಿಪಟ್ಟರು ದೊರೆಗಳವರು ಸ್ವಲ್ಪ ಗ್ರಾಮದಲ್ಲಿ ಸಂಚರಿಸಿ ನಡೆಯುವ ಕೃಷಿಯನ್ನು ಪರೀಕ್ಷಿಸಿದರು ತನ್ನಕ್ಕೆ ಅವರ ಪತ್ನಿಯು ಶಾಲಾ ಬಾಲಕರಿಗೆ ಕಲಿಸಲಿಕ್ಕಾಗಿ ಮಾಡಿಟ್ಟ ಪಠಗಳನ್ನೂ ಚಿತ್ರಗಳನ್ನೂ ಇತರ ಉಪಕರಣಗಳನ್ನೂ ನೋಡುತ್ತಾ ಸಂತೋಷಪಟ್ಟರು ಮಾಂತ ತಾ ೩೧—೧೦—'೨೦ನೇ ದಿನ ಬೆಳಗ್ಗೆ ಈ ಶಾಲಾಭ್ಯುದಯ ನಿರೀಕ್ಷಕರೊಬ್ಬರು ದೊರೆಗಳಿಗೆ ತಮ್ಮ ಭೇಟಿಯನ್ನು ಕೊಟ್ಟು ಈ ಶಾಲೆಯ ವಿಷಯ ತಮಗಿರುವ ಅನುಭವವನ್ನು ಕೊಟ್ಟರು ತದನಂತರ ದೊರೆಗಳು ಪ್ರಸನ್ನತೆಯಿಂದ ಬಂದು ಶಾಲಾ ವಿದ್ಯಾರ್ಥಿಗಳಲ್ಲಿ ಕೃಷಿ ಪಾಠ ಕಲಿಯುವ ವಿದ್ಯಾರ್ಥಿಗಳ, ಶಿಕ್ಷಕರ ಮತ್ತು ಅಭ್ಯುದಯ ನಿರೀಕ್ಷಕರ ಭೇಟಿಕೊಟ್ಟ ಒಬ್ಬರ ಭಾವಚಿತ್ರವನ್ನು ತೆಗೆದರು ಈ ಭಾವ ಚಿತ್ರದಲ್ಲಿ ದೊರೆಸಾನಿಯವರು ಕೂಡಾ ನಿಂತರು ಪುನಃ ಶಾಲೆಯನ್ನು ಪ್ರವೇಶಿಸಿ ಮುಖ್ಯಕೆ ಚಿಕ್ಕ ಬಾಲಕರ ಕಥಾನಟನೆಯನ್ನು ಕೇಳಿ ಸಂತೋಷಪಟ್ಟದ್ದಲ್ಲದೆ ಈ ಶಾಲಾ ಕಾರ್ಯಕ್ರಮಗಳಲ್ಲಿ ಅವರಿಗೆ ತೋರಿದ ಕಾಣುವ ಶ್ಲಾಘನೀಯ ವಾದ ಕೆಲವು ಸಂಗತಿಗಳ ವಿಷಯ ಲೇಖರೂಪದಾಗಿ ಸಂದರ್ಶನಾ ರಿಜಿಸ್ಟರಿಯಲ್ಲಿ ದೊರೆಸಾನಿಯೂ ದೊರೆಯೂ ತಮ್ಮ ಅಭಿಪ್ರಾಯವನ್ನು ಬರೆದರು ಇದ ಈ ಶಾಲೆಗೊಂದು ಭೂಷಣ, ಮಾತ್ರವಲ್ಲದೆ ನಮ್ಮ ಜಿಲ್ಲೆಗೊಂದು ಭೂಷಣವೆಂದು ಪ್ರಕಟಿಸ ವರೆ ತುಂಬಾ ಸಂತೋಷ ಕೋಟೆಕಾರು ಹಾಯರ್ ಎಲಿಮೆಂಟರಿ ಶಾಲೆಯಲ್ಲಿ ಐನೇ ದರ್ಜೆಯು ಅಂಗೀಕಾರವಾಗಿದೆ ಎಂದು ತಿಳಿಸಲು ಬಹಳ ಸಂತೋಷ

ಕಾರ್ಕಳ.—ರಾ। ಶಿವಪ್ಪ ಹೆಗ್ಗಡೆಯವರ ಸಾಹಸದಿಂದ ಇತ್ತಲಾಗೆ ೬ ೩ ಹಸು ನಾಹೇಬರನ್ನು ವಿಯ್ಯಾರಿನಲ್ಲಿ ಹಿಡಿದ ಕಚೇರಿಗೆ ಸಮೀಪಿಸುತ್ತಾ ೩ ಆನೆಗಳ ಸಮೇತ ಮೆರವಣಿಗೆಯಿಂದ ಕೋಳಿಗೆ ಹಾಕಲಾಯಿತು

ತಾ ೧—೧೧ರಲ್ಲಿ ಕಾರ್ಕಳ ತಾಲೂಕಿಗೊಂದು ಕಾರ್ಕಳ ಪೇಟೆಯಲ್ಲಿ ರಾ। ಮುನ್ನಿಭಟ್ರ ಅಧ್ಯಕ್ಷತೆಯಲ್ಲಿ ಕೋ ಒಪರೇಟಿವ ಯೂನಿಯನ್ ಸ್ಥಾಪಿಸಲಾಯಿತು, ಅದಕ್ಕೆ ಚೀಫ್ ಇನ್ಸ್ಪೆಕ್ಟರ್ ರಾ। ಸಿ ಕಣ್ಣನ್ ನಾಯರೂ ರಾ। ಪಿ ಸಂವರ ಭಟ್ಟರೂ ಹಾಜರಿದ್ದರು ಮರು ದಿನ ಸದರಿ ಸೊಸೈಟಿಗಳ ಅಸಿಸ್ಟಂಟ ರಿಜಿಸ್ಟ್ರಾರರ ಕಾರ್ಕಳ, ಹಿರ್ಗಾನ, ನಿಟ್ಟೆ ವಿಯಾರ್ ಈ ಸೊಸೈಟಿಗಳ ಜಮಾ ಖರ್ಚನ್ನು ಚೆಕ್ ಮಾಡಿ ಮಂಗಳೂರಿಗೆ ತೆರಳಿದರು

ಸದರಿ ತಾಲೂಕಿನಲ್ಲಿ ೫ ಪಂಚಾಯತ ಕೋರ್ಟುಗಳ—(ಕಾರ್ಕಳ, ಬೈಲೂರು, ಹೆಬ್ರಿ, ಮೂಡಬಿದ್ರೆ ಮತ್ತು ನಲ್ಲಿಕಾರ) ಸ್ಥಾಪಿಸಲ್ಪಟ್ಟವು ಇದೀಗ ನಮ್ಮವರು ಸ್ವರಾಜ್ಯ ಕೇಳಿದ್ದಕ್ಕೆ ಕೊಟ್ಟಂಥಾ ಪ್ರಥಮ ಹಕ್ಕೆಂದರೆ ತಪ್ಪಾಗದು.

ಮೊಗ್ರಾಲು—ಇಲ್ಲಿಗೆ ಇದೇ ತಾರೀಕು ೨೬—೧೦—೨೦ರಲ್ಲಿ ಸಹಕಾರಿ ಸಂಘದ ಕಾಸರಗೋಡು ಸರ್ಕಲ್ ಸುಪರ್‌ವೈಸರ್ ರಮಾನಾಥನವರು ಚಿತ್ತೈಸಿ ಸುಮಾರು ೪ ಗಂಟೆಗೆ ಇಲ್ಲಿಯು ಬೋರ್ಡ್ ಶಾಲೆಯಲ್ಲಿ ಸದರಿ ಶಾಲೆಯ ಮೆನೇಜರ್ ಎಮ್ ಸಿ ರ [illegible] ಯವರ ಅಧ್ಯಕ್ಷತೆಯಲ್ಲಿ ಸಂಘದ ಒಂದು ಮಹಾ ಸಭೆಯನ್ನು ಜರಗಿಸಿದರು ಹಾಜರಿದ್ದ ೬೦ ಮಂದಿ ಮೆಂಬರರು ಸದರಿ ಸುಪರ್‌ವೈಜರ ಮತ್ತು ಅಧ್ಯಕ್ಷರು ಕೂಡ ಸುಮಾರು ೯ ಘಂಟೆ ವರೆಗೆ ಚರ್ಚೆ ಮಾಡಿ ಮೆಂಬರರೆಲ್ಲರೂ ಕೆಳಗೆ ಬರೆಯುವ ನಿರ್ಣಯವನ್ನು ಒಪ್ಪಿ ಅದನ್ನು ಸಭೆಯಲ್ಲಿ ಪಾಸು ಮಾಡೋಣಾಯಿತು. ಚಾಲ್ತಿ ವರ್ಷದಲ್ಲಿ ಸಂಘವು ಮೆಂಬರರಿಗೆ ಹೊಗೆಸೊಪ್ಪಿನ ಕೃಷಿಗೆ ಮಾತ್ರ ೧೩೧೯ರ ಖರ್ಚಿಗೆ ಮತ್ತು ಗೊಬ್ಬರ ವಿಗೆ ಮೆಂಬರರಿಗೆ ಸಧ್ಯಕ್ಕೆ ಬೇಕಾದ ರೂಪಾಯಿ ೨೦೦೦ವನ್ನು ಬೇಂಕಿನಿಂದ ೧೧ ತಿಂಗಳ ವ್ಯಾಧಿಗೆ ತರಿಸ ವಂತೆಯೂ ಎಲ್ಲಾ ಮೆಂಬರರ ಒಟ್ಟಿಗೆ ಕಾಡಿ ತಮ್ಮ ಹೊಗೆಸೊಪ್ಪನ್ನು ಒಂದೇ ಕಡೆಯಲ್ಲಿ ಇಡುವಾಯಿಟ್ಟು ಒಟ್ಟೆಯೇ ಸಂಘವು ವಿಕ್ರಯಿಸಬೇಕೆಂತಲೂ ಹೊಗೆಸೊಪ್ಪು ಕಡಿಯಲಿಕ್ಕೆ ತರ ಮಾಡುವಾಗ್ಗೆ ಒಂದು ಮಹಾಸಭೆಯು ಕೂಡಿಸಿ ಎಡ್ವಾನ್ಸ ಆಗಿ ಯಾವ ಯಾರಿಗೆ ಎಷ್ಟು ಹಣವನ್ನು ಹ್ಯಾಗೆ ಕೊಡಬೇಕೆಂತ ನಿರ್ಣಯಿಸಬೇಕೆಂತಲೂ ಪಾಸು ಮಾಡಲಾಯಿತು

ತಾರೀಕು ೧೦—೧೦—೨೦ರಲ್ಲು ೫ ಗಂಟೆಗೆ ಬೋರ್ಡು ಶಾಲೆಯಲ್ಲಿ ಇಲ್ಲಿಯ ಇಸ್ಲಾಮಿಯಾ ಕ್ಲಬ್ಬಿನ ೧ನೇ ಮಹಾಸಭೆ ಜರಗಿತ್ತು ಸಭೆಗೆ ಅನೇಕ ಊರುಗಳ ಮಾನ್ಯರೂ, ಕ್ಲಬ್ಬಿನ ಸುಮಾರು ೧೦೦ ಜನ ಮೆಂಬರರೂ ಹಾಜರಿದ್ದರು, ಸೆಕ್ರೆಟರಿಯವರು ಕ್ಲಬ್ಬಿನ ರಿಪೋರ್ಟು ಓದಿ ಸಭಿಕರಿಗೆ ಸಮಾಧಾನವಾಯಿತು ಸದರಿ ಸಭೆಗೆ ಅಧ್ಯಕ್ಷರಾಗಿದ್ದ ಬಹು ಮಾನಪಟ್ಟ ಕೆ ಯನ್ ವ ಹಮ್ಮದ್ ಮೊಯ್ದಾರಯವರೂ, ಮ। ರಾ। ರಾ। ಮಹಮ್ಮದ್ ಬೆರೂಲ್‌ರವರೂ ವಿದ್ಯಾಭ್ಯಾಸದ ಕುರಿತು ಚಲೋ ಭಾಷಣ ಕೊಟ್ಟರು ಮ। ರಾ। ರಾ। ಕೆ ಉಂಞಾಮ್ಮದ ಮೊಯ್ದಾರವರನ್ನು ಜೋಯಿಂಟ್ ಸೆಕ್ರೆಟರಿಯಾಗಿಯೂ ಟಿ ಕೆ. ಜಸ್ ಕುಟ್ಟಿಯವರನ್ನು ಎಡಿಟರರಾಗಿಯೂ, ಎಂ ಸೀ ಮಮ್ಮಿಯವರನ್ನು ವೈಸ್ ಪ್ರೆಸಿಡೆಂಟರಾಗಿಯೂ ನೇಮಿಸಿ ೯ ಗಂಟೆಗೆ ಸಭೆಯು ಮುಗಿಯಿತು

ಮಾರನೇ ದಿವಸ ಸದರಿ ಬೋರ್ಡು ಶಾಲೆಯಲ್ಲಿ ೫ ಗಂಟೆಗೆ ಇಲ್ಲಿಯ ಸ್ವಸಹಕಾರಿ ಸಂಘದ ಜನರಲ್ ಮೀಟಿಂಗ್ ಸದರಿ ಸಂಘದ ಪ್ರೆಸಿಡೆಂಟ್ ಎಂ ಸೀ ಮಮ್ಮಿಯರ ಅಧ್ಯಕ್ಷತೆಯಲ್ಲಿ ಜರಗಿತ್ತು. ಸಂಘದ ಸುಮಾರು ೫೦ ಜನ ಮೆಂಬರರು ಹಾಜರಿದ್ದರು ಸಂಘದ ಈ ವರೇಗಿನ ಎಲ್ಲಾ ರಿಪೋರ್ಟುಗಳನ್ನು ಓದಲಾಯಿತು ಅಧ್ಯಕ್ಷರು ತನ್ನ ಕೈಯಿಂದಲೇ ಕೆಲವು ಹಣ ಸಂಘಕ್ಕೋಸ್ಕರ ಖರ್ಚು ಮಾಡಿದ್ದರೆಂತ ಸಭೆಯಲ್ಲಿ ಕಂಡುಬಂದದ್ದರಿಂದ ಮೆಂಬರರೆಲ್ಲರೂ ಸಂತೋಷಪಟ್ಟರು, ಸಂಘವು ಒಳ್ಳೆಯ ರೀತಿಯಲ್ಲಿ ನಡೆಯುತ್ತದೆಂತಲೂ ಈ ವರೇಗೆ ಬಂದದರ [illegible] ಇಲ್ಲವೆಂತಲೂ ಕಂಡು ಬಂದದ್ದರಿಂದಲೂ ಸಭಿಕರು

[illegible] ಅಧ್ಯಕ್ಷರನ್ನು [illegible] ಕೊಂಡಾಡಿದರು. [illegible] ಯಿಂದ [illegible] ಸೆಕ್ರೆಟ್ಟರ್ ದ್ಯಾರಕಿಸ ಆಡಳಿತ ಸಭೆಗೆ ಮ। [illegible] ಮಮ್ಮಿಯವರನ್ನು ಮೆಂಬರರಾಗಿ ಸೇರಿಸುವರೆ ಸಭೆಯಲ್ಲಿ [illegible] ೯ ಗಂಟೆಗೆ ಸಭೆಯು ವಿಸರ್ಜಿಸಲ್ಪಡಲಾಯಿತು.

ಸುರತಕಲ್:—ಇಲ್ಲಿರುವ ಸ್ವಾಮಿಗಳ ಚಿತ್ರಾಪುರ [illegible] ಮಠದ ಶ್ರೀ ಪಾದಂಗಳವರು ಇದೇ ತಾ ೨೪ನೇ ಆದಿತ್ಯವಾರ 'ಹಿಂದು [illegible] ದಾಯಿನಿ' ಶಾಲೆಗೆ ಶಾಲೆಯವರ ಆಮಂತ್ರಣದಂತೆ ದಯಮಾಡಿದರು, [illegible] ದಲ್ಲಿ ಶಾಲಾ ಅಧ್ಯಕ್ಷರು ಧನ್ಯೋಕ್ತಿಗಳನ್ನು ಹೇಳಿ ಶ್ರೀಗಳವರ ಕೊರಳಿಗೆ [illegible] ಕೆಯನ್ನು ಸಮರ್ಪಿಸಿದರು. ಬಾಲಕರು ಶ್ರೀಗಳವರ ಸ್ತೋತ್ರರೂಪವಾದ [illegible] ಹಾಡಿದರು. ವಿದ್ಯಾರ್ಥಿಗಳು ಅಭಿನಯಿಸಿದ 'ಕೌರವರ ಕೃತ್ರಿಮೋಪಾಯ' ನಾಟಕವನ್ನು ಪ್ರದರ್ಶನ/ಸಾಹಿತ್ಯಗಳನ್ನೊದಗಿಸಿದ ಮಕ್ಕಳ ಬುದ್ಧಿ [illegible] ಕಂಡು ಸಂತುಷ್ಟರಾದ ಸ್ವಾಮಿಗಳವರು ಆದರಪೂರ್ವಕ ಆಶೀರ್ವದಿಸಿ [illegible] ಧ್ಯಾಯರುಗಳ ಕಾರ್ಯಚತುರತೆಯನ್ನು ಕೊಂಡಾಡಿ ತೆರಳಿರುವರು.

ರಾಮಕುಂಜ:—ರಾಮಕುಂಜ ಸಂಸ್ಕೃತ-ಪಾಠಶಾಲಾ ಪೂಜೋತ್ಸವವು ತತ್ಸಮ್ಬಂಧವಾದ ಸಭೆಯು ಕಳೆದ ವಿಜಯಾದಶಮಿ ವಾರ ನೆರದು ಅಧ್ಯಕ್ಷಸ್ಥಾನವನ್ನು ಮ। ರಾ। ರಾ। ಕೆ. ಶ್ರೀನಿವಾಸಯ್ಯ ಅಲಂಕರಿಸಿದರು ವಿದ್ಯಾರ್ಥಿಗಳ ಪ್ರಾರ್ಥನೆ, ಶಾಲಾಮುಖ್ಯೋಪಾಧ್ಯಾಯ ಬ್ರಹ್ಮಶ್ರೀ ನಗರಿ ಶ್ರೀನಿವಾಸ ಶಾಸ್ತ್ರಿಗಳ ರಿಪೋರ್ಟು, ತದನಂತರ ರಾಮ ಬೋರ್ಡು ಶಾಲೆಯ ಹೆಡ್ ಮಾಸ್ತರ್ ಎಮ್ ಎಸ್ ಮಲ್ಲಿಕಾರ್ಜುನಯ್ಯ 'ಸ್ತ್ರೀವಿದ್ಯಾಭ್ಯಾಸ'ವನ್ನು ಕುರಿತ ಉಪನ್ಯಾಸ, ಆ ಮೇಲೆ ಶಾರದಾ ಪೂಜೆ [illegible] ದನ್ನು ಎತ್ತಿ ಅಧ್ಯಕ್ಷರ ಚಲೋ ಭಾಷಣಗಳು ನಡೆದು ತದನಂತರ ಶ್ರೀ ಸ [illegible] ಪೂಜೆಯು ನಡೆಯಿತು

ಬಂಟ್ವಾಳ.—ಇಲ್ಲಿ ಈ ವರ್ಷ ಹಿಂದುಗಳು ಮೋಹರಮ್ [illegible] ಬಹಿಷ್ಕಾರ ಕೊಟ್ಟು ದಸರಾ ಹಬ್ಬವನ್ನು ಸ್ವೀಕಾರ ಮಾಡಿ ೮ ದಿನ ರಾತ್ರಿ [illegible] ಬೇಕಾದ ವೇಷ ಪಲ್ಲಟ ಇತ್ಯಾದಿ ತಮಾಷೆಗಳು ನಡೆದು ೯ನೇ ರಾತ್ರಿ [illegible] ಳಗೆ ಕಡದಾಟವಾಗಿ ಎರಡು ಪಂಗಡದವರಿಗೂ ಹೊಡೆದಾಟವಾಗಲು ಗೌಡಸಾ [illegible] ಯೌವನರಲ್ಲಿ ಅನೇಕರು ಕತ ಪ್ರಯತ್ನ ಪಟ್ಟು ಉಭಯ ಪಂಗಡದವ [illegible] ತಡೆದ ಲೋಕಲ್ಬೆಗೂ ಅಸ್ಪತ್ರಿಗೂ ದರ್ಶನವಾಗದಂತೆ ಮಾಡಿದ್ದು ತುಂಬಾ [illegible] ಕಾರ ಎಲ್ಲಾ ಊರುಗಳಲ್ಲಿ ಹಿಂದೂ ಮುಸಲ್ಮಾನರು ಜೈ ಎಂದು ಕೇಳುತ್ತಿರ [illegible] ನಮ್ಮಲ್ಲಿ ಹಿಂದು ಮುಸಲ್ಮಾನರ ಜೆಪ್ಪ ಎಂದು ಕೇಳುತ್ತದೆ ಇದು ಶೋಚನೀ [illegible]

ಇದೇ ತಿಂಗಳ ತಾ ೨೩ಕ್ಕೆ ಮಂಗಳೂರಿಂದ ಸುಮಾರು ೬೦ [illegible] ರಿಜರ್ವ್ ಪೊಲೀಸಿನವರು ರೋಡು ಮಾರ್ಚಿಂಗು ಮಾಡಿ ಬಂಟವಾಳಕ್ಕೆ [illegible] ನೊಳಗೆ ಬಂದರು ಇವನ್ನು ಸಂದರ್ಶಿಸುವ ಆಗ್ಯೆ ಜಿಲ್ಲಾ ಸುಪರಿಂಟೆಂಡೆಂಟರು [illegible] ದ ದೊರೆಗಳೂ ಹೋಗಿ ತ ತಟ್ಟರಿಯೊಡನೆ ಸಾಲ ಸಾಲಾಗಿ ಮಾರ್ಚ್ ಮಾಡುತ್ತಾ ಬರವಾಗ ಈ ತನಕ ಸೈನ್ಯದ ನೋಟ ನೋಡದವರಿಗೆ ಬಹು [illegible] ನಂದಕರವಾದ ನೋಟ [illegible] ದೆ ದಾರಿಯಲ್ಲಿ ನೋಡುವವರಿಗೆ ಸಿಜ [illegible] ತಿಳಿಯ ವರೆಗೆ [illegible] ಕುತೂಹಲವು ತಾರುಮಾರಾಗುತ್ತಿತ್ತು ಇದು ಮಾರ್ಚಿಂಗ್ ಅಭ್ಯಾಸಕ್ಕಾಗಿ ಮಾಡಿದ್ದಾಗಿರುತ್ತದೆ

ಅಳದಂಗಡಿ.—ಕಳೆದ ತಾರೀಕು ೧೯ನೇ ಮಂಗಳವಾರ ಹಗಲು ೧೧ ಗಂಟೆಗೆ ಬಳಂಜ ಎಲಿಮೆಂಟರಿ ಶಾಲೆಯಲ್ಲಿ ಶ್ರೀ ಶಾರದಾ ಪೂಜೆಯೂ ಪ [illegible] ವರ್ಧಂತಿ ಉತ್ಸವವೂ ಬಹು ವಿಜೃಂಭಣೆಯಿಂದ ಜರಗಿದವು, ಅನೇಕ [illegible] ಗೃಹಸ್ಥರಿದ್ದ ಈ ಸಭಾರಂಭದಲ್ಲಿ, ಶಾಲಾ ಹುಡುಗರು ಸಣ್ಣದೊಂದು ನಾಟಕವನ್ನು ಸಂತೋಷಗೊಳಿಸಿದೊಡನೆ ಎಲ್ಲಾ ಬಾಲಕರೂ ಸೇರಿ, ದೇವತಾಸ್ತುತಿಯು [illegible] ಗಳು ಹಾರ್ಮೋನಿಯಂ ಬಾರಿಸುವುದು ಇವೆಲ್ಲ ನಡೆವವು ತದನಂತರ ಜನ ಉಪಾಧ್ಯಾಯರೂ, ಶಾಲಾಭಿವೃದ್ಧಿಯು ಮತ್ತು ವಿದ್ಯಾಭ್ಯಾಸದ ಅವಶ್ಯಕತೆ ಕುರಿತು ಯೋಗ್ಯ ಉಪನ್ಯಾಸಗಳನ್ನು ಓದಿದರು ಆವಾಗ ಶಾಲಾಸ್ಥಾಪಕರಾ ಬಳಂಜ ಫಿರಾ [illegible] ಸ್ವಾರ್ಥ್ಯಪ್ಪಯ್ಯನವರು ಶಾಲೆಯು ೩ ೧೯೧೯ನೇ ಆಗೋಸ್ತು ೨೯ಗಾಯಿತು ಒಂದು ವರುಷದ ಅವಧಿಯನ್ನು, ಅಂತರ ಶಾಲೆಯ ಬಹು ಬೇಗನೆ ಹುಡುಗರ ಅಭಿವೃದ್ಧಿ ಹೊಂದಿ ಶಾಲಾ ಇಲಾಖೆಯವರಿಂದ ರೆಕೊಗ್ನೇಶನ್ ಆಗಿ, ಶೀಘ್ರದಲ್ಲೇ ಬೋರ್ಡಿನವರು ಕೂಡಾ ಸ್ವೀಕರಿಸುವ ಹುಕುಂ ಬಂದಿರುವುದನ್ನು ಸಹಾ ಸಭಿಕರಿಗೆ ಓದಿ ವಿವರಿಸಿ ಆನಂದ ಪಡಿಸಿದರು [illegible] ತದ ಪರಿ ವಾದ್ಯಘೋಷದಿಂದ ಶಾರದಾ ಪೂಜೆ, ನಡೆದ ನೆರೆದವರಿಗೆ ತಾಂಬೂಲ [illegible] ಗಳೂ, ಹುಡುಗರಿಗೆ ಸಕ್ಕರೆ ಪರಳೂ ಹಂಚಿ ಸಭೆಯು ಮುಕ್ತಾಯವಾಯಿತು

ಮುಂಡಕೋಲು.—ಇದೇ ಕಳೆದ ತಾ ೨೩—೧೦—೨೦ರಲ್ಲಿ ಸಾಯಂಕಾಲ ೪ ಘಂಟೆಗೆ ಜಾಲ್ಸೂರು, ಅಜ್ಜಾವರ, ಅಡೂರು, ಸಂಪಾಜೆ, [illegible] ತೊಡಿಕಾನ, ಆರಿಯಡ್ಕ ಮತ್ತು ಅರಂತೋಡು ವಗೈರೆ ಗ್ರಾಮಗಳ ಮಹಾ ಜನ [illegible] ದ [illegible] ಪ್ರದರ್ಶಕ ಸಭೆಯೊಂದು ನೆರದಿತ್ತು ಕೂಡಿದ ಸುಮಾರು ಮಂದಿ ಎದ್ದು ನಿಂತು ಐವನೇ ಜೋರ್ಜ ಚಕ್ರವರ್ತಿಗಳಿಗೆ ಜಯವಾಗಲೆಂತಲೂ ಶ್ರೀ ದೇವರನ ಪ್ರಾರ್ಥಿಸಿ ಮತ್ತು ಲೋಕ ಮಾನ್ಯ ದಿವಂಗತರಾದ ತಿಲಕರವರ ಆತ್ಮಕ್ಕೆ ಶ್ರೀ ದೇವರು ಶಾಂತಿಯನ್ನು ಕೊಡಲಿ ಎಂದು ದೇವರನ್ನು ಪ್ರಾರ್ಥಿಸಿ ಸಭೆಯು ಪ್ರಾರಂಭವಾಯಿತು, ಆಗ ರಾ। ಕೇಲಾಜೆ ರಾಮಚಂದ್ರಯ್ಯನವರ ಅಧ್ಯಕ್ಷ ಸ್ಥಾನವನ್ನು ಅಲಂಕರಿಸಿದರು ಅಧ್ಯಕ್ಷರ ಭಾಷಣಗಳು, ಮಹನೀಯರ ಉಪನ್ಯಾಸಗಳು ಚಲೋ ರೀತಿಯಲ್ಲಿ ನಡೆದು ಈ ದಿವಂಗತರಾದ ಲೋಕಮಾನ್ಯ ತಿಲಕರವರ ಮೆಮೋರಿಯಲ್ ಫಂಡಿಗೆ ಒಟ್ಟಿಗೆ ಈ ವರೆಗೆ ೧೩೩೪ ರೂಪಾಯಿ ವಾಗ್ದಾನಗಳು ಈ ಸ್ಥಳದಲ್ಲಿ [illegible] ವಸೂಲಿ ಕೂಡಾ ಆಗಿಯದೆ ಕೂಡಿದ ಸಭಿಕರಿಗೆ ಕಾಫಿ ಫಲಹಾರಗಳಿಂದ ಸತ್ಕರಿಸಿ ಲೋಕಮಾನ್ಯ ತಿಲಕರವರ ಆತ್ಮಕ್ಕೆ ಶ್ರೀ ದೇವರು ಶಾಂತಿಯನ್ನು ಕೊಡಲಿ ಎಂದು ಶ್ರೀ ದೇವರನ್ನು ಪ್ರಾರ್ಥಿಸಿ ಸಭೆಯು ಮುಕ್ತಾಯವಾಯಿತು

ಹಳ್ಳಿ ಗ್ರಾಮಗಳ ಮಾಪ್ಪುಲ್‌ದಾರಿಗಳಲ್ಲಿ ಕಳೆದ ಮಳೆಗಾಲದಲ್ಲಿ ದಾರಿಗೆ ಅಡ್ಡವಾಗಿ ಬಿದ್ದ ಬಿದಿರು, ಮರ, ವಗೈರೆ ಬಳ್ಳಿಗಳನ್ನು ತೆಗಿಸುವರೆ ಈ ದುರುಸ್ತಿ ಪಡಿಸುವರೆ ಈ ರಿಜರ್ವ ಕಾಡುಗಳಲ್ಲಿ ಪೂರೆಸ್ಟ ಇಲಾಖೆಗೂ ರೆವೆನ್ಯೂ ಸ್ಥಳಗಳ ಮಟ್ಟಿಗೆ ಗ್ರಾಮದ ಮುಖ್ಯಸ್ಥರಿಗೂ ಹುಕುಂ ಆಗಿ ದಾರಿಗಳನ್ನು ಸಂಪಡಿಸುತಿದ್ದರೆ ಹಳ್ಳಿ ಪ್ರಯಾಣಿಕರಿಗೆ ಬಹಳ ಉಪಕಾರವಾಗುತಿತ್ತು

ರಿಜರ್ವ ಕಾಡುಗಳಿಂದ ಹಸಿ ಹುಲ್ಲು, ಜಾನುವಾರು ಮೇವು ಬಗ್ಗೆ ತೆಗಿಯುವಾಗ್ಗೆ ಆತಂಕವಿಲ್ಲದ ಹಾಗೆ ಹುಕುಂ ಆಗುತಿದ್ದರೆ ಬಡ ಜನರಿಗೆ ಬಹಳ ಉಪಕಾರವಾಗುತಿತ್ತು

ಸುಳ್ಯ:—ದಿವಂಗತರಾದ ಲೋಕಮಾನ್ಯ ತಿಲಕರವರ ಹೆಸರಿನಿಂದ ಕಟ್ಟಿಸುವ ಛತ್ರದ ಸ್ಥಳ ವಗೈರೆ ನೋಡಲಿಕ್ಕೂ ಕೆಲಸ ಶುರು ಮಾಡಲಿಕ್ಕೂ ತಾ ೧೯-೨೦ಕ್ಕೆ ಮ। ರಾ। ಮರಿಗಲ್ಲಾಡಿ ಕೃಷ್ಣಯ್ಯನವರೂ ಮತ್ತು ಮ। ರಾ। ಕೇಲಾಜೆ ರಾಮಚಂದ್ರಯ್ಯನವರೂ ಬಂದಿರ ತ್ತಾರೆ

[illegible]

ಚಂದಾದಾರರಿಗೆ ಸೂಚನೆ.

ಈಗ ಟಪ್ಪಾಲು ಇಲಾಖೆಯವರು ವಿ. ಪಿ. ಯಾಗಿ ಕಳುಹಿಸುವ ವಸ್ತುಗಳನ್ನು [illegible] ಮಾಡಿಯೇ ಕಳುಹಿಸಬೇಕೆಂಬುವ ಕ್ರಮವನ್ನು [illegible] ತಂದಿಯುತ್ತಾರೆ. ಇದರಿಂದ ಪತ್ರವನ್ನು ವಿ.ಪಿ. [illegible] ಪಡೆದು ಚಂದಾಹಣವನ್ನು ತಲುಪಿಸುವವರು ರೂ. ೨-೯-೦ನ್ನು [illegible]ಗುತ್ತದೆ. ಆದರೆ ಚಂದಾಹಣವನ್ನು ಮನಿಯಾರ್ಡರ [illegible] ಕಳುಹಿಸುವವರಿಗೆ (ಒಂದು ವರುಷದ ಚಂದಾ ರೂ ೨-೫-೦ [illegible] ಮನಿಯಾರ್ಡರ ಕಮ್ಮಿಶನ್ ೧ ಆಣೆ ಕೂಡಿ) ಬರೇ ರೂ. [illegible]೦ ಮಾತ್ರ ಬೀಳುವುದು. ಆದುಕಾರಣ ಚಂದಾಹಣವನ್ನು [ಮನಿ]ಯಾರ್ಡರ ಮೂಲಕವಾಗಿಯೇ ಕಳುಹಿಸುವುದು ಉತ್ತಮ.

ಮೆನೇಜರ್.

ಸ್ವದೇಶಾಭಿಮಾನಿ.

ಶಕ ೧೮೪೭ ಆ. ಬ॥ ೧೦ ಶುಕ್ರವಾರ.

ಉಪಾಧ್ಯಾಯರ ಸಂಘಗಳು ಯಾಕೆ?

ಹಳ್ಳಿ ಉಪಾಧ್ಯಾಯರು ಅಲ್ಲಲ್ಲಿ ಸಭೆ ಸೇರಿ ತಮ್ಮ ಎಸೋಸಿಯೇಷನ್ನುಗಳನ್ನು ಸ್ಥಾಪಿಸಿ, ಇತರ ನವುಕರರ ಎಸೋಸಿಯೇಷನುಗಳಂತೆ ತಮ್ಮ ಸ್ಥಿತಿಗತಿಗಳನ್ನು ಚರ್ಚಿಸಿ ಠರಾವುಗಳನ್ನು ಮಾಡಿ ಅವುಗಳನ್ನು ವಿದ್ಯಾ ಇಲಾಖೆಗೂ ಸಂಬಂಧಪಟ್ಟ ಬೋರ್ಡುಗಳಿಗೂ ಕಳುಹಿಸುತ್ತಲೇ ಇದ್ದಾರೆ. ವಿದ್ಯಾಪ್ರಚಾರವು ಸಾಕಷ್ಟು ಇಲ್ಲ, ಇನ್ನೂ ಸಾಲೆಗಳಿಗೆ ದಾಖಲಾಗತಕ್ಕ ಮಕ್ಕಳಲ್ಲಿ ಬರೆ ೪ನೆ ಅಂಶವು ಮಾತ್ರವೆ ಶಿಕ್ಷಣದ ಪ್ರಥಮ ಮೆಟ್ಟಲನ್ನು ಹತ್ತುತ್ತಿದೆ ಎಂದು ಮುಂತಾಗಿ ಪ್ರಜಾಮುಖಂಡರು ತಮ್ಮ ಭಾಷಣಗಳಲ್ಲಿಯೂ ಲೇಖನಗಳಲ್ಲಿಯೂ ಸರಕಾರದವರು ಕೌನ್ಸಿಲುಗಳಲ್ಲಿಯೂ ಹೇಳತೊಡಗಿ ಕೆಲವು ವರ್ಷಗಳಾಗುತ್ತ ಬಂದವು. ಆದರೆ ಸಾಲೆಗಳ ಸಂಖ್ಯೆಯನ್ನು ಹೆಚ್ಚಿಸುತ್ತ ಬರುವ ಹಾಗೆ ಉಪಾಧ್ಯಾಯರ ಸ್ಥಿತಿಯನ್ನು ಉದ್ಧರಿಸಿ ಅವರಲ್ಲಿ [illegible] ಜ್ಞಾನವನ್ನು ಹೆಚ್ಚಿಸುವುದಕ್ಕೆ ಮಾಡಿದ ಪ್ರಯತ್ನಗಳು ಮಾತ್ರ ಅದೇ ದಾನಾವಸ್ಥೆಯಲ್ಲಿ ಬೆಳೆಯಲಿಲ್ಲವೆಂದು ಧಾರಾಳವಾಗಿ ಹೇಳಬಹುದು. ಮಾಹೆಯಾನಾ ರೂ. ೮ ತಲುಬು ಸಿಗುವವನಿಗೆ ಸರಕಾರ ಇಂತಿಷ್ಟು ದರ ಹೆಚ್ಚಿಸಿದೆ ಎಂದರೆ ಅದು ಏನೇನೂ ಸಮಾಧಾನಕರವಲ್ಲ. ಸಲರಿ ಕಮಿಟಿಯವರ ಅಂಬೋಣದಲ್ಲಿ 'ಹಳ್ಳಿ ಉಪಾಧ್ಯಾಯರು ಹಳ್ಳಿಯ ಧನಿಕರ ಅಶನಾರ್ಥಿಗಳಾಗಬಾರದು' ಎಂದು ಹೇಳುತ್ತಿದ್ದುದು ಪ್ರಸ್ತುತ ಸಂದರ್ಭದಲ್ಲಿ ಬರೆ ಒಣ ಉಪಚಾರವಾಗುತ್ತ ಬಂದಿದೆ. ಈ ವರ್ಷದ ಬಗ್ಗೆ ಮಾಹೆಯಾನಾ ೪ ರೂಪಾಯಿಯಂತೆ ಎಲೋವನ್ಸ್ ಹೆಚ್ಚಿಸಿದರೆಂದರೂ ಅದು ಉಪಾಧ್ಯಾಯರ ನಿರ್ಧನತೆಯ ಸಂಕಷ್ಟವನ್ನು ಇನ್ನೂ ಪರಿಹರಿಸಲಿಲ್ಲ. ಉಪಾಧ್ಯಾಯನು ಹಳ್ಳಿಯಲ್ಲಿ ಗೌರವಕ್ಕೆ ಯೋಗ್ಯನಾಗಬೇಕೆಂದು ನಿಜವಾದ ಭಾವನೆ ಇದ್ದರೆ ಅವನ ಜೀವನಕಾಲವನ್ನು ಜ್ಞಾನಸಂಗ್ರಹದಲ್ಲಿಯೂ ಶಿಕ್ಷಣ ಪ್ರಚಾ[ರದಲ್ಲಿಯೂ] [illegible] ಎಂಬುದು. ಹಿಂದೆ [illegible] ದಿದ್ದು [illegible] ಕ್ರೆಕ್ಟರ್ ಮುಂತಾದ [illegible] ಸರ್ವಿಸಿನ ಉದ್ಯೋಗಸ್ಥರ ಸಂಬಳದ ದರಗಳನ್ನು ಹೆಚ್ಚಿಸಿದ ದಾಮಾಶಯದಲ್ಲಿಯೇ ಕಾಲೇಜುಗಳ ಪ್ರೊಫೆಸರರ ಸಂಬಳದ ದರಗಳನ್ನು ಇಡಬಾರದೇ ಎಂದು ಕೇಳಿದ್ದಕ್ಕೆ ಈ ಎರಡು ಬಗೆಯ ಉದ್ಯೋಗಸ್ಥರ ಪೈಕಿ ಪ್ರೊಫೆಸರರ ಜವಾಬ್ದಾರಿಗಳು ಕಡಿಮೆ ಎಂದು ಉತ್ತರ ಬಂತು. ಅಂದರೆ ದೇಶದಲ್ಲಿ ಶಾಂತಿಯನ್ನು ಬಲಾತ್ಕಾರದಿಂದ ಇರಗೊಡಿಸುವ [illegible] ಜವಾಬ್ದಾರಿಯು ಹೆಚ್ಚು. ದೇಶದಲ್ಲಿ ವಿದ್ಯಾಪ್ರಸರಣೆಯ ಮೂಲಕ ಆಗುವ ಉತ್ಕರ್ಷದಿಂದ ಶಾಂತಿಯು ಸ್ಥಿರವಾಗಿಯೂ ಬಲಾತ್ಕಾರವಿಲ್ಲದೆಯೂ ನೆಲೆಗೊಳ್ಳಬೇಕಾದ ಜವಾಬ್ದಾರಿಯು ಕಡಿಮೆ ಎಂದು ಸರಕಾರದವರು ಒಪ್ಪಿಕೊಂಡಂತಾಯಿತು. ಸರಕಾರದ ಸೂತ್ರಗಳನ್ನು ಹಿಡಿದವರು ವಿದ್ಯಾಮಹತ್ವವನ್ನು ಈ ರೀತಿ ಅಲ್ಲಗಳೆದ ಮೇಲೆ ಬಡ ಉಪಾಧ್ಯಾಯರ ಬಗ್ಗೆ ಸಲಹೆಗಳನ್ನು ಕೇಳುವರಾರು? ಇಷ್ಟೇ ಅಲ್ಲ.

ಉಪಾಧ್ಯಾಯರ ಸಂಬಳದ ದರಗಳನ್ನು ಹೆಚ್ಚಿಸಬೇಕು ಎಂಬ ಪ್ರಶ್ನೆಯು ಎದುರಿಗೆ ಬಂದಾಗ ದೇಶೀಯ ಮುಖಂಡರಿಗೂ ಕೂಡಾ 'ಉಪಾಧ್ಯಾಯ ಎಂಬ ಮಾತೆತ್ತಿದೊಡನೆ ಅವರ ಮುಂದೆ ರೂಪುಗೊಳ್ಳುವ ವ್ಯಕ್ತಿಯು ತುಚ್ಛಸ್ವಭಾವದ್ದೆ ಇದ್ದಿರಬೇಕು. ಇಂಥ ವ್ಯಕ್ತಿಗೆ ಇಷ್ಟು ಹೆಚ್ಚು ಸಂಬಳ ಯಾಕೆ' ಎಂದು ನಿರ್ಧಾರ ಮಾಡಿ ಹಳ್ಳಿಯ ಉಪಾಧ್ಯಾಯರಿಗೆ ಸಂಬಳ ಕೊಡುವುದಕ್ಕೆ ದೇಶೀಯ ಮುಖಂಡರೂ ಕೂಡಾ ಮನಸ್ಸು ಮಾಡುವುದಿಲ್ಲ. ಇದೇ ವಿಷಾದಾಸ್ಪದವಾಗಿದೆ.

ನಿಜವಾದ ಸುಪರ್‌ಎಜನ್ ಬಗ್ಗೆ ಇಸಂ ಹೆಚ್ಚಿಸಿ, ಕಾರ್ಯಭಾರವನ್ನು ಹೊತ್ತವರಿಗೆ ಉಪವಾಸ ಹಾಕುವುದು ಸರಕಾರದ ಎಲ್ಲಾ ಇಲಾಖೆಗಳಲ್ಲಿಯೂ ರೂಢಿಯಾಗಿರುವುದರಿಂದ ಇದರ ಬಾಧೆಯು ಉಪಾಧ್ಯಾಯರಿಗಾದರೂ ತಪ್ಪದೇ ಇರುವುದು ಹೇಗೆ? ಇದಲ್ಲದೆ ಇತರ ಇಲಾಖೆಗಳ ಹಾಗೆಯೇ 'ಗ್ರೇಡೆಡ್ ಸಲರಿ' ಅಂದರೆ ಸಂಬಳದ ದರಗಳನ್ನು ಸೋಪಾನ ಕ್ರಮದಿಂದ ಕೆಳ ನವುಕರರಲ್ಲಿ ಸರಕಾರದವರು ಇಟ್ಟಿರುವುದರಿಂದ ಮೇಲಿನ ಮೆಟ್ಟು ಖಾಲಿಯಾಗದೆ ಕೆಳ ಮೆಟ್ಟಲಿನವರು ಮೇಲೇರಲು ಸಾಧ್ಯವಿಲ್ಲ. ಈ ಕ್ರಮವನ್ನು ತೆಗೆದುಹಾಕಬೇಕೆಂದು ಈಗೀಗ ಎಲ್ಲಾ ಇಲಾಖೆಗಳ ಕೆಳನವುಕರರೂ ಮೊರೆ ಇಡುವಂತೆ ಉಪಾಧ್ಯಾಯರುಗಳೂ ಕೇಳ ತೊಡಗಿದ್ದಾರೆ. ಇದರಲ್ಲಿ ನೂತನವೇನೂ ಇಲ್ಲ.

ಸಿವಿಲ್‌ಸರ್ವಿಸ್ ಮುಂತಾದ ಸರ್ವಿಸುಗಳಲ್ಲಿ ಕ್ಲುಪ್ತಕಾಲಕ್ಕೆ ಸಂಬಳದ ಮಿತಿಯು ಏರುವ ಭರವಸೆ ಇದ್ದುದರಿಂದ ಈ ಸರ್ವಿಸಿನವರು ನಿಶ್ಚಿಂತರಾಗಿ ತಮ್ಮ ಕಾರ್ಯಕ್ರಮವನ್ನು ಸಾಗಿಸಿಕೊಂಡು ಹೋಗುತ್ತಿದ್ದಾರೆ. ಈ ವಿಧದ ಧೀರತನವೂ ಕಾರ್ಯಲಾಲಸೆಯೂ ಕೆಳನವುಕರರಲ್ಲಿ ಇಲ್ಲದಿರುವುದಕ್ಕೆ ಅವರ ಬಡ್ತಿಯು ಮೇಲ್‌ಆಫಿಸರರ ಮುಖಮುದ್ರೆಯ ಮೇಲೆ, ಲೇಖನಿಯ ಮೇಲೆ ತೀರಾ ಹೊಂದಿರುವುದೇ ಕಾರಣವಾಗಿವೆ. ಈ ಬಡ ನವುಕರರಲ್ಲಂತೂ ೨ ರೂಪಾಯಿ ಬಡ್ತಿ ಸಿಗಬೇಕಾದರೆ ೧೦ಯಾ ೧೫ ಮೈಲು ದೂರವಿರುವ ಇನ್ನೊಂದು ಹಳ್ಳಿಗೆ ಹೋಗಬೇಕು, ಇಲ್ಲವಾದರೆ ಬಡ್ತಿ ಇಲ್ಲದೆ ಕೊಳೆಯಬೇಕು ಎಂಬ ನಿಯಮವು ಉಪಾಧ್ಯಾಯರ ಉತ್ಸಾಹದ ಮೇಲೆ ತಣ್ಣೀರು ಎರೆದು ಬಿಡುತ್ತದೆ. ಉಪಾಧ್ಯಾಯರ ನೇಮಕಗಳಲ್ಲಿಯೂ ಜವಾಬ್ದಾರಿಯು ಇನ್ನೂ ಅವ್ಯಕ್ತ ಮತ್ತು ಅವ್ಯವಸ್ಥಿತ ರೂಪದಲ್ಲಿದೆ ಎಂಬುದಕ್ಕೆ ಒಂದು ಬಡ್ತಿಯು ಇಸಂ ಖಾಲಿ ಬಿದ್ದೊಡನೆ ಬೋರ್ಡ ಆಫೀಸು ಮತ್ತು ಇನ್ಸ್‌ಪೆಕ್ಟಿಂಗ್ ಆಫೀಸರುಗಳ ಸುತ್ತಮುತ್ತಲೂ ತಿರುಗುವ ಉಪಾಧ್ಯಾಯರ ಸಂಖ್ಯೆಯೇ ಸಾಕ್ಷ್ಯವಾಗಿದೆ. ಸಂಬಳದ ದರಗಳಲ್ಲಿ ಅವ್ಯವಸ್ಥೆ, ನೇಮಕಗಳಲ್ಲಿ ಅವ್ಯವಸ್ಥೆ, ಉಪಾಧ್ಯಾಯರ ಕಾರ್ಯಕ್ರಮಗಳಲ್ಲಿ ಅವ್ಯವಸ್ಥೆ, ಇವರ ಮೇಲಣ ಮೇಲ್ವಿಚಾರದ ಅವ್ಯವಸ್ಥೆ ಎನ್ನುವಾಗ ವಿದ್ಯಾಪ್ರಚಾರದ ಇಲಾಖೆ ಎನ್ನುವ ಬದಲಾಗಿ ಅವ್ಯವಸ್ಥೆಯ ಇಲಾಖೆಯೆಂದರೆ ತಪ್ಪಾಗಲಾರದು. ಈ ಅವ್ಯವಸ್ಥೆಯು ಮಾಯವಾಗಬೇಕಾದರೆ ಬಾಹ್ಯ ಕರ್ತೃಗಳಿಗಿಂತಲೂ ಉಪಾಧ್ಯಾಯರ ಜಾಗೃತಿಯೇ ತುಂಬಾ ಸಹಕಾರಿಯಾದೀತು ಎಂದು ನಾವು ತಿಳಿಯುತ್ತೇವೆ. ತಮ್ಮ ಜ್ಞಾನವನ್ನು ಕ್ರಮಪಡಿಸಿ ವ್ಯವಸ್ಥೆಗೊಳಿಸುವುದು, ಮೀಟಿಂಗುಗಳು ಪರಿಹಾಸ್ಯಾಸ್ಪದವಾಗದೆ ಉಪಯೋಗಕರವಾದ ಕೆಲಸವು ಅವುಗಳಲ್ಲಿ ಜರುಗುವಂತೆ ಮಾಡುವುದು, ಅದರೊಂದಿಗೆ ವಸ್ತುಪ್ರದರ್ಶನ, ಉಪನ್ಯಾಸಗಳು, ಕೊನ್ಫರೆನ್ಸುಗಳು ಇವುಗಳ ಮೂಲಕ ಪ್ರಾಥಮಿಕ ಶಿಕ್ಷಣದ ಕಡೆಗೆ ಜನಸಾಮಾನ್ಯರ ಮನಸ್ಸನ್ನು ಆಕರ್ಷಿಸುವುದು ಇದರಿಂದ ಉದ್ಭವಿಸುವ ಜಾಗೃತಿಯು ಹಿತಾವಹವೇ ಆದೀತು ಎಂಬುದರಲ್ಲಿ ಸಂದೇಹವಿಲ್ಲ. ಈ ಬಗೆಯ ಸಂಘಗಳು ಉಪಾಧ್ಯಾಯರಲ್ಲಿ ಅನೇಕರು ಕಿರುದಾರಿಗಳನ್ನು ಅವಲಂಬಿಸುವ ಬದಲಾಗಿ ತಮ್ಮ ಕುತ್ತಿಗೆಯೊಳಗೆ ಬಂದದ್ದನ್ನು ನಾಲಗೆಯಿಂದ ಆಡಿತೋರಿಸಿ ತಮ್ಮ ಪರಿಸ್ಥಿತಿಯನ್ನು ಉನ್ನತಿಗೆ ತರುವುದಕ್ಕೆ ಸನದಿಮಾರ್ಗಗಳಾಗಿವೆ ಎಂದು ನಮ್ಮ ಅಭಿಪ್ರಾಯ. ಇಂಥ ಸಂಘಗಳು ತಮ್ಮ ಕರ್ತವ್ಯವನ್ನು ಸರಿಯಾಗಿ ಮಾಡಲಿ ಮತ್ತು ವಿದ್ಯಾಪೀಠಕ್ಕೆ ಮೂಲಸ್ತಂಭವಾಗಲಿ ಎಂದು ನಮ್ಮ ಕೋರಿಕೆ.

ಮಜೂರ ಸಂಘಗಳ ಪರಿಷತ್ತು.

ಮುಂಬಯಿಯಲ್ಲಿ [illegible] ಹಿಂದುಸ್ಥಾನದೊಳಗಿನ ಮಜೂರ ಸಂಘಗಳ ಪರಿಷತ್ತು [illegible] ಈ ಪರಿಷತ್ತಿನ ಅಧ್ಯಕ್ಷಸ್ಥಾನವನ್ನು ದೇಶಭಕ್ತರಾದ [illegible] ತರಾಯರು ವಹಿಸಿದ್ದರು. ವಿಲಾಯತಿಯಿಂದ ಬಂದಿದ್ದ ಕರ್ನಲ್ ವೆಜ್‌ವುಡರು ತಮ್ಮ ಪತ್ನೀಸಮೇತರಾಗಿ ಪರಿಷತ್ತಿಗೆ ಹಾಜರು ಇದ್ದರು. ಇವರಲ್ಲದೆ ಪಂಡಿತ ಮೋತಿಲಾಲ ನೆಹರು, ವಿ. ಜೆ. ಪಟೇಲ, ಡಾ. ಸಾಧ್ವೇ ಮುಂತಾದ ಮುಖಂಡರು ಕೂಡ ಈ ಅಧಿವೇಶನದಲ್ಲಿ ಹಾಜರಿದ್ದರು. ಸ್ವಾಗತ ಮಂಡಲದ ಅಧ್ಯಕ್ಷರಾದ ಜೆ. ಬಾಪ್ಟಿಸ್ಟರು ಸ್ವಾಗತ ಭಾಷಣವನ್ನು ಮಾಡಿದ ಬಳಿಕ ಅಧ್ಯಕ್ಷರು ತಮ್ಮ ಉಪನ್ಯಾಸವನ್ನು ಕೊಟ್ಟರು. ಅನಂತರ ಮರುದಿನ ಸಭೆಯು ಪುನಃ ಜರುಗಿ ಕೆಲವು ಮಹತ್ವದ ಠರಾವುಗಳು ಪಾಸಾದವು.

ಒಂದು ಸಭೆಯ ಇಲ್ಲವೆ ಪರಿಷತ್ತಿನ ವರ್ತಮಾನವನ್ನು ಸಂಕ್ಷೇಪದಿಂದ ಕೊಡುವುದೆಂದರೆ ಮೇಲಿನಂತೆ ಚುಟುಕಾಗಿ ನಾಲ್ಕು ಮಾತುಗಳನ್ನು ಕೊಡಬಹುದಾಗಿದೆ. ಆದರೆ ಇದರಿಂದ ಮುಂಬಯಿಯಲ್ಲಿ ನೆರೆದ ಮಜೂರ ಸಂಘದ ಪರಿಷತ್ತಿನ ಮಹತ್ವವು ವಾಚಕರಿಗೆ ತಿಳಿಯಬರಲಿಕ್ಕಿಲ್ಲ. ಇತ್ತಲಾಗೆ ನಮ್ಮ ದೇಶದಲ್ಲಿ ಪರಿಷತ್ತುಗಳು ಮತ್ತು ಸಭೆಗಳು, ಹಾಗು ಸಂಘಗಳು ಮತ್ತು ಸಂಸ್ಥೆಗಳು ಹೆಚ್ಚಾಗುತ್ತ ಹೋಗಿವೆ. ಇದು ಪಾಶ್ಚಾತ್ಯ ದೇಶದ ಅನುಕರಣವಾದರೂ ಇಂಥ ಪ್ರವೃತ್ತಿಯಿಂದ ನಿದ್ರಿತ ಜನರಲ್ಲಿ ಒಂದು ತರದ ಜಾಗೃತಿಯು ಉಂಟಾಗುತ್ತದೆ. ಈ ಮಾತಿಗೆ ನಮ್ಮ ಹಿಂದಿ ಮಜೂರ ಪ್ರಶ್ನೆಯನ್ನೆ ದೃಷ್ಟಾಂತವನ್ನಾಗಿ ಇಟ್ಟುಕೊಳ್ಳಬಹುದು. ನಮ್ಮ ದೇಶದ ಪ್ರಾಚೀನ ಪರಂಪರೆಯನ್ನು ನೋಡುವಾಗ 'ಟ್ರೇಡ್ ಯೂನಿಯನ್' 'ಮಜೂರರ ಸಂಘ', 'ಕೂಲಿಗಳ ಸಂಸ್ಥೆ' ಇತ್ಯಾದಿ ಹೆಸರಿನ ಸಂಸ್ಥೆಗಳಿದ್ದಿಲ್ಲವೆಂಬುದು ನಿಜವಾಗಿದ್ದರೂ ಜಾತಿ ಸಂಸ್ಥೆಯ ರೂಪದಿಂದ ಬೇರೆ ಕೈಗಾರಿಕೆಯ ಹಾಗು ಶರೀರ ಕಷ್ಟದ ಕಾರ್ಯಗಳು ವಿಭಕ್ತವಾಗಿಯೂ, ನಿಯಮಿತವಾಗಿಯೂ ಇದ್ದವು. ಆದರೆ ನಮ್ಮ ಈ ಹಿಂದುಸ್ಥಾನದಲ್ಲಿ ರಾಜಸತ್ತೆಯು ಪರಕೀಯರ ಅಧೀನದಲ್ಲಿ ಹೋದ ಬಳಿಕ ಇಲ್ಲಿಯ ಚಾತುರ್ವರ್ಣ್ಯದ ಮತ್ತು ಜಾತಿಯ ಸಂಸ್ಥೆಗಳು ಶಿಥಿಲವಾಗುತ್ತ ಬಂದವು. ಇಲ್ಲಿಯ ಜಾತಿಸಂಸ್ಥೆಯು ಶಿಥಿಲವಾಗುತ್ತ ಬಂದದಕ್ಕೆ ನಿಜವಾದ ಕಾರಣವು ಯಾವುದೆಂದರೆ ಹಿಂದಿಗಳ ರಾಜಸತ್ತೆಯೊಡನೆಯೆ ಔದ್ಯೋಗಿಕ ವ್ಯವಸಾಯವೂ, ಕೈಗಾರಿಕೆಗಳೂ ನಷ್ಟವಾದವು. ಅದೇ ಸಮಯದಲ್ಲಿ ಪಾಶ್ಚಾತ್ಯ ದೇಶದೊಳಗಿನ ಕೆಲವು ಘಾತಕ ಕ್ರಮಗಳು ಇಲ್ಲಿ ತಲದೋರ ಹತ್ತಿದವು. ಯುರೋಪಿನಲ್ಲಿ ಉದ್ಯೋಗ ಮತ್ತು ಕೈಗಾರಿಕೆಯು ಕೆಪಿಟಲಿಸ್ಟರ ಎಂದರೆ ಬಂಡವಾಳಗಾರ ಕೈಸೇರಿದ. ಯುರೋಪದೊಳಗಿನ ಸುಧಾರಿಸಿದ ದೇಶಗಳಲ್ಲಿ ನಿರಂಕುಶ ಪ್ರಭುತ್ವ ಏಕತಂತ್ರಕ ಶಾಸನ ಮುಂತಾದ ಲೋಕಹಿತಪ್ರತಿಬಂಧಕ ಸಂಗತಿಗಳು ನಷ್ಟವಾಗಿದ್ದಾವೆಂದು ತೋರಿದರೂ ಬಂಡವಾಳಗಾರ ಪ್ರಾಬಲ್ಯವು ಅಧಿಕವಾಗಿ ದೇಶದೊಳಗಿನ ಎಲ್ಲ ತರದ ಉದ್ಯೋಗ, ಎಲ್ಲ ತರದ ಕೈಗಾರಿಕೆ ಮತ್ತು ಎಲ್ಲ ತರದ ವ್ಯಾಪಾರ ಇವು ಆ ಬಂಡವಾಳಗಾರ ವಶದಲ್ಲಿ ಸೇರಿಹೋದವು. ಇದರಿಂದ ಸಾಮಾನ್ಯ ಜನರ ಮತ್ತು ಬಡವರ ಹೊಟ್ಟೆಗೆ ಒಂದು ಪ್ರತಿಬಂಧವು ಎದುರು ನಿಂತಂತಾಯಿತು. ಆದರೆ ಉದ್ಯೋಗಿಕ ವೃದ್ಧಿಯಿಂದ ರಾಷ್ಟ್ರದ ಸಾಂಪತ್ತಿಕ ಉನ್ನತಿಯು ಉಂಟಾಗಬೇಕಾದರೆ ದೇಶದೊಳಗಿನ ಸಂಪತ್ತು ಸಾಮಾನ್ಯವಾಗಿ ಎಲ್ಲರಲ್ಲಿ ಬದಿಕೊಂಡಿರಬೇಕು. ಪರಂತು ಯುರೋಪದೊಳಗಿನ ಬಂಡವಾಳಿಗರು ಈ ಸಾಮಾನ್ಯ ನಿಯಮವನ್ನು ಮುರಿದು ತಮ್ಮ ಕೈಯಲ್ಲಿ ಔದ್ಯೋಗಿಕ ಸೂತ್ರಗಳನ್ನು ಇಟ್ಟುಕೊಂಡರು. ಅರ್ಥಾತ್ ದೇಶದ ಸಂಪತ್ತು ಕೇವಲ ವಿಷಮ ರೀತಿಯಿಂದ ವಿಭಕ್ತವಾಗಹತ್ತಿತು. ಇದನ್ನೆ ಬೇರೆ ಮಾತುಗಳಿಂದ ಹೇಳುವುದಾದರೆ, ಬಂಡವಾಳಿಗರು ಕಾರಖಾನೆಯಿಂದ ಉತ್ಪನ್ನವಾಗುವ ಎಲ್ಲ ಲಾಭವನ್ನು ತಾವೆ ಉಪಭೋಗಿಸತೊಡಗಿ ಮಜೂರರನ್ನು ದಿನ ಸಂಬಳ ಇಂತಿಷ್ಟೆಂದು ನಿರ್ಣಯಿಸಿ ಅವರು ಆ ಸಂಬಳಕ್ಕೆ ಮಾತ್ರ ಬಾಧ್ಯಸ್ಥರೆಂದು ವಿಧಿಸಹತ್ತಿದರು. ನಿಜವಾಗಿ ನೋಡಿದರೆ ಉದ್ಯೋಗದಿಂದ ಹಾಗು ಕೈಗಾರಿಕೆಯಿಂದ ಉತ್ಪನ್ನವಾಗುವ ಸಂಪತ್ತು ಶಾರೀರಿಕಶ್ರಮವನ್ನು ಖರ್ಚುಮಾಡುವ ಮಜೂರರ ಉದ್ಯೋಗದ ಪ್ರತಿಫಲವಾಗಿದೆ, ಎಂದ ಮೇಲೆ ಭಂಡವಾಳಿಗರು ಕಾರಖಾನೆಯ ಲಾಭವು ಸಂಪೂರ್ಣವಾಗಿ ತಮ್ಮದೇ ಎಂದು ವರ್ತಿಸಹತ್ತಿ ಮಜೂರರನ್ನು ಪೀಡಿಸಹತ್ತಿದ್ದು ಕೇವಲ ಸ್ವಾರ್ಥಪರತೆ ಎಂಬುದು ಸ್ಪಷ್ಟವಾಗುತ್ತದೆ. ವಿಲಾಯತಿಯಲ್ಲಿ ಬಂಡವಾಳಿಗರು ಇಂಥ ಪ್ರವೃತ್ತಿಯನ್ನು ಪ್ರಾರಂಭಿಸಿದ ಬಳಿಕ ಮಜೂರರಿಗೂ ಸ್ವಸಂರಕ್ಷಣದ ಮಾರ್ಗವನ್ನು ಹುಡುಕಬೇಕಾಯಿತು. ಹಾಗು ಅವರು ಸಂಘಶಕ್ತಿಯ ಬಲದಿಂದ ಮುಷ್ಕರವನ್ನು ಹಾಕಹತ್ತಿ ಆ ಮೂಲಕ ತಮ್ಮ ಅಪೇಕ್ಷೆಯನ್ನು ಪೂರಯಿಸಿಕೊಳ್ಳಹತ್ತಿದರು; ಹಿಂದುಸ್ಥಾನದಲ್ಲೂ ಇದೇ ಕ್ರಮವು ಪ್ರಾರಂಭವಾಯಿತು. ಇಲ್ಲಿಯ ಭಂಡವಾಳಿಗರು ವಿಲಾಯತಿಯವರನ್ನು ಅನುಕರಿಸಹತ್ತಿದ್ದರಿಂದ ಮಜೂರರೂ ಕೂಡ ವಿಲಾಯತಿಯ ಮಜೂರರ ಉಪಾಯವನ್ನು ಅವಲಂಬಿಸ ತೊಡಗುವುದು ಸಹಜವೆ. ಮತ್ತು ಇದೇ ಕಾರಣದಿಂದ ಹಿಂದುಸ್ಥಾನದಲ್ಲಿ ಇತ್ತಲಾಗೆ ಮುಷ್ಕರಗಳು

...ಲೇತಕ್ಕದ್ದಾವೆ. ಈ ಮುಸ್ಲಿಂಗಳ ಉಪಾಯವು ಯಶಸ್ವಿಯಾಗ ಬೇಕಾದರೆ ಮುಖ್ಯರಲ್ಲಿ ಸಂಘಟಿತವಾದ ಬಲ ಬೇಕಾಗುತ್ತದೆ. ಇಂಥ [illegible] ಸಾಮರ್ಥ್ಯವನ್ನು ಸಾಧಿಸುವುದಕ್ಕಾಗಿ ಮಹಜೂರರು ತಮ್ಮ [illegible] ತತ್ವವನ್ನು ಸೇರಿಸಿದರೆ ಇದು ಬಹಳ ಶ್ಲಾಘ್ಯವಾದ ಉಪ ಕ್ರಮವಾಗಿದೆ. ಹಿಂದುಸ್ಥಾನದ ಮಜೂರರ ಮುಂದೆ ಸುಖಜೀವನದ ಪ್ರಶ್ನೆಯು ಮುಖ್ಯವಾಗಿರುತ್ತದೆ. ಈ ಪ್ರಶ್ನೆಯನ್ನು ಬಿಡಿಸುವುದಾದರೆ ವನ ಸಂಬಳ, ಅವನ ಕೆಲಸದ ಸಮಯ, ಅವನ ವಸತಿಗೃಹ ಇತ್ಯಾದಿ ಸಂಗತಿಗಳು ಅವರ ಅನುಕೂಲತೆಯಂತೆ ಉಂಟಾಗ ಬೇಕಾದ ವುಗಳು. ಈ ಸಂಗತಿಗಳು ಮೊನ್ನೆಯ ಮುಂಬಯಿಯ [illegible] ಅಧ್ಯಕ್ಷರ ಭಾಷಣ ಮತ್ತು ಠರಾವುಗಳಲ್ಲಿ ವ್ಯಕ್ತವಾದ್ದರಿಂದ ಮಜೂ ರರ ಸಂಘಗಳು ಇನ್ನು ಮುಂದೆ ಬಲವತ್ತಾದ್ದಾದವೆಂದು ಆಸೆ ಇದೆ.

ಸ್ಫುಟವಿಚಾರಗಳು.

೧. ರೌಲಟ್ ಏಕ್ಟೂ, ಪಂಜಾಬು ಪ್ರಕರಣವೂ, ಖಿಲಾಫತ್ ಪ್ರಶ್ನೆಯೂ ಇವೆ ಮೂಲವಾಗಿರುವ ಅಸಹಕಾರಿತೆಯು ಈಗ ದಿನೇದಿನೇ ಮುಖ್ಯವಾಗಿ ಪಂಜಾಬ ಪ್ರಾಂತ್ಯಗಳಲ್ಲಿ ಬೆಳೆಯುಹತ್ತಿದೆ. ಈ ಹೊತ್ತು ಇಂಥವರು ಪದವಿ ಬಿಟ್ಟರು, ಬಹುಮಾನದ ಜಾಗೆ ಬಿಟ್ಟರು, ಈ ಹೊತ್ತು ಇಂಥವರು ಕೌನ್ಸಿಲಿನ ತಮ್ಮ ಉಮ್ಮೇದವಾರಿಯನ್ನು ಬಿಟ್ಟರು; ವಕೀಲಿಯನ್ನು ಬಿಟ್ಟರು ಇತ್ಯಾದಿ ರೂಪದಿಂದ ಪ್ರತಿದಿನ ವರ್ತಮಾನ ಪತ್ರಿಕೆಗಳು ಅಸಹಕಾರಿತೆಯ ವಾರ್ತಾ ಭಾಂಡಾರದಲ್ಲಿ ಭರ್ತಿ ಯನ್ನೆ ಹಾಕುತಿದ್ದಾವೆ! ಕೌನ್ಸಿಲುಗಳ ಬಹಿಷ್ಕಾರದಂತೆಯೆ ಕಾಲೇಜುಗಳ ಬಹಿಷ್ಕಾರದ ಚಳವಳವು ನಡೆಯುತ್ತದೆ. ಅಲ್ಲಿ ಘಡದ ಕಾಲೇಜಿನಲ್ಲಿ ತುಂಬಾ ಗಲಭೆಯು ಉಂಟಾಗಿ ಕಾಲೇಜಿನ ಪ್ರಿನ್ಸಿಪಾಲರಿಗೆ ಕಾಲೇಜನ್ನು ಮುಚ್ಚಬೇಕಾಗಿದೆ. ಮಿ. ಮಹಮ್ಮದ ಅಲ್ಲಿಗಳು ಅಲ್ಲಿಗೆ ಹೋಗಿ ಪ್ರಿನ್ಸಿಪಾಲರಿಗೂ, ಕಾಲೇಜಿನ ಟ್ರಸ್ಟಿ ಗಳಿಗೂ ಸರಕಾರದ ಗ್ರಾಂಟನ್ನೂ, ಯುನಿವರ್ಸಿಟಿಯ ಸಂಬಂಧವನ್ನೂ ಬಿಟ್ಟು ಬಿಡಬೇಕೆಂದು, ಪಂಚರಿಯಿಂದ ಬೋಧಿಸಿದರು. ಮಿ. ಮಹಮ್ಮದ್ ಅಲ್ಲಿಗಳು ಕಾಲೇಜಿನ ಕಟ್ಟೋಣವನ್ನು ಸ್ವಾಧೀನ ಪಡಿಸಿಕೊಳ್ಳಲು ಯತ್ನಿಸಿದಾಗ ಟ್ರಸ್ಟಿ ಕಡೆಯವರು ಸರಕಾರದ ಅಧಿಕಾರಿಗಳನ್ನು ಆಶ್ರಯಿಸಿ ಅವರ ಹುಕುಮಿನ ಬಲದಿಂದ ಮಿ. ಮಹಮ್ಮದ್‌ಅಲ್ಲಿಗಳನ್ನು ಕಾಲೇಜ ಕಟ್ಟೋಣವನ್ನು ಬಿಟ್ಟುಕೊಡು ವಂತೆ ಮಾಡಿದರು. ಆದರೂ ಮಿ. ಮಹಮ್ಮದ್‌ಅಲ್ಲಿಗಳು ಹಾಗು ಅವರ ಸಹಾಯಕರು ಹೊಸ ಯುನಿವರ್ಸಿಟಿಯನ್ನು ಸಿದ್ಧಪಡಿಸಿದ್ದಾರೆ.

೨. ಶಾಲಾ, ಕಾಲೇಜುಗಳ ಬಹಿಷ್ಕಾರದ ಚಳವಳವು ಈ ಮೇರೆಗೆ ನಡೆಯುತ್ತಿರುವಾಗ ಪಂಡಿತ ಮದನಮೋಹನ ಮಾಲವೀ ಯರು ಕಾಶಿಯ ಹಿಂದು ಯುನಿವರ್ಸಿಟಿಯ ಪಟಾಂಗಣದಲ್ಲಿ ಒಂದು ಬಹು ದೊಡ್ಡ ಯುವಕ ಸಮಾಜದ ಮುಂದೆ ಈಗಿನ ಪರಿಸ್ಥಿತಿಯನ್ನು ಕುರಿತು ಒಂದು ವಿಚಾರಣೀಯವಾದ ಭಾಷಣವನ್ನು ಕೊಟ್ಟರು. ಪಂಡಿತ ಮಾಲವೀಯರು ಕಲಕತ್ತೆಯ ರಾಷ್ಟ್ರೀಯ ಸಭೆಯಲ್ಲಿ ಅಸಹ ಕಾರಿತೆಯ ಠರಾವನ್ನು ಉಪರೋಧಿಸಿದವರಾದರೂ ಈಗ ರಾಷ್ಟ್ರೀಯ ಸಭೆಯ ಠರಾವನ್ನು ಬೇರೆ ಕಾರಣಗಳಿಂದಾದರೂ ಮನ್ನಿಸುತ್ತಲಿದ್ದಾರೆ. ಕೌನ್ಸಿಲಿಗೆ ನಿಲ್ಲುವ ಉಮೇದು ಅವರಲ್ಲಿ ಮೊದಲಿತ್ತು. ಮಾತ್ರವಲ್ಲ. ರಾಷ್ಟ್ರೀಯ ಸಭೆಯಲ್ಲಿ ಪಾಸಾದ ಅಸಹಕಾರಿತೆಯ ಠರಾವಿನೊಳಗಿನ ಕೌನ್ಸಿಲ್ ಬಹಿಷ್ಕಾರದ ಅಂಶವು ತನಗೆ ಮಾನ್ಯವಿಲ್ಲವೆಂದು ಅವರು ಸ್ಪಷ್ಟವಾಗಿ ಹೇಳಿದ್ದರು. ಆದರೆ ಅವರು ಈಗ ಆಲೋಚನೆಯ ಮೇಲೆ ಆಲೋಚನೆ ಮಾಡಿ ಕೌನ್ಸಿಲಿಗೆ ಉಮೇದುವಾರನಾಗಿ ನಿಲ್ಲ ಕೂಡದೆಂದು ನಿಶ್ಚಯಿಸಿದ್ದಾರೆ. ಈ ಮೇರೆಗೆ ಪಂಡಿತ ಮಾಲವೀಯ ರಲ್ಲಿ ಅನುಕೂಲವಾದ ಮತಾಂತರವು ಉಂಟಾಗಹತ್ತಿದೆ. ಈ ಮತಾಂತರವು ಎಷ್ಟರ ಮಟ್ಟಿಗೆ ಉಂಟಾಗಹತ್ತಿದೆ ಎಂದರೆ ಅವರು ಮೊನ್ನೆ ಹಿಂದು ಯುನಿವರ್ಸಿಟಿಯ ಪಟಾಂಗಣದಲ್ಲಿ ಕೊಟ್ಟ ಭಾಷಣದಲ್ಲಿ ಈಗಿನ ರಾಜಕೀಯ ಪರಿಸ್ಥಿತಿಯನ್ನು ಸರಿಯಾಗಿ ವಿವರಿಸಿ ಹೇಳಿ 'ಅಸಹಕಾರಿತೆಯ ಉಪಾಯದಿಂದ ಹಿಂದುಸ್ಥಾನಕ್ಕೆ ಬೇಗನೇ ಸ್ವರಾಜ್ಯ ಪ್ರಾಪ್ತವಾದೀತು' ಎಂದು ತಮ್ಮ ಭರವಸೆಯನ್ನು ವ್ಯಕ್ತ ಗೊಳಿಸಿದರು. ಪಂಡಿತ ಮಾಲವೀಯರು ತಮ್ಮ ಈ ಉಪನ್ಯಾಸದಲ್ಲಿ ಈಗಿನ ಶಿಕ್ಷಣದ ಮೇಲೆ ಕೆಲವು ವಿಚಾರಗಳನ್ನು ವ್ಯಕ್ತಪಡಿಸಿದರು. ಈಗಿನ ಶಿಕ್ಷಣದಲ್ಲಿ ಅನೇಕ ಕುಂದುಕೊರತೆಗಳಿವೆ ಎಂಬುದು ಪಂಡಿತ ಜಿಯವರ ಮನಸ್ಸಿಗೂ ತೋರುತ್ತದೆ. ಈಗಿನ ಶಿಕ್ಷಣದಲ್ಲಿ ಬಹು ಪ್ರಕಾರವಾಗಿ ಸುಧಾರಣೆಯಾಗಬೇಕೆಂದು ಪಂಡಿತಜಿಯವರ ಮತವಿದೆ. ಆದರೆ ಅವರು ಅಸಹಕಾರಿತೆಯ ದಾಳಿಯನ್ನು ಎಬ್ಬಿಸಿಕೊಂಡು ಪ್ರಕೃತ ಶಿಕ್ಷಣಕ್ಕೆ ಬಹಿಷ್ಕಾರವನ್ನು ಹಾಕುವುದು ಔಚಿತ್ಯವು ಳ್ಳದ್ದಲ್ಲವೆಂದು ಪ್ರಾಮಾಣಿಕವಾಗಿ ತಿಳಿಯುತ್ತಾರೆ. ಸರಕಾರಿ ಹಣ ಪಡಕೊಳ್ಳುವ ಶಾಲಾ ಕಾಲೇಜುಗಳನ್ನು ಬಹಿಷ್ಕರಿಸಬೇಕೆನ್ನುವವರಿಗೆ ಪಂಡಿತ ಮಾಲವೀಯರು ಹೇಳುವ ಸಮಾಧಾನವು ಯಾವದೆಂದರೆ, ಸರಕಾರವು ತನ್ನ ಹಣವನ್ನು ಕೊಡುವುದಿಲ್ಲ. ಅದು ಪ್ರಜೆಗಳ ಹಣವೆ. ಪಂಡಿತಜಿಯವರ ಈ ಮಾತು ನ್ಯಾಯವಾದ್ದು. ಆದರೆ ಸರಕಾರವು ಹಣವನ್ನು ಕೊಡುವಾಗ ತನ್ನದೆಂದು ತಿಳಿದುಕೊಡುತ್ತದೆ. ಇಷ್ಟೇ ಅಲ್ಲ, ಆ ಹಣವನ್ನು ತೆಕ್ಕೊಳ್ಳತಕ್ಕವರಿಗಾಗಿ ಕೆಲವು ನಿಯಮಗ ಳನ್ನು ಹಾಕಿಕೊಡುತ್ತದೆ. ಆ ಹಣವನ್ನು ತೆಕ್ಕೊಂಡ ಮೇಲೆ ಆ ನಿಯಮಗಳನ್ನು ಪಾಲಿಸಬೇಕಾಗಿ ಬರುತ್ತದೆ. ಇದು ವರೆಗಿನ ಕ್ರಮವು ಇದೇ. ಆದುದರಿಂದ ಬಹಿಷ್ಕಾರವಾದಿಗಳು ಆ ಹಣವೂ ಬೇಡ, ಆ ನಿಯಮಗಳೂ ಬೇಡವೆಂದು ಹೇಳುತ್ತಾರೆ. ಅಲ್ಲದೆ ಇಲ್ಲಿ ಇನ್ನೊಂದು ವಿಚಾರವಿದೆ. ಶಾಲಾ ಕಾಲೇಜುಗಳ, ಕೋರ್ಟು ಕಚೇರಿಗಳ ಬಹಿಷ್ಕಾರವು ಆಚಂದ್ರಾರ್ಕ ನಡೆದೀತೆಂದು, ಕಡಿಮೆ ಪಕ್ಷದಲ್ಲಿ ಅಷ್ಟು ದೀರ್ಘಸಮಯ ನಡೆಯಬೇಕಾದ್ದು ಎಂದು ಸ್ವತಃ ಮಹಾತ್ಮಾ ಗಾಂಧಿಗಳಾದರೂ ತಿಳಕೊಳ್ಳುವುದಿಲ್ಲ. ಬಹಿಷ್ಕಾರವು ನಾಲ್ಕು ದಿವಸದ್ದು, ತಾತ್ಕಾಲಿಕವಾದ್ದು. ಯಾಕೆಂದರೆ, ಬ್ಯೂರೋಕ್ರಸಿಯ ಇಲ್ಲಿಯ ವ್ಯಾಪನೆಯನ್ನು ನಾಲ್ಕೂ ಕಡೆಯ ಬಹಿಷ್ಕಾರದಿಂದ ಸಂಕೋ ಚಿಸುತ್ತ ತಂದ ಕೂಡಲೆ ಮತ್ತೆ ಅದೇ ಬ್ಯೂರೋಕ್ರಸಿಯು ಜನತೆಯ ಅಭಿ ಪ್ರಾಯದ ಕಡೆಗೆ ಕಿವಿಗೊಡ ಹತ್ತುತ್ತದೆ ಈ ರೀತಿಯ ದೃಢ ಭರವಸೆಯು ಅಸಹಕಾರಿತೆಯ ಪುರಸ್ಕರ್ತರಲ್ಲಿ ಮತ್ತು ಅನುಯಾಯಿಗಳಲ್ಲಿ ಇರುವುದರಿಂದ ಅವರಿಗೆ ತಾತ್ಕಾಲಿಕ ಬಹಿಷ್ಕಾರದಿಂದ ಕೆಲವು ಮಟ್ಟಿನ ಶಿಕ್ಷಣದ ಉಪೇಕ್ಷೆ ಇಲ್ಲವೆ ಅಜಾಗ್ರತೆಯುಂಟಾದರೂ ಅದೊಂದು ದೊಡ್ಡ ಮಹತ್ವದ ಸಂಗತಿಯೆಂದು ತೋರುವುದಿಲ್ಲ. ಇರಲಿ; ಆದರೂ ಪಂಡಿತ ಮಾಲವೀಯರು ತಮ್ಮ ಭಾಷಣದಲ್ಲಿ ಸ್ಪಷ್ಟವಾಗಿ ಹೇಳಿದ ರೇನೆಂದರೆ, ಹಿಂದು ಯುನಿವರ್ಸಿಟಿಯು ಸರಕಾರಿ ಮದತನ್ನು ಹೊಂದುತ್ತದಾದರೂ ಅಧಿಕಾರಿ ವರ್ಗದ ಕೈಯಲ್ಲಿ ಅದರ ಸೂತ್ರಗಳೂ ಎಂದೂ ಇರಲಿಕ್ಕಿಲ್ಲ. ಪಂಡಿತ ಮದನಮೋಹನ ಮಾಲವೀಯರು ಅಸಹಕಾರಿತೆಯ ತತ್ವವನ್ನು ಅವಲಂಬಿಸುವವರಾಗಿ ದೇಶಕ್ಕೆಲ್ಲ ಅದನ್ನೆ ಉಪದೇಶಿಸುತಿದ್ದಾರೆ. ಮಾಲವೀಯರ ಮನಸ್ಸು ದಿನೇ ದಿನೇ ಅಸಹಕಾರಿತೆಯ ಕಡೆಗೆ ಈ ರೀತಿ ಸ್ಥಿರವಾಗಹತ್ತಿದೆ.

೩. ಮದ್ರಾಸು ಕಾರ್ಪೊರೇಶನ್ನಿನ ಪ್ರೆಸಿಡೆಂಟರಾಗಿದ್ದ ಸರ್. ತ್ಯಾಗರಾಯ ಚೆಟ್ಟಿ ಇವರ ಉದ್ಯೋಗದ ಅವಧಿಯು ತೀರಿ ಪುನಃ ಅವರನ್ನೆ ಸರ್ವಾನುಮತದಿಂದ ಆ ಪದವಿಗೆ ಆರಿಸಲಾಯಿತು. ಈ ಸೂಚನೆಯನ್ನು ತರಲಿಕ್ಕೆ ರಾವ್ ಬಹದ್ದೂರ ರಂಗಾಚಾರ್ಯರೇ ಮುಂದೆ ಬಂದರು. ಹಿಂದೆ ಇವರೇ ಸರ್ ತ್ಯಾಗರಾಯ ಚೆಟ್ಟಿಯವರಿಗೆ ಎದುರಾಗಿ ಉಮೇದ್ವಾರರಾಗಿ ನಿಂತು ತನ್ಮೂಲಕ ಬಹಳ ಮನೋ ವ್ಯಥೆಗೆ ಕಾರಣರಾಗಿ ಬ್ರಾಹ್ಮಣ ಬ್ರಾಹ್ಮಣೇತರ ಪಕ್ಷಗಳ ವಿರೋ ಧಕ್ಕೆ ಪುಷ್ಟಿಕೊಟ್ಟಂತೆ ಇತ್ತು. ಈಗ ರಾ। ರಂಗಾಚಾರ್ಯರೇ ಬ್ರಾಹ್ಮ ಣೇತರ ವೃಂದದ ಮುಂದಾಳಾದ ಸರ್ ತ್ಯಾಗರಾಯ ಚೆಟ್ಟಿಯವರನ್ನು ಆರಿಸುವುದಕ್ಕೆ ಯತ್ನಿಸಿದ್ದು ಶುಭಸೂಚನೆಯೆನ್ನಬೇಕು. ಪ್ರಸ್ತುತ ಸಂದರ್ಭದಲ್ಲಿ ಚಂದರ ಬಾದಶಹರ ಪ್ರತಿನಿಧಿಯಾಗಿ ಮದ್ರಾಸಿಗೆ ಜನ ವರಿಯಲ್ಲಿ ಬರಲಿಕ್ಕಿರುವ ಶ್ರೀಮಂತ ಡ್ಯೂಕ ಆಫ್ ಕನ್ನಾಟರವರಿಗೆ ಸ್ವಾಗತ ಮಾಡುವ ಅಪೂರ್ವ ಸಂದರ್ಭವು ಬಂದಿರುವಾಗ, ಈ ಪದವಿ ಯನ್ನು ಬ್ರಾಹ್ಮಣ ಪಂಗಡದವರು ಬ್ರಾಹ್ಮಣೇತರ ಬಂಧುಗಳಿಗೆ ಬಿಟ್ಟು ಕೊಟ್ಟದ್ದು ಈ ಜಗಳದ ಗಾಯ ಮಾಯಲಿಕ್ಕೆ ಆಸ್ಪದ ಕೊಟ್ಟೀತು ಎಂದು ನಾವು ನಂಬಿದ್ದೇವೆ. ಇಷ್ಟು ಅಲ್ಲ. ಈಗ ಕೌನ್ಸಿಲು ಚುನಾ ವಣೆಗೆ ಬಂದ ಉಮೇದ್ವಾರರ ನೋಮಿನೇಶನುಗಳನ್ನು ಪರಿಶೀಲಿಸಿದರೆ ಬ್ರಾಹ್ಮಣೇತರರ ಸಂಖ್ಯೆಯೇ ಬಹಳ ಇರುವುದು. ಅದ್ದರಿಂದ ಕೌನ್ಸಿಲಿ ನಲ್ಲಿ ಅವರಿಗೆ ಮೊದಲು ನಿರ್ದೇಶಿಸಿದ ಅಥವಾ ಅವರು ಅಪೇಕ್ಷಿಸಿದ ಸ್ಥಾನಗಳಿಗಿಂತ ಹೆಚ್ಚು ಸ್ಥಾನಗಳು ಸಿಕ್ಕಾವು ಎಂಬ ಭರವಸೆ ಇದೆ. ಇದು ಕೂಡಾ ಈ ಗಾಯದ ವ್ರಣಕ್ಕೆ ಶೀತಲ ಘನಘೋಪಚಾರವಾದೀ ತೆಂದು ನಮ್ಮ ನಂಬಿಕೆ.

೪. ಕೌನ್ಸಿಲು ಚುನಾವಣೆಯ ಬಗ್ಗೆ ಮದ್ರಾಸು ಶಹರಿನ ಪ್ರತಿನಿಧಿಯಾಗಿ "ನೊಮಿನೇಶನ" ಹೊಂದಿದವರ ಪೈಕಿ ಎಂ। ಸಿ. ಪಿ. ರಾಮಸ್ವಾಮಿ ಅಯ್ಯರರು ಒಬ್ಬರು. ಇವರು ತನ್ನನ್ನು ಚುನಾ ಯಿಸುವುದಕ್ಕೆ ಯಾವ ಕಾರಣಗಳಿವೆ ಎಂದು ವೋಟರುಗಳಿಗೆ ವಿವರಿ ಸುವುದಕ್ಕೋಸ್ಕರ ವೋಟರರ ಒಂದು ಸಭೆಯು ಮದ್ರಾಸಿನಲ್ಲಿ ಜರ ಗಿತು. ಈ ಸಂದರ್ಭದಲ್ಲಿ ಮಾಡಿದ ಭಾಷಣದಲ್ಲಿ ರಾ। ಸಿ. ಪಿ. ರಾಮಸ್ವಾಮಿ ಅಯ್ಯರರು ತಾನು ಈ ಚುನಾವಣೆಗೆ ಉಮೇದ್ವಾರ ನಾಗ ಬಾರದಾಗಿಯೂ ಈ ಸೂಚನೆಯನ್ನು ಉಲ್ಲಂಘಿಸಿ ಆ ಕುರಿತು ಭಾಷಣಮಾಡಿದರೆ ತನ್ನ ಜೀವಕ್ಕೆ ಅಪಾಯವಿದೆ ಎಂದು ಎಚ್ಚರಿಸಿ ತನಗೆ ಅನಾಮಿಕ ಪತ್ರಗಳು ಬಂದಿವೆ ಎಂದು ಹೇಳಿ ಕಿಸೆಯೊಳಗಿನ ಪಿಸ್ತೂಲನ್ನು ಎತ್ತಿ ತೋರಿಸಿದರಂತೆ; ಮತ್ತು 'ಈ ಪತ್ರಗಳಿಗೆ ಇದೇ ಉತ್ತರ' ಎಂದು ಹೇಳಿದರಂತೆ. ರಾ। ಸಿ. ಪಿ. ರಾಮಸ್ವಾಮಿ ಅಯ್ಯರರು ಮೊಡರೆಟ ನೆಶನಲಿಷ್ಟರು. ವಿಲಾಯತಿ ವರೆಗೂ ಹೋಗಿ ಅಲ್ಲಿ ಬ್ರಿಟಿಷ ಜನತೆಯ ಮುಂದೆ ಹಿಂದುಸ್ಥಾನದ ಕೇಳಿಕೆಗಳನ್ನು ಬಿಚ್ಚಿ ಹೇಳುವುದರಲ್ಲಿ ತುಂಬಾ ಆಸಕ್ತಿ ತೋರಿಸಿದವರು. ಇಂಥವರು ಈ ಹುಲು ಬೆದರಿಕೆಗೆ ತಾನು ದಿಗಿಲು ಪಡುವುದಿಲ್ಲವೆಂದು ಸ್ಪಷ್ಟಗೊಳಿಸ ಲಿಕ್ಕೆ ಪಿಸ್ತೂಲು ತೋರಿಸಿದರು ಎಂಬದನ್ನು ಕೇಳಿ ಪರಮಾಶ್ಚರ್ಯ ವಾಗುತ್ತದೆ. ಅನಾಮಿಕ ಪತ್ರಗಳು ವಿರೋಧ ಪಕ್ಷದವರಿಂದಲೇ ಬರಬೇಕೆಂದಿಲ್ಲ. ತನ್ನ ಪಕ್ಷದಲ್ಲಿಯೂ ಕುಹಕಿಗಳು-ಪರಸ್ಪರ ವಿರೋ ಧದ ಬೆಳೆಯನ್ನು ನೋಡಿ ಸಂತೋಷಪಡುವ ದುರಾಗ್ರಹಚಿತ್ತರು ಇರಲೂ ಬಹುದು ಎಂಬದನ್ನು ಮಿ। ರಾಮಸ್ವಾಮಿ ಅಯ್ಯರರು ಮರೆತುಬಿಟ್ಟರೇ? ಒಂದು ವೇಳೆ ಎದುರುವಾದಿಗಳೇ ಈ ರೀತಿಯ ಪತ್ರವನ್ನು ಬರೆದರು ಎನ್ನೋಣ. ಇದನ್ನು ನಾವು ಸರ್ವಥಾ ನಂಬ ಲಾರೆವು. ಅಂಥಾ ಬಹಿರಂಗವಾದ ಸಭೆಯಲ್ಲಿ ಅವರ ಜೀವಕ್ಕೆ ಹಾನಿ ತರುವ ರೀತಿಯ ಕಲ್ಪನೆಗಳನ್ನು ಯಾರಾದರೂ ಮಾಡಿದ್ದರು ಎಂದು ನಂಬಬೇಕಾದರೆ, ಅವರೊಬ್ಬರನ್ನು ಕೊಂದದರಿಂದ ಅವರ ಪಕ್ಷವೇ ನಿರ್ಮೂಲವಾಯಿತೆಂಬ ಭರವಸೆ ಇರಬೇಕು. ಅಥವಾ ತನ್ನೊಬ್ಬನ ಇರುವಿಕೆಯೆ ತನ್ನ ಪಕ್ಷಕ್ಕೆ ಬಲ ಎಂಬ ಅಹಂಬ್ರಹ್ಮತ್ವವ ಮಿ। ರಾಮಸ್ವಾಮಿ ಅಯ್ಯರ ತಲೆ ಹೊಗಿ ಬಿಟ್ಟಿದೆ ಎಂದು ಭಾವಿಸ ಬೇಕಾಗುತ್ತದೆ. ಈ ರೀತಿಯ ನಟನೆಗಳು ಪ್ರಜಾಮುಖಂಡರಲ್ಲಿ ತಲೆ ದೋರಿದವೆಂದರೆ ಇಂಥ ಅಕಡ ಬ್ರಹ್ಮರಾಕ್ಷಸರನ್ನು ಮುಖಂಡ ಪದವಿ ಯಿಂದ ಬೇಗನೆ ಕಳಚಿ ಬಿಡುವುದೇ ವಾಸಿ ಎಂದು ತೋರುತ್ತದೆ.

ಮಂಗಳೂರು.

ದಿವಾನ ಬಹದ್ದೂರ ರಾಮಯ್ಯ ಪೂಂಜರು, ಮ. ಶಾ. ರಾ. ಕಡೆಕಾರ ರಾಜಗೋಪಾಲಕೃಷ್ಣರಾಯರು, ಮ. ರಾ. ರಾ. ಬಿ. ಮಹಾಬಲ ಹೆಗ್ಗಡೆಯರು, ಮ. ರಾ. ರಾ. ಕೆ. ಸದಾಶಿವ ಭಟ್ಟರು, ಮದ್ರಾಸ ಲೆಜಿಸ್ಲೆಟಿವ ಕೌನ್ಸಿಲಿಗೆ ಇವರ ನೊಮಿನೇಶನುಗಳು ಮಂಜೂ ರಾಗಿವೆ. ಮಹಮ್ಮದ ಶಮ್ನಾಡಸಾಹೇಬ ಬಹದ್ದೂರರವರು ಮದ್ರಾಸು ಕೌನ್ಸಿಲಿಗೂ ದಕ್ಷಿಣ ಕನ್ನಡ ಮಲಬಾರುಗಳ ಪರವಾಗಿ ಲೆಜಿಸ್ಲೆಟಿವ್ ಎಸೆಂಬ್ಲಿಗೂ (ಡಿಲ್ಲಿಯ ತಿನಸಭೆ) ಮಹಮ್ಮದೀಯ ವೋಟರರ ಪರವಾಗಿ ಆರಿಸಲ್ಪಟ್ಟಿದ್ದಾರೆ. ಇದಕ್ಕೆ ಬೇರೆ ಉಮೇಧ್ವಾರರು ಇದ್ದಿಲ್ಲ. ಮಲಬಾರ ಕರಾವಳಿಯ ಕ್ರೈಸ್ತ ಪ್ರತಿನಿಧಿಗಳಾಗಿ ಮಿ। ಎ. ಜೆ. ಲೋಬೊ, ಮಿ। ಕ. ಸಿ. ಯಮ್. ಮಸ್ಕರೇಂಞಸ್ ಇವರ ನೊಮಿನೇಶನುಗಳು ಮಂಜೂರಾಗಿವೆ.

ಇಲ್ಲಿನ ಥಿಯೊಸಾಫಿಕಲ್ ಸೊಸೈಟಿಯ ಆಶ್ರಯದಲ್ಲಿ ಡಿ. ಕೆ. ಭಾರದ್ವಾಜ ವಿದ್ಯಾಭೂಷಣರವರು "Gita in Modern Life" ಎಂಬ ವಿಷಯವನ್ನೆತ್ತಿ ದೇಶೀಯ ಬಾಲಿಕಾ ಪಾಠಶಾಲೆಯ ಮಂದಿರದಲ್ಲಿ ಬರುವ ಭಾನುವಾರ ಬೆಳಗ್ಗೆ ೮ ಘಂಟೆಗೆ ಇಂಗ್ಲೀಷಿ ನಲ್ಲಿ ಉಪನ್ಯಾಸ ಮಾಡುವರು. ಸರ್ವರಿಗೂ ಸ್ವಾಗತವಿದೆ.

ನಾಳೆ ಸಾಯಂಕಾಲ ೬ ಗಂಟೆಗೆ ಡಿಪ್ರೆಸ್ಡ ಕ್ಲಾಸಸ್ ಮಿಶ್ಯನಿನ ವಾರ್ಷಿಕೋತ್ಸವವು ನಡಿಯುವುದು.

ಸ್ವರ್ಗಸ್ಥರಾದ ಮ। ರಾ। ಎಮ್. ಮೂಡ್ಲಗಿರಿ ಪಾಂಡುರಂಗ ಪೈಗಳವರ ಲೆಂಡಿಂಗ್ ಮತ್ತು 'ಶಿಪ್ಪಿಂಗ್‌ಡ್ಯೂಸ್' ಕಮ್ಮಿಟಿ ಮೆಂಬರಿಕೆಗೆ ಮೆ. ಯಂ. ಮಹಮದ್ ಸಾಹೇಬ ಬಹದ್ದೂರ್‌ರವರನ್ನು ನೇಮಿ ಸೋಣಾಗಿದೆ.

ಹೊಸ ಕೌನ್ಸಿಲುಗಳಿಗೆ ಬಹಿಷ್ಕಾರ ಹಾಕುವುದು ಯೋಗ್ಯ ವೆಂಬುದನ್ನು ಜಿಲ್ಲೆಯ ವೋಟರರಿಗೆ ಸಾರುವ ಕೆಲಸವು ನಡಿಯುತ್ತಿದೆ. ಹೊಸ ಕೌನ್ಸಿಲುಗಳಿಗೆ ಈಗ ಉಮೇದ್ವಾರರಾಗಿ ಎದುರು ಬಂದವರಿಗೆ ಜಿಲ್ಲೆಯ ವೋಟರರು ತಮ್ಮ ವೋಟುಗಳನ್ನು ಕೊಡುವುದಿಲ್ಲವೆಂದು ಮಹಾತ್ಮಾಗಾಂಧಿಗಳ ಡಿಕ್ಲರೇಶನ್ ಫೋರ್ಮಿಗೆ ಸಹಿ ಹಾಕುವ ಕೆಲ ಸವು ಸಹ ಪ್ರಾರಂಭವಾಗಿದೆ. ಈ ಡಿಕ್ಲರೇಶನ್ ಫೋರ್ಮುಗಳಿಗೆ ವೋಟರು ಗಳಿಂದ ಸಹಿಯನ್ನು ಪಡೆಯಲು ಹಲವು ಕಡೆಯಿಂದ ಸ್ವಯಂ ಸೇವಕರು ಹೊರಟಿದ್ದಾರೆ. ಇತರ ಕಡೆಗಳಿಂದಲೂ ಸ್ವಯಂ ಸೇವಕರು ಮುಂದು ಬರಬೇಕಾಗಿ ರಾ। ಕಾರ್ನಾಡ ಸದಾಶಿವರಾಯರು ಸವಿನಯ ವಿನಂತಿ ಮಾಡಿಕೊಂಡಿರುತ್ತಾರೆ. ಮೇಲಿನ ಕಾರ್ಯದ ಬಗ್ಗೆ ಮ। ರಾ। ಅತ್ತಾವರ ರಾಮರಾಯರು ಮತ್ತು ಮ। ರಾ। ಅರೆಬೈಲು ಭೋಜ ರಾಯರು ಈ ತಿಂಗಳ ತಾರೀಕು ೧೦ರಿಂದ ೨೦ರ ವರೆಗೆ ಕುಂದಾಪುರ ತಾಲೂಕು. ಮ. ರಾ. ಕಾರ್ನಾಡ ಸದಾಶಿವರಾಯರು ತಾ. ೭, ೮, ೯, ರಲ್ಲು ಬಜಪೆ, ಗುರುಪುರ, ಉಳ್ಳಾಲ, ಫರಂಗಿಪೇಟೆ, ತಾ. ೧೦ರಿಂದ ೨೦ರ ವರೆಗೆ ಉಡಿಪಿ, ಮತ್ತು ಕಾರ್ಕಳ ತಾಲೂಕುಗಳಲ್ಲಿ ಸಂಚರಿಸು ವರು. ಮಂಗಳೂರ ಪಟ್ಟಣದ ವೋಟರುಗಳ ಸಭೆಯು ನಾಳೆ ಸಾಯಂಕಾಲ ಸೆಂಟ್ ಪಾಲ್ಸ ಇಗರ್ಜಿ ಎದುರಿರುವ ಮೈದಾನಿನಲ್ಲಿ ಕೂಡತಕ್ಕದಿದೆ.

ಬರುವ ತಾ. ೨೭ನೇ ಶನಿವಾರ ಮಧ್ಯಾಹ್ನ ೧ಘಂಟೆಗೆ ಪುತ್ತೂರು ತಾಲೂಕು ಬೋರ್ಡ ಆಫೀಸಿನಲ್ಲಿ ಉಪ್ಪಿನಂಗಡಿ ತಾಲೂಕು ಬೋರ್ಡ ಮೆಂಬರರ ಸಭೆಯು ಕೂಡುವುದು. ಈ ಮೀಟಿಂಗಿನಲ್ಲಿ ಸದರಿ ತಾಲ್ಲೂಕು ಬೋರ್ಡ ಪ್ರೆಸಿಡೆಂಟರನ್ನು ಮತ್ತು ಡಿಸ್ಟ್ರಿಕ್ಟ ಬೋರ್ಡಿನ ಬಗ್ಗೆ ಮೂರು ಜನ ಮೆಂಬರನ್ನು ಚುನಾಯಿಸಲಾಗುವುದು.

ಗತ ವಾರದಲ್ಲಿ ಪಟ್ಟಣದಲ್ಲಿ ೨ ಪ್ಲೇಗು ಮರಣಗಳಾದವು. ಕಳೆದ ತಿಂಗಳಲ್ಲಿ ಒಟ್ಟು ೧೫೭ ಜನನಗಳು, ಮತ್ತು ೧೫೭ ಮರಣಗಳು.

ಬಂಟವಾಳ ಅಸಿಸ್ಟಾಂಟ ಸರ್ಜನರಾದ ಮ. ರಾ. ಕುಳಾಯಿ ರಾಘವೇಂದ್ರ ಕಿಣಿಯರಿಗೆ ಕೊಯಮುತ್ತೂರಿಗೆ ವರ್ಗವಾಗಿದೆ.

ಉಪ್ಪಿನಂಗಡಿ ತಾಲೂಕಿನ ಬೋರ್ಡ ಮತ್ತು ಯೈಡೆಡ್ ಶಾಲಾ ಉಪಾಧ್ಯಾಯರುಗಳ ಜನರಲ್ ಮೀಟಿಂಗು ಬರುವ ತಾರೀಕು ೧೩ನೇ ಶನಿವಾರ ಮಧ್ಯಾಹ್ನ ೧೨ಗಂಟೆಗೆ ಪುತ್ತೂರು ಬೋರ್ಡು ಹ್ಯಾಯರ್ ಎಲಿಮೆಂಟರಿ ಶಾಲೆಯಲ್ಲಿ ಕೂಡುವುದು.

ಕಾಸರಗೋಡು ತಾಲೂಕಿನ ಮೂಲಪಾಠಶಾಲಾ ಉಪಾ ಧ್ಯಾಯರುಗಳ ಜನರಲ್ ಮೀಟಿಂಗು ಇದೇ ತಿಂಗಳ ತಾ. ೨೭ನೇ ಮಧ್ಯಾಹ್ನ ೧ ಘಂಟೆಗೆ ಕಾಸರಗೋಡು ಬೋರ್ಡು ಹೈಸ್ಕೂಲಿನಲ್ಲಿ ಸೇರುವುದು.

[illegible]

[illegible] ಬಗ್ಗೆ ರೂ. [illegible] ಸಂಕ್ಷನ್ ಮಾಡಿ ಈ ಬಗ್ಗೆ ಬರುವ ವರ್ಷದ ಜಮಾ ಖರ್ಚಿನ ಅಂದಾಜು ಪಟ್ಟಿಯಲ್ಲಿ ಹಣ ಬಂಗಡಿಸಬೇಕೆಂದು ನಿರ್ಣಯಿಸಲಾಯಿತು.

[illegible] ಸೆಕೆಂಡರಿ ಶಾಲೆಯ ಬಗ್ಗೆ ರೂ. [illegible] ಖರ್ಚು ಮಾಡಿ [illegible] ಕಟ್ಟಿಸುವ ವಿಷಯವನ್ನು ಬಾಕಿ ಇಡಲಾಯಿತು.

ಉಡುಪಿಯಲ್ಲಿ ಮಠ ಬೀದಿಯಲ್ಲಿ ಕಲ್ಲುಕಲ್ಲು ಸ್ಲಾಬ್ ದುರುಸ್ತಿ ಮಾಡಿಸುವದಕ್ಕೆ ರೂ. [illegible], [illegible] ದಿಂದ [illegible] ರಸ್ತೆ ಕಟ್ಟಿಸುವದಕ್ಕೆ ರೂ. [illegible], [illegible] ಕೆಳಗಿನ ಬಂಗಾಲು ದುರುಸ್ತಿಗೆ ರೂ. [illegible], ಬಂಗರ ಮಂಜೇಶ್ವರ [illegible] ಬಳಿ ದುರುಸ್ತಿಗೆ ರೂ. [illegible], ಸಾಲ್ಕೇರಿಯ ಬಳಿ ರಸ್ತೆಯನ್ನು ಸರಿಗೊಳಿಸುವುದಕ್ಕೆ ರೂ. [illegible], ಬೆಳ್ತಂಗಡಿ ಆಸ್ಪತ್ರೆಗೆ ಎಮರ್ಜೆನ್ಸಿ ವಾರ್ಡಿಗೆ ರೂ. [illegible], [illegible] ಕೆರಾಲು ಕಟ್ಟೆಯ ರಸ್ತೆ ದುರುಸ್ತಿಗೆ ರೂ. [illegible], ಶಂಕರನಾರಾಯಣದಲ್ಲಿ ಡಾಕ್ಟರರ ಮನೆಗೋಸ್ಕರ ರೂ. [illegible] ಸಂಕ್ಷನ್ ಮಾಡಲಾಯಿತು.

ಶ್ರೀ

ಗಜಾನನ ಮೆಡಿಕಲ್ ಹೊಲ್

ಬಹು ನೂತನ ಅಲ್ಲೋಪತಿ ಮತ್ತು ಹೊಮಿಯೊಪತಿ

ಔಷಧ ಮಂದಿರ, ರಥಬೀದಿ, ಮಂಗಳೂರು.

ಇಷ್ಟಿಗೆ ಒಂದು ಸಾರಿ ಒಂದು ಪರೀಕ್ಷಿಸಿ!

ಆ ಮೇಲೆ ನೀವು ಬೇರೆಕಡೆ ಹೋಗಲಾರಿರಿ!!

ನಮ್ಮಲ್ಲಿ ಎಲ್ಲಾ ವಿಧವಾದ ಔಷಧ ದ್ರವ್ಯಗಳೂ, ಪೇಟಂಟ್ ಇಂಗ್ಲಿಷ ಔಷಧಗಳೂ, ಸುಗಂಧ ದ್ರವ್ಯಗಳೂ, ಸೋಪುಗಳೂ, ಫೌಂಟನ್ ಪೆನ್ ಗಳೂ, ಥರಮಾಮೀಟರ್ ಎಂಬ ಅತ್ಯುತ್ತಮ ಉಷ್ಣಮಾಪಕ ಯಂತ್ರಗಳೂ, ರಬ್ಬರಿನ ಹೂವ ಎನಿಮಾ ಇಂಜೆಕ್ಷನ್ ಚೀಲಗಳೂ ಏನ್ ಕ್ಯಾಪ್ ಮುಂತಾದ ಸರ್ವ ವಿಧವಾದ ಚಿಕಿತ್ಸಕ ಸಾಧನಗಳೂ ಸ್ಪಿರಿಟ್ ಮುಂತಾದವುಗಳಿಗೆ ಉಪಯುಕ್ತವಾದ ಸ್ಪಿರಿಟ್ ದ್ರವವೂ ನೀಲಗಿರಿಯ ಎಣ್ಣೆ ಎಂಬ ಯುಕಲಿಪ್ಟಸ್ ತೈಲವೂ ಬಹು ಸುಲಭ ಬೆಲೆಗೆ ತಾಜಾ ರೀತಿಯಲ್ಲಿ ದೊರೆಯುವವು

ಹೊಮಿಯೊಪತಿ ಮತ್ತು ಟಿಶ್ಯೂ ಔಷಧಗಳು

ನಿಮಗೆ ತಾಜಾ ಆಗಬೇಕಾದರೆ ನಮ್ಮಲ್ಲಿ ಬನ್ನಿ!

ಬಡವರಿಗೋಸ್ಕರ ಧರ್ಮಾರ್ಥ ಚಿಕಿತ್ಸೆ

ಪ್ರತಿನಿತ್ಯವೂ ಬೆಳಿಗ್ಗೆ ೯ ಗಂಟೆಯಿಂದ ೧೧ ಗಂಟೆಯ ವರೆಗೆ ಬಡವರಿಗೆ ಹೊಮಿಯೊಪತಿ ಮತ್ತು ಟಿಶ್ಯೂ ಔಷಧಗಳನ್ನು ರೋಗಿಯನ್ನು ಪರೀಕ್ಷೆ ಮಾಡಿ, ಧರ್ಮಾರ್ಥವಾಗಿ ಕೊಡುವೆವು

☞ ಔಷಧಗಳನ್ನು ಶಾಸ್ತ್ರೋಕ್ತವಾಗಿ ತಯಾರಿಸುವುದಕ್ಕೆ ನಮ್ಮಲ್ಲಿ ಜಾಣರಾದ ಅನುಭವಶಾಲಿಗಳಿರುವರು

ನಮ್ಮಲ್ಲಿ ಔಷಧಗಳು ಹಗಲಿರುಳು ದೊರೆಯುವವು.

ಸುಲಭ ಬೆಲೆ! ಶೀಘ್ರ ವ್ಯಾಪಾರ! ರೋಗಿಗಳು ಗುಣಹೊಂದುವುದು ಖಂಡಿತ!

☞ ಇಲ್ಲಿ ಒಂದುಸಾರಿ ಪರೀಕ್ಷಿಸಿ!

ಎಮ್. ರಾಮ ಕಾಮತ್,
ಪ್ರೊಪ್ರೈಟರ್.

ಲೂಯಿಸರ ಎಲಿಕ್ಸಿರ್ ಫೊರ್ ಹೆಲ್ತ್.

ಎಂಬುವ ಪಾನಕವು ಚಾ ಮತ್ತು ಕಾಫಿಗಳಿಗಿಂತ ಅತ್ಯಂತ ಹಿತಕರವಾದ ಪಾನವಾಗಿದ್ದು ಬಹುಮೂತ್ರಪೀಡೆ ಬಾರದಂತೆ ಆರೋಗ್ಯ ಕಾಪಾಡುತ್ತದೆ ಬಾಯಾರಿಕೆ ತಗ್ಗಿಸುತ್ತದೆ ಮೂತ್ರದ ಹಲವು ದೋಷಗಳನ್ನು ಹೋಗಲಾಡಿಸುತ್ತದೆ. ಒಮ್ಮೆ ಉಪಯೋಗಿಸಿದರೆ ಮತ್ತೆ ಇದನ್ನು ಬಿಡರು ಪರಿಕ್ಷಾರ್ಥವಾಗಿ ಒಂದು ಸೀಸೆ ತರಿಸಿರಿ.

8 ಔನ್ಸಿನ ಸೀಸೆಗೆ ಕ್ರಯ ರೂ 2—8—0 ಮಾತ್ರ

ಡಾಯಬೆಟೋನ್.

ಇದು ಬಹುಮೂತ್ರದ ಪೀಡೆಗೆ ಅತ್ಯುತ್ತಮ ಔಷಧ ಪೂರ್ಣ ಗುಣಮಾಡುತ್ತದೆ ರೋಗಿಗಳಿಗೆ ಅಮೃತಪ್ರಾಯವಾಗಿದೆ. 8 ಔನ್ಸಿನ ಸೀಸೆಗೆ ರೂ. 5 ಮಾತ್ರ ಅಂಚೆಹಾಸಲು ವಗೈರೆ ಇದರಲ್ಲಿ ಸೇರಿಲ್ಲ. ಸೇವನೆಯ ಸೂಚನೆಗಳು ಸೀಸೆಯೊಂದಿಗೆ ಸಿಗುವುವು

P. M. Kamath & Co.
Chemists & General Merchants,
New Court Road, MANGALORE.

ಅಥವಾ ಕುಂದಾಪುರದಲ್ಲಿ ಈ ಔಷಧವನ್ನು ತಯಾರಿಸುವ ಪ್ರೈ ಕೆ ಆರ್. ಲೂವಿಸರನ್ನು ವಿಚಾರಿಸಿದರೆ ಈ ಔಷಧವನ್ನು ಹೊಂದಬಹುದು.

"ಇಂಡಿಯನ್ ಮೋಟರ್ ಸರ್ವಿಸ್"

ಈ ಸರ್ವಿಸಿನ ಮೋಟರ ಬಸ್ಸುಗಳು ಮಂಗಳೂರಿನಿಂದ ಬಂಟ್ವಾಳಕ್ಕೂ, ಬೆಳ್ತಂಗಡಿಗೂ, ಪುತ್ತೂರಿಗೂ, ಗುರುಪುರಕ್ಕೂ ವ ಕಾರ್ಕಳ ಮಾರ್ಗವಾಗಿ ಉಡುಪಿಗೂ ವ ಆಯಾಯ ಸ್ಟೇಶನುಗಳಿಂದ ವಾಪಾಸು ಮಂಗಳೂರಿಗೂ ಚಲಾವಣೆ ಆಗುವವು.

ಬೇರೆ ಯಾವ ಮಾಹಿತಿ ಬೇಕಾಗಿದ್ದರೆ ನಮ್ಮ ಕದ್ರಿ ವ ಹಂಪನಕಟ್ಟೆ ಆಫೀಸುಗಳಲ್ಲಿ ವ ಇತರ ಬ್ರೇಂಚ್ ಆಫೀಸುಗಳಲ್ಲಿ ವಿಚಾರಿಸಿದ್ದಲ್ಲಿ ತಿಳಿಯಬರುವದು.

ಹಂಪನ ಕಟ್ಟೆ, ಮಂಗಳೂರು, ಮಹಾದೇವ ಬಿಲ್ಡಿಂಗ್ಸ್ — ಎ. ಸಿ. ಆಂದ್ರಾದೆ
ಪ್ರೊಪ್ರೈಟರ್.

ಪುಸ್ತಕಗಳು.

ವಿಚಿತ್ರ ೧—೮—೦, ಸುಭದ್ರೆ ೦—೬—೦, ರಾಮಾಯಣ ಸಂಗ್ರಹ ಬಾಲಕಾಂಡ ೦—೬—೬, ಶ್ಯಾಮಕುಬ್ಜ ೦—೧೦—೦, ಚಿಕ್ಕ ಉಪಾಧ್ಯಾಯರ ಸುಖಸಪ್ತತಿ ೩—೦—೦, ಚಮೇಲಿ ೦—೧೨—೦, ಸಚಿತ್ರ ಆಂಗ್ಲ ಭಾಷಾ ಪ್ರಕಾಶಿಕಾ ಮೂರು ಭಾಗಗಳುಳ್ಳದ್ದು ೨—೮—೦.

ತೆಲುಗು ಅಕ್ಷರದ ಸಂಗೀತ ಪುಸ್ತಕಗಳು.

ಸಂಗೀತ ಪ್ರದಾಯಿನಿ ೩—೩—೦, ಗಾಂಧರ್ವ ಕಲ್ಪವಲ್ಲಿ ೩—೦—೦, ಸಂಗೀತ ಕೃತಿದರ್ಪಣ ಪ್ರಥಮ ಭಾಗ ೨—೨—೦, ಎರಡನೇ ಭಾಗ ೨—೩—೦, ಸಂಗೀತ ಸ್ವರ ಪ್ರಸ್ತಾರಸಾಗರ ೫—೮—೦. ಅಡ್ವಾನ್ಸ್ ತಿವರ್ಕ.

ವಿಳಾಸ:—

ಎಚ್. ಎಸ್. ರಾವ್. ಬ್ರದರ್
ಚಿಕ್ಕಪೇಟೆ, ಬೆಂಗಳೂರು ಸಿಟಿ.

ಮದ್ರಾಸ್ ಸರ್ಕಾರದವರಿಂದ 1920ನೇ ವರ್ಷದ ಪರೀಕ್ಷೆಗಳಿಗೆ ನೇಮಿಸಲ್ಪಟ್ಟಿರುವ

ಕನ್ನಡ ಪಾಠಪುಸ್ತಕಗಳು

	ರೂ.	ಆ.	ಪೈ.		ರೂ.	ಆ.	ಪೈ.
ರಾಮಾಯಣ ಸಂಗ್ರಹ— ಬಾಲಕಾಂಡ.	0	6	0	ಚಂದ್ರಹಾಸ	0	2	0
ಸುಭದ್ರೆ	0	8	0	ಗುಣಸಿರೋಮಣಿ	0	6	0
ಹರಿಮಾಲಾ	0	12	0	ನೀತಿಚಿಂತಾಮಣಿ ಭಾಗ I	0	4	0
ಪದ್ಯಸಾರ ಭಾಗ I	0	8	0	,, ,, II	0	3	0
ಅಕ್ಬರ್ ಚರಿತ್ರೆ	1	1	0	,, ,, III	0	4	6
ರಾಜಶೇಖರ ಚರಿತ್ರೆ	1	0	0	ಹೊಸ ಪುಸ್ತಕಗಳು			
ಸುಮತಿಮದನಕುಮಾರ ಚರಿತ್ರೆ I	0	8	6	ವಿಷವಲ್ಲರಿ	0	6	0
ಅಧಿಕಮಾಸಗಳ ಪುಸ್ತಕ	0	6	0	ಸುಶೀಲ	0	1	6
ಸಾವಿತ್ರೀ ಚರಿತ್ರೆ	0	2	3	ಚಂದ್ರಮುಖಿ	0	8	0
ರಮಾನಂದ	0	10	0	ಸಂತಾಪಕ	0	6	0
ಸುವ್ರತ	0	13	0	ಅಬಲಾಸಚ್ಚರಿತ್ರ ರತ್ನಮಾಲೆ	2	0	0
ಪ್ರಬಂಧಮಂಜರಿ	0	14	0	ನಿರ್ಮಲೆ	0	12	0
ಪದಾರ್ಥವಿಜ್ಞಾನಶಾಸ್ತ್ರ	0	14	0	ಪದತ್ರಯ (ಬಾಲವ್ಯಾಕರಣ)	0	3	6
ಜ್ಯೋತಿಶ್ಶಾಸ್ತ್ರ	1	0	0	ಹಿಂದೂ ವ್ರತವಿವೇಕ	0	10	0
ಪ್ರಹ್ಲಾದ	0	2	0	ಪದ್ಮಿನಿ	0	12	6
ಧ್ರುವ	0	2	0	ದಾಕ್ಷಾಯಣಿ	0	8	0
				ವ ಹಾರಾಣಿ ಲಕ್ಷ್ಮೀಬಾಯಿ	0	12	0

ಇತ್ಯಾದಿ ಎಲ್ಲಾ ಸ್ಕೂಲ್ ಪುಸ್ತಕಗಳೂ ನಮ್ಮಲ್ಲಿ ಸುಲಭ ಬೆಲೆಗೆ ದೊರೆಯುತ್ತವೆ.

ಎಂ. ಎಸ್. ರಾವ್ ಕಂಪೆನಿ,
ಪುಸ್ತಕವ್ಯಾಪಾರಿಗಳು, ಬೆಂಗಳೂರು ಸಿಟಿ.

ಪ್ರಖ್ಯಾತಿಪಟ್ಟ ಮಂಗಳೂರು ನಶ್ಯದ ಹುಡಿ.

ಸೊಗಸಾದ ಹೊಗೆಸೊಪ್ಪನ್ನು ಉಪಯೋಗಿಸಿ ಒಳ್ಳೇ ಅನುಭವಸ್ಥರಿಂದ ತಯಾರಿಸಲ್ಪಡುತ್ತದೆ. ಈ ನಶ್ಯವು ಒಂದೆರಡು ತಿಂಗಳವರೆಗಾದರೂ ಕೆಡುವುದಿಲ್ಲ.

ರಾತಲ್ಲ 1ರ ಕ್ರಯ 3—4—0. ಚೆಟ್ಟಿಗೆ ಕಳುಹಿಸುವಾಗ ರೂ. 3 ನಾಸಿಕ ಚೂರ್ಣ ಇದು ಕಂಠದ ಮೇಲಿನ ಭಾಗದ ರೋಗಗಳನ್ನೂ ಗುಣಪಡಿಸುತ್ತದೆ. ಕೂಲಿ 1ರ ಕ್ರಯ 0-8-0. ವಿ. ಪಿ. ಖರ್ಚು ಪ್ರತ್ಯೇಕ. ಸ್ಯಾಂಪಲನ್ನು ಅಪೇಕ್ಷಿಸುವವರು 2 ಆಣೆ ಸ್ಟಾಂಪನ್ನು ಕಳುಹಿಸುವದು. ರಖಂ ಪಡಕೊಳ್ಳುವವರಿಗೆ ಯೋಗ್ಯವಾದ ಕಮಿಶನ್ ದೊರಕುವುದು.

ನಮ್ಮ ವಿಳಾಸ:—

ಎಮ್. ಪದ್ಮನಾಭ ಭಂಡಾರಿ ಎಂಡ್ ಕೊ.,
ರಥಬೀದಿ, ಮಂಗಳೂರು.

ಮುಫತ್ತು!! ಇಂಥಾದ್ದು ಬೇಕು.

ಸರಕಾರದಲ್ಲಿ ರಿಜಿಸ್ಟರು ಮಾಡಲ್ಪಟ್ಟ ನಂ. 253.

ಒಂದಾಣೆ ಸ್ಟಾಂಪಿನೊಳಗೆ ರುಜುವಾತು ಶಿಕ್ಷೆಯುಳ್ಳ ರಶೀದು— ಈ 32 ಮಾತ್ರೆಗಳುಳ್ಳ ಬಾಟ್ಲಿಗಳನ್ನು ಖರೀದಿಸುವವರಿಗೆ ಕೊಡಲ್ಪಡುತ್ತದೆ. ಈ ಮಾತ್ರೆಗಳನ್ನು ಸೇವಿಸಿ ಗುಣತೋರಿಸದಿದ್ದರೆ ಮನಸಾಕ್ಷಿಯಾಗಿ ಆ ರಶೀದಯೊಳಗೆ ದಸ್ಕತುಮಾಡಿ ಒಂದು ತಿಂಗಳೊಳಗಾಗಿ ವಾಪಸು ಕೊಟ್ಟರೆ ಬಾಟ್ಲಿಯ ಕ್ರಯವನ್ನು ವಾಪಸು ಮಾಡುತ್ತೇವೆಂದು ಪ್ರತಿಜ್ಞೆಯನ್ನು ನಾವು ದೃಢವಾಗಿ ಮಾಡುತ್ತೇವೆ.

ಗುಲ್‌ಷನ್ ಜೋಬನ್.

ಶಕ್ತಿವರ್ಧಕ! ಧಾತುಪುಷ್ಟಿಕ!! ರೋಗನಿವಾರಕ!!!

ಈ ಮಾತ್ರೆಗಳು ಸೇವಿಸಿದ ಪ್ರಥಮ ದಿವಸದಲ್ಲಿಯೇ ಆಶ್ಚರ್ಯಕರವಾದ ಗುಣಗಳನ್ನು ತೋರಿಸುವವು. ಕಳೆಗುಂದಿದ ಕಪೋಲಗಳಿಗೆ ಪುಷ್ಟಿ ಮತ್ತು ಕಾಂತಿಯನ್ನು ಕೊಟ್ಟು, ಶರೀರಕ್ಕೆ ಧಾತುಪುಷ್ಟಿ ಸುಖಸಮೃದ್ಧಿಗಳನ್ನು ಕೊಡುತ್ತವೆ. ಕಟಿಶೂಲ, ವಾಯುರೋಗ, ಕ್ಷಯ, ಶ್ವಾಸ, ಕಾಸ, ಉದರಶೂಲೆ, ಅಜೀರ್ಣ, ಮೂತ್ರರೋಗ, ಮಲಬದ್ಧತೆ, ಜ್ವರಗಳು, ಮೂಲವ್ಯಾಧಿ, ಅನಿಯಮಿತ ಋತು ಇವುಗಳನ್ನು ಸಮೂಲನಾಶಮಾಡಿ, ರಕ್ತಶುದ್ಧಿಯೂ ವೃದ್ಧಿಯೂ ಹೊಂದಿ ಚರ್ಮವ್ಯಾಧಿಗಳನ್ನು ನಿವಾರಣೆಮಾಡುತ್ತವೆ.

ಬಾಟ್ಲಿ 1ಕ್ಕೆ ರೂ. 1. 3ಕ್ಕೆ ರೂ. 2—10—0. ವಿ. ಪಿ. ಖ. ಬೇರೆ.

ಏಜಂಟರುಗಳು ಬೇಕು. ಎಲ್ಲ ಸ್ಥಳಗಳಲ್ಲಿ ಸಿಕ್ಕುವುದು.

ವಿಳಾಸ:—ದಿ. ಗುಲ್‌ಷನ್ ಜೋಬನ್ ಕಂಪೆನಿ, ಬೊಂಬಾಯಿ 3.



ಜಗತ್ಪ್ರಸಿದ್ಧವಾದ ಅನೇಕ ರೋಗಗಳಿಗೆ ಒಂದೇ ಔಷಧವು.

ಇಂಡಿಯಾ ಸರಕಾರದಲ್ಲಿ ಸನ್ ೧೮೬೭ನೇ ಇಸವಿಯ ೨೫ನೇ ಆಕ್ಟಿನಂತೆ ರಿಜಿಸ್ಟರ ಮಾಡಲ್ಪಟ್ಟ

ಅರ್ಕುಶಫಾ ಅಥವಾ ಆರೋಗ್ಯಬಿಂದು.

ಈ ಅರ್ಕುಶಫಾ ಎಂಬ ಔಷಧವು ಯಾವತ್ತು ರೋಗಕ್ಕೆ ಮನವಂತವಾಗಿ ತಾ. ೧೦-೮-೧೯೦೮ನೇ ಇಸವಿಯಿಂದ ತಾ. ೧-೯-೧೯೧೮ನೇ ಇಸವಿಯವರೆಗೆ ಮೂವತ್ತು ಸಾವಿರ ಬಾಟಲಿಗಳು ಖರ್ಚಾದವು. ಮತ್ತು ಸನ್ ೧೯೧೮ನೇ ಇಸವಿ ಆಕ್ಟೋಬರ್ ತಿಂಗಳಲ್ಲಿ ಇನ್‌ಫ್ಲ್ಯುಯೆಂಜಾ ಜ್ವರಕ್ಕೆ ಒಂದೇ ತಿಂಗಳಲ್ಲಿ ಒಂಭತ್ತು ಸಾವಿರ ಬಾಟಲಿಗಳು ಖರ್ಚಾದವು. ಇಂತು ಈವತ್ತಿನ ವರೆಗೆ ಸಣ್ಣ ದೊಡ್ಡ ಬಾಟ್ಲಿಗಳು ಕೂಡಿ ಮೂವತ್ತೊಂಭತ್ತು ಸಾವಿರ ಬಾಟಲಿಗಳು ಖರ್ಚಾದವು. ಅಂದ ಮೇಲೆ ಈ ಔಷಧವು ಎಷ್ಟು ಮೌಲ್ಯವಾನ ಅದೆ ಇದು ಯಾವತ್ತರೂ ತಾವೇ ಅನುಭವಕ್ಕೆ ತಂದು ಪ್ರತಿಯೊಬ್ಬರು ತಮ್ಮ ಸಂಗ್ರಹದಲ್ಲಿ ಒಂದು ಬಾಟ್ಲಿ ಇಟ್ಟುಕೊಂಡು ಅವಶ್ಯಕವೇ ಎಂದು ತಿಳಿದು ಸ್ವೀಕಾರಮಾಡುತ್ತಿರಬೇಕು. ಈ ಆರೋಗ್ಯಬಿಂದು ಇಡೀ ಕರ್ನಾಟಕ ದೇಶಕ್ಕೆಲ್ಲಾ ಹೋಗಿ ರೋಗಿಗಳು ಈ ಅರ್ಕುಶಫಾದಿಂದಲೇ ಗುಣಹೊಂದಿದ ಬಗ್ಗೆ ಮತ್ತು ಯಾವತ್ತು ರೋಗಕ್ಕೆ ಉಪಯೋಗ ಆದದ್ದು ಯುಕ್ತ ಎಷ್ಟೋ ಇನಾಮು ಸರ್ಟಿಫಿಕೇಟುಗಳು ಸಹ ದೊರೆದಿರುತ್ತವೆ. ಅವು ಬರೆಯಲಿಕ್ಕೆ ಕಾಗದವು ಸಾಲದು, ಇಂಥ ಅಮೂಲ್ಯವಾದ ಈ ಔಷಧವನ್ನು ಎಲ್ಲರೂ ಸ್ವೀಕರಿಸಿ ರೋಗರಹಿತರಾಗುವರೆಂದು ನಂಬುತ್ತೇನೆ. ರೋಗದ ಪರೀಕ್ಷೆಯ ಸಲುವಾಗಿ ಬೇರೆ ಡಾಕ್ಟರರ ಮತ್ತು ವೈದ್ಯರ ಜರೂರ ಬೀಳುವುದಿಲ್ಲ. ಅಂದ ಮೇಲೆ ಈ ಆರೋಗ್ಯಬಿಂದುವಿನ ಮೇಲೆ ದುರ್ಲಕ್ಷ್ಯಮಾಡದೆ ಕೆಳಗೆ ಬರೆದ ರೋಗಗಳ ಮೇಲೆ ಉಪಯೋಗಮಾಡಿ ರೋಗ ನಿವಾರಣ ಮಾಡಿಕೊಳ್ಳಬೇಕು.

ರೋಗದ ನಾಮಗಳು.

ಕ್ಷಯರೋಗ, ಹಡದರೋಗ, ಪಾಂಡುರೋಗ, ಗುಲ್ಮರೋಗ, ಮೂಲರೋಗ, ಮಹಾಮಾರಿ, (ಕಾಲರಾ), ಪ್ಲೇಗು, ಚಳಿಜ್ವರ, ವಿಷಮಜ್ವರ, ಇನ್‌ಫ್ಲ್ಯುಯೆಂಜಾ ಜ್ವರ, ಅನೇಕ ಪ್ರಕಾರದ ಜ್ವರ, ಗಂಡಮಾಲೆ, ಶಿರಶೂಲೆ, ಮೂಗಿನೊಳಗಿನ ಪೀನಸಿ, ಮೊದಲಾದ ರೋಗವು, ಕಣ್ಣಿನೊಳಗೆ ಹೂವು ಬೀಳೋದು ಮತ್ತು ಕಣ್ಣುನೋವು, ದಮ್ಮು, ಕೆಮ್ಮು, ಶ್ವಾಸ, ಅಡಗ್ಗೆ, ಇದ್ದರಿಕಿ, ಅಜೀರ್ಣ, ಹೊಟ್ಟೆಶೂಲಿ, ಪಕ್ಕಶೂಲಿ, ಅರದಲೆಶೂಲಿ, ಪದಶೂಲಿ, ವಾತಶೂಲಿ, ರೇಕ್ಷಡು, ಗುಪ್ತವ್ಯಾಧಿ ಬೇನೆ, ಹುರಕ. ಕಜ್ಜಿ, ಗಜಕರ್ಣ, ಕದ್ದು, ಇಸಬು, ಘಾಯವ್ರಣ, ನಾರುಹುಣ್ಣು, ಸ್ತ್ರೀಯರ ಮುಟ್ಟು ಶೂಲಿ, ಹಡದ ನಂಜು, ಸಣ್ಣ ಕೂಸುಗಳ ಬಾಲಗ್ರಹ, ಕೋಡಗೆಮ್ಮು, ಅರದಿ, ಮುಟ್ಟುದೋಷ, ಹೊಟ್ಟೆ ದೊಡ್ಡದಾಗೋದು, ಮೈ ಹೊರಬೀಳೋದು, ಮತ್ತು ಸಣ್ಣ ಕೂಸುಗಳಿಗೆ ಮೃದ್ವಂಗಿಯು ಸಹ ತಿಳಿಯದ ಇದ ಅನೇಕ ರೋಗಗಳು, ಚೇಳು ಮತ್ತು ಸರ್ಪದಂಶ ಇದರ ಹೊರತು ಇನ್ನೂ ಅನೇಕ ರೋಗಗಳು ಖಾತ್ರಿಯಿಂದ ಗುಣವಾಗುತ್ತವೆ. ಈ ಆರೋಗ್ಯಬಿಂದುವಿನ ಕ್ರಯ ಅಮೌಲ್ಯ ಕಂಡು ಬಂದಲ್ಲಿ ಬಡವರಿಗೂ ಧನವಂತರಿಗೂ ಸರಿಯಾಗಿ ಬಹಳ ಕಡಿಮೆ ಕ್ರಯ ಇಟ್ಟಿರುತ್ತದೆ. ಒಂದುಕಾಲುತೊಲೆ ಬಾಟಲಿ ಒಂದಕ್ಕೆ ೪ ರೂಪಾಯಿ. ನಮೂನೆ ಬುಡ್ಡಿಕ್ಕೆ ೨ ಆಣೆ, ಕೂಡದ ಬಾಟ್ಲಿ ಒಂದಕ್ಕೆ ೮ ಆಣೆ. ವಿ. ಪಿ. ಖರ್ಚು ಬೇರೆ ಬೀಳುವದು. ಒಂದು ಡಜನ್ ಬಾಟ್ಲಿ ತಕ್ಕೊಂಡರೆ ನಾಲ್ಕು ಬಾಟ್ಲಿಗಳನ್ನು ಕಮಿಷನ್ ಕೊಡುತ್ತೇವೆ. ಇದಕ್ಕೆ ಎಂಟು ಆಣೆ ಖರ್ಚು ಬರುವದು. ೧ರಿಂದ ೧೧ ಬಾಟಲಿಗಳ ವರೆಗೆ ತೆಗೆದುಕೊಂಡರೆ ಕಮಿಷನ್ ಇರುವದಿಲ್ಲ. ಇದಕ್ಕೆ ನಾಲ್ಕು ಆಣೆ ಖರ್ಚು ಬರುವದು. ಒಂದುಕಾಲುತೊಲೆಯ 3 ಬಾಟಲಿಗಳು ಒಂದೆ ಸಾರಿ ತಕ್ಕೊಂಡರೆ ಒಂದು ಬಾಟಲಿ ಕಮಿಷನ್ ಕೊಡುತ್ತೇವೆ. ಇದಕ್ಕೆ ಖರ್ಚು ಎಂಟು ಆಣೆ ಬರುವದು. ನಮ್ಮ ಔಷಧವು ಪೋಸ್ಟ ಹೊರಟರೆ ದಾರಿ ತಕ್ಕೊಳ್ಳುತ್ತೇವೆ. ಮತ್ತು ಪಟ್ಟಿನ ಮಾಡಿ ವ ಕೆಲಸಕ್ಕೆ ಬೇಕಾದಲ್ಲಿ ಪೋಸ್ಟ ಕಳೇಟ ಬಗಸ ಇದರ ಹೊರತು ದೊರೆಯಲಿಕ್ಕಿಲ್ಲ. ಅನುಪಾನ ಪತ್ರಗಳು ಕನ್ನಡ, ಮರಾಠಿ, ಮುಸಲ್ಮಾನಿ ಭಾಷೆಗಳಲ್ಲಿ ಛಾಪಿಸಿರುತ್ತವೆ. ಪಸಂದಿ ಪ್ರಕಾರ ಬಾಟ್ಲಿಯು ಸೋಬತ ಸಿಗುವವು. ನಿಮ್ಮ ವಿಳಾಸ ಇಂಗ್ಲೀಷ್ ಅಥವಾ ಕನ್ನಡದಲ್ಲಿ ನಾಮ ಮತ್ತು ಪೋಸ್ಟ ವಗೈರ ಸ್ಪಷ್ಟವಾಗಿ ಬರೆಯುತ್ತಿರಬೇಕು,

ಹೆಚ್. ಎಂ. ಮುಲ್ಲಾ, ಸಂಪಾದಕ ಅರ್ಕುಶಫಾ,
33 ಹೆಡ್ ಆಫೀಸ್ ತಹಾಪೂರ, (ಬೆಳಗಾಂವ).

Mr. ALEX ALVAREZ Dentist.

OF MANDALAY, UPPER BURMA.

Will attend patients here for the following in Particular:—

Charges Moderate.

1. Painless extraction of teeth. 2. Making of false teeth. 3. Filling the teeth with silver, gold, porceline. 4. Gold bridge and Crowns. 5. Porceline Crowns. 6. Cleaning the teeth. 7. Pyorrhoea treatment.

Can be consulted at:—

The Electro Homoeopthic Dispensry,
Hampankatta, MANGALORE.

ಮಿ. ಆಲೆಕ್ಸ್ ಆಲ್ವಾರಿಸ್ ದಂತವೈದ್ಯ.

ಇವರು ಹಲ್ಲು ಬೇನೆಯಿಂದ ನರಳುತ್ತಿರುವವರ ಹಲ್ಲುಗಳನ್ನು ಸ್ವಲ್ಪವೂ ನೋಯದಂತೆ ಬುಡಸಹಿತ ಕಿತ್ತು ತೆಗೆಯೋದು, ಕೃತ್ರಿಮ ಹಲ್ಲುಗಳನ್ನು ಮಾಡಿ ಇಡೋದು, ಹಲ್ಲುಗಳಲ್ಲಿ ಉಂಟಾದ ರಂಧ್ರಗಳನ್ನು ಬೆಳ್ಳಿ, ಬಂಗಾರ, ಪಿಂಗಾಣಿ ಇವುಗಳಿಂದ ಮುಚ್ಚೋದು, ಬಂಗಾರದ ಕೃತ್ರಿಮ ದಂತಪಾಳಿಯನ್ನು ಬುಡ ಸಹಿತ ಇರಿಸೋದು, ಪಿಂಗಾಣಿ ಹಲ್ಲುಮಾಲೆಯನ್ನು ಇಡೋದು ಮತ್ತು ಹಲ್ಲುಗಳನ್ನು ಶುಚಿಮಾಡೋದು ಮುಂತಾದ ದಂತಚಿಕಿತ್ಸೆಯನ್ನೂ ಕಲೆಪಾಕ ಚಿಕಿತ್ಸೆಯನ್ನೂ ಮಾಡುವರು. ಇವರು ಹಂಪನಕಟ್ಟೆಯಲ್ಲಿರುವ ಮಿ| ಎ. ಫೆರ್ನಾಂಡಿಸ್, ಇಲೆಕ್ಟ್ರೊ ಹೊಮಿಯೋಪಥಿಕ್ ಡಿಸ್ಪೆನ್ಸರಿಯಲ್ಲಿ ಮೊಕ್ಕಾಂ ಮಾಡಿರುತ್ತಾರೆ.

BANK OF MADRAS.

ಮದ್ರಾಸ್ ಬ್ಯಾಂಕ್.

ಹೆಡ್ ಆಫೀಸು: ಮದ್ರಾಸ್,

ಮೂಲಧನ . . . . ರೂ. 75,00,000
ಕ್ಷೇಮನಿಧಿ . . . . ,, 45,00,000.

ಸೇವಿಂಗ್ಸ್ ಬ್ಯಾಂಕ್.

— ವರ್ಷಕ್ಕೆ ಸೇಕಡಾ 4ರ ಬಡ್ಡಿ —

ಇದರಲ್ಲಿ ಠೇವಣಾತಿಗಳು ಕೆಳಗಿನ ಶರ್ತಗಳಲ್ಲಿ ಪಡೆಯಲಾಗುವವು.

ಒಂದು ವರುಷದ ಅವಧಿಯಲ್ಲಿ ಒಟ್ಟು ರೂ. 5,000ಕ್ಕೆ ಮಿಗದ ಮೊಬಲಗನ್ನು ಠೇವಣಾತಿ ಯಾಗಿಡಬಹುದು.

ಹೀಗೆ ಠೇವಣಾತಿ ಇಟ್ಟ ಪ್ರತಿ ಹತ್ತು ರೂಪಾಯಿಗಳಿಗೆ ಸೇಕಡಾ 4ರಂತೆ ರೂ. 10,000ಕೆ ಮೀರದ ಮೊಬಲಗಿನ ವರೇಗೆ ಬಡ್ಡಿ ಎಣಿಸಲಾಗುವುದು.

ನಿಬಂಧನೆಗಳ ಪ್ರತಿಗಳನ್ನು ಬರೆದು ಬ್ಯಾಂಕಿನಿಂದ ಪಡೆಯಬಹುದು.

ಸಿ. ಎಲ್. ಗೊರ್ಡನ್,
ಏಜಂಟ್, ಮದ್ರಾಸ್ ಬ್ಯಾಂಕ್, ಮಂಗಳೂರು.

"ವೈದ್ಯಾಮೃತ ಮಂದಿರಂ"

ಎಂಬ

ನಮ್ಮ ಆಯುರ್ವೇದ ವೈದ್ಯಶಾಲೆಯಲ್ಲಿ ಶಾಸ್ತ್ರೋಕ್ತವಾಗಿ ತಯಾರಿಸಲ್ಪಟ್ಟ ಎಲ್ಲಾ ತೈಲಗಳೂ, ಆಸವಾರಿಷ್ಟಗಳೂ, ಕಷಾಯಗಳೂ, ದ್ರವದ್ರಾವಕಗಳೂ, ಭಸ್ಮಗಳೂ, ಚೂರ್ಣಗಳೂ, ಮಾತ್ರೆಗಳು ಇತ್ಯಾದಿ ಔಷಧಿಗಳೂ ಮತ್ತು ಕಾಶ್ಮೀರ, ನೇಪಾಲ ದೇಶಗಳಿಂದ ತರಿಸಿದ ಕಸ್ತೂರಿ, ಪಚ್ಚ ಕರ್ಪೂರ, ಕುಂಕುಮಕೇಸರ ಮುಂತಾದವುಗಳೂ ಸುಲಭವಾದ ಕ್ರಯಕ್ಕೆ ದೊರಕುತ್ತವೆ. ಪರಸ್ಥಳದವರು ರೋಗದ ಪ್ರಕೃತಿಯನ್ನು ವಿಶದವಾಗಿ ಬರೆದು ತಿಳಿಸಿದರೆ ಅಗತ್ಯವಿರುವ ಔಷಧಿಗಳನ್ನು ಅನುಪಾನಪತ್ರಿಕೆ ಸಮೇತ ವಿ. ಪಿ. ಮೂಲಕ ಕಳುಹಿಸುವೆವು.

ವಿಳಾಸ:— ಕೆ. ಕೆ. ನಾಯರ್
ಎಂಡ್ ಬ್ರದರ್ಸ್,
ವೈದ್ಯಾಮೃತ ಮಂದಿರಂ,
ನೀಲೇಶ್ವರ, ದ. ಕನ್ನಡ

ಕ್ಷಿಪ್ರಗುಣಕಾರಿ! ಮಹೌಷಧ!!

ಸಿರಪ್ ವಾಸಕಾ.

ಕೆಮ್ಮು, ಶೀತ, ಜ್ವರ, ಪಕ್ಕೆಗಳ ವೇದನೆ, ರಕ್ತಕಾಸ, ಕ್ಷಯ, ಉಬ್ಬಸ, ಬ್ರಾಂಕಾಯಿಟಿಸ, ನ್ಯುಮೋನಿಯಾ ಮುಂತಾದ ಶ್ವಾಸಕೋಶದ ಯಾವತ್ತು ರೋಗಗಳಿಗೆ ಅತ್ಯುತ್ತಮವಾದ್ದು. ಪ್ರಾಚೀನಾರ್ಯ ಕಾಸರೋಗಗಳಿಗೆ ವಿಶೇಷ ಗುಣಕಾರಿ ಎಂದು ಹೆಸರುಗೊಂಡ "ಆಡಸೋಗೆ" ಎಂಬ ಗಿಡಮೂಲಿಕೆಯಿಂದ ತಯಾರಿಸಲ್ಪಟ್ಟಿದ್ದು, ಇದರಿಂದ ದೂಷಿತವಾದ ಶ್ಲೇಷ್ಮವು ಬೇಗನೆ ಕಳೆವಾಗುವದರಿಂದ ಕೆಮ್ಮು ಬರುವಾಗ ಕಷ್ಟವಾಗುವದಿಲ್ಲ. ರುಚಿಯಲ್ಲಿ ಸಿಹಿಯಾಗಿರುವದರಿಂದ ಮಕ್ಕಳಿಗೆ ಇದರ ಸೇವನೆಯಲ್ಲಿ ಬಹಳ ಪ್ರೀತಿ.

ಬಾಟ್ಲಿ 1ರ ಕ್ರಯ ಬರೇ ಒಂದು ರೂಪಾಯಿ ಮಾತ್ರ.

ಬಂಗಾಲ ಕೆಮಿಕಲ ಮತ್ತು ಫರ್ಮಾಸ್ಯೂಟಿಕಲ ವರ್ಕ್ಸ್ ಕಂಪೆನಿ ಲಿಮಿಟೆಡ್, ಕಲ್ಕತ್ತಾ,

ಸೋಲ ಏಜಂಟ್ಸ್ —

ಪಿ. ಎ. ಪೈ ಬ್ರದರ್ಸ್, ಉಡುಪಿ.
ಮಿಠಾಕಾರ್ಕರ ಬ್ರದರ್ಸ್, ಮಂಗಳೂರು,
ಇವರಲ್ಲಿಯೂ ಸಿಗುವದು.

ಗೊನೊಕ್ಯೂರಾ.

ಮೇಹ ರೋಗಕ್ಕೆ (Gonorrhea) ಪರಮೌಷಧವು.

ಎಲ್ಲಾ ತರದ ಮೇಹಗಳಲ್ಲಿ, ದಪ್ಪವಾದ ಕೀವಿನಂಥಾ ಮೇಹವು ಹರಿಯುವವಕ್ಕೆ, ಮೂತ್ರದ್ವಾರದಲ್ಲಿಯ ಉರಿ, ಹಳದಿವರ್ಣದ ಅಥವಾ ಹಸುರುವರ್ಣದ ಕರಣ ಉರಿಯುಳ್ಳ ಮೇಹವು ಹರಿಯುವದಕ್ಕೆ, ಮೂತ್ರಮಾಡುವಾಗ ಇಂದ್ರಿಯದಲ್ಲಿ ಉರಿ, ಮುಂತಾದ ಮೇಹ ಸಮ್ಮಂಧವಾದ ಎಲ್ಲಾ ಚುರುಕುರೋಗಗಳಲ್ಲಿ ಉತ್ತಮ ಔಷಧವು. ಇದರ ಸೇವನೆಯಿಂದ ಎಷ್ಟುಕಾಲದ ಹಳೆ ಮೇಹರೋಗಗಳಾದರೂ

ಖಂಡಿತವಾಗಿ ಗುಣಹೊಂದುವವು.

ಔಷಧ ಸೇವಿಸುವ ಕ್ರಮ— 2 ಘಂಟೆಗೆ ಒಂದಾವರ್ತಿ 5 ಬಿಂದು ಔಷಧವನ್ನು ಒಂದು ಚಮಚದಷ್ಟು ನೀರಿನಲ್ಲಿ ಹಾಕಿ ಸೇವಿಸುವದು. ಕ್ರಯ:— ರೂ. 1—0—0.

ಬೇಕಾಗಿದ್ದವರು ಕೆಳಗಿನ ವಿಳಾಸಕ್ಕೆ ಬರೆಯತಕ್ಕದ್ದು.

ವಿಳಾಸ:— ಎ. ಫೆರ್ನಾಂಡಿಸ್,
ಇಲೆಕ್ಟ್ರೊ ಹೊಮಿಯೊಪತಿ ಡಿಸ್ಪೆನ್ಸರಿ,
ಮಂಗಳೂರು.

The Canara Bank, Limited, Mangalore.

ಕೆನರಾ ಬ್ಯಾಂಕ ಲಿಮಿಟೆಡ್, ಮಂಗಳೂರು.

ESTABLISHED JULY 1906. 1906ನೇ ಇಸವಿ ಜುಲಾಯಿ ತಿಂಗಳಲ್ಲಿ ಸ್ಥಾಪಿಸಲ್ಪಟ್ಟಿತು.

Authorised and fully paid up Capital Rs. 300,000—0—0	ಅಧಿಕಾರಗೊಳಿಸಲ್ಪಟ್ಟ ಪೂರ್ಣವಾಗಿ ಕೊಟ್ಟ ಮೂಲಧನವು ರೂ. 300,000—0—0
Reserve and other sinking Funds „ 138,697—7—2	ಕ್ಷೇಮನಿಧಿ ಮತ್ತು ಇತರ ಫಂಡುಗಳು „ 138,697—7—2

THE BANK RECEIVES FIXED, CURRENT ACCOUNT, & SAVINGS BANK DEPOSITS

ಖಾಯಂ ಮತ್ತು ಚಾಲ್ತಿ ಠೇವಣಾತಿಗಳೂ, ಸೇವಿಂಗ್ಸ ಬ್ಯಾಂಕ್ ಠೇವಣಾತಿಗಳೂ, ಪಡಕೊಳ್ಳಲಾಗುತ್ತವೆ.

For further particulars apply to the Secretary.

☞ ವಿಶೇಷ ಮಾಹಿತಿ ಬಗ್ಗೆ ಸೆಕ್ರಿಟರಿಗಳಿಗೆ ಬರಕೊಳ್ಳುವದು.

Canara Bank Ltd.,
Mangalore, 1st September 1920.

K. Venkat Rao,
Secretary

ವಾಳ್ಯದ ವೆಂಕಟಾಚಲ ಪಂಡಿತರ ಸಿದ್ಧೌಷಧಗಳು.

ರೋಗಾಮಯಹರ ಕಸ್ತೂರಿ ಮಾತ್ರೆಗಳನ್ನು ಈಗಲಾದರೂ ಪರೀಕ್ಷಿಸಿ ನೋಡಿರಿ!

ಪ್ರತಿವರ್ಷವೂ ಲಕ್ಷಾಂತರ ಸೀಸೆಗಳು ವಿಕ್ರಯವಾಗುತ್ತವೆ.

ಹಿಂದುಸ್ಥಾನದವರು ಮಾತ್ರವಲ್ಲ; ಬರ್ಮಾ, ಸಿಲೋನ್, ಮಲೆಯ ಸ್ಟೇಟ್, ಗೋವಾ, ಫೀಜಿಐಲೆಂಡ್, ಆಫ್ರಿಕಾ ಮೊದಲಾದ ಕಡೆಯವರು ಕೂಡ ಈ ಸಿದ್ಧೌಷಧಿಯನ್ನು ಉಪಯೋಗಿಸುತ್ತಿರುತ್ತಾರೆ.

ಮಹಾಶಯ. ಒಂದೇ ಒಂದು ರೋಗಾಮಯಹರ ಕಸ್ತೂರಿ ಮಾತ್ರೆಯ ಸೀಸೆಯು ನಿಮ್ಮ ಮನೆಯಲ್ಲಿದ್ದರೆ ಸಮಯವನ್ನು ಕಾದ ವೈದ್ಯರ ಬರುವಿಕೆ ತಪ್ಪುವುದು.

ಶೀತ, ಶೀತವಾಯು, ಅಜೀರ್ಣ, ಪಾರ್ಶ್ವವಾಯು, ಜ್ವರ, ಮಂದ, ಮಲಬದ್ಧ, ಕೆಮ್ಮು, ಗಸಜೀನ, ಬಲಹೀನತೆ, ಕೆಟ್ಟ ಹವಾ, ಮತ್ತು ಕೆಡುಕಾದ ನೀರಿನಿಂದುಂಟಾಗುವ ವಿಕಾರ, ಮಕ್ಕಳ ಎಳವು, ಜ್ವರ, ಕೆಮ್ಮು ವಾಯು, ಇನ್ನೂ ಅನೇಕ ರೋಗಗಳನ್ನು ಈ ಕಸ್ತೂರಿಮಾತ್ರೆ ಆಶ್ಚರ್ಯವಾಗುವಂತೆ ಗುಣಪಡಿಸುತ್ತದೆ.

ಪ್ರತಿ 6 ಸೀಸೆಗಳನ್ನು ಒಟ್ಟಿಗೆ ತರಿಸಿದರೆ ಟಪಾಲು ಖರ್ಚು ಸೇರಿ 1—8—0.
ಪ್ರತಿ 12 ಸೀಸೆಗಳನ್ನು ಒಟ್ಟಿಗೆ ತರಿಸಿದರೆ ಟಪಾಲು ಖರ್ಚು ಸೇರಿ 2—13—0.
ಪ್ರತಿ 25 ಸೀಸೆಗಳನ್ನು ಒಟ್ಟಿಗೆ ತರಿಸಿದರೆ ಟಪಾಲು ಖರ್ಚು ಸೇರಿ 6—3—0.

ರಿಜಿಸ್ಟರಾದ ಈ ವ್ಯಾಪಾರದ ಗುರ್ತು ಪ್ರತಿ ಸೀಸೆಯ ಮೇಲೂ ಇರುವುದನ್ನು ನೋಡಿ ತೆಗೆದುಕೊಳ್ಳಬೇಕಾಗಿದೆ.
ಅನುಪಾನ ಪತ್ರವು ಪ್ರತಿ ಸೀಸೆಯೊಡನೆಯೂ ಇರುವುದು, 260 ಮಾತ್ರೆಗಳುಳ್ಳ ಕುಪ್ಪಿಗೆ 4 ಆಣೆ ಮಾತ್ರ.

<u>ಲಕ್ಷ್ಮೀವಿಲಾಸ ರಸ</u> (ಪ್ಲೇಗಿಗೆ)—ಲಕ್ಷೋಪಲಕ್ಷ ಪ್ಲೇಗುರೋಗಿಗಳು ಈ ಲಕ್ಷ್ಮೀವಿಲಾಸ ರಸದಿಂದ ಆರೋಗ್ಯವನ್ನು ಪಡೆದಿರುತ್ತಾರೆ. ಒಂದೇ ಒಂದು ಲಕ್ಷ್ಮೀವಿಲಾಸ ರಸದ ಸೀಸೆಯು ತಮ್ಮಲ್ಲಿದ್ದರೆ ಪ್ಲೇಗಿಗೆ ಸರ್ವೋತ್ಕೃಷ್ಟವಾದ ಸಿದ್ಧೌಷಧಿಯು ಬೇರೊಂದಿಲ್ಲವೆಂದು ತಾವೇ ಹೇಳುವಿರಿ. ದಿನಜ್ವರ, [illegible] ನಾಲ್ಕರ ಜ್ವರಗಳು, ಸನ್ನಿಪಾತ ಇವುಗಳು ಕೂಡಾ ಗುಣವಾಗುತ್ತವೆ. ಸೀಸೆಗೆ ರೂ. 1. 5ಕ್ಕೆ ಒಂದು ಇನಾಮು.

<u>ಶ್ರೀನಿವಾಸತೈಲ</u>—ಪ್ಲೇಗಿನ ಗಡ್ಡೆ ಕರಗುತ್ತದೆ. ಸಂಧುಗಳ ನೋವು ಸೇದಲು ಹೋಗುತ್ತದೆ. ಸೀಸೆಗೆ 8 ಆಣೆ. 5ಕ್ಕೆ ಒಂದು ಇನಾಮು.

<u>ವೈಶ್ವಾನರಾಸವ</u>—ಸೇವಿಸಿದ ಮೊದಲನೇ ವೇಳೆಯಿಂದಲೇ ವಾಂತಿಭೇದಿ, ಶೀತಭೇದಿ, ಅಜೀರ್ಣದ ಭೇದಿಗಳು ಗುಣವಾಗುತ್ತಾ ಬರುತ್ತವೆ. ಸೀಸೆಗೆ ರೂ. 1. 5ಕ್ಕೆ ಒಂದು ಇನಾಮು.

<u>ಬಾಲಸುಧೋದಯ</u>—ಮಕ್ಕಳಿಗೆ ಬಲಕಾರಿ, ಸಿಹಿಯಾಗಿರುತ್ತದೆ. ಮಂದ, ಮಲಬದ್ಧ, ಅಜೀರ್ಣದ ಭೇದಿ, ಕೃಶತ್ವ, ಹೊಟ್ಟೆ ದಪ್ಪವಾಗಿರುವುದು, ಕಸಿವಿಲ್ಲದಿರುವುದು ಇವೆಲ್ಲವೂ ಗುಣವಾಗಿ ಮಕ್ಕಳುಲ್ಲವರಾಗುತ್ತಾರೆ. ಪುಷ್ಟಿಯ ಚಟುವಟಿಕೆ ಸೀಸೆಗೆ ಆಣೆ 12. 5ಕ್ಕೆ ಒಂದು ಇನಾಮು.

ಈ ನಾಲ್ಕಕ್ಕೂ ಟಪಾಲು ಖರ್ಚು ಬೇರೆ.

ಸಮಸ್ತ ರೋಗಗಳಿಗೂ ನಮ್ಮಲ್ಲಿ ಆಯುರ್ವೇದೀಯ ಸಿದ್ಧೌಷಧಿಗಳು ದೊರೆಯುತ್ತವೆ. ಕ್ಯಾಟಲಾಗು ಉಚಿತ.

ವಿಳಾಸ: ಶ್ರೀ ಸೀತಾರಾಘವ ವೈದ್ಯಶಾಲಾ ಮೈಸೂರು.

ಒಂದು ಕುಪ್ಪಿಯ ಕ್ರಯ ೧ಳ ಆಣೆ. ಮಂಗಳೂರು ಏಜಂಟ್,

ಕೇ. ಟೀ. ಡೋಂಗರೆ ಕಂಪೆನಿ, ಡಿ. ಉಲನ್‌ವಾರ್ಟ್, ಮಂಗಳೂರು.

ಗಿರಿಗಾಂವ ಮುಂಬಯಿ.

[illegible] ಕಾಲದ ದಕ್ಷಿಣ [illegible] ಪಂಚಾಂಗ.
([illegible] ನವಂಬರ [illegible])

							ಸೂರ್ಯ ಉ.	ಅಸ್ತ.
13	ಶನಿ	೩	೫೧. ೦	ಜ್ಯೇಷ್ಠಾ	೫೯. ೧೪	೨೮	6·31	6. 1
14	ರವಿ	೪	೫೩. ೩	ಮೂಲಾ	೩೩. ೩೪	೫	6·31	6. 1
15	ಸೋಮ	೫	೬೦. ೦	ಪೂ. ಷಾ.	೩೩. ೨	೩೦.	6·32	6. 0
16	ಮಂಗ.	೫	೧. ೧೪	ಉ. ಷಾ.	೪೮. ೧೬	೧	6·32	6. 0
17	ಬುಧ	೬	೬. ೧೦	ಶ್ರವಣ	೫೪. ೨	೨	6·33	6. 0
18	ಗುರು	೭	೧೦. ೫೮	ಧನಿಷ್ಠ	೫೮. ೫೮	೩	6·33	6. 0
19	ಶುಕ್ರ	೮	೧೪. ೨	ಶತಭಿಷಾ	೬೦ ೦	೪	6·34	6. 0

ಮಂಗಳೂರಿನ ವಾಯುಸ್ಥಿತಿ.
(೧೯೨೦ನೆಯ ನವಂಬರ)

Date ತಾರೀಖು	Temperature. ಉಷ್ಣ (ಕಾವು) Maximum ಹೆಚ್ಚು	Minimum ಕಡಿಮೆ	Rainfall. ಮಳೆ ದಿನದ ಮಳೆ	ಏಪ್ರಿಲ್‌ನಿಂದ
5	90—2	75—1	—	...
6	89—8	76—2	—	...
7	89—9	75—6	—	...
8	91—2	75—0	1—28	...
9	90—5	75—8	0—26	...
10	89—4	75—7	—	—
11	90—2	75—2	—	—

ಮಂಗಳೂರಿನ ಪೇಟೆ ಧಾರಣೆ.

ಜೀನಸು		ಇಂದ ರೂ. ಆ.	ವರೆಗೆ ರೂ. ಆ.
ಮಸ್ಕತಿ ಅಕ್ಕಿಮುಡಿ ೧ಕ್ಕೆ	...	7—4	7—14
ಗುಡ್ಡು, ಸುಗ್ಗಿ	...	6—12	7—2
ರಾಶಿ ಮುಡಿ ೧ಕ್ಕೆ	...	6—10	6—12
ಹೊಸ ರಾಶಿ „	...	6—0	6—10
ಅವ್ವಲ್ ಬೆಳ್ತಿಗೆ „	...	9—0	9—2
ಗುಡ್ಡು ಬೆಳ್ತಿಗೆ „	...	8—0	8—2
ರಂಗೂನ ಬೆಳ್ತಿಗೆ ಗೋಣಿ ೧ಕ್ಕೆ	...	16—8	17—8
ಗೋಧಿ ಗೋಣಿ ೧ಕ್ಕೆ	...	19—0	22—0
ಹುರುಳಿ ಗೋಣಿ ೧ಕ್ಕೆ	...	14—8	15—4
ಕಡಲೆ ಗೋಣಿ ೧ಕ್ಕೆ	...	15—8	16—0
ತೊಗರಿ ಗೋಣಿ ೧ಕ್ಕೆ	...	19—8	20—0
ತೊಗರಿಬೇಳೆ ಗೋಣಿ ೧ಕ್ಕೆ	...	21—0	28—0
ಉದ್ದು ಗೋಣಿ ೧ಕ್ಕೆ	...	16—8	18—0
ಹೆಸರು ಗೋಣಿ ೧ಕ್ಕೆ	...	16—0	18—8
ಊರು ಬೆಲ್ಲ ಖಂಡಿ ೧ಕ್ಕೆ	...	107—0	110—0
ಉಪ್ಪು ಗೋಣಿ ೧ಕ್ಕೆ	...	4—6	5—0
ಕೊಬ್ರಿ ಖಂಡಿ ೧ಕ್ಕೆ	...	150—0	160—0
ಕೊಬ್ರಿ ಹಿಂಡಿ ಖಂಡಿ ೧ಕ್ಕೆ	...	48—0	50—0
ಎಳ್ಳಿಂಡಿ ಖಂಡಿ ೧ಕ್ಕೆ	...	40—0	41—4
ಕೊಬ್ರಿ ಎಣ್ಣೆ ಮಣ ೧ಕ್ಕೆ	...	11—4	11—6
ಎಳ್ಳೆಣ್ಣೆ ಮಣ ೧ಕ್ಕೆ	...	11—0	11—8
ಚಿಮಣಿಎಣ್ಣೆ ಪೆಟ್ಟಿಗೆ ೧ಕ್ಕೆ	...	9—6	9—9
ಮೋರಿಸ ಸಕ್ಕರೆ ಮಣ ೧ಕ್ಕೆ	...	10—4	10—8
ಊರ ಮೆಣಸಿನ ಕಾಯಿ ಮಣ ೧ಕ್ಕೆ	...	8—0	8—8
ಸಾಸಿವೆ ಮುಡಿ ೧ಕ್ಕೆ	...	10—0	10—0
ಕೊತ್ತಂಬರಿ ಮುಡಿ ೧ಕ್ಕೆ	...	5—8	—
ಕಾಫಿ ಖಂಡಿ ೧ಕ್ಕೆ	...	220—0	230—0
ಬೆಣ್ಣೆ/ಬೀಗೋಟು ಅಡಿಕೆ ಖಂಡಿ ೧ಕ್ಕೆ	...	100—0	115—0
ಬೀಗೋಟು	...	96—0	100—0
ಕಾಳುಮೆಣಸು ಖಂಡಿ ೧ಕ್ಕೆ	...	135—0	140—0
ಯಾಲಕ್ಕಿ ಮಣ ೧ಕ್ಕೆ	...	22—0	25—0
ಗ್ರೇರುಬೀಜ ಮುಡಿ ೧ಕ್ಕೆ	...	3—8	3—12
ಶುಂಠಿ ಖಂಡಿ ೧ಕ್ಕೆ	...	100—0	120—0
ತಾಂಬ್ರ ತಗಡು ಮಣ ೧ಕ್ಕೆ	...	23—4	24—0
ತಾಂಬ್ರ ಪಾತ್ರೆಗಳು ಮಣ ೧ಕ್ಕೆ	...	32—0	34—0
[illegible] ಸೇರು ೧ಕ್ಕೆ	...	31—8	
ಹಿತ್ತಾಳೆ ತಗಡು ಮಣ ೧ಕ್ಕೆ	...	24—0	25—0

ವಿದೇಶ ವರ್ತಮಾನ

[illegible] ... [illegible] ... ಬಂದು ... [illegible] ... ಪ್ರತಿಕಾರವಾಗಿ ... [illegible] ... ೧೦೦ ವರ್ಷ ... [illegible] ... ಕೇಳುತ್ತಲೇ ... [illegible] ... ರನ್ನು ಗಾಯಪಡಿಸಿದ್ದಕ್ಕೆ ಪ್ರತೀಕಾರವಾಗಿ ಒಂದು ದೊಡ್ಡ ಕಾರ್ಖಾನೆ ... ಬೆಂಕಿ ಹಚ್ಚಿದ್ದರಿಂದ ... ಲಕ್ಷ ಪೌಂಡಿನ ಸೊತ್ತು ನಷ್ಟವಾಯಿತಂತೆ. ಅನೇಕ ಮಂದಿ ... ಜೀವನೋಪಾಯವೇ ತಪ್ಪಿಹೋಯಿತಂತೆ. ಟ್ರಿಪ್ಪರರಿ ... ಂಗಳಲ್ಲಿ

[illegible] ... ಬಿದ್ದನು ... [illegible] ... ಪ್ರಾಯಶಃ ದಾಮು ... ಪಡೆದರು ಎಂದು ಪಾರ್ಲಿಮೆಂಟಿನಲ್ಲಿ ಕೇಳಿದ ಒಂದು ಪ್ರಶ್ನೆಯ ಉತ್ತರದಿಂದ ಗೊತ್ತಾಗುತ್ತದೆ ಒಬ್ಬ ಪೋಲೀಸ್ ಸಾರ್ಜೆಂಟನನ್ನು ಕೊಂದದ್ದಕ್ಕೆ ಪ್ರತಿಯಾಗಿ ಬೆಲ್ಲನೋಟ ಎಂಬಲ್ಲಿ ಹಲವು ಮನೆಗಳು ಯಜ್ಞೇಶ್ವರನಿಗೆ ಆಹುತಿಯಾಗಿ ೨೦೦೦ ಪೌಂಡು ಬೆಲೆಯ ಸೊತ್ತು ನಾಶವಾಯಿತಂತೆ ಇದೇ ರೀತಿಯ ಪ್ರತಿಕಾರವು ಬೇರೆ ಕಡೆಗಳಲ್ಲಿಯೂ ಕೇಳಿಸುತ್ತದೆ

ಇಜಿಪ್ಟ್—ಇದಕ್ಕೆ ಹೊಸ ನಮೂನೆಯ ಶರ್ತಗಳ ಮೇರೆಗೆ ಒಂದು ಬಗೆಯ ಸ್ವಾತಂತ್ರ್ಯವನ್ನು ಕೊಡುವ ಠರಾವಿನ ಕರಡು ತಯಾರಾಗಿವೆ ಎಂದು ಹಿಂದೆ ತಿಳಿಸಿದ್ದೆವು. ಆದರೆ ಈ ಠರಾವುಗಳಿಗೆ ಇಪ್ಪತ್ತೈದು ಸ್ಥಳಕಾರದ ಮಂತ್ರಿಗಳ ಒಪ್ಪಿಗೆ ದೊರೆಯಲಿಲ್ಲ. ಲೋರ್ಡ ಮಿಲ್ನರ್ ಮತ್ತು ಇಜಿಪ್ಟಿನ ನೆಶನಲಿಸ್ಟರ ಪ್ರತಿನಿಧಿಗಳು ಚರ್ಚಿಸಿ ತಯಾರಿಸಿದ ಈ ಠರಾವನ್ನು ಎರಡೂ ಸರಕಾರಗಳಿಗೆ ಚರ್ಚಿಸಿ ಒಪ್ಪಿಕೊಳ್ಳುವದಕ್ಕಾಗಲಿ ತಿದ್ದುಪಡಿಮಾಡುವುದಕ್ಕಾಗಲಿ ಪೂರ್ಣ ಸ್ವಾತಂತ್ರ್ಯ ಇನ್ನೂ ಇದೆ ಎಂಬಂತೆ ಲೋರ್ಡ ಕರ್ಝನರು ಬ್ರಿಟಿಷ ಪಾರ್ಲಿಮೆಂಟಿನಲ್ಲಿ ನುಡಿದಿರುವರು. ಹೀಗಾದ್ದರಿಂದ ಇಜಿಪ್ಟಕ್ಕೆ ಸ್ವಾತಂತ್ರ್ಯ ಸಿಕ್ಕಿತು ಎಂದು ಸಾರಿಬಿಟ್ಟ ಅಭಿಪ್ರಾಯವು ತಪ್ಪಾಗಿದೆ ಈಗ ತಯಾರಾದ ಠರಾವಿಗೆ ನೆಶನಲಿಸ್ಟರ ಬಹುಪಕ್ಷದವರು ಒಪ್ಪಿಕೊಳ್ಳುವ ಅಂದಾಜು ಕಾಣುವುದಿಲ್ಲವೆಂದು ಲಂಡನ್ನಿಗೆ ಹೋಗಿ ಬಂದಿದ್ದ ಅವರ ಪ್ರತಿನಿಧಿಗಳು ಹೇಳಿದ್ದನ್ನು ಕೇಳಿದಾಗ ಈ ಚರ್ಚೆ ಇನ್ನೂ ಬಾಕಿಯುಳ್ಳದ್ದೆಂದು ಗೊತ್ತಾಗುತ್ತದೆ

ಮೆಸೊಪೊಟೇಮಿಯ—ಬ್ರಿಟಿಷ ಪ್ರತಿನಿಧಿಯಾಗಿ ಸರ್ ಪರ್ಸಿ ಕೋಕ್ಸರು ಅಲ್ಲಿಗೆ ಹೋಗಿ ಅಲ್ಲಿಯ ಮುಖಂಡರ ಒಂದು ಕೌನ್ಸಿಲನ್ನು ನಿರ್ಮಿಸಿ, ಅಧಿಕಾರದ ಸೂತ್ರಗಳನ್ನು ಬ್ರಿಟಿಷ ಸತ್ತೆಗೆ ಒಳಪಟ್ಟು ಒಪ್ಪಿಸಿಕೊಡಲಿಕ್ಕೆ ಏರ್ಪಾಡು ಮಾಡಲು ಯತ್ನಿಸುತ್ತಿದ್ದಾರೆ. ಅನೇಕ ಅರಬ್ಬಿಯರ ಪಾಳೆಗಾರರು ಶರಣು ಬಂದು ತಮ್ಮ ಶಸ್ತ್ರಾಸ್ತ್ರಗಳನ್ನು ಬ್ರಿಟಿಷರಿಗೆ ಒಪ್ಪಿಸಿಕೊಟ್ಟರೆಂತಲೂ ಯುಫ್ರೆಟಿಸ್ ನದಿಯ ಎಡಬಲದಲ್ಲಿರುವ ಹಲವು ಪಾಳೆಯಗಾರರು ಮಾತ್ರ ಇನ್ನೂ ಬಗ್ಗಲಿಲ್ಲವೆಂತಲೂ ತಿಳಿದು ಬರುತ್ತದೆ.

ತುರ್ಕಿ—ಕೊನಸ್ಟಂಟಿನೋಪಲದಲ್ಲಿ ರಕ್ಷಣೆಗಾಗಿ ಬಂದು ನೆಲೆಗೊಂಡ ಬ್ರಿಟಿಷ ಮತ್ತು ಮಿತ್ರ ಮಂಡಲದ ಇತರ ಸರಕಾರಗಳ ಸೈನ್ಯದ ಅಧಿನಾಯಕತ್ವವನ್ನು ಸಂಧಿಯಾದಂದಿನಿಂದ ೨೦ ತಿಂಗಳ ವರೆಗೆ ಬ್ರಿಟಿಷ ನಾಯಕರೂ ಆನಂತರ ಪರ್ಯಾಯವಾಗಿ ಬೇರೆ ಮಿತ್ರಪಕ್ಷದ ನಾಯಕರೂ ವಹಿಸಿಕೊಳ್ಳಬೇಕೆಂತಲೂ ನಿಶ್ಚಯಿಸಿದ್ದಾರೆ

ಏಷ್ಯದ ತುರ್ಕಿಯಲ್ಲಿ ಅಂಗೋರಾ ಎಂಬಲ್ಲಿ ನೆಶನಲಿಸ್ಟ ತಂಡದವನು ಕೆಮಲ್ ಪಾಶಾ ಎಂಬವರ ಕೆಳಗೆ ಸೈನ್ಯವನ್ನು ಸಂಗ್ರಹಿಸಿ ತುರ್ಕಿಯ ಅಧಿಕಾರಕ್ಕೆ ಮಣಿಯದೆ ಇದ್ದರು ಇವರನ್ನು ಅಡಗಿಸಬೇಕೆಂದು ತುರ್ಕಿಯ ಸರಕಾರಕ್ಕೆ ಮಿತ್ರಪಕ್ಷದವರು ಎಚ್ಚರಿಸುತ್ತಲೆ ಇದ್ದರು ಆದರೆ ತಮ್ಮ ಕಾಲಿನ ಮೇಲೆ ತಾವೇ ನಿಂತುಕೊಳ್ಳುವಷ್ಟು ಶಕ್ತಿಯಿಲ್ಲದವರು ಇತರರನ್ನು ಮುರಿಯುವುದು ಹೇಗೆ? ಆದರೂ ಸೈನ್ಯವನ್ನು ಜಮೆಗೊಳಿಸುವ ಪ್ರಯತ್ನ ಮಾಡುತ್ತಿರುವಲ್ಲಿ ಕೆಲವು ಶರ್ತಗಳನ್ನು ಕೊಟ್ಟು ಈ ನೆಶನಲಿಸ್ಟರು ಸಂಧಾನಕ್ಕೆ ಸಿದ್ಧರಿದ್ದೇವೆ ಎಂದು ಹೇಳಿ ಕಳುಹಿಸಿದ್ದಾರೆ ಸ್ಮಿರ್ನಾ ಮತ್ತು ಕೊನಸ್ಟಂಟಿನೋಪಲದ ಸುತ್ತಲಿನ ಪ್ರದೇಶಗಳನ್ನು ಬಿಟ್ಟುಕೊಟ್ಟು ಮಿತ್ರಪಕ್ಷದವರು ಕೊನಸ್ಟಂಟಿನೋಪಲವನ್ನು ಬಿಟ್ಟು ಹೋದರೆ ತಾವು ರಾಜಿಗೆ ಒಪ್ಪುತ್ತೇವೆಂದು ಈ ನೆಶನಲಿಸ್ಟರ ಹೇಳಿಕೆ ಇದೆ

ಕಲ್ಲಿದ್ದಲು ಮಜೂರರ ಮುಷ್ಕರ—ಬ್ರಿಟಿಷ ಮಂತ್ರಿವರ್ಯರ ಮಧ್ಯಸ್ಥಿಕೆಯಿಂದ ಆದ ಶರ್ತಗಳನ್ನು ಕುರಿತು ಮಜೂರರ ಅಭಿಪ್ರಾಯ ಕೇಳಿದ್ದಲ್ಲಿ ಬಹುಮತವು ಆ ಶರ್ತಗಳನ್ನು ಧಿಕ್ಕರಿಸಿದೆ ಮುಖ್ಯವಾಗಿ ದಕ್ಷಿಣ ವೇಲ್ಸ್ ಮತ್ತು ಲಂಕೆಶಾಯರದ ಮಜೂರರು ಈ ಶರತುಗಳಿಗೆ ವಿರೋಧಿಸಿದ್ದಾರೆ ಆದರೂ ಮುಷ್ಕರವನ್ನು ನಿಲ್ಲಿಸಿ ಕೆಲಸವನ್ನು ಪುನಃ ಕೈಕೊಳ್ಳಬೇಕೆಂದು ಈ ಮಜೂರರ ಪ್ರತಿನಿಧಿಗಳು ಇತ್ಯರ್ಥಿಸಿದ್ದಾರೆ

(ಅಮೇರಿಕ) ಯುನೈಟೆಡ್ ಸ್ಟೇಟ್ಸ್—ಪ್ರೆಸಿಡೆಂಟ್ ವಿಲ್ಸನರ ಸ್ಥಾನದಲ್ಲಿ ಮಿ। ಹಾರ್ಡಿಂಜ ಎಂಬವರಿಗೆ ಬಹುಮತದ ಓಟುಗಳು ಸಿಕ್ಕಿದ್ದರಿಂದ ಇನ್ನು ಕೆಲವು ಸಮಯದೊಳಗೆ ಅವರು ಪ್ರೆಸಿಡೆಂಟ ಪದವಿಯನ್ನು ಸೇರಲಿಕ್ಕಿರುವರು ಇವರು ಅಮೇರಿಕದವರು ಅನ್ಯ ಜನಾಂಗಗಳೊಡನೆ ಅನ್ಯೋನ್ಯ ಮಿತ್ರತ್ವದಲ್ಲಿರಬೇಕೆಂದು ಹೇಳುತ್ತಾರೆ ಆದರೆ ಲೀಗ್ ಒಫ್ ನೇಶನ್ಸಿಗೆ ಅಮೇರಿಕವು ಸೇರಬೇಕಿಲ್ಲವೆಂದು ಪ್ರತಿಪಾದಿಸುವವರಾದ್ದರಿಂದ ಅಮೇರಿಕದ ಸಹಾನುಭೂತಿಯು ಲೀಗ್ ಒಫ್ ನೇಶನ್ಸಿಗೆ ಇರಲಾರದು ಎಂದು ಪತ್ರಿಕೆಗಳ ಅಭಿಪ್ರಾಯವಿದೆ

ಲಂಡನ್—ಹಿಂದುಸ್ಥಾನದ ವೈಸರಾಯ ಪದವಿಗೆ ಯಾರ ಕೊರಳಿಗೆ ಮಾಲೆ ಬೀಳುವುದು ಎಂದು ಊಹನೆಗಳನ್ನು ಅಲ್ಲಿಯ ವರ್ತಮಾನ ಪತ್ರಿಕೆಗಳು ಪ್ರಕಟಿಸುತ್ತಿವೆ. ಇನ್ನೂ ಯಾವುದು ಸ್ಪಷ್ಟವಾಗಿ ಬಹಿರಂಗವಾಗಲಿಲ್ಲ

ಗ್ರೀಸ್—ಈ ದೇಶದ ರಾಜರ ಮರಣದ ನಂತರ ಹಿಂದೆ ಪದಚ್ಯುತನಾದ ಕೊನಸ್ಟಂಟೈನನು ಇನ್ನೂ ತನ್ನ ಪದವಿಯ ಮೇಲೆ ಕಣ್ಣಿಟ್ಟಂತೆ ಕಾಣುತ್ತದೆ ಆದ್ದರಿಂದ ಅವನ ಯುವರಾಜನು ಗ್ರೀಕ್ ಪಾರ್ಲಿಮೆಂಟಿನವರು ಕೊಟ್ಟ ಶರ್ತಗಳನ್ನು ಅಂಗೀಕರಿಸಲಿಲ್ಲ. ಈಗ ಪಾರ್ಲಿಮೆಂಟಿನವರು ಬೆಲ್ಜಿಯುಮದ ಅನೆ ರಾಜಪುತ್ರನನ್ನು ಆರಿಸುವ ಸೂಚನೆಯಿದೆಯಂತೆ

ಸ್ವದೇಶ ವರ್ತಮಾನ.

ರೈಲ್ವೆ ಮಜೂರರು—ಝಾನ್ಸಿ ಎಂಬಲ್ಲಿ ನೆರೆದ ಹಿಂದುಸ್ಥಾನದ ರೈಲ್ವೆ ಮಜೂರರ ಪ್ರತಿನಿಧಿಗಳು ಯುದ್ಧದ ಮುಂಚಿನ ಸಂಬಳದ ದರಗಳ ... [illegible] ... ನ್ನಾದರೂ ಈಗ ಏರಿಸಬೇಕೆಂದು ... [illegible] ... ಸೆಕ್ರೆಟರಿ ಒಫ್ ಸ್ಟೇಟರಿಗೆ ಮನವಿ ಮಾಡಿಕೊಳ್ಳಲು ನಿಶ್ಚಯಿಸಿದ್ದಾರೆ.

ಲೋರ್ಡ ಸಿಂಹರು—ಬಿಹಾರದ ಗವರ್ನರ ಪದವಿಗೆ ನೇಮಕವಾಗಿ ಹಿಂದುಸ್ಥಾನಕ್ಕೆ ಬಂದ ಲೋರ್ಡ ಸಿಂಹರು ಪತ್ನಿಸಮೇತರಾಗಿ ಕಲ್ಕತ್ತೆಗೆ ಬಂದು ಸ್ವಾಗತವನ್ನು ಅಲ್ಲಿಯ ಅನೇಕರಿಂದ ಹೊಂದಿದರು ಪದವಿಯ ಚಾರ್ಜು ಪಡೆಯುವ ವರೆಗೆ ಅವರು ಕಲ್ಕತ್ತದಲ್ಲಿಯೇ ಉಳಕೊಳ್ಳುವರಂತೆ

ಆಲೀಘರ—... [illegible] ... ಮಹಮ್ಮದೀಯರ ... [illegible] ... ಮುಸಲ್ಮಾನ ... [illegible] ... ಕಳೆದ ವಾರದಲ್ಲಿ ಮುಸಲ್ಮಾನ ಮುಖಂಡರೊಳ್ಳರಿಂದ ಜರಗಿತು.

ಮಹಾತ್ಮಾ ಗಾಂಧಿಯವರ ಪರ್ಯಟನ—ಇವರು ಹಿಂದುಸ್ಥಾನದ ಪ್ರಮುಖ ಊರುಗಳನ್ನೆಲ್ಲ ಸಂಚರಿಸಿ ಅಸಹಕಾರಿತೆಯ ಉಪದೇಶವನ್ನು ಮಾಡುತ್ತಿದ್ದಾರೆ. ೬ನೆ ತಾರೀಕಿಗೆ ಪೂನೆಯಲ್ಲಿ ಆದ ಮೀಟಿಂಗಿನಲ್ಲಿ ತಮ್ಮ ತತ್ವಗಳನ್ನು ... [illegible] ... ಹಿಂದುಸ್ಥಾನಕ್ಕೆ ಸ್ವರಾಜ್ಯ ದೊರಕುವುದರಲ್ಲಿ ಸಂದೇಹವಿಲ್ಲವೆಂದು ಅವರು ಒತ್ತಿಹೇಳಿದರು. ಆ ಮೇಲೆ ಅಲ್ಲಿಯ ... [illegible] ... ಸಮಯದ ವರೆಗೆ ಚರ್ಚಿಸಿದರು

ಖಿಲಾಫತ್ ಕಮಿಟಿ, ಆಗ್ರಾ—ಇಲ್ಲಿ ಲಾಲಾ ಲಜಪತರಾಯ ಮತ್ತು ಮೌಲಾನಾ ಶೌಕತಲಿ ಇವರ ಸಮ್ಮುಖದಲ್ಲಿ ಕೊಂಗ್ರೆಸ್ ಮತ್ತು ಖಿಲಾಫತ್ ಕಮ್ಮಿಟಿಯವರು ಜರಗಿಸಿದ ಮಹಾಸಭೆಯಲ್ಲಿ, ಖಿಲಾಫತಿನ ಪರವಾಗಿ ಪ್ರಯತ್ನ ಮಾಡುತ್ತಲಿದ್ದ ಕೆಲವರನ್ನು ದಸ್ತಗಿರಿ ಮಾಡಿದ್ದಕ್ಕಾಗಿ ಆಕ್ಷೇಪಿಸಿ, ಅಲೀಘರದ ಹೊಸ ಯೂನಿವರ್ಸಿಟಿಯ ಸ್ಥಾಪನೆಯನ್ನು ಕೊಂಡಾಡಿ ಹಲವು ಠರಾವುಗಳು ಆದವು

ಅಸಹಕಾರಿತೆಯ ಚಳವಳ—ಇದನ್ನು ಆಕ್ಷೇಪಿಸಿ ಇದರಿಂದ ಹಿಂದುಸ್ಥಾನಕ್ಕೆ ಉಂಟಾಗಬಹುದಾದ ಆಪತ್ತುಗಳನ್ನು ವರ್ಣಿಸಿ ಇಂಡಿಯಾ ಸರಕಾರದವರ ದೊಡ್ಡ ದೊಂದು ಇಸ್ತಿಹಾರು ಇಂಡಿಯಾ ಗಜೇಟಿನಲ್ಲಿ ಪ್ರಕಟವಾಗಿದೆ.

ಸೆಂಟ್ರಲ್ ಖಿಲಾಫತ ಕಮಿಟಿ—ಇವರೊಂದು ವಿಶೇಷ ಅಧಿವೇಶನವು ಇದೇ ನವಂಬರ್ ೨೧ನೆ ತಾರೀಕಿಗೆ ಅಲಿಘರದಲ್ಲಿ ಜರಗಲಿಕ್ಕಿದೆ ಎಂದು ಮಿ। ಶೌಕತ್ ಅಲೀಯವರು ಪ್ರಕಟಿಸಿದ್ದಾರೆ

ಶುದ್ಧ ನೀರಿನ ಪುರವಠೆ—ಈ ವರ್ಷದಲ್ಲಿ ಈ ಮೊದಲು ಸಹಾಯಧನವಾದಿ ಲೋಕಲ್ ಬೋರ್ಡು ಮತ್ತು ಮ್ಯುನಿಸಿಪಾಲಿಟಿಗಳಿಗೆ ೨೮೯,೩೧೮ ರೂಪಾಯಿ ಕೊಟ್ಟದಲ್ಲದೆ ಅನಂತಪುರ ಕೌನ್ಸಿಲಿಗೆ ೧೦,೦೦೦, ಚೆಂಗಲ್ಪಟ್ಟು ಮ್ಯುನಿಸಿಪಾಲಿಟಿಗೆ ೧೧,೧೦೦, ಮಧುರೆಗೆ ೧೪,೦೦೦, ಮಧುರೆಯಲ್ಲಿ ಚರಂಡಿಗಳನ್ನು ಕಡಿಸುವುದಕ್ಕೆ ೩೦೦,೦೦೦, ತುತ್ತುಕುಡಿ ಮ್ಯುನಿಸಿಪಾಲಿಟಿಗೆ ೧೮,೦೦೦, ರಾಮನಾಡು ಡಿಸ್ಟ್ರಿಕ್ಟ ಬೋರ್ಡಿಗೆ ರಾಮೇಶ್ವರದಲ್ಲಿ ನೀರಿನ ಆಶ್ರಯದ ಬಗ್ಗೆ ೬೮ ೦೦೦ ಹೀಗೆ ೩,೭೬,೧೦೦ ರೂಪಾಯಿ ಮದ್ರಾಸು ಸರಕಾರದಿಂದ ಮಂಜೂರಾಗಿರುವುದು

(ಪಬ್ಲಿಸಿಟಿ ಬಿರೊ)

ಕಲ್ಕತ್ತೆಯ ಚಳವಳ—ಇಲ್ಲಿ ಬ್ರಿಟಿಷ್ ಇಂಡಿಯಾ ಸ್ಟೀಮ ನೆವಿಗೇಶನ್ ಕಂಪೆನಿಯ ಕಾರ್ಖಾನೆಯ ನಾಲ್ಕೈದು ಸಾವಿರ ಜನರು ಮುಷ್ಕರ ಹಿಡಿದು ಕೆಲಸ ನಿಲ್ಲಿಸಿದ್ದಾರೆ ಮಾರ್ಟಿನ ಕಂಪೆನಿಯ ಡೊಕ್ಕಿನಲ್ಲಿ (ಹಡಗು ತಂಗುವ ಸ್ಥಳ) ಕೆಲಸ ಮಾಡುವ ೮೦೦ ಮಂದಿ ಮಜೂರರು ಕೆಲಸ ನಿಲ್ಲಿಸಿದ್ದಾರೆ

ಮಂಗಳೂರು ತಾಲೂಕಿನ ಮೂಲ ಪಾಠಶಾಲೆಗಳ ಉಪಾಧ್ಯಾಯರುಗಳ ಸಂಘ.

ಉದ್ದೇಶ —

೧ ಹಳ್ಳಿಪಳ್ಳಿಗಳಲ್ಲಿರುವ ಉಪಾಧ್ಯಾಯರುಗಳನ್ನು ತಿಂಗಳಿಗೆ ಒಂದಾವರ್ತಿ ಒಟ್ಟುಗೂಡಿಸಿ ಅವರಲ್ಲಿ ಪರಸ್ಪರ ಪ್ರೀತಿ ಸಹಕಾರ ಇವೇ ಮೊದಲಾದವುಗಳನ್ನು ಉಂಟುಮಾಡುವುದು

೨ ಎಲಿಮೆಂಟರಿ ಶಾಲೆಯ ಉಪಾಧ್ಯಾಯರುಗಳ ಸ್ಥಿತಿಗತಿಯನ್ನು ಕುರಿತು ಚರ್ಚಿಸುವುದು ಮತ್ತು ಇರುವ ಅನಾನುಕೂಲಗಳನ್ನು ಹೋಗಲಾಡಿಸಲು ಉಪಾಯಗಳನ್ನು ಯೋಚಿಸಿ ಅದರಂತೆ ವರ್ತಿಸಲು ಏರ್ಪಡಿಸುವುದು

೩ ಉಪಾಧ್ಯಾಯರುಗಳು ತಮತಮಗೆ ತೋರುವ ಅಭಿಪ್ರಾಯಗಳನ್ನು ಸರಳವಾಗಿ ಸೂಚಿಸುವಂತೆಯೂ ಅವರಲ್ಲಿರುವ ಕುಂದುಕೊರತೆಗಳನ್ನು ಹೋಗಲಾಡಿಸಿಕೊಳ್ಳುವಂತೆಯೂ ಪ್ರೋತ್ಸಾಹಿಸುವುದು

೪ ಮಂಗಳೂರು ತಾಲೂಕಿನಲ್ಲಿ ಉಪಾಧ್ಯಾಯರ ವೃತ್ತಿಗೆ ಅನುಕೂಲವಾದ ಪುಸ್ತಕ ಭಂಡಾರವನ್ನು ಏರ್ಪಡಿಸುವುದು

೫ ಪುಸ್ತಕ ಭಂಡಾರದ ಹಾಗೂ ಪ್ರತಿ ಶಾಲೆಗೆ ಬೋಧನಾಕ್ರಮವನ್ನು ಅನುಸರಿಸುವ ಒಂದು ಪತ್ರಿಕೆಯನ್ನು ಒದಗಿಸುವ ಬಗ್ಗೆ ಅಕಾಲಮರಣಕ್ಕೆ ತುತ್ತಾದ ಬಡ ಉಪಾಧ್ಯಾಯನ ಗೋಳಾಡುವ ಕುಟುಂಬಕ್ಕೆ ಸ್ವಲ್ಪ ಸಹಾಯವನ್ನು ಮಾಡುವುದಕ್ಕೂ ಮತ್ತು ಚಿಲ್ಲರೆ ಖರ್ಚಿಗೂ, ಒಂದು ಉಪಾಧ್ಯಾಯರ ಫಂಡನ್ನು ಏರ್ಪಡಿಸುವುದು

೬ ಶಾಲಾ ಉಪಾಧ್ಯಾಯರುಗಳು ತಮ್ಮ ಶಾಲೆಯ ಸುತ್ತುಮುತ್ತಲಿರುವ ಹಳ್ಳಿಯ ಜನರನ್ನು ಆಕರ್ಷಿಸಿ ಅವರ ಗುರುತು, ಪರಿಚಯ, ಪ್ರೇಮ ಸಹಾಯ ಉಂಟಾಗುವಂತೆ ಹೆಡ್‌ಮಾಸ್ತರರ ಮುಖಾಂತರ ತಕ್ಕ ಏರ್ಪಾಡು ಮಾಡಲು ಪ್ರಯತ್ನಿಸುವುದು.

೭ ಹಳ್ಳಿಯ ಶಾಲಾಮಾಸ್ತರುಗಳಿಗೆ ಆಗಾಗ್ಗೆ ಬಂದೊದಗುವ ಕಷ್ಟನಿವಾರಣೆಯ ಬಗ್ಗೆ ತಕ್ಕ ಪ್ರಯತ್ನ ಮಾಡುವುದು

೮ ಹೊಸ ಬೋಧನಾಕ್ರಮದ ವಿಷಯವಾಗಿ ಯೋಗ್ಯರಾದವರಿಂದ ಭಾಷಣವನ್ನು ಮಾದರೀ ಪಾಠಗಳನ್ನು ಕೊಡಿಸುವುದು

೯ ಮೂಲ ಪಾಠಶಾಲೆ ಅಭಿವೃದ್ಧಿಗೋಸ್ಕರ ಹಲವು ವಿಧದಿಂದ ಕೈಲಾಗುವಷ್ಟು ಪ್ರಯತ್ನಮಾಡುವುದು

೧೦ ಮಂಗಳೂರು ತಾಲೂಕಿನಲ್ಲಿ ಉಪಾಧ್ಯಾಯರ ಬಗ್ಗೆ ಒಂದು ಪರಸ್ಪರ ಸಹಾಯಕ ಸಂಘವನ್ನು ಏರ್ಪಡಿಸುವುದು

ಈ ಸಂಘದ ಪ್ರಥಮ ಮೀಟಿಂಗು ಒಕ್ಟೋಬರ ತಿಂಗಳ ೩೦ನೇ ಶನಿವಾರ ಸಾಯಂಕಾಲ ೨॥ ಗಂಟೆಗೆ ಹಾಯರ್ ಎಲಿಮೆಂಟರಿ ಟ್ರೈನಿಂಗ್ ಶಾಲೆಯಲ್ಲಿ ಬೋಳಾರ ಶಾಲಾ ಹೆಡ್ ಮಾಸ್ತರಾದ ಮ। ರಾ। ರಾ। ರಂಗಪ್ಪನವರ ಅಧ್ಯಕ್ಷತೆಯಲ್ಲಿ ಜರಗಿತು ಉಡುಪಿ ರೇಂಜಿನ ಕಾರ್ಯದರ್ಶಿಗಳಾದ ಮ। ರಾ। ರಾ। ಹೆಬ್ಬಾರರು ಮೇಲಿನ ಉದ್ದೇಶಗಳನ್ನು ಕುರಿತೂ ಕೆಳಗಿನ ಸಂಗತಿಗಳನ್ನು ಕುರಿತೂ ಬಲು ಚಲೋದಾಗಿ ವಿವರಿಸಿದರು

೧ ಮಂಗಳೂರು ತಾಲೂಕನ್ನು ಬಂಟವಾಳ, ಗುರುಪುರ, ಮುಲ್ಕಿ, ಮತ್ತು ಮಂಗಳೂರುಗಳೆಂಬ ನಾಲ್ಕು ಸೆಂಟರುಗಳಾಗಿ ಮಾಡಿ ವರ್ಷಕ್ಕೆ ಹನ್ನೆರಡು ಸಲ ಈ ಸಂಘದ ಮೀಟಿಂಗು ಜರಗಬೇಕೆಂದೂ ಇವುಗಳಲ್ಲಿ ಮೂರು ಮೀಟಿಂಗು ಮೇಲಿನ ನಾಲ್ಕು ಸೆಂಟರಿನ ಉಪಾಧ್ಯಾಯರು ಮಂಗಳೂರು ತಾಲೂಕಿನಲ್ಲಿ ಒಟ್ಟುಗೂಡಿ ತಾವು ಅಲ್ಲಲ್ಲಿ ತಯಾರಿಸಿದ ರಿಪೋರ್ಟುಗಳನ್ನು ಚರ್ಚಿಸುವುದು, ಉಳಿದ ಒಂಭತ್ತು ಮೀಟಿಂಗುಗಳನ್ನು ಆಯಾ ಸೆಂಟರಿನಲ್ಲಿ ನೆರವೇರಿಸಿ ಆಯಾಯ ಕಾರ್ಯದರ್ಶಿಗಳು ಅಲ್ಲಲ್ಲಿ ಜರಗಿದ ಪ್ರೊಸಿಡಿಂಗ್ಸ್ (Proceedings)ಗಳನ್ನು ಮಂಗಳೂರು ತಾಲೂಕಿನ ಕಾರ್ಯದರ್ಶಿಗಳವರಿಗೆ ಕಳುಹಿಸತಕ್ಕದ್ದು ಪ್ರತಿ ಉಪಾಧ್ಯಾಯನು ಎಲ್ಲಾ ಮೀಟಿಂಗುಗಳಿಗೆ ಬರಲು ಪ್ರಯತ್ನಿಸಬೇಕು ಅಸಾಧ್ಯವೆಂತಾದ್ದಲ್ಲಿ ಕನಿಷ್ಠ ಪಕ್ಷಕ್ಕೆ ೬ ಮೀಟಿಂಗುಗಳಿಗಾದರೂ ಬರಲೇಬೇಕು.

---

೨ ಉಪಾಧ್ಯಾಯರ ಫಂಡಿಗೋಸ್ಕರ ಪ್ರತಿವರ್ಷ ಪ್ರತಿ ಒಬ್ಬ ಉಪಾಧ್ಯಾಯನು ತನಗೆ ಸಿಕ್ಕುವ ಪ್ರತಿ ಒಂದು ರೂಪಾಯಿಯ ಮೇಲೆ ಒಂದು ಪೈಯಂತೆ ವಂತಿಗೆ ಕೊಡಬೇಕು, ಪ್ರತಿ ಶಾಲೆಯ ಹೆಡ್‌ಮಾಸ್ತರರು ಈ ವಂತಿಗೆಯನ್ನು ಒಟ್ಟು ಕೂಡಿಸಿ ಕಾರ್ಯದರ್ಶಿಗೆ ಮುಟ್ಟಿಸತಕ್ಕದ್ದು ಸದರಿ ಕಾರ್ಯದರ್ಶಿಗಳು ತಾಲೂಕು ಸೆಂಟರಿನ ಕೋಶಾಧ್ಯಕ್ಷರಿಗೆ ಮುಟ್ಟಿಸಿ ಆ ದಿವಸವೇ ಮಂಗಳೂರು ತಾಲೂಕಿನ ಕಾರ್ಯದರ್ಶಿಗೆ ಆದಾಯದ ರಿಪೋರ್ಟು ಬರೆದುಕೊಡಬೇಕೆಂದು ನಿರ್ಣಯಿಸಿಯದೆ

೩ ತಿಂಗಳಲ್ಲಿ ಸರಾಸರಿ ೧೦೦ಕ್ಕೆ ಮಿಕ್ಕಿ ಹಾಜರಿರುವ ಎಲ್ಲಾ ಶಾಲೆಗಳಿಗೂ ಒಬ್ಬ ಪೇದೆಯನ್ನು ಕೊಡುವಂತೆ ಬರೆದುಕೊಳ್ಳುವುದು. ಖಾಸಗಿ ಹಾಯರ್ ಎಲಿಮೆಂಟರಿ ಶಾಲೆಗಳಿಗೆ ಗ್ರೇಂಟಿನ ಕೂಡೆ ಪೇದೆಯ ಸಂಬಳವನ್ನು ಕೂಡಿಸಿ ಕೊಡುವಂತೆ ಕೇಳುವುದು

೪ ಎಲ್ಲಾ ಎಲಿಮೆಂಟರಿ ಶಾಲೆಗಳ ಕಾಯಂ ಸಾಧಿಲವಾರನ್ನು ಹೆಚ್ಚಿಸುವಂತೆಯೂ ಹಾಯರ್ ಎಲಿಮೆಂಟರಿ ಶಾಲೆಗಳ ಸಾದಿಲವಾರನ್ನು ತೆಗೆದುಹಾಕಿ ಆಯಾಯ ಶಾಲಾ ಹೆಡ್‌ಮಾಸ್ತರರಿಂದ ಪ್ರತಿ ವರ್ಷ ಸ್ಟೇಶನರಿ ಸ್ಟೇಂಪು ವಸ್ತುಗಳಿಗೆ ಇಂಡೆಂಟು ತರಿಸಿ, ಮಂಜೂರಾದನಂತರ ಅವುಗಳನ್ನು ಹೆಡ್‌ಮಾಸ್ತರರೇ ಪಡೆದು ಹಣದ ಬಗ್ಗೆ ಬಿಲು ಮಾಡುವಂತೆಯೂ ಆಕಸ್ಮಿಕ ಚಿಲ್ಲರೆ ಖರ್ಚಿನ ಬಗ್ಗೆ ಪ್ರತಿ ಹಾಯರ್ ಎಲಿಮೆಂಟರಿ ಶಾಲೆಯ ಹೆಡ್‌ಮಾಸ್ತರರಿಗೆ ರೂಪಾ ೫, (Permanent Advance) ಆಗಿ ಕೊಡಬೇಕೆಂತಲೂ ಪ್ರೆಸಿಡೆಂಟರವರಿಗೆ ಬರೆದುಕೊಳ್ಳಬೇಕು

೫ ಪಟ್ಟಣಗಳಲ್ಲಿ ಕೆಲಸಮಾಡುವ ಪ್ರತಿ ಒಬ್ಬ ಉಪಾಧ್ಯಾಯನಿಗೆ ತಿಂಗಳು ೧೮ ರೂಪಾಯಿ ಪ್ರಕಾರ ಮನೆಬಾಡಿಗೆ ಕೊಡಿಸಬೇಕು

೬ ಎಲಿಮೆಂಟರಿ ಶಾಲೆಗಳಲ್ಲಿ ಕಲಿಯುವ ಎಲ್ಲಾ ಹುಡುಗಿಯರಿಗೆ ಸ್ಕೂಲ್ ಫೀಸು ಮಾಫಿ ಮಾಡಬೇಕಾಗಿ ಬರೆದುಕೊಳ್ಳಬೇಕು

೭ ಹುಡುಗಿಯರ ಶಾಲಾ ಪೇದೆಗಳಿಗೆ ತಿಂಗಳಿಗೆ ರೂಪಾ ೫—೦—೦ ಕಾಯಂ ಸಂಬಳವೂ ಹಾಜರೀ ಸಂಖ್ಯೆಯ ಮೇಲೆ ತಿಂಗಳು ಒಂದರ ಪ್ರತಿ ಹುಡುಗಿಗೆ ೧ ಆಣೆ ಪ್ರಕಾರ ಕೆಪಿಟೇಶನ್ ಎಲೋವೆನ್ಸನ್ನೂ ಕೊಡಿಸುವಂತೆ ಕೇಳುವುದು

೮ ಹಳ್ಳಿ ಶಾಲೆಗೆ ಈಗಿರುವ ರಜೆ ಅಲ್ಲದೆ ಇನ್ಸ್‌ಪೆಕ್ಟರು ರಜೆಯನ್ನೂ ನ್ಯಾಯವಾದ ಸಬಬಿನ ಮೇಲೆ ಉಪಯೋಗಿಸುವಂತೆ ಆಕಸ್ಮಾತವಾಗಿ ೫ ದಿವಸ ಸ್ಪೆಶಲ್ ರಜೆಯನ್ನು ಕೊಡುವಂತೆ ಕೇಳುವುದು

೯ ಇಂಥ ಕಷ್ಟಕಾಲದಲ್ಲಿ ಈ ವರೆಗೂ ಏತೊಂದು ತರದ ಸಹಾಯ ಪಡೆಯದೆ ಇರುವ ಹಳ್ಳಿ ಶಾಲಾಮಾಸ್ತರರುಗಳಿಗೆ ಸಂಬಳದ ಗ್ರೇಡು ನಿಶ್ಚೈಸುವವರೆಗೆ ಸರಕಾರಿ ನೌಕರರಿಗೆ ಕೊಟ್ಟಂತೆ ಎಪ್ರೀಲು ೧ರಿಂದ ಎಲೋವೆನ್ಸ್ ಕೊಡಬೇಕಾಗಿ ಡಿಸ್ಟ್ರಿಕ್ಟ ಬೋರ್ಡಿನವರು ನಿರ್ಣಯಿಸಿದ್ದರೂ ಈ ವರೆಗೂ ಸಿಕ್ಕದೆ ಇರುವುದರಿಂದ ಆ ಎಲೋವೆನ್ಸ್ ಆದಷ್ಟು ಬೇಗನೆ ಬಟ್ವಾಡೆಯಾಗುವಂತೆಯೂ ಖಾಸಗೀ ಶಾಲೆಯವರಿಗೆ ಸಹ ಗ್ರೇಂಟಿನ ದರವನ್ನು ಏರಿಸುವ ವರೆಗೆ ಎಲೋವೆನ್ಸ್ ರೂಪದಲ್ಲಿ ಹೆಚ್ಚಿನ ಗ್ರೇಂಟು ಕೊಡಿಸುವಂತೆಯೂ ಕೂಡಲೇ ಬರೆದುಕೊಳ್ಳಬೇಕು

೧೦ ಹುಡುಗಿಯರ ಶಾಲೆಯಲ್ಲಿ ೬ ವರ್ಷಕ್ಕಿಂತ ಹೆಚ್ಚು ಸರ್ವೀಸು ಆದ ಉಪಾಧ್ಯಾಯನಿಯರಿಗೆ ವಿನಾಯತಿ ಸರ್ಟಿಫಿಕೇಟು ಕೊಡುವಂತೆ ಬರೆದುಕೊಳ್ಳುವುದು

೧೧ ಹಾಯರ್ ಗ್ರೇಡಿನಲ್ಲಿ ಟ್ರೈನಾಗಿ ಸ್ಪೆಶಲ್ ಸ್ಕೂಲ್‌ಫೈನಲ್ ಪರೀಕ್ಷೆಯಲ್ಲಿ ಪಾಸಾದ ಉಪಾಧ್ಯಾಯರುಗಳನ್ನು ಸೆಕೆಂಡರಿ ಗ್ರೇಡಿನವರಂತೆಯೂ ತದ್ರೀತಿ ಲೋವರ್ ಗ್ರೇಡಿನಲ್ಲಿ ಟ್ರೈನಾಗಿ ಲೋವರ್ ಸೆಕೆಂಡರಿ ಪರೀಕ್ಷೆಯಲ್ಲಿ ಪಾಸಾದ ಉಪಾಧ್ಯಾಯರುಗಳನ್ನು ಹಾಯರ್ ಗ್ರೇಡಿನವರಂತೆ ಲೆಕ್ಕಿಸುವಂತೆ ಬರೆದುಕೊಳ್ಳುವುದು

೧೨ ಉಪಾಧ್ಯಾಯ ಕಸಬಿನಲ್ಲಿಷ್ಟು ಯಾವಾತನೂ ಒಬ್ಬ ಯೋಗ್ಯನಾದವನನ್ನು ಉಪಾಧ್ಯಾಯರೇ ಕೂಡಿ ಚುನಾಯಿಸಿ ತಾಲೂಕು ಬೋರ್ಡಿಗೆ ಮೆಂಬರನಾಗಿ ಕಳುಹಿಸಲು ಅಪ್ಪಣೆಕೊಡುವ ಹಾಗೆ ಗವರ್ನಮೆಂಟಿಗೆ ಬರೆದುಕೊಳ್ಳುವುದು

೧೩ ಹಳ್ಳಿ ಶಾಲಾ ಉಪಾಧ್ಯಾಯರುಗಳಿಗೆ ಈ ಕೆಳಗಿನ ಸ್ಕೇಲ್ ಪ್ರಕಾರ ನಿರ್ಣಯಿಸುವಂತೆಯೂ ಆ ಪ್ರಮಾಣದಲ್ಲೇ ಖಾಸಗೀ ಶಾಲೆಗೂ ಗ್ರೇಂಟಿನ ದರ ಏರಿಸುವ ತೆರನೂ ಕೂಡಲೆ ಬರೆದುಕೊಳ್ಳಬೇಕು

(a) ಪ್ರೈಮರಿ ಗ್ರೇಡಿನ ಪಾಸಾದ ಉಪಾಧ್ಯಾಯರುಗಳಿಗೆ ೩೦—೨—೬೦ (೧೫ ವರ್ಷದಲ್ಲಿ)

(b) ಹಾಯರ್ ಗ್ರೇಡಿನವರಿಗೆ ೩೫—೩—೮೦ (,,)

(c) ಎಲಿಮೆಂಟರಿ ಶಾಲೆಯಲ್ಲಿ ಕೆಲಸ ಮಾಡುವ ಸೆಕೆಂಡರಿ ಗ್ರೇಡಿನವರಿಗೆ ೬೦—೪—೧೨೦ (,,)

(d) ಟ್ರೈನಾಗದೆ ಇರುವವರಿಗೆ ಟ್ರೈನಾದವರಿಗಿಂತ ೧೦ ರೂಪಾಯಿ ಸಂಬಳ ಕಡಿಮೆ

(e) ಲೋವರ್ ಎಲಿಮೆಂಟರಿ ಶಾಲೆ ಹೆಡ್‌ಮಾಸ್ತರರುಗಳಿಗೆ ತಿಂಗಳು ೧೫ ರೂಪಾಯಿ ಪ್ರಕಾರವೂ ಹಾಯರ್ ಎಲಿಮೆಂಟರಿ ಶಾಲೆಯವರಿಗೆ ೧೦ರಂತೆಯೂ ಚಾರ್ಜ ಎಲೋವೆನ್ಸು

(೧೪) ಈ ರೇಂಜಿನ ಸಬ್ ಅಸಿಸ್ಟೆಂಟ್ ಇನ್ಸ್‌ಪೆಕ್ಟರರಾದ ಮ। ರಾ। ರಾ। ಎಸ್ ರಘುನಾಥರಾಯರನ್ನು ಈ ಸಂಘದ ಅಧ್ಯಕ್ಷರಾಗಿರಲು ಬೇಡಿಕೊಳ್ಳಬೇಕೆಂತಲೂ ಅವರು ಒಪ್ಪದಿದ್ದ ಪಕ್ಷಕ್ಕೆ ಮಾಜಿ ಅಸಿಸ್ಟೆಂಟ್ ಇನ್ಸ್‌ಪೆಕ್ಟರರಾದ ಮ। ರಾ। ರಾ। ಯು ರಘುವೀರರಾಯರನ್ನು ಕೇಳಬೇಕೆಂದು ನಿರ್ಣಯಿಸಿರುತ್ತದೆ. ಮಿ। ಜೆ ವಿ ರೋಚರನ್ನು ತಾಲೂಕು ಸಂಘದ ಕಾರ್ಯದರ್ಶಿಯಾಗಿಯೂ, ಬಂಟ್ವಾಳ ಸೆಂಟರಿಗೆ ಮ। ರಾ। ಕೆ ಗಣಪತಿರಾಯರನ್ನೂ, ಕಿನ್ನಿಕಂಬಳ ಯಾ ಗುರುಪುರಕ್ಕೆ ಮ। ರಾ। ಕೆ ಕೃಷ್ಣಯ್ಯ ಅಥವಾ ಮ। ರಾ। ಬಾಗ್ಲೋಡಿ ಕೃಷ್ಣರಾಯರನ್ನೂ, ಮುಲ್ಕಿ ಸೆಂಟರಿಗೆ ಮ। ರಾ। ಸಂಜೀವರಾಯರನ್ನೂ ಆಯಾ ಸೆಂಟರಿನ ಸೆಕ್ರೆಟರಿಗಳಾಗಿಯೂ ಮಿ। ಕನ್ನಿಲೀನವರನ್ನು ಸಂಘದ ಕೋಶಾಧ್ಯಕ್ಷರಾಗಿಯೂ ನೇಮಿಸಲಾಯಿತು

ಈ ಸಂಘದ ರೂಲ್ಸುಗಳ ೫೦೦ ಪ್ರತಿಗಳನ್ನು ಧರ್ಮಾರ್ಥವಾಗಿ ಛಾಪೆಮಾಡಿಸಿಕೊಡುತ್ತೇನೆಂದು ವಾಗ್ದಾನಮಾಡಿದ ಶಾರದಾ ಪ್ರೆಸ್ಸಿನ ಮನೇಜರರಾದ ಮ। ರಾ। ರಾ। ವಿ ಎಸ್ ಕಾಮತರವರಿಗೂ ಈ ಸಂಘವು ನೆರವೇರುವುದಕ್ಕೆ ಸ್ಥಳಕೊಟ್ಟ ಟ್ರೈನಿಂಗ್ ಶಾಲಾ ಹೆಡ್‌ಮಾಸ್ತರರಾದ ಮ। ರಾ। ರಾ। ಪಿ. ಮಂಗೇಶರಾಯರಿಗೂ ಅವರ ಸಹಾಯಕ ಉಪಾಧ್ಯಾಯರುಗಳಿಗೂ, ಮಂಗಳೂರು ತಾಲೂಕಿನ ಉಪಾಧ್ಯಾಯರುಗಳ ಬಗ್ಗೆ ತನ್ನ ಅಮೂಲ್ಯವಾದ ಸಮಯವನ್ನು ವಿನಿಯೋಗಿಸಿ ಸಮ್ಮೇಳನದ ಆಹ್ವಾನದ ಕಷ್ಟಗಳನ್ನು ಲಕ್ಷ್ಯಿಸದೆ ಕಷ್ಟಗಳಾಗಿ ಮಾಡಲಿಕ್ಕೆ ಪ್ರಯತ್ನಿಸುವ ಉಡುಪಿ ತಾಲೂಕಿನ ಕಾರ್ಯದರ್ಶಿಗಳಾದ ಮ। ರಾ। ಹೆಬ್ಬಾರರಿಗೂ ಸಭೆಯ ಪ್ರತ್ಯುಪಕಾರಪೂರ್ವಕವಾದ ವಂದನೆಗಳು

ಜೆ. ವಿ. ರೋಚ್,
ಸೆಕ್ರೆಟರಿ, ಮಂಗಳೂರು
೩-೧೧-೨೦ ಸಂಘ

[illegible]

ಸ್ವದೇಶಾಭಿಮಾನಿ.

ಶಕ ೧೮೪೨ ಕಾರ್ತಿಕ ಶು| ೨ ಶುಕ್ರವಾರ.

ವೈಸರಾಯರೂ ಅಸಹಕಾರಿತೆಯೂ

ವೈಸರಾಯರಾದ ಲೊರ್ಡ ಚೆಮ್ಸಫೊರ್ಡ ದೊರೆಗಳು ಬೇಗನೆ ಸ್ವದೇಶಕ್ಕೆ ತಿರುಗುವವರಾಗಿದ್ದದರಿಂದ ಈ ದೇಶದ ಬೇರೆ ಬೇರೆ ಪ್ರಾಂತ್ಯಗಳನ್ನು ಸಂಚರಿಸಹತ್ತಿದ್ದಾರೆ. ಅಸಹಕಾರಿತೆಯ ಈ ಕಾಲದಲ್ಲಿ ವೈಸರಾಯರು ಪಟ್ಟಣಗಳಿಗೆ ಹೇಗೆ ಬರುತ್ತಾರೊ ಹಾಗೆಯೆ ಹೋಗುತ್ತಾರೆ; ಎಂದರೆ ಅವರ ಆಗತಸ್ವಾಗತ, ಮಾನಪತ್ರ ಸಮರ್ಪಣ ಮುಂತಾದ ಪ್ರಾಚೀನ ವಿಧಿಗಳು ನಿರ್ಮಾಲ್ಯವಾಗಿದ್ದಾವೆ. ಇಂಗ್ಲಿಷ್ ಶಿಕ್ಷಣದ ಪ್ರಭಾವದಿಂದ ಸಾಮಾನ್ಯವಾಗಿ ಎಲ್ಲರಲ್ಲಿ ಸಂಧ್ಯಾವಂದನೆ ಮುಂತಾದ ಹಳೆ ಕ್ರಮವು ಹೇಗೆ ಬಿಟ್ಟು ಹೋಗಿದೆಯೋ ಹಾಗೆಯೆ ದೊಡ್ಡ ದೊಡ್ಡ ಅಧಿಕಾರಿಗಳನ್ನು ಸನ್ಮಾನಿಸಿ, ಮಾನಪತ್ರಗಳನ್ನು ಸಮರ್ಪಿಸುವ ಹಳೆ ಪರಂಪರೆಯೂ ಬಹು ಬೇಗನೆ ಲುಪ್ತವಾಗಹತ್ತಿದೆ. ವೈಸರಾಯರು ಜಬಲಪುರ, ನಾಗಪುರ ಮುಂತಾದ ದೊಡ್ಡದೊಡ್ಡ ಪಟ್ಟಣಗಳನ್ನು ಯಾವಾಗ ಪ್ರವೇಶಿಸಿದರು ಮತ್ತು ಯಾವಾಗ ಅಲ್ಲಿಂದ ಹೊರಟರು, ಈ ಸಂಗತಿಯು ಸರಕಾರಿ ಅಧಿಕಾರಿಗಳು ಹಾಗು ಕೆಲವು ಆ ಅಧಿಕಾರಿಗಳ ಗೊತ್ತಿನ ಪ್ರತಿಷ್ಠಿತ ಜನರು, ಇವರಿಗಲ್ಲದೆ ಇತರರಿಗೆ ಗೊತ್ತೇ ಆಗಲಿಲ್ಲವೆಂಬೀ ವಾರ್ತೆಯು ನಮ್ಮ ವಾಚಕರ ಕಿವಿಯ ಮೇಲಿಂದ ಮೊದಲೆ ಹಾದುಹೋಗಿದೆ. ವೈಸರಾಯರ ಆಗಮನ ಮಹೋತ್ಸವವನ್ನು ಬಹಿಷ್ಕರಿಸಿದವುಗಳು ಜಬಲಪುರ, ನಾಗಪುರ, ಈ ಎರಡೇ ಪಟ್ಟಣಗಳಲ್ಲ, ಬೇರೆ ಎಷ್ಟೋ ಪಟ್ಟಣಗಳಿವೆ. ಡ್ಯೂಕ್-ಒಫ್-ಕೊನೊಟರಂಥ ರಾಜಕುಲದ ಮಹಾ ಪುರುಷರು ಈ ದೇಶಕ್ಕೆ ಬಂದು ಹೊಸ ಕೌನ್ಸಿಲುಗಳನ್ನು ತೆರೆಯಲಿಕ್ಕಿರುವ ಆ ಸಮಾರಂಭವನ್ನು ಬಹಿಷ್ಕರಿಸಬೇಕು, ಅವರ ಸ್ವಾಗತವನ್ನು ಮಾಡಬಾರದು ಎಂದು ಮುಂತಾಗಿ ಯಾವಕಡೆಯಲ್ಲಿ ಅವರ ಆಗಮನದ ಬಗ್ಗೆ ಬಹಿಷ್ಕಾರದ ಚಳವಳವು ಬಹು ಭರದಿಂದ ನಡೆಯಹತ್ತಿದೆಯೊ ಆ ದೇಶದಲ್ಲಿ ವೈಸರಾಯರ ಮಾನಪತ್ರಗಳಿಗೆ ಅರ್ಧಚಂದ್ರವು ದೊರಕುವುದು ಆಶ್ಚರ್ಯವೆ? ಈಗಿನ ವೈಸರಾಯರಾದ ಚೆಮ್ಸಫೊರ್ಡ ದೊರೆಗಳ ಹೆಸರು ನೆನಪಿಗೆ ಬಂದ ಕೂಡಲೆ ಜನರ ಕಣ್ಣಿನ ಮುಂದೆ ಪಂಜಾಬದ ಆ ಭಯಂಕರ ಪ್ರಕಾರಗಳು, ರೌಲೆಟ್ ಕಾನೂನಿನ ಆ ನಿಷ್ಠುರ ಸಂಗತಿಗಳು, ಹಾಗು ಖಿಲಾಫತ್ತಿನ ಆ ವಚನಭಂಗಗಳು ನಿಲ್ಲದೆ ಇರುವುದಿಲ್ಲ. ಚೆಮ್ಸಫೊರ್ಡ ದೊರೆಗಳು ವೈಯುಕ್ತಿಕ ದೃಷ್ಟಿಯಿಂದ ಬಹಳ ಗುಣಿಗಳೂ, ನ್ಯಾಯನೀತಿಪ್ರಿಯರೂ, ಸ್ನೇಹಾಭಿಲಾಷಿಗಳೂ ಎಂದು ಹೇಳುತ್ತಾರೆ. ಅಂಥವರನ್ನು ಸತ್ಕರಿಸಲು ಜನರು ವಿಮನಸ್ಕರಾದದ್ದು ಬಹು ವ್ಯಸನಕರವೆಂದು ಅನೇಕರಿಗೆ ತೋರುವ ಸಂಭವವಿದೆ. ಅಲ್ಲದೆ, ಹಿಂದುಸ್ಥಾನದ ಜನರು ಕೃತಘ್ನರಲ್ಲ, ಅವರು ಬಹು ನಮ್ರರು, ನ್ಯಾಯನೀತಿವಂತರನ್ನೂ ಗುಣಿಗಳನ್ನೂ ಅವರು ಬಹು ಮಮತೆಯಿಂದ ಪ್ರೀತಿಸುವವರು; ಹೀಗಿರಲು ವೈಸರಾಯರ ಮಾನಪತ್ರಗಳಿಗೆ ಇತ್ತಲಾಗೆ ಅಲ್ಲಲ್ಲಿ ಯಾಕೆ ಬಹಿಷ್ಕಾರವು ಬೀಳಹತ್ತಿದೆ? ಈ ಪ್ರಶ್ನೆಯನ್ನು ಸುಲಭವಾಗಿ ಉತ್ತರಿಸಬಹುದು. ಚೆಮ್ಸಫೊರ್ಡ ದೊರೆಗಳ ವೈಯುಕ್ತಿಕ ಗುಣಗಳು ರಾಜಕಾರಣದಲ್ಲಿ ಉಪಯೋಗಕ್ಕೆ ಬಿದ್ದದ್ದು ಕಂಡು ಬರುವುದಿಲ್ಲ. ಅವರು ರಾಜ ವಸ್ತ್ರಗಳನ್ನು ಪರಿಗ್ರಹಿಸಿದಾಗ ಅವರ ಕೈ ಬಿಗುವಾಗುವುದು, ಅವರ ಮನಸ್ಸು ಕಠೋರವಾಗುವುದು. ಎಂದರೆ ಚೆಮ್ಸಫೊರ್ಡರ ಆಳಿಕೆಯು ಪ್ರತೀಕ[illegible] [illegible] ಉದಾರನಾಗಿದ್ದನು, ನ್ಯಾಯನೀತಿ ಪ್ರಿಯನಾಗಿದ್ದನು, [illegible] ನಾಗಿದ್ದನು. ಇವನು ಈ ಗುಣ ಸಮುದಾಯವನ್ನು [illegible] ಹಾರದಲ್ಲೂ, ರಾಜಕಾರಣದ ವ್ಯವಹಾರದಲ್ಲೂ ಏಕಪ್ರಕಾರವಾಗಿ ಉಪಯೋಗಿಸುತ್ತಿದ್ದನು. ಅದರಲ್ಲಿ ಎರಡು ನಮೂನೆಗಳು ಇದ್ದಿಲ್ಲ. ಹೀಗಾದ್ದರಿಂದಲೆ ಅವನು ಆಗಿನ ಪ್ರಜೆಗಳ ಸತ್ಕಾರಕ್ಕೆ ಮತ್ತು ಮಾನಪತ್ರಕ್ಕೆ ಪಾತ್ರನಾಗಿದ್ದನು. ನಮ್ಮ ಚೆಮ್ಸಫೊರ್ಡ ದೊರೆಗಳು ರಾಜಕೀಯ ವ್ಯವಹಾರದಲ್ಲಿ ಕೈ ಬಿಗುಹಿಡಿದ ಕಾರಣ ಜನರು ಕೂಡ ಇತ್ತೀಚಲಾಗೆ ದೊರೆಗಳ ಈ ಅನುಕರಣೀಯವಾದ ಉದಾಹರಣವನ್ನೆ ಮೇಲ್ಪಂಕ್ತಿಯನ್ನಾಗಿ ಇಟ್ಟುಕೊಳ್ಳಹತ್ತಿದ್ದಾರೆ. ವ್ಯಕ್ತಿದೃಷ್ಟಿಯಿಂದ ದೊರೆಗಳು ಜನರಿಗೆ ಮಹಾ ಪೂಜ್ಯರು. ಆದರೆ ರಾಜಪ್ರತಿನಿಧಿತ್ವದ ದೃಷ್ಟಿಯಿಂದ ಅವರು ಜನರ ಪ್ರೀತಿಗೆ ಪಾತ್ರರಾಗಲಿಲ್ಲ.

ಲೊರ್ಡ ಚೆಮ್ಸಫೊರ್ಡ ದೊರೆಗಳ ಅಂತರಂಗದ ಮತ್ತು ಬಹಿರಂಗದ ಮೀಮಾಂಸೆಯನ್ನು ಈ ಮೇಳೆಗೆ ವಾಚಕರ ಮುಂದೆ ಇಡುವ ಕಾರಣವೇನೆಂದರೆ, ದೊರೆಗಳು ತಮ್ಮ ರಾಜಕೀಯ ಆಚರಣದಿಂದ ಜನರ ಮನಸ್ಸನ್ನು ನೋಯಿಸಹತ್ತಿ ಅಸಹಕಾರಿತೆಯ ಉಪಕ್ರಮಕ್ಕೆ ಕಾರಣವಾದರೂ ಎಲ್ಲ ಕಡೆಯ ಜನರು ಈ ಅಸಹಕಾರಿತೆಯನ್ನು ಇನ್ನೂ ಅಂಗೀಕರಿಸಲಿಲ್ಲ, ಅಂಥವರು ದೊರೆಗಳ ವಿಷಯದಲ್ಲಿ ತಮ್ಮ ಪೂಜ್ಯಭಾವವನ್ನು ಇನ್ನೂ ಹಾಗೆಯೆ ಇಟ್ಟುಕೊಂಡಿದ್ದಾರೆ. ಈ ನಮೂನೆಯ ಕೆಲವರು ದೊರೆಗಳನ್ನು ಆದರಿಸುವುದರಲ್ಲಿ, ಮಾನಪತ್ರಗಳನ್ನು ಸಮರ್ಪಿಸುವುದರಲ್ಲಿ ಉದ್ಯುಕ್ತರಾಗುತ್ತಾರೆ. ಇಂಥದೊಂದು ಸಂದರ್ಭವು ಕಳೆದವಾರ ಬಂದೊದಗಿತು. ವೈಸರಾಯರು ಆಸ್ಸಾಮಪ್ರಾಂತ್ಯಕ್ಕೆ ಚಿತ್ತಯಿಸಿದ್ದರು. ಆಸ್ಸಾಮ ಪ್ರಾಂತದೊಳಗಿನ ಸಿಲಹತ್ತಿನಲ್ಲಿ ವೈಸರಾಯರಿಗೆ ಲೋಕಲ್‌ಬೋರ್ಡ ಮುನ್ಸಿಪಾಲಿಟಿ ಮತ್ತು ಅಂಜುಮಾನಿ-ಇಸ್ಲಾಮಿಯಾ ಕ್ಲಬ್ಬ್ ಈ ಮೂರು ಸಂಸ್ಥೆಗಳ ಕಡೆಯಿಂದ ಬೇರೆ ಬೇರೆ ಮೂರು ಮಾನಪತ್ರಗಳು ಕೊಡಲ್ಪಟ್ಟವು. ವೈಸರಾಯರು ಈ ಮೂರು ಮಾನಪತ್ರಗಳಿಗೆ ಬೇರೆ ಬೇರೆ ಉತ್ತರಗಳನ್ನು ಕೊಟ್ಟರು. ಲೋಕಲ್‌ಬೋರ್ಡು ಮತ್ತು ಮುನ್ಸಿಪಾಲಿಟಿ ಇವುಗಳಿಗೆ ಕೊಟ್ಟ ಉತ್ತರದಲ್ಲಿ ಆಯಾ ಅಹವಾಲೆಗಳ ವಿಲೆವಾರಿಯ ವಿಷಯ ಮಾತ್ರವಿತ್ತು. ಆದರೆ ಮುಸಲ್ಮಾನ ಬಂಧುಗಳಿಗೆ ಕೊಟ್ಟ ಅವರ ಉತ್ತರದಲ್ಲಿ ಖಿಲಾಫತ್ತಿನ ಮತ್ತು ಅಸಹಕಾರಿತೆಯ ನಿರ್ದೇಶವಿತ್ತು. ವೈಸರಾಯರಿಗೆ ಈ ಎರಡು ವಿಷಯಗಳ ನಿರ್ದೇಶಮಾಡದೆ ನಿವೃತ್ತಿ ಇದ್ದಿಲ್ಲ. ಯಾಕೆಂದರೆ, ತುರ್ಕಿಯ ಒಪ್ಪಂದದ ಕಲಮುಗಳು ಸರಿ ಇಲ್ಲ, ಅವುಗಳಲ್ಲಿ ಯೋಗ್ಯ ತಿದ್ದುಪಾಡಾಗ ಬೇಕು ಎಂದು ಕೇಳುವ ಸಿಲಹತ್ತಿನ ಕೆಲವು ಮುಸಲ್ಮಾನರು ವೈಸರಾಯರಿಗೆ "ನಿಮಗೆ ಮಾನಪತ್ರವನ್ನು ಕೊಡುವುದು ನಮಗೆ ಇಷ್ಟವಿಲ್ಲ; ಆದ್ದರಿಂದ ನೀವು ಅದನ್ನು ಸ್ವೀಕರಿಸಕೂಡದು" ಎಂದು ಬರೆದುಕಳುಹಿಸಿದ್ದರೆಂದು ಅವರ ಭಾಷಣದಿಂದ ಕಂಡುಬರುತ್ತದೆ. ಈ ಕಾರಣದಿಂದ ವೈಸರಾಯರು ಮುಸಲ್ಮಾನರ ಮಾನಪತ್ರವನ್ನು ಬಿಟ್ಟುಬಿಡುವ ಮನಃಸಂಕೋಚವನ್ನು ತಾಳಿದರೊ ಎಂದು ಒಂದು ವೇಳೆ ಕೆಲವರು ಸಂಶಯಪಡಬಹುದು. ಆದರೆ ಅವರು ಅಂಥ ಮನಃಸಂಕೋಚವನ್ನು ಪಡದೆ, ಉದಾರಭಾವದಿಂದ ಅದನ್ನು ಅಂಗೀಕರಿಸಿ, ಅದಕ್ಕೆ ಪ್ರತ್ಯುತ್ತರ ಕೊಡುವಾಗ ಖಿಲಾಫತ್ತಿನ ಹಾಗು ಅಸಹಕಾರಿತೆಯ ನಿರ್ದೇಶವನ್ನು ಬಹು ಉದಾರಭಾವದಿಂದ ಮಾಡಿದ್ದಾರೆ!

ಅಸಹಕಾರಿತೆಯ ಎಂದರೆ ಖಿಲಾಫತ್ತಿನ ವಿಷಯವನ್ನು ಚರ್ಚಿಸುವಾಗ ವೈಸರಾಯರು ಹೇಳಿದ ಒಂದೆರಡು ಮಾತುಗಳು ಅನೇಕ ಚರ್ಚೆಗೆ ಆಸ್ಪದವನ್ನು ಕೊಡುತ್ತವೆ. ಈ ಚರ್ಚೆಯ ಮರ್ಮವು ವಾಚಕರ ಮನಸ್ಸಿನಲ್ಲಿ ಳಿಯಬೇಕಾದರೆ ವೈಸರಾಯರು ಶಿಕ್ಷಣದ ಮಹತ್ವವನ್ನು ಕುರಿತು ಅದೇ ಭಾಷಣದಲ್ಲಿ ಅತ್ಯುಪಯುಕ್ತವಾದ ಯಾವುದೊಂದು ತತ್ವವನ್ನು ವಿವರಿಸಿದರೊ ಅದನ್ನು ಕೊಂಚಮಟ್ಟಿಗೆ ವಾಚಕವರ್ಗದ ಮುಂದೆ ಇಡುವುದು ಲೇಸೆಂದು ತೋರುತ್ತದೆ. ಶಿಕ್ಷಣದ ಅಭಿವೃದ್ಧಿಯಾಗಬೇಕೆಂದು ಸಿಲಹತ್ತಿನವರು ಕೇಳಿಕೊಂಡ ಮಾತಿಗೆ ವೈಸರಾಯರು ಉತ್ತರಕೊಟ್ಟಿದ್ದೇನೆಂದರೆ:—ಶಿಕ್ಷಣದಿಂದಲೆ ಜಾತಿಗಳೂ ಜನಾಂಗಗಳೂ ಅಭಿವೃದ್ಧಿಯನ್ನು ಹೊಂದುತ್ತವೆ; ಇದು ವರೆಗೆ ನಮ್ಮ ಮುಸಲ್ಮಾನ ಸಮಾಜದಲ್ಲಿ ಶಿಕ್ಷಣದ ಪ್ರಗತಿಯು ಆಗಿಲ್ಲ; ಆದರೆ ಈಗ ಶಿಕ್ಷಣಾಭಿರುಚಿಯು ಉಂಟಾದ ಕಾರಣ ಇನ್ನು ಮುಂದೆ ಈ ಅಪವಾದವು ನಿಲ್ಲಲಿಕ್ಕಿಲ್ಲ." ವೈಸರಾಯರ ಈ ವಿಧಾನದಲ್ಲಿ ಎರಡು ಸಂಗತಿಗಳಿವೆ. 'ಶಿಕ್ಷಣವು ದೇಶಾಭಿವೃದ್ಧಿಯನ್ನು ಮಾಡುತ್ತದೆ ಮತ್ತು ಅಂಥ ಶಿಕ್ಷಣವನ್ನು ಎಲ್ಲರೂ ಅಂಗೀಕರಿಸಬೇಕು; ಅದನ್ನು ಯಾರೂ ಬಿಡಬಾರದು.' ಶಿಕ್ಷಣದ ವಿಷಯದಲ್ಲಿ ಚೆಮ್ಸಫೊರ್ಡ ದೊರೆಗಳು ಪ್ರಕಟಿಸಿರುವ ಈ ಮತವು ಯೋಗ್ಯವಾಗಿದೆ. ಶಿಕ್ಷಣದಿಂದ ಜನಾಂಗವು ಅಭಿವೃದ್ಧಿಯನ್ನು ಹೊಂದುತ್ತದೆಂಬ ಮಾತು ರೂಪಾಯಿಗೆ ೧೬ ಆಣೆ ಸತ್ಯವಾದ್ದು. ಇದರಲ್ಲಿ ಯಾವ ಅತಿಶಯೋಕ್ತಿಯೂ ಇಲ್ಲ. ಹೀಗಾದ್ದರಿಂದಲೆ ಅಲ್ಲವೆ ಹಿಂದಿಗಳು 'ಇಲ್ಲಿ ಶಿಕ್ಷಣವನ್ನು ಹಬ್ಬಿಸಿರಿ, ಶಿಕ್ಷಣವನ್ನು ಹಬ್ಬಿಸಿರಿ' ಎಂದು ಸರಕಾರದ ಮುಂದೆ [illegible] ಗೋಖಲೆಯವರ ಕಾಲದಿಂದ [illegible] ಪ್ರಶ್ನೆಯು ಉದ್ಭವಿಸಿದ್ದಾಗಿಯೂ, [illegible] ಇನ್ನಾವುದು? [illegible] ಇಲ್ಲ. [illegible] ಕೊಡುತ್ತಾರೊ [illegible] ಆದರೆ ಜನರ ಆ [illegible] ಆಗುವುದಿಲ್ಲ. ಶಿಕ್ಷಣವು [illegible] ಮತ್ತು ಇಂಥ ಕೆಲಸ [illegible] ಜನರು ನಿಮಗೆ ಕಂದಾಯವನ್ನು ಕೊಡುತ್ತಾರೆ. ಆದರೆ ನೀವು ಮಾತ್ರ ಆ ಎಲ್ಲ ಹಣವನ್ನು ಅನಾವಶ್ಯಕವಾದ ಲಷ್ಕರಿನ ಖಾತೆಯನ್ನು ಬೆಳಸುವದರಲ್ಲಿ ಖರ್ಚು ಮಾಡತೊಡಗುತ್ತೀರಿ! ಶಿಕ್ಷಣದ ಹೆಸರು ತೆಗೆಯುವಾಗ ನಿಮಗೆ ಹಣವಿಲ್ಲಾಗುತ್ತದೆ. ಎಂದ ಮೇಲೆ ಇಲ್ಲಿಯ ಶಿಕ್ಷಣದ ಮೇಲೆ ನಿಮಗೆ ಅಭಿಮಾನ ಮತ್ತು ಪ್ರೇಮವು ಎಷ್ಟೆಂಬುದು ಸ್ವಯಮೇವ ಗೊತ್ತಾಗುತ್ತದೆ. ಇದಲ್ಲದೆ ನೀವು ಇಲ್ಲಿ ಯಾವ ಶಿಕ್ಷಣವನ್ನು ಕೊಡುತ್ತಿದ್ದೀರಿ ಅದಕ್ಕೆ ಶಿಕ್ಷಣದ ಮಾರ್ಕೆಟಿನಲ್ಲಿ ನಿಜವಾಗಿ ಎಷ್ಟು ಬೆಲೆಯೆಂಬುದನ್ನು ನಾವು ಹೇಳಬೇಕಾದ ಅಗತ್ಯವಿಲ್ಲ. ಶಿಕ್ಷಣಕ್ಕೂ ಸ್ವಾವಲಂಬನಕ್ಕೂ ಏನು ವ್ಯತ್ಯಾಸವೆಂದು ಕೇಳಿದಲ್ಲಿ ಅವು ಪರ್ಯಾಯವಾಚಕ ಶಬ್ದವೆಂದು ಒಂದು ವೇಳೆ ಹೇಳಬಹುದು. ಶಿಕ್ಷಣ ಪಡೆದವನು ಸ್ವಾವಲಂಬಿಯಾಗಿರುತ್ತಾನೆ. ಆದರೆ ಇಲ್ಲಿಯ ಶಿಕ್ಷಣವು ಶಿಕ್ಷಿತನನ್ನು ಮುಂದಿನ ವ್ಯವಹಾರದಲ್ಲಿ ಪರಾವಲಂಬಿಯನ್ನಾಗಿ ಮಾಡುತ್ತದೆ. ಸಾರಾಂಶ ಮೊದಲನೆಯದಾಗಿ ಶಿಕ್ಷಣವೆ ಅಷ್ಟೊಂದು ಶ್ರೇಷ್ಠ ತರಗತಿಯದಲ್ಲ; ಆದಾದರೂ ಧಾರಾಳವಾಗಿ ಉಂಟೆ? ಇಲ್ಲ. ಇಂಥ ಶಿಕ್ಷಣಕ್ಕೆ ಯಾರು ಬಾಯಿ ತೆರೆದಾರು? ಈ ಕಾರಣದಿಂದಲೆ ಅಲ್ಲೀಗಡ, ಲಾಹೋರ ಮುಂತಾದ ಕಡೆಗಳಲ್ಲಿಯ ಕೊಲೆಜುಗಳನ್ನು ಮುಸಲ್ಮಾನರು ಬಹಿಷ್ಕರಿಸ ಹತ್ತಿದ್ದಾರೆ. ಆದರೆ ವೈಸರಾಯರು ಖಿಲಾಫತ್ತಿನ ಸಂಬಂಧವಾಗಿ ಶಿಕ್ಷಣದೊಡನೆ ಮಾಡುವ ಅಸಹಕಾರಿತೆಯು ದೂರದರ್ಶಿತ್ವದ ಲಕ್ಷಣವಲ್ಲವೆಂದು ಹೇಳುತ್ತಾರೆ. ವೈಸರಾಯರು ಮುಸಲ್ಮಾನರಿಗೆ ಎನ್ನುವುದೇನೆಂದರೆ "ಈ ಚಳವಳವು ಸರಕಾರಕ್ಕೆ ವಿರೋಧಿಯಾಗಿದೆ. ಇಂಥ ವಿರೋಧಿ ಚಳವಳವನ್ನು ಮಾಡುವುದು ಒದಗಿತು ಎನ್ನೋಣ. ಆದರೆ ಇದರಿಂದ ಯಾರಿಗೆ ನಷ್ಟವಾಗಹತ್ತಿದೆ? ಮುಸಲ್ಮಾನರಿಗೆ. ಅಸಹಕಾರಿತೆಯ ಒಂದು ಭಾಗವೆಂದು ಕೆಲವು ಮುಸಲ್ಮಾನರು ಹಿಂದುಸ್ಥಾನವನ್ನು ಬಿಡಹತ್ತಿದರು. ಅವರಿಗೆ ಅಫಘಾನಿಸ್ಥಾನದಲ್ಲಿ ಎಡೆ ಇಲ್ಲದೆ, ತಿರಿಗಿ ಬರುವಾಗ ಅನೇಕ ಎಡರುಗಳಿಂದ ಈ ಜನರಿಗೆ ಮಿತಿಮೀರಿದ ಕಷ್ಟಗಳನ್ನು ಅನುಭವಿಸಬೇಕಾಯಿತು. ಕೊನೆಗೆ ಪಂಜಾಬಿನ ದಯಾಳು ಅಧಿಪತಿಗಳೆ ಕೂಡಿದ ಸಹಾಯವನ್ನು ಇವರಿಗೆ ಕೊಟ್ಟರು."

"ದೇಶತ್ಯಾಗದ ಕಾರ್ಯದಲ್ಲಿ ಈ ಮೇರೆಗೆ ಸಂಕಷ್ಟಗಳನ್ನು ಅನುಭವಿಸಿ ಮುಸಲ್ಮಾನರು ಸಾಲದ್ದಕ್ಕೆ ಎಂಬಂತೆ ಶಿಕ್ಷಣದ ಬಹಿಷ್ಕಾರವನ್ನು ಕೈಕೊಂಡಿದ್ದಾರೆ!" ವೈಸರಾಯರಿಗೆ ಇದು ಕೇವಲ ವಿಪರೀತವೆಂದು ತೋರುತ್ತದೆ. ಯಾಕೆಂದರೆ, ಮುಸಲ್ಮಾನರು ಮೊದಲೆ ಶಿಕ್ಷಣದಲ್ಲಿ ಹಿಂದುಳಿದವರು. ಅಂಥವರು ಕೂಡಿದಷ್ಟು ಪ್ರಯತ್ನ ಮಾಡಿ ತಮ್ಮಲ್ಲಿ ಶಿಕ್ಷಣವನ್ನು ಬೆಳಸಿಕೊಳ್ಳಬೇಕಲ್ಲದೆ ಇದ್ದ ಕೊಲೆಜುಗಳನ್ನು ಮುಚ್ಚಲು ಯತ್ನಿಸುವುದು ಶ್ಲಾಘ್ಯವೆ? ಇದರಿಂದ ಯಾರಿಗೆ ದೋಷವು ತಟ್ಟುವುದು? ಮುಸಲ್ಮಾನರಿಗೆ; ಎಂದ ಮೇಲೆ ಅವರು ಈಗ ಶಿಕ್ಷಣ ಸಂಸ್ಥೆಗಳನ್ನು ಮುರಿದು ಬಿಡಲು ಪ್ರಯತ್ನವನ್ನು ನಡಿಸಿಕೊಂಡಿದ್ದದ್ದು ಆತ್ಮಘಾತದಂತೆ ನಿಂದ್ಯವಾಗಿದೆ!" ಇವು ವೈಸರಾಯರ ವಿಚಾರಗಳು.

ಅಸಹಕಾರವಾದಿಗಳು ವೈಸರಾಯರ ಈ ಕೋಟಿ ಕ್ರಮಗಳನ್ನು ತಮ್ಮ ಸೆರಗಿನಲ್ಲಿ ಕಟ್ಟಿಕೊಂಡು ಸುಮ್ಮನೆ ಕೂಡ್ರುವುದಿಲ್ಲ. ಅವರು ತಮ್ಮ ಮತರೀತ್ಯಾ ಈ ಅಂಟೋಣಕ್ಕೆ ಸಮರ್ಪಕವಾದ ಪ್ರತ್ಯುತ್ತರವನ್ನು ಕೊಡುತ್ತಾರೆ. ಅಸಹಕಾರಿತೆಯ ಉತ್ಪಾದಕರಾದ ಮಹಾತ್ಮಾ ಗಾಂಧಿಗಳು ಹಾಗು ಅದರ ಪ್ರಚಾರಕರಾದ ಅಲಿಬಂಧುಗಳು ಶಿಕ್ಷಣವನ್ನು ಹಾಳು ಮಾಡಿ ತರುಣರ ತಲೆಯನ್ನು ಕೆಡಿಸಿದರು ಎಂಬದೊಂದು ಆಕ್ಷೇಪವನ್ನು ಅವರ ಮೇಲೆ ಹೊರಿಸುವ ಪ್ರಯತ್ನವು ನಡೆದಿದೆ. ಆದರೆ ಅಸಹಕಾರವಾದಿಗಳು ಶಿಕ್ಷಣದ ದ್ವೇಷಿಗಳೆಂದು ಯಾರೂ ತಿಳಕೊಳ್ಳಲಿಕ್ಕಿಲ್ಲವೆಂದು ತಿಳಿಯುತ್ತೇವೆ. ಅವರು ಹೊಸ ರಾಷ್ಟ್ರೀಯ ಶಿಕ್ಷಣದ ವ್ಯವಸ್ಥೆಯನ್ನು ಆದಷ್ಟು ಭರದಿಂದ ಮಾಡತೊಡಗಿದ್ದಾರೆ. ಈಗಿನ ಶಿಕ್ಷಣವು ಸದೋಷವಾದ್ದು, ಎನ್ನು ಕೂಡ ದ್ರವ್ಯದ ಮದತು, ಪಂಡಿತರ ಸಾಹಾಯ್ಯ, ಅನುಭವದ ಬಲ, ಮುಂತಾದ ಅನೇಕ ಅನುಕೂಲತೆಗಳನ್ನು ಧಾರಾಳವಾಗಿಟ್ಟುಕೊಂಡ ಸಾರ್ವಭೌಮ ಸರಕಾರಕ್ಕೆ ದೊಡ್ಡ ದೀರ್ಘ ಅವಧಿಯಲ್ಲಿ ವಿಪುಲವಾಗಿ ಹಬ್ಬಿಸಲು ಸಾಧ್ಯವಾಗಲಿಲ್ಲ. ಈಗ ಮಾತ್ರ ಜನರು ಇಂಥ ವ್ಯಂಗಶಿಕ್ಷಣವನ್ನು ಬಿಡಹತ್ತಿದ ಮೇಲೆ ವೈಸರಾಯರಂಥ ಮಹಾಧಿಕಾರಿಗಳಿಗೆ ಅದರ ಗುಣಪಾಠಗಳನ್ನು ಹಾಡಬೇಕಾಗಿ ಬರುತ್ತದಲ್ಲವೆ? ಈ ಹೊತ್ತು ಶಿಕ್ಷಣ ಬಹಿಷ್ಕಾರವಾದಿಗಳನ್ನು ದೂರುವವರಾದ ನೀವು ಇದು ವರೆಗೆ ಇಲ್ಲಿ ಶಿಕ್ಷಣ ಪ್ರಸಾರದ ಯಾವ ಶತಕೃತ್ಯವನ್ನು ಮಾಡಿದಿರಿ? ಶೇಕಡಾ ಎಷ್ಟು ಜನರಿಗೆ ಇಲ್ಲಿ ಬರುಬರಹವನ್ನು ಕಲಿಸಿದಿರಿ? ಯೂನಿವರ್ಸಿಟಿಯ ಶಿಕ್ಷಣದಲ್ಲಾದರೂ ಯಾವ ಧೋರಣ ಮತ್ತು ಯಾವ ಪ್ರಮಾಣವನ್ನು ಇಟ್ಟುಕೊಂಡಿದ್ದೀರಿ? ನಿಮ್ಮ ಕಲ್ಪನೆ, ನಿಮ್ಮ ಕಾವ್ಯ, ನಿಮ್ಮ ಚರಿತ್ರೆ ಇವುಗಳನ್ನೆ ಇಲ್ಲಿಯವರ ತಲೆಯಲ್ಲಿ ತುಂಬಿಸಿದಿರಿಯಲ್ಲದೆ

ಶಿಕ್ಷಣದ ಹೆಸರಿನಿಂದ ಇನ್ನು ಯಾವ ಕೆಲಸವನ್ನು ಮಾಡಿದಿರಿ? ಶಾಸ್ತ್ರೀಯ ಶಿಕ್ಷಣದ ಅನುಕೂಲತೆಗಳನ್ನು ಒದಗಿಸಿಕೊಟ್ಟಿರುವಿರಾ? ಔದ್ಯೋಗಿಕ ಸಂಸ್ಥೆಗಳನ್ನೂ, ಕೈಗಾರಿಕೆಯ ಶಾಲೆಗಳನ್ನೂ ಎಷ್ಟು ತೆರೆದಿರುವಿರಿ? ಇವುಗಳಲ್ಲಿ ಒಂದೇ ಒಂದು ಪ್ರಶ್ನೆಗೆ ಸಮಾಧಾನಕರವಾದ ಉತ್ತರವು ನಿಮ್ಮಿಂದ ಬರಲಿಕ್ಕಿಲ್ಲ. ಬರುವಂತೆ ನೀವು ಮಾಡಿಕೊಂಡಿರಲಿಲ್ಲವೆಂಬುದು ಎಲ್ಲರಿಗೂ ಗೊತ್ತಿದ್ದ ವಿಷಯವೆ. ಹೀಗಿರಲು ಶಿಕ್ಷಣದ ಬಗ್ಗೆ ಹೊಸ ಉಪಕ್ರಮವನ್ನು ಯಾರಾದರೂ ಮಾಡಹತ್ತಿದರೆ, ಅಂಥವರಿಗೆ ಶಿಕ್ಷಣ ಪ್ರೇಮಿಗಳಾದ ನೀವು ದಾರಿ ಬಿಟ್ಟು ಕೊಡಬೇಕು. ಇದೇ ಸರಳವಾದ ದಾರಿಯು.

ಅಲ್ಲದೆ, ... ಬೋರ್ಡ ... ಅಸಹಕಾರಿತೆಯು ಸರ್ವಥಾ ಮಾನ್ಯವಿಲ್ಲ. ಜನರಿಗೂ ಅದು ಇಷ್ಟವಿಲ್ಲ. ಪರಂತು ಜನರಲ್ಲಿ ಹಬ್ಬಿರುವ ಅಸಂತೋಷದ ಮೂಲವನ್ನು—ಖಿಲಾಫತ್ ಮತ್ತು ಪಂಜಾಬ ಈ ಪ್ರಕರಣಗಳಲ್ಲಿ ನಡೆದ ಅನ್ಯಾಯವನ್ನು—ನಿವಾರಿಸುವುದು ಸರಕಾರದ ಕೈಯಲ್ಲಿರುವುದರಿಂದ ಸರಕಾರವು ತನ್ನ ಈ ಶುದ್ಧ ಕರ್ತವ್ಯವನ್ನು ಮಾಡಬೇಕು. ಇದೇ ಜನರ ಅಪೇಕ್ಷೆಯಾಗಿದೆ.

ಉಪಾಧ್ಯಾಯರ ಸಂಘಗಳು ಯಾಕೆ?

ಲೇಖಾಂಕ ೨.

ಹಳ್ಳಿ ಸಾಲೆಗಳ ಕಾರ್ಯಕ್ರಮದಲ್ಲಿ ವ್ಯವಸ್ಥೆ ಬರುವುದಕ್ಕೂ, ಉಪಾಧ್ಯಾಯರ ಶ್ರಮಕ್ಕೆ ಸಿಗುವ ಪಾರಿತೋಷಕವು ವೃದ್ಧಿಯಾಗುವುದಕ್ಕೂ, ಉಪಾಧ್ಯಾಯರ ಅನುಭವ ಮತ್ತು ಜ್ಞಾನ ಸಂಗ್ರಹವು ಬೆಳೆಯುವುದಕ್ಕೂ ಉಪಾಧ್ಯಾಯರ ಸಂಘಗಳು ಆವಶ್ಯಕವೆಂದು ನಾವು ಹಿಂದೆ ಸೂಚಿಸಿದೆವು. ಪ್ರಾಥಮಿಕ ಶಾಲಾ ಉಪಾಧ್ಯಾಯರು ಇನ್ಸ್‌ಪೆಕ್ಟಿಂಗ್ ಆಫೀಸರರ ಗೈರಹಾಜರಿಯಲ್ಲಿ ಇಂಥ ಮೀಟಿಂಗುಗಳನ್ನು ಜರಗಿಸುವುದು ಯೋಗ್ಯವಲ್ಲವೆಂದು ಒಂದು ಸರ್ಕಿಲಾರು ಕೆಲವು ಕಾಲದ ಹಿಂದೆ ಹೊರಟಿತ್ತು ಎಂದು ನಾವು ಕೇಳುತ್ತೇವೆ. ಈ ಆಫೀಸರರ ಗೈರ ಹಾಜರಿಯಲ್ಲಿ ಮೀಟಿಂಗುಗಳಲ್ಲಿ ಒಣಹರಟೆಗಳೇ ಬಂದು ಕಾಲವ್ಯಯವಾದೀತು ಎಂಬದೇ ಈ ಸರ್ಕಿಲಾರಿನ ಹೇತುವೆಂದಾದರೆ ಇನ್ಸ್‌ಪೆಕ್ಟಿಂಗ್ ಆಫೀಸರುಗಳು ಎಷ್ಟು ಮೀಟಿಂಗುಗಳಿಗೆ ಹಾಜರಾಗುತ್ತಾರೆ, ಮತ್ತೆ ಅಂಥಾ ಮೀಟಿಂಗುಗಳಲ್ಲಿ ಏನೇನು ಕೆಲಸ ನಡೆಯುತ್ತಿದೆ ಎಂಬದನ್ನು ತಿಳಿಯುವ ಕುತೂಹಲವು ಸಹಜವಾಗಿಯೆ ಬರುತ್ತದೆ. ಈ ಜವಾಬ್ದಾರಿಯನ್ನು ವಹಿಸಿಕೊಂಡವರಿಗೆ ತಮ್ಮ ಫಿರ್ಕಾದೊಳಗೆ ಆಗುವ ಮೀಟಿಂಗುಗಳಿಗೆ ಹಾಜರಾಗಲಿಕ್ಕೆ ವಿರಾಮವಿಲ್ಲವೆಂತಾದರೆ, ಮೀಟಿಂಗುಗಳಾಗುವ ಬಗೆ ಹೇಗೆ? ಉಪಾಧ್ಯಾಯರ ಜ್ಞಾನ ವೃದ್ಧಿಯ ಕೆಲಸವು ಸಾಗುವುದು ಹೇಗೆ?

ಇಷ್ಟೆ ಅಲ್ಲ. ಉಪಾಧ್ಯಾಯರು ತಮ್ಮ ಸಂಬಳದ ದರಗಳನ್ನೂ ಗ್ರ್ಯಾಂಟಿನ ದರಗಳನ್ನೂ ಹೆಚ್ಚಿಸಬೇಕೆಂದು ಕಾರಣಗಳನ್ನು ಕೊಟ್ಟು ಚರ್ಚಿಸುವ ಸಂದರ್ಭದಲ್ಲಿ ಬಾಯಿಬಿಟ್ಟು ಮಾತಾಡಬೇಕಾದರೆ ಅಂಥಾ ಮೀಟಿಂಗುಗಳಲ್ಲಿ ಇನ್ಸ್‌ಪೆಕ್ಟಿಂಗ್ ಆಫೀಸರರು ಗೈರಹಾಜರಾಗುವುದೇ ಉತ್ತಮ. ಇನ್ಸ್‌ಪೆಕ್ಟಿಂಗ್ ಆಫೀಸರುಗಳು ತಮ್ಮ ಸಂಬಳದ ದರಗಳನ್ನು ಹೆಚ್ಚಿಸಬೇಕೆಂದು ಮೀಟಿಂಗುಗಳನ್ನು ಮಾಡಿದಾಗ, ಇನ್ಸ್‌ಪೆಕ್ಟರರನ್ನಾಗಲಿ ಡಿರೆಕ್ಟರರನ್ನಾಗಲಿ ಕರೆಸಿದರೆ? ಹಾಗಿದ್ದರೆ ತಮ್ಮ ಪ್ರಯಾಸದ ಕ್ರುತಿಫಲವನ್ನು ಏರಿಸುವ ಇರಾದೆಯಿಂದ ಮಾಡುವ ಸಭೆಯನ್ನು ಇನ್ಸ್‌ಪೆಕ್ಟಿಂಗ್ ಆಫೀಸರರ ಹಾಜರಿ ಮತ್ತು ಅನುಮತಿ ಇಲ್ಲದೆ ಜರಗಿಸಬಾರದೆಂದರೆ ಇದು ಕಷ್ಟತರವಾಗಿ ಪರಿಣಮಿಸುತ್ತದೆ. ಶಾನುಭೋಗರೂ ಪಟೇಲರೂ ತಮ್ಮ ಸಂಬಳ ಭತ್ತೆಯ ದರಗಳನ್ನು ಏರಿಸಬೇಕೆಂದು ಕೂಡಿದ ಕೂಟಗಳಲ್ಲಿ ತಹಸಿಲ್ದಾರರನ್ನೂ ಡೆಪ್ಯೂಟಿ ಕಲೆಕ್ಟರರನ್ನೂ ಆಮಂತ್ರಿಸಲಿಲ್ಲ. ಹಾಗೆಯೇ ಉಪಾಧ್ಯಾಯರು ತಮ್ಮ ಸ್ಥಿತಿಯನ್ನು ಮಾರ್ಪಡಿಸಬೇಕೆಂದು ಸಲಹೆಗಳನ್ನು ಚರ್ಚಿಸುವ ಸಭೆಗಳಲ್ಲಿ ಇನ್ಸ್‌ಪೆಕ್ಟಿಂಗ್ ಆಫೀಸರರು ಇರುವುದು ಅಗತ್ಯವೂ ಅಲ್ಲ, ಪ್ರಶಸ್ತವೂ ಅಲ್ಲ ಎಂದು ಕಂಠೋಕ್ತವಾಗಿ ಹೇಳಬಹುದು.

ಶಿಕ್ಷಣ ಸುಧಾರಣೆಯೂ ಈ ಸಂಘಗಳ ಕರ್ತವ್ಯಗಳಲ್ಲಿ ಒಂದಾಗಿದ್ದು, ಈ ಕೆಲಸದಲ್ಲಿಯೂ ಶಿಕ್ಷಕರು ಇನ್ಸ್‌ಪೆಕ್ಟಿಂಗ್ ಆಫೀಸರರ ಗುಟುಕಿಗೆ ತಮ್ಮ ಚಂಚು ಪುಟಗಳನ್ನು ಚಾಚಬೇಕೆಂದು ಹೇಳುವುದರಲ್ಲಿ ಇನ್ಸ್‌ಪೆಕ್ಟಿಂಗ್ ಆಫೀಸರರ ಸ್ವಾಭಿಮಾನದ ಪ್ರದರ್ಶನವಾಗುತ್ತದಲ್ಲದೆ ಬೇರೆ ಇಲ್ಲ.—ಇನ್ಸ್‌ಪೆಕ್ಟಿಂಗ್ ಆಫೀಸರರಲ್ಲದವರಾಗಿದ್ದರೂ ಶಿಕ್ಷಣ ಕ್ರಮಗಳನ್ನು ಕುರಿತು ವಿಚಾರ ತೆಗೆದುಕೊಳ್ಳುವ ಸೆಕೆಂಡರಿ ಶಾಲಾ ಮೆನೆಜರುಗಳೂ ಅಧ್ಯಾಪಕರೂ ಇದ್ದರೆ ಅವರ ಸಹಾಯವನ್ನು ಈ ಪ್ರಾಥಮಿಕ ಶಾಲಾ ಉಪಾಧ್ಯಾಯರು ನಿರೀಕ್ಷಿಸುವುದರಲ್ಲಿ ತಪ್ಪೇನು? ವಿರಾಮವಿಲ್ಲದ ಇನ್ಸ್‌ಪೆಕ್ಟಿಂಗ್ ಆಫೀಸರರ ಈ ಶಿಕ್ಷಣ ಸುಧಾರಣೆ ಭಾರವನ್ನು ವಹಿಸಲು ಸೆಕೆಂಡರಿ ಶಾಲೆಗಳವರಾಗಲಿ ಅಥವಾ ಶಿಕ್ಷಣ ವಿಚಾರ ಪರರಾದ ಇತರ ವ್ಯಕ್ತಿಗಳಾಗಲಿ ಅಪ್ಪುತಪ್ಪಿ ಕೈಕೊಡಲು ಮುಂದೆ ಬರುವವರಿದ್ದರೆ ಅಂಥವರನ್ನು ಮುಂದೆ ಬರಲೀಸದೆ ಇರುವುದು ಇನ್ಸ್‌ಪೆಕ್ಟಿಂಗ್ ಆಫೀಸರರು ಈ ಪೌರೋಹಿತ್ಯಕ್ಕೆ ತಾವೇ ಹಕ್ಕುದಾರರೆಂದು ಆತ್ಮಪ್ರಶಂಸೆ ಮಾಡಿಕೊಂಡಂತಾಗುತ್ತದೆ. ಇನ್ಸ್‌ಪೆಕ್ಟಿಂಗ್ ಆಫೀಸರುಗಳಾಗಲಿ ಸೆಕೆಂಡರಿ ಶಾಲೆಗಳ ಅಧ್ಯಾಪಕರಾಗಲಿ ಬರೇ ಸಂಬಳದ ಆಸೆಯಿಂದ ಕೆಲಸ ಮಾಡುವುದು ಮಾತ್ರವಲ್ಲ, ಈ ಮೂಲಕ ದೇಶಸೇವೆಯನ್ನು ಯತ್ಕಿಂಚಿತವಾಗಿ ಮಾಡುತ್ತೇವೆಂಬ ಭಾವನೆಯನ್ನು ತಳೆದಿದ್ದರೆ ಅಂಥವರು ಈ ಶಿಕ್ಷಣ ರಥವನ್ನು ನೂಕುವರದಲ್ಲಿ ಹೆಗಲಿಗೆ ಹೆಗಲು ಕೊಟ್ಟು ಸಹಾಯ ಮಾಡಿಯಾರು ಎಂಬ ಭರವಸೆ ಇದೆ.

ಈ ಪ್ರಾಥಮಿಕ ಶಿಕ್ಷಣದ ಕರ್ತುಗಳಾದ ಉಪಾಧ್ಯಾಯರಲ್ಲಿ ಬೋರ್ಡ ಶಾಲಾ ಉಪಾಧ್ಯಾಯರೂ ಖಾಸಗಿ ಶಾಲಾ ಉಪಾಧ್ಯಾಯರೂ ಎಂಬ ಭೇದಗಳಿವೆ. ಈ ಎರಡು ಬಗೆಯ ಉಪಾಧ್ಯಾಯರು ಒಂದೇ ಸಂಘದಲ್ಲಿ ಇರುವುದು ಯೋಗ್ಯವೇ ಎಂಬ ಪ್ರಶ್ನೆಯು ಬಂದೀತು. ಬೋರ್ಡ ಶಾಲಾ ಉಪಾಧ್ಯಾಯರು ಬೋರ್ಡ ನವುಕರರಾಗಿ ನವುಕರಿ ನಿಯಮಗಳು ಅವರಿಗೆ ಲಗಾವಾಗುತ್ತವೆ. ಖಾಸಗಿ ಶಾಲೆಯವರಿಗೆ ಒಂದು ಬಗೆಯ ಸ್ವತಂತ್ರವಿದೆ ಎಂದು ವಾದಿಸುವಾಗ ಈ ಖಾಸಗಿ ಶಾಲಾ ಉಪಾಧ್ಯಾಯರಲ್ಲಿಯೂ ಸ್ವಂತ ಮೆನೆಜರುಗಳಾಗಿರುವವರು ಕಡಿಮೆ; ಹೆಚ್ಚಿನವರು ಅಂಥ ಮೆನೆಜರುಗಳ ಅಥವಾ ಅನ್ಯ ಮಿಶ್ಯನ್ ಆಗಲಿ ಸ್ಥಳೀಯ ಕಮ್ಮಿಟಿಯಾಗಲಿ ನಡಿಸುವ ಶಾಲೆಗಳಲ್ಲಿ ನವುಕರಿ ಮಾಡುವವರೇ ಇದ್ದಾರೆ. ಗ್ರ್ಯಾಂಟುಗಳ ದರಗಳು ಹೆಚ್ಚಿದಂತೆ ಈ ನವುಕರರ ಪ್ರಯತ್ನಫಲವೂ ವರ್ಧಿಸಬೇಕೆಂಬ ಕಾಂಕ್ಷೆಯು ಈ ಖಾಸಗಿ ಶಾಲೆಗಳ ಮಾಸ್ತರರಲ್ಲಿ ಬಂದಿರಲೇ ಬೇಕು. ಆಗ ಅವರೂ ಕೂಡಾ ತಮ್ಮ ಅಹವಾಲೆಗಳನ್ನು ಇದೇ ಸಭೆಗಳಲ್ಲಿ ಯಾತಕ್ಕೆ ಚರ್ಚಿಸಬಾರದು? ಅದಕ್ಕೆ ಬದಲಾಗಿ ಬೋರ್ಡ ನವುಕರರ ಸಂಘ ಬೇರೆ, ಮೆನೆಜರ ಉಪಾಧ್ಯಾಯರ ಸಂಘ ಇನ್ನೊಂದು, ಖಾಸಗಿ ಶಾಲೆಗಳಲ್ಲಿ ನವುಕರರ ವೃತ್ತಿಯನ್ನು ಸಾಗಿಸುವವರ ಸಂಘ ಮತ್ತೊಂದು, ಇತ್ಯಾದಿ ವಿಭಜನೆ ಮಾಡುವುದು ಈ ಸಂಘಗಳ ಬಾಲ್ಯಾವಸ್ಥೆಯಲ್ಲಿ ಎಂದೆಂದಿಗೂ ಸಲ್ಲದು. ಇದಕ್ಕೆ ಬಲವಾದ ಬೇರೊಂದು ನಿದರ್ಶನವನ್ನೂ ಆಧಾರವಾಗಿ ಇಟ್ಟುಕೊಳ್ಳಬಹುದು. 'ನೊನಗೆಜೆಟೆಡ್ ಆಫೀಸರ್ಸ್ ಎಸೋಸಿಯೇಶನ್ನ'ನಲ್ಲಿ ಸಿವಿಲ್ ಜ್ಯುಡಿಶಿಯಲ್ ಇಲಾಖೆ, ರೆವಿನ್ಯೂ ಇಲಾಖೆ, ರಿಜಿಸ್ಟ್ರೇಶನ್ ಇಲಾಖೆ, ವಿದ್ಯಾ ಇಲಾಖೆ ಮುಂತಾದುವುಗಳ ಒಳನವುಕರರು ಸೇರಲಿಲ್ಲವೆ? ಇದಕ್ಕೆ ಆಕ್ಷೇಪಿಸಿದವರ್ಯಾರು? ಅದರಲ್ಲಿ ಬರೆ ಸಂಬಳದ ದರಗಳನ್ನು ಏರಿಸುವುದೇ ಮುಖ್ಯ ಉದ್ದೇಶವಾಗಿದೆ. ಉಪಾಧ್ಯಾಯರ ಸಂಘಗಳಲ್ಲಿ ಆ ಉದ್ದೇಶದೊಂದಿಗೆ ತಮ್ಮ ಶಾಲಾ ಕೆಲಸವನ್ನು ಹೇಗೆ ಸುಧಾರಿಸಬಹುದೆಂಬ ದೇಶದ ಏಳ್ಗೆಯ ವಿಚಾರವೂ ಮುಖ್ಯಾಂಶವಾಗಿದೆ. ಅಂಥವರಲ್ಲಿ ಈ ದುರ್ಬಲರಾದ ಮತ್ತು ಪಾರಂಪರ್ಯವಾಗಿ ಮೇಲ್ ಆಫೀಸರರ ಮುಖದ ಚಹರೆಗೆ ಸರಿಯಾಗಿ ತಮ್ಮ ವರ್ತನವನ್ನು ತಿದ್ದಿಕೊಂಡು ಒಂದು ಬಗೆಯ ಕೀಳು ಸೇವಾ ವೃತ್ತಿಯಂಬಂತೆ ಅನುಸರಿಸುವವರ ಉದ್ಧರಣೆ, ತನ್ಮೂಲಕ ದೇಶದ ಪ್ರಾಥಮಿಕ ಶಿಕ್ಷಣದ ಉದ್ಧರಣೆ, ಇಡೀ ಜನಾಂಗದ ಉದ್ಧರಣೆಯ ಮಹತ್ವದ ಪ್ರಶ್ನೆಯೇ ಇಲ್ಲಿ ಕೈಗೆ ಅಂಟಿಕೊಂಡಿರುವಾಗ ಅದರ ಚಾಲಕರು ಸಂಘಗಳನ್ನು ಏರ್ಪಡಿಸಿ, ತಮ್ಮ ಬುದ್ಧಿಸ್ವಾತಂತ್ರ್ಯ, ತಮ್ಮ ಗುಣನಡತೆ, ತಮ್ಮ ತಿಳುವಳಿಕೆಗಳಲ್ಲಿ ಚೈತನ್ಯವುಂಟಾಗುವಂತೆ ಮಾಡುವ ಕಾರ್ಯದಲ್ಲಿ ವಿದ್ಯಾಇಲಾಖೆಯವರಾಗಲಿ ಲೋಕಲ್ ಬೋರ್ಡುಗಳಾಗಲಿ ಮೆನೆಜಮೆಂಟ ಕಮ್ಮಿಟಿಗಳಾಗಲಿ ಆಕ್ಷೇಪವೆತ್ತುವುದು ಹುಲ್ಲು ಬಣಬೆಯ ಮೇಲೇರಿ ಗುರ್ರೆನ್ನುತ್ತಿರುವ ಪ್ರಾಣಿಯ ಸಾದೃಶ್ಯದಂತಾದೀತು ಎಂದು ನಾವು ಖಂಡಿತವಾಗಿಯೂ ಹೇಳಬಲ್ಲೆವು.

ಸ್ಫುಟವಿಚಾರಗಳು.

೧. ಹಿಂದುಸ್ಥಾನ ಸರಕಾರವು ಪ್ರಾಂತಿಕ ಸರಕಾರಗಳಿಗೆ ಮಾರ್ಗದರ್ಶಕವಾಗುವಂತೆಯೂ ಜನರ ತಿಳುವಳಿಕೆಯ ಬಗ್ಗೆಯೂ ಅಸಹಕಾರಿತೆಯನ್ನು ಕುರಿತು ಪ್ರಕಟನಾಪತ್ರಕವನ್ನು ಜಾಹೀರಪಡಿಸಿದೆ. ಈ ಪತ್ರಕದಲ್ಲಿ ಸರಕಾರವು ಅಸಹಕಾರಿತೆಯಿಂದ ಬರುವ ಅಪಾಯ ಸಂಕಟ ಮುಂತಾದವುಗಳನ್ನು ವಿವರಿಸಿ ಹೇಳಿ ಜನತೆಯ ಸಹಕಾರ್ಯವನ್ನು ಅಪೇಕ್ಷಿಸಿದೆ. ಸರಕಾರದ ಈ ಅಪೇಕ್ಷೆಯಲ್ಲಿ ಮೊಡರೇಟ್ ಪಾರ್ಟಿಯ ಎಂದರೆ ಶಾಂತಪಕ್ಷದ ಸುಶಿಕ್ಷಿತರ ಮೇಲೆ ಅದು ಹೆಚ್ಚಿನ ಭಾರವನ್ನಿಟ್ಟದ್ದಾಗಿ ಕಂಡುಬರುತ್ತದೆ. ಅಸಹಕಾರಿತೆಯ ಪ್ರವರ್ತಕರೂ ಅನುಯಾಯಿಗಳೂ ಇದುವರೆಗೆ ಈ ಚಳವಳವನ್ನು ಹಲವು ವಿಧದಿಂದ ನಡಿಸುತ್ತ ಬಂದಿದ್ದಾರೆ. ಆದರೆ ಹಿಂದುಸ್ಥಾನ ಸರಕಾರವು ಈ ಚಳವಳವನ್ನು ತಗ್ಗಿಸಲು, ಸುಶಿಕ್ಷಿತ ಜನರಿಗೂ, ಸಾಮಾನ್ಯ ಲೋಕಮತಕ್ಕೂ ಅದು ತನ್ನಷ್ಟಕ್ಕನೆ ಒಪ್ಪಲಿಕ್ಕಿಲ್ಲವೆಂಬ ಭರವಸೆಯಿಂದ ಹೆಚ್ಚಿನ ಉಪಕ್ರಮವನ್ನು ಮಾಡಿದ್ದಲ್ಲವೆಂದು ಆ ಪತ್ರಕದಲ್ಲಿ ಉಲ್ಲೇಖವುಂಟು. ಈ ಚಳವಳದ ಪುರಸ್ಕರ್ತರ ಮೇಲೆ ಈಗಿನ ಕಾನೂನ ಪ್ರಕಾರ ಅಪರಾಧವನ್ನು ಸ್ಥಾಪಿಸಿ ಮುಂದಿನ ಕ್ರಮವನ್ನು ನಡಿಸಬಹುದಾದರೂ ಅದರಿಂದ ಸುಪರಿಣಾಮವಾಗುವುದರ ಬದಲು ದುಷ್ಪರಿಣಾಮವೆ ಉಂಟಾದೀತೆಂದು ತಿಳಿದು ಸರಕಾರವು ಆ ಮಾರ್ಗವನ್ನು ಇದುವರೆಗೆ ಕೈಕೊಳ್ಳಲಿಲ್ಲವೆಂದು ಅದರಲ್ಲಿ ಪ್ರಕಟಿಸಿದೆ. ಒಬ್ಬನೆ ಮೇಲೆ ರಾಜಕೀಯ ಪ್ರಕರಣವನ್ನು ಪ್ರಾರಂಭಿಸಿದರೆ ಅವನನ್ನು ಅವನ ಅನುಯಾಯಿಗಳು 'ಇವನೊಬ್ಬ ಆತ್ಮಸಮರ್ಪಣೆ ಮಾಡುವ ದೇಶಭಕ್ತ' ಎಂದು ತಿಳಿದು ದೇವತಾಗೃಹದಲ್ಲಿ ಅವನನ್ನು ಕೂಡ್ರಿಸುವರು ಎಂದು ಸರಕಾರಕ್ಕೆ ಸಕಾರಣವಾಗಿ ತೋರಿ ಅದು ಇದುವರೆಗೆ ಮೌನದಿಂದಲೂ ಉದಾಸೀನವಾಗಿಯೂ ಇತ್ತು. ಮಾತ್ರವಲ್ಲ, ಇನ್ನುಮುಂದೆಯಾದರೂ ಇಲ್ಲಿಯ ಮೊಡರೇಟ್ ಪಾರ್ಟಿಯ ಮತ್ತು ಸಾಮಾನ್ಯ ಜನರ ಸದಭಿಪ್ರಾಯದ ಮೇಲೆ ಭರವಸೆ ಇಟ್ಟು ಅಂಥ ಉಪಾಯಗಳನ್ನು ಅವಲಂಬಿಸಲು ಸರಕಾರವು ಇಚ್ಛಿಸುವುದಿಲ್ಲ. ಆದರೆ ಅಸಹಕಾರಿತೆಯ ಉಪಟಳವು ಕಡಿಮೆಯಾಗದೆ ಇನ್ನೂ ಹೆಚ್ಚು ಹೆಚ್ಚು ಪ್ರಬಲವಾಗುತ್ತ ಹೋಗಿ ಆ... ಸ್ವಾಸ್ಥ್ಯವು ಕೆಟ್ಟುಹೋಗುವ ಸಂದರ್ಭವು ಬಂದು ಒದಗಿದರೆ ... ಕಾರವು ಬಿಕ್ಕಟ್ಟಿನ ಉಪಾಯವನ್ನು ಅವಲಂಬಿಸಲು ಹೇಸಲಿಕ್ಕಿಲ್ಲವೆಂದು, ಅದರ ಪ್ರಕಟನೆಯಿಂದ ಅಂದಾಜು ಮಾಡಬಹುದಾಗುತ್ತ...

ಮಂಗಳೂರು.

ಕೆನರಾ ಹೈಸ್ಕೂಲಿನ ವರ್ಧಂತಿ ಉತ್ಸವವು 1920ನೆ ಡಿಸೆಂಬ... 26ನೆ ತಾರೀಕಿಗೆ ಆದಿತ್ಯವಾರ ಸದರಿ ಶಾಲೆಯಲ್ಲಿ ಜರಗಲಿಕ್ಕಿದೆ. ಶಾಲೆಯ ಹಳೆ ವಿದ್ಯಾರ್ಥಿಗಳಿಂದ ತಯಾರಿಸಲ್ಪಟ್ಟ ಕೈಗಾ... ವಸ್ತುಗಳ ಪ್ರದರ್ಶನವು ಇದೇ 24, 25ನೆ ತಾರೀಕುಗಳ... ಜರಗುವುದು. ಈ ವಸ್ತುಗಳನ್ನು ಆ ಮೇಲೆ ಡಿಸ್ಟ್ರಿಕ್ಟ್ ಎಗ್ರಿಕಲ್ಚರ... ಮತ್ತು ಇಂಡಸ್ಟ್ರಿಯಲ್ ಎಕ್ಸಿಬಿಷನ್‌ನಲ್ಲಿಯೂ ಪ್ರದರ್ಶಿಸಲಾಗುವುದು. ಈ ಶಾಲೆಯ ಕೈಗಾರಿಕೆಯ ಪ್ರದರ್ಶನಕ್ಕೆ ವಸ್ತು ಒಡಿವೆಗಳನ್ನು ಕಳುಹಿಸಬೇಕೆಂದಿರುವ ಹಳೇ ವಿದ್ಯಾರ್ಥಿಗಳು ಅವುಗಳ ಬಗ್ಗೆ ಎಷ್ಟು ಸ್ಥಳವ... ವಿಂಗಡಿಸಬೇಕಾದೀತು, ಯಾವ ವಸ್ತುಗಳು ಕಳುಹಿಸಲ್ಪಡುವವು ಎಂ... ದನ್ನು ಡಿಸೆಂಬರ್ 15ನೆ ತಾರೀಕಿನೊಳಗೆ ತಿಳಿಸಬೇಕಾಗಿ ಸ್ಕೂಲ್ ಕಮ್ಮಿಟಿಯ ಅಧ್ಯಕ್ಷರಾದ ಮ. ರಾ. ಅಡಿಗೆ ಪದ್ಮನಾಭ... ಬಿ. ಎ. ಎಲ್. ಟಿ. ಇವರ ಜಾಹೀರಾತು ಇದೆ.

ಗವರ್ನಮೆಂಟ ಸೆಕೆಂಡರಿ ಟ್ರೈನಿಂಗ್ ಶಾಲೆಯ ಹೆಡ್ ಮಾ... ಮ. ರಾ. ಟಿ. ಮಂಗೇಶರಾಯರಿಗೆ ಬಳ್ಳಾರಿ ಜಿಲ್ಲೆಯ ಶಾಲೆ... ಅಸಿಸ್ಟಾಂಟ ಇನ್ಸ್‌ಪೆಕ್ಟರ ಕೆಲಸದ ಬದಲಿ ನೇಮಕವಾಗಿ, ಅ... ಇಸಮಿಗೆ ತಲಶೇರಿಯ ಬ್ರೆನ್ನನ್ ಕೊಲೆಜಿನಿಂದ ಮ. ರಾ. ಕೊಡಿ... ಮಂಗೇಶರಾಯರು ಬಂದು ಚಾರ್ಜು ವಹಿಸಿಕೊಂಡರು. ಟ್ರೈನಿಂಗ ಶಾಲೆಯ ಇನ್ನೊಬ್ಬ ಅಸಿಸ್ಟಾಂಟರಾಗಿ ಮ. ರಾ. ಎ. ರಾ... ಚಂದ್ರ ರಾಯರು ನೇಮಕ ಪಟ್ಟಿದ್ದಾರೆ.

ಕುಳಗುಂಪದಲ್ಲಿ ವರ್ಷಂಪ್ರತಿ ಆಗುವ ಜಾನುವಾರು ಸಂತೆಯು ಈ ವರೆಗೆ ಸುಬ್ರಮಣ್ಯ ಷಷ್ಠಿ ಜಾತ್ರೆಯ ಮುಂಚೆ ಜರಗುವಂಥಾ... ಈ ವರುಷ ಲಾಗಾಯ್ತು ಸದರೀ ಷಷ್ಠಿ ಜಾತ್ರೆಯ ನಂತರ ಅಂದರೆ ವರುಷದ ಡಿಸೆಂಬರ್ ತಾರೀಕು ೧೮ರಿಂದ ೩೧ರ ವರೆಗೆ ಜರಗುವುದು. ಈ ಸಂತೆಗೆ ಬರುವ ಜಾನುವಾರುಗಳ ಮೇಲೆ ಈ ವರೆಗೆ ವಸೂಲು ಮಾಡುವ ಎರಡಾಣೆ ಫೀಸನ್ನು ಈ ಸರ್ತಿಯ ಸಂತೆಗೆ ಮನ್ನಾಪಡಿಸುತ್ತದೆ.

ಪೋಲೀಸ ಪಂದ್ಯಾಟವು ನವಂಬರ ತಾ. 24ಕ್ಕೆ ಜರಗುವುದು.

ಮಂಗಳೂರ ತಾಲೂಕು ಬೋರ್ಡಿನ ಈ ತಿಂಗಳ ಅಧಿವೇಶನ ಸದರಿ ತಾಲೂಕು ಬೋರ್ಡ ಆಫೀಸಿನಲ್ಲಿ ಬರುವ ತಾರೀಕು 26 ಶುಕ್ರವಾರ ೩ ಗಂಟೆಗೆ ಕೂಡುವುದು.

ಮಂಗಳೂರ ಗವರ್ನಮೆಂಟ ಕೊಲೇಜಿನ ವರ್ಧಂತಿ ಉತ್ಸವ ಬರುವ ತಾರೀಕು ೨೭ನೇ ಶನಿವಾರ ತಲಶೇರಿಯ ಡಿಸ್ಟ್ರಿಕ್ಟ ಜಡ್ಜರಾದ ಮ. ರಾ. ಪಿ. ಪಿ. ರಾವ್ ಇವರ ಅಧ್ಯಕ್ಷತೆಯಲ್ಲಿ ಜರಗುವುದು. ಮ. ರಾ. ವಕೀಲ ಅಡಿಗೆ ಶ್ರೀನಿವಾಸರಾಯರು ಕೊಲೆಜ್ ತೋಸ್ತ ಸೂಚಿಸುವರು.

ಇಲ್ಲಿಯ ... ಬಾಲಿಕಾ ಪಾಠ ಶಾಲೆಯ ವರ್ಧಂತ್ಯುತ್ಸವವು ಬರುವ ಆದಿತ್ಯವಾರ ಸಾಯಂಕಾಲ 5—30 ಘಂ... ಈ ಜಿಲ್ಲಾ ಕಲೆಕ್ಟರ ರಾಯ ಬಹದ್ದೂರ ಯು. ರಾಮ ರಾಯರ ... ಯವರಾದ ಶ್ರೀಮತಿ ಕಲ್ಯಾಣಿ ಬಾಯಿಯವರ ಅಧ್ಯಕ್ಷತೆಯ ನಡಿಯುವುದು.

ಇಂಟರ್ ಸ್ಕೂಲ್ ಜಿಮ್ನಾಸಿನ ಜುನಿಯರ್ ಜಿಮ್ನಾಸ್ಟಿಕ್ ಆಟವು ನಿನ್ನೆ ದಿನ ನಡಿಯಲಿಲ್ಲ. ಸೀನಿಯರ್ ಪಂದ್ಯಾಟಕ್ಕೆ ಕೆನರಾ ಸ್ಕೂಲ ವಿನಹ ಇತರ ಯಾವ ಶಾಲೆಗಳೂ ಸ್ಪರ್ಧಿಸದೆ ಇರುವುದರಿಂದ ಸಿನಿಯರ್ ಪಂದ್ಯಾಟದ ಕಪ್ ಈ ಶಾಲೆಗೆ ದೊರಕುವುದು.

ಪುತ್ತೂರು ತಹಶೀಲದಾರರಾದ ಮ. ರಾ. ಬಿ. ಕೃಷ್ಣಾಚಾರ್ಯರು ಈ ತಿಂಗಳ ತಾ. ೧೫ರಿಂದ ಒಂದು ತಿಂಗಳ ಹೆಚ್ಚಿನ ಪ್ರಿವಿಲೆಜ್ ರಜೆಯನ್ನು ಹೊಂದಿರುವರು.

ಮದರಾಸಿನಲ್ಲಿ ದಂತ ಚಿಕಿತ್ಸೆಯ ತರಬೇತನ್ನು ಹೊಂದುತ್ತಿದ್ದ ಉಡುಪಿಯ ಅಸಿಸ್ಟಾಂಟ್ ಸರ್ಜನರಾದ ಮಿ. ಸಿ. ಕೆ. ಜೋಸೆಫರವರು ಈ ತರಬೇತಿಯನ್ನು ಮುಗಿಸಿ ಪುನಃ ತನ್ನ ಕೆಲಸಕ್ಕೆ ಹಾಜರಾಗುವುದರಿಂದ ಮ. ರಾ. ಇಡ್ಯ ವೆಂಕಟರಾಯರು ಉಡುಪಿಯಿಂದ ಕುಂದಾಪುರದ, ಮ. ರಾ. ಯು. ಆರ್ ಹಟ್ಟಂಗಡಿಯವರು ಕುಂದಾಪುರದಿಂದ ಕಾರ್ಕಳದ, ಮ. ರಾ. ಯು ವೆಂಕಟರಾಯರು ಕಾರ್ಕಳದಿಂದ ಬಂಟ್ವಾಳದ ಅಸಿಸ್ಟಾಂಟ್ ಸರ್ಜನರುಗಳಾಗಿ ವರ್ಗವಾಗಿದ್ದಾರೆ.

ನಿನ್ನೆ ಇಲ್ಲಿಯ ವೆನ್ ಲೋಕ ಆಸ್ಪತ್ರೆಯಲ್ಲಿ ಬಾಳಕುದ್ರು ಗ್ರಾಮದಲ್ಲಿ ಕತ್ತಿಯ ಹೊಡೆತದಿಂದ ಗಾಯಪಡೆದ ಸುಮಾರು ... ವರುಷ ಪ್ರಾಯದ ಮನುಷ್ಯನನ್ನು ಚಿಕಿತ್ಸೆ ಬಗ್ಗೆ ತಂದಿದ್ದರು. ಆ ಗಾಯವು ಕಠಿಣವಾದ್ದರಿಂದ ಈತನು ಒಡನೆಯೇ ಮೃತನಾದನು. ಈ ಖೂನಿಯ ತನಖಿಯು ನಡಿಯುತ್ತದೆ.

ಮುಂಬಾಯಿಯ ಶ್ರೀಯುತ ಗೋಳಿಕೆರೆಯವರು ಸಾರಸ್ವತ ಸಮಾಜವನ್ನು ಕುರಿತು ಕೆಲವು ಹಿತ ಸೂಚನೆಗಳನ್ನು ಆಲೋಚಿಸಲು ಬರುವ ಆದಿತ್ಯವಾರ ಬೆಳಿಗ್ಗೆ ೯ ಗಂಟೆಗೆ ಕೆನರಾ ಹೈಸ್ಕೂಲಿನ ಧನೇಂದ್ರ ಸಭಾಸದನದಲ್ಲಿ ಒಂದು ಮೀಟಿಂಗನ್ನು ಕೂಡಿಸುವರು.

[illegible]

... ಸುತ್ತಮುತ್ತಲೂ ಇದ್ದರೂ ... ಈ ವರೆಗೆ ಕಳಿಸಿ ಮುಂದರಿಸಿದ್ದು ... ಇವರು ಸಂಬಂಧಪಟ್ಟ ಉದ್ಯೋಗಸ್ಥರು ಉಪಾಧ್ಯಕ್ಷರಾಗಿದ್ದರೆ ... ಅನುಕೂಲವಾಗುವದು

ಈ ಹೊಸಮನೆ ಗ್ರಾಮಕ್ಕೆ ಸೇರಿಯಾದ ಬಲ್ಲಗ್ರಾಮದಲ್ಲಿ ಮಕ್ಕಳ ವಿದ್ಯಾಭ್ಯಾಸಕ್ಕೆ ತಕ್ಕಮಟ್ಟಿಗೆ ಒಂದು ಶಾಲೆಯು ಇಲ್ಲ ಪ್ರತಿ ಗ್ರಾಮದಲ್ಲಿ ಒಂದು ಶಾಲೆ ಇರಬೇಕೆಂದು ... ಅಂಶ, ತಕ್ಕ ಜನಾಭಿಪ್ರಾಯ ಸಮಯದವರು ಚಿತ್ರಯಿಸಿದ್ದಾಗ್ಯೂ ಆಸ್‌ಪಾಸ್ ಗ್ರಾಮಗಳ ಶಾಲೆಗಳ ... ಸ್ಥಾಪಿಸಿದಲ್ಲ ಈ ... ಗ್ರಾಮದಲ್ಲಿ ಬೇಗನೇ ಒಂದು ಶಾಲೆ ಸ್ಥಾಪಿಸಿಕೊಡುವುದು ಅವಶ್ಯಕವಾಗಿತ್ತು. ಈ ... ವರೆಗೂ ಶಾಲೆಯಾದದ್ದು ಕಂಡುಬರುವುದಿಲ್ಲ ... ಯವರಾದ ವಿದ್ಯಾಧಿಕಾರಿಗಳು ಈ ಕಡೆ ಗಮನಕೊಟ್ಟು ಒಂದು ಶಾಲೆಯು ನಡೆಸಿದರೆ ... ಈ ಬಡಜನರ ಮಕ್ಕಳಿಗೆ ಮುಂದಿನ ... ವೃದ್ಧಿಗೆ ತಕ್ಕಷ್ಟು ಉಪಕಾರ್ಯವಾಗಿ ಶ್ರೇಯಸ್ಕರವಾಗಿ ಪರಿಣಮಿಸುವುದು.

ವಿಟ್ಲಮೂಡ್ನೂರು:—ಈ ಗ್ರಾಮದ ಕಂಬಳಬೆಟ್ಟು ಶಾಲೆಯು ... ಥ ಭಾಗಾಯ್ತು ಕ್ರಮವಾಗಿ, ನಡೆಯುತ್ತಾ ಇದ್ದು ಕಟ್ಟಿನ ಹಿತ್ಲು ಪಂಕ್ತಿ ... ಆಡಳಿತಗೆ ಒಳಪಟ್ಟು ಕಟ್ಟೋಣವು ಬಹು ರಮ್ಯ ಉಳ್ಳದಾಗಿಯೂ, ಫಲಕು ಸರಿಯಾಗಿ ಇದ್ದು ... ಜನ ಉಪಾಧ್ಯಾಯರಿದ್ದು ... ಮಕ್ಕಳುಳ್ಳದಾಗಿ ... ತೋಟ, ಆವರಣ, ... ವೊದಲಾದ್ದಿದ್ದು ಬೋರ್ಡು ಕಟ್ಟೋಣದಂತೆಯೇ ... ಈ ಶಾಲೆಗೆ ಕಳೆದ ವರ್ಷ ಶಾಲಾ ಇನ್ಸ್‌ಪೆಕ್ಟರವರಾದ ಮಿ ... ಯವರುಗಳು ಬಂದು ಬಹಳ ಸಂತೋಷ ಪಟ್ಟಿರುತ್ತಾರೆ ಆದರಿಂದ ಇ ... ಕಟ್ಟೋಣವನ್ನು ತಾಲೂಕು ಬೋರ್ಡಿನವರು ವಹಿಸಿಕೊಳ್ಳುತ್ತಿದ್ದರೆ ಶಾಲೆಯು ಇನ್ನಷ್ಟು ಒಳ್ಳೇ ಸ್ಥಿತಿಗೆ ಬಂದೀತು

ಸಹಕಾರದ ವಿಚಾರ.

ರಜಾದಿನವಾದ್ದರಿಂದ ಇನ್ಸ್‌ಪೆಕ್ಟರರು ಈ ದಿನ ತಮ ... ಚೇರನ್ನು ವೈದ್ಯರಾಗಿದ್ದರು. ಒಂದು ... ವಿಸ್ಮಿತ, ... ಕೈಯಲ್ಲಿ ಒಂದು ಚಿತ್ರವನ್ನು ತಿರುಗಿಸುತ್ತ ಮುಂದಿನಿಂದ ಬರುವ ಇನ್ನೊಬ್ಬ ... ಎದುರಾದರು. ಇನ್ನೊಂದು ಕಡೆಯಿಂದ ವಿಚಾರಿಯೂ ಬಂದನು ... ಸರ್ಕಾರಗಳ ... ಮರೆತಿಲ್ಲ ಎಲ್ಲರೂ ಕುಳಿತರು.

ಸಹಕಾರಿ—ಸ್ವಾಮಿ, ವಿಚಾರಿಗಳೆ! ಈ ಸಲ ಈ ಮಹಾನುಭಾವರನ್ನು ಕರೆದು ತಂದಿದ್ದೇನೆ. ಇವರು ತಮ್ಮ ... ದೊಡ್ಡ ... ಪ್ರೆಸಿಡೆಂಟರಾಗಿ ಹೆಸರು ಪಡೆದವರು. ಆರೋಗ್ಯ ಸಂಪಾದನೆಗಾಗಿ ನಮ್ಮ ... ಸೇರಿದ್ದಾರೆ. ನಮ್ಮ ಹಳ್ಳಿಸಂಘದ ಪ್ರೆಸಿಡೆಂಟರು ... ಯಾತ್ರೆಗೆ ಹೋದ ... ಈ ಮಹಾನುಭಾವರನ್ನು ನಾವು ... ಅಧ್ಯಕ್ಷರಾಗಿ ನೇಮಿಸಿರುವೆವು. ... ತುಂಬಾ ಅನುಭವಶಾಲಿಗಳು. ಸಹಕಾರದ ಅನೇಕ ಗ್ರಂಥಗಳನ್ನು ಓದಿದವರು.

ವಿಚಾರಿ—ಇಂಥವರು ನಮ್ಮ ಭಾಗ್ಯೋದಯದಿಂದಲೇ ಎಂಬಂತೆ ನಮ್ಮ ... ಬಂದರು. ನೀವು ಬೇಕಾದ ಸಹಾಯವನ್ನು ಇವರಿಂದ ಪಡೆಯಬಹುದಲ್ಲವೆ?

ಆಕ್ಟಿಂಗ್ ಪ್ರೆಸಿಡೆಂಟ್—ಇವರೇನು ಹೇಳುತ್ತಾ ಇದ್ದೇನೆ. ಆದರೆ ... ನನ್ನ ಮಾತಿನ ಮೇಲೆ ಇನ್ನೂ ... ಆಗಲಿಲ್ಲ. ಆದ್ದರಿಂದ ... ಇವರಿಗೆ ಏನು ನೂತನ ಸಂಗತಿಗಳನ್ನು ಹೇಳುತ್ತಾರೆಂದು ಕೇಳಲು ಬಂದೆ.

ವಿಚಾರಿ—ಇರಲಿ. ಸಹಕಾರಿಗಳೇ ನಿಮ್ಮ ಸಹಾಯಗಳ ಕಥೆಯನ್ನು ...

ಸಹಕಾರಿ—ಯೂನಿಯನ್ನು ಆಡಳಿತ ಸಭೆಯವರು ಸಾಲದ ಮಿತಿ ಮತ್ತು ... ತಪ್ಪಿ, ಮೆಂಬರರ ... ಸಾಮರ್ಥ್ಯ ಇವನ್ನು ನೋಡಲು ... ಸಾಲದ ಅರ್ಜಿಯು ... ಒಳಗಾಗದೆಯೋ ಎಂದು ನೋಡುತ್ತಾರೆ ... ಸ್ವಲ್ಪ ತಿಳಿಯಿತು. ಆದರೆ ಇನ್ನು ಯಾವ ವಿಚಾರಗಳನ್ನು ಅಲ್ಲಿ ... ಬಹುದು ಸ್ಪಷ್ಟವಾಗಿ ಗೊತ್ತಾಗಲಿಲ್ಲ

[illegible]

ಈ ಸಾಲದ ಅರ್ಜಿ ಯೂನಿಯನ್ನಿನಲ್ಲಿ ಪಾಸಾಗಬೇಕಾಗುತ್ತದೆ

ಆ. ಪ್ರೆಸಿಡೆಂಟ್—ಇದನ್ನೂ ಕೂಡ ನಾನು ಹೇಳಿದ್ದೇನಲ್ಲ!

ಸಹಕಾರಿ—ಹಾಗಾದರೆ ಪುನಃ ಮಹಾಸಭೆ ಮಾಡಿ ಸಾಲದ ಮಿತಿಯನ್ನು ... ಎಂದರೆ ಹಳ್ಳಿಯಲ್ಲಿ ಮಹಾಸಭೆಗೆ ... ತೀವ್ರವಾಗಿ ಬರುತ್ತಾರೆಯೇ?

ವಿಚಾರಿ—ಇದೊಂದು ಕಷ್ಟದ ಸಂಗತಿ.

ಇನ್ಸ್‌ಪೆಕ್ಟರ್—ಅದಕ್ಕೂ ... ಹೊಸ ಸೂಚನೆಗಳು ಹೊರಟಿವೆ. ಹಳ್ಳಿಯಲ್ಲಿ ಬೆಳೆ ಮತ್ತು ಸುಗ್ಗಿ ಸಾಗುವಷ್ಟು ಕಾಲದಲ್ಲಿ ಜನಗಳು ಮೀಟಿಂಗಿಗೆ ಬರುವುದಿಲ್ಲವೆಂಬುದು ನಿಜ. ಈ ಜನಗಳಿಗೆ ಜೂನು ಜುಲೈ ತಿಂಗಳಲ್ಲಿ ವಿಶೇಷವಾಗಿ ಸಾಲದ ಅಗತ್ಯ ಇದೆ. ಆದ್ದರಿಂದ ಜುಲೈ ತಿಂಗಳಿಂದ ಒಂದು ವರ್ಷದ ವರೆಗೆ ಬರುವ ತಿಂಗಳಲ್ಲಿ, ಯಾವ ಮೆಂಬರನಿಗೆ, ಯಾವ ಬಗ್ಗೆ, ಎಷ್ಟು ಸಾಲ ಬೇಕಾಗುವುದು ಎಂದು ಪಂಚಾಯತರು ಗೊತ್ತುಹಚ್ಚಬೇಕು. ಇದನ್ನು ಕೃಷಿಯ ಕೆಲಸದ ಅಡಚಣೆ ಇಲ್ಲದೆ ಎಪ್ರಿಲ್, ಮೇ ತಿಂಗಳಲ್ಲಿಯೇ ತಯಾರಿಸಿ ಮಹಾಸಭೆ ಜರಗಿಸಿ ಈ ಅಂದಾಜುಪಟ್ಟಿಯನ್ನು ಮಂಜೂರು ಮಾಡಿ ಸಾಲದ ಮಿತಿಯನ್ನು ಏರಿಸಬೇಕಾದ್ದರೆ ಅದಕ್ಕೆ ಬೇಕಾದ ಠರಾವು ಮಾಡಿ ಮೆಂಬರರಿಂದ ವಾಯಿದೆ ಕಳೆದು ವಸೂಲು ಆಗತಕ್ಕ ಸಾಲಗಳಿದ್ದರೆ ಅವುಗಳ ವಸೂಲಿಗೆ ಏನೇನು ಹಜವೀಜು ನಡೆದಿದೆ ಎಂದು ಕಾಣಿಸಿ, ಸಾಲದ ಅರ್ಜಿ ಅಂದಾಜುಪಟ್ಟಿ ಸಾಲದ ಮಿತಿ ಏರಿಸುವ ಠರಾವಿನ ನಕಲು ಇವನ್ನೆಲ್ಲ ಯೂನಿಯನ್ನಿಗೆ ಕಳುಹಿಸಬೇಕು. ಇಂಥ ಅಂದಾಜುಪಟ್ಟಿ ... ಪರಿಶೀಲಿಸುವಾಗ ... ಯೂನಿಯನ್ ಸೂಪರ್‌ವೈಜರುಗಳಿಗೆ ಹಳ್ಳಿಸಂಘಗಳಿಗೆ ಬೇಕುಬೇಕಾದ ಅನುಭವವನ್ನು ಕೊಡಲು ಸಾಧ್ಯವಿದೆ

ವಿಚಾರಿ—ಆ ಮೇಲೆ ಏನಾಗುವುದು?

ಇನ್ಸ್‌ಪೆಕ್ಟರ್—ಇಂಥ ಅರ್ಜಿಗಳನ್ನೂ ಅಂದಾಜುಪಟ್ಟಿಗಳನ್ನೂ ಶಿಫಾರಸು ಸಹಿತ ಅಸಿಸ್ಟಾಂಟ ರಿಜಿಸ್ಟ್ರಾರರ ಬಳಿಗೆ ಯೂನಿಯನ್ ಆಡಳಿತಸಭೆಯವರು ಕಳುಹಿಸುತ್ತಾರೆ. ಅಸಿಸ್ಟಾಂಟ ರಿಜಿಸ್ಟ್ರಾರರು ಅವನ್ನು ತಮ್ಮ ಶಿಫಾರಸು ಸಹಿತ ಸೆಂಟ್ರಲ್ ಬೇಂಕಿಗೆ ಕಳುಹಿಸುತ್ತಾರೆ. ಅಲ್ಲಿ ಅವನ್ನು ಪರಿಶೀಲಿಸಿ ಅವರು ಸಂಕ್ಷನ್ ಮಾಡಿದೊಡನೆಯೇ ಆಯಾ ಹಳ್ಳಿಸಂಘಕ್ಕೆ ತಿಳಿಸುತ್ತಾರೆ. ಆಗ ಇಡೀ ವರ್ಷಕ್ಕೆ ಬೇಕಾದ ಸಾಲಕ್ಕೆ ಒಂದೇ ಬೋಂಡನ್ನು ರಿಜಿಸ್ಟರುಮಾಡಿ ಕಳುಹಿಸಿದರೆ ಆಯಿತು

ಆ. ಪ್ರೆಸಿಡೆಂಟ್—ಇದು ಕೇಶ್ ಕ್ರೆಡಿಟ್ ಕ್ರಮ—ಹೀಗೆ ಮಾಡಲಿಕ್ಕೆ ಸಾಧ್ಯವಿದೆ ಎಂದು ನನಗೆ ಮೊದಲೇ ಗೊತ್ತು

ಸಹಕಾರಿ—ಹಾಗಾದರೆ ತಾವು ಅದನ್ನು ಮೊದಲೇ ಯಾಕೆ ಬೇಂಕಿನಾಗಲಿ ನಮಗಾಗಲಿ ತಿಳಿಸಲಿಲ್ಲ?

ಆ. ಪ್ರೆಸಿಡೆಂಟ್—ನನ್ನ ಮಾತಿಗೆ ಕಿವಿಕೊಡುವವರ್‍ಯಾರು? ನಾನು ಎಷ್ಟೋ ಕಾಲದ ಹಿಂದೆ ಈ ವಿಷಯವನ್ನು ... ದೇಶದ ಸಹಕಾರ ಬಂಧು ಎಂಬ ಪತ್ರಿಕೆಯಲ್ಲಿ ಓದಿದ್ದೇನೆ. ಇದನ್ನು ಮಾಡಿರಿ, ಮಾಡಿರಿ ಎಂದು ಹೇಳಿದರೆ ನಮ್ಮ ಬುದ್ಧಿವಂತರು ಆಗ ಕಿವಿಕೊಡಲಿಲ್ಲ

ವಿಚಾರಿ—ಇರಲಿ. ಈ ರೀತಿ ಬೋಂಡು ಕಳುಹಿಸಿದೊಡನೆಯೆ ಇಡಿ ವರ್ಷಕ್ಕೆ ಬೇಕಾದ ಹಣವೆಲ್ಲ ಒಂದೆ 'ಚೆಕ್ಕ' ಮೂಲಕ ಬರುತ್ತದೆಯೇ?

ಇನ್ಸ್‌ಪೆಕ್ಟರ್—ಇಲ್ಲ. ಮೊದಲು ಹಳ್ಳಿಯ ಸಂಘವು ಕಳುಹಿಸಿದ್ದು ಬರೀ ಅಂದಾಜುಪಟ್ಟಿ ಮಾತ್ರವೇ. ಈಗ ಯಾವ ತಿಂಗಳಲ್ಲಿ ಮೆಂಬರರಿಗೆ ಎಷ್ಟು ಹಣ ಬೇಕೆಂದು ಇದೆಯೊ ಅವರ ಹಿಂದಿನ ತಿಂಗಳಲ್ಲಿ ಆ ಬಗ್ಗೆ ಸಾಲದ ಅರ್ಜಿಗಳನ್ನು ಪಡೆದು ಅವನ್ನು ಪಾಸುಮಾಡಿ ಇಂತಿಷ್ಟು ಮೊಬಲಗಿಗೆ ಸಾಲ ಪಾಸಾಗಿದೆ ಎಂದು ಯೂನಿಯನ್ನು ಮೂಲಕ ಸೆಂಟ್ರಲ್ ಬೇಂಕಿಗೆ ತಿಳಿಸಬೇಕು

ಸಹಕಾರಿ—ಪಟ್ಟಿಯಲ್ಲಿ ೫೦೦ ರೂಪಾಯಿ ನಿಗದಿಯಾಗಿದೆ ಎಂದು ಜನವರಿ ತಿಂಗಳಲ್ಲಿಯೂ ಸಾಲದ ಅರ್ಜಿಗಳನ್ನು ಪಾಸುಮಾಡಿ ಕಳಿಸಬೇಕು ಎಂದು ಅರ್ಥವಲ್ಲವೆ? ಅರ್ಜಿಗಳು ೧೦೦೦ಕ್ಕೆ ಬಂದುಬಿಟ್ಟರೆ.

ಇನ್ಸ್‌ಪೆಕ್ಟರ್—ನೀವು ಪಾಸ್ ಮಾಡಿದರೂ ನಿಮ್ಮ ಅಂದಾಜುಪಟ್ಟಿಯಲ್ಲಿ ತೋರುವಷ್ಟು ಹಣ ಯೂನಿಯನ್ ಶಿಫಾರಸು ಮೇಲೆ ಬೇಂಕಿನವರು ಕೊಡಲಿಕ್ಕೆ ಬದ್ಧರಲ್ಲ. ಆದರೆ ಬೇಂಕಿನಲ್ಲಿ ಆ ಕಾಲದಲ್ಲಿ ಹಣವಿದ್ದರೆ ನೀವು ಕೇಳಿದಷ್ಟು ಅವರು ಕೊಡಬಹುದು

ವಿಚಾರಿ—ಹಾಗೆಯೇ ಸಂಶಯಾತ್ಮಕವಾದ ಮಾತು ಬರಲು ಕಾರಣವೇನು?

ಇನ್ಸ್‌ಪೆಕ್ಟರ್—ಪ್ರತಿ ಸಂಘದಿಂದ ಬಂದ ಅಂದಾಜುಪಟ್ಟಿಯ ಮೇರೆಗೆ ಸಂಘಗಳಿಗೆ ಆಯಾ ತಿಂಗಳಿಗೆ ಬೇಕಾಗಬಹುದಾದ ಹಣವನ್ನು ತಿಂಗಳು ಮುಂಚಿತವಾಗಿಯೇ ಬೇಂಕಿನವರು ಒದಗಿಸಿ ಇಡಬೇಕಾಗುತ್ತದೆ. ಅಂದಾಜು ಮೇರೆಗೆ ಎಲ್ಲ ಸಂಘಗಳಿಗೆ ಅದನ್ನು ಬಟವಾಡೆ ಮಾಡುವಾಗ ೫೦೦ ರೂಪಾಯಿ ಮೊದಲು ಕೇಳಿದ ಸಂಘಕ್ಕೆ ೧೦೦೦ ರೂಪಾಯಿ ಸಿಕ್ಕಬೇಕೆಂದು ನ್ಯಾಯ ಹೇಳುವುದು ಹೇಗೆ?

ಸಹಕಾರಿ—ಹಾಗಾದರೆ ಮೊದಲು ಮಾಡುವ ಅಂದಾಜು ಆದಷ್ಟು ಮಟ್ಟಿಗೆ ಸರಿಯಾಗಿರಬೇಕು ಎಂದು ಅನ್ನುತ್ತೀರಾ?

ಇನ್ಸ್‌ಪೆಕ್ಟರ್—ಹಾಗೆಯೇ ಸರಿ

ಆ. ಪ್ರೆಸಿಡೆಂಟ್—ನೋಡಿದಿರಾ! ನನ್ನ ಮಾತಿನಲ್ಲಿ ನಿಮಗೆ ವಿಶ್ವಾಸ ಹುಟ್ಟಲಿಲ್ಲ.

ಶಿಷ್ಯ—(ಕಣ್ಣುಸನ್ನೆ ಮಾಡಿ) ಇದೆಲ್ಲ ಹಳ್ಳಿಸಂಘಗಳಿಗೆ ಅಸಾಧ್ಯವೆಂದು ನೀವು ಹೇಳಿಲ್ಲವೆ?

ಬೇನೆಯುಂಟಾದಾಗ ದೇಹವು ಕಡಿಮೆಯಾಗುವುದೆಂಬುದು ಸಕಲರಿಗೂ ತಿಳಿದಿರುವ ವಿಷಯ. ಯೋಚಿಸಿ ನೋಡಿದರೆ ಬಹು ವೇಗದಿಂದ ಶಕ್ತಿಯನ್ನು ಕುಂದಿಸಿ ಬಿಡುವ ಪ್ರಾಣವು ಬೇನೆಗಲ್ಲದೆ ಮತ್ತೊಂದಕ್ಕಿರದು. ಅಂಥಾ ಬೇನೆಯನ್ನು ನಿವಾರಣೆ ಮಾಡುವುದಕ್ಕೆ ತಕ್ಕ ಔಷಧವು

ಅಮೃತಾಂಜನ

ಹೊರತು ಮತ್ತೊಂದಿಲ್ಲವೆಂಬುದು ಖಾತ್ರಿ

ಇದನ್ನು ಉಪಯೋಗಿಸುವುದರಿಂದ ದೇನೆಯು ಒಂದೇ ಕಡೆಯಲ್ಲಿ ನಿಲ್ಲದು ಇದು ಯಾವ ತರದ ಶಿಡಿತವನ್ನಾದರೂ ನೋವನ್ನಾದರೂ ಗುಣಪಡಿಸುವುದು ಬೇನೆಯನ್ನು ಉಪಶಮನ ಮಾಡುವ ವಿಶೇಷವಾದ ಲಕ್ಷಣಗಳಿಂದ ಕೂಡಿ, ತರ ತರದ ನೋವನ್ನ ಗುಣಪಡಿಸಿ ನಿವಾರಣೆ ಮಾಡುವ ದಿವ್ಯ ಔಷಧ

ಕ್ರಯ ಡಪ್ಪಿ 1ರ 10 ಆಣೆ ಡಜನ್ 1ಕ್ಕೆ ರೂ 5—12—0

ಗಜಕರ್ಣದ ಮುಲಾಮು —ಮೂರು ಸರ್ತಿ ಹಾಗಿಸುವುದರೊಳಗೆ ಗಜಕರ್ಣವು ಖಂಡಿತವಾಗಿ ನಾಶವಾಗುವುದು.
ಕ್ರಯ ಡಪ್ಪಿ ಒಂದರ ರೂ 0—6—0

ದಂತಮಂಜನ:—ಈ ಉತ್ತಮವಾದ ದಂತಮಂಜನವನ್ನು ಉಪಯೋಗಿಸುವುದರಿಂದ ಹಲ್ಲುಗಳು ಶುಭ್ರವಾಗುತ್ತವೆ. ರಕ್ತ ಬರುವುದು ನಿಲ್ಲುತ್ತದೆ ಹಲ್ಲುಗಳು ಗಟ್ಟಿಯಾಗುತ್ತವೆ ಇದು ಸುವಾಸನೆಯಿಂದ ಕೂಡಿ ಉತ್ತಮವಾಗಿರುತ್ತದೆ ಡಪ್ಪಿ ೧ರ ಆಣೆ 2.

ಅಮೃತಾಂಜನ ಡಿಪೊ,

6 7 ತಂಬುಚೆಟ್ಟಿ ಸ್ಟ್ರೀಟ್, ಜೋರ್ಜ್ ಟೌನ್, ಮದ್ರಾಸು.
109 ಫ್ರೇಯರ್ ರೋಡ್, ಮುಂಬಯಿ.
ಮಂಗಳೂರಲ್ಲಿ —ಊಲನ್ ಮಾರ್ಟ್, ಹಂಪನಕಟ್ಟೆ, ಇವರಲ್ಲಿಯೂ ದೊರಕುವುದು.

ವಾತಕಷಾಯ

U. B. DUTT & Co. CALICUT.

ಮಲೆಯಾಳ ದೇಶವು ಔಷಧಗಳಿಗೆ ಕೀರ್ತಿಹೊಂದಿದ ಪ್ರದೇಶವು ಅಲ್ಲಿನ ಕಾಡುಗಳಲ್ಲಿ ಅತಿ ಪ್ರಯಾಸದಿಂದ ಮಾತ್ರವೇ ಸಿಕ್ಕುವ ನಾರುಬೇರುಗಳಿಂದ ನಾವು ಅನೇಕ ಉತ್ಕೃಷ್ಟ ಔಷಧಗಳನ್ನು ಸಿದ್ಧಪಡಿಸಿ, ಅನೇಕ ಕಾಲದಿಂದ ಉಪಯೋಗಿಸುತ್ತಿದ್ದೇವೆ ಇದಕ್ಕೆ ಪ್ರತಿಫಲವಾಗಿ, ಅನೇಕಾನೇಕರು ಅವುಗಳಿಂದ ಗುಣಹೊಂದಿರುವುದಲ್ಲದೆ ನಮಗೆ ಪ್ರತಿನಿತ್ಯವೂ 'ಆರ್ಡರ್‌ಗಳೂ' ಬರುತ್ತಲಿವೆ ಈ ಭಾಗದಲ್ಲಿ ಗುಣಹೊಂದಿದವರಿಂದ ನಮಗೆ ಬಂದಿರುವ ಕಾಗದಗಳೂ ಯೋಗ್ಯತಾಪತ್ರಗಳೂ ಹೇರಳವಾಗಿವೆ

ಅಂಥಾ ಉತ್ಕೃಷ್ಟ ಔಷಧಿಗಳಲ್ಲಿ ನಮ್ಮ ವಾತಕಷಾಯವು ಎಲ್ಲಾ ವಿಧದ ವಾತಗಳನ್ನು ಗುಣಪಡಿಸುತ್ತದೆ. ಗಂಟುಗಳಲ್ಲಿರುವ ನೋವು, ಅವಯವಗಳಲ್ಲಿ ಉರಿಯುವ ಸ್ವಭಾವ, ಗಂಟು ಹಿಡಿತ, ಅದುಮಿದ ಅಂಡಕೋಶ ಮೊದಲಾದುವು ಕೆಂಪಾಗಿ ನೋವುಂಟಾಗುವುದು ನಡೆಯಲು ಆಗದೆ ಇರುವುದು, ಕೈಕಾಲು ಅಲ್ಲಾಡಿಸುವಾಗ ವಿಪರೀತ ನೋವಾಗುವುದು ಮೂತ್ರದಲ್ಲಿ ದೋಷ ಇರುವುದು ಇತ್ಯಾದಿಗಳಲ್ಲಿ ಯಾವುದಾದರೂ ಒಂದು ನಿಮ್ಮಲ್ಲಿಯಾಗಲೀ ನಿಮ್ಮ ಸ್ನೇಹಿತರಲ್ಲಿಯಾಗಲೀ ಕಾಣಿಸಿಕೊಂಡರೆ ಕೂಡಲೇ ನಮ್ಮ 'ಕಷಾಯ' ತೆಗೆದುಕೊಳ್ಳಲು ಪ್ರಾರಂಭಮಾಡಿರಿ ಅದನ್ನು ಕ್ರಮವಾಗಿ ಸೇವಿಸುವುದರಿಂದ ನಿಮ್ಮ ರೋಗವು ಸಂಪೂರ್ಣ ಗುಣಹೊಂದುವುದರಲ್ಲಿ ಯಾವ ಸಂಶಯವೂ ಇಲ್ಲ ಇದಲ್ಲದೆ ಪಿತ್ತ, ವಾತ, ಕಫ, ಅಜೀರ್ಣ, ಕಾಲರಾ ಅಪಸ್ಮಾರ, ಉಬ್ಬಸ, ಕೆಮ್ಮು ಜ್ವರ, ತಲೆನೋವು ಧಾತುಪುಷ್ಟಿ, ಹಲ್ಲುನೋವು ಕಿವಿನೋವು, ಅಮಶಂಕೆ, ಮೊದಲಾದವೆಲ್ಲಕ್ಕೂ ದಿವ್ಯೌಷಧಗಳ "ಕ್ಯಾಟಲಾಗ್"ನ್ನು ನೋಡಿ

ಕ್ರಯ ರೂ 4—4—0

ಯು. ಬಿ ದತ್ತ ಕಂಪೆನಿ,
ಕಲ್ಲಿಕೋಟೆ ಮಲಬಾರ

Come! See! & Try!

P. Narayana Vaijappa Bhandary & Co.,

Cloth Merchants,
Car-Street, MANGALORE.

ಮದಿವೆ ಉಪನಯನಗಳ, ಹಬ್ಬ ಉತ್ಸವಗಳ ಕಾಲದಲ್ಲಿ ಮತ್ತು ನಿತ್ಯದಲ್ಲಿ ಉಪಯೋಗಕ್ಕೆ ಬೇಕಾದಂಥಾ ಸೀರೆಗಳು, ರವಕೆ ಕಣಗಳು, ಧೋತ್ರಗಳು, ನಾನಾ ಬಗೆಯ ಅಂಗೀ ವಸ್ತ್ರಗಳು, ಧೋತಿಗಳು, ಟೋಪಿಗಳು ಇತ್ಯಾದಿ ಉಡುಪುತೊಡುಪುಗಳಿಂದ ನಮ್ಮ ಮಳಿಗೆಯನ್ನು ತುಂಬಿಸಿರುತ್ತೇವೆ.

ಸಖಾರಖಂ ವ್ಯಾಪಾರಸ್ಥರಿಗೆ ವಿಶೇಷವಾದ ಸುಲಭ ದರಗಳು. ನಗದಿ ಗಿರಾಕಿಗಳಿಗೆ ಡಿಸ್ಕೌಂಟು ಕೊಡೋಣಾಗುತ್ತದೆ.

ಪ. ನಾರಾಯಣ ವೈಜಪ್ಪ ಭಂಡಾರಿ ಮತ್ತು ಕಂಪೆನಿ,
ರಥಬೀದಿ, ಮಂಗಳೂರು.

ಪ್ರತಿಯೊಬ್ಬ ಕುಟುಂಬಿಕನೂ ಹತ್ತಿರವೇ ಇಟ್ಟುಕೊಳ್ಳಬೇಕಾದ

ಸರಸ್ವತಿ ವಿಲಾಸದವರ
★ಸುದರ್ಶನ ತೈಲ.★
M.S.G.B & SONS. *MANGALORE.*

ಮುದ್ದಣ, ಕಣ್ಣು ಕುರು ಕರ್ಣಶೂಲ ಅಸಾಧ್ಯವಾದ ಕುರು ಪೈಲು ಯಾನೆ ಬಾವು ಕರೇಣವಾದ ಗಜಕರ್ಣ, ತುರಿಕಜ್ಜಿ, ಮುಂತಾದ್ದನ್ನು ನಿಸ್ಸಂದೇಹವಾಗಿ ನಿರ್ಮೂಲ ಮಾಡುವ ದಿವ್ಯೌಷಧ —ಅನುಪಾನ ಪಟ್ಟಿ ಸಮೇತ ಬಾಟ್ಲಿ 1ರ ಕ್ರಯ 0—4—0 ವಿ ಪಿ ಬೇರೆ

ಸರಸ್ವತಿ ವಿಲಾಸದವರ ರಿಂಗ್ವರ್ಮ ಮುಲಾಂ.

ಗಜಕರ್ಣ—ಸೊಂಟಕಜ್ಜಿ ಕೂಡಲು ನಾಶಮಾಡುವ ಹುಳುಗಳ ಮೇಲೆ ರಾಮಬಾಣ ಬಾಟ್ಲಿ 1ರ ಕ್ರಯ 0—5—0 ವಿ ಪಿ ಬೇರೆ

ನಮ್ಮ ವಿಳಾಸ —

ಯಮ್. ಸುಬ್ರಾಯಗಿರಿಭಟ್ಟ ಎಂಡ್ ಸನ್ಸ್,
ಸರಸ್ವತಿ ವಿಲಾಸ ರಥಬೀದಿ, ಮಂಗಳೂರು

ಟಿಶ್ಯೂ ರೆಮಿಡಿಸ್

ಎಂಬ

12 ಜೀವರಸಾಯನಿ ಔಷಧಗಳು

ಮತ್ತು

ಹೊಮ್ಯೋಪಥಿಕ್ ಔಷಧಗಳು

ನಮ್ಮ ಗಿರಾಕಿಗಳ ಅನುಕೂಲತೆ ಬಗ್ಗೆ ವಾರದ ಎಲ್ಲಾ ದಿವಸಗಳಲ್ಲಿ ಬೆಳಗ್ಗೆ 7½ ಘಂಟೆಯಿಂದ ರಾತ್ರೆ 9 ಘಂಟೆ ತನಕ ಸುಲಭವಾದ ದರದಲ್ಲಿ ಮಾರೋಣಾಗುತ್ತದೆ

ಟಿಶ್ಯೂ ರೆಮಿಡಿಸ್	2 ಡ್ರಾಮಿನ ಸೀಸೆ 1ಕ್ಕೆ			0 3 6
,,	4	,	,, ,,	0 6 0
,	1 ಔನ್ಸಿನ		,, ,,	0 12 0
ಹೊಮಿಯೊಪಥಿಕ್ ,,	2 ಡ್ರಾಮಿನ		,, ,,	0 3 6

ಮಂಗಳೂರು ಟ್ರೇಡಿಂಗ್ ಎಸೋಸಿಯೇಶನ್,
(ಶಾರದಾ ಛಾಪಖಾನೆ)
ರಥಬೀದಿ, ಮಂಗಳೂರು

THE WORLD RENOWNED
HAARLEM OIL.

OF THE ORIGINAL INVENTOR—CLASS TILLY.

Avoid Imitations—Write or call for the papers dealing with the history of HAARLEM OIL.

Available only for:— **The Bombay Stores,** *Mangalore, Sole distributers for India, Burma and Ceylon.*

ಲೋಕ ಪ್ರಸಿದ್ಧವಾದ

ಹಾರ್ಲೇಮ್ ತೈಲ ಕಲ್ಪಕನಾದ ಕ್ಲೆಸ್ ಟಿಲ್ಲಿಯ ಜೆನ್ಯುಇನ್ ಯಾನೆ ತಾಜಾ ಹಾರ್ಲೇಮ್ ತೈಲವು.

ಕೃತ್ರಿಮ ಹಾರ್ಲೇಮ್ ತೈಲವನ್ನು ... ಕ್ಲೆಸ್ ಟಿಲ್ಲಿಯ ಹಾರ್ಲೇಮ್ ತೈಲ ಯಾವುದು? ಎಂಬುದನ್ನು ತಿಳಿಯಪಡಿಸುವ ಪತ್ರಗಳನ್ನು ...

ದೊರಕುವ ವಿಳಾಸ:— **ದಿ. ಬೊಂಬೇ ಸ್ಟೋರ್ಸ್,** ಮಂಗಳೂರು. (ದ. ಕನ್ನಡ)

ಪುತ್ತೂರಿನಲ್ಲಿ: ಬೆಳ್ಳಾರೆ ನರಸಿಂಹ ಮಲ್ಯ.

ಬೊಂಬಾಯಿ ಸ್ಟೋರಿನ ಹಾರ್ಲೇಮ್ ತೈಲ ಮಾರುವ ಏಜಂಟರು — ಇಂಡಿಯಾ, ಬರ್ಮಾ, ಮತ್ತು ಸೀಲೋನು ಪ್ರಾಂತ್ಯಗಳಲ್ಲಿ ಕ್ಲೆಸ್ ಟಿಲ್ಲಿಯ ತಾಜಾ ಹಾರ್ಲೇಮ್ ತೈಲವನ್ನು ಮಾರಾಟ ಮಾಡಲು ಸಂಪೂರ್ಣ ಸ್ವತಂತ್ರ ವನ್ನುಳ್ಳ ಪ್ರಾಮುಖ್ಯ ಬಿಕ್ರಿದಾರರು.

"ಕಾಮಶಾಸ್ತ್ರ"

ಉತ್ತಮವಾದ ಈ ಪುಸ್ತಕವು ಅನುಕೂಲವಾಗಿ ತಮ್ಮ ದೇಹದ ವಿಷಯಕ್ಕೆ ಮತ್ತು ಆರೋಗ್ಯ ಅನುಕೂಲಕ್ಕೆ ತಕ್ಕ ... ಬರಿಯುವಲ್ಲಿ ಅಂಚೆಯ ಹಾಸಲು ಸಹಾ ನಿರೀಕ್ಷಿಸದೇ ಕಳುಹಿಸುವೆವು.

ಮತ್ತು

ಪ್ರಸಿದ್ಧವಾದ ಆತಂಕನಿಗ್ರಹ ಗುಳಿಗೆಗಳನ್ನು ಯಾವಾಗಲೂ ತಮ್ಮ ಪ್ರಿಯಮಿತ್ರರ ಹಾಗೆ ಭಾವಿಸಿ ಉಪಯೋಗಿಸುವಲ್ಲಿ ನಿರಾಧಾರವಾದ ಆಲೋಚನೆಗಳನ್ನು ಹೋಗಲಾಡಿಸಿ ಅಮೃತದ ಹಾಗೆ ದೇಹಧಾರ್ಢ್ಯವನ್ನುಂಟು ಮಾಡಿ ಸುತ್ತಾ ಇರುವುದು. ಕ್ರಯ ರೂ. 1. ಹೆಚ್ಚರಿಗೆಯಿಂದ ಮರೆಯಬಾರದು.

ವಿಳಾಸ:—

ವೈದ್ಯಶಾಸ್ತ್ರಿ ಮಣಿಶಂಕರ ಗೋವಿಂದಜೀ,

ಆತಂಕನಿಗ್ರಹ ಔಷಧಾಲಯ, 157, ಜಾಮ್ನಗರ್, ಮದರಾಸು.

Local Agents: **Raphael & Co.,** *Brito Buildings,* Hampankatta, MANGALORE.

ನೇಟಿವ್ ಡೊಕ್ಟರ್ಸ್ ಮೂಲ್ಕಿ ಗಣಪಯ್ಯ ಎಂಡ್ ಸನ್ಸರವರ

ಖ್ಯಾತಿಯುಂದ ಗುಣಪಡಿಸುವ ಔಷಧಗಳು.

1. ಮಹಾಮದನ ಕಾಮೇಶ್ವರಿ ಲೇಹ:—ಬಹಳ ಶ್ರಮ ದ ಕೆಲಸಮಾಡುವ ಲೇಖಕನೂ ಮತ್ತು ಇಂದ್ರಿಯ ದೌರ್ಬಲ್ಯ, ಅಜೀರ್ಣ, ಎದೆನೋವು, ಮಲಬದ್ಧತೆ, ಶರೀರಗಳ ಘಳಿತದಿಂದ ಅಶಕ್ತ ... ಪ್ರಕೃತಿಯುಳ್ಳವರೂ ಇದನ್ನು ಸೇವಿಸಿದ್ದಲ್ಲಿ ರಕ್ತಶುದ್ಧಿ, ಧಾತುಪುಷ್ಟಿ ಮತ್ತು ಮುಖದಲ್ಲಿ ಕಾಂತಿಗೊಳಿಸುವುದು.

2. ಮಹಾಜ್ವರಾಂಕುಶ (ಖಾತ್ರಿ ಗುಣ):—ಇನ್‌ಫ್ಲುಯೆಂಜಾ ನ್ಯೂಮೋನಿಯಾ, ಮಲೇರಿಯಾ, ದಿವಸಕ್ಕೊಮ್ಮೆ, ದ್ವಿತೀಯ ತೃತೀಯ ಚಾತುರ್ಥಿಕ ಜ್ವರಗಳ ಮೇಲೆ ರಾಮಬಾಣ. ಬಾಟ್ಲ 1ಕ್ಕೆ ಆಣೆ 8.

3. ಬಾಲಗ್ರಹಗುಟಿಕೆ:—ಕೂಸು ವ ಮಕ್ಕಳ ಅಪಸ್ಮಾರಕ್ಕೆ ರಾಮಬಾಣ. ಡಜನಿಗೆ ಆಣೆ 10.

4. ಕೋಲೆರಾ ಯಾನೆ ವಾಂತಿಬೇದಿ ಗುಟಿಕೆ:—ಒಂದೆರಡು ಗುಟಿಕೆಯಿಂದ ವಾಂತಿಬೇದಿ ಕೂಡಲೆ ಗುಣ. ಬರಿ ಅತಿಸಾರ ರಕ್ತಾತಿಸಾರ, ಜ್ವರಕೂಡಿರುವ ರಕ್ತಾತಿಸಾರ, ಗ್ರಹಣಿಯಿಂದ ಯಾ ಹುಳದ ... ದ್ರಿಂದ ಆಗುವ ಹೊರಕಡೆ ಗುಣ. ಬಾಟ್ಲ 1ಕ್ಕೆ ಆಣೆ 8.

5. ಶ್ವಾಸಕುಠಾರ ಗುಟಿಕೆ:—ಇದು ಶ್ವಾಸಕ್ಕೆ ಸಿದ್ಧ ಔಷಧಿ. ಒಂದೇ ಗುಟಿಕೆಯಿಂದ ಕಫ, ಉಬ್ಬಸ, ಕೆಮ್ಮು, ಇವು ಗುಣ. ಡಜನಿಗೆ ಆಣೆ 10.

6. ಮೇಹಕುಠಾರ:—ಮೂತ್ರಕೃಚ್ಛ್ರ, ಅಶ್ಮರಿ, ವ್ರಣ ... ಹೋಗುವಾಗ್ಯೆ ಉರಿಯನ್ನೂ ಕೀವನ್ನೂ ಕೂಡಲೆ ನಿಲ್ಲಿಸಿ ಪಥ್ಯ ... ದ ಖಂಡಿತ ಗುಣಕೊಡುವದು; ಕಠಿಣ ರೋಗಿಗೂ ಕೂಡಾ 2 ... ವಾರದೊಳಗೆ ಗುಣಸಿಕ್ಕುತ್ತದೆ. 16 ದಿವಸದ ಔಷಧಿ. ಕ್ರಯ ರೂ. 2.

7. ಇಚ್ಛಾಭೇದಿ:—ಆಯಾಸವನ್ನು ಉಂಟುಮಾಡದ ಸುಖ ರೇಚಕ. ಬಾಟ್ಲ 1ಕ್ಕೆ ಆಣೆ 12.

8. ಭೃಂಗರಾಜತೈಲ:—ತಲೆ ಉರಿ, ಕಣ್ಣು ಉರಿ, ಕಣ್ಣು ನೋವು, ನಿದ್ರೆ ಬಾರದೆ ಇರುವುದು, ಅರ್ಧ ತಲೆನೋವು, ಜ್ಞಾಪಕಶಕ್ತಿ ಕಡಿಮೆಯಾಗುವುದು, ಕೂದಲು ಉದುರಿ ಹೋಗುವುದು, ತಲೆ ತಿರುಗುವುದು, ಕೂದಲಿನ ಕಪ್ಪು ಬಣ್ಣವನ್ನು ಹೆಚ್ಚಿಸಿ ಉದ್ದವಾಗಿಯೂ ... ವಾಗಿಯೂ ಮಾಡುವುದು. ಬಾಟ್ಲ 1ಕ್ಕೆ ಆಣೆ 12.

9. ದಂತಮಂಜನ:—(ಕರ್ಪೂರ ಮಿಶ್ರ) ಹಲ್ಲಿನ ಕ್ರಿಮಿ ವಸಡು ... ಗು, ಕೀವು ಯಾ ರಕ್ತ ಬರುವುದು, ಮುಂತಾದ ದಂತ ಸಂಬಂಧ ಸರ್ವ ಬಾಧೆಗಳನ್ನು ಶಾಂತಪಡಿಸುತ್ತದೆ. ಕರಡಿಗೆ 1ಕ್ಕೆ ಆಣೆ 2.

ವಿಳಾಸ:— **ಮೂಲ್ಕಿ ಗಣಪಯ್ಯ ಎಂಡ್ ಸನ್ಸ್,** ನೇಟಿವ್ ಡಾಕ್ಟರ್ಸ್, ಮಂಗಳೂರು. ದ. ಕ.

ಶ್ರೀಮತ್ ಕಲ್ಯಾಣ ಬಂಧುಗಳೇ!

ಈ ಕಡೆ ನೋಡಿರಿ.

ಕಲ್ಯಾಣಕಾರಕವೆಂಬ ಜಿನಭಿಷಗ್ಗ್ರಂಥಾಧಾರದಿಂದಲೂ ಅನೇಕ ರಾಜವೈದ್ಯರುಗಳಿಂದಲೂ ಪರಿಶೋಧಿಸಿ ತಯಾರಿಸಲ್ಪಟ್ಟ ಅನುಭವ ಸಿದ್ಧೌಷಧಗಳು ಈ ಕೆಳಗಣ ವಿಳಾಸದಾರರಲ್ಲಿ ದೊರೆಯುವವು. ಅಪೇಕ್ಷಕರು ಕೆಟಲಾಗನ್ನು ತರಿಸಿಕೊಂಡರೆ ಸಮಾಧಾನವಾಗುವದು.

S. P. RAJA & Co.,
Kalyanakaraka Bishagmandir.
POLALY, POST S. C.

ಎಸ್. ಪಿ. ರಾಜಾ ಮತ್ತು ಕಂಪೆನಿ,
ಕಲ್ಯಾಣಕಾರಕ ಭಿಷಗ್ಮಂದಿರ, ಪೋಸ್ಟು ಪೊಳಲಿ, ಪ. ಕ.

NETRANAND SAREES

Cheap and Fashionable

Sarees in all brilliant colours with lustrous borders.

Liberal Commission for wholesale Orders.

ಚಲೋ ಬಣ್ಣದ ಶೀರೆಗಳು! ಬಹಳ ಕಮ್ಮಿ ಕ್ರಯ!

ವಿವಿಧ ಬಣ್ಣಗಳ ಥಾಥಾಕೊಡುವ "ನೇತ್ರಾನಂದ" ಕರವಾದ ಶೀರೆಗಳು ಕೆಳಗಿನ ಕಂಪೆನಿಯವರ ಹತ್ತರ ದೊರಕುತ್ತವೆ.

ವ್ಯಾಪಾರಸ್ಥರಿಗೆ ಒಳ್ಳೇ ಕಮಿಶನ ಸಿಕ್ಕುವದು.

ನೂಲಿನ ಕೆಂಪು (Congo Red) ಹಳದಿ ಮತ್ತು ಇತರ ಬಣ್ಣಗಳು ಕಮ್ಮಿಕ್ರಯದಲ್ಲಿ ದೊರಕುವವು.

ವಿಶೇಷ ಹಾಕಿಟಿಬಗ್ಗೆ ಕೆಳಗಿನ ವಿಳಾಸಕ್ಕೆ ಬರೆಯಬೇಕು.

ಶ್ರೀ ಶೀತಾರಾಮವಿಠ್ಠಲ ಕಂಪೆನಿ,
ಮಿಲಾಗ್ರಿ ಇಗರ್ಜಿ ಎದುರು, ಹಂಪನಕಟ್ಟೆ ಮಂಗಳೂರು.

ಇಲ್ಲಿ ಬನ್ನಿ! ಬೆಲೆ ನೋಡಿ! ಸಾಮಾನುಗಳನ್ನು ಪರೀಕ್ಷಿಸಿರಿ!

ಶ್ರೀ

ಗಜಾನನ ಮೆಡಿಕಲ್ ಹೊಲ್

ಬಹು ನೂತನ ಅಲೋಪತಿ ಮತ್ತು ಹೊಮಿಯೊಪತಿ

ಔಷಧ ಮಂದಿರ, ರಥಬೀದಿ, ಮಂಗಳೂರು.

ಇಲ್ಲಿಗೆ ಒಂದು ಸಾರಿ ಬಂದು ಪರೀಕ್ಷಿಸಿ!
ಆ ಮೇಲೆ ನೀವು ಬೇರೆಕಡೆ ಹೋಗಲಾರಿರಿ!!

ನಮ್ಮಲ್ಲಿ ಎಲ್ಲಾ ವಿಧವಾದ ಔಷಧ ದ್ರವ್ಯಗಳೂ, ಪೇಟೆಂಟ್ ಇಂಗ್ಲೀಷ ಔಷಧಗಳೂ, ಸುಗಂಧ ದ್ರವ್ಯಗಳೂ, ಸೋಪುಗಳೂ, ಫೌಂಟನ್‌ಪೆನ್ ಗಳೂ, ಥರ್ಮಾಮೀಟರ್ ಎಂಬ ಅತ್ಯಂತ ಉತ್ತಮವಾದ ಯಂತ್ರಗಳೂ, ರಬ್ಬರಿನ ... ಸರ್ಜಿಕಲ್ ... ಇವೆಲ್ಲಾ ಬಹು ಸುಲಭ ಬೆಲೆಗೆ ತಾಜಾ ರೀತಿಯಲ್ಲಿ ದೊರೆಯುವವು.

ಹೊಮಿಯೊಪತಿ ಮತ್ತು ಟಿಶ್ಯೂ ಔಷಧಗಳು

ನಿಮಗೆ ತಾಜಾ ಆಗಬೇಕಾದರೆ ನಮ್ಮಲ್ಲಿ ಬನ್ನಿ!

ಬಡವರಿಗೋಸ್ಕರ ಧರ್ಮಾರ್ಥ ಚಿಕಿತ್ಸೆ

ಪ್ರತಿನಿತ್ಯವು ಬೆಳಗ್ಗೆ ೯ ಗಂಟೆಯಿಂದ ೧೦ ಗಂಟೆಯ ವರೆಗೆ ಬಡವರಿಗೆ ಹೊಮಿಯೊಪತಿ ಮತ್ತು ಟಿಶ್ಯೂ ಔಷಧಗಳನ್ನು ರೋಗಿಯನ್ನು ಪರೀಕ್ಷಿಸಿ ಮಾಡಿ, ಧರ್ಮಾರ್ಥವಾಗಿ ಕೊಡುವೆವು.

ಔಷಧಗಳನ್ನು ಶಾಸ್ತ್ರರೀತಿಯಾಗಿ ತಯಾರಿಸುವುದಕ್ಕೆ ನಮ್ಮಲ್ಲಿ ... ದಕ್ಷರು ಅನುಭವಶಾಲಿಗಳಿರುವರು.

ನಮ್ಮಲ್ಲಿ ಔಷಧಗಳು ಹಗಲಿರುಳು ದೊರೆಯುವವು.

ಸುಲಭ ಬೆಲೆ! ವಿನಯ ವ್ಯಾಪಾರ! ರೋಗಿಗಳ ಸುಖಕ್ಕಾಗಿಯೇ ... ಬೇಗ!

ಇಲ್ಲಿ ಒಂದುಸಾರಿ ಪರೀಕ್ಷಿಸಿ!

ಎಮ್. ರಾಮ ಕಾಮತ್,
ಪ್ರೊಪ್ರೈಟರ್.

ಮಲೇರಿಯಾ ಮತ್ತು
ಮಲೇಜ್ವರಹಾರಿ.



... ಮಲೇರಿಯಾ ಮುಂತಾದ ಆಗಾಗ ಬರುವ ಜ್ವರಗಳಿಗೆ ಉತ್ತಮ ಔಷಧ. ...

... ವಿಷಮಯವಾದ ಪದಾರ್ಥಗಳು ಒಂದು ರೋಗ ... ಗುಣವಾದರೂ ಇನ್ನೊಂದು ರೋಗಕ್ಕೆ ... ವಿಷಮಯವಾದ ಪದಾರ್ಥಗಳು ಇದರಲ್ಲಿ ಇಲ್ಲ.

ಹಿಂದುಸ್ಥಾನ, ಬರ್ಮಾ, ಸಿಂಹಳ ಮುಂತಾದ ಪ್ರದೇಶಗಳ ಬೇರೆ ಬೇರೆ ಸ್ಥಾನಗಳಿಂದಲೂ ಕಳೆದ ೨೦ ವರ್ಷಗಳಲ್ಲಿ ಅಸಂಖ್ಯಾತವಾದ ಶಿಫಾರಸು ಪತ್ರಗಳು ನಮಗೆ ಬಂದಿವೆ.

... ಆಧ್ಯಕ್ಷರಾದ ಡಾ. ... ಸಾಹೇಬರು ಈ ರೀತಿಯಾಗಿ ಬರೆದಿರುತ್ತಾರೆ:—"ಬೇರೆ ಬೇರೆ ವಿಧದ ಜ್ವರಗಳ ಸಂದರ್ಭದಲ್ಲಿ ನಾನು ಈ ಔಷಧವನ್ನು ಪ್ರಯೋಗಿಸಿದಾಗ, ಅದರಿಂದ ಕ್ಷಿಪ್ರದಲ್ಲಿ ಗುಣಾಂಶ ಸಿಕ್ಕಿತು."

ನಮ್ಮ ಏಜಂಟರು ಈ ವರೆಗೆ ನೇಮಕವಾಗದ ಸ್ಥಳದಲ್ಲಿ ನಮಗೆ ಏಜಂಟರು ಬೇಕು. ಕಮಿಶನ್ ಮುಂತಾದ ಶರತ್ತುಗಳನ್ನು ನಮಗೆ ಬರೆದು ತಿಳಿದುಕೊಳ್ಳಬಹುದು.

ಕರ್ನಾಟಕ ಬ್ರದರ್ಸ್,
65 ಗಿರಗಾಂವ, ಮುಂಬಯಿ.

Agent:— **The Woollen Mart,** *Mangalore.*

ಲೂಯಿಸರ ಎಲಿಕ್ಸಿರ್ ಫೋರ್ ಹೆಲ್ತ್.

ಎಂಬುವ ಪಾನಕವು ಚಾ ಮತ್ತು ಕಾಫಿಗಳಿಗಿಂತ ಅತ್ಯಂತ ಹಿತಕರವಾದ ಪಾನವಾಗಿದ್ದು ಬಹುಮೂತ್ರ ಪೀಡೆ ಬಾರದಂತೆ ಆರೋಗ್ಯ ಕಾಪಾಡುತ್ತದೆ. ಬಾಯಾರಿಕೆ ತಗ್ಗಿಸುತ್ತದೆ. ಮೂತ್ರದ ಹಲವು ದೋಷಗಳನ್ನು ಹೋಗಲಾಡಿಸುತ್ತದೆ. ಒಮ್ಮೆ ಉಪಯೋಗಿಸಿದರೆ ಮತ್ತೆ ಇದನ್ನು ಬಿಡರು. ಪರೀಕ್ಷಾರ್ಥವಾಗಿ ಒಂದು ಸೀಸೆ ತರಿಸಿರಿ.

8 ಔನ್ಸಿನ ಸೀಸೆಗೆ ಕ್ರಯ ರೂ. 2–8–0 ಮಾತ್ರ.

ಡಾಯಬೆಟೋಲ್.

ಇದು ಬಹುಮೂತ್ರದ ಪೀಡೆಗೆ ಅತ್ಯುತ್ತಮ ಔಷಧ. ಪೂರ್ಣ ಗುಣವಾಗುತ್ತದೆ. ರೋಗಿಗಳಿಗೆ ಅಮೃತಪ್ರಾಯವಾಗಿದೆ. 8 ಔನ್ಸಿನ ಸೀಸೆಗೆ ರೂ. 5 ಮಾತ್ರ. ಅಂಚೆಹಾಸಲು ವಗೈರೆ ಇದರಲ್ಲಿ ಸೇರಿಲ್ಲ. ಸೇವನೆಯ ಸೂಚನೆಗಳು ಸೀಸೆಯೊಂದಿಗೆ ಸಿಗುವವು.

P. M. Kamath & Co.
Chemists & General Merchants,
New Court Road, MANGALORE.

ಅಥವಾ ಕುಂದಾಪುರದಲ್ಲಿ ಈ ಔಷಧವನ್ನು ತಯಾರಿಸುವ ಮಿ| ಕೆ. ಆರ್. ಲೂಯಿಸರನ್ನು ವಿಚಾರಿಸಿರಿ ಈ ಔಷಧವನ್ನು ಹೊಂದಬಹುದು.

POCKET CINEMATOGRAPH

ಬಾಲಕ ಬಾಲಕಿ, ಯುವಕ ವೃದ್ಧರಿಗೆ ಬಲುವಿಧ ತಮಾಷೆಗಳನ್ನು ತೋರಿಸಿ, ಆಶ್ಚರ್ಯವನ್ನುಂಟುಮಾಡಿ, ಸಂತೋಷಗೊಳಿಸುವಂಥಾ ಕಾಲವನ್ನು ನೋಡಿ ನಾವೆ ಬಂದು ಬಿಟ್ಟೆವು. ಯಾವುದೆಂದರೆ, ಸಿನಿಮೊಟೊಗ್ರಾಫ್ ಅಥವಾ ಚಲನೆ ಪಟಗಳ ತಮಾಷೆ ಸಾವಿರಾರು ರೂಪಾಯಿಗಳು ಖರ್ಚುಮಾಡಿ ತರಿಸಿರುತ್ತೇವೆ. ಪ್ರತಿಯೊಬ್ಬರಿಗೂ ಅವಶ್ಯ ಬೇಕು.

ಕ್ರಯ ರೂ. 2–0–0. ವಿ. ಪಿ. ಚಾರ್ಜು ಇನಾಂ.

ಪಾಕೆಟ್ ಸಿನಿಮೊಟೊಗ್ರಾಫ್ ಮತ್ತು ಕಂಪೆನಿ,
370, ಟಂಕಸಾಲೆ ಬೀದಿ,
ಸಾಹುಕಾರಪೇಟೆ, ಮದರಾಸ.

ಪುಸ್ತಕಗಳು

[illegible]

ಎಚ್. ಎಸ್. ರಾವ್ ಬ್ರದರ್

ಚಿಕ್ಕಪೇಟೆ, ಬೆಂಗಳೂರು ಸಿಟಿ.

ಮದ್ರಾಸ್ ಸರ್ಕಾರದವರಿಂದ 1920ನೇ ಇಸವಿ ಪರೀಕ್ಷೆಗಳಿಗೆ ಸೇರಿಸಲ್ಪಟ್ಟಿರುವ

ಕನ್ನಡ ಪಾಠಪುಸ್ತಕಗಳು

	ರೂ.	ಆ.	ಪೈ.		ರೂ.	ಆ.	ಪೈ.
ರಾಮಾಯಣ ಸಂಗ್ರಹ—				ಚಂದ್ರಹಾಸ	0	2	0
ಬಾಲಕಾಂಡ.	0	6	0	ಗುಣನಿರೂಪಣ	0	6	0
ಸುಭದ್ರೆ	0	6	0	ಪಂಚತಂತ್ರ ಭಾಗ I	0	4	0
ಪಂಪಭಾರತ	0	12	0	„ „ II	0	3	0
ಪದ್ಯಸಾರ ಭಾಗ I.	0	8	0	„ „ III	0	4	6
ಅಕ್ಬರ್ ಚರಿತ್ರೆ	1	1	0	ಹೊಸ ಪುಸ್ತಕಗಳು			
ರಾಜಶೇಖರ ಚರಿತ್ರೆ	1	0	0	ವಿಷವಲ್ಲರಿ	0	6	0
ಸುಮತಿಮದನಕುಮಾರ ಚರಿತ್ರೆ I	0	8	6	ಸುಶೀಲ	0	1	6
ಅಧಿಕಪಾತಗಳ ಪುಸ್ತಕ	0	6	0	ಚಂದ್ರಮುಖಿ	0	8	0
ಸಾವಿತ್ರೀ ಚರಿತ್ರೆ	0	2	3	ಶಂಕಾವರ	0	6	0
ರಮಾನಂದ	0	10	0	ಅಬಲಾಸಚ್ಚರಿತ್ರ ರತ್ನಮಾಲೆ	2	0	0
ಸುವ್ರತ	0	13	0	ನಿರ್ಮಲೆ	0	12	0
ಪ್ರಬಂಧಮಂಜರಿ	0	14	0	ಪದಸೃಷ್ಟಿ (ವ್ಯಾಕರಣ)	0	3	6
ಪದಾರ್ಥವಿಜ್ಞಾನಶಾಸ್ತ್ರ	0	14	0	ಹಿಂದೂ ಪ್ರತಿವೇದ	0	10	0
ಜ್ಯೋತಿಶ್ಶಾಸ್ತ್ರ	1	0	0	ಪದ್ಮಿನಿ	0	12	6
ಪ್ರಹ್ಲಾದ	0	2	0	ದಾಕ್ಷಾಯಣಿ	0	8	0
ಧ್ರುವ	0	2	0	ವಿ ಹಾರಾಣಿ ಲಕ್ಷ್ಮೀಬಾಯಿ	0	12	0

ಇತ್ಯಾದಿ ಎಲ್ಲಾ ಸ್ಕೂಲ್‌ಪುಸ್ತಕಗಳೂ ನಮ್ಮಲ್ಲಿ ಸುಲಭ ಬೆಲೆಗೆ ದೊರೆಯುತ್ತವೆ.

ಎಂ. ಎಸ್. ರಾವ್ ಕಂಪೆನಿ,

ಪುಸ್ತಕವ್ಯಾಪಾರಿಗಳು, ಬೆಂಗಳೂರು ಸಿಟಿ.

ಪ್ರಖ್ಯಾತಿಪಟ್ಟ

ಮಂಗಳೂರು ನಶ್ಯದ ಹುಡಿ.

ಸೊಗಸಾದ ಹೊಗೆಸೊಪ್ಪನ್ನು ಉಪಯೋಗಿಸಿ ಒಳ್ಳೇ ಅನುಭವಸ್ಥರಿಂದ ತಯಾರಿಸಲ್ಪಡುತ್ತದೆ. ಈ ನಸ್ಯವು ಒಂದೆರಡು ತಿಂಗಳವರೆಗಾದರೂ ಕೆಡುವುದಿಲ್ಲ.

ಡಬ್ಬಿ 1ರ ಕ್ರಯ 3—4—0., ಹೆಚ್ಚಿಗೆ ಕರಿಸುವವರಿಗೆ ರೂ. 3 [illegible] ಇದ್ದು ಕಂಠದ ಮೇಲಿನ ಯಾವತ್ತೂ ರೋಗಗಳನ್ನೂ ಗುಣ ಪಡಿಸುತ್ತದೆ. ತೊಲೆ 1ರ ಕ್ರಯ 0-8-0. ವಿ. ಪಿ. ಖರ್ಚು ಪ್ರತ್ಯೇಕ. ಸ್ಯಾಂಪಲನ್ನು ಅಪೇಕ್ಷಿಸುವವರು 2 ಆಣೆ ಸ್ಟಾಂಪನ್ನು ಕಳುಹಿಸುವದು. ರಖಂ ಪಡಕೊಳ್ಳುವವರಿಗೆ ಯೋಗ್ಯವಾದ ಕಮಿಶನ್ ದೊರಕುವುದು.

ನಮ್ಮ ವಿಳಾಸ:—

ಎಮ್. ಪದ್ಮನಾಭ ಭಂಡಾರಿ ಎಂಡ್ ಕೊ.,

ರಥಬೀದಿ, ಮಂಗಳೂರು.



ಜಗತ್ಪ್ರಸಿದ್ಧವಾದ ಅನೇಕ ರೋಗಗಳಿಗೆ ಒಂದೇ ಔಷಧವು.

ಇಂಡಿಯಾ ಸರಕಾರದಲ್ಲಿ ನಂ. [illegible] ನೇ ಇಸವಿಯ [illegible] ನೇ ಅಕ್ಟನಂತೆ ರಜಿಸ್ಟರ ಮಾಡಲ್ಪಟ್ಟಿ.

ಅರ್ಕುಶಫಾ ಅಥವಾ ಆರೋಗ್ಯಬಿಂದು.

ಈ ಅರ್ಕುಶಫಾ ಎಂಬ ಔಷಧವು ಯಾವತ್ತು ರೋಗಕ್ಕೆ ಮನವರಿಕೆಯಾಗಿ ತಾ. [illegible] ನೇ ಇಸವಿಯಿಂದ ತಾ. [illegible] ನೇ ಇಸವಿಯವರೆಗೆ ಮೂವತ್ತು ಸಾವಿರ ಬಾಟಲಿಗಳು ಖರ್ಚಾದವು. ಮತ್ತು [illegible] ನೇ ಇಸವಿ ಅಕ್ಟೋಬರ್ ತಿಂಗಳಲ್ಲಿ ಇನ್‌ಫ್ಲೂಯಂಜಾ ಜ್ವರಕ್ಕೆ ಒಂದೇ ತಿಂಗಳಲ್ಲಿ ಒಂಭತ್ತು ಸಾವಿರ ಬಾಟಲಿಗಳು ಖರ್ಚಾದವು. ಅಂತು ಈವತ್ತಿನ ವರೆಗೆ ಸಣ್ಣ ದೊಡ್ಡ ಬಾಟ್ಲಿಗಳು ಕೂಡಿ ಮೂವತ್ತೊಂಭತ್ತು ಸಾವಿರ ಬಾಟಲಿಗಳು ಖರ್ಚಾದವು. ಅಂದ ಮೇಲೆ ಈ ಔಷಧವು ಎಷ್ಟು ಮೌಲ್ಯವಾನ ಅದೆ ಇದು ಯಾವತ್ತರು ತಾವೇ ಅನುಭವಕ್ಕೆ ತಂದು ಪ್ರತಿಯೊಬ್ಬರು ತಮ್ಮ ಸಂಗ್ರಹದಲ್ಲಿ ಒಂದು ಬಾಟ್ಲಿ ಇಟ್ಟುಕೊಂಡು ಅಮೃತವೇ ಎಂದು ತಿಳಿದು ಸ್ವೀಕಾರಮಾಡುತ್ತಿರಬೇಕು. ಈ ಆರೋಗ್ಯಬಿಂದು ಇಡೀ ಕರ್ನಾಟಕ ದೇಶಕ್ಕೆಲ್ಲಾ ಹೋಗಿ ರೋಗಗಳು ಈ ಅರ್ಕುಶಫಾದಿಂದಲೇ ಗುಣಹೊಂದಿದ ಬಗ್ಗೆ ಮತ್ತು ಯಾವತ್ತು ರೋಗಕ್ಕೆ ಉಪಯೋಗ ಆದಪ್ರಯುಕ್ತ ಎಷ್ಟೋ ಇನಾಮು ಸರ್ಟಿಫಿಕೇಟುಗಳು ಸಹ ದೊರೆದಿರುತ್ತವೆ. ಅವು ಬರೆಯಲಿಕ್ಕೆ ಕಾಗದವು ಸಾಲದು. ಇಂಥ ಅಮೂಲ್ಯವಾದ ಈ ಔಷಧವನ್ನು ಎಲ್ಲರೂ ಸ್ವೀಕರಿಸಿ ರೋಗರಹಿತರಾಗುವರೆಂದು ನಂಬುತ್ತೇನೆ. ರೋಗದ ಪರೀಕ್ಷೆಯ ಸಲುವಾಗಿ ಬೇರೆ ಡಾಕ್ಟರರ ಮತ್ತು ವೈದ್ಯರ ಬರೂರು ಬೇಕಾಗುವದಿಲ. ಅಂದ ಮೇಲೆ ಈ ಆರೋಗ್ಯಬಿಂದುವಿನ ಮೇಲೆ ದುರ್ಲಕ್ಷ್ಯಮಾಡದೆ ಕೆಳಗೆ ಬರೆದ ರೋಗಗಳ ಮೇಲೆ ಉಪಯೋಗಮಾಡಿ ರೋಗ ನಿವಾರಣ ಮಾಡಿಕೊಳ್ಳಬೇಕು.

ರೋಗದ ನಾಮಗಳು.

ಕ್ಷಯರೋಗ, ಹಡವರೋಗ, ಪಾಂಡುರೋಗ, ಗುಲ್ಮರೋಗ, ಮಲರೋಗ, ಮಹಾಮಾರಿ, (ಕಾಲರಾ), ಪ್ಲೇಗು, ಚಳಿಜ್ವರ, ವಿಷಮಜ್ವರ, ಇನ್‌ಫ್ಲೂಯಂಜಾ ಜ್ವರ; ಅನೇಕ ಪ್ರಕಾರದ ಜ್ವರ, ಗಂಡಮಾಲೆ, ಕಿವಿಶೂಲಿ, ಮೂಗಿನೊಳಗಿನ ಪಿನಸ, ಮೊದಲಾದ ರೋಗವು, ಕಣ್ಣಿನೊಳಗೆ ಹೂವು ಬೀಳೋದು ಮತ್ತು ಕಣ್ಣುನೋವು, ದಮ್ಮು, ಕೆಮ್ಮು, ಶ್ವಾಸ, ಅಡಗ್ಗೆ, ಇದ್ದಳಿಕಿ, ಅಜೀರ್ಣ, ಹೊಟ್ಟೆಶೂಲಿ, ಪ್ಲೀಹಶೂಲಿ, ಅರದಲೆಶೂಲಿ, ನಡಶೂಲಿ, ವಾತಶೂಲಿ, ರೇಸ್ಕಿಯಡು, ಗುಧ್ಯವ್ರಣ ಬೇನೆ, ಹುರಳ ಕಲ್ಲು, ಗಜಗರ್ಣ, ಕಜ್ಜು, ಇಸಬು, ಘಾಯವ್ರಣ, ನಾರುಹುಣ್ಣು, ಸ್ತ್ರೀಯರ ಮುಟ್ಟು ಕೂಡಿ, ಹಡದ ವಂಡು, ಸಣ್ಣ ಕೂಸುಗಳ ಬಾಲಗ್ರಹ, ತೋಡಗೆಮ್ಮು, ಆರವಿ, ಮುಟ್ಟುದೋಷ, ಹೊಟ್ಟೆ ದೊಡ್ಡದಾಗೋದು, ಮೈ ಹೂರಬೀಳೋದು, ಮತ್ತು ಸಣ್ಣ ಕೂಸುಗಳಿಗೆ ವೃದ್ಧರಿಗೂ ಸಹ ತಿಳಿಯದೆ ಇದ ಅನೇಕ ರೋಗಗಳು, ಚೇಳು ಮತ್ತು ಸರ್ಪದಂಶ ಇದರ ಹೊರತು ಇನ್ನೂ ಅನೇಕ ರೋಗಗಳು ಮಾತ್ರಿಯಿಂದ ಗುಣವಾಗುತ್ತವೆ. ಈ ಆರೋಗ್ಯಬಿಂದುವಿನ ಕ್ರಯ ಅಮೌಲ್ಯ ಕಂಡು ಬಂದಲ್ಲಿ ಬಡವರಿಗೂ ಧನವಂತರಿಗೂ ಸರಿಯಾಗಿ ಬಹಳ ಕಡಿಮೆ ಕ್ರಯ ಇಟ್ಟಿರುತ್ತದೆ. ಒಂದುಕಾಲುತೊಲೆ ಬಾಟಲಿ ಒಂದಕ್ಕೆ 2 ರೂಪಾಯಿ. ನಮೂನೆ ಬುದ್ದಿಕ್ಕ ೨ ಆಣೆ. ತೊಕದ ಬಾಟ್ಲಿ ಒಂದಕ್ಕೆ 8 ಆಣೆ. ವಿ. ಪಿ. ಖರ್ಚು ಬೇರೆ ಬೀಳುವದು. ಒಂದು ಡಜನ್ ಬಾಟ್ಲಿ ತಕ್ಕೊಂಡರೆ ನಾಲ್ಕು ಬಾಟ್ಲಿಗಳನ್ನು ಕಮಿಷನ್ ಕೊಡುತ್ತೇವೆ. ಇದಕ್ಕೆ ಎಂಟು ಆಣೆ ಖರ್ಚು ಬರುವದು. ೧೦ರಿಂದ ೧೧ ಬಾಟಲಿಗಳ ವರೆಗೆ ತೆಗೆದುಕೊಂಡರೆ ಕಮಿಷನ್ ಇರುವದಿಲ್ಲ. ಇದಕ್ಕೆ ನಾಲ್ಕು ಆಣೆ ಖರ್ಚು ಬರುವದು. ಒಂದುಕಾಲುತೊಲೆಯ 3 ಬಾಟಲಿಗಳು ಒಂದೆ ಸಾರಿ ತಕ್ಕೊಂಡರೆ ಒಂದು ಬಾಟಲಿ ಕಮಿಶನ್ ಕೊಡುತ್ತೇವೆ. ಇದಕ್ಕೆ ಖರ್ಚು ಎಂಟು ಆಣೆ ಬರುವದು. ನಮ್ಮ ಔಷಧವು ಬೋಟ ಹೂರಟರೆ ದುಃಖ ತಕ್ಕೊಳ್ಳುತ್ತೇವೆ. ಮತ್ತು ಜತ್ತಿನ [illegible] ಬೇಕಾದಲ್ಲಿ ಪೋಸ್ಟ ಕಾರ್ಡ ಬರೆ [illegible] ದೊರೆಯಲಿಕ್ಕಿಲ್ಲ. ಅನುಪಾನ ಪತ್ರಗಳು ಕನ್ನಡ, ಮರಾಠಿ, ಮುಸಲ್ಮಾನ ಭಾಷೆಗಳಲ್ಲಿ ಛಾಪಿಸಿರುತ್ತವೆ. ತಿಸಂದಿ ಪ್ರಕಾರ ಬಾಟ್ಲಿಯು ಸೋಟಿಸ ಸಿಗುವದು. ತಿಮ್ಮ ವಿಳಾಸ ಇಂಗ್ಲೀಷ್ ಅಥವಾ ಕನ್ನಡದಲ್ಲಿ ಹಾಡು ಮತ್ತು ಪೋಸ್ಟ ವಗೈರೆ ಸ್ಪಷ್ಟವಾಗಿ ಬರೆಯುತ್ತಿರಬೇಕು,

ಹೆಚ್. ಎಂ. ಮುಲ್ಲಾ, ಸಂಪಾದಕ ಅರ್ಕುಶಫಾ,

33 ಹೆಡ್ ಆಫೀಸ್ ಶಹಾಪೂರ, (ಬೆಳಗಾಂವ).

ಗೊತ್ತೇ ಇಲ್ಲವೋ [illegible] ವರುಷಗಳಿಂದಲೂ [illegible] ಮಹಾರಾಜರು [illegible] ನಾರಾಯಣಜೀ [illegible]

ಮದನ ಮಂಜರಿ ಮಾತ್ರೆಗಳು

ಈ ಮಾತ್ರೆಗಳನ್ನು [illegible] ರಿಂದ ಧಾತುಪುಷ್ಟಿ, ರಕ್ತಪುಷ್ಟಿಯನ್ನು [illegible] ಗನೆ ಕೊಡುವವು ಮತ್ತು ಧಾತುವು [illegible] ಲಕ್ಕೆ ಸುಲಭಸಾಧ್ಯವಾಗಿದ್ದರೂ [illegible] ಕಾಲು ಸೊಂಟದಲ್ಲಿ ನೋವಿದ್ದರೂ ಗುಣಮಾಡುವುವು. ಈ ಮಾತ್ರೆಗಳನ್ನು ವನಸ್ಪತಿ ಮೂಲಿಕೆಗಳಿಂದ ತಯಾರಿಸಿದ್ದಾಗಿದೆ.

ವಿಳಾಸ:— ಕ್ರಯ ಡಬ್ಬಿ ೧ಕ್ಕೆ ೧—೦—೦.

ರಾಜವೈದ್ಯ ನಾರಾಯಣಜೀ, ಕೇಶವಜೀ,

27. ಜೈನ ಬಜಾರು ರೋಡ್,

ಮದರಾಸು.

"ವೈದ್ಯಾಮೃತ ಮಂದಿರಂ"

ಎಂಬ

ನಮ್ಮ ಆಯುರ್ವೇದ ವೈದ್ಯಶಾಲೆಯಲ್ಲಿ ಶಾಸ್ತ್ರೋಕ್ತವಾಗಿ ತಯಾರಿಸಲ್ಪಟ್ಟ ಎಲ್ಲಾ ತೈಲಗಳೂ, ಆಸವಾರಿಷ್ಟಗಳೂ, ಕಷಾಯಗಳೂ, ದ್ರವದ್ರಾವಕಗಳೂ, ಭಸ್ಮಗಳೂ, ಚೂರ್ಣಗಳೂ, ಮಾತ್ರೆಗಳು ಇತ್ಯಾದಿ ಔಷಧಿಗಳೂ ಮತ್ತು ಕಾಶ್ಮೀರ, ನೇಪಾಲ ದೇಶಗಳಿಂದ ತರಿಸಿದ ಕಸ್ತೂರಿ, ಪಚ್ಚ ಕರ್ಪೂರ, ಕುಂಕುಮಕೇಸರ ಮುಂತಾದವುಗಳೂ ಸುಲಭವಾದ ಕ್ರಯಕ್ಕೆ ದೊರಕುತ್ತವೆ. ಪರಸ್ಥಳ ದವರು ರೋಗದ ಪ್ರಕೃತಿಯನ್ನು ವಿಶದವಾಗಿಬರೆದು ತಿಳಿಸಿದರೆ ಅಗತ್ಯವಿರುವ ಔಷಧಿಗಳನ್ನು ಅನುಪಾನಪತ್ರಿಕೆ ಸಮೇತ ವಿ. ಪಿ. ಮೂಲಕ ಕಳುಹಿಸುವೆವು.

ವಿಳಾಸ:— ಕೆ. ಕೆ. ನಾಯರ್

ಎಂಡ್ ಬ್ರದರ್ಸ್,

ವೈದ್ಯಾಮೃತ ಮಂದಿರಂ,

ನೀಲೇಶ್ವರ, ದ. ಕನ್ನಡ.

ಕ್ಷಿಪ್ರಗುಣಕಾರಿ! ಮಹೌಷಧ!!

ಸಿರಪ್ ವಾಸಕಾ.

ಕೆಮ್ಮು, ಶೀತ, ಜ್ವರ, ಪಕ್ಕೆಗಳ ವೇದನೆ, ರಕ್ತಕಾಸ, ಕ್ಷಯ, ಉಬ್ಬಸ, ಬ್ರೊಂಕಾಯಿಟಿಸ, ನ್ಯೂಮೋನಿಯಾ ಮುಂತಾದ ಶ್ವಾಸಕೋಶದ ಯಾವತ್ತು ರೋಗಗಳಿಗೆ ಅತ್ಯುತ್ತಮವಾದ್ದು. ಪ್ರಾಚೀನಾರಭ್ಯ ಕಾಸರೋಗಗಳಿಗೆ ಚಿಕಿತ್ಸೆ ಗುಣಕಾರಿ ಎಂದು ಹೆಸರುಗೊಂಡ "ಆಡಸೋಗೆ" ಎಂಬ ಗಿಡಮೂಲಿಕೆಯಿಂದ ತಯಾರಿಸಲ್ಪಟ್ಟದ್ದು, ಇದರಿಂದ ದೂಷಿತವಾದ ಶ್ಲೇಷ್ಮವು ಬೇಗನೆ ಕಳವಾಗುವದರಿಂದ ಕೆಮ್ಮು ಬರುವಾಗ ಕಷ್ಟವಾಗುವದಿಲ್ಲ. ರುಚಿಯಲ್ಲಿ ಸಿಹಿಯಾಗಿರುವದರಿಂದ ಮಕ್ಕಳಿಗೆ ಇದರ ಸೇವನೆಯಲ್ಲಿ ಬಹಳ ಪ್ರೀತಿ.

ಬಾಟ್ಲಿ 1ರ ಕ್ರಯ ಬರೇ ಒಂದು ರೂಪಾಯಿ ಮಾತ್ರ.

ಬಂಗಾಲ ಕೆಮಿಕಲ ಮತ್ತು ಫರ್ಮಾಸ್ಯೂಟಿಕಲ ವರ್ಕ್ಸ್ ಕಂಪೆನಿ ಲಿಮಿಟೆಡ್, ಕಲ್ಕತಾ,

ಸೋಲ ಏಜಂಟ್ಸ —

ಪಿ. ಎ. ಪೈ ಬ್ರದರ್ಸ್, ಉಡುಪಿ.

ಮಿಜಾರ್ಕಾರ ಬ್ರದರ್ಸ್, ಮಂಗಳೂರು,

ಇವರಲ್ಲಿಯೂ ಸಿಗುವದು.

ಮುಫತ್ತು!! ಇಂಥಾದ್ದು ಬೇಕು.

ಗಲ್ಲ ಜೋಬ

ಸರಕಾರದಲ್ಲಿ ರಿಜಿಸ್ಟರು ಮಾಡಲ್ಪಟ್ಟ ನಂ. 253.

ಒಂದಾಣೆ ಸ್ಟಾಂಪಿನೊಳಗೆ ರುಜುವಾತು ಶಿಕ್ಷೆಯುಳ್ಳ ರಶೀದು— ಈ 32 ಮಾತ್ರೆಗಳುಳ್ಳ ಬಾಟ್ಲಿಗಳನ್ನು ಖರೀದಿಸುವವರಿಗೆ ಕೊಡಲ್ಪಡುತ್ತದೆ. [illegible] ಮನಸಾಕ್ಷಿಯಾಗಿ [illegible] ಬಂದು ತಿಂಗಳೊಳಗಾಗಿ [illegible] ಕ್ರಯವನ್ನು ವಾಪಸು ಮಾಡುತ್ತೇವೆಂದು ಪ್ರತಿಜ್ಞೆಯನ್ನು ನಾವು ದೃಢವಾಗಿ ಮಾಡುತ್ತೇವೆ.

ಗುಲ್ ಪನ್ ಜೋಬನ್.

ಶಕ್ತಿವರ್ಧಕ! ಧಾತುಪುಷ್ಟಿ!! ರೋಗನಿವಾರಕ!!!

ಈ ಮಾತ್ರೆಗಳು [illegible]

ಬಾಟ್ಲಿ 1ಕ್ಕೆ ರೂ. 1. 3ಕ್ಕೆ ರೂ. 2—10—0. ವಿ. ಪಿ. ಖ. ಬೇರೆ.

ಏಜಂಟರುಗಳು ಬೇಕು. ಎಲ್ಲ ಸ್ಥಳಗಳಲ್ಲಿ ಸಿಗುವದು.

ವಿಳಾಸ:— ದಿ. ಗುಲ್ ಪನ್ ಜೋಬನ್ ಕಂಪೆನಿ, ಬೊಂಬೈ 8.

Mr. ALEX ALVAREZ Dentist.

OF MANDALAY, UPPER BURMA.

Will attend patients here for the following in Particular:—

Charges Moderate.

1. Painless extraction of teeth. 2. Making of false teeth. 3. Filling the teeth with silver, gold, porceline. 4. Gold bridge and Crowns. 5. Porceline Crowns. 6. Cleaning the teeth. 7. Pyorrhoea treatment.

Can be consulted at:—

The Electro Homoeopthic Dispensry,

Hampankatta, *MANGALORE.*

ಮಿ. ಆಲೆಕ್ಸ್ ಅಲ್ವರಿಸ್ ದಂತವೈದ್ಯ.

ಇವರು ಹಲ್ಲು ಬೇನೆಯಿಂದ ನರಳುತ್ತಿರುವವರ ಹಲ್ಲುಗಳನ್ನು ಸ್ವಲ್ಪವೂ ನೋಯದಂತೆ ಬಾಧಸಹಿತ ಕಿತ್ತು ತೆಗೆಯೋದು, ಕೃತ್ರಿಮ ಹಲ್ಲುಗಳನ್ನು ಮಾಡುವುದು, ಹಲ್ಲುಗಳಲ್ಲಿ ಉಂಟಾದ ರಂಧ್ರಗಳನ್ನು ಬೆಳ್ಳಿ, ಬಂಗಾರ, ಪಿಂಗಾಣಿ ಇವುಗಳಿಂದ ಮುಚ್ಚೋದು, ಬಂಗಾರದ ಕೃತ್ರಿಮ ದಂತಪಾಳೆಯನ್ನು ಬುಡ ಸಹಿತ [illegible], ಪಿಂಗಾಣಿ ಹಲ್ಲುಮಾಳೆಯನ್ನು ಅಡೋದು ಮತ್ತು ಹಲ್ಲುಗಳನ್ನು [illegible] ದಂತರೋಗ ಚಿಕಿತ್ಸೆಯನ್ನು ಮಾಡುವರು. ಇವರು ಹಂಪನಕಟ್ಟೆಯಲ್ಲಿರುವ [illegible] ಅಲಿಕ್ಟ್ರೊ ಹೋಮಿಯೋಪತಿಕ್ ಡಿಸ್ಪೆನ್ಸರಿಯಲ್ಲಿ ಭೇಟಿಗೆ ದೊರೆಯುತ್ತಾರೆ.

ಗೊನೊಕ್ಯೂರಾ.

ಮೇಹ ರೋಗಕ್ಕೆ (Gonorrhea) ಪರಮೌಷಧವು.

ಎಲ್ಲಾ ತರದ ಮೇಹಗಳಲ್ಲಿ, ದಪ್ಪವಾದ ಕೀವಿನಂಥಾ ಮೇಹವು ಹರಿಯುವದಕ್ಕೆ, ಮೂತ್ರದ್ವಾರದಲ್ಲಿಯ ಉರಿ, ಹಳದಿವರ್ಣದ ಅಥವಾ ಹಸುರುವರ್ಣದ ಕಠಿಣ ಉರಿಯುಳ್ಳ ಮೇಹವು ಹರಿಯುವದಕ್ಕೆ, ಮೂತ್ರಮಾಡುವಾಗ ಇಂದ್ರಿಯದಲ್ಲಿ ಉರಿ, ಮುಂತಾದ ಮೇಹ ಸಮ್ಮಂಧವಾದ ಎಲ್ಲಾ ಚುರುಕುರೋಗಗಳಲ್ಲಿ ಉತ್ತಮ ಔಷಧವು. ಇದರ ಸೇವನೆಯಿಂದ ಎಷ್ಟುಕಾಲದ ಹಳೆ ಮೇಹರೋಗಗಳಾದರೂ ಖಂಡಿತವಾಗಿ ಗುಣಹೊಂದುವವು.

ಔಷಧ ಸೇವಿಸುವ ಕ್ರಮ— 2 ಘಂಟೆಗೆ ಒಂದಾವರ್ತಿ 5 ಬಿಂದು ಔಷಧವನ್ನು ಒಂದು ಚಮಚದಷ್ಟು ನೀರಿನಲ್ಲಿ ಹಾಕಿ ಸೇವಿಸುವದು. ಕ್ರಯ:— ರೂ. 1—0—0.

ಬೇಕಾಗಿದ್ದವರು ಕೆಳಗಿನ ವಿಳಾಸಕ್ಕೆ ಬರೆಯತಕ್ಕದ್ದು.

ವಿಳಾಸ— ಎ. ಫೆರ್ನಾಂಡಿಸ್,

ಇಲೆಕ್ಟ್ರೊ ಹೋಮಿಯೋಪತಿ ಡಿಸ್ಪೆನ್ಸರಿ,

ಮಂಗಳೂರು

The [illegible] Bank [illegible] Mangalore.

[illegible]

ಬಂಡವಾಳ [illegible] ... ಒಟ್ಟು ಮೂಲಧನವು ರೂ. 300,000—0—0

ಕ್ಷೇಮನಿಧಿ ಮತ್ತು ಇತರ ಫಂಡುಗಳು

Funds ... 138,697—7—2 ... 138,697—7—2

THE BANK RECEIVES FIXED, CURRENT ACCOUNT, & SAVINGS BANK DEPOSITS

[illegible] ಸೇವಿಂಗ್ಸ್ ಬೇಂಕ್ ಠೇವಣಾತಿಗಳೂ ಪಡಕೊಳ್ಳಲಾಗುತ್ತದೆ.

For further particulars apply to the Secretary.

ವಿಶೇಷ ಮಾಹಿತಿ ಬಗ್ಗೆ ಸೆಕ್ರೆಟರಿಗೆ ಬರಕೊಳ್ಳುವದು.

[illegible] Bank Ltd.,
Mangalore, 1st September 1920.

K. Venkat Rao,
Secretary.

ದ್ರಾವಿಡ ವೆಂಕಟಾಚಲ ಪಂಡಿತ್ತರ ಸಿದ್ಧೌಷಧಗಳು.

ರೋಚನಾಮಯಹರ ಕಸ್ತೂರಿ ಮಾತ್ರೆಗಳನ್ನು ಈಗಲಾದರೂ ಪರೀಕ್ಷಿಸಿ ನೋಡಿರಿ!

ಪ್ರತಿವರ್ಷವೂ ಲಕ್ಷಾಂತರ ಸೀಸೆಗಳು ವಿಕ್ರಯವಾಗುತ್ತಿವೆ,

ಇಂಡಿಯಾದಲ್ಲಿ ಮಾತ್ರವಲ್ಲ, ಬರ್ಮಾ, ಸಿಲೋನ್, ಮಲೆಯ ಸ್ಟೇಟ್, ಗೋವಾ, ಫೀಜಿಐಲೆಂಡ್,

[illegible] ಮೊದಲಾದ ಕಡೆಯವರು ಕೂಡ ಈ ಸಿದ್ಧೌಷಧಿಯನ್ನು ಉಪಯೋಗಿಸುತ್ತಿರುತ್ತಾರೆ.

[illegible] ಒಂದೇ ಒಂದು ರೋಚನಾಮಯಹರ ಕಸ್ತೂರಿ ಮಾತ್ರೆಯ ಸೀಸೆಯು ನಿಮ್ಮ ಮನೆಯಲ್ಲಿದ್ದರೆ ಸಮಯವನ್ನು [illegible] [illegible]

[illegible] ಅಜೀರ್ಣ, ಪಾರ್ಶ್ವವಾಯು, ಜ್ವರ, ಮಂದ, ಮಲಬದ್ಧ, ಕೆಮ್ಮು, ಗಡಬೇನೆ, ಬಲಹೀನತೆ, [illegible] [illegible] ಮಕ್ಕಳ ಎಳವು, ಜ್ವರ, ಕೆಮ್ಮು, ವಾಯು, ಇನ್ನೂ ಅನೇಕ ರೋಗಗಳನ್ನು ಈ [illegible] ಗುಣಪಡಿಸುತ್ತದೆ.

ಪ್ರತಿ 8 ಸೀಸೆಗಳನ್ನು ಒಟ್ಟಿಗೆ ತರಿಸಿದರೆ ಟಪಾಲು ಖರ್ಚು ಸೇರಿ 1—8—0

ಪ್ರತಿ 12 ಸೀಸೆಗಳನ್ನು ಒಟ್ಟಿಗೆ ತರಿಸಿದರೆ ಟಪಾಲು ಖರ್ಚು ಸೇರಿ 3—13—0

ಪ್ರತಿ 25 ಸೀಸೆಗಳನ್ನು ಒಟ್ಟಿಗೆ ತರಿಸಿದರೆ ಟಪಾಲು ಖರ್ಚು ಸೇರಿ 6—3—0.

ರಿಜಿಸ್ಟರಾದ ಈ ವ್ಯಾಪಾರದ ಗುರುತು ಪ್ರತಿ ಸೀಸೆಯ ಮೇಲೂ ಇರುವುದನ್ನೇ ನೋಡಿ ತೆಗೆದುಕೊಳ್ಳಬೇಕಾಗಿದೆ.

[illegible] ಪ್ರತಿ ಸೀಸೆಯೊಡನೆಯೂ ಇರುವುದು. [illegible] ಉಚಿತ್ತಗೆ 4 ಆಣೆ ಮಾತ್ರ

ಲಕ್ಷ್ಮೀವಿಲಾಸ ರಸ. (ಪ್ರೇಗಿಗೆ)—ಲಕ್ಷಾಂತರ ಪ್ಲೇಗುರೋಗಿಗಳು ಈ ಲಕ್ಷ್ಮೀವಿಲಾಸ ರಸದಿಂದ ಆರೋಗ್ಯವನ್ನು ಪಡೆದಿರುತ್ತಾರೆ. ಒಂದೇ ಒಂದು ಲಕ್ಷ್ಮೀವಿಲಾಸ ರಸದ ಸೀಸೆಯು ನಿಮ್ಮಲ್ಲಿದ್ದರೆ ಪ್ಲೇಗಿಗೆ ಸರ್ವೋತ್ಕೃಷ್ಟವಾದ ಸಿದ್ಧೌಷಧಿಯು ಬೇರೊಂದಿಲ್ಲವೆಂದು ತಾವೇ ಹೇಳುವಿರಿ. ವಿಷಜ್ವರ [illegible] ಜ್ವರಗಳು, ಸನ್ನಿಪಾತ ಇವುಗಳು ಕೂಡಾ ಗುಣವಾಗುತ್ತವೆ. ಸೀಸೆಗೆ ರೂ 1 5ಕ್ಕೆ ಒಂದು ಇನಾಮು

ಶ್ರೀನಿವಾಸ ತೈಲ—ತಲೆಗಿನ ಗಡ್ಡೆ ಕರಗುತ್ತದೆ. ಸಂಧುಗಳ ನೋವು ನೀಗಲು ಹೋಗುತ್ತದೆ. ಸೀಸೆಗೆ 8 ಆಣೆ 5ಕ್ಕೆ ಒಂದು ಇನಾಮು

ದ್ರಾಕ್ಷಾ ರಸಾಯನ—ಸೇವಿಸಿದ ಮೊದಲನೇ ವೇಳೆಯಿಂದಲೇ ವಾಂತಿಭೇದಿ, ಶೀತಭೇದಿ, ಅಜೀರ್ಣದ ಭೇದಿಗಳು ಗುಣವಾಗುತ್ತಾ ಬರುತ್ತವೆ. ಸೀಸೆಗೆ ರೂ 1, 5ಕ್ಕೆ ಒಂದು ಇನಾಮು

ಬಾಲಸುಧೋದಯ—ಮಕ್ಕಳಿಗೆ ಬಲಕಾರಿ ಸಿಹಿಯಾಗಿರುತ್ತದೆ. ಮಂದ, ಮಲಬದ್ಧ, ಅಜೀರ್ಣದ ಭೇದಿ, ಕೈಕಾಲು ಹೊಟ್ಟೆ ದಪ್ಪವಾಗಿರುವುದು, [illegible] ಗುಣವಾಗಿ ಮಕ್ಕಳು ಪುಷ್ಟರಾಗುತ್ತಾರೆ. ವುಪ್ಪಿಯ ಬಾಟಲಿಗೆ ಸೀಸೆಗೆ ಆಣೆ 12 5ಕ್ಕೆ ಒಂದು ಇನಾಮು

ಈ ಸಾಮಾನುಗಳ ಟಪಾಲು ಖರ್ಚು ಬೇರೆ

ಸಮಸ್ತ ರೋಗಗಳಿಗೂ ನಮ್ಮಲ್ಲಿ ಆಯುರ್ವೇದೀಯ ಸಿದ್ಧೌಷಧಿಗಳು ದೊರೆಯುತ್ತವೆ. ಕ್ಯಾಟಲಾಗು ಉಚಿತ

ವಿಳಾಸ: ಶ್ರೀ ಸೀತಾರಾಘವ ವೈದ್ಯಶಾಲಾ ಮೈಸೂರು.

ಒಂದ್ಸು ಕುಪ್ಪಿಯ ಕ್ರಯ ೧೨ ಆಣೆ. ಮಂಗಳೂರು ಏಜಂಟ್ಸ್

ಕೇ. ಟೀ. ಡೋಂಗರೆ ಕಂಪೆನಿ. ದಿ ಅಲ್ಬನ್ ಮಾರ್ಟ್ [illegible] ಮಂಗಳೂರು.

ಗಿರಿಗಾಂ ಮುಂಬಯಿ.

[illegible]

[illegible]								
[illegible]							6 34	6. 0
21							6 35	6. 0
22							6 35	6. 0
23							6 36	6. 0
24							6 36	6. 0
25							6 37	6. 4
26							6 37	6. 1

ಮಂಗಳೂರಿನ ವಾಯುಸ್ಥಿತಿ.
(ಕಳೆದ ವಾರದ ನವಂಬರ)

Date ತಾರೀಖು	Temperature. ಉಷ್ಣ (ಶಾಖ) Maximum. ಹೆಚ್ಚೆಂದರೆ	Minimum. ಕಡಿಮೆ	Rainfall. ಮಳೆ ದಿವಸದ ಮಳೆ	ಏಪ್ರಿಲ್ ಗಳಿಂದ
12	90—2	76—6	—	..
13	90—8	75—7	0—66	...
14	92—3	75—4	—	...
15	91—2	75—8	—	
16	90—4	76—0	—	
17	93—6	74—9	0—03	—
18	91—2	71—8	0—93	—

ಮಂಗಳೂರಿನ ಪೇಟೆ ಧಾರಣೆ.

ಜಿನಸು		ಇಂದ ರೂ ಆ.	ವರೆಗೆ ರೂ ಆ.
ಮಸ್ಕತಿ ಅಕ್ಕಿಮುಡಿ ಗಳ್ಗೆ	...	7—13	8—4
ಗುದ್ದು ಸುಗ್ಗಿ	...	6—14	7—8
ರಾಶಿ ಮುಡಿ ಗಳ್ಗೆ	..	6—10	6—1
ಹೊಸ ರಾಶಿ ,,	..	6—0	6—1
ಅವ್ವಲ್ ಬೆಳ್ತಿಗೆ ,,	...	9—0	9—2
ಗುದ್ದು ಬೆಳ್ತಿಗೆ ,,	.	7—8	8—0
ರಂಗೂನ ಬೆಳ್ತಿಗೆ ಗೋಣಿ ಗಳ್ಗೆ	..	16—8	17—8
ಗೋಧಿ [illegible] ಗಳ್ಗೆ	...	19—0	22—
[illegible] ಗೋಣಿ ಗಳ್ಗೆ	.	14—8	15—4
ಕಡಲೆ ಗೋಣಿ ಗಳ್ಗೆ	...	15—8	16—0
[illegible] ಗೋಣಿ ಗಳ್ಗೆ	..	19—8	20—0
[illegible] ಗೋಣಿ ಗಳ್ಗೆ	..	24—0	28—0
ಉದ್ದು ಗೋಣಿ ಗಳ್ಗೆ	..	16—8	18—0
ಹೆಸರು ಗೋಣಿ ಗಳ್ಗೆ	...	16—0	18—8
[illegible]	...	90—0	
ಉಪ್ಪು ಗೋಣಿ ಗಳ್ಗೆ	...	4—6	5—0
[illegible] ಗಳ್ಗೆ	...	150—0	160—0
[illegible] ಗಳ್ಗೆ	...	48—0	50—0
ಎಳ್ಳೆಣ್ಣೆ ಖಂಡಿ ಗಳ್ಗೆ	...	52—2	
[illegible] ಗಳ್ಗೆ	.	11—4	11—6
[illegible] ಗಳ್ಗೆ	...	11—0	11—8
[illegible]	..	9—6	9—9
[illegible] ಗಳ್ಗೆ	..	9—14	10—4
[illegible] ಗಳ್ಗೆ	...	8—0	8—8
[illegible] ಗಳ್ಗೆ	...	10—0	10—0
[illegible] ಗಳ್ಗೆ	...	5—8	
[illegible] ಖಂಡಿ ಗಳ್ಗೆ	...	220—0	230—0
[illegible]	...	100—0	115—0
[illegible]	...	95—0	100—0
[illegible] ಗಳ್ಗೆ	...	135—0	140—0
[illegible] ಗಳ್ಗೆ	...	22—0	25—0
[illegible] ಗಳ್ಗೆ	...	3—8	3—12
[illegible] ಗಳ್ಗೆ	...	100—0	120—0
[illegible] ಗಳ್ಗೆ	...	22—0	23—4
[illegible] ಗಳ್ಗೆ	...	32—0	34—0
[illegible] ಗಳ್ಗೆ	...	31—8	
[illegible] ಗಳ್ಗೆ	...	24—0	25—0

ಓಲ್ ಇಂಡಿಯಾ ಸಾರಸ್ವತ ಬ್ರಾಹ್ಮಣ ಸಭಾ.

ಇದು ೧೯೧೧ನೆ ಇಸವಿಯ ಸೆಪ್ಟೆಂಬರ್ ತಿಂಗಳಲ್ಲಿ ಮುಂಬಯಿ ಪಟ್ಟಣದಲ್ಲಿ ಜನ್ಮವೆತ್ತಿತು. ಸಾರಸ್ವತ ಬ್ರಾಹ್ಮಣರ ಬೇರೆ ಬೇರೆ ಪೋಟಭೇದಗಳೊಳಗೆ ಪರಿಚಯ, ಮೈತ್ರಿಯನ್ನು ಸಂಪಾದಿಸಿ, ಅವರವರ ಸ್ಥಿತಿಗತಿಯನ್ನು ಪರ್ಯಾಲೋಚಿಸಿ, ಇಡೀ ಹಿಂದುಸ್ಥಾನದಲ್ಲಿಯೂ ಹರಡಿಕೊಂಡಿರುವ ಈ ಜಾತಿಯ ಪೋಟಭೇದಗಳ ಸಾಮಾಜಿಕ ಮತ್ತು ಸಾಂಪತ್ತಿಕ ಅಭಿವೃದ್ಧಿಯನ್ನುಂಟು ಮಾಡುವುದೇ ಈ ಸಭೆಯ ಉದ್ದೇಶ. ಇದು ಕೈಗೂಡುವುದಕ್ಕೆ ಸಾಧ್ಯವಾಗುವಂತೆ ಒಂದು ದೊಡ್ಡ ಸೆಂಟ್ರಲ್ ಲೈಬ್ರರಿಯನ್ನು ಮುಂಬಯಿಯಲ್ಲಿ ಏರ್ಪಡಿಸಿ, ಅದರಲ್ಲಿ ಈ ಬೇರೆ ಬೇರೆ ಪೋಟಭೇದಗಳ ಗ್ರಂಥಗಳನ್ನು ಸಂಗ್ರಹಿಸುವುದು, ಈ ಪೋಟಭೇದಗಳ ಇಳ್ಳಿಗೆ ಅಸ್ತಿತ್ವದಲ್ಲಿರುವ ಗ್ರಂಥಗಳನ್ನು ನಿರ್ಣಯಿಸುವ ವಿಷಯ ಚರ್ಚೆ, ಭಾಷಣಗಳನ್ನು ಮಾಡಿಸುವುದು, ಆಗಾಗ ಫಾಸಸುಪಾರಿ ಪಾರ್ಟಿಗಳನ್ನು ಜರಗಿಸಿ ಪರಸ್ಪರ ಮೈತ್ರಿಯನ್ನು ಬೆಳೆಸುವುದು, ಸಭೆಯ ಮುಖ್ಯೋದ್ದೇಶಗಳನ್ನು ಸಫಲಗೊಳಿಸುವಂತೆ ಅಲ್ಲಲ್ಲಿ ಸಭೆಗಳನ್ನು ಜರಗಿಸುವುದು, ಹಿಂದುಸ್ಥಾನದಲ್ಲೆಲ್ಲ ಹರಡಿರುವ ಸಾರಸ್ವತ ಪೋಟಭೇದಗಳಲ್ಲಿ ಕಂಡುಬರುವ ವಿಶ್ಲೇಷ ಚಟುವಟಿಕೆಗಳನ್ನು ಪ್ರಕಟಗೊಳಿಸುವ ಬಗ್ಗೆ ಒಂದು ಮಾಸಿಕ ಅಥವಾ ತ್ರೈಮಾಸಿಕ ಪತ್ರಿಕೆಯನ್ನು ಸ್ಥಾಪಿಸುವುದು, ಈ ಸಭೆಯ ಶಾಖೆಗಳನ್ನು ಅಲ್ಲಲ್ಲಿ ತೆರೆಯುವುದು ಈ ಮೊದಲಾದ ಚಟುವಟಿಕೆಗಳಿಂದ ಸಭೆಯ ಉದ್ದೇಶವನ್ನು ನೆರವೇರಿಸಬೇಕೆಂದು ಈ ಸಭೆಯ ಸಂಕಲ್ಪವಿದೆ. ಈ ಸಂಸ್ಥೆಯನ್ನು ಏರ್ಪಡಿಸುವಾಗ ಆಯಾ ಪೋಟಭೇದಗಳಲ್ಲಿ ಈ ಮೊದಲೇ ತನ್ನ ಯಶಸ್ಸನ್ನು ವರ್ಧಿಸುವುದಕ್ಕೆ ಏರ್ಪಡಿಸಿದ ಸಂಸ್ಥೆಗಳಲ್ಲಿ ಯಾವುದೊಂದನ್ನು ಮುರಿಯಬೇಕೆಂದಾಗಲಿ ಈ ಸಭೆಯ ಆಸೆಯಲ್ಲ. ಪ್ರತಿ ಪೋಟಭೇದದವರು ತಂತಮ್ಮ ಏಳ್ಗೆಯನ್ನು ಬಯಸುವಾಗ ಅದರೊಂದಿಗೆ ಇತರ ಪೋಟಭೇದಗಳ ಚಿಂತನೆಗೂ ಸ್ವಲ್ಪ ಕಾಲವನ್ನು ವ್ಯಯಮಾಡಿದರೆ ಅದು ದುರ್ವ್ಯಯವಲ್ಲ ಎಂದು ಈ ಸಭೆಯವರು ತಿಳಿಯುತ್ತಾರೆ. ಪರಸ್ಪರ ಮೈತ್ರಿಯನ್ನು ಸಂಪಾದಿಸುವುದೇ ಮುಖ್ಯ ಹೇತುವಲ್ಲದೆ ಈ ಪೋಟಭೇದಗಳನ್ನು ಮುರಿದು ಎಲ್ಲರೂ ಒಂದಾಗಬೇಕೆಂಬ ದುರ್ಘಟ ಕಾರ್ಯವನ್ನು ಈ ಸಭೆಯು ಕೈಕೊಂಡಿಲ್ಲ.

ಈಗ ಇದರದೊಂದು ತ್ರೈಮಾಸಿಕ ಪತ್ರಿಕೆಯು ಈ ಚಟುವಟಿಕೆಗಳನ್ನು ಇಂಗ್ಲೀಷು ಮತ್ತು ಮರಾಠಿಯಲ್ಲಿ ಪ್ರಕಟಿಸುತ್ತದೆ. ಅದರ ವಾರ್ಷಿಕ ಚಂದಾ ೧ ರೂ ೮ ಆ ಮಾತ್ರ. ಸಭೆಯ ಮೆಂಬರರಿಗೆ ಮಫತ್ತಾಗಿಯೆ ದೊರೆಯುತ್ತದೆ.

ಈ ಸಭೆಯವರು ಈಸ್ಟ್ ಆಫ್ರಿಕದಿಂದ ಬಂದ ಮಿ ಜಾಧವಜೀ ಜೀವನಜೀ ಇವರು ಕೊಟ್ಟ ವಂತಿಗೆ ರೂ ೩೨೦೦ರ ಉಪಯೋಗ ಈಗ ಒಂದು ಎಜ್ಯುಕೇಶನ್ ಫಂಡನ್ನು ಏರ್ಪಡಿಸಿದ್ದಾರೆ. ಈಗ ಈಸ್ಟ್ ಆಫ್ರಿಕದಿಂದಲೂ ಮೇಲೆ ಬರೆದ ಸದ್ಗೃಹಸ್ಥರು ಇನ್ನೂ ಧನಸಹಾಯ ಕಳುಹಿಸುತ್ತೇವಾಗಿ ವಾಗ್ದತ್ತ ಮಾಡಿರುವರು.

ವ್ಯತಪಟ್ಟವರ ನಿರಾಶ್ರಿತ ಕುಟುಂಬಗಳಿಗೆ ತಾತ್ಕಾಲಿಕ ದ್ರವ್ಯಸಹಾಯ, ಪ್ರಮುಖ ಕ್ಷೇತ್ರಗಳಲ್ಲಿ ಸಾರಸ್ವತ ಪೋಟಭೇದಗಳವರಿಗೆ ಹೆಚ್ಚಾಗಿ ತಂಗುವ ಗೃಹಗಳು, ಅಲ್ಲಲ್ಲಿ ಸಹಕಾರ ಸಂಘಗಳು ಇವನ್ನು ಸ್ಥಾಪಿಸುವ ಪ್ರಯತ್ನಗಳು ನಡೆಯುತ್ತಲೇ ಇವೆ.

ಈ ಸಂಘಕ್ಕೆ ೧೮ ವರ್ಷ ಪ್ರಾಯದ ಸಾರಸ್ವತರು ಯಾರೂ ಮೆಂಬರರಾಗಬಹುದು. ೫೦೦ ರೂಪಾಯಿಗೆ ಮೇಲ್ಪಟ್ಟು ಒಮ್ಮೆಯೇ ವಂತಿಗೆ ಕೊಟ್ಟವರು ಪೋಷಕರೆಂತಲೂ, ೧೦೦ ರೂಪಾಯಿಗೆ ಮೇಲ್ಪಟ್ಟು ಒಂದೇ ಗಂಟಿನಿಂದ ಕೊಟ್ಟವರು ಆಜೀವ ಸದಸ್ಯರುಗಳೆಂದೂ, ಮುಂಬಯಿ ಮತ್ತು ಸಕ್ಕರದ್ದಿನ್ನವರು ವರ್ಷಕ್ಕೆ ೩ ರೂಪಾಯಿ ಕೆತ್ತು ಸಾಮಾನ್ಯ ಸದಸ್ಯರೆಂತಲೂ, ಬೇರೆ ಊರುಗಳ ನಿವಾಸಿಗಳು ವರ್ಷಕ್ಕೆ ೨ ರೂಪಾಯಿ ಕೆತ್ತು ಮೆಂಬರರೆಂತಲೂ ಕ್ರಮಗೊಳಿಸಿ, ಪ್ರವೇಶ ಶುಲ್ಕ ೧ ರೂಪಾಯಿ ಬೇರೆ.

ಮೆಂಬರರು ತಮ್ಮ ಪೋಟಭೇದಗಳಲ್ಲಿರುವ ಗೋತ್ರ, ಪ್ರವರ, ವೇತನಗಳು, ದೇವಸ್ಥಾನಗಳು, ಗುರುಮಠಗಳು, ಪ್ರಮುಖಗೃಹಸ್ಥರು, ಅವರ ಚಟುವಟಿಕೆಗಳು, ವೃತ್ತಿಗಳು, ಪ್ರಚಾರದಲ್ಲಿರುವ ಶೃಂಗಾರಿಕ ಮುಂತಾದ್ದನ್ನು ಕುರಿತು ಲೇಖನಗಳನ್ನು ಬರೆದು ಕಳುಹಿಸಿದ್ದಲ್ಲಿ ಈ ತ್ರೈಮಾಸಿಕ ಪತ್ರಿಕೆಯಲ್ಲಿ ಅಚ್ಚಾಗುವುವು. ಈ ಸಂಸ್ಥೆಯನ್ನು ಬೇರೆ ಬೇರೆ ಪೋಟಭೇದಗಳವರು ಪ್ರೋತ್ಸಾಹಿಸುವರೆಂದು ನಮ್ಮ ಹಾರೈಕೆ.

ವಿದೇಶ ವರ್ತಮಾನ.

ಬೊಲಶೆವಿಕರು—ಕ್ರಿಮಿಯಾ ಪರ್ಯಾಯ ದ್ವೀಪದಲ್ಲಿ ಬೋಲ್ಶೆವಿಕರು ಜನರಲ್ ರೆಂಗಲನನ್ನು ಹಿಂಬಟ್ಟಿ ಸಿವೆಸ್ಟೋಪೋಲ ಎಂಬ ಪಟ್ಟಣವನ್ನು ಹಿಡಿದು ರೆಂಗಲನ ಸೇರಳ ಕೋಟಿ ಮದ್ದನ್ನು ಹಿಡಿದುಬಿಟ್ಟರೆಂತಲೂ ರೆಂಗಲನು ತನ್ನ ಮುರಿದ ಸೈನ್ಯದ ದಳವಾಯಿತನವನ್ನು ಇಂಗ್ಲೆಂಡಿನಲ್ಲಿರುವ ಜನರಲ್ ... ತಂದನಿಗೆ ಒಪ್ಪಿಸಿಕೊಡುವುದಾಗಿ ತಂತಿ ಮೂಲಕ ತಿಳಿಸಿರುವನಾಗಿಯೂ ವರ್ತಮಾನಗಳಿವೆ. ಇದಲ್ಲದೆ ಆರ್ಮೇನಿಯರು ಮಿತ್ರಪಕ್ಷದ ಸಹಾಯವನ್ನು ಹಾರೈಸಿಕೊಂಡಿದ್ದು ಅದು ಸಿಗಲಿಕ್ಕೆ ಎಡೆ ಇಲ್ಲದೆ ಕಡೆಗೆ ಬೋಲಶೆವಿಕರಿಗೆ ಮತ್ತು ತುರ್ಕಿಯ ನೆಶನಲಿಸ್ಟ ತಂಡದವರಿಗೆ ದೈನ್ಯಭಾವದಿಂದ ಮಣಿದರು. ಯುದ್ಧವನ್ನು ಮುಗ್ತಾಮ ಮಾಡಿ ಅಪ್ಪಾಚ ನದಿಯ ದಡದ ವರೆಗೆ ತಮ್ಮ ಸೈನ್ಯವು ಹಿಂದೆ ಸರಿಯಬೇಕೆಂದೂ ಬೋಲಶೆವಿಕರಿಗೂ ಈ ನೆಶನಲಿಸ್ಟರಿಗೂ ಪರಸ್ಪರ ಸಮಾಗಮವಾಗುವಂತೆ ತಮ್ಮ ರಾಜ್ಯದ ಒಂದು ಬದಿಯಿಂದ ದಾರಿ ಬಿಟ್ಟು ಕೊಡಬೇಕೆಂದೂ ಅಲೆಕ್ಸಾಂಡ್ರೊಪೊಲಿಸ್ ಪಟ್ಟಣವನ್ನು ಸಂಧಿ ಪತ್ರಕ್ಕೆ ಇತ್ತಟ್ಟಿನ ಸಹಿಯಾಗುವ ವರೆಗೆ ತುರುಕರ ವಶಕ್ಕೆ ಒಪ್ಪಿಸಿಕೊಡಬೇಕೆಂದೂ ಶರ್ತಗಳನ್ನು ಆರ್ಮೇನಿಯರು ಒಪ್ಪಿಕೊಂಡರು. ತುರ್ಕ-ನೆಶನಲಿಸ್ಟರಿಗೆ ಒಪ್ಪಿಸಿಕೊಟ್ಟ ಸ್ಥಳದಲ್ಲಿ ನೆಮ್ಮದಿ ಕೆಡದ ಹಾಗೆ ತುರ್ಕರು ನೋಡಿಕೊಳ್ಳಬೇಕೆಂದೂ ಇತ್ಯರ್ಥವಾಗಿದೆ.

ತುರ್ಕಿ—ಗ್ರೀಸ್ ದೇಶದ ರಾಜರು ಮಡಿದ ನಂತರ ಪಟ್ಟಕ್ಕೆ ಹೊಸ ಅರಸನನ್ನು ಆರಿಸುವ ಕೆಲಸವು ಇನ್ನೂ ಸಾಗದೆ. ಒಂದು ಪಕ್ಷವು ಪದಚ್ಯುತರಾದ ಕೊನಸ್ಟಂಟಾಯ್ನನ ಕುಟುಂಬದವರನ್ನೆ ಅರಸನಾಗಿ ಮಾಡಬೇಕೆಂದೂ ಇನ್ನೊಂದು ಪಕ್ಷವು ಬೆಲ್ಜಿಯಮ್ಮಿನ ರಾಜರ ಎರಡನೆ ಮಗನನ್ನು ಪಟ್ಟಕ್ಕೇರಿಸಬೇಕೆಂದೂ ವಾದಗಳು ನಡೆಯುತ್ತಿರುವುದನ್ನು ಕಂಡು ಈ ಅಂತಃಕಲಹಗಳ ಸಮಯದಲ್ಲಿ ತನ್ನ ಕಾರ್ಯ ಸಾಧಿಸಬೇಕೆಂಬ ಇಚ್ಛೆಯಿಂದ ತುರ್ಕಿ ನೆಶನಲಿಸ್ಟರ ಮುಖಂಡನಾದ ಕೆಮಾಲ್ ಪಾಶಾ ಇವರು ತನ್ನ ಸೈನ್ಯವನ್ನು ಎನಟೋಲಿಯದಲ್ಲಿ ಮುಂದೊತ್ತಿದರು. ಗ್ರೀಕ್ ಸೈನ್ಯವು ಕೆಲವು ಊರುಗಳನ್ನು ಬಿಟ್ಟು ಕೊಟ್ಟು ಹಿಂದೆ ಸರಿಯಿತು. ಮಿತ್ರಪಕ್ಷದವರೊಡನೆ ಇನ್ನೂ ಸಹಿ ಕೊಡದ ತುರ್ಕಿಯ ಈಗಿನ ಸರಕಾರವು ಒಂದೊಂದು ನೆವವನ್ನು ಹುಡುಕಿ ಕಾಲಯಾಪನೆ ಮಾಡುತ್ತಿದೆ.

ಐರ್ಲೆಂಡ್—ಇಲ್ಲಿಯ ಚಳವಳವು ಇನ್ನೂ ರವಷ್ಟಾದರೂ ಶಾಂತವಾಗಲಿಲ್ಲ. ಕೈದಿಗಳನ್ನು ಬ್ರಿಟಿಷ ಅಧಿಕಾರಿಗಳು, ತಮ್ಮ ... ವ್ಯಾಪಾರ ಮತ್ತು ಹಣ ಚಲಾವಣೆಯನ್ನು ತಡೆಯುವುದಕ್ಕೆ ಅಧಿಕಾರ ಹೊಂದಿದ್ದಾರೆ.

ಇಟಲಿ—ಯುಗೋಸ್ಲೇವ ಜನಾಂಗದವರಿಗೂ ಇಟಲಿಗೂ ಫ್ಯೂಮ ಪಟ್ಟಣದ ವಿಷಯದಲ್ಲಿ ಇದ್ದ ಚರ್ಚೆಯು ನಿಂತು ಹೋಗಿ ಅವರೊಳಗೆ ರಾಜಿಯಾಯಿತು.

ಲೀಗ್ ಒಫ್ ನೇಶನ್ಸ್—ಇದೇ ೧೫ನೆ ತಾರೀಕಿಗೆ ಜಿನಿವಾ ಪಟ್ಟಣದಲ್ಲಿ ಜರಗಲಿಕ್ಕಿರುವ ಈ ಅಂತರರಾಷ್ಟ್ರೀಯ ಪರಿಷತ್ತಿನ ಅಧಿವೇಶನಕ್ಕೆ ಹಿಂದುಸ್ಥಾನದ ಪರವಾಗಿ ನವನಗರದ ಮಹಾ ರಾಜರು, ಸರ್ ವಿಲ್ಲಿಯಮ್ ಮೆಯರ್, ಮತ್ತು ಹೈದರಾಬಾದದ ಈಗಿನ ಮಂತ್ರಿವರ್ಯರಾದ ಸರ್ ಅಲಿ ಇಮಾಮರು ಹೋಗಿರುವರು. ಈ ಸಲ ಜರ್ಮನರನ್ನೂ ಒಸ್ಟ್ರಿಯರನ್ನೂ ಈ ಕೂಟದೊಳಗೆ ಸೇರಿಸಿಕೊಳ್ಳಬೇಕೆಂದು ಆ ರಾಜ್ಯಗಳ ಪರವಾಗಿ ಮನವಿ ಇದೆ.

ಪರದೇಶ ವರ್ತಮಾನ.

ಹಿಂದೂ ಯೂನಿವರ್ಸಿಟಿ ಬನಾರಸ್—ಇಲ್ಲಿಯ ವಿದ್ಯಾರ್ಥಿಗಳೂ ನೊನಕೊ-ಒಪರೇಷನ್ ವ್ರತವನ್ನು ಹಿಡಿದು, ಯೂನಿವರ್ಸಿಟಿ ಅಧಿಕಾರಿಗಳು ಸರಕಾರಿ ದ್ರವ್ಯಸಹಾಯವನ್ನು ಪಡೆಯಬಾರದು, ಇಲ್ಲವಾದರೆ ತಾವು ಕಾಲೇಜುಗಳನ್ನು ಬಿಟ್ಟುಹೋಗುತ್ತೇವೆಂದು ಅದರ ಅಧಿಕಾರಿಗಳಿಗೆ ತಿಳಿಸುತ್ತದರಲ್ಲಿದ್ದಾರೆ. ಸ್ವಾಮಿ ಸತ್ಯದೇವ ಎಂಬವರು ಅಮೇರಿಕದಿಂದ ಈಚೆಗೆ ಬನಾರಸಕ್ಕೆ ಬಂದಿದ್ದು ಈ ಅಸಹಕಾರಿತೆಯ ತತ್ವವನ್ನು ಬೋಧಿಸುತಿದ್ದಾರೆ. ಮೌಲಾನಾ ಮಹಮ್ಮದ ಅಲ್ಲಿ ಮತ್ತು ಮಹಾತ್ಮಾ ಗಾಂಧಿಜಿಯವರು ಇದನ್ನು ಪ್ರೋತ್ಸಾಹಿಸಿ ಮಿ ಮಹಮ್ಮದ ಅಲ್ಲಿಯವರು ಸ್ವತಃ ಆ ಸ್ಥಳಕ್ಕೆ ಬಂದಿರುವರು.

ಮುಂಬಯಿಯ ಮುಷ್ಕರಗಳು—ಟಪ್ಪಾಲು ಇಲಾಖೆಯವರ ಮುಷ್ಕರ ಮತ್ತು ಟ್ರಾಮವೇಯವರ ಮುಷ್ಕರವು ಇನ್ನೂ ನಿಲ್ಲಲಿಲ್ಲ. ಮುಂಬಯಿಯಲ್ಲಿ ಟ್ರೇಡ್ ಯೂನಿಯನ್ ಕೊಂಗ್ರೆಸ (ಮಜೂರ ಮತ್ತು ನವುಕರರ ಪರಿಷತ್ತು) ಅಧಿವೇಶನದಲ್ಲಿ ನಿರ್ಣಯವಾದ ಮೇರೆಗೆ ಮಿ ಬಾಪ್ಟಿಸ್ಟಾ, ಪವಾರ, ದಳ್ವಿ, ಜಿನ್ನಾಲಾ ಇವರು ಮುಂಬಯಿಯ ಗವರ್ನರ್ ಸಾಹೇಬರ ವರದಿ ಮುಖಿತ ಮನವಿ ಮಾಡಿದ್ದಕ್ಕೆ ಸಮರ್ಪಕವಾದ ಉತ್ತರವು ದೊರೆಯದ್ದರಿಂದ ನಿರಾಸೆಯಾಗಿ ಮಿ ಬಾಪ್ಟಿಸ್ಟರು ಹಣಸಂಗ್ರಹಮಾಡಿ ಈ ಮಜೂರ ಜನರಿಗೆ ಕೆಲವು ಸಮಯದವರೆಗೆ ಉದರಭರಣದ ಸೌಕರ್ಯಗಳನ್ನು ಒದಗಿಸಿಕೊಡಲು ಯತ್ನಿಸುತಿದ್ದಾರೆ. ಟಪ್ಪಾಲು ಇಲಾಖೆಯವರಿಗೆ ಸರಕಾರದವರು ಇನ್ನೂ ಸಲಹೆಗಳನ್ನು ಕೊಡದೆ ಇದ್ದ ಕಾರಣ ಸರಕಾರಿ ಟಪ್ಪಾಲು ಆಫೀಸುಗಳನ್ನು ಬಹಿಷ್ಕಾರವಿಟ್ಟು ಖಾಸಗಿಯಿಂದ ಟಪ್ಪಾಲು ಬಟವಾಡೆ ಮಾಡಲು ಅಹಮ್ಮದಾಬಾದು ಪೂನೆ ಮುಂಬಯಿ ಇ ದೊಡ್ಡ ನಗರಗಳಲ್ಲಿ ತಕ್ಕ ಏರ್ಪಾಡನ್ನು ಮಾಡುವುದಾಗಿ ಮಿ ಬಾಪ್ಟಿಸ್ಟರು ಪ್ರಕಟಿಸಿರುವರು.

ಕಲ್ಕತ್ತೆಯಲ್ಲಿ ಮುಷ್ಕರ—ಪೋರ್ಟ ಕಮ್ಮಿಶನರರ ವರ್ಕ ಶೊಪುಗಳಲ್ಲಿ ೩೪೦೦ ಮಂದಿ ಸಂಬಳದ ದರಗಳನ್ನು ಹೆಚ್ಚಿಸಬೇಕೆಂದು ಮುಷ್ಕರ ಹಿಡಿದಿರುವರು. ಬಂಡಿಯಾಳುಗಳೂ ತಮಗೆ ಸಂಬಳದ ದರಗಳನ್ನು ಹೆಚ್ಚಿಸದಿದ್ದರೆ ಮುಷ್ಕರ ಹಿಡಿಯುವುದಾಗಿ ತಿಳಿಸಿರುವರು. ಬ್ರಿಟಿಷ ಇಂಡಿಯಾ ಸ್ಟೀಮ ನೆವಿಗೇಶನ ಕಂಪೆನಿಯ ಮಜೂರರು ಕೆಲಸಕ್ಕೆ ಪುನಃ ದಾಖಲಾದರು.

ಡ್ಯೂಕ್ ಒಫ್ ಕೊನ್ನೋಟರು—ಶ್ರೀಮಂತ ಡ್ಯೂಕ ಒಫ್ ಕೊನ್ನೊಟರು ಬಾದಶಹರ ಪ್ರತಿನಿಧಿಯಾಗಿ ಮದರಾಸಿಗೆ ೧೯೨೧ ಜನವರಿ ೧೦ನೆ ತಾರೀಕಿಗೆ ಬಂದು ೧೫ನೆ ತಾರೀಕು ವರೆಗೆ ಇದ್ದು, ನಾಗಪುರದಲ್ಲಿ ೧೮ನೆ ತಾರೀಕನ್ನು ಕಳೆದು, ೧೯ರಿಂದ ೨೭ರ ವರೆಗೆ ಸೆಂಟ್ರಲ್ ಪ್ರೊವಿನ್ಸ್‌ಗಳಲ್ಲಿಯೂ ೨೮ನೆ ತಾರೀಕಿನಿಂದ ಫೆಬ್ರವರಿ ೩ರ ವರೆಗೆ ಕಲ್ಕತ್ತೆಯಲ್ಲಿಯೂ, ಆಗ್ರಾದಲ್ಲಿ ೪ರಿಂದ ೫ರ ವರೆಗೂ ಡಿಲ್ಲಿಯಲ್ಲಿ ೫ರಿಂದ ೬ರ ವರೆಗೂ, ಅಲ್ಲಿಂದ ಮುಂಬಯಿಯಲ್ಲಿ ೨೦ರಿಂದ ೩೦ರ ವರೆಗೂ ಪ್ರಯಾಣಮಾಡಲಿಕ್ಕಿರುವರು.

ಮದ್ರಾಸು ಪೋಲಿಸ್ ಯೂನಿಯನ್—ಇವರು ಇನ್ಸ್‌ಪೆಕ್ಟರ ಜನರಲರಿಗೆ ತಮ್ಮ ಬಡ್ತಿಯ ವಿಷಯದಲ್ಲಿ ಮನವಿಮಾಡಿದ್ದಕ್ಕೆ ಪೋಲಿಸಿನವರ ಸಂಬಳದ ದರಗಳನ್ನು ಏರಿಸುವ ವಿಚಾರವು ಸರಕಾರದ ವಿಚಾರದಲ್ಲಿ ಬಾಕಿ ಉಂಟು ಎಂತಲೂ ೩೫ ರೂಪಾಯಿಯ ಗುಮಾಸ್ತೆಯರಿಗೆ ಸಿಗುವಷ್ಟೆ ಸಂಬಳವನ್ನು ಹೆಡ್‌ಕೊನಿಸ್ಟೇಬಲರಿಗೆ ಕೊಡಬೇಕೆಂದು ಕೇಳುವುದು ನ್ಯಾಯವಲ್ಲವೆಂತಲೂ ಪೋಲಿಸ್ ಲೈನುಗಳಲ್ಲಿ ಪೋಲಿಸಿನವರಿಗೆ ಉಳುಕೊಳ್ಳುವ ಸ್ಥಳವು ಬಹಳ ಇಕ್ಕಟ್ಟಾಗಿದೆ ಎಂದು ತಾನು ಒಪ್ಪಿದರೂ ಅಲ್ಲ ನಿಲ್ಲಲು ಎಡೆ ಇಲ್ಲ. ಇವರವರಿಗೆ ಕೊಡುವ ಬಾಡಿಗೆಯ ದರಗಳನ್ನು ಏರಿಸಬೇಕೆಂದು ತಿಳಿಸುತ್ತೇನೆಂತಲೂ ಮುಂತಾಗಿ ಇನ್ಸ್‌ಪೆಕ್ಟರ ಜನರಲರವರು ತಿಳಿಸಿದರು.

ಸಹಕಾರಿ ಸಂಘಗಳಲ್ಲಿ ಉಬರಾವತಿ ಸಾಲ—ಇಂಥ ಸಾಲ ಅಥವಾ ಠೇವಣಾತಿಗಳ ಬಡ್ಡಿಯನ್ನು ಸೇಕಡಾ ೫೩ಯಿಂದ ಸೇಕಡಾ ೩ಕ್ಕೆ ಏರಿಸಬಹುದಾಗಿ ಮದ್ರಾಸು ಸಹಕಾರಿ ಇಲಾಖೆಯ ರಿಜಿಸ್ಟ್ರಾರರ ಸೂಚನೆಯನ್ನು ಸರಕಾರದವರು ಮಂಜೂರು ಮಾಡಿರುವರು.

ಟಾಟಾ ಕಂಪೆನಿ—ಮುಂಬಾಯಿಯ ಹಸರುವಾಸಿಯಾದ ಟಾಟಾ ಎಂಡ್ ಸನ್ಸ್ ಕಂಪೆನಿಯವರಿಗೆ ನೀಲಗಿರಿ ಜಿಲ್ಲೆಯಲ್ಲಿ ಕರ್ನಾಟಕದ ಮತ್ತು ಅದರ ಶಾಖೆಗಳ ನೀರಿನ ಪ್ರವಾಹದಿಂದ ವಿದ್ಯುತ್‌ಶಕ್ತಿಯನ್ನು ಹೊರಡಿಸಿ ಅದನ್ನು ಊಟಕಮಂಡು, ಕೂನೂರು, ಕೊಯಮುತ್ತೂರು ಮತ್ತು ವೆಲ್ಲಿಂಗ್‌ಟನ್ನಿನ ಕೆಂಟೋನಮೆಂಟು ಇಷ್ಟು ಸ್ಥಳಗಳಿಗೆ ವಿದ್ಯುತ್ ಶಕ್ತಿಯ ಪುರವಠೆಯನ್ನು ಮಾಡುವ ಹಕ್ಕನ್ನು ಮದ್ರಾಸು ಸರಕಾರದವರು ಕೊಟ್ಟಿರುವರು. ಇನ್ನೂ ೩೫ ವರ್ಷದೊಳಗೆ ಇವರ ಪ್ರತಿಫಲವಾಗಿ ಕೊಯಮುತ್ತೂರಿನ ವೊಟರ್ ವರ್ಕ್ಸ್ (ಶುದ್ಧನೀರಿನ ಪುರವಠೆ) ಬಗ್ಗೆ ೬ ಲಕ್ಷ ರೂಪಾಯಿ ಕೊಡಲು ಸದರಿ ಕಂಪೆನಿಯವರು ಸಮ್ಮತಿಸಿರುವರು.

ಮೈಸೂರಿನ ಜನತಸ್ ಕ್ಲಬ್—ಶುಕ್ಲ ಪಕ್ಷಗಳ ಉದಾರಚರಿತ್ರೆಯು ವಾತೆರು ಇಲ್ಲದಿರುವುದರಿಂದ ಬಡವಿದ್ಯಾರ್ಥಿಗಳಿಗೆ ಕೊಡುವ ವೇತನಗಳ ಫಿರ್ತ್ಯಾದನ್ನು ನಿಲ್ಲಿಸಿ ಅರ್ಜಿದಾರರ ಫೀಸ ಹಣವನ್ನು ಅವರಿಗೆ ಬೇಗನೆ ವಾಪಸಮಾಡಲಾಗುವುದು ಎಂದು ಈ ಕ್ಲಬ್ಬಿನ ಸೆಕ್ರೆಟರಿಗಳು ಪ್ರಕಟಿಸಿದ್ದಾರೆ.

ದಕ್ಷಿಣ ಕನ್ನಡ.

ವಿಟ್ಲ:—ದಕ್ಷಿಣ ಕನ್ನಡಾ ಭಾಗಾಯ್ತು ಕೃಷಿಕರ ಸಹಕಾರಿ ಸಂಘದ ವಾರ್ಷಿಕ ಮಹಾ ಸಭೆಯು ಇದೇ ಕಳೆದ ತಾ ೩೧-೧೦-೧೯೨೦ರಲ್ಲು, ವಿಟ್ಲ ಶ್ರೀ ಪಂಚಲಿಂಗೇಶ್ವರ ದೇವಸ್ಥಾನದಲ್ಲಿ ಕೂಡಿತ್ತು. ವಿಟ್ಲ ಅರಮನೆ ಮಿ॥ ರಾ॥ ರಾ॥ ರವಿವರ್ಮ ನರಸಿಂಹ ರಾಜರವರೂ, ಮಿ॥ ರಾ॥ ರಾ॥ ಪುತ್ತೂರು ವಕೀಲ ಸೊರಹೊಳ್ಳ ಶಿವರಾಯರವರೂ, ಮಿ॥ ರಾ॥ ರಾ॥ ಪುತ್ತೂರು-ವಕೀಲ್ ಸಹಕಾರಿ ಸಂಘದ ಆನರರಿ ಅಸಿಸ್ಟೆಂಟ್ ರಿಜಿಸ್ಟ್ರಾರರೂ, ವೇಣುಗೋಪಾಲ ರಾಯರೂ, ಮಿ॥ ರಾ॥ ರಾ॥ ವಿಟ್ಲ ಲಕ್ಷ್ಮೀನಾಥ ಸ್ವಾಮಿಜೀಯವರೂ, ಹಲವು ಮಂದಿ ಮೆಂಬರರು ಹಾಜರಿದ್ದರು. ಸಭೆಗೆ ಮಿ॥ ರಾ॥ ರಾ॥ ರವಿವರ್ಮ ನರಸಿಂಹ ರಾಜರವರನ್ನು ಸಭಾಧ್ಯಕ್ಷರಾಗಿ ಆರಿಸಿದ ಬಳಿಕ, ಗತವರ್ಷದ ಲೆಖ್ಖಪತ್ರಗಳನ್ನು ಮಿ॥ ರಾ॥ ರಾ॥ ರಿಜಿಸ್ಟ್ರಾರವರಿಂದ ಬಂದ ಓಡಿಟ್ ರಿಪೋರ್ಟನ್ನು ಮಿ॥ ರಾ॥ ರಾ॥ ವಕೀಲ್ ಶಿವರಾಯರು ಸಭೆ ಮುಂದೆ ಓದಿ ಹೇಳಿದರು. ಗತವರ್ಷದಲ್ಲಿ ಸಂಘದಲ್ಲಿ ಉಳಿದ ಅಡಿಕೆ ಮೆಣಸುಗಳು ಬಂಡಸಾಲೆಕ್ಕೆ ಹಿತಕರವಾದ ರೀತಿಯಲ್ಲಿ ಹಂಚಬಹುದಾಗಿದ್ದರೂ, ಮಂಗಳೂರು ಬ್ರೇಂಚಿನ ಮ್ಯಾನೇಜಿಂಗ್ ಡೈರೆಕ್ಟರು ಚಕ್ರಕೋಡಿ ರಾಮಶಾಸ್ತ್ರಿಗಳ ಹೊಸ ಕೃತ್ಯ ಸಂಬಂಧ ಸಂಘಕ್ಕಾದಗಿದ್ದ ನಷ್ಟವು ಸದರಿಯವರ ಮೇಲೆ ನಡಿಸಿದ ಸಿವಿಲ್ ವ್ಯವಹರಣೆ ಮೂಲಕ ಎಷ್ಟರ ಮಟ್ಟಿಗೆ ತುಂಬಬಹುದು ಎಂಬದು ನಿರ್ಧರಿಸುವರೆ ಅನಾನುಕೂಲವಾದ್ದರಿಂದ ಸದರಿ ಮುನಾಫೆಯನ್ನು ಸಂಘದ ವೃದ್ಧಿಗೋಸ್ಕರ ಹೂಡಾ ಕ್ಷೇಮನಿಧಿ ಎನ್ನು ಕಟ್ಟುವುದು ಯೋಗ್ಯವೆಂತ ಸಭೆಯವರು ನಿಶ್ಚೈಸಿದರು. ಕೆಲವು ಮೆಂಬರರಿಗೆ ಈ ದಾಖಲ್ಯಾಪ್ಯುದಲ್ಲಿ ಸಂಘಕ್ಕೆ ನೋವು ಉಂಟಾದ್ದರಿಂದ ಮುಂದೆ ನಡೆಯುವ ಬಗ್ಗೆ ಹೇಗೋ ಎಂಬ ಅನುಮಾನವಿತ್ತು. "ಸಂಘವನ್ನು ಮುಂದೆ ಪ್ರಯತ್ನವಿಟ್ಟು ನಡೆಯಿಸುವುದೇ ನಿಮ್ಮ ಮುಖ್ಯ ಕರ್ತವ್ಯ. ಈಗ ಎಲ್ಲಾ ಕಡೆಗಳಲ್ಲಿಯೂ ಹಣದ ತುಟ್ಟಿಯಿಂದ ಮುಂದೆ ಕೃಷಿಕರಿಗೆ ಅಗತ್ಯವಿದ್ದಾಗ ಸಾಲವಾಗಿ ಹಣ ದೊರೆಯುವುದು ಅಸಾಧ್ಯವಾಗಿ ಪರಿಣಮಿಸುವುದು. ಇದೂವರೆಗೆ ಮುಲ್ಕಿಯ ವಾಣಿಗ್ಯರರು ಈ ಸಂಘದ ಬಂಡಸಾಲೆಯಲ್ಲಿ ನೀವು ಇರುತ್ತೀರಿ. ಬ್ರಿಟ್ನೊಬ್ಬರೇ ವ್ಯಾಪಾರ ನಡೆಸುತ್ತಿರುವ ಎಷ್ಟೋ ಬಂಡಸಾಲೆಗಳಲ್ಲಿ, ಈ ಸಂಘದ ಬಂಡಸಾಲೆಗೆ ಒದಗಿದ್ದಕ್ಕಿಂತಲೂ ಜಾಸ್ತಿಯಾಗಿ ನಷ್ಟ ಸಂಭವಿಸಿದ್ದು ನನಗೆ ಗೊತ್ತಿದೆ. ಆದರೆ ಅವರು ಒಬ್ಬೊಬ್ಬರಾದರೂ ಧೈರ್ಯಗುಂದದೆ ಪುನಃ ಅದೇ ವೃತ್ತಿಯಲ್ಲೇ ನಷ್ಟಕ್ಕಿಂತಲೂ ಎಷ್ಟೋ ಪಾಲು ಹೆಚ್ಚು ಲಾಭವು ಕ್ಷಿಪ್ರದಲ್ಲಿಯೇ ಪಡೆದಿರುತ್ತಾರೆ. ಅದರಂತೆ ಈ ಸಂಘವನ್ನು ಮುಂದೆ ಮೋಸ ಕೃತ್ಯದಿಂದಾಗಿ ನಷ್ಟಬಾರದಂತೆ ನೀವು ಒಗ್ಗಟ್ಟಾಗಿ ಅದೆಷ್ಟು ಭದ್ರತೆ ಪಡಿಸಿ ನಡಿಸಿಬಂದರೆ ಕ್ಷಿಪ್ರದಲ್ಲಿಯೇ ಉನ್ನತ ಸ್ಥಿತಿಗೆ ಬರುವುದು ಎಂಬದಕ್ಕೆ ನನಗೆ ಎಳ್ಳಷ್ಟೂ ಅನುಮಾನವಿಲ್ಲ. ರಾಮ ಶಾಸ್ತ್ರಿಗಳ ಆಸ್ತಿಪಾಸ್ತಿಯಿಂದ ಸಿವಿಲ್ ವ್ಯವಹರಣೆ ಮೂಲಕ ಕೆಲವು ಮಟ್ಟಿನ ನಷ್ಟ ತುಂಬಲೂ ಬಹುದು. ನೀವು ನಿಮ್ಮ ಬಾಗಾಯ್ತು ಉತ್ಪತ್ತಿಯನ್ನು ಪ್ರಯೋಜನ ಪಡೆಯುವಂತೆ ವಿಕ್ರಯಿಸಬೇಕಾದರೂ ನಿಮಗೆ ಅಗತ್ಯವಾದಾಗ ಸುಲಭ ರೀತಿಯಿಂದ ಹಣವನ್ನು ಸಾಲವಾಗಿ ಪಡಿಯುವರೆಯೂ, ಈ ಸಂಘವನ್ನು ಮುಂದೆ ನಡಿಸುವುದು ಒಳ್ಳೆಯದು' ಎಂಬದಾಗಿ ವಗೈರೆ ಮಿ॥ ರಾ॥ ರಾ॥ ವಕೀಲ್ ಶಿವರಾಯರು ಒಂದು ಭಾಷಣವನ್ನು ಮಾಡಿದ ತರುವಾಯ ಎಲ್ಲಾ ಮೆಂಬರರು ಈ ಸಂಘವನ್ನು ಮುಂದೆ ಹೆಚ್ಚು ಪ್ರಯತ್ನವಿಟ್ಟು ನಡೆಯಿಸುವುದೇ ತಮ್ಮ ಮುಖ್ಯ ಕರ್ತವ್ಯವೆಂದು ಸಮ್ಮತಿಸಿದ್ದಲ್ಲದೆ ಸಂಘದ ಮುಂದಿನ ಅಭಿವೃದ್ಧಿಗಾಗಿ ಧನಸಹಾಯ ಮಾಡುವೆವಾಗಿ ವಾಗ್ದಾನ ಮಾಡಿದರು. ಹಾಗೆ ವಾಗ್ದಾನ ಮಾಡಿದ ಜಮಾ ರೂ ೧೦೭೩ ೦ ೦. ಈ ಸಂಘಕ್ಕೆ ಮುಂದೆ ೭ ಜನ ಡೈರೆಕ್ಟರರನ್ನು ಆರಿಸಬೇಕಾಗಿ ಸಭೆಯವರು ಅಭಿಪ್ರಾಯ ಪಟ್ಟದ್ದರಿಂದ ಮಿ॥ ರಾ॥ ರಾ॥ ರವಿವರ್ಮ ನರಸಿಂಹ ರಾಜರವರು, ಮಿ॥ ರಾ॥ ರಾ॥ ಲಕ್ಷ್ಮೀನಾಥ ಸ್ವಾಮಿಜೀಯವರು, ಮಿ॥ ರಾ॥ ರಾ॥ ನೆತ್ರಕೆರೆ ಶಂಕರನಾರಾಯಣ ಭಟ್ಟರು, ಮಿ॥ ರಾ॥ ಕೆರುಗಲು ತಿಮ್ಮಣ್ಣ ಭಟ್ಟರು, ಮಿ॥ ರಾ॥ ಕಬ್ಬಿನಹಿತ್ಲು ಶಂಕ್ರ ಭಟ್ಟರು, ಮಿ॥ ರಾ॥ ಮುಗುಳಿ ರಾಮಕೃಷ್ಣ ಭಟ್ಟರು, ಮಿ॥ ರಾ॥ ಮಾಡಂಕಿಲ್ಲು ಸಣ್ಣಯ್ಯನ ಪದ್ಮನಾಭಯ್ಯರು ಕೂಡಾ ೭ ಜನರನ್ನು ಡೈರೆಕ್ಟರಾಗಿ ಆರಿಸಲಾಯಿತು. ಇನ್ನು ಮುಂದೆ ಸಂಘಕ್ಕೆ ಮೋಸ ಕೃತ್ಯಗಳಿಂದಾಗಿ ನಷ್ಟಬಾರದಂತೆ ಮಂಗಳೂರಲ್ಲಿ ಸರಕುಗಳ ವ್ಯವಹಾರಕ್ಕೆ ಒಬ್ಬ ಡೈರೆಕ್ಟರರೂ ನಿಲ್ಲುವಲ್ಲದೆ ಹಣದ ಲೆಕ್ಕಪತ್ರದ ಮಟ್ಟಿಗೆ ಒಬ್ಬ ಯೋಗ್ಯ ಮನುಷ್ಯನನ್ನು ನೇಮಿಸಿ ಇವರಿಬ್ಬರೂ ತಕ್ಕದಾದ ಜಾಮೀನು ಕೊಡಬೇಕಾಗಿ ಇವರ ಮೇಲ್ವಿಚಾರಕ್ಕೆ ಮನೇಜರನಾಗಿ ಜಾಮೀನು ಪಡೆಕೊಂಡು ಮತ್ತೊಬ್ಬನನ್ನು ಸಹಾ ಇಡಬೇಕಾಗಿಯೂ ಯೋಗ್ಯತೆ ಮಟ್ಟಿಗೆ ಸಂಘದಿಂದ ಪ್ರತಿಫಲ ಸಹ ಕೊಡಬೇಕಾಗಿ ವಗೈರೆ ನಿಶ್ಚೈಸಿದ ಬಳಿಕ ಸಭೆಯು ಮುಕ್ತಾಯವಾಯಿತು.

ತಿಮರ್ — ಪರಸ್ಪರ ಸಹಾಯಕ ಸಂಘದ ಮಹಾಸಭೆಯು ಕಳೆದ ತಾ ೩೧ನೇ ಆದಿತ್ಯವಾರ ದಿವಸ ಹಿಂದುಶಾಲೆಯಲ್ಲಿ ಜರಗಿತು. ಸಂಘದ ಅಧ್ಯಕ್ಷರು ಮಿ॥ ರಾ॥ ರಾ॥ ಶಂಕರನಾರಾಯಣರಾಯರು ಸಭೆಯ ಅಧ್ಯಕ್ಷಸ್ಥಾನವನ್ನು ವಹಿಸಿದ್ದರು. ಮೆಂಬರರು ೮೩ ಮಂದಿಯಲ್ಲಿ ೬೦ ಮಂದಿ ಹಾಜರು ಇದ್ದರು. ಬಡ್ಡಿಯ ದರಗಳ ... ಏರಿಸುವುದು ಮತ್ತು ಹೊಸ ಕ್ರಮಗಳನ್ನು ಅಂಗೀಕರಿಸುವುದು ಮುಖ್ಯ ವಿಷಯಗಳಾಗಿದ್ದವು. ಇವು ಸರ್ವಸಮ್ಮತದಿಂದ ಅಂಗೀಕರಿಸಲ್ಪಟ್ಟಿವೆ. ಸಂಘಕ್ಕೆ ಮೇಜು ಕುರ್ಚಿ ವಗೈರೆ ಅವಶ್ಯ ಉಂಟೆಂತಲೂ ಪ್ರಕೃತ ಕ್ರಯಕ್ಕೆ ಪಡಿಯುವ ಹಣವಿದೆ, ಸಂಘಕ್ಕೆ ಪಟ್ಟ ಹೊಸ್ತಾಗುವವರಿಂದ ಮೆಂಬರರಲ್ಲಿ ಮನಸ್ಸಿದ್ದವರು ಉಚಿತವಾಗಿ ಕೊಟ್ಟರೆ ಉಪಕಾರವಾಗುತ್ತಿತ್ತೆ ತಲೂ ತಾನು ಒಂದು ಮೇಜು ಮಾಡಿಸಿ ಸಂಘಕ್ಕೆ ಒಪ್ಪಿಸುವದಾಗಿಯೂ ಅಧ್ಯಕ್ಷರು ನುಡಿದ ತರುವಾಯ ಇತರ ೬ ಜನ ಮೆಂಬರು ತಾವುಗಳು ಕುರ್ಚಿ ೧ ಬೆಂಚು ೩ ಸ್ಟೂಲ್ ೩, ಕೊಡ ಕೊಡುವದಾಗಿ ವಾಗ್ದಾನವಮಾಡಿರುತ್ತಾರೆ. ಅಷ್ಟರಲ್ಲಿ ಈ ಸಂಘದ ಕೆಲಸ ನಡೆಯುವರೆ ಸದರಿ ಶಾಲೆಯ ಕೋಣೆ ಒಂದನ್ನು ಬಾಡಿಗೆ ವಿನಹಾ ಕೊಡುವದಾಗಿ ಮಿ॥ ರಾ॥ ಮತ್ತೂರ್ ವಿಟ್ಲಪ್ಪಯ್ಯನವರು ಹೇಳಿರುತ್ತಾರೆ.

ಕೊಕ್ಕಡ:—ಕಾಡುಮೃಗಗಳ ಉಪದ್ರವು ದಿನೇ ದಿನೆ ಏರುತ್ತಿದೆ. ಕೋವಿ ಲೈಸನ್ಸುಗಳಾದರೂ ಬಹಳ ಕಮ್ಮಿ. ಅರ್ಜಿಮಾಡಿದವರಿಗೆ ಸಿಗಲಾರದು ಎಂಬ ಇಂತಾದ್ದು ಹುಕುಂಗಳು ಬರುತ್ತಾ ಇವೆ. ಕಾರಣವೇನೊ? ಯಾರು ವಿಚಾರಿಸುವರು? ಇಲ್ಲಿಗೆ ಸಮೀಪಸ್ಥಾದ ಪಟ್ರಮೆಯಲ್ಲಿ ಒಂದೆ ದಿನ ಹದಿಮೂರು ಜಾನುವಾರುಗಳು ಹುಲಿಗೆ ಆಹುತಿಯಾದವಂತೆ. ಈ ಕೊಕ್ಕಡದಲ್ಲಿ ಯಾದರೂ? ರೈತರ ಹಟ್ಟಿಗಳಲ್ಲಿ ಹೊಕ್ಕು ಜಾನುವಾರುಗಳಿಗೆ ಬ್ರಾಸುಪಡಿಸುವ ರೂಢಿಯನ್ನು ಹುಲಿಗಳು ಹಿಡಿದುಬಿಟ್ಟಿರುತ್ತವೆ. ಇಲ್ಲಿಯ ಇಗರ್ಜಿ ಗುರುಗಳು ಹೊಲೆಯರನ್ನು ಕ್ರೈಸ್ತಮತಕ್ಕೆ ಸೇರಿಸುತ್ತಾರಾದ್ದರಿಂದ ಈ ಹೊಲೆಯರು ಹಾಗೆ ಸೇರಕೂಡದೆಂದು ಇತರ ಜಾತಿಯ ಹಿರಿಯರು ಗಮನಿಸುತ್ತಾರಂತೆ.

ಇಲ್ಲಿ ಹೋಟೆಲುಗಳಲ್ಲಿ ಹೊಸ ಕಾನ್ಸಿಲುಗಳ ಬಹಿಷ್ಕಾರ ಹಾಕುವುದು ಯೋಗ್ಯವೆಂದು ಸಾರುವ ಕೆಲಸವನ್ನು ಕೈಕೊಂಡು ಮಿ॥ ರಾ॥ ರಾ॥ ಹೋಸಿಂದ ಬಾಳಿಲ್ಲಾಯರು ಕೂಡಾ ಇಲ್ಲಿ ಬೋಧಿಸುತ್ತಿರುವರೆಂದು ವರ್ತಮಾನ ಕೇಳುತ್ತೇವೆ. ಈ ಹಳ್ಳಿಯಲ್ಲಿ ಈ ಸಂಗತಿ ಜನರು ಪ್ರಯತ್ನ ಪಡುತ್ತಿರುವುದು ತುಂಬಾ ಸಂತೋಷಕರ.

ಕಾಪು—೧ ಇಲ್ಲಿಯ ಹೊಸ ಮಾಂಗುಡಿಯ ಆದಳಿತ ನಡಿಸುವ ಬಗ್ಗೆ ಹೊಸ ಸ್ಕೀಮು ಮಂಜೂರಾದಾಗ್ಯೂ ಮೆಂಬರರು ಯಾರೂ ಮುಂದುವರಿದು ಬಾರದೆ ಇರುವುದು ಒಂದು ಚೋದ್ಯ.

೨ ನಮ್ಮಲ್ಲಿ ಒಂದು ಗ್ರಾಮಪಂಚಾಯ್ತ್ ಕೋರ್ಟು ಸ್ಥಾಪನೆ ಆಗಿದೆ. ಇದಕ್ಕೆ ೪ ಜನ ಪಟೇಲರೂ ೩ ಜನ ಇತರರೂ ಮೆಂಬರರಾಗುತ್ತಾರೆ. ಪಟೇಲರನ್ನೇ ಆರಿಸುವುದಕ್ಕಿಂತ ಇತರ ಯೋಗ್ಯರನ್ನು ಆ ಓಟಿನ ಮೂಲಕ ಆರಿಸುವುದು ಉತ್ತಮವಲ್ಲವೇ?

೩ ಒಬ್ಬರು ಯೋಗ್ಯ ಮಹನೀಯರು ಒಂದು ಕಲ್ಯಾಣ ಮಹೋತ್ಸವವನ್ನು ತಯಾರಿಸುವರೆ ಹೆದ್ದಬ್ಬಿನ ಗುರುತು ದಸ್ತು ಪಾಸಲಾಯಿಸಿ ತಿಗೆದುಕೊಂಡ ಸಂಗತಿ ಬಯಲಿಗೆ ಬಂದು ಹಾಸ್ಯಕ್ಕೀಡಾಗಿದರಲ್ಲಾ! ಇದೇಕೆ? ಇಂಥಾ ರೀತಿ ವರ್ತಿಸಿದ ಮಹನೀಯರೇ ಒಬ್ಬರು ಪಂಚಾಯಿತಿ ಮೆಂಬರರಾಗ್ಯಾರೇ?

[illegible]

ಮದ್ರಾಸು ಕರ್ನಾಟಕ ಸಭೆಯವರ ನಾಟಕ ಲೇಖನ ಸಂಬಂಧವಾದ ಬಹುಮಾನದ ಮೇಲಾಟ

[illegible] ಮೂಲಶಾಲೆ ಶಾಲೆಗಳ ಉಪಾಧ್ಯಾಯರ ಸಂಘದ ಪ್ರೊಸೀಡಿಂಗ್ಸು

[illegible] ತಾಲೂಕಿನ ಮೂಲಶಾಲೆ ಉಪಾಧ್ಯಾಯರುಗಳ ಸಂಘ

ಸ್ವದೇಶಾಭಿಮಾನಿ.

ಶಕ ೧೮೪೩ ಕಾರ್ತಿಕ ಶು|| ೮ ಶುಕ್ರವಾರ.

ಪ್ರವೃತ್ತಿ ಮತ್ತು ನಿವೃತ್ತಿ.

ವರ್ತಮಾನ ಪತ್ರಿಕೆಯ ವಾಙ್ಮಯದಲ್ಲಿ 'ಪ್ರವೃತ್ತಿ' ಮತ್ತು 'ನಿವೃತ್ತಿ' ಈ ಎರಡು ಪದಗಳು ಹೆಚ್ಚಾಗಿ ಬರುವುದಿಲ್ಲ. ಪ್ರತಿ ವೇದಾಂತದ ಇಲ್ಲವೆ ಜ್ಞಾನಮಾರ್ಗದ ವಾಙ್ಮಯದಲ್ಲೆ ಹೆಚ್ಚಾಗಿ ಪರಿಚಿತವಾಗಿರುವ ಈ ಪದಗಳು ರಾಜಕೀಯ ಹಾಗೂ ಇತರ ವ್ಯಾವಹಾರಿಕ ವಿಷಯಗಳನ್ನು ಪರಿಸ್ಥಿತಿ ವಶಾತ್ ಇಲ್ಲವೆ ಧ್ಯೇಯ ವಶಾತ್ ಉಪಪಾದಿಸುವ ಪತ್ರಿಕೆಗಳಲ್ಲಿ ಅಪರೂಪವಾದರೆ ಅದರಲ್ಲಿ ಆಶ್ಚರ್ಯವಿಲ್ಲ. ಆದರೆ ಹಿಂದುಸ್ಥಾನದ ರಾಜಕೀಯ ವಾತಾವರಣದಲ್ಲಿ ನೊನ್-ಕೊ-ಒಪರೇಶನಿನ ಅವತಾರವಾದಂದಿನಿಂದ ಪ್ರವೃತ್ತಿ ನಿವೃತ್ತಿಯ ವಾದಗಳು ಉಪಸ್ಥಿತವಾಗಿವೆ. ಈ ವಾದದಲ್ಲಿ ಮನೋರಂಜನಕ್ಕಿಂತಲೂ ಬೋಧಪ್ರದವಾದ ಅಂಶವು ಅಧಿಕವಾಗಿರುವುದರಿಂದ ಕನ್ನಡಿಗರ ಮುಂದೆ ಅದರ ಸಾಮಾನ್ಯ ಸ್ವರೂಪವನ್ನಿಡುವುದು ನಮ್ಮ ಕರ್ತವ್ಯವಾಗಿದೆ. ನೊನ್-ಕೊ-ಒಪರೇಶನು ಪ್ರವೃತ್ತಿಮಾರ್ಗದ್ದೊ, ನಿವೃತ್ತಿಮಾರ್ಗದ್ದೊ ಎಂದು ದೊಡ್ಡ ದೊಡ್ಡ ವಿದ್ವಾಂಸರಲ್ಲಿ ಒಂದು ಚರ್ಚೆಯು ಉಂಟು. ಈ ಚರ್ಚೆಯೊಳಗಿನ ಪೂರ್ವೋತ್ತರ ಪಕ್ಷಗಳನ್ನು ನಮ್ಮ ವಾಚಕರಿಗೆ ಸಂಕ್ಷೇಪತಃ ನಿವೇದಿಸಲು ನಾವು ಯೋಚಿಸಿದ್ದೇವೆ.

ಈ ಚರ್ಚೆಯೊಳಗಿನ ಪೂರ್ವೋತ್ತರ ಪಕ್ಷಗಳ ಸರಿಯಾದ ಮರ್ಮವು ವಾಚಕರಿಗೆ ತಿಳಿಯ ಬೇಕಾದರೆ ಪ್ರವೃತ್ತಿ ನಿವೃತ್ತಿಗಳೆಂದರೇನು ಎಂಬುದನ್ನು ತಿಳಕೊಳ್ಳುವುದು ಅವಶ್ಯಕ. ಅದ್ದರಿಂದ ಅದನ್ನೆ ಮೊದಲಾಗಿ ವಿವರಿಸೋಣ. ಮನುಷ್ಯನು ಸ್ವಭಾವಿಕವಾಗಿಯೆ ಪ್ರವೃತ್ತಿಮಾರ್ಗದಲ್ಲಿ ತೊಡಗಿದವನಾಗಿರುತ್ತಾನೆ. ಮನುಷ್ಯನಂಥ ಒಂದು ಪ್ರಾಣಿಯನ್ನು ಸ್ಥೂಲಮಾನದಿಂದ ಪೃಥಕ್ಕರಿಸಿದರೆ, ದೇಹ ಇಂದ್ರಿಯ, ಆತ್ಮ, ಈ ಮೇರೆಗೆ ಮೂರು ವಿಭಾಗಗಳನ್ನು ಮಾಡಬಹುದು. ಮನುಷ್ಯನು ತನ್ನ ದೇಹದ ಸಹಾಯದಿಂದಲೂ, ಇಂದ್ರಿಯಗಳ ಸಹಾಯದಿಂದಲೂ ಜಗತ್ತಿನ ಸಂಬಂಧವನ್ನು ಪಡೆಯುತ್ತಾನೆ. ಇಲ್ಲಿ ಮನುಷ್ಯನೆಂದು ಹೇಳುವಾಗ, ಅವನ ಆತ್ಮವೆಂದು ತಿಳಿಯಬೇಕು. ಈ ಆತ್ಮವು ದೇಹ ಮತ್ತು ಇಂದ್ರಿಯಗಳ (ಅಂತಃಕರಣವು ಇಂದ್ರಿಯಗಳಲ್ಲೆ ಸಮಾವಿಷ್ಟವಾಗಿದೆ ಎಂದು ತಿಳಿಯಬೇಕು) ಸಾನ್ನಿಧ್ಯದಿಂದ ಲೋಕದ ವ್ಯವಹಾರಗಳಲ್ಲಿ ಪ್ರವರ್ತಿಸುತ್ತದೆ, ಮನುಷ್ಯನು ಈ ಬಾಹ್ಯ ಪ್ರಪಂಚದಲ್ಲಿ ಯಾವ ರೀತಿಯಿಂದ ವ್ಯಾಪಿಸುತ್ತಾನೆಂಬದು ತಿಳಿಸಿಕೊಡಲು ಅವನ ವ್ಯವಹಾರಗಳನ್ನು ವಿವರಿಸಿಯೆ ಹೇಳಬೇಕಾದ ಅಗತ್ಯವಿಲ್ಲ. ದೇಹವು ಆತ್ಮದ ಅಭಿವ್ಯಕ್ತಿಗೆ ಆಶ್ರಯವಲ್ಲದೆ, ಇಂದ್ರಿಯಗಳ ಮುಖಾಂತರವೆ ಅದು ಬಾಹ್ಯ ಸೃಷ್ಟಿಯ ಪರಿಚಯವನ್ನು ಪಡೆಯುತ್ತದೆ. ಅದು ಒಂದು ಹೂವನ್ನು ಮೂರು, ಹೆಚ್ಚೆಂದರೆ ನಾಲ್ಕು ವಿಧದಿಂದ ಉಪಯೋಗಿಸಿಕೊಳ್ಳುತ್ತದೆ. ಹೂವಿನ ದರ್ಶನ, ಹೂವಿನ ಆಘ್ರಾಣ ಈ ಮೇರೆಗೆ ಮನುಷ್ಯನು ಹೂವನ್ನು ಎರಡು ವಿಧದಿಂದ ಅನುಭವಿಸಬಹುದು. ಗುಲಾಬಿ ಹೂವಿನ ಎಸಳನ್ನು ಬಾಯಿಯಲ್ಲಿ ಇಟ್ಟು ಅಗಿಯುವವರು ಹಳ್ಳಿಯಲ್ಲಿ ಅಪರೂಪವಾಗಿದ್ದರೂ ತೊಡಗಸಿನ ಹೂವಿನ ತಂಬಳಿಯನ್ನು ತಿನ್ನುವವರು ಅನೇಕರಿದ್ದಾರೆ. ಸಾರಾಂಶ, [illegible] ಮತ್ತು ಪರಿಮಳ ಈ ಮೂರು ವಿಧದಿಂದ ಹೂವು [illegible] ಇಂದ್ರಿಯ ಗಳಿಗೆ—[illegible] ಇಂದ್ರಿಯಗಳಿಗೆ— [illegible] ನಾಲ್ಕು ಇಂದ್ರಿಯಗಳು ಈ ಮೇರೆಗೆ ಸೃಷ್ಟಿಯ ಪರಿಚಯವನ್ನು ಮಾಡಿಕೊಳ್ಳುವಾಗ ಕೆಲವು ಕೆಲವಡೆಗೆ ಹೋಗುಕೊಂಡಿರಲ್ಲಿಲ್ಲ. ಅಂದರೆ ಕಿವಿಯು ಮೇಲೂ ಈ ಸುದ್ದಿಯು ಹೋಗಿ ಅದು ಲೋಕದೊಳಗಿನ ಧ್ವನಿಯೊಡನೆ ವ್ಯಾಪಾರವನ್ನು ಪ್ರಾರಂಭಿಸಿ ಆ ಧ್ವನಿಯಲ್ಲಿ ವರ್ಗೀಕರಣ [illegible] ಇಂದ್ರಿಯಗಳು ಸಮಸ್ತ ಸೃಷ್ಟಿಯನ್ನು ಐದು ವಿಧದಿಂದ ಉಪಯೋಗಿಸುತ್ತಿದ್ದರೂ ಅವುಗಳ ಜ್ಞಾನಶಕ್ತಿಯು ವಿವಕ್ಷಿತ ಪ್ರಮಾಣದಲ್ಲಿ ಮರ್ಯಾದಿತವಾಗಿದೆ. ದೂರದಲ್ಲಿದ್ದ ವಸ್ತುವು ಕಾಣಿಸುವುದಿಲ್ಲ, ದೂರದಲ್ಲಿದ್ದದನ್ನು ಮುಟ್ಟಲಾಗುವುದಿಲ್ಲ, ಮೂಸಲ್ಲಾಗುವುದಿಲ್ಲ, ರುಚಿನೋಡಲಾಗುವುದಿಲ್ಲ, ದೂರದಲ್ಲಿದ್ದ ಧ್ವನಿಯು ಕೇಳಿಸುವುದಿಲ್ಲ. ಆದರೆ ಅದೇ ಮನುಷ್ಯನಲ್ಲಿ ಇನ್ನೊಂದು ಶಕ್ತಿ ಇದೆ; ಆ ಶಕ್ತಿಯ ಬಲದಿಂದ ಅವನು ವ್ಯವಹಿತವನ್ನು ನೋಡುತ್ತಾನೆ, ಕೇಳುತ್ತಾನೆ, ಮುಟ್ಟುತ್ತಾನೆ, ಮೂಸುತ್ತಾನೆ ಅಥವಾ ರುಚಿನೋಡುತ್ತಾನೆ. ಮನುಷ್ಯನಲ್ಲಿ ಈ ಎಲ್ಲ ಇಂದ್ರಿಯಗಳನ್ನು ಆಯಾ ವ್ಯಾಪಾರಗಳಲ್ಲಿ ಪ್ರೇರಿಸುವ ಒಂದು ಮನಸ್ಸಿದೆ. ಆ ಮನಸ್ಸಿನ ಕೆಲಸವು ಈಗ ಹೇಳಿದಂತೆ ಇಂದ್ರಿಯಗಳನ್ನು ಪ್ರೇರಿಸುವುದೇ ಮಾತ್ರವಲ್ಲ, ಸ್ವತಃ ಅದಕ್ಕೆ ಇಂದ್ರಿಯಾಗಮ್ಯ ಸಂಗತಿಗಳನ್ನು ತಿಳಕೊಳ್ಳುವ—ಊಹಿಸುವ—ಸಾಮರ್ಥ್ಯವು ಇದೆ. ಕೊಂಚ ಹೆಚ್ಚು ಅಭಿಪ್ರಾಯವನ್ನು ಬೋಧಿಸಿ ಬೇರೆ ಮಾತುಗಳಿಂದ ಹೇಳುವುದಾದರೆ, ಆತ್ಮವು ಇಂದ್ರಿಯಗಳು ಐದು, ಮನಸ್ಸು ಒಂದು ಈ ಮೇರೆಗೆ ಆರು ಬಲೆಗಳನ್ನು ತಯಾರಿಸಿ, ಸೃಷ್ಟಿಯ ಬೇಟೆಯನ್ನಾಡಲು ಯೋಚಿಸುತ್ತಿರುವಾಗಲೆ ತಾನು ಅದೆ ಬಲೆಯಲ್ಲಿ ಸುತ್ತಿಕೊಂಡುಬಿದ್ದಿದೆ.

ಮೇಲಿನ ಇಷ್ಟೀ ಪ್ರತಿಪಾದನದ ಅರ್ಥವೇನೆಂದರೆ, ಮನುಷ್ಯನು ಇಂದ್ರಿಯಗಳ ಮುಖಾಂತರ ಸೃಷ್ಟಿಯಲ್ಲಿ ಪ್ರವರ್ತಿಸುತಿದ್ದಾನೆ. ಅವನ ಇಂದ್ರಿಯಗಳು ಆಯಾ ವಿಷಯಗಳಲ್ಲಿ ಪ್ರವರ್ತಿಸುತ್ತಿವೆ. ಇಂದ್ರಿಯಗಳು ವಿಷಯಾನುಭವಕ್ಕೋಸ್ಕರ ಯಾವಾಗಲೂ ಬಹಿರ್ಮುಖವಾಗಿರುತ್ತವೆ. ಆಫ್ರಿಕದೊಳಗಿನ ಒಂದು ಬಗೆಯ ಮರಗಳು ತಮ್ಮ ಎಲೆಗಳನ್ನು ಬಾಯಿ ತೆರೆದ ಸಂಪುಟದಂತೆ ಅರಳಿಕೊಂಡಿರುತ್ತವೆ. ಯಾಕೆಂದರೆ, ಆ ಸಂಪುಟದಲ್ಲಿ ಚಿಕ್ಕ ಹಕ್ಕಿಗಳು ಇಲ್ಲವೆ ಹುಳಗಳು ಬಂದು ಕುಳಿತೊಡನೆ ಅವುಗಳನ್ನು ತಿನ್ನಬೇಕು. ಇದು ಆ ಮರದ ಎಲೆಯ ಬಹಿರ್ಮುಖತೆಯು. ಹಾಗೆಯೆ ಇಂದ್ರಿಯಗಳೂ ಕೂಡ ಯಾವಾಗ್ಲೂ ಬಹಿರ್ಮುಖವಾಗಿದ್ದು ಶಬ್ದ, ಸ್ಪರ್ಶ, ರೂಪ, ರಸ, ಗಂಧ ಇವುಗಳನ್ನು ಸೇವಿಸುತ್ತಲೆ ಇರುತ್ತವೆ. ಇಂದ್ರಿಯಗಳು ಬೇರೆ ಬೇರೆ ವಿಷಯಗಳನ್ನು ಸೇವಿಸುತ್ತಿರುವಂತೆ ಮನಸ್ಸು ಅವುಗಳನ್ನು ಚಿಂತಿಸುತ್ತದೆ. ವಿಷಯಾತ್ಮಕವಾದ ಈ ಪ್ರಪಂಚದೊಡನೆ ಇಂದ್ರಿಯಗಳ ಸಂಬಂಧವು ಅಕುಂಠಿತವಾಗಿ ನಡಕೊಂಡುಂಟು. ಇವುಗಳ ಸಂಬಂಧಗಳ ಸಾಹಿತ್ಯದಿಂದ ಅವುಗಳಲ್ಲಿ ಒಂದು ಬಗೆಯ ಅಭಿರುಚಿ ಕಿಂಬಹುನಾ ಮೋಹವುಂಟಾಗಿ ಅವುಗಳನ್ನು ಹೊಂದುವುದೆ ಪರಮ ಪುರುಷಾರ್ಥವೆಂಬ ತಿಳಿವು ಪ್ರಬಲವಾಗಹತ್ತಿತು. ವಿಷಯಗಳ ಸಂಬಂಧವು ವಿಷಯಮಯ ಲೋಕದಲ್ಲಿ ದುರ್ವಾರವೆಂದಾದ ಮೇಲೆ ಅವುಗಳನ್ನು ಹೊಂದಲು ಪ್ರಾಣಿಗಳ ಮನುಷ್ಯರ ಪ್ರಯತ್ನವು ಅವಶ್ಯಕವೆ ಎಂಬ ಪ್ರಶ್ನೆಯು ಒಂದು ವೇಳೆ ಕೆಲವರಿಗೆ ಬರಬಹುದು. ಆದರೆ ವಿಷಯಗಳಲ್ಲೂ ಅನುಕೂಲ ಪ್ರತಿಕೂಲಯೆಂಬ ಎರಡು ವರ್ಗಗಳಿರುವುದರಿಂದ ಪ್ರತಿಕೂಲವಾದವುಗಳ ಪರಿಹಾರಪೂರ್ವಕ ಅನುಕೂಲ ವಿಷಯಗಳ ಪ್ರಾಪ್ತಿಯಾಗಬೇಕೆಂದು ಮಾನವರ ಪ್ರಯತ್ನವು ನಡೆಯಹತ್ತಿತು. ಈ ಪ್ರಯತ್ನವು ಎಷ್ಟೆಷ್ಟು ಹೆಚ್ಚುತ್ತ ಹೋಯಿತೊ ಅಷ್ಟು ವಿಷಯಗಳ ಸಂಬಂಧವು ದೃಢವಾಗಹತ್ತಿತು. ಈ ಸಂಬಂಧವು ಕಟ್ಟಕಡೆಗೆ ಎಷ್ಟು ನಿಬಿಡವಾಗಿದೆಂದರೆ ಬಹಿರ್ಮುಖ ಇಂದ್ರಿಯಗಳಿಗೆ ವಿಷಯಗಳ ಒಂದು ಕ್ಷಣಿಕ ವಿಯೋಗವು ಕೂಡ ಸಹಿಸಲು ಸಾಧ್ಯವಾಗಿದೆ. ಇನ್ನೊಂದು ಮಾತಿನಿಂದ, ವಸ್ತುತಃ ನಿರ್ಲಿಪ್ತವಾದ ಆತ್ಮವು ಇಂದ್ರಿಯಗಳ ಮೇಲಿನ ಅಭಿಮಾನದಿಂದ ವಿಷಯಗಳೊಡನೆ ತನ್ಮಯವಾಗಿ ಹೋಗಿದೆ. ಮಾತ್ರವಲ್ಲ, ಅನುಕೂಲವಾದ ಸುಖವನ್ನು ಪಡೆಯುವದೇ ಪರಮ ಪುರುಷಾರ್ಥವೆಂಬ ತಿಳಿವು ಮೇಲೆ ಹೇಳಿದಂತೆ ಪ್ರಬಲವಾಗಿ ಆ ಉದ್ದೇಶವನ್ನು ಕೈಗೂಡಿಸಲು ಲೋಕದಲ್ಲಿ ವಿವಿಧ ಪ್ರಯತ್ನಗಳು ನಡೆದವು, ನಡೆಯುತ್ತಿವೆ ಮತ್ತು ಇನ್ನು ಮುಂದೆಯೂ ನಡೆದಾವು. ವಿಷಯ ಪ್ರಾಪ್ತಿಗೋಸ್ಕರ ಮಾನವನ ಯಾವ ಪ್ರಯತ್ನವಿದೆಯೊ ಅದೇ ಪ್ರವೃತ್ತಿ ಮಾರ್ಗವು.

ಪ್ರವೃತ್ತಿಯ ಈ ಸ್ವರೂಪವನ್ನು ತಿಳಕೊಂಡ ಮೇಲೆ ನಿವೃತ್ತಿಯ ಲಕ್ಷಣವನ್ನು ತಿಳಕೊಳ್ಳುವುದು ಕಷ್ಟವಲ್ಲ. ಬಹಿರ್ಮುಖವಾದ ಇಂದ್ರಿಯಗಳನ್ನು ಅಂತರ್ಮುಖ ಪಡಿಸುವುದು ನಿವೃತ್ತಿಯು. ಇಂದ್ರಿಯಗಳನ್ನು ಮೆಲ್ಲಮೆಲ್ಲನೆ ಬಾಹ್ಯವಿಷಯಗಳಿಂದ ಬಿಡಿಸಿ, ಅವುಗಳ ಅಂತರ್ಮುಖತೆಯು ಸ್ಥಿರವಾಗುವಂತೆ ಬೇರೆ ಕೆಲಸದ ಮೇಲೆ ಅವುಗಳನ್ನು ತೊಡಗಿಸುವುದು ನಿವೃತ್ತಿಯು. ಇದರ ಮೇಲಿಂದ್ಲೆ ಇಂದ್ರಿಯಗಳನ್ನು ನಿರ್ವ್ಯಾಪಾರ ಮಾಡುವುದು ನಿವೃತ್ತಿಯಲ್ಲವೆಂಬುದು ವಾಚಕರಿಗೆ ತಿಳಿದೀತು. ಇಂದ್ರಿಯಗಳನ್ನು ನಿರ್ವ್ಯಾಪಾರಮಾಡಲು ಸಾಧ್ಯವಿಲ್ಲ. ಈ ಸಂಗತಿಯನ್ನು ದೃಷ್ಟಾಂತಪೂರ್ವಕವಾಗಿ ಪ್ರತಿಪಾದಿಸಿ ಅಸಹಕಾರಿತೆಯು ಪ್ರವರ್ತಕವೊ ನಿವರ್ತಕವೊ ಎಂಬುದನ್ನು ಕೂಡ ಮುಂದೆ ಪ್ರತಿಪಾದಿಸೋಣ.

[illegible] ವ್ಯವಹಾರಗಳು.

[illegible] ಆಫ್ ಇಂಡಿಯಾ ಸೊಸೈಟಿಯ ಅಧ್ಯಕ್ಷರೂ ಲಿಬರಲ್ [illegible] ಯೇಶನಿನ ಒಬ್ಬ ಮುಖ್ಯಸ್ಥರೂ ಎಂಟಿ-ನೊನ್-ಕೊ-ಒಪರೇಶನಿನ ಪ್ರಚಾರಕರೂ ಆದ ಬಹುಮಾನ್ಯರಾದ ವಿ. ಎಸ್. ಶ್ರೀನಿವಾಸ ಶಾಸ್ತ್ರಿಗಳು ಕಳೆದ ಮಂಗಳವಾರ ಇಲ್ಲಿಗೆ ಬಂದಿದ್ದರು. ರಾ|| ಶ್ರೀನಿವಾಸ ಶಾಸ್ತ್ರಿಗಳು ಕೌನ್ಸಿಲ್ ಆಫ್ ಸ್ಟೇಟಿಗೆ ಮದ್ರಾಸ್ ಪ್ರಾಂತದ ಕಡೆಯಿಂದ ಉಮೇದವಾರರಾಗಿ ನಿಂತಿದ್ದಾರೆ. ಅವರಿಗೆ ಈ ಕಾರ್ಯದಲ್ಲಿ ಜನಗಳ ಓಟುಗಳು ಎಂದರೆ ಮತಗಳು ಬೇಕಾಗಿವೆ. ಅದ್ದರಿಂದ ದಕ್ಷಿಣ ಕನ್ನಡದೊಳಗಿನ ಮತದಾರರನ್ನು ಬೋಧಿಸುವದಕ್ಕಾಗಿ ಅವರು ಇಲ್ಲಿಗೆ ಬಂದಿದ್ದರು. ಅಸಹಕಾರಿತೆಯ ಚಳವಳಿಯು ಜನ್ಮವೆತ್ತುವ ಪೂರ್ವದಲ್ಲಿ ಯಾದರೆ ಬರೆ ವೋಟುಗಳನ್ನು ಸಂಗ್ರಹಿಸುವುದಕ್ಕೆ ಶಾಸ್ತ್ರಿಗಳಿಗೆ ಇಲ್ಲಿ ಬರಬೇಕಾದ ಅಗತ್ಯವಿದ್ದಿಲ್ಲ. ಮತ್ತು ಹಾಗೆ ಬರುವ ಒಂದು ಸಂಪ್ರದಾಯವೂ ಇದ್ದಿಲ್ಲ. ಅವರ ಕಡೆಯ ಏಜಂಟರು ಯಾರಾದರೂ ಇಲ್ಲಿಗೆ ಬಂದು ಈ ಕಾರ್ಯದ ವ್ಯವಸ್ಥೆಯನ್ನು ಮಾಡಿ ಹೋಗುತಿದ್ದರು. ಆದರೆ ರಾಷ್ಟ್ರೀಯ ಸಭೆಯು ಕೌನ್ಸಿಲ್ ಬಹಿಷ್ಕಾರದ ತತ್ವವನ್ನು ಮಾನ್ಯ ಮಾಡಿ ಆ ಚಳವಳಿಯನ್ನು ಎಲ್ಲ ಕಡೆಗಳಲ್ಲಿ ಪ್ರಾರಂಭಿಸಿದ್ದರಿಂದ ಶಾಸ್ತ್ರಿಗಳಂಥವರಿಗೆ ಅದನ್ನು ಎದುರಾಡಿಸಲು ಅಲ್ಲಲ್ಲಿ ಸ್ವತಃ ಹೋಗುವ ಪರಿಶ್ರಮವನ್ನು ತೆಕ್ಕೊಳ್ಳಬೇಕಾಗಿ ಬಂದಿದೆ. ಈ ಕ್ರಮಕ್ಕನುಸಾರವಾಗಿ ಅವರು ಮಂಗಳೂರಿನಲ್ಲಿ ಕಳೆದ ಮಂಗಳವಾರ ಗವರ್ನಮೆಂಟ್ ಕೊಲೆಜಿನ ಸಭಾಗೃಹದಲ್ಲಿ ಕೂಡಿದ ಜನಸಮಾಜದ ಮುಂದೆ ಒಂದು ಉಪನ್ಯಾಸವನ್ನು ಕೊಟ್ಟರು. ಸಭೆಯಲ್ಲಿ ರಾ|| ಶಾಸ್ತ್ರಿಗಳ ಭಾಷಣವು ಸಾಧಾರಣ ೧|| ತಾಸು ನಡೆಯಿತು, ಪರಂತು ಮಧ್ಯ ಮಧ್ಯದಲ್ಲಿ ಅವರ ಭಾಷಣಕ್ಕೆ ಅಸಂತೋಷದರ್ಶಕವಾದ ಚಪ್ಪಾಳೆಗಳು, ವಿಪರೋಧಿಕ ಪ್ರಶ್ನೆಗಳು, ಅಲ್ಲಲ್ಲಿ ಅಸ್ಫುಟವಾದ ಮಾತುಗಳು ಇತ್ಯಾದಿ ಹಲವು ಬಗೆಯ ವಿಘ್ನಗಳಿಂದ ಅವರ ಭಾಷಣದ ಓಘವು ತಡೆಯಲ್ಪಡುತಿತ್ತು! ಇಂಥ ವಿಘ್ನಗಳು ಸಭೆಯಲ್ಲಿ ನೆರೆದ ಹಿರಿಯರಿಂದ ಹೆಚ್ಚಾಗಿ ಉಂಟಾದವುಗಳಲ್ಲ. ಅವು ಯಾರಿಂದಲೆ ಉಂಟಾದವುಗಳಾಗಲಿ ಒಬ್ಬ ಸಭ್ಯ ಗೃಹಸ್ಥರು ಭಾಷಣವನ್ನು ಮಾಡುವಾಗ ಶ್ರೋತೃ ಸಮಾಜವೂ ಕೂಡ ಶಾಂತ ಮನಸ್ಸಿನಿಂದ ಆ ಭಾಷಣವನ್ನು ಕೇಳುವ ಸಮಾಧಾನವನ್ನು ತಾಳಬೇಕಾದ್ದು ಯುಕ್ತವಾಗಿದೆ. ಈ ದೃಷ್ಟಿಯಿಂದ ವಿಚಾರ ಮಾಡುವಾಗ ಮೊನ್ನೆ ಶ್ರೀನಿವಾಸ ಶಾಸ್ತ್ರಿಗಳ ಭಾಷಣಕ್ಕೆ ಮಧ್ಯ ಮಧ್ಯದಲ್ಲಿ ವಿಘ್ನಗಳುಂಟಾದದ್ದು ಕೇವಲ ಅನುಚಿತವಾಗಿರುವುದರಿಂದ ಆ ಬಗ್ಗೆ ಇತರರಷ್ಟೆ ನಮಗೂ ಕೂಡ ವ್ಯಸನವಾಗುತ್ತದೆ. ಭಾಷಣಕರ್ತರು ಒಂದು ಸಂಗತಿಗೆ ಬೇಕಾದಂತೆ ಬಣ್ಣ ಹಾಕಿ ಹೇಗೂ ಮಾತಾಡಬಹುದು; ಆದರೆ ಕೇಳುವವರು ಮಾತ್ರ ತಮ್ಮ ಮನಃಶಾಂತತೆಯ ತಕ್ಕಡಿಯನ್ನು ಸಮತೋಲವಾಗಿಯೆ ಇಟ್ಟುಕೊಳ್ಳಬೇಕೆಂದರೆ ಅದು ಯಾವ ನ್ಯಾಯವೆಂದು ಅನೇಕ ಎಳೆ ಬುದ್ಧಿಯವರು ಒಂದು ವೇಳೆ ಕೆಣಕಿಕೊಳ್ಳಬಹುದು. ಆದರೆ ವಿರುದ್ಧ ಮತಗಳನ್ನು—ವಿಶೇಷತಃ ವಿದ್ವಾಂಸರಾದ ಶಾಸ್ತ್ರಿಗಳಂಥ ವ್ಯಕ್ತಿಗಳಿಂದ ಹೊರ ಬೀಳುವ ಮತಗಳನ್ನು ಅಲೈಸಿ, ಶಾಂತವೃತ್ತಿಯಿಂದ ಕೇಳದೆ ಅವುಗಳನ್ನು ನಿರಾಕರಿಸಲು ಸಾಧ್ಯವಾಗುವುದಿಲ್ಲ. ಎಂದ ಮೇಲೆ ನಡುನಡುವೆ ಗುಲ್ಲು ಎಬ್ಬಿಸುವುದರಿಂದ ಯಾವ ಇಷ್ಟಾರ್ಥವು ಸಾಧ್ಯವಾಗುತ್ತದೆ?

ಇರಲಿ; ಇವು ಬಾಹ್ಯ ವಿಷಯಗಳು; ಅಷ್ಟೊಂದು ಮಹತ್ವದವುಗಳಲ್ಲ. ಈ ಹೊತ್ತು ಅಪಕ್ವ ವಿಚಾರದವರು ನಾಳೆ ಪಕ್ವವಾದ ಅನುಭವವನ್ನು ಪಡೆದು ಸಭ್ಯರೀತಿಗನುಸಾರವಾಗಿ ನಡೆಯುವ ರೀತಿಯನ್ನು ಕಲಿಯಬಹುದು. ಅದ್ದರಿಂದ ಆ ಸಂಗತಿಗಳನ್ನು ಬದಿಗಿಟ್ಟು ಶ್ರೀಯುತ ಶಾಸ್ತ್ರಿಗಳ ಮುಖ್ಯ ಉಪನ್ಯಾಸದ ಕಡೆಗೆ ಲಕ್ಷ್ಯ ಕೊಡೋಣ. ಶಾಸ್ತ್ರಿಗಳು ತಮ್ಮ ಪ್ರತಿಪಾದ್ಯ ವಿಷಯವನ್ನು ಹೆಚ್ಚು ಕಾರಣಯುಕ್ತವಾದ ರೀತಿಯಲ್ಲಿ ಪ್ರತಿಪಾದಿಸುವರೆಂಬ ಆಸೆಯು ಅನೇಕರಲ್ಲಿ ಸಕಾರಣವಾಗಿತ್ತು. ಆದರೆ ಅವರು ಮಹಾತ್ಮ ಗಾಂಧಿಗಳ ಯಾವುದೋ ಸಂಗತಿಗಳನ್ನು ಎತ್ತಿ, ಆ ಸಂಗತಿಗಳಿಗೆ ಬಣ್ಣ ಹಾಕಿ ಅವನ್ನು ಶ್ರೋತೃಗಳ ಮುಂದಿಡಲು ಯತ್ನಿಸಿದರು; ಗಾಂಧಿಗಳ ಮತದ ಚಿತ್ರವನ್ನು ವಿರೂಪವಾಗಿ ಬರೆದು ಜನರ ಮುಂದೆ ನಿಲ್ಲಿಸಿದರು. ಗಾಂಧಿಗಳಿಗೆ ಪಾಶ್ಚಾತ್ಯ ಸಂಸ್ಕೃತಿಯು ಬೇಡ, ಗಾಂಧಿಗಳು ರೈಲು, ಪೋಸ್ಟು, ಔಷಧ ಇತ್ಯಾದಿ ಉಪಯುಕ್ತ ಸಂಗತಿಗಳ ವಿರೋಧಿಗಳು; ಗಾಂಧಿಗಳ ಮತವು ಮಾನವ ಸಂಸ್ಕೃತಿಯನ್ನು ಹಾಳು ಮಾಡುತ್ತದೆ ಇತ್ಯಾದಿ ಅನೇಕ ಸಂಗತಿಗಳನ್ನು ಎತ್ತಿ ಶಾಸ್ತ್ರಿ ಮಹಾಶಯರು ಗಾಂಧಿಗಳನ್ನು ಉಪಹಾಸ ಮಾಡಿದರು. ಶಾಸ್ತ್ರಿಗಳ ಭಾಷಣವು ಮುಖ್ಯವಾಗಿ ಸರಕಾರದೊಡನೆ ನಾವು ಯಾಕೆ ಸಹಕಾರ್ಯವನ್ನು ಮಾಡಬೇಕಾದು ಈ ಪ್ರಶ್ನೆಯನ್ನು ಕುರಿತು ಇರಬೇಕಾದ್ದು. ಆದರೆ ದುರ್ದೈವದಿಂದ ಅವರು ತಮ್ಮ ಭಾಷಣದ ಓಘವನ್ನು ಬೇರೆ ಕಡೆಯಲ್ಲೆ ಕೊಂಡು ಹೋದರು. ಅಸಹಕಾರಿತೆಯು ಲೇಸಲ್ಲ. ಯಾಕೆ? ಇದಕ್ಕೆ ಸರಿಯಾದ ಉತ್ತರವಿದ್ದಿಲ್ಲ. ಕೋರ್ಟುಕಚೇರಿಗಳೂ, ಶಾಲಾ ಕೊಲೇಜುಗಳೂ ಇಲ್ಲದ್ದರಿಂದ ನಮ್ಮ ದೇಶದ ಶಾಂತತೆಯು ಕೆಟ್ಟು ಹೋದೀತು; ನಮ್ಮ ಮಕ್ಕಳು ವಿದ್ಯಾಶೂನ್ಯರಾದಾರು ಎಂದು ಪ್ರಾಗತಿಕ ಪಕ್ಷದವರಿಗೆ ಭಯವಿದೆ. ಆದರೆ ಗಾಂಧಿಗಳು ಕೋರ್ಟುಗಳೆ ಬೇಡವೆಂದು ಎಲ್ಲಿಯೂ ಹೇಳುವುದಿಲ್ಲ; ಹುಡುಗರಿಗೆ ವಿದ್ಯಾಭ್ಯಾಸವು ವಿಷವೆಂದು ಎಲ್ಲಿಯೂ ಪ್ರತಿಪಾದಿಸುವುದಿಲ್ಲ. ಅವರ ಮತವೇನೆಂದರೆ, ನಿಮ್ಮ ಕೋರ್ಟುಗಳು, ನಿಮ್ಮ ಶಾಲೆಗಳು ನಮಗೆ ಬೇಡ, ನಾವು ನಮ್ಮ ಸಂಸ್ಥೆಗಳನ್ನು ಸ್ಥಾಪಿಸೋಣ. ಎಂದ ಮೇಲೆ ಮಾನವ ಸಂಸ್ಕೃತಿಯ ಕಾಲನ್ನು ಕಡಿಯುವ ಪಾಪವು ಗಾಂಧಿಗಳ ತಲೆಯ

ನೀತಿ, ಹೇಗೆ ಒಪ್ಪುತ್ತದೆ? ಗಾಂಧಿಗಳ ಅಸಹಕಾರಿತೆಯಂತೆ ಯಾರೂ ನಡಕೊಳ್ಳುವುದಿಲ್ಲ. ಪಂಡಿತ ಮೋತಿಲಾಲ ನೆಹರು ಇವರೊಬ್ಬರಲ್ಲದೆ ಇನ್ನಾವ ಅನುಯಾಯಿಗಳೂ ಗಾಂಧಿಗಳಿಗೆ ದೊರಕಲಿಲ್ಲ. ಆ ನೆಹರುಗಳಲ್ಲದೆ ಇನ್ನೆಷ್ಟು ಜನರು ವಕೀಲಿಯನ್ನು ಬಿಟ್ಟಿದ್ದಾರೆ? ಸ್ವತಃ ಲಾಲಾಲಜಪತರಾಯರು ಕೂಡ ಗಾಂಧಿಗಳ ಅಸಹಕಾರಿತೆಯನ್ನು ಸಂಪೂರ್ಣವಾಗಿ ಒಪ್ಪಿಕೊಳ್ಳುವುದಿಲ್ಲ, ಇತ್ಯಾದಿ ಸಂಗತಿಗಳನ್ನು ಶಾಸ್ತ್ರಿಗಳು ತಮ್ಮ ಪ್ರಸಂಗದಲ್ಲಿ ನಿವೇದಿಸಿದರು. ಈ ವಿಷಯದಲ್ಲಿ ಇಂದೆರಡು ಸಂಗತಿಗಳನ್ನು ಹೇಳಬೇಕಾಗಿದೆ. ಈಗ ಹಿಂದುಸ್ಥಾನದಲ್ಲಿ ಪ್ರಸಾರ ಹೊಂದುತ್ತಿರುವ ಅಸಹಕಾರಿತೆಯು ರಾಷ್ಟ್ರೀಯ ಸಭೆಯ ಛತ್ರದ ಕೆಳಗೆ, ಅಲ್ಲದೆ ಒಬ್ಬ ಗಾಂಧಿಗಳ ಪ್ರಮುಖತ್ವದಲ್ಲಿ ಮಾತ್ರ ಅಲ್ಲ. ರಾಷ್ಟ್ರೀಯ ಸಭೆಯಾದರೂ ಕಲ್ಕತ್ತಾದಲ್ಲಿ ಮುಖ್ಯವಾಗಿ ಕೌನ್ಸಿಲ್ ಬಹಿಷ್ಕಾರದ ಸಂಗತಿಯನ್ನು ಕೈಕೊಳ್ಳಲು ಜನರನ್ನು ಉಪದೇಶಿಸಿದೆ. ಇದು ವಸ್ತುಸ್ಥಿತಿ. ಈ ವಸ್ತುಸ್ಥಿತಿಯನ್ನು ಪರ್ಯಾಲೋಚಿಸಿದರೆ ಶಾಸ್ತ್ರಿಗಳ ಮೇಲಿನ ಅಪ್ರಸಂಗಿಕ ಶಾಸ್ತ್ರಾರ್ಥಕ್ಕೆ ಅವಕಾಶವಿಲ್ಲವೆಂದು ಯಾರೂ ಹೇಳಬಹುದು. ವಕೀಲರು ಕೋರ್ಟುಗಳನ್ನೂ ಹುಡುಗರು ಶಾಲೆಗಳನ್ನೂ ಬಿಡಲು ರಾಷ್ಟ್ರೀಯ ಸಭೆಯು ಹೇಳುವುದಿಲ್ಲ. ಅರ್ಥಾತ್ ರಾಷ್ಟ್ರೀಯ ಸಭೆಯ ಅನುಯಾಯಿಗಳಲ್ಲಿ ಎಷ್ಟು ಜನರು ವಕೀಲಿಯನ್ನು ಬಿಟ್ಟರು ಎಂದು ಕೇಳುವುದು ಸಮಂಜಸವಲ್ಲ. ಈಗ ಅವರು ಇಂಥ ಸವಾಲನ್ನು ದಿಟ್ಟೆಯಾಗಿ ಕೇಳಿದ್ದರಿಂದ, ಇದಕ್ಕೆ ಉತ್ತರ ಕೊಡುವವರು ಕೆಲವು ವಕೀಲನ್ನಾದರೂ ತೋರಿಸಕೊಡಬಹುದು. ಈ ಸಂಗತಿಯು ಸ್ವತಃ ಶಾಸ್ತ್ರಿಗಳಿಗಾದರೂ ಗೊತ್ತಿಲ್ಲದ್ದಲ್ಲ. ಹೀಗಿರುವಲ್ಲಿ ಬರೆ ಮೋತಿಲಾಲ ನೆಹರು ಇವರೊಬ್ಬರ ಹೆಸರನ್ನು ಮಾತ್ರ ಅವರು ಎತ್ತಿ ಹೇಳುವುದು ಎಷ್ಟರ ಮಟ್ಟಿಗೆ ಸರಿಯಾದೀತು? ಸಾರಾಂಶ, ಶಾಸ್ತ್ರಿಗಳ ಭಾಷಣದಲ್ಲಿ ಮುಖ್ಯ ವಿಷಯಕ್ಕಿಂತ ಹೊರಗಿನ ವಿಷಯಗಳೇ ವಿಶೇಷವಾಗಿದ್ದವು.

೩. ಈ ದೋಷವನ್ನು ಅವರ ಭಾಷಣದ ಅಂತ್ಯದಲ್ಲಿ ಒಬ್ಬಿಬ್ಬರು ಅವರ ಕಣ್ಣಿಗೆ ತಂದು ಕೊಟ್ಟರು. 'ಸರಕಾರದೊಡನೆ ಸಹಕಾರ್ಯವನ್ನು ಮಾಡಬೇಕು, ನಿಜ, ಆದರೆ ಶಾಸ್ತ್ರಿಗಳೇ ಪಂಜಾಬ ಪ್ರಕರಣ, ಖಿಲಾಫತ್ತಿನ ಸಂಗತಿ ಇವು ದೊಡ್ಡ ತಪ್ಪುಗಳು ಇರುತ್ತ ಸಹಕಾರ್ಯವನ್ನು ಜನರು ಹೇಗೆ ಮಾಡ್ಯಾರು? ಪಂಜಾಬದ ವಿಷಯವಾಗಿ ನಿಮ್ಮ ಕೆಲವು ಠರಾವುಗಳಿಗೆ ಸರಕಾರವು ಎಡೆಕೊಡದಿಲ್ಲವಾದ ಬಳಿಕ ಸ್ವತಃ ನೀವೇ ಕೆಲವು ತಾಸು ಸರಕಾರದೊಡನೆ ಅಸಹಕಾರ್ಯವನ್ನು ಮಾಡಿರಲಿಲ್ಲವೆ? ಎಂದು ಶ್ರೀಯುತ ಶಾಸ್ತ್ರಿಗಳನ್ನು ಎಚ್ಚರಿಸಿದ ಮೇಲಾದರೂ ಶಾಸ್ತ್ರಿಗಳು ಆಕ್ಷೇಪಗಳಿಗೆ ಸಮರ್ಪಕ ಉತ್ತರವನ್ನು ಕೊಟ್ಟಾರೆಂದು ಭಾವಿಸೋಣಾಗಿತ್ತು. ಆದರೆ ಜನರ ಈ ನಿರೀಕ್ಷಣೆಯು ಕೂಡ ಫಲಕೊಡಲಿಲ್ಲ.

೪. ರುಶ್ಯದವರು ಹಿಂದು ದೇಶವನ್ನು ಆಕ್ರಮಿಸಿಕೊಳ್ಳುವ ಕಾಂಕ್ಷೆಯಿಂದ ಮಧ್ಯಆಸ್ಯದಲ್ಲಿ ಮುಖ್ಯವಾಗಿ ಪರ್ಸಿಯಾ ಅಫಘಾನಿಸ್ಥಾನಗಳಲ್ಲಿ ಒಳಸಂಚು ನಡಿಸುತ್ತಿದ್ದಾರೆಂಬ ನೆವದಿಂದ ವಿಕ್ಟೋರಿಯಾ ಚಕ್ರವರ್ತಿನಿಯವರ ಆಳಿಕೆಯಲ್ಲಿ ಬ್ರಿಟಿಷ ಮುತ್ಸದಿಗಳಿಗೆ ಒಂದು ಒಗೆಯು ದಿಗಿಲು ಇತ್ತು. ಅನಂತರ ೭ನೆ ಎಡ್ವರ್ಡ ಬಾದಶಹರ ಆಳಿಕೆಯಲ್ಲಿ ರುಶ್ಯ ಮತ್ತು ಬ್ರಿಟಿಷ ಸಾಮ್ರಾಜ್ಯಗಳೊಳಗೆ, ಜರ್ಮನಿಯ ಮೇಲಣ ದ್ವೇಶದಿಂದಲಾದರೂ ಒಮ್ಮತವಾಯಿತು. ಆಗ ಜರ್ಮನಿಯು ತುರ್ಕಿಯ ಸಹಾಯದಿಂದ ಏಷ್ಯಾಮಾಯ್ನರ ಪರ್ಸಿಯಾ ದಾರಿಯಾಗಿ ಹಿಂದುಸ್ಥಾನಕ್ಕೆ ಗುರಿ ಇಟ್ಟಿದೆ ಎಂಬದೇ ಬೆಲ್ಜಿಯಮದ ಉದ್ದಂಡತೆಗಿಂತಲೂ ಜರ್ಮನರನ್ನು ಮುರಿಯುವ ಕಾಂಕ್ಷೆಯಿಂದ ಮಿತ್ರಪಕ್ಷದವರನ್ನು ಒಂದುಗೂಡಿಸಿತು. ಆದರೆ ದೈವ ಪ್ರೇರಣೆಯಿಂದಲೋ ಎಂಬಂತೆ ಈ ಮಹಾ ಯುದ್ಧದಲ್ಲಿ ಮೊದಲು ಕೈ ಎತ್ತಿದ ರುಶ್ಯ ಸಾಮ್ರಾಜ್ಯವು ಝಾರನ ಕೊಲೆಯಲ್ಲಿ ತನ್ನ ಅಸುವನ್ನೂ ನೀಗಿತು. ಜೀವನದ ಕಾಂಕ್ಷೆ ಪೂರೈಸದೆ ಅಕಾಲ ಮೃತ್ಯುಹೊಂದಿದ ಈ ಸಾಮ್ರಾಜ್ಯದ ಈ ಬೋಲಶೆವಿಕ ರೂಪವಾದ ಬ್ರಹ್ಮರಾಕ್ಷಸವು ಈಗ ಹಿಂದುಸ್ಥಾನಕ್ಕೆ ಪದಾರ್ಪಣ ಮಾಡುವುದನ್ನು ಕಾದುಕೊಂಡಿದೆ, ಅಲ್ಲಲ್ಲಿ ಇದರ ದರ್ಶನವು ಪರ್ಸಿಯಾ ಅಫಘಾನಿಸ್ಥಾನಗಳ ಸರಹದ್ದುಗಳಲ್ಲಿ ಕಂಡು ಬರುತ್ತಿದೆ, ಕೂಗು ಕೇಳಿಸುತ್ತಿದೆ ಎಂದು ಪತ್ರಿಕೆಗಳು ಸಾರುತ್ತಿವೆ. ಲೋಕವನ್ನು ಸುಡಲಿಕ್ಕೆ ಇದ್ದ ಜರ್ಮನ ದಾಳಿಯನ್ನು ಅಡಗಿಸಲು ಹೆಚ್ಚಿನ ಸಾಹಸವು ಬ್ರಿಟಿಷರದ್ದೆ ಇದೆ. ಹೀಗಾಗಿ ಲೀಗ್ ಒಫ್ ನೇಶನ್ಸ್ ಕೌನ್ಸಿಲನಲ್ಲಿ ಪ್ರಥಮ ವೀಳ್ಯವು ಬ್ರಿಟಿಷರಿಗೆ ಸಲ್ಲತಕ್ಕದಿದೆ ಎಂತಲೂ ಗೊತ್ತಾಗುತ್ತಿದೆ. ಇನ್ನು ಸಾಮರ್ಥ್ಯವುಳ್ಳ ಈ ಜನಾಂಗವು ಈ ಬ್ರಹ್ಮರಾಕ್ಷಸದ ಕೂಗಿಗೆ ಬೆದರಿ ಅಲ್ಲಲ್ಲಿ ತಡೆ, ಅಲ್ಲಲ್ಲಿ ಸ್ತಂಭನ ಮಾಡುವ ಉದ್ದೇಶದಿಂದಲೇ ಮಧ್ಯ ಆಸ್ಯದಲ್ಲಿ ಸೈನ್ಯವನ್ನು ಇಟ್ಟಬೇಕಾಗಿದೆ ಎಂದು ಬ್ರಿಟಿಷ ಮುತ್ಸದಿಗಳು ಹೇಳುತ್ತಲೆ ಇದ್ದಾರೆ. ಅಂದರೆ ಹಿಂದುಸ್ಥಾನಕ್ಕೆ ಈ ಬ್ರಹ್ಮರಾಕ್ಷಸವು ಹಿಡಿದೀತು ಎಂಬ ಹಿಂದು ಶಂಕೆಯೂ ಹಿಂದುಸ್ಥಾನದ ಶ್ರೇಯೋಚಿಂತನೆಯೂ ಈ ಸಾಹಸಕ್ಕೆ ಬ್ರಿಟಿಷ ಜನಾಂಗವನ್ನು (ಮುಂದೆ ನೂಕುತ್ತಿವೆ ಎಂಬ ಅರ್ಥವಾಗುತ್ತಿದೆ. ಆದರೆ ಲಂಡನ್ ಟೈಮ್ಸ್ ಪತ್ರಕಾರನು "ಈ ರೀತಿ ಸಿಕ್ಕಿದ ಸ್ಥಳದಲ್ಲಿ ಬಲಿ ಕೊಟ್ಟು ಈ ಬ್ರಹ್ಮರಾಕ್ಷಸನನ್ನು ತಡೆ ಕಟ್ಟಲು ನಮ್ಮಿಂದ ಸಾಧ್ಯವಿಲ್ಲ. ಈ ಖರ್ಚು ನಮ್ಮಿಂದ ಪೂರೈಸದು, ಮೆಸೊಪೊಟೇಮಿಯಾವನ್ನು ನಾವು ಬಿಟ್ಟು ಹಿಂತೆರಳೋಣ" ಎಂದು ಪದೇ ಪದೇ ಎಚ್ಚರಿಸುತ್ತಿದ್ದಾನೆ. ಶ್ರೀಮಂತ ಆಗಾಖಾನರು (ಇವರು ಬ್ರಿಟಿಷ ಮುತ್ಸದಿಗಳ ವಿಶ್ವಾಸಕ್ಕೆ ಸಂಪೂರ್ಣ ಪಾತ್ರರಾದವರು) ಪ್ರಕಟಿಸಿದ ಲೇಖನಗಳಲ್ಲಿ "ಅರಬ್ಬಿಯರು ತಮ್ಮ ವಹಿವಾಟುಗಳನ್ನು ತಾವೇ ನೋಡಿಕೊಳ್ಳಲಿ, ಅವರ ಗೋಜನ್ನು ಬಿಟ್ಟು ಹಿಂತೆರಳಿರಿ" ಎಂದು ಬ್ರಿಟಿಷರಿಗೆ ಎಚ್ಚರಿಸುತ್ತಿದ್ದಾರೆ. ಮಧ್ಯ ಆಸ್ಯದ ಸ್ಥಿತಿಗತಿಯು ಅನುಭವವು ಶ್ರೀಮಂತ ಆಗಾಖಾನರಿಗೆ ಸಾಕಷ್ಟು ಇದೆ. ಬೋಲಶೆವಿಕ ಬ್ರಹ್ಮರಾಕ್ಷಸನ ಬಾಧೆಯು ಈ ಮಧ್ಯ ಆಸ್ಯದ ಸುಧಾರಿತರಲ್ಲದ ಜನಾಂಗಗಳಿಗೆ ಇಲ್ಲವಾದರೆ ಬ್ರಿಟಿಷ ಛತ್ರದೊಳಗೆ ಆಶ್ರಯಿಸಿರುವ ಹಿಂದುಸ್ಥಾನಕ್ಕಾದರೂ ಯಾತಕ್ಕೆ ಇರಬೇಕು ಎಂಬದು ನಮ್ಮ ಬುದ್ಧಿಗೆ ಇನ್ನೂ ಹೊಳೆಯುವುದಿಲ್ಲ. ವೈಸ್ರಾಯರನ ಮತ್ತು ಶ್ರೀಮಂತ ಖಾನರ ವಿಚಾರಸರಣಿಯನ್ನು ಸ್ವಲ್ಪ ಕೆದಕಿ ನೋಡಿದರೆ ಬ್ರಹ್ಮರಾಕ್ಷಸನ ಉಚ್ಚಾಟನೆ ಬೇಕು, ಅವನನ್ನು ಬುರುಡೆಯೊಳಗೆ ತುಂಬಲಿಕ್ಕೆ ಅವನನ್ನು ಭೂಸ್ಥಾಪನೆ ಮಾಡಲಿಕ್ಕೆ ಹೇರಳ ಖರ್ಚು ಇದೆ ಎಂದು ಕೃತಕ ಮಂತ್ರವಾದಿಯು ಚಿನ್ನದ ತಗಡು, ಹವಳದ ಭಸ್ಮ, ರತ್ನದ ಕರಡಿಗೆ ಎಂದು ಒಂದೊಂದೇ ಹೇಳಿ ಎಲ್ಲವನ್ನೂ ತನ್ನ ರುಮಾಲಿನೊಳಗೆ ತೂರಿಸಿಕೊಳ್ಳುವ ಕಾರ್ಯಕ್ರಮವು ಬ್ರಿಟಿಷ ಮುತ್ಸದಿಗಳು ಅನುಸರಿಸುತ್ತಾರೆಯೋ ಎಂದು ಶಂಕೆಯು ಹುಟ್ಟದೆ ಇರಲಾರದು. ಮಿ। ವಿನ್‌ಸ್ಟನ್ ಚರ್ಚಿಲ್ ಇವರು ಅಲ್ಲಲ್ಲಿ ಕೊಡುತ್ತಿದ್ದ ಭಾಷಣದಲ್ಲಿಯೂ ಲೋರ್ಡ ಕರ್ಝನರು ಏಶ್ಯನ್ ಸೊಸೈಟಿಯಲ್ಲಿ ಈಚೆಗೆ ಮಾಡಿದ ಭಾಷಣದಲ್ಲಿಯೂ ಈ ಶಂಕೆಗೆ ಇನ್ನೂ ಪುಟವಿಟ್ಟಂತಾಗುತ್ತಿದೆ.

೫. ಓಲ್ ಇಂಡಿಯಾ ಗೌಡಸಾರಸ್ವತ ಬ್ರಾಹ್ಮಣ ಸಭಾ—ಈ ಸಂಸ್ಥೆಯ ಉದ್ದೇಶ ಇತ್ಯಾದಿಯನ್ನು ಈ ಸಂಚಿಕೆಯ ಇನ್ನೊಂದು ಕಡೆಯಲ್ಲಿ ಪ್ರಕಟಿಸಿರುತ್ತೇವೆ. ಸಭೆಯ ಪರವಾಗಿ ಉತ್ತರ ದಕ್ಷಿಣ ಕನ್ನಡ ಜಿಲ್ಲೆಗಳ ಮತ್ತು ಮಲಬಾರು ಜಿಲ್ಲೆಯ ಮುಖ್ಯ ಪಟ್ಟಣಗಳನ್ನು ಸಂದರ್ಶಿಸಿ ಆಯಾ ಪ್ರಾಂತ್ಯಗಳಲ್ಲಿರುವ ಸಾರಸ್ವತ ಸಮಾಜದ ಸಹೋದರರಲ್ಲಿ ಸಭೆಯ ಪರಿಚಿತಿಯನ್ನುಂಟುಮಾಡಿ ಮೆಂಬರರನ್ನು ಸಂಗ್ರಹಿಸಲು ರಾ। ಆರ್. ಕೆ. ಗೋಳಿಕೆರೆಯವರು ಇಲ್ಲಿಗೆ ಬಂದಿರುವರು. ಕಳೆದ ಆದಿತ್ಯವಾರ ಕೆನರಾ ಹ್ಯಾಸ್ಕೂಲಿನ ಸಭಾ ಮಂದಿರದಲ್ಲಿ ಕೂಡಿದ ಇಲ್ಲಿಯ ಗೌಡಸಾರಸ್ವತ ಬ್ರಾಹ್ಮಣ ಗೃಹಸ್ಥರ ಸಭೆಗೆ ಗೋಳಿಕೆರೆಯವರು ತಮ್ಮ ಸಭಾ ಚಟುವಟಿಕೆಯನ್ನು ವಿವರಿಸಿ ಹೇಳಿದರು. ಒಂದೇ ಸಮಾಜದಿಂದ ಹಲವು ಕಾರಣಗಳಿಂದ ಭಿನ್ನವಾಗಿ ಹೋದಂಥಾ ಗೌಡಸಾರಸ್ವತ ಬ್ರಾಹ್ಮಣರ ಶಾಖೆಗಳಲ್ಲಿರುವ ಅಜ್ಞಾನವೂ ಈ ಮೂಲಕ ವ್ಯಾಪಿಸಿರುವ ತಪ್ಪು ತಿಳುವಳಿಕೆ, ಕ್ಲೇಶ ಇವುಗಳನ್ನು ಹೋಗಗೊಳಿಸಬೇಕು. ಯಾವ ಉಪಶಾಖೆಗಳಲ್ಲಾದರೂ ಇರುವ ಒಡವರ್ಗದವರಿಗೆ ಅದರಲ್ಲಿಯೂ ಬಡವಿದ್ಯಾರ್ಥಿಗಳಿಗೆ ವಿದ್ಯಾರ್ಜನೆ ಪ್ರಯತ್ನದಲ್ಲಿ ತುಂಬಾ ಸಹಾಯವನ್ನು ಮಾಡಬೇಕು. ಉದ್ಯೋಗ ವೃತ್ತಿ ಇತ್ಯಾದಿಗಳನ್ನು ಕಲ್ಪಿಸಿಕೊಡುವ ಸಾಂಪತ್ತಿಕ ಅಭಿವೃದ್ಧಿಯ ಪ್ರಯತ್ನಗಳಲ್ಲಿ ಏಕಮನಸ್ಸಿನಿಂದ ಸಭೆಯ ಕಡೆಯಿಂದ ಸಾಧನೆಯು ಬೇಕಾಗಿದೆ. ಈ ಸಾಧನಾ ಮಾರ್ಗಗಳನ್ನು ಕುರಿತು ಗೌಡಸಾರಸ್ವತ ಬ್ರಾಹ್ಮಣರ ಪ್ರಮುಖ ಗೃಹಸ್ಥರು ಇದ್ದಲ್ಲಿಗೆ ಹೋಗಿ ಗೋಳಿಕೆರೆಯವರು ತಮ್ಮ ಸಂಸ್ಥೆಯ ಉದ್ದೇಶಗಳನ್ನು ಸಾರುತ್ತಿದ್ದಾರೆ. ಸಾರಸ್ವತ ಬ್ರಾಹ್ಮಣರಲ್ಲಿ ಇಬ್ಬರು ಸ್ತ್ರೀಭಗಿನಿಯವರು ಇಲ್ಲಿಂದ ಸಭೆಯ ಮೆಂಬರರಾಗಿ ಕೂಡಿದ್ದಲ್ಲದೆ, ಹಲವು ಗೌಡಸಾರಸ್ವತ ಬ್ರಾಹ್ಮಣ ಸಾಹುಕಾರರೂ, ವಕೀಲರೂ ಸಹ ಮೆಂಬರರಾಗಿ ಸೇರಿರುವರು. ಇವರೆಲ್ಲರ ಹೆಸರುಗಳು ಸಭೆಯ ಕಡೆಯಿಂದ ಅಚ್ಚಾಗುವ ತ್ರೈಮಾಸಿಕ ಪತ್ರಿಕೆಯಲ್ಲಿ ಪ್ರಕಟಿಸಲ್ಪಡುವವು. ನಮ್ಮ ಜಿಲ್ಲೆಯಿಂದ ಈ ಸಂಸ್ಥೆಯ ಆಜೀವ ಸಭಾಸದರಾಗಿ ರಾ। ಮಂಜೇಶ್ವರ ಸಾಹುಕಾರ ಸರ್ಸಯ್ಯ ಶ್ಯಾನ-ಭಾಗರೊಬ್ಬರೇ ಇದ್ದರು. ರಾ। ಸಾಹುಕಾರ ತ್ರಾಸಿ ಅನಂತಯ್ಯನವರು ರೂ. ೧೦೦ನ್ನು ಕೊಟ್ಟು ಆಜೀವ ಸಭಾಸದರಾದರೆಂಬದನ್ನು ತಿಳಿಸಲು ತುಂಬಾ ಸಂತೋಷ ಪಡುತ್ತೇವೆ. ಇನ್ನೂ ನಾಲ್ಕಾರು ಮಂದಿ ಈ ಕಡೆಯಿಂದ ರಾ। ತ್ರಾಸಿ ಅನಂತಯ್ಯನವರ ಉದಾತ್ತ ಉದಾಹರಣೆಯನ್ನು ಅಂಗೀಕರಿಸುವರಾಗಿ ನಂಬಿಕೆ ಇದೆ. ಇಷ್ಟೇ ಅಲ್ಲ, ಸಭೆಯ ಉದ್ದೇಶಕ್ಕೆ ಸರಿಯಾಗಿ ಬಡವಿದ್ಯಾರ್ಥಿಗಳಿಗೆ ಸಹಾಯವನ್ನು ಸಂಗ್ರಹಿಸುವ ಕೆಲಸವನ್ನು ಕೂಡಲೆ ಗೋಳಿಕೆರೆಯವರು ಕೈಕೊಂಡಿರುವರು. ಇಲ್ಲಿಯ ಗೌಡಸಾರಸ್ವತ ಬ್ರಾಹ್ಮಣ ಒಡ ವಿದ್ಯಾರ್ಥಿ ಸಹಾಯಕ ಫಂಡಿಗೆ ಇವರು ರೂ. ೧೦ನ್ನೂ ಮ। ತ್ರಾಸಿ ಅನಂತಯ್ಯನವರು ರೂ. ೨೫ನ್ನೂ ಕೊಟ್ಟಿರುತ್ತಾರೆ. ಈ ಫಂಡಿನ ಕಡೆಯಿಂದ ಈ ಧನಸಹಾಯವನ್ನು ಕೊಟ್ಟ ಗ್ರಹಸ್ಥರುಗಳಿಗೆ ನಮ್ಮ ಕೃತಜ್ಞತೆಯನ್ನು ಸೂಚಿಸಿರುವೆವಲ್ಲದೆ ಈ ಧನ ಸಹಾಯದ ಮೂಲಕ ವ್ಯಕ್ತಗೊಳಿಸಿರುವ ಯಥಾರ್ಥ ಭ್ರಾತೃಭಾವನೆಯು ಮತ್ತಷ್ಟು ಪುಷ್ಟಿಗೊಳ್ಳಲೆಂದು ಕೋರುತ್ತೇವೆ. ಗೋಳಿಕೆರೆಯವರು ಬಂಟವಾಳ ಅತ್ತಕಡೆ ಹೋಗಿ ಬಂದು ಪ್ರಕೃತ ಮಂಜೇಶ್ವರಕ್ಕೆ ಹೋಗಿರುತ್ತಾರೆ. ಇನ್ನು ನಾಲ್ಕೈದು ದಿವಸಗಳ ಪರಿಯಂತ ಇವರು ಇಲ್ಲಿ ಇರುವಂತಾಗಿ ತಿಳಿಯುತ್ತೇವೆ. ಕನಡಾ ಜಿಲ್ಲೆಗಳು ಸಾರಸ್ವತ ಗೌಡ ಸಾರಸ್ವತ ಬ್ರಾಹ್ಮಣರು ತುಂಬಾ ಇರುವ ಪ್ರಾಂತ್ಯಗಳು. ಈ ಪ್ರಾಂತ್ಯಗಳಿಂದ ಸಭೆಯ ಸದುದ್ದೇಶಗಳನ್ನು ನೆರವೇರಿಸುವುದರಲ್ಲಿ ಪೂರ್ಣ ಸಹಾಯವು ದೊರಕುವುದೆಂಬುದಾಗಿ ನಂಬುತ್ತೇವೆ.

ಮಂಗಳೂರು.

ಈ ತಿಂಗಳ ಸೆಶ್ಶನಿನಲ್ಲಿ ಮಂಗಳೂರ ಸ್ಪೆಶನರಿ ಮೆಜಿಸ್ಟ್ರೇಟರಿಂದ ಕಮ್ಮಿಟ್ ಆದ ಇನ್ನಳ್ಳಿಯ ಖೂನಿಮೊಕದ್ದಮೆಯ ವಿಚಾರವು ೧ನೆ ತಾರೀಕಿಗೆ ಪ್ರಾರಂಭವಾಯಿತು. ಜುಲೈ ೪ನೆ ತಾರೀಕಿಗೆ ಆಲಿಬ್ಯಾರಿ ಎಂಬವನೊಬ್ಬನು ತನ್ನ ಗತವರ್ಷದ ಗೇಣಿ ಬರಲಿಲ್ಲವಾದ್ದರಿಂದ ಗದ್ದೆಯಿಂದ ನೇಜಿ ತೆಗೆಯಬಾರದೆಂದು ಕೂಲಿಯಾಳುಗಳಿಗೆ ಗದರಿಸಿದಾಗ ಗೇಣಿವಕ್ಕು ಅಯ್ಯ ಪೂಜಾರಿ ಮತ್ತು ಪೂವಣಿ ಎಂಬವರಿಗೂ ಆಲಿಬ್ಯಾರಿಗೂ ಜಗಳ ನಡೆದು ಇವರು ಆಲಿಬ್ಯಾರಿಯನ್ನು ಹೊಡೆದದ್ದರಿಂದ ಆ ಪೆಟ್ಟಿನಿಂದ ಆತನು ೬ನೆ ತಾರೀಕಿಗೆ ಆಸ್ಪತ್ರೆಯಲ್ಲಿ ಮೃತವಾದನೆಂದು ಖೂನಿಯ ಆಪಾದಿತರಾದವರ ಪೈಕಿ ೧ನೆಯವನಿಗೆ ೧ವರ್ಷದ ಕಠಿಣ ಸಜೆಯಾಯಿತು. ಎರಡನೆಯವನು ತಪ್ಪುಗಾರನಲ್ಲವೆಂದು ಖುಲಾಸು ಮಾಡಲ್ಪಟ್ಟನು.

ಇದೇ ತಿಂಗಳ ೩೦ನೆ ತಾರೀಕಿಗೆ ಲೆಜಿಸ್ಲೇಟಿವ್ ಕೌನ್ಸಿಲ್ ಚುನಾವಣೆ ನಿಮಿತ್ತ ಎಲ್ಲಾ ಸರಕಾರಿ ಆಫೀಸುಗಳಿಗೆ ರಜೆ ಇರುವುದು. ಆದರೆ ವ್ಯಾಪಾರ ಚಲಾವಣೆಗೋಸ್ಕರ ತೆರದಿಡಬೇಕಾದ ಸರಕಾರಿ ಆಫೀಸುಗಳಿಗೆ ಮಾತ್ರ ಆ ದಿವಸವು ರಜಾದಿನವಲ್ಲ.

ಬಹುಮಾನ ಪಟ್ಟ ವಿ. ಎಸ್. ಶ್ರೀನಿವಾಸ ಶಾಸ್ತ್ರಿಗಳು ತಾ. ೧೨ನೆ ಸಾಯಂಕಾಲದ ೩ ಘಂಟೆಯ ಲೋಕಲ್ ಟ್ರೈನಿಗೆ ಇಲ್ಲಿಗೆ ಬಂದು ತಲ್ಪಿದರು. ಇವರನ್ನು ಎದುರ್ಗೊಳ್ಳಲು ರೈಲ್ವೆ ಸ್ಟೇಶನಿನಲ್ಲಿ ಮ। ರಾ। ರಾ। ಹೈಕೋರ್ಟ ವಕೀಲ ಅಮ್ಮೆಂಬಳ ಶ್ರೀನಿವಾಸ ಪೈಗಳು, ಮ। ರಾ। ರಾ। ಹೈಕೋರ್ಟ ವಕೀಲ ಯು. ಸಿ. ಕೃಷ್ಣ ಭಟ್ಟರು, ಮ। ರಾ। ರಾ। ಅತ್ತಾವರ ಬಾಲಕೃಷ್ಣ ಶೆಟ್ಟಿ, ಮ। ರಾ। ರಾ। ಎಮ್. ಎಸ್. ಮಾಧವ ರಾಯರು, ಮ। ರಾ। ರಾ। ಸಾಲೆತ್ತೂರು ಅಮೃತರಾಯರು, ಮಹಮ್ಮದ್ ಪುತ್ತೂರು ಸಾಹೇಬ ಬಹದ್ದೂರರವರು ಮತ್ತು ರಾ। ವಿ. ಎಸ್. ಕಾಮತರವರು ಹೊರತು ಯಾರೂ ಇರಲಿಲ್ಲ. ಕಸ್ಮೊಪೊಲಿಟನ್ ಕ್ಲಬ್ಬಿನ ವಠಾರದಲ್ಲಿ ಇದೇ ದಿನ ಸಾಯಂಕಾಲ ೫-೪೫ಕ್ಕೆ ಭಾಷಣವಿತ್ತೆಂತ ಪ್ರಕಟಣೆಯಿತ್ತು. ಆದರೆ ಮಳೆಯ ಕಾರಣ ಕೂಡಿದ ಸಭೆಯು ಗವರ್ನಮೆಂಟ ಕೊಲೇಜಿನ ಸಭಾಮಂದಿರಕ್ಕೆ ಹೋಗಿ ಭಾಷಣವು ಅಲ್ಲಿ ನಡೆಯಿತು. ಭಾಷಣಕಾಲದಲ್ಲಿ ಸಭೆಯ ಅಧ್ಯಕ್ಷಸ್ಥಾನವನ್ನು ಮ। ರಾ। ರಾ। ಸುಜೀರ ರಘುನಾಥಯ್ಯನವರು ವಹಿಸಿಕೊಂಡಿದ್ದರು. ಸಭೆಯಲ್ಲಿ ಅಗತ್ಯವಿಲ್ಲದ ಕೈಚಪ್ಪಾಳೆಗಳ ಗದ್ದಲ ಮುಂತಾದ ಅಭ್ಯಂತರಗಳು ಬಹಳವಾಗಿದ್ದವು. ಶಾಸ್ತ್ರಿಗಳವರ ಭಾಷಣವನ್ನು ಕೇಳಿಕೊಂಡು ಸಭೆಯಲ್ಲಿ ಹಾಜರಿದ್ದ ಮ। ರಾ। ರಾ। ಮುಕುಂದ ಚಡ್ಡ ಬಾಳಿಗ ಮೊದಲಾದ ಒಬ್ಬಿಬ್ಬ ಗೃಹಸ್ಥರು ಶಾಸ್ತ್ರಿಗಳ ಕೂಡೆ ಕೆಲವು ಪ್ರಶ್ನೆಗಳನ್ನು ಕೇಳಿದರು. ಈ ಪ್ರಶ್ನೆಗಳ ಉತ್ತರಗಳನ್ನು ಸ್ವಲ್ಪವಾಗಿ ಆ ರಾತ್ರೆಯಲ್ಲಿಯೇ ಸೂಚಿಸಿ ಮರುದಿನ ಇಲ್ಲಿಯ ಬಂಟರ ಯಾನೆ ನಾಡವರ ಶ್ರೀ ರಾಮಕೃಷ್ಣ ವಿದ್ಯಾರ್ಥಿಭವನದಲ್ಲಿ ಸಾಯಂಕಾಲ ಕೂಡಿದ ಸಭೆಯ ಮುಂದೆ ವಿವರವಾಗಿ ಹೇಳಿದರು.

ಬಹುಮಾನಪಟ್ಟ ಶಾಸ್ತ್ರಿಗಳವರು ಕೌನ್ಸಿಲ್ ಒಫ್ ಸ್ಟೇಟ್ ಮೆಂಬರುತನಕ್ಕೆ ಉಮೇದ್ವಾರರಾಗಿರುವರು. ಇವರನ್ನು ಚುನಾಯಿಸುವ ವೋಟರರುಗಳು ಈ ಪಟ್ಟಣದಲ್ಲಿರುವವರನ್ನು ಶಾಸ್ತ್ರಿಗಳು ನೋಡಿಹೋಗಿರುತ್ತಾರೆ.

ಮ। ರಾ। ರಾ। ಕರ್ನಾಡ ಸದಾಶಿವರಾಯರು ವೋಟುಗಳನ್ನು ನ್ಯಾಯವಿಧಾಯಕ ಸಭೆಗಳಿಗೆ ಉಮೇದ್ವಾರರಾದವರಿಗೆ ವೋಟರರು ಕೊಡದಂತೆ ಬೋಧಿಸುವ ಕಾರ್ಯದಲ್ಲಿ ಉಡುಪಿ ಕಾರ್ಕಳ ತಾಲೂಕುಗಳನ್ನು ಸಂಚರಿಸಿ ೧೮ನೆ ತಾರೀಕಿಗೆ ಮುಗಿಸಿದರು. ಮಂಗಳೂರು ಮತ್ತು ಕಾಸರಗೋಡು ತಾಲೂಕಿನ ಅಧಿಕಾಂಶವನ್ನು ಸಂಚರಿಸಿ ಈ ಮೊದಲೇ ಆಗಿದೆ. ತ್ರಿಕರ್ಪುರ ಮತ್ತು ಹೊಸದುರ್ಗ ಈ ಊರುಗಳನ್ನು ೨೨ನೆ ತಾರೀಕಿಗೆ ಸಂದರ್ಶಿಸಲಿಕ್ಕಿರುವರು. ೨೧ನೆ ತಾರೀಕಿಗೆ ಮಂಗಳೂರ ವೋಟರರ ಒಂದು ಸಭೆಯು ಶ್ರೀಯುತ ಪುರುಷೋತ್ತಮ ಸೇಟರ ವರ್ತಕವಿಲಾಸದಲ್ಲಿ ಸಾಯಂಕಾಲ ೫-೩೦ಕ್ಕೆ ಜರಗುವುದು. ೨೩ನೇ ತಾರೀಕಿಗೆ ರಾ। ಸದಾಶಿವರಾಯರು ಉಪ್ಪಿನಂಗಡಿ ತಾಲೂಕಿಗೆ ಹೋಗುವರು.

ಕಳೆದ ಸಂಚಿಕೆಯಲ್ಲಿ ಗವರ್ನಮೆಂಟ ಸ್ಕೂಲ್‌ಡೇ ಟೂರ್ನನ್ನು ರಾ। ಅಡಿಗೆ ಶ್ರೀನಿವಾಸ ರಾಯರು ಸೂಚಿಸುವರು ಎಂಬಲ್ಲಿ ಮ। ರಾ। ಅಡಿಗೆ ಪದ್ಮನಾಭಯ್ಯನವರು ಸೂಚಿಸುವರೆಂದು ತಿದ್ದಿಕೊಳ್ಳಬೇಕಾಗಿದೆ.

ಜಿಲ್ಲಾ ಕಲೆಕ್ಟರರ ಸರ್ಕೀಟು—ತಾ. ೧೯ ಮುಲ್ಕಿ, ೨೦ರಿಂದ ೨೩ ಉಡುಪಿ, ೨೪ರಿಂದ ೨೭ ಕುಂದಾಪುರ, ೨೮ ಮತ್ತು ೩೦ ಬ್ರಹ್ಮಾವರ, ಡಿಸೆಂಬರ ತಾ. ೧ ಮತ್ತು ೨ ಪಡುಬಿದ್ರಿ.

ಮ. ರಾ. ರಾ। ಕೆ. ಪಿ. ಲಕ್ಷ್ಮಣರಾಯರು ಲೋ ಕೊಲೇಜಿನ ಪ್ರೊಫೆಸ್ಸರರಾಗಿ ನೇಮಕಪಟ್ಟಿದ್ದಾರೆ.

ಈ ವರುಷದ ಜೂನಿಯರ್ ಜಿಮ್ನೆಸ್ಟಿಕ್ ಸ್ಪರ್ಧೆಯಲ್ಲಿ ಉಡುಪಿಯ ಕ್ರಿಶ್ಚಿಯನ್ ಹ್ಯಾಸ್ಕೂಲೂ ನಿನ್ನೆ ಜರಗಿದ ಜೂನಿಯರ್ ಎತ್ಲೆಟಿಕ್ ಸ್ಪೋರ್ಟ್ಸಿನಲ್ಲಿ ಸೆಂಟ್ ಅಲೋಸಿಯಸ್ ಕೊಲೇಜಿನವರೂ ಗೆದ್ದರು.

ಮ। ರಾ। ಎಲ್ಲೂರು ಸಂಜೀವರಾಯರ ಮಂಗಳೂರ ತಾಲೂಕು ಬೋರ್ಡ ಮೆಂಬರಿಕೆಯ ಚುನಾವಣೆಯು ಸರಕಾರದ ಮಂಜೂರಾತಿ ಹೊಂದಿದೆ.

ಈ ದಿನ ಸಾಯಂಕಾಲ ಕೆನರಾ ಹ್ಯಾಸ್ಕೂಲಿನಲ್ಲಿ ನಡಿಯಲಿಕ್ಕಿರುವ ಅಮ್ಮೆಂಬಳ ಸುಬ್ರಾಯ ಪೈಗಳ ಸ್ಮಾರಕ ದಿನದ ಉತ್ಸವವು ಶಾಲೆಯ ಕೆಲವು ಕಡೆಗಳಲ್ಲಿ ಪ್ಲೇಗು ಇಲಿಗಳು ಬಿದ್ದುದ್ದರಿಂದ ಮುಂದರಿಸಿಡಲಾಗಿದೆ.

ಮದ್ರಾಸು ವಿಧಾಯಕ ಸಭೆಗೆ ಮೆಂಬರರ ಚುನಾವಣೆ.

ಮ। ರಾ। ಕೆ. ಸದಾಶಿವ ಭಟ್ಟರು, ದಿವಾನ ಬಹದೂರ ರಾಮಯ್ಯ ಪೂಂಜರು, ಮ। ರಾ। ಬಿ. ಮಹಾಬಲ ಹೆಗ್ಡೆಯರು ಉಮೇದ್ವಾರರಾಗಿರುವರು. ಮ। ರಾ। ಕಡೆಕಾರು ರಾಜಗೋಪಾಲ ಕೃಷ್ಣರಾಯರು ದೇಹಾಲಸ್ಯದ ಸಂಬಂಧ ತಮ್ಮ ಉಮೇದ್ವಾರಿಕೆಯನ್ನು ಹಿಂದೆಗೆದಿದ್ದಾರಾಗಿ ತಿಳಿಯುತ್ತೇವೆ. ಮಹಮ್ಮದಿಯರ ಪರವಾಗಿ ಈ ಸಭೆಗೆ ಮ। ಅಬ್ದುಲ್ ಖಾಸಿಂ ಬ್ಯಾರಿ ಸಾಹೇಬ ಬಹದೂರರು ಮಾತ್ರ ಉಮೇದ್ವಾರರಾಗಿದ್ದಾರೆ.

[illegible] ಮಾಡುವರು.

[illegible]

[illegible] ದಾಯಿನಿ ಶಾಲೆಯಲ್ಲಿ ಮುಲ್ಕಿ ರಂಜನ ಸುಬ್ರಾಯ ಆಚಾರರ ಅಧ್ಯಕ್ಷತೆಯಲ್ಲಿ ಜರಗಿತು. ಪ್ರಾರಂಭದಲ್ಲಿ ಕಾರ್ಯದರ್ಶಿ, ಉಪಕಾರ್ಯದರ್ಶಿಯರ ನೇಮಕವಾಗಿ ಸಂಘದ, ಸಂಘಾಭ್ಯುದಯಕರಗಳಾದ ನಿಬಂಧನೆಗಳನ್ನು ಓದಿ, ಮೊದಲು ನಡೆಯುವಂತೆ ಸಂಘದ ಪ್ರತಿಯೊಂದು ಶಾಲೆಗಳಲ್ಲಿಯೂ ಸರತಿ ಪ್ರಕಾರ ಜರಗಿಸುತ್ತಿರುವುದೂ, ಸಂಘದ ಹೆಡ್ ಕ್ವಾರ್ಟರ್, ಸೊಟಿಂನ ಪ್ರಾಮುಖ್ಯತೆ ಹೊರಾದ ಈ [illegible] ಲ್ಲಿರುವ 'ವಿದ್ಯಾದಾಯಿನಿ' ಶಾಲೆಯೇ ಆಗಿರುವುದೂ ಇವೇ ಮೊದಲಾದ ಉಪಯುಕ್ತ ಸೂಚನೆಗಳು ಸರ್ವಾನುಮತಿಯಿಂದ ನಿರ್ಣಯವಾಯಿತು. ಅನಂತರ ಅಧ್ಯಕ್ಷರ ಅಪೇಕ್ಷೆಯಂತೆ ಸದರಿ ವಿದ್ಯಾದಾಯಿನಿ ಶಾಲಾಧ್ಯಾಪಕರಾದ ರಾ॥ ಎಸ್. ಸುಬ್ಬರಾವ್ ಇವರು ಸಂಘ ರಚನಾಕ್ರಮ, ಸಂಘದ ಅಧ್ಯಕ್ಷತೆ, ಸಂಘೋದ್ದೇಶ ಮುಂತಾದ ಪ್ರಾಮುಖ್ಯ ವಿಷಯಗಳನ್ನೆತ್ತಿ ಸರಸವಾಗಿ ಭಾಷಣಮಾಡಿದರು. ಮುಂದಿನ ಸಭೆಯು ಡಿಸೆಂಬರ ತಿಂಗಳ ತಾ. ೧೮ರಲು ಇದೇ ಶಾಲೆಯಲ್ಲಿ ಮೂವರ ಹೊಸ ಉಪನ್ಯಾಸಗಳೊಂದಿಗೆ ನಡೆಯತಕ್ಕದೆಂದು ನಿರ್ಧಾರವಾಗಿ ಉಚಿತೋಪಚಾರಗಳಿಂದ ಸಭೆಯು ಕೊನೆಗೊಂಡಿತು.

ದಕ್ಷಿಣ ಕನ್ನಡಾ ಸೆಂಟ್ರಲ್ ಕೋ-ಒಪರೇಟಿವ್ ಬೇಂಕ್

ಪ್ರಕಟಣೆ.

ಉಪನ್ಯಾಸಗಳಿಗೆ ಬಹುಮಾನ ಕೊಡೋಣ.

ಸಹಕಾರಿ ಸಂಘಗಳ ಆಡಳಿತ ವ್ಯವಸ್ಥೆಗೆ ಸಂಬಂಧಿಸಿದ ಹಲವು ವಿಷಯಗಳು ಸ್ಪಷ್ಟವಾಗಿ ತಿಳಿಯದೆ, ಅನೇಕರಲ್ಲಿ ನಾನಾ ತರದ ದುರಭಿಪ್ರಾಯಗಳು ಹುಟ್ಟಿ, ಒಂದು ಬಗೆಯ ಅಸಮಾಧಾನವು ವ್ಯಕ್ತವಾಗಿರುವುದು ಇತ್ತೀಚೆಗೆ ಕಂಡುಬಂದಿದೆ. ಇದು ಸಹಕಾರಿ ಚಳವಳಿಯ ಏಳ್ಗೆಗೆ ಹಿತಕರವಲ್ಲದುದರಿಂದ, ಅದರ ಪರಿಹಾರಾರ್ಥವಾಗಿ, ಎಲ್ಲ ವಿಷಯಗಳು, ಎಲ್ಲರ ತಿಳುವಳಿಕೆಗೆ ಮುಂದಬ್ಬಾಗುವಂತೆ ಉಪನ್ಯಾಸಗಳನ್ನು ಬರೆದು ಪ್ರಕಟಿಸುವ ಹಾಗೆ ತಕ್ಕ ಕ್ರಮಗಳನ್ನು ಏರ್ಪಡಿಸಿ, ಇಷ್ಟಪಟ್ಟವರು ಉಪನ್ಯಾಸಗಳನ್ನು ಕಳುಹಿಸಿದ್ದಲ್ಲಿ ಅವುಗಳಲ್ಲಿ ಅತ್ಯುತ್ತಮವೆಂದು ನಿರ್ಣಯವಾದ ಉಪನ್ಯಾಸಗಳನ್ನು ಬರೆದವರಿಗೆ ಬಹುಮಾನಗಳನ್ನು ಕೊಡಬೇಕೆಂದು ಪುತ್ತೂರಿನಲ್ಲಿ ೨-೧೦-೨೦ ವ ೩-೧೦-೨೦ನೇ ದಿವಸಗಳಲ್ಲಿ ಕೂಡಿದ ಕಾರ್ಯಕಾರಿ ಪರಿಷತ್ತಿನಲ್ಲಿ ಠರಾವಾದ್ದನ್ನು ಅನುಸರಿಸಿ, ಈ ಬೇಂಕಿನ ಆಡಳಿತ ಮಂಡಳಿಯ ಸಭೆಯಲ್ಲಿಯೂ ನಿರ್ಣಯಿಸಿಯದೆ. ಅದಕ್ಕೋಸ್ಕರ ಈ ಕೆಳಗಿನ ಕ್ರಮಗಳನ್ನು ಏರ್ಪಡಿಸಿಯದೆ.

೧. ಉಪನ್ಯಾಸಗಳನ್ನು ಈ ಕೆಳಗೆ ಸೂಚಿಸಿದ ವಿಷಯಗಳೊಳಗೆ ಯಾವುದೊಂದು ವಿಷಯದ ಮೇಲೆಯೂ ಬರೆದು ಕಳುಹಿಸಬಹುದು. ಒಬ್ಬನೇ ಲೇಖಕನು ಎರಡೂ ವಿಷಯಗಳ ಮೇಲೆಯೂ ಉಪನ್ಯಾಸಗಳನ್ನು ಬರೆದು ಕಳುಹಿಸಬಹುದು. ವಿಷಯಗಳು ಯಾವುವೆಂದರೆ. —

(೧) ಮೂಲ ಸಂಘಗಳಲ್ಲಿ ಸಂಗ್ರಹವಾಗುವ ಪಾಲು ಬಂಡವಾಳವನ್ನು ಪೂರಾ ಸೆಂಟ್ರಲ್ ಬೇಂಕಿನಲ್ಲಿ ಪಾಲುಗಳನ್ನು ಪಡಕೊಳ್ಳುವುದಕ್ಕೋಸ್ಕರವೇ ಏಕೆ ವಿನಿಯೋಗಿಸಬೇಕು ?

(೨) ಮೂಲ ಸಂಘಗಳಿಗೆ ಸೆಂಟ್ರಲ್ ಬೇಂಕಿನಿಂದ ಸಾಲಕೊಡುವಾಗ ಯಾವ ವಾಯಿದೆಗಳನ್ನು ನಿಶ್ಚಯಿಸಿಯದೆಯೋ ಆ ವಾಯಿದೆಗಳನ್ನು ಪುನಃ ಮುಂದರಿಸಲಿಕ್ಕೆ ಕೇಳಿಕೊಳ್ಳದೆ, ಆಯಾ ವಾಯಿದೆಗಳಿಗೆ ಸರಿಯಾಗಿ ಸದರಿ ಸಾಲಗಳನ್ನು ಮೂಲ ಸಂಘಗಳು ಏಕೆ ತಪ್ಪದೆ ಸಂದಾಯ ಮಾಡಬೇಕು ?

೨. ಉಪನ್ಯಾಸಗಳನ್ನು ಕನ್ನಡ ಭಾಷೆಯಲ್ಲೀ ಬರೆಯಬೇಕು.

೩. ಉಪನ್ಯಾಸಗಳನ್ನು ಸಂವಾದರೂಪ ನಾಟಕರೂಪ, ಕಥಾರೂಪ, ಪದ್ಯರೂಪ, ಪ್ರಬಂಧರೂಪ, ಮೊದಲಾದ ಯಾವ ರೂಪದಲ್ಲಿಯಾದರೂ ಬರೆಯಬಹುದು

೪. ಉಪನ್ಯಾಸಗಳನ್ನು ಬರೆದವರು ದಕ್ಷಿಣ ಕನ್ನಡಾ ಜಿಲ್ಲೆಯೊಳಗಣ ಯಾವುದೊಂದು ಸಹಕಾರಿ ಸಂಘದ ಮೆಂಬರರಾಗಿರಬೇಕು. ಯಾವ ಸಂಘದ ಮೆಂಬರರಾಗಿರುವರೋ ಆ ಸಂಘದ ಅಧ್ಯಕ್ಷ ಯಾ ಕಾರ್ಯದರ್ಶಿಯವರಿಂದ ಬರೆದವರು ಮೆಂಬರರಾಗಿರುತ್ತಾರೆಂಬ ವಿಷಯವಲ್ಲ ಒಂದು ದೃಢಪತ್ರಿಕೆಯನ್ನು ಸಹಕಾರಿ ಸಂಘದ ಮೊಹರು ಸಹಿತ ಉಪನ್ಯಾಸದೊಂದಿಗೆ ಕಳುಹಿಸಬೇಕು. ಇಲ್ಲದಿದ್ದರೆ ಉಪನ್ಯಾಸಗಳನ್ನು ಪ್ರಥಮ ದೃಷ್ಟಿಯಿಂದಲೇ ತಿರಸ್ಕರಿಸಲಾದೀತು.

೫. ಉಪನ್ಯಾಸಗಳನ್ನು ಈ ಕೆಳಗೆ ಸಹಿಮಾಡಿದವರಿಗೆ ತಾ. ೧೫-೧೨-'೨೦ ರೊಳಗೆ ಮುಟ್ಟುವಂತೆ ಕಳುಹಿಸಬೇಕು. ಸಮಯಕ್ಕೆ ಬಾರದವುಗಳನ್ನು ತಿರಸ್ಕರಿಸಲಾದೀತು.

೬. ಬರೆದು ಬಂದ ಉಪನ್ಯಾಸಗಳಲ್ಲಿ ಅತ್ಯುತ್ತಮವಾದ ಉಪನ್ಯಾಸಗಳು ಯಾವುವೆಂದು ಇತ್ಯರ್ಥಿಸುವ ಅಧಿಕಾರವು ಸಂಪೂರ್ಣವಾಗಿ ಈ ಬೇಂಕಿನ ಆಡಳಿತ ಮಂಡಲಿಗೆ ಒಪ್ಪಿದ್ದಾಗಿರುತ್ತದೆ. ಆಡಳಿತ ಮಂಡಳಿಯ ಇತ್ಯರ್ಥವನ್ನು ಆಕ್ಷೇಪಿಸುವುದಕ್ಕೆ ಯಾರಿಗೂ ಅಧಿಕಾರವಿರುವುದಿಲ್ಲ.

೭. ಮೇಲೆ ಕಾಣಿಸಿದ (೧)ನೇ ವಿಷಯದ ಮೇಲೆ ಬರೆದು ಬಂದ ಉಪನ್ಯಾಸಗಳೊಳಗೆ ಅತ್ಯುತ್ತಮವೆಂದು ಇತ್ಯರ್ಥಿಸಲ್ಪಟ್ಟ ಉಪನ್ಯಾಸಕ್ಕೆ ರೂ. ೧೫ರ ಮೊದಲನೇ ಬಹುಮಾನ ಕೊಡಲಾದೀತು, ಮತ್ತು ಉಳಿದವುಗಳೊಳಗೆ ಅತ್ಯುತ್ತಮವಾದುದಕ್ಕೆ ರೂ. ೮ರ ಎರಡನೇ ಬಹುಮಾನ ಕೊಡಲಾದೀತು. ಹಾಗೆಯೇ, ೨ನೇ ವಿಷಯದ ಮೇಲೆ ಬರೆದು ಬಂದ ಉಪನ್ಯಾಸಗಳೊಳಗೂ ಅತ್ಯುತ್ತಮವಾಗಿರುವುದಕ್ಕೆ ರೂ. ೧೫ರ ಮೊದಲನೇ ಬಹುಮಾನವನ್ನೂ, ಉಳಿದವುಗಳೊಳಗೆ ಅತ್ಯುತ್ತಮವಾದುದಕ್ಕೆ ರೂ. ೮ರ ಎರಡನೇ ಬಹುಮಾನವನ್ನೂ ಕೊಡಲಾದೀತು.

೮. ಉಪನ್ಯಾಸಗಳೊಳಗೆ ಯಾವುದೊಂದು ಉಪನ್ಯಾಸವು ಬಹುಮಾನವನ್ನು ಪಡೆಯುವುದಕ್ಕೆ ತಕ್ಕಷ್ಟು ಅರ್ಹವಲ್ಲವೆಂದು ಆಡಳಿತೆ ಮಂಡಳಿಯ ಅಭಿಪ್ರಾಯವಾದರೆ, ಯಾವುದೊಂದಕ್ಕೂ ಬಹುಮಾನವನ್ನು ಕೊಡದೆ ಇರುವುದಕ್ಕೂ ಆಡಳಿತೆ ಮಂಡಳಿಗೆ ಪೂರ್ಣ ಅಧಿಕಾರವಿರುತ್ತದೆ.

೯. ಈ ಏರ್ಪಾಡಿನ ಫಲಿತಾಂಶವನ್ನು ಇದೇ ಬರುವ ದಕ್ಷಿಣ ಕನ್ನಡಾ ಜಿಲ್ಲೆಯ ಎರಡನೇ ಸಹಕಾರಿ ಪರಿಷತ್ತಿನ ವೇಳ್ಯ ಪ್ರಕಟಿಸಲಾದೀತು, ಮತ್ತು ಬಹುಮಾನಗಳನ್ನು ಕೊಡುವುದಾದರೆ, ಅವುಗಳನ್ನು ಸಹ ಸದರಿ ಪರಿಷತ್ತಿನ ವೇಳ್ಯ ಹಂಚಲಾದೀತು.

[illegible]

೧೧. ಬಹುಮಾನ [illegible] ಉಪನ್ಯಾಸಗಳನ್ನು ಬರೆದವರು [illegible] ಸ್ಪವರುವ, ಅಂದ [illegible] ಮುಂದಾಗಿ ಕಳುಹಿಸಿದ್ದಲ್ಲಿ ಅವರಿಗೆ ವಾಪಸು [illegible] ಸಲಾದೀತು. ಆದರೆ ಅವುಗಳನ್ನು ಸುರಕ್ಷಿತವಾಗಿ ಸಂಬಂಧಪಟ್ಟವರಿಗೆ ತಪ್ಪದೆ ಮುಟ್ಟಿಸುವ ವಿಷಯದಲ್ಲಿ ಯಾವುದೊಂದು ತರದ ಜವಾಬ್ದಾರಿ ವಹಿಸಿಕೊಳ್ಳುವುದಕ್ಕೆ ಸಾಧ್ಯವಿಲ್ಲ.

ಈ ಏರ್ಪಾಡನ್ನು [illegible] ಪತ್ರವ್ಯವಹಾರ [illegible] ಮಾಡಿದವರೊಂದಿಗೆ ನಡೆಸಬೇಕಾಗಿದೆ.

ಪಿಮ್. ಅನಂತರಾವ್,
ಕಾರ್ಯದರ್ಶಿ.

ಪುತ್ತೂರು ಸೆಕೆಂಡರಿ ಶಾಲೆಯ ದೀಪಾವಳಿ ಫಂಡು.

1919ನೆ ಒಕ್ಟೋಬರದಿಂದ 1920ರ ಒಕ್ಟೋಬರ ವರೆಗಿನ ವರದಿ.

ಪುತ್ತೂರು ವಿದ್ಯಾವರ್ಧಕ ಸಂಘದವರು ಸದರಿ ಪುತ್ತೂರು ಸೆಕೆಂಡರಿ ಶಾಲೆಯ ಕಟ್ಟೋಣ ಸಾಹಿತ್ಯ, ಕಟ್ಟೋಣ ಮತ್ತು ಆಟದ ಬಯಲಿನ ಬಗ್ಗೆ ಸ್ಥಳ ಮುಂತಾದದನ್ನು ತೀರಾ ಉದಾರ ಗೃಹಸ್ಥರ ವಂತಿಗೆಯ ಆಶ್ರಯದಿಂದ ಒದಗಿಸಿಕೊಂಡದ್ದಲ್ಲದೆ ಬಡ ವಿದ್ಯಾರ್ಥಿಗಳಿಗೆ ವೇತನಗಳ ಬಗ್ಗೆ ಸದಾ ತುಂಬಾ ಪ್ರೀಚಾಡುತಿದ್ದಾರೆಂಬುದು ಈ ಕೆಳಗಿನ ಗೋಶ್ವಾರೆಯಿಂದ ಗೊತ್ತಾಗುವುದು. ಸೆಕೆಂಡರಿ ವಿದ್ಯಾಭ್ಯಾಸವು ಸಾಕಷ್ಟು ಖರ್ಚಿನದಾಗಿದ್ದು ಮಾಹೆಯಾನಾ ೫೦ ಯಾ ೬೦ ರೂಪಾಯಿ ತಳಲು ಸಿಕ್ಕುವವರಿಗೂ ತಮ್ಮ ಮಕ್ಕಳಿಗೆ ಸ್ಕೂಲುಫೀಸು ತೆತ್ತು ಬರುವುದಕ್ಕೆ ಬಲು ಕಷ್ಟವಾಗುತ್ತಾ ಬಂದಿದೆ. ಹೀಗಾದ್ದರಿಂದ ಫೀಸು ಮಾಫಿ ಅರ್ಜಿಗಳು ಬರುತ್ತಾ ಇದ್ದುದನ್ನು ಕಂಡು ಈ ಸಂಘದ ಆಡಳಿತ ಸಭೆಯವರು ದೀಪಾವಳಿ ಕಾಲದಲ್ಲಿ ಪೂರ್ವಸಾಂಪ್ರದಾಯಕ್ಕೆ ಅನುಸಾರವಾಗಿ ಶಾಲಾ ಮಕ್ಕಳನ್ನು ಕರೆದುಕೊಂಡು ಗೃಹಸ್ಥರ ಮನೆಮನೆಗಳನ್ನು ಸಂಚರಿಸಿ, ಪದಗಳನ್ನು ಹಾಡಿಸಿ, ಹಣಕಾಸು ಸಂಗ್ರಹಿಸಲು ೧೯೧೬ನೆ ವರ್ಷದಿಂದ ತೊಡಗಿದರು. ಜನಗಳ ಪ್ರೋತ್ಸಾಹವು ಇದಕ್ಕೆ ಹೆಚ್ಚುತ್ತಾ ಬಂದಿದೆ ಎಂಬದಕ್ಕೆ ೧೯೧೭ರಲ್ಲು ರೂ. ೨೦೩, ೧೯೧೮ರಲ್ಲಿ ೨೦೬-೮-೦, ೧೯೧೮ರಲ್ಲಿ ೨೦೭-೮-೦, ೧೯೧೯ರಲ್ಲಿ ೬೬೫-೮-೯, ಈ ರೀತಿಯಾಗಿ ಫಂಡಿಗೆ ಕೂಡಿಸೋಣಾದ್ದೆ ನಿದರ್ಶನವಾಗಿದೆ. ವೇತನದ ಅರ್ಜಿಗಳಿಗೆ ಸಾಕಷ್ಟು ಹಣ ಸಹಾಯವಿಲ್ಲದ್ದರಿಂದ ಶಾಲಾ ಫಂಡಿನಿಂದ ಈ ದೀಪಾವಳಿ ಫಂಡಿಗೆ ತಾತ್ಕಾಲಿಕವಾಗಿ ೯೬೩-೬-೧೦ ಸಾಲ ಕೊಡಬೇಕಾಯಿತು. ವಿದ್ಯಾರ್ಥಿಗಳ ಬಡ ಸ್ಥಿತಿಯಲ್ಲಿ ಪ್ರಾಥಮಿಕ ಶಿಕ್ಷಣ ಮಾತ್ರವಲ್ಲ, ಸೆಕೆಂಡರಿ ವಿದ್ಯಾಭ್ಯಾಸ ಕೂಡಾ ಮಾಫಿಯಾಗಿ ಕೊಡಿಸಬೇಕಾಗಿ ಬಂದಿದೆ. ಮೈಸೂರು ಸಂಸ್ಥಾನದಲ್ಲಿ ಈ ಎಲ್ಲಾ ಬಗೆಯ ಶಿಕ್ಷಣವು ಮಾಫಿಯಿಂದಲೇ ನಡೆಯುತ್ತಿದೆ. ಇಂಥಾ ಪ್ರಸ್ತೋದಯವು ನಮಗೆ ಯಾವಾಗ ಬಂದೀತೆಂದು ಗೊತ್ತು ಹಚ್ಚಲಾರೆವು. ಅದ್ದರಿಂದ ಧರ್ಮಬುದ್ಧಿಯುಳ್ಳ ಸದ್ಗೃಹಸ್ಥರಿಗೆ ಇಂಥ ಸಂದರ್ಭದಲ್ಲಿ ತಮ್ಮ ತ್ಯಾಗದ ಬಲ್ಮೆಯನ್ನು ತೋರಿಸಲಿಕ್ಕೆ ಇದೇ ತಕ್ಕ ಕಾಲವೆಂದು ನಾವು ಒತ್ತಿಹೇಳುತ್ತೇವೆ. ಆ ಆಡಳಿತೆಯ ಸಭೆಯವರ ಈ ಆದರ್ಶವನ್ನು ಅಲ್ಲಲ್ಲಿ ಸಂಕ್ಷೇಪರೀತಿಯಿಂದ ಒಂದೆರಡು ಸ್ಥಳಗಳಲ್ಲಿ ಅನುಸರಿಸುತಿದ್ದಾರೆ. ಆದರೂ ಈ ಕ್ರಮವು ಜಿಲ್ಲೆಯ ಸಂದುಗೊಂದುಗಳಲ್ಲಿಯೂ ಜಾರಿಗೆ ಬಂದು ಶಿಕ್ಷಣ ಮಾರ್ಗವು ಸುಗಮವಾಗಿ ವಿದ್ಯಾಪ್ರಚಾರದ ಕೆಲಸವು ಸಾಗಾಲೋಟದಿಂದ ಓಡುವ ದಿನಗಳು ಬರಲಿ ಎಂದು ಶ್ರೀಭಗವಂತನಿಗೆ ಮೊರೆ ಇಡುವೆವು.

ಈ ಫಂಡಿನಿಂದ ಪ್ರಯೋಜನ ಹೊಂದಿದ ಹುಡುಗರ ಸಂಖ್ಯೆ ಮತ್ತು ಅವರಿಗೆ ಸಂದ ಮೊಬಲಗು ತೋರಿಸುವ ಪಟ್ಟಿ.

ಇದೇ ಒಕ್ಟೋಬರ ವರೆಗೆ ಮಾತ್ರ ಸಂದದ್ದು

ವರ್ಷ	ಹುಡುಗರ ಸಂಖ್ಯೆ	ಸಂದ ಮೊಬಲಗು
1916	4	26—0—0
1917	49	174—0—0
1918	8[illegible]	375—0—0
1919	[illegible]	291—0—0
1920	[illegible]	181—4—0

ಆಯ ವ್ಯಯ ಪಟ್ಟಿ.

ಆಯ.

	ರೂ.	ಆ.	ಪೈ.
೧೯೧೮ರಿಂದ ೧೯೨೦ ಒಕ್ಟೋಬರ ಅಖೈರ್ ವರೆಗಿನ ಉತ್ಪತ್ತಿ	1301	[illegible]	9
ಎರಡು ಠೇವಣಾತಿಯಿಂದ ದೊರೆತ ಬಡ್ಡಿ	87	11	5
ಶಾಲೆಯ ಫಂಡಿನಿಂದ ಪಡೆದ ಸಾಲ	959	8	7
ಜುಮ್ಲಾ	2348	12	9

ವ್ಯಯ.

	ರೂ.	ಆ.	ಪೈ.
ವೇತನಗಳಿಗೆ ಕೊಟ್ಟ ಹಣ	1047	4	0
ಶಾಲೆಯ ಫಂಡಿಗೆ ವಾಪತಿ ಮಾಡಿದ ಹಣ	407	0	9
ರಶೀದಿಗಳ ಛಾಪಾ ಖರ್ಚು	16	12	0
ಕೂಲಿಗಳು	3	12	0
ಬೇಂಕಿನಲ್ಲಿರುವ ಹಣ	8[illegible]	0	0
ಜುಮ್ಲಾ	2348	12	9

ಪುತ್ತೂರು ವಿದ್ಯಾವರ್ಧಕ ಸಂಘದ ಆಡಳಿತ ಸಭೆಯವರ ಅಪ್ಪಣೆ ಪ್ರಕಾರ ಕಾರ್ಯದರ್ಶಿಗಳಾದ ಮ॥ ರಾ॥ ಸಪ್ಪೂರ ಶಿವರಾಯರಿಂದ ಕಳುಹಿಸಲ್ಪಟ್ಟ ಮೇಲಿನ ಪಟ್ಟಿಗಳಿಂದ ಈ ಕಮ್ಮಿಟಿಯವರ ಸಾಹಸದ ಫಲಿತಾಂಶವು ವ್ಯಕ್ತವಾಗುವುದು.

ಮೂಡಬಿದ್ರೆ ಶ್ರೀ ಗೋಪಾಲಕೃಷ್ಣ ದೇವಸ್ಥಾನದ ಸಹಾಯಕ ಫಂಡ್.

ಈ ಸಂಘದ ಫಂಡಿಗೆ ಕಳೆದ ಒಕ್ಟೋಬರ ತಿಂಗಳಲ್ಲಿ ಸದಸ್ಯರಾಗಿ ಸೇರಿದವರ ಹೆಸರುಗಳು, ವ. ಅವರು ವಾಗ್ದಾನ ಮಾಡಿದ ಶೀರ್ಷ ಯಾನೆ ವಂತಿಗೆ ಮೊಬಲಗು ಮ॥ ರಾ॥ ಗಳಾದ ಕಾರ್ಕಳ ವಕೀಲರು ಸಾಂತಯ ಕಾಮತರು, ಪಟೇಲ ಚಂದಯ ಕಂಬಳಿಯರು ರೂಪಾಯಿ ೧೦೦ರಂತೆಯೂ ಅಬ್ದುಲ್‌ರೈಮಾನ ಸಾಹೆಬರು ರೂ. ೧೫ ಹಟ್ಟಂಗಡಿ ನರಸಿಂಗರಾಯರು, ನಂದಾವರ ವೆಂಕಟ್ರಮಣ ಭಟ್ಟರು, ಮೂಡಬಿದ್ರೆ ಪೊನ್ನಚಾರ, ರಾಮಕಿಣಿಯರು, ಗಣಪತಿ ಪೈಗಳು, ನಾಗರಕಟ್ಟೆ ನಾರಾಯಣ ಮಲ್ಯರು, ಪಟ್ಟೇಲ ಸರ್ವೋತ್ತಮ ಮಲ್ಯರು, ಕೇಶವ ಪ್ರಾನಭಾಗರು, ನಾಗಪ್ಪ ಸೆರೆಗಾರರು, ಪುಂದರ್ಕೆ ನಾರಾಯಣ ಸೆಟ್ರು, ಕೆ. ಕೃಷ್ಣಭಟ್ಟರು, ಮುಕುಂದ ಕಮ್ತಿಯರು, ಮೊನಪ್ಪ ಪೈಗಳು, ಬಿ. ಕೃಷ್ಣಯ್ಯ, ಭೋಜಿ ಅಟ್ಟಿ, ಅಮೀರ ಸಾಹೆಬರು, ಚಂದ್ರರಾಜಯರು, ಪುವಳ ವೆಂಕಪ್ಪಯ್ಯನವರು,

[illegible] ಸೇನಾರರು, ಶಾಂತಪ್ಪನವರು, ರೂ. ೫ ರಂತೆಯೂ ಆಗಿರುತ್ತದೆ. [illegible] ಯಿಂದ [illegible] ರ್ ವರೆಗೆ ಸದಸ್ಯರಿಂದ ವಾಗ್ದಾನ ರೂ. [illegible]
[illegible] ಒಕ್ಟೋಬರ ತಿಂಗಳಲ್ಲಿ ರೂ. ೧೧೦—೦—
[illegible] ಬರ ತಿಂಗಳಾಖೈರ್ ವರೆಗೆ ವಸೂಲಿ [illegible] —೦—

ಪತ್ರವ್ಯವಹಾರ.

ದಕ್ಷಿಣ ಕನ್ನಡಾ ಜಿಲ್ಲೆಯ ವೋಟರರಿಗೆ ವಿನಯ ಪೂರ್ವಕವಾದ ವಿನಂತಿ.

ಮಹನೀಯರೇ,

[illegible] ನಮ್ಮ ಹಿಂದುಸ್ಥಾನದಲ್ಲಿ [illegible] ಕಾರದ ಚಳವಳಿ ನಡೆಯುತ್ತಲಿದೆ ಎಂದು ನಮಗೆ ಗೊತ್ತುಂಟಷ್ಟೆ. ನಾ[illegible] ಬ್ರಿಟಿಷ ಸರಕಾರದ ಕಡೆಗೆ ನಿಸ್ಸಹಕಾರದ ಭಾವ ತೋರಿಸ ಬೇಕೇ ಅಥವಾ ಸಹಕಾರ [illegible] ಬೇಕೋ ಎಂಬ ವಿಷಯದಲ್ಲಿ ಕೆಲವು ಭಿನ್ನ ಅಭಿಪ್ರಾಯವಿದ್ದರೂ ಪ್ರತಿ ಒಬ್ಬ ವ್ಯಕ್ತಿಯು ತನ್ನಷ್ಟಕ್ಕೆ ಆಲೋಚಿಸಿ ಈ ಚಳವಳಿದ ಮರ್ಮವೇನೆಂದು ತಿಳಕೊಳ್ಳಲಿಕ್ಕೆ ಅಧಿಕಾರಿಯಾಗಿದ್ದಾನೆ. ಬ್ರಿಟಿಷರಿಂದ ಹಿಂದುಸ್ಥಾನಕ್ಕೆ ಲಭಿಸುವ ಪ್ರಯೋಜನಗಳು ಅನೇಕವುಂಟೆಂದು ಮನಃಪೂರ್ವಕವಾಗಿ ತಿಳಿದು ಇಪ್ಪತ್ತೈದು ವರ್ಷಗಳ ತನಕ ಅತ್ಯಾತು ಅಸ್ವಾರ್ಥ ಭಾವದಿಂದ ಅವರೊಡನೆ ಕೂಡಿ ಕೆಲಸ ಮಾಡಿದ ಮಹಾತ್ಮಾ ಗಾಂಧಿಯವರು ಈಗ ಮಾತ್ರ ಸರಕಾರದ ಮೇಲೆ ತಿರಸ್ಕಾರವಂತ ಯಾಕೆ ಹೇಳ ಬೇಕೆಂದು ಸರಕಾರದ ಸಂಗಡ ಪೂರ್ಣ ನಿಸ್ಸಹಕಾರ ಮಾಡಿದರೆ ಮಾತ್ರ ನಮ್ಮ ಧ್ಯೇಯವನ್ನು ಸಾಧಿಸಿಕೊಳ್ಳಬಹುದೆಂತ ಹೇಳುವವರು ಸಹ ಖಾಸಗಿಯಲ್ಲಾದರೂ ಈಚೆಗೆ ಆಲೋಚಿಸಲಿಕ್ಕೆ ತೊಡಗಿದ್ದಾರೆ. ಇದರ ಮಧ್ಯದಲ್ಲಿ ಹೊಸ ನ್ಯಾಯವಿಧಾಯಕ ಸಭೆಗಳಿಗೆ ಮೆಂಬರರಾಗಿ ಹೋಗಬೇಕೆಂದು ಮುಂದರಿಸಿ ಬಂದ ಉಮೇದ್ವಾರರ ಏಜಂಟರು ಎಲ್ಲಾ ಕಡೆಗಳಿಗೆ ಹೋಗಿ ವೋಟರರ ವೋಟುಗಳನ್ನು ಪಡಕೊಳ್ಳುವರೆ ಪ್ರಯತ್ನಿಸುತ್ತಾರೆ. ಈಗ ಹೊಸ ನ್ಯಾಯವಿಧಾಯಕ ಸಭೆಗಳಿಗೆ ಪ್ರತಿನಿಧಿಗಳಾಗಿ ಹೋಗಬೇಕೆಂತ ಇಚ್ಛಿಸುವವರೂ ಮತ್ತು ಗಾಂಧಿಯವರ ಅಸಹಕಾರಿತೆಯ ತತ್ವವನ್ನು ಜನರು ಜಾರಿಗೆ ತಂದರೆ ಅವರಿಗೆ ಅನೇಕ ಸಂಕಷ್ಟಗಳು ಬಂದೊದಗುವವೆಂತ ಸಾರುವಂಥವರೂ ಎರಡು ವಿಷಯಗಳಲ್ಲಿ ಗಾಂಧಿಯವರ ಅಭಿಪ್ರಾಯವನ್ನು ಅನುಮೋದಿಸಿ ಬಲಪಡಿಸುತ್ತಾರೆ. ಸರಕಾರದ ಕಡೆಯಿಂದ ಪಂಜಾಬಿನಲ್ಲಿ ಪಡೆದ ಅನ್ಯಾಯದಿಂದ ಮತ್ತು ಮುಸಲ್ಮಾನರಿಗೆ ಖಿಲಾಫತ್ತಿನ ಸಂಬಂಧ ಆದ ಅನ್ಯಾಯದಿಂದ ಪ್ರಾಪ್ತವಾದ ನಮ್ಮ ಮನಸ್ಸಿನ ನೋವನ್ನು ಸರಕಾರದವರು ನಿವಾರಿಸದ ವಿನಾ ಹಿಂದುಸ್ಥಾನದಲ್ಲಿ ಸಮಾಧಾನ ಸಂತುಷ್ಟಿ ಬರಲಿಕ್ಕಿಲ್ಲವೆಂತ ಎಲ್ಲಾ ಪಕ್ಷದವರೂ ಒಪ್ಪುತ್ತಾರೆ. ನಿಜವಾಗಿ ಎಲ್ಲಾ ಪಕ್ಷದವರೂ ಒಂದೇ ರೀತಿಯಲ್ಲಿ ಈ ವಿಷಯಗಳ ಮಟ್ಟಿಗೆ ಅಭಿಪ್ರಾಯ ಪಡುತ್ತಾರೆಂತ ವ್ಯಕ್ತ ಪಡಿಸಬೇಕಾದರೆ ಹಿಂದುಸ್ಥಾನದ ಪರವಾಗಿ ವೋಟುಗಳ ಮೂಲಕ ತಮ್ಮ ಅಭಿಪ್ರಾಯಗಳನ್ನು ಕೊಡುವುದಕ್ಕೆ ಅರ್ಹರೆಂದು ಸರಕಾರದವರೇ ಮೊಹರು ಮಾಡಿದ ವೋಟರರ ಕರ್ತವ್ಯವೇನು?

ಹೊಸ ಕೌನ್ಸಿಲುಗಳಿಗೆ ಹೋದ ಪ್ರತಿನಿಧಿಗಳಿಗೆ ಇಂಥಾ ಅನ್ಯಾಯಗಳು ಇನ್ನು ಮುಂದೆ ನಡೆಯದ ಹಾಗೆ ಮಾಡಲಿಕ್ಕಾಗುತ್ತದೋ? ಇಲ್ಲ. ಬಲಹೀನರಾದ ಜನಾಂಗದವರನ್ನು ತಮ್ಮ ಕೈ ಅಧೀನ ಮಾಡಿಕೊಳ್ಳುವುದರಲ್ಲಿ ಬ್ರಿಟಿಷರು ಹಿಂದುಸ್ಥಾನದ ಜನರ ಸ್ವಸ್ಯದ ಸಹಾಯವನ್ನು ತೆಗೆದುಕೊಳ್ಳಬಾರದೆಂತ ಅವರಿಗೆ ನ್ಯಾಯವಿಧಾಯಕ ಸಭೆಗಳಲ್ಲಿ ಒತ್ತಾಯ ಪಡಿಸಲಿಕ್ಕೆ ಹಕ್ಕುಂಟೋ? ಇಲ್ಲ.

ಹಿಂದುಸ್ಥಾನದ ಕಡೆಯಿಂದ ಪ್ರತಿನಿಧಿಗಳೆನ್ನಿಸಿಕೊಂಡು ಈ ಸಭೆಗಳಿಗೆ ಹೋಗುವವರು ನಮ್ಮ ಜನರು ಕೊಡುವ ತೆರಿಗೆಯನ್ನು ಇತರ ಜನಾಂಗದವರ ರಾಜ್ಯಗಳನ್ನು ತಮ್ಮ ಅಧೀನವಾಗಿ ಮಾಡಿಕೊಳ್ಳಲಿಕ್ಕೆ ದಂಡೆತ್ತಿಕೊಂಡು ಹೋಗುವುದರಲ್ಲಿ ವೆಚ್ಚ ಮಾಡಬಾರದೆಂದು ಕೈ ತಡಿಯಲಿಕ್ಕಾಗುವುದೋ? ಕೂಡದು.

ನಮ್ಮ ಪರವಾಗಿ ಹೋಗುವ ಪ್ರತಿನಿಧಿಗಳು ಬಹುಪಕ್ಷಕ್ಕೆ ಸರಿಯಾಗಿ, ಜನರ ಇಚ್ಛೆಗಳಿಗೆ ಅನುಸಾರವಾಗಿ ರಾಜ್ಯಭಾರವನ್ನು ನಡಿಸುವುದಕ್ಕೋಸ್ಕರ ನಮಗೆ ಸ್ವರಾಜ್ಯ ಸಿಕ್ಕುವ ಹಾಗೆ ಹೆಚ್ಚಿಗೆ ಹಕ್ಕುಗಳನ್ನು ಕೊಡಬೇಕೆಂದು ಹೇಳಬಹುದೋ? ಕೂಡದು. ನಮ್ಮ ಜನರ ಕಿಸೆಗಳಿಂದ ಹೆಚ್ಚಿಗೆ ತೆರಿಗೆಗಳನ್ನು ಪಡ್ಡುಗಳ ಮೂಲಕ ವಸೂಲು ಮಾಡದ ಈ ಪ್ರತಿನಿಧಿಗಳಿಗೆ ಕೌನ್ಸಿಲುಗಳ ಮೂಲಕ ಜನರ ಹಿತವನ್ನು ಸಾಧಿಸಿಕೊಳ್ಳಲಿಕ್ಕೆ ಆಗುತ್ತದೋ? ಇಲ್ಲ. ಹೊಸ ನ್ಯಾಯವಿಧಾಯಕ ಸಭೆಗಳಲ್ಲಿ ನಮ್ಮ ಪ್ರತಿನಿಧಿಗಳ ಕೈಕೆಳಗೆ ಇಡಲ್ಪಡುವ ಇಲಾಖೆಗಳನ್ನು ನಾವು ಜನರ ಹಿತಕ್ಕೋಸ್ಕರ ಉಪಯೋಗಿಸಬೇಕಾದರೆ ಅದಕ್ಕೆ ಸರಿಯಾದ ಅನುಕೂಲತೆಗಳನ್ನು ಸರಕಾರದವರು ನಮಗೆ ಒದಗಿಸಿ ಕೊಟ್ಟಿದ್ದಾರೋ? ಇಲ್ಲ.

ಹಾಗಾದರೆ ನಾವು ನಮ್ಮ ಪ್ರತಿನಿಧಿಗಳನ್ನು ಈ ಕೌನ್ಸಿಲುಗಳಿಗೆ ಏಕೆ ಕಳುಹಿಸಬೇಕು? ನಮ್ಮ ಪ್ರತಿನಿಧಿಗಳ ಮೂಲಕವೇ ನಾವು ಇನ್ನು ಮುಂದೆ ಹೆಚ್ಚಿನ ಹಕ್ಕುಗಳನ್ನು ಅನುಭವಿಸುವುದಕ್ಕೆ ಅರ್ಹರಲ್ಲವೆಂತ ಸರಕಾರದವರಿಂದ ಹೇಳಿಸಿಕೊಳ್ಳುವುದೇಕೆ? ನಮ್ಮ ಅರಸರ ಕಡೆಯಿಂದ ಹಿಂದುಸ್ಥಾನದಲ್ಲಿ ರಾಜ್ಯಭಾರ ನಡಿಸುವ ಉದ್ಯೋಗಸ್ಥರು ನಿಜವಾಗಿ ನಮ್ಮ ಬಹುಪಕ್ಷದವರ ಅನುಮತಿಗೆ ವಿರುದ್ಧವಾಗಿ ನಡಿಯುತ್ತಾರೆಂಬದು ನಮಗೆ ಗೊತ್ತಿರುತ್ತಾ, ನಮ್ಮ ಪ್ರತಿನಿಧಿಗಳನ್ನು ನಮಗೆ ಬಾಧಕ ಬರುವ ಈ ಸಭೆಗಳಿಗೆ ಕಳುಹಿಸಿ, ಆ ಮೂಲಕ ನಡಿಯುವಂಥಾ ಅನ್ಯಾಯಗಳಲ್ಲಿ ನಾವು ಸಹಭಾಗಿಗಳಾದೆವಂತ ಅನ್ನಿಸಿಕೊಳ್ಳುವುದೇಕೆ?

ಆದ್ದರಿಂದ್ದ, ಮಹನೀಯರೇ, ನಿಮ್ಮ ಪರವಾಗಿ ಹೊಸ ನ್ಯಾಯವಿಧಾಯಕ ಸಭೆಗಳಿಗೆ ತಾವು ಪ್ರತಿನಿಧಿಗಳಾಗಿ ಹೋಗುತ್ತೇವೆಂದು ಬಂದ ಉಮೇದ್ವಾರರಿಗೆ ವೋಟುಗಳನ್ನು ಕೊಡಬೇಡಿರಿ. ಮಹಾತ್ಮಾ ಗಾಂಧಿಯವರ ಅಭಿಪ್ರಾಯ ಸರಿಯೆಂತ ನಿಮಗೆ ಸಮಾಧಾನವಾದರೆ ಅದರ ಭಾವನಾಶಿಸಿ ಹಂಚಿದ ಜಾಹಿರು ಪ್ರಕಟಣೆಗೆ ಎಲ್ಲಾ ವೋಟರರೂ ತಂತಮ್ಮ ದಸ್ತುಗಳನ್ನು ಕೊಟ್ಟು ಬಾದಶಹರ ಕಡೆಯಿಂದ ಹಿಂದುಸ್ಥಾನದ ರಾಜ್ಯಭಾರ ನಡಿಸುವ ಉದ್ಯೋಗಸ್ಥರು ಜನರ ಮನಸ್ಸುಗಳನ್ನು ನೋಯಿಸಿದ್ದಾರೆಂತಲೂ, ಮೇಲೆ ವಿವರಿಸಿದ ಅನ್ಯಾಯಗಳನ್ನು ನಿವಾರಿಸದ ವಿನಾ ಜನರಿಗೆ ಸಮಾಧಾನವಾಗಲಿಕ್ಕಿಲ್ಲವೆಂತಲೂ ಏಕಮತೋಕ್ತವಾಗಿ ಈ ಮೂಲಕ ತೋರಿಸಿ ನಮ್ಮ ಭಾರತ ಮಾತೆಯ ಉದ್ಧರಣೆ ಕಾರ್ಯವನ್ನು ಕೈಕೊಳ್ಳುವ[illegible]

CAMP, Heriyadka. } K. SADASHIVA RAO,

"ಬೇಕಾಗಿದ್ದಾರೆ."

ಪೆರ್ಡಾಲ ಮಹಾಜನ ಸಂಸ್ಕೃತ ಕೋಲೆಜಿಗೆ ಒಬ್ಬರು ಇಂಗ್ಲೀಷ್ ಉಪಾಧ್ಯಾಯರು. ಸ್ಕೂಲ್ ಫೈನಲ್ ಪರೀಕ್ಷೆ ಸರ್ಟಿಫಿಕೇಟ್ ಪಡೆದವರು ವ ಇಂಟರ್ ಮಿಡಿಯೇಟಿಗೆ ದಾಖಲಾದವರು ವ ಪಾಸಾದವರು ಆಗಬಹುದು. ಸಂಬಳದ ದರವು ಈಗ ತಿಂಗಳಿಗೆ ರೂಪಾಯಿ 25ರಿಂದ 30ರ ವರೆಗೆ ಯೋಗ್ಯತಾನುಸಾರವಾಗಿ ಸಿಕ್ಕುವುದು. ಸಂಸ್ಕೃತ ಉಪಭಾಷೆಯಾಗಿ ತೆಗೆದುಕೊಂಡವರಾದರೆ ಒಳ್ಳೇದು. ಅರ್ಜಿಗಳು ಇದೇ ನವಂಬರ ಅಖೈರ ಒಳಗೆ ತಲಪಬೇಕು.

ಕರೆಸ್ಪೊಂಡೆಂಟ್,
ಮಹಾಜನ ಸಂಸ್ಕೃತ ಕೋಲೇಜ್,
ಪೆರ್ಡಾಲ, ಕಾಸರಗೋಡು ಪೋಸ್ಟ್, ದಕ್ಷಿಣ ಕನ್ನಡ.

ಮದ್ರಾಸು ಕರ್ನಾಟಕ ಸಭೆಯವರ ನಾಟಕ ರಚನೆಯ ಸಂಬಂಧವಾದ ಬಹುಮಾನದ ಮೇಲಾಟ.

(೧೯೨೦)

[illegible]

[illegible] ನಾಟಕವು ಯಾವ ಪತ್ರಿಕೆಯಲ್ಲಿಯೂ ಪ್ರಕಟವಾಗಿರಬಾರದು [illegible] ಸೇರಬಹುದು. [illegible] ಬಹುಮಾನವನ್ನಾಗಲೀ ಪಡೆದ ನಾಟಕವು ಈ ಮೇಲಾಟಕ್ಕೆ ಅಂಗೀಕರಿಸಲ್ಪಡಲಾರದು.

೪. ನಾಟಕವು ಎರಡರಿಂದ ಮೂರು ಗಂಟೆಯೊಳಗಾಗಿ ಆಡಲು ಬರುವಂತಿರಬೇಕು, ಮತ್ತು [illegible] ಅಚ್ಚಿನಲ್ಲಿ ೭೫ ಪುಟವಾಗುವಂತಿರಬೇಕು.

೫. ನಾಟಕದ ಯೋಗ್ಯತೆಯನ್ನು ಸಭೆಯ ಕಾರ್ಯನಿರ್ವಾಹಕ ಮಂಡಲಿಯವರಿಂದ ನೇಮಿಸಲ್ಪಡುವ ಒಂದು ಉಪಸಮಿತಿಯವರು ನಿರ್ಣಯಿಸುವರು. ಅವರ ನಿರ್ಣಯವು ಕಡೆಯದಾಗಿರುವುದು, ಮತ್ತು ಆ ಕುರಿತು ಯಾವ ಪತ್ರವ್ಯವಹಾರವನ್ನೂ ನಡೆಸಲಾಗಲಿಕ್ಕಿಲ್ಲ.

೬. ಅತ್ಯುತ್ತಮವಾಗಿ ನಿರ್ಣಯಿಸಲ್ಪಡುವ ನಾಟಕದ ಕರ್ತೃವಿಗೆ ಆ ಕುರಿತು ತಿಳಿಯಪಡಿಸಲಾಗುವುದು. ಅದನ್ನು ರಂಗಭೂಮಿಯ ಮೇಲೆ ಪ್ರದರ್ಶಿಸುವ ಅಧಿಕಾರವು ಕರ್ನಾಟಕ ಸಭೆಯವರಿಗೆ ಮಾತ್ರ ಸೇರಿರುವುದು; ಆದರೆ ಕರ್ತೃವು ಅದನ್ನು ಅಚ್ಚು ಹಾಕಿಸಿ ಪ್ರಕಟಗೊಳಿಸಲು ಸ್ವತಂತ್ರನಾಗಿರುವನು. ಉಳಿದ ಯಾವತ್ತು ಹಸ್ತಪ್ರತಿಗಳು ಆಯಾ ಲೇಖಕರುಗಳಿಗೆ ತಿರಿಗಿ ಕಳುಹಿಸಲ್ಪಡುವಂತೆ ಸಾಧ್ಯವಾದಷ್ಟು ಎಚ್ಚರ ತೆಗೆದುಕೊಳ್ಳಲಾಗುವುದು.

೭. ಮೇಲಾಟಕ್ಕೆ ಕಳುಹಿಸಲಾಗುವ ಪ್ರತಿ ನಾಟಕದೊಂದಿಗೆ— ಆ ನಾಟಕವು ಸ್ವತಂತ್ರವಾಗಿ ಬರೆಯಲ್ಪಟ್ಟಿದೆಂದೂ, ಅದನ್ನು ಬರೆಯುವಲ್ಲಿ ತಾನು ಬೇರೆಯಾರ ಸಹಾಯವನ್ನು ಪಡೆದಿಲ್ಲವೆಂದೂ,— ಕರ್ತೃವಿನ ಒಂದು ಪ್ರತಿಜ್ಞಾಲೇಖನವಿರಬೇಕು. ಕಥೆಯನ್ನು ಮಾತ್ರ ಎಲ್ಲಿಂದಾದರೂ ತೆಗೆದು ಕೊಳ್ಳಬಹುದು; ನಾಟಕದ ನೂತನತೆಗೆ ಬಾಧಕವನ್ನುಂಟುಮಾಡಲಾರದು. ಆದರೆ ಆ ಕಥಾಭಾಗವು ಯಾವಲ್ಲಿಂದ ತೆಗೆದುಕೊಳ್ಳಲ್ಪಟ್ಟಿದೆಂಬುದನ್ನು ಕರ್ತೃವು ತನ್ನ ಪ್ರತಿಜ್ಞಾಲೇಖನದಲ್ಲಿ ಹೇಳಿರಬೇಕು.

೮. ನಾಟಕವು ರಂಗಭೂಮಿಯಲ್ಲಿ ಆಡಲು ತಕ್ಕುದಾಗುವ ಕಡೆಗೆ ವಿಶೇಷವಾಗಿ ಗಮನವು ಕೊಡಲ್ಪಟ್ಟಿರಬೇಕು.

೯. ಕಳುಹಿಸಲಾದ ನಾಟಕಗಳೊಳಗೆ ಯಾವುದೂ ತಕ್ಕಷ್ಟು ಯೋಗ್ಯತೆಯುದಾಗಿ ಕಂಡುಬಾರದಿದ್ದ ಪಕ್ಷದಲ್ಲಿ ಪದಕವನ್ನು ಕೊಡದಿರಲೂ, ಎರಡು ಅಥವಾ ಅಧಿಕ ನಾಟಕಗಳೇ ಅದನ್ನು ಪಡೆಯಲು ಅರ್ಹವಾಗಿರುವಂತೆ ತಿಳಿಯಲ್ಪಟ್ಟಲ್ಲಿ ಅದನ್ನು ಹಣದ ಪಾರಿತೋಷಕಗಳಾಗಿ ವಿಭಾಗಿಸಿ ಹಂಚಲೂ ಸಭೆಯವರಿಗೂ ಸ್ವಾತಂತ್ರ್ಯವಿರುವುದು.

೧೦. ಲೇಖಕರ ಹೆಸರು ವಿಳಾಸಗಳನ್ನು ನಾಟಕದೊಂದಿಗೆ ಪ್ರತ್ಯೇಕವಾದ ಒಂದು ಮುದ್ರೆ ಹಾಕಿದ ಕವರಿನಲ್ಲಿಟ್ಟು, (ಟಪ್ಪಾಲು ಮೂಲಕವಾದರೆ, ರಜಿಸ್ಟರು ಮಾಡಿ) ಕಳುಹಿಸತಕ್ಕದ್ದು. ಮುದ್ರೆ ಹಾಕಿದ ಕವರಿನ ಮೇಲೆಯೂ ನಾಟಕದ ಹಸ್ತಪ್ರತಿಯ ಮೇಲೆಯೂ ಲೇಖಕನ ಕಲ್ಪಿತ ನಾಮವು (nom-de-plume) ಮಾತ್ರವಿರತಕ್ಕದ್ದು.

೧೧. ಕಾಗದದ ಒಂದು ಪಕ್ಕದಲ್ಲಿ ಮಾತ್ರ ಬರೆಯಲಾದ ಹಸ್ತಪ್ರತಿಗಳು ೧೯೨೧ನೇ ಇಸವಿ ಜನವರಿ ೩೧ನೇ ತಾರೀಖಿನೊಳಗೆ ಮುಟ್ಟುವಂತೆ ಗೌರವ ಕಾರ್ಯದರ್ಶಿಯವರಿಗೆ (B. Rama Rao Esq M. A., LL. B., Bhaskara vilas, Vepery) ಕಳುಹಿಸಲ್ಪಡತಕ್ಕದ್ದು.

ಮದ್ರಾಸು ಕರ್ನಾಟಕ ಸಭೆಯವರ ಕನ್ನಡ ಹಾಡುಗಾರಿಕೆಯ ಮೇಲಾಟ.

(೧೯೨೦)

ಕರ್ನಾಟಕ ಗಾನಕ್ಕೆ ಪ್ರೋತ್ಸಾಹವನ್ನುಂಟುಮಾಡುವ ಬಗ್ಗೆಗೆ ಬರುವ ಡಿಸೆಂಬರು ೧೩ನೇ ತಾರೀಕು ಭಾನುವಾರ ಮದ್ರಾಸು ಕರ್ನಾಟಕ ಸಭೆಯವರ ಆಶ್ರಯದಲ್ಲಿ ಮದ್ರಾಸು ಪಟ್ಟಣದೊಳಗೆ ಒಂದು ಹಾಡುಗಾರಿಕೆಯ ಮೇಲಾಟವು ನಡೆಯುವುದು. ಈ ಮೇಲಾಟದಲ್ಲಿ ಶಾಸ್ತ್ರವಾಗಿ ವಿದ್ಯಾರ್ಥಿಯಾದ ಯಾವನಾದರೂ ಸೇರಬಹುದು, ಪುರಂದರದಾಸರ ಒಂದು ಹಾಡನ್ನೂ ಬೇರೊಂದು ಕನ್ನಡ ಪದ್ಯವನ್ನೂ, (ಎರಡೂ ಭಕ್ತಿಪರವಾದುವಾಗಿರಬೇಕು.) ಯಾವುದಾದರೂ ಕರ್ನಾಟಕ ರಾಗಗಳಿಂದ (ಒಂದೊಂದನ್ನು ಒಂದೊಂದು ರಾಗದಲ್ಲಿ) ಅತ್ಯುತ್ತಮವಾಗಿ ಹಾಡಿದವರಿಗೆ ಒಂದು ಸ್ವರ್ಣ ಪದಕವು, ಸಭೆಯವರಿಂದ ಉಚಿತವಾಗಿ ಕೊಡಲ್ಪಡುವುದು. ಅಯ್ದುಜನರಾದರೂ ನ್ಯೂನವೆ ಮಾಡಿದರೇನೆ ವಿನಾ, ಮೇಲಾಟವು ನಡೆಯಲಾರದು. ಮೇಲಾಟಕ್ಕೆ ಸೇರಲು ಇಷ್ಟವುಳ್ಳವರು (The Hon. Secretary, The Karnataka Sabha, "Bhaskara Vilas", Vepery) ಎಂಬ ವಿಳಾಸಕ್ಕೆ ಡಿಸೆಂಬರ ೫ನೇ ತಾರೀಖಿನೊಳಗಾಗಿ ಬರೆದುಕೊಳ್ಳತಕ್ಕದ್ದು.

ಕರ್ನಾಟಕ ಸಭಾ, ಮದ್ರಾಸು, ತಾ. ೩೧ನೇ ಅಕ್ಟೋಬರ ೧೯೨೦. } ಕೆ. ನರಸಿಂಗರಾವ್, ಸಹಾಯಕ-ಕಾರ್ಯದರ್ಶಿ.

ಕುಂದಾಪುರ ಮೂಲಪಾಠ ಶಾಲೆಗಳ ಉಪಾಧ್ಯಾಯರ ಸಂಘದ ಪ್ರೊಸೀಡಿಂಗ್ಸ್.

ನವಂಬರ ತಾ. [illegible] ಮಂಗಳವಾರ ಅಪರಾಹ್ನ ೩ ಘಂಟೆಗೆ ಕುಂದಾಪುರ ಮಿಶ್ಯನ್ ಶಾಲೆಯಲ್ಲಿ ಈ ಸಂಘದ ೩ನೇ ಮೀಟಿಂಗ್ ಮ॥ ರಾ॥ ರಾ॥ ಕುಂದಾಪುರ ರೇಂಜ್ ಶಾಲೆಗಳ ಸುಪರ್‌ವೈಸರವರ ಅಧ್ಯಕ್ಷತೆಯಲ್ಲಿ ಜರಗಬೇಕಾಗಿ ಕಳೆದ ಮೀಟಿಂಗಿನಲ್ಲಿ ನಿಶ್ಚಯಿಸಿದಂತೆ ಅವರು ಬರ್ತ್ತಸರಿಲ್ಲವಾದ್ದರಿಂದ ಮ॥ ರಾ॥ ಬಾರಕೂರು ಶಾಲಾ ಹೆಡ್ ಮಾಸ್ತರರಾದ ಎ. ನರಸಿಂಹ ಹೆಬ್ಬಾರರವರ ಅಧ್ಯಕ್ಷತೆಯಲ್ಲಿ ಈ ೩ನೇ ಕೂಟವು ಜರಗಿತು. ೬೫ ಮಂದಿ ಉಪಾಧ್ಯಾಯ ಉಪಾಧ್ಯಾಯಿನಿಯರು ಹಾಜರು ಇದ್ದರು.

ಕಳೆದ ಒಕ್ಟೋಬರ ತಾ. ೨೩ರಲ್ಲಿ ಜರಗಿದ ಕೂಟದ ಪ್ರೊಸೀಡಿಂಗ್ಸ್‌ನ್ನು ಓದಿ ಹೇಳಿದ ತರುವಾಯ ಈ ಕೆಳಗಿನ ಸಂಗತಿಗಳು ನಿರ್ಣಯಿಸಲಾದುವು:—

(೧) [illegible]

[illegible]

(೨) ಈ ಪ್ರತಿನಿಧಿಗಳ ಸ್ವಲ್ಪ ಮಟ್ಟಿನ ಖರ್ಚಿನ ಬಗ್ಗೆ ಪ್ರತಿ ಒಬ್ಬರಿಗೆ ರೂಪಾಯಿ ೯-೦-೦ರ ಮೇರೆಗೆ ಸಂಘದವರು ಕೊಡಿಸಬೇಕಾದ್ದೇನೆಂದರೆ ಈ ಬಾಬ್ತಿಗೆ ಪ್ರತಿ ಒಬ್ಬ ಉಪಾಧ್ಯಾಯರು ತನ್ನ ತಿಂಗಳು ಸಂಬಳದ ಪ್ರತಿ ಒಂದು ರೂಪಾಯಿಯ ಮೇಲೆ ೬ ಪೈಯಂತೆ ಇದಕ್ಕೋಸ್ಕರ ಆಲಾಹಿದ ವಂತಿಗೆ ಕೊಡಬೇಕಾಗಿಯೂ ಪ್ರತಿ ಶಾಲಾ ಹೆಡ್ ಮಾಸ್ತರರು ತಮ್ಮ ಶಾಲೆಯಿಂದ ಬರಬೇಕಾದ ವಂತಿಗೆಯನ್ನು ವಸೂಲು ಮಾಡಿ ಸಂಘದ ಕಾರ್ಯದರ್ಶಿಗೆ ಈ ತಿಂಗಳ ಅಂತ್ಯದೊಳಗೆ ಕಳುಹಿಸಬೇಕಾಗಿ ನಿರ್ಣಯಿಸಿಯದೆ.

(೩) ಕಳೆದ ಮೀಟಿಂಗಿನಲ್ಲಿ ನಿಶ್ಚಯಿಸಿದಂತೆ ಬಸರೂರು ಶಾಲಾ ಹೆಡ್ ಮಾಸ್ತರವರನ್ನು ಕಾರ್ಯದರ್ಶಿಯಾಗಲು ಕೇಳಿದಲ್ಲಿ ಅವರು ಸಮ್ಮತಿ ಕೊಡಲಿಲ್ಲವಾದ್ದರಿಂದ ಈ ತಾಲೂಕಿನ ಬೋರ್ಡು ಶಾಲಾ ಉಪಾಧ್ಯಾಯರಲ್ಲಿ ಒಬ್ಬರಾದ ರಾ॥ ಕೇ. ಶ್ರೀನಿವಾಸ ಹೆಬ್ಬಾರರನ್ನು ಕಾರ್ಯದರ್ಶಿಯಾಗಿ ಚುನಾಯಿಸಲಾಯಿತು.

(೪) ಜಿಲ್ಲಾ ಸಭೆಗೆ ಬೋರ್ಡು ಶಾಲೆಗಳ ಪರವಾಗಿ ಮ॥ ರಾ॥ ಬಸರೂರು ಶಾಲಾ ಹೆಡ್ ಮಾಸ್ತರರವರನ್ನು, ಕಂಡ್ಲೂರು ಶಾಲಾ ಹೆಡ್ ಮಾಸ್ತರರವರನ್ನು, ಖಾಸಗಿ ಶಾಲೆಗಳ ಪರವಾಗಿ ಮ॥ ರಾ॥ ರಾ॥ ಬಸರೂರು ಹಾಯರ್ ಎಲಿಮೆಂಟರಿ ಶಾಲಾ ಹೆಡ್ ಮಾಸ್ತರವರನ್ನು, ಕುಂದಾಪುರ ಮಿಶ್ಯನ್ ಶಾಲಾ ಹೆಡ್ ಮಾಸ್ತರವರನ್ನು, ಕಂಡಲೂರು ಹಿಂದುಸ್ಥಾನಿ ಶಾಲಾ ಹೆಡ್ ಮಾಸ್ತರವರನ್ನು, ಹುಡುಗಿಯರ ಶಾಲೆಗಳಿಗೋಸ್ಕರ ಕುಂದಾಪುರ ಹುಡುಗಿಯರ ಶಾಲಾ ಹೆಡ್ ಮಿಸ್‌ಟ್ರೆಸ್‌ರನ್ನೂ ಚುನಾಯಿಸಿದ್ದಾಯಿತು.

(೫) ಬರುವ ಕೂಟಕ್ಕೆ ಈಗಿನ ೧೧ರಿಂದ ೪ನೆ ತರಗತಿಯ ವರೆಗಿನ ಬಾಲಕರಿಗೆ ಎಷ್ಟರ ಮಟ್ಟಿಗೆ ಓದುಬರಹವನ್ನು ಕಲಿಸಬೇಕೆಂಬುದರ ಕುರಿತು ಮ॥ ರಾ॥ ಬಾರಕೂರು ಶಾಲಾ ಹೆಡ್ ಮಾಸ್ತರರಾದ ಎ. ನರಸಿಂಹ ಹೆಬ್ಬಾರರು ಕೆಲವು ಸೂಚನೆಗಳನ್ನು ಕೊಡುತ್ತೇವೆಂಬದಾಗಿ ತಿಳಿಸಿದ್ದಕ್ಕೆ ಸರ್ವರೂ ಒಪ್ಪಿದ್ದಾಯಿತು.

(೬) ಬರುವ ಮೀಟಿಂಗನ್ನು ಡಿಸೆಂಬರ ತಾ. ೧೧ನೆ ಶನಿವಾರ ಬೆಳಗ್ಗೆ ೮ ಗಂಟೆಗೆ ಕುಂದಾಪುರ ಮಿಶ್ಯನ್ ಶಾಲೆಯಲ್ಲಿ ಜರಗಿಸಬೇಕಾಗಿ ನಿಶ್ಚಯಿಸಿ ಇಂದಿನ ಮೀಟಿಂಗು ಮುಕ್ತಾಯವಾಯಿತು.

Koni, ತಾ. ೯-೧೧-'೨೦. } **K. S. Hebbar,** *Secretary.*

ಉಡುಪಿ ತಾಲೂಕಿನ ಮೂಲಪಾಠಶಾಲೆ ಉಪಾಧ್ಯಾಯರುಗಳ ಸಂಘ.

ಈ ಸಂಘದ ೨ನೇ ಮೀಟಿಂಗು ಒಕ್ಟೋಬರ ತಾರೀಕು ೬ನೇ ಶನಿವಾರ ಶ್ಯಾಮ ಘಂಟೆ ೩ಕ್ಕೆ ಉಡುಪಿ ಬೋರ್ಡು ಶಾಲೆಯಲ್ಲಿ ಉಡುಪಿ ರೇಂಜಿನ ಸುಪರ್‌ವೈಜರವರ ಅಧ್ಯಕ್ಷತೆಯಲ್ಲಿ ಜರಗಿತು. ೧೭೯ ಮಂದಿ ಉಪಾಧ್ಯಾಯ, ಉಪಾಧ್ಯಾಯನಿಯರು ಹಾಜರು ಇದ್ದರು. ಈ ಕೆಳಗಿನ ಸಂಗತಿಗಳು ನಿರ್ಣಯಿಸಲಾದುವು —

(೧) ಮೀಟಿಂಗಿಗೆ ಬರುವಾಗ ಉಪಾಧ್ಯಾಯರುಗಳಿಗೆ ಈಡವವರಿಂದ ತಪ್ಪಿಸಿಕೊಳ್ಳುವ ಹಾಗೆ ಎಲ್ಲಾ ಉಪಾಧ್ಯಾಯರುಗಳಿಗೂ ಫರಿಸ್ತ್ಯಾಸ ಕೊಡಿಸುವಂತೆ ಕೇಳುವುದು.

(೨) ವಿದ್ಯಾ ಇಲಾಖೆ ನಿಯಮಗಳನ್ನು ಕನ್ನಡ ಮಾಡಿ ಅದರ ಪ್ರತಿಯನ್ನು ಎಲ್ಲಾ ಮೂಲಪಾಠಶಾಲೆಗಳಿಗೆ ಕೊಡಿಸುವಂತೆ ಪ್ರಾರ್ಥಿಸುವುದು.

(೩) ಪ್ರೊವಿಡೆಂಟ ಫಂಡನ್ನು ಕುರಿತು ಹೊಸದಾಗಿ ಜಾರಿಗೆ ಬಂದ ಕ್ರಮಕ್ಕನುಸಾರವಾಗಿ ಇತ್ತಲಾಗೆ ಸೇರಿದವರಿಗೆ ಅದರಿಂದ ಹೆಚ್ಚಿನ ಪ್ರಯೋಜನ ಸಿಕ್ಕುವಂತಿಲ್ಲವಾದುದರಿಂದ ಇಷ್ಟರ ಒಳಗೆನೇ ಸೇರಿದವರಿಗೆ ಪ್ರೊವಿಡೆಂಟ ಫಂಡಿನ ಹಣಕ್ಕೆ ಕೂಡಿಸಿ ಒಟ್ಟಿನಿಂದ ಕನಿಷ್ಠ ೩೦ ತಿಂಗಳ ಸಂಬಳ ಬೋನಸ್ಸಾಗಿ ಕೊಡಿಸುವಂತೆಯೂ, ಈ ವರೆಗೂ ಸೇರದವರಿಗೆ ಮೂವತ್ತು ತಿಂಗಳ ಸಂಬಳವನ್ನೇ ಕೊಡಿಸುವಂತೆಯೂ, ಪ್ರಯತ್ನಿಸಬೇಕು.

(೪) ನೇಮಕಪಟ್ಟವರ ಸಾಕ್ಷಿ ವಿನಹ ಮನಿ ಆರ್ಡರು ಕೊಡಬಾರದಾಗಿ ಪೋಸ್ಟ್ ಆಫೀಸಿನವರು ಹೊಸದಾಗಿ ಜಾರಿಗೆ ತಂದ ನಿಯಮವನ್ನು ಕುರಿತು ಹಳ್ಳಿ ಶಾಲಾ ಮಾಸ್ತರರುಗಳಿಗೆ ಹತ್ತಿರವಿರುವ ಒಬ್ಬನ ಸಾಕ್ಷಿ ತೆಗೆದುಕೊಂಡು ಹಣ ಕೊಡುವಂತೆ ಮುಂಚಿನ ನಿಯಮವನ್ನು ತಿದ್ದುಪಡಿ ಮಾಡುವರೆ ಪೋಸ್ಟಲ್ ಸುಪರಿಂಟೆಂಡೆಂಟರವರಿಗೆ ಬರೆದುಕೊಳ್ಳುವುದು.

(೫) ಬಹು ಹಿಂದಿನ ಕಾಲದಿಂದ ಟ್ರೈನಿಂಗ್ ಪರೀಕ್ಷೆಗೆ ಹೋಗಿ ಪಾಸಾಗದೆ ಇರುವವರನ್ನು ಕುರಿತು ಅಂಥವರನ್ನು ಬರಹಮೂಲಕ ಪರೀಕ್ಷೆಯಿಂದ ವಿನಾಯಿತಿಮಾಡಿ ಪ್ರೆಕ್ಟಿಕಲ್ ಟೆಸ್ಟಮಾತ್ರ ಮಾಡಿ ತರ್ಫೀತು ಹೊಂದಿದವರನ್ನು ಟ್ರೈನಾದವರಂತೆ ಲೆಕ್ಕಿಸಬೇಕಾಗಿ ಬೇಡುವುದು.

(೬) ಹಳ್ಳಿ ಶಾಲಾ ಮಾಸ್ತರರುಗಳ ಮಕ್ಕಳಿಗೆ ಹೈಸ್ಕೂಲುಗಳಲ್ಲಿ ಸ್ಕೂಲು ಫೀಸು ಮಾಫಿಮಾಡಿಸಲು ಯತ್ನಿಸಬೇಕು.

(೭) ಜಿಲ್ಲಾ ಸಂಘದ ಪರಿಷತ್ತಿನಲ್ಲಿ ಈ ಸಂಘದಿಂದ ಸೆಕ್ರೆಟರಿ ವಿನಹ ೬ ಜನ ಪ್ರತಿನಿಧಿಗಳನ್ನು ಚುನಾಯಿಸಿ ಕಳುಹಿಸಬೇಕು. ಸದರಿ ೬ ಜನರ ಪೈಕಿ ಇಬ್ಬರು ಬೋರ್ಡು ಶಾಲೆಗಳಿಂದಲೂ ಇಬ್ಬರು ಖಾಸಗಿ ಶಾಲೆಗಳಿಂದಲೂ ಒಬ್ಬರು ಮಹಮ್ಮದೀಯ ಶಾಲೆಗಳಿಂದಲೂ ಇನ್ನೊಬ್ಬರು ಹುಡುಗಿಯರ ಶಾಲೆಯಿಂದಲೂ ಚುನಾಯಿಸಲ್ಪಡಬೇಕಾಗಿ ನಿಶ್ಚೈಸಲಾಯಿತು.

(೮) ಈ ಏಳು ಜನರಿಗೆ ಸ್ವಲ್ಪಮಟ್ಟಿನ ಖರ್ಚಿನ ಬಗ್ಗೆ ಸಂಘದ ಫಂಡಿನಿಂದ ಪ್ರತಿ ಒಬ್ಬರಿಗೆ ರೂ. ೬ರಂತೆ ಕೊಡಬೇಕಾಗಿ ನಿಶ್ಚೈಸಲಾಯಿತು.

(೯) ಎಲ್ಲಾ ಮೆಂಬರರುಗಳು ಪ್ರತಿಯು ವರ್ಷದಲ್ಲಿ ರೂ. ೦-೧-೦ ಒಂದಾಣೆಯಂತೆ ಪ್ರವೇಶ ಫೀಸು ಕೊಡಬೇಕೆಂತಲೂ ಪ್ರವೇಶ ಫೀಸುಕೊಟ್ಟ ಮೆಂಬರರಾದವರು ಮಾತ್ರ ಸಂಘದ ಮೀಟಿಂಗಿನಲ್ಲಿ ವೋಟುಕೊಡಬಹುದೆಂತಲೂ ನಡೆಯುವ ಚರ್ಚೆಯಲ್ಲಿ ತನ್ನ ಅಭಿಪ್ರಾಯ ತಿಳಿಸಲು ಹಕ್ಕುಳ್ಳವರಾಗಿರುತ್ತಾರೆಂತಲೂ ನಿರ್ಣಯಿಸಿಯದೆ.

(೧೦) ಜಿಲ್ಲಾ ಸಂಘದ ಮೀಟಿಂಗಿನಲ್ಲಿ ಚರ್ಚಿಸಬೇಕಾದ ಸಂಗತಿಗಳನ್ನು ಯೋಚಿಸಿಕೊಂಡು ಬಂದು, ಬರುವ ಮೀಟಿಂಗಿನಲ್ಲಿ ತಿಳಿಸಬೇಕಾಗಿಯೂ ಸೂಚಿಸಿಯದೆ.

(೧೧) ಉಪಾಧ್ಯಾಯರ ಫಂಡಿನ ಬಾಬ್ತು ಹಣವನ್ನು ಪ್ರತಿ ಹೆಡ್ ಮಾಸ್ತರರವರು ಕೋಶಾಧ್ಯಕ್ಷರ ಕೂಡೆ ಕೊಟ್ಟದ್ದಕ್ಕೆ ಅವರಿಂದಲು ರಸೀದಿ ಕೊಡುವರೆ ಭಾಷಾ [illegible]

[illegible] (೧೨) [illegible] ಬಗ್ಗೆ [illegible]

[illegible]

(೧೩) [illegible] ಪ್ರತಿ [illegible]

(೧೪) [illegible]

ಈ ಸಂಘದ ಬರುವ ಮೀಟಿಂಗು ಡಿಸೆಂಬರ ತಾರೀಕು [illegible] ಶ್ಯಾಮ ಘಂಟೆ ೩ಕ್ಕೆ ಉಡುಪಿ ಬೋರ್ಡು ಎಲಿಮೆಂಟರಿ ಶಾಲೆಯಲ್ಲಿ ಜರಗಬೇಕಾಗಿ ನಿಶ್ಚಯಿಸಿ ರಾಷ್ಟ್ರಗೀತವನ್ನು ಹಾಡಿದ ನಂತರ ಅಂದಿನ ಕೂಟವು ಮುಕ್ತಾಯವಾಯಿತು.

Barkur. 8-11-1200. } **A. N. Hebbar.** *Secretary.*

NOTICE.

P. M. KAMATH & Co.,

Dispensing Chemist, Wholesale Druggists and General Merchants,

Mangalore,

Beg to announce to the Public that they have shifted their business to their new shop-premises, (near Wenlock Hospital) Phalnir Road Hampankatta, Mangalore.

ನೋಟೀಸು.

ದಕ್ಷಿಣ ಕನ್ನಡಾ ಡಿಸ್ಟ್ರಿಕ್ಟ್ ಕೋರ್ಟಿನಲ್ಲಿ,

O. P. ನಂಬ್ರ $\frac{142}{1920}$

ಮೃತ ಕಾದ್ರಿ ಬ್ಯಾರಿ ಯಾನೆ ಅಬ್ದುಲ ಕಾದ್ರಿ ಬ್ಯಾರಿಗಳ ಸಾಲಗಳ ಕುರಿತು.

1. ಬಿ. ಪಾತುಮ್ಮ
2. ಅಬ್ದುಕ್ರೆ ಬ್ಯಾರಿ
3. ಹತ್ತಿಜಾಮ್ಮ
4. ಐಷಮ್ಮ
5. ಇಸ್ಮಾಲಿ } ಮೈನರ ರಕ್ಷಕಳು ತಾಯಿ
6. ಹಮ್ಮಬ್ಬ } 1ನೇ ಅರ್ಜಿದಾರಳು.

} ಅರ್ಜಿದಾರರು.

ಮೃತ ಕಾದ್ರಿ ಬ್ಯಾರಿ ಯಾನೆ ಅಬ್ದುಲ್‌ಕಾದ್ರಿ ಬ್ಯಾರಿಗಳ ಸಾಲಗಳನ್ನು ವಸೂಲಿ ಮಾಡುವರೆ 2ನೆ ಅರ್ಜಿದಾರ ಅಬ್ದುಕ್ರೆ ಹೆಸರಲ್ಲಿ ವಾರಿಸು ಸರ್ಟಿಫಿಕೇಟು ಕೊಡಬೇಕೆಂತ ಮೇಲಿನ ಅರ್ಜಿದಾರರು ಮೇಲ್ಕಂಡ ಕೋರ್ಟಿನಲ್ಲಿ O. P. ನಂಬ್ರ $\frac{142}{1920}$ ನೆ ಅರ್ಜಿಕೊಟ್ಟಿರುವದರಿಂದ ಅದಕ್ಕೆ ಆಕ್ಷೇಪವುಳ್ಳವರು ಇದೇ ತಾರೀಕು 3—12—'20 ರ ಒಳಗೆ ಮೇಲಣ ಕೋರ್ಟಿನಲ್ಲಿ ತಮ್ಮ ಆಕ್ಷೇಪಗಳನ್ನು ಜಾಹೀರು ಮಾಡಿಕೊಳ್ಳತಕ್ಕದ್ದು.

ಮಂಗಳೂರು, ತಾ. 12—11—1920. } *B. R. Vyasraya Achar.* ಅರ್ಜಿದಾರರ ವಕೀಲ್.

ನೋಟೀಸು.

ಮಂಗಳೂರು ತಾಲೂಕು ಕೊಡಿಯಾಲ ಮಾಗಣೆ ಕಣ್ಣೂರು ಗ್ರಾಮದ ಬಡಿಲಗುತ್ತಿನ ಸಂಕರ್ಶೈಗಳ ಮೊಮ್ಮಗ ಐತಪ್ಪ ಶೆಟ್ಟಿಯು ಇದರ ಮೂಲಕ ಸರ್ವ ಜನರಿಗೆ ತಿಳಿಸುವದೇನೆಂದರೆ:—

ನಮ್ಮ ಕುಟುಂಬದ ಯಜಮಾನನಾದ ಬಡಿಲ ದೂಮಶೈಗಳು ಕಳೆದ ಮೇ ತಿಂಗಳಲ್ಲಿ ಮೃತಪಟ್ಟು ಈಗ ಸದರಿ ಕುಟುಂಬದ ಎಲ್ಲಾ ಸ್ಥಿರಚರ ಸೊತ್ತುಗಳಿಗೆ ಅವರ ನಂತರ ಗಂಡಸರಲ್ಲಿ ಕುಟುಂಬದಲ್ಲಿ ನಡೆದುಬಂದ ಪದ್ಧತಿಪ್ರಕಾರ ನಾನು ಹಿರಿಯನಾದ್ದರಿಂದ ಯಜಮಾನನಾಗಿರುವ ಅಡಳಿತೆದಾರನಾಗಿದ್ದೇನೆ. ಕುದ್ಮಲೆಯು ಸಹಾ ನನ್ನ ಹೆಸರಲ್ಲಿ ಆಗ ಪಟ್ಟೆಯು ನನಗೆ ಆಗಲಿಕ್ಕೆ ಹುಕುಂ ಆಗಿರುತ್ತದೆ. ಕುಟುಂಬಕ್ಕೆ ಬರತಕ್ಕ ಎಲ್ಲಾ ಸಾಲಮೂಲಗಳನ್ನು ವಸೂಲು ಮಾಡಲಿಕ್ಕೆ ನಾನು ಹಕ್ಕುದಾರನಾಗಿರುತ್ತೇನೆ. ಕುಟುಂಬಕ್ಕೆ ಸಾಲ ವಸೂಲು ಕೊಡುವ ಸಾಲಗಾರರು ಅವರಿಂದ ಬರತಕ್ಕ ಸಾಲಗಳನ್ನು ನನಗೆ ಕೊಡಬೇಕು. ಮತ್ತು ನನ್ನ ಬರಹಮೂಲಕ ಅನುಮತಿ ವಿನಹಾ ನಮ್ಮ ಕುಟುಂಬದ ಯಾರೊಬ್ಬ ಮೆಂಬರರ ಕೈಯಲ್ಲಿ ಕೊಡಕೂಡದು. ಹಾಗೆ ಅವರು ಕೊಟ್ಟದ್ದಾದರೆ ಅದು ಕುಟುಂಬದ ಮೇಲೆ ಬಾಧಿಸತಕ್ಕದ್ದಲ್ಲ. ಅದರ ಸಂಬಂಧ ಕುಟುಂಬಕ್ಕೆ ಉಂಟಾಗುವ ಎಲ್ಲಾ ನಷ್ಟವನ್ನು ಅವರು ತೆರಬೇಕಾಗುವುದು ಎಂತ ಇದರ ಮೂಲಕ ತಿಳಿಸಿರುತ್ತದೆ.

ಬಡಿಲಗುತ್ತು, ತಾ. 11-12-'20. } ಬಿ. ಐತಪ್ಪ ಶೆಟ್ಟಿ.

[illegible]

ಉತ್ತಮ ತರದ ಪುಡಿ ನಶ್ಯವು.

[illegible] ಯಂದ ತಯಾರಿಸುವದರಿಂದ [illegible] ನಶ್ಯವನ್ನು ಸಿಕ್ಕಬೇಕಾಗಿಯೂ ಬಯಸಿದ. ತೋಲ 1ಕ್ಕೆ [illegible] ಟಪ್ಪಾಲು ಹಾಸಿಲು 4 ಆಣೆ.

ಎಸ್. ವಿ. ದಂತಚೂರ್ಣವು.

ಇದರ ಉಪಯೋಗದಿಂದ ಹಲ್ಲುಗಳು ಶುಭ್ರವಾಗಿ, ಬಿಳುಪಾಗಿ, ಪ್ರಕಾಶಿಸುವದಲ್ಲದೆ ಸಕಲ ದಂತರೋಗಗಳನ್ನು ನಿವೃತ್ತಿ ಮಾಡಿ ಹಲ್ಲುಗಳನ್ನು ವಜ್ರದಂತೆ ಗಟ್ಟಿ ಪಡಿಸುವದು. ಡಬ್ಬಿ 1ಕ್ಕೆ 6 ಆಣೆ. ಟಪ್ಪಾಲು ಹಾಸಿಲು 2 ಡಬ್ಬಿಗಳವರೆಗೆ 4 ಆಣೆ. ನಮ್ಮ ಕಂಪನಿಯ ಇಂಗ್ಲಿಷ್ ಕೆಟಲಾಗಿಗೆ ಬರೆದರೆ ಉಚಿತವಾಗಿ ಕಳುಹಿಸಿ ಕೊಡುವೆವು. ನಮ್ಮ ವಿಳಾಸ:—

ತಂತಿ ವಿಳಾಸ:— ಎಸ್. ವಾಸು ಅಂಡ್ ಕಂಪನಿ,
ವಾಸು, ತಿರುಚಿ. ಪಾಲಕರೆ, ತಿರುಚಿನಾಪಳ್ಳಿ.

ಜಗದ್ವಿಖ್ಯಾತವಾದ ಶ್ರೀ ದೇವೀಪ್ರಸಾದ ಕಂಪೆನಿಯ

ಸುಪ್ರಸಿದ್ಧವಾದ ಮಹೌಷಧಗಳು.

"ಧನ್ವಂತರೀ ಬಾಮ್."

ಶುದ್ಧ ವನಸ್ಪತಿಗಳಿಂದಲೇ ಶಾಸ್ತ್ರೋಕ್ತವಾಗಿ ತಯಾರಿಸಲ್ಪಟ್ಟ ವೇದನಾಹಾರಿ ಮುಲಾಮು. ಇದರಿಂದ ವಾತ, ಕಫ, ಜಗತ, ಉಳುಕು ಘಾಯ, ತಲೆನೋವು, ಸೊಂಟನೋವು, ಬೆನ್ನುನೋವು, ಮುಂತಾದ ಎಲ್ಲಾ ತರದ ಬೇನೆಗಳು ಅತಿ ಶೀಘ್ರದಲ್ಲಿ ಸಂಪೂರ್ಣವಾಗಿ ಗುಣ ಹೊಂದುವವು. ಬಾಟ್ಲಿ ೧ರ ಕಿಮ್ಮತ್ತು ೦—೭—೦; ಒಂದು ಡಜನು ಬಾಟ್ಲಿಗಳಿಗೆ ರೂ. ೪—೧೨—೦.

"ಗಜಕರ್ಣದ ಮುಲಾಮು"

ಗಜಕರ್ಣ, ಉಸಬು, ಖಜ್ಜೆ, ದದ್ರು, ಹುಳಕಡ್ಡಿ, ಸೊಂಟಕಜ್ಜಿ ಮುಂತಾದ ಸಮಸ್ತ ವಿಧವಾದ ಚರ್ಮವ್ಯಾಧಿಗಳು ಒಂದೆರಡು ಸಾರಿ ಹಾಗಿಸುವದರೊಳಗೆ ನಿಸ್ಸಂದೇಹವಾಗಿ ಇವುಂದ ನಿವಾರಣೆಯಾಗುವವು. ಬಾಟ್ಲಿ ೧ಕ್ಕೆ ೦—೪—೦; ಒಂದು ಡಜನಿಗೆ ರೂ. ೩—೮—೦.

ನಮ್ಮ ಔಷಧಗಳ ಗುಣೋನ್ನತಿಯ ಕುರಿತು ಅನೇಕ ಮಹನೀಯರುಗಳಿಂದಲೂ ಡಾಕ್ಟರುಗಳಿಂದಲೂ ಶಿಫಾರಸು ಪತ್ರಗಳು, ಮೆಡಲು ದೊರೆತಿರುವವು. ಜಾಸ್ತಿಯಾಗಿ ಕೊಂಡುಕೊಳ್ಳತಕ್ಕವರಿಗೂ ವ್ಯಾಪಾರಿಗಳಿಗೂ ಯೋಗ್ಯ ಕಮಿಶನು ಕೊಡಲಾಗುವದು, ಕ್ಯಾಟಲಾಗಿಗೂ ವಿಶೇಷ ಮಾಹಿತಿಯು ಬಗ್ಗೆ ಪತ್ರವ್ಯವಹಾರ ಮಾಡೀರಿ.

ಧಿ. ಮ್ಯಾನೇಜರ್ — ಶ್ರೀ ದೇವಿಪ್ರಸಾದ ಕಂಪೆನಿ,
ಪೋಸ್ಟು ದಾಕರಾ... ಜ. ಕಚ್ಛ.

[illegible]

ಶ್ರೀ ವೆಂ. ಶೆ. ಮುಂತ. [illegible]

ಓದುವುದು ಯಾವದೊಂದು ಖರ್ಚಿಲ್ಲದೆ ಗಾಳಿ ಪೇಜುಗಳುಳ್ಳ

ವೈದ್ಯ ವಿದ್ಯ

ಎಂಬ ಪುಸ್ತಕವು. ಈ ಪುಸ್ತಕವನ್ನು ಓದುವುದರಿಂದ ಕಾರಣಾಂತರಗಳಿಂದ ಉಂಟಾಗುವ ಎಲ್ಲಾ ವ್ಯಾಧಿಗಳನ್ನೂ, ಒಬ್ಬರ ಸಹಾಯವಿಲ್ಲದೆ ಗುಣಮಾಡಿಕೊಳ್ಳಲು ಬಲು ಸೂಕ್ಷ್ಮ ತಿಳುವಳಿಕೆಯನೂ ಮತ್ತು ತಕ್ಕ ಔಷಧವನು ತಿಳಿಸುವುದು. ಈ ಪುಸ್ತಕಕ್ಕೆ ಯಾವ ಖರ್ಚನೂ ಕೊಡಬೇಡಿರಿ. ಕಾಲಾಣೆಯ ಕಾರ್ಡಿನಲ್ಲಿ ನಿಮ್ಮ ವಿಳಾಸವನ್ನು ತಿಳಿಸಿದ ಮಾತ್ರಕ್ಕೆ ಸದರಿ ಪುಸ್ತಕವು ನಿಮ್ಮ ಮನೆಯ ತಲಬಾಗಲಿಗೆ ಬಂದು ಸೇರುವುದು.

ವಿಳಾಸ:— ರಾಜವೈದ್ಯ ನಾರಾಯಣಜೀ, ಕೇಶವಜೀ,
27. ಜೈನಬಜಾರು ರೋಡ್, ಮದರಾಸು.

BANK OF MADRAS.

ಮದ್ರಾಸ್ ಬ್ಯಾಂಕ್.

ಹೆಡ್ ಆಫೀಸು ಮದ್ರಾಸ್.

ಮೂಲಧನ	ರೂ. 75,00,000.
ಕ್ಷೇಮನಿಧಿ	„ 45,00,000.

ಸೇವಿಂಗ್ಸ್ ಬ್ಯಾಂಕ್.

— ವರ್ಷಕ್ಕೆ ಸೇಕಡಾ 4ರ ಬಡ್ಡಿ —

ಇದರಲ್ಲಿ ಠೇವಣಾತಿಗಳು ಕೆಳಗಿನ ಶರ್ತಗಳಲ್ಲಿ ಪಡೆಯಲಾದಾವು. ಒಂದು ವರುಷದ ಅವಧಿಯಲ್ಲಿ ಒಟ್ಟು ರೂ. 5,000ಕ್ಕೆ ಮಿಗದ ಮೊಬಲಗನ್ನು ಠೇವಣಾತಿ ಯಾಗಿಡಬಹುದು.

ಹೀಗೆ ಠೇವಣಾತಿ ಇಟ್ಟ ಪ್ರತಿ ಹತ್ತು ರೂಪಾಯಿಗಳಿಗೆ ಸೇಕಡಾ 4ರಂತೆ ರೂ. 10,000ಕ್ಕೆ ಮೀರದ ಮೊಬಲಗಿನ ವರೇಗೆ ಬಡ್ಡಿ ಎಣಿಸಲಾಗುವುದು.

ನಿಬಂಧನೆಗಳ ಪ್ರತಿಗಳನ್ನು ಬರೆದು ಬ್ಯಾಂಕಿನಿಂದ ಪಡೆಯಬಹುದು.

ಸಿ. ಎಲ್. ಗೋರ್ಡನ್,
ಏಜಂಟ್, ಮದ್ರಾಸ್ ಬ್ಯಾಂಕ್, ಮಂಗಳೂರು.

[illegible]

TRIVANDERUM

[illegible] ಮಂಗಳೂರು

[illegible]

ರೂ. 1,000 ಬಹುಮಾನ

ಲೋಕಪ್ರಸಿದ್ಧವಾದ ಸಾಲಾಮಿಸ್ರಿ ಮುರಬ್ಬಾ.

(ಗವರ್ನಮೆಂಟಿನಲ್ಲಿ ರಿಜಿಸ್ಟರ್ ಮಾಡಲ್ಪಟ್ಟದ್ದು).

[illegible] ಎಂಬುದು [illegible] ಬರುತ್ತವೆ.

ಈ ಮುರಬ್ಬಾ ಸೇವನೆಯಿಂದ ಗುಣಹೊಂದಿದ್ದ ಅನೇಕ ದೊಡ್ಡ ಮನುಷ್ಯರಿಂದ ರಂಗೂನ್, ಪಿನಾಂಗ್, ಆಫ್ರಿಕ, ಕಲ್ಕತ್ತಾ, ಬೊಂಬಾಯಿ, ಮದ್ರಾಸ್ ಮೊದಲಾದ ಅನೇಕ ಪ್ರಾಂತ್ಯಗಳಿಂದ ಯೋಗ್ಯತಾಪತ್ರಿಕೆಗಳು ಬಂದಿವೆ. ಬೇಕಾದವರು ಅರ್ಧಾಣೆ ಸ್ಟಾಂಪನ್ನು ಕಳಿಸಿ ಅವುಗಳ ಪ್ರತಿಯನ್ನು ನೋಡಬಹುದು. ಅವನ್ನು ಯಾರಾದರೂ ಸುಳ್ಳು ಎಂದು ನಿರ್ಧಾರಪಡಿಸಿದರೆ ಮೇಲೆ ಕಂಡ ಬಹುಮಾನವನ್ನು ಕೊಡುತ್ತೇವೆ. ನಾವು ಹಾಗೆ ಕೊಡದೆ ನಿರಾಕರಿಸಿದಲ್ಲಿ ಕೋರ್ಟಿನ ಮೂಲಕ ಪಡೆಯಬಹುದು.

ಒಂದು ಡಬ್ಬಾ ಮುರಬ್ಬಾವನ್ನು ೧೫ ದಿನಗಳು ಉಪಯೋಗಿಸುವುದರಿಂದ ಪೂರಾ ಗುಣ ಕೊಡುತ್ತೆ. ೩–೪ ಡಬ್ಬಗಳನ್ನು ಉಪಯೋಗಿಸುವುದರಿಂದ ಜನ್ಮಾಂತರದವರೆಗೂ ಗುಣ ಕೊಡುತ್ತೆ. ಉಪಯೋಗಿಸುವ ಪಥ್ಯದ ಪಟ್ಟಿಯು ಜತೆಯಲ್ಲಿರುವುದು.

ಕ್ರಯ: ಒಂದು ಡಬ್ಬಿಗೆ ರೂಪಾಯಿ 2.

"ಈಗ ಪ್ಲೇಗಿಯ ಬಾಧೆ ಹೆಚ್ಚಿರುವುದರಿಂದ ಕೆಲವು ದಿನಗಳ ವರೆಗೆ ಟಪ್ಪಾಲು ಖರ್ಚು 1 ಡಬ್ಬಿಗೆ ೮ ಆಣೆ; 2 ಯಾ 3 ಡಬ್ಬಿಗಳಿಗೆ 12 ಆಣೆ."

ಡಿ. ಮನ್ನಾಲಾಲ್, ಡಿಲ್ಲಿ ವೈದ್ಯರು,
ಸಾಲಾಮಿಸ್ರಿ ಮುರಬ್ಬ ಡಿಪೋ, ಬೆಂಗಳೂರು ಸಿಟಿ.

ಆರ್. ಮಾರ್ಟಿನ್ನರ

ಸಾರಸಾಪರಿಲ್ಲಾ

ಈ ಸಾರ್ಸಾಪರಿಲ್ಲಾ ಔಷಧವನ್ನು ಪ್ರತಿದಿನವೂ ನಿರಂತರವೂ ತೆಗೆದುಕೊಳ್ಳುವುದರಿಂದ ದೇಹದೊಳಗಿನ ರಕ್ತವನ್ನು ಚೆನ್ನಾಗಿ ಶುದ್ಧಿಮಾಡುತ್ತದೆ, ಸುಖರೋಗ, ಕೆಟ್ಟ ರಕ್ತಸಂಬಂಧದಿಂದುಂಟಾದ ಎಲ್ಲಾ ತರಹದ ಗಂಡಲೆ, ಉಬ್ಬುವುದು. ನರಗಳಲ್ಲಿರುವ ನೋವು, ವಾತ, ಸಂಧಿವಾತ, ಯಕೃತ್ಸಾರ, ಕೆಮ್ಮು, ಫರಂಗಿಹುಣ್ಣು, ಕಜ್ಜಿ, ಮತ್ತು ಚರ್ಮದ ರೋಗಗಳು, ಶಿಶುಕಡಿತದಿಂದುಂಟಾದ ವ್ಯಾಧಿ, ಪೆರಾಲಿಸಿಸ್, ಇವೇ ಮೊದಲಾದುವನ್ನು ನಾಶಮಾಡಿ, ರಕ್ತದಲ್ಲಿರುವ ವಿಷವಸ್ತುವನ್ನು ಎಂದರೆ ಪಾದರಸ ಮುಂತಾದ್ದರಿಂದ ಆದ ವ್ಯಥೆಯನ್ನು ಹೋಗಲಾಡಿಸಿ ರಕ್ತವನ್ನು ಚೆನ್ನಾಗಿ ಶುದ್ಧಿಯಾಗಿಟ್ಟು ಮನುಷ್ಯನನ್ನು ಯಾವಾಗಲೂ ಆರೋಗ್ಯದಲ್ಲಿಡುತ್ತದೆ. ಇದು ಶುದ್ಧವಾದ ವನಸ್ಪತಿಗಳಿಂದ ತಯಾರಿಸಲ್ಪಟ್ಟದ್ದಾಗಿರುತ್ತದೆ. ಬಾಟ್ಲಿ ೧ಕ್ಕೆ ಕ್ರಯ ರೂ. ೧–೧೨–೦

ಆರ್ ಮಾರ್ಟಿನ್ನರ ಏಗ್ಯೂ ಮಿಕ್ಸ್ಚರ್

ಇದು ಜ್ವರ, ಶೀತಜ್ವರ, ಮಲೇರಿಯಾ, ಚಾರಿಜ್ವರ, ಸನ್ನಿಪಾತ, ಹೆಚ್ಚು ವಾಯುವಿನಿಂದುಂಟಾದ ರೋಗ ಇವೇ ಮೊದಲಾದ ಎಲ್ಲಾ ತರಹದ ಜ್ವರ ಸಹ್ಯ ಕೂಡಲೇ ನಾಶಮಾಡುತ್ತದೆ. ಎಲುಬುಗಳಲ್ಲಿ ಹರಡಿಕೊಂಡಿರುವ ಜ್ವರವನ್ನು ಸಹ ನಾಶಮಾಡುವದಲ್ಲದೆ ಇದು ಸಿಹಿಯಾಗಿರುವುದರಿಂದ ಸಣ್ಣ ಕೂಸುಗಳು ಸಹ ಕುಡಿಯಲಿಕ್ಕೆ ಇಷ್ಟಪಡುತ್ತವೆ. ಅನೇಕ ಜನ ವಿದ್ವಾಂಸ ವೈದ್ಯರಿಂದ ಗುಣಮಾಡುವದಕ್ಕಾಗದ ಜ್ವರವನ್ನು ಈ ಎರಡೇ ಎರಡು ಬಾಟ್ಲಿಗಳ ಸೇವನೆಯಿಂದ ಹುಷಾರಾಗಿದೆ. ಬಾಟ್ಲಿ 1ಕ್ಕೆ ರೂ. ೦–೧೪–೦

ಆರ್ ಮಾರ್ಟಿನ್ನರ ಮೂಲವ್ಯಾಧಿ ಮುಲಾಮು.

ಮನುಷ್ಯನಿಗೆ ಮೂಲವ್ಯಾಧಿ ಆದಾಗ್ಗೆ ಬಹಳ ಸಲ ಉಷ್ಣ ಹೊಯ್ಯುವಿಕೆ, ಮರ್ಮಸ್ಥಾನದಲ್ಲಿ ತುರಿಯುವುದು, ಮಲಬದ್ಧತೆ ಇವೇ ಮುಂತಾದ್ದರಿಂದ ವ್ಯಥೆಪಡುತ್ತಾನೆ. ಈ ಔಷಧದ ಒಂದೇ ಒಂದು ಬಾಟ್ಲಿಯ ಉಪಯೋಗದಿಂದ, ರಕ್ತ ಸುರಿಯುವ ಮೂಲವ್ಯಾಧಿ, ಕಂಕುಳಲ್ಲಿ ನೋಯುವ ಮೂಲವ್ಯಾಧಿ ಮತ್ತು ಎಲ್ಲ ತರಹದ [illegible] ಮೂಲವ್ಯಾಧಿಯಾದರೂ ಕೂಡಲೇ ವಾಸಿಯಾಗುತ್ತದೆ. ಇದು [illegible] ಔಷಧಗಳಿಂದ [illegible] ಕೊಡದೆ [illegible] ಮಾಡುತ್ತದೆ. ಬಾಟ್ಲಿ ೧ಕ್ಕೆ ರೂ. ೧–೮–೦.

ವಿಳಾಸ:— ಆರ್. ಡಿ. ಕಟ್ಲಿ ಮತ್ತು ಕಂಪೆನಿ,
ನಂಬ್ರ ಡಿ. ಫ್ರಿಯರ್ ರೋಡ್,
[illegible] ಫೋರ್ಟ್, ಮುಂಬಯಿ.

R. D. Kately & Co.
No. D. Frere Road,
Near Wright & Co. Fort, Bombay.

ಆಯುರ್ವೇದಾಶ್ರಮ.

ವೈದ್ಯರತ್ನ ಪಂಡಿತ ಡಿ. ಗೋಪಾಲಾಚಾರ್ಲು

ಇವರಿಂದ ಸ್ಥಾಪಿತವಾಗಿ ನಡಿಸಲ್ಪಟ್ಟಿರುತ್ತದೆ.

ಪ್ಲೇಗ್, ಕೊಲೇರಾ ಮತ್ತು ಇನ್‌ಫ್ಲುಯೆಂಜಾ

ಇವಕ್ಕೆ ಮುಖ್ಯವಾದ ಚಿಕಿತ್ಸಾಲಯ.

ಸಕಲ ರೋಗಗಳನ್ನು ದೂರಮಾಡುವ ಗುಣಪಡಿಸುವ ಹಾಗೂ ಆರೋಗ್ಯವನ್ನು ಉಂಟುಮಾಡುವ ಔಷಧಗಳು ಇಲ್ಲಿ ದೊರೆಯುವವು. ಕೆಟಲಾಗನ್ನು ಅಪೇಕ್ಷಿಸುವವರಿಗೆ ಉಚಿತವಾಗಿ ಕಳುಹಿಸುವೆವು.

ಪ್ಲೇಗು ಔಷಧದ ದೊಡ್ಡ ಸೀಸೆಗೆ	ರೂ. 2—2—0	ಕೊಲೇರಾ ಔಷಧದ ದೊಡ್ಡ ಸೀಸೆಗೆ	ರೂ. 1—2—0
ಸಣ್ಣ „	„ 1—6—0	„ ಸಣ್ಣ „	„ 0–12—0

ಇನ್‌ಫ್ಲುಯೆಂಜಾ ಔಷಧದ ಪ್ರತಿ ಸೀಸೆಗೆ ರೂ. 1—12—0.

ಎಲ್ಲಾ ಔಷಧಗಳನ್ನು ಕಳುಹಿಸುವಾಗಲೂ ಟಪ್ಪಾಲ ಹಾಸಿಲು ಮತ್ತು ಪೇಕಿಂಗ್ ಪ್ರತ್ಯೇಕ.

ವಿಳಾಸ:— ಮೆನೇಜರ್, ಆಯುರ್ವೇದಾಶ್ರಮ,
65 ಆಚಾರಪ್ಪನ ಬೀದಿ,
ಜೋರ್ಜಟೌನ್, ಮದರಾಸ್.

ತಂತಿ ವಿಳಾಸ:—
ಪಂಡಿತ್, ಮದರಾಸ್

The Canara Banking Corporation, Udipi, (Limited).

	Rs	As	Ps
Authorized Capital	3,50,000	0	0
Issued and Subscribed Capital	50,000	0	0
Paid up Capital	41,102	0	9
Deposits	80,424	11	10
Reserve and other Funds	10,551	5	2
Investments on Safe Securities	1,26,249	8	5

Fixed Deposits received at 7% Interest payable quarterly Short term Deposits payable at 15 notice after 1 month are received @ 6¼%. To meet the dowry amount and other marriage ... the following system of cumulative deposits are introduced on the following scale

or its multiple for 13 months will bring Rs 27 or proportionately at the end of 14th month.						
1	do	24	do	„ 25	do	25th „
1	do	45	do	„ 50	do	46th „
1	do	84	do	„ 102—8—0	do	85th
1	do	132	do	„ 182—8—0	do	133rd ,

Current a/c Deposits and Savings Bank Deposits are received and interest calculated half yearly @ 3½% and 4½% respectively on the lowest balance in the month Dividend and Bouns declared for the year ended 31—3—20 @ 9% Loans granted on proper securities and pledges Payments to the Corporation may be made at the Bank of Madras Mangalore or the Canara Bank Ltd, For special terms on big and long deposits please apply to

Office of the Corporation, Udipi,
31st. August 1920.

Naimpalli Ananda Rao,
Secretary

ಕೆನರಾ ಬ್ಯಾಂಕಿಂಗ್ ಕೊರ್ಪೊರೇಶನ್, ಉಡುಪಿ, ಲಿಮಿಟೆಡ್.

	ರೂ	ಆ	ಪೈ
ಅಧಿಕಾರಗೊಳಿಸಲ್ಪಟ್ಟ ಮೂಲಧನ	3,50,000	0	0
ಚಂದಾ ಹಾಕಲಿಕ್ಕೆ ಅರ್ಪಿಸಿದ ವ ಚಂದಾ ಹಾಕಿ ಎತ್ತಿದ ಮೂಲಧನ	50 000	0	0
ಮೌಲ್ಯತೆತ್ತ ಮೂಲಧನ	41 102	0	9
ಠೇವಣಾತಿಗಳು	80,424	11	10
ಕ್ಷೇಮನಿಧಿ ವ ಇತರ ಫಂಡುಗಳು	10,551	5	2
ಯೋಗ್ಯ ಜವಾಬ್ದಾರಿ ಮೇಲೆ ಮತ್ತು ಅಡವಿನ ಮೇಲೆ ಸಾಲಕೊಟ್ಟ ಹಣ	126,249	8	5

ಪ್ರತಿ 3 ತಿಂಗಳಿಗೊಮ್ಮೆ ಸಾಲಿಯಾನ್ ಶೇಕಡಾ 7ರ ದರದಲ್ಲಿ ಬಡ್ಡಿ ಕೊಡುವ ಶರ್ತದ ಮೇಲೆ ಕಾಯಮ್ ಠೇವಣಾತಿಗಳು ಅಂಗೀಕರಿಸಲ್ಪಡುವವು.

15 ದಿವಸದ ನೋಟೀಸಿನ ಮುದ್ದತ್ತಿನ ಮೇಲೆ ವಾಪಸು ಕೊಡತಕ್ಕ 1 ತಿಂಗಳಿಗೆ ಕಡಿಮೆ ಅವಧಿಗಲ್ಲದ ಚಿಕ್ಕ ವಾಯಿದೆ ಠೇವಣಾತಿಗಳ ಮೇಲೆ ಸಾಲಿಯಾನ್ ಶೇಕಡಾ 6¼ರಂತೆ ಬಡ್ಡಿ ಕೊಡೋಣಾಗುವುದು

ದೇಣಿ ಮೊಬಲಗು ಬಗ್ಯೆ ಮದಿವೆ ಖರ್ಚಿಗೂ ಜನರಿಗೆ ಅನುಕೂಲವಾಗುವಂತೆ ಈ ಕೆಳಗಣ ರೀತಿಯಲ್ಲಿ ಮತ್ತು ಶರ್ತ ಒಳಗೊಳಪಟ್ಟ ಸಂಚಯದ ಠೇವಣಾತಿಗಳು ಅಂಗೀಕರಿಸಲ್ಪಡುವವು.

ರೂ. 2 ಅಥವಾ ಅದರ ಗುಣ್ಯವನ್ನು 13 ತಿಂಗಳು ಕಟ್ಟಿದಲ್ಲಿ 14ನೇ ತಿಂಗಳ ಅಂತ್ಯಕ್ಕೆ ರೂ 27 ಅಥವಾ ಅದರ ಗುಣ್ಯವು ಸಿಕ್ಕುವುದು								
1	ಡಿ	ಡಿ	24	ಡಿ	25	ಡಿ	„ 25	ಡಿ
1	ಡಿ	ಡಿ	45	ಡಿ	46	ಡಿ	, 50	ಡಿ
1	ಡಿ	ಡಿ	84	ಡಿ	85	ಡಿ	„ 102—8—0	ಡಿ
1	ಡಿ	ಡಿ	132	ಡಿ	133	ಡಿ	, 182—8—0,	ಡಿ

ಚಾಲ್ತಿ ಠೇವಣಾತಿಗಳು ಮತ್ತು ಸೇವಿಂಗ್ಸ್ ಬ್ಯಾಂಕ್ ಠೇವಣಾತಿಗಳು ಅಂಗೀಕರಿಸಲ್ಪಡುವವು ಪ್ರತಿ ತಿಂಗಳಲ್ಲಿರುವ ಅತೀ ಕಡಿಮೆ ಠೇವಿನ ಮೇಲೆ 6 ತಿಂಗಳಿಗೊಮ್ಮೆ ಚಾಲ್ತಿ ಠೇವಿನ ಮೇಲೆ ಶೇಕಡಾ 3½ ದರದಲ್ಲಿಯೂ ಸೇವಿಂಗ್ಸ್ ಬೇಂಕ ಠೇವಿನ ಮೇಲೆ 4½ ದರದಲ್ಲಿಯೂ ಬಡ್ಡಿ ಎಣಿಸಲಾಗುವದು.

ತಾ. 31—3—1920ಕ್ಕೆ ಅಂತ್ಯವಾದ ವರ್ಷಕ್ಕೆ ಹಿಸೆದಾರರಿಗೆ ಡಿವಿಡೆಂಡ್ ಮತ್ತು ಬೋನಸ್ ಕೂಡಿ ಶೇಕಡಾ 9ರ ದರದ ಬಡ್ಡಿ ಕೊಡೋಣಾಗಿಯದೆ

ಯೋಗ್ಯ ಜವಾಬ್ದಾರಿ ಮೇಲೆ ಮತ್ತು ಅಡವಿನ ಮೇಲೆ ಸಾಲಕೊಡೋಣಾಗುವದು. ಸಂಘಕ್ಕೆ ಕೊಡೋಣಾಗುವ ಹಣಗಳನ್ನು ಸಂಘದ ಲೆಖ್ಖಕ್ಕೆ ಮಂಗಳೂರಲ್ಲಿ ಮದ್ರಾಸ್ ಬೇಂಕಿನಲ್ಲಿಯಾಗಲೀ ಕೆನರಾ ಬೇಂಕಿನಲ್ಲಿಯಾಗಲೀ ವಸೂಲು ಕೊಡಬಹುದು ದೀರ್ಘ ವಾಯಿದೆಯ ಹೆಚ್ಚು ಮೊಬಲಗಿನ ಠೇವಣಾತಿಗಳ ಮೇಲೆ ಕೊಡಲ್ಪಡುವ ವಿಶೇಷ ದರದ ಬಡ್ಡಿ ವಿಷಯು ಕೆಳಗಿನ ವಿಳಾಸಕ್ಕೆ ಬರೆಕೊಳ್ಳಿರಿ

ಬ್ಯಾಂಕಿನ ಆಫೀಸು,
ತಾ 31—8—1920

ನ ಆನಂದರಾವ್,
ಕಾರ್ಯದರ್ಶಿ

ಒಂದೇ ಸಾರಿ ನಾಲ್ಕು ಸೀರೆಗಳನ್ನು ತರಿಸುವವರಿಗೆ ಪ್ಯಾಕಿಂಗ್ ಮತ್ತು ಅಂಚೆ ಹಾಸಲು ಮುಕ್ತು.

ಮಧುರೆ ಚುನ್ನಡಿ ಅಂಚಿನ ಸೀರೆಗೆ ರೂ. 4-8-0. 1 ಸೀರೆಗೆ ಐದು ಕರಕುಳ್ಳ ಗಿಲ್ಟ ಕಟ್ಟಡ ಒಂದು ನಾಗರ ಇನಾಂ

ಇದು ಉಡುವದಕ್ಕೆ ಧಳಧಳಿಯಾಗಿಯೂ, ನೋಟಕ್ಕೆ ನಯವಾಗಿಯೂ, ಬೆಲೆ ಸುಲಭವಾಗಿಯೂ ಇದೆ ಬಣ್ಣ ಹೋಗದು. ಸೀರೆಯು ಉದ್ದ 18 ಮೊಳ ಸುಂದರ ನಾಜ ಸೀರೆಗು ಒಂದನ್ನು ತರಿಸಿ ಪರೀಕ್ಷಿಸಿ. ಕ್ರಯ ರೂ. 4—8—0. [2074]

ನರಸಾಪುರಂ ಜರಿ ರೂ 6 12-0 ಬೀಳೀ ಮೊಂಗಾಯಿ ರೂ 5-0 0. ಬೀಳೀ ತಡಕೋಡಿ 4 12-0 ಸಾವಿತ್ರಿ ಜರಿ ರೂ 8 4 0 ಪುದ ಚೇರಿ ರೂ 5-12-0 ಕಾಂಕ್ರೊಂತಲ ರೂ 7-8-0

C. C Lingam & Co
2 *Ramanuga Ayer St*
Sowcarpet MADRAS

ಭೃಂಗರಾಜ ತೈಲ.

ಇದನ್ನು ತಲೆಗೆ ಹಚ್ಚಿದರೆ ಎಲ್ಲಾ ತರದ ರೋಗಗಳು ಗುಣವಾಗುತ್ತವೆ ನರೆತ ಕೂದಲು ಕಪ್ಪಾಗುತ್ತದೆ ಕೇಶ ದಾಮಗಳು ವೃದ್ಧಿಹೊಂದುತ್ತವೆ ಕಂಠದ ಮೇಲೆ ಎಲ್ಲಾ ಇಂದ್ರಿಯಗಳಿಗೆ ಬಲಕೊಡುತ್ತದೆ ಪಿತ್ತನಾಶ ಮಾಡುತ್ತದೆ ನಾಲ್ಕು ಔನ್ಸಿನ ಸೀಸೆ ಒಂದರ ಕ್ರಯ ರೂ 0—12—0

ತ್ರಿಫಲಾದಿ ತೈಲ—ವಾತ, ಪಿತ್ತ, ಶ್ಲೇಷ್ಮ ಇವುಗಳಿಂದ ಉಂಟಾದ ರೋಗಗಳೆಲ್ಲಾ ಇದನ್ನು ತಲೆಗೆಹಚ್ಚಿಕೊಂಡರೆ ಪರಿಹಾರವಾಗುತ್ತದೆ ಎಲ್ಲಾ ಇಂದ್ರಿಯಗಳಿಗೆ ಬಲಕೊಡುತ್ತದೆ ನಾಲ್ಕು ಔನ್ಸಿನ ಸೀಸೆ ಒಂದರ ಕ್ರಯ ರೂ 1

ಜ್ವರಾಂತಕ ಮಾತ್ರೆ—ಈ ಮಾತ್ರೆಯನ್ನು ಉಪಯೋಗಿಸಿದರೆ ಎಲ್ಲಾ ಜ್ವರಗಳು ಪರಿಹಾರವಾಗುತ್ತದೆ ಉಪಯೋಗಿಸುವ ಕ್ರಮ, ವ ತಪ್ಪ ಗುಣ ತಿಳಿಸಿಕೊಂಡ ಪ್ರಮಾಣಿಕ ಪಡಿಸುತ್ತದೆ 20 ಮಾತ್ರೆಗಳುಳ್ಳ ಒಂದರ ರೂ 1

ಪಂಚಸಾರ ಲೋಹ—ಅಜೀರ್ಣ ಪಿತ್ತ ವಾತಶ್ಲೇಷ್ಮ ಇವುಗಳಿಂದ ಉಂಟಾದ ರೋಗಗಳೆಲ್ಲಾ ಇದರಿಂದ ಪರಿಹಾರವಾಗುತ್ತದೆ ಮತ್ತು ಇಂದ್ರಿಯವನ್ನು ಬಲಪಡಿಸಿ ಅನೇಕ ತರದ ಇಂದ್ರಿಯ ದೋಷಗಳನ್ನು ಗುಣಪಡಿಸುತ್ತದೆ ಒಂದು ಸೀಸೆಗೆ ರೂ 1—4—0

ಮೇಲೆ ಬರೆದ ಔಷಧಿಗಳು ಸರ್ವ ವೈದ್ಯರಿಗೂ ಶಿರೋಮಣಿಯಾದ ಶ್ರೀ ಆಯುರ್ವೇದವಲಂಬಿಗಳಾದ ಶ್ರೀ ಪೂಜ್ಯಪಾದ ಋಷಿ ಪ್ರಣೀತ ವೈದ್ಯಗ್ರಂಥ ಆಧಾರದಿಂದ ಆವರನ ಪೂಜ್ಯರ ಅನುಯಾಯಿಗಳಾದ ನಮ್ಮಿಂದ ತಯಾರಿಸಲ್ಪಟ್ಟಿರತ್ತವೆ ಆರ್ಷವಚನವು ನಮಗೆ ಎಷ್ಟು ಸತ್ಯವಾಗಿ ತೋರುತ್ತದೋ ಅಷ್ಟೇ ಭರವಸೆಯಿಂದ ಈ ಔಷಧಗಳ ರೋಗ ಪರಿಹಾರಕವಾಗಿರುತ್ತವೆ

ಸೂಚನೆ—ಅಪೇಕ್ಷಿಸುವವರು ಕೆಟಲಾಗಿಗೆ ಬರೆದುಕೊಳ್ಳುವುದು ಉಚಿತವಾಗಿ ಕಳುಹಿಸಲಾದೀತು

ಆಯುರ್ವೇದಿಕ್ ಮತ್ತು ಹೊಮಿಯೊಪತಿಕ್
... ವರ್ಮ ವೈದ್ಯಶಾಲಾ,
ಧರ್ಮಸ್ಥಳ ದಕ್ಷಿಣ, ಕನ್ನಡ

ಸದ್ಬೋಧಕ ಗ್ರಂಥಮಾಲೆ.
(ತ್ರೈಮಾಸಿಕ ಪುಸ್ತಕ)

೧೯೨೧ನೇ ಜನವರಿಯಿಂದ ಆರಂಭ — ವಾರ್ಷಿಕ ಚಂದಾ ಅಂಚೆ ಸಹಿತ ರೂ 1 ಮಾತ್ರ

ಪ್ರತಿ ಮೂರು ತಿಂಗಳಿಗೊಮ್ಮೆ ಕನ್ನಡ ಕಥಾ, ಕಾದಂಬರಿ ನಾಟಕ, ಕಾವ್ಯ ಪ್ರಬಂಧವೇ ಮೊದಲಾದ ಗ್ರಂಥಗಳಲ್ಲಿ ಯಾವುದಾದರೊಂದು ಪೂರ್ಣ ಪುಸ್ತಕವೂ ... ಪ್ರಕಟವಾಗುವವು ... ಕನ್ನಡಿಗರಿಗೂ ... ಭಾಷಾ ಪೋಷಕರಾದ ಕನ್ನಡಿಗರೆಲ್ಲರೂ ಪ್ರೋತ್ಸಾಹಿಸಬೇಕಾಗಿ ಪ್ರಾರ್ಥನೆ.

ವಿಳಾಸ — ... ರಂಗಪ್ಪಯ್ಯ, ಸಂಪಾದಕ ಮತ್ತು ಪ್ರಕಾಶಕ
'ಸದ್ಬೋಧಕ ಗ್ರಂಥಮಾಲಾ' ಕಾರ್ಯಾಲಯ,
ಸುರತಕಲ್, (ದಕ್ಷಿಣ ಕನ್ನಡ)

S R, Hebbar & Bros,
General Merchants, SURATKAL, S K.

ಇಂಡಿಯನ್ ಮೋಟರ್ ಸರ್ವಿಸ್.

ಈ ಸರ್ವಿಸಿನ ಮೋಟರ ಬಸ್ಸುಗಳು ಮಂಗಳೂರಿನಿಂದ ಬಂಟ್ವಾಳಕ್ಕೂ, ಬೆಳ್ತಂಗಡಿಗೂ, ಪುತ್ತೂರಿಗೂ, ಗುರುಪುರಕ್ಕೂ ವ ಕಾರ್ಕಳ ಮಾರ್ಗವಾಗಿ ಉಡ್ಪಿಗೂ ವ ಆಯಾಯ ಸ್ಟೇಶನುಗಳಿಂದ ವಾಪಸು ಮಂಗಳೂರಿಗೂ ಚಲಾವಣೆ ಆಗುವವು

ಬೇರೆ ಯಾವ ಮಾಹಿತಿ ಬೇಕಾಗಿದ್ದರೆ ನಮ್ಮ ಕದ್ರಿ ವ ಹಂಪನಕಟ್ಟೆ ಆಫೀಸುಗಳಲ್ಲಿ ವ ಇತರ ಬ್ರೇಂಚ್ ಆಫೀಸುಗಳಲ್ಲಿ ವಿಚಾರಿಸಿದ್ದಲ್ಲಿ ತಿಳಿಯಬರುವದು.

ಹಂಪನ ಕಟ್ಟೆ, ಮಂಗಳೂರು, ಮಾಧವ ಬಿಲ್ಡಿಂಗ್ಸ್ — ಎ. ಸಿ. ಅಂದ್ರಾದೆ
ಪ್ರೊಪ್ರೈಟರ್

ಇನ್‌ಫ್ಲುಯೇನ್ಜಾ ಜ್ವರಕ್ಕೆ

ಎಮ್ಕೋ.

ಖಾತ್ರಿ ಚಿಕಿತ್ಸೆ!

ಇನ್‌ಫ್ಲುಯೆನ್ಜಾ, ನಿಮೋನಿಯಾ ಮಲೇರಿಯಾ, ಸಾಧಾರಣ ಜ್ವರ, ಬಿಟ್ಟುಬಿಟ್ಟು ಬರುವ ಜ್ವರ ವಿಷಮ ಜ್ವರ, ಕೆಮ್ಮು, ಶೀತ, ಮೊದಲಾದ ಬಾಧ್ಯಗಳಿಗೆ ಖಾತ್ರಿ ಚಿಕಿತ್ಸೆಗಳ ಅವಶ್ಯಕತೆಯು ದಿನೇದಿನೇ ಹೆಚ್ಚುತ್ತಿರುವ ಕಾರಣ ನಾವು ಈ "ಎಮ್ಕೊ" ಎಂಬ ಅನುಭವಸಿದ್ಧವಾದ ಖಾತ್ರಿ ಔಷಧಿಯನ್ನು ಈಗತಾನೇ ಪ್ರಖ್ಯಾತಕ್ಕೆ ತಂದಿರುತ್ತೇವೆ ಮೇಲಿನ ಬಾಧ್ಯಗಳಿಗೆ ಇದು ಖಾತ್ರಿ ಚಿಕಿತ್ಸೆ ಎಂಬದಕ್ಕೆ ಕಳೆದ ಕೆಲವು ವರ್ಷಗಳಿಂದ ನಾವು ಇದನ್ನು ಕೊಟ್ಟು ಗುಣಪಡಿಸಿದ ನೂರಾರು ರೋಗಿಗಳೇ ಸಾಕ್ಷಿ

ಎಮ್ಕೊ. ಇದು ಎಲ್ಲಾ ರೋಗಾಣುಗಳನ್ನು ಕೊಂದು ಅದರ ವಿಷವನ್ನು ನಾಶಪಡಿಸಿ, ಇನ್‌ಫ್ಲುಯೇನ್ಜಾ, ನಿಮೋನಿಯಾ ಮತ್ತು ಅದರಂತಿನ ಇತರ ಸೋಂಕು ರೋಗಗಳು ತಟ್ಟದಂತೆ ತಡೆಕಟ್ಟಿ ಅದು ಉಲ್ಬಣವಾಗದಂತೆ ಮಾಡುತ್ತದೆ

ಎಮ್ಕೊ ಇದು ಇನ್‌ಫ್ಲುಯೇನ್ಜಾ ಮೊದಲಾದ ಎಲ್ಲಾ ತರದ ಜ್ವರಗಳನ್ನು ತಪ್ಪದೆ ಗುಣಮಾಡುತ್ತದೆ

ಎಮ್ಕೊ. ಇದನ್ನು ಹಾನಿಕರವಲ್ಲದ ಔಷಧಿಗಳ ಕೂಟದಿಂದ ಅತಿ ಜಾಗರೂಕತೆಯಿಂದ ತಯಾರಿಸಿರುತ್ತದಾದಕಾರಣ ಜ್ವರ ಇರುವ ಕಾಲದಲ್ಲಿಯೂ ಜ್ವರ ಇಲ್ಲದ ಕಾಲದಲ್ಲಿಯೂ ಏನೂ ಭಯವಿಲ್ಲದೆ ಎಲ್ಲಾ ವಿಧದ ಜ್ವರಗಳಿಗೆ ಇದನು ಕೊಡಬಹುದು ಹೆಂಗಸರೂ, ಮಕ್ಕಳೂ ಭಯಭೀತಿ ಇಲ್ಲದೆ ಸೇವಿಸಬಹುದು

ಎಮ್ಕೊ. ಅಲ್ಲದೆ ಇದು ಕೊಲೇರಾ ರೋಗಿಗಳನ್ನೂ ಗುಣಪಡಿಸಿರುತ್ತದೆ

ಕ್ರಯ ಸೀಸೆ ಒಂದು ರೂ. ೦—೧೨—೦ ಮಾತ್ರ. ವಿ. ಪಿ. ಬೇರೆ

ಪ್ರಾಮುಖ್ಯ ಏಜಂಟರು — ದಿ ಇಕ್ಲಿಪ್ಸ್ ಏಜನ್ಸಿ,
ಬಲಠ ರಪೆ, ಮಂಗಳೂರು.

'ಟಿಷ್ಯುರೆಮಿಡಿಸ್"

ಎಂದರೆ

ಶುಸ್ಲರ್ ಪಂಡಿತರ ಹನ್ನೆರಡು ಲವಣ ಔಷಧಗಳು

1 ಕಲ್ಕೇರಿಯ ಫ್ಲೊರ್	5 ಕಾಲಿ ಮ್ಯುರ್	9 ನಾಟ್ರಮ್ ಮ್ಯುರ್
2 ಕಲ್ಕೇರಿಯ ಫೊಸ್	6 ಕಾಲಿ ಫೊಸ್	10 ನಾಟ್ರಮ್ ಫೊಸ್
3 ಕಲ್ಕೇರಿಯ ಸಲ್ಫ್	7 ಕಾಲಿ ಸಲ್ಫ್	11 ನಾಟ್ರಮ್ ಸಲ್ಫ್
4 ಫೆರಮ್ ಫೊಸ್	8 ಮೆಗ್ನೆಸಿಯ ಫೊಸ್	12 ಸಿಲಿಸಿಯಾ

ಕ್ರಯ ರೂ. ಆ ಪೈ

ಎರಡು ಡ್ರಾಮ್ ಸೈಜ್ ಸೀಸೆ ಒಂದರ		3 6
ನಾಲ್ಕು	, , „	—6—0
ಒಂದು ಔನ್ಸಿನ	, , ,	—10—6
ಹನ್ನೆರಡು ಲವಣಗಳ ಎರಡು ಡ್ರಾಮಿನ ಸೀಸೆಗಳುಳ್ಳ ಒಳ್ಳೇ ನಮೂನೆಯ ಚಿಕ್ಕ ಪೆಟ್ಟಿಗೆಗೆ		3—0—0
ಹನ್ನೆರಡು ಲವಣಗಳ ಒಂದು ಔನ್ಸಿನ ಸೀಸೆಗಳುಳ್ಳ ಪೆಟ್ಟಿಗೆಗೆ ಜೀವರಸಾಯನ ವೈದ್ಯ ಶಾಸ್ತ್ರ ಪುಸ್ತಕ ಸಮೇತ.		11—0—0

ಜೀವರಸಾಯನ ವೈದ್ಯಶಾಸ್ತ್ರ ಎಂಬ ಹೊಸಪುಸ್ತಕವು ಇದು ಮೇಲೆ ಹೇಳಿದ ಟಿಶ್ಯು ಔಷಧಗಳನ್ನು ಸರ್ವಸಾಧಾರಣವಾದ ಎಲ್ಲಾ ಕಾಹಿಲೆ ಕಸಾಲೆಗಳಲ್ಲಿ ಉಪಯೋಗಿಸುವ ಕ್ರಮವನ್ನು ಸೂಚಿಸುತ್ತದೆ ಈ ಪುಸ್ತಕವು ಎಲ್ಲರಿಗೂ ಸುಲಭ ದರದಲ್ಲಿ ಸಿಕ್ಕುವಂತೆ ಪ್ರಕಟಿಸಿದ್ದೇವೆ ಕ್ರಯ 12 ಆಣೆ ಮಾತ್ರ ಬೇಕಾಗಿದ್ದವರು ಕೆಳಗಿನ ವಿಳಾಸಕ್ಕೆ ಬರೆಯಬಹುದು

ಎ ಫೆರ್ನಾಂಡಿಸ್,
ಎಲೆಕ್ಟ್ರೋ ಹೋಮಿಯೋಪತಿ ಡಿಸ್ಪೆನ್ಸರಿ, ಮಂಗಳೂರು.

ವಾನಿಂಗ್ ಟಿಲ್ಲಿ ಬ್ರದರ್ಸ್—ಇವರ

ಜೆನ್‌ವಿನ್ ಹಾರ್ಲೆಮ್ ಆಯಿಲ್

ಇದು ನರಸಂಸಾರವನ್ನು ಕಾಡುತ್ತಿರುವ ಸರ್ವ ಬಗೆಯ ರೋಗಗಳಿಗೆ ರಾಮಬಾಣ ಔಷಧ.
ಇದು ಆಹಾರ ಮತ್ತು ಔಷಧಿ ಸರಬರಾಯಿ ಆಕ್ಟಿಗನುಸಾರವಾಗಿ ರಿಜಿಸ್ಟರಾಗಿದೆ.
ಇದು ತಾಜಾ ಆಯಿಲ್ ಎಂಬುದಕ್ಕೆ ಹಾಲೆಂಡ್ ಸರಕಾರದಿಂದ ರಿಜಿಸ್ಟರ್ ನೆಂ. ಪಡೆದಿದೆ.
ಇದು ಮುನ್ನೂರು ವರುಷಗಳಿಂದ ಲೋಕದಲ್ಲೆಲ್ಲಾ ಖ್ಯಾತಿಯನ್ನು ಹೊಂದಿರುತ್ತದೆ.
ಇದು ಜಗದೀಶನೇ ಅನುಗ್ರಹಿಸಿದಂಥಾ "ಅಮೃತ" ಎಂಬ ಹೆಸರಿನಿಂದ ಕರೆಯಲ್ಪಡುತ್ತಿದೆ.

ಹೆಚ್ಚೇಕೆ? ಅಂಗೈ ನೋಡಲು ಕನ್ನಡಿ ಬೇಕೆ?

ವಾನಿಂಗ್‌ಟಿಲ್ಲಿ ಜೆನ್‌ವಿನ್ ಹಾರ್ಲೆಮ್ ಆಯಿಲನ್ನು ಪ್ರಥಮತಃ ಮಂಗಳೂರಿಗೆ ತಂದ ಜರ್ಮನ್ ಮಿಶನರಿ ಲೇಡಿ ಹೆರ್ಮನ್ ಬ್ರೇಕ್ಲೆಯವರು ಇದೇ ಮಾರ್ಚಿ ತಾ. 10ರಲ್ಲು ಸ್ಟುಟ್‌ಗಾರ್ಟ್ ಪಟ್ಟಣದಿಂದ ವಾನಿಂಗ್‌ಟಿಲ್ಲಿ ಕಂಪೆನಿಯವರಿಗೆ ಈ ರೀತಿ ಬರೆದಿರುವರು:—ದಯವಿಟ್ಟು ನಿಮ್ಮ ಹಾರ್ಲೆಮ್ ಆಯಿಲಿನ 25 ಸೀಸೆಗಳನ್ನು ಕಳುಹಿಸಿಕೊಡಿರಿ. ಇದು ಉತ್ಕೃಷ್ಟವಾದ ಖಾತ್ರಿ ಔಷಧಿಯೆಂದು ನನ್ನ ಅನುಭವಕ್ಕೆ ಬಂದಿದೆ. ನಾನು 1910ನೇ ಇಸವಿಯಲ್ಲಿ ಮಂಗಳೂರಿಗೆ ಹೋದಾಗ ನಿಮ್ಮ ಹಾರ್ಲೆಮ್ ಆಯಿಲಿನ 12 ಸೀಸೆಗಳನ್ನು ಕೊಂಡುಹೋಗಿದ್ದೆನು. ಇದನ್ನು ಹಿಂದೀಯರೊಳಗೆ ಪ್ರಯೋಗಿಸಿದ್ದಲ್ಲಿ ಅತಿ ಸಾಫಲ್ಯವಾಗಿ ಪರಿಣಮಿಸಿತು. ಹಿಂದೀಯರೊಳಗೆ ಪ್ರಬಲವಿರುವ ಜ್ವರಕ್ಕೆ ಇದು ಖಾತರಿ ಔಷಧಿ ಎಂದು ಮಿಶ್ಯನ್ ಶೋಪಿನ ವ್ಯಾಪಾರಿಗೆ ತಿಳಿದು ಅವರು 25—100—1000 ಸೀಸೆಗಳಂತೆ ತರಿಸಿದರು. ಇದರಿಂದ ಎಷ್ಟೋ ಜನರು ಪ್ರಯೋಜನ ಹೊಂದಿ ... ಕುಟುಂಬಗಳು "ಕುಟುಂಬಸಂಜೀವನಿ" ಎಂಬಂತೆ ಇದನ್ನು ಮನೆಮನೆಯಲ್ಲಿ ಇಟ್ಟುಕೊಳ್ಳಲು ತೊಡಗಿದರು. ಇತ್ಯಾದಿ.

ಮ॥ ರಾ॥ ಬೆಳಿಯಪ್ಪ ಆಮ್ಮತಿ—ತಾ. 28—4—'20, ನಿಮ್ಮಿಂದ ತರಿಸಿದ ಹಾರ್ಲೆಮ್ ಆಯಿಲ್ ಜ್ವರಕ್ಕೆ ಖಾತರಿ ಔಷಧಿಯಾಗಿದೆ. ದಯಮಾಡಿ 12 ಸೀಸೆ ವಾನಿಂಗ್‌ಟಿಲ್ಲಿ ಜೆನ್‌ವಿನ್ ಹಾರ್ಲೆಮ್ ಆಯಿಲ್ ವಿ. ಪಿ. ಮಾಡಿ ಕಳುಹಿಸಿರಿ.

ರೆವರೆಂಡ್ ಅಂಬಟ್, ಎಸ್. ತಲಚೇರಿ—ನಿಮ್ಮಿಂದ ತರಿಸಿದ ವಾನಿಂಗ್ ಟಿಲ್ಲಿ ಜೆನ್‌ವಿನ್ ಹಾರ್ಲೆಮ್ ಆಯಿಲ್ ಪ್ರಯೋಗಿಸಿ ನನಗೆ ದೀರ್ಘ ಕಾಲದಿಂದಿದ್ದ ನರಗಳ ಅಶಕ್ತಿಯು ಪೂರ್ಣವಾಗಿ ಗುಣವಾಗಿದೆ.

ಮ॥ ರಾ॥ ಶಂಕರನ್ ನಂಬಿಯಾರ್, ಕುಟ್ಟಿಪರಂಬ, 20—8—'20:—ನಿಮ್ಮಿಂದ ತರಿಸಿದ ವಾನಿಂಗ್‌ಟಿಲ್ಲಿ ಜೆನ್‌ವಿನ್ ಹಾರ್ಲೆಮ್ ಆಯಿಲಿನಲ್ಲಿ ಅತಿ ಮಾನುಷ್ಯ ಶಕ್ತಿಯಿದೆ. ನಾನು ಪ್ರಯೋಗಿಸಿದ ಹಲವು ಬಗೆಯ ರೋಗಗಳು ಇದರ ಸೇವನೆಯಿಂದ ಪೂರ್ಣ ಗುಣ ಹೊಂದಿದೆ. 6 ಸೀಸೆಗಳನ್ನು ವಿ.ಪಿ. ಮಾಡಿಕಳುಹಿಸಿರಿ.

ವಾನಿಂಗ್ ಟಿಲ್ಲಿ ಬ್ರದರ್ಸ್—ಜೆನ್‌ವಿನ್ ಹಾರ್ಲೆಮ್ ಆಯಿಲ್

ಪ್ರಯೋಗಿಸಿ, ಮೂಲವ್ಯಾಧಿ, ಅಪಸ್ಮಾರ, ಮೂತ್ರದೋಷಗಳು, ಪಕ್ಷವಾತ, ಸೂತಕದ ಅಕ್ರಮಗಳು, ವಾತ, ಜ್ವರ, ಇತ್ಯಾದಿ ರೋಗಗಳಿಂದ ಪೂರ್ಣ ಗುಣಹೊಂದಿದವರ ನೂರಾರು ಪತ್ರಗಳು ಬರುತ್ತಲೇ ಇವೆ. ಆದ್ದರಿಂದ ವಾನಿಂಗ್‌ಟಿಲ್ಲಿ ಜೆನ್‌ವಿನ್ ಹಾರ್ಲೆಮ್ ಆಯಿಲಿನ ಸೀಸೆಗಳನ್ನು ಕೊಂಡುಕೊಳ್ಳುವಾಗ ಮಾತ್ರ ಸೀಸೆಯ ಮೇಲಿರುವ ಈ ಟ್ರೇಡ್‌ಮಾರ್ಕ್ ಮತ್ತು Wanning Tilly Bros., ಎಂಬ ದಸ್ಕತು ನೋಡಿ ಕೊಂಡುಕೊಂಡು ಆರೋಗ್ಯ ಪಡೆಯಿರಿ.

ಕ್ರಯ ಸೀಸೆ 1ಕ್ಕೆ ರೂ. **0—8—0;** ಡಜನ್ ಸೀಸೆಗಳಿಗೆ ರೂ. **6—0—0;** ವಿ. ಪಿ. ಮಾಫಿ.

ಬ್ರಿಟಿಷ್, ಫ್ರೆಂಚ್, ಪೋರ್ತುಗೀಸ್ ಹಿಂದುಸ್ಥಾನದ ಸೋಲ್ ಏಜಂಟರು:— ಎಸ್. ಇ. ಐಮನ್, ದಿ. ಎಕ್ಲಿಪ್ಸ್ ಏಜನ್ಸಿ,
ಬಲ್ಮಠ ರಸ್ತೆ, ಮಂಗಳೂರು.

ಆಯುರ್ವೇದ ಶಾಸ್ತ್ರಾನುಸಾರ

ಡಾಕ್ಟರ್ ಎಚ್. ಲಕ್ಷ್ಮೀನಾರ್ಣಪ್ಪಾ ಮತ್ತು ಸನ್ಸ್

ಇವರಿಂದ ತಯಾರಿಸಲ್ಪಟ್ಟ ಸಿದ್ಧೌಷಧಗಳು.

1. ಶತಮೂಲಿಕೆಯ ಸತ್ವವು. ಈ ಮಹೌಷಧಿಯ ಸೇವನೆಯಿಂದ ಕ್ಷಯ, ಅಸ್ಥಿಜ್ವರ, ನಿಂತು ನಿಂತು ಬರುವ ಜ್ವರ, ಬಹುಕಾಲದ ಕಫ, ರಕ್ತವಾಂತಿಯಾಗುವಿಕೆ, ಹೃದಯದ ದುರ್ಬಲತೆ ಲಿಪ್ಪರ (ಕಾಳಜಿ), ಮೂತ್ರಕೋಶದ ವ್ಯಾಧಿಗಳು ವ ಎಲ್ಲ ತರದ ದುರ್ಬಲತೆಯು ನಾಶಹೊಂದಿ, ಶರೀರಕ್ಕೆ ಆರೋಗ್ಯವನ್ನುಂಟುಮಾಡುವದು. ಇನ್‌ಫ್ಲುಯೆಂಜಾ ಜ್ವರಕ್ಕೂ, ಅಶಕ್ತ ಜನರಿಗೂ, ಬತ್ತಿಬರುವ ಸಣ್ಣ ಹುಡುಗರಿಗೂ, ಪ್ರಸೂತಿಂತರ ಹೆಂಗಸರಿಗೂ, ಶಕ್ತಿ ಪುಷ್ಟಿಯನ್ನೀಡುವ ದಿವ್ಯ ಔಷಧಿಯು ಇಂಗ್ಲಿಷ ಯಾ ಬೇರೆ ಔಷಧದಿಂದ ಗುಣ ಹೊಂದದ ಅಸಂಖ್ಯ ರೋಗಿಗಳು ಈ ಜೀವನಾಮೃತದ ಸೇವನೆಯಿಂದ ಪೂರ್ಣಗುಣಹೊಂದಿ ಸಾಸಿನಿಂದ ತಮ್ಮ ಜೀವರಕ್ಷಣೆ ಮಾಡಿಕೊಂಡಿರುವರು. ೧೬ ಔನ್ಸಿನ ಬಾಟ್ಲಿ ೧ಕ್ಕೆ ರೂ. ೨—೧೨—೦ ಟಿ. ಖ. ಪ್ಯಾಕಿಂಗ ಬೇರೆ.

2. ವಿಜಯಸಂಜೀವಿನಿ ತೈಲ. ಕಾಲತಪ್ಪಿ ಬಹಿಷ್ಠೆಯಾಗುವುದು, ಬಹಿಷ್ಠೆಯ ಕಾಲ ನೋವು, ಸಂದುಗಳಲ್ಲಿ ಬೇನೆ, ಉದರ ಶೂಲೆ, ಗರ್ಭಸ್ರಾವಮತ್ತು ಇದಕ್ಕೆ ಸಮ್ಮಂಧಪಟ್ಟ ವ್ಯಾಧಿಗಳಿಗೆ ದಿವ್ಯ ಔಷಧ. ಸ್ತ್ರೀಯರ ರೋಗಗಳಿಗೆ ಇದು ಮುಖ್ಯ ಔಷಧವಾಗಿರುವುದಲ್ಲದೆ, ಸ್ವಾಭಾವಿಕವಾಗಿ ಕಾಲಕಾಲಕ್ಕೆ ಉಂಟಾಗುವ ಹೊಟ್ಟೆನೋವಿಗೆ ಅನುಭವಸಿದ್ಧವಾದ ಔಷಧ. ಕ್ರಯ ಸೀಸೆ ೧ಕ್ಕೆ ರೂ. ೨.

3. ಕೋಲೇರಾ ಗುಳಿಗೆಗಳು. ಇವನ್ನು ವಾಂತಿಭೇದಿಯ ಯಾವ ಸ್ಥಿತಿಯಲ್ಲೂ ಕೊಡಬಹುದು, ಸಕಲ ಗೃಹಗಳಲ್ಲಿಯೂ ಇದನ್ನು ಸಂಗ್ರಹಿಸಿ ಇಡತಕ್ಕುದಾಗಿದೆ. ನಾಲ್ಕು ಮಾತ್ರೆಗಳೊಳಗೆ ಗುಣ ಖಂಡಿತ. ಅಜೀರ್ಣದ ರೋಗಕ್ಕೂ ಅತಿಸಾರಕ್ಕೂ ಉತ್ತಮ. ೪೮ ಗುಳಿಗೆಗಳ ಬಾಟ್ಲಿಗೆ ಕ್ರಯ ರೂ. ೧—೦—೦.

4. ವಾತಾಂತಕ. ದೀರ್ಘ ಕಾಲದ ಮತ್ತು ಯಾವ ತರದ ವಾತ, ಪಕ್ಷವಾತ ಮುಂತಾದ ಭೀಕರ ರೋಗಗಳ ಮೇಲೆ ರಾಮಬಾಣ. ಒಂದು ಸಲ ಉಪಯೋಗಿಸುವುದರಲ್ಲಿ ಇದರ ಶ್ರೇಷ್ಠತೆಯು ತಾನಾಗಿಯೇ ಕಂಡುಬರುವುದು. ಕ್ರಯ ಬಾಟ್ಲಿ ೧ಕ್ಕೆ ರೂ. ೧-೮-೦.

ಈ ಔಷಧಿಗಳ ದಿವ್ಯ ಗುಣಗಳ ಬಗ್ಗೆ ಪ್ರಸಿದ್ಧ ವೈದ್ಯರಿಂದಲೂ, ಜಮೀನದಾರರಿಂದಲೂ, ದೊಡ್ಡ ದೊಡ್ಡ ಸಂಸ್ಥೆಗಳಿಂದಲೂ, ಸುವರ್ಣ ಪದಕಗಳೂ, ಸರ್ಟಿಫಿಕೇಟುಗಳೂ ಸಿಕ್ಕಿರುತ್ತವೆ. ಪತ್ರವ್ಯವಹಾರವು ಇಂಗ್ಲಿಷ್‌ನಲ್ಲಿರಬೇಕು. ಆರ್ಡರ ಕಳುಹಿಸುವಾಗ ಈ ಪತ್ರದ ಉಲ್ಲೇಖ ಮಾಡಿರಿ. ವಿಳಾಸ:—

ಡಾಕ್ಟರ್ ಎಚ್. ಲಕ್ಷ್ಮೀನಾರ್ಣಪ್ಪಾ ಮತ್ತು ಸನ್ಸ್,
ಭವಾನ್‌ಸಿಂಗ್ ಕಂಪೆನಿ ಸಮೀಪ, ತಿರುಪೂರ, (ಕೊಯಮುತ್ತೂರು ಜಿಲ್ಲೆ.)

ಅಮೃತಕಲ್ಪ ವೈದ್ಯಶಾಲಾ,

ಕಾಸರಗೋಡು.

ಆಯುರ್ವೇದ ವಿಧಿ ಪ್ರಕಾರ ತಯಾರಿಸಲ್ಪಟ್ಟ ಕಷಾಯ, ಚೂರ್ಣ, ಅವಲೇಹ, ಭಸ್ಮ, ಘೃತ, ತೈಲ, ಆಸವ ಅರಿಷ್ಟ, ದ್ರಾವಕ ಮೊದಲಾದುವುಗಳು, ಕಣ್ಣು ಚಿಕಿತ್ಸೆಗಳ ಎಲ್ಲಾ ಔಷಧಗಳೂ ಅತಿ ವಿಶೇಷವಾದ ಗುರು ಲಘು ಕೆಲವು ಸಿದ್ಧೌಷಧಗಳೂ ಸುಲಭವಾದ ಕ್ರಯಕ್ಕೆ ಇಲ್ಲಿ ಎಲ್ಲಾ ಸಮಯದಲ್ಲಿಯೂ ದೊರಕುವರೆ ತಯಾರಿವೆ. ಔಷಧಗಳ ಗುಣವು ಒಮ್ಮೆಯೇ ಉಪಯೋಗಿಸಿದ್ದಲ್ಲಿ ತಿಳಿದು ಬರುವುದು.

ವೈದ್ಯಶಾಲೆಯ ಮ್ಯಾನೇಜರರೂ ಮನೇಜರರೂ ಆದ ದಾಮೋದರ ನಂಬೀಶನರು ಆದಿತ್ಯವಾರ ಹೊರತು ವಾರದ ಎಲ್ಲಾ ದಿವಸಗಳಲ್ಲಿಯೂ ವೈದ್ಯಶಾಲೆಗೆ ಬರುವ ರೋಗಿಗಳನ್ನು ಪ್ರತಿಫಲವಿಲ್ಲದನೇ ಪರೀಕ್ಷಿಸಿ, ಚಿಕಿತ್ಸೆ ನಿಶ್ಚಯಿಸಿ ಔಷಧ ಕೊಡುವರೆ ಸಿದ್ಧರಾಗಿರುವರು. ಅಪೇಕ್ಷಿಸಿದಲ್ಲಿ ಎಲ್ಲಾ ಔಷಧಗಳನ್ನು ಜಾಗ್ರತೆಯಿಂದ ವಿಳಂಬವಿಲ್ಲದೆ ವಿ. ಪಿ. ಮೂಲಕ ಕಳುಹಿಸಲಾಗುವುದು.

೧. ಕುಮಾರ ಶಕ್ತಿವರ್ಧಕ—

ಇದು ಮಕ್ಕಳ ಆರೋಗ್ಯಾಭಿವೃದ್ಧಿಗೆ ದಿವ್ಯ ಔಷಧ.

1. ಇದು ಶಕ್ತಿವರ್ಧಕ—ರಕ್ತ ಪುಷ್ಟಿಕಾರಿಯಾಗಿರುತ್ತದೆ. ವಳಜ್ವರ, ಗ್ರಹಣಿ, ಕ್ರಿಮಿದೋಷ ವಗೈರ ಮಕ್ಕಳ ಎಲ್ಲಾ ರೋಗಗಳನ್ನು ಪರಿಹರಿಸಿ ದೇಹವನ್ನು ಪುಷ್ಟಿ ಮಾಡುತ್ತದೆ. ಇದು ರೋಗವಿಲ್ಲದ ಮಕ್ಕಳ ಆರೋಗ್ಯ ಸೌಖ್ಯಕ್ಕಾಗಿ ಉಪಯೋಗಿಸಬಹುದು—೧ ಸೇರು ಇರುವ ಡಬ್ಬಿ ಕ್ರಯ ೨—೮—೦.

೨. ಕೇಶ ಭೂಷಣ ತೈಲ—ಇದರಿಂದ ತಲೆ ಕೂದಲು ಪುಷ್ಟಿಯಾಗಿಯೂ, ಕಪ್ಪಾಗಿಯೂ, ಉದ್ದವಾಗಿಯೂ ಬರುತ್ತದೆ, ಮೆದುಳಿಗೆ ಅತ್ಯಂತ ಹಿತಕಾರಿಯಾಗಿರುತ್ತದೆ—೬ ಔನ್ಸಿನ ಬಾಟ್ಲಿ ೧ಕ್ಕೆ ಕ್ರಯ ೧—೮—೦.

೩. ಮದನಾನಂದ ಲೇಹ್ಯ—ಇದು ೧೮ ಮೂಲಿಕೆಗಳಿಂದಲೇ ತಯ್ಯಾರಿಸಿದ್ದಾಗಿಯೂ, ಸ್ತ್ರೀ ಪುರುಷರಿಗೆ ಇದರ ಸೇವನೆಯಿಂದ ದೇಹಾಲಸ್ಯವನ್ನು ಪರಿಹರಿಸಿ ಸಂಭೋಗೇಚ್ಛೆಯನ್ನು, ಆನಂದಗೋಚರ ಸಂತತಿಯಲ್ಲಿ ಆಯಾಸವನ್ನು ಕಾಣದಂತೆ ಮಾಡುವದಲ್ಲದೆ ಜೀರ್ಣ ಶಕ್ತಿಯನ್ನು ರಕ್ತ ಪುಷ್ಟಿಯನ್ನು ಉಂಟುಮಾಡುತ್ತದೆ—ಕ್ರಯ ಡಬ್ಬಿ ೧ಕ್ಕೆ ರೂ. ೩—೦—೦(೧ ಸೇರು.)

೪. ನಯನಾಮೃತ—ಕಣ್ಣು ತುರಿಸುವಿಕೆ, ದೃಷ್ಟಿ ಮಾಂದ್ಯ, ಇರುಳುಗಣ್ಣು, ಕೀವು ಬರುವುದು ತಿಮಿರ ಮುಂತಾದ ಕಣ್ಣಿನ ಎಲ್ಲಾ ತರದ ರೋಗಗಳನ್ನು ಬಹು ಜಾಗ್ರತೆಯಾಗಿ ಗುಣಪಡಿಸುವುದು. ಅರ್ಧ ತೊಲೆಯ ಸೀಸೆ ೧ಕ್ಕೆ ಕ್ರಯ ರೂ. ೧—೦—೦.

ವೈದ್ಯರ್ ವಿ. ಕೆ. ದಾಮೋದರ ನಂಬೀಶನ್
ಅಮೃತಕಲ್ಪ ವೈದ್ಯಶಾಲಾ,
ಕಾಸರಗೋಡು, ದ. ಕನ್ನಡ.

The Indian Tooth—ache Specific.
ಹಲ್ಲು ನೋವಿಗೆ ಖಾತ್ರಿಯಾದ ಔಷಧ.

ಇದನ್ನು ಒಂದು ಸಾರ ಉಪಯೋಗಿಸುವದರಿಂದ ಎಲ್ಲಾ ವಿಧದ ಹಲ್ಲು ನೋವುಗಳೂ, ವಸಡಿನ ರೋಗಗಳೂ ಅಂದರೆ ವಸಡಿನ ಶಿಥಿಲತೆ, ಬಾವು, ವ್ರಣ, ಕೀವು ಇತ್ಯಾದಿ ಖಂಡಿತವಾಗಿ ಗುಣವಾಗುತ್ತದೆ. ಕೊರೆದುಹೋದ ಮತ್ತು ಅಲ್ಲಾಡುವ ಹಲ್ಲುಗಳಿಂದ ಕಠಿಣ ನೋವು ಬಾಧಿಸುವವರಿಗೆ ಇದು ಒಂದು ದಿವ್ಯ ಔಷಧವಾಗಿದೆ. ಇದು ನೋವನ್ನು ಶಾಂತಪಡಿಸಿ ಹಲ್ಲುಗಳ ಬೇರುಗಳನ್ನು ಬಲಪಡಿಸುವದರಿಂದ ಹಲ್ಲುಗಳನ್ನು ಕಿತ್ತು ತೆಗೆಯುವ ಆವಶ್ಯವೇ ಇಲ್ಲ. ಈ ಔಷಧದ ಗುಣವನ್ನು ನೀವೇ ಪರೀಕ್ಷಿಸಿ ಎಲ್ಲರಿಗೂ ತಿಳಿಸಿ.

ಸೀಸೆ ೧ಕ್ಕೆ ಕ್ರಯ ರೂ. 1—4—0; ಟಪ್ಪಾಲ ಖರ್ಚು 4 ಆಣೆ ಪ್ರತ್ಯೇಕ. ವರ್ತಕರಿಗೆ ಒಮ್ಮೆಯೇ ೧೨ ಸೀಸೆ ತರಿಸಿಕೊಂಡರೆ ರೂ. 12 ಮಾತ್ರ. ಈ ಕೆಳಗಿನ ವಿಳಾಸಕ್ಕೆ ಬರೆಯಲ್ಪಟ್ಟ ಬೇಕು.

STANY BROTHERS, MANGALORE.

ಸೊಗಸಾದ ಕಾಫಿ ಹುಡಿ.

I ಕ್ಲಾಸ್	0—10—0	ರಾತ್ತಲಿಗೆ
II ಕ್ಲಾಸ್	0—8—0	
III ಕ್ಲಾಸ್	0—6—0	

ಹೊಟೇಲುಗಳಿಗೂ ಕ್ಲಬ್‌ಗಳಿಗೂ ಧಾರಾಳವಾಗಿ ಮೂಲಸಾಗುವ ಮೇಲೆ ರಿಯಾಯಿತಿಯಾಗುವುದು. ಈ ಕೆಳಗಿನ ವಿಳಾಸಕ್ಕೆ ಬರೆದಲ್ಲಿ ಸಿಕ್ಕುತ್ತದೆ.

STANY BROTHERS, MANGALORE.

Printed & Published by V. S. Kamath at the Mangalore Trading Association's Sharada Press, Mangalore

ಸ್ವದೇಶಾಭಿಮಾನಿ

ಪ್ರತಿ ಶುಕ್ರವಾರವೂ ಪ್ರಕಟಿಸಲ್ಪಡುವುದು.

ರತ್ನೈರ್ಮಹಾರ್ಹೈಸ್ತುತುಷುರ್ನ ದೇವಾ । ನ ಭೇಜಿರೇ ಭೀಮವಿಷೇಣ ಭೀತಿಮ್ ॥
ಸುಧಾಂ ವಿನಾ ನ ಪ್ರಯಯುರ್ವಿರಾಮಂ । ನ ನಿಶ್ಚಿತಾರ್ಥಾದ್ವಿರಮಂತಿ ಧೀರಾಃ ॥ ೧ ॥

ದೊರೆಯಲನುಪಮರತ್ನಗಳು ಸಾ- । ಗರವ ಮಥಿಸಲು ಸುರರಿಗದರಿಂ । ಹರುಷವಾಯಿತೆ' ಮತ್ತೆ ವಿಷ್ಣುವ ಸುಡುತ ಬರುತಿರುವ ॥
ಗರಲಕವರಂಜಿದರೆ! ಸುಧೆಯನು । ಮರೆತು ಕ್ಷುದ್ರರ ತೆರದಿ ಕುಳಿತರೆ' । ತೆರಳಬಲ್ಲರೆ! ತೊರೆದು ಧೀರರು ನಿಶ್ಚಿತಾರ್ಥವನು ॥ ೧ ॥

ಮಂಗಳೂರು, ತಾರೀಕು ೬ನೇ ನವೆಂಬರ ಶುಕ್ರವಾರ ೧೯೨೦. | ಸಂಚಿಕೆ ೪೮

ಪುಸ್ತಕ ೩೪

"ನೈಟ್ರೇಟ್ ಒಫ್ ಸೋಡಾ'

ಹೊಗೆಸೊಪ್ಪು, ಕಬ್ಬು, ತೆಂಗು, ಅಡಕೆ, ಮಾವು, ವೀಳ್ಯದೆಲೆ, ಬತ್ತ, ತರಕಾರಿ ಹೂದಲಾದ ಪೈರುಗಳಿಗೆ ಮತ್ತು ಹೂತೋಟಗಳಿಗೆ ಬಹಳ ಸಾರವತ್ತಾದ ಗೊಬ್ಬರ

ಈ ಗೊಬ್ಬರವು ಒಂದು ಬಗೆಯ ರಾಸಾಯನಿಕ ಉಪ್ಪು, ಹಲವು ಪ್ರಾಂತ್ಯಗಳಲ್ಲಿ ಇದರ ಉಪಯೋಗದಿಂದ ಹುಲುಸಾದ ಬೆಳೆಯನ್ನು ಪಡೆದಿರುತ್ತಾರೆ

ಬೆಳೆಗೆ ಅಗತ್ಯವಿರುವ ನೈಟ್ರೊಜನ್ ಅಥವಾ ಸಾರಜನಕವು 15—16% ಅಂದರೆ ಮೊನುಗೊಬ್ಬರದಲ್ಲಿನಕ್ಕಿಂತ, ಎರಡು ಮೂರು ಪಾಲನ್ನು ಹೆಚ್ಚು ಬೆರತಿರುವದು ಎಕ್ರೆಗೆ 100—200 ರಾತ್ತಲ ಸಾಕಾಗುವುದು.

ಪರಸ್ಪರ ಸಹಾಯಕ ಸಂಘಗಳು ಇದನ್ನು ಹಳ್ಳಿಯವರಿಗೆ ಒದಗಿಸಿ ಕೊಡುವುದಕ್ಕೆ ಅನುಕೂಲವಾಗುವ ಹಾಗೆ ಏರ್ಪಾಡುಗಳನ್ನು ಮಾಡಬಹುದು

"ಕೃಷಿ ಸುಧಾರಣೆ" ಎಂಬ ಸಚಿತ್ರ ವಹಿಯನ್ನು ಕನ್ನಡ ಭಾಷೆಯಲ್ಲಿ ಮುಂದಧರ್ಮಾರ್ಥವಾಗಿ ಪಡೆಯಬಹುದು

ದಿ ಚಿಲಿಯನ್ ನೈಟ್ರೇಟ್ ಕಮಿಟಿ,
1 ರೋಯಲ್ ಎಕ್ಸ್‌ಚೆಂಜ್ ಪ್ಲೇಸ್, ಕಲ್ಕತ್ತಾ

The Diictor, Chilean Nitrate Committee,
(INDIAN DELEGATION),
1 Royal Exchange Place, CALCUTTA

ದೇನೆಯುಂಟಾದಾಗ ಚೇತನವು ಕಡಿಮೆಯಾಗುವುದೆಂಬುದು ಸಕಲರಿಗೂ ತಿಳಿದಿರುವ ವಿಷಯ ಯೋಚಿಸಿ ನೋಡಿದರೆ ಬಹು ವೇಗದಿಂದ ಶಕ್ತಿಯನ್ನು ಕುಂದಿಸಿ ಬಿಡುವ ಪ್ರಾಣವು ದೇನೆಗಲ್ಲದೆ ಮತ್ತೊಂದಕ್ಕಿರದು ಅಂಥಾ ದೇನೆಯನ್ನು ನಿವಾರಣೆ ಮಾಡುವುದಕ್ಕೆ ತಕ್ಕ ಔಷಧವು

ಅಮೃತಾಂಜನ

ಹೊರತು ಮತ್ತೊಂದಿಲ್ಲವೆಂಬುದು ಖಾತ್ರಿ.

ಇದನ್ನು ಉಪಯೋಗಿಸುವುದರಿಂದ ದೇನೆಯು ಒಂದೇ ಕಡೆಯಲ್ಲಿ ನಿಲ್ಲದು ಇದು ಯಾವ ತರದ ಶಿಡಿತವನ್ನಾದರೂ ನೋವನ್ನಾದರೂ ಗುಣಪಡಿಸುವುದು ದೇನೆಯನ್ನು ಉಪಶಮನ ಮಾಡುವ ವಿಶೇಷವಾದ ಲಕ್ಷಣಗಳಿಂದ ಕೂಡಿ, ತರ ತರದ ನೋವನ್ನು ಗುಣಪಡಿಸಿ ನಿವಾರಣೆ ಮಾಡುವ ದಿವ್ಯ ಔಷಧ

ಕ್ರಯ ದಬ್ಬಿ 1ರ 10 ಆಣೆ ಡಜನ್ 1ಕ್ಕೆ ರೂ 5—12—0

ಗಜಕರ್ಣದ ಮುಲಾಮು —ಮೂರು ಸರ್ತಿ ಹಾಗಿಸುವುದರೊಳಗೆ ಗಜಕರ್ಣವು ಖಂಡಿತವಾಗಿ ನಾಶವಾಗುವುದು

ಕ್ರಯ ಡಬ್ಬಿ ಒಂದರ ರೂ. 0—6—0

ದಂತಮಂಜನ:—ಈ ಉತ್ತಮವಾದ ದಂತಮಂಜನವನ್ನು ಉಪಯೋಗಿಸುವುದರಿಂದ ಹಲ್ಲುಗಳು ಶುಭ್ರವಾಗುತ್ತವೆ ರಕ್ತ ಬರುವುದು ನಿಲ್ಲುತ್ತದೆ ಹಲ್ಲುಗಳು ಗಟ್ಟಿಯಾಗುತ್ತವೆ ಇದು ಸುವಾಸನೆಯಿಂದ ಕೂಡಿ ಉತ್ತಮವಾಗಿರುತ್ತದೆ ಡಬ್ಬಿ ೧ರ ಆಣೆ 2

ಅಮೃತಾಂಜನ ಡಿಪೊ,

6. 7 ತಂಬುಚೆಟ್ಟಿ ಸ್ಟ್ರೀಟ್,
ಜೋರ್ಜ್ ಟೌನ್, ಮದ್ರಾಸು.

109 ಫ್ರೇಯರ್ ರೋಡ್,
ಮುಂಬಯಿ.

ಮಂಗಳೂರಲ್ಲಿ—ಊಲನ್ ಮಾರ್ಟ್, ಹಂಪನಕಟ್ಟ, ಇವರಲ್ಲಿಯೂ ದೊರಕುವುದು.

ಈಗ ಅಚ್ಚಾಗಿ ಮಾರಾಟಕ್ಕೆ ಸಿದ್ಧವಾಗಿರುವ
ಅತಿಸುಯುಕ್ತವಾದ ಪುಸ್ತಕಗಳು.

ಕೇತುಂಗ. ಕರ್ನಾಟಕ ಚರಿತ್ರೆಯೊಳಗಿನ ವಿಜಯನಗರದ ಒಂದು ಮುಖ್ಯ ಪ್ರಸಂಗವನ್ನು ಕರ್ನಾಟಕ ಭಾಷೆಯಲ್ಲಿ ಗದ್ಯರೂಪವಾಗಿ ಬರೆದ ನಾಟಕ VI Form ಬೆಲೆ 0—12—0

ಕರ್ಣಚರಿತೆ ಕನ್ನಡ ಭಾರತದಿಂದ ಸಂಗ್ರಹಿಸಿ ಬರೆದ ಪದ್ಯಗಳು IV & V Forms ಬೆಲೆ 0—6—0

ಮಹಾತ್ಮ್ಯ. ಮಹಾರಾಷ್ಟ್ರ ವೀರರ ಚರಿತ್ರೆ
IV & V Forms ಬೆಲೆ 0—10—0

ಅಚ್ಚಿನ ಕಾಗದಗಳು. 9 ಪುಸ್ತಕಗಳ ಸೆಟ್ಟು 1ಕ್ಕೆ , 0—7—9

ಒಂದನೆಯ ಕನ್ನಡ ಪುಸ್ತಕ ಭಾಗ ೧ ,, 0—2—6

„ „ ಭಾಗ ೨ ,, 0—2—6

ವಿಳಾಸ— ಮ್ಯಾನೇಜರ್,
ಶಾರದಾ ಛಾಪಖಾನೆ, ರಥಬೀದಿ, ಮಂಗಳೂರು

ವಾತಕಲ್ಪಾಯು

U. B. DUTT & Co. CALICUT.

ಮಲೆಯಾಳ ದೇಶವು ಔಷಧಿಗಳಿಗೆ ಕೀರ್ತಿಹೊಂದಿದ ಪ್ರದೇಶವು. ಅಲ್ಲಿನ ಕಾಡುಗಳಲ್ಲಿ ಅತಿ ಪ್ರಯಾಸದಿಂದ ವಿಶೇಷವಾದ ನಾರುಬೇರುಗಳಿಂದ ನಾವು ಅನೇಕ ಉತ್ಕೃಷ್ಟ ಔಷಧಿಗಳನ್ನು ಸಿದ್ಧಪಡಿಸಿ ಅನೇಕ ಕಾಲದಿಂದ ಉಪಯೋಗಿಸುತ್ತಿದ್ದೇವೆ ಇವಕ್ಕೆ ಪ್ರತಿಫಲವಾಗಿ, ಅನೇಕಾನೇಕರು ಅವುಗಳಿಂದ ಗುಣಹೊಂದಿರುವುದಲ್ಲದೆ, ನಮಗೆ ಪ್ರತಿನಿತ್ಯವೂ ಆರ್ಡರ್‌ಗಳು ಬರುತ್ತಿವೆ ಈ ಭಾಗದಲ್ಲಿ ಗುಣಹೊಂದಿದವರಿಂದ ನಮಗೆ ಬಂದಿರುವ ಕಾಗದಗಳೂ, ಯೋಗ್ಯತಾಪತ್ರಗಳೂ ಹೇರಳವಾಗಿವೆ

ಅಂಥಾ ಉತ್ಕೃಷ್ಟ ಔಷಧಿಗಳಲ್ಲಿ ನಮ್ಮ 'ವಾತಕಲ್ಪಾಯು' ಎಲ್ಲಾ ವಿಧದ ವಾತಗಳನ್ನು ಗುಣಪಡಿಸುತ್ತದೆ. ಗಂಟುಗಳಲ್ಲಿರುವ ನೋವು, ಅಂಥಾ ಉತ್ಕೃಷ್ಟ ... ನಡೆಯಲು ಆಗದೆ ಇರುವ ಅವಯವಗಳಲ್ಲಿ ಉರಿಯುವ ಸ್ವಭಾವ ಗಂಟು, ಸಂದು, ಅವಯವ, ಅಂಡಕೋಶ ಮೊದಲಾದವು ಕೆಂಪಾಗಿ ನೋವುಂಟಾಗುವುದು, ... ಇತ್ಯಾದಿಗಳಲ್ಲಿ ಯಾವುದಾದರೂ ಒಂದು ನಿಮ್ಮಲ್ಲಿಯಾಗಲೀ ನಿಮ್ಮ ಸ್ನೇಹಿತರಲ್ಲಿಯಾಗಲೀ ಕಂಡುಬಂದರೆ, ಕೂಡಲೇ ನಮ್ಮ 'ಕಷಾಯ' ತರಿಸಿಕೊಳ್ಳಲು ಪ್ರಾರಂಭಮಾಡಿರಿ. ಅದನ್ನು ಕ್ರಮವಾಗಿ ಸೇವಿಸುವುದರಿಂದ ನಿಮ್ಮ ರೋಗವು ಸಂಪೂರ್ಣ ಗುಣಹೊಂದುವುದರಲ್ಲಿ ಯಾವ ಸಂಶಯವೂ ಇಲ್ಲ, ಇದಲ್ಲದೆ ಪಿತ್ತ, ವಾತ ಕಫ ಅಜೀರ್ಣ ಕೊಲೆರಾ, ಕಾಮಿಲೆ, ಉಬ್ಬಸ, ಕೆಮ್ಮು ... ಧಾತುಪುಷ್ಟಿ, ಹಲ್ಲುನೋವು ಕಿವಿನೋವು ಆಮಶಂಕೆ ಮೊದಲಾದವುಗಳಿಗೂ, ದಿವ್ಯೌಷಧಗಳಿವೆ "ಕ್ಯಾಟಲಾಗ್"ನ್ನು ನೋಡಿ

ಕ್ರಯ ರೂ. 4—4—0

ಯು. ಬಿ. ಧತ್ತ ಕಂಪೆನಿ,
ಕಲ್ಲಿಕೋಟೆ ಮಲಬಾರ

Come See! & Try!

P. Nrayana Vaijappa
Bandary & Co.,
6th Merchants
Car Seet, MANGALORE.

ಮದಿಮೆ ಉಪನಯನಗಳ, ಹಬ್ಬ ಉತ್ಸವಗಳ ಕಾಲದಲ್ಲಿ ಮ ನಿತ್ಯದಲ್ಲಿ ಉಪಯೋಗಕ್ಕೆ ಬೇಕಾದಂಥಾ ಸೀರೆಗಳು, ರವಕೆ ಕಣಗಳು, ಧೋತ್ರಗಳು, ನಾನಾ ಬಗೆಯ ಅಂಗೀ ವಸ್ತ್ರಗಳು, ಧೋತಿಗಳು, ಟೋಪಿಗಳು ಇತ್ಯಾದಿ ಉಡುಪುತೊಡುಪುಗಳಿಂದ ನಮ್ಮ ಮಳಿಗೆಯನ್ನು ತುಂಬಿಸಿರುತ್ತೇವೆ.

ವ್ಯಾಪಾರಸ್ಥರಿಗೆ ವಿಶೇಷವಾದ ಸುಲಭದರಗಳು. ನಗದು ಗಿರಾಕಿಗಳಿಗೆ ಡಿಸ್ಕೌಂಟು ಕೊಡೋಣಾಗುತ್ತದೆ.

ಪ. ನಾರಾಯಣ ವೈಜಪ್ಪ ಭಂಡಾರಿ ಮತ್ತು ಕಂಪೆನಿ,
ರಥಬೀದಿ, ಮಂಗಳೂರು.

ಪ್ರತಿಯೊಬ್ಬ ಕುಟುಂಬಿಕನೂ ಹತ್ತಿರವೇ ಇಟ್ಟುಕೊಳ್ಳಬೇಕಾದ

ಸರಸ್ವತಿ ವಿಲಾಸದವರ. ಸುದರ್ಶನ ತೈಲ.

M. S. G. B & SONS. MANGALORE.

ಮುದ್ದಣ, ಕಣ್ಣು ಕುರು ಕರ್ಣಶೂಲೆ ಅಸಾಧ್ಯವಾದ ಕುರು, ಪೈಲು ಯಾನೆ ಬಾವು, ಕಠಿಣವಾದ ಗಜಕರ್ಣ, ತ ರಿಕಜ್ಜಿ, ಮುಂತಾದ್ದನ್ನು ನಿಸ್ಸಂದೇಹವಾಗಿ ನಿರ್ಮೂಲ ಮಾಡುವ ದಿವ್ಯೌಷಧ —ಅನುಪಾನ ಪಟ್ಟಿ ಸಮೇತ ಬಾಟ್ಲಿ 1ರ ಕ್ರಯ 0—4—0 ವಿ ಪಿ. ಬೇರೆ.

ಸರಸ್ವತಿ ವಿಲಾಸದವರ ರಿಂಗ್ವರ್ಮ್ ಮುಲಾಂ.

ಗಜಕರ್ಣ—ಸೊಂಟಕಜ್ಜಿ, ಕೂದಲು ನಾಶಮಾಡುವ ಹುಳುಗಳ ಮೇಲೆ ರಾಮಬಾಣ ಬಾಟ್ಲಿ 1ರ ಕ್ರಯ 0—5—0 ವಿ ಪಿ. ಬೇರೆ.

ನಮ್ಮ ವಿಳಾಸ —

ಯಮ್. ಸುಬ್ರಾಯ ಗಿರಿಭಟ್ಟ ಎಂಡ್ ಸನ್ಸ್
ಸರಸ್ವತಿ ವಿಲಾಸ ರಥಬೀದಿ, ಮಂಗಳೂರು

ಟಿಶ್ಯೂ ರೆಮಿಡಿಸ್

ಎಂಬ

12 ಜೀವರಸಾಯನಿ ಔಷಧಗಳು

ಮತ್ತು

ಹೋಮ್ಯೊಪೆಥಿಕ ಔಷಧಗಳು

ನಮ್ಮ ಗಿರಾಕಿಗಳ ಅನುಕೂಲತೆ ಬಗೆ ವಾರದ ಎಲ್ಲಾ ದಿವಸಗಳಲ್ಲಿ ಬೆಳಿಗ್ಗೆ 7½ ಘಂಟೆಯಿಂದ ರಾತ್ರಿ, 9 ಘಂಟೆ ತನಕ ಸುಲಭವಾದ ದರದಲ್ಲಿ ಮಾರೋಣಾಗುತ್ತವೆ.

ಟಿಶ್ಯೂ ರೆಮಿಡಿಸ್	2 ಡ್ರಾಮಿನ	ಸೀಸೆ 1ಕ್ಕೆ	0-3-6
„	4	„	„	0-6-0
„	1 ಔನ್ಸಿನ	„	„	0-12-0
ಹೋಮಿಯೊಪೆಥಿಕ್ „	2 ಡ್ರಾಮಿನ	„	„	0-3-6

ಮಂಗಳೂರು ಟ್ರೇಡಿಂಗ್ ಎಸೋಸಿಯೇಶನ್,
(ಶಾರದಾ ಛಾಪಖಾನೆ)
ರಥಬೀದಿ, ಮಂಗಳೂರು

THE WORLD-RENOWNED HAARLEM OIL.

BY THE ORIGINAL INVENTOR—CLASS TILLY.

Avoid Imitations—Write or call for the papers dealing with the history of the origin HAARLEM OIL.

Available only for— **The Bombay Stores,**
Mangalore,
Sole distributers for India, Burma and Ceylon.

ಲೋಕ ಪ್ರಸಿದ್ಧವಾದ

ಡೊಕ್ಟ ಹಾರ್ಲೆಮ್ ತೈಲ ಕಲ್ಪಕನಾದ ಕ್ಲೆಸ್ ಟಿಲ್ಲಿಯ ಜೆನ್ಯುಇನ್ ಯಾನೆ ತಾಜಾ ಹ್ಯಾರ್ಲೆಮ್ಮ್ ತೈಲವು.

ಬಾಟ್ಲಿ ಒಕ್ಕೆ ಕ್ರಯ ಬರೇ ೮ ಆಣೆ ಮಾತ್ರ ರಖಂ ಗಿರಾಕಿಗಳಿಗೆ ಪ್ರತ್ಯೇಕ ದರ ಕೃತ್ರಿಮ ಹಾರ್ಲೆಮ್ ತೈಲವನ್ನು ತ್ಯಜಿಸಿರಿ! ಮೂಲ ಶೋಧಿತನಾದ ಕ್ಲೆಸ್ ಟಿಲ್ಲಿಯ ಹಾರ್ಲೆಮ್ ತೈಲ ಯಾವುದು? ಎಂಬುದನ್ನು ತಿಳಿಯಪಡಿಸುವ ಪತ್ರಗಳನ್ನು ಕರೆಯಿಸಿರಿ.

ದೊರಕುವ ವಿಳಾಸ— **ದಿ. ಬೊಂಬೇ ಸ್ಟೋರ್ಸ್,**
ಮಂಗಳೂರು. (ದ. ಕನ್ನಡ)

ಪುತ್ತೂರಿನಲ್ಲಿ: ಬೆಳ್ವಾರೆ ನರಸಿಂಹ ಮಲ್ಯ,
ಬೊಂಬಾಯಿ ಸ್ಟೋರಿನ ಹಾರ್ಲೆಮ್ ತೈಲ ಮಾರುವ ಏಜೆಂಟರು. | ಇಂಡಿಯಾ, ಬರ್ಮ ಮತ್ತು ಸೀಲೋನು ಪ್ರಾಂತ್ಯಗಳಲ್ಲಿ ಕ್ಲೆಸ್ ಟಿಲ್ಲಿಯ ತಾಜಾ ಹಾರ್ಲೆಮ್ ತೈಲವನ್ನು ವ್ಯಾಪಾರ ಮಾಡಲು ಸಂಪೂರ್ಣ ಸ್ವತಂತ್ರ ವನ್ನುಳ್ಳ ಪ್ರಾಮುಖ್ಯ ಏಕೆಂದಾರರು

ಮಲೇರಿಯ ಮಲಿಜ್ವರಹಾರಿ.

ಮಲೇರಿಯ ಮುಂತಾದ ಆಗಾಗ ಬರುವ ಜ್ವರಗಳಿಗೆ ಉತ್ತಮ ಪರಿಹಾರ. ಚೆಲೆ ೪. ಆ.



ನಿಷ್ಪ್ರಯೋಜಕ ಪದಾರ್ಥಗಳು ಒಂದು ರೋಗ ನಿವಾರಣೆಗೆ ಸಹಕಾರಿಯಾದರೂ ಇನ್ನೊಂದು ರೋಗಕ್ಕೆ ಎಡೆಗೊಡುತ್ತವೆ. ಅಂಥ ವಿಷಮಯವಾದ ಪದಾರ್ಥಗಳು ಇದರಲ್ಲಿ ಬಿಲಕುಲ್ ಇಲ್ಲ.

ಹಿಂದುಸ್ಥಾನ, ಬರ್ಮಾ, ಸಿಂಹಳ ಮುಂತಾದ ಪ್ರದೇಶಗಳ ಬೇರೆ ಬೇರೆ ಕಡೆಗಳಿಂದಲೂ ಕಳೆದ ೦ ವರ್ಷಗಳಲ್ಲಿ ಅಸಂಖ್ಯಾತವಾದ ಶಿಫಾರಸು ಪತ್ರಗಳು ನಮಗೆ ಬಂದಿವೆ.

"ಪುನೆಯ ಪೃಕಿಕೋಲೇಜಿನ ಅಧ್ಯಾಪಕರಾದ ಡಾ ಮೆನ್‌ಸಾಹೇಬರು ರೀತಿಯಾಗಿ ಬರೆದಿರುತ್ತಾರೆ. ... ಬೇರೆ ಬೇರೆ ವಿಧದ ಜ್ವರಗಳ ಸಂದರ್ಭಗಳಲ್ಲಿ ನಾನು ಈ ಔಷಧವನ್ನು ಪ್ರಯೋಗಿಸಿದಾಗ ಅದರಿಂದ ತೃಪ್ತಿಕರವಾದ ಗುಣ ಸಿಕ್ಕಿತು."

ನಮ್ಮ ಏಜಂಟರು ಈ ಔಷಧಿ ನೇಮಕವಾಗದ ಸ್ಥಳದಲ್ಲಿ ನಮಗೆ ಏಜಂಟರು ಬೇಕು. ಕಮ್ಮಿಶನ್ ಮುಂತಾದ ಶರ್ತಗಳನ್ನು ನಮಗೆ ಬರೆದು ತಿಳಿದುಕೊಳ್ಳಬಹುದು

ಕರ್ಣಾಟಕ ಬ್ರದರ್ಸ್,
65 ಗಿರಗಾಂವ, ಮುಂಬಯಿ

Agent.—
The Woollen Mart, *Mangalore*

"ಕಾಮಶಾಸ್ತ್ರ"

ಉತ್ತಮವಾದ ಈ ಪುಸ್ತಕವು ಅನುಕೂಲವಾಗಿ ತಮ್ಮ ದೇಹದ ವಿಷಯಕ್ಕೆ ಮತ್ತು ಆರೋಗ್ಯ ಅನುಕೂಲಕ್ಕೆ ತಕ್ಕ ಪ ಬರಿಯುವಲ್ಲಿ ಅಂಚೆಯ ಹಾಸಲು ಸಹಾ ನಿರೀಕ್ಷಿಸದೇ ಕಳುಹಿಸುವೆವು

ಮತ್ತು

ಪ್ರಸಿದ್ಧವಾದ ಅತಂಕನಿಗ್ರಹ ಗುಳಿಗೆಗಳನ್ನು ಯಾವಾಗಲೂ ತಮ್ಮ ಪ್ರಿಯಮಿತ್ರರ ಹಾಗೆ ಧಾವಿಸಿ ಉಪಯೋಗಿಸುವಲ್ಲಿ ನಿರಾಧಾರವಾದ ಆಲೋಚನೆಗಳನ್ನು ಹೋಗಲಾಡಿಸಿ ಅಮೃತದ ಹಾಗೆ ದೇಹಧಾರ್ಢ್ಯವನ್ನುಂಟು ಮಾಡಿಸುತ್ತಾ ಇರುವುದು ಕ್ರಯ ರೂ 1 ಹೆಚ್ಚಳಿಗೆಯಿಂದ ಮರಿಯಬಾರದು

ವಿಳಾಸ—
ವೈದ್ಯಶಾಸ್ತ್ರಿ ಮಣಿಶಂಕರ ಗೋವಿಂದಜೀ,
ಆತಂಕನಿಗ್ರಹ ಔಷಧಾಲಯ, 167, ಬ್ರಾಡ್ವೇ, ಮದರಾಸು

Local Agents **Raphael & Co,**
Brito Buildings,
Hampankatta, MANGALORE

ನೇಟಿವ್ ಡೊಕ್ಟರ್ಸ್ ಮೂಲ್ಕಿ ಗಣಪಯ್ಯ ಎಂಡ್ ಸನ್ಸರವರ

ಖ್ಯಾತಿಯಿಂದ ಗುಣಪಡಿಸುವ ಔಷಧಗಳು

1. ಮಹಾಮದನ ಕಾಮೇಶ್ವರಿ ಲೇಹ—ಬಹಳ ಶ್ರಮಪಟ್ಟು ಕೆಲಸಮಾಡುವ ಲೇಖಕರೂ ಮತ್ತು ಇಂದ್ರಿಯ ದೌರ್ಬಲ್ಯ, ಅಜೀರ್ಣ, ಎದೆನೋವು ಮಲಬದ್ಧತೆ ಶರೀರಗಳ ಘಳಿತದಿಂದ ಅಶಕ್ತಿ ಮೊದಲಾದ ಪ್ರಕೃತಿಯುಳ್ಳವರೂ ಇದನ್ನು ಸೇವಿಸಿದ್ದಲ್ಲಿ ರಕ್ತಶುದ್ಧಿ, ಧಾತುಪುಷ್ಟಿ, ಮತ್ತು ಮುಖದಲ್ಲಿ ಕಾಂತಿಗೊಳಿಸುವುದು

2 ಮಹಾಜ್ವರಾಂಕುಶ (ಖಾತ್ರಿ ಗುಣ)—ಇನ್‌ಫ್ಲುಯೆಂಜಾ ನಿಮೋನಿಯಾ, ಮಲೇರಿಯಾ, ದಿವಸಕ್ಕೊಮ್ಮೆ, ದ್ವಿತೀಯ ತೃತೀಯ ಚಾತುರ್ಥಿಕ ಜ್ವರಗಳ ಮೇಲೆ ರಾಮಬಾಣ ಬಾಟ್ಲಿ 1ಕ್ಕೆ ಆಣೆ 8

3 ಬಾಲಗ್ರಹಗುಟಿಕೆ—ಕೂಸು ವ ಮಕ್ಕಳ ಅಪಸ್ಮಾರಕ್ಕೆ ರಾಮಬಾಣ ಡಜನಿಗೆ ಆಣೆ 10

4 ಕೋಲೆರಾ ಯಾನೆ ವಾಂತಿಬೇದಿ ಗುಟಿಕೆ—ಒಂದೆರಡು ಗುಟಿಕೆಯಿಂದ ವಾಂತಿಬೇದಿ ಕೂಡಲೆ ಗುಣ ಬರಿ ಅತಿಸಾರ ರಕ್ತಾತಿಸಾರ, ಜ್ವರಕೂಡಿರುವ ರಕ್ತಾತಿಸಾರ, ಗ್ರಹಣಿಯಿಂದ ಯಾ ಹುಳದ ಉಪದ್ರದಿಂದ ಆಗುವ ಹೊರಕಡೆ ಗುಣ ಬಾಟ್ಲಿ 1ಕ್ಕೆ ಆಣೆ 8

5 ಶ್ವಾಸಕುಠಾರ ಗುಟಿಕೆ—ಇದು ಶ್ವಾಸಕ್ಕೆ ಸಿದ್ಧ ಔಷಧಿ. ಒಂದೇ ಗುಟಿಕೆಯಿಂದ ಕಫ, ಉಬ್ಬಸ ಕೆಮ್ಮು, ಇವು ಗುಣ ಡಜನಿಗೆ ಆಣೆ 10

6 ಮೇಹಕುಠಾರ—ಮೂತ್ರ ಕೃಚ್ಛ್ರ, ಅಶ್ಮರಿ, ವ್ರಣ ಮೂತ್ರಹೋಗುವಾಗ್ಯೆ ಉರಿಯನ್ನೂ ಕೀವನ್ನೂ ಕೂಡಲೆ ನಿಲ್ಲಿಸಿ ಪಥ್ಯ ವಿಲ್ಲದೆ ಖಂಡಿತ ಗುಣಕೊಡುವದು, ಕಠಿಣ ರೋಗಿಗೂ ಕೂಡಾ 2 ದಿವಸದೊಳಗೆ ಗುಣಸಿಕ್ಕುತ್ತದೆ 16 ದಿವಸದ ಔಷಧಿ ಕ್ರಯ ರೂ 2

7 ಇಚ್ಛಾ ಭೇದಿ—ಆಯಾಸವನ್ನು ಉಂಟುಮಾಡದ ಸುಖ ವಿರೋಚಕ ಬಾಟ್ಲಿ 1ಕ್ಕೆ ಆಣೆ 12

8 ಭೃಂಗರಾಜತೈಲ—ತಲೆ ಉರಿ, ಕಣ್ಣು ಉರಿ, ಕಣ್ಣು ನೋವು, ನಿದ್ರೆಬಾರದೆ ಇರುವುದು, ಅರ್ಧ ತಲೆನೋವು, ಜ್ಞಾಪಕಶಕ್ತಿ ಕುಂದಿಹೋಗುವುದು, ಕೂದಲು ಉದುರಿ ಹೋಗುವುದು, ತಲೆ-ತಿರುಗುವುದು, ಕೂದಲಿನ ಕಪ್ಪು ಬಣ್ಣವನ್ನು ಹೆಚ್ಚಿಸಿ ಉದ್ದವಾಗಿಯೂ ನುಣುಪಾಗಿಯೂ ಮಾಡುವುದು ಬಾಟ್ಲಿ 1ಕ್ಕೆ ಆಣೆ 12

9 ದಂತಮಂಜನ—(ಕರ್ಪೂರ ಮಿಶ್ರ) ಹಲ್ಲಿನ ಕ್ರಿಮಿ ವಸಡುಗಳ ಬೀಗು, ಕೀವು ಯಾ ರಕ್ತ ಬರುವುದು, ಮುಂತಾದ ದಂತ ಸಂಬಂಧವಾದ ಸರ್ವ ಬಾಧೆಗಳನ್ನು ಶಾಂತಪಡಿಸುತ್ತದೆ. ಕರಡಿಗೆ 1ಕ್ಕೆ ಆಣೆ 2

ವಿಳಾಸ— **ಮೂಲ್ಕಿ ಗಣಪಯ್ಯ ಎಂಡ್ ಸನ್ಸ್,**
ನೇಟಿವ್ ಡಾಕ್ಟರ್ಸ್, ಮಂಗಳೂರು ದ. ಕ.

ಶ್ರೀಮತ್ ಕಲ್ಯಾಣ ಬಂಧುಗಳೇ!

ಈ ಕಡೆ ನೋಡಿರಿ.

ಕಲ್ಯಾಣಕಾರಕವೆಂಬ ಜಿನಭಿಷಗ್ಗ್ರಂಥಾಧಾರದಿಂದಲೂ ಅನೇಕ ರಾಜವೈದ್ಯರುಗಳಿಂದಲೂ ಪರಿಶೋಧಿಸಿ ತಯಾರಿಸಲ್ಪಟ್ಟ ಅನುಭವ ಸಿದ್ಧೌಷಧಗಳು ಈ ಕೆಳಗಣ ವಿಳಾಸದಾರರಲ್ಲಿ ದೊರಿಯುವವು ಅಪೇಕ್ಷಕರು ಕೆಟಲಾಗನ್ನು ತರಿಸಿಕೊಂಡರೆ ಸಮಾಧಾನವಾಗುವದು.

S P RAJA & Co,
Kalyanakaraka Bishagmandir
POLALY, POST S C

ಎಸ್. ಪಿ ರಾಜಾ ಮತ್ತು ಕಂಪೆನಿ,
ಕಲ್ಯಾಣಕಾರಕ ಭಿಷಗ್ಮಂದಿರ, ಪೋಸ್ಟ ಪೋಳಲಿ ದ. ಕ.

NETRANAND SAREES

Cheap and Fashionable

Sarees in all brilliant colours with lustrous borders.

Liberal Commission for wholesale Orders.

ಚಲೋ ಬಣ್ಣದ ಶೀರೆಗಳು!, ಬಹಳ ಕಮ್ಮಿ ಕ್ರಯ!

ವಿವಿಧ ಬಣ್ಣಗಳ ಥಳಥಳಿಸುವ "ನೇತ್ರಾನಂದ" ಕರವಾದ ಶೀರೆಗಳು ಕೆಳಗಿನ ಕಂಪೆನಿಯವರ ಹತ್ತರ ದೊರಕುತ್ತವೆ

ವ್ಯಾಪಾರಸ್ಥರಿಗೆ ಒಳ್ಳೇ ಕಮಿಷನ ಸಿಕ್ಕುವದು

ನೂಲಿನ ಕೆಂಪು (Congo Red) ಹಳದಿ ಮತ್ತು ಇತರ ಬಣ್ಣಗಳು ಕಮ್ಮಿಕ್ರಯದಲ್ಲಿ ದೊರಕುವವು

ವಿಶೇಷ ವರ್ತಮಾನಕ್ಕೆ ಕೆಳಗಿನ ವಿಳಾಸಕ್ಕೆ ಬರೆಯಿರಿ

ಶ್ರೀ ಶೀತಾರಾಮವಿಠ್ಠಲ ಕಂಪೆನಿ,
ಮಿಲಾಗ್ರಿ ಇಗರ್ಜಿ ಎದುರು, ಹಂಪನಕಟ್ಟೆ ಮಂಗಳೂರು.

ಇಲ್ಲಿ ಬನ್ನಿ! ಬೆಲೆ ನೋಡಿ! ಸಾಮಾನುಗಳನ್ನು ಪರೀಕ್ಷಿಸಿರಿ!

ಶ್ರೀ

ಗಜಾನನ ಮೆಡಿಕಲ್ ಹೋಲ್

ಎಂದು ನೂತನ ಅಲೋಪತಿ ಮತ್ತು ಹೊಮಿಯೊಪತಿ

ಔಷಧ ಮಂದಿರ, ರಥಬೀದಿ, ಮಂಗಳೂರು.

ಇಲ್ಲಿಗೆ ಒಂದು ಸಾರಿ ಬಂದು ಪರೀಕ್ಷಿಸಿ!
ಆ ಮೇಲೆ ನೀವು ಬೇರೆಕಡೆ ಹೋಗಲಾರಿರಿ!!

ನಮ್ಮಲ್ಲಿ ಎಲ್ಲಾ ವಿಧವಾದ ಔಷಧ ದ್ರವ್ಯಗಳೂ ಪೇಟೆಂಟ್ ಇಂಗ್ಲೀಷ ಔಷಧಗಳೂ ಸುಗಂಧ ದ್ರವ್ಯಗಳೂ ಸೋಪುಗಳೂ ಫೌಂಟನ್‌ಪೆನ್‌ಗಳೂ ಥರಮಾಮೀಟರ್ ಎಂಬ ಅತ್ಯುತ್ತಮ ಉಷ್ಣಮಾಪಕ ಯಂತ್ರಗಳೂ, ರಬ್ಬರಿನ ಫೋಮೆಂಟೇಶನ್ ಚೀಲಗಳೂ ಬಸ್‌ಕ್ಯಾಪ್ ಮುಂತಾದ ಸರ್ವ ವಿಧವಾದ ಚಿಕಿತ್ಸಕ ಸಾಧನಗಳೂ ಸ್ಪಿರಿಟ್ ಮುಂತಾದವುಗಳಿಗೆ ಉಪಯುಕ್ತವಾದ ಸ್ಪಿರಿಟ್ ದ್ರವವೂ ನೀಲಗಿರಿಯ ಎಣ್ಣೆ ಎಂಬ ಯುಕಲಿಪ್ಟಸ್ ತೈಲವೂ ಬಹು ಸುಲಭ ಬೆಲೆಗೆ ತಾಜಾ ರೀತಿಯಲ್ಲಿ ದೊರೆಯುವವು

ಹೋಮಿಯೋಪತಿ ಮತ್ತು ಟಿಶ್ಯೂ ಔಷಧಗಳು

ನಿಮಗೆ ತಾಜಾ ಆಗಬೇಕಾದರೆ ನಮ್ಮಲ್ಲಿ ಬನ್ನಿ!

ಬಡವರಿಗೋಸ್ಕರ ಧರ್ಮಾರ್ಥ ಚಿಕಿತ್ಸೆ

ಪ್ರತಿನಿತ್ಯವೂ ಬೆಳಗ್ಗೆ ೯ ಗಂಟೆಯಿಂದ ೧೦ ಗಂಟೆಯ ವರೆಗೆ ಬಡವರಿಗೆ ಹೋಮಿಯೋಪತಿ ಮತ್ತು ಟಿಶ್ಯೂ ಔಷಧಗಳನ್ನು ರೋಗಿಯನ್ನು ಪರೀಕ್ಷೆ ಮಾಡಿ ಧರ್ಮಾರ್ಥವಾಗಿ ಕೊಡುವೆವು

ಈ ಔಷಧಗಳನ್ನು ಶಾಸ್ತ್ರರೀತಿಯಾಗಿ ತಯಾರಿಸುವುದಕ್ಕೆ ನಮ್ಮಲ್ಲಿ ೨೦ ವರ್ಷಗಳ ಅನುಭವವುಳ್ಳವರಿರುವರು

ನಮ್ಮಲ್ಲಿ ಔಷಧಗಳು ಹಗಲಿರುಳು ದೊರೆಯುವವು

ಸುಲಭ ಬೆಲೆ! ನಿರದ ವ್ಯಾಪಾರ! ರೋಗಿಗಳು ಗುಣವಾಗುವುದು ಬೇಗ!

ಇಲ್ಲಿ ಒಂದುಸಾರಿ ಪರೀಕ್ಷಿಸಿ!

ಪಿ ಮ್. ರಾಮ ಕಾಮತ್,
ಪ್ರೊಪ್ರೈಟರ್.

ಲೂಯಿಸರ ಎಲಿಕ್ಸಿರ್ ಫೊರ್ ಹೆಲ್ತ್.

ಎಂಬುವ ಪಾನಕವು ಚಾ ಮತ್ತು ಕಾಫಿಗಳಿಗಿಂತ ಅತ್ಯಂತ ಹಿತಕರವಾದ ಪಾನವಾಗಿದ್ದು ಬಹುಮೂತ್ರಪೀಡೆ ಬಾರದಂತೆ ಆರೋಗ್ಯ ಕಾಪಾಡುತ್ತದೆ ದಾಯಾರಿಕೆ ತಗ್ಗಿಸುತ್ತದೆ ಮೂತ್ರದ ಹಲವು ದೋಷಗಳನ್ನು ಹೋಗಲಾಡಿಸುತ್ತದೆ. ಒಮ್ಮೆ ಉಪಯೋಗಿಸಿದರೆ ಮತ್ತೆ ಇದನ್ನು ಬಿಡರು ಪರೀಕ್ಷಾರ್ಥವಾಗಿ ಒಂದು ಸೀಸೆ ತರಿಸಿರಿ

8 ಔನ್ಸಿನ ಸೀಸೆಗೆ ಕ್ರಯ ರೂ 2—8—0 ಮಾತ್ರ

ಡಾಯಬೆಟೊನ್.

ಇದು ಬಹುಮೂತ್ರದ ಪೀಡೆಗೆ ಅತ್ಯುತ್ತಮ ಔಷಧ ಪೂರ್ಣ ಗುಣವಾಗುತ್ತದೆ. ರೋಗಿಗಳಿಗೆ ಅಮೃತಪ್ರಾಯವಾಗಿದೆ. 8 ಔನ್ಸಿನ ಸೀಸಗೆ ರೂ 5 ಮಾತ್ರ. ಅಂಚೆಹಾಸಲು ವ್ಯಯ ಇದರಲ್ಲಿ ಸೇರಿಲ್ಲ ಸೇವನೆಯ ಸೂಚನೆಗಳು ಸೀಸೆಯೊಂದಿಗೆ ಸಿಗುವುವು

P. M. Kamath & Co
Chemists & General Merchants,
New Court Road, MANGALORE

ಅಥವಾ ಕುಂದಾಪುರದಲ್ಲಿ ಈ ಔಷಧವನ್ನು ತಯಾರಿಸುವ ಮಿಕೆ ಆರ್ ಲೂವಿಸರನ್ನು ವಿಚಾರಿಸಿದರೆ ಔಷಧವನ್ನು ಹೊಂದಬಹುದು

ಪುಸ್ತಕಗಳು

ವಿಹಪ್ಪಕ್ಕ ೧—೫—೦, ಸುಭದ್ರ ೦—೬—೦, ರಾಮಾಯಣ ಸಂಗ್ರಹ ಬಾಲಕಾಂಡ ೦—೬—೬ ಶ್ಯಾಮಕುಟ್ಟ ೦—೧೧—೭, ಚಿಕ್ಕ ಉಪಾಧ್ಯಾಯರ ಶುಕಸಪ್ತತಿ ೩—೦—೦, ಜವುಳೆ ೦—೧೨—೦ ಸಚಿತ್ರ ಇಂಗ್ಲ ಭಾಷಾ ಪ್ರಕಾಶಿಕಾ ಮೂರ ಭಾಗಗಳುಳ್ಳದ್ದು ೨—೮—೦

ತೆಲುಗು ಅಕ್ಷರದ ಸಂಗೀತ ಪುಸ್ತಕಗಳು.

ಸಂಗೀತ ಪ್ರದಾಯಿನಿ ೩—೩—೦ ಗಾಂಧರ್ವಕಲ್ಪವಲ್ಲಿ ೩—೦—೦ ಸಂಗೀತ ಕೃತಿದರ್ಪಣ ಪ್ರಥಮ ಭಾಗ ೨—೨—೦ ಎರಡನೇ ಭಾಗ ೨—೩ ೦ ಸಂಗೀತ ಸ್ವರ ಪ್ರಸ್ತಾರಸಾಗರ ೫—೮—೦ ಅಡ್ವಾನ್ಸ ಅವಶ್ಯಕ

ವಿಳಾಸ—

ಎಚ್. ಎಸ್. ರಾವ್. ಬ್ರದರ್
ಚಿಕ್ಕಪೇಟೆ ಬೆಂಗಳೂರು ಸಿಟಿ

ಪ್ರಖ್ಯಾತಿಪಟ್ಟ

ಮಂಗಳೂರು ನಶ್ಯದ ಹುಡಿ.

ಸೊಗಸಾದ ಹೊಗೆಸೊಪ್ಪನ್ನು ಉಪಯೋಗಿಸಿ ಒಳ್ಳೇ ಅನುಭವಸ್ಥರಿಂದ ತಯಾರಿಸಲ್ಪಡುತ್ತದೆ ಈ ನಶ್ಯವು ಒಂದೆರಡು ತಿಂಗಳವರೆಗಾದರೂ ಕೆಡುವುದಿಲ್ಲ

ರಾತ್ತಲ 1ರ ಕ್ರಯ 3—4—0 ಹೆಚ್ಚಿಗೆ ತಂಸುವವರಿಗೆ ರೂ. 3 ನಾಸಿಕ ಚೂರ್ಣ ಇದು ಕಂಠದ ಮೇಲಿನ ಯಾವತ್ತು ರೋಗಗಳನ್ನು ಗುಣಪಡಿಸುತ್ತದೆ ತೊಲೆ 1ರ ಕ್ರಯ 0 8 0 ವಿ. ಪಿ ಖರ್ಚು ಪ್ರತ್ಯೇಕ ಸ್ಯಾಂಪಲನ್ನು ಅಪೇಕ್ಷಿಸುವವರು 2 ಆಣೆ ಸ್ಟಾಂಪನ್ನು ಕಳುಹಿಸುವದು ರಖಂ ವಡಕೊಳ್ಳುವವರಿಗೆ ಯೋಗ್ಯವಾದ ಕಮಿಷನ್ ದೊರಕುವುದು

ನಮ್ಮ ವಿಳಾಸ—

ಎಮ್. ಪದ್ಮನಾಭ ಭಂಡಾರಿ ಎಂಡ್ ಕೊ.,
ರಥಬೀದಿ, ಮಂಗಳೂರು.

ಮದ್ರಾಸ್ ಸರಕಾರದವರಿಂದ 1920ನೇ ವರ್ಷದ ಶಾಲೆಗಳಿಗೆ ನೇಮಿಸಲ್ಪಟ್ಟಿರುವ

ಕನ್ನಡ ಪಾಠಪುಸ್ತಕಗಳು

	ರೂ.	ಅ.	ಪೈ.		ರೂ.	ಅ.	ಪೈ.
ರಾಮಾಯಣ ಸಂಗ್ರಹ—				ಚಂದ್ರಹಾಸ	0	2	0
ಬಾಲಕಾಂಡ.	0	6	0	ಗುಣಸಾಗರ	0	6	0
ಸುಭದ್ರೆ	0	6	0	ನೀತಿಚಿಂತಾಮಣಿ ಭಾಗ I	0	4	0
ಷಣ್ಮುಖ	0	12	0	,, ,, II	0	3	0
ಪದ್ಯಸಾರ ಭಾಗ I	0	8	0	,, ,, III	0	4	6
ಅಕ್ಬರ ಚರಿತ್ರೆ	1	1	0	ಹೊಸ ಪುಸ್ತಕಗಳು			
ರಾಜಶೇಖರ ಚರಿತ್ರೆ	1	0	0				
ಸುಮತಿಮದನಕುಮಾರ ಚರಿತ್ರೆ I	0	8	6	ವಿಷವಲ್ಲರಿ	0	6	0
				ಸುಶೀಲ	0	1	6
ಅಧಿಕಾರಿಗಳ ಕರ್ತವ್ಯ	0	6	0	ಚಂದ್ರಮುಖಿ	0	8	0
ಸಾವಿತ್ರೀ ಚರಿತ್ರೆ	0	2	3	ಸಂತಾಪಕ	0	6	0
ರಘುನಂದ	0	10	0	ಅಬಲಾಸಚ್ಚರಿತ್ರ ರತ್ನಮಾಲೆ	2	0	0
ಸುವ್ರತ	0	13	0	ಸಿಮ್ಮೇಲಿ	0	12	0
ಪ್ರಬಂಧಮಂಜರಿ	0	14	0	ಪದತ್ರಯ (ಬಾಲವ್ಯಾಕರಣ)	0	3	6
ಪದಾರ್ಥವಿಜ್ಞಾನಶಾಸ್ತ್ರ	0	14	0	ಹಿಂದೂ ವ್ರತವಿವೇಕ	0	10	0
ಶ್ಲೋಕ...	1	0	0	ಪದ್ಮಿನಿ	0	12	6
ಪ್ರಹ್ಲಾದ	0	2	0	ಶಾಕ್ಯಾಯನಿ	0	8	0
ಧ್ರುವ	0	2	0	ವನಜಾಕ್ಷಿ ಲಕ್ಷ್ಮೀಬಾಯಿ	0	12	0

ಇತ್ಯಾದಿ ಎಲ್ಲಾ ಸ್ಕೂಲ್ ಪುಸ್ತಕಗಳೂ ನಮ್ಮಲ್ಲಿ ಸುಲಭ ಬೆಲೆಗೆ ದೊರೆಯುತ್ತವೆ.

ಎಂ. ಎಸ್. ರಾವ್ ಕಂಪೆನಿ,

ಪುಸ್ತಕವ್ಯಾಪಾರಿಗಳು, ಬೆಂಗಳೂರು ಸಿಟಿ.

ನೋಟೀಸು.

ಮಂಗಳೂರು ತಾಲೂಕು ಕೋಡಿಯಾಲ ಮಾಗಣೆ ಕಣ್ಣೂರು ಗ್ರಾಮದ ಬಡಿಲಗುತ್ತಿನ ಸಂಕುರ್ಪೈಗಳ ಮೊಮ್ಮಗ ಐತಪ್ಪ ಶೆಟ್ಟಿಯು ಇದರ ಮೂಲಕ ಸರ್ವ ಜನರಿಗೆ ತಿಳಿಸುವದೇನಂದರೆ:—

ನಮ್ಮ ಕುಟುಂಬದ ಯಜಮಾನನಾದ ಬಡಿಲ ದೂಮಪ್ಪೈಗಳು ಕಳೆದ ಮೇ ತಿಂಗಳಲ್ಲಿ ಮೃತಪಟ್ಟು ಈಗ ಸದರಿ ಕುಟುಂಬದ ಎಲ್ಲಾ ಸ್ಥಿರಚರ ಸೊತ್ತುಗಳಿಗೆ ಅವರ ನಂತರ ಗಂಡಸರಲ್ಲಿ ಕುಟುಂಬದಲ್ಲಿ ನಡದುಬಂದ ಪದ್ಧತಿಪ್ರಕಾರ ನಾನು ಹಿರಿಯನಾದ್ದರಿಂದ ಯಜಮಾನನಾಗಿರುವ ಆಡಳಿತೆದಾರನಾಗಿದ್ದೇನೆ. ಕುದ್ತಲೆಯು ಸಹಾ ನನ ಹೆಸರಲ್ಲಿ ಆಗಿ ಪಟ್ಟೆಯು ನನಗೆ ಆಗಲಿಕ್ಕೆ ಹುಕುಂ ಆಗಿರುತ್ತದೆ ಕುಟುಂಬಕ್ಕೆ ಬರತಕ್ಕ ಎಲ್ಲಾ ಸಾಲಮೂಲಗಳನ್ನು ವಸೂಲು ಮಾಡಲಿಕ್ಕೆ ನಾನು ಹಕ್ಕುದಾರನಾಗಿರುತ್ತೇನೆ. ಕುಟುಂಬಕ್ಕೆ ಸಾಲ ವಸೂಲು ಕೊಡುವ ಸಾಲಗಾರರು ಅವರಿಂದ ಬರತಕ್ಕ ಸಾಲಗಳನ್ನು ನನಗೆ ಕೊಡಬೇಕು. ಮತ್ತು ನನ್ನ ಬರಹಮೂಲಕ ಅನುಮತಿ ವಿನಹಾ ನಮ್ಮ ಕುಟುಂಬದ ಯಾರೊಬ್ಬ ಮೆಂಬರರ ಕೈಯ್ಯಾ ಕೊಡಕೂಡದು. ಹಾಗೆ ಅವರು ಕೊಟ್ಟದ್ದಾದರೆ ಅದು ಕುಟುಂಬದ ಮೇಲೆ ಬಾಧಿಸತಕ್ಕದ್ದಲ್ಲ. ಅದರ ಸಂಬಂಧ ಕುಟುಂಬಕ್ಕೆ ಉಂಟಾಗುವ ಎಲ್ಲಾ ನಷ್ಟವನ್ನು ಅವರು ತೆರದೇಕಾಗುವುದು ಎಂತ ಇದರ ಮೂಲಕ ತಿಳಿಸಿರುತ್ತದೆ.

ಬಡಿಲಗುತ್ತು, ತಾ. 11-12-'20. — ಬಿ. ಐತಪ್ಪ ಸೆಟ್ಟಿ.

ಮುಫತ್ತು!! ಇಂಥಾದ್ದು ಬೇಕು.

ಗುಲ್ಷನ್ ಜೋಬನ್

ಸರಕಾರದಲ್ಲಿ ರಿಜಿಸ್ಟರು ಮಾಡಲ್ಪಟ್ಟ ನಂ. 253.

ಒಂದಾಣೆ ಸ್ಟಾಂಪಿನೊಳಗೆ ರುಜುವಾತು ಶಿಕ್ಷೆಯುಳ್ಳ ರಶೀದು— ಈ 32 ಮಾತ್ರೆಗಳುಳ್ಳ ಬಾಟ್ಲಿಗಳನ್ನು ಖರೀದಿಸುವವರಿಗೆ ಕೊಡಲ್ಪಡುತ್ತದೆ. ಈ ಮಾತ್ರೆಗಳನ್ನು ಸೇವಿಸಿ ಗುಣತೋರಿಸದಿದ್ದರೆ ಮನಸಾಕ್ಷಿಯಾಗಿ ಆ ರಶೀದಿಯೊಳಗೆ ದಸ್ಕತುಮಾಡಿ ಒಂದು ತಿಂಗಳೊಳಗಾಗಿ ವಾಪಸು ಕೊಟ್ಟರೆ ಬಾಟ್ಲಿಯ ಕ್ರಯವನ್ನು ವಾಪಸು ಮಾಡುತ್ತೇವೆಂದು ಪ್ರತಿಜ್ಞೆಯನ್ನು ನಾವು ಪೃಥವಾಗಿ ಮಾಡುತ್ತೇವೆ.

ಗುಲ್ಷನ್ ಜೋಬನ್.

ಶಕ್ತಿವರ್ಧಕ! ಧಾತುಪೌಷ್ಟಿಕ!! ರೋಗನಿವಾರಕ!!!

ಈ ಮಾತ್ರೆಗಳು ಸೇವಿಸಿದ ಪ್ರಥಮ ದಿವಸದಲ್ಲಿಯೇ ಆಶ್ಚರ್ಯಕರವಾದ ಗುಣಗಳನ್ನು ತೋರಿಸುತ್ತದೆ. ಕಳೆಗುಂದಿದ ಕಪೋಲಗಳಿಗೆ ಪುಷ್ಟಿ ಮತ್ತು ಕಾಂತಿಯನ್ನು ಕೊಟ್ಟು ಶರೀರಕ್ಕೆ ಧಾತುಪುಷ್ಟಿ ಸುಖನಿದ್ರೆಗಳನ್ನು ಕೊಡುತ್ತವೆ. ಕಟಿಶೂಲ, ವಾಯುರೋಗ, ಕ್ಷಯ, ಶ್ವಾಸ, ಕಾಸ, ಉದರಶೂಲೆ, ಅಜೀರ್ಣ, ಮೂತ್ರರೋಗ, ಮಲಬದ್ಧತೆ, ಜ್ವರಗಳು, ಮೂಲವ್ಯಾಧಿ, ಅನಿಯಮಿತಋತು ಇವುಗಳನ್ನು ಸಮೂಲನಾಶಿಸಿ, ರಕ್ತಶುದ್ಧಿಯೂ ವೃದ್ಧಿಯೂ ಕಂಡು ಚರ್ಮವ್ಯಾಧಿಗಳನ್ನು ನಿವಾರಣೆಮಾಡುತ್ತವೆ.

ಬಾಟ್ಲಿ 1ಕ್ಕೆ ರೂ. 1. 3ಕ್ಕೆ ರೂ. 2—10—0. ವಿ. ಪಿ. ಕ. ಬೇರೆ.

ಏಜಂಟರುಗಳು ಬೇಕು. ಎಲ್ಲ ಸ್ಥಳಗಳಲ್ಲಿ ಸಿಕ್ಕುವದು.

ವಿಳಾಸ:—ದಿ. ಗುಲ್‌ಷನ್ ಜೋಬನ್ ಕಂಪೆನಿ, ಬೊಂಬೈ 3.



ಜಗತ್ಪ್ರಸಿದ್ಧವಾದ ಅನೇಕ ರೋಗಗಳಿಗೆ ಒಂದೇ ಔಷಧವು.

ಇಂಡಿಯಾ ಸರಕಾರದಲ್ಲಿ ಸನ್ ೧೮೭೭ನೇ ಇಸವಿಯ ೫ನೇ ಆಕ್ಟಿನಂತೆ ರಿಜಿಸ್ಟರ ಮಾಡಲ್ಪಟ್ಟ

ಅರ್ಕಶಫಾ ಅಥವಾ ಆರೋಗ್ಯಬಿಂದು.

ಈ ಅರ್ಕಶಫಾ ಎಂಬ ಔಷಧವು ಯಾವತ್ತು ರೋಗಕ್ಕೆ ಮನವರಿಕೆಯಾಗಿ ತಾ. ೧೦-೮-೧೯೦೮ನೇ ಇಸವಿಯಿಂದ ತಾ. ೧-೯-೧೯೧೪ನೇ ಇಸವಿಯುವರೆಗೆ ಮೂವತ್ತು ಸಾವಿರ ಬಾಟಲಿಗಳು ಖರ್ಚಾದವು. ಮತ್ತು ಸನ್ ೧೯೧೮ನೇ ಇಸವಿ ಅಕ್ಟೋಬರ್ ತಿಂಗಳಲ್ಲಿ ಇನ್‌ಫ್ಲುಯಂಜಾ ಜ್ವರಕ್ಕೆ ಒಂದೇ ತಿಂಗಳಲ್ಲಿ ಒಂಭತ್ತು ಸಾವಿರ ಬಾಟಲಿಗಳು ಖರ್ಚಾದವು. ಅಂತು ಈವತ್ತಿನ ವರೆಗೆ ಸಣ್ಣ ದೊಡ್ಡ ಬಾಟ್ಲಿಗಳು ಕೂಡಿ ಮೂವತ್ತೊಂಭತ್ತು ಸಾವಿರ ಬಾಟಲಿಗಳು ಖರ್ಚಾದವು. ಅಂದ ಮೇಲೆ ಈ ಔಷಧವು ಎಷ್ಟು ಮೌಲ್ಯವಾನ ಆದೆ ಇದು ಯಾವತ್ತರು ತಾವೇ ಅನುಭವಕ್ಕೆ ತಂದು ಕೃತಿಯೊಳ್ಳರು ತಮ್ಮ ಸಂಗ್ರಹದಲ್ಲಿ ಒಂದು ಬಾಟ್ಲಿ ಇಟ್ಟುಕೊಂಡು ಅಮೃತವೇ ಎಂದು ತಿಳಿದು ಸ್ವೀಕಾರಮಾಡುತ್ತಿರಬೇಕು. ಈ ಆರೋಗ್ಯಬಿಂದು ಇಡೀ ಕರ್ನಾಟಕ ದೇಶಕ್ಕೆಲ್ಲಾ ಹೋಗಿ ರೋಗಿಗಳು ಈ ಅರ್ಕಶಫಾದಿಂದಲೇ ಗುಣಹೊಂದಿದ ಬಗ್ಗೆ ಮತ್ತು ಯಾವತ್ತು ರೋಗಕ್ಕೆ ಉಪಯೋಗ ಆದಪ್ರಯುಕ್ತ ಎಷ್ಟೋ ಇನಾಮು ಸರ್ಟಿಫಿಕೇಟುಗಳು ಸಹ ದೊರೆದಿರುತ್ತವೆ. ಅವು ಬರೆಯಲಿಕ್ಕೆ ಕಾಗದವು ಸಾಲದು. ಇಂಥ ಅಮೂಲ್ಯವಾದ ಈ ಔಷಧವನ್ನು ಎಲ್ಲರೂ ಸ್ವೀಕರಿಸಿ ರೋಗರಹಿತರಾಗುವಿರೆಂದು ನಂಬುತ್ತೇನೆ. ರೋಗದ ಪರೀಕ್ಷೆಯ ಸಲುವಾಗಿ ಬೇರೆ ಡಾಕ್ಟರರ ಮತ್ತು ವೈದ್ಯರ ಆಧಾರ ಬೇಕಾಗುವದಿಲ್ಲ. ಅಂದ ಮೇಲೆ ಈ ಆರೋಗ್ಯಬಿಂದುವಿನ ಮೇಲೆ ಲಕ್ಷ್ಯಮಾಡದೆ ಕೆಳಗೆ ಬರೆದ ರೋಗಗಳ ಮೇಲೆ ಉಪಯೋಗಮಾಡಿ ರೋಗನಿವಾರಣ ಮಾಡಿಕೊಳ್ಳಬೇಕು.

ರೋಗದ ನಾಮಗಳು.

ಕ್ಷಯರೋಗ, ಹಡಪರೋಗ, ಪಾಂಡುರೋಗ, ಗುಲ್ಮರೋಗ, ಮೂಲರೋಗ, ಮಹಾಮಾರಿ, (ಕಾಲರಾ), ಪ್ಲೇಗು, ಹಳಿಜ್ವರ, ವಿಷಮಜ್ವರ, ಇನ್‌ಫ್ಲುಯಂಜಾ ಜ್ವರ, ಅನೇಕ ಪ್ರಕಾರದ ಜ್ವರ, ಗಂಡಮಾಲೆ, ಕಿವಿಶೂಲೆ, ಮೂಗಿನೊಳಗಿನ ಪಿನಸ, ಮೊದಲಾದ ರೋಗವು, ಕಣ್ಣಿನೊಳಗೆ ಹೂವು ಬೀಳೋದು ಮತ್ತು ಕಣ್ಣುನೋವು, ದಮ್ಮು, ಕೆಮ್ಮು, ಶ್ವಾಸ, ಅಡಗ್ಗೆ, ಇದ್ದಲಿಕೆ, ಅಜೀರ್ಣ, ಹೊಟ್ಟೆಶೂಲಿ, ಮೈಶೂಲಿ, ಅರದಲೆಶೂಲಿ, ನಡಶೂಲಿ, ವಾತಶೂಲಿ, ರಕ್ತಿಬಡು, ಗುದ್ಧವ್ವನ ಬೇನೆ, ಹುರಕು ಕಜ್ಜಿ, ಗಜಗರ್ಣ, ಕದ್ದು, ಇಸಬು, ಘಾಯವ್ರಣ, ನಾರುಹುಣ್ಣು, ಸ್ತ್ರೀಯರ ಮುಟ್ಟುಶೂಲಿ, ಹಡದ ನಂಜು, ಸಣ್ಣ ಕೂಸುಗಳ ಬಾಲಗ್ರಹ, ಕೋಡಗೆಮ್ಮು, ಅರವು, ಮುಟ್ಟದೋಷ, ಹೊಟ್ಟೆ ದೊಡ್ಡದಾಗೋದು, ಮೈ ಹೊರಬೀಳೋದು, ಮತ್ತು ಸಣ್ಣ ಕೂಸುಗಳಿಗೆ ಪ್ರಸ್ಥಂಗೂ ಸಹ ತಿಳಿಯದ ಇದ ಅನೇಕ ರೋಗಗಳು, ಚೇಳು ಮತ್ತು ಸರ್ಪದಂಶ ಇದರ ಹೊರತು ಇನ್ನು ಅನೇಕ ರೋಗಗಳು, ಮಾತ್ರೆಯಿಂದ ಗುಣವಾಗುತ್ತವೆ. ಈ ಆರೋಗ್ಯಬಿಂದುವಿನ ಕ್ರಯ ಅನಾಲ್ಪ ಕಂಡ ಬಂದಲ್ಲಿ ಬಡವರಿಗೂ ಧನವಂತರಿಗೂ ಸರಿಯಾಗಿ ಬಹಳ ಕಡಿಮೆ ಕ್ರಯ ಇಟ್ಟಿರುತ್ತದೆ. ಒಂದುಕಾಲುತೊಲೆ ಬಾಟಲಿ ಒಂದಕ್ಕೆ 2 ರೂಪಾಯಿ. ನಮೂನೆ ಉದ್ದೇಶ ೬ ಆನೆ. ಕೂಡದ ಬಾಟ್ಲಿ ಒಂದಕ್ಕೆ ೬ ಆನೆ. ವಿ. ಪಿ. ಖರ್ಚು ಬೇರೆ ಬೀಳುವದು. ಒಂದು ಡಝನ್ ಬಾಟ್ಲಿ ತಕ್ಕೊಂಡರೆ ನಾಲ್ಕು ಬಾಟ್ಲಿಗಳನ್ನು ಕಮಿಷನ್ ಕೊಡುತ್ತೇವೆ. ಇದಕ್ಕೆ ಎಂಟು ಆಣೆ ಖರ್ಚು ಬರುವದು. ೧೦ರಿಂದ ೧೧ ಬಾಟಲಿಗಳ ವರೆಗೆ ತಗೆದುಕೊಂಡರೆ ಕಮಿಷನ್ ಇರುವದಿಲ್ಲ. ಇದಕ್ಕೆ ನಾಲ್ಕು ಆಣೆ ಖರ್ಚು ಬರುವದು. ಒಂದುಕಾಲುತೊಲೆಯ ೬ ಬಾಟಲಿಗಳು. ಒಂದೆ ಸಾರಿ ತೆಕ್ಕೊಂಡರೆ ಒಂದು ಬಾಟಲಿ ಕಮಿಷನ್ ಕೊಡುತ್ತೇವೆ. ಇದಕ್ಕೆ ಖರ್ಚು ಎಂಟು ಆಣೆ ಬರುವದು. ನಮ್ಮ ಔಷಧವು ಬೋಗಸ ಹೊರತು ಶಿಂಪ ಕಳಿಸಲ್ಪಡುತ್ತೇವೆ. ಮತ್ತು ಹೆಚ್ಚಿನ ಮಾಹಿತಿ ವ ಕಳಲೇಬೇಕಾದಲ್ಲಿ ಪೋಸ್ಟ ಕಾರ್ಡು ಬರೆದು ಕೇಳಿದರೂ ತಿಳಿಯಲಿಕ್ಕಿಲ್ಲ. ಅನುಪಾನ ಪತ್ರಗಳು ಕನ್ನಡ, ಮರಾಠಿ, ಮುಸಲ್ಮಾನ ಭಾಷೆಗಳಲ್ಲಿ ಛಾಪಿಸಿರುತ್ತವೆ. ಪಸಂದಿ ಪ್ರಕಾರ ಬಾಟ್ಲಿಯು ಸೋಬತ ಸಿಗುವವು. ನಿಮ್ಮ ವಿಳಾಸ ಇಂಗ್ಲೀಷ ಅಥವಾ ಕನ್ನಡದಲ್ಲಿ ಹೆಸರು ಮತ್ತು ಪೋಸ್ಟ ವಗೈರೆ ಸ್ಪಷ್ಟವಾಗಿ ಬರೆಯುತ್ತಿರಬೇಕು.

ಹೆಚ್. ಎಂ. ಮುಲ್ಲಾ, ಸಂಪಾದಕ ಅರ್ಕಶಫಾ,

33 ಹೆಡ್ ಆಫೀಸ್ ಶಹಾಪೂರ, (ಬೆಳಗಾಂವ).

Mr. ALEX ALVAREZ Dentist.

OF MANDALAY, UPPER BURMA.

Will attend patients here for the following in Particular:—

Charges Moderate.

1. Painless extraction of teeth. 2. Making of false teeth. 3. Filling the teeth with silver, gold, porceline. 4. Gold bridge and Crowns. 5. Porceline Crowns. 6. Cleaning the teeth. 7. Pyorrhoea treatment.

Can be consulted at:—

The Electro Homoeopthic Dispensry.
Hampankatta, MANGALORE.

ಮಿ. ಅಲೆಕ್ಸ್ ಅಲ್ವರಿಸ್ ದಂತವೈದ್ಯ.

ಇವರು ಹಲ್ಲು ಬೇನೆಯಿಂದ ನರಳುತ್ತಿರುವವರ ಹಲ್ಲುಗಳನ್ನು ಸ್ವಲ್ಪವೂ ನೋಯದಂತೆ ಬುಡಸಹಿತ ಕಿತ್ತು ತೆಗೆಯೋದು, ಕೃತ್ರಿಮ ಹಲ್ಲುಗಳನ್ನು ಮಾಡಿ ಇಡೋದು, ಹಲ್ಲುಗಳಲ್ಲಿ ಉಂಟಾದ ರಂಧ್ರಗಳನ್ನು ಬೆಳ್ಳಿ, ಬಂಗಾರ, ಪಿಂಗಾಣಿ ಇವುಗಳಿಂದ ಮುಚ್ಚೋದು, ಬಂಗಾರದ ಕೃತ್ರಿಮ ದಂತಮಾಲೆಯನ್ನು ಬುಡ ಸಹಿತ ಧರಿಸೋದು, ಪಿಂಗಾಣಿ ಹಲ್ಲುಮಾಲೆಯನ್ನು ಇಡೋದು ಮತ್ತು ಹಲ್ಲುಗಳನ್ನು ಶುಚಿಮಾಡೋದು ಮುಂತಾದ ದಂತಚಿಕಿತ್ಸೆಯನ್ನೂ ಪಯೋರಿಯಾ ಚಿಕಿತ್ಸೆಯನ್ನೂ ಮಾಡುವರು. ಇವರು ಹಂಪನಕಟ್ಟೆಯಲ್ಲಿರುವ ಮಿ। ಎ. ಫೆರ್ನಾಂಡಿಸ್, ಇಲೆಕ್ಟ್ರೊ ಹೋಮಿಯೊಪೆಥಿಕ್ ಡಿಸ್ಪೆನ್ಸರಿಯಲ್ಲಿ ಮೊಕ್ಕಾಂ ಮಾಡಿರುತ್ತಾರೆ.

ಗೊತ್ತೇ ಇಲ್ಲವೋ ಕಳೆದ ೩೦೦ ವರುಷಗಳಿಂದಲೂ, ವಂಶಪರ್ಯದಿಂದ ನಡೆದು ಬರುತ್ತಿರುವ ಕಾಥೆವಾಡದೇಶದ ಮಹಾರಾಜರ ಖಾಸಾ ವೈದ್ಯರಾದ ರಾಜವೈದ್ಯ ನಾರಾಯಣ ಜೀ ಕೇಶವ ಜೀಯವರ ಲೋಕ ಪ್ರಸಿದ್ಧಿಯಾದ

ಮದನ ಮಂಜರಿ ಮಾತ್ರೆಗಳು.

ಈ ಮಾತ್ರೆಗಳನ್ನು ಸೇವಿಸುವುದರಿಂದ ಧಾತುಪುಷ್ಟಿ, ರಕ್ತಪುಷ್ಟಿಯನ್ನೂ ದೇಹಕ್ಕೆ ಕೊಡುವುದು ಮತ್ತು ಧಾತುವು ಹೋಗುತಿದ್ದರೂ, ಹಸಿವಿಲ್ಲದಿದ್ದರೂ, ಕಾಲಕಾಲಕ್ಕೆ ಮಲವಿಸರ್ಜನೆಯಾಗದಿದ್ದರೂ, ಕೈಕಾಲು ಸೊಂಟದಲ್ಲಿ ನೋವಿದ್ದರೂ ಗುಣಮಾಡುವುದು. ಈ ಮಾತ್ರೆಗಳನ್ನು ವನಸ್ಪತಿ ಮೂಲಿಕೆಗಳಿಂದ ತಯಾರಿಸಿದ್ದಾಗಿದೆ.

ವಿಳಾಸ— ಕ್ರಯ ಡಬ್ಬಿ ೧ಕ್ಕೆ ೧—೦—೦.

ರಾಜವೈದ್ಯ ನಾರಾಯಣಜೀ, ಕೇಶವಜೀ,
27. ಜೈನ ಬಜಾರು ರೋಡ್,
ಮದರಾಸು.

"ವೈದ್ಯಾಮೃತ ಮಂದಿರಂ"

ಎಂಬ

ನಮ್ಮ ಆಯುರ್ವೇದ ವೈದ್ಯಶಾಲೆಯಲ್ಲಿ ಶಾಸ್ತ್ರೋಕ್ತವಾಗಿ ತಯಾರಿಸಲ್ಪಟ್ಟ ಎಲ್ಲಾ ತೈಲಗಳೂ, ಆಸವಾರಿಷ್ಟಗಳೂ, ಕಷಾಯಗಳೂ, ದ್ರವದ್ರಾವಕಗಳೂ, ಭಸ್ಮಗಳೂ, ಚೂರ್ಣಗಳೂ, ಮಾತ್ರೆಗಳು ಇತ್ಯಾದಿ ಔಷಧಿಗಳೂ ಮತ್ತು ಕಾಶ್ಮೀರ, ನೇಪಾಲ ದೇಶಗಳಿಂದ ತರಿಸಿದ ಕಸ್ತೂರಿ, ಪಚ್ಚ ಕರ್ಪೂರ, ಕುಂಕುಮಕೇಸರ ಮುಂತಾದವುಗಳೂ ಸುಲಭವಾದ ಕ್ರಯಕ್ಕೆ ದೊರಕುತ್ತವೆ. ಪರಸ್ಥಳದವರು ರೋಗದ ಪ್ರಕೃತಿಯನ್ನು ವಿಶದವಾಗಿಬರೆದು ತಿಳಿಸಿದರೆ ಅಗತ್ಯವಿರುವ ಔಷಧಿಗಳನ್ನು ಅನುಪಾನಪತ್ರಿಕೆ ಸಮೇತ ವಿ. ಪಿ. ಮೂಲಕ ಕಳುಹಿಸುವೆವು.

ವಿಳಾಸ:— ಕೆ. ಕೆ. ನಾಯರ್
ಎಂಡ್ ಬ್ರದರ್ಸ್,
ವೈದ್ಯಾಮೃತ ಮಂದಿರಂ,
ನೀಲೇಶ್ವರ, ದ. ಕನ್ನಡ.

ಕ್ಷಿಪ್ರಗುಣಕಾರಿ! ಮಹೌಷಧ!!

ಸಿರಪ್ ವಾಸಕಾ.

ಕೆಮ್ಮು, ಶೀತ, ಜ್ವರ, ಪಕ್ಕೆಗಳ ವೇದನೆ, ರಕ್ತಕಾಸ, ಕ್ಷಯ, ಉಬ್ಬಸ, ಬ್ರಾಂಕೈಟಿಸ, ನ್ಯುಮೋನಿಯಾ ಮುಂತಾದ ಶ್ವಾಸಕೋಶದ ಯಾವತ್ತು ರೋಗಗಳಿಗೆ ಅತ್ಯುತ್ತಮವಾದ್ದು. ಪ್ರಾಚೀನಾರ್ಯ ಶಾಸ್ತ್ರೋಗಗಳಿಗೆ ವಿಶೇಷ ಗುಣಕಾರಿ ಎಂದು ಹೆಸರುಗೊಂಡ "ಆಡಸೋಗೆ" ಎಂಬ ಗಿಡಮೂಲಿಕೆಯಿಂದ ತಯಾರಿಸಲ್ಪಟ್ಟದ್ದು, ಇದರಿಂದ ದೂಷಿತವಾದ ಶ್ಲೇಷ್ಮವು ಬೇಗನೆ ಹೊರಬೀಳುವದರಿಂದ ಕೆಮ್ಮು ಬರುವಾಗ ಕಷ್ಟವಾಗುವದಿಲ್ಲ. ರುಚಿಯಲ್ಲಿ ಸಿಹಿಯಾಗಿರುವದರಿಂದ ಮಕ್ಕಳಿಗೆ ಇದರ ಸೇವನೆಯಲ್ಲಿ ಬಹಳ ಪ್ರೀತಿ.

ಬಾಟ್ಲಿ ೧ರ ಕ್ರಯ ಬರೇ ಒಂದು ರೂಪಾಯಿ ಮಾತ್ರ.

ಬಂಗಾಲ ಕೆಮಿಕಲ ಮತ್ತು ಫರ್ಮಾಸ್ಯೂಟಿಕಲ ವರ್ಕ್ಸ್, ಕಂಪೆನಿ ಲಿಮಿಟೆಡ್, ಕಲ್ಕತಾ,

ಸೋಲ ಏಜಂಟ್ಸ—

ಪಿ. ಎ. ಪೈ ಬ್ರದರ್ಸ್, ಉಡುಪಿ.
ಮಿಜಾರ್ಕಾರ ಬ್ರದರ್ಸ್, ಮಂಗಳೂರು,
ಇವರಲ್ಲಿಯೂ ಸಿಗುವದು

ಗೊನೊಕ್ಯೂರಾ.

ಮೇಹ ರೋಗಕ್ಕೆ (Gonorrhea) ಪರಮೌಷಧವು.

ಎಲ್ಲಾ ತರದ ಮೇಹಗಳಲ್ಲಿ, ದಪ್ಪವಾದ ಕೀವಿನಂಥಾ ಮೇಹವು ಹರಿಯುವದಕ್ಕೆ, ಮೂತ್ರದ್ವಾರದಲ್ಲಿಯು ಉರಿ, ಹಳದಿವರ್ಣದ ಅಥವಾ ಹಸುರುವರ್ಣದ ಕಠಿಣ ಉರಿಯುಳ್ಳ ಮೇಹವು ಹರಿಯುವದಕ್ಕೆ, ಮೂತ್ರಮಾಡುವಾಗ ಇಂದ್ರಿಯದಲ್ಲಿ ಉರಿ, ಮುಂತಾದ ಮೇಹಸಮ್ಮಂಧವಾದ ಎಲ್ಲಾ ಚುರುಕುರೋಗಗಳಲ್ಲಿ ಉತ್ತಮ ಔಷಧವು. ಇದರ ಸೇವನೆಯಿಂದ ಎಷ್ಟುಕಾಲದ ಹಳೆ ಮೇಹರೋಗಗಳಾದರೂ

ಖಂಡಿತವಾಗಿ ಗುಣಹೊಂದುವವು.

ಔಷಧ ಸೇವಿಸುವ ಕ್ರಮ— 2 ಘಂಟೆಗೆ ಒಂದಾವರ್ತಿ 5 ಬಿಂದು ಔಷಧವನ್ನು ಒಂದು ಚಮಚದಷ್ಟು ನೀರಿನಲ್ಲಿ ಹಾಕಿ ಸೇವಿಸುವದು. ಕ್ರಯ:— ರೂ. 1—0—0.

ಬೇಕಾಗಿದ್ದವರು ಕೆಳಗಿನ ವಿಳಾಸಕ್ಕೆ ಬರಿಯತಕ್ಕದ್ದು.

ವಿಳಾಸು— ಎ. ಪೆರ್ನಾಂಡಿಸ್,
ಇಲೆಕ್ಟ್ರೊ ಹೋಮಿಯೊಪತಿ ಡಿಸ್ಪೆನ್ಸರಿ,
ಮಂಗಳೂರು.

The Canara Bank, Limited, Mangalore.
ಕೆನರಾ ಬ್ಯಾಂಕ್ ಲಿಮಿಟೆಡ್, ಮಂಗಳೂರು.

ESTABLISHED JULY 1906. 1906ನೇ ಇಸವಿ ಜುಲೈನಲ್ಲಿ ಸ್ಥಾಪಿಸಲ್ಪಟ್ಟಿತು.

Authorised and fully paid up Capital Rs. 300,000—0—0	ಅಧಿಕಾರಗೊಳಿಸಲ್ಪಟ್ಟ ಪೂರ್ಣವಾಗಿ ಕೊಟ್ಟ ಮೂಲಧನವು ರೂ. 300,000—0—0
Reserve and other sinking Funds „ 138,697—7—2	ಕ್ಷೇಮನಿಧಿ ಮತ್ತು ಇತರ ಫಂಡುಗಳು „ 138,697—7—2

THE BANK RECEIVES FIXED, CURRENT ACCOUNT, & SAVINGS BANK DEPOSITS.

ಕಾಯಂ ಮತ್ತು ಚಾಲ್ತಿ ಠೇವಣಾತಿಗಳೂ, ಸೇವಿಂಗ್ಸ್ ಬ್ಯಾಂಕ್ ಠೇವಣಾತಿಗಳೂ ತಕ್ಕೊಳ್ಳಲಾಗುತ್ತವೆ.

For further particulars apply to the Secretary.

☞ ವಿಶೇಷ ವರ್ತಮಾನಕ್ಕೆ ಸೆಕ್ರೆಟರಿಗಳಿಗೆ ಬರೆಕೊಳ್ಳುವದು.

Canara Bank Ltd., Mangalore, 1st September 1920.

K. Venkat Rao,
Secretary.

ಪಾಳ್ಯದ ವೆಂಕಟಾಚಲ ಪಂಡಿತರ ಸಿದ್ಧೌಷಧಗಳು.

ಲೋಕಾಮಯಹರ ಕಸ್ತೂರಿ ಮಾತ್ರೆಗಳನ್ನು ಈಗಲಾದರೂ ಪರೀಕ್ಷಿಸಿ ನೋಡಿರಿ!

ಪ್ರತಿವರ್ಷವೂ ಲಕ್ಷಾಂತರ ಸೀಸೆಗಳು ವಿಕ್ರಯವಾಗುತ್ತಿವೆ.

ಇಂಡಿಯಾದವರು ಮಾತ್ರವಲ್ಲ; ಬರ್ಮಾ, ಸಿಲೋನ್, ಮಲೆಯ ಸ್ಟೇಟ್, ಗೋವಾ, ಫೀಜಿಐಲೆಂಡ್, ಆಫ್ರಿಕಾ ಮೊದಲಾದ ಕಡೆಯವರು ಕೂಡ ಈ ಸಿದ್ಧೌಷಧಿಯನ್ನು ಉಪಯೋಗಿಸುತ್ತಿರುತ್ತಾರೆ.

ಮಹಾಭಾಗ. ಒಂದೇ ಒಂದು ಲೋಕಾಮಯಹರ ಕಸ್ತೂರಿ ಮಾತ್ರೆಯ ಸೀಸೆಯು ನಿಮ್ಮ ಮನೆಯಲ್ಲಿದ್ದರೆ ಸಮಯವನ್ನು ಕಾದ ತೊಂದರೆಯುಂಟಾಗುವುದು ಕಡಿಮೆಯಾಗುವುದು.

ಶೀತ, ಶೀತವಾಯು, ಅಜೀರ್ಣ, ಪಾರ್ಶ್ವವಾಯು, ಜ್ವರ, ಮಂದ, ಮಲಬದ್ಧ, ಕೆಮ್ಮು, ಗಸಬೇನೆ, ಬಲಹೀನತೆ, ಕಟ್ಟು ಹವಾ, ಮತ್ತು ಕೆಡುಕಾದ ನೀರಿನಿಂದುಂಟಾಗುವ ವಿಕಾರ, ಮಕ್ಕಳ ಎಳವು, ಜ್ವರ, ಕೆಮ್ಮು ವಾಯು, ಇನ್ನೂ ಅನೇಕ ರೋಗಗಳನ್ನು ಈ ಸಿದ್ಧಾಮೃತ ಆಶ್ಚರ್ಯವಾಗುವಂತೆ ಗುಣಪಡಿಸುತ್ತದೆ.

ಪ್ರತಿ 6 ಸೀಸೆಗಳನ್ನು ಒಟ್ಟಿಗೆ ತರಿಸಿದರೆ ಟಪಾಲು ಖರ್ಚು ಸೇರಿ 1—8—0.
ಪ್ರತಿ 12 ಸೀಸೆಗಳನ್ನು ಒಟ್ಟಿಗೆ ತರಿಸಿದರೆ ಟಪಾಲು ಖರ್ಚು ಸೇರಿ 2—13—0.
ಪ್ರತಿ 25 ಸೀಸೆಗಳನ್ನು ಒಟ್ಟಿಗೆ ತರಿಸಿದರೆ ಟಪಾಲು ಖರ್ಚು ಸೇರಿ 5—3—0.

ರಜಿಸ್ಟರಾದ ಈ ವ್ಯಾಪಾರದ ಗುರ್ತು ಪ್ರತಿ ಸೀಸೆಯ ಮೇಲೂ ಇರುವುದನ್ನೇ ನೋಡಿ ತೆಗೆದುಕೊಳ್ಳಬೇಕಾಗಿದೆ.

ಅನುಪಾನ ಪತ್ರವು ಪ್ರತಿ ಸೀಸೆಯೊಡನೆಯೂ ಇರುವುದು. 260 ಮಾತ್ರೆಗಳುಳ್ಳ ಕುಪ್ಪಿಗೆ 4 ಆಣೆ ಮಾತ್ರ.

ಲಕ್ಷ್ಮೀವಿಲಾಸ ರಸ (ಕ್ಷಯಕ್ಕೆ) — ಲಕ್ಷೋಪಲಕ್ಷ ಕ್ಷಯರೋಗಿಗಳು ಈ ಲಕ್ಷ್ಮೀವಿಲಾಸ ರಸದಿಂದ ಆರೋಗ್ಯವನ್ನು ಪಡೆದಿರುತ್ತಾರೆ. ಒಂದೇ ಒಂದು ಲಕ್ಷ್ಮೀವಿಲಾಸ ರಸದ ಸೀಸೆಯು ತಮ್ಮಲ್ಲಿದ್ದರೆ ಕ್ಷಯಕ್ಕೆ ಸರ್ವೋತ್ತಮವಾದ ಸಿದ್ಧೌಷಧಿಯು ಬೇರೊಂದಿಲ್ಲವೆಂದು ತಾವೇ ಹೇಳುವಿರಿ. ದಿನಜ್ವರ ಮೊದಲಾದ ನಾಲ್ಕುರ ಜ್ವರಗಳು, ಸನ್ನಿಪಾತ ಇವುಗಳು ಕೂಡಾ ಗುಣವಾಗುತ್ತವೆ. ಸೀಸೆಗೆ ರೂ. 1. 6ಕ್ಕೆ ಒಂದು ಇನಾಮು.

ಶ್ರೀನಿವಾಸತೈಲ—ಕ್ಷಯದ ಗಡ್ಡೆ ಕರಗುತ್ತದೆ. ಸಂಧುಗಳ ನೋವು ನೀಗಲು ಹೋಗುತ್ತದೆ. ಸೀಸೆಗೆ 8 ಆಣೆ. 5ಕ್ಕೆ ಒಂದು ಇನಾಮು.

ವೈಶ್ವಾನರಾಸವ—ಸೇವಿಸಿದ ಮೊದಲನೇ ವೇಳೆಯಿಂದಲೇ ವಾಂತಿಭೇದಿ, ಶೀತಭೇದಿ, ಅಜೀರ್ಣದ ಭೇದಿಗಳು ಗುಣವಾಗುತ್ತಾ ಬರುತ್ತವೆ. ಸೀಸೆಗೆ ರೂ. 1. 6ಕ್ಕೆ ಒಂದು ಇನಾಮು.

ಬಾಲಸುಧೋದಯ—ಮಕ್ಕಳಿಗೆ ಬಲಕರ, ಸಿಹಿಯಾಗಿರುತ್ತದೆ. ಮಂದ, ಮಲಬದ್ಧ, ಅಜೀರ್ಣದ ಭೇದಿ, ಕೃಶತ್ವ, ಹೊಟ್ಟೆ ದಪ್ಪವಾಗಿರುವುದು, ಹಸಿವಿಲ್ಲದಿರುವುದು ಇವೆಲ್ಲವೂ ಗುಣವಾಗಿ ಮಕ್ಕಳು ಪುಷ್ಟರಾಗುತ್ತಾರೆ. ಪುಷ್ಟಿಯ ಚಟುವಟಿಕೆ ಸೀಸೆಗೆ ಆಣೆ 12. 6ಕ್ಕೆ ಒಂದು ಇನಾಮು.

ಈ ನಾಲ್ಕಕ್ಕೂ ಟಪಾಲು ಖರ್ಚು ಬೇರೆ.

ಸಮಸ್ತ ರೋಗಗಳಿಗೂ ನಮ್ಮಲ್ಲಿ ಆಯುರ್ವೇದೀಯ ಸಿದ್ಧೌಷಧಿಗಳು ದೊರೆಯುತ್ತವೆ. ಕ್ಯಾಟಲಾಗು ಉಚಿತ.

ವಿಳಾಸ: ಶ್ರೀ ಸೀತಾರಾಘವ ವೈದ್ಯಶಾಲಾ ಮೈಸೂರು.

ಒಂದು ಕುಪ್ಪಿಯ ಕ್ರಯ ೧೦ಗಳ ಆಣೆ. ಮಂಗಳೂರು ಏಜಂಟ್,

ಕೇ. ಟೀ. ಡೋಂಗರೆ ಕಂಪೆನಿ, ಗಿರಿಗಾಂ ಮುಂಬಯಿ. ಡಿ. ಉಲನ್ ಮಾರ್ಟ್, ಮಂಗಳೂರು.

ಮಂಗಳೂರಿನ ಮತ್ತು ದಕ್ಷಿಣ ಕನ್ನಡ ಜಿಲ್ಲೆಯ ... ಶನಿವಾರದಿಂದ ರೌದ್ರಿ ಸಂವತ್ಸರದ ಕಾರ್ತಿಕ ಶು ... (ದಕ್ಷಿಣಾಯನಂ) ಶುಕ್ರವಾರದ ವರೆಗಿನ ಪಂಚಾಂಗ.

(೧೯೨೦ನೆಯ ನವಂಬರ ತುಲಾ)

ತಾರೀಖು	ವಾರ	ತಿಥಿ	ಘಳಿಗೆ	ನಕ್ಷತ್ರ	ಘಳಿಗೆ	...	ಸೂರ್ಯ ಉ.	ಸೂರ್ಯ ಅಸ್ತ.
27	ಶನಿ	೩	೫೪.೧೪	ಮೃಗಶಿರಾ	೫೪.೩೩	೧೩	6·38	6. 1
28	ರವಿ	೪	೪೮.೨೮	ಆರ್ದ್ರಾ	೫೦.೩೦	೧೪	6·39	6. 1
29	ಸೋಮ	೫	೪೩.೩೦	ಪುನರ್ವಸು	೪೬.೧೬	೧೪	6·39	6. 1
30	ಕುಜ	೬	೩೬.೫೮	ಪುಷ್ಯಾ	೪೩.೨೮	೧೫	6·40	6. 1
1	ಬುಧ	೭	೩೧.೨೮	ಆಶ್ಲೇಷಾ	೩೮.೪೮	೧೬	6·40	6. 1
2	ಗುರು	೮	೨೬.೩೩	ಮಘಾ	೩೫.೪೩	೧೭	6·41	6. 2
3	ಶುಕ್ರ	೯	೨೨.೧೪	ಪುಬ್ಬಾ	೩೩.೧೪	೧೮	6·41	6. 2

ಮಂಗಳೂರಿನ ವಾಯುಸ್ಥಿತಿ.

(೧೯೨೦ನೆಯ ನವಂಬರ)

Date ತಾರೀಖು	Temperature. ಉಷ್ಣ (ಕಾವು) Maximum ಹೆಚ್ಚಿನದು	Minimum ಕಡಿಮೆ	Rainfall. ಮಳೆ ದಿನದ ಮಳೆ	ಎಪ್ರಿಲ್ ೧ರಿಂದ
19	88—3	75—6	—	...
20	87—5	74—8	0—15	...
21	87—9	74—8	0—91	...
22	88—3	74—8	—	...
23	91—2	77—4	—	...
24	86—3	74—5	0—11	—
25	89—6	74—4	0—21	—

ಮಂಗಳೂರಿನ ಪೇಟೆ ಧಾರಣೆ.

ಜೀನಸು		ಇಂದ ರೂ. ಆ.	ವರೆಗೆ ರೂ. ಆ.
ಮಸ್ಕತಿ ಅಕ್ಕಿಮುಡಿ ೧ಕ್ಕೆ	...	7—10	8—0
ಗುಡ್ಡು, ಸುಗ್ಗಿ	...	7—0	7—6
ರಾಶಿ ಮುಡಿ ೧ಕ್ಕೆ	...	6—14	6—15
ಹೊಸ ರಾಶಿ „	...	6—8	6—12
ಬನ್ನೂರ್ ಬೆಳ್ತಿಗೆ „	...	9—0	9—2
ಗುಡ್ಡು ಬೆಳ್ತಿಗೆ „	...	7—8	8—0
ರಂಗೂನ ಬೆಳ್ತಿಗೆ ಗೋಣಿ ೧ಕ್ಕೆ	...	16—8	17—8
ಗೋಧಿ ಗೋಣಿ ೧ಕ್ಕೆ	...	19—0	22—0
ಹುರುಳಿ ಗೋಣಿ ೧ಕ್ಕೆ	...	14—8	15—4
ಕಡಲೆ ಗೋಣಿ ೧ಕ್ಕೆ	...	15—8	16—8
ತೊಗರಿ ಗೋಣಿ ೧ಕ್ಕೆ	...	19—8	20—0
ತೊಗರಿಬೇಳೆ ಗೋಣಿ ೧ಕ್ಕೆ	...	22—0	30—0
ಉದ್ದು ಗೋಣಿ ೧ಕ್ಕೆ	...	16—8	18—0
ಹೆಸರು ಗೋಣಿ ೧ಕ್ಕೆ	...	16—0	18—8
ಊರು ಬೆಲ್ಲ ಖಂಡಿ ೧ಕ್ಕೆ	...	90—0	100—0
ಉಪ್ಪು ಗೋಣಿ ೧ಕ್ಕೆ	...	4—4	4—6
ಮೆಣಸು ಖಂಡಿ ೧ಕ್ಕೆ	...	150—0	160—0
ಕೊಬ್ಬರಿ ಒಂದಿ ಖಂಡಿ ೧ಕ್ಕೆ	...	48—0	50—0
ಎಳ್ಳಿಂಡಿ ಖಂಡಿ ೧ಕ್ಕೆ	...	52—2	
ಕೊಬ್ಬರಿ ಎಣ್ಣೆ ಮಣ ೧ಕ್ಕೆ	...	11—8	11—12
ಎಳ್ಳೆಣ್ಣೆ ಮಣ ೧ಕ್ಕೆ	...	11—0	11—8
ಚಿಮಣಿಎಣ್ಣೆ ಪೆಟ್ಟಿಗೆ ೧ಕ್ಕೆ	...	9—6	9—
ಮೋರಿಸ ಸಕ್ಕರೆ ಮಣ ೧ಕ್ಕೆ	...	9—4	—
ಊರ ಮೆಣಸಿನ ಕಾಯಿ ಮಣ ೧ಕ್ಕೆ	...	8—0	8—8
ಸಾಸಿವೆ ಮುಡಿ ೧ಕ್ಕೆ	...	10—0	10—0
ಕೊತ್ತುಂಬರಿ ಮುಡಿ ೧ಕ್ಕೆ	...	5—4	—
ಕಾಫಿ ಖಂಡಿ ೧ಕ್ಕೆ	...	220—0	230—0
ಬೆಳಗೋಟು ಅಡಿಕೆ ಖಂಡಿ ೧ಕ್ಕೆ	...	100—0	115—0
ಚಿಗೋಟು	...	95—0	100—0
ಕಾಳುಮೆಣಸು ಖಂಡಿ ೧ಕ್ಕೆ	...	135—0	140—0
ಯಾಲಕ್ಕಿ ಮಣ ೧ಕ್ಕೆ	...	22—0	25—0
ಗೇರುಬೀಜ ಮುಡಿ ೧ಕ್ಕೆ	...	3—8	3—12
ಕಬ್ಬಿಣ ಖಂಡಿ ೧ಕ್ಕೆ	...	100—0	120—0
ತಾಂಬ್ರ ತಗಡು ಮಣ ೧ಕ್ಕೆ	...	22—0	22—4
ತಾಂಬ್ರ ಪಾತ್ರಗಳು ಮಣ ೧ಕ್ಕೆ	...	32—0	34—0
ಹಿತ್ತಾಳೆ ಚೂರು ೧ಕ್ಕೆ	...	31—8	
ಹಿತ್ತಾಳೆ ತಗಡು ಮಣ ೧ಕ್ಕೆ	...	24—0	26—0

ವಿದೇಶೀ ವರ್ತಮಾನ

[illegible] ಮತ್ತು ಅವನ ತಂಡದವರು ಹೊಸ ಪಾರ್ಲಿಮೆಂಟಿನ ಚುನಾವಣೆಯಲ್ಲಿ ಪದಚ್ಯುತರಾಗಲು ಗ್ರೀಸ್ ದೇಶದ ಜನರು ಮನಃ ಕೊನಸ್ಟಂಟಾಯ್ನನ್ನು ಕರೆಸಿಕೊಂಡು ಪಟ್ಟಕ್ಕೆ ಯತ್ನಮಾಡಲಿಕ್ಕೂ ಉಂಟಾದ ಮಹತ್ವದ ಕಾರಣಗಳೇನು, ಇದರಲ್ಲಿ ಒಳಸಂಚು ಯಾರದು ಎಂಬದನ್ನು ನಾವು ಈಗ ಗೊತ್ತುಹಚ್ಚಬಾರದು. ವೆನಿಜುಲೊಸನು ಮಿತ್ರಪಕ್ಷದ ಪರಮಾಪ್ತನಾಗಿದ್ದುದರಿಂದಲೇ ತುರ್ಕಿಯೊಡನೆ ಸಂಧಿಕಾಲದಲ್ಲಿ ಸ್ಮರ್ನಾ ಮುಂತಾದ ಪ್ರದೇಶಗಳನ್ನೂ ಕೊನಸ್ಟಂಟಿನೋಪಲದ ಸುತ್ತಲಿರುವ ತುರ್ಕಿಯ ಪ್ರದೇಶವನ್ನೂ ಗ್ರೀಕ ಜನಾಂಗವು ಕೇಳಿಯೂ ಕೇಳದೆಯೂ ಒಲುತಾಯಿತೆಂದು ಯುರೋಪದ ಈ ಭಾಗದಲ್ಲಿ ಯುದ್ಧದಿಂದ ನಿಶಕ್ತ, ಬಳಲಿದ ನಾಸ್ತಿ ಸ್ವಸ್ಥಿತಿ [illegible] ಸೈನ್ಯವನ್ನು ಕಟ್ಟಿಕೊಂಡು ತುರ್ಕಿಯನ್ನು ಅಂಕುಶದೊಳಗೆ ಇಡಲು ಇದೊಂದೇ ರಾಜ್ಯವು ಈಗ [illegible] ತುರ್ಕಿಯ ನೆಶನಲಿಸ್ಟರನ್ನು ಮುರಿಯಲಿಕ್ಕೆ ಮಿತ್ರಪಕ್ಷದವರು ಈ ಸೈನ್ಯದ ಮೇಲೆಯೇ ಭರವಸೆ ಇಟ್ಟದ್ದು ತುರ್ಕಿಯ ವಸಾಹತುಗಳನ್ನು ಇದಕ್ಕೆ ಒಪ್ಪಿಸಿಕೊಟ್ಟದ್ದರಿಂದಲೇ ಗ್ರೀಕರ ತಪ್ಪಾಗಲಾರದು. ಆದರೆ ಗ್ರೀಸ್ ಈ ರೀತಿಯಾಗಿ ತನ್ನ ರಾಜ್ಯವಿಸ್ತರಣೆ ಮಾಡುವುದು ಇಟಲಿಗೆ ಕಣ್ಣು ಕುಕ್ಕುತಲಿತ್ತು. ಈಗ ವೆನಿಜುಲೊಸನು ತನ್ನ ಮಂತ್ರಿಪದಕ್ಕೆ ರಾಜಿನಾಮೆ ಕೊಟ್ಟು ಗ್ರೀಸ್ ದೇಶವನ್ನೇ ಬಿಟ್ಟುಹೋದನು ಎಂಬವರ ಗೂಡಾರ್ಥ ಬಹಳವಿರಬಹುದು, ಆದರೆ ಹೊಸ ರಾಜನನ್ನು ಚುನಾಯಿಸುವ ವರೆಗೆ ಕೊನಸ್ಟಂಟಯ್ನನ ತಾಯಿ ರಾಜಪ್ರತಿನಿಧಿಯಾಗಿರಬೇಕೆಂದು ಹೊಸ ಮಂತ್ರಿಕೂಟದವರು ಕೇಳಿಕೊಂಡ ಮೇರೆಗೆ ರಾಣಿ ಓಲ್ಗಾ ಎಂಬವಳು ಈಗ ಪ್ರತಿನಿಧಿಯಾಗಿರುವಳು. ರಾಜನನ್ನು ಪ್ರಜೆಗಳ ಬಹುಮತದಿಂದ ಆರಿಸಬೇಕೆಂದು ಠರಾವಾದ ಮೇರೆಗೆ ಈ ಚುನಾವಣೆಯ ಕೆಲಸವು ಬೇಗನೇ ಆಗಲಿಕ್ಕಿದೆ. ಮಾಲೆ ತನ್ನ ಕೊರಳಿಗೆ ಬಿದ್ದೀತು ಎಂದು ಕೊನಸ್ಟಂಟಾಯ್ನನು ಕತ್ತು ಎತ್ತಿ ಕಾಲ್ಬೆರಳ ಮೇಲೆ ನಿಂತುಕೊಂಡಿದ್ದಾನೆ.

ಆದರೆ ಈ ಚುನಾವಣೆಯು ಬ್ರಿಟಿಷರಿಗೂ ಫ್ರೆಂಚರಿಗೂ ಅಷ್ಟೊಂದು ಸಮ್ಮತವಾದ್ದಲ್ಲ. ಸ್ಮರ್ನಾ ಮತ್ತು ತುರ್ಕಿಯ ಇತರ ವಸಾಹತುಗಳನ್ನು ಪ್ರವೇಶಿಸಿದ ಸೈನ್ಯವನ್ನು ಕೊನಸ್ಟಂಟಾಯ್ನನು ಹಿಂತೆ ಕರೆಸಿದರೆ ಈಗಲೇ ಮುಂದೊತ್ತುತಿರುವ ತುರ್ಕಿಯ ನೆಶನಲಿಸ್ಟ ತಂಡದವರು ಅರ್ಮೇನಿಯ ಮತ್ತು ಜೋರ್ಜಿಯಾ ಎಂಬ ಈ ಯುದ್ಧದ ನಂತರ ಸ್ವಾತಂತ್ರ್ಯವನ್ನು ಹೊಂದಿದ ರಾಜ್ಯಗಳನ್ನು ನುಂಗಿಬಿಡುವುದರಲ್ಲಿ ಸಂದೇಹವಿಲ್ಲ. ಹಾಗೆ ಬಲಿಷ್ಠರಾಗುವ ನೆಶನಲಿಷ್ಟರು ಈಗ ತುರ್ಕಿಸುಲ್ತಾನರು ಒಪ್ಪಿಕೊಳ್ಳಬೇಕೆಂದು ಠರಾಯಿಸಿದ ಶರ್ತಗಳನ್ನು ಉಲ್ಲಂಘಿಸಿ ತುರ್ಕಿಗೆ ಹೊಸ ಚೇತನವನ್ನು ಕೊಟ್ಟರೆ ಈ ವರೆಗೆ ಮಿತ್ರಪಕ್ಷದವರು ಮಾಡಿದ ಪ್ರಯತ್ನವು ಮುಖ್ಯವಾಗಿ ಮುಸಲ್ಮಾನ ರಾಜ್ಯಗಳಲ್ಲಿ ನಿಷ್ಫಲವಾಗುವುದು. ಇದಕ್ಕಾಗಿಯೆ ಅರ್ಮೇನಿಯದ 'ಮ್ಯಾಂಡೇಟ'ನ್ನು ಅಮೇರಿಕದವರು ಸ್ವೀಕರಿಸಬೇಕೆಂದು ಮಿತ್ರಪಕ್ಷದವರು ಆಗ್ರಹಪಡುತ್ತಲಿದ್ದರು. ಅಮೇರಿಕದವರು ಮಾತ್ರ ಈ ಗಾಳಕ್ಕೆ ಬಾಯಿ ಒಡ್ಡಲಿಲ್ಲ. ಈಗ ತುರ್ಕಿಯ ಅಧಿಕಾರವು ಎಷ್ಟರ ಮಟ್ಟಿಗೆ ಬಲಗೊಳ್ಳುವಂತೆ ಮಾಡಲಾಗುವ ಒಂದೇ ಒಂದು ಸರಕಾರವು—ಗ್ರೀಕ ಸರಕಾರವು—ತುರ್ಕಿಯ ಉದ್ದೇಶಕ್ಕೆ ನೆರವಾಯಿತೆಂದರೆ, ಬೊಲ್ಶೆವಿಕರು ಇನ್ನೊಂದು ಕಡೆಯಲ್ಲಿ ಕ್ರಿಮಿಯವನ್ನು ನುಗ್ಗಿ ಜನರಲ್ ರೆಂಗೆಲನನ್ನು ಓಡಿಸಿ ಬಿಟ್ಟಿದ್ದಾರಾದ್ದರಿಂದ ಆ ಕಡೆಯಲ್ಲಿ ಎದುರಾಳಿಗಳಿಲ್ಲದ ಬೊಲ್ಶೆವಿಕರೂ ತುರ್ಕಿ ನೆಶನಲಿಷ್ಟರೂ ಮಿತ್ರತ್ವದ ಹಸ್ತಲಾಘವನನ್ನು ಮಾಡಿದರೆಂದರೆ ಮಧ್ಯ ಏಸ್ಯ ಮತ್ತು ಯುರೋಪಿನ ಪೂರ್ವಭಾಗಗಳಲ್ಲಿ ಈ ಯುದ್ಧದ ಸಂಧಿಹೋಗಲಿಕ್ಕಿದ್ದ ಕಿಡಿಗೆ ಗಾಳಿ ಹಾಕದಿದ್ದೀತು ಎಂಬ ಸಂದೇಹವು ಫ್ರೆಂಚ ಮತ್ತು ಬ್ರಿಟಿಷ ಮಂತ್ರಿಕೂಟದವರಿಗೆ ಬರುವುದು ಆಶ್ಚರ್ಯವಲ್ಲ. ಈಗ ಗ್ರೀಕ್ ಜನಾಂಗವು ಕೊನಸ್ಟಂಟಾಯ್ನನನ್ನು ಆರಿಸಿದರೆ ಈ ಮಿತ್ರಪಕ್ಷದ ಮುಖಂಡ ರಾಜ್ಯಗಳು ಯಾವ ಧೋರಣವನ್ನು ಕೈಕೊಳ್ಳುವವು ಎಂದು ನೋಡಲಿಕ್ಕೆ ಇದೆ.

ಬೊಲ್ಶೆವಿಕರಿಗೆ ಬ್ರಿಟಿಷರೊಡನೆ ವ್ಯಾಪಾರ ವಹಿವಾಟವನ್ನು ನಡಿಸುವ ಅನುಕೂಲತೆಯು ಸಿಗಬೇಕೆಂಬ ಆಸೆಯು ನಿರಾಸೆಯಾಗಿಲ್ಲ. ಅಮೇರಿಕದವರ ಷಿದು ಸಲ್ಲದೆಂದು ಬೊಲ್ಶೆವಿಕರಿಗೆ ಬಹಿಷ್ಕಾರ ಹಾಕಿದ್ದರೂ ಬ್ರಿಟಿಷ ಮಂತ್ರಿಯು ಇನ್ನೂ ಅದ್ವಗೋಡೆಯ ದೀಪದಂತೆ ಒಂದು ಕಡೆ ಬೊಲ್ಶೆವಿಕರಿಗೆ ಬಹಿಷ್ಕಾರ ಹಾಕಬೇಕೆಂದು ಹಟ ಹಿಡಿದ ಫ್ರೆಂಚರ ಕಡೆಗೂ ಒಮ್ಮೆ ಬೊಲ್ಶೆವಿಕರ ಕಡೆಗೂ ಸ್ನೇಹದ ಕಣ್ಣನ್ನು ಆಡಿಸುತ್ತಾನೆ. ಈ ಆಂದೋಲನವು ಕಡೆಗೆ ಯಾವ ಕಡೆಗೆ ನಿಂತೀತು ಎಂಬದು ನೋಡಲಿಕ್ಕೆ ಇದೆ.

ಇನ್ನೊಂದು ಕಡೆ ಜಿನಿವಾ (ಸ್ವಿಟ್ಝರ್ಲೆಂಡದ ಪ್ರಖ್ಯಾತ ನಗರ)ದಲ್ಲಿ 'ಲೀಗ್ ಒಫ್ ನೇಶನ್ಸ'ನ ಅಧಿವೇಶನವು ಜರಗತೊಡಗಿದೆ. ಜರ್ಮನಿಗೆ ಇದರಲ್ಲಿ ಬಹಿಷ್ಕಾರದಿಂದ ಪ್ರವೇಶವಾಗಿ ಮಾಡಿ ಇದರಲ್ಲಿ ಸಹಭಾಗಿತ್ವ ಕೊಡಬೇಕೆಂದು ಲೀಗ್ ಒಫ್ ನೇಶನ್ಸಿನ ಪ್ರತಿನಿಧಿ ರಾಜ್ಯಗಳ ಪೈಕಿ ಕೆಲವರ ಪ್ರಯತ್ನವು ಒರಬಿದ್ದಿರಬೇಕು. ಜರ್ಮನಿಯ ಪಕ್ಷವಾಗಿ ನೋರ್ವೆ, ಸ್ವೀಡನ್, ದಕ್ಷಿಣ ಆಫ್ರಿಕ, ಸ್ವಿಟ್ಝರ್ಲೆಂಡ್, ಇಟಲಿ, ಸ್ಪೆಯಿನ್, ದಕ್ಷಿಣ ಅಮೇರಿಕದ ಕೆಲವು ರಾಜ್ಯಗಳು ಇವೆ. ಬ್ರಿಟನ್ "ಪಾಳಗ್ರಸ್ತ ಹೀಂಗೂ" ಎಂಬ ನ್ಯಾಯವನ್ನು ಕೈಕೊಂಡಿದೆ. ವಿರುದ್ಧ ಪಕ್ಷದಲ್ಲಿ ಬೆಲ್ಜಿಯಮ್, ಪೋರ್ತುಗಲ್, ಫ್ರಾನ್ಸ್, ಪೋಲೆಂಡ್, ಆಸ್ಟ್ರೇಲಿಯಾ, ನ್ಯೂಜೀಲೆಂಡ್, ಕೆನಡಾ, ಜೆಕೊಸ್ಲೊವಾಕಿಯ ಮುಂತಾದ ರಾಜ್ಯಗಳು ಇವೆ (ಇಟಾಲಿ ಮತ್ತು ಚೀನ ರಾಜ್ಯಗಳು ಬ್ರಿಟಿಷರ ಪಕ್ಷಕ್ಕೆ ಸೇರಿದ್ದವು). ಸೌಮ್ಯ ಲೀಗ್ ಒಫ್ ನೇಶನ್ಸನಲ್ಲಿ ಪಂಕ್ತಿ ಸಿಗಬೇಕಾದರೆ ಸೇರಿದ ರಾಜ್ಯಗಳ ನೂರಕ್ಕೆ ೬೬ರವರ ಸಮ್ಮತಿಬೇಕಾಗಿದೆ ಎಂದು ನಿಬಂಧನೆ ಇದೆ. ಇಂಥ ಚರ್ಚೆಗಳಲ್ಲಿ ಬ್ರಿಟನ್ನಿನ ಮುಖ್ಯ ಸಮಾಸಾಹಿತ್ಯಗಳಲ್ಲಿ ಪ್ರತ್ಯೇಕ ವೋಟು ಸಿಗುವಂತೆ ಮಾಡಿದ ಫಲವಾದು ಬ್ರಿಟನ್ನಿಗೆ ಎಷ್ಟು ಬಲದಾಯಕವಾದದ್ದೆಂಬುದು ಹೇಳಬೇಕಾದ್ದಿಲ್ಲ. ಸದ್ಯ ಈ ತಕರಾರಿನ ಯಾವ ನಿರ್ಧಾರ ಮಾಡುವುದು ಎಂಬುದು ನೋಡಲಿಕ್ಕೆ ಇದೆ.

ಈಗ ಇದರಲ್ಲಿ ನಡೆಯುತ್ತಿರುವ ಯುದ್ಧಗಳ ವಿಷಯವನ್ನು ಈ ಲೀಗ್ ಒಫ್ ನೇಶನ್ಸ ಅಧಿವೇಶನವು ಇನ್ನೂ ತನ್ನ ಸ್ವತಃ ಮತವನ್ನು ಪ್ರಕಟಿಸಲಿಲ್ಲ. ದೇಶಾಂತರ ಪ್ರಯಾಣದ ಹಕ್ಕನ್ನು ಇದು ನ್ಯಾಯವಾಗಿ ಕೊಡದ್ದರೂ ಅದನ್ನು ಕುರಿತು ಪ್ರಸ್ತಾಪಿಸಲು ಇಲ್ಲ.

ಜರ್ಮನಿಯು ಎಷ್ಟು ಸಂಧಿಯನ್ನು ಮಿತ್ರಪಕ್ಷದವರಿಗೆ ತಲೆಬಾಗಿ, ಹೀಗೆ ತಿರಸ್ಕೃತ ಎಂಬ ವಿಷಯದ ಇತ್ಯರ್ಥ ಇನ್ನೂ ಆಗಲಿಲ್ಲ ಈ ವಿಷಯ

[illegible]

ಧಾರಾಳವಾಗಿ ಪತ್ರಿಕೆಗಳಲ್ಲಿ ಹಬ್ಬುತ್ತಿವೆ.

ಒಳದೇಶೀ ವರ್ತಮಾನ.

ಮುಂಬಯಿಯ ಮುದ್ರಕರಲ್ಲಿ—ಟೈಮ್ಸು ಅಫ್ ಇಂಡಿಯಾ ಪತ್ರಿಕೆಯ ಮುದ್ರಕರ ಮುಷ್ಕರವು ಇನ್ನೂ ನಿಲ್ಲಲಿಲ್ಲ. ಇದೇ ನವಂಬರ ೨ನೇ ತಾರೀಕಿನ ಮಧ್ಯಾಹ್ನದೊಳಗೆ ಮುದ್ರಕರೆಲ್ಲರೂ ಕೆಲಸಕ್ಕೆ ಹಾಜರಾಗದಿದ್ದರೆ ಅವರ ಕೆಲಸದ ಮೇಲೆ ಅವರಿಗೆ ಏನೊಂದು ಹಕ್ಕಿಲ್ಲವೆಂದು ಭಾವಿಸಿ ಬೇರೆಯವರನ್ನು ಕಾಯಮವಾಗಿ ನೇಮಿಸಲಾಗುವುದೆಂತಲೂ, ಹಾಜರಾದರೆ ಅವರ ಗೈರಹಾಜರಿ ಕಾಲದ ಸಂಬಳ ಕೊಡದಿದ್ದರೂ ಅವರ ಸರ್ವಿಸಿಗೆ ಭಂಗಬಾರದಂತೆ ನೋಡಲಾಗುವುದೆಂತಲೂ ಮುಂಬಯಿಯ ಪೋಸ್ಟಮಾಸ್ತರ ಜನರಲರು ತಿಳಿಸಿದ್ದಾರೆ. ಈ ವಿಷಯದಲ್ಲಿ ಏನು ಮಾಡಬೇಕೆಂಬುದು ಈ ಮುದ್ರಕರಗಾರರು ಆಲೋಚನೆಯಲ್ಲಿದ್ದಾರೆ.

ಟ್ರಾಮುವೇ ಮುದ್ರಕರಗಾರರು ಟ್ರಾಮುವೇ ಕಂಪೆನಿಯ ಡಿರೆಕ್ಟರರೊಡನೆ ಶರ್ತಗಳನ್ನು ಚರ್ಚಿಸಿ ಇತ್ಯರ್ಥಗೂ ಸಮಾಧಾನಕರವಾದ ಶರ್ತಗಳನ್ನು ಪಡೆದದ್ದರಿಂದ ಕೆಲಸ ಪ್ರಾರಂಭಿಸುವುದರಲ್ಲಿ ಇದ್ದಾರೆ.

ಮದ್ರಾಸಿನ ವಿಕ್ಟರಿ ಹೋಲ್ ಫಂಡು—ಮದ್ರಾಸಿನಲ್ಲಿ ಯುದ್ಧದ ಜಯದ ಸ್ಮಾರಕವಾಗಿ ಕಟ್ಟಿಸಲಿಕ್ಕಿರುವ ಹೋಲಿನ ಬಗ್ಗೆ ಫೋರ್ ಬೋರ್ಡುಗಳಲ್ಲಿ ೨೦೦೦ ಪೌಂಡು ಮತ್ತು ರೂ ೩,೧೧೧-೧೩-೧೧ನ್ನೂ ೨೦೦೦ ಪೌಂಡು ಮತ್ತು ೩,೫೫೧,೩೨೦-೧೩-೧೧ ವಸೂಲಾಯಿತೆಂತಲೂ ಬಾಕಿ ಹಣವನ್ನು ಬೇಗನೆ ವಸೂಲು ಮಾಡಿ ಆನಂತರ ಕಟ್ಟೋಣದ ಅಂದಾಜುಪಟ್ಟಿ ಮತ್ತು ನಕ್ಷೆಯನ್ನು ತಯಾರಿಸಬೇಕೆಂದೂ ನಿರ್ಣಯವಾಯಿತು.

ಕಾಶಿಪರ್ಣಾಲದ ರಾಜರ ದಾನ—ಯುದ್ಧಕಾಲದಲ್ಲಿ ಕಾಶಿಪರ್ಣಾಲದ ಇಂಪೀರಿಯಲ್ ಸರ್ವಿಸ್ ಸೈನ್ಯದ ಅಂತರ ಖರ್ಚು ರೂ ೨೭೬,೫೫೭-೯ ನ್ನು ತನಗೆ ಕೊಡುವ ಬದಲಾಗಿ ಯುದ್ಧದ ಖರ್ಚಿಗೆ ಸಹಾಯವಾಗಿ ಆ ಮೊಬಲಗನ್ನು ವಜಾ ಮಾಡಬೇಕೆಂದು ಕಾಶಿಪರ್ಣಾಲದ ರಾಜರು ಬ್ರಿಟಿಷ ಸರಕಾರಕ್ಕೆ ತಿಳಿಸಿರುವರು.

ಓಲ್ ಇಂಡಿಯಾ ಉಲಮಾ ಪರಿಷತ್ತು—ಇದರ ೨ನೇ ಅಧಿವೇಶನವು ಡಿಲ್ಲಿಯಲ್ಲಿ ಇದೇ ೧೯ನೇ ತಾರೀಕು ವರೆಗೆ ಜರಗಿತು. ಅದು ಬಹಿರಂಗವಾಗಿ ನಡೆಯಲಿಲ್ಲ. ಮುಸಲ್ಮಾನ ವಿಲಾಯತ ಅನುಯಾಯಿಗಳ ಮುಖಂಡರ ಜತೆಯಲ್ಲಿ ಮಹಾತ್ಮಾ ಗಾಂಧಿಯವರು ಇದ್ದರು. ಆಲೀಘಡದಲ್ಲಿ ಮುಸಲ್ಮಾನ ಕೊಲೆಜಿನ ಅಧಿಕಾರಿಗಳ ಧೋರಣವನ್ನು ತೀವ್ರ ರೀತಿಯಿಂದ ಖಂಡಿಸಿದ್ದಲ್ಲದೆ ಅಂದೂ ಮುಸಲ್ಮಾನ ಐಕ್ಯವನ್ನು ಬಲಗೊಳಿಸಬೇಕೆಂತಲೂ ಆಲೀಘಡದ ವಿದ್ಯಾರ್ಥಿಗಳ ವರ್ತನವು ಮಾನ್ಯವೆಂತಲೂ ಠರಾವುಗಳು ಆದವಂತೆ.

ಕೌನ್ಸಿಲ್ ಮತ್ತು ನೊನ್‌ಕೊಓಪರೇಶನ್—ಕೌನ್ಸಿಲು ಚುನಾವಣೆ ಕೆಲಸವು ಮುಂಬಯಿ ಶಹರದಲ್ಲಿ ಕಳೆದ ೧೬ನೇ ತಾರೀಕಿಗೆ ನಡೆದಾಗ ವೋಟರು ಗಳಲ್ಲಿ ನೂರಕ್ಕೆ ೨೦ರಷ್ಟು ಮಂದಿ ಮಾತ್ರ ವೋಟು ಕೊಟ್ಟರೆ ಊರ ಊರುಗಳ ಸಂಖ್ಯೆಯು ನೂರಕ್ಕೆ ೧೦ಕ್ಕಿಂತ ಕಡಿಮೆ ಇತ್ತು ಎಂತಲೂ ವಿಶೇಷವಾಗಿ ಪಾರ್ಸಿಗಳೇ ವೋಟು ಕೊಟ್ಟರೆಂತಲೂ ವರ್ತಮಾನಗಳಿವೆ. ಬಂಗಾಲದಲ್ಲಿ ಕೌನ್ಸಿಲ್ ಒಫ್ ಸ್ಟೇಟಿಗೆ ೭ ಸ್ಥಾನಗಳಿಗೆ ೧೪ ಉಮೇದ್ವಾರರು, ಲೆಜಿಸ್ಲೇಟಿವ್ ಎಸೆಂಬ್ಲಿಗೆ ೧೬ ಸ್ಥಾನಗಳಿಗೆ ೪೪ ಉಮೇದ್ವಾರರು. ಬಂಗಾಲ ಲೆಜಿಸ್ಲೇಟಿವ್ ಕೌನ್ಸಿಲಿಗೆ ೧೧೬ ಸ್ಥಾನಗಳಿಗೆ ೧೬೧ ಉಮೇದ್ವಾರರು ಇದ್ದಾರೆಂತೆ. ಕೌನ್ಸಿಲ್ ಒಫ್ ಸ್ಟೇಟಿಗೆ ಒಬ್ಬನು ಲೆಜಿಸ್ಲೇಟಿವ್ ಎಸೆಂಬ್ಲಿಗೆ ನಾಲ್ವರು ಬಂಗಾಲ ಕೌನ್ಸಿಲಿಗೆ ೩೦ ಮಂದಿ ಪ್ರತಿಕಕ್ಷಿಗಳಿಲ್ಲದೆ ಚುನಾಯಿಸಲ್ಪಟ್ಟರೆ ದೂ ತಿಳಿಯುತ್ತೇವೆ.

ಸಿಂದ್ ಹೈದರಾಬಾದದಲ್ಲಿ ಮುಸಲ್ಮಾನ ವೋಟರುಗಳಲ್ಲಿ ನೂರಕ್ಕೆ ೨ ಹಿಂದುಗಳಲ್ಲಿ ನೂರಕ್ಕೆ ೬೭ ಮಂದಿ ಮಾತ್ರ ವೋಟು ಕೊಟ್ಟರಂತೆ. ಕರ್ನಾಟಕದಲ್ಲಿ ೧೫,೦೦೦ ವೋಟರರ ಪೈಕಿ ೩೫೦೦ ಮಂದಿ ಮಾತ್ರ ವೋಟ ಮಾಡಿದರು. ಇವರ ಪೈಕಿ ಗೋಮಾಳ್ಳೆರರು, ಯೆಹೂದಿಯರು, ಕ್ರೈಸ್ತರು ವಿಶೇಷ. ಇದಲ್ಲದೆ ಎಲ್ಲಾ ಸಂಸ್ಥಾನಗಳಲ್ಲಿಯೂ ಮೊದಲು ನಿಂತ ಉಮೇದ್ವಾರರಲ್ಲಿ ಕೆಲವರು ಕಾಲು ಹಿಂದೆಗೆಯುತ್ತಲೆ ಇದ್ದಾರೆಂದು ಪತ್ರಿಕೆಗಳು ಹೇಳುತ್ತವೆ.

ಪ್ರೆಸಿಡೆನ್ಸಿ ಕೊಲೆಜು, ಮದ್ರಾಸು—ಇಲ್ಲಿ ಪ್ರಿನ್ಸಿಪಾಲರ ಅಧ್ಯಕ್ಷತೆ ಮತ್ತು ಕೊಲೆಜ ಪ್ರೊಫೆಸರರು, ಯೂನಿವರ್ಸಿಟಿಯ ವೈಸ ಚೆನ್ಸಲರ್ ಮುಂತಾದವರ ಸಮ್ಮುಖದಲ್ಲಿ ಕೊಲೆಜಿನ ೫೦೦ ವಿದ್ಯಾರ್ಥಿಗಳ ಒಂದು ಸಭೆ ಸೇರಿದಾಗ ಅಸಹಕಾರಿತೆಯು ನೀತಿಸಮ್ಮತವಾಗ್ಗಿದೆ, ರಾಜಕೀಯ ಸುಧಾರಣೆಗಳನ್ನು ಹೊಂದುವುದಕ್ಕೆ ಬಲವಾದ ಸಾಧನ ಎಂಬ ವಿಷಯವನ್ನೆತ್ತಿ ಚರ್ಚೆಯಾಗಿ ಬಹುಮತದಿಂದ ಮಂಜೂರಾಯಿತು. ಇದು ಕಾರ್ಯರೂಪವಾಗಿ ಅನುಸರಿಸಬೇಕೆಂತ ಅಭಿಪ್ರಾಯವಲ್ಲ. ಅಂತೂ ಚರ್ಚೆಯಲ್ಲಿ ವಿದ್ಯಾರ್ಥಿಗಳ ಮತವು ಯಾವ ಕಡೆಗೆ ಲೀನವಾಗಿತ್ತು ಎಂಬದರ ನಿದರ್ಶನವಾಗಿದೆ.

ಪೋಸ್ಟ್ಮೆನರ ಸಂಬಳದ ದರಗಳು—ಈ ದರಗಳನ್ನು ಹೆಚ್ಚಿಸುವ ವಿಷಯದಲ್ಲಿ ಸೂಚನೆ ಕೊಡಲಿಕ್ಕೆ ನೇಮಕಪಟ್ಟ ಕಮ್ಮಿಟಿಯವರು ಈ ಕೆಳಗಿನ ದರಗಳನ್ನು ಸೂಚಿಸಿದ್ದಾರೆ. ಮದ್ರಾಸು ಶಹರ ಜನರಲ್ ಪೋಸ್ಟಾಫೀಸು ಮತ್ತು ಸಬ್ ಅಫೀಸುಗಳಲ್ಲಿ ರೂ ೨೦ರಿಂದ ೩೨ರ ವರೆಗೆ, ಮೂರು ವರ್ಷಗಳಿಗೊಮ್ಮೆ ೨ ರೂಪಾಯಿ ಬಡ್ತಿ. ಬೆಂಗಳೂರು, ಮಧುರೆ, ಟ್ರಿಚಿನಾಪಳ್ಳಿ, ಥನುಷ್ಕೋಡಿ, ಹೈದರಾಬಾದು ಶಹರುಗಳ ಆಫೀಸು ಮತ್ತು ಸಬ್ ಆಫೀಸುಗಳಲ್ಲಿ ೨೦ರಿಂದ ೩೦ರ ವರೆಗೆ ೫ ವರ್ಷಗಳಿಗೆ ೧ ರೂಪಾಯಿ ಬಡ್ತಿ. ಇತರ ಹೆಡ್ ಅಫೀಸುಗಳ ಸ್ಥಳಗಳ ಹೆಡ್ ಮತ್ತು ಸಬ್ ಆಫೀಸುಗಳಲ್ಲಿ ಆ ಟೌನುಗಳ ಎಲ್ಲಾ ಆಫೀಸುಗಳಲ್ಲಿಯೂ ರೂ ೧೮ರಿಂದ ೨೪ರ ವರೆಗೆ ೩ ವರ್ಷಗಳಿಗೊಮ್ಮೆ ೧ ರೂಪಾಯಿ ಬಡ್ತಿ. ಇತರ ಆಫೀಸುಗಳಲ್ಲಿ ೧೬ರಿಂದ ೨೦ರ ವರೆಗೆ ೩ ವರ್ಷಗಳಿಗೆ ೧ ರೂಪಾಯಿ ಮೇರೆಗೆ ಬಡ್ತಿ. ಮದ್ರಾಸು, ಬೆಂಗಳೂರು, ಮಧುರೆ, ಹೈದರಾಬಾದು ಶಹರುಗಳಲ್ಲಿ ವಾಸಕ್ಕಾಗಿ ೩ ರೂಪಾಯಿ ಮೇರೆಗೆ ಮನೆಬಾಡಿಗೆಯು ಸಿಗುವುದು.

ಬನಾರಸ್ ಹಿಂದೂ ಯೂನಿವರ್ಸಿಟಿ—ಅಲಿಘಡದಂತೆ ಇಲ್ಲಿಯೂ ಕೊಲೆಜಿನ ವಿದ್ಯಾರ್ಥಿಗಳು ಸರಕಾರದ ಸಹಾಯವನ್ನು ತಿರಸ್ಕರಿಸಿ ರಾಷ್ಟ್ರೀಯ ಯೂನಿವರ್ಸಿಟಿ ಆಗಬೇಕೆಂದು [illegible] ಮಹಮ್ಮದ ಅಲಿಯವರು [illegible] ಈ ಯೂನಿವರ್ಸಿಟಿಯ [illegible] ಮಾಲವೀಯರು [illegible] ಈ ಸಮಾಚಾರ ಕೇಳಿ ಈ ವಿದ್ಯಾರ್ಥಿಗಳಿಗೆ ಒಂದು ಭಾಷಣವನ್ನು ಕೊಟ್ಟರು. ಉಪಾಧ್ಯಾಯರ ಸಮ್ಮತಿಯನ್ನೂ ಆಲೋಚನೆಯನ್ನು ಕೇಳದೆ ವಿದ್ಯಾರ್ಥಿಗಳು ಮುಂದರಿಸುವುದು ಸರಿಯಾಗಿಲ್ಲ. ಸರಕಾರದಿಂದ ವರ್ಷಕ್ಕೆ ಸಿಗುವ ೧ ಲಕ್ಷ ರೂಪಾಯಿ ಗ್ರೇಂಟನ್ನು ಬಿಟ್ಟುಬಿಡುವುದು ಅವಿವೇಕದ ಕೆಲಸ. ಇದಾದಂಥಿಗೆ ಬೇರೆ ಬೇರೆ ದೇಶೀಯ ರಾಜರ ವಂತಿಗೆಯ ಹಣದ ೫೦ ಲಕ್ಷ ರೂಪಾಯಿಯ ಬಡ್ಡಿ ವರ್ಷಂಪ್ರತಿ ಸಿಗುತ್ತಿದ್ದ ೮೦ ಸಾವಿರ ರೂಪಾಯಿ ಸಹಾಯವೂ ತಪ್ಪಿಹೋದೀತು. ಇವೆರಡು ಮೊಬಲಗು ಕೂಡಿದರೆ ಚಾರ್ಪಾದಿ. ಹೀಗೆ ೫ನೇ ಅಂಶವಾಗುತ್ತದೆ. ಬಳಿ ಗ್ರೇಂಟ ಸಿಗುವ ಬದಲಾಗಿ ಸರಕಾರವು ಈ ಎಲ್ಲಾ ಖರ್ಚನ್ನು ನೋಡುವದರಿಂದ ನಮ್ಮ ಸಂಸ್ಥೆಯ ನಮ್ಮ ಪ್ರಯೋಜನಕ್ಕೆ ಹಾನಿಯಾಗುವುದು. ಸರಕಾರ ಸ್ಥಿತಿಯ ಸಹಾಯವಿಲ್ಲದೆ ವಿದ್ಯಾಭ್ಯಾಸ ನಡೆಯುವುದು ಸಾಧ್ಯವಲ್ಲವೆಂದು ಈ ಮೊದಲೇ ಬಂಗಾಲದಲ್ಲಿ ನಿದರ್ಶನಕ್ಕೆ ಬಂದಿದೆ. ಶಿಕ್ಷಣಕ್ಷಕರಾದ ಶ್ರೀಯುತ ಭಾಗವಾನದಾಸ ರಾವ, ಲಾಲಾ ಲಜಪತರಾಯ, ವಾಡಿಯಾ ಮುಂತಾದವರ ಕರೆಗೆ ಈ ಬಗೆಯ ವಿದ್ಯಾರ್ಥಿ ಚಳವಳವನ್ನು ನಿರೋಧಿಸಿದ್ದಾರೆ. ಸರಕಾರದ ಶಿಕ್ಷಣದ ಅಧಿಕಾರವನ್ನು ತೆಗೆದುಹಾಕಿದ್ದರಿಂದ ಮುಂಬಯಿಯ ಕೆಲವು ಸಾಹುಕಾರರು ಒಂದು ಲಕ್ಷ ರೂಪಾಯಿ ಕೊಡಲಿಕ್ಕೆ ಕೈಹಿಂದೆಗೆದರು ಎಂದು ಪಂಡಿತ ಮೋತಿಲಾಲನೆಹರು ಹೇಳುವ ಮಾತು ಹೌದಾದದ್ದರೆ ಪಾನು ಸ್ವತಃ ಮುಂಬಯಿಗೆ ಹೋಗಿ ೧೦ ಲಕ್ಷ ರೂಪಾಯಿ ಚಂದಾ ಗ್ರಹಿಸಿ ತರುವೆನು ಎಂದು ಬಲವಾಗಿ ಭಾಷಣಮಾಡಿದರು. ಲಾಲಾ ಲಜಪತರಾಯರನ್ನು ಬರುವಂತೆ ಮಾಲವೀಯರು ತಂತಿ ಬಿಟ್ಟಿದ್ದಾರೆ. ಮಹಾತ್ಮಾ ಗಾಂಧಿಗಳು ಬೇಗನೇ ಹೋಗಲಿಕ್ಕಿದ್ದಾರೆ.

ತಿರುವಣ್ಣಾಮಲೆ ಗ್ರಾಮಉದ್ಯೋಗಸ್ಥರ ಸಮ್ಮೇಲನ—ಕಳೆದ ಆದಿತ್ಯವಾರ ಮದ್ರಾಸಿನ ಹಿಂದೂ ದೈನಿಕ ಪತ್ರಿಕೆಯ ಎಡಿಟರಾದ ಶ್ರೀಯುತ ಎಸ್ ಕಸ್ತೂರಿ ರಂಗಯ್ಯಂಗಾರರ ಅಧ್ಯಕ್ಷತೆಯಲ್ಲಿ ತಿರುವಣ್ಣಾಮಲೆಯಲ್ಲಿ ಈ ಸಮ್ಮೇಲನವು ಜರಗಿತು. ಅಧ್ಯಕ್ಷರ ಪ್ರಸ್ತಾವಿಕ ಮತ್ತು ಕೊನೆಯ ಭಾಷಣಗಳಲ್ಲಿ ಈಗಿನ ಗ್ರಾಮಾಧಿಕಾರದ ಅಸ್ತಿವಾರವನ್ನು ಬಲಗೊಳಿಸುವಂತೆ ಗ್ರಾಮಾಧಿಕಾರಿಗಳನ್ನು ಪ್ರಾಮಾಣಿಕತೆಯಿಂದ ತಮ್ಮತನವನ್ನು ಕಾಯುವಂತೆ ಮಾಡುವುದು ಸರಕಾರದ ಮುಖ್ಯ ಕರ್ತವ್ಯ, ಈ ಉದ್ಯೋಗಸ್ಥರ ಸಂಬಳಗಳನ್ನು ಉದಾರ ಹಸ್ತದಿಂದ ಏರಿಸಿದ ಸರಕಾರವು ಈ ಬಡಉದ್ಯೋಗಸ್ಥರ ಮೊರೆಗೆ ಇಷ್ಟು ಸರಿಯಾಗಿ ಗಮನ ಕೊಡದಿದ್ದದ್ದು ತುಂಬಾ ವಿಷಾದಕರ. ಗ್ರಾಮದ ಪಟೇಲರ ಹುದ್ದೆ ಬಹಳ ಗೌರವಾರ್ಹ ಹುದ್ದೆ. ಅದು ನವೀಕರಿಸಲ್ಪಟ್ಟ ಸರಕಾರದ ಸಂಬಳ ಹೆಚ್ಚಿಸಿ ಕಮ್ಮಿಟಿಯು ನಮ್ಮ ದೇಶೀಯ ಮೆಂಬರರ ಪ್ರತಿಪಾದಿಸಲು ಯತ್ನಿಸಿದ್ದು ಸರಿಯಲ್ಲ. ಸಲಿಂ ಕಮ್ಮಿಟಿಯ ಸೂಚನೆಗಳು ಏನೇನೂ ಸಮಾಧಾನಕರವಲ್ಲ. ಗೌರವಾರ್ಹ ಹುದ್ದೆ ಎಂದು ಬಂದು ಕಡೆ ಹೇಳುವಾಗ ಸರಕಾರವು ಸಂಬಳದ ನೌಕರರ ಮೇಲೆ ಜೋರಿಸುವಂತೆ ಒಂದೊಂದಾಗಿ ಭಾರವನ್ನು ಈ ಪಟೇಲರ ಮೇಲೆ ಹಾಕಲು ಯತ್ನಿಸುತ್ತಿದೆ. ಪಟೇಲರ ಕೈಯಿಂದ ಕಂದಾಯ ವಸೂಲಿಯ ಕೆಲಸವನ್ನು ತಪ್ಪಿಸಿ ಫ್ರೆಂಚ ಸ್ಟವರ್ ಯಾನೆ ಅಲ್ಲಿಗ ಮೂಲಕ ವಸೂಲು ಮಾಡಬಹುದೆಂದು ಸರಕಾರವು ನೆನಸುವುದು ಅವಿಚಾರದ ಮಾತು ಎಂದು ಮುಂತಾಗಿ ಹೇಳಿದರು. ಅನಂತರ ಈ ಕೆಳಗಿನ ಠರಾವುಗಳು ಮಂಜೂರಾದವು.

೧೯೦೯ರ ೨೦೦೦ನೆ ಸರಕಾರಿ ಹುಕುಮಿನ ಮೇರೆಗೆ ಪಟೇಲರ ಹುದ್ದೆಯು ಬರೆ ಗೌರವಾರ್ಹ ಮಾತ್ರ ಎಂದು ತೀರ್ಮಾನಿಸಿದ್ದು ಅರ್ಥಹೀನವು. ಸರಿಯಾಗಿ ನಡೆಯುವ ಪುದುಕ್ಕೆ ಬಾಧಕರ ಒಂದು ವೇಳೆ ಅಂಥಾ ಹುದ್ದೆಯನ್ನು ಜಾರಿಗೆ ತರುವುದಾದರೂ ಸಂಬಳ ಅಥವಾ ಏಲಿನ್ನಾಗಿ ಆಗಿ ತಿಂಗಳಿಗೆ ೩೦ ರೂಪಾಯಿಗೆ ಕಡಿಮೆಯಾಗದಂತೆ ಕೊಡಬೇಕೆಂದು ಈ ಸಮ್ಮೇಲನದ ಅಭಿಮತ. ಇನಾಂ ಮತ್ತು ಜಮೀನುದಾರಿ (ವರ್ಗದಾರಿ ಅಥವಾ ರೈತವಾರಿ ಅಲ್ಲ) ಗ್ರಾಮಗಳಲ್ಲಿಯೂ ಇದೇ ಕ್ರಮವನ್ನು ಜಾರಿಗೆ ತರಬೇಕು. ಸರಕಾರಿ ಕೆಲಸದ ಮೇಲೆ ತನ್ನ ಗ್ರಾಮ ಬಿಟ್ಟು ಹೋದಾಗ ದಿನಕ್ಕೆ ೧ ರೂಪಾಯಿ ಮೈಲಿಗೆ ೨ ಆಣೆಯ ಮೇರೆಗೆ ಪ್ರಯಾಣದ ಭತ್ತೆ ಕೊಡಬೇಕು. ಶಾನುಭೋಗರಿಗೆ ರೂಪಾಯಿ ೧೫ ಏನೂ ಸಾಲದ ಪಂಚಾಯಿತ ಕೋರ್ಟುಗಳ ಕೆಲಸವೂ ಅವರಿಗೆ ಬರಲಿಕ್ಕಿರುವುದರಿಂದ ಅವರಿಗೆ ೩೦ ರೂಪಾಯಿಗೆ ಕಡಿಮೆಯಾಗದನ್ನು ಸಂಬಳದ ದರ ಇರಬೇಕು. ಮುನ್ಸಿಪಾಲಿಟಿಗಳಲ್ಲಿ ಯೂನಿಯನ್‌ಗಳೂ ಇರುವಲ್ಲಿ ಶಾನುಭೋಗರ ಕೆಲಸ ಹೆಚ್ಚಾದ್ದರಿಂದ ಇತರ ಕಡೆಗಳಿಗಿಂತ ೧೦ ರೂಪಾಯಿ ಭತ್ತೆ ಹೆಚ್ಚಿಗೆ ಸಲ್ಲಬೇಕು. ಇದಲ್ಲದೆ ಮೆಲ್ಲೂರಿನಲ್ಲಿ ಮಾಡಿದ ಠರಾವುಗಳನ್ನು ಕ್ರಮ ಇಲ್ಲಿ ಓದಿ ಮಂಜೂರು ಮಾಡಲಾಯಿತು. ಆ ಪೈಕಿ ಗ್ರಾಮಾಧಿಕಾರಿಗಳ ಮೇಲಿನ ರೀತಿ ಪಾಲಿಸಲ್ಪಡುವ ಶರ್ತು ಕ್ರಮವಿಡುವ ಗೈರಹಾಜರಾಗುವಾಗ ನಿಯಮವನ್ನು ತೆಗೆದುಹಾಕಬೇಕು, ಮತ್ತು ಜಮೀನು, ಅವಾನತು, ಮುಂತಾದ ಶಿಕ್ಷೆಗಳನ್ನು ತೆಗೆದುಹಾಕಬೇಕು, ಸಂಬಳದ ದರಗಳನ್ನು ಸಮಾಧಾನಕರ ರೀತಿಯಲ್ಲಿ ಕೊಡದಿದ್ದರೆ ಮುಷ್ಕರ ಹಿಡಿಯಬೇಕು ಮುಂತಾದ ಠರಾವುಗಳು ಮಂಜೂರಾದವು.

ಪ್ರಕಟನೆ.

ಇದೇ ನವಂಬರ ತಾ 30ರಲ್ಲು ನಡಿಯುವ

ವರಿಷ್ಠ ನ್ಯಾಯ ವಿಧಾಯಕ ಸಭೆಯ ಮೆಂಬರಿಕೆಯ ಚುನಾವಣೆಯಲ್ಲಿ

ಈ ಜಿಲ್ಲೆಯ

ಸಾಲ್ವಫ್ರೊರ್ಡ್ ಜೋನ್ಸ್ ಗ್ರೋವ್ಸ್ರವರಿಗೆ

ದಯಮಾಡಿ ವೋಟು ಕೊಡಬೇಕಾಗಲಿ.

ಕೌನ್ಸಿಲ್ ಒಫ್ ಸ್ಟೇಟಿನ ಚುನಾವಣೆ.

ಎಂಜಿನಿಯರಿಂಗ್ ಮರ್ಚಂಟ್ ಮತ್ತು ಪೆನ್ಶನದಾರ ಮ|| ರಾ|| ಕಾಶಾ ಸೂರ್ಯನಾರಾಯಣ ರಾಯರಿಗೆ ನಿಮ್ಮ ಓಟು ಕೊಡಿರಿ.

[illegible]

ಸ್ವದೇಶಾಭಿಮಾನಿ.

ಶಕ ೧೮೪೩ ಕಾರ್ತೀಕ ಶು ೧೫ ಶುಕ್ರವಾರ.

ಇದು ನಿವೃತ್ತಿಯೇ?

ಇಂದ್ರಿಯಗಳು ಬಹಿರ್ಮುಖವಾಗಿರುವವು. ಪ್ರವೃತ್ತಿ ಮತ್ತು ಅವುಗಳ ಅಂತರ್ಮುಖತೆಯು, ನಿವೃತ್ತಿ ಎಂಬ ಮಾತು ವಾಚಕರಿಗೆ ತಿಳಿದುಬಂದಿದೆ. ಆದರೂ ನಿವೃತ್ತಿಯ ಸ್ಪಷ್ಟಕಲ್ಪನೆಯು ಹುಟ್ಟುವಂತೆ ಆ ಬಗ್ಗೆ ಇನ್ನು ಒಂದೆರಡು ಮಾತುಗಳನ್ನು ಹೇಳುವುದು ಆವಶ್ಯಕ. ಇಂದ್ರಿಯಗಳ ಮುಖ್ಯ ವ್ಯಾಪಾರವು ವಿಷಯ ಸೇವನೆ. ಅವುಗಳ ಈ ವ್ಯಾಪಾರವನ್ನು ನಿಲ್ಲಿಸುವುದು ನಿವೃತ್ತಿಯು ಒಬ್ಬ ಲೌಕಿಕ ವ್ಯಾಪಾರಿಯನ್ನು ಅವನ ಕಸಬಿನಿಂದ ನಿವೃತ್ತ ಪಡಿಸಲು ಎರಡು ಉಪಾಯಗಳಿವೆ. ಒಂದು ಅವನನ್ನೆ ತಪ್ಪಿಸಿಬಿಡುವುದು, ಇನ್ನೊಂದು ಅವನ ವ್ಯಾಪಾರದ ಸರಕುಗಳನ್ನು ತಪ್ಪಿಸಿ ಬಿಡುವುದು ಈ ಎರಡು ಬಗೆಯ ಉಪಾಯಗಳಲ್ಲಿ ವೇದಾಂತವು ಎರಡನೆಯ, ಎಂದರೆ ಸರಕುಗಳನ್ನು ತಪ್ಪಿಸುವುದೆ ನಿವೃತ್ತಿ ಎಂದು ಹೇಳುತ್ತದೆ. ವ್ಯಾಪಾರಿಯನ್ನೆ ತಪ್ಪಿಸುವುದೆಂದರೆ ಪುರುಷಘಾತ ಆದ್ದರಿಂದ ಸರಕುಗಳನ್ನು ತಪ್ಪಿಸಿದರೆ ಅವನಿಂದ ವ್ಯಾಪಾರ ಮಾಡಲು ಸಾಧ್ಯವಾಗಲಾರದು ಆದರೆ ಅವನು ಅಷ್ಟರಿಂದ ಸುಮ್ಮನೆ ಕುಳಿತುಕೊಳ್ಳಲಾರನು ಗೀತೆಯಲ್ಲಿ ಹೇಳಿದೆ. "ಕರ್ಮರಹಿತನಾಗಿ ಒಂದೇ ಒಂದು ಗಳಿಗೆ ಒಬ್ಬನೂ ಇರಲಾರನು" ಹೀಗೆಂದ ಮೇಲೆ ಇದು ವರೇಗಿನ ಚಾಲತಿಯ ಸರಕುಗಳೂ ಇಲ್ಲ, ನಿರುದ್ಯೋಗಿಯಾಗಿ ಕುಳಿತುಕೊಳ್ಳಲೂ ಆಗುವುದಿಲ್ಲ—ಸಾಧ್ಯವಿಲ್ಲ, ಅರ್ಥಾತ್ ಇದಕ್ಕಿಂತ ಬೇರೆ ಕರ್ತವ್ಯವನ್ನು ಕೈಕೊಳ್ಳುವುದು ಅವನಿಗೆ ಅಪರಿಹಾರ್ಯವಾಗುತ್ತದೆ. ಇನ್ನೊಂದು ದೃಷ್ಟಾಂತವನ್ನು ನೋಡಬಹುದು ಮೈಯಲ್ಲಿ ಒಂದು ದೊಡ್ಡ ಕುರು ಉಂಟಾದರೆ ವೈದ್ಯನು ಹಲವು ಬಗೆಯಿಂದ ಹೊರಗೆ ಲೇಪ, ಒಳಗೆ ಔಷಧ ಕೊಡುತ್ತಿರುತ್ತಾನೆ. ಆದರೆ ಆ ವೈದ್ಯನಿಗೆ ತನ್ನ ಔಷಧಗಳ ಪ್ರವೃತ್ತಿಯನ್ನು ನಿಲ್ಲಿಸಬೇಕಾಗುವ ಸಮಯವು ಬಂದು ಬಿಡುತ್ತದೆ ಔಷಧಗಳ ಪ್ರವೃತ್ತಿಯನ್ನು ನಿಲ್ಲಿಸುವುದು ನಿವೃತ್ತಿಯು ಆದರೆ ಈ ಮೇರೆಗೆ ಔಷಧಗಳ ನಿವೃತ್ತಿಯಾದರೂ ಅದರ ಉಪಚಾರಗಳ ನಿವೃತ್ತಿಯಾಗುವುದಿಲ್ಲ ಇಂಥ ಸಂದರ್ಭದಲ್ಲಿ ಔಷಧಗಳ ನಿವೃತ್ತಿಯಾದರೂ ಡಾಕ್ಟರನು ಮಾಡತಕ್ಕ ಉಪಚಾರದ ನಿವೃತ್ತಿಯಾಯಿತೆನ್ನಬಹುದೆ? ಥೀಲೆ ಕಾಳು, ಕಾಗದ ಪೆನ್‌ಸಿಲು, ಕಬ್ಬಿಣ, ಗಾಜು ಮುಂತಾದ ಎಲ್ಲ ಸರಕುಗಳನ್ನು ತ್ಯಜಿಸಿ ವ್ಯಾಪಾರದಿಂದ ನಿವೃತ್ತನಾದ ವ್ಯಾಪಾರಿಯು ಬರವಣಿಗೆಯ ಕೆಲಸ, ಹರಿಕಥೆಯ ನಿರೂಪಣೆ, ಇಲ್ಲವೆ ದಂಡಿನಲ್ಲಿ ಸಿಪಾಯಿಯ ಚಾಕರಿ ಮುಂತಾದ್ದನ್ನು ಮಾಡಹತ್ತಿದರೆ ಅವನು ನಿವೃತ್ತಯೋಗಿಯಾದಾನೇ? ಇಲ್ಲ ಹೆಚ್ಚೆಂದರೆ 'ನಿವೃತ್ತ ವ್ಯಾಪಾರಿ' ಎಂದು ಒಂದು ವೇಳೆ ಅವನಿಗೆ ಹೆಸರು ಕೊಡಬಹುದು.

ಇದೇ ಕ್ರಮವನ್ನು ಇಂದ್ರಿಯಗಳ ನಿವೃತ್ತಿಗಳ ಮೇಲೆ ಆತಿದೇಶ ಮಾಡಬೇಕಾಗುತ್ತದೆ ಇಂದ್ರಿಯಗಳನ್ನು ವಿಷಯಗಳಿಂದ ಬಿಡಿಸಿದ ಮೇಲೆ ಅವುಗಳನ್ನು ಕೊಲ್ಲಬೇಕು, ಇಲ್ಲವೆ ನಿದ್ದೆಹೋಗಲು ಬಿಡಬೇಕೆಂದು ವೇದಾಂತವು ಹೇಳುವುದಿಲ್ಲ. ಮತ್ತು ಅದು ಹಾಗೆ ಹೇಳಹೋದರೆ ಇಂದ್ರಿಯಗಳ ಬಹಿರ್ಮುಖತೆಯನ್ನು ನಿವಾರಿಸುವುದು ಅದರ ಯಾವ ಮುಖ್ಯ ಮತ್ತು ಮಹತ್ವದ ಪ್ರಯುಕ್ತವಿದೆಯೊ ಆ ಪ್ರಯುಕ್ತವೇ ವ್ಯರ್ಥವಾಗಿ ಹೋದೀತು. ಇಂದ್ರಿಯಗಳನ್ನು [illegible]

[illegible] ನಿವೃತ್ತಿ ಯೋಗಿಗಳಲ್ಲಿ ಕುಂಭಕರ್ಣನಿಗನೆ ಮೊದಲನೆ ಸ್ಥಾನವು ಸಿಕ್ಕಬೇಕೆಂದು ತೋರುತ್ತದೆ! ಇರಲಿ. ನಿವೃತ್ತಿ ಎಂದರೆ ಇಂದ್ರಿಯಗಳನ್ನು [illegible] ಇತರ ವಿಷಯಗಳನ್ನು ಕೊಡುವುದು; ಎಂದರೆ ಇತರ ಅಂತರ ವಿಷಯಗಳಲ್ಲಿ ಅವುಗಳನ್ನು ತೊಡಗಿಸುವುದು. ಇದೇ ಕಾರಣದಿಂದ ಅವುಗಳ ಬಹಿರ್ಮುಖತೆಯ ದುರಭ್ಯಾಸವನ್ನು ತಪ್ಪಿಸಬೇಕೆಂದು ಪ್ರಾಚೀನ ಮಹಾತ್ಮರು ಉಪದೇಶಿಸುತ್ತಾರೆ ಬಾಹ್ಯವಿಷಯಗಳಲ್ಲಿ ನಿಮಗ್ನವಾದ ಇಂದ್ರಿಯಗಳಿಗೆ ಅಲ್ಲಿಂದ ಬಿಡಿಸಿ ಆತ್ಮಿಕ ಶ್ರವಣ, ಮನನ, ನಿದಿಧ್ಯಾಸದಲ್ಲಿ ಅವುಗಳನ್ನು ತೊಡಗಿಸಬೇಕು. ಆತ್ಮನೊಡನೆ ಅವು ಲೀನವಾಗಬೇಕು. ಆತ್ಮದಲ್ಲಿ ಅವು ತಮ್ಮ ಸ್ವರೂಪವನ್ನು ಬಿಟ್ಟು ಐಕ್ಯವನ್ನು ಹೊಂದಬೇಕು. ಈ ಕಾರ್ಯವು ಸಾಧ್ಯವಾಗಬೇಕಾದರೆ ಅವು ಅಂತರ್ಮುಖವಾಗಬೇಕು. ಅವು ಅಂತರ್ಮುಖವಾಗ ಬೇಕಾದರೆ ಅವುಗಳ ಬಹಿರ್ಮುಖತೆ—ವಿಷಯ ಪ್ರವೃತ್ತಿ—ಇದು ನಷ್ಟವಾಗಬೇಕು. ಮತ್ತು ಇದೇ ಉದ್ದೇಶದಿಂದ ಹಿಂದಿನ ಮಹಾತ್ಮರು ನಿವೃತ್ತಿ ಮಾರ್ಗವನ್ನು ಉಪದೇಶಿಸಿದ್ದಾರೆ

ಇದರ ಮೇಲಿಂದ, ವೇದಾಂತದಲ್ಲಿ ಪ್ರತಿಪಾದಿಸಿದ ನಿವೃತ್ತಿ ಎಂದರೆ ಇಂದ್ರಿಯಗಳು ನಿರ್ವ್ಯಾಪಾರವಾಗಿರುವುದಲ್ಲ, ಎಂಬ ಸಂಗತಿಯು ವಾಚಕರ ಮನಸ್ಸಿಗೆ ಬಂದೀತೆಂದು ತಿಳಿಯುತ್ತೇವೆ ಈ ಒಂದು ಮಾತು ಸರಿಯಾಗಿ ತಿಳಿದ ಮೇಲೆ ಈಗಿನ ಅಸಹಕಾರಿತೆಯು ನಿವರ್ತಕವಲ್ಲವೆಂದು ತಿಳಕೊಳ್ಳುವುದು ಅಷ್ಟೊಂದು ಗಡಸಾಗಲಿಕ್ಕಿಲ್ಲ ಪ್ರಜೆಗಳು ಅಧಿಕಾರಿ ವರ್ಗದೊಡನೆ ಕೆಲವು ಸಂಗತಿಗಳಲ್ಲಿ ಅಸಹಕಾರಿತೆಯನ್ನು ಮಾಡಬೇಕೆಂದು ಈ ಅಸಹಕಾರಿತಾಧ್ಯಾಯದ ಮೊದಲನೆಯ ಸೂತ್ರವು ಈ ಸೂತ್ರದ ಲಕ್ಷ್ಯಗಳು ನಾಲ್ಕು ಸರಕಾರಿ ಬಹುಮಾನಾರ್ಥಕ ಪದವಿ ಮತ್ತು ಸ್ಥಾನ ಇಬ್ರುಗಳನ್ನು ಬಿಡುವುದು, ಸಾಲೆಗಳನ್ನು ಬಿಡುವುದು, ಕೌನ್ಸಿಲುಗಳನ್ನು ಬಹಿಷ್ಕರಿಸುವುದು, ಇವೆ ಆ ನಾಲ್ಕು ಲಕ್ಷ್ಯಗಳು ಇವುಗಳನ್ನು ಬಿಡುವುದರಿಂದ ದೇಶವು ನಿವೃತ್ತಮಾರ್ಗದ ಯೋಗಿಯಾಗುತ್ತದೂ ಹೇಗ ಎಂಬುದನ್ನು ನೋಡೋಣ. ಅಸಹಕಾರಿತೆಯ ಬೀಜವನ್ನು ಹಿಂದುಸ್ಥಾನದ ರಾಜಕಾರಣದ ಕ್ಷೇತ್ರದಲ್ಲಿ ಬಿತ್ತಿದವರು ಯಾವ ಸಂಕಲ್ಪವನ್ನು ಮಾಡಿದ್ದಾರೆ ಎಂಬವನ್ನು ಮೊದಲಾಗಿ ನೋಡಬೇಕಾಗಿದೆ ಸರಕಾರವು ಪ್ರಜೆಗಳ ಬಹುಮಾನ, ಯೋಗ್ಯತೆ, ಆಕಾಂಕ್ಷೆ ಇವುಗಳನ್ನು ಲವ ಮಾತ್ರವೂ ಮನಸ್ಸಿಗೆ ತಂದುಕೊಳ್ಳದೆ ತನ್ನ ಕಾರಭಾರದ ಬಂಡಿಯನ್ನು ಯಥೇಷ್ಟವಾಗಿ ಬಿಡಹತ್ತಿದೆ. ಈ ಬಂಡಿಗೆ ಕಟ್ಟಿದ ದೊಡ್ಡದೊಡ್ಡ ಕೋಡಿನ ಮತ್ತು ಪುಂಡವಾದ ಎತ್ತುಗಳು ತಮ್ಮ ಓಟದ ಬರದಲ್ಲಿ ಅನೇಕ ಅನ್ಯಾಯಗಳನ್ನು ಮಾಡತೊಡಗಿದ್ದಾವೆ ಇವುಗಳ ಅನ್ಯಾಯವನ್ನು ನಿಲ್ಲಿಸಬೇಕಾದರೆ ಅವುಗಳಿಂದ ನಾವು ಕೂಡಿದಷ್ಟು ದೂರದಲ್ಲಿರಲು ಯತ್ನಿಸಬೇಕು ಇದೇ ಅಸಹಕಾರಿತೆಯ ತಾತ್ಪರ್ಯ ಈ ತಾತ್ಪರ್ಯವನ್ನು ಸಾಧಿಸಲು ಮೇಲಿನ ನಾಲ್ಕು ಸಂಗತಿಗಳು ಲಕ್ಷ್ಯಗಳಾಗಿವೆ ಈ ಲಕ್ಷ್ಯಗಳು ನಿಜವಾಗಿ ನಿವೃತ್ತಿಮಾರ್ಗದವೂ ಹೇಗೆ? ಅಲ್ಲ ಖಂಡಿತವಾಗಿಯೂ ಅಲ್ಲ ಡಾ ಸುಬ್ರಹ್ಮಣ್ಯ ಐಯರರಿಗೆ ಮೊದಲು 'ಸರ್' ಎಂಬ ಬಿರುದಿತ್ತು ಅದನ್ನು ಅವರು ತ್ಯಜಿಸಿದರು ರವೀಂದ್ರನಾಥ ಟಾಗೋರರಿಗೂ ಇದೇ ಬಿರುದಿತ್ತು ಅದನ್ನು ಅವರೂ ಬಿಟ್ಟರು ಆದರೆ ಅವರು ನಿವೃತ್ತಯೋಗಿಗಳಾಗಿದ್ದಾರೆಯೆ? ಇಲ್ಲ ಸರಕಾರಿ ಬಹುಮಾನಗಳನ್ನು ನಿಃಸ್ವಾರ್ಥವಾದ ಮತ್ತು ಉದಾರ ಹೇತುವಿನಿಂದ ಬಿಟ್ಟವರು ದೇಶದ ಬಹುಮಾನವನ್ನು ಪಡೆಯುತ್ತಾರೆ. ಮತ್ತು ಹಾಗೆ ಅವರಿಬ್ಬರೂ ಪಡೆದಿದ್ದಾರೆ ಪರಲೋಕವಾಸಿ ಗೋಖಲೆಯವರು ಸರಕಾರಿ ಬಹುಮಾನದ ಪದವಿಯಿಂದ ತನ್ನನ್ನು ಭೂಷಿಸಿಕೊಳ್ಳಲು ಒಪ್ಪಲಿಲ್ಲವೆಂಬದು ಸರ್ವಶ್ರುತವಾದ ವಿಷಯವೆ ಆದ್ದರಿಂದಲೆ ಅವರು ಜನತೆಯ ಆತ್ಯಾದರಕ್ಕೆ ಪಾತ್ರರಾದರು ಎಂದ ಮೇಲೆ ಒಂದು ಕಡೆಯ ಬಹುಮಾನ ಬಿಟ್ಟ ಮೇಲೆ ಇನ್ನೊಂದು ಕಡೆಯ ಬಹುಮಾನವೂ ಒರುತ್ತದೆ. ಈ ಎರಡು ಬಗೆಯ ಬಹುಮಾನಗಳಲ್ಲಿ ದೇಶದ ಬಹುಮಾನವು ಹೆಚ್ಚು ಸರಸ ಮತ್ತು ಹಿತಾವಹವೆಂಬುದನ್ನು ತಿಳಿಸಿಕೊಡುವುದಕ್ಕಾಗಿಯೆ "ಸರಕಾರಿ ಬಹುಮಾನಗಳನ್ನು ಬಿಡಿರಿ, ದೇಶದ ಬಹುಮಾನಕ್ಕೆ ಪಾತ್ರರಾಗಿರಿ" ಎಂದು ಗಾಂಧಿಗಳು ಮತ್ತು ರಾಷ್ಟ್ರೀಯಸಭೆ ಪಕ್ಷದವರು ಹೇಳುತಿದ್ದಾರೆ ಇದು ನಿವೃತ್ತಿಯ ಅಥವಾ ಸನ್ಯಾಸದ ಮಾರ್ಗವಲ್ಲ ಸರಕಾರಿ ಬಹುಮಾನಗಳನ್ನು ಬಿಟ್ಟು ದೇಶದ ಬಹುಮಾನಕ್ಕೆ ಪಾತ್ರವಾಗುವುದು, ಸರಕಾರಿ ಕೋರ್ಟುಗಳ ಬದಲು ರಾಷ್ಟ್ರೀಯ ನ್ಯಾಯಮಂದಿರಗಳನ್ನು ಸ್ಥಾಪಿಸುವುದು, ಕೌನ್ಸಿಲಿನಲ್ಲಿ ಸೇರಿ ಸೇವೆಮಾಡುವ ಬದಲು ಹೊರಗೆ ನಿಂತು ದೇಶಸೇವೆ ಮಾಡುವುದು ಈ ಎಲ್ಲ ಸಂಗತಿಗಳನ್ನು ಸರಿಯಾಗಿ ಆಲೋಚಿಸಿದ್ದಲ್ಲಿ ಅಸಹಕಾರಿತೆಯು ನಿವೃತ್ತಿಯಲ್ಲ, ಒಂದು [illegible] ಹೇಳುವುದಾದರೆ ಒಬ್ಬನು ಹೊಸ ವಸ್ತ್ರಗಳನ್ನು ಧರಿಸುವ ಉದ್ದೇಶದಿಂದ ಹಳೆ ಬಟ್ಟೆಗಳನ್ನು ತ್ಯಜಿಸುತ್ತಾನೊ ಹಾಗೆಯೆ ಸಹಕಾರಿತೆಯ ದೇರ್ಘವಾದ ಮಾರ್ಗವನ್ನು ಬಿಟ್ಟು ಅಸಹಕಾರಿತೆಯ ಹೊಸ ಮಾರ್ಗವನ್ನು [illegible] ಉಪದೇಶಿಸುವರು, ಎಂದ ಮೇಲೆ ಹಳೆ ವಸ್ತ್ರಗಳನ್ನು ತ್ಯಜಿಸುವುದು ನಿವೃತ್ತಿಯೆ? ಅಥವಾ ಸನ್ಯಾಸವೆ?

ಒಂದು ಸಂಗತಿಯಿಂದ ನಿವೃತ್ತಿ ಎಂದ ಕೂಡಲೆ ಎಲ್ಲದರಿಂದ ನಿವೃತ್ತಿ ಎಂದು ಅರ್ಥವಾಗುವುದಿಲ್ಲ; ಮಾತ್ರವಲ್ಲ ಅಂಥ ಅಭಿಪ್ರಾಯವು ಯಾವ ಉಪದೇಶಕರಲ್ಲೂ ಇರುವುದಿಲ್ಲ. ಹೀಗಿರಲು, ಅಸಹಕಾರಿತೆ ಎಂದರೆ ಸನ್ಯಾಸ, ನಿವೃತ್ತಿ ಮುಂತಾದ್ದನ್ನು ಹೇಳಿ ಜನತೆಯ ಮತಿಯನ್ನು ಕೆಡಿಸುವುದು ಉಚಿತವಲ್ಲ. ಈ ಮಾತನ್ನು ಒಪ್ಪಿಕೊಳ್ಳಬೇಕಾದರೆ ಮೊದಲು ಜನರು ತಮ್ಮ ಮತಿಯ ಸನ್ಯಾಸವನ್ನು ಮಾಡಬೇಕಾಗುತ್ತದೆ! ಅಂಥ ಪ್ರಸಂಗವು ನಮ್ಮಲ್ಲಿ ಹಚ್ಚಿನ ಮಟ್ಟಿಗೆ ಇಲ್ಲ ಇದು ತುಂಬಾ ಸಂತೋಷದ ಮಾತು

ಸ್ಫುಟ ವಿಚಾರಗಳು

೧ 'ನ್ಯೂ ಇಂಡಿಯಾ' ಪತ್ರದ ಮಂಗಳೂರ ಬಾತಮಿದಾರನು ಶ್ರೀಯುತ ವಿ ಯಸ್ ಶ್ರೀನಿವಾಸ ಶಾಸ್ತ್ರಿಗಳ ಮಂಗಳೂರ ಭಾಷಣಗಳನ್ನು ಪ್ರಕಟಿಸುವಾಗ, "ಅವರಿಗೆ ಒಲುಕಷ್ಟತರವಾದ ಪ್ರಶ್ನೆಗಳಿಂದ ಕಾಲು ಎಡವಿಸಬೇಕೆಂದು ಅನೇಕರು ಬಂದಿದ್ದರು, ಶ್ರೀನಿವಾಸ ಶಾಸ್ತ್ರಿಗಳೂ ಕೂಡಾ ಇದಕ್ಕೆ ಎದುರಾಗಲು ಸೊಂಟಕಟ್ಟಿಯೆ ನಿಂತಿದ್ದು ವಿಜಯಶ್ರೀಯನ್ನು ಒಲಿಸಿ ಬಿಟ್ಟರು" ಎಂದು ಚಮತ್ಕಾರಿಕವಾಗಿ ಒದರಿದ್ದಾನೆ. ನಾಮದಾರರ ವಾಕ್‌ಪಟುತ್ವ, ಮತ್ತು ಟೀಕಾಶಕ್ತಿಗ ನಾವು ಅಪರಿಚಿತರಲ್ಲ ಆದರೆ ಈ ಸಲ ಬಂದಾಗ ನಾಮದಾರ ಶಾಸ್ತ್ರಿಗಳು ಸಹಕಾರಿ ಪಕ್ಷದ ವಕೀಲರಾಗಿ ಬಂದಿದ್ದರು ಶಾಸ್ತ್ರಿಗಳು ತಮ್ಮ ವಕಾಲತು ನಡಿಸಿಯ ಬಿಟ್ಟರು, ಆ ಕಾಲದಲ್ಲಿ ಯಜಮಾನನ ಥರಗದಲ್ಲಿ ತಮಗೆ ಬೇಕಾದ್ದನ್ನು ಮಾತ್ರ ಎತ್ತಿ ಅವಕ್ಕೆ ಬಣ್ಣ ಕೊಟ್ಟರಂದರೆ ಅದೂ ತಪ್ಪಾಗಲಾರದು ತಾವು ದೇಶಭಕ್ತರಾಗಿ, ದೇಶದಲ್ಲ ಈಗ ಎದ್ದಿರುವ ಅಸಹಕಾರಿತೆಯ ಚಳವಳದಿಂದ ಅನ್ಯಾಕಿ ಕ್ರಾಂತಿಯುಂಟಾದೀತು ಎಂದು ನಂಬಿ ಅದನ್ನು ಶಾಂತಿಗೊಳಿಸುವ ಏಕೋಭಾವದಿಂದ ಅವರು ಬಂದಿದ್ದರೆ ಅವರ ನುಡಿಗಳು ಪ್ರಶ್ನೆಗೆ ಸಮರ್ಪಕವಾದ ಉತ್ತರಗಳಲ್ಲವೆಂದು ಖಂಡಿತವಾಗಿ ಹೇಳಬೇಕಾಗುತ್ತದೆ. ನಾಡವರ ವಿದ್ಯಾರ್ಥಿಭವನದಲ್ಲಿ ಕೇಳಿದ ಪ್ರಥಮ ಪ್ರಶ್ನೆಯಲ್ಲಿ ಪಂಜಾಬದ ಗಲಾಟೆಯಂತಹ ಗಲಾಟೆಯು ಮುಂದೆ ಎಲ್ಲಿಯೂ ಉಂಟಾದರೆ, ಅದಕ್ಕೆ ಜವಾಬ್ದಾರರಾದವರಿಗೆ ತಕ್ಕ ಶಾಸ್ತಿಯನ್ನು ಮಾಡಲು ಸರಕಾರವು ಹಿಂದೆಗೆದರೆ ಈ ಹೊಸ ಕೌನ್ಸಿಲುಗಳು ಏನು ಮಾಡಬಲ್ಲವು ಎಂಬದಕ್ಕೆ 'ಮುಂದಿನ ವರ್ಷದ ಖರ್ಚಿಗೆ ನಾವು ಹಣ ಸಂಕ್ಷನ ಮಾಡಲಾರೆವು' ಎಂದು ಶಾಸ್ತ್ರಿಗಳು ಹೇಳಿದರು ಈ ಅಧಿಕಾರವು ಕೌನ್ಸಿಲಿಗೆ ಇರದ ಹಾಗೆ ವಿಶೇಷ ಅಷ್ಟಬಂಧಗಳು ಹೊಸ ಎಕ್ಟಿನಲ್ಲಿ ಇವೆ ಎಂದು ಸುಧಾರಣಾ ಎಕ್ಟಿನ ಹಿಂದೀ ಟೀಕಾಕಾರರು ಒಮ್ಮತವಾಗಿ ಹೇಳಿದ್ದಾರೆ ಅದು ಮಂಗಳೂರಿನಲ್ಲಿ ಕೆಲವರಾದರೂ ಓದಲಿಲ್ಲವೆಂದು ನಾಮದಾರರಾಗಲಿ ಅಥವಾ ಬಾತಮಿದಾರನಾಗಲಿ ತಿಳಿದರೇ? ಇಂಡಿಯನ್ ಲಜಿಸ್ಲೇಟಿವ್ ಎಸೆಂಬ್ಲಿಯಲ್ಲಿ ಬಹುಮತವು ಪ್ರಜಾಪಕ್ಷದ ಮೆಂಬರರದು ಇದ್ದರೂ ಅದಕ್ಕೆ ಪ್ರತಿಬಂಧಕವಾಗಿ 'ಕೌನ್ಸಿಲು ಒಫ್ ಸ್ಟೇಟ' ನಲ್ಲಿ ಬಹುಮತವು ಸರಕಾರಿ ಮತ್ತು ಸರಕಾರ ನಿಯುಕ್ತ ಮೆಂಬರರಾಗಿದೆ ಎಂಬದನ್ನು ನಾಮದಾರರು ಯಾಕೆ ಸ್ಮರಣೆಗೆ ತರಲಿಲ್ಲ? ಇಷ್ಟೆ ಅಲ್ಲ ಕ್ರಮವಾದ ಆಡಳಿತೆ ಮತ್ತು ದೇಶದ ಶಾಂತಿಗೆ ವಿವಕ್ಷಿತ ಹೊಬಲಗು ಆವಶ್ಯವಾಗಿದೆ ಎಂದು ಎಗ್ಸಿಕ್ಯೂಟಿವ ಕೌನ್ಸಿಲಿನಿಂದ ಯುಕ್ತರಾದ ಗವರ್ನರ ಜನರಲರು 'ಸರ್ಟಿಫಿಕೇಶನ್' (ಶಿಫಾರಸು) ಮಾಡಿದ್ದಲ್ಲಿ ಪ್ರಜಾಪ್ರತಿನಿಧಿ ಮೆಂಬರರು ಆ ಮೊಬಲಗನ್ನು ಖರ್ಚು ಮಾಡಬಾರದೆಂದು ಬಹುಮತದಿಂದ ಮಾಡಿದ ಠರಾವು ಕೂಡಾ ಬಿದ್ದು ಹೋಗುತ್ತದೆ ಎಂಬದನ್ನು ನಾಮದಾರ ಶಾಸ್ತ್ರಿಗಳಾಗಲಿ ಅವರ ಭಕ್ತಪ್ರಾಯನಾದ ಬಾತಮಿದಾರನಾಗಲಿ ನರೆದ ಸಭೆಯಲ್ಲಿ ಯಾಕೆ ವಿವರಿಸಲಿಲ್ಲ?

೨ 'ಪಂಜಾಬು ಗಲಾಟೆಯ' ವಿಷಯದಲ್ಲಿ ಸರಕಾರಿ ಶಾಸನಕರ್ತರ ವರ್ತನವನ್ನು ಪರಿಷ್ಠ ಕೌನ್ಸಿಲಿನಲ್ಲಿ ಚರ್ಚಿಸಲಿಕ್ಕೆ ಎಡೆಸಿಕ್ಕೀತು ಎಂದು ಕೊಟ್ಟ ಭರವಸೆಯನ್ನು ವೈಸರಾಯಿಗಳು ಹಿಂದೆಳೆದ ವ್ಯಾಕುಲದಿಂದ ನೀವು ನಿಮ್ಮ ಇತರ ಠರಾವುಗಳನ್ನು ಕೂಡಾ ಹಿಂದೆಗೆದಿರಲ್ಲ, ಅನಂತರದ ಸಭೆಯಲ್ಲಿ ನೀವೆಲ್ಲರೂ ಪ್ರಜಾಪ್ರತಿನಿಧಿ ಮೆಂಬರರು ಯಾಕೆ ಎದ್ದು ಹೋಗಲಿಲ್ಲ, ಠರಾವು ಹಿಂದೆಗೆದಾಗ ಒಂದು ಬಗೆಯ ಅಸಹಕಾರಿತೆಯನ್ನು ನೀವು ಆಚರಿಸಿ ಆ ಮೇಲೆ ಮಾತ್ರ ಅದನ್ನು ಯಾಕೆ ಮುಂದರಿಸಲಿಲ್ಲ' ಎಂದು ಕೇಳಿದ ಪ್ರಶ್ನೆಗೆ 'ನಮ್ಮ ಆಗಿನ ಧೋರಣವು

ನಮ್ಮ ಮನಸ್ಸಿನಲ್ಲಿ ಆದ ವ್ಯಾಕುಲವನ್ನೂ ಕ್ರೋಧವನ್ನೂ ಸರಕಾರದ ಕಣ್ಣಿಗೆ ಕಟ್ಟುವಂತೆ ಮಾಡುವುದೇ ಆಗಿತ್ತು. ಅದಕ್ಕಿಂತ ಮುಂದರಿಸಿ ಹೋಗುವುದು ಆಗತ್ಯವಿರಲಿಲ್ಲ. ಮತ್ತು ನನ್ನ ಇತರ ಠರಾವುಗಳು ಅಷ್ಟು ಜರೂರಿನವುಗಳಲ್ಲವಾದ್ದರಿಂದ ಅವನ್ನು ಹಿಮ್ಮೆ ಮುಂದರಿಸಿದ್ದರೂ ವಿಶೇಷ ಬಾಧಕವು ದೇಶಕ್ಕೆ ಬರಲಾರದು ಎಂಬ ಭಾವನೆಯಿಂದ ನಾನು ಅವನ್ನು ಹಿಂದೆಗೆದೆನು. ಆದರೆ ಸಭೆಯಿಂದ ಎದ್ದು ಹೋಗಲು ಎಲ್ಲಾ ಪ್ರತಿನಿಧಿ ಮೆಂಬರರು ಒಗ್ಗಟ್ಟಾದರೆನೇ ಆದರ ಪ್ರದರ್ಶನವು ಸರಕಾರದವರಿಗೆ ಅಂಜನವಾದೀತು, ಅಂಥಾ ಒಮ್ಮತವು ಇರಲಿಲ್ಲ" ಎಂದು ಶಾಸ್ತ್ರಿಗಳು ಹೇಳಿದರು. ಈ ಉತ್ತರದ ಮೊದಲನೆ ಭಾಗವು ನಮಗೆ ಒಂದು ವಿಚಿತ್ರ ವಿಚಾರಸರಣಿಯನ್ನು ನೆನಪಿಗೆ ತರುತ್ತದೆ "ಕಾಶೀಕ್ಷೇತ್ರಕ್ಕೆ ಹೋದರೆ ಅಲ್ಲಿ ಏನಾದರೂ ತನ್ನ ಪ್ರೀಮದ ವಸ್ತುವನ್ನು ಬಿಟ್ಟು ಬರಬೇಕು" ಎಂಬ ವಾಡಿಕೆಯಿದೆ ಎಂದು ಕೇಳಿದವನೊಬ್ಬನು ತನಗೆ ನೆಗಡಿಯಾದಾಗ ಒಂದೆರಡು ಸಲ ಮಾತ್ರವೇ ನಸ್ಯ ಸೇದಿ ಸ್ವಲ್ಪ ಸುಖ ಹೊಂದಿದೆನು. ಈಗ ನಸ್ಯ ಸೇದುವ ಅಭ್ಯಾಸವನ್ನು ಕಾಶಿಯಲ್ಲಿ ಬಿಟ್ಟು ಬಂದೆನು ಎಂದು ಹೇಳಿದನಂತೆ. ನಸ್ಯ ಸೇದುವ ಅಭ್ಯಾಸವು ಆತನಿಗೆ ಇರಲಿಲ್ಲ, ಅದನ್ನು ಬಿಟ್ಟದ್ದು ಎಂಬ ಮಾತಿನ ಅರ್ಥವೇನು? ಇಂಥಾ ತ್ಯಾಗದಿಂದ ಯಾವ ಪುಣ್ಯವು ಬಂದೀತು? ನಾಮದಾರ ಶಾಸ್ತ್ರಿಗಳು ಇದೇ ರೀತಿಯ ಧೋರಣವನ್ನು ಕೈಕೊಂಡರೆಂದು ನಾವು ತಿಳಿಯಬೇಕೇ? ಸಭೆಯಿಂದ ಎದ್ದು ಹೋಗುವಷ್ಟು ಒಮ್ಮತವಿದ್ದಿಲ್ಲವೆಂತಾದರೆ ಅಂಥ ಉದಾಸೀನ ಮತದ ಉಮೇದ್ವಾರರೇ ಈಗ ಕೌನ್ಸಿಲನೊಳಗೆ ಪ್ರವೇಶ ಮಾಡುವಂತಿದ್ದರೆ ಅಂಥವರಿಗೆ ವೋಟು ಕೊಡಬೇಕೆಂದು ಕೇಳುವುದು ಯಾತಕ್ಕೆ? ಅಥವಾ ಅಂಥಾ ಕೌನ್ಸಿಲಿನಲ್ಲಿ ಪ್ರಜಾಪ್ರತಿನಿಧಿಗಳು ಬಲವಾದ ಅಂಜನವನ್ನು ಸಂಕಾರದ ಕಣ್ಣಿಗೆ ಹಚ್ಚಲು ಸಾಧ್ಯವಿಲ್ಲವೆಂತಾದರೆ ಅಂಥಾ ಕೌನ್ಸಿಲಿನ ಬಹಿಷ್ಕಾರವನ್ನು ಇಡುವ ಸಾಹಸದಲ್ಲಿ ತಪ್ಪೇನು ಎಂಬ ಪ್ರಶ್ನೆಯನ್ನು ನಾಮದಾರ ಶಾಸ್ತ್ರಿಗಳು ಉತ್ತರಿಸುವಾಗ, ಕ್ಲಾಸಿನಲ್ಲಿ ವಿದ್ಯಾರ್ಥಿ ಮಾಡಿದ ಪ್ರಶ್ನೆಯನ್ನು ಕ್ರಮವಾಗಿ ಉತ್ತರಿಸಲು ಕಷ್ಟಕಂಡ ಉಪಾಧ್ಯಾಯನು ಪ್ರಶ್ನೆಯ ನಿರ್ದೇಶವನ್ನು ಮರೆತು ಎಲ್ಲಿಗೂ ಎಲ್ಲಿಗೂ ಎಂಬಂತೆ ನುಡಿದು ವಿದ್ಯಾರ್ಥಿಯನ್ನು ಗೊಂದಲದ ಬಲೆಯಲ್ಲಿ ಉರುಳಿಸಿ ಬಿಡುವ 'ಜಾದೂ' ವರ್ತನವನ್ನು ಕೈಕೊಂಡದ್ದು ಸ್ಪಷ್ಟವಾಗುತ್ತಿದೆ.

೩. ಹಾಗಾದರೆ ಈ ರೀತಿಯ 'ಜಾದೂ' ಆಟವನ್ನು ನಿಲ್ಲಿಸುವಂತೆ ಸಭಿಕರಲ್ಲಿ ಒಬ್ಬರು ಯಾರಾದರೂ ಹೊಸ ಪ್ರಶ್ನೆಗಳಿಂದ ನಾಮದಾರ ಶಾಸ್ತ್ರಿಗಳ ಟೀಕೆಯನ್ನು ಯಾಕೆ ಖಂಡಿಸಲಿಲ್ಲವೆಂಬ ಪ್ರಶ್ನೆ ಬರಬಹುದು. ಅವರು ಮಹಾತ್ಮಗಾಂಧಿಯವರನ್ನು ಮೊದಲು ಹೊಗಳಿಕೆಯಲ್ಲಿ ಗಗನಕ್ಕೇರಿಸಿ, ಆ ಮೇಲೆ ಅವರ ಸಂದೇಶದ ತೀರಾ ನಕಲಿಯನ್ನು ಮಾಡತೊಡಗಿದಾಗಲೇ ಶಾಲಾ ಯುವಕರ ಗಲಾಟೆಯು ಉಂಟಾಯಿತು. ಅಂಥಾ ಗಲಾಟೆಯನ್ನು ನಾವು ಮನ್ನಿಸುವುದಿಲ್ಲ. ನಮ್ಮ ತಿಳುವಳಿಕೆ, ವಿಶ್ವಾಸ, ಭಕ್ತಿಯನ್ನು ವಿರೋಧಿಸಿ ಹಲ್ಲು ರಾಗಯುವವರ ಭಾಷಣಗಳಲ್ಲಿ ನಮ್ಮ ಅಸಮ್ಮತಿಯನ್ನೂ ನಮ್ಮ ವಿಶಾದವನ್ನು ತೋರ್ಪಡಿಸುವುದಕ್ಕೆ ಅಲ್ಲಿಂದ ಎದ್ದು ಹೋಗುವುದೇ ಮಾನ್ಯವಾದ ಮಂತ್ರವೆಂದು ನಮ್ಮ ಅಭಿಪ್ರಾಯ. ಆದರೆ ಪರಿಣಾಮ ತಿಳಿಯದ ಉತ್ಸಾಹಭರಿತರಾದ ಯುವಕರು ತಮ್ಮ ಮನೋವೇದನೆಯನ್ನು ತಿಳಿಸಿಕೊಳ್ಳಲಿಕ್ಕೆಂದ ಗಲಾಟೆ ಎಬ್ಬಿಸ ತೊಡಗಿದರು. ಆಗ ಯೋಗ್ಯ ಪುರುಷರೊಬ್ಬರು ಗವರ್ನಮೆಂಟ ಕೊಲಜಿನ ಸಭೆಯಲ್ಲಿ ಎದ್ದು ನಿಂತು "ಸ್ವಾಮೀ, ಗಾಂಧಿಯವರನ್ನು ಹೀಯಾಳಿಸುವ ಮಾತು ಹಾಗಿರಲಿ, ನೀವು ಪ್ರತಿಪಾದನ ಮಾಡುವ ಸಹಕಾರಿತೆಯ ಪ್ರಭಾವದಿಂದ ಏನೇನೂ ಮಾಡಬಲ್ಲಿರಿ, ಅದನ್ನಾದರೂ ತಿಳಿಸಿ" ಎಂದು ಕೇಳಿಕೊಂಡರು. ಅದಕ್ಕೆ "ಯುವಕರು ಹೇಳುವ ಮಾತೇನೆಂದು ತನಗೆ ತಿಳಿದೇ ಇದೆ, ಇತರರು ಹೇಳಬೇಕಾಗಿಲ್ಲ" ಎಂದು ಶಾಸ್ತ್ರಿಗಳು ದರ್ಪ ತೋರಿಸಲು ಎತ್ತಿದ ಬೆರಳನ್ನು ಕಚ್ಚಿ ಬಿಟ್ಟರು. ಅದರ ನಂತರ ಜನಸಂದಣಿಯು ನಿರಾಶೆಯಾಗಿ ಸುಮ್ಮನಾಯಿತು. ಅದೇ ರೀತಿಯಲ್ಲಿ ಉತ್ತರಗಳು ನಾಡವರ ವಿದ್ಯಾರ್ಥಿಭವನದಲ್ಲಿಯೂ ಅಸಮಾಧಾನಕರವಾಗಿದ್ದರೂ ಅನುಭವಶಾಲಿಗಳು ಯಾರೂ ಮಾತ್ರ ಇಲ್ಲ. ಇದರಿಂದ ಮಂಗಳೂರಿನ ಜನರ ಅಜ್ಞಾನದ ತುಲನೆ ಮಾಡಲು 'ನ್ಯೂ ಇಂಡಿಯಾ'ದ ಬಾತಮಿದಾರನು ಮುಂದರಿಸಲು ಅವಕಾಶವಿರಲಿಲ್ಲವೆಂದು ಮಾತ್ರ ಒತ್ತಿ ಹೇಳುತ್ತೇವೆ.

೪. ಓಲ್ ಇಂಡಿಯಾ ಗೌಡಸಾರಸ್ವತ ಬ್ರಾಹ್ಮಣ ಸಭೆಯ ಪರವಾಗಿ ಮುಂಬಯಿಯಿಂದ ಬಂದಿರುವ ಆರ್. ಕೆ. ಗೋಳಿಕೆರೆಯವರು ಇಲ್ಲಿಯ ಗೌಡಸಾರಸ್ವತ ಮತ್ತು ಚಿತ್ರಾಪುರ ಸಾರಸ್ವತ ಬ್ರಾಹ್ಮಣ ಸಮಾಜದ ಭ್ರಾತೃಭಗಿನಿಯವರಿಗೆ ಬರಕೊಂಡ ವಿಜ್ಞಾಪನೆಯನ್ನು ಈ ಸಂಚಿಕೆಯ ಮತ್ತೊಂದು ಕಡೆಯಲ್ಲಿ ಮುದ್ರಿಸಿರುತ್ತೇವೆ. ಬಂಟ್ವಾಳ, ಮಂಜೇಶ್ವರ, ಮಂಗಳೂರು, ಈ ಪ್ರಾಂತ್ಯಗಳಿಂದ ಸಭಾಕಾರ್ಯದ ಬಗ್ಗೆ ತನಗೆ ಸಿಕ್ಕಿದ ಆದರ ಸತ್ಕಾರಗಳ ಬಗ್ಗೆ ಇವರು ತಮ್ಮ ಕೃತಜ್ಞತೆಯನ್ನು ಸೂಚಿಸಿರುತ್ತಾರೆ. ಸಭಾಕಾರ್ಯದೊಂದಿಗೆ ಇಲ್ಲಿಯ ಗೌಡಸಾರಸ್ವತ ಬಡ ವಿದ್ಯಾರ್ಥಿಗಳ ಸಹಾಯಕ ಮಂತಿಗೆ ಮ|| ರಾ|| ರಾ|| ಸಾಹುಕಾರ ಮಂಜೇಶ್ವರ ಅನಂತ ಕೃಷ್ಣರಾಯರಿಂದ ರೂ. ೨೫, ಮ|| ರಾ|| ರಾ|| ಕೆಚ್ಚೂರ ಶಂಕರರಾಯರಿಂದ ರೂ. ೫, ಮ|| ರಾ|| ರಾ|| ಗಂಗೊಳ್ಳಿ ಕೃಷ್ಣರಾಯರಿಂದ ರೂ. ೧೦ನ್ನು ಸಂಗ್ರಹಿಸಿ ಗೋಳಿಕೆರೆಯವರು ಕಳುಹಿಸಿಕೊಟ್ಟದ್ದನ್ನು ಕೃತಜ್ಞತಾಪೂರ್ವಕ ಸ್ವೀಕರಿಸಿರುವೆವು.

ಮಂಗಳೂರು.

ಈ ತಿಂಗಳ ಸೆಶ್ಶನಿನಲ್ಲಿ ವಿಚಾರವಾದ ೨ನೆ ಮೊಕದ್ದಮೆಯಲ್ಲಿ ಮಮ್ಮುಂಞಿ ಮತ್ತು ಇನ್ನಿಬ್ಬರು ಮಾಪಿಳ್ಳೆಯರು ಸುಮಾರು ೩೦ ಮಂದಿ ಮಾಪಿಳ್ಳೆಯರ ಸಹಿತವಾಗಿ ಮುಳಿಯಾರು ಗ್ರಾಮದ ಮಾಲಿಂಗ ನಾಯರ್ ಎಂಬವನ ಮನೆಯನ್ನು ಹೊಕ್ಕು ೫೦೦ ರೂಪಾಯಿಗೆ ಮಿಕ್ಕಿ ಹಣ ಮತ್ತು ನಗನಾಣ್ಯಗಳೂ ಬಟ್ಟೆಗಳೂ ಇರುವ ಪೆಟ್ಟಿಗೆಗಳು ಎರಡನ್ನು ದೋಚಿಕೊಂಡು ಹೋದರೆಂಬ ಅಪಾದನೆಯಿಂದ ಕಾಸರಗೋಡ ಸಬ್ ಮೆಜಿಸ್ಟ್ರೇಟರಿಂದ ಚಾರ್ಜ ಮಾಡಲ್ಪಟ್ಟಿದ್ದರು. ಜೂರಿಯವರು ೧ನೆ ಮತ್ತು ೩ನೆಯವರ ಮೇಲೆ ತಕ್ಸೀರಿನ ರುಜುವಾತು ಕಾಣುತ್ತದೆಂದು ಹೇಳಿದ್ದರಿಂದ ಜಡ್ಜರು ಎರಡೆರಡು ವರ್ಷದ ಕಠಿಣ ಸಜೆ ವಿಧಿಸಿದರು.

ಕೊಡಿಂಬಳ ಗ್ರಾಮದಲ್ಲಿ ತಿಮ್ಮಯ್ಯ ಚೌಟ ಎಂಬವನನ್ನು ೧೯೨೦ನೆ ಆಗೋಸ್ತು ೩ನೆ ತಾರೀಕಿನಲ್ಲಿ ತಮ್ಮಯ್ಯ ಪೂಜಾರಿ ಎಂಬವನು ಕೋವಿಸುಟ್ಟು ಕೊಂದನೆಂಬ ಅಪಾದನೆಯ ಮೊಕದ್ದಮೆಯು ಪುತ್ತೂರು ಸಬ್ ಮೆಜಿಸ್ಟ್ರೇಟರಿಂದ ಕಮ್ಮಿಟ್ ಮಾಡಲ್ಪಟ್ಟಿದ್ದು ಈಗ ವಿಚಾರಣೆಗೆ ಬಂತು. ಇದರಲ್ಲಿ ತಕ್ಸೀರು ಅಪರಾಧಿಯ ಮೇಲೆ ರುಜುವಾಗುತ್ತದೆಂದು ನಿಶ್ಚಯಿಸಿ ಹೈಕೋರ್ಟಿನ ಮಂಜೂರಾತಿಗೆ ಒಳಪಟ್ಟು ಈತನಿಗೆ ಫಾಶಿ ಶಿಕ್ಷೆ ವಿಧಿಸಲಾಯಿತು.

ಗವರ್ನಮೆಂಟ ಹಾಯರ್ ಎಲಿಮೆಂಟರಿ ಟ್ರೈನಿಂಗ್ ಶಾಲೆಯ ಮೊಡಲ್ ಸ್ಕೂಲ್ ಹೆಡ್‌ಮಾಸ್ತರ್ ಮ|| ರಾ|| ಯಮ್. ತಮ್ಮಣ್ಣಯ್ಯನವರಿಗೆ ರಾಯದುರ್ಗ ರೇಂಜಿನ ಶಾಲೆಗಳ ಸಬ್ ಅಸಿಸ್ಟಾಂಟ ಇನ್ಸ್‌ಪೆಕ್ಟರರಾಗಿಯೂ ಮ|| ರಾ|| ಕೋಟೆಕಾರ ರಾಮರಾಯರಿಗೆ ಕೊಳ್ಳೆಕಾಲ (ಕೊಯಮುತ್ತೂರು) ರೇಂಜಿನ ಸಬ್ ಅಸಿಸ್ಟಾಂಟ ಇನ್ಸ್‌ಪೆಕ್ಟರರಾಗಿಯೂ ವರ್ಗವಾಗಿದೆ.

ಕಳೆದ ತಾ ೧೭ನೇ ಬುಧವಾರ ಅಪರಾಹ್ನ ೩ ಗಂಟೆಯ ತರುವಾಯ ಪೋಲೀಸ ಪಂದ್ಯಾಟವು ನಡೆಯಿತು. ಇದನ್ನು ಕಾಣಲು ಬಹು ಮಂದಿ ಯುರೋಪಿಯನ್ ಮತ್ತು ದೇಶೀಯ ಗೃಹಸ್ಥರು ಕೂಡಿದ್ದರು. ಅನೇಕ ನಮೂನೆಯ ಓಟಗಳು, ಟಗ್ ಒಫ್ ವೋರ್, ಹೊಕ್ಕಿಯಾಟ ಮುಂತಾದ ಆಟಗಳು ಮುಗಿದೊಡನೆಯೇ ಇವುಗಳಲ್ಲಿ ಮುಂದು ಬಂದವರಿಗೆ ಜಿಲ್ಲಾ ಸುಪರಿಂಟಂಡೆಂಟ ದೊರೆಗಳವರ ಪತ್ನಿಯವರಿಂದ ಬಹುಮಾನಗಳು ಹಂಚಲಾದವು. ಈ ಪೈಕಿ ದೋಣಿಯ ಓಟದ ಬಹುಮಾನವು ರಿಜರ್ವ ಪೋಲೀಸರಿಗೂ ಮಂಗಳೂರು ಸರ್ಕಲ್ ಪೋಲೀಸರಿಗೂ, ರಿವ್ವೋಲವರ್ ಕಂಪಿಟೇಶನ್ ಬಹುಮಾನವು ಪೋಲೀಸ ಸಾರಜೆಂಟ್ ವಾನ್ಸ್‌ಬಿ ಮತ್ತು ಪಿ ದಿವಾನಿ ಎಂಬವರಿಗೂ, ಸೈಕಲ ಓಟದ ಬಹುಮಾನವು ಪೋಲೀಸ್ ಸಬ್ ಇನ್ಸಪೆಕ್ಟರ ಮಿ. ಜೆ. ಡಿ. ಸೋಜ ಮತ್ತು ಮಿ. ಎಲ್. ಎಫ್. ಸಾಲ್ದಾಞರಿಗೂ, ಟಗ್ ಒಫ್ ವೋರಿನ ಬಹುಮಾನ ಪೋಲೀಸ್ ಪಾರ್ಟಿಯವರ ಪೈಕಿ ರಿಜರ್ವ ಪೋಲೀಸಿನ ಮೊದಲನೇ ಸೆಕ್ಷನಿಗೂ ಮತ್ತು ಮಂಗಳೂರ ರಿಜರ್ವ ಪೋಲೀಸರಿಗೂ ಇತರರ ಪೈಕಿ ಗವರ್ನಮೆಂಟ ಕೋಲೇಜಿಗೂ ದೊರೆತವು. ಈ ಆಟವನ್ನು ಜರಗಿಸುವ ಬಗ್ಗೆ ಈ ವರುಷ ಸರಕಾರದವರಿಂದ ರೂ. ೪೦೦ ದೊರೆಯುವುದಾಗಿಯೂ, ಇಲ್ಲಿಯ ವರ್ತಕರ ಪೈಕಿ ಮ|| ರಾ|| ಉಳ್ಳಾಲ ಲಕ್ಷ್ಮಣ ಸಾಂತಯ್ಯ ಕಿಣಿ ಮತ್ತು ಮ|| ರಾ|| ಪುರುಷೋತ್ತಮ ನಾನಜಿ ಶೇಟರು ಬೆಳ್ಳಿಯ ಬಟ್ಟಲುಗಳನ್ನು ಉಚಿತವಾಗಿ ಕೊಡಲು ಕೊಟ್ಟಿದ್ದರಾಗಿಯೂ ತಿಳಿಯುತ್ತೇವೆ. ತಮ್ಮ ಉದ್ಯೋಗದಲ್ಲಿ ಹೆಚ್ಚಿನ ದಕ್ಷತೆಯಿಂದ ಕೆಲಸಮಾಡಿದ ಅನೇಕ ಪೋಲೀಸ ಉದ್ಯೋಗಸ್ಥರಿಗೂ, ಪೋಲೀಸ ಉದ್ಯೋಗಸ್ಥರಿಗೆ ತಮ್ಮ ಕೆಲಸಗಳನ್ನು ನೆರವೇರಿಸುವುದರಲ್ಲಿ ಸಹಾಯಮಾಡಿದ ಇತರರಿಗೂ ಇನಾಮುಗಳನ್ನು ಈ ಸಮಯದಲ್ಲಿ ಹಂಚಲಾದವು. ನಂತರ ಈ ಪಂದ್ಯಾಟಗಳ ಬಗ್ಗೆ ಸಹಾಯಮಾಡಿದ ಗೃಹಸ್ಥರಿಗೂ ನೆರೆದ ಸಭಿಕರಿಗೂ ವಂದನೆಗಳು ಅರ್ಪಿಸಲಾದವು.

ಉಡುಪಿಯ ತಹಸಿಲ್‌ದಾರರಾದ ಮ|| ರಾ|| ರಾ|| ರಾಮನ್ ನಾಯರರು ಬಳ್ಳಾರಿಯ ಸ್ಪೆಶ್ಯಲ್ ಡಿಪ್ಯುಟಿ ಕಲೆಕ್ಟರರಾಗಿ ನೇಮಕವಾಗಿ ಇವರ ಹುದ್ದೆಯಲ್ಲಿ ರಜೆಯ ಮೇಲಿದ್ದ ಕಾಸರಗೋಡು ಸ್ಟೇಶನರಿ ಸಬ್ ಮೆಜಿಸ್ಟ್ರೇಟ ಯಂ. ರಾಘವೇಂದ್ರರಾಯರು ಮೊಕ್ರರಾಗಿದ್ದಾರೆ.

ಕಳೆದ ಆದಿತ್ಯವಾರ ಕೊಸ್ಮೊಪೊಲಿಟನ್ ಕ್ಲಬ್ಬಿನಲ್ಲಿ ಮ|| ರಾ|| ಗಂಗೊಳ್ಳಿ ಕೃಷ್ಣರಾಯರ ಅಧ್ಯಕ್ಷತೆಯಲ್ಲಿ ಒಂದು ಸಭೆಕೂಡಿ ನ್ಯಾಯವಿಧಾಯಕ ಸಭೆಗೆ ವೋಟರರು ತಮ್ಮ ವೋಟುಗಳನ್ನು ಈಗ ಕೊಡುವುದು ಅನುಚಿತವೆಂದು ಭಾಷಣಗಳಾಗಿ, ಕಡೇಗೆ ಬರುವ ತಾ ೩೦ನೇ ದಿನ ವೋಟರರು ಪೋಲಿಂಗ ಸ್ಟೇಶನುಗಳಿಗೆ ಹೋಗಿ ವೋಟು ಕೊಡದೇ ಇದ್ದು ಆ ದಿನವನ್ನು ರಾಷ್ಟ್ರೀಯ ಸೂತಕದ ದಿನವಾಗಿ ಆಚರಿಸಬೇಕಾಗಿ ನಿರ್ಣಯವಾಯಿತು.

ಬರುವ ತಾ ೨೮ನೇ ಆದಿತ್ಯವಾರ ಸಾಯಂಕಾಲ ೫ ಗಂಟೆಗೆ ಲೈನ ಮೈದಾನಿನಲ್ಲಿ ಹೊಸ ಕೌನ್ಸಿಗಳ ಬಹಿಷ್ಕಾರದ ಕುರಿತು ಕಡೇಯ ಸಭೆಯು ಕೂಡುವುದು.

ಕಳೆದ ಶುಕ್ರವಾರ ಗವರ್ನಮೆಂಟ ಕೊಲೇಜಿನ ವರ್ಧಂತಿ ಉತ್ಸವವು ಮ|| ರಾ|| ಎ. ಪಿ. ರಾಯರ ಅಧ್ಯಕ್ಷತೆಯಲ್ಲಿ ಯೋಗ್ಯವಾಗಿ ಜರಗಿತು. ಕ್ರಮದಂತೆ ಕೊಲೇಜಿಯ ಗತವರುಷದ ರಿಪೋರ್ಟನ್ನು ಓದಿ ಆದ ತರುವಾಯ ನೆರದ ಸಭಿಕರನ್ನು ಆನಂದ ಗೊಳಿಸಲು "ಪ್ರೇಮವೇ ಯೋಗ್ಯ ವೈದ್ಯ" ವೆಂಬ ನಾಟಕವನ್ನು ಅಭಿನಯಿಸಿ ಅಂದಿನ ಸಮಾರಂಭವನ್ನು ಮುಗಿಸಿದರು.

ಪ್ರಿಯರೇ,

ಈ ಕೆಳಗಿನ ವಿನಂತಿಯು ಇದೇ ತಿಂಗಳ ತಾ. ೯ನೇ 'ಕೇಸರಿ' ಪತ್ರದ ಸಂಚಿಕೆಯಲ್ಲಿ ಪ್ರಕಟವಾದುದನ್ನು ನಮ್ಮ ಜಿಲ್ಲೆಯ ಓಟರುಗಳಲ್ಲಿಯೂ ಪ್ರಕಟ ಮಾಡಿದರೆ ಬಹಳ ಪ್ರಯೋಜನವಾದೀತೆಂದು ಅಭಿಪ್ರಾಯಪಟ್ಟು ಅದನ್ನು ಕನ್ನಡದಲ್ಲಿ ಪರಿವರ್ತಿಸಿ ನಿಮ್ಮಲ್ಲಿಗೆ ಕಳುಹಿಸಿರುವೆನು. ಇದನ್ನು ದೊಡ್ಡ ಅಕ್ಷರದಲ್ಲಿ ಮುಂದೆ ತೋರುವ ಸ್ಥಳದಲ್ಲಿ ಪ್ರಕಟಿಸಿ ದೇಶಹಿತಕಾರ್ಯವನ್ನು ಕೈಕೊಳ್ಳುವರಾಗಿಯೂ ಪ್ರೋತ್ಸಾಹಿಸುವರಾಗಿಯೂ ನಂಬಿ ಬರಕೊಂಡಿರುತ್ತೇನೆ.

UDIPI, ತಾ 17-11-02 } ಇತಿ ತಮ್ಮ ವಿಶ್ವಾಸಿ, T. PURUSHOTHAM PAI.

ಮತದಾರ (ಓಟರ)ರಿಗೆ ವಿನಂತಿ.

ನವಂಬರ ತಾ ೩೦ನೆ ದಿನವು ರಾಷ್ಟ್ರೀಯ ಸೂತಕವು ಎಂತ ಎಣಿಸಿರಿ

ಈ ದಿನ ಮನೆಯಿಂದ ಹೊರಗೆ ಹೊರಡದಿರಿ

ಬರುವ ಚುನಾವಣೆಯಲ್ಲಿ ಓಟುಗಳನ್ನು ಕೊಡತಕ್ಕದ್ದಾಗಿ ರಾಷ್ಟ್ರೀಯ ಸಭೆಯ ಅಭಿಪ್ರಾಯ ಉಂಟು

ಈ ಅಭಿಪ್ರಾಯವನ್ನು ಮನ್ನಿಸಬೇಕಾಗಿ ಎಲ್ಲಾ ಪ್ರಾಂತ್ಯದ ರಾಷ್ಟ್ರೀಯ ಮುಖಂಡರು ನಿಶ್ಚಯಿಸಿದ್ದಾರೆ

ಓಟು ಕೊಡುವ ಹಕ್ಕಿನಂತೆಯೇ ಓಟುಕೊಡದೆ ಇರತಕ್ಕ ಹಕ್ಕು ಓಟುದಾರರಿಗೆ ಇರುವುದು.

ಈ ಹಕ್ಕನ್ನು ಈ ಸಮಯದಲ್ಲಿ ಉಪಯೋಗಿಸದೆ ಇರುವುದರಿಂದ ರಾಷ್ಟ್ರಕ್ಕೆ [illegible] ಉಂಟು

ಓಟು ಕೊಡಲಿಕ್ಕೆ ಹೋಗದೆ ಇರುವುದು ಎಂದಿಗೂ ತಕ್ಸೀರು ಆಗುವುದಿಲ್ಲ

ಆದರೆ ಯಾರ ಮೇಲೂ ಬಲಾತ್ಕಾರ ಜುಲುಮು ವಗೈರೆ ಮಾಡಬಾರದು

ಈಗ ಓಟು ಕೊಡುವುದರಿಂದ ಸಿಕ್ಕಬಹುದೆಂತ ಎಣಿಸುವ ಲಾಭಕ್ಕಿಂತಲೂ ಓಟು ಕೊಡದೆ ಇರುವುದರಿಂದಲೇ ಹೆಚ್ಚಿನ ಲಾಭ ಉಂಟು

ರಾಷ್ಟ್ರೀಯ ಸ್ವಾತಂತ್ರ್ಯತೆಯನ್ನು ಅಪೇಕ್ಷಿಸುವ ಅನೇಕ ರಾಜ್ಯದವರು ಈ ಮಾರ್ಗವನ್ನು ಅನುಸರಿಸಿರುವರು

ಪಂಜಾಬಿನ ಅತ್ಯಾಚಾರ ಮತ್ತು ಖಿಲಾಫತ್ತಿನ ಪ್ರಕರಣ ಸಂಬಂಧವಾದ ಅನ್ಯಾಯವನ್ನು ಪರಿಹರಿಸದ ವಿನಹಾ ಸುಧಾರಣೆಗಳನ್ನು ತೆಗೆದುಕೊಳ್ಳಕೂಡದೆಂದು ರಾಷ್ಟ್ರೀಯ ಸಭೆಯ ನಿಶ್ಚಿತವಾದ ಅಭಿಪ್ರಾಯ

ಹಿಂದೂ ಮತ್ತು ಮುಸಲ್ಮಾನ ಬಂಧುಗಳು ಈ ವಿಷಯದಲ್ಲಿ ಏಕಮತ್ಯದವರಾಗಿದ್ದಾರೆ

ರಾಷ್ಟ್ರೀಯ ಸ್ವಾಭಿಮಾನವನ್ನು ತೋರಿಸುವ ಈ ಸುಸಂದರ್ಭವನ್ನು ಯಾರೂ ಕಳೆದುಕೊಳ್ಳಬಾರದು

ನವಂಬರ ತಾ. ೩೦ನೆಯ ದಿವಸ ದೇವಸ್ಥಾನದಲ್ಲಿಯೂ ಮಸೀದಿಯಲ್ಲಿಯೂ ವ್ಯಾಖ್ಯಾನ ಕೀರ್ತನೆ, ಪುರಾಣ, ಭಜನೆ ವಗೈರೆ ಮಾಡಿಕೊಂಡು ದೇಶಹಿತವನ್ನೂ ಮತ್ತು ದೇವರ ಪ್ರಾರ್ಥನೆಯನ್ನು ಮಾಡುವುದರಲ್ಲಿಯೇ ಸಮಯವನ್ನು ವಿನಿಯೋಗಿಸಬೇಕು

THE ALL INDIA

Saraswat Brahmana Sabha

of Bombay

To

My brethren, and sisters of the Gowd and Chitrapur Sections, of my community at Mangalore, Buntwal and Manjeshwar

Dear brethren and sisters,

On the eve of my departure I wish to place on record my deep sense of gratitude, both on my own behalf and on behalf of the All India Saraswat Brahman Sabha of Bombay, for the cordial welcome which I have experienced at the hands of those of you with whom I had the privilege to come into contact during my stay in your midst. It was a great pleasure to me to visit my native district after an interval of [illegible] years, on one of the most pleasant missions in my life. I should have liked to visit many more places in the district, but I regret I had to drop the idea for want of time. The response I have so far received in the way of membership of THE ALL INDIA SARASWAT BRAHMAN SABHA is by all means encouraging, and I take this opportunity to thank my brethren and sisters in both sections of my community who have so readily responded to its call and those who have assisted me in securing new members for the Sabha. I have no doubt its membership in this district as elsewhere will continue to increase and I am sure you will join me in my prayer that we, Saraswats, scattered and disbanded as we are to day, will hereafter, through mutual sympathy and hearty co-operation among the members of the Sabha, attain our [illegible] social unity as members of the sa[illegible] from one end of India to the [illegible]!

I remain,

MANGALORE, 25th Nov. 1920.

[illegible]

ನಮ್ಮ ಮನಸ್ಸಿನಲ್ಲಿ ಆದ ವ್ಯಾಕುಲವನ್ನೂ ಕ್ರೋಧವನ್ನೂ ಸರಕಾರದ ಕಣ್ಣಿಗೆ ಕಟ್ಟುವಂತೆ ಮಾಡುವುದೇ ಆಗಿತ್ತು. ಅದಕ್ಕಿಂತ ಮುಂದರಿಸಿ ಹೋಗುವುದು ಆಗತ್ಯವಿರಲಿಲ್ಲ, ಮತ್ತು ನನ್ನ ಇತರ ಠರಾವುಗಳು ನಿಮ್ಮ ಆಧೀನವುಗಳಲ್ಲವಾದ್ದರಿಂದ ಅವನ್ನು ಹಾಗೆ ಮುಂದರಿಸಿದರೂ ವಿಶೇಷ ಬಾಧಕವು ದೇಶಕ್ಕೆ ಬರಲಾರದು ಎಂಬ ಭಾವನೆಯಿಂದ ನಾನು ಅವನ್ನು ಹಿಂದೆಗೆದೆನು, ಆದರೆ ಸಭೆಯಿಂದ ಎದ್ದು ಹೋಗಲು ಎಲ್ಲಾ ಪ್ರತಿನಿಧಿ ಮೆಂಬರರು ಒಪ್ಪಿಕೊಂಡರೆ, ಅದರ ಪ್ರದರ್ಶನವು ಸರಕಾರದವರಿಗೆ ಅಂಜನವಾದೀತು, ಅಂಥಾ ಒಮ್ಮತವು ಇರಲಿಲ್ಲ" ಎಂದು ಶಾಸ್ತ್ರಿಗಳು ಹೇಳಿದರು. ಈ ಉತ್ತರದ ಮೊದಲನೆ ಭಾಗವು ನನಗೆ ಬಾಧ್ಯು ಎತ್ತು ವಿಚಾರಸರಣಿಯನ್ನು ನೆನಪಿಗೆ ತರುತ್ತದೆ. ಕಾಶೀಕ್ಷೇತ್ರಕ್ಕೆ ಹೋದರೆ ಅಲ್ಲಿ ಏನಾದರೂ ತನ್ನ ಪ್ರೇಮದ ವಸ್ತುವನ್ನು ಬಿಟ್ಟುಬರಬೇಕು ಎಂಬ ವಾಡಿಕೆಯಿದೆ ಎಂದು ಕೇಳಿದವನೊಬ್ಬನು ತನಗೆ ನೆಗಡಿಯಾದಾಗ ಒಂದೆರಡು ಸಲ ಮಾತ್ರವೇ ನಸ್ಯ ಸೇದಿ ಸ್ವಲ್ಪ ಸುಖ ಹೊಂದಿದವನು, ಈಗ ನಸ್ಯ ಸೇದುವ ಅಭ್ಯಾಸವನ್ನು ಕಾಶಿಯಲ್ಲಿ ಬಿಟ್ಟು ಬಂದೆನು ಎಂದು ಹೇಳಿದನಂತೆ. ನಸ್ಯ ಸೇದುವ ಅಭ್ಯಾಸವು ಆತನಿಗೆ ಇರಲಿಲ್ಲ, ಅದನ್ನು ಬಿಟ್ಟದ್ದು ಎಂಬ ಮಾತಿನ ಅರ್ಥವೇನು? ಇಂಥಾ ತ್ಯಾಗದಿಂದ ಯಾವ ಪುಣ್ಯವು ಬಂದೀತು? ನಾಮಧಾರಿ ಶಾಸ್ತ್ರಿಗಳು ಇದೇ ರೀತಿಯ ಧೋರಣೆಯನ್ನು ಕೈಕೊಂಡರೆಂದು ನಾವು ತಿಳಿಯಬೇಕೇ? ಸಭೆಯಿಂದ ಎದ್ದು ಹೋಗುವಷ್ಟು ಒಮ್ಮತವಿದ್ದಿಲ್ಲವೆಂತಾದರೆ ಅಂಥ ಉದಾಸೀನ ಮತದ ಉಮೇದ್ವಾರರು ಈಗ ಕೌನ್ಸಿಲಿನೊಳಗೆ ಪ್ರವೇಶ ಮಾಡುವಂತಿದ್ದರೆ ಅಂಥವರಿಗೆ ವೋಟು ಕೊಡಬೇಕೆಂದು ಕೇಳುವುದು ಯಾತಕ್ಕೆ? ಅಥವಾ ಅಂಥಾ ಕೌನ್ಸಿಲಿನಲ್ಲಿ ಪ್ರಜಾಪ್ರತಿನಿಧಿಗಳು ಬಲವಾದ ಅಂಜನವನ್ನು ಸರಕಾರದ ಕಣ್ಣಿಗೆ ಹಚ್ಚಲು ಸಾಧ್ಯವಿಲ್ಲವೆಂತಾದರೆ ಅಂಥಾ ಕೌನ್ಸಿಲಿನ ಬಹಿಷ್ಕಾರವನ್ನು ಇಡುವ ಸಾಹಸದಲ್ಲಿ ತಪ್ಪೇನು ಎಂಬ ಪ್ರಶ್ನೆಯನ್ನು, ನಾಮಧಾರಿ ಶಾಸ್ತ್ರಿಗಳು ಉತ್ತರಿಸುವಾಗ, ಕ್ಲಾಸಿನಲ್ಲಿ ವಿದ್ಯಾರ್ಥಿ ಮಾಡಿದ ಪ್ರಶ್ನೆಯನ್ನು ಕ್ರಮವಾಗಿ ಉತ್ತರಿಸಲು ಕಷ್ಟಕಂಡ ಉಪಾಧ್ಯಾಯನು ಪ್ರಶ್ನೆಯ ನಿರ್ದೇಶವನ್ನು ಮರೆತು ಎಲ್ಲಿಗೂ ಎಲ್ಲಿಗೂ ಎಂಬಂತೆ ನುಡಿದು ವಿದ್ಯಾರ್ಥಿಯನ್ನು 'ಗೊಂದಲದ' ಬಲೆಯಲ್ಲಿ ಉರುಳಿಸಿ ಬಿಡುವ 'ಜಾದೂ' ವರ್ತನವನ್ನು ಕೈಕೊಂಡದ್ದು ಸ್ಪಷ್ಟವಾಗುತ್ತಿದೆ.

೬. ಹಾಗಾದರೆ ಈ ರೀತಿಯ 'ಜಾದೂ' ಆಟವನ್ನು ನಿಲ್ಲಿಸುವಂತೆ ಸಭಿಕರಲ್ಲಿ ಒಬ್ಬನಾದರೂ ಯಾರಾದರೂ ಹೊಸ ಪ್ರಶ್ನೆಗಳಿಂದ ನಾಮಧಾರಿ ಶಾಸ್ತ್ರಿಗಳ ಟೀಕೆಯನ್ನು ಯಾಕೆ ಖಂಡಿಸಲಿಲ್ಲವೆಂಬ ಪ್ರಶ್ನೆ ಬರಬಹುದು. ಅವರು ಮಹಾತ್ಮಗಾಂಧಿಯವರನ್ನು ಮೊದಲು ಹೊಗಳಿಕೆಯಲ್ಲಿ ಗಗನಕ್ಕೇರಿಸಿ, ಆ ಮೇಲೆ ಅವರ ಸಂದೇಶದ ತೀರಾ ನಕಲಿಯನ್ನು ಮಾಡತೊಡಗಿದಾಗಲೇ ಶಾಲಾ ಯುವಕರ ಗಲಾಟೆಯು ಉಂಟಾಯಿತು. ಅಂಥಾ ಗಲಾಟೆಯನ್ನು ನಾವು ಮನ್ನಿಸುವುದಿಲ್ಲ. ನಮ್ಮ ತಿಳುವಳಿಕೆ, ವಿಶ್ವಾಸ, ಭಕ್ತಿಯನ್ನು ವಿರೋಧಿಸಿ, ಹಲ್ಲು ಕಸಿಯುವವರ ಭಾಷಣಗಳಲ್ಲಿ ನಮ್ಮ ಅಸಮ್ಮತಿಯನ್ನೂ ನಮ್ಮ ವಿಷಾದವನ್ನು ತೋರ್ಪಡಿಸುವುದಕ್ಕೆ ಅಲ್ಲಿಂದ ಎದ್ದು ಹೋಗುವುದೇ ಮಾನ್ಯವಾದ ಮಂತ್ರವೆಂದು ನಮ್ಮ ಅಭಿಪ್ರಾಯ. ಇದರ ಪರಿಣಾಮ ತಿಳಿಯದೆ ಉತ್ಸಾಹಭರಿತರಾದ ಯುವಕರು ತಮ್ಮ 'ಮನೋವೇದನೆ'ಯನ್ನು ತಾಳಿಕೊಳ್ಳಲಾರದೆ ಗಲಾಟೆ ಎಬ್ಬಿಸ ತೊಡಗಿದರು. ಆಗ ಯೋಗ್ಯ ಪುರುಷರೊಬ್ಬರು ಗವರ್ನಮೆಂಟ ಕೊಲೇಜಿನ ಸಭೆಯಲ್ಲಿ ಎದ್ದು ನಿಂತು "ಸ್ವಾಮಿ, ಗಾಂಧಿಯವರನ್ನು ಹೀಯಾಳಿಸುವ ಮಾತು ಹಾಗಿರಲಿ, ನೀವು ಪ್ರತಿವಾದನ ಮಾಡುವ ಸಹಕಾರಿತೆಯ ಪ್ರಭಾವದಿಂದ ಏನೇನೂ ಮಾಡಲಿಕ್ಕಿದ್ದೀರಿ, ಅದನ್ನಾದರೂ ತಿಳಿಸಿರಿ" ಎಂದು ಕೇಳಿಕೊಂಡರು. ಅದಕ್ಕೆ "ಯುವಕರು ಹೇಳುವ ಮಾತೇನೆಂದು ತನಗೆ ತಿಳಿದೇ ಇದೆ, ಇತರರು ಹೇಳಬೇಕಾಗಿಲ್ಲ" ಎಂದು ಶಾಸ್ತ್ರಿಗಳು ದ್ವಾರ ತೋರಿಸಲು ಎತ್ತಿದ ಬೆರಳನ್ನು ಕಟ್ಟಿಬಿಟ್ಟರು. ಅದರ ನಂತರ ಜನಸಂದಣಿಯು ನಿರಾಶೆಯಾಗಿ, ಸುಮ್ಮನಾಯಿತು. ಅದೇ ರೀತಿಯಲ್ಲಿ ಉತ್ತರಗಳು ನಾಡವರ ವಿದ್ಯಾರ್ಥಿಭವನದಲ್ಲಿಯೂ ಅಸಮಾಧಾನಕರವಾಗಿದ್ದರೂ ಅನುಭವಶಾಲಿಗಳು ಯಾರೂ ಮಾತ್ರಕ್ಕಿಲ್ಲ. ಇದರಿಂದ ಮಂಗಳೂರಿನ ಜನರ ಅಜ್ಞಾನದ ತುಲನೆ ಮಾಡಲು 'ಕ್ಯೂ ಇಂಡಿಯಾ'ದ ಬಾತಮಿದಾರನು ಮುಂದರಿಸಲು ಅವಕಾಶವಿರಲಿಲ್ಲವೆಂದು ಮಾತ್ರ ಒತ್ತಿ ಹೇಳುತ್ತೇವೆ.

೭. ಓಲ್ ಇಂಡಿಯಾ ಗೌಡಸಾರಸ್ವತ ಬ್ರಾಹ್ಮಣ ಸಭೆಯ ಪರವಾಗಿ ಮುಂಬಯಿಯಿಂದ ಬಂದಿರುವ ಆರ್. ಕೆ. ಗೋಳಿಕೆರೆಯವರು ಇಲ್ಲಿಯ ಗೌಡಸಾರಸ್ವತ ಮತ್ತು ಚಿತ್ರಾಪುರ ಸಾರಸ್ವತ ಬ್ರಾಹ್ಮಣ ಸಮಾಜದ ಭ್ರಾತೃಭಗಿನಿಯವರಿಗೆ ಬರಕೊಂಡ ವಿಜ್ಞಾಪನೆಯನ್ನು ಈ ಸಂಚಿಕೆಯ ಮತ್ತೊಂದು ಕಡೆಯಲ್ಲಿ ಮುದ್ರಿಸಿರುತ್ತೇವೆ. ಬಂಟವಾಳ, ಮಂಜೇಶ್ವರ, ಮಂಗಳೂರು, ಈ ಪ್ರಾಂತ್ಯಗಳಿಂದ ಸಭಾ ಕಾರ್ಯದ ಬಗ್ಗೆ ತನಗೆ ಸಿಕ್ಕಿದ ಆದರ ಸತ್ಕಾರಗಳ ಬಗ್ಗೆ ಇವರು ತಮ್ಮ ಕೃತಜ್ಞತೆಯನ್ನು ಸೂಚಿಸಿರುತ್ತಾರೆ. ಸಭಾಕಾರ್ಯದೊಂದಿಗೆ ಇಲ್ಲಿಯ ಗೌಡಸಾರಸ್ವತ ಬಡ ವಿದ್ಯಾರ್ಥಿಗಳ ಸಹಾಯಕ ವಂತಿಗೆ ಮ| ರಾ| ರಾ| ಸಾಹುಕಾರ ಮಂಜೇಶ್ವರ ಅನಂತ ಕೃಷ್ಣರಾಯರಿಂದ ರೂ. ೨೫; ಮ| ರಾ| ರಾ| ಕಜ್ಜೂರ ಶಂಕರರಾಯರಿಂದ ರೂ. ೫; ಮ| ರಾ| ರಾ| ಗಂಗೊಳ್ಳಿ ಕೃಷ್ಣರಾಯರಿಂದ ರೂ. ೧೦ನ್ನು ಸಂಗ್ರಹಿಸಿ ಗೋಳಿಕೆರೆಯವರು ಕಳುಹಿಸಿಕೊಟ್ಟದ್ದನ್ನು ಕೃತಜ್ಞತಾಪೂರ್ವಕ ಸ್ವೀಕರಿಸಿರುವೆವು.

ಮಂಗಳೂರು.

ಈ ತಿಂಗಳ ಸೆಷನಿನಲ್ಲಿ ವಿಚಾರವಾದ ೨ನೆ ಮೊಕದ್ದಮೆಯಲ್ಲಿ ಮಮ್ಮಿಂಞಿ ಮತ್ತು ಇನ್ನಿಬ್ಬರು ಮಾಪಿಳ್ಳೆಯರು ಸುಮಾರು ೪೦ ಯಾ ೫೦ ಮಾಪಿಳ್ಳೆಯರ ಸಹಿತವಾಗಿ ಮುಳಿಯಾರು ಗ್ರಾಮದ ಮಾಲಿಂಗ ನಾಯರ್ ಎಂಬವನ ಮನೆಯನ್ನು ಒಳನುಗ್ಗಿ ೫೦೦ ರೂಪಾಯಿಗೆ ಮಿಕ್ಕಿ ಹಣ ಮತ್ತು ನಗನಾಣ್ಯಗಳೂ ಬಟ್ಟೆಗಳೂ ಇರುವ ಪೆಟ್ಟಿಗೆಗಳು ಎರಡನ್ನು ದೋಚಿಕೊಂಡು ಹೋದರೆಂಬ ಅಪವಾದನೆಯಿಂದ ಕಾಸರಗೋಡ ಸಬ್ ಮೆಜಿಸ್ಟ್ರೇಟರಿಂದ ಚಾರ್ಜ ಮಾಡಲ್ಪಟ್ಟಿದ್ದರು. ಜೂರಿಯವರು ೧ನೆ ಮತ್ತು ೩ನೆಯವರ ಮೇಲೆ ತಕ್ಸೀರಿನ ರುಜುವಾತು ಕಾಣುತ್ತದೆಂದು ಹೇಳಿದ್ದರಿಂದ ಜಡ್ಜರು ಎರಡೆರಡು ವರ್ಷದ ಕಠಿಣ ಸಜೆ ವಿಧಿಸಿದರು.

ಕೊಡಿಂಬಳ ಗ್ರಾಮದಲ್ಲಿ ತಿಮ್ಮಯ್ಯ ಚೌಟ ಎಂಬವನನ್ನು ೧೯೨೦ನೆ ಆಗೋಸ್ತು ೩ನೆ ತಾರೀಕಿನಲ್ಲಿ ತಮ್ಮಯ್ಯ ಪೂಜಾರಿ ಎಂಬವನು ಕೊಯಿಸುಟ್ಟು ಕೊಂದನೆಂಬ ಅಪವಾದನೆಯ ಮೊಕದ್ದಮೆಯು ಪುತ್ತೂರು ಸಬ್ ಮೆಜಿಸ್ಟ್ರೇಟರಿಂದ ಕಮ್ಮಿಟ್ ಮಾಡಲ್ಪಟ್ಟಿದ್ದು ಈಗ ವಿಚಾರಣೆಗೆ ಬಂತು. ಇವರಲ್ಲಿ ತಕ್ಸೀರು ಅಪರಾಧಿಯ ಮೇಲೆ ರುಜುವಾಗುತ್ತದೆಂದು ನಿಶ್ಚಯಿಸಿ ಹೈಕೋರ್ಟಿನ ಮಂಜೂರಾತಿಗೆ ಒಳಪಟ್ಟು ಈತನಿಗೆ 'ಫಾಶಿ' ಶಿಕ್ಷೆ ವಿಧಿಸಲಾಯಿತು.

ಗವರ್ನಮೆಂಟ ಹಾಯರ್ ಎಲಿಮೆಂಟರಿ ಟ್ರೈನಿಂಗ್ ಶಾಲೆಯ ಮೊಡಲ್ ಸ್ಕೂಲ್ ಹೆಡ್‌ಮಾಸ್ತರ್ ಮ| ರಾ| ಯಮ್. ತಮ್ಮಣ್ಣಯ್ಯನವರಿಗೆ ರಾಯದುರ್ಗ ರೇಂಜಿನ ಶಾಲೆಗಳ ಸಬ್ ಅಸಿಸ್ಟಾಂಟ ಇನ್ಸ್‌ಪೆಕ್ಟರರಾಗಿಯೂ ಮ| ರಾ| ಕೋಟೆಕಾರ ರಾಮರಾಯರಿಗೆ ಕೊಳ್ಳಿಕಾಲ (ಕೊಯಮುತ್ತೂರು) ರೇಂಜಿನ ಸಬ್ ಅಸಿಸ್ಟಾಂಟ ಇನ್ಸ್‌ಪೆಕ್ಟರರಾಗಿಯೂ ವರ್ಗವಾಗಿದೆ.

ಕಳೆದ ತಾ. ೨೪ನೇ ಬುಧವಾರ ಅಪರಾಹ್ನ ೩ಗಂಟೆಯ ತರುವಾಯ ಪೋಲೀಸ ಪಂದ್ಯಾಟವು ನಡೆಯಿತು. ಇದನ್ನು ಕಾಣಲು ಬಹು ಮಂದಿ ಯುರೋಪಿಯನ್ ಮತ್ತು ದೇಶೀಯ ಗೃಹಸ್ಥರು ಕೂಡಿದ್ದರು. ಅನೇಕ ನಮೂನೆಯ ಓಟಗಳು, ಟಗ್ ಒಫ್ ವೋರ್, ಹೊಕ್ಕಿಯಾಟ ಮುಂತಾದ ಆಟಗಳು ಮುಗಿದೊಡನೆಯೇ ಇವುಗಳಲ್ಲಿ ಮುಂದು ಬಂದವರಿಗೆ ಜಿಲ್ಲಾ ಸುಪರಿಂಟೆಂಡೆಂಟ ದೊರೆಗಳವರ ಪತ್ನಿಯವರಿಂದ ಬಹುಮಾನಗಳು ಹಂಚಲಾದವು. ಈ ಪೈಕಿ ದೋಣಿಯ ಓಟದ ಬಹುಮಾನವು ರಿಜರ್ವ ಪೋಲೀಸರಿಗೂ ಮಂಗಳೂರು ಸರ್ಕಲ್ ಪೋಲೀಸರಿಗೂ, ರಿವೋಲವರ್ ಕಂಪಿಟೇಶನ್ ಬಹುಮಾನವು ಪೋಲೀಸ ಸಾರಜೆಂಟ್ ವಾನ್ಸ್‌ದಿ ಮತ್ತು ಮಿ ಡಿವಾನಿ ಎಂಬವರಿಗೂ, ಸೈಕಲ ಓಟದ ಬಹುಮಾನವು ಪೋಲೀಸ್ ಸಬ್ ಇನ್ಸ್‌ಪೆಕ್ಟರ ಮಿ. ಜಿ. ಡಿ. ಸೋಜ ಮತ್ತು ಮಿ. ಎಲ್ ಎಫ್ ಸಾಲ್ಡಾನ್ಹರಿಗೂ, ಟಗ್ ಒಫ್ ವೋರಿನ ಬಹುಮಾನ ಪೋಲೀಸ್ ಪಾರ್ಟಿಯವರ ಪೈಕಿ ರಿಜರ್ವ ಪೋಲೀಸಿನ ಮೊದಲನೇ ಸೆಕ್ಷನಿಗೂ ಮತ್ತು ಮಂಗಳೂರ ರಿಜರ್ವ ಪೋಲೀಸರಿಗೂ ಇತರರ ಪೈಕಿ ಗವರ್ನಮೆಂಟ ಕೋಲೇಜಿಗೂ ದೊರೆತವು. ಈ ಆಟಗಳನ್ನು ಜರಗಿಸುವ ಬಗ್ಗೆ ಈ ವರುಷ ಸರಕಾರದವರಿಂದ ರೂ. ೪೦೦ ದೊರೆಯುವುದಾಗಿಯೂ, ಇಲ್ಲಿಯ ವರ್ತಕರ ಪೈಕಿ ಮ| ರಾ| ಉಳ್ಳಾಲ ಲಕ್ಷ್ಮಣ ಸಾಂತಯ್ಯ ಕಿಣಿ ಮತ್ತು ಮ| ರಾ| ಪುರುಷೋತ್ತಮ ನಾನಜಿ ಶೇಟರು ಬೆಳ್ಳಿಯ ಬಟ್ಟಲುಗಳನ್ನು ಉಚಿತವಾಗಿ ಕೊಡಲು ಕೊಟ್ಟಿರುವರಾಗಿಯೂ ತಿಳಿಯುತ್ತೇವೆ. ತಮ್ಮ ಉದ್ಯೋಗದಲ್ಲಿ ಹೆಚ್ಚಿನ ದಕ್ಷತೆಯಿಂದ ಕೆಲಸಮಾಡಿದ ಅನೇಕ ಪೋಲೀಸ ಉದ್ಯೋಗಸ್ಥರಿಗೂ, ಪೋಲೀಸ ಉದ್ಯೋಗಸ್ಥರಿಗೆ ತಮ್ಮ ಕೆಲಸಗಳನ್ನು ನೆರವೇರಿಸುವುದರಲ್ಲಿ ಸಹಾಯಮಾಡಿದ ಇತರರಿಗೂ ಇನಾಮುಗಳನ್ನು ಈ ಸಮಯದಲ್ಲಿ ಹಂಚಲಾದವು. ನಂತರ ಈ ಪಂದ್ಯಾಟಗಳ ಬಗ್ಗೆ ಸಹಾಯಮಾಡಿದ ಗೃಹಸ್ಥರಿಗೂ ನೆರೆದ ಸಭಿಕರಿಗೂ ವಂದನೆಗಳು ಅರ್ಪಿಸಲಾದವು.

ಉಡುಪಿಯ ತಹಸಿಲ್‌ದಾರರಾದ ಮ| ರಾ| ರಾ| ರಾಮನ್ ನಾಯರರು ಬಳ್ಳಾರಿಯ ಸ್ಪೆಶ್ಯಲ್ ಡಿಪ್ಯುಟಿ ಕಲೆಕ್ಟರರಾಗಿ ನೇಮಕವಾಗಿ, ಇವರ ಹುದ್ದೆಯಲ್ಲಿ ರಜೆಯ ಮೇಲಿದ್ದ ಕಾಸರಗೋಡು ಸ್ಟೇಶನರಿ ಸಬ್ ಮೆಜಿಸ್ಟ್ರೇಟ ಯಂ. ರಾಘವೇಂದ್ರರಾಯರು ಮೊಕ್ತ್ಯಾರರಾಗಿದ್ದಾರೆ.

ಕಳೆದ ಆದಿತ್ಯವಾರ ಕೊಸ್ಮೊಪೊಲಿಟನ್ ಕ್ಲಬ್ಬಿನಲ್ಲಿ ಮ. ರಾ. ಗಂಗೊಳ್ಳಿ ಕೃಷ್ಣರಾಯರ ಅಧ್ಯಕ್ಷತೆಯಲ್ಲಿ ಒಂದು ಸಭೆಕೂಡಿ ನ್ಯಾಯವಿಧಾಯಕ ಸಭೆಗೆ ವೋಟರರು ತಮ್ಮ ವೋಟುಗಳನ್ನು ಈಗ ಕೊಡುವುದು ಅನುಚಿತವೆಂದು ಭಾಷಣಗಳಾಗಿ, ಕಡೇಗೆ ಬರುವ ತಾ ೩೦ನೇ ದಿನ ವೋಟರರು ಪೋಲಿಂಗ ಸ್ಟೇಶನುಗಳಿಗೆ ಹೋಗಿ ವೋಟು ಕೊಡದೇ ಇದ್ದು ಆ ದಿನವನ್ನು ರಾಷ್ಟ್ರೀಯ ಸೂತಕದ ದಿನವಾಗಿ ಆಚರಿಸಬೇಕಾಗಿ ನಿರ್ಣಯವಾಯಿತು.

ಬರುವ ತಾ. ೨೮ನೇ ಆದಿತ್ಯವಾರ ಸಾಯಂಕಾಲ ೫ ಗಂಟೆಗೆ ಲೈನ ಮೈದಾನಿನಲ್ಲಿ ಹೊಸ ಕೌನ್ಸಿಗಳ ಬಹಿಷ್ಕಾರದ ಕುರಿತು ಕಡೇಯ ಸಭೆಯು ಕೂಡುವುದು.

ಕಳೆದ ಶುಕ್ರವಾರ ಗವರ್ನಮೆಂಟ ಕೊಲೇಜಿನ ವರ್ಧಂತಿ ಉತ್ಸವವು ಮ| ರಾ| ವಿ. ಪಿ. ರಾಯರ ಅಧ್ಯಕ್ಷತೆಯಲ್ಲಿ ಯೋಗ್ಯವಾಗಿ ಜರಗಿತು. ಕ್ರಮದಂತೆ ಕೊಲೇಜಿಯ ಗತವರುಷದ ರಿಪೋರ್ಟನ್ನು ಓದಿ ಆದ ತರುವಾಯ ನೆರದ ಸಭಿಕರನ್ನು ಆನಂದ ಗೊಳಿಸಲು 'ಪ್ರೇಮವೇ ಯೋಗ್ಯ ವೈದ್ಯ'ವೆಂಬ ನಾಟಕವನ್ನು ಅಭಿನಯಿಸಿ ಅಂದಿನ ಸಮಾರಂಭವನ್ನು ಮುಗಿಸಿದರು.

ಪ್ರಿಯರೇ,

ಈ ಕೆಳಗಿನ ವಿನಂತಿಯು ಇದೇ ತಿಂಗಳ ತಾ. ೯ನೇ 'ಕೇಸರಿ' ಪತ್ರದ ಸಂಚಿಕೆಯಲ್ಲಿ ಪ್ರಕಟವಾದುದನ್ನು ನಮ್ಮ ಜಿಲ್ಲೆಯ ಓಟರುಗಳಲ್ಲಿಯೂ ಪ್ರಕಟ ಮಾಡಿದರೆ ಬಹಳ ಪ್ರಯೋಜನವಾದೀತೆಂದು ಅಭಿಪ್ರಾಯಪಟ್ಟು, ಅದನ್ನು ಕನ್ನಡದಲ್ಲಿ ಬರೆದು ತಮ್ಮಲ್ಲಿಗೆ ಕಳುಹಿಸಿರುವೆನು. ಇದನ್ನು ದೊಡ್ಡ ಅಕ್ಷರದಲ್ಲಿ ಮುಂದೆ ತೋರುವ ಸ್ಥಳದಲ್ಲಿ ಪ್ರಕಟಿಸಿ ದೇಶಹಿತಕಾರ್ಯವನ್ನು ಕೈಕೊಳ್ಳುವರಾಗಿಯೂ ಪ್ರೋತ್ಸಾಹಿಸುವರಾಗಿಯೂ ನಂಬಿ ಬರಕೊಂಡಿರುತ್ತೇನೆ.

UDIPI, } ಇತಿ ತಮ್ಮ ಹಿತೇಚ್ಛು,
ತಾ. 17–11–02 } T. PURUSHOTHAM PAI.

ಮತದಾರ (ಓಟರ) ರಿಗೆ ವಿನಂತಿ.

ನವಂಬರ ತಾ. ೩೦ನೆ ದಿನವು ರಾಷ್ಟ್ರೀಯ ಸೂತಕದ್ದು ಎಂತ ಎಣಿಸಿರಿ.

ಈ ದಿನ ಮನೆಯಿಂದ ಹೊರಗೆ ಹೊರಡದಿರಿ.

ಬರುವ ಚುನಾವಣೆಯಲ್ಲಿ ಓಟುಗಳನ್ನು ಕೊಡದಾರದಾಗಿ ರಾಷ್ಟ್ರೀಯ ಸಭೆಯ ಅಭಿಪ್ರಾಯ ಉಂಟು.

ಈ ಅಭಿಪ್ರಾಯವನ್ನು ಮನ್ನಿಸಬೇಕಾಗಿ ಎಲ್ಲಾ ಪ್ರಾಂತ್ಯದ ರಾಷ್ಟ್ರೀಯ ಮುಖಂಡರು ನಿಶ್ಚಯಿಸಿದ್ದಾರೆ.

ಓಟು ಕೊಡುವ ಹಕ್ಕಿನಂತೆಯೇ ಓಟುಕೊಡದೆ ಇರುವ ಹಕ್ಕು ಓಟುದಾರರಿಗೆ ಇರುವುದು.

ಈ ಹಕ್ಕನ್ನು ಈ ಸಮಯದಲ್ಲಿ ಉಪಯೋಗಿಸದೆ ಇರುವುದರಿಂದ ರಾಷ್ಟ್ರೀಯ ... ಉಂಟು.

ಓಟು ಕೊಡಲಿಕ್ಕೆ ಹೋಗದೆ ಇರುವುದು ಎಂದಿಗೂ ತಪ್ಪೇಯು ಆಗುವುದಿಲ್ಲ.

ಆದರೆ ಯಾರ ಮೇಲೂ ಬಲಾತ್ಕಾರ ಜುಲುಮು ವಗೈರೆ ಮಾಡಬಾರದು.

ಈಗ ಓಟು ಕೊಡುವುದರಿಂದ ಸಿಕ್ಕಬಹುದೆಂತ ಎಣಿಸುವ ಲಾಭಕ್ಕಿಂತಲೂ ಓಟು ಕೊಡದೆ ಇರುವುದರಿಂದಲೇ ಹೆಚ್ಚಿನ ಲಾಭ ಉಂಟು.

ರಾಷ್ಟ್ರೀಯ ಸ್ವಾತಂತ್ರ್ಯತೆಯನ್ನು ಅಪೇಕ್ಷಿಸುವ ಅನೇಕ ರಾಜ್ಯದವರು ಈ ಮಾರ್ಗವನ್ನು ಅನುಸರಿಸಿರುವರು.

ಪಂಜಾಬಿನ ಅತ್ಯಾಚಾರ ಮತ್ತು ಖಿಲಾಫತ್ತಿನ ಪ್ರಕರಣ ಸಂಬಂಧವಾದ ಅನ್ಯಾಯವನ್ನು ಸರಿಪಡಿಸದೆ ವಿನಹಾ ಸುಧಾರಣೆಗಳನ್ನು ತೆಗೆದುಕೊಳ್ಳಕೂಡದೆಂದು ರಾಷ್ಟ್ರೀಯ ಸಭೆಯ ನಿಶ್ಚಿತವಾದ ಅಭಿಪ್ರಾಯ.

ಹಿಂದೂ ಮತ್ತು ಮುಸಲ್ಮಾನ ಬಂಧುಗಳು ಈ ವಿಷಯದಲ್ಲಿ ಏಕಮತ್ಯದವರಾಗಿದ್ದಾರೆ.

ರಾಷ್ಟ್ರೀಯ ಸ್ವಾಭಿಮಾನವನ್ನು ತೋರಿಸುವ ಈ ಸುಸಂದರ್ಭವನ್ನು ಯಾರೂ ಕಳೆದುಕೊಳ್ಳಬಾರದು.

ನವಂಬರ ತಾ. ೩೦ನೆಯ ದಿವಸ ದೇವಸ್ಥಾನದಲ್ಲಿಯೂ ಮಸೀದಿಯಲ್ಲಿಯೂ ವ್ಯಾಖ್ಯಾನ, ಕೀರ್ತನೆ, ಪುರಾಣ, ಭಜನೆ ವಗೈರೆ ಮಾಡಿಕೊಂಡು ದೇಶಹಿತವನ್ನು ಮತ್ತು ದೇವರ ಪ್ರಾರ್ಥನೆಯನ್ನು ಮಾಡುವುದರಲ್ಲಿಯೇ ಸಮಯವನ್ನು ವಿನಿಯೋಗಿಸಬೇಕು.

THE ALL INDIA

Saraswat Brahmana Sabha

of Bombay

TO

My brethren, and sisters of the Gowd and Chitrapur Sections, of my community at Mangalore, Buntwal and Manjeshwar.

Dear brethren and sisters,

On the eve of my departure I wish to place on record my deep sense of gratitude, both on my own behalf and on behalf of the All-India Saraswat Brahman Sabha of Bombay, for the cordial welcome which I have experienced at the hands of those of you with whom I had the privilege to come into contact during my stay in your midst. It was a great pleasure to me to visit my native district after an interval of [illegible] years, on one of the most pleasant missions in my life. I should have liked to visit many more places in the district, but I regret I had to drop the idea for want of time. The response I have so far received in the way of membership of THE ALL INDIA SARASWAT BRAHMAN SABHA is by all means encouraging, and I take this opportunity to thank my brethren and sisters in both sections of my community who have so readily responded to its call and those who have assisted me in securing new members for the Sabha. I have no doubt its membership in this district as elsewhere will continue to increase, and I am sure you will join me in my prayer that we, Saraswats, scattered and disbanded as we are to-day, will hereafter, through mutual sympathy and hearty co-operation among the members of the Sabha, attain our [illegible] social unity as members of the sa[illegible] from one end of India to the [illegible]!

I rem[illegible]

ವೆಲ್ತ್ ಸ್ಟೋರ್ಸ್,
(ಬೆಸೆಲ್ ಮಿಶನ್ ಟೋಪ್).

MANGALORE, }
25th Nov. 1920. }

[illegible]

ಸಣ್ಣ ಕನ್ನಡ ಜಿಲ್ಲೆಯ ವೋಟರಿಗೆ ವಿನಂತಿ.

[illegible]

(೧) ಮಹಾತ್ಮಾ ಗಾಂಧಿಯವರು ಪ್ರತಿಪಾದಿಸಿದ ನಿಸ್ಸಹಕಾರದ ತತ್ವಗಳನ್ನು ಅವರಂತೆ ಸ್ವಾರ್ಥತ್ಯಾಗದಿಂದ ಅವಲಂಬಿಸಿ ನಡೆಕೊಳ್ಳಲಿಕ್ಕೆ ಪ್ರಪಂಚ ಹೊಂದಿಕೊಂಡಿರುವ ನಮಗೆ ಸಾಧ್ಯ ಉಂಟೋ?

(೨) ಒಂದು ವೇಳೆ ಆ ರೀತಿ ನಡಕೊಳ್ಳಲಿಕ್ಕೆ ಸಾಧ್ಯ ಆಗುವುದಾದರೂ ಯಾ ತತ್ಕಾಲ ಸಾಧ್ಯ ಮಾಡುತ್ತಿದ್ದರೆ ಆ ಪ್ರಸಂಗದಿಂದ ಹಿಂದೂದೇಶಕ್ಕೆ ನಿಜವಾಗಿ ಪ್ರಯೋಜನ ಸಿಗಬಹುದೋ? ಅಥವಾ ಅದರಿಂದ ರಾಜ್ಯಭಾರದ ಕ್ರಮಗಳು ಸರಿಯಾಗಿ ನಡೆಯದೆ ಹೆಚ್ಚಿನ ಅನರ್ಥಗಳು ಸಂಭವಿಸಿ ಪ್ರಜಾ ಜನರು ವಿಶೇಷ ತೆರದ ಸಂಕಷ್ಟಗಳು ಅನುಭವಿಸ ಬೇಕಾಗುವುದೋ?

(೩) ಕಾಲೇಜುಗಳ ಹೋಗುವ ಹುಡುಗರು ಶಾಲೆಗಳನ್ನು ಬಿಟ್ಟು ತಿರುಗಾಡುವಂತೆ ಮಾಡಿದ್ದರೆ ದೇಶಕ್ಕೆ ನಿಜವಾಗಿ ಎಷ್ಟು ಒಳ್ಳೇದಾದೀತು?

(೪) ನಿಸ್ಸಹಕಾರ ತತ್ವಗಳನ್ನು ಅನುಸರಿಸಿದ ಮಾತ್ರದಿಂದ ಭೂಲೋಕದಲ್ಲಿ ಎಲ್ಲಿಯಾದರೂ ಈ ವರೆಗೆ ಸ್ವರಾಜ್ಯ ಪ್ರಾಪ್ತವಾದ ದೃಷ್ಟಾಂತ ಉಂಟೋ?

(೫) ಮಹಾತ್ಮಾ ಗಾಂಧಿಯವರು ಉಪದೇಶಿಸುವ ತತ್ವಗಳನ್ನು ನಮ್ಮ ದೇಶದಲ್ಲಿ ಯಾವ ಕಡೆಯಲ್ಲಾದರೂ ಈ ವರೆಗೆ ನಿಜವಾಗಿ ಸರಿಯಾಗಿ ಅನುಸರಿಸಲಿಕ್ಕೆ ಬಿಟ್ಟುಬಿಟ್ಟಿರುವಂತ ಹೆಚ್ಚು ಮುಂದಿ ಯಾವಾಗಲೂ ಪ್ರಯತ್ನಿಸಿದ್ದು ತಿಳಿದು ಬಂದಿದೆಯೋ, ಮ ರಾ ರಾ ಸದಾಶಿವರಾಯರಿಗಾದರೂ ಆ ರೀತಿ ವರ್ತಿಸಲು ಸಾಧ್ಯವಾಗಿದೆಯೋ?

(೬) ಒಂದು ವೇಳೆ ಮ ರಾ ರಾ ಸದಾಶಿವರಾಯರು ಬೋಧಿಸುವಂತೆ ವೋಟುಗಳನ್ನು ಕೊಡದೆ ಇದ್ದರೂ ನ್ಯಾಯವಿಧಾಯಕ ಸಭೆಗಳಿಗೆ ಮೆಂಬರರು ಚುನಾಯಿತರಾಗದೆ ಬಾಕಿಯಾದಾರೇ? ಮತ್ತು ಆ ದೆಸೆಯಿಂದ ಬ್ರಿಟಿಷ ಸರಕಾರದ ಆಳ್ವಿಕೆಯ ಯಾವತ್ತು ಕಾರ್ಯಗಳು ನಡಿಸದ ಉಳಿದೀತೇ?

(೭) ಅಂಥಾ ನಿಸ್ಸಹಕಾರದ ಬದಲಾಗಿ ನಮ್ಮ ಹಿಂದೂದೇಶದ ಪೂರ್ಣ ಹಿತ ಚಿಂತಕರಾಗಿ ಹೆಚ್ಚಿನ ಕೀರ್ತಿ ಹೊಂದಿ ಸ್ವರ್ಗಸ್ಥರಾದ ಗೋಪಾಲ ಕೃಷ್ಣಗೋಖಲೆಯವರ ಶಿಷ್ಯರಾಗಿ ಅವರು ತೋರಿಸಿ ಕೊಟ್ಟ ಮಾರ್ಗವನ್ನೇ ಅವಲಂಬಿಸಿ ಹಿಂದೂಸ್ಥಾನದ ಉನ್ನತಿಗೋಸ್ಕರವಾಗಿ ಸ್ವಾರ್ಥತ್ಯಾಗವಾಡಿ ಸಾಹಸಪಡುತ್ತಾ ಇರುವ ಮಾನ್ಯ ಶ್ರೀನಿವಾಸ ಶಾಸ್ತ್ರಿಗಳು ಮೊದಲಾದ ನಮ್ಮ ದೇಶದ ಅನೇಕ ಮುಖಂಡರು ಮತ್ತು ನಮ್ಮ ಹಿಂದೂದೇಶಕ್ಕೆ ಸ್ವರಾಜ್ಯ ಸಿಗಬೇಕೆಂಬ ಪ್ರಮೇಯದಲ್ಲಿ ಹೆಚ್ಚಿನ ಆಸಕ್ತಿಯಿಂದ ನಮಗೆ ಸಹಾಯ ಮಾಡುತ್ತಿರುವ ಬ್ರಿಟಿಷ ಪಾರ್ಲಿಮೆಂಟ ಸಭೆಯ ಮೆಂಬರರಾಗಿರುವ ಕರ್ನಲ್ ವೆಜ್‌ವುಡ್ ಎಂಬವರು ಸಹ ಹೇಳುವ ತೆ ನಾವು ಹೊಸ ಸುಧಾರಣೆಯ ಕ್ರಮಗಳಿಗೆ ಅನುಸಾರವಾಗಿ ಏರ್ಪಡಿಸಲ್ಪಡುವ ನ್ಯಾಯವಿಧಾಯಕ ಸಭೆಗಳಿಗೆ ಯೋಗ್ಯ ಮೆಂಬರರನ್ನು ಚುನಾಯಿಸಿ ಕಳುಹಿಸಿ ಕೊಟ್ಟು ನಮಗೆ ಸಿಕ್ಕಿದ ಅಧಿಕಾರಗಳನ್ನು ನಾವು ಸರಿಯಾಗಿ ಉಪಯೋಗಿಸಿಕೊಂಡು ನಮ್ಮ ಪ್ರಯೋಜನದ ಬಗ್ಗೆ ಬೇಕಾದ ಹೊಸ ಕಾಯಿದೆ ಕಾನೂನುಗಳನ್ನು ಏರ್ಪಡಿಸಿ ಇನ್ನಷ್ಟು ಹೆಚ್ಚಿನ ಅಧಿಕಾರಗಳಿರುವ ಸ್ವರಾಜ್ಯ ಹೊಂದಿ ಬ್ರಿಟಿಷ ಸರಕಾರದ ಉದ್ಯೋಗಸ್ಥರಿಂದ ಉಂಟಾಗುವ ಅನ್ಯಾಯಗಳನ್ನು ಹೋಗಲಾಡಿಸಿಕೊಳ್ಳಲಿಕ್ಕೆ ಪ್ರಯತ್ನಿಸುವುದು ಉಚಿತವಲ್ಲವೇ?

ಒಬ್ಬ ಹಳ್ಳಿಯ ವೋಟರ್.

ಅಯ್ಯಾ,

ನಮ್ಮ ಸುಳ್ಯದಲ್ಲಿ ಎರಡು ಜನ ವಿಲ್ಲೇಜ್ ಪೋಲೀಸುಮೆನುಗಳಿರುವರಲ್ಲಾ! ಇವರ ಕೆಲಸವೇನು? ದೂರದ ವಿಶಾಸದಾರರ ಲೋಟನವನ್ನು ಹತ್ತಿರದ ಜೋಳಿಗೆ ದಾನ ಕೊಡುವುದು, ಆ ಹತ್ತಿರದವರ ಕಾಗದ ಹೆಚ್ಚು ಕಷ್ಟಪಟ್ಟು ಎರಡು ಮೂರು ವಾರದಲ್ಲಿ ತಪ್ಪಿಸುವುದು, ಗರೀಬರು ಬರೆವ ಕಾಗದವಂತ ಗೋಕ್ಕಾದರೆ ಗುಟ್ಟಿನಿಂದ ಚಿಟ್ಟಾಗುವುದು. ಆದ್ದರಿಂದ ಗರೀಬರು ಅವರನ್ನು ಕೇಳಿದರೆ ಅವರೇ ದೊಡ್ಡವರು, ಪೋಸ್ಟ ಇಲಾಖೆಯವರು ನಮ್ಮ ತಲೆ ತೆಗೆಯುತ್ತಾರೇನು ಎಂದು ಹೆದರಿಸುವರು. ಆದರಿಂದ ನಮ್ಮ ಮಾತೆಯೋ ಜಾದಿಯಲ್ಲಿರುವ ಸರಕಾರದವರಾದರೂ ಈ ವಿಷಯ ತನಿಖೆ ಮಾಡಲೇ ಮಾಡಬೇಕಾಗಿದೆ.

ಸುಳ್ಯ ಗ್ರಾಮವಾಸಿ.

ಸ್ವಾಮಿ, ಸ್ವದೇಶಾಭಿಮಾನಿ ಪತ್ರಕರ್ತರೇ,

ನಮ್ಮ ಹಳ್ಳಿಗಳ ನಿವಾಸಿಗಳ ಹಿತಕ್ಕಾಗಿ ಈ ಕೆಳಗಿನ ಎರಡು ಮಾತುಗಳಿಗೆ ತಮ್ಮ ಪತ್ರದಲ್ಲಿ ಎಂಟಿಕ್ ಸ್ಥಳ ದೊರತರೆ ನಾನು ಕೃತಾರ್ಥನಾಗುವೆನು.

ಹಳ್ಳಿಯ ಪಂಚಾಯತ ಕೋರ್ಟುಗಳಿಗೆ ಚಿಕ್ಕ ಕ್ರಿಮಿನಲ್ ಮತ್ತು ಸಿವಿಲ್ ವ್ಯಾಜ್ಯಗಳನ್ನು ತನಿಖೆ ನಡಿಸಿ ಇತ್ಯರ್ಥ ಪಡಿಸಲು ಅಧಿಕಾರ ಸಿಕ್ಕಿದ್ದು ಬಹಳ ಅನುಕೂಲ ಮಾತ್ರವಲ್ಲದೆ ಉಚಿತವೆಂದೇ ಸರಿ. ಈಗ ಈ ಪ್ರಕಾರ ಕೆಲವು ಹಳ್ಳಿಗಳಲ್ಲಿ ಮೂರು ನಾಲ್ಕು ಗ್ರಾಮಗಳಿಗೊಂದು ಪಂಚಾಯತ ಕೋರ್ಟಿನಂತೆ ಸಾಧಾರಣವಾಗಿ ಏರ್ಪಡಿಸುತ್ತಾ ಬಂದದ್ದು ಸಂತೋಷವೇ. ಇದರಿಂದ ವಿಶೇಷತಃ ಮುಫಸ್ಸಿಲ್ ಕೋರ್ಟುಗಳಿಗೆ, ವೃಥಾ ವಿರಾಮ ಸಿಗುವುದಲ್ಲದೆ ಬಡಜನರ ಅಷ್ಟು ಧನವು ಬಿಲಾ ಖರ್ಚಾಗದೆ ಉಳಿಯುವುದು, ಕಷ್ಟಸಹಿತವಾಗಿ ತಮ್ಮ ಅಮೂಲ್ಯವಾದ ಸಮಯವು ಇತರ ಸ್ವಕಾರ್ಯಗಳಿಗೆ ಉಪಯೋಗಿಸುವುದಕ್ಕೆ ಸಿಕ್ಕಿದ ಹಾಗಾಯಿತು.

ಮಂಗಳೂರು ತಾಲೂಕಿನ ಸೇರಿದ ಕೋಟೆಕಾರು, ತಿಪ್ಪ, ತಲಪಾಡಿ ಮತ್ತು ಮಂಜೇಶ್ವರ ಗ್ರಾಮಗಳಿಗೆ ಒಂದು ಪಂಚಾಯತ ಕೋರ್ಟನ್ನು ಏರ್ಪಡಿಸಿದರೆ ಈ ಹಳ್ಳಿಗಳ ನಿವಾಸಿಗಳಿಗೆ ಪಂಚಾಯತ ಕೋರ್ಟಿನ ಅತ್ಯಂತ ಪ್ರಯೋಜನವು ಲಭಿಸೀತು. ಆದ್ದರಿಂದ ಇದರ ಸಂಬಂಧವಾದ ಅಧಿಕಾರಸ್ಥರು ಬಡ ನಿವಾಸಿಗಳ ಅಪೇಕ್ಷೆಯನ್ನು ಶೀಘ್ರದಲ್ಲಿ ನೆರವೇರಿಸಬೇಕಾಗಿ ವಿನಂತಿ.

ತಾ 23–11–1920. ಗ್ರಾಮಾಭಿಮಾನಿ.

[illegible]

ಒಂದು ಕಡೆಯಿಂದ ಮ ರಾ ರಾ ಕಾರ್ನಾಡ ಸದಾಶಿವ ರಾಯರು ಅಸಹಕಾರಿತೆಯ ತತ್ವಕ್ಕೆ ಅನುಸಾರವಾಗಿ ವೋಟು ಕೊಡಬೇಡಿರಿ ಎಂದು ಹಳ್ಳಿಹಳ್ಳಿಗಳಲ್ಲಿಯೂ ಭಾಷಣ ಮಾಡುತ್ತಿರುವಾಗ ನಮ್ಮ ಲೆಜಿಸ್ಲೇಟಿವ್ ಕಾನ್ಸಿಲು ಮೆಂಬರಿಕೆಯ ಮೂವರು ಉಮೇದ್ವಾರರಿದ್ದು ಕೂಡಾ ಸಾಪ್ಪಯಾತಕ್ಕೆ ವೋಟು ಕೊಡಬೇಕು, ಎಂಬ ವಿಷಯದಲ್ಲಿಯಾಗಲಿ ಅಸಹಕಾರಿತೆಯನ್ನು ಖಂಡಿಸಿಯಾಗಲಿ ಒಂದೇ ಒಂದು ಭಾಷಣ ಕೊಟ್ಟಿಲ್ಲವಲ್ಲ! ಅಥವಾ ನಮ್ಮ ಜಿಲ್ಲೆಯ ಸಂಕಷ್ಟಗಳು ಯಾವುವು, ಅವುಗಳಿಗೋಸ್ಕರ ಯಾವ ಸಲಹೆಗಳನ್ನು ನಾವು ಪಡೆಯಬೇಕಾಗಿದೆ, ಅದನ್ನು ಸಂಪಾದಿಸಲು ಯಾವ ರೀತಿಯಿಂದ ಸಾಧ್ಯವಾಗಬಹುದು ಎಂಬ ಒಂದೇ ಒಂದು ಮಾತಾದರೂ ಇವರ ಪ್ರಕಟಣೆ ಪತ್ರದಲ್ಲಿ ಕೂಡಾ ಇಲ್ಲವಲ್ಲ! ಅಂದರೆ ಇವರು [illegible] ನೋಡದವರು ಅಥವಾ ದೊಡ್ಡ ಪರಿಕ್ಷೆಗಳನ್ನು [illegible] ಇಂಗ್ಲಿಷ ಬಲ್ಲವರಾಗಾಯಿತು. ಆದರೆ ಇಂಗ್ಲಿಷ್ ಭಾಷೆಯ ಪರಿಚಯವು ಅಷ್ಟು ಚೆನ್ನಾಗಿ ಇಲ್ಲದ ನನ್ನಂಥವನಿಗೆ ಈ ಉಮೇದ್ವಾರರು ಅದರ ತಾತ್ಪರ್ಯವನ್ನಾಗಲೀ ಅಥವಾ ತಮ್ಮ ಸ್ವಂತ ಅನುಭವವನ್ನಾಗಲೀ ಇಲ್ಲಿ ಸಭೆ ಸೇರಿಸಿ ವಿವರಿಸಬಹುದು [illegible]

ಕಾಸರಗೋಡು ತಾಲೂಕಿನ ಪ್ರಾಥಮಿಕ ಶಾಲೆಯ ಉಪಾಧ್ಯಾಯರ ಸಮ್ಮೇಲನ.

ಇಲ್ಲಿಯ ತಾಲೂಕು ಬೋರ್ಡು ಮೆಂಬರರೂ ವಕೀಲರೂ ಆಗಿರುವ ಮ ರಾ ರಾ ಎಚ್ ಎಸ್ ಕಾಮತರವರ ಅಧ್ಯಕ್ಷತೆಯಲ್ಲಿ ಕಾಸರಗೋಡು ತಾಲೂಕಿನ ಪ್ರಾಥಮಿಕ ಶಾಲೆಯ ಉಪಾಧ್ಯಾಯರೆಲ್ಲರೂ ಸಭೆಗೂಡಿ ಪ್ರಾಥಮಿಕ ಶಾಲಾ ಉಪಾಧ್ಯಾಯರ ಸಂಘವೊಂದನ್ನು ಕಳೆದ ತಾ ೩೧ರಲ್ಲಿ ಸ್ಥಾಪಿಸಿರುವರು. ಈ ಸಭೆಯಲ್ಲಿ ಕೆಳಗೆ ಕಾಣಿಸಿದ ವಿಷಯಗಳು ತೀರ್ಮಾನವಾದವು.

೧. ಕಾಸರಗೋಡು ರೇಂಜಿನ ಶಾಲಾ ಸಬ್ ಅಸಿಸ್ಟೆಂಟ ಇನ್ಸ್ಪೆಕ್ಟರು ಈ ಸಂಘದ ಅಧ್ಯಕ್ಷರಾಗುವಂತೆಯೂ, ಸುಪರ್‌ವೈಜರನ್ನು ಉಪಾಧ್ಯಕ್ಷ ಕೋಶಾಧ್ಯಕ್ಷರಾಗುವಂತೆಯೂ ಕೇಳಿಕೊಳ್ಳಬೇಕು ಮತ್ತು ಸಂಘದ ಪರವಾಗಿ ವಸೂಲಾಗುವ ಹಣವನ್ನು ಸೇವಿಂಗ್ಸ ಬ್ಯಾಂಕಿನಲ್ಲಿ ಸಂಘದ ಹೆಸರಲ್ಲೇ ಇಡಬೇಕು.

೨. ಈ ಸಂಘದ ಕಾರ್ಯದರ್ಶಿಗಳಾಗಿ ೨ ಜನ ಸದಸ್ಯರನ್ನೂ ಕಾರ್ಯನಿರ್ವಾಹಕ ಸಭೆಗೆ ೧೧ ಜನ ಸದಸ್ಯರನ್ನೂ ಚುನಾಯಿಸಲಾಯಿತು.

೩. ಪ್ರತಿಯೊಬ್ಬ ಸದಸ್ಯನು ಪ್ರವೇಶ ಹಣಸಲು ೧ ಆಣೆ ಮತ್ತು ತನ್ನ ಮಾಸಿಕ ಸಂಬಳದಲ್ಲಿ ಪ್ರತಿಯೊಂದು ರೂಪಾಯಿಗೆ ೧ ಪೈಯಂತೆ ವಂತಿಗೆಯನ್ನು ಪ್ರತಿ ತಿಂಗಳಲ್ಲಿಯೂ ಕೊಡಬೇಕು.

೪. ಈ ಸಂಘದ ಪ್ರತಿನಿಧಿಯೊಬ್ಬನಿಗೆ ತಾಲೂಕು ಬೋರ್ಡು ಸಭೆಗಳಲ್ಲಿಯೂ ಮುಂದೆ ಬರುವ ಜಿಲ್ಲಾ ವಿದ್ಯಾಪರಿಷತ್ತು ಸಭೆಗಳಲ್ಲಿಯೂ ಪ್ರವೇಶವಿರಬೇಕು. ಅತನಿಗೆ ಈ ಪ್ರಯುಕ್ತ ಭತ್ತೆ ಸಿಗಬೇಕು.

೫. ಉಪಾಧ್ಯಾಯರು ಖಾಸಗಿಯಿಂದ ಕಲಿತು ಪಾಸಾಗುವಂತೆ ಪರೀಕ್ಷೆಗಳನ್ನು ಇಡಬೇಕು. ಅವರಿಗೆ ವರುಷಕ್ಕೆ ಮನೆ ಬಾಡಿಗೆಗೋಸ್ಕರ ೬೦ ರೂಪಾಯಿಗಳನ್ನಾಗಲೀ ಅಥವಾ ಬಾಡಿಗೆಯಿಲ್ಲದೆ ಮನೆಗಳನ್ನಾಗಲೀ ಒದಗಿಸಿಕೊಡಬೇಕು ಅವರ ಮಕ್ಕಳಿಗೆ ಸಂಬಳವಿಲ್ಲದೆ ಸೆಕೆಂಡರಿ ವಿದ್ಯಾಭ್ಯಾಸ ಕೊಡಬೇಕು ಮತ್ತು ಸದ್ಯದಲ್ಲೇ ನಡೆಯುವ ಪ್ರಾಥಮಿಕ ಶಾಲಾ ಉಪಾಧ್ಯಾಯರ ಜಿಲ್ಲಾ ಪರಿಷತ್ತಿನಲ್ಲಿ ನಿಶ್ಚೈಸುವ ಮರೆಗೆ ಉಪಾಧ್ಯಾಯರಿಗೆ ಸಂಬಳ ದೊರೆಯಬೇಕು.

K M ZANULABDDIN SAHIB
AND B LAKSHMANA RAO
Joint Secretaries,
Board School, Kasargode, S K

ಪತ್ರವ್ಯವಹಾರ.

(see letter text above)

[illegible]

ತನ್ನ ಮುಂದಿನ ಕಾರ್ಯಗಳಲ್ಲಿ ಸರ್ಕಾರವು ತನ್ನನ್ನು [illegible] ತನ್ನ ಈ ಉದ್ಯೋಗದ ಕಾರ್ಯಗಳು ಅವರ ಹಿತಕ್ಕಾಗುವಂತೆ ತನ್ನನ್ನು [illegible] ಸಹಾಯ ಮಾಡಿ ಉತ್ತೇಜಿಸುವಂತೆ ಕೂಡಿದವರನ್ನು ಅಪೇಕ್ಷಿಸಿ ತನ್ನ ಭಾಷಣವನ್ನು ಮುಗಿಸಿದರು. ನಂತರ ಕೂಡಿದವರಿಗೆ ತಾಂಬೂಲಾದಿಗಳು [illegible] ನಂತರ ಈ ಸಂಭ್ರಮವು ಕೊನೆಗೊಂಡಿತು.

ಅಂಗಡಿ ಮೊಗರು — ಇಲ್ಲಿಯ ಮತ್ರಸತುಲ್ ಇಸ್ಲಾಂ ಶಾಲೆಯ ವರ್ಷೋತ್ಸವವು ಮಾನ್ಯ ಮಹಮ್ಮದ್ ಚೆಮ್ನಾಡು ಸಾಹೇಬ ಬಹದೂರರವರ ಅಧ್ಯಕ್ಷತೆಯಲ್ಲಿ ಜರಗಿತು. ಜನಾಬ್ ಕೆ ಎಸ್ "ಮಮ್ಮಂಞ" ಮೌಲವಿಯವರು ಉಪನ್ಯಾಸ ಮಾಡಿದರು. ಮತ್ತು ಶಾಲಾ ಮಕ್ಕಳು ಸಂಭಾಷಣೆಗಳಿಂದಲೂ, ಉಪನ್ಯಾಸಗಳಿಂದಲೂ ಸಭಿಕರನ್ನು ಆನಂದಗೊಳಿಸಿದರು.

ಆದಾಯ ತೆರಿಗೆ.

೧೯೧೯ ೨೦ನೆ ವರ್ಷದ ವರೆಗಿನ ಮೂರು ವರ್ಷಗಳಲ್ಲಿ ಆದಾಯ ತೆರಿಗೆಯ ಜಮೆಯನ್ನು ವಿಮರ್ಶಿಸಿ ಮದ್ರಾಸಿನ ರೆವಿನ್ಯೂ ಬೋರ್ಡಿನವರು ಬರೆದ ರಿಪೋರ್ಟನ್ನು ಉಲ್ಲೇಖಿಸಿ ಮದ್ರಾಸು ಪಬ್ಲಿಸಿಟಿ ಬ್ಯುರೋದಿಂದ ಒಂದು ಪತ್ರವು ಪ್ರಕಟವಾಗಿದೆ. ಅವರ ಮೇರೆಗೆ ೧೯೧೮ನೆ ಇಸವಿಯ ನಂಬ್ರ VIIನೆ ಏಕ್ಟಿನ ಅನುಗುಣವಾಗಿ ೪ ವಿಶೇಷ ಬದಲಾವಣೆಗಳು ಉಂಟಾದವು. (a) ಆದಾಯ ತೆರಿಗೆಯನ್ನು ಆಯಾ ವರ್ಷದ ವಾಸ್ತವವಾದ ಆದಾಯದ ಮೇಲೆಯೇ ಆಧರಿಸಲಾಯಿತು. (b) ಎಲ್ಲಾ ವಿಧದ ಆದಾಯದ ಮೊತ್ತದ ಮೇಲೆ ಆಧರಿಸಿ ನೂತನ ದರಗಳನ್ನು ಏರ್ಪಡಿಸಲಾಯಿತು. (c) ತನ್ನ ಆದಾಯವು ಇಂತಿಷ್ಟು ಆದೆ ಎಂದು ತೋರಿಸುವ ರಿಟರ್ನ್ ಪಟ್ಟಿಯನ್ನು ತರುವವನ ಮೇಲೆಯೇ ಹೊರಿಸಿ ಅದನ್ನು ನಿರ್ವಹಿಸುವುದರಲ್ಲಿ ತಪ್ಪಿದಲ್ಲಿ ಕಠಿಣ ತರದ ದಂಡನೆಗೆ ಗುರಿಪಡಿಸುವ ಕ್ರಮವನ್ನು ನಿರ್ಧರಿಸಲಾಯಿತು. (d) ತೆರಿಗೆ ಹಾಕುವ ಕ್ರಮ ಮತ್ತು ಅದರ ಮೇಲಣ ಅಪೀಲುಗಳನ್ನು ತೀರ್ಮಾನಿಸುವ ಕ್ರಮವನ್ನೂ ಬದಲಾಯಿಸಲಾಯಿತು.

[illegible]

ಮುಂಬಾಯಿ ಕನ್ನಡ ಧರ್ಮಾರ್ಥ ವಾಚನಾಲಯ ಮತ್ತು ಗ್ರಂಥ ಭಂಡಾರ.

ಪ್ರಿಯ ಕನ್ನಡ ಬಾಂಧವರುಗಳೇ,

"ಮುಂಬಾಯಿ ಕನ್ನಡ ಗ್ರಂಥಾಲಯ ಸಂಘ" ವೆಂಬ ಸಂಸ್ಥೆಗೆ ಮೆಂಬರರ ಬಲವು ದಿನೇದಿನೇ ಕಡಿಮೆಯಾಗುತ್ತಾ ಬಂದು ಅದನ್ನು ನಡಿಸಿಕೊಂಡು ಹೋಗಿಸುವರ ತಕ್ಕ ದ್ರವ್ಯದ ಅನುಕೂಲತೆಯು ಬರಿಗೆ ದೊರಕದೆ ಇದ್ದದ್ದನ್ನು ಕಂಡು ಈ ಕೆಳಗೆ ಹೆಸರು ತೋರುವ ಇಪ್ಪತ್ತು ಮಂದಿಯು ಸದರಿ ಸಂಸ್ಥೆಯ ಮೇಲೆ ಅವರ ಬಿಟ್ಟು ಅದನ್ನು ಮುಂದಕ್ಕೆ ಮೇಲ್ಮಾಡಿಸಿರುವ ಹೆಸರಿನಿಂದ ತಾವಾಗಿಯೇ ನಡೆಸಿಕೊಂಡು ಬರುತ್ತಲೂ ಇನ್ನಾಗೆ ಕನ್ನಡ ಜನ ಪ್ರತಿಯೊಬ್ಬನ ಉಪಯೋಗಕ್ಕೂ ಧರ್ಮಾರ್ಥ ಇರಬೇಕೆಂದು ನಿರ್ಧರಿಸಿರುವ ಕಾರಣ ಕೋಟೆಯೊಳಗಿರುವ ಪೀರಾ ರಸ್ತೆಯಲ್ಲಿರುವ ಜಮಶೇದಾಸ್ ಮಂದಿರದ ಎರಡನೆಯ ಮೋಳಿಗೆಯಲ್ಲಿರುವ ಈ ವಾಚನಾಲಯಕ್ಕೆ ನಿಮಗೆಲ್ಲರಿಗೂ ಸುಸ್ವಾಗತವಿದೆ, ಮಾತ್ರವಲ್ಲ, ಅದರಿಂದ ದೊರೆಯುವ ಪ್ರಯೋಜನವನ್ನು ನೀವು ಹೊಂದದೆ ಇರಬಾರದು ಎಂಬುದು ಪೋಷಕರ ಹಾರ್ದಿಕ ಇಚ್ಛೆಯಾಗಿದೆ.

೨. ವಾಚನಾಲಯವು ಬೆಳಿಗ್ಗೆ ಗಂಟೆ ೮ರಿಂದ ರಾತ್ರಿ ಗಂಟೆ ೮ರ ವರೆಗೆ ಪ್ರತಿ ದಿನವೂ ತೆರೆದಿರುವುದು.

೩. ವಾರ, ಮತ್ತು ಮಾಸ ಪತ್ರಿಕೆಗಳೆಲ್ಲವೂ ವಾಚನಾಲಯದಲ್ಲಿ ಹೊರಗೆ ಮೇಜಿನ ಮೇಲಿರುವವು. ಓದಿ, ಅವುಗಳನ್ನು ಕೆಡಿಸದೆ ಅಲ್ಲಿಯೇ ಬಿಟ್ಟು ಹೋಗಬೇಕೆಂಬ ವಿನಂತಿ.

೪. ಪುಸ್ತಕಗಳನ್ನು ತಮ್ಮ ಸ್ಥಾನಕ್ಕೆ ಕೊಂಡುಹೋಗಬೇಕಾದವರು ಮೂರು ರೂಪಾಯಿ ಅಮಾನತು ಇಡಬೇಕಾಗುವುದು. ಪಡಕೊಂಡ ಪುಸ್ತಕವನ್ನು ೧೫ ದಿವಸಗಳೊಳಗೆ ಹಿಂದೆ ಮುಟ್ಟಿಸತಕ್ಕದ್ದು. ಮುಂದಕ್ಕೆ ಪುಸ್ತಕ ಬೇಡವೆಂದು ಕಂಡುಬಂದರೆ, ಅಮಾನತು ಇಟ್ಟ ರೂಪಾಯಿಯನ್ನು ಬಡ್ಡಿಯಿಂದ ಹಿಂದೆ ಪಡಕೊಳ್ಳಬಹುದು.

೫. ವಾಚನಾಲಯ ಮತ್ತು ಪುಸ್ತಕ ಭಂಡಾರವನ್ನು ಉಪಯೋಗಿಸುವವರು ವಾಚನಾಲಯದಲ್ಲಿರುವ ನೋಟೀಸು ಬೋರ್ಡಿನ ಕಡೆಗೆ ಲಕ್ಷ್ಯವಿಡತಕ್ಕದ್ದು.

೬. ಹೆಚ್ಚಿನ ಸಂಗತಿಗಳನ್ನು ಕಾರ್ಯದರ್ಶಿಯಿಂದ ತಿಳಕೊಳ್ಳಬಹುದು.

ಪೋಷಕರ ಹೆಸರುಗಳು.

೧. ಅಣ್ಣಪ್ಪ ಪೂವ ಪುತ್ರನ್. ೨. ಕೊರಗಪ್ಪ ಬಂಗೇರ ಬಿ. ೩. ಗುರುವ ಕುಂದರ್ ಯಂ. ೪. ಚಂದು ಜಿ. ಪುತ್ರನ್ಲಾಯ. ೫. ಚಂದು ಬೊಗ್ಗು ಎಚ್. ೬. ತಿಮ್ಮಪ್ಪ ಕೃಷ್ಣ ಶೆಟ್ಟಿ. ೭. ಪೋಂಕ್ರ ಮೂಲ್ಕಿ. ೮. ಬಾಬು ದೇವು ಸಾಲ್ಯಾನ್. ೯. ಬಾಬು ಬಸಪ್ಪ ಯಂ. ೧೦. ಬೊಗ್ರ ಕೊರಗ ಸಾಲ್ಯಾನ್. ೧೧. ಬಂಟಪ್ಪ ಪಿ. ಕೂಳೂರ್‌ಕಾರ್. ೧೨. ಮೂಲ್ಕಿಕಾರ್ ಯಂ. ಡಿ. ೧೩. ರಾಮ ತಬುರ ಶ್ರೀಯಾನ್. ೧೪. ವಾಮನ ರಾವ್ ಬಿ. ೧೫. ಶಂಕರ ಎ. ಸಾಲ್ಯಾನ್. ೧೬. ಶಂಭು ಪಿ. ಮೂಳೂರ್‌ಕಾರ್. ೧೭. ಸುವರ್ಣ ಯಂ. ಕೆ. ೧೮. ಸೋಮಪ್ಪ ಯಂ. ಕೋಟ್ಯನ್‌ಕಾರ್. ೧೯. ಸುರತಕಲ್ಲು ಸೋಮಪ್ಪ. ೨೦. ಸೋಮಯ ಮಂದಣ್ಣಾಯ, ಎಚ್.

ಮುಂಬೈ. ಇತಿ ನಿಮ್ಮ ವಿಧೇಯ,

ಬಿ. ವಾಮನ ರಾವ್,

ಮಾ. ಕಾರ್ಯದರ್ಶಿ

ದಕ್ಷಿಣಕನ್ನಡಾ ಜಿಲ್ಲಾ ಸಹಕಾರಿ ಪರಿಷತ್ತು. 1920, ಮಂಗಳೂರು.

ಇದರ ೨ನೆ ಅಧಿವೇಶನವು ಮಂಗಳೂರು ಗವರ್ನಮೆಂಟ ಹಾಯರ್ ಎಲಿಮೆಂಟರಿ ಟ್ರೈನಿಂಗ್ ಶಾಲೆಯ ಕಟ್ಟೋಣದಲ್ಲಿ ಬರುವ ಡಿಸೆಂಬರ ತಿಂಗಳ ಕಡೆಯ ವಾರದಲ್ಲಿ ಜರಗಲಿಕ್ಕಿದೆ. ಸ್ಥಳ ಕಾಲಗಳನ್ನು ಅಧಿವೇಶನಕ್ಕೆ ಅಧ್ಯಕ್ಷರಾಗಿ ಆರಿಸಲ್ಪಟ್ಟ ಮ॥ ರಾ॥ ರಾ॥ ರಾವ್ ಬಹದ್ದೂರ ಯಮ್. ಶಾಮರಾವ್ ಯಮ್. ಎ. ಇವರ ಸಮಯಾನುಕೂಲತೆಯನ್ನು ತಿಳಿದು ಪ್ರಕಟಿಸಲಾಗುವುದು. ಈ ರಾಯರಾಯರು ಮೈಸೂರು ಸಹಕಾರಿ ಇಲಾಖೆಯ ಮೊದಲನೆ ರಿಜಿಸ್ಟ್ರಾರರಾಗಿದ್ದು, ಆ ಮೇಲೆ ಅಲ್ಲಿಯ ವಿದ್ಯಾ ಇಲಾಖೆಯ ಇನ್ಸ್‌ಪೆಕ್ಟರ ಜನರಲರಾಗಿ ಈಚೆಗೆ ಪೆನ್‌ಶನ್ ಹೊಂದಿರುವರು. ಪುತ್ತೂರಿನಲ್ಲಿರುವ ಸೆಂಟ್ರಲ್‌ಬೇಂಕಿನ ಡಿರೆಕ್ಟರರೊಬ್ಬರಾಗಿದ್ದು ಜಿಲ್ಲೆಯ ಮೂಲ ಸಂಘಗಳಲ್ಲಿ ೩ಖರ ಪ್ರಾಯವಾದ ಪುತ್ತೂರು ಸಹಕಾರಿ ಸಂಘದ ಮೆಂಬರರೂ ಆಗಿದ್ದು ಪುತ್ತೂರ ವಕೀಲರಲ್ಲಿ ಹೆಸರುವಾಸಿ ಪಡೆದ ಮ॥ ರಾ॥ ರಾ॥ ಬಿ. ವೆಂಕಟ ಕೃಷ್ಣರಾಯರು ಸ್ವಾಗತ ಕಮಿಟಿಯ ಅಧ್ಯಕ್ಷರಾಗಿ ಆರಿಸಲ್ಪಟ್ಟಿದ್ದಾರೆ. ಅಧಿವೇಶನದಲ್ಲಿ ಚರ್ಚಿಸತಕ್ಕ ವಿಷಯಾನುಕ್ರಮಣಿಕೆಯನ್ನು ಈ ಕೆಳಗೆ ಕೊಟ್ಟಿದೆ.

ವಿಷಯಗಳ ತಾತ್ಕಾಲಿಕ ಪಟ್ಟಿ.

ಸಹಕಾರದ ಆಚಾರ, ವಿಚಾರ, ಪ್ರಚಾರ.

ಸಹಕಾರಿ ಸಂಘಗಳನ್ನು ಇದ್ದವುಗಳನ್ನು ಮೊದಲು ಬಲಪಡಿಸಬೇಕೋ ಹೊಸ ಸಂಘಗಳನ್ನು ಇನ್ನೂ ಏರ್ಪಡಿಸಬೇಕೋ?

೨. ಕಾರ್ಯದರ್ಶಿಗಳನ್ನೂ ಮೆನೇಜರರನ್ನೂ ವ ಸುಪರ್ವೈಜರರನ್ನು ತರಬೇತು ಮಾಡೋಣ.

3. ಶಾಲಾ ಸಾಹಿತ್ಯಗಳ ಸರಬರಾಯಿಯ ಬಗ್ಗೆ ವಿದ್ಯಾರ್ಥಿಗಳ ಸಂಘಗಳನ್ನು ಹೆಚ್ಚು ಹೆಚ್ಚಾಗಿ ಸ್ಥಾಪಿಸುವುದು.

4. ಶಾಲೆಗಳಲ್ಲಿನ ಪಾಠಪಟ್ಟಿಗಳಲ್ಲಿ ಸಹಕಾರವನ್ನು ಸೇರಿಸುವುದು.

II. ಸಂಘಗಳ ರಚನೆ, ಆಡಳಿತೆ ವ ಧನ ಸಹಾಯ.

1. ಮೂಲ ಸಂಘಗಳ ಸಾಲು ಬಂಡವಾಳವನ್ನು ಸೆಂಟ್ರಲ್ ಬೇಂಕಿನ ಪಾಲುಗಳಲ್ಲಿ ಸಂಚಯಿಸಿಡೋಣ.

2. ಚಿಕ್ಕ ವಾಯಿದೆಯ ವ ದೀರ್ಘ ವಾಯಿದೆಯ ಸಾಲಗಳು.

3. ಪರಿಷತ್ತಿನ ನಿರ್ಧಾರ ಮತ್ತು ಬೇಕಾದ ಸಾಲಗಳನ್ನು ಮುಂದಾಗಿ ನಿರ್ಣಯಿಸೋಣ.

4. ಗ್ರಾಮಸಂಘಗಳಲ್ಲಿ ಬರವಣಿಗೆಯ ಕೆಲಸದ ಬಗ್ಗೆ ಪ್ರತಿಫಲ ಕೊಡೋಣ.

5. ಜಿಲ್ಲೆಯಲ್ಲಿ ಒಂದು ಯಾ ಹೆಚ್ಚು ಹೊಸ ಸೆಂಟ್ರಲ್ ಬೇಂಕುಗಳನ್ನು ಸ್ಥಾಪಿಸುವ ವಿಷಯ.

6. ಉತ್ಪತ್ತಿ ವಿಕ್ರಯದ ಸಂಘಗಳ ಮೆಂಬರಿಕೆ ವ ವ್ಯವಹಾರ.

7. ಜಿಲ್ಲೆಯ ಮುಖ್ಯ ಪಟ್ಟಣದಲ್ಲಿ ಗಿರಾಕಿ ಜನರ ಕೋಆಪರೇಟಿವ್ ಸಂಘ ಒಂದನ್ನು ಬಲಪಡಿಸೋಣ.

III. ಸರಕಾರದಿಂದ ಸಹಾಯ.

1. ವಿದ್ಯಾರ್ಥಿಗಳ ಶಾಲಾ ಸಾಹಿತ್ಯ ಸರಬರಾಯಿಯ ಸಂಘಗಳನ್ನು "ಸಹಕಾರಿ ಸಂಘಗಳು" ಎಂಬ ಹೆಸರನ್ನು ಉಪಯೋಗಿಸಕೂಡದೆಂಬ ನಿಷೇಧದಿಂದ ವಿನಾಯಿತಿ ಮಾಡೋಣ.

2. ಇನ್‌ ಮುನಾಫೆಯ ಹಂಚೋಣವನ್ನು ಕುರಿತ ಕ್ರಮವನ್ನು ಬದಲಾಯಿಸೋಣ.

3. ಸರಕಾರ ಕಿರ್ವೆ ವಸೂಲಿಗಿರುವಂತಹ ಕ್ರಮಗಳ ಮೇರೆಗೆ ವಾಯಿದೆ ಕಳೆದು ಬಾಕಿ ನಿಲ್ಲುವ ಹಣಗಳ ವಸೂಲಿಗೆ ಏರ್ಪಾಡು ಮಾಡೋಣ.

4. ಸ್ಥಿರಾಸ್ತಿ ಅಡವಿನ ಡಿಬೆಂಚರು ಸಾಲಪತ್ರಗಳ ಏರ್ಪಾಡು.

5. ಬರುವ ಜನಸಂಖ್ಯೆಯ ವೇಳ್ಯ ಜನರ ಸಾಂಪತ್ತಿಕ ಸ್ಥಿತಿಗತಿಗಳನ್ನು ಕುರಿತು ವಿಚಾರ ಮಾಡಿಸೋಣ.

6. ಹೆಚ್ಚಿಗೆ ಇನ್ಸ್‌ಪೆಕ್ಟರರನ್ನು ನೇಮಿಸೋಣ.

ದಕ್ಷಿಣ ಕನ್ನಡಾ ಜಿಲ್ಲೆಯ ಎರಡನೇ ಸಹಕಾರಿ ಪರಿಷತ್ತಿಗೆ ಬಂದ ವಂತಿಗೆಗಳು.

ಸ್ವಾಗತಮಂಡಳಿಯ ಮೆಂಬರರಿಂದ.

	ರೂ. ಆ. ಪೈ.
೧. ಕೆ. ಎಲ್. ಭಂಡಾರಿ, ಬಿ. ಎ. ವಕೀಲ ಕುಂದಾಪುರ	೩—೦—೦
೨. ಬೆಂದಾವರ ನರಸಿಂಗರಾವ್, ವರ್ಗದಾರ, ಕಾಸರಗೋಡು	೩—೦—೦
೩. ಮಂಜೇಶ್ವರ ಶ್ರೀನಿವಾಸ ಪ್ರಭು, ವ್ಯಾಪಾರಸ್ಥ, ಉಡುಪಿ	೩—೦—೦
೪. ನಯಂಪಳ್ಳಿ ಆನಂದರಾವ್, ವರ್ಗದಾರ ಉಡುಪಿ	೩—೦—೦
೫. ಮಂಜೇಶ್ವರ ಅನಂತರಾವ್ ಬಿ. ಎ. ಬಿ. ಎಲ್. ವಕೀಲ ಪುತ್ತೂರು	೫—೦—೦
೬. ಮೊಳಹಳ್ಳಿ ಶಿವರಾವ್, ವಕೀಲ, ಪುತ್ತೂರು	೩—೦—೦
೭. ಧಾರೇಶ್ವರ ಸುಂದರರಾಮರಾವ್, ವರ್ಗದಾರ, ವಿಟ್ಲ	೩—೦—೦
೮. ಹೊಸದುರ್ಗ ಗಣಪತಿರಾವ್, ವಕೀಲ, ಪುತ್ತೂರು	೩—೦—೦
೯. ಎಡೂರು ಸರ್ವೋತ್ತಮರಾವ್, ವರ್ಗದಾರ, ಗುರ್ಮಯ್ಯನಕೆರೆ	೩—೦—೦
೧೦. ಬಡಕಬೈಲು ಪರಮೇಶ್ವರಯ್ಯ, ವರ್ಗದಾರ, ಪೊಳಲಿ	೩—೦—೦

ಸಹಕಾರಿ ಸಂಘಗಳಿಂದ.

೧. ಮಂಗಳೂರು ಟೌನ್ ಬೇಂಕ್	೫—೦—೦
೨. ಕೊಕ್ಕಡ ಸಹಕಾರಿ ಸಂಘ	೩—೪—೦
೩. ಬಂಗಾಡಿ ,,	೪—೦—೦
೪. ಪಟ್ಲ ,,	೩—೦—೦
೫. ಪೆರ್ಡೂರು ,,	೩—೦—೦
೬. ದಕ್ಷಿಣ ಕನ್ನಡಾ ಸೆಂಟ್ರಲ್ ಕೋಓಪರೇಟಿವ್ ಬೇಂಕ್	೨೫—೦—೦
೭. ಉಪ್ಪಿನಂಗಡಿ ಸಹಕಾರಿ ಸಂಘ	೪—೦—೦
೮. ಮೂಲ್ಕಿ ಟೌನ್‌ಬೇಂಕ್	೫—೦—೦
೯. ವಿಟ್ಲ ಸಹಕಾರಿ ಸಂಘ	೩—೦—೦
೧೦. ಪುತ್ತೂರು ಯೂನಿಯನ್	೧೦—೦—೦
೧೧. ,, ಕೃಷಿಕರ ಭಂಡಸಾಲೆಯ ಸಹಕಾರಿ ಸಂಘ.	೩—೦—೦
೧೨. ,, ಸಹಕಾರಿ ಸ್ಟೋರ್ಸ್	೩—೦—೦
೧೩. ಬಲನಾಡು ಸಹಕಾರಿ ಸಂಘ	೩—೦—೦
೧೪. ಆಲೆಟ್ಟಿ ಸಹಕಾರಿ ಸಂಘ	೩—೦—೦
ಜುಮುಲಾ ರೂ.	೧೦೯—೪—೦

ಯಮ್. ಅನಂತರಾವ್,

ಪಿ. ಯಸ್. ಕಾಮತ್,

ಕಾರ್ಯದರ್ಶಿಗಳು.

ಬಹುಮಾನಗಳು.

ಇಲ್ಲಿಯ ಕಾಯಂ ಕಲೆಕ್ಟರ್ ಪಿ. ಆರ್. ಎಚ್. ಎಲ್ಲಿಸ್ ಮತ್ತು ಅವರ ಪತ್ನಿಯವರು ಈ ಕೆಳಗಿನ ಬಹುಮಾನಗಳನ್ನು ಡಿಸ್ಟ್ರಿಕ್ಟ್ ಎಡ್‌ವಾನ್ಸ್‌ಮೆಂಟ್ ಎಸೋಸಿಯೇಶನ್ನಿನ ವಸ್ತುಪ್ರದರ್ಶನ ಕಾಲದಲ್ಲಿ ಕೊಡಲಿಕ್ಕಿರುವರು.

I ಮಿಸ್ಸೆಸ್ ಎಲ್ಲಿಸರ ಬಹುಮಾನ.

1ನೆ ಬಹುಮಾನ ರೂಪಾಯಿ 20—ದಕ್ಷಿಣ ಕನ್ನಡಾ ಜಿಲ್ಲೆಯಲ್ಲಿ ವಾಸವಾಗಿರುವ ಹಿಂದೀ ಸ್ತ್ರೀಗೆ—ಉಪ್ಪಿನಕಾಯಿ, ಮೊರಬ್ಬಾ, ಚಟ್ನಿ ಮುಂತಾದವುಗಳ ಬಗ್ಗೆ.

2ನೆ ಬಹುಮಾನ ರೂಪಾಯಿ 10—ವಿದ್ಯಾರ್ಥಿನಿಗಳಿಗೆ—ಕಸೂತಿ, ಜರೀ ನೂಲಿನ ಕೆಲಸ, ಚಿತ್ರಗಳು, ಬಣ್ಣ ಹಾಕಿದ ನಕ್ಷೆಗಳು ಮುಂತಾದವುಗಳ ಬಗ್ಗೆ.

II ಮಿ. ಎಲ್ಲಿಸರ ಬಹುಮಾನ.

1ನೆ ಬಹುಮಾನ ರೂಪಾಯಿ 20—ಕೃಷಿ ಸೆಕ್ಷನಿನಲ್ಲಿ, ಇನಾಂ ಕಮ್ಮಿಟಿಯವರ ಇಚ್ಛಾರ್ಥದ ಮೇರೆಗೆ.

2ನೆ ಬಹುಮಾನ ರೂಪಾಯಿ 20—ಕೈಗಾರಿಕೆ ಸೆಕ್ಷನಿನಲ್ಲಿ—ಡಿಪ್ರೆಸ್ಡ್ ಯಾನೆ ನಿರಾಶ್ರಿತ ವರ್ಗಕ್ಕೆ ಸೇರಿದ ಜಾತಿಯವನು ತಯಾರಿಸಿದ ಕೈಗಾರಿಕೆ ಸಾಮಾನಿಗೆ—ಅದು ಮಾರಾಟಕ್ಕೆ ಉಪಯುಕ್ತವಾದ ವಸ್ತು ಆಗಿರಬೇಕು. ಅಂಥಾ ಯಾವುದೊಂದು ಕೈಗಾರಿಕೆ ಸಾಮಾನು ಈ ಪ್ರದರ್ಶನಕ್ಕೆ ಬಂದಿಲ್ಲವಾದರೆ ಈ ಬಹುಮಾನವು ಶೋಸ್ಸ್ಯಾಟ್ ಕ್ರಮಗಳ ಮೇರೆಗೆ ದರ್ಖಾಸ್ತಿಗೆ ಸ್ಥಳ ಪಡದು ಅದೇ ಸ್ಥಳದಲ್ಲಿ ಬೆಳೆಸಿದ ಫಲವಸ್ತು ಅಥವಾ ತರಕಾರಿ ವಸ್ತುಗಳ ಬಗ್ಗೆ. ಈ ಬಹುಮಾನಕ್ಕೆ ಡಿಪ್ರೆಸ್ಡ್ ಕ್ಲಾಸು ಮಿಶ್ಶನಿನವರಾಗಲಿ ಅಂಥ ವರ್ಗದವರ ಉದ್ಧರಣೆಯ ಕಾರ್ಯವನ್ನು ಕೈಕೊಂಡ ಇತರ ಸ್ವಸ್ಥಗಳಾಗಲಿ ಅರ್ಹರಲ್ಲ.

ಎಮ್. ಶಂಕರನಾರಾಯಣರಾವ್,

ಡಿಸ್ಟ್ರಿಕ್ಟ್ ಎಡ್‌ವಾನ್ಸ್‌ಮೆಂಟ್ ಎಸೋಸಿಯೇಶನ್ನಿನ ಜತೆ ಕಾರ್ಯದರ್ಶಿ.

ಚಂದಾದಾರರಿಗೆ ಸೂಚನೆ.

ಒಬ್ಬ ಜೈನ—ಜೈನ ಸಮಾಜಕ್ಕೆ ಸಂಬಂಧ ಪಟ್ಟ ಈ ವಿಷಯವು ಜೈನ ಮುಂದಾಳುಗಳ ಸಹಿ ಇದ್ದು ಪ್ರತ್ಯೇಕ ನೋಟೀಸ್ ಮೂಲಕ ಪ್ರತಿ ಅಂಥಾ ನೋಟೀಸನ್ನು ನಮ್ಮ ಬಳಿ ಕಳುಹಿಸಿ ಕೊಟ್ಟಲ್ಲಿ ಅದಕ್ಕೆ ಶಕ್ತಿ ಎಡೆ ಕೊಡುವ ವಿಚಾರವನ್ನು ಪರ್ಯಾಲೋಚಿಸುವೆವು.

ಪ್ರಕಟಣೆ.

ಮಂಗಳೂರು ರಂಗ ಪೈಯು ಈ ಮೂಲಕ ಸರ್ವರಿಗೂ ತಿಳಿಯಪಡಿಸುವದೇನಂದರೆ ಈ ಕೆಳಗೆ ಹೆಸರು ಕಾಣಿಸಿದವರು ಈಡುಯಿಟ್ಟ ನಗಗಳನ್ನು ಬಿಡಿಸಿಕೊಂಡು ಹೋಗಬೇಕಾಗಿ ಇವರಿಗೆ ರಿಜಿಸ್ಟ್ರಿ ನೋಟೀಸುಗಳು ಎಷ್ಟು ಕೊಟ್ಟಾಗ್ಯೂ ತಪ್ಪಿಸಿಕೊಂಡು ಸದರಿ ನೋಟೀಸುಗಳು ಜಾರಿಯಾಗದೆ ವಾಪಾಸು ಬರುವದರಿಂದ ಸದರಿಯವರು ಈಡಿಟ್ಟ ನಗಗಳು ತಾ. 4-12-1920ನೆ ಮಧ್ಯಾಹ್ನ 2ಗಂಟೆಯಿಂದ ತೇರುಬೀದಿ ರಸ್ತೆ ಮುನ್ಸಿಪಲ ನಂಬ್ರ 1ನೆ ಮನೆಯ ಬಳಿ ಬಹಿರಂಗವಾಗಿ ಏಲಂ ವಿನಾಡಲ್ಪಡುತ್ತದೆ. ಗೋಳಿಕಟ್ಟೆಬಾಜಾರಿನಲ್ಲಿರುವ ಕಾಜಿಕಾಮದ ಬ್ಯಾರಿಗ ಮಗ ಅಬ್ದುಲ್ ರೈಮನ ಬ್ಯಾರಿಗಳು ತಾ. 1-10-1919ರಲ್ಲಿ ರೂಪಾಯಿ 600-0-0ಕ್ಕೆ ಈ ಕಲಮಿನ ಬಡ್ಡಿ ಲೆಕ್ಕಕ್ಕೆ ರೂಪಾಯಿ 24-9-0ವರೆಗೆ ಬಂದಿರುತ್ತದೆ. ಮತ್ತು ತಾ. 2-11-1919ರಲ್ಲಿ ರೂ. 150-0-0ಕ್ಕೆ ತಾ. 6-11-1919ರಲ್ಲಿ ರೂಪಾಯಿ 450-0-0ಕ್ಕೆ ಕೂಡಾ ಈ ಮೂರು ಕಲಮುಗಳ ನಗಗಳು ಏಲಂ ಮಾಡಿ ಬಾಕಿ ಬರಬಹುದಾದ ಐವೇಜಿಗೆ ಸದರಿಯವರ ಮೇಲೆ ದಾವಾದಾಕ್ಲು ಮಾಡಲಾದೀತು.

ಯಮ್. ರಂಗ ಪೈ

ನೋಟೀಸು.

ದಕ್ಷಿಣ ಕನ್ನಡ ಡಿಸ್ಟ್ರಿಕ್ಟ್ ಕೋರ್ಟನಲ್ಲಿ.

O. P. No. 151/1920.

ಮೃತಪಟ್ಟ ಚಕ್ಕೆದಡಿ ಚಲುವಯ್ಯ ಶೆಟ್ಟರ ಸಾಲಗಳನ್ನು ಕುರಿತು

ಚಕ್ಕೆದಡಿ ಡಿ. ಅನಂತ ರಾಜಯ್ಯ, ಅಂತ್ರ ಪೇಮಪ್ಪ ಶೆಟ್ಟರ ಮಗ, ಜಮೀನುದಾರ. ...ಅರ್ಜಿದಾರರು

ಮೃತಪಟ್ಟ ಚಕ್ಕೆದಡಿ ಚಲುವಯ್ಯ ಶೆಟ್ಟರ ಬಾಬತು ಇನ್ನೂ ಬರತಕ್ಕ ಹಣ, ವ ಸಾಲಗಳನ್ನು ವಸೂಲು ಮಾಡುವ ಬಗ್ಗೆ ಅರ್ಜಿದಾರನು ತನಗೆ ವಾರೀಸಿ ಸರ್ಟಿಫಿಕೇಟನ್ನು ಕೊಡಬೇಕಾಗಿ ಮೇಲ್ಕಂಡ ಕೋರ್ಟಿನಲ್ಲಿ ಅರ್ಜಿ ದಾಖಲು ಮಾಡಿರುತ್ತಾನೆ. ಸದರಿ ಅರ್ಜಿಯು ಇದೇ ಬರುವ ಡಿಸೆಂಬರ ತಾ. 15ಕ್ಕೆ ತನಿಖೆಗೆ ಇಟ್ಟಿರುತ್ತದೆ. ಸದರಿ ಅರ್ಜಿಗೆ ಆಕ್ಷೇಪ ಹೇಳುವವರು ತಮ್ಮ ಆಕ್ಷೇಪಗಳನ್ನು ಸದರಿ ತಾರೀಖಿನ ಒಳಗೆ ಹಾಜೀರು ಮಾಡತಕ್ಕದ್ದು.

ಮಂಗಳೂರು,
ತಾ. 24-11-'20

ಎಸ್. ಎ. ಉಡುಪ,
ಅರ್ಜಿದಾರನ ಕಡೆ ವಕೀಲ್.

For Sale!

THE WELL KNOWN

"MISSION" UMBRELLAS

(MADE IN ENGLAND)

Strong and well made

Sizes	23	25	27
Prices	Rs. 6-4-0.	6-8-0.	6-12-0 each.

The Famous Acme Razors

(SWEDISH MADE)

Now available at the prewar price of

Rs. 2—8—0 each.

Cheap at double the price

Apply to—

The Commonwealth Stores,

(Late M. M. Branch, Mangalore).

ವಿಕ್ರಯಕ್ಕೆ ಇಟ್ಟಿವೆ!

ಇಂಗ್ಲೆಂಡಿನಲ್ಲಿ ತಯಾರಾಗಿ "ಮಿಶ್ಶನ್ ಕೊಡೆಗಳು"

ಎಂದು ಹೆಸರುವಾಸಿಯಾಗಿರುವ

ಬಲವಾದ ಕೊಡೆಗಳು.

ಆಳತೆ	23 ಇಂಚು ಉದ್ದ	25 ಇಂಚು	27 ಇಂಚು
ಬೆಲೆ	ರೂ. 6-4-0.	ರೂ. 6-8-0.	ರೂ. 6-12-0.

ಪ್ರಖ್ಯಾತ ಎಕ್ಮೆ ಕ್ಷೌರಕತ್ತಿಗಳು.

(ಸ್ವೀಡನ್ನಿನಲ್ಲಿ ತಯಾರಾದವುಗಳು)

ಯುದ್ಧದ ಹಿಂದಿನ ಕಾಲದ ಧಾರಣೆಯಲ್ಲಿಯೇ

ಈಗ ಮಾರಾಟಕ್ಕೆ ಇಟ್ಟಿವೆ! ಬೆಲೆ: ರೂ. 2—8—0 ಮಾತ್ರ!

ಇದಕ್ಕಿಂತ ಇಮ್ಮಡಿ ಬೆಲೆ ಕೊಟ್ಟರೂ ಅಗ್ಗವೆಂತಲೆ

ಹೇಳುವಷ್ಟು ಒಳ್ಳೇ ಮಾಲು!

ಈ ಕೆಳಗಿನ ವಿಳಾಸಕ್ಕೆ ಬರೆದು ತರಿಸಿಕೊಳ್ಳಬಹುದು—

ದಿ. ಕೋಮನ್‌ವೆಲ್ತ್ ಸ್ಟೋರ್ಸ್,

(ಮೊದಲು ಮಂಗಳೂರಿನ ಮರ್ಕೆಂಟೈಲ್ ಮಿಶ್ಶನ್ ಶಾಪ್)

[illegible]ಯಮ್ ದಂತ[illegible]

ಅನುಭವ[illegible]

[illegible]

ಅನುಭವ ಸಿದ್ಧ ಮುಕ್ತಿ

ವಿಶೇಷ! ಕ್ರಯ ಕಮ್ಮಿ!! ಹಾಡಿ ಹೆಚ್ಚು!!!

ಕ್ರಯ ಆಣೆ 6 ಮತ್ತು ಆಣೆ 9.

[illegible] ಕೆಳಗಿನ ವಿಳಾಸಕ್ಕೆ ಬರೆಯಿರಿ.

ಏಜಂಟ್ :— ಜೆ. ಎಸ್. ಸೋಜ ಮತ್ತು ಕಂಪೆನಿ,

ಹಂಪನಕಟ್ಟೆ, ಮಂಗಳೂರು

ಪ್ರಖ್ಯಾತಿಪಡೆದ ಎಸ್. ವಿ. ಸುಗಂಧಪುಡಿ ನಶ್ಯವು.

ಸಾಧಾರಣ ಪುಡಿ ನಶ್ಯವನ್ನು 10-12 ದಿನ ಹಾಕಿಕೊಳ್ಳುವವರು ಒಂದಾವರ್ತಿ ಇದನ್ನು ಹಾಕಿಕೊಂಡರೆ, ಸಾಕು. ಎಷ್ಟೋ ಆನಂದವಾಗಿರುವದು. ಇದರ ವಾಸನೆ ಮತ್ತು ಪರಿಮಳವು ಎಷ್ಟು ತಿಂಗಳಾದರೂ ಕೆಡದೆ ಹಾಗೆಯೇ ಇರುವದು. ಬಾಟ್ಲಿ 1ಕ್ಕೆ 4 ಆಣೆ. ಟಪ್ಪಾಲು ಚಾರ್ಜು 1-3 ವರೆಗೆ 4ಆಣೆ. ಒಂದೇ ಸರ್ತಿ 12 ಬಾಟ್ಲಿಗಳನ್ನು ತರಿಸಿಕೊಂಡರೆ 1 ಬಾಟ್ಲಿ ಉಚಿತವು.

ಉತ್ತಮ ತರದ ಪುಡಿ ನಶ್ಯವು.

ಪ್ರಖ್ಯಾತಿಪಡೆದ ಪಾರವಾದ ಹೊಗೆಸೊಪ್ಪಿನಿಂದ ಆದು ತೆಗೆದು ಅನುಭವ ಕ್ರಮದಿಂದ ತಯ್ಯಾರಿಸಲ್ಪಟ್ಟಿದೆ. [illegible] ಈ ಪುಡಿಯನ್ನು ಉಪಯೋಗಿಸಿದವರು ಬೇರೆ ಪುಡಿ ನಶ್ಯವನ್ನು ನಿಶ್ಚಯವಾಗಿಯೂ ಬಯಸರು. ಸೇರು 1ಕ್ಕೆ ರೂ 1 ಟಪ್ಪಾಲು ಚಾರ್ಜು 4 ಆಣೆ

ಎಸ್. ವಿ. ದಂತಚೂರ್ಣವು.

ಇದರ ಉಪಯೋಗದಿಂದ ಹಲ್ಲುಗಳು ಶುಭ್ರವಾಗಿ ಬಿಳುಪಾಗಿ ಪ್ರಕಾಶಿಸುವದಲ್ಲದೆ ಸಕಲ ದಂತರೋಗಗಳನ್ನು ನಿವೃತ್ತಿ ಮಾಡಿ ಹಲ್ಲುಗಳನ್ನು ವಜ್ರದಂತೆ ಗಟ್ಟಿ ಪಡಿಸುವದು. ಡಬ್ಬಿ 1ಕ್ಕೆ 6 ಆಣೆ. ಟಪ್ಪಾಲು ಚಾರ್ಜು 2 ಡಬ್ಬಿಗಳವರೆಗೆ 4 ಆಣೆ. ನಮ್ಮ ಕಂಪನಿಯ ಇಂಗ್ಲಿಷ್ ಕೆಟಲಾಗ್ ಬರೆದರೆ ಉಚಿತವಾಗಿ ಕಳುಹಿಸಿಕೊಡುವೆವು. ನಮ್ಮ ವಿಳಾಸ —

ತಂತಿ ವಿಳಾಸ — ಎಸ್. ವಾಸು ಅಂಡ್ ಕಂಪನಿ,

ವಾಸು, ತಿರುಚಿ. ಪಾಲಕರೆ, ತಿರುಚಿನಾಪಳ್ಳಿ

ಕೋವಿಲನ್ ಚರಿತ್ರೆ.

ಹೊಸ ನಾಟಕ! ಹೊಸ ನಾಟಕ!

ಈ ಪುಸ್ತಕವು ಅಪೂರ್ವವಾದ ಹೊಸಹೊಸ ವರ್ಣಮಟ್ಟುಗಳಿಂದ ಕೂಡಿರುವುದು. ಈಗಲೇ ಪ್ರಿಂಟಾಗಿ ಮಾರಾಟಕ್ಕೆ ಸಿದ್ಧವಾಗಿರುವುದು ಕ್ರಯ ಪ್ರತಿ 1ಕ್ಕೆ ಆಣೆ 0—6—0

ವಿಳಾಸ— D. Srinivasan Pothi,
Photographer,
Archæological Office,
TRIVANDERUM

ಅಥವಾ

ಶಾರದಾ ಛಾಪಖಾನೆ, ಮಂಗಳೂರು.

ಇವರಲ್ಲಿಯೂ ದೊರೆಯುವುದು

ರೂ. 1,000 ಬಹುಮಾನ.

ಲೋಕಪ್ರಸಿದ್ಧವಾದ ಸಾಲಾಮಿಸ್ರಿ ಮುರಬ್ಬಾ.

(ಗವರ್ನಮೆಂಟಿನಲ್ಲಿ ರಿಜಿಸ್ಟರ್ ಮಾಡಲ್ಪಟ್ಟಿದೆ).

ನಮ್ಮಿಂದ ಕಳುಹಿಸುವ ಡಬ್ಬಿಯನ್ನು ತೆಗೆದುಕೊಳ್ಳುವಾಗ ಡಿ. ಮನ್ನಾಲಾಲ್, ಡಿಲ್ಲಿ ವೈದ್ಯರು ಎಂದು ಮುದ್ರಿಸಿರುವ ಲೇಬಲು ಇರುವದನ್ನು ನೋಡಿ ತೆಗೆದುಕೊಳ್ಳಿರಿ. ಈ "ಸಾಲಾಮಿಸ್ರಿ ಮುರಬ್ಬಾ" ದ ಸೇವನೆಯಿಂದ — ವೀರ್ಯವು ಶರೀರದಿಂದ

ಇದ್ದರೂ ಸ್ವಪ್ನೇಂದ್ರಿಯವಾದರೂ, ಮೂತ್ರದೊಂದಿಗೆ ವೀರ್ಯವು ಹೋಗುತ್ತಿದ್ದರೂ, ಕೈಕಾಲು ಮತ್ತು ಸೊಂಟದಲ್ಲಿ ನೋವಿದ್ದರೂ, ಹಸಿವು ಇಲ್ಲದಿದ್ದರೂ, ಮಲವಿಸರ್ಜನೆಯು ಸರಿಯಾಗಿ ಆಗದಿದ್ದರೂ, ಶರೀರದಲ್ಲಿ ರಕ್ತವು ಕೆಟ್ಟುಹೋಗಿದ್ದರೂ ಈ ಸಾಲಾಮಿಸ್ರೀ ಮುರಬ್ಬಾ ಸೇವನೆಯಿಂದ ಗುಣವಾಗಿ ಶರೀರವನ್ನು ಒಳ್ಳೇ ಸ್ಥಿತಿಯಲ್ಲಿಡುವುದು ಮಿದುಳಿಗೆ ಬಲವನ್ನುಂಟು ಮಾಡುವುದು, ಹಳೇ ತಲೆನೋವುಗಳನ್ನು ಹೋಗಲಾಡಿಸುವುದು ಧಾತುವನ್ನು [illegible]ಸುವುದು, ಸೊಂಟ ನೋವು ಸ್ವಲ್ಪವೂ ಇರಲಾರದು ಈ ಸಾಲಾಮಿಸ್ರೀ ಎಂಬುದು ಕಾಬೂಲ್ ಕಂದಹಾರ್ ದೇಶಗಳಲ್ಲಿ ಬೆಳೆಯುತ್ತದೆ

ಈ ಮುರಬ್ಬಾ ಸೇವನೆಯಿಂದ ಗುಣಹೊಂದಿದ ಅನೇಕ ದೊಡ್ಡ ಮನುಷ್ಯರಿಂದ ರಂಗೂನ್ ಪಿನಾಂಗ್ ಆಫ್ರಿಕ ಕಲ್ಕತ್ತ, ಬೊಂಬಾಯಿ, ಮದ್ರಾಸ್ ಮೊದಲಾದ ಅನೇಕ ಪ್ರಾಂತ್ಯಗಳಿಂದ ಯೋಗ್ಯತಾಪತ್ರಿಕೆಗಳು ಬಂದಿವೆ ಬೇಕಾದವರು ಅರ್ಧಾಣೆ ಸ್ಟಾಂಪನ್ನು ಕಳಿಸಿ ಅವುಗಳ ಪ್ರತಿಯನ್ನು ನೋಡಬಹುದು ಅವನ್ನು ಯಾರಾದರೂ ಸುಳ್ಳು ಎಂದು ನಿರ್ಧಾರಪಡಿಸಿದರೆ ಮೇಲೆ ಕಂಡ ಬಹುಮಾನವು ಕೊಡಲ್ಪಡುತ್ತೆ. ನಾವು ಹಾಗೆ ಕೊಡದ ನಿರಾಕರಿಸಿದಲ್ಲಿ ಕೋರ್ಟು ಮೂಲಕ ಪಡೆಯಬಹುದು

ಒಂದು ಡಬ್ಬಿ ಮುರಬ್ಬಾವನ್ನು [illegible] ದಿನಗಳ ಉಪಯೋಗಿಸುವುದರಿಂದ ಪೂರಾ ಗುಣ ಕೊಡುತ್ತೆ [illegible] ಡಬ್ಬಿಗಳನ್ನು ಉಪಯೋಗಿಸುವುದರಿಂದ ಜನ್ಮಾಂತರವರೆಗೂ ಗುಣ ಕೊಡುತ್ತೆ ಉಪಯೋಗಿಸುವ ವಿಧಾನ ಡಬ್ಬಿಯ ಜತೆಯಲ್ಲಿರುವುದು ಕ್ರಯ ಒಂದು ಡಬ್ಬಿಗೆ ರೂಪಾಯಿ 2

ಈಗ ಛಾಂಗಿ [illegible] ಕೆಲವು ದಿವಸ ಮಟ್ಟಿಗೆ ಟಪ್ಪಾಲು [illegible] 1 ಡಬ್ಬಿಗೆ 8 ಆಣೆ 2 ಯಾ 3 ಡಬ್ಬಿಗಳಿಗೆ 12 ಆಣೆ

ಡಿ. ಮನ್ನಾಲಾಲ್, ಡಿಲ್ಲಿ ವೈದ್ಯರು,
ಸಾಲಾಮಿಸ್ರಿ ಮುರಬ್ಬ ಡಿಪ್ಪೊ, ಬೆಂಗಳೂರು ಸಿಟಿ

[illegible]ತಿವುದು ಯಾವುದೊಂದು ಖರ್ಚಿಲ್ಲದೆ ಗಾಳಿ ಹೋಜುಗಳುಳ್ಳ

ವೈದ್ಯ ವಿದ್ಯ

ಎಂಬ ಪುಸ್ತಕವು ಈ ಪುಸ್ತಕವನ್ನು ಓದುವುದರಿಂದ ಕಾರಣಾಂತರಗಳಿಂದ ಉಂಟಾಗುವ ಎಲ್ಲಾ ವ್ಯಾಧಿಗಳನ್ನೂ, ಇನ್ನೊಬ್ಬರ ಸಹಾಯವಿಲ್ಲದೆ ಗುಣಮಾಡಿಕೊಳ್ಳಲು ಬಲು ಸೂಕ್ಷ್ಮ ತಿಳುವಳಿಕೆಯನ್ನೂ ಮತ್ತು ತಕ್ಕ ಔಷಧವನ್ನು ತಿಳಿಸುವುದು ಈ ಪುಸ್ತಕಕ್ಕೆ ಯಾವ ಖರ್ಚನ್ನೂ ಕೊಡಬೇಡಿರಿ ಕಾಲಾಣೆಯ ಕಾರ್ಡಿನಲ್ಲಿ ನಿಮ್ಮ ವಿಳಾಸವನ್ನು ತಿಳಿಸಿದ ಮಾತ್ರಕ್ಕೆ ಸದರಿ ಪುಸ್ತಕವು ನಿಮ್ಮ ಮನೆಯ ತಲಬಾಗಲಿಗೆ ಬಂದು ಸೇರುವುದು

ವಿಳಾಸ — ರಾಜವೈದ್ಯ ನಾರಾಯಣಜೀ, ಕೇಶವಜೀ,
27 ಜೈನಬಜಾರು ರೋಡ್ ಮದರಾಸು

BANK OF MADRAS.

ಮದ್ರಾಸ್ ಬ್ಯಾಂಕ್

ಹೆಡ್ ಆಫೀಸು ಮದ್ರಾಸ್

ಮೂಲಧನ	ರೂ 7[illegible],00 000
ಕ್ಷೇಮನಿಧಿ	45 00,000

ಸೇವಿಂಗ್ಸ್ ಬ್ಯಾಂಕ್.

ವರ್ಷಕ್ಕೆ ಸೇಕಡಾ 4ರ ಬಡ್ಡಿ —

ಇದರಲ್ಲಿ ಠೇವಣಾತಿಗಳು ಕೆಳಗಿನ ಶರ್ತಗಳಲ್ಲಿ ಪಡೆಯಲಾದಾವು ಒಂದು ವರುಷದ ಅವಧಿಯಲ್ಲಿ ಒಟ್ಟು ರೂ 5 000ಕ್ಕೆ ಮಿಗದ ಮೊಬಲಗನ್ನು ಠೇವಣಾತಿ ಯಾಗಿಡಬಹುದು

ಹೀಗೆ ಠೇವಣಾತಿ ಇಟ್ಟ ಪ್ರತಿ ಹತ್ತು ರೂಪಾಯಿಗಳಿಗೆ ಸೇಕಡಾ 4ರಂತೆ ರೂ 10,000ಕ್ಕೆ ಮೀರದ ಮೊಬಲಗಿನ ವರೇಗೆ ಬಡ್ಡಿ ಎಣಿಸಲಾಗುವುದು

ನಿಬಂಧನೆಗಳ ಪ್ರತಿಗಳನ್ನು ಬರೆದು ಬ್ಯಾಂಕಿ ನಿಂದಪಡೆಯಬಹುದು

ಸಿ ಎಲ್ ಗೊರ್ಡನ್,
ಏಜಂಟ್, ಮದ್ರಾಸ್ ಬ್ಯಾಂಕ್, ಮಂಗಳೂರ

ಜಗದ್ವಿಖ್ಯಾತವಾದ ಶ್ರೀ ದೇವೀಪ್ರಸಾದ ಕಂಪೆನಿಯ

ಸುಪ್ರಸಿದ್ಧವಾದ ಮಹೌಷಧಗಳು.



"ಧನ್ವಂತರೀ ಬಾಮ್"

ಶುದ್ಧ ವನಸ್ಪತಿಗಳಿಂದಲೇ ಶಾಸ್ತ್ರೋಕ್ತವಾಗಿ ತಯಾರಿಸಲ್ಪಟ್ಟ ವೇದನಾಹಾರಿ ಮುಲಾಮು ಇದರಿಂದ ವಾತ, ಕಫ, ಜಗತ, ಉಳುಕು ಘಾಯ, ತಲೆನೋವು, ಸೊಂಟನೋವು, ಬೆನ್ನುನೋವು, ಮುಂತಾದ ಎಲ್ಲಾ ತರದ ವೇದನೆಗಳು ಅತಿ ಶೀಘ್ರದಲ್ಲಿ ಸಂಪೂರ್ಣವಾಗಿ ಗುಣ ಹೊಂದುವವು ಬಾಟ್ಲಿ ೧ರ ಕಿಮ್ಮತು ೦—೭—೦ ಒಂದು ಡಜನು ಬಾಟ್ಲಿಗಳಿಗೆ ರೂ ೪—೧೨—೦

"ಗಜಕರ್ಣದ ಮುಲಾಮು"

ಗಜಕರ್ಣ ಉಸಬು, ಖಜ್ಜಿ, ದದ್ರು, ಹುಳಕಡ್ಡಿ, ಸೊಂಟಕಜ್ಜಿ ಮುಂತಾದ ಸಮಸ್ತ ವಿಧವಾದ ಚರ್ಮವ್ಯಾಧಿಗಳ ಬಂದೆರಡು ಸಾರಿ ಹಚ್ಚಿಸುವದರೊಳಗೆ ನಿಸ್ಸಂದೇಹವಾಗಿ ಇದರಿಂದ ನಿವಾರಣೆಯಾಗು ವವು ಬಾಟ್ಲಿ ೧ಕ್ಕೆ ೦—೪—೦ ಒಂದು ಡಜನಿಗೆ ರೂ ೩—೦—೦

ನಮ್ಮ ಔಷಧಗಳ ಗುಣೋನ್ನತಿಯ ಕುರಿತು ಅನೇಕ ಮಹನೀಯರುಗಳಿಂದಲೂ ಡಾಕ್ಟರುಗಳಿಂದಲೂ ಶಿಫಾರಸು ಪತ್ರಗಳು, ಮೆಡಲು ದೊರೆತಿರುವವು ಜಾಸ್ತಿಯಾಗಿ ಕೊಂಡು ಕೊಳ್ಳತಕ್ಕವರಿಗೂ ವ್ಯಾಪಾರಿಗಳಿಗೂ ಯೋಗ್ಯ ಕಮಿಶನು ಕೊಡಲಾಗುವದು, ಕ್ಯಾಟಲಾಗಿಗೂ ವಿಶೇಷ ಮಾಹಿತಿಯ ಬಗ್ಗೂ ಪತ್ರವ್ಯವಹಾರ ಮಾಡೀರಿ

ಡಿ. ಮ್ಯಾನೆಜರ್ — ಶ್ರೀ ದೇವಿಪ್ರಸಾದ ಕಂಪೆನಿ,
ಪೋಸ್ಟ ಬಾಕ್ಸ ನಂ [illegible] ಕಲ್ಕತ್ತ

ಆರ್. ಮಾರ್ಟಿನ್ನರ ಲಪ್ಪಾ ಎಣ್ಣೆ.

ಇದರ ವಾಸನೆಯು, (ಪರಿಮಳವು) ಬಹಳ ಆಂದವಾಗಿಯೂ ಇರ ವದಲ್ಲದೆ, ಬಹಳ ಹೊತ್ತಿನವರೆಗೂ ಇರುತ್ತದೆ. ಈ ಎಣ್ಣೆಯನ್ನು ತಲೆಗೆ ಹಚ್ಚಿಕೊಳ್ಳುವುದರಿಂದ ಕಣ್ಣುಗಳು ತಂಪಾಗಿಯೂ ಶುಭ್ರವಾಗಿಯೂ, ಆಗುವುದಲ್ಲದೆ ಕೂದಲು ಚೆನ್ನಾಗಿ ಬೆಳೆಯುತ್ತದೆ ಇದನ್ನು ಪ್ರತಿದಿವಸವೂ ಉಪಯೋಗಿಸುವುದರಿಂದ ಕೂದಲುಗಳು ಕಪ್ಪಾಗಿ ಹೊಳೆಯುವಂತೆ ಮಾಡುತ್ತದೆ ಕೂದಲುಗಳಲ್ಲಿರುವ ಹೇನುಗಳು ಮುಂತಾದುವು ನಾಶವಾಗಿ ತಲೆಬುರುಡೆಯನ್ನು ಚೆನ್ನಾಗಿ ಬೆಳೆಯುವಂತೆ ಮಾಡುತ್ತದೆ ಗಡ್ಡ ಮತ್ತು ಮೀಸೆಗಳ ಸಹ ಬೆಳೆಯುತ್ತವೆ ಇದನ್ನು ಉಪಯೋಗಿಸಿದ ಜನರು ಇದಕ್ಕಿಂತ ಉತ್ತಮವಾದ ಎಣ್ಣೆಯು ಬೇರೆ ಇಲ್ಲವೆಂದು ಹೇಳುತ್ತಾರೆ

ಕ್ರಯ ಬಾಟ್ಲಿ ೧ಕ್ಕೆ ರೂಪಾಯಿ ೧ ೪ ೦

ಆರ್ ಮಾರ್ಟಿನ್ನರ ಕೆಮ್ಮಿನ ಔಷಧ

ಒಂದೇ ಒಂದು ಸೀಸೆ ಔಷಧ, ಎಲ್ಲಾ ವಿಧವಾದ ಕೆಮ್ಮುಲ ಗೂರಲ ಕ್ಷಯ ಶೀತ ನೆಗಡಿ ಗಂಟಲುನೋವು, ಎದೆನೋವುಗಳನ್ನು ಗುಣಪಡಿಸುತ್ತಿರುವಲ್ಲಿ ಯಾಕೆ ಈ ರೋಗಗಳಿಂದ ಇಷ್ಟೊಂದು ಜನರು ನರಳುತ್ತಿರಬೇಕು ? ಒಂದೇ ಒಂದು ಸೀಸೆಯನ್ನು ತರಿಸಿ ಸೇವನೆಮಾಡಿ ಪರೀಕ್ಷಿಸಿನೋಡಲಿ ಅನಂತರ ಯಾವ ಬೇರೆ ಔಷಧಕ್ಕೂ ಗಮನ ಕೊಡದಿರುವಿರಿ ಎಲ್ಲಾ ವಿಧವಾದ ಕೆಮ್ಮಲಿಗೂ ರಾಣಿಯಾಗಿಯೂ, ಎದೆಗೆ ಬಲಕೊಟ್ಟು ಮೇಲ್ಕಂಡ ರೋಗಗಳು ತಲೆಯಿಕ್ಕದಂತೆ ಮಾಡುತ್ತವೆ

೬೦ ಮಾತ್ರೆಗಳ ಸೀಸೆ ಒಂದಕ್ಕೆ ರೂ ೧—೪ ೦

ಆರ್ ಮಾರ್ಟಿನ್ನರ ಗ್ಲಿಟೋಡಯಿನ್

ಗಂಡಸರಿಗೂ ಮತ್ತು ಹೆಂಗಸರಿಗೂ ಎಲ್ಲಾ ತರದ ಮೇಹರೋಗಗಳಿಗೆ ಎರಡು ಸೀಸೆಗಳ ಔಷಧಿಯನ್ನು ಉಪಯೋಗಿಸುವುದರಲ್ಲಿ ಸಂಪೂರ್ಣವಾಗಿ ಗುಣವಾಗುತ್ತ, ಎಷ್ಟು ದಿವಸಗಳ ಹಳೇ ರೋಗವಾಗಿದ್ದರೂ ಸರಿ, ಅಥವಾ ಹೊಸದಾಗಿದ್ದರೂ ಸರಿ, ಬಿಳುಪು ಹೋಗುವುದು, ಉರಿಯುವುದು ಮುಂತಾದ್ದೆಲ್ಲಾ ನಿಂತುಹೋಗುವುದಲ್ಲದೆ ಒಂದಾವರ್ತಿ ಸೇರಿಸಿದ ಮಾತ್ರಕ್ಕೇ ಉರಿಮೂತ್ರವನ್ನು ನಿಲ್ಲಿಸಿ ಮೂತ್ರವು ಬಿಳುಪಾಗಿ ನಿರ್ಮಲವಾಗುವುದಲ್ಲದೆ ರೋಗದ ಶಕ್ತಿನ್ನೇ ಅಡಗಿಸಿಬಿಡುತ್ತದೆ ಔಷಧಿಯು ಕುಡಿಯುವುದಕ್ಕೆ ರುಚಿಯಾಗಿಯೂ, ಸುಲಭವಾಗಿಯೂ ಇರುತ್ತೆ ಬೆಲೆ ಸೀಸೆ ಒಂದಕ್ಕೆ ರೂ ೨—೪—೦

ವಿಳಾಸ — ಆರ್ ಡಿ. ಕಟ್ಲೆ ಮತ್ತು ಕಂಪೆನಿ,
ನಂಬ್ರು ೩ ಫ್ರೆಯರ್ ರೋಡ್,
ರೈಟ್ ಎಂಡ್ ಕೋ ಹತ್ತರ, ಫೋರ್ಟ್, ಮುಂಬಯಿ.

R D Kately & Co
No 3 Frere Road,
Near Wright & Co Fort Bombay.

ಆಯುರ್ವೇದಾಶ್ರಮ.

ವೈದ್ಯರತ್ನ ಪಂಡಿತ ಡಿ. ಗೋಪಾಲಾಚಾರ್ಲು

ಇವರಿಂದ ಸ್ಥಾಪಿತವಾಗಿ ನಡಿಸಲ್ಪಟ್ಟಿರುತ್ತದೆ

ಪ್ಲೇಗ್, ಕೋಲೇರಾ ಮತ್ತು ಇನ್‌ಫ್ಲುಯೆಂಜಾ

ಇವಕ್ಕೆ ಮುಖ್ಯವಾದ ಚಿಕಿತ್ಸಾಲಯ.

ಸಕಲ ರೋಗಗಳನ್ನು ದೂರಮಾಡುವ ಗುಣಪಡಿಸುವ ಹಾಗೂ ಆರೋಗ್ಯವನ್ನು ಉಂಟುಮಾಡುವ ಔಷಧಗಳುಇಲ್ಲಿ ದೊರೆಯುವವು ಕೆಟಲಾಗನ್ನು ಅಪೇಕ್ಷಿಸುವವರಿಗೆ ಉಚಿತವಾಗಿ ಕಳುಹಿಸುವೆವು.

ಪ್ಲೇಗು ಔಷಧದ ದೊಡ್ಡ ಪೆಟ್ಟಿಗೆ ರೂ 2—2—0	ಕೋಲೇರಾ ಔಷಧದ ದೊಡ್ಡ ಪೆಟ್ಟಿಗೆ ರೂ 1—2—0
„ ಸಣ್ಣ „ 1—6—0	ಸಣ್ಣ „ 0 12—0

ಇನ್‌ಫ್ಲುಯೆಂಜಾ ಔಷಧದ ಪ್ರತಿ ಪೆಟ್ಟಿಗೆ ರೂ 1—12—0

ಎಲ್ಲಾ ಔಷಧಗಳನ್ನು ಕಳುಹಿಸುವಾಗಲೂ ಟಪ್ಪಾಲ ಹಾಸಲು ಮತ್ತು ಪೇಕಿಂಗ್ ಪ್ರತ್ಯೇಕ

ವಿಳಾಸ— ಮೆನೇಜರ್, ಆಯುರ್ವೇದಾಶ್ರಮ,

ತಂತಿ ವಿಳಾಸ— 55 ಆಚಾರಪ್ಪನ ಬೀದಿ,

ಪಂಡಿತ್, ಮದರಾಸ್ ಜೋರ್ಜಟೌನ್, ಮದರಾಸ್

The Canara Banking Corporation, Udipi, (Limited).

	Rs	As	Ps
Authorized Capital	3,50,000	0	0
Issued and Subscribed Capital	50,000	0	0
Paid up Capital	41,102	0	9
Deposits	80,424	11	10
Reserve and other Funds	10,551	5	2
Investments on Safe Securities	1,26,249	8	5

Fixed Deposits received at 7% Interest payable quarterly. Short term Deposits payable at 15 days' notice after 1 month are received @ 6¼%. To meet the dowry amount and other marriage expenses the following system of cumulative deposits are introduced on the following scale

~~Rs 2 or its multiple for 13 months will bring Rs 27 or proportionately at the end of 14th month~~

„ 1	do	24	do	„ 25	do	do	25th	„
„ 1	do	45	do	, 50	do	do	46th	„
„ 1	do	84	do	„ 102–8–0	do	do	85th	„
„ 1	do	132	do	„ 182–8–0	do	do	133rd	,

Current a/c Deposits and Savings Bank Deposits are received and interest calculated half yearly @ 3½% and 4¼% respectivley on the lowest balance in the month. Dividend and Bouns declared for the year ended 31–3–20 @ 9%. Loans granted on proper securities and pledges. Payments to the Corporation may be made at the Bank of Madras Mangalore or the Canara Bank Ltd, Mangalore. For special terms on big and long deposits please apply to

Office of the Corporation, Udipi }
31st August 1920. }

Naimpalli Ananda Rao,
Secretary

ದಿ. ಕೆನರಾ ಬ್ಯಾಂಕಿಂಗ್ ಕೊರ್ಪೊರೇಶನ್, ಉಡುಪಿ, ಲಿಮಿಟೆಡ್.

	ರೂ	ಆ	ಪೈ
ಅಧಿಕಾರಗೊಳಿಸಲ್ಪಟ್ಟ ಮೂಲಧನ	3,50,000	0	0
ಚಂದಾ ಹಾಕಲಿಕ್ಕೆ ಅರ್ಪಿಸಿದ ವ ಚಂದಾ ಹಾಕಿ ಎತ್ತಿದ ಮೂಲಧನ	50,000	0	0
ಮೌಲ್ಯತೆತ್ತ ಮೂಲಧನ	41 102	0	9
ಠೇವಣಾತಿಗಳು	80,424	11	10
ಕ್ಷೇಮನಿಧಿ ವ ಇತರ ಫಂಡುಗಳು	10 551	5	2
ಯೋಗ್ಯ ಜವಾಬ್ದಾರಿ ಮೇಲೆ ಮತ್ತು ಅಡವಿನ ಮೇಲೆ ಸಾಲಕೊಟ್ಟ ಹಣ	126 249	8	5

ಪ್ರತಿ 3 ತಿಂಗಳಿಗೊಮ್ಮೆ ಸಾಲಿಯಾನ್ ಶೇಕಡಾ 7ರ ದರದಲ್ಲಿ ಬಡ್ಡಿ ಕೊಡುವ ಶರ್ತದ ಮೇಲೆ ಕಾಯಮ್ ಠೇವಣಾತಿಗಳು ಅಂಗೀಕರಿಸಲ್ಪಡುವವು.

15 ದಿವಸದ ನೋಟೀಸಿನ ಮುದ್ದತ್ತಿನ ಮೇಲೆ ವಾಪಸು ಕೊಡತಕ್ಕ 1 ತಿಂಗಳಿಗೆ ಕಡಿಮೆ ಅವಧಿಗಲ್ಲದ ಚಿಕ್ಕ ವಾಯಿದೆ ಠೇವಣಾತಿಗಳ ಮೇಲೆ ಸಾಲಿಯಾನ್ ಶೇಕಡಾ 6¼ರಂತೆ ಬಡ್ಡಿ ಕೊಡೋಣಾಗುವುದು

ದೇಜೆ ಮೊಬಲಗು ಬ್ರಗ್ಯೆ ಮದಿವೆ ಖರ್ಚಿಗೂ ಜನರಿಗೆ ಅನುಕೂಲವಾಗುವಂತೆ ಈ ಕೆಳಗಣ ರೀತಿಯಲ್ಲಿ ಮತ್ತು ಶರ್ತಗಳಿಗೊಳಪಟ್ಟ ಸಂಚಯದ ಠೇವಣಾತಿಗಳು ಅಂಗೀಕರಿಸಲ್ಪಡುವವು.

ರೂ. 2 ಅಥವಾ ಅದರ ಗುಣ್ಯವನ್ನು 13 ತಿಂಗಳ ಕಟ್ಟಿದಲ್ಲಿ 14ನೇ ತಿಂಗಳ ಅಂತ್ಯಕ್ಕೆ ರೂ 27 ಅಥವಾ ಅದರ ಗುಣ್ಯವು ಸಿಕ್ಕುವುದು

„	1	ಡಿ	ಡಿ	24	ಡಿ	25	ಡಿ	, 25 ಡಿ
„	1	ಡಿ	ಡಿ	45	ಡಿ	46	ಡಿ	, 50 ಡಿ
„	1	ಡಿ	ಡಿ	84	ಡಿ	85	ಡಿ	„ 102—8—0 ಡಿ
,	1	ಡಿ	ಡಿ	132	ಡಿ	133	ಡಿ	, 182—8—0 ಡಿ

ಚಾಲ್ತಿ ಠೇವಣಾತಿಗಳು ಮತ್ತು ಸೇವಿಂಗ್ಸ್ ಬ್ಯಾಂಕ್ ಠೇವಣಾತಿಗಳು ಅಂಗೀಕರಿಸಲ್ಪಡುವವು ಪ್ರತಿ ತಿಂಗಳಲ್ಲಿರುವ ಅತೀ ಕಡಿಮೆ ಠೇವಿನ ಮೇಲೆ 6 ತಿಂಗಳಿಗೊಮ್ಮೆ ಚಾಲ್ತಿ ಠೇವಿನ ಮೇಲೆ ಶೇಕಡಾ 3½ ದರದಲ್ಲಿಯೂ ಸೇವಿಂಗ್ಸ್ ಬೇಂಕು ಠೇವಿನ ಮೇಲೆ 4¼ ದರದಲ್ಲಿಯೂ ಬಡ್ಡಿ ಎಣಿಸಲಾಗುವದು

ತಾ 31—3—1920ಕ್ಕೆ ಅಂತ್ಯವಾದ ವರ್ಷಕ್ಕೆ ಹಿಸೆದಾರರಿಗೆ ಡಿವಿಡೆಂಡ್ ಮತ್ತು ಬೋನಸ್ ಕೂಡಿ ಶೇಕಡಾ 9ರ ದರದ ಬಡ್ಡಿ ಕೊಡೋಣಾಗಿಯದೆ

ಯೋಗ್ಯ ಜವಾಬ್ದಾರಿ ಮೇಲ ಮತ್ತು ಅಡಿನ ಮೇಲೆ ಸಾಲಕೊಡೋಣಾಗುವದು ಸಂಘಕ್ಕೆ ಕೊಡೋಣಾಗುವ ಹಣಗಳನ್ನು ಸಂಘದ ಲೆಖ್ಖಕ್ಕೆ ಮಂಗಳೂರಲ್ಲಿ ಮದ್ರಾಸ್ ಬೇಂಕಿನಲ್ಲಿಯಾಗಲೀ ಕೆನರಾ ಬೇಂಕಿನಲ್ಲಿಯಾಗಲೀ ವಸೂಲು ಕೊಡಬಹುದು ದೀರ್ಘ ವಾಯಿದೆಯ ಹೆಚ್ಚು ಮೊಬಲಗಿನ ಠೇವಣಾತಿಗಳ ಮೇಲ ಕೊಡಲ್ಪಡುವ ವಿಶೇಷ ದರದ ಬಡ್ಡಿ ವಿಷಯ ಕೆಳಗಿನ ವಿಳಾಸಕ್ಕೆ ಬರಕೊಳ್ಳಿರಿ

ಬ್ಯಾಂಕಿನ ಆಫೀಸು }
ತಾ 31 8—1920 }

ನ ಆನಂದರಾವ್,
ಕಾರ್ಯದರ್ಶಿ

ಒಂದೇ ಸಾರಿ ನಾಲ್ಕು ಸೀರೆಗಳನ್ನು ತರಿಸುವವರಿಗೆ ಬ್ಯಾಕಿಂಗ್ ಮತ್ತು ಹಾಸಲು ಮುಕ್ತ.

ಮಧುರೆ ಜುನ್ನರಿ ಅಂಚಿನ ಸೀರೆಗೆ ರೂ. 4-8-0. 1 ಸೀರೆಗೆ ... ಕೆಲಸದ ಗಿಲ್ಟ ... ಒಂದು ನಾಗರ ... .

ಇದು ಉಡುವುದಕ್ಕೆ ಧಡೂತಿಯಾಗಿಯೂ, ಸೊಗಸಾಗಿಯೂ, ಬಹಳ ಸುಲಭವಾಗಿಯೂ ಇದೆ. ... ಸೀರೆಯು ಉದ್ದ 18 ಮೊಳ, ... ಸೆರಗು ಒಂದನ್ನು ತರಿಸಿ ಪರೀಕ್ಷಿಸಿ ... ರೂ. 4—8—0. [2074]

ನರಸಾಪುರಂ ... ರೂ 6 12-0. ... ಮೂಂಗಾಯಿ ರೂ 5-0-0, ... 4-12-0 ... 8 4-0 ... ರೂ 5-12-0 ... ರೂ 7 8-0

O C. Lingam & Co.
2 *Ramanuja Ayer St*
Sowcarpet, MADRAS

ಭೃಂಗರಾಜ ತೈಲ.

ಇದನ್ನು ತಲೆಗೆ ಇಟ್ಟರೆ ಎಲ್ಲಾ ತರದ ರೋಗಗಳು ಗುಣವಾಗುತ್ತವೆ ನರೆ... ಕೂದಲು ಕಪ್ಪಾಗುತ್ತದೆ ಕೇಶ ದಾಮಗಳು ವೃದ್ಧಿಹೊಂದುತ್ತವೆ ಕಂಠದ ಮೇಲ್ಭಾಗದ ಎಲ್ಲಾ ಇಂದ್ರಿಯಗಳಿಗೆ ಬಲಕೊಡುತ್ತದೆ ಪಿತ್ತನಾಶ ಮಾಡುತ್ತದ ನಾಲ್ಕು ... ಟಿನ್ನಿನ ಸೀಸೆ ಒಂದರ ಕ್ರಯ ರೂ 0—12—0

ತ್ರಿಫಲಾದಿ ತೈಲ—ವಾತ, ಪಿತ್ತ, ಶ್ಲೇಷ್ಮ ಇವುಗಳಿಂದ ಉಂಟಾದ ರೋಗಗಳೆಲ್ಲಾ ಇದನ್ನು ತಲೆಗೆಹಚ್ಚಿಕೊಂಡರೆ ಪರಿಹಾರವಾಗುತ್ತದೆ ಎಲ್ಲಾ ಇಂದ್ರಿಯಗಳಿಗೆ ಬಲಕೊಡುತ್ತದೆ ನಾಲ್ಕು ಟಿನ್ನಿನ ಸೀಸೆ ಒಂದರ ಕ್ರಯ ರೂ 1

ಜ್ವರಾಂತಕ ಮಾತ್ರೆ—ಈ ಮಾತ್ರೆಯನ್ನು ಉಪಯೋಗಿಸಿದರೆ ಎಲ್ಲಾ ಜ್ವರಗಳು ಪರಿಹಾರವಾಗುತ್ತದೆ ಉಪಯೋಗಿಸುವ ಕ್ರಮ ಮತ್ತು ಗುಣಪೂರಿತ ... ಪ್ರಮಾಣಪತ್ರ ಪಡಿಸುತ್ತದೆ 20 ಮಾತ್ರೆಗಳುಳ್ಳ ಒಂದರ ರೂ 1 ...

ಪಂಚಸಾರ ಲೇಹ—ಅಜೀರ್ಣ ಪಿತ್ತ ವಾತಶ್ಲೇಷ್ಮ ಇವುಗಳಿಂದ ಉಂಟಾದ ರೋಗಗಳೆಲ್ಲ ಇದರಿಂದ ಪರಿಹಾರವಾಗುತ್ತದೆ ಮತ್ತು ಇಂದ್ರಿಯವನ್ನು ಬಲಪಡಿಸಿ ಅನೇಕ ತರದ ಇಂದ್ರಿಯ ದೋಷಗಳನ್ನು ಗುಣಪಡಿಸುತ್ತದೆ ... ಒಂದು ಸೀಸೆಗೆ ರೂ 1—4—0

ಮೈಲೆ ಬರೆದ್ದ ಔಷಧಿಗಳು ಸರ್ವ ವೈದ್ಯರಿಗೂ ಶಿರೋಮಣಿಯಾದ ಶ್ರೀ ... ಆರ್ಯಮತಾವಲಂಬಿಗಳಾದ ಶ್ರೀ ಪೂಜ್ಯಪಾದ ಋಷಿ ಪ್ರಣೀತ ವೈದ್ಯಗ್ರಂಥ ಆಧಾರದಿಂದ ಆತನಮ ಪೂರ್ವದ ಅನುಯಾಯಿಗಳಾದ ನಮ್ಮಿಂದ ತಯಾರಿಸಲ್ಪಟ್ಟಿರುತ್ತವೆ ಅಹ್ಸವಚನವು ನಮಗೆ ಎಷ್ಟುಸತ್ಯವಾಗಿ ತೋರುತ್ತದೋ ಅಷ್ಟೇ ಧರವಸೆಯಿಂದ ಈ ಔಷಧಗಳ ರೋಗ ಪರಿಹಾರಕವಾಗಿರುತ್ತವೆ

ಸೂಚನೆ—ಅಪೇಕ್ಷಿಸುವವರು ಕಟಲಾಗಿಗ ಬರೆದುಕೊಳ್ಳುವುದು ಉಚಿತವಾಗಿ ಕಳುಹಿಸಲಾಗುವುದು

ಆಯುರ್ವೇದಿಕ್ ಮತ್ತು ಹೋಮಿಯೋಪತಿಕ್
... —
ಧರ್ಮ ವೈದ್ಯಶಾಲಾ,
ಧರ್ಮಸ್ಥಳ ದಕ್ಷಿಣ ಕನ್ನಡ

ಸಗ ತಿಂಗಳಿ ಜನವರಿಯಿಂದ ಆರಂಭ. } ಸದ್ಬೋಧಕ ಗ್ರಂಥಮಾಲೆ. (ತ್ರೈಮಾಸಿಕ ಪುಸ್ತಕ) { ವಾರ್ಷಿಕ ಚಂದಾ ಅಂಚೆ ಸಹಿತ ರೂ 1 ಮಾತ್ರ

ಪ್ರತಿ ಮೂರು ತಿಂಗಳಿಗೊಮ್ಮೆ ಕನ್ನಡ ಕಥಾ ಕಾದಂಬರಿ, ನಾಟಕ, ಕಾವ್ಯ ಪ್ರಬಂಧವೇ ಮೊದಲಾದ ಗ್ರಂಥಗಳಲ್ಲಿ ಯಾವುದಾದರೊಂದು ಪೂರ್ಣ ಪುಸ್ತಕವು ಉಲ್ಲೇಖನ, ವಿನೋದಲಹರಿ, ಸ್ಥಳೀಯವಾರ್ತೆ ಪಿತ ರ್ಕ ವ ತ್ತು ಸ್ವೀಕಾರ ಇತ್ಯಾದಿ ಲೇಖನವು ಪ್ರಕಟವಾಗುವವು ಸಮಸ್ತ ಕನ್ನಡಿಗರಿಗೂ ಸಂಗ್ರಹಿಸಿಕೊಳ್ಳುವ ತಕ್ಕದಾಗಿರಬೇಕೆಂದೇ ವಾರ್ಷಿಕ ಚಂದಾ ಅಂಚೆವೆಚ್ಚದೊಡನೆ ಒಂದೇ ರೂಪಾಯಿ ಇಟ್ಟಿರುವೆವು ಈಗಲೇ ತಮ್ಮ ಹೆಸರನ್ನು ತಿಳಿಸಿ ವರ್ಗಣಿದಾರರಾಗಿ ಸೇರುವುದರ ಮೂಲಕ ಭಾಷಾ ಪೋಷಕರಾದ ಕನ್ನಡಿಗರೆಲ್ಲರೂ ಪ್ರೋತ್ಸಾಹಿಸಬೇಕಾಗಿ ಪ್ರಾರ್ಥನೆ

ಎಸ್ ರಂಗಪ್ಪಯ್ಯ, ಸಂಪಾದಕ ಮತ್ತು ಪ್ರಕಾಶಕ,
ಸದ್ಬೋಧಕ ಗ್ರಂಥಮಾಲಾ ಕಾರ್ಯಾಲಯ,
ಸುರತಕಲ್, (ದಕ್ಷಿಣ ಕನ್ನಡ).

S R Hebbar & Bros
General Merchants, SURATKAL, S. K

ಇಂಡಿಯನ್ ಮೋಟರ್ ಸರ್ವಿಸ್.

ಈ ಸರ್ವಿಸಿನ ಮೋಟರ ಬಸ್ಸುಗಳು ಮಂಗಳೂರಿನಿಂದ ಬಂಟ್ವಾಳಕ್ಕೂ, ಬೆಳ್ತಂಗಡಿಗೂ, ಪುತ್ತೂರಿಗೂ, ಗುರುಪುರಕ್ಕೂ ವ ಕಾರ್ಕಳ ಮಾರ್ಗವಾಗಿ ಉಡ್ಪಿಗೂ ವ ಆಯಾಯ ಸ್ಟೇಶನುಗಳಿಂದ ವಾಪಾಸು ಮಂಗಳೂರಿಗೂ ಚಲಾವಣೆ ಆಗುವವು

ಬೇರೆ ಯಾವ ಮಾಹಿತಿ ಬೇಕಾಗಿದ್ದರೆ ನಮ್ಮ ಕದ್ರಿ ವ ಹಂಪನಕಟ್ಟೆ ಆಫೀಸುಗಳಲ್ಲಿ ವ ಇತರ ಬ್ರೇಂಚ್ ಆಫೀಸುಗಳಲ್ಲಿ ವಿಚಾರಿಸಿದ್ದಲ್ಲಿ ತಿಳಿಯಬರುವದು

ಹಂಪನ ಕಟ್ಟೆ ಮಂಗಳೂರು, ಮಾಧವ ಬಿಲ್ಡಿಂಗ್ಸ್ ಸಮೀಪ, } ಎ. ಸಿ. ಅಂದ್ರಾದೆ
ಪ್ರೊಪ್ರೈಟರ್.

ಇನ್‌ಫ್ಲುಯೇನ್ಜಾ ಜ್ವರಕ್ಕೆ

ಎಮ್ಕೊ.

ಖಾತ್ರಿ ಚಿಕಿತ್ಸೆ!

ಇನ್‌ಫ್ಲುಯೆನ್ಜಾ, ನಿಮೋನಿಯಾ ಮಲೇರಿಯಾ ಸಾಧಾರಣ ಜ್ವರ, ಬಿಟ್ಟು ಬಿಟ್ಟು ಬರುವ ಜ್ವರ, ವಿಷಮ ಜ್ವರ, ಕೆಮ್ಮು ಶೀತ ಮೊದಲಾದ ವ್ಯಾಧಿಗಳಿಗೆ ಖಾತ್ರಿ ಚಿಕಿತ್ಸೆಗಳ ಆವಶ್ಯಕತೆಯು ದಿನೇದಿನೇ ಹೆಚ್ಚಾಗುತ್ತಿರುವ ಕಾರಣ ನಾವು ಈ "ಎಮ್ಕೊ" ಎಂಬ ಅನುಭವಸಿದ್ಧವಾದ ಖಾತ್ರಿ ಔಷಧಿಯನ್ನು ಈಗಷ್ಟೇ ಪ್ರಚಾರಕ್ಕೆ ತಂದಿರುತ್ತೇವೆ ಮೇಲಿನ ವ್ಯಾಧಿಗಳಿಗೆ ಇದು ಖಾತ್ರಿ ಚಿಕಿತ್ಸೆ ಎಂಬುದಕ್ಕೆ ಕಳೆದ ಕೆಲವು ವರ್ಷಗಳಿಂದ ನಾವು ಇದನ್ನು ಕೊಟ್ಟು ಗುಣಪಡಿಸಿದ ನೂರಾರು ರೋಗಿಗಳೇ ಸಾಕ್ಷಿ

ಎಮ್ಕೊ. ಇದು ಎಲ್ಲಾ ರೋಗಾಣುಗಳನ್ನು ಕೊಂದು ಅದರ ವಿಷವನ್ನು ನಾಶಪಡಿಸಿ, ಇನ್‌ಫ್ಲುಯೇನ್ಜಾ, ನಿಮೋನಿಯಾ ಮತ್ತು ಅದರಂತಿನ ಇತರ ಸೋಂಕು ರೋಗಗಳು ಹತ್ತಿದಂತೆ ತಡೆಹಿಡಿ ಅದು ಉಲ್ಬಣವಾಗದಂತೆ ಮಾಡುತ್ತದೆ.

ಎಮ್ಕೊ. ಇದು ಇನ್‌ಫ್ಲುಯೇನ್ಜಾ ಮೊದಲಾದ ಎಲ್ಲಾ ತರದ ಜ್ವರಗಳನ್ನು ತಪ್ಪದೆ ಗುಣಮಾಡುತ್ತದೆ

ಎಮ್ಕೊ. ಇದನ್ನು ಹಾನಿಕರವಲ್ಲದ ಔಷಧಿಗಳ ಕೂಟದಿಂದ ಅತಿ ಜಾಗರೂಕತೆಯಿಂದ ತಯಾರಿಸಿರುತ್ತದಾದಕಾರಣ ಜ್ವರ ಇರುವ ಕಾಲದಲ್ಲಿಯೂ ಜ್ವರ ಇಲ್ಲದ ಕಾಲದಲ್ಲಿಯೂ ಏನೂ ಭಯವಿಲ್ಲದೆ ಎಲ್ಲಾ ವಿಧದ ಜ್ವರಗಳಿಗೆ ಇದನ್ನು ಕೊಡಬಹುದು ಹೆಂಗಸರೂ, ಮಕ್ಕಳೂ ಭಯಭೀತಿ ಇಲ್ಲದೆ ಸೇವಿಸಬಹುದು

ಎಮ್ಕೊ. ಈಚೆಗೆ ಇದು ಕೋಲೆರಾ ರೋಗಗಳನ್ನೂ ಗುಣಪಡಿಸಿರುತ್ತದೆ

ಕ್ರಯ ಸೀಸೆ ಗಿರ ರೂ. ೦—೧೨—೦ ಮಾತ್ರ. ವಿ. ಪಿ ಬೇರೆ
ಪತ್ರಮುಖ್ಯ ಏಜಂಟರು — ದಿ ಇಕ್ವಿಪ್ಸ್ ಏಜನ್ಸಿ,
ಬಲ್ಮರ ರಸ್ತೆ, ಮಂಗಳೂರು.

'ಟಿಶ್ಯುರೆಮಿಡಿಸ್'

ಎಂಬ

ಶುಸ್ಲರ್ ಪಂಡಿತರ ಹನ್ನೆರಡು ಲವಣ ಔಷಧಗಳು

1 ಕಲ್ಕೇರಿಯ ಫ್ಲೋರ್	5 ಕಾಲಿ ಮ್ಯುರ್	9 ನಾಟ್ರಮ್ ಮ್ಯುರ್
2 ಕಲ್ಕೇರಿಯ ಫೊಸ್	6 ಕಾಲಿ ಫೊಸ್	10 ನಾಟ್ರಮ್ ಫೊಸ್
3 ಕಲ್ಕೇರಿಯ ಸಲ್ಫ್	7 ಕಾಲಿ ಸಲ್ಫ್	11 ನಾಟ್ರಮ್ ಸಲ್ಫ್
4 ಫೆರಮ್ ಫೊಸ್	8 ಮಗ್ನೆಸಿಯ ಫೊಸ್	12 ಸಿಲಿಸಿಯಾ

ಕ್ರಯ

		ರೂ ಆ ಪೈ
ಎರಡು	ಡ್ರಾಮಿನ ಸೈಜ್ D ಸೀಸೆ ಒಂದರ	—3 6
ನಾಲ್ಕು	, C , ,	—6—0
ಒಂದು ಔನ್ಸಿನ	A „ ,	—12—6

ಹನ್ನೆರಡು ಲವಣಗಳ ಎರಡು ಡ್ರಾಮಿನ ಸೀಸೆಗಳುಳ್ಳ ಒಳ್ಳೇ ನಮೂನೆಯ ಚಿಕ್ಕ ಪೆಟ್ಟಿಗೆಗೆ	3—0—0
ಹನ್ನೆರಡು ಲವಣಗಳ ಒಂದು ಔನ್ಸಿನ ಸೀಸೆಗಳುಳ್ಳ ಪೆಟ್ಟಿಗೆಗೆ ಜೀವರಸಾಯನ ವೈದ್ಯ ಶಾಸ್ತ್ರ ಪುಸ್ತಕ ಸಮೇತ	10—0—

ಜೀವರಸಾಯನ ವೈದ್ಯಶಾಸ್ತ್ರ ಎಂಬ ಹೊಸಪುಸ್ತಕವು ಇದು ಮೇಲೆ ಹೇಳಿದ ಟಿಶ್ಯು ಔಷಧಗಳನ್ನು ಸರ್ವಸಾಧಾರಣವಾದ ಎಲ್ಲಾ ವ್ಯಾಧಿ ಕಸಾಲೆಗಳಲ್ಲಿ ಉಪಯೋಗಿಸುವ ಕ್ರಮವನ್ನು ಸೂಚಿಸುತ್ತದೆ ಈ ಪುಸ್ತಕವು ಎಲ್ಲರಿಗೂ ಸುಲಭ ದರದಲ್ಲಿ ಸಿಕ್ಕುವಂತೆ ಪ್ರಕಟಿಸಿದ್ದೇವೆ ಕ್ರಯ 12 ಆಣೆ ಮಾತ್ರ ಬೇಕಾಗಿದ್ದವರು ಕೆಳಗಿನ ವಿಳಾಸಕ್ಕೆ ಬರೆಯಬಹುದು

ಎ ಫೆರ್ನಾಂಡಿಸ್,
ಎಲಿಕ್ಟ್ರೊ ಹೊಮಿಯೊಪತಿ ಡಿಸ್ಪೆನ್ಸರಿ, ಮಂಗಳೂರು.

ವಾನಿಂಗ್ ಟಿಲ್ಲಿ ಬ್ರದರ್ಸ್ ಇವರ
ಜೆನ್ವಿನ್ ಹಾರ್ಲೆಮ್ ಆಯಿಲ್

ಇದು ನರಸಂಗ್ರಾರವನ್ನು ಕಾಡುತ್ತಿರುವ ಸರ್ವ ಬಗೆಯ ರೋಗಗಳಿಗೆ ಭಾರಿ ಔಷಧ.
ಇದು ಆಹಾರ ಮತ್ತು ಔಷಧ ಸರಬರಾಯಿ ಆಕ್ಟಿನನುಸಾರವಾಗಿ ರಿಜಿಸ್ಟ್ರಿಯಾಗಿದೆ.
ಇದು ಹಾರ್ಲೆಮ್ ಆಯಿಲ್ ಎಂಬುದಕ್ಕೆ ಹಾರ್ಲೆಮ್ ಸರಕಾರದಿಂದ ರಿಜಿಸ್ಟ್ರಿ ಸಿಕ್ಕಿ ಪಡೆದಿದೆ.
ಇದು ಮುನ್ನೂರು ವರುಷಗಳಿಂದ ಲೋಕದಲ್ಲಿ ಖ್ಯಾತಿಯನ್ನು ಹೊಂದಿರುತ್ತದೆ.
ಇದು ಹಿಂದೂಸ್ಥಾನದಲ್ಲಿ "ಅಮೃತ" ಎಂಬ ಹೆಸರಿನಿಂದ ಕರೆಯಲ್ಪಡುತ್ತದೆ.

ಹೆಚ್ಚೇಕೆ? ಅಂಗೈ ನೋಡಲು ಕನ್ನಡಿ ಬೇಕೆ?

ವಾನಿಂಗ್ ಟಿಲ್ಲಿ ಜೆನ್ವಿನ್ ಹಾರ್ಲೆಮ್ ಆಯಿಲನ್ನು ಪ್ರಥಮತಃ ಮಂಗಳೂರಿಗೆ ತಂದ ಜರ್ಮನ್ ಮಿಶನರಿ ಲೇಡಿ ಹರ್ಮನ್ ಬ್ರೀಕೆ ಯವರು ಇದೇ ಮಾರ್ಚ್ ತಾ. 10ರಲ್ಲು ಸ್ಟುಟ್ಗಾರ್ಟ್ ಪಟ್ಟಣದಿಂದ ವಾನಿಂಗ್ ಟಿಲ್ಲಿ ಕಂಪೆನಿಯವರಿಗೆ ಈ ರೀತಿ ಬರೆದಿರುವರು:— ದಯವಿಟ್ಟು ನಮ್ಮ ಹಾರ್ಲೆಮ್ ಆಯ್ಲಿನ 25 ಸೀಸೆಗಳನ್ನು ಕಳುಹಿಸಿಕೊಡಿರಿ. ಇದು ಉತ್ಕೃಷ್ಟವಾದ ಮಾತ್ರ ಔಷಧಿಯೆಂದು ನನ್ನ ಅನುಭವಕ್ಕೆ ಬಂದಿದೆ. ನಾನು 1910ನೇ ಇಸವಿಯಲ್ಲಿ ಮಂಗಳೂರಿಗೆ ಹೋದಾಗ ನಮ್ಮ ಹಾರ್ಲೆಮ್ ಆಯಿಲಿನ 36 ಸೀಸೆಗಳನ್ನು ಕೊಂಡುಹೋಗಿದ್ದೆನು. ಇದನ್ನು ಹಿಂದೀಯರೊಳಗೆ ಪ್ರಯೋಗಿಸಿದ್ದಲ್ಲಿ ಅತಿ ಸಾಫಲ್ಯವಾಗಿ ಪರಿಣಮಿಸಿತು. ಹಿಂದೀಯರೊಳಗೆ ಪ್ರಬಲವಿರುವ ಜ್ವರಕ್ಕೆ ಇದು ಖಾತರಿ ಔಷಧಿ ಎಂದು ಮಿಶನ್ ಶೋಪಿನ ವ್ಯಾಪಾರಿಗೆ ತಿಳಿದಾಕ್ಷಣ ಅವರು 25—100—1000 ಸೀಸೆಗಳನ್ನು ತರಿಸಿದರು. ಇದರಿಂದ ಎಷ್ಟೋ ಜನರು ಪ್ರಯೋಜನ ಹೊಂದಿದರು. ಎಷ್ಟೋ ಕುಟುಂಬಗಳು "ಕುಟುಂಬಸಂಜೀವನಿ" ಎಂಬಂತೆ ಇದನ್ನು ಮನೆಮನೆಯಲ್ಲಿ ಇಟ್ಟುಕೊಳ್ಳಲು ತೊಡಗಿದರು. ಇತ್ಯಾದಿ.

ಮ್ಮ. ರಾ। ಬೆಳಿರ್ಯಪ್ಪ ಅನ್ಮತಿ—ತಾ 28—4—'20, ನಿಮ್ಮಿಂದ ತರಿಸಿದ ಹಾರ್ಲೆಮ್ ಆಯಿಲ್ ಜ್ವರಕ್ಕೆ ಖಾತರಿ ಔಷಧಿಯಾಗಿದೆ. ದಯಮಾಡಿ 12 ಸೀಸೆ ವಾನಿಂಗ್ ಟಿಲ್ಲಿ ಜೆನ್ವಿನ್ ಹಾರ್ಲೆಮ್ ಆಯಿಲ್ ವಿ. ಪಿ. ಮಾಡಿ ಕಳುಹಿಸಿರಿ.

ರೆವರೆಂಡ್ ಅಂಬಟ್, ಎಸ್. ತಲಚೇರಿ—ನಿಮ್ಮಿಂದ ತರಿಸಿದ ವಾನಿಂಗ್ ಟಿಲ್ಲಿ ಜೆನ್ವಿನ್ ಹಾರ್ಲೆಮ್ ಆಯಿಲ್ ಪ್ರಯೋಗಿಸಿ ನನಗೆ ದೀರ್ಘ ಕಾಲದಿಂದಿದ್ದ ನರಗಳ ಅಶಕ್ತಿಯು ಪೂರ್ಣವಾಗಿ ಗುಣವಾಗಿದೆ.

ಮ॥ ರಾ॥ ಶಂಕರನ್ ನಂಬಿಯಾರ್, ಕುಟ್ಟಿಪರಂಭ, 20—8—'20—ನಿಮ್ಮಿಂದ ತರಿಸಿದ ವಾನಿಂಗ್ ಟಿಲ್ಲಿ ಜೆನ್ವಿನ್ ಹಾರ್ಲೆಮ್ ಆಯಿಲಿನಲ್ಲಿ ಅತಿ ಮಾನುಷ್ಯ ಶಕ್ತಿಯಿದೆ. ನಾನು ಪ್ರಯೋಗಿಸಿದ ಹಲವು ಬಗೆಯ ರೋಗಗಳು ಇದರ ಸೇವನೆಯಿಂದ ಪೂರ್ಣ ಗುಣ ಹೊಂದಿದೆ. 6 ಸೀಸೆಗಳನ್ನು ವಿ.ಪಿ ಮಾಡಿ ಕಳುಹಿಸಿರಿ.

ವಾನಿಂಗ್ ಟಿಲ್ಲಿ ಬ್ರದರ್ಸ್—ಜೆನ್ವಿನ್ ಹಾರ್ಲೆಮ್ ಆಯಿಲ್

ಪ್ರಯೋಗಿಸಿ, ಮೂಲವ್ಯಾಧಿ, ಅಪಸ್ಮಾರ, ಮೂತ್ರದೋಷಗಳು, ಪಕ್ಷವಾತ, ಸೂತಕದ ಅಕ್ರಮಗಳು, ವಾತ, ಜ್ವರ, ಇತ್ಯಾದಿ ರೋಗಗಳಿಂದ ಪೂರ್ಣ ಗುಣಹೊಂದಿದವರ ನೂರಾರು ಪತ್ರಗಳು ನಮ್ಮಲ್ಲೇ ಇವೆ. ಆದ್ದರಿಂದ ವಾನಿಂಗ್ ಟಿಲ್ಲಿ ಜೆನ್ವಿನ್ ಹಾರ್ಲೆಮ್ ಆಯಿಲಿನ ಸೀಸೆಗಳನ್ನು ಕೊಂಡುಕೊಳ್ಳುವಾಗ ಮಾತ್ರ ಸೀಸೆಯ ಮೇಲಿರುವ ಈ ಟ್ರೇಡ್ ಮಾರ್ಕ್ ಮತ್ತು Warning Tilly Bros, ಎಂಬ ದಸ್ಕತು ನೋಡಿ ಕೊಂಡುಕೊಂಡು ಆರೋಗ್ಯ ಪಡೆಯಿರಿ.

ಕ್ರಯ ಸೀಸೆ 1ಕ್ಕೆ ರೂ. **0—8—0**, ಡಜನ್ ಸೀಸೆಗಳಿಗೆ ರೂ. **6—0—0**, ವಿ. ಪಿ. ಮಾಫಿ.

ಬ್ರಿಟಿಷ್, ಫ್ರೆಂಚ್, ಪೋರ್ತುಗೀಸ್ ಹಿಂದುಸ್ಥಾನದ ಸೋಲ್ ಏಜಂಟರು— ಎಸ್. ಇ. ಐಮನ್, ದಿ. ಎಕ್ಲಿಪ್ಸ್ ಏಜನ್ಸಿ,
ಬಲ್ಮಠ ರಸ್ತೆ, ಮಂಗಳೂರು.

ಆಯುರ್ವೇದ ಶಾಸ್ತ್ರಾನುಸಾರ
ಡಾಕ್ಟರ್. ಎಚ್. ಲಕ್ಷ್ಮೀನಾರಣಪ್ಪಾ ಮತ್ತು ಸನ್ಸ್
ಇವರಿಂದ ತಯಾರಿಸಲ್ಪಟ್ಟ ಸಿದ್ಧೌಷಧಗಳು.

1. ಶತಮೂಲ್ಲಿಕೆಯ ಸತ್ವವು. ಈ ಮಹೌಷಧಿಯ ಸೇವನೆಯಿಂದ ಕ್ಷಯ, ಅಸ್ಥಿಜ್ವರ, ನಿಂತು ನಿಂತು ಬರುವ ಜ್ವರ, ಬಹುಕಾಲದ ಕಫ, ರಕ್ತವಾಂತಿಯಾಗುವಿಕೆ, ಹೃದಯ ದುರ್ಬಲತೆ ಕ್ಷಯ (ಕಾಳಜ), ಮೂತ್ರಕೋಶದ ವ್ಯಾಧಿಗಳು ಪ ಎಲ್ಲ ತರದ ದುರ್ಬಲತೆಯು ನಾಶಹೊಂದಿ, ಶರೀರಕ್ಕೆ ಆರೋಗ್ಯವನ್ನುಂಟುಮಾಡುವದು. ಇನ್ಫ್ಲುಯೆಂಜಾ ಜ್ವರಕ್ಕೂ, ಅಶಕ್ತ ಜನರಿಗೂ, ಬಿಕ್ಕಿಬರುವ ಸಣ್ಣ ಹುಡುಗರಿಗೂ, ಪ್ರಸೂತರಾದ ಹೆಂಗಸರಿಗೂ, ಶಕ್ತಿ ಪುಷ್ಟಿಯನ್ನೀಡುವ ದಿವ್ಯ ಔಷಧಿಯು. ಇಂಗ್ಲಿಷ ಯಾ ಬೇರೆ ಔಷಧದಿಂದ ಗುಣ ಹೊಂದದ ಅಸಂಖ್ಯ ರೋಗಿಗಳು ಈ ಜೀವನಾಮೃತದ ಸೇವನೆಯಿಂದ ಪೂರ್ಣ ಗುಣಹೊಂದಿ ಸಾವಿನಿಂದ ತಮ್ಮ ಜೀವರಕ್ಷಣೆ ಮಾಡಿಕೊಂಡಿರುವರು. ೧೨ ಔನ್ಸಿನ ಬಾಟ್ಲಿ ೧ಕ್ಕೆ ರೂ ೨—೧೨—೦ ಟಿ. ಪಿ. ವಗೈರೆ ಬೇರೆ.

2. ವಿಜಯಸಂಜೀವಿನಿ ತೈಲ. ಕಾಲಕಟ್ಟೆ ಒಪಿಸ್ತೆಯಾಗುವುದು, ಬಹಿಷ್ಠೆಯ ಕಾಲ ನೋವು, ಸಂದುಗಳಲ್ಲಿ ಬೇನೆ, ಉದರ ಶೂಲೆ, ಗರ್ಭಸ್ರಾವ ಮತ್ತು ಇದಕ್ಕೆ ಸಮ್ಮಂಧಪಟ್ಟ ವ್ಯಾಧಿಗಳಿಗೆ ದಿವ್ಯ ಔಷಧ. ಸ್ತ್ರೀಯರ ರೋಗಗಳಿಗೆ ಇದು ಮುಖ್ಯ ಔಷಧವಾಗಿರುವುದಲ್ಲದೆ, ಸ್ವಾಭಾವಿಕವಾಗಿ ಕಾಲಕಾಲಕ್ಕೆ ಉಂಟಾಗುವ ಹೊಟ್ಟೆನೋವಿಗೆ ಅನುಭವಸಿದ್ಧವಾದ ಔಷಧ. ಕ್ರಯ ಸೀಸೆ ೧ಕ್ಕೆ ರೂ. ೨-

3. ಕೊಲೇರಾ ಗುಳಿಗೆಗಳು. ಇವನ್ನು ವಾಂತಿಭೇದಿಯ ಯಾವ ಸ್ಥಿತಿಯಲ್ಲೂ ಕೊಡಬಹುದು, ಸಕಲ ಗೃಹಗಳಲ್ಲಿಯೂ ಇದನ್ನು ಸಂಗ್ರಹಿಸಿ ಇಡತಕ್ಕದ್ದಾಗಿದೆ. ನಾಲ್ಕು ಮಾತ್ರೆಗಳೊಳಗೆ ಗುಣ ಖಂಡಿತ. ಅಜೀರ್ಣದ ರೋಗಕ್ಕೂ ಅತಿಸಾರಕ್ಕೂ ಉತ್ತಮ. ೪೮ ಗುಳಿಗೆಗಳ ಬಾಟ್ಲಿಗೆ ಕ್ರಯ ರೂ. ೧—೦—೦

4. ವಾತಾಂತಕ. ದೀರ್ಘ ಕಾಲದ ಮತ್ತು ಯಾವ ತರದ ವಾತ, ಪಕ್ಷವಾತ ಮುಂತಾದ ಭೀಕರ ರೋಗಗಳ ಮೇಲೆ ರಾಮಬಾಣ. ಒಂದು ಸಲ ಉಪಯೋಗಿಸುವುದರಲ್ಲಿ ಇದರ ಶ್ರೇಷ್ಠತೆಯು ತಾನಾಗಿಯೇ ಕಂಡುಬರುವುದು. ಕ್ರಯ ಬಾಟ್ಲಿ ೧ಕ್ಕೆ ರೂ. ೧-೮-೦

ಈ ಔಷಧಿಗಳ ದಿವ್ಯ ಗುಣಗಳ ಬಗ್ಗೆ ಪ್ರಸಿದ್ಧ ವೈದ್ಯರಿಂದಲೂ, ಜಮೀನದಾರರಿಂದಲೂ, ದೊಡ್ಡ ದೊಡ್ಡ ಸಂಸ್ಥೆಗಳಿಂದಲೂ ಸುವರ್ಣ ಪದಕಗಳೂ, ಸರ್ಟಿಫಿಕೇಟುಗಳೂ ಸಿಕ್ಕಿರುತ್ತವೆ. ಪತ್ರವ್ಯವಹಾರವು ಇಂಗ್ಲಿಷ್‌ನಲ್ಲಿರಬೇಕು. ಆರ್ಡರ್ ಕಳುಹಿಸುವಾಗ ಈ ಪತ್ರದ ಉಲ್ಲೇಖ ಮಾಡಿರಿ. ವಿಳಾಸ—

ಡಾಕ್ಟರ್. ಎಚ್. ಲಕ್ಷ್ಮೀನಾರಣಪ್ಪಾ ಮತ್ತು ಸನ್ಸ್,
ಭವಾನ್‌ಸಿಂಗ್ ಕಂಪನಿ ಸಮೀಪ, ತಿರುಪೂರ, (ಕೊಯಮುತ್ತೂರು ಜಿಲ್ಲೆ)

ಅಮೃತಕಲ್ಪ ವೈದ್ಯಶಾಲಾ,
ಕಾಸರಗೋಡು.

ಆಯುರ್ವೇದ ವಿಧಿ ಪ್ರಕಾರ ತಯಾರಿಸಲ್ಪಟ್ಟ ಕಷಾಯ, ಚೂರ್ಣ, ಅವಲೇಹ, ಭಸ್ಮ, ಘೃತ, ತೈಲ, ಆಸವ ಅರಿಷ್ಟ, ದ್ರಾವಕ ಮೊದಲಾದುವುಗಳು, ಕಣ್ಣು ಚಿಕಿತ್ಸೆಗೆ ಎಲ್ಲಾ ಔಷಧಗಳೂ ಅತಿ ವಿಶೇಷವಾದ ಗುರು ಲಬ್ಧವಾದ ಕೆಲವು ಸಿದ್ಧೌಷಧಗಳೂ ಸುಲಭವಾದ ಕ್ರಯಕ್ಕೆ ಇಲ್ಲಿ ಎಲ್ಲಾ ಸಮಯದಲ್ಲಿಯೂ ಮಾರುವರೆ ತಯಾರಿವೆ. ಔಷಧಗಳ ಗುಣವು ಒಮ್ಮೆಯೇ ಉಪಯೋಗಿಸಿದ್ದಲ್ಲಿ ತಿಳಿದು ಬರುವುದು.

ವೈದ್ಯಶಾಲೆಯ ವ್ಯಾಪಾರಕರೂ ಮನೇಜರೂ ಆದ ದಾಮೋದರ ನಂಬೀಶನರು ಆದಿತ್ಯವಾರ ಹೊರತು ಮಿಕ್ಕ ಎಲ್ಲಾ ದಿವಸಗಳಲ್ಲಿಯೂ ವೈದ್ಯಶಾಲೆಗೆ ಬರುವ ರೋಗಿಗಳನ್ನು ಪ್ರತಿಫಲವಿಲ್ಲದನೇ ಪರಿಶೋಧಿಸಿ, ಚಿಕಿತ್ಸೆ ನಿಶ್ಚಯಿಸಿ ಔಷಧ ಕೊಡುವರೆ ಸಿದ್ಧರಾಗಿರುವರು. ಅಪೇಕ್ಷಿಸಿದಲ್ಲಿ ಎಲ್ಲಾ ಔಷಧಗಳನ್ನು ಜಾಗ್ರತೆಯಿಂದ ವಿಳಂಬವಿಲ್ಲದೆ ವಿ. ಪಿ. ಮುಖಾಂತರ ಕಳುಹಿಸಲಾಗುವುದು.

೧. ಕುಮಾರ ಶಕ್ತಿವರ್ಧಕ—
ಇದು ಮಕ್ಕಳ ಆರೋಗ್ಯಾಭಿವೃದ್ಧಿಗೆ ದಿವ್ಯ ಔಷಧ.

1. ಇದು ಶಕ್ತಿವರ್ಧಕ—ರಕ್ತ ಪುಷ್ಟಿಕಾರಿಯಾಗಿರುತ್ತದೆ. ಮತ್ತು ವಳಜ್ವರ, ಗ್ರಹಿಣಿ, ಕ್ರಿಮಿದೋಷ ವಗೈರೆ ಮಕ್ಕಳ ಎಲ್ಲಾ ರೋಗಗಳನ್ನು ಪರಿಹರಿಸಿ ದೇಹವನ್ನು ಪುಷ್ಟಿ ಮಾಡುತ್ತದೆ. ಇದು ರೋಗವಿಲ್ಲದ ಮಕ್ಕಳ ಆರೋಗ್ಯ ಸೌಖ್ಯಕ್ಕಾಗಿ ಉಪಯೋಗಿಸಬಹುದು. ೧ ಸೇರು ಅರ್ಧ ಬಾಟ್ಲಿ ಕ್ರಯ ೨—೮—೦

೨. ಕೇಶ ಭೂಷಣ ತೈಲ—ಇದರಿಂದ ತಲೆ ಕೂದಲು ಪುಷ್ಟಿಯಾಗಿಯೂ, ಕಪ್ಪಾಗಿಯೂ, ಉದ್ದವಾಗಿಯೂ ಬರುತ್ತದೆ. ಮೆದುಳಿಗೆ ಅತ್ಯಂತ ಹಿತಕಾರಿಯಾಗಿರುತ್ತದೆ. ೬ ಔನ್ಸಿನ ಬಾಟ್ಲಿ ೧ಕ್ಕೆ ಕ್ರಯ ೧—೮—೦

೩. ಮದನಾನಂದ ಲೇಹ್ಯ—ಇದು ಗಿಡಮೂಲಿಕೆಗಳಿಂದಲೇ ತಯಾರಿಸಿದ್ದಾಗಿಯೂ, ಸ್ತ್ರೀ ಪುರುಷರಿಗೆ ಇದರ ಸೇವನೆಯಿಂದ ದೇಹಾಲಸ್ಯವನ್ನು ಪರಿಹರಿಸಿ ಸಂಭೋಗೇಚ್ಛೆಯನ್ನು ಅನರವಗೊಳಿಸಿ ಸಂತರದಲ್ಲಿ ಆಯಾಸವನ್ನು ಶಾಂತಪಡಿಸಿ ಮಾಡುವದಲ್ಲದೆ ಜೀರ್ಣ ಶಕ್ತಿಯನ್ನು, ರಕ್ತ ಪುಷ್ಟಿಯನ್ನು ಉಂಟುಮಾಡುತ್ತದೆ. ಕ್ರಯ ಡಬ್ಬಿ ೧ಕ್ಕೆ ರೂ. ೩—೦—೦ (೧ ಸೇರು)

೪. ನಯನಾಮೃತ—ಕಣ್ಣು ತುರಿಸುವಿಕೆ, ದೃಷ್ಟಿ ಮಾಂದ್ಯ, ಇರುಳುಗಣ್ಣು, ನೀರು ಬರುವುದು ಇದರ ಮುಂತಾದ ಕಣ್ಣಿನ ಎಲ್ಲಾ ತರದ ರೋಗಗಳನ್ನು ಬಹು ಶೀಘ್ರತೆಯಾಗಿ ಗುಣಪಡಿಸುವುದು. ಅರ್ಧ ತೊಲೆಯ ಸೀಸೆ ೧ಕ್ಕೆ ಕ್ರಯ ರೂ. ೧—೦—೦

ವೈದ್ಯರ್ ವಿ. ಕೆ. ದಾಮೋದರ ನಂಬೀಶನ್
ಅಮೃತಕಲ್ಪ ವೈದ್ಯಶಾಲಾ,
ಕಾಸರಗೋಡು, ದ. ಕನ್ನಡ.

The Indian Tooth—ache Specific
ಹಲ್ಲುನೋವಿಗೆ ಖಾತ್ರಿಯಾದ ಔಷಧ.

ಇದನ್ನು ಒಂದು ಸಾರೆ ಉಪಯೋಗಿಸುವದರಿಂದ ಎಲ್ಲಾ ವಿಧದ ಹಲ್ಲು ನೋವುಗಳೂ, ವಸಡಿನ ರೋಗಗಳೂ ಅಂದರೆ ವಸಡಿನ ಶಿಥಿಲತೆ, ಬಾವು, ವ್ರಣ, ಕೀವು ಇತ್ಯಾದಿ ಖಂಡಿತವಾಗಿ ಗುಣವಾಗುತ್ತವೆ. ಕೊರೆದುಹೋದ ಮತ್ತು ಅಲ್ಲಾಡುವ ಹಲ್ಲುಗಳಿಂದ ಕಠಿಣ ನೋವು ಬಾಧಿಸುವವರಿಗೆ ಇದು ಒಂದು ದಿವ್ಯ ಔಷಧವಾಗಿದೆ. ಇದು ನೋವನ್ನು ಶಾಂತಪಡಿಸಿ ಹಲ್ಲುಗಳ ಬೇರುಗಳನ್ನು ಬಲಪಡಿಸುವದರಿಂದ ಹಲ್ಲುಗಳನ್ನು ಕಿತ್ತು ತೆಗೆಸುವ ಅವಶ್ಯವೇ ಇಲ್ಲ. ಈ ಔಷಧದ ಗುಣವನ್ನು ನೀವು ಪರೀಕ್ಷಿಸಿ ಎಲ್ಲರಿಗೂ ತಿಳಿಸಿರಿ.

ಸೀಸೆ ೧ಕ್ಕೆ ಕ್ರಯ ರೂ. 1—4—0. ಟಪ್ಪಾಲುಖರ್ಚು 4 ಆಣೆ ಪ್ರತ್ಯೇಕ. ವರ್ತಕರಿಗೆ ಒಮ್ಮೆಯೇ ೧೨ ಸೀಸೆ ತರಿಸಿಕೊಂಡರೆ ರೂ. 12 ಮಾತ್ರ. ಈ ಪೇಪರಿನಲ್ಲಿ ಬರೆದದ್ದು ತಿಳಿಸತಕ್ಕದ್ದು.

STANY BROTHERS, MANGALORE.

ಸೊಗಸಾದ ಕಾಫಿ ಹುಡಿ.

I. ಕ್ಲಾಸ್	0—10—0	ಒಂದು ರಾತಲಿಗೆ
II. ಕ್ಲಾಸ್	0—8—0	
III. ಕ್ಲಾಸ್	0—6—0	

ಹೊಟೇಲುಗಳಿಗೂ ವರ್ತಕರಿಗೂ ಧಾರಾಳವಾಗಿ ವ್ಯಾಪಾರ ಸಿಕ್ಕುವದು. ಮಾರಾಟ ದರಾಪಾರೀಯಾಗುವದು. ಈ ಪೇಪರಿನ ಹೆಸರು ಬರೆದದ್ದು ತಿಳಿಸತಕ್ಕದ್ದು.

STANY BROTHERS, MANGALORE.

ಸ್ವದೇಶಾಭಿಮಾನಿ

ಪ್ರತಿ ಶುಕ್ರವಾರವೂ ಪ್ರಕಟಿಸಲ್ಪಡುವುದು.

ರತ್ನೈರ್ಮಹಾರ್ಹೈಸ್ತುತುಷುರ್ನ ದೇವಾ । ನ ಭೇಜಿರೇ ಭೀಮವಿಷೇಣ ಭೀತಿಮ್ ॥
ಸುಧಾಂ ವಿನಾ ನ ಪ್ರಯಯುರ್ವಿರಾಮಂ । ನ ನಿಶ್ಚಿತಾರ್ಥಾದ್ವಿರಮಂತಿ ಧೀರಾಃ ॥ ೧ ॥

ದೊರೆಯಲನುಪಮರತ್ನಗಳು ಸಾ೦ । ಗರವ ಮಥಿಸಲು ಸುರರಿಗದರಿಂ । ಹರುಷವಾಯಿತೆ! ಮತ್ತೆ ವಿಷವ ಸುಡುತ ಬರುತಿರುವ ॥
ಗರಳಕವರಂಜಿದರೆ! ಸುಧೆಯನು । ಮರೆತು ಕ್ಷುದ್ರರ ತೆರದಿ ಕುಳಿತರೆ! । ತೆರೆಳಬಲ್ಲರೆ! ತೊರೆದು ಧೀರರು ನಿಶ್ಚಿತಾರ್ಥವನು ॥ ೧ ॥

ಪುಸ್ತಕ ೧೪ ಮಂಗಳೂರು, ತಾರೀಕು ೩ನೇ ದಶಂಬರ ಶುಕ್ರವಾರ ೧೯೨೦. ಸಂಚಿಕೆ ೪೯

'ನೈಟ್ರೇಟ್ ಒಫ್ ಸೋಡಾ'

ಹೊಗೆಸೊಪ್ಪು, ಕಬ್ಬು, ತೆಂಗು, ಅಡಕೆ, ಮಾವು, ವೀಳ್ಯದೆಲೆ, ಬತ್ತ, ತರಕಾರಿ ಮೊದಲಾದ ಪೈರುಗಳಿಗೆ ಮತ್ತು ಹೂತೋಟಗಳಿಗೆ ಬಹಳ ಸಾರವತ್ತಾದ ಗೊಬ್ಬರ.

ಈ ಗೊಬ್ಬರವು ಒಂದು ಬಗೆಯ ರಾಸಾಯನಿಕ ಉಪ್ಪು. ಹಲವು ಪ್ರಾಂತ್ಯಗಳಲ್ಲಿ ಇದರ ಉಪಯೋಗದಿಂದ ಹುಲುಸಾದ ಬೆಳೆಯನ್ನು ಪಡೆದಿರುತ್ತಾರೆ.

ಬೆಳೆಗಳಿಗೆ ಅಗತ್ಯವಿರುವ ನೈಟ್ರೊಜನ್ ಅಥವಾ ಸಾರಜನಕವು 15—16% ಅಂದರೆ ಬೂನುಗೊಬ್ಬರದಲ್ಲಿನಕ್ಕಿಂತ ಎರಡು ಮೂರು ಪಾಲಷ್ಟು ಜಾಸ್ತಿ ಬೆರತಿರುವದು. ಎಕ್ರೆಗ 100—200 ರಾತ್ತಲ ಸಾಕಾಗುವದು.

ಪರಸ್ಪರ ಸಹಾಯಕ ಸಂಘಗಳು ಇದನ್ನು ಹಳ್ಳಿಯವರಿಗೆ ಒದಗಿಸಿ ಕೊಡುವುದಕ್ಕೆ ಅನುಕೂಲವಾಗುವ ಹಾಗೆ ಏರ್ಪಾಡುಗಳನ್ನು ಮಾಡಬಹುದು.

"ಕೃಷಿ ಸುಧಾರಣೆ" ಎಂಬ ಸಚಿತ್ರ ಪಹಿಯನ್ನು ಕನ್ನಡ ಭಾಷೆಯಲ್ಲಿ ನಮ್ಮಿಂದ ಧರ್ಮಾರ್ಥವಾಗಿ ಪಡೆಯಬಹುದು.

ದಿ ಚಿಲಿಯನ್ ನೈಟ್ರೇಟ್ ಕಮಿಟಿ,
1 ರೋಯಲ್ ಎಕ್ಸ್‌ಚೇಂಜ್ ಪ್ಲೇಸ್, ಕಲ್ಕತ್ತಾ.

The Director, Chilean Nitrate Committee,
(INDIAN DELEGATION),
1, Royal Exchange Place CALCUTTA.

ದೇನೆಯುಂಟಾದಾಗ ಚೇತನವು ಕಡಿಮೆಯಾಗುವುದೆಂಬುದು ಸಕಲರಿಗೂ ತಿಳಿದಿರುವ ವಿಷಯ. ಯೋಚಿಸಿ ನೋಡಿದರೆ ಬಹು ವೇಗದಿಂದ ಶಕ್ತಿಯನ್ನು ಕುಂದಿಸಿ ಬಿಡುವ ಶತ್ರುವು ಬೇನೆಗಲ್ಲದೆ ಮತ್ತೊಂದಕ್ಕಿರದು. ಅಂಥಾ ಬೇನೆಯನ್ನು ನಿವಾರಣೆ ಮಾಡುವುದಕ್ಕೆ ತಕ್ಕ ಔಷಧವು

ಅಮೃತಾಂಜನ

ಹೊರತು ಮತ್ತೊಂದಿಲ್ಲವೆಂಬುದು ಖಾತ್ರಿ.

ಇದನ್ನು ಉಪಯೋಗಿಸುವುದರಿಂದ ಬೇನೆಯು ಒಂದೇ ಕಡೆಯಲ್ಲಿ ನಿಲ್ಲದು. ಇದು ಯಾ ತರದ ಶಿಡಿತವನ್ನಾದರೂ ನೋವನ್ನಾದರೂ ಗುಣಪಡಿಸುವುದು. ಬೇನೆಯನ್ನು ಉಪಶಮನ ಮಾಡು ವಿಶೇಷವಾದ ಲಕ್ಷಣಗಳಿಂದ ಕೂಡಿ, ತರ ತರದ ನೋವನ್ನು ಗುಣಪಡಿಸಿ ನಿವಾರಣೆ ಮಾಡುವ ದಿವ್ಯ ಔಷಧ.

ಕ್ರಯ ಡಬ್ಬಿ 1ರ 10 ಆಣೆ. ಡಜನ್ 1ಕ್ಕೆ ರೂ. 5—12—0

ಗಜಕರ್ಣದ ಮುಲಾಮು:—ಮೂರು ಸರ್ತಿ ಹಾಗಿಸುವುದರೊಳಗೆ ಗಜಕರ್ಣವು ಖಂಡಿತವಾಗಿ ನಾಶವಾಗುವುದು. ಕ್ರಯ ಡಬ್ಬಿ ಒಂದರ ರೂ. 0—6—0.

ದಂತಮಂಜನ:—ಈ ಉತ್ತಮವಾದ ದಂತಮಂಜನವನ್ನು ಉಪಯೋಗಿಸುವುದರಿಂದ ಹಲ್ಲುಗಳು ಶುಭ್ರವಾಗುತ್ತವೆ. ರಕ್ತ ಬರುವುದು ನಿಲ್ಲುತ್ತದೆ. ಹಲ್ಲುಗಳು ಗಟ್ಟಿಯಾಗುತ್ತವೆ. ಇದು ಸುವಾಸನೆಯಿಂದ ಕೂಡಿ ಉತ್ತಮವಾಗಿರುತ್ತದೆ. ಡಬ್ಬಿ ೧ರ ಆಣೆ.

ಅಮೃತಾಂಜನ ಡಿಪ್ಪೊ,
6. 7 ತಂಬುಚೆಟ್ಟಿ ಸ್ಟ್ರೀಟ್, ಜೋರ್ಜ್ ಟೌನ್, ಮದ್ರಾಸು.
109 ಫ್ರೇಯರ್ ರೋಡ್, ಮುಂಬಯಿ.
ಮಂಗಳೂರಲ್ಲಿ—ಊಲನ್ ಮಾರ್ಟ್, ಹಂಪನಕಟ್ಟೆ, ಇವರಲ್ಲಿಯೂ ದೊರಕುವುದು.

For Sale!

THE WELL KNOWN
"MISSION" UMBRELLAS
(MADE IN ENGLAND)

Strong and well made

Sizes	23	25	27
Prices	Rs. 6-4-0.	6—8—0.	6—12—0 each.

The Famous Acme Razors
(SWEDISH MADE)
Now available at the prewar price of
Rs. 2—8—0 each.
Cheap at double the price

Apply to—
The Commonwealth Stores,
(*Late M. M. Branch, Mangalore*).

ಮಾತಕಷಾಯ

U. B. DUTT & Co. CALICUT.

ಮಲೆಯಾಳ ದೇಶವು ಔಷಧಗಳಿಗೆ ಕೀರ್ತಿಹೊಂದಿದ ಪ್ರದೇಶವು. ಅಲ್ಲಿನ ಕಾಡುಗಳಲ್ಲಿ ಅತಿ ಪ್ರಯಾಸದಿಂದ ವಾತ್ಸ್ಯಾಯನ ನಾರುಬೇರುಗಳಿಂ ನಾವು ಅನೇಕ ಉತ್ಕೃಷ್ಟ ಔಷಧಗಳನ್ನು ಸಿದ್ಧಪಡಿಸಿ, ಅನೇಕ ಕಾಲದಿಂದ ಉಪಯೋಗಿಸುತ್ತಿದ್ದೇವೆ. ಇದಕ್ಕೆ ಪ್ರತಿಫಲವಾಗಿ, ಅನೇಕಾನೇಕರು ಅವುಗಳಿಂ ಗುಣಹೊಂದಿರುವುದಲ್ಲದೆ, ನಮಗೆ ಪ್ರತಿನಿತ್ಯವೂ "ಆರ್ಡರ್‌ಗಳೂ" ಬರುತ್ತಲಿವೆ. ಈ ಭಾಗದಲ್ಲಿ, ಗುಣಹೊಂದಿದವರಿಂದ ನಮಗೆ ಬಂದಿರುವ ಕಾಗದಗಳು ಯೋಗ್ಯತಾಪತ್ರಗಳೂ ಹೇರಳವಾಗಿವೆ.

ಅಂಥಾ ಉತ್ಕೃಷ್ಟ ಔಷಧಿಗಳಲ್ಲಿ ನಮ್ಮ "ವಾತಕಷಾಯವು" ಎಲ್ಲಾ ವಿಧದ ವಾತಗಳನ್ನು ಗುಣಪಡಿಸುತ್ತದೆ. ಗಂಟುಗಳಲ್ಲಿರುವ ನೋವು ಅವಯವಗಳಲ್ಲಿ ಊದುವ ಸ್ವಭಾವ, ಗಂಟು, ಸಂದು, ಅವಯವ, ಅಂಡಕೋಶ ಮೊದಲಾದವು ಕೆಂಪಾಗಿ ನೋವುಂಟಾಗುವುದು; ನಡೆಯಲು ಆಗದೆ ಇರುವುದು, ಕೈಕಾಲು ಅಲ್ಲಾಡಿಸುವಾಗ ವಿಪರೀತ ನೋವಾಗುವುದು; ಮೂತ್ರದಲ್ಲಿ ದೋಷ ಬರುವುದು; ಇತ್ಯಾದಿಗಳಲ್ಲಿ ಯಾವುದಾದರೂ ಒಂದು ನಿಮ್ಮಲ್ಲಿಯಾಗಲಿ ನಿಮ್ಮ ಸ್ನೇಹಿತರಲ್ಲಿಯಾಗಲಿ ಕಾಣಿಸಿಕೊಂಡರೆ, ಕೂಡಲೇ ನಮ್ಮ "ಕಷಾಯ" ತೆಗೆದುಕೊಳ್ಳಲು ಪ್ರಾರಂಭಮಾಡಿರಿ. ಅದನ್ನು ಕ್ರಮವಾಗಿ ಸೇವಿಸುವುದರಿಂದ ನಿಮ್ಮ ರೋಗವು ಸಂಪೂರ್ಣ ಗುಣಹೊಂದುವುದರಲ್ಲಿ ಯಾವ ಸಂಶಯವೂ ಇಲ್ಲ, ಇದಲ್ಲದೆ ಪಿತ್ತ, ವಾತ, ಕಫ, ಅಜೀರ್ಣ, ಕಾಲರಾ, ಕಾಮಾಲೆ, ಉಬ್ಬಸ, ಕೆಮ್ಮು ಜ್ವರ, ತಲೆನೋವು, ಧಾತುಪುಷ್ಟಿ, ಹಲ್ಲುನೋವು, ಕಿವಿನೋವು, ಆಮಶಂಕೆ, ಮೊದಲಾದವೆಲ್ಲಕ್ಕೂ ದಿವ್ಯೌಷಧಗಳಿವೆ. "ಕ್ಯಾಟಲಾಗ್"ನ್ನು ನೋಡಿ.

ಕ್ರಯ ರೂ. 4—4—0.

ಯು. ಬಿ. ದತ್ತ ಕಂಪೆನಿ,
ಕಲ್ಲಿಕೋಟೆ ಮಲಬಾರ.

ವಿಕ್ರಯಕ್ಕೆ ಇಟ್ಟಿವೆ!

ಇಂಗ್ಲೆಂಡಿನಲ್ಲಿ ತಯಾರಾಗಿ "ಮಿಶ್ಯನ್ ಕೊಡೆಗಳು"
ಎಂದು ಹೆಸರುವಾಸಿಯಾಗಿರುವ
ಬಲವಾದ ಕೊಡೆಗಳು.

ಆಳತೆ	23 ಇಂಚು ಉದ್ದ	25 ಇಂಚು	27 ಇಂಚು
ಬೆಲೆ	ರೂ. 6-4-0.	ರೂ. 6-8-0.	ರೂ. 6-12-0.

ಪ್ರಖ್ಯಾತ ಎಕ್ಮ್ ಕ್ಷೌರಕತ್ತಿಗಳು.
(ಸ್ವೀಡನ್ನಿನಲ್ಲಿ ತಯಾರಾದವುಗಳು)
ಯುದ್ಧದ ಹಿಂದಿನ ಕಾಲದ ಧಾರಣೆಯಲ್ಲಿಯೇ
ಈಗ ಮಾರಾಟಕ್ಕೆ ಇಟ್ಟಿವೆ! ಬೆಲೆ: ರೂ. 2—8—0 ಮಾತ್ರ!
ಇದಕ್ಕಿಂತ ಇಮ್ಮಡಿ ಬೆಲೆ ಕೊಟ್ಟರೂ ಅಗ್ಗವೆಂತಲೆ
ಹೇಳುವಷ್ಟು ಒಳ್ಳೇ ಮಾಲು!

ಕೆಳಗಿನ ವಿಳಾಸಕ್ಕೆ ಬರೆದು ತರಿಸಿಕೊಳ್ಳಬಹುದು—
ದಿ. ಕೋಮನ್‌ವೆಲ್ತ್ ಸ್ಟೋರ್ಸ್,
(ಮೊದಲು ಮಂಗಳೂರಿನ ಮರ್ಕೆಂಟೈಲ್ ಮಿಶ್ಯನ್ ಶೋಪ್).

ಪ್ರತಿಯೊಬ್ಬ ಕುಟುಂಬಿಕನೂ ಹತ್ತಿರವೇ
ಇಟ್ಟುಕೊಳ್ಳಬೇಕಾದ

ಸರಸ್ವತಿ ವಿಲಾಸದವರ
★ ಸುದರ್ಶನ ತೈಲ. ★
M. S. G. B & SONS. MANGALORE.

ಮುದ್ದೆಣ, ಕಣ್ಣು ಕುರು, ಕರ್ಣಶೂಲೆ, ಅಸಾಧ್ಯವಾದ ಕುರು, ವೈಲ್ಯುಯಾನ ಬಾವು, ಕಠಿಣವಾದ ಗಜಕರ್ಣ, ತುರಿಕಜ್ಜಿ, ಮುಂತಾದವನ್ನು ನಿಸ್ಸಂದೇಹವಾಗಿ ನಿರ್ಮೂಲ ಮಾಡುವ ದಿವ್ಯೌಷಧ.—ಅನುಪಾನ ಪಟ್ಟಿ ಸಮೇತ ಬಾಟ್ಲಿ 1ರ ಕ್ರಯ 0—4—0. ವಿ. ಪಿ. ಬೇರೆ.

ಸರಸ್ವತಿ ವಿಲಾಸದವರ ರಿಂಗ್ವರ್ಮ ಮುಲಾಂ.

ಗಜಕರ್ಣ—ಸೊಂಟಕಜ್ಜಿ, ಕೂದಲು ನಾಶಮಾಡುವ ಹುಳುಗಳ ಮೇಲೆ ರಾಮಬಾಣ. ಬಾಟ್ಲಿ 1ರ ಕ್ರಯ 0—5—0. ವಿ. ಪಿ. ಬೇರೆ.

ನಮ್ಮ ವಿಳಾಸ:—
ಯಮ್. ಸುಬ್ರಾಯಗಿರಿಭಟ್ಟ ಎಂಡ್ ಸನ್ಸ್,
ಸರಸ್ವತಿ ವಿಲಾಸ ರಥಬೀದಿ, ಮಂಗಳೂರು

Come! See! & Try!

P. Narayana Vaijappa
Bhandary & Co.,
Cloth Merchants,
Car Street, MANGALORE.

ಮದಿವೆ ಉಪನಯನಗಳ, ಹಬ್ಬ ಉತ್ಸವಗಳ ಕಾಲದಲ್ಲಿ ಮತ್ತು ನಿತ್ಯದಲ್ಲಿ ಉಪಯೋಗಕ್ಕೆ ಬೇಕಾದಂಥಾ ಸೀರೆಗಳು, ರವಕೆ ಕಣಗಳು, ಧೋತ್ರಗಳು, ನಾನಾ ಬಗೆಯ ಅಂಗೀ ವಸ್ತ್ರಗಳು, ಧೋತಿಗಳು, ಟೋಪಿಗಳು ಇತ್ಯಾದಿ ಉಡುವುತೊಡುವುಗಳಿಂದ ನಮ್ಮ ಮಳಿಗೆಯನ್ನು ತುಂಬಿಸಿರುತ್ತೇವೆ.

ರಖಂ ವ್ಯಾಪಾರಸ್ಥರಿಗೆ ವಿಶೇಷವಾದ ಸುಲಭ ದರಗಳು. ನಗದಿ ಗಿರಾಕಿಗಳಿಗೆ ಡಿಸ್ಕೌಂಟು ಕೊಡೋಣಾಗುತ್ತದೆ.

ಪಿ. ನಾರಾಯಣ ವೈಜಪ್ಪ ಭಂಡಾರಿ ಮತ್ತು ಕಂಪೆನಿ,
ರಥಬೀದಿ, ಮಂಗಳೂರು.

THE WORLD RENOWNED

HAARLEM OIL.

OF THE ORIGINAL INVENTOR—CLASS TILLY.

Avoid Imitations—Write or call for the papers dealing with the history of the origin HAARLEM OIL.

Available only for—**The Bombay Stores,**

Mangalore,

Sole distributers for India, Burma and Ceylon.

ಲೋಕ ಪ್ರಸಿದ್ಧವಾದ

ಚೊಕ್ಕ ಹಾರ್ಲೆಮ್ ತೈಲ ಕಲ್ಪಕನಾದ ಕ್ಲೆಸ್ ಟಿಲ್ಲಿಯ ಜೆನ್ಯುಇನ್ ಯಾನೆ ತಾಜಾ ಹಾರ್ಲೆಮ್ ತೈಲವು.

ಬಾಟ್ಲಿ ಗಳ್ಕೆ ಕ್ರಯ ಬರೇ ೬ ಆಣೆ ಮಾತ್ರ. ರಖಂ ಗಿರಾಕಿಗಳಿಗೆ ಪ್ರತ್ಯೇಕ ದರ. ಕೃತ್ರಿಮ ಹಾರ್ಲೆಮ್ ತೈಲವನ್ನು ತ್ಯಜಿಸಿರಿ! ಮೂಲ ಶೋಧಿತನಾದ ಕ್ಲೆಸ್ ಟಿಲ್ಲಿಯ ಹಾರ್ಲೆಮ್ ತೈಲ ಯಾವುದು? ಎಂಬುದನ್ನು ತಿಳಿಯಪಡಿಸುವ ಪತ್ರಗಳನ್ನು ಕರೆಯಿಸಿರಿ.

ದೊರಕುವ ವಿಳಾಸ:—

ದಿ. ಬೊಂಬೇ ಸ್ಟೋರ್ಸ್,

ಮಂಗಳೂರು. (ದ. ಕನ್ನಡ)

ಪುತ್ತೂರಿನಲ್ಲಿ: ಬೆಳ್ಳಾರೆ ನರಸಿಂಹ ಮಲ್ಯ,

ಬೊಂಬಾಯಿ ಸ್ಟೋರಿನ ಹಾರ್ಲೆಮ್ ತೈಲ ಮಾರುವ ಏಜಂಟರು.

{ ಇಂಡಿಯಾ, ಬರ್ಮಾ ಮತ್ತು ಸಿಲೋನು ಪ್ರಾಂತ್ಯಗಳಲ್ಲಿ ಕ್ಲೆಸ್ ಟಿಲ್ಲಿಯ ತಾಜಾ ಹಾರ್ಲೆಮ್ ತೈಲವನ್ನು ಮಾರಾಟ ಮಾಡಲು ಸಂಪೂರ್ಣ ಸ್ವತಂತ್ರ ವನ್ನುಳ್ಳ ಪ್ರಾಮುಖ್ಯ ಏಕೆಂಟಾರರು.

ಮಲೇರಿಯಾ ಜ್ವರ
ಮಲೇಜ್ವರಹಾರಿ.

ಮಲೇರಿಯಾ ಮುಂತಾದ ಆಗಾಗ ಬರುವ ಜ್ವರಗಳಿಗೆ ಉತ್ತಮ ಔಷಧ.

ವಿಷಮಯವಾದ ಪದಾರ್ಥಗಳು ಒಂದು ರೋಗ ನಿವಾರಣೆಗೆ ಸಹಕಾರಿಯಾದರೂ ಇನ್ನೊಂದು ರೋಗಗಳ್ನು ಎಬ್ಬಿಸುತ್ತವೆ. ಅಂಥ ವಿಷಮಯವಾದ ಪದಾರ್ಥಗಳು ಇದರಲ್ಲಿ ಲವಮಾತ್ರವೂ ಇಲ್ಲ.

ಹಿಂದುಸ್ಥಾನ, ಬರ್ಮಾ, ಸಿಂಹಳ ಮುಂತಾದ ಪ್ರದೇಶಗಳ ಬೇರೆ ಬೇರೆ ಕೊನೆಗಳಿಂದಲೂ ಕಳೆದ ೨೦ ವರ್ಷಗಳಲ್ಲಿ ಅಸಂಖ್ಯಾತವಾದ ಶಿಫಾರಸು ಪತ್ರಗಳು ನಮಗೆ ಬಂದಿವೆ.

ಪ್ರಸಿದ್ಧ ವೈದ್ಯಕೀಯ ಅಧ್ಯಾಪಕರಾದ ಡಾ. ಮನ್‌ಸುಖಲಾಲರು ಈ ರೀತಿಯಾಗಿ ಬರೆದಿರುತ್ತಾರೆ:—"ಬೇರೆ ಬೇರೆ ವಿಧದ ಜ್ವರಗಳ ಸಂದರ್ಭಗಳಲ್ಲಿ ನಾನು ಈ ಔಷಧವನ್ನು ಪ್ರಯೋಗಿಸಿದಾಗ ಅದರಿಂದ ಶೀಘ್ರದಲ್ಲಿ ಗುಣಾಂಶ ಸಿಕ್ಕಿತು."

ನಮ್ಮ ಏಜಂಟರು ಈ ಮೊದಲೇ ನೇಮಕವಾಗದ ಸ್ಥಳದಲ್ಲಿ ನಮಗೆ ಏಜಂಟರು ಬೇಕು. ಕಮ್ಮಿಶನ್ ಮುಂತಾದ ಶರ್ತಗಳನ್ನು ನಮಗೆ ಬರೆದು ತಿಳಿದುಕೊಳ್ಳಬಹುದು.

ಕರ್ಣಾಟಕ ಬ್ರದರ್ಸ್,

65 ಗಿರಗಾಂವ, ಮುಂಬಯಿ.

Agent:—

The Woollen Mart, *Mangalore.*

"ಕಾಮಶಾಸ್ತ್ರ"

ಉತ್ತಮವಾದ ಈ ಪುಸ್ತಕವು ಅನುಕೂಲವಾಗಿ ತಮ್ಮ ದೇಹದ ವಿಷಯಕ್ಕೆ ಮತ್ತು ಆರೋಗ್ಯ ಅನುಕೂಲಕ್ಕೆ ತಕ್ಷಣ ಬರಿಯುವಲ್ಲಿ ಅಂಚೆಯ ಹಾಸಲು ಸಹಾ ನಿರೀಕ್ಷಿಸದೇ ಕಳುಹಿಸುವೆವು.

ಮತ್ತು

ಪ್ರಸಿದ್ಧವಾದ ಆತಂಕನಿಗ್ರಹ ಗುಳಿಗೆಗಳನ್ನು ಯಾವಾಗಲೂ ತಮ್ಮ ಪ್ರಿಯಮಿತ್ರರ ಹಾಗೆ ಭಾವಿಸಿ ಉಪಯೋಗಿಸುವಲ್ಲಿ ನಿರಾಧಾರವಾದ ಆಲೋಚನೆಗಳನ್ನು ಹೋಗಲಾಡಿಸಿ ಅಮೃತದ ಹಾಗೆ ದೇಹದಾರ್ಢ್ಯವನ್ನುಂಟು ಮಾಡುತ್ತಾ ಇರುವುದು. ಕ್ರಯ ರೂ. 1. ಎಚ್ಚರಿಗೆಯಿಂದ ಮರಿಯಬಾರದು.

ವಿಳಾಸ:—

ವೈದ್ಯಶಾಸ್ತ್ರಿ ಮಣಿಶಂಕರ ಗೋವಿಂದಜೀ,

ಆತಂಕನಿಗ್ರಹ ಔಷಧಾಲಯ, 167, ಜಾಮ್ನಗರ, ಮದರಾಸು.

Local Agents: **Raphael & Co.,**

Brito Buildings,

Hampankatta, MANGALORE.

ನೇಟಿವ್ ಡೊಕ್ಟರ್ಸ್ ಮೂಲ್ಕಿ ಗಣಪಯ್ಯ ಎಂಡ್ ಸನ್ಸರವರ

ಖ್ಯಾತಿಯಿಂದ ಗುಣಪಡಿಸುವ ಔಷಧಗಳು.

1. ಮಹಾಮದನ ಕಾಮೇಶ್ವರಿ ಲೇಹ:—ಬಹಳ ಶ್ರಮಪಟ್ಟು ಕೆಲಸಮಾಡುವ ಲೇಖಕರೂ ಮತ್ತು ಇಂದ್ರಿಯ ದೌರ್ಬಲ್ಯ, ಅಜೀರ್ಣ, ಎದೆನೋವು, ಮಲಬದ್ಧತೆ, ಶರೀರಗಳ ಫಳಿತದಿಂದ ಅಶಕ್ತಿ ಮೊದಲಾದ ಪ್ರಕೃತಿಯುಳ್ಳವರೂ ಇದನ್ನು ಸೇವಿಸಿದ್ದಲ್ಲಿ ರಕ್ತಶುದ್ಧಿ, ಧಾತುಪುಷ್ಟಿ ಮತ್ತು ಮುಖದಲ್ಲಿ ಕಾಂತಿಗೊಳಿಸುವುದು.

2. ಮಹಾಜ್ವರಾಂಕುಶ (ಖಾತ್ರಿ ಗುಣ):—ಇನ್‌ಫ್ಲುಯೆಂಜಾ ನಿಮೋನಿಯಾ, ಮಲೇರಿಯಾ, ದಿವಸಕ್ಕೊಮ್ಮೆ, ದ್ವಿತೀಯ ತೃತೀಯ ಚಾತುರ್ಥಿಕ ಜ್ವರಗಳ ಮೇಲೆ ರಾಮಬಾಣ. ಬಾಟ್ಲಿ 1ಕ್ಕೆ ಆಣೆ 8.

3. ಬಾಲಗ್ರಹಗುಟಿಕೆ:—ಕೂಸು ವ ಮಕ್ಕಳ ಅಪಸ್ಮಾರಕ್ಕೆ ರಾಮಬಾಣ. ಡಜನಿಗೆ ಆಣೆ 10.

4. ಕೊಲರಾ ಯಾನೆ ವಾಂತಿಬೇದಿ ಗುಟಿಕೆ:—ಒಂದೆರಡು ಗುಟಿಕೆಯಿಂದ ವಾಂತಿಬೇದಿ ಕೂಡಲೆ ಗುಣ. ಬರಿ ಅತಿಸಾರ ರಕ್ತಾತಿಸಾರ, ಜ್ವರಕೂಡಿರುವ ರಕ್ತಾತಿಸ್ಸಾರ, ಗ್ರಹಣಿಯಿಂದ ಯಾ ಹುಳದ ಉಪದ್ರದಿಂದ ಆಗುವ ಹೊರಕಡೆ ಗುಣ. ಬಾಟ್ಲಿ 1ಕ್ಕೆ ಆಣೆ 8.

5. ಶ್ವಾಸಕುಠಾರ ಗುಟಿಕೆ:—ಇದು ಶ್ವಾಸಕ್ಕೆ ಸಿದ್ಧ ಔಷಧಿ. ಒಂದೇ ಗುಟಿಕೆಯಿಂದ ಕಫ, ಉಬ್ಬುಸ, ಕೆಮ್ಮು, ಇವು ಗುಣ. ಡಜನಿಗೆ ಆಣೆ 10.

6. ಮೇಹಕುಠಾರ:—ಮೂತ್ರ ಕೃಚ್ಛ್ರ, ಅಶ್ಮರಿ, ಪ್ರಮೇಹ ಮೂತ್ರಹೋಗುವಾಗ್ಯೆ ಉರಿಯನ್ನೂ ಕೀವನ್ನೂ ಕೂಡಲೆ ನಿಲ್ಲಿಸಿ ಪಥ್ಯವಿಲ್ಲದೆ ಖಂಡಿತ ಗುಣಕೊಡುವದು; ಕಠಿಣ ರೋಗಿಗೂ ಕೂಡಾ 2 ದಿವಸದೊಳಗೆ ಗುಣಸಿಕ್ಕುತ್ತದೆ. 16 ದಿವಸದ ಔಷಧಿ. ಕ್ರಯ ರೂ. 2.

7. ಇಚ್ಛಾಭೇದಿ:—ಆಯಾಸವನ್ನು ಉಂಟುಮಾಡದ ಸುಖ ವಿರೇಚಕ. ಬಾಟ್ಲಿ 1ಕ್ಕೆ ಆಣೆ 12.

8. ಭೃಂಗರಾಜತೈಲ:—ತಲೆ ಉರಿ, ಕಣ್ಣು ಉರಿ, ಕಣ್ಣು ನೋವು, ನಿದ್ರೆಬಾರದೆ ಇರುವುದು, ಅರ್ಧ ತಲೆನೋವು, ಜ್ಞಾಪಕಶಕ್ತಿ ಕುಂದಿಹೋಗುವುದು, ಕೂದಲು ಉದುರಿ ಹೋಗುವುದು, ತಲೆ ತಿರುಗುವುದು, ಕೂದಲಿನ ಕಪ್ಪು ಬಣ್ಣವನ್ನು ಹೆಚ್ಚಿಸಿ ಉದ್ದವಾಗಿಯೂ ನುಣುಪಾಗಿಯೂ ಮಾಡುವುದು. ಬಾಟ್ಲಿ 1ಕ್ಕೆ ಆಣೆ 12.

9. ದಂತಮಂಜನ:—(ಕರ್ಪೂರ ಮಿಶ್ರ) ಹಲ್ಲಿನ ಕ್ರಿಮಿ ವಸಡುಗಳ ಬೀಗು, ಕೀವು ಯಾ ರಕ್ತ ಬರುವುದು, ಮುಂತಾದ ದಂತ ಸಂಬಂಧವಾದ ಸರ್ವ ಬಾಧೆಗಳನ್ನು ಶಾಂತಪಡಿಸುತ್ತದೆ. ಕರಡಿಗೆ 1ಕ್ಕೆ ಆಣೆ 2.

ವಿಳಾಸ:— ಮೂಲ್ಕಿ ಗಣಪಯ್ಯ ಎಂಡ್ ಸನ್ಸ್,

ನೇಟಿವ್ ಡಾಕ್ಟರ್ಸ್, ಮಂಗಳೂರು, ದ. ಕ.

ಶ್ರೀಮತ್ ಕಲ್ಯಾಣ ಬಂಧುಗಳೇ!

ಈ ಕಡೆ ನೋಡಿರಿ.

ಕಲ್ಯಾಣಕಾರಕವೆಂಬ ವೈದ್ಯಗ್ರಂಥಾಧಾರದಿಂದಲೂ ಅನೇಕ ರಾಜವೈದ್ಯರುಗಳಿಂದಲೂ ಪರಿಶೋಧಿಸಿ ತಯಾರಿಸಲ್ಪಟ್ಟ ಅನುಭವ ಸಿದ್ಧೌಷಧಗಳು ಈ ಕೆಳಗಣ ವಿಳಾಸದಾರರಲ್ಲಿ ದೊರೆಯುವವು. ಅಪೇಕ್ಷಕರು ಕೆಟಲೋಗನ್ನು ತರಿಸಿಕೊಂಡರೆ ಸಮಾಧಾನವಾಗುವದು.

S. P. RAJA & Co.,

Kalyanakaraka Bishagmandir.

POLALY, POST S. C

ಎಸ್. ಪಿ. ರಾಜಾ ಮತ್ತು ಕಂಪೆನಿ,

ಕಲ್ಯಾಣಕಾರಕ ಭಿಷಗ್ಮಂದಿರ, ಪೋಸ್ಟು ಪೊಳಲಿ, ದ. ಕ.

NETRANAND SAREES

Cheap and Fashionable

Sarees in all brilliant colours with lustrous borders.

Liberal Commission for wholesale Orders.

ಚಲೋ ಬಣ್ಣದ ಶೀರೆಗಳು! ಬಹಳ ಕಮ್ಮಿ ಕ್ರಯ!

ವಿವಿಧ ಬಣ್ಣಗಳ ಥಾಪಾಕೊಡೆದ "ನೇತ್ರಾನಂದ" ಆದವಾದ ಶೀರೆಗಳು ಕೆಳಗಿನ ಕಂಪೆನಿಯವರ ಹತ್ತರ ದೊರಕುತ್ತವೆ.

ವ್ಯಾಪಾರಸ್ಥರಿಗೆ ಒಳ್ಳೇ ಕಮಿಷನ ಕೊಡುವದು.

ನೂಲಿನ ಕೆಂಪು (Congo Red) ಹಳದಿ ಮತ್ತು ಇತರ ಬಣ್ಣಗಳು ಕಮ್ಮಿಕ್ರಯದಲ್ಲಿ ದೊರಕುವವು.

ವಿಶೇಷ ಮಾಹಿತಿಬಗ್ಗೆ ಕೆಳಗಿನ ವಿಳಾಸಕ್ಕೆ ಬರೆಯಿರಿ.

ಶ್ರೀ ಶೀತಾರಾಮವಿಠ್ಠಲ ಕಂಪೆನಿ,

ಮಿಲಾಗ್ರಿ ಇಗರ್ಜಿ ಎದುರು, ಹಂಪನಕಟ್ಟೆ ಮಂಗಳೂರು.

ಇಲ್ಲಿ ಬನ್ನಿ! ಬೆಲೆ ನೋಡಿ! ಸಾಮಾನುಗಳನ್ನು ಪರೀಕ್ಷಿಸಿರಿ!

ಶ್ರೀ

ಗಜಾನನ ಮೆಡಿಕಲ್ ಹೋಲ್

ಬಹು ನೂತನ ಅಲೋಪತಿ ಮತ್ತು ಹೋಮಿಯೋಪತಿ

ಔಷಧ ಮಂದಿರ, ರಥಬೀದಿ, ಮಂಗಳೂರು.

ಇಲ್ಲಿಗೆ ಒಂದು ಸಾರಿ ಬಂದು ಪರೀಕ್ಷಿಸಿ!

ಆ ಮೇಲೆ ನೀವು ಬೇರೆಕಡೆ ಹೋಗಲಾರಿರಿ!!

ನಮ್ಮಲ್ಲಿ ಎಲ್ಲಾ ವಿಧವಾದ ಔಷಧ ದ್ರವ್ಯಗಳೂ, ಪೇಟೆಂಟ್ ಇಂಗ್ಲೀಷ್ ಔಷಧಗಳೂ, ಸುಗಂಧ ದ್ರವ್ಯಗಳೂ, ಸೋಪುಗಳೂ, ಫೌಂಟನ್‌ಪೆನ್‌ಗಳೂ, ಥರ್ಮಾಮಿಟರ್ ಎಂಬ ಅತ್ಯುತ್ತಮ ಉಷ್ಣಮಾಪಕ ಯಂತ್ರಗಳೂ, ರಬ್ಬರಿನ ಪ್ರೊಟೆಕ್ಟೇಶನ್ ಚೀಲಗಳೂ, ಐಸ್ ಕ್ಯಾಪ್ ಮುಂತಾದ ಸರ್ವ ವಿಧವಾದ ಚಿಕಿತ್ಸೆಯ ಸಾಮಗ್ರಿಗಳೂ ಸ್ಪಿರಿಟ್ ಮುಂತಾದವುಗಳಿಗೆ ಉಪಯುಕ್ತವಾದ ಸ್ಪಿರಿಟ್ ದ್ರವವೂ, ನೀಲಗಿರಿಯ ಎಣ್ಣೆ ಎಂಬ ಯುಕಲಿಪ್ಟಸ್ ತೈಲವೂ ಬಹು ಸುಲಭ ಬೆಲೆಗೆ ತಾಜಾ ರೀತಿಯಲ್ಲಿ ದೊರೆಯುವವು.

ಹೋಮಿಯೋಪತಿ ಮತ್ತು ಬಿಕ್ಕ್ಯೊ ಔಷಧಗಳು

ನಿಮಗೆ ತಾಜಾ ಆಗಬೇಕಾದರೆ ನಮ್ಮಲ್ಲಿ ಬನ್ನಿ!

ಬಡವರಿಗೋಸ್ಕರ ಧರ್ಮಾರ್ಥ ಚಿಕಿತ್ಸೆ

ಪ್ರತಿನಿತ್ಯವೂ ಬೆಳಗ್ಗೆ ೯ ಗಂಟೆಯಿಂದ ೧೦ ಗಂಟೆಯ ವರೆಗೆ ಬಡವರಿಗೆ ಹೋಮಿಯೋಪತಿ ಮತ್ತು ಬಿಕ್ಕ್ಯೊ ಔಷಧಗಳನ್ನು ರೋಗಿಯನ್ನು ಪರೀಕ್ಷೆ ಮಾಡಿ, ಧರ್ಮಾರ್ಥವಾಗಿ ಕೊಡುವೆವು.

ಈ ಔಷಧಗಳನ್ನು ಶಾಸ್ತ್ರರೀತಿಯಾಗಿ ತಯಾರಿಸುವುದಕ್ಕೆ ನಮ್ಮಲ್ಲಿ ೨೦ ವರ್ಷಗಳ ಅನುಭವವುಳ್ಳವರಿರುವರು.

ನಮ್ಮಲ್ಲಿ ಔಷಧಗಳು ಹಗಲಿರುಳು ದೊರೆಯುವವು.

ಸುಲಭ ಬೆಲೆ! ಪ್ರಾಮಾಣಿಕ ವ್ಯಾಪಾರ! ರೋಗಗಳು ಗುಣವಾಗುವುದು ಬೇಗ!

ಇಲ್ಲಿ ಒಂದುಸಾರಿ ಪರೀಕ್ಷಿಸಿ!

—ಎಮ್. ರಾಮ ಕಾಮತ್,

ಪ್ರೊಪ್ರೈಟರ್.

ಲೂಯಿಸರ ಎಲಿಕ್ಸಿರ್ ಫೊರ್ ಹೆಲ್ತ್.

ಎಂಬುವ ಪಾನಕವು ಚಾ ಮತ್ತು ಕಾಫಿಗಳಿಗಿಂತ ಅತ್ಯಂತ ಹಿತಕರವಾದ ಪಾನವಾಗಿದ್ದು ಬಹುಮೂತ್ರಪೀಡೆ ಬಾರದಂತೆ ಆರೋಗ್ಯ ಕಾಪಾಡುತ್ತದೆ. ಬಾಯಾರಿಕೆ ತಗ್ಗಿಸುತ್ತದೆ. ಮೂತ್ರದ ಹಲವು ದೋಷಗಳನ್ನು ಹೋಗಲಾಡಿಸುತ್ತದೆ. ಒಮ್ಮೆ ಉಪಯೋಗಿಸಿದರೆ ಮತ್ತೆ ಇದನ್ನು ಬಿಡರು. ಪರೀಕ್ಷಾರ್ಥವಾಗಿ ಒಂದು ಸೀಸೆ ತರಿಸಿರಿ.

8 ಔನ್ಸಿನ ಸೀಸೆಗೆ ಕ್ರಯ ರೂ. 2–8–0 ಮಾತ್ರ.

ಡಾಯಬೆಟೊನ್.

ಇದು ಬಹುಮೂತ್ರದ ಪೀಡೆಗೆ ಅತ್ಯುತ್ತಮ ಔಷಧ. ಪೂರ್ಣ ಗುಣಮಾಡುತ್ತದೆ. ರೋಗಿಗಳಿಗೆ ಅಮೃತಪ್ರಾಯವಾಗಿದೆ. 8 ಔನ್ಸಿನ ಸೀಸೆಗೆ ರೂ. 5 ಮಾತ್ರ. ಅಂಚೆಹಾಸಲು ವಗೈರೆ ಇದರಲ್ಲಿ ಸೇರಿಲ್ಲ. ಸೇವನೆಯ ಸೂಚನೆಗಳು ಸೀಸೆಯೊಂದಿಗೆ ಸಿಗುವುವು.

P. M. Kamath & Co.

Chemists & General Merchants,

New Court Road, MANGALORE.

ಅಥವಾ ಕುಂದಾಪುರದಲ್ಲಿ ಈ ಔಷಧವನ್ನು ತಯಾರಿಸುವ ಮಿ| ಕೆ. ಆರ್. ಲೂವಿಸರನ್ನು ವಿಚಾರಿಸಿದರೆ ಈ ಔಷಧವನ್ನು ಹೊಂದಬಹುದು.

ಪುಸ್ತಕಗಳು.

ವಿಹಸ್ಯಕ್ತ ೧–೫–೦, ಸುಭದ್ರೆ ೦–೬–೦, ರಾಮಾಯಣ ಸಂಗ್ರಹ ಬಾಲಕಾಂಡ ೦–೬–೬, ಶ್ಯಾಮಕುಬ್ಜ ೦–೧೦–೦, ಚಿಕ್ಕ ಉಪಾಧ್ಯಾಯರ ಶುಕಸಪ್ತತಿ ೩–೦–೦, ಚಮಲಿ ೦–೧೨–೦, ಸಚಿತ್ರ ಆಂಗ್ಲ ಭಾಷಾ ಪ್ರಕಾಶಕಾ ಮೂರು ಭಾಗಗಳುಳ್ಳದ್ದು ೨–೮–೦.

ತೆಲಗು ಅಕ್ಷರದ ಸಂಗೀತ ಪುಸ್ತಕಗಳು.

ಸಂಗೀತ ಪ್ರದಾಯಿನಿ ೩–೩–೦, ಗಾಂಧರ್ವಕಲ್ಪವಲ್ಲಿ ೩–೦–೦, ಸಂಗೀತ ಕೃತಿದರ್ಪಣ ಪ್ರಥಮ ಭಾಗ ೨–೨–೦, ಎರಡನೇ ಭಾಗ ೨–೩–೦, ಸಂಗೀತ ಸ್ವರ ಪ್ರಸ್ತಾರಸಾಗರ ೫–೮–೦. ಅಡ್ವಾನ್ಸ್ ಅವಶ್ಯಕ.

ವಿಳಾಸ:—

ಎಚ್. ಎಸ್. ರಾವ್. ಬ್ರದರ್ಸ್,

ಚಿಕ್ಕಪೇಟೆ, ಬೆಂಗಳೂರು ಸಿಟಿ.

ಪ್ರಖ್ಯಾತಿಪಟ್ಟ

ಮಂಗಳೂರು ನಶ್ಯದ ಹುಡಿ.

ಸೊಗಸಾದ ಹೊಗೆಸೊಪ್ಪನ್ನು ಉಪಯೋಗಿಸಿ ಒಳ್ಳೇ ಅನುಭವಸ್ಥರಿಂದ ತಯಾರಿಸಲ್ಪಡುತ್ತದೆ. ಈ ನಸ್ಯವು ಒಂದೆರಡು ತಿಂಗಳವರೆಗಾದರೂ ಕೆಡುವುದಿಲ್ಲ.

ರಾತಲ್ 1ಕ್ಕೆ ಕ್ರಯ 3–4–0. ಹೆಚ್ಚಿಗೆ ತರಿಸುವವರಿಗೆ ರೂ. 3. ನಾಸಿಕ ರೋಗ ಇದು ಕಳೆದ ಮೇಲಿನ ಯಾವತ್ತು ರೋಗಗಳನ್ನು ಗುಣಪಡಿಸುತ್ತದೆ. ತೊಲೆ 1ಕ್ಕೆ ಕ್ರಯ 0–8–0. ವಿ. ಪಿ. ಖರ್ಚು ಪ್ರತ್ಯೇಕ. ಸ್ಯಾಂಪಲನ್ನು ಅಪೇಕ್ಷಿಸುವವರು 2 ಆಣೆ ಸ್ಟಾಂಪನ್ನು ಕಳುಹಿಸುವದು. ರಖಂ ಪಡಕೊಳ್ಳುವವರಿಗೆ ಯೋಗ್ಯವಾದ ಕಮಿಶನ್ ದೊರಕುವುದು.

ನಮ್ಮ ವಿಳಾಸ:—

ಎಮ್. ಪದ್ಮನಾಭ ಭಂಡಾರಿ ಎಂಡ್ ಕೊ.,

ರಥಬೀದಿ, ಮಂಗಳೂರು.

ಮುದ್ರಾಸ್ ಸರಕಾರದವರಿಂದ 1920ನೇ ವರ್ಷದ ಶಾಲೆಗಳಿಗೆ ಸೇರಿಸಲ್ಪಟ್ಟಿರುವ

ಕನ್ನಡ ಪಾಠಪುಸ್ತಕಗಳು.

	ರೂ. ಆ. ಪೈ.		ರೂ. ಆ. ಪೈ.
ರಾಮಾಯಣ ಸಙ್ಗ್ರಹ— ಬಾಲಕಾಂಡ	0 6 0	ಚಂದ್ರಹಾಸ	0 2 0
ಸುಂದರ ...	0 6 0	ಗುಣಾನುಪಂಚ	0 6 0
ಪಂಚಮಂತ್ರ	0 12 0	ನಿತ್ಯಬೋಧಸಾಮಾಜಿಕ ಭಾಗ I	0 4 0
ಪದ್ಯಸಾರ ಭಾಗ I	0 8 0	„ „ II	0 3 0
		„ „ III	0 4 6
ಅಕ್ಬರ್ ಚರಿತ್ರೆ	1 4 0	ಹೊಸ ಪುಸ್ತಕಗಳು.	
ರಾಜಕುಮಾರ ಚರಿತ್ರೆ	1 0 0	ವಿಕಟವಲ್ಲಂ	0 6 0
ಪ್ರಮುಖಸುಧನ್ವನ ಜೀವನ ಚರಿತ್ರೆ	1 0 8 6	ಸುಕೇಲು	0 1 6
ಅಧಿಕಾರಿಗಳ ಪತ್ರಿಕೆ	0 6 0	ಚಂದ್ರಮತಿ	0 8 0
ಸಾವಿತ್ರೀ ಚರಿತ್ರೆ	0 2 3	ಸಂತಾಪಕ	0 6 0
ರಮಾನಂದ	0 10 0	ಅಲಂಕಾರಸಹಿತ ರಕ್ತಮಾಲಿ	2 0 0
ಸುವ್ರತ	0 13 0	ನಿರ್ಮಲಿ	0 12 0
ಪ್ರಬಂಧಮಂಜರಿ	0 14 0	ಪದಪ್ರಯ (ಬಾಲವ್ಯಾಕರಣ)	0 3 6
ಪ್ರಭಾಕರಪ್ರಜ್ಞಾನಪ್ರಕಾಶ	0 14 0	ಹಿಂದೂ ಪ್ರತಾಪವೇಕ	0 10 0
ಶ್ರೀಕೃಷ್ಣ	1 0 0	ಪದ್ಮಿನಿ	0 12 6
ಪ್ರಹ್ಲಾದ	0 2 0	ಚಾಣಕ್ಯ ...	0 8 0
ಕಾಬಚೇಕ	0 2 0	ಪ್ರಹ್ಲಾದ ಲಕ್ಷ್ಮೀಬಾಯಿ	0 12 0

ಯುರೋಪಿನ ... ಎಲ್ಲಾ ಸ್ಕೂಲ್ ಪುಸ್ತಕಗಳೂ ನಮ್ಮಲ್ಲಿ ಸುಲಭ ಬೆಲೆಗೆ ದೊರಕುವವು.

ಎಂ. ಎಸ್. ರಾವ್ ಕಂಪೆನಿ,
ಪುಸ್ತಕವ್ಯಾಪಾರಿಗಳು, ಬೆಂಗಳೂರು ಸಿಟಿ

ರೂಪಾಯಿ ೨೫—೦—೦ ಬಹುಮಾನ.

ಬಂಟರ ಯಾನೆ ನಾಡವರ ಜಾತಿಯ ಏಳಿಗೆಯ ವಿಷಯವಾಗಿ ೨೪ ಪಂಕ್ತಿಗಳಿಗೆ ಮೀರದ ಅತಿ ಸುಲಭ ಶೈಲಿಯಲ್ಲಿ ಅಂದರೆ ಸಾಧಾರಣವಾಗಿ ಶಾಲೆಗಳಲ್ಲಿ ಪ್ರತಿ ಒಬ್ಬರ ಮನೆಯಲ್ಲಿಯೂ ಹಾಡಲಿಕ್ಕೆ ತಕ್ಕುದಾದಂಥ ಉತ್ತಮವಾದ ಬರೆದು ಸಣ್ಣ ಕನ್ನಡ ಹಾಡನ್ನು ಬರೆದು ಕಳುಹಿಸುವವರಿಗೆ ಇದೆ ಬರುವ ಡಿಸೆಂಬರ ೩೧ನೇ ದಿನಕ್ಕೆ ಪುತ್ತೂರಲ್ಲಿ ಜರಗಿಸಲಿಕ್ಕಿರುವ ಸಂಘದ ಮಹಾಸಭೆಯಲ್ಲಿ ರೂಪಾಯಿ ೨೫ ಕೊಡಲ್ಪಡುವುದು ಕೆನರಾ ಛಾಪಖಾನೆಯವರಿಂದ ಇನಾಮಾಗಿ ಕೊಡಲಾಗುವುದು. ಹಾಡನ್ನು ಡಿಸೆಂಬರ ತಾ ೨೦ರ ಒಳಗೆ ಕೆಳಗಿನ ವಿಳಾಸಕ್ಕೆ ಕಳುಹಿಸಿಕೊಡಬೇಕು

1—12—'20　　　　ಕೆನರಾ ಛಾಪಖಾನೆ, ಮಂಗಳೂರು.

ದಕ್ಷಿಣ ಕನ್ನಡಾ ಡಿಸ್ಟ್ರಿಕ್ಟ್ ಕೋರ್ಟಿನಲ್ಲಿ.

O P. ನಂಬ್ರ 147/1920

ಕೊರಗಪ್ಪ ಕೂಡಾ—ಅರ್ಜಿದಾರರು
ಮತ್ತು
ಕರಿಯ ಕೂಡಾ—ರೆಸ್ಪೊಂಡೆಂಟರು.

ಮೇಲಿನ ವ್ಯವಹರಣೆಯಲ್ಲಿ ಸದರಿ ಅರ್ಜಿದಾರರು ಮೃತಪಟ್ಟ ತಮ್ಮಣ್ಣಪೂಜಾರಿ ಮತ್ತು ಲಿಂಗುಪೂಜಾರಿಯ ಸಾಲವನ್ನು ಬರವಮಾಡಿ ಕೊಳ್ಳುವರೆ 1ನೇ ಅರ್ಜಿದಾರನ ಹೆಸರಲ್ಲಿ ಸಕ್ಸೆಸ್ಸನ್ ಸರ್ಟಿಫಿಕೇಟು ಸಿಕ್ಕಬೇಕೆಂತ ಸದರಿಯವರು ಅರ್ಜಿ ಕೊಟ್ಟಿರುವುದರಿಂದ ಸದರಿ ಅರ್ಜಿಯನ್ನು ತಾ. 10—12—1920ಕ್ಕೆ ತನಖೆಗೆ ಇಟ್ಟಿರುತ್ತದೆ. ಇದರ ವಿಷಯ ಯಾರಾದರೂ ಆಕ್ಷೇಪಿಸುವವರಿದ್ದರೆ, ಸದರಿ ತಾರೀಕಿನ ಒಳಗೆ ... ಕೆಂಗಿ ಈ ಮೂಲಕ ತಿಳಿಸೋಣಾಗಿಯದೆ.

ವಿ. ಮಾಧವ ಮೇನನ್,
ಅರ್ಜಿದಾರನ ಕಡೆ ವಕೀಲ

ಮುಫತ್ತು!! ಇಂಥಾದ್ದು ಬೇಕು.

ಗುಲ್ಮನ್ ಜೋಬಿನ್

ಸರಕಾರದಲ್ಲಿ ರಿಜಿಸ್ತರು ಮಾಡಲ್ಪಟ್ಟ ನಂ. 253.

ಒಂದಾಣೆ ಸ್ಟ್ಯಾಂಪಿನೊಳಗೆ ರುಜುವಾತು ಶಿಕ್ಷೆಯುಳ್ಳ ರಶೀದು— 32 ಮಾತ್ರೆಗಳುಳ್ಳ ಬಾಟ್ಲಿಗಳನ್ನು ಖರೀದಿಸುವವರಿಗೆ ಕೊಡಲ್ಪಡುತ್ತದೆ. ಈ ಮಾತ್ರೆಗಳನ್ನು ಸೇವಿಸಿ ಗುಣಹೊಂದದಿದ್ದರೆ ಮನಸಾಕ್ಷಿಯಾಗಿ ಆ ರಶೀದಿಯೊಳಗೆ ದಸ್ಕತುಮಾಡಿ ಒಂದು ತಿಂಗಳೊಳಗಾಗಿ ವಾಪಸು ಕೊಟ್ಟರೆ ಬಾಟ್ಲಿಯ ಕ್ರಯವನ್ನು ವಾಪಸು ಮಾಡುತ್ತೇವೆಂದು ಪ್ರತಿಜ್ಞೆಯನ್ನು ನಾವು ದೃಢವಾಗಿ ಮಾಡುತ್ತೇವೆ.

ಗುಲ್ ಮನ್ ಜೋಬಿನ್.

ರಕ್ತವರ್ಧಕ! ಧಾತುಪುಷ್ಟಿಕ!! ರೋಗನಿವಾರಕ!!!

ಈ ಮಾತ್ರೆಗಳ ಸೇವಿಸಿದ ಪ್ರಥಮ ದಿವಸದಲ್ಲಿಯೇ ಆಶ್ಚರ್ಯಕರವಾದ ಗುಣಗಳನ್ನು ತೋರಿಸುವುವು. ಕಳೆಗುಂದಿದ ಕಪೋಲಗಳಿಗೆ ಪುಷ್ಟಿ ಮತ್ತು ಕಾಂತಿಯನ್ನು, ಕೆಟ್ಟ ಶರೀರಕ್ಕೆ ಧಾತುಪುಷ್ಟಿ ಸುಖನಿದ್ರೆಗಳನ್ನು ಕೊಡುತ್ತವೆ. ರಕ್ತಶೂಲ, ವಾಯುರೋಗ, ಕ್ಷಯ, ಶ್ವಾಸ, ಕಾಸ, ಉದ್ದರ ಶೂಲೆ, ಅಜೀರ್ಣ, ಮೂತ್ರರೋಗ, ಮಲಬದ್ಧತೆ, ಜ್ವರಗಳು, ಮೂಲವ್ಯಾಧಿ, ಅನಿಯಮಿತ ... ಇವುಗಳನ್ನು ಸಮೂಲನಾಶಿಸಿ, ರಕ್ತಶುದ್ಧಿಯೂ ವೃದ್ಧಿಯೂ ... ಜೀರ್ಣವ್ಯಾಧಿಗಳನ್ನು ನಿವಾರಣೆಮಾಡುತ್ತವೆ —

ಬಾಟ್ಲಿ 1ಕ್ಕೆ ರೂ. 1, 3ಕ್ಕೆ ರೂ. 2—10—0 ವಿ. ಪಿ. ಖರ್ಚು ಬೇರೆ.

ಏಜಂಟರುಗಳು ಬೇಕು. ಎಲ್ಲ ಸ್ಥಳಗಳಲ್ಲಿ ಸಿಕ್ಕುವುದು.

ವಿಳಾಸ:— ಡಿ. ಗುಲ್ ಮನ್ ಜೋಬಿನ್ ಕಂಪೆನಿ, ಬೊಂಬಾಯಿ 3.

ಜಗತ್ಪ್ರಸಿದ್ಧವಾದ ಅನೇಕ ರೋಗಗಳಿಗೆ ಖಂಡಿತ ಔಷಧವು.

ಇಂಡಿಯಾ ಸರಕಾರದಲ್ಲಿ ಸನ್ ೧೮೬೭ನೇ ಇಸವಿಯ ೨೫ನೇ ಆಕ್ಟಿನಂತೆ ರಿಜಿಸ್ಟರ ಮಾಡಲ್ಪಟ್ಟ

ಅರ್ಕುಶಫಾ ಅಥವಾ ಆರೋಗ್ಯಬಿಂದು.

ಈ ಅರ್ಕುಶಫಾ ಎಂಬ ಔಷಧವು ಯಾವತ್ತು ರೋಗಕ್ಕೆ ಮನವರಿಕೆಯಾಗಿ ತಾ. ೧೦-೫-೧೯೧೦ನೇ ಇಸವಿಯಿಂದ ತಾ. ೧೮-೧೯೧೯ನೇ ಇಸವಿಯವರೆಗೆ ಮೂವತ್ತು ಸಾವಿರ ಬಾಟ್ಲಿಗಳು ಖರ್ಚಾದವು. ಮತ್ತು ಸನ್ ೧೯೧೮ನೇ ಇಸವಿ ಅಕ್ಟೋಬರ್ ತಿಂಗಳಲ್ಲಿ ಇನ್‌ಫ್ಲುಯಂಜಾ ಜ್ವರಕ್ಕೆ ಒಂದೇ ತಿಂಗಳಲ್ಲಿ ಒಂಭತ್ತು ಸಾವಿರ ಬಾಟಲಿಗಳು ಖರ್ಚಾದವು. ಅಂತು ಈವತ್ತಿನ ವರೆಗೆ ಸಣ್ಣ ದೊಡ್ಡ ಬಾಟ್ಲಿಗಳು ಕೂಡಿ ಮೂವತ್ತೊಂಭತ್ತು ಸಾವಿರ ಬಾಟಲಿಗಳು ಖರ್ಚಾದವು ಅಂದ ಮೇಲೆ ಈ ಔಷಧವು ಎಷ್ಟು ಮೌಲ್ಯವಾನ ಅದೆ ಇದು ಯಾವತ್ತರು ತಾವೇ ಅನುಭವಕ್ಕೆ ತಂದು ಪ್ರತಿಯೊಬ್ಬರು ತಮ್ಮ ಸಂಗ್ರಹದಲ್ಲಿ ಒಂದು ಬಾಟ್ಲಿ ಇಟ್ಟುಕೊಂಡು ಅಮೃತವೇ ಎಂದು ತಿಳಿದು ಸ್ವೀಕಾರಮಾಡುತ್ತಿರಬೇಕು ಈ ಆರೋಗ್ಯಬಿಂದು ಇಡೀ ಕರ್ನಾಟಕ ದೇಶಕ್ಕೆಲ್ಲಾ ಹೋಗಿ ರೋಗಿಗಳು ಈ ಅರ್ಕುಶಫಾದಿಂದಲೇ ಗುಣಹೊಂದಿದ ಬಗ್ಗೆ ಮತ್ತು ಯಾವತ್ತು ರೋಗಕ್ಕೆ ಉಪಯೋಗ ಆದದ್ದರ ಬಗ್ಗೆ ಎಷ್ಟೋ ಇನಾಮು ಸರ್ಟಿಫಿಕೇಟುಗಳು ಸಹ ದೊರೆದಿರುತ್ತವೆ. ಅವು ಬರೆಯಲಿಕ್ಕೆ ಕಾಗದವು ಸಾಲದು. ಇಂಥ ಅಮೂಲ್ಯವಾದ ಈ ಔಷಧವನ್ನು ಎಲ್ಲರೂ ಸ್ವೀಕರಿಸಿ ರೋಗರಹಿತರಾಗುವರೆಂದು ನಂಬುತ್ತೇನೆ. ರೋಗದ ಪರೀಕ್ಷೆಯ ಸಲುವಾಗಿ ಬೇರೆ ಡಾಕ್ಟರರ ಮತ್ತು ವೈದ್ಯರ ಆಧಾರು ಬೇಕಾಗುವದಿಲ್ಲ ಅಂದ ಮೇಲೆ ಈ ಆರೋಗ್ಯಬಿಂದುವಿನ ಮೇಲೆ ದುರ್ಲಕ್ಷ್ಯಮಾಡದೆ ಕೆಳಗೆ ಬರೆದ ರೋಗಗಳ ಮೇಲೆ ಉಪಯೋಗಮಾಡಿ ರೋಗನಿವಾರಣ ಮಾಡಿಕೊಳ್ಳಬೇಕು.

ರೋಗದ ನಾಮಗಳು.

ಕ್ಷಯರೋಗ, ಹಡದರೋಗ, ಪಾಂಡುರೋಗ, ಗುಲ್ಮರೋಗ, ಮೂಲರೋಗ, ಮಹಾವಿಷೂಚಿ, (ಕಾಲರಾ), ಪ್ಲೇಗು, ಚಳಿಜ್ವರ, ವಿಷಮಜ್ವರ, ಇನ್‌ಫ್ಲುಯಂಜಾ ಜ್ವರ, ಅನೇಕ ಪ್ರಕಾರದ ಜ್ವರ, ಗಂಡಮಾಲೆ, ಕಿವಿಶೂಲೆ, ಮೂಗಿನೊಳಗಿನ ಪಿನಸಿ, ಮೊದಲಾದ ರೋಗವು, ಕಣ್ಣೊಳಗೆ ಹೂವು ಬೀಳೋದು ಮತ್ತು ಕಣ್ಣುನೋವು, ದಮ್ಮು, ಕೆಮ್ಮು, ಶ್ವಾಸ, ಅಡಗ್ಗೆ, ಇದ್ದಲಿಸಿ, ಅಜೀರ್ಣ, ಹೊಟ್ಟೆಶೂಲೆ, ಮೈಶೂಲೆ, ಅರದಲೆಶೂಲೆ, ಪಡಶೂಲೆ, ವಾತಶೂಲೆ, ರಕ್ತಿ ... ಗುದ್ದ ಮೈನ ... ಕುರುಕಕಜ್ಜಿ, ಗಜಗರ್ಣ ಕಜ್ಜಿ, ಇಸಬು, ಘಾಯವ್ರಣ, ನಾರುಹುಣ್ಣು, ಸ್ತ್ರೀಯರ ಮುಟ್ಟುಶೂಲೆ, ಹಡದ ನಂಜು, ಸಣ್ಣ ಕೂಸುಗಳ ಬಾಲಗ್ರಹ, ಕೋಡಗೆಮ್ಮು, ಅರದಿ, ಮುಟ್ಟುದೋಷ, ಹೊಟ್ಟೆ ದೊಡ್ಡದಾಗೋದು, ಮೈ ಹೊರಬೀಳೋದು, ಮತ್ತು ಸಣ್ಣ ಕೂಸುಗಳಿಗೆ ವೈದ್ಯರಿಗೂ ಸಹ ತಿಳಿಯದೆ ಇದ್ದ ಅನೇಕ ರೋಗಗಳು, ಚೇಳು ಮತ್ತು ಸರ್ಪದಂಶ ಇದರ ಹೊರತು ಇನ್ನೂ ಅನೇಕ ರೋಗಗಳು ಖಾತ್ರಿಯಿಂದ ಗುಣವಾಗುತ್ತವೆ. ಈ ಆರೋಗ್ಯಬಿಂದುವಿನ ಕ್ರಯ ಅನಾಳ್ಯ ಕಂಡು ಬಂದಲ್ಲಿ ಬಡವರಿಗೂ ಧನವಂತರಿಗೂ ಸರಿಯಾಗಿ ಬಹಳ ಕಡಿಮೆ ಕ್ರಯ ಇಟ್ಟಿರುತ್ತದೆ ಒಂದು ಕಾಲುತೊಲೆ ಬಾಟಲಿ ಒಂದಕ್ಕೆ ೨ ರೂಪಾಯಿ. ನಮೂನೆ ಉದ್ದೇಶ ೨ ಆಣೆ ತೂಕದ ಬಾಟ್ಲಿ ಒಂದಕ್ಕೆ ೮ ಆಣೆ. ವಿ ಪಿ ಖರ್ಚು ಬೇರೆ ಬೀಳುವದು. ಒಂದು ಡಜನ್ ಬಾಟ್ಲಿ ತೆಕ್ಕೊಂಡರೆ ನಾಲ್ಕು ಬಾಟ್ಲಿಗಳನ್ನು ಕಮಿಷನ್ ಕೊಡುತ್ತೇವೆ. ಇದಕ್ಕೆ ಎಂಟು ಆಣೆ ಖರ್ಚು ಬರುವದು. ೧೦ರಿಂದ ೧೧ ಬಾಟಲಿಗಳ ವರೆಗೆ ತೆಗೆದುಕೊಂಡರೆ ಕಮಿಷನ್ ಇರುವದಿಲ್ಲ. ಇದಕ್ಕೆ ನಾಲ್ಕು ಆಣೆ ಖರ್ಚು ಬರುವದು. ಒಂದುಕಾಲುತೊಲೆಯ 3 ಬಾಟಲಿಗಳು ಒಂದೆ ಸಾರಿ ತೆಕ್ಕೊಂಡರೆ ಒಂದು ಬಾಟಲಿ ಕಮಿಷನ್ ಕೊಡುತ್ತೇವೆ. ಇದಕ್ಕೆ ಖರ್ಚು ಎಂಟು ಆಣೆ ಬರುವದು ನಮ್ಮ ಔಷಧವು ಪೋಸ್ಟ ಮೂಲಕ ... ಕಳುಹಿಸುತ್ತೇವೆ. ಮತ್ತು ಹೆಚ್ಚಿನ ಮಾಹಿತಿ ... ಬೇಕಾದಲ್ಲಿ ... ದೊರೆಯುವದಿಲ್ಲ. ಅನುಪಾನ ಪತ್ರಗಳು ಕನ್ನಡ, ಮರಾಠಿ, ಮುಂತಾದ ಭಾಷೆಗಳಲ್ಲಿ ಛಾಪಿಸಿರುತ್ತವೆ. ಪಸಂದಿ ಪ್ರಕಾರ ದಾಕ್ಟ್ರರು ಸೋಸಿ ಸಿಗುವವು. ನಿಮ್ಮ ವಿಳಾಸ ಇಂಗ್ಲೀಷ್ ಅಥವಾ ಕನ್ನಡದಲ್ಲಿ ನಾವು ಮತ್ತು ಪೋಸ್ಟ ವಗೈರೆ ಸ್ಪಷ್ಟವಾಗಿ ಬರೆಯುತ್ತಿರಬೇಕು.

ಹೆಚ್. ಎಂ. ಮುಲ್ಲಾ, ಸಂಪಾದಕ ಅರ್ಕುಶಫಾ,
33 ಹೆಡ್ ಆಫೀಸ್ ಶಹಾಪೂರ, (ಬೆಳಗಾಂವ)

Mr. ALEX ALVAREZ Dentist.

OF MANDALAY, UPPER BURMA.

Will attend patients here for the following in Particular —

Charges Moderate.

1 Painless extraction of teeth 2. Making of false teeth 3 Filling the teeth with silver, gold, porceline 4 Gold bridge and Crowns. 5. Porceline Crowns. 6 Cleaning the teeth. 7. Pyorrhoea treatment

Can be consulted at: —

The Electro Homoeopathic Dispensary,
Hampankatta, MANGALORE

ಮಿ. ಆಲೆಕ್ಸ್ ಅಲ್ವಾರಿಸ್ ದಂತವೈದ್ಯ.

ಇವರು ಹಲ್ಲು ಬೇನೆಯಿಂದ ನರಳುತ್ತಿರುವವರ ಹಲ್ಲುಗಳನ್ನು ಸ್ವಲ್ಪವೂ ನೋಯದಂತೆ ಬಿಡಿಸುತ್ತಾರೆ, ತೆಗೆಯೋದು, ಕೃತ್ರಿಮ ಹಲ್ಲುಗಳನ್ನು ಮಾಡಿ ಇಡೋದು, ಹಲ್ಲುಗಳಲ್ಲಿ ಉಂಟಾದ ರಂಧ್ರಗಳನ್ನು ಬೆಳ್ಳಿ, ಬಂಗಾರ, ಪಿಂಗಾಣಿ ಇವುಗಳಿಂದ ಮುಚ್ಚೋದು ಬಂಗಾರದ ಕೃತ್ರಿಮ ದಂತಮಾಲೆಯನ್ನು ಬುಡ ಸಹಿತ ಇರಿಸೋದು, ಪಿಂಗಾಣಿ ಹಲ್ಲುಮಾಲೆಯನ್ನು ಇಡೋದು ಮತ್ತು ಹಲ್ಲುಗಳನ್ನು ಶುಚಿಮಾಡೋದು ಮುಂತಾದ ದಂತಚಿಕಿತ್ಸೆಯನ್ನು ಕಲಿವಾಕ ಚಿಕಿತ್ಸೆಯನ್ನೂ ಮಾಡುವರು. ಇವರು ಹಂಪನಕಟ್ಟೆಯಲ್ಲಿರುವ ಮಿ। ಎ ಫೆರ್ನಾಂಡಿಸ್, ಇಲೆಕ್ಟ್ರೊ ಹೋಮಿಯೊಪಥಿಕ್ ಡಿಸ್ಪೆನ್ಸರಿಯಲ್ಲಿ ಮೊಕ್ಕಾಂ ಮಾಡಿರುತ್ತಾರೆ.

ಗೊತ್ತೇ ಇಲ್ಲವೋ? ಕಳೆದ ೨೦೦ ವರುಷಗಳಿಂದಲೂ, ವಂಶಪಾರಂಪರ್ಯದಿಂದ ನಡೆದು ಬರುತ್ತಿರುವ ಖಾಥೆವಾಡದೇಶದ, ಮಹಾರಾಜರ ಖಾಸಾವೈದ್ಯರಾದ ರಾಜವೈದ್ಯ ನಾರಾಯಣ ಜೀ ಕೇಶವ ಜೀಯವರ ಲೋಕ ಪ್ರಸಿದ್ಧಿಯಾದ

ಮದನ ಮಂಜರಿ ಮಾತ್ರೆಗಳು.

ಈ ಮಾತ್ರೆಗಳನ್ನು ಸೇವಿಸುವುದರಿಂದ ಧಾತುಪುಷ್ಟಿ ರಕ್ತಪುಷ್ಟಿಯನ್ನೂ ಬೇಗನೆ ಕೊಡುವುದು ಮತ್ತು ಧಾತುವು ಹೋಗುತ್ತಿದ್ದರೂ, ಹಸಿವಿಲ್ಲದಿದ್ದರೂ, ಕಾಲಕಾಲಕ್ಕೆ ಮಲವಿಸರ್ಜನೆಯಾಗದಿದ್ದರೂ, ಕೈಕಾಲು ಸೊಂಟದಲ್ಲಿ ನೋವಿದ್ದರೂ ಗುಣವಾಗುವುದು. ಈ ಮಾತ್ರೆಗಳನ್ನು ವನಸ್ಪತಿ ಮೂಲಿಕೆಗಳಿಂದ ತಯಾರಿಸಿದ್ದಾಗಿದೆ.

ವಿಳಾಸ:—　　　　ಕ್ರಯ ಡಬ್ಬಿಗಕ್ಕೆ ೧—೦—೦.

ರಾಜವೈದ್ಯ ನಾರಾಯಣಜೀ, ಕೇಶವಜೀ,
27 ಜೈನ ಬಜಾರು ರೋಡ್,
ಮದರಾಸು.

"ವೈದ್ಯಾಮೃತ ಮಂದಿರಂ"

ಎಂಬ

ನಮ್ಮ ಆಯುರ್ವೇದ ವೈದ್ಯಶಾಲೆಯಲ್ಲಿ ಶಾಸ್ತ್ರೋಕ್ತವಾಗಿ ತಯಾರಿಸಲ್ಪಟ್ಟ ಎಲ್ಲಾ ತೈಲಗಳೂ, ಆಸವಾರಿಷ್ಟಗಳೂ, ಕಷಾಯಗಳೂ, ದ್ರವದ್ರಾವಕಗಳೂ, ಭಸ್ಮಗಳೂ, ಚೂರ್ಣಗಳೂ, ಮಾತ್ರೆಗಳು ಇತ್ಯಾದಿ ಔಷಧಿಗಳೂ ಮತ್ತು ಕಾಶ್ಮೀರ, ನೇಪಾಲ ದೇಶಗಳಿಂದ ತರಿಸಿದ ಕಸ್ತೂರಿ, ಪಚ್ಚ ಕರ್ಪೂರ, ಕುಂಕುಮಕೇಸರ ಮುಂತಾದವುಗಳೂ ಸುಲಭವಾದ ಕ್ರಯಕ್ಕೆ ದೊರಕುತ್ತವೆ ವರ್ಣ್ಯಳ ದವರು ರೋಗದ ಪ್ರಕೃತಿಯನ್ನು ವಿಶದವಾಗಿಬರೆದು ತಿಳಿಸಿದರೆ ಅಗತ್ಯವಿರುವ ಔಷಧಿಗಳನ್ನು ಅನುಪಾನಪತ್ರಿಕೆ ಸಮೇತ ವಿ. ಪಿ. ಮೂಲಕ ಕಳುಹಿಸುವೆವು.

ವಿಳಾಸ —　ಕೆ ಕೆ. ನಾಯರ್
ಎಂಡ್ ಬ್ರದರ್,
ವೈದ್ಯಾಮೃತ ಮಂದಿರಂ,
ನೀಲೇಶ್ವರ, ದ. ಕನ್ನಡ.

ಕ್ಷಿಪ್ರಗುಣಕಾರಿ!　　　　ಮಹೌಷಧ!!

ಸಿರಪ್ ವಾಸಕಾ.

ಕೆಮ್ಮು, ಶೀತ, ಜ್ವರ, ಪಕ್ಕೆಗಳ ವೇದನೆ, ರಕ್ತಕಾಸ, ಕ್ಷಯ, ಉಬ್ಬಸ, ಬ್ರಾಂಕೈಟಿಸ, ನ್ಯುಮೋನಿಯಾ ಮುಂತಾದ ಶ್ವಾಸಕೋಶದ ಯಾವತ್ತು ರೋಗಗಳಿಗೆ ಅತ್ಯುತ್ತಮವಾದ್ದು. ಪ್ರಾಚೀನಾರಭ್ಯ ಕಾಸರೋಗಗಳಿಗೆ ವಿಶೇಷ ಗುಣಕಾರಿ ಎಂದ ಹೆಸರುಗೊಂಡ "ಆಡಸೋಗೆ" ಎಂಬ ಗಿಡಮೂಲಿಕೆಯಿಂದ ತಯಾರಿಸಲ್ಪಟ್ಟದ್ದು, ಇದರಿಂದ ಪೋಷಕವಾದ ಶ್ಲೇಷ್ಮವು ಬೇಗನೆ ಸಡಿಲವಾಗುವದರಿಂದ ಕೆಮ್ಮು ಬರುವಾಗ ಕಷ್ಟವಾಗುವದಿಲ್ಲ. ರುಚಿಯಲ್ಲಿ ಸಿಹಿಯಾಗಿರುವದರಿಂದ ಮಕ್ಕಳಿಗೆ ಇದರ ಸೇವನೆಯಲ್ಲಿ ಬಹಳ ಪ್ರೀತಿ

ಬಾಟ್ಲಿ 1ರ ಕ್ರಯ ಬರೇ ಒಂದು ರೂಪಾಯಿ ಮಾತ್ರ

ಬಂಗಾಲ ಕೆಮಿಕಲ ಮತ್ತು ಫಾರ್ಮಾಸ್ಯೂಟಿಕಲ ವರ್ಕ್ಸ್ ಕಂಪೆನಿ ಲಿಮಿಟೆಡ್, ಕಲ್ಕತ್ತಾ,

ಸೋಲ ಏಜಂಟ್ಸ್ —
ಪಿ ಎ ಪೈ ಬ್ರದರ್ಸ್, ಉಡುಪಿ
ಮಿಜಾರ್ಕರ ಬ್ರದರ್ಸ್, ಮಂಗಳೂರು,
ಇವರಲ್ಲಿಯೂ ಸಿಗುವದು.

ಗೊನೊಕ್ಯೂರಾ.

ಮೇಹ ರೋಗಕ್ಕೆ (Gonorrhea) ಪರಮೌಷಧವು.

ಎಲ್ಲಾ ತರದ ಮೇಹಗಳಲ್ಲಿ, ದಪ್ಪವಾದ ಕೀವಿನಂಥಾ ಮೇಹವು ಹರಿಯುವದಕ್ಕೆ, ಮೂತ್ರದ್ವಾರದಲ್ಲಿಯು ಉರಿ, ಹಳದಿವರ್ಣದ ಅಥವಾ ಹಸುಗುವರ್ಣದ ಕಠಿಣ ಉರಿಯುಳ್ಳ ಮೇಹವು ಹರಿಯುವದಕ್ಕೆ, ಮೂತ್ರಮಾಡುವಾಗ ಇಂದ್ರಿಯದಲ್ಲಿ ಉರಿ, ಮುಂತಾದ ಮೇಹ ಸಮ್ಮಂಧವಾದ ಎಲ್ಲಾ ಚುರುಕುರೋಗಗಳಲ್ಲಿ ಉತ್ತಮ ಔಷಧವು. ಇದರ ಸೇವನೆಯಿಂದ ಎಷ್ಟುಕಾಲದ ಹಳೆ ಮೇಹರೋಗಗಳಾದರೂ

ಖಂಡಿತವಾಗಿ ಗುಣಹೊಂದುವವು.

ಔಷಧ ಸೇವಿಸುವ ಕ್ರಮ— ೩ ಘಂಟೆಗೆ ಒಂದಾವರ್ತಿ 5 ಬಿಂದು ಔಷಧವನ್ನು ಒಂದು ಚಮಚದಷ್ಟು ನೀರಿನಲ್ಲಿ ಹಾಕಿ ಸೇವಿಸುವದು.　　ಕ್ರಯ:— ರೂ. 1—0—0.

ಬೇಕಾಗಿದ್ದವರು ಕೆಳಗಿನ ವಿಳಾಸಕ್ಕೆ ಬರಿಯತಕ್ಕದ್ದು.

ವಿಳಾಸ:— ಎ. ಫೆರ್ನಾಂಡಿಸ್,
ಇಲೆಕ್ಟ್ರೊ ಹೊಮಿಯೊಪತಿ ಡಿಸ್ಪೆನ್ಸರಿ,
ಮಂಗಳೂರು.

The Canara Bank Limited, Mangalore.
ಕೆನರಾ ಬ್ಯಾಂಕ ಲಿಮಿಟೆಡ್, ಮಂಗಳೂರು.

ESTABLISHED JULY 1906.	೧೯೦೬ನೇ ಇಸವಿ ಜುಲಾಯಿ ತಿಂಗಳಲ್ಲಿ ಸ್ಥಾಪಿಸಲ್ಪಟ್ಟಿತು.
Authorised and fully paid up Capital Rs. 300,000—0—0	ಅಧಿಕಾರಗೊಳಿಸಲ್ಪಟ್ಟು ಪೂರಾ ಕಟ್ಟಿದ ಮೂಲಧನವು ರೂ. 300,000—0—0
Reserve and other sinking Funds Rs. 138,697—7—2	ಕ್ಷೇಮನಿಧಿ ಮತ್ತು ಇತರ ಫಂಡುಗಳು 138,697—7—2

THE BANK RECEIVES FIXED, CURRENT ACCOUNT, & SAVINGS BANK DEPOSITS.
ಕಾಯಂ ಮತ್ತು ಚಾಲ್ತಿ ಠೇವಣಾತಿಗಳೂ, ಸೇವಿಂಗ್ಸ ಬ್ಯಾಂಕ ಠೇವಣಾತಿಗಳೂ, ಪಡಕೊಳ್ಳಲಾಗುತ್ತದೆ.

For further particulars apply to the Secretary.
ವಿಶೇಷ ಮಾಹಿತಿ ಬಗ್ಗೆ ಸೆಕ್ರೆಟರಿಗಳಿಗೆ ಬರಕೊಳ್ಳುವದು.

Canara Bank Ltd.,
Mangalore, 1st September 1920.

K. Venkat Rao,
Secretary.

ಪಾಳ್ಯದ ವೆಂಕಟಾಚಲ ಪಂಡಿತರ ಸಿದ್ಧೌಷಧಗಳು.

ಲೋಕಾಮಯಹರ ಕಸ್ತೂರಿ ಮಾತ್ರೆಗಳನ್ನು ಈಗಲಾದರೂ ಪರೀಕ್ಷಿಸಿ ನೋಡಿರಿ!

ಪ್ರತಿವರ್ಷವೂ ಲಕ್ಷಾಂತರ ಸೀಸೆಗಳು ವಿಕ್ರಯವಾಗುತ್ತಿವೆ.

ಇಂಡಿಯಾದವರು ಮಾತ್ರವಲ್ಲ; ಬರ್ಮಾ, ಸಿಲೋನ್, ಮಲೆಯ ಸ್ಟೇಟ್, ಗೋವಾ, ಫೀಜಿಐಲೆಂಡ್, ಕುಸ್ತುಂತಿಯಾ ಮೊದಲಾದ ಕಡೆಯವರು ಕೂಡ ಈ ಸಿದ್ಧೌಷಧಿಯನ್ನು ಉಪಯೋಗಿಸುತ್ತಿರುತ್ತಾರೆ.

ಮುಖ್ಯವಾಗಿ. ಒಂದೇ-ಒಂದು ಲೋಕಾಮಯಹರ ಕಸ್ತೂರಿ ಮಾತ್ರೆಯ ಸೀಸೆಯು ನಿಮ್ಮ ಮನೆಯಲ್ಲಿದ್ದರೆ ಸಮಯವನ್ನು ಕಾದ ವೈದ್ಯರಿಂದುಂಟಾಗುವ ತೊಂದರೆಯೂ ತಪ್ಪುವುದು.

ಶೀತ, ಶೀತವಾಯು, ಅಜೀರ್ಣ, ಪಾರ್ಶ್ವವಾಯು, ಜ್ವರ, ಮಂದ, ಮಲಬದ್ಧ, ಕೆಮ್ಮು, ಗಸಬೇನೆ, ಬಲಹೀನತೆ, ಕಟ್ಟು, ಜಡ, ಮತ್ತು ಕೆಡುಕಾದ ನೀರಿನಿಂದುಂಟಾಗುವ ವಿಕಾರ, ಮಕ್ಕಳ ಎಳತ, ಜ್ವರ, ಕೆಮ್ಮು, ವಾಯು, ಇವೇ ಅನೇಕ ರೋಗಗಳನ್ನು ಈ ಸಿದ್ಧೌಷಧ ಆಶ್ಚರ್ಯವಾಗುವಂತೆ ಗುಣಪಡಿಸುತ್ತದೆ.

ಪ್ರತಿ 6 ಸೀಸೆಗಳನ್ನು ಒಟ್ಟಿಗೆ ತರಿಸಿದರೆ ಟಪಾಲು ಖರ್ಚು ಸೇರಿ 7—8—0.
ಪ್ರತಿ 12 ಸೀಸೆಗಳನ್ನು ಒಟ್ಟಿಗೆ ತರಿಸಿದರೆ ಟಪಾಲು ಖರ್ಚು ಸೇರಿ 2—13—0.
ಪ್ರತಿ 25 ಸೀಸೆಗಳನ್ನು ಒಟ್ಟಿಗೆ ತರಿಸಿದರೆ ಟಪಾಲು ಖರ್ಚು ಸೇರಿ 5—3—0.

ರಿಜಿಸ್ಟರಾದ ಈ ವ್ಯಾಪಾರದ ಗುರ್ತು ಪ್ರತಿ ಸೀಸೆಯ ಮೇಲೂ ಇರುವುದನ್ನು ನೋಡಿ ತೆಗೆದುಕೊಳ್ಳಬೇಕಾಗಿದೆ.
ಅನುಪಾನ ಪತ್ರವು ಪ್ರತಿ ಸೀಸೆಯೊಡನೆಯೂ ಇರುವುದು. ೪೦ ಮಾತ್ರೆಗಳುಳ್ಳ ಕುಪ್ಪಿಗೆ 4 ಆಣೆ ಮಾತ್ರ.

ಲಕ್ಷ್ಮೀವಿಲಾಸ ರಸ (ಕ್ಷಯಕ್ಕೆ)—ಅನೇಕ ಕ್ಷಯರೋಗಿಗಳು ಈ ಲಕ್ಷ್ಮೀವಿಲಾಸ ರಸದಿಂದ ಆರೋಗ್ಯವನ್ನು ಪಡೆದಿರುತ್ತಾರೆ. ಒಂದೇ ಒಂದು ಲಕ್ಷ್ಮೀವಿಲಾಸ ರಸದ ಸೀಸೆಯು ತಮ್ಮಲ್ಲಿದ್ದರೆ ಕ್ಷಯಕ್ಕೆ ಸರ್ವೋತ್ಕೃಷ್ಟವಾದ ಸಿದ್ಧೌಷಧಿಯು ಬೇರೊಂದಿಲ್ಲವೆಂದು ಆವೇ ಹೇಳುವಿರಿ. ತಿನಿಷ್ಯರ ಮೂರರ ನಾಲ್ಕರ ಜ್ವರಗಳು, ಸನ್ನಿಪಾತ ಇತ್ಯಾದಿಗಳು ಕೂಡಾ ಗುಣವಾಗುತ್ತವೆ. ಸೀಸೆಗೆ ರೂ. 1. ರಕ್ಕೆ ಒಂದು ಆಣಾಮು.

ಶ್ರೀನಿವಾಸತೈಲ—ತಲೆಗೆ ಹಚ್ಚಿದರೆ ತಂಪಾಗುತ್ತದೆ. ಸಂದುಗಳ ನೋವು ಸೆಳೆತಲು ಹೋಗುತ್ತದೆ. ಸೀಸೆಗೆ 8 ಆಣೆ. ೪ಕೆ ಒಂದು ಆಣಾಮು.

ವೈಶ್ವಾನರಾಸವ—ಸೇವಿಸಿದ ಮೊದಲನೇ ವೇಳೆಯಿಂದಲೇ ವಾಂತಿಭೇದಿ, ಶೀತಭೇದಿ, ಅಜೀರ್ಣದ ಭೇದಿಗಳು ಗುಣವಾಗುತ್ತಾಬರುತ್ತವೆ. ಸೀಸೆಗೆ ರೂ. 1.5ಕ್ಕೆ ಒಂದು ಆಣಾಮು.

ಬಾಲಸುಧೋದಯ—ಮಕ್ಕಳಿಗೆ ಬಲಕಾರಿ, ಸಿಹಿಯಾಗಿರುತ್ತದೆ. ಮಂದ, ಮಲಬದ್ಧ, ಅಜೀರ್ಣದ ಭೇದಿ, ಕೈಕಲ್ಲು ಹೊಟ್ಟೆ ದಪ್ಪವಾಗಿರುವುದು, ಬೆಳೆಯದಿರುವುದು ಇವೆಲ್ಲವೂ ಗುಣವಾಗಿ ಮಕ್ಕಳು ಬಲವಾಗುತ್ತಾರೆ. ಪುಷ್ಟಿಯ ಚಟುವಟಿಕೆ ಸೀಸೆಗೆ ಆಣೆ 12 ೩ಕ್ಕೆ ಒಂದು ಆಣಾಮು.

ಈ ನಾಲ್ಕಕ್ಕೂ ಟಪಾಲು ಖರ್ಚು ಬೇರೆ.

ಸಮಸ್ತ ರೋಗಗಳಿಗೂ ನಮ್ಮಲ್ಲಿ ಆಯುರ್ವೇದೀಯ ಸಿದ್ಧೌಷಧಗಳು ದೊರೆಯುತ್ತವೆ. ಕ್ಯಾಟಲಾಗು ಉಚಿತ.

ವಿಳಾಸ: ಶ್ರೀ ಸೀತಾರಾಘವ ವೈದ್ಯಶಾಲಾ ಮೈಸೂರು.

ಒಂದು ಕುಪ್ಪಿಯ ಕ್ರಯ ೧೧ ಅಣೆ. ಮಂಗಳೂರು ಏಜೆಂಟ್,

ಕೇ. ಟೀ. ಡೋಂಗರೆ ಕಂಪೆನಿ, ಡಿ. ಉಲುನ್ ಮಾರ್ಟಿನ್, ಮಂಗಳೂರು.

ಗಿರಿಗಾಂವ, ಮುಂಬಯಿ.

ಕಾರವಾರ[illegible] ಶುಕ್ರವಾರದ ವರೆಗಿನ ಪಂಚಾಂಗ.

(೧೯೨೦ನೆಯ ದಸೆಂಬರ ವೃಶ್ಚಿಕ-ಚಾಪ)

ತಾರೀಖು	ವಾರ	ತಿಥಿ	ಘಳಿಗೆ	ನಕ್ಷತ್ರ	ಘಳಿಗೆ	[illegible]	ಸೂರ್ಯ ಉ.	ಅಸ್ತ.
4	ಶನಿ	[illegible]	[illegible]	[illegible]	[illegible]	[illegible]	6-42	6. 2
5	ರವಿ	೧೦	[illegible]	[illegible]	[illegible]	[illegible]	6-42	6. 2
6	ಸೋಮ	೧೧	[illegible]	ಚಿತ್ರಾ	[illegible]	[illegible]	6-42	6. 2
7	ಮಂಗಳ	೧೨	[illegible]	ಸ್ವಾತಿ	[illegible]	[illegible]	6-43	6. 2
8	ಬುಧ	೧೩	[illegible]	ವಿಶಾಖಾ	[illegible]	[illegible]	6-43	6. 2
9	ಗುರು	೧೪	[illegible]	ಅನುರಾಧಾ	[illegible]	[illegible]	6-44	6. 3
10	ಶುಕ್ರ	●	[illegible]	ಜ್ಯೇಷ್ಠಾ	[illegible]	[illegible]	6-44	6. 3

ಮಂಗಳೂರಿನ ವಾಯುಸ್ಥಿತಿ.

(೧೯೨೦ನೆಯ ನವಂಬರ)

Date ತಾರೀಖು	Temperature. ಉಷ್ಣ (ಕಾವು) Maximum ಹೆಚ್ಚಿನದು	Minimum ಕಡಿಮೆ	Rain ಮಳೆ ದಿನದ ಮಳೆ	ಎಪ್ರಿಲ್‌ನಿಂದ
26	86—1	76—2	—	...
27	90—2	76—2	—	...
28	87—5	72—8	—	...
29	87—9	69—1	—	...
30	89—8	73—9	—	...
31	89—4	74—5	—	—
32	88—3	71—8	—	—

ಮಂಗಳೂರಿನ ಪೇಟೆ ಧಾರಣೆ.

ಜೀನಸು.		ಇಂದ ರೂ. ಆ.	ವರೆಗೆ ರೂ. ಆ.
ಮಸ್ಕತಿ ಅಕ್ಕಿಮುಡಿ ಗಳ್ಳೆ	...	7—10	8—0
ಗುಡ್ಡು ಸುಗ್ಗಿ	...	7—4	7—8
ರಾಸಿ ಮುಡಿ ಗಳ್ಳೆ	...	6—14	7—0
ಹೊಸ ರಾಸಿ ,,	...	6—10	6—15
ಅವ್ವಲ್ ಬೆಳ್ತಿಗೆ ,,	...	8—4	8—8
ಗುಡ್ಡು ಬೆಳ್ತಿಗೆ ,,	...	7—0	7—8
ರಂಗೂನ ಬೆಳ್ತಿಗೆ ಗೋಣಿ ಗಳ್ಳೆ	...	17—4	17—8
ಗೋಧಿ ಗೋಣಿ ಗಳ್ಳೆ	...	25—0	22—0
ಹುರುಳಿ ಗೋಣಿ ಗಳ್ಳೆ	...	14—0	15—4
ಕಡಲೆ ಗೋಣಿ ಗಳ್ಳೆ	...	16—8	
ಕೊಣಿ ಗೋಣಿ ಗಳ್ಳೆ	...	19—8	20—0
ತೊಗರಿಬೇಳೆ ಗೋಣಿ ಗಳ್ಳೆ	...	22—0	30—0
ಉದ್ದು ಗೋಣಿ ಗಳ್ಳೆ	...	16—8	18—0
ಹೆಸರು ಗೋಣಿ ಗಳ್ಳೆ	...	16—0	18—8
ಊರು ಬೆಲ್ಲ ಖಂಡಿ ಗಳ್ಳೆ	...	97—8	105—0
ಉಪ್ಪು ಗೋಣಿ ಗಳ್ಳೆ	...	4—4	4—6
ಕೊಬ್ರಿ ಖಂಡಿ ಗಳ್ಳೆ	...	150—0	160—0
ಕೊಬ್ರಿ ಹಿಂಡಿ ಖಂಡಿ ಗಳ್ಳೆ	...	50—0	51—0
ಎಳ್ಳಿಂಡಿ ಖಂಡಿ ಗಳ್ಳೆ	...	52—2	
ಕೊಬ್ರಿ ಎಣ್ಣೆ ಮುಡಿ ಗಳ್ಳೆ	...	11—14	12—0
ಎಳ್ಳೆಣ್ಣೆ ಮುಡಿ ಗಳ್ಳೆ	...	9—8	11—8
ಹಿಪ್ಪೆಯೆಣ್ಣೆ ಪೆಟ್ಟಿಗೆ ಗಳ್ಳೆ	...	9—6	9—0
ಮೋಂಟ ಸಕ್ಕರೆ ಮುಡಿ ಗಳ್ಳೆ	...	9—4	9—6
ಊರ ಮೆಣಸಿನ ಕಾಯಿ ಮುಡಿ ಗಳ್ಳೆ	...	8—0	8—8
ಸಾಸವೆ ಮುಡಿ ಗಳ್ಳೆ	...	10—0	10—0
ಕೊತ್ತಂಬರಿ ಮುಡಿ ಗಳ್ಳೆ	...	5—4	5—6
ಕಾಫಿ ಖಂಡಿ ಗಳ್ಳೆ	...	220—0	230—0
ಬೀಗೋಡು ಅಡಿಕೆ ಖಂಡಿ ಗಳ್ಳೆ	...	100—0	115—0
ಬೀಗೋಡು	...	95—0	100—0
ಶಾಲುಮಣಸು ಖಂಡಿ ಗಳ್ಳೆ	...	135—0	140—8
ಯಮಲೆ ಮುಡಿ ಗಳ್ಳೆ	...	22—0	25—0
ಗೇರುಬೀಜ ಮುಡಿ ಗಳ್ಳೆ	...	3—8	3—12
ಕಲ್ಲಿಕ ಖಂಡಿ ಗಳ್ಳೆ	...	100—0	120—0
ಹಾಂಸ್ಪಿ ಹಗುರು ಮುಡಿ ಗಳ್ಳೆ	...	24—0	22—4
ಹಾಂಸ್ಪಿ ಪಾಸ್ತಗುರು ಮುಡಿ ಗಳ್ಳೆ	...	32—0	34—0
ಚಕಿ ಚಿಕ್ಕಿ ನಾರು ಗಳ್ಳೆ	...	31—2	[illegible]
ಹಿಪ್ಪೆ ಹಗುರು ಮುಡಿ ಗಳ್ಳೆ	...	24—0	25—0

ಹಿಂದುಸ್ಥಾನದ ಪರಿಸ್ಥಿತಿ.

ಇಂಡಿಯಾ, ಬರ್ಮಾ ಮತ್ತು ಸಿಲೋನದ ನೆಶನಲ್ ಮಿಶ್ಯನರಿ ಕೌನ್ಸಿಲಿನವರ ವಿನಂತಿ.

ಈ ಮುಂದಿನ ಪತ್ರವನ್ನು ನಶನಲ್ ಕೌನ್ಸಿಲಿನವರು ಪ್ರಕಟನೆಗೆ ನಮ್ಮ ಬಳಿಗೆ ಕಳುಹಿರುವರು. ಇಂಗ್ಲೀಷ ಭಾಷೆಯಲ್ಲಿದ್ದ ಈ ಪತ್ರದ ಭಾಷಾಂತರವನ್ನು ಇಲ್ಲಿ ಪ್ರಕಟಿಸುವೆವು.—

ಹಿಂದುಸ್ಥಾನದ ಜನರ ಮನಸ್ಸು ವಿಶೇಷವಾಗಿ ಕದಲಿಕೆಯಿಂದ ಕ್ಷೋಭಿತವಾದ ಈ ಸಮಯದಲ್ಲಿ ಅನಿಶ್ಚಯಕರವಾದ ಸ್ಥಿತಿಯಲ್ಲಿ ಉದ್ರೇಕವಾದಾಗ ನಮ್ಮ (ಕ್ರಿಸ್ತಮತದ ಅನುಯಾಯಿಗಳ) ಕ್ರಿಸ್ತ ಶುಭವರ್ತಮಾನದ ನಿರ್ದೇಶನಕ್ಕಾಗಿ ನಮ್ಮ ಕಡೆಗೆ ನೋಡುತ್ತಿರುವರೆಂದು ನಂಬಿ, ಇಂಡಿಯಾ, ಬರ್ಮಾ ಮತ್ತು ಸಿಲೋನದ ನೆಶನಲ್ ಮಿಶ್ಯನರಿ ಕೌನ್ಸಿಲಿನ ಪ್ರತಿನಿಧಿಗಳಾದ ನಾವು ಮನಗಂಡದ್ದನ್ನು ಈ ಮೂಲಕ ಪ್ರಕಟಿಸುತ್ತೇವೆ. ಈಗಿನ ಲೋಕದ ಮತ್ತು ವಿಶೇಷವಾಗಿ ಹಿಂದುಸ್ಥಾನದ ಪರಿಸ್ಥಿತಿಯನ್ನು ಕ್ರಿಸ್ತಮತದವರು ಪರ್ಯಾಲೋಚಿಸುವಾಗ ಈಗಿನ ತತ್ವಗಳನ್ನು ಆಧಾರವಾಗಿ ತಿಳ್ಕೊಳ್ಳಬೇಕಾಗಿದೆ.—

೧. "ನಮ್ಮ ತಂದೆಯು ಒಬ್ಬನೇ, ನೀವೆಲ್ಲರೂ ಸಹೋದರರು" ಎಂದು ನಮ್ಮ ಕರ್ತನು ನಮಗೆ ಹೇಳಿದ್ದಾನೆ. ದೇವರ ನಿರ್ಮಾಣದಲ್ಲಿ ಮನುಷ್ಯರೆಲ್ಲಾ ದೇವರು ನಿರ್ಣಯಿಸಿದ ಮೂಲತತ್ವಗಳು ಇವೇ ಆಗಿವೆ.

೨. ದೇವರ ದೃಷ್ಟಿಯಲ್ಲಿ ಪ್ರತಿಯೊಬ್ಬ ಪುರುಷನಾಗಲಿ ಸ್ತ್ರೀಯಾಗಲಿ ಅಮೂಲ್ಯವಾದ ವಸ್ತುಗಳು. ಹೀಗಾದ್ದರಿಂದಲೇ ಅವರೆಲ್ಲರ ಬಗ್ಗೆ ತನ್ನ ಪ್ರಾಣವನ್ನು ಸಮರ್ಪಿಸಲಿಕ್ಕೆ ದೇವರು ತನ್ನ ಮಗನನ್ನು ಕಳುಹಿಸಿದನು. ದೇವರು ಅವರೆಲ್ಲರನ್ನು ಪ್ರೀತಿಸುವುದರಿಂದ ನಾವು ಪ್ರತಿಯೊಬ್ಬ ಪುರುಷನನ್ನೂ ಸ್ತ್ರೀಯನ್ನೂ ಗೌರವದೃಷ್ಟಿಯಿಂದ ಕಾಣಬೇಕು. ಯಾರನ್ನು ಆಗಲಿ ತಾತ್ಸಾರ ಅಥವಾ ಗರ್ವದಿಂದ ಕಾಣುವುದೂ ಯಾರನ್ನು ಆಗಲಿ ಬರೇ ಯಂತ್ರದಂತೆ ಸ್ವಲ್ಪ ಬೆಲೆಯ ವಸ್ತು ಅಥವಾ ಸಾಧನವೆಂದು ಭಾವಿಸುವುದೂ ತಪ್ಪಾಗಿದೆ.

೩. ಸ್ವಪ್ರಾಮಾಣಿಕವಾದ ಪ್ರತಿಯೊಂದು ಸಮಾಜವಾಗಲಿ, ಜಾತಿಯಾಗಲಿ ಇದು ಭ್ರಾತೃವರ್ಗವೆಂದೇ ಭಾವಿಸಿ, ಪ್ರತಿಯೊಬ್ಬನು ತನ್ನ ಕೈಲಾದ ಮಟ್ಟಿಗೆ ಇತರರೆಲ್ಲರ ಸೇವೆಮಾಡಲು ಯತ್ನಿಸಬೇಕು.

೪. ಕೈಗಾರಿಕೆಯ ಅನುಬಂಧಗಳಲ್ಲಿ ಈ ಭ್ರಾತೃಭಾವವೇ ದಾರಿಗಾಣಿಸಬೇಕು, ಅನೀತಿಯನ್ನೂ ಅಪ್ರಾಮಾಣಿಕತೆಯನ್ನೂ ನಿರ್ಮೂಲಮಾಡಬೇಕು, ಧನಿ ಮತ್ತು ನೌಕರರೊಳಗೆ ಪರಸ್ಪರ ವಿಶ್ವಾಸವನ್ನು ನೆಲೆಸಿಡಬೇಕು.

೫. ಆಳುವವರಲ್ಲಿಯೂ ಆಳಲ್ಪಡುವವರಲ್ಲಿಯೂ ರಾಜ್ಯದೊಳಗೆ ಇದೇ ಭ್ರಾತೃಭಾವದ ಸಂಬಂಧವು ಬಿಗಿದಿರಬೇಕು; ಮತ್ತು ಹಿಂಸೆ, ಅತ್ಯಾಚಾರ, ಅಹಂಕಾರ, ಸಂಶಯ, ಏಕಪಕ್ಷಗ್ರಹಿಕೆಗಳಿಗೆ ಎಡೆ ಕೊಡದೆ ದೇಶದ ಒಳ್ಳಿತಕ್ಕಾಗಿ ಸ್ವಾರ್ಥತ್ಯಾಗದ ಮತ್ತು ಆತ್ಮಸಂತೋಷದಿಂದ ಹೊರಡುವ ಸಹಕಾರ ಮತ್ತು ಅಂಕುಶ ಪ್ರಹಾರದಿಂದಲ್ಲದ ಸಮ್ಮತಿಯ ಆಧಾರದ ಮೇಲೆ ಆಳ್ವಿಕೆಯ ಕ್ರಮವು ನೆಲಸಿರಬೇಕು.

೬. ಬೇರೆ ಬೇರೆ ಜನಾಂಗಗಳ ಸಂಬಂಧವನ್ನು ಇದೇ ಭ್ರಾತೃಭಾವವು ಬಿಗಿಯಬೇಕು; ಮತ್ತು ಸ್ವಾರ್ಥಪರತೆಯ ಪೋಟಾಪೋಟಿಯಿಂದ ಒಬ್ಬರನ್ನೊಬ್ಬರು ಶೋಷಿಸಿ ಆಗಾಗ ಯುದ್ಧಕ್ಕೆ ಅನುವಾಗುವ ಬದಲಾಗಿ ಒಬ್ಬರನ್ನೊಬ್ಬರು ಕೈಕೊಡುವ ಜನಾಂಗಗಳ ಒಂದು ದೊಡ್ಡ ಕುಟುಂಬವೆಂಬಂತೆ ಲೋಕವನ್ನು ಮಾರ್ಪಡಿಸಬೇಕು.

೭. ಬ್ರಿಟಿಷ ಸಾಮ್ರಾಜ್ಯದಲ್ಲಿ ಸೇರಿದಂತೆ ಹಲವು ಜನಾಂಗಗಳ ಕೂಟದಲ್ಲಿ ಇದೇ ಭ್ರಾತೃಭಾವದ ತತ್ವಕ್ಕನುಸಾರವಾಗಿ ಎಲ್ಲರೂ ಒಂದೇ ಕುಟುಂಬದಂತೆ ಇದ್ದು ಅವರಲ್ಲಿ ಸೇರಿದ ಬಲಹೀನರಾದವರ ಬವರಿನ ದುಡಿತದಿಂದ (ಬಲವುಳ್ಳವರು) ಶ್ರೀಮಂತರಾಗುವುದಾಗಲಿ ವರ್ಣಭೇದದಿಂದ ಪಕ್ಷಪಾತಮಾಡುವುದಾಗಲಿ ಮಾನವ ಸಭಾರ್ಥ ಮುರಿತದ ಆರೋಗ್ಯಕ್ಕೆ ಹಾನಿಕರವಾದ ವ್ಯಾಪಾರಕ್ಕೆ ಅವರನ್ನು ಬಲಿಯಾಗಿ ಅರ್ಪಿಸುವುದು ಮುಂತಾದ ಭಾವನೆಗಳಿಗೆ ಇಂಬು ಕೊಡಲಿಕ್ಕೆ ಬಾರದು. ಇಂಥ ಮಾನವ ಕುಟುಂಬದಲ್ಲಿ ಬಲಿಷ್ಠರಾದ ಸುಧಾರಿತರ ಧ್ಯೇಯವು ಇತರರ ಯಶಸ್ಸು, ಅಭಿವೃದ್ಧಿ, ಸುವ್ಯವಸ್ಥಿತವಾದ ಆಳ್ವಿಕೆ, ಸ್ವಾತಂತ್ರ್ಯ ಮುಂತಾದವುಗಳನ್ನು ವರ್ಧಿಸುವುದೇ ಆಗಿರಬೇಕು.

೮. ಮನುಷ್ಯ ಜಾತಿಯು ಸುಖದಲ್ಲಿ ಬಾಳಬೇಕೆಂತಲೇ ತಾನು ಜನ್ಮವೆತ್ತಿದೆನೆಂದು ಕ್ರಿಸ್ತಸ್ವಾಮಿಯು ಹೇಳಿದ್ದಾನೆ. ಆದ್ದರಿಂದ ಪ್ರತಿಯೊಬ್ಬ ಮಾನವನ ಸಾಮಾಜಿಕ, ರಾಜಕೀಯ ಮತ್ತು ಅಧ್ಯಾತ್ಮಿಕ ಜೀವನವು ಪರಿಪೂರ್ಣವಾಗಿ ಬೆಳೆದು ಬರುವಂತೆ ಮಾಡಬೇಕು ಎಂಬುದು ಆತನ ಇಚ್ಛೆಯಾಗಿದೆ ಎಂಬದನ್ನು ನಾವು ಒಪ್ಪಿಕೊಳ್ಳುತ್ತೇವೆ.

ಕ್ರೈಸ್ತರಾದ ನಾವು ಒಬ್ಬೊಬ್ಬರಾಗಿ ಆಗಲಿ ಜನಾಂಗವಾಗಿ ಆಗಲಿ ಯೇಸು ಕ್ರಿಸ್ತನ ಈ ತತ್ವಗಳನ್ನು ಅಂಗೀಕರಿಸಿ ಅವನ್ನು ಅನುಸರಿಸುವುದರಲ್ಲಿ ಬಹಳ ಎಡವಿ ಬಿದ್ದಿದ್ದೇವೆ ಎಂಬದನ್ನು ನಾವು ಒಪ್ಪಿಕೊಳ್ಳಬೇಕಾಗಿದೆ. ಆದರೆ ಸಮಾಜದ ಉದ್ಧರಣೆಯು ಈ ತತ್ವಗಳ ಸ್ವೀಕಾರ ಮತ್ತು ಅನುಸರಣದ ಮೇಲೆ ಹೊಂದಿದೆ ಎಂಬುದು ನಮ್ಮ ದೃಷ್ಟಿಗೆ ಸ್ಪಷ್ಟವಾಗಿದೆ.

ಈ ತತ್ವಗಳನ್ನು ಆಧರಿಸಿ ಈ ಕೆಳಗಿನ ವಿನಂತಿಯನ್ನು ನಾವು ಮಾಡುತ್ತೇವೆ:—ಮನುಷ್ಯರನ್ನೂ ವಸ್ತುಗಳನ್ನೂ ನ್ಯಾಯಸಮ್ಮತವಾದ ಪರೀಕ್ಷೆಯಿಂದ ತುಲನೆ ಮಾಡಬೇಕು. ಒಂದು ಶತಮಾನವನ್ನು ಅದರ ಕೆಲವು ಮಾಸ್ಗಳ ಪರಿಶೀಲನದಿಂದಲೂ, ಅಥವಾ ಒಂದು ಇಡೀ ಜನಾಂಗವನ್ನು ಅದರ ಕೆಲವೇ ಜನರ [illegible]ದಿಂದಲೂ, ಒಂದು ದೇಶದ ಇತಿಹಾಸವನ್ನು ಅದರ ಕೆಲವು ಅಧ್ಯಾಯ[illegible] ತುಲನೆ ಮಾಡುವುದು ನ್ಯಾಯವಲ್ಲ. ಪ್ರತಿಯೊಂದು ಸಾಮ್ರಾಜ್ಯದ ಶಾಸನದಲ್ಲಿಯೂ ಕೆಲವು ಘಟನೆಗಳು ನಡೆದು ಮಾಸಿ ಹೋಗಿವೆ. ಬ್ರಿಟಿಷ ಸಾಮ್ರಾಜ್ಯದ ಇತಿಹಾಸವು ಇದಕ್ಕೆ ವಿಶೇಷವಾದದ್ದು ಎಂದು ಹೇಳುವದರಿಲ್ಲ. ಆದರೆ ಈಚೆಗೆ ಬಹಳ ಕಾಲದಿಂದ ಈ ಸಾಮ್ರಾಜ್ಯವು ತನ್ನ ವಸಾಹತುಗಳಿಗೆ ಸ್ವರಾಜ್ಯದ ದೊಡ್ಡ ದೊಡ್ಡ ಅಂಶಗಳನ್ನು ಕೊಡಲು ಯತ್ನಿಸುತ್ತಲಿ ಇದೆ ಎಂಬುದು ನಿರ್ವಿವಾದದ ಸಂಗತಿ. ಸಾಮ್ರಾಜ್ಯವೆಂಬುದು ಬೇರೆ ಬೇರೆ ಜನಾಂಗಗಳ ಒಂದು ದೊಡ್ಡ ಕೂಟವೆಂಬಂತೆ ಮಾರ್ಪಡುತ್ತಲಿ ಇದೆ. ಮತ್ತು ಈ ಎಲ್ಲಾ ಜನಾಂಗಗಳು ತಾವು ಒಂದೇ ಕುಟುಂಬವೆಂಬಂತೆ ಭಾವಿಸಲು ಕಲಿಯುತ್ತಲಿದ್ದಾವೆ. ಬ್ರಿಟಿಷರ ದೃಷ್ಟಿಯು ಈಗ ಹಿಂದುಸ್ಥಾನದ ಜನರ ಕಡೆಗೆ ತಿರುಗಿದೆ, ಮತ್ತು ಹಿಂದುಸ್ಥಾನದ ಜನಗಳಿಗೆ ಆದಷ್ಟು ಬೇಗನೆ ಸ್ವರಾಜ್ಯವನ್ನು ಕೊಡಬೇಕೆಂಬ ಬ್ರಿಟಿಷ ಜನಾಂಗದವರಿಗೆಲ್ಲ ವಾಸ್ತವಿಕವಾದ ಕಾಂಕ್ಷೆಯು ಇದೆ ಎಂದು ನಾವು ನಂಬುತ್ತೇವೆ. ಈಚೆಗೆ ಆಡಳಿತೆಯ ಕ್ರಮದಲ್ಲಿ ಆದ ಬದಲಾವಣೆಗಳನ್ನು ಶುದ್ಧ ಮನಸ್ಸಿನಿಂದ ಸ್ವೀಕರಿಸಬೇಕೆಂತಲೂ ತಮ್ಮ ಧ್ಯೇಯವನ್ನು ಪೂರೈಸುವದಕ್ಕೆ ಈ ಹೊಸ ಏರ್ಪಾಡುಗಳನ್ನು ಬಲವಾದ ಮೆಟ್ಟಿಲಾಗಿ ಮಾಡಿಕೊಳ್ಳಬೇಕೆಂದು ಈ ದೇಶದ ಅನ್ಯ ದೇಶೀಯ ಮತ್ತು ದೇಶೀಯ ನಿವಾಸಿಗಳಿಗೆ ನಾವು ಆಗ್ರಹಪೂರ್ವಕವಾಗಿ ಕೇಳಿಕೊಳ್ಳುತ್ತೇವೆ. ಈ ಎರಡೂ ಜನಾಂಗಗಳೊಳಗೆ ಪರಸ್ಪರ ವಿಶ್ವಾಸವೂ ಬೆಳೆದರೆ ಮುಂದಿನ ಕಾಲವು ಸುಖದಾಯಕವಾಗುವುದು.

ಸಾಮಾಜಿಕ ಅಥವಾ ರಾಜಕೀಯ ಹೂಡಿಕೆಯಿಂದ ಹೊರಡುವ[illegible] ಸಾಧಿಸಲಿಕ್ಕೆ ಅಸಾಧ್ಯವಾಗಿ ಮಾಡುವ ಪರಸ್ಪರ ದ್ವೇಷವನ್ನು ಮರೆಯಬೇಕೆಂದು ದೇವರ ಹೆಸರಿನಲ್ಲಿ ನಾವು ಎಲ್ಲರಿಗೂ ಕೇಳಿಕೊಳ್ಳುತ್ತೇವೆ.

ಅತ್ಯಾಚಾರ ಮತ್ತು ರಕ್ತಪಾತದಿಂದ ಮಾತ್ರವೇ ಈಗಿನ ವೈಷಮ್ಯಗಳನ್ನು ತೆಗೆದುಹಾಕಲಿಕ್ಕೆ ಸಾಧ್ಯವಿದೆ ಎಂಬ ತಪ್ಪಾದ ಮತ್ತು ಮುದುಕುತನದ ಅಭಿಮತವನ್ನು ಕುರಿತು ನಾವು ಸಾರಿ ಎಚ್ಚರಿಸುತ್ತೇವೆ. ದೇವರ ಮತ್ತು ಮನುಷ್ಯ ನಿರ್ಮಿತ ಮೂಲತತ್ವಗಳನ್ನು ಉಲ್ಲಂಘಿಸಿ ನಿಜವಾದ ಸುಧಾರಣೆಯನ್ನು ಮಾಡಲು ಸಾಧ್ಯವಿಲ್ಲ ಎಂಬುದು ಖಂಡಿತವಾಗಿದೆ.

ವಿಧೇಯತೆಯನ್ನು ಯೋಂದಲಿಕ್ಕೂ ಅಧಿಕಾರವನ್ನು ನೆಲೆಗೊಳಿಸಲಿಕ್ಕೂ ಶಕ್ತಿಯೇ ಪ್ರಶಸ್ತವಾದ ಸಾಧನವೆಂದು ಈ ಯುದ್ಧದಿಂದ ಹುಟ್ಟಿದ ಒಂದು ತಪ್ಪು ಗ್ರಹಿಕೆಯನ್ನು ಕುರಿತು ನಾವು ಸಾರಿ ಎಚ್ಚರಿಸುತ್ತೇವೆ. ನೀತಿಪಾಲನೆ ಮತ್ತು ವಿಚಾರ ಮತ್ತು ಪ್ರಜಾತುಷ್ಟಿಕರವಾದ ಆಳ್ವಿಕೆ ಇವನ್ನು ಬಿಟ್ಟು ಸಮಾಜವು ಬರೇ ಶಕ್ತಿಯ ಬಲದಿಂದ ಊರ್ಜಿತಕ್ಕೆ ಬರಲಾರದು ಎಂಬದು ನಿಜ.

ಆದ್ದರಿಂದ ಸಹೋದರರಾಗಿ ನಮ್ಮನ್ನು ಸೃಷ್ಟಿಸಿದ ದೇವರ ಕಡೆಗೆ ಲಕ್ಷ್ಯವಿಟ್ಟು ನಮ್ಮ ಭ್ರಾತೃವರ್ಗವನ್ನು ಪ್ರೀತಿಸಿ ತಮ್ಮ ಸೇವೆಯನ್ನು ಮಾಡುವ ಶಕ್ತಿಯನ್ನು ಪಡೆಯಬೇಕೆಂದು ನಾವು ನಮ್ಮ ಬಂಧುಗಳನ್ನು (ಹಿಂದೀ ಜನರನ್ನು) ನಾವು ಕೇಳಿಕೊಳ್ಳುತ್ತೇವೆ. ಆ ಶಕ್ತಿಯಿಂದಲೇ ನಾವು ಈಗಿನ ಮನೋವ್ಯಥೆಯಿಂದ ಪಾರಾಗಲಿಕ್ಕೆ ಸಾಧ್ಯ ಮಾಡಿಕೊಳ್ಳಬಹುದು. ನಮ್ಮ ಕರ್ತನ ತೇಜದಿಂದ ನಮ್ಮ ಮನಸ್ಸು ಬೆಳಗಲಿ.

ವಿದೇಶ ವರ್ತಮಾನ.

ಖಿಲಾಫತ್ತಿನ ವಿಚಾರ—ತುರ್ಕಿಯು ಜರ್ಮನರ ಪಕ್ಷವಾಗಿ ಯುದ್ಧರಂಗದಲ್ಲಿ ಸೇರಿದೊಡನೆ ಮುಸಲ್ಮಾನರಿಗೆ ತುರ್ಕಿಯ ಸುಲ್ತಾನರ ಮೇಲೆ ಧರ್ಮಗುರುವೆಂಬ ಭಾವನೆಯಿಂದ ಇದ್ದ ವಿಶ್ವಾಸವನ್ನು ತಗ್ಗಿಸುವುದಕ್ಕೋಸ್ಕರ ಮಕ್ಕಾ ಷರೀಫರಾದ ಶರೀಫರನ್ನು ರಾಜಪೀಠಕ್ಕೇರಿಸಿ ಬಿಟ್ಟು ಮಿತ್ರಪಕ್ಷದವರು ಮಹಮ್ಮದೀಯರಲ್ಲಿ ಭೇದವನ್ನು ತಂದಿಕ್ಕಲು ಯತ್ನಿಸಿದರು. ಆದರೆ ಈ ಶರೀಫರು ಧರ್ಮಗುರುವೆಂಬದನ್ನು ಮುಸಲ್ಮಾನ ಬಹುಮತವು ಅಂಗೀಕರಿಸದೆ ಇದ್ದ ಕಾರಣ ಹಿಂದೀ ಮುಸಲ್ಮಾನರ ಚಳವಳವನ್ನು ಕಡಿಮೆ ಮಾಡುವ ಉದ್ದೇಶದಿಂದ ತುರ್ಕಿಯೊಡನೆ ಮಾಡಿದ ಸಂಧಿಯಲ್ಲಿ ಕೊನಸ್ಟಂಟಿನೋಪಲದಿಂದ ತುರ್ಕಿಯ ಸುಲ್ತಾನರನ್ನು ಹೊರಡಿಸುವ ಕಾಂಕ್ಷೆಯನ್ನು ಬದಿಗಿಟ್ಟು, ಅದರ ಸುತ್ತಲಿರುವ ಪ್ರದೇಶಕ್ಕೆ ಗ್ರೀಸದೇಶದವರಿಗೆ ಅಧಿಕಾರಿಗಳಾಗಿ ಮಾಡಿದ್ದಲ್ಲದೆ ಕೊನಸ್ಟಂಟಿನೋಪಲದಲ್ಲಿಯೇ ಮಿತ್ರಪಕ್ಷದ ದೊಡ್ಡ ಸೈನ್ಯವನ್ನು ಇರಿಸಿಬಿಟ್ಟರು. ಹೀಗಾಗಿ ಬಾಹ್ಯದೃಷ್ಟಿಗೆ ಮುಸಲ್ಮಾನರ ಅಭಿಲಾಷೆಯನ್ನು ನೆರವೇರಿಸಿ ಸುಲ್ತಾನರನ್ನು ಕೊನಸ್ಟಂಟಿನೋಪಲದಲ್ಲಿಯೇ ಇರಿಸಿದರೂ ಕಾರ್ಯರೂಪದಲ್ಲಿ ಇದು ಏನೇನೂ ಪ್ರಯೋಜನಕ್ಕೆ ಬಾರದೆಂಬ ರಾಜಕೀಯ ಧೋರಣವನ್ನು ಮಿತ್ರಪಕ್ಷದವರು ಕೈಕೊಂಡರು. ತುರ್ಕಿಯ ಸುಲ್ತಾನರೊಡನೆ ಸಂಧಾನದ ಶರ್ತಗಳನ್ನು ಠರಾಯಿಸಿ ಅದಕ್ಕೆ ಇತ್ತಂಡದ ಸಹಿಗಳಾದವು. ಆದರೆ ನಾಮಪೂರ್ತಿಯಾಗಿ ತುರ್ಕಿಯ ಪಾರ್ಲಿಮೆಂಟ ಮತ್ತು ಸರಕಾರದ ಸಮ್ಮತಿಯು ಬೇಕಿತ್ತು. ತುರ್ಕಿಯ ಆಸ್ಯಾಖಂಡದ ವಸಾಹತಾಗಿರುವ ಎನಟೋಲಿಯದಲ್ಲಿ ತುರ್ಕಿಯ ನೆಶನಲಿಸ್ಟರನ್ನು ಅಡಗಿಸದೆ ಈ ಶರ್ತಗಳನ್ನು ತುರ್ಕಿಯ ಸರಕಾರವು ಮಂಜೂರು ಮಾಡಿದರೆ ಪ್ರಯೋಜನವಿಲ್ಲವಂತ ತುರ್ಕಿಯ ಸರಕಾರವು ಹೇಳುತ್ತಿದ್ದುದರಿಂದ ಈ ನೆಶನಲಿಸ್ಟರನ್ನು ಮುರಿಯುವ ಉದ್ದೇಶಕ್ಕೆ ನೆರವಾಗಿ ಗ್ರೀಸದೇಶದ ಸೈನ್ಯವು ಹೋಗಿತ್ತು. ಗ್ರೀಸದೇಶದ ಸರಕಾರದ ಸೂತ್ರಗಳನ್ನು ಹಿಡಿದು ಅಲ್ಲಿಯ ರಾಜನನ್ನು ಪಟ್ಟದಿಂದೋಡಿಸಿದ ವೆನಿಜುಲೋಸನು, ಅವನ ಎದುರುಪಕ್ಷದವರು ರಾಜ್ಯದ ಸೂತ್ರಗಳನ್ನು ಕಿತ್ತುಕೊಂಡ ಕಾರಣ ಈಗ ದೇಶಾಭ್ರಷ್ಟನಾಗಿರುವನು. ಈ ವೆನಿಜಲೋಸನಿಂದ ಉದ್ರೇಕಿತವಾದ ಗ್ರೀಕ್ ಸೈನ್ಯವು ಸನ್ನೆ ಮುರಿದೊಡನೆ ಆಧಾರ ತಪ್ಪಿದಂತೆ ಈಗ ಕ್ರಮವಾಗಿ ಈ ನೆಶನಲಿಸ್ಟರಿಗೆ ತಾವು ಹಿಡಿದ ಪ್ರದೇಶವನ್ನು ಬಿಟ್ಟುಕೊಟ್ಟು ಹಿಂದೆ ಸರಿಯುತ್ತಿದೆ. ಹೀಗಾಗಿ ಈ ನೆಶನಲಿಸ್ಟರ ಪ್ರಭಾವವು ಹೆಚ್ಚಿದರೆ ಬಾಧಕಕರವಾದೀತೆಂದು ತಿಳಿಯಬೇಕಾಗಿದೆ. ಅವರು ತುರ್ಕಿಯ ಸರಕಾರಕ್ಕೆ ತಿಳಿಸಿದ ವಾರ್ತೆಯಲ್ಲಿ ಈ ಸಂಧಿಶರ್ತಗಳನ್ನು ಬದಲಾವಣೆ ಮಾಡಿದ್ದಲ್ಲಿ ತಾವು ಅವನ್ನು ಒಪ್ಪಿಕೊಂಡು ತುರ್ಕಿಯ ಈಗಿನ ಸರಕಾರದ ಅಧಿಕಾರಕ್ಕೆ ಮಣಿಯುತ್ತೇವೆ ಎಂದು ತಿಳಿಸಿದ್ದಾರೆ. ಹೀಗಾದ್ದರಿಂದ ತುರ್ಕಿಗೆ ಈ ಮೊದಲು ಕೊಟ್ಟ ಶರ್ತಗಳನ್ನು ಬದಲಾಯಿಸುವ ಸಮಯವು ಬಂದೊದಗಿದೆ ಎಂದು ಹೇಳಬಹುದು. ಕೊನಸ್ಟಂಟಾಯ್ನನನ್ನೆ ಗ್ರೀಕರು ಪುನಃ ಕರೆಸಿದರೆ ಏನು ಮಾಡಬೇಕಾದೀತು ಎಂದು ನಿಷ್ಕರ್ಷೆ ಮಾಡುವುದಕ್ಕೆ ಬ್ರಿಟಿಷ ಮತ್ತು ಫ್ರೆಂಚ ಮಂತ್ರಿಗಳು ಲಂಡನ್ನಿನಲ್ಲಿ ಆಲೋಚನಾಪರರಾಗಿದ್ದಾರೆ. ಇಟಲಿಯ ಮುಖ್ಯ ಮಂತ್ರಿಯು ತನಗೆ ಬರಲು ಸಾಧ್ಯವಿಲ್ಲವೆಂದು ಹೇಳಿ, ತನ್ನ ಸಹಾಯಕನಾದ ಅನ್ಯದೇಶದ ಮಂತ್ರಿಯವನನ್ನು ಲಂಡನ್ನಿಗೆ ಈ ವಿಷಯದಲ್ಲಿ ವಿಚಾರಕ್ಕೋಸ್ಕರ ಕಳುಹಿಸುವವನಿದ್ದಾನೆ.

ಈ ನಡುವೆ ತುರ್ಕಿಯ ಸುಲ್ತಾನರೇ ಕೆಲವು ಸಮಯದ ಹಿಂದೆ ಆಡಿದ ಮಾತಿನಲ್ಲಿ ತುರ್ಕರ ಧರ್ಮಗುರುಪೀಠ ಮತ್ತು ತುರ್ಕಿಯ ಸುಲ್ತಾನರ ಅಧಿಕಾರವು ತನ್ನೊಬ್ಬನಲ್ಲಿಯೇ ಇರಬೇಕಾದ್ದಿಲ್ಲ, ಇದಕ್ಕೆ ಬದಲಾಗಿ ತನ್ನ ಧರ್ಮಗುರುತ್ವದ ಅಧಿಕಾರತ್ವವನ್ನು ತಾನು ಬಿಟ್ಟು ಬಿಡಲು ಸಿದ್ಧನಿದ್ದೇನೆ ಎಂದೆ ಹೇಳಿದ್ದರು. ಇದರ ಗೂಢಾರ್ಥವೇನೆಂದು ಗೊತ್ತಾಗುವುದಿಲ್ಲ. ಅಂತು ಮುಸಲ್ಮಾನರ ಅಭಿಪ್ರಾಯದಲ್ಲಿ ಸುಲ್ತಾನರಿಗೆ ಸ್ವಾತಂತ್ರ್ಯವಿರದಿದ್ದರೆ ಧರ್ಮಗುರುತ್ವದ (ಖಿಲಾಫತಿನ) ಅಧಿಕಾರ ನಡಿಸಲಿಕ್ಕೆ ಅವರು ಅನರ್ಹರಾಗುತ್ತಾರೆ. ಇದೇ ಕಾರಣದಿಂದ ಕೆಲವು ದಿನಗಳ ಹಿಂದೆ ಲಾಹೋರ ಪಟ್ಟಣದಲ್ಲಿ ಜರಗಿದ ಮುಸಲ್ಮಾನ ಪರಿಷತ್ತಿನಲ್ಲಿ ತುರ್ಕಿಯ ಸುಲ್ತಾನರ ಬದಲಾಗಿ ಬೇರೊಬ್ಬರನ್ನು ಧರ್ಮಗುರುವಾಗಿ ಆರಿಸಬೇಕೆಂಬದಾಗಿ ನಿರ್ಣಯಿಸಿ ಅಫಘಾನಿಸ್ಥಾನದ ಅಮೀರರನ್ನು ಖಲೀಫರಾಗಿ ಚುನಾಯಿಸಬೇಕೆಂದಿದ್ದಾರೆ. ಇಂಥ ಮಿತ್ರಪಕ್ಷದ ರಾಜಕಾರಣಕ್ಕೆ ಪ್ರತಿಕಾರ ರೂಪವಾದ ಯುಕ್ತಿ ಎಂಬದಾಗಿ ತೋರುತ್ತದೆ. ಅಮೀರರಾಗಲಿ ಬೇರೆ ಯಾರೇ ಆಗಲಿ ಧರ್ಮಗುರುವಾಗಿ ಆರಿಸಲ್ಪಟ್ಟರೆ ಮಿತ್ರಪಕ್ಷದವರು ತುರ್ಕಿ ಸುಲ್ತಾನರನ್ನು ತಮ್ಮ ಅಂಕುಶದೊಳಗೆ ಇಟ್ಟಿದ್ದರ ಪರಿಣಾಮವೇನೂ ಆಗದು ಎಂಬವೇ ಈ ಚುನಾವಣೆಯ ಉದ್ದೇಶವಾಗಿದೆ. ಈಗ ಈ ಚುನಾವಣೆ ಮತ್ತು ಗ್ರೀಕರ ರಾಜಕಾರಣದ ನಿಮಿತ್ತ ತುರ್ಕಿಯ ಶರ್ತಗಳಲ್ಲಿ ಬದಲಾವಣೆಗಳು ಬರಬೇಕಾದೀತು ಎಂಬ ಚಿಹ್ನೆಗಳು ಕಾಣುತ್ತಿವೆ.

ಬೊಲ್ಶೆವಿಕರು—ಇವರು ಕ್ರಿಮಿಯವನ್ನು ಹಿಡಿದ ಮೇಲೆ ಜನರಲ್ ರೇಂಗೆಲ್ ನ ಉಳಿದ ಸೈನ್ಯವನ್ನು ಬೊಲ್ಶೆವಿಕರ ಕೈಯಿಂದ ತಪ್ಪಿಸಿಯೋಗಲಿಕ್ಕೆ ಸಿದ್ಧವಿದ್ದ ಆನಾಮಾನ್ಯರು ಸುಮಾರು ೯೦,೦೦೦ ಜನರನ್ನು ಕರೆದುಕೊಂಡು ಕೊನಸ್ಟಂಟಿನೋಪಲಕ್ಕೆ ತಳ್ಳಿದನು. ಈ ಜನಗಳು ಕ್ಷುದ್ಬಾಧೆಯಿಂದ ಪೀಡಿತರಾಗಿ ಬಹಳ ಬಳಲಿದವರಾಗಿದ್ದರು. ಇವರು ಮಿತ್ರಪಕ್ಷದ ಮರೆಯೊಕ್ಕು ಈಗ ಉಪಕಾರ ಬೇಡುತ್ತಲಿದ್ದಾರೆ. ಇದಲ್ಲದೆ ಆರ್ಮೆನಿಯವು ಮಿತ್ರಪಕ್ಷದ ಸಹಾಯ ಹೊಂದದೆ ತುರ್ಕಿಯ ನೆಶನಲಿಸ್ಟರಿಗೂ ಇನ್ನೊಂದು ಕಡೆ ಬೊಲ್ಶೆವಿಕರಿಗೂ ತಲೆಬಾಗಿಸಿ ಸಂಧಾನಕ್ಕೆ ಒಪ್ಪಿದ್ದಾರೆ. ಈಗ ಬೊಲ್ಶೆವಿಕರು ಜೀನದಲ್ಲಿಯೂ ಇನ್ನೊಂದು ಕಡೆ ಪುನಃ ಪೋಲೆಂಡದಲ್ಲಿಯೂ ಗಲಾಟೆ ಹಚ್ಚುವವರಿದ್ದಾರೆ. ಪೋಲೆಂಡವು

[illegible] ಸೋಮವಾರ ನೋನ್-ಕೊ-ಒಪರೇಶನ ... ಕರ್ಣದ ಮೇರೆಗೆ ವಿದ್ಯಾಲಯದ ತಮ್ಮ ಸ್ಥಾನವನ್ನು ... ಸಂಧಿ ಶರ್ತಗಳನ್ನು ತೀರ್ಮಾನಿಸಲಾರೆವು ಎಂದು ಬೋಲ್ಶೆವಿಕರಿಗೆ ಪೋಲಂಡದವರು ಒಟ್ಟಿಗೆ ...

ಬೊಲ್ಶೆವಿಕರ ಸರಕಾರವನ್ನು ಮಂಜೂರು ... ಸ್ಥಾನದಲ್ಲಿ ನ್ಯಾಯಂತ್ರ ವ್ಯಾಪಾರ ಮಹಿವಾಟವನ್ನು ಕೆಲವು ಶರ್ತಗಳಿಗೆ ಒಳಪಟ್ಟು ... ದೆರಡು ನಾವಿರಕ್ಕೆ ... ಜನಾಂಗವು ಪ್ರಯತ್ನಿಸದಂತೆ ಫ್ರೆಂಚ ಜನಾಂಗವು ಮಾಡಲಿಕ್ಕೆ ... ತ್ತಾರು ಸಾಹೇಬರು ಮಂತ್ರಿಯ ಮಾತಿನಿಂದ ಗೊತ್ತಾಗುತ್ತಿದೆ.

ಪರ್ಶಿಯಾ—ಪರ್ಶಿಯಾದಲ್ಲಿ ಸೈನ್ಯವನ್ನಿಡುವ ಅವಶ್ಯವಿರಾವ್, [illegible] ಉದ್ದೇಶದಿಂದ ಬ್ರಿಟಿಷ ಸರಕಾರವು ಹಾಯನ್ನು ಮತ್ತು ದಕ್ಷಿಣ ಭಾಗ ಬಾಳೆಗಾ, [illegible] ಸೈನ್ಯವನ್ನು ಬ್ರಿಟಿಷರು ಈಗ ಹಿಂತೆಗೆಯಲು ಅಣೆ ಮಾಡಿದ್ದಾರೆ. ಪರ್ಶಿಯಾದೊಡನೆ ಒಂದು ಬಗೆಯ ಒಪ್ಪಂದವನ್ನು ತಯಾರಿಸಿ ಭದ್ರತೆಗೆ ಸೈನ್ಯ ವಗೈರೆಗೆ ಹಣವನ್ನು ಬ್ರಿಟಿಷ ಸರಕಾರವು ಈ ಮೊದಲು ಸಾಲವನ್ನು ಇನ್ನು ಮುಂದೆಯೂ ಕೊಡಲಿಕ್ಕೆ ಸಿದ್ಧವಿತ್ತು. ಆದರೆ ಈ ಒಪ್ಪಂದದ ಶರ್ತಗಳನ್ನು ಪರ್ಶಿಯಾದ ಮಜ್ಲೀಸವು (ಪಾರ್ಲಿಮೆಂಟು) ಇನ್ನೂ ಸಭೆಗೂಡಿ ಒಪ್ಪಿಕೊಳ್ಳಲಿಲ್ಲ. ಅವರು ಒಪ್ಪಿಕೊಳ್ಳದಿದ್ದರೆ ಬ್ರಿಟಿಷರು ಇನ್ನೂ ಮುಂದೆ ಸೈನ್ಯ ಸಹಾಯ ಮತ್ತು ದ್ರವ್ಯ ಸಹಾಯ ಕೊಡಲಿಕ್ಕೆ ಸಾಧ್ಯವಿಲ್ಲವೆಂದು ಬ್ರಿಟಿಷ ಅನ್ಯ ರಾಜ್ಯಗಳ ಮಂತ್ರಿಯು ಪರ್ಶಿಯಾದವರಿಗೆ ತಿಳಿಸಿದ್ದಾರೆ. ಪರ್ಶಿಯಾದ ಈಗಿನ ಬರಿದಾದ ಬೊಕ್ಕಸ, ಅವ್ಯವಸ್ಥಿತವಾದ ಸೈನ್ಯ ಇದರಿಂದ ಉಂಟಾದ ಪರಿಸ್ಥಿತಿಯಲ್ಲಿ ಬೊಲ್ಶೆವಿಕರ ಮುಂದೊತ್ತುವಿಕೆಗೆ ನಿಸ್ಸಹಾಯವಾದ ಪರ್ಶಿಯಾ ಹೇಗೆ ಅಡ್ಡಕಟ್ಟೀತು, ಅಥವಾ ಅದು ಬೊಲ್ಶೆವಿಕರ ಚಳವಳಿಕ್ಕೆ ಬಲಿಬಿದ್ದೀತೊ ಅಥವಾ ಬ್ರಿಟಿಷ ಸಹಾಯವನ್ನು ಅಂಗೀಕರಿಸಿ ಬೊಲ್ಶೆವಿಕರಿಗೆ ಎದುರಿಸೀತೊ ಎಂಬವನ್ನು ನೋಡಲಿಕ್ಕೆ ಇದೆ.

ಐರ್ಲಂಡು—ಇಲ್ಲಿ ಲಷ್ಕರಿನವರೂ ಪೋಲೀಸಿನವರೂ ಕೂಡಿ, ಸಿನ್ ಫೆನ್ನರು ಸ್ಥಾಪಿಸಿದ ಪ್ರಜಾಪ್ರಭುತ್ವ ಸರಕಾರದ ಪ್ರೆಸಿಡೆಂಟರನ್ನು ಸೆರೆ ಹಿಡಿದಿರುವರು. ಡಬ್ಲಿನದಲ್ಲಿ ಸಿನ್ ಫೆನ್ನರ ಹಾವಳಿಯೂ ಅದಕ್ಕೆ ಪೋಲೀಸರ ಪ್ರತಿಕಾರವೂ ಕಡಿಮೆಯಾಗಲಿಲ್ಲ. ಈ ನಡುವೆ ಐರ್ಲಂಡಿಗೆ ಸ್ವಲ್ಪ ಅಧಿಕಾರ ಸ್ವಾತಂತ್ರ್ಯವನ್ನು ಕೊಡಲಿಕ್ಕೆ ತಯಾರಿಸಿದ ಬಿಲ್ ಬ್ರಿಟಿಷ ಪಾರ್ಲಿಮೆಂಟಿನಲ್ಲಿ ಚರ್ಚೆಯಾಗುತ್ತಿದೆ. ಇದನ್ನು ಪ್ರಜಾಪ್ರಭುತ್ವಾಕಾಂಕ್ಷಿಗಳಾದ ಸಿನ್ ಫೆನ್ನರು ಒಪ್ಪಿಕೊಂಡಾರೊ ಎಂಬುದು ಸಂದೇಹವಿದೆ. ಆದರೆ ಪ್ರೊಟೆಸ್ಟಂಟರಾದ ಅಲ್ಸ್ಟರದವರು ಇದನ್ನು ಒಪ್ಪಿಕೊಂಡು ಸಹಾಯ ಮಾಡುವವರಂತಿದ್ದಾರೆ. ಈ ಬಿಲಿನ ಮೇರೆಗೆ ಪ್ರೊಟೆಸ್ಟಂಟರೇ ಬಹು ಮಂದಿ ಇರುವ ಅಲ್ಸ್ಟರ್ ಪ್ರಾಂತಕ್ಕೆ ಒಂದು ಸರಕಾರ, ಇತರ ಪ್ರದೇಶಗಳಿಗೆ ಒಂದು ಸರಕಾರ ಎಂಬಂತೆ ಆಗುತ್ತದೆ. ಐರಿಷ್ ನೇಶನಲಿಸ್ಟರು ಮೊದಲಿಂದಲೂ ಈ ಮತಭೇದದ ಪ್ರಕಾರ ವಿಭಜನೆಯನ್ನು ಆಕ್ಷೇಪಿಸಿ ಇಡೀ ಐರ್ಲಂಡಕ್ಕೆ ಒಂದೇ ಸರಕಾರವಿರಬೇಕೆಂದು ಪ್ರತಿಪಾದಿಸುತ್ತಿದ್ದರು. ಈ ಹೊಸಬಿಲ್ ಬ್ರಿಟಿಷ ಪಾರ್ಲಿಮೆಂಟಿನಲ್ಲಿ ಪಾಸಾದರೆ ಅದರ ಪರಿಣಾಮವೇನಾದೀತು ಎಂದು ನೋಡಲಿಕ್ಕೆ ಇದೆ.

ಅಮೇರಿಕಾ—ಅಮೇರಿಕಾ ಖಂಡದ ನ್ಯೂಆರ್ಲಿಯನ್ಸ್ ಪಟ್ಟಣದ ಸಮೀಪದಲ್ಲಿರುವ ಮನೆಗಳಿಗೆ ಬೆಂಕಿಬಿದ್ದು ೨೦ ಲಕ್ಷ ಡಾಲರ್ ಬೆಲೆಬಾಳುವ ಸಾಮಾನುಗಳು ಸುಟ್ಟು ಹೋದವು.

ಪಾಶ್ಚಾತ್ಯ ದೇಶಗಳಲ್ಲಿ ನಡೆದ ಚುನಾವಣೆಯ ಫಲಿತಾಂಶ—ಕಳೆದ ಚುನಾವಣೆಯಲ್ಲಿ ಫ್ರಾನ್ಸಿನಲ್ಲಿ ಶೇಕಡಾ ೭೪, ಜರ್ಮನಿಯಲ್ಲಿ ಶೇಕಡಾ ೯೫ ಮತ್ತು ಗ್ರೇಟಬ್ರಿಟನ್ನಿನಲ್ಲಿ ಶೇಕಡಾ [illegible] ವೋಟರರು ತಮ್ಮ ವೋಟುಗಳನ್ನು ಕೊಟ್ಟಿರುತ್ತಾರೆ.

ಒಳದೇಶ ವರ್ತಮಾನ.

ರಾಷ್ಟ್ರೀಯ ಪೋಸ್ಟ ಆಫೀಸು—ಮುಂಬಯಿ ಶಹರಿನಲ್ಲಿ ಈ ತಿಂಗಳ ತಾರೀಕು ೧೫ರಿಂದ ಕಾಗದಪತ್ರ ಮೊದಲಾದವನ್ನು ಬಟವಾಡೆ ಮಾಡುವ ರಾಷ್ಟ್ರೀಯ ಟಪ್ಪಾಲ ಆಫೀಸುಗಳು ಸ್ಥಾಪನೆಯಾಗುತ್ತವಂತೆ.

ತಿರುವನಂತಪುರದ ಗುಂಡಿಗಳ ಕಾರ್ಖಾನೆ—ನಾಲ್ಕು ಕೋಟಿನ ಗುಂಡಿಗಳನ್ನು (ಗುಬ್ಬಿ) ತಯಾರಿಸುವ ಕಾರ್ಖಾನೆಯು ತಿರುವಾಂಕೂರಿನ ದಿವಾನ ಸಾಹೇಬರಿಂದ ಕಳೆದ ೨೧ನೆ ತಾರೀಕಿಗೆ ತೆರೆಯಲ್ಪಟ್ಟಿತು

ನಾಮದಾರ ಶಫಿ—ವಂಷ್ಟ ಕೌನ್ಸಿಲಿನ ವಿದ್ಯಾ ಇಲಾಖೆಯ ಮೆಂಬರ ನಾಮದಾರ ಶಫಿಯವರು ಅಲಿಘರಕ್ಕೆ ಬಂದು ಅಲ್ಲಿಯ ಯೂನಿವರ್ಸಿಟಿ ಕೋರ್ಟಿನ ಆಡಳಿತ ಸಭೆಯವರನ್ನೂ ವಿದ್ಯಾರ್ಥಿಗಳನ್ನೂ ಭೇಟಿಕೊಟ್ಟರು.

ವಿಹಾರದಲ್ಲಿ ಎಂಜಿನಿಯರಿಂಗ್ ಕೊಲೇಜು—ವಿಹಾರದ ಪ್ರಾಂತದಲ್ಲಿ ಪಾಟ್ನಾದಲ್ಲಿ ಒಂದು ಎಂಜಿನಿಯರಿಂಗ್ ಕೊಲೇಜನ್ನು ಸ್ಥಾಪಿಸುವ ಏರ್ಪಾಡು ನಡೆಯುತ್ತದೆ.

ನೊನ್ ಗಜೆಟೆಡ್ ಆಫೀಸರರ ಎಸೋಸಿಯೇಷನ—ಮದ್ರಾಸಿನ ಈ ಎಸೋಸಿಯೇಷನ ವಿಶೇಷ ಅಧಿವೇಶನವೊಂದು ಇದೇ ತಿಂಗಳ ೫ನೆ ತಾರೀಕಿಗೆ ಮದ್ರಾಸಿನಲ್ಲಿ ಜರಗಲಿಕ್ಕಿದೆ. ಸಂಬಳದ ದರಗಳನ್ನು ಏರಿಸುವ ವಿಷಯದಲ್ಲಿ ಸರಕಾರದ ಇತ್ಯರ್ಥವು ಇನ್ನೂ ಪ್ರಕಟವಾಗಿಲ್ಲ ಎಂಬವೇ ಈ ವಿಶೇಷ ಸಭೆಗೆ ಕಾರಣವಾಗಿದೆ.

ಹೊಸಪೇಟೆಯ ಶ್ಯಾನಭೋಗರು—ಈ ಹೊಸಪೇಟ ತಾಲೂಕಿನಲ್ಲಿ (ಬಳ್ಳಾರಿ) ೧೩೦ ಶ್ಯಾನಭೋಗರು ತಮಗೆ ಸಂಬಳ ಕಡಿಮೆ, ದುಡಿತ ಹೆಚ್ಚು ಎಂದು ಅವಶ್ಯಕಂತಲೂ ಹೆಚ್ಚು ಕಾಲ ಕೆಲಸದಿಂದ ತಮ್ಮ ಕೆಲಸಗಳಿಗೆ ರಾಜಿನಾಮೆ ಕೊಟ್ಟರೆಂದು ಹೊಸಪೇಟೆಯ ಬಾತ್ಮೀದಾರರೊಬ್ಬರು 'ಹಿಂದೂ' ಪತ್ರಿಕೆಗೆ (೨೩-೧೧-೨೦) ಬರೆದಿರುತ್ತಾರೆ.

ಪ್ರೆಸಿಡೆನ್ಸಿ ಪೋಸ್ಟ್ಮೆನ್ ಯೂನಿಯನ್—ಮದ್ರಾಸಿನಲ್ಲಿ ಕಳೆದ ತಿಂಗಳ ೨೧ನೆ ತಾರೀಕಿಗೆ ಜರಗಿದ ಈ ಯೂನಿಯನ್ನಿನ ಮಹಾ ಸಭೆಯಲ್ಲಿ ತಮ್ಮ ಪೈಕಿ ೧೩ ಪ್ರತಿನಿಧಿಗಳು ಪೋಸ್ಟಮಾಸ್ಟರ ಜನರಲರವರ ಸಮ್ಮುಖಕ್ಕೆ ಹೋಗಿ ಈ ಯೂನಿಯನ್ನಿನ ಮುಂಬರಿದ ನಿರ್ಣಯಗಳನ್ನು ನಿವೇದಿಸಬೇಕೆಂದೂ 'ಬೋನಸ್' ಸಂಖ್ಯೆ ಹೆಚ್ಚಿಸಿ, ಪಾಸಲಿ ಕಡಿಮೆಮಾಡದ್ದಕ್ಕೆ ಉಪಕಾರ ಸ್ಮರಿಸಬೇಕೆಂದೂ ಮುಂತಾಗಿ ಠರಾವುಗಳು ಪಾಸಾದವು.

ಕಲ್ಕತ್ತೆಯಲ್ಲಿ ಯಜ್ಞೇಶ್ವರನಿಗೆ ಆಹುತಿ—ಕಿದಿರಪುರ ಡೊಕ್ಕಿನಲ್ಲಿ ಮಲಕಾಂಡ ಎಂಬಲ್ಲಿಗೆ ಸಾಗಿಸಲಿಕ್ಕೆ ಕೂಡಹಾಕಿದ್ದ ಸುಮಾರು ಹತ್ತು ಸಾವಿರ ನಾರಿನ ಮೂಟೆಗಳಿಗೆ ಬೆಂಕಿಬಿತ್ತು.

ಇಂಡಿಯಾ ಸರಕಾರದವರು ಇದೇ ನವಂಬರ್ ತಾ|| ೧೯ರ ವಾರಾಯಿತು ಇಂಡಿಯಾದೇಶದಿಂದ ವಿದೇಶಗಳಿಗೆ ಕಳುಹಿಸತಕ್ಕ ಅಂಚೆವರ್ತಮಾನದ ಪ್ರತಿಯೊಂದು ವಾಕ್ಯಕ್ಕೂ ರೂ. ೧-೩-೨ ಚಾರ್ಜು ವಿಧಿಸಿರುವುದಾಗಿ ಪ್ರಕಟಿಸಿದ್ದಾರೆ.

ಮದರಾಸ ಪಟ್ಟಣದಲ್ಲಿ ನಡೆದ ಲೆಜಿಸ್ಲೇಟಿವ ಕೌನ್ಸಿಲ್ ಚುನಾವಣೆಗೆ ಜಮೆಯಾದ ವೋಟುಗಳು—ನೋನ್ ಮಹಮ್ಮದಿಯರಲ್ಲಿ ೨೫% ಮಹಮ್ಮದಿಯರಲ್ಲಿ ೧೬% ದೇಶೀಯ ಕ್ರೈಸ್ತರಲ್ಲಿ ಸುಮಾರು ೫೦ ಯಾ ೬೦% ರಂತೆ ಇರಬಹುದಾಗಿ ಅಂದಾಜು ಮಾಡಲಾಗಿದೆ ಎಂದು ಪತ್ರಿಕೆ ಬರೆದಿದೆ.

ಕೊಚ್ಚಿ—ಕಳೆದ ತಾ. ೨೯ನೇ ಸೋಮವಾರ ಕೊಚ್ಚಿನ್ ದೇಶದ ರಾಜಕುಮಾರರವರು ಸ್ವರ್ಗಾರೋಹಣಮಾಡಿದರು.

[illegible]

ವರ್ತಮಾನ ಸಂಗ್ರಹಗಳು— [illegible]

ಸ್ವದೇಶಾಭಿಮಾನಿ.

ಶಕ ೧೮೪೩ ಕಾರ್ತಿಕ ಬ ೮ ಶುಕ್ರವಾರ.

ಚುನಾವಣಿ ಪರೀಕ್ಷೆ.

ಈ ಸಂಸ್ಥಾನದ ಪ್ರಜಾವರ್ಗದ ಚುನಾವಣಿ ಪರೀಕ್ಷೆಯು ಕಳೆದ ತಾ ೩೦ನೇ ಸಾಯಂಕಾಲದೊಳಗೆ ಮುಗಿದಿದೆ. ಶಾಲಾ ಮತ್ತು ಕೊಲೇಜು ವಿದ್ಯಾರ್ಥಿಗಳು ತಮ್ಮ ಪರೀಕ್ಷೆಯು ಮುಗಿದ ನಂತರ ಪ್ರಶ್ನಾಪತ್ರಗಳನ್ನು ಹಿಡಿದುಕೊಂಡು ತಾವು ಉತ್ತರಕೊಟ್ಟ ವಿಧಾನಗಳನ್ನು ಪರಿಗ್ರಹಿಸುತ್ತ ಕೊಟ್ಟ ಪರೀಕ್ಷೆಯಲ್ಲಿ ಪಾಸಾಗುವೆವೊ ಇಲ್ಲವೊ ಎಂಬುದನ್ನು ಹೇಗೆ ಅನುಮಾನ ಚಿತ್ತದಿಂದ ನಿರ್ಧರಿಸುವರೋ ಅದೇ ರೀತಿ ಕೌನ್ಸಿಲ್ ಚುನಾವಣಿ ಪರೀಕ್ಷೆಯ ಫಲವನ್ನು ತಂತಮ್ಮ ವಿಧಾನಗಳಿಂದ ಆಯಾ ಪಕ್ಷದವರು ಎದುರು ನೋಡುತ್ತಿರುವರು ಯಾವ ವಿಧಾನದಿಂದ ಈ ಪರೀಕ್ಷೆಯ ಫಲವನ್ನು ನಿರ್ಧರಿಸುವದಾದರೂ ಚುನಾವಣಿ ಕಾಲದಲ್ಲಿ ಪ್ರತ್ಯಕ್ಷ ಕಂಡುಬಂದ ಸಮಾಚಾರವನ್ನು ಪ್ರಥಮದಲ್ಲಿ ಮನಸ್ಸಿಗೆ ತಂದುಕೊಳ್ಳಬೇಕಾಗಿರುತ್ತದೆ ಮಂಗಳೂರು ಮುನಿಸಿಪಾಲಿಟಿಯಲ್ಲಿ ಮತದಾರರ ಸಂಖ್ಯೆಯು ಬಹಳವಿದ್ದು ಎಲ್ಲಾ ವಾರ್ಡುಗಳಿಂದಲೂ ಮತದಾರರು ರಾಶಿರಾಶಿಯಾಗಿ ಬರಬೇಕಾಗಿದ್ದ ಈ ಸಂದರ್ಭದಲ್ಲಿ ಮುನ್ಸಿಪಲ್ ಕೌನ್ಸಿಲಿಗೆ ಒಂದೇ ಒಂದು ವಾರ್ಡಿನಿಂದ ಕೌನ್ಸಿಲರನೊಬ್ಬನನ್ನು ಚುನಾಯಿಸುವ ಕಾಲದಲ್ಲಿ ಮತದಾರರಲ್ಲಿದ್ದ ಆಸಕ್ತಿಯು ಈ ಸಲ ಪಟ್ಟಣದ ಯಾವ ಭಾಗದಲ್ಲಿಯಾದರೂ ಕಂಡುಬರಲಿಲ್ಲ ಇಲೆಕ್ಶನ್ ನಡಿಯುವ ಗದ್ದಲವು ಸಹ ಎಲ್ಲಿಯೂ ಇಲ್ಲದೆ ಎಲ್ಲವು ಸ್ತಬ್ಧವಾಗಿತ್ತು ಜಿಲ್ಲೆಯ ಆಯಾ ಕಡೆಗಳಲ್ಲಿ ಏರ್ಪಡಿಸಿದ ಓಟು ಕೊಡುವ ಕಟ್ಟಗಳಲ್ಲಿ ಇದೇ ಸ್ಥಿತಿಯು ಬಹಳ ಮಟ್ಟಿಗೆ ಇತ್ತೆಂದು ಎಲ್ಲ ಕಡೆಗಳಿಂದಲೂ ಕೇಳಿಸುತ್ತದೆ ಈ ಚುನಾವಣಿಗಳಲ್ಲಿ ಮತದಾರರು ಏಕೆ ಹೆಚ್ಚಿನ ಆಸಕ್ತಿಯನ್ನು ತೋರಿಸಲಿಲ್ಲ? ಮತದಾನದ ಶಿಕ್ಷಣವು ಸಾಕಾದಷ್ಟು ಇಲ್ಲದೆ ಇರುವುದರಿಂದಲೋ, ಅಥವಾ ಪ್ರಜಾವರ್ಗಕ್ಕೆ ಚುನಾವಣಿ ವಿಧಾನವೇ ನೂತನವೋ? ಗ್ರಾಮಪಂಚಾಯತರನ್ನು ಆರಿಸುವದು ಸಹಕಾರ ಸಂಘಗಳಲ್ಲಿ ಪಂಚಾಯತರನ್ನು ಚುನಾಯಿಸುವದು, ಲೋಕಲ್‌ಬೋರ್ಡುಗಳಿಗೆ ಮೆಂಬರರನ್ನು ಓಟುಗಳ ಮೂಲಕ ನೇಮಿಸುವದು ಚುನಾವಣೆಯ ಈ ಪ್ರಕಾರಗಳು ಈಗ ಹಲವು ವರುಷಗಳಿಂದ ಗ್ರಾಮಾಂತರಗಳಲ್ಲಿ ಸಹ ನಡಿಯುತ್ತಿದ್ದು ಪಟ್ಟಣಗಳಲ್ಲಿ ಈ ಚುನಾವಣೆಗಳಲ್ಲದೆ ಮುನ್ಸಿಪಲ್ ಇಲೆಕ್ಶನುಗಳು ನಡಿಯುತ್ತಿರುವದರಿಂದ ಚುನಾವಣಿ ವಿಧಾನವೇ ಹಿಂದೀ ಪ್ರಜಾವರ್ಗಕ್ಕೆ ನೂತನವೆಂದು ಸರ್ವಥಾ ಹೇಳಲಿಕ್ಕಾಗುವದಿಲ್ಲ ಚುನಾವಣೆಗಳ ಹೊಕ್ಕುಬಳಿಕೆಯು ಪ್ರಜಾವರ್ಗದಲ್ಲಿ ಈ ರೀತಿ ಇರುತ್ತಾ ಓಟು ಕೊಡುವ ಅಥವಾ ಮತದಾನದ ಶಿಕ್ಷಣದ ಅಭಾವವು ಇರುವದೆಂದು ಹೇಳಲೂ ಅಸ್ಪದವಿಲ್ಲ. ಯೋಗ್ಯನಾದಂಥಾ ಉಮೇದುವಾರನಿಗೆನೇ ಮತಗಳನ್ನು ಕೊಟ್ಟು ಆತನನ್ನು ತಮ್ಮ ಕಡೆಯ ಪ್ರತಿನಿಧಿಯನ್ನಾಗಿ ಆರಿಸುವ ಸಾಮಾರ್ಥ್ಯವು ಪ್ರಕೃತ ಹಲವರಲ್ಲಿ ಇಲ್ಲದೆ ಇರುವದಾದರೆ ಇದು ಮತದಾನದ ಶಿಕ್ಷಣವಿಲ್ಲದೆ ಇರುವದರಿಂದಲ್ಲ ಅನೇಕ ವರುಷಗಳಿಂದ ಪರತಂತ್ರದಲ್ಲಿ ಬಿದ್ದುಕೊಂಡಿದ್ದು ಸ್ವಾಭಿಮಾನವನ್ನು ಕಾಪಾಡಿಕೊಳ್ಳುವಷ್ಟು ಸಂಪನ್ನತೆಯೂ ಇಲ್ಲದೆ ದಾಕ್ಷಿಣ್ಯದಿಂದ ಅಂಜಿಕೆಯಿಂದ ಅಥವಾ ಇತರ ಆಶೆಯಿಂದ ಅಯೋಗ್ಯನಾದವನನ್ನು ತಮ್ಮ ಪ್ರತಿನಿಧಿಸ್ಥಾನಕ್ಕೆ ಆರಿಸುತ್ತರಾದರೆ ಮತದಾನದ ಶಿಕ್ಷಣವು ಸರಿಯಾಗಿ ಇಲ್ಲವೆನ್ನಲು ಈ ಕಾರಣದಿಂಥಾಗುದಿಲ್ಲವೆ. [illegible]

[illegible] ಮತದಾನದ ಶಿಕ್ಷಣವೇ ದೇಶಾದಂತೆ ಪ್ರಜಾವರ್ಗದವರಲ್ಲಿದ್ದರೂ, ಓಟಿನ ವಿಶೇಷತ್ವವನ್ನು ಇವರಿಗೆ ವಿಶೇಷವಾಗಿ ಬೋಧಿಸಿದರೂ, ಮತದಾರರ ಸಂಖ್ಯೆಯು ಬಹಳ ದೊಡ್ಡದಾಗಿರುತ್ತ ಮತಗಳನ್ನು ಕೊಡಲು ಬಂದವರ ಸಂಖ್ಯೆಯು ಬಹಳ ಕಡಿಮೆಯಾಗಿದೆ ಅಂದ ಮೇಲೆ ಚುನಾವಣಿ ಪರೀಕ್ಷೆಯ ಫಲವು ಈ ಜಿಲ್ಲೆಯಲ್ಲಿ ಯಾವ ರೀತಿಯಾಗಿದೆ ಎಂತ ನಿರ್ಧರಿಸಬಹುದು?

ಮುಂಬಯಿ ಸಂಸ್ಥಾನದಲ್ಲಿ ಮತಗಳನ್ನು ಕೊಟ್ಟವರ ಸಂಖ್ಯೆಯು ಶೇಕಡಾ ೨೦ಕ್ಕೆ ಮಿಕ್ಕಿಲ್ಲವಂತೆ. ಇಲ್ಲಿ ಮಂಗಳೂರಪಟ್ಟಣದಲ್ಲಿಯೂ ಮಂಗಳೂರು ತಾಲೂಕಿನ ಮುಖ್ಯ ಪಟ್ಟಣಗಳಾದ ಬಂಟವಾಳ ಮೊದಲಾದ ಊರುಗಳಲ್ಲಿಯೂ, ಕಾಸರಗೋಡು, ಉಡ್ಪಿ, ಕುಂದಾಪುರ, ಕಾರ್ಕಳ ಈ ತಾಲೂಕುಗಳಲ್ಲಿಯೂ ಪೋಲಿಂಗ್ ಸ್ಟೇಶನುಗಳಿಗೆ ಓಟು ಕೊಡಲು ಬಂದ ಮತದಾರರ ಸಂಖ್ಯೆಯು ಕಡಿಮೆಯೆಂದು ಕೇಳುತ್ತೇವೆ ಈ ಸಂಖ್ಯೆಗಳ ಪರಿಮಾಣದಿಂದ ಇಲ್ಲಿಯ ಸರಾಸರಿಯು ಶೇಕಡಾ ೨೦ ಯಾ ೨೨ಕ್ಕೆ ಮೀರದೆಂದು ಕೆಲವರ ಅಭಿಪ್ರಾಯವಿರುವುದು ಈ ಅಭಿಪ್ರಾಯವು ತಪ್ಪೊ ಸರಿಯೋ ಎಂಬದು ಇನ್ನು ಒಂದೆರಡು ದಿನಗಳಲ್ಲಿಯೇ ಪ್ರಕಟವಾಗುವುದು

ಹೊಸ ಸುಧಾರಣೆಯ ಕಾನೂನು ಮಂಜೂರಾಯಿತು ಹೊಸ ಕೌನ್ಸಿಲುಗಳಿಗೆ ಪ್ರತಿನಿಧಿಗಳನ್ನು ಕಳುಹಿಸಿ ಕೌನ್ಸಿಲು ಸುಧಾರಣೆಯ ನಿಕೃಷ್ಟ ಸ್ಥಿತಿಯನ್ನು ಮಾರ್ಪಡಿಸಬೇಕೆಂದು ಒಮ್ಮೆ ರಾಷ್ಟ್ರೀಯ ಸಭೆಯಲ್ಲಿ ನಿಶ್ಚಿತವಾಯಿತು ಅಷ್ಟರಲ್ಲಿ ಪಂಜಾಬದಲ್ಲಿ ಹಿಂದೀ ಜನಾಂಗಕ್ಕೆ ಅಧಿಕಾರಿಗಳ ಮೂಲಕ ಪ್ರಾಪ್ತವಾದ ಮಾನಭಂಗ, ಖಿಲಾಫತ್ ಧರ್ಮರಕ್ಷಣೆಯ ವಾಗ್ದಾನದಲ್ಲಿ ಪ್ರಾಪ್ತಿಸಿದ ವಚನಭಂಗ, ಇವೆರಡರ ಕ್ಷೋಭಗಳೊಂದಾಗಿ ಹಿಂದೀ ಮಾತೆಯ ತನಭಿಮಾನವನ್ನು ಕಾಯಬೇಕೆಂಬುವ ಪ್ರಲಾಪವು ಸತ್ಪುತ್ರರಾದಂಥ ಮಹಾತ್ಮಾ ಗಾಂಧಿಗಳ ಮೂಲಕ ಎಲ್ಲೆಲ್ಲಿಯೂ ಕೇಳಿಸಿತು ಅಸಹಕಾರಿತ್ವದ ತತ್ವೋಪದೇಶವನ್ನು ಮಹಾತ್ಮಾ ಗಾಂಧಿಗಳು ದೇಶದ ಎಲ್ಲಾ ದಿಕ್ಕುಗಳಲ್ಲಿಯೂ ಮಾಡಿದರು ಜಾದಾ ರಾಷ್ಟ್ರೀಯ ಸಭೆಯು ಈ ಅಸಹಕಾರಿತ್ವದ ಪಾಠವನ್ನು ಅಭ್ಯಾಸಿಸಿ ಕೌನ್ಸಿಲುಗಳ ಬಹಿಷ್ಕಾರ ಮೊದಲಾದ ಸಾಧನಗಳಲ್ಲಿ ಕೈಯಿಕ್ಕಬೇಕೆಂತ ಸೂಚಿಸಿತು ಕೌನ್ಸಿಲು ಚುನಾಣೆಯು ನಡೆಯಿತು ಹಿಂದೀ ಜನಾಂಗಕ್ಕೆ ಅಸಹಕಾರಿತ್ವದ ಪಾಠದ ಪ್ರಥಮ ಪರೀಕ್ಷೆಯಾಯಿತು ಚುನಾವಣಿ ಪರೀಕ್ಷೆಯೂ ನೆರವೇರಿತು, ಪರೀಕ್ಷೆಯ ಫಲವೇನು? ಕೌನ್ಸಿಲುಗಳ ಚುನಾವಣಿ ಕಾಲಕ್ಕೂ ಜಾದಾ ರಾಷ್ಟ್ರೀಯ ಸಭೆಯು ಅಸಹಕಾರಿತ್ವದ ಸಾಧನವನ್ನು ಸೂಚಿಸಿದ ಕಾಲಕ್ಕೂ ಇದ್ದ ಅಂತರವ ಬಹಳಸ್ವಲ್ಪವೇ ಆದರೂ ಈ ಅಲ್ಪಕಾಲದಲ್ಲಿ ಅಸಹಕಾರಿತ್ವದ ಪ್ರಥಮ ಸಾಧನಕ್ಕೆ ವ್ಯಾಪಕಸ್ವರೂಪವು ಬಹಳ ಮಟ್ಟಿಗೆ ಬಂದು ಹೋಗಿದೆ, ಎಂಬುದು ಈ ಚುನಾವಣೆಗಳ ಮೂಲಕ ರುಜುವಾಯಿತು ಇನ್ನು ಇಂಥಾ ಚುನಾವಣೆಯಿಂದ ಜಯಶೀಲರಾಗಿ ಬರುವ ಉಮೇದುವಾರರ ಪರೀಕ್ಷೆಯು ಇಂದಿನಿಂದ ಪ್ರಾರಂಭವಾಯಿತೆನ್ನಬೇಕು ಕೌನ್ಸಿಲುಗಳ ಬಹಿಷ್ಕಾರದ ಈ ಪರೀಕ್ಷೆಯು ಸ್ಪಷ್ಟವಾಗಿ ರೂಪುಗೊಂಡ ಪ್ರಜಾಸಂತಾಪವನ್ನು ಸರಕಾರದವರು ಇನ್ನೂ ಮೂಲೆಗೊತ್ತುವರೋ ಅಥವಾ ಈ ಸಂತಾಪದ ಕಾರಣಗಳನ್ನು ಹೋಗಗೊಳಿಸಿ ಪ್ರಜಾವರ್ಗವನ್ನು ಸಂತೈಸುವರೋ ಎಂಬೀ ಪರೀಕ್ಷೆಯ ಫಲವು ಇನ್ನೂ ಹೊರಬೀಳಲು ಬಾಕಿ ಇದೆ.

ಸ್ಫುಟ ವಿಚಾರಗಳು

೧ ಸಹಕಾರಿ ಸಂಘಗಳ ೧೯೧೯—೧೯೨೦ನೇ ವರುಷದ ಅಭಿವೃದ್ಧಿಯ ಕುರಿತು ಒಂದು ವೃತ್ತಾಂತವು ಇತ್ತಲಾಗೆ ಪ್ರಕಟಿಸಲ್ಪಟ್ಟಿರುವದು ದೇಶದ ಎಲ್ಲಾ ಭಾಗಗಳಲ್ಲಿ ಸಹಕಾರಿ ಸ್ಥಾಪನೆಗಳ ವಿಷಯ ಪೂರ್ಣವಾದ ವಿವರವು ಈ ವೃತ್ತಾಂತದಲ್ಲಿರುವದು. ೧೯೧೫—೧೬ನೇ ವರುಷದಲ್ಲಿ ೧೭,೩೨೭ ಆಗಿದ್ದ ಸಂಘಗಳ ಸಂಖ್ಯೆಯು ೧೯೧೭-೧೮ರಲ್ಲಿ ೨೩,೦೩೭ಕ್ಕೂ ೧೯೧೮—೧೯ರಲ್ಲಿ ೨೮,೪೭೭ಕ್ಕೂ ವರದಿಯ ವರುಷದಲ್ಲಿ ೩೨,೪೭೩ಕ್ಕೂ ಏರಿರುವದು ಸಹಕಾರದಿಂದ ಆಗುವ ಪ್ರಯೋಜನವನ್ನು ಪಡೆಯಲು ಜನರು ಹೇಗೆ ಮುಂದಾಗಿ ಬಂದು ಸಂಘಗಳ ಸ್ಥಾಪನೆಗಳನ್ನು ಅಭಿವೃದ್ಧಿಸುತ್ತಿದ್ದಾರೆಂಬದು ಈ ಸಂಖ್ಯೆಗಳನ್ನು ಹೋಲಿಸಿ ನೋಡಿದ್ದಲ್ಲಿ ಮನಸ್ಸಿಗೆ ಖಚಿತವಾಗುವದು. ಮಾನವಸಂಸ್ಕೃತಿಯನ್ನ ಮುರಿದುಬಿಡುವ ಘೋರ ಯುದ್ಧದ ಕಾಲದಲ್ಲಿಯೂ ಸಹಕಾರ ಚಳವಳದ ಬೆಳವಣಿಕೆಗೆ ಬಹಳ ಅಭ್ಯಂತರ ಅಥವಾ ತಡೆ ಇದ್ದಿಲ್ಲ ಎಂಬುದು ಈ ವೃತ್ತಾಂತದಿಂದ ವ್ಯಕ್ತವಾಗುವುದು. ಆಯಾ ಸಂಸ್ಥಾನಗಳ ಸಂಘಗಳ ಸಂಖ್ಯೆಗಳನ್ನು ಪ್ರತ್ಯೇಕಿಸಿ ನೋಡಿದ್ದಲ್ಲಿ [illegible] ಸಂಘಗಳಿರುವ ಪಂಜಾಬು, ಎಲ್ಲಾ ಸಂಸ್ಥಾನಗಳ ಪೈಕಿ [illegible] ಬಂಗಾಳ ಸಂಸ್ಥಾನ [illegible] ನಮ್ಮ ಸಂಸ್ಥಾನವು [illegible] ಸಂಖ್ಯೆಯಲ್ಲಿ ನಮ್ಮ ಸಂಸ್ಥಾನವು [illegible] ಸಂಘಗಳ ಪೈಪೋಟಿಗಳಿಗೆ [illegible] ನಮ್ಮ ಸಂಸ್ಥಾನವು ಪ್ರಥಮಸ್ಥಾನದಲ್ಲಿರುವದು. ಇಡೀ ದೇಶದ ಸಂಘಗಳ ಪೈಪೋಟಿದಲ್ಲಿರುವ ೧೮,೯೫,೫೨,೦೦೦ ರೂಪಾಯಿಗಳಲ್ಲಿ ಮದ್ರಾಸು ಸಂಸ್ಥಾನದ ಸಂಘಗಳಲ್ಲಿ ೩,೦೫,೭೬,೦೦೦ ರೂಪಾಯಿ ಇರುವದು. [illegible] ಸಂಘಗಳು ಈ ಸಂಸ್ಥಾನದಲ್ಲಿ ೪೬೭೫ ಇವೆ. ಅಂದರೆ ಈ ಬಾಬಿನ ಸಂಘಗಳ ಸಂಖ್ಯೆಯು ಇತರ ಸಂಸ್ಥಾನಗಳಿಗಿಂತ ಹದಿನೆಂಟು ಕಡಿಮೆಯಾಗಿದೆ ಮೂಲಸಂಘಗಳಿಗೆ ದೇಶದ ಎಲ್ಲಾ ಕಡೆಗಳಲ್ಲಿಯೂ ಸೇರಿದ ಮೆಂಬರರ ಸಂಖ್ಯೆಯು ೧೩,೭೬,೫೫೮ ಆಗಿರುವದು. ನಮ್ಮ ಸಂಸ್ಥಾನದಲ್ಲಿ ಈ ಪೈಕಿ ೨೪೨,೭೭೩ ಜನ ಮೆಂಬರರಿರುವರು. ಈ ಸಂಖ್ಯೆಯು ಸಹ ನಮ್ಮಲ್ಲಿಯೇ ಅತೀ ದೊಡ್ಡದಾಗಿರುವದು ಮೂಲಸಂಘಗಳಿಗೆ ಬೇಕಾದ ಹಣವನ್ನು ಒದಗಿಸಿಕೊಡುವ ಸೆಂಟ್ರಲ್ ಬೇಂಕುಗಳ ಅಥವಾ ಬೇಂಕಿಂಗ್ ಯೂನಿಯನುಗಳು ಇಡೀ ದೇಶದಲ್ಲಿ ೩೩೩ [illegible] ಸೆಂಟ್ರಲ್ ಬೇಂಕುಗಳಿಗೆ ಮತ್ತು ಮೂಲಸಂಘಗಳಿಗೆ ಉಳಿದ [illegible] ಕೆಯ ಸಂಖ್ಯೆಗಳ ಪ್ರಸ್ತಾವದ ನಂತರ ಬಿನ್‌ಪತ್ತಿನ ಸಂಘಗಳ ಪ್ರಶಂಸೆಯು ಈ ವೃತ್ತಾಂತದಲ್ಲಿರುವುದು ಜಾನುವಾರು ವಿಮೆ ಸಂಘಗಳು ಮುಂಬಯಿ, ಬಂಗಾಳ, ಸಂಯುಕ್ತ ಸಂಸ್ಥಾನಗಳು, ಪಂಜಾಬು, ಬರ್ಮಾ ಮತ್ತು ಕೊಡಗು ಈ ಪ್ರಾಂತ್ಯಗಳಲ್ಲಿವೆ ಎಂತ ತೋರಿಬರುವುದು ವರದಿಯ ವರುಷದಲ್ಲಿ ಈ ಸಂಘಗಳ ಸಂಖ್ಯೆಯು ೪೧೦ ಆಗಿತ್ತು ವಿಮೆದಾರರಿಗೆ ಕೊಡಬೇಕಾದ ಮೊಬಲಗು ರೂ ೮,೯೪೯ ಆಗಿತ್ತು ಮತ್ತು ಈ ಸಂಘಗಳಲ್ಲಿ ಜುಮ್ಲಾ ಇರುವ ಹಣ ಸಂಗ್ರಹವು ರೂ ೩೩ ಲ೧೯ ಇದೆ. ಇಂಥಾ ಸಂಘಗಳು ನಮ್ಮ ಸಂಸ್ಥಾನದಲ್ಲಿ ಇಲ್ಲದೆ ಇರುವುದು ಒಂದು ಕುಂದುಕವೆಂದೇ ಹೇಳಬೇಕು ಸಹಕಾರ ಸಂಘಗಳ ಈ ಅಭಿವೃದ್ಧಿ ಚರಿತೆಯನ್ನು ತಿಳಿದು ಸಹಕಾರಿಗಳೆಲ್ಲರೂ ಸಂತೋಷಪಡದೆ ಇರಲಾರರು ಬರೆ ಪತ್ತಿನ ಸಂಘಗಳಲ್ಲದೆ ಹಲವುಬಗೆಯ ಬಿನ್‌ಪತ್ತಿನ ಸಂಘಗಳ ಮೂಲಕ ಕೃಷಿಕರು ಮತ್ತು ಚಿಲ್ಲರೆ ವ್ಯಾಪಾರಸ್ಥರು ಒಟ್ಟು ಕೂಡಿ ತಮ್ಮ ಶ್ರೇಯಸ್ಸಿನ ಮಹತ್ವವಾದ ಸಾಧನೆಗಳನ್ನು ಹೇಗೆ ಸಾಧಿಸುತ್ತಿದ್ದಾರೆಂಬ ಅನ್ಯ ದೇಶಗಳಿಂದ ಬರುವ ವೃತ್ತಾಂತಗಳಿಂದ ಇಲ್ಲಿಯೂ ಅಂಥಾ ಸಾಧನೆಗಳನ್ನು ಕೈಕೊಳ್ಳಬೇಕೆಂಬ ಕುತೂಹಲವು ದೇಶದ ಹಲವು ಕಡೆಗಳಲ್ಲಿ ತಲೆದೋರಿರುವುದು ಆದರೆ ಈ ಪ್ರಯತ್ನಗಳನ್ನು ಕೈಕೊಂಡು ಮುಂದರಿಸುವ ಕಾರ್ಯಪಟುಗಳು ಧಾರಾಳವಾಗಿ ಬೇಕಾಗಿರುವರು ದೇಶಸೇವೆಯ ಈ ಭಾಗದಲ್ಲಿಯೂ ಲಕ್ಷ್ಯವು ಬೇಕಾಗಿದೆ

೨ ಕಲ್ಕತ್ತೆಯಲ್ಲಿ ನವಂಬರ್ ೧೬ನೇ ತಾರೀಕಿಗೆ ಕೊನೆಗಂಡ ಸಮ್ಮೇಲನದಲ್ಲಿ ಇಂಡಿಯಾ ಬರ್ಮಾ ಮತ್ತು ಸಿಲೋನ್ ನೆಶನಲ್ ಮಿಶ್ಯನರಿ ಕೌನ್ಸಿಲಿನವರ ವಿನಂತಿಪತ್ರದ ಭಾಷಾಂತರವನ್ನು ಇನ್ನೊಂದು ಕಡೆಯಲ್ಲಿ ಪ್ರಕಟಿಸಿದ್ದೇವೆ ಈ ವಿನಂತಿಯು ಸಕಾಲದಲ್ಲಿಯೇ ಹೊರಬಿದ್ದಿದೆ ಪೂರ್ವ ಕ್ರಿಯೆಗಳ ಪರಿಣಾಮವಾಗಿ ಬಿಳಿ ಮತ್ತು ಕಪ್ಪು ಜನರಿಗೆ ಮುಖ್ಯವಾಗಿ ಬ್ರಿಟಿಷ ಮತ್ತು ಹಿಂದಿ ಜನಾಂಗಗಳೊಳಗೆ ಈ ಹೊಸ ಯುಗದ ರಾಜಕೀಯ ಸುಧಾರಣೆಯ ಪ್ರಾರಂಭದಲ್ಲಿಯೇ ಗಂಟು ಬಿದ್ದ ಪರಸ್ಪರ ವೈಷಮ್ಯವು ಈ ಕೌನ್ಸಿಲಿನವರಿಗೆ ಎಷ್ಟು ವ್ಯಥೆಯನ್ನೂ ಕಳವಳವನ್ನೂ ಹುಟ್ಟಿಸಿದೆಯೋ ಅಷ್ಟು ಕಳವಳವನ್ನು ನಮ್ಮಲ್ಲಿಯೂ ಉಂಟುಮಾಡಿದೆ ವೈಸರಾಯಿ ಪ್ರಭುಗಳ ಕಡೆಯಿಂದ ಈಚೆಗೆ ಹೊರಟ ಸೂಚನಾ ಪತ್ರದಲ್ಲಿ ಅಸಹಕಾರಿತ್ವದ ಪರಿಣಾಮದ ವಿಷಯದಲ್ಲಿ ಯಾವ ಉದ್ಗಾರಗಳು ಹೊರಟಿವೆಯೊ ಅವೇ ನಮ್ಮ ಇಡೀ ಹಿಂದೂಸ್ಥಾನದ ರಕ್ತನಾಡಿಗಳನ್ನು ಸೇರಿ ರಕ್ತ ಪ್ರವಾಹವನ್ನು ಬಲು ತೀವ್ರವಾಗಿ ಮಾಡ ಹತ್ತಿ, ಎದೆ ಗುಂಡಿಗೆ ಬಡೆದಾಟವನ್ನು ಹೆಚ್ಚಿಸಿವೆ ಅಸಹಕಾರಿತ್ವವನ್ನು ಹೊದ್ದುಕೊಂಡು ತನ್ನ ಸುಖಕ್ಕೆ ತಿಲಾಂಜಲಿ ಕೊಡಬೇಕು ಎಂದು ಯಾರಾದರೂ ವಿನಾಕಾರಣವಾಗಿ ಆಶಿಸಲು ಇಲ್ಲ, ಮಹಾತ್ಮಾ ಗಾಂಧಿಗಳ ಉಪದೇಶವಾದರೂ ಆ ಪ್ರಕಾರ ಸೂಚಿಸುವಂತಿಲ್ಲ ಆದರೆ ಕಳೆದುಕೊಂಡ ವಿಶ್ವಾಸ [illegible] ನೆಲೆಗೊಳಿಸಿ ಬ್ರಿಟಿಷ ಜನಾಂಗವು ಇದಕ್ಕೆ ಕಾರಣವಾದ [illegible] ವನ್ನು ತಿದ್ದುಪಡಿ ಮಾಡಿ, ಹಿಂದೀ ಜನಾಂಗವು ಬಹು ಕಾಲದಿಂದ ಪೋಷಿಸಿಕೊಳ್ಳುತ್ತಿದ್ದ ಕಾಂಕ್ಷೆಗಳನ್ನು ನೆರವೇರಿಸಲು ನಿಷ್ಕಪಟತೆಯಿಂದ ಮುಂದರಿಯುವುದೇ ಈಗಿನ ಈ ಕ್ರೋಧೋದ್ರೇಕದ ಉಪಶಮನಕ್ಕೆ ದಾರಿಯಾದೀತು ಎಂದು 'ಇಂಡಿಯನ್ ಸೋಶಿಯಲ್ ರಿಫೋರ್ಮರ್'ದಂಥ ಅತ್ಯಂತ ಶಾಂತ ಸ್ವಭಾವದ ಪತ್ರಿಕೆಯಲ್ಲಿ ಹೇಳಿರುವುದನ್ನು ನಾವೂ ಅನುಮೋದಿಸುತ್ತೇವೆ ಆಗ ಮಾತ್ರವೇ ಬ್ರಿಟಿಷ ಛತ್ರದ ಮರೆಯಲ್ಲಿರುವ ಎಲ್ಲಾ ದೇಶಗಳು ಒಂದು ದೊಡ್ಡ ಅವಿಭಕ್ತ ಕುಟುಂಬವೆಂದು ಹೇಳಲಿಕ್ಕೆ ದಾರಿಯಾದೀತು ಈ ಕೌನ್ಸಿಲಿನ ಗಂಭೀರವಾದ ಮಾತುಗಳ ಪರಿಣಾಮವೇನಾದರೂ ಬ್ರಿಟಿಷ ಬಿರೊಕ್ರಸಿಯ ಮೇಲೆ ಕುಂಟಾದೀತೆ ಎಂದು ನೋಡಲಿಕ್ಕೆ ಇದೆ.

೩ ಬ್ರಹ್ಮದೇಶದವರು ಹಿರಿದಿಗಳಂತೆಯೂ ಸ್ವರಾಜ್ಯದ ಆಕಾಂಕ್ಷಿಗಳಾಗಿದ್ದಾರೆ. ಅವರು ಹಿಂದುಸ್ಥಾನಕ್ಕೆ ಸಿಗುವ ಸುಧಾರಣೆಗಳನ್ನು ತಮಗೂ ಕೊಡಬೇಕೆಂದು ಮುಂಚಿನಿಂದ ಹೇಳುತ್ತಿದ್ದಾರೆ. ಬ್ರಹ್ಮ

ರಣವನ್ನು ಹಿಂದುಸ್ಥಾನದಿಂದ ಬೇರೆ ಮಾಡಕೂಡದು, ಆದರೊಡನೆ ಅದು ಏಕೀಭವವಾಗಿರಬೇಕು, ಹಿಂದುಸ್ಥಾನಕ್ಕೆ ಒಂದು ನಮೂನೆಯ ಸುಧಾರಣೆಗಳು, ಬ್ರಹ್ಮದೇಶಕ್ಕೆ ಇನ್ನೊಂದು ನಮೂನೆಯ ಸುಧಾರಣೆಗಳು ಇಂಥ ಶಾಂತ ಪ್ರಸಂಗದ ಇರಬಾರದು ಎಂದು ಅವರ ಮುಖ್ಯ ಅಭಿಪ್ರಾಯವಿರುತ್ತದೆ. ಆದರೆ ಅಲ್ಲಿಯ ಅಧಿಪತಿಗಳಾದ ಸರ್. ಕ್ರಡೊಕರು ಈ ಲೋಕಮತವನ್ನು ವಿಶೇಷವಾಗಿ ಆದರಿಸದೆ ಹಿಂದುಸ್ಥಾನಕ್ಕೆ ಕೊಟ್ಟ ಸುಧಾರಣೆಗಳಿಗಿಂತಲೂ ಕಡಿಮೆಯೋಗ್ಯತೆಯ ಸುಧಾರಣೆಗಳನ್ನು ಬ್ರಹ್ಮದೇಶದ ಮೇಲೆ ಹೊರಿಸಲು ಉದ್ಯೋಗವನ್ನು ನಡಿಸುದ್ದಾರೆ. ಹಿಂದುಸ್ಥಾನಕ್ಕೆ ಕೊಟ್ಟಿರುವ ಸುಧಾರಣೆಗಳೇ ಪ್ರಥಮತಃ ಬಹಳ ಅಪೂರ್ಣ, ರೂಪಾಯಿಯಲ್ಲಿ ೨ ಆಣೆ ಮಟ್ಟಿನವೆಂದು ಇಲ್ಲಿಯ ಜನರು ಹೇಳುತ್ತಿದ್ದಾರಷ್ಟೆ. ಆ ಎರಡು ಆಣೆ ಕೂಡ ಬ್ರಹ್ಮದೇಶದ ಸೆರಗಿನಲ್ಲಿ ಬೀಳುವ ಸುಯೋಗವು ಬರುವುದಿಲ್ಲವೆಂದಾದ್ದರಿಂದ ಅಲ್ಲಿಯ ಲೋಕಮತದಲ್ಲಿ ಅತೃಪ್ತಿಯು ಉಂಟಾಗಿದೆ. ಮತ್ತು ಇದರ ಪರಿಣಾಮವೇನಾಗಿದೆ ಎಂದರೆ, ಅವರು ಈ ಸುಧಾರಣೆಗಳನ್ನು ಅಂಗೀಕರಿಸುವಂತೆ ಕಂಡುಬರುವುದಿಲ್ಲ. ಪರಂತು, ಅಲ್ಲಿಯವರು ಶಿಕ್ಷಣದಲ್ಲಿ ಅಷ್ಟೊಂದು ಮುಂದರಿಸಿದವರಲ್ಲವಾದ್ದರಿಂದ ಫಕ್ಕನೆ ಅವರಿಗೆ ಸ್ವರಾಜ್ಯದ ಸುಧಾರಣೆಗಳನ್ನು ಕೊಡುವುದು ಯೋಗ್ಯವಲ್ಲವೆಂದು ಅಲ್ಲಿಯ ಅಧಿಪತಿಗಳ ಅಭಿಪ್ರಾಯವಿದೆ. ಇಂಥ ಪರಿಸ್ಥಿತಿಯಲ್ಲಿ ಸಾಮ್ರಾಜ್ಯವಾದಿಯಾದ 'ಲಂಡನ್ ಟೈಮ್ಸ್' ಪತ್ರಿಕೆಯು ಮುಂದೆ ಬಂದು ಅಧಿಕಾರಿಗಳಿಗೆ ಯೋಗ್ಯವಾದ ಆಲೋಚನೆಯನ್ನು ಕೊಡಹತ್ತಿದೆ. ಇದು ಸಂತೋಷದ ಮಾತು. 'ಟೈಮ್ಸ್' ಪತ್ರಿಕೆಯು ಈ ಪಕ್ಷಪಾತದ ಧೋರಣವನ್ನು ನಿಷೇಧಿಸಿ ಬ್ರಹ್ಮದೇಶವನ್ನು ಹಿಂದುಸ್ಥಾನದಿಂದ ಸುಧಾರಣೆಗಳ ವಿಷಯದಲ್ಲಿ ವಿಂಗಡಿಸಬಾರದು ಎಂದು ಹೇಳಿದೆ. ಹಿಂದುಸ್ಥಾನದಲ್ಲಿ ಹುಟ್ಟಿರುವ ಸ್ವರಾಜ್ಯಾಕಾಂಕ್ಷೆಯು ಬ್ರಹ್ಮದೇಶದಲ್ಲೂ ಕೂಡ ಬೆಳೆಯುವಂತೆ ಮಾಡಬೇಕಾದರೆ ಅವೆರಡನ್ನು ಏಕತ್ರವಾಗಿಯೆ ಇಡಬೇಕು, ಬ್ರಹ್ಮದೇಶವು ಶಿಕ್ಷಣ, ಉದ್ಯೋಗ ಇತ್ಯಾದಿ ಸಂಗತಿಗಳಲ್ಲಿ ಹಿಂದುಳಿದದ್ದಾದರೆ ಅದರ ಈ ಶೋಚನೀಯ ಸ್ಥಿತಿಯನ್ನು ಪರಿಹರಿಸಲು ಅದಕ್ಕೆ ಹಿಂದುಸ್ಥಾನದ ಬೆಟ್ಟಿಗೆ ನಡಿಸಿಕೊಂಡು ಹೋಗಬೇಕಲ್ಲದೆ ಬೇರೆ ಉಪಾಯವಿಲ್ಲ ಎಂದು ಸದರಿ ಪತ್ರಿಕೆಯು ಬರೆದಿದೆ. ಅಲ್ಲದೆ, ಬ್ರಹ್ಮದೇಶಕ್ಕೆ ಇಂಡಿಯನ್ ಲೆಜಿಸ್ಲೆಟಿವ್ ಎಸೆಂಬ್ಲಿಯಲ್ಲಿ ಬರೆ ನಾಲ್ಕು ಪ್ರತಿನಿಧಿಗಳನ್ನು ಚುನಾಯಿಸುವ ಹಕ್ಕನ್ನು ಸರಕಾರವು ಕೊಟ್ಟಿದೆ. ಇದು ಸರಿಯಲ್ಲ ಅದಕ್ಕೆ ನಾಲ್ಕರ ಬದಲು ೭ ಪ್ರತಿನಿಧಿಗಳ ಹಕ್ಕನ್ನು ಕೊಡಬೇಕೆಂದು ಅದು ಒತ್ತಿ ಹೇಳಿದೆ. ಲಂಡನ್ ಟೈಮ್ಸಿನ ಈ ಅಭಿಪ್ರಾಯವನ್ನು ಅಧಿಕಾರಿಗಳು ಆಲೋಚಿಸತಕ್ಕದ್ದು.

೮. ಫಿಜಿ ದ್ವೀಪದಲ್ಲಿ ಹಿಂದಿಕೂಲಿಗಳ ಸ್ಥಿತಿಯು ದಿನೇ ದಿನೇ ವ್ಯಸನಾಸ್ಪದವಾಗಹತ್ತಿದೆ ಎಂದು ಹೇಳಬೇಕಾಗುತ್ತದೆ. ಕೆಲವು ಸಮಯದ ಹಿಂದೆ ಅಲ್ಲಿ ಒಂದು ಗಲಾಟೆಯಾದದ್ದೂ, ಆ ಗಲಾಟೆಯ ಪ್ರವರ್ತಕತ್ವವನ್ನು ಅಲ್ಲಿಯ ಹಿಂದಿಗಳ ತಲೆಯ ಮೇಲೆ ಇಟ್ಟದ್ದೂ ನಮ್ಮ ವಾಚಕರಿಗೆ ನೆನಪಿಗೆ ಬರಬಹುದು. ಹಿಂದಿಗಳ ಮೇಲೆ ಅಲ್ಲಿಯ ತೋಟಗರು ಈ ಮೇರೆಗೆ ಅಪರಾಧವನ್ನು ಹಾಕಿದ್ದಕ್ಕೆ ಅಲ್ಲಿಯ ಸರಕಾರವು ತನ್ನ ಸಮ್ಮತಿಯನ್ನು ಕೊಟ್ಟು ಅಲ್ಲಿ ನಡೆದ ದಂಗೆಯ ಸಂಪೂರ್ಣ ಜವಾಬದಾರಿಯನ್ನು ಇವರ ಕುತ್ತಿಗೆಗೆ ಕಟ್ಟಿದೆ ಎಂದು ತೋರುತ್ತದೆ. ಯಾಕೆಂದರೆ ಮಿ| ಸಿ. ಎಫ್. ಎಂಡ್ರ್ಯೂಸರವರು ಪ್ರಕಟಿಸಿದ ಒಂದು ವಾರ್ತೆಯಲ್ಲಿ ಅವರು ಫಿಜಿಯಿಂದ ಮೂವತ್ತು ಸಾವಿರ ಹಿಂದಿ ಮಜೂರರು ತಮ್ಮ ಆಸ್ತಿಪಾಸ್ತಿಗಳನ್ನು ಎಲ್ಲ ಬಿಟ್ಟು ಹೊರಡಬೇಕಾಗಿದೆ ಎಂದು ಹೇಳುತ್ತಾರೆ. ಅಲ್ಲಿಯ ಸರಕಾರವು ಮತ್ತು ಪ್ಲೆಂಟರರು ಹಿಂದಿ ಮುಖಂಡರನ್ನು ಕೊಟ್ಟ ಉಪದ್ರವದ ದೆಸೆಯಿಂದ ಈ ಜನರು ಹಿಂತಿರುಗಹತ್ತಿದ್ದಾರೆ. ಈ ವಾರ್ತೆಯು ಬಹಳ ಉದ್ವೇಗಕರವಾಗಿದೆ. ಈ ವಿಷಯದಲ್ಲಿ, ಜನತೆಗಿಂತ ಹಿಂದುಸ್ಥಾನ ಸರಕಾರಕ್ಕೆ ಹೆಚ್ಚು ಉದ್ವೇಗವು ಬರಬೇಕಾದ್ದು ನ್ಯಾಯ. ಸಾಮ್ರಾಜ್ಯದ ಎಲ್ಲ ಭಾಗಗಳಲ್ಲಿ ಹಿಂದಿಗಳನ್ನು ಸಮಭಾವನೆಯಿಂದ ನಡಿಸುವಂತೆ ಹಿಂದುಸ್ಥಾನ ಸರಕಾರವು ತನ್ನ ದಕ್ಷತೆಯನ್ನು ತೋರಿಸಬೇಕಾದ್ದು. ಅನ್ಯಭಾಗಗಳಲ್ಲಿ, ಹಿಂದಿಗಳಿಗೆ ಮಾನವರ ಯೋಗ್ಯತೆಯನ್ನು ಕೊಡುವುದಿಲ್ಲವೆಂದಾದರೆ ಅದು ಹಿಂದುಸ್ಥಾನ ಸರಕಾರಕ್ಕೆ ಲಾಂಛನವಾಗದೇಕಲ್ಲವೆ? ವರಿಷ್ಠ ಕೌನ್ಸಿಲಿನ ಉಪಕ್ರಮ ಮತ್ತು ಉಪಸಂಹಾರಕ ಭಾಷಣಗಳಲ್ಲಿ "ಹಿಂದಿಗಳ ಬಗ್ಗೆ ಹೊರ ದ್ವೀಪಗಳಲ್ಲಿ ಸಮಭಾವನೆಯು ಹುಟ್ಟಹತ್ತಿದೆ; ಅದಕ್ಕೆ ತಕ್ಕ ಪ್ರಯತ್ನವನ್ನು ನಾವು ಮಾಡಹತ್ತಿದ್ದೇವೆ! ಇತ್ಯಾದಿ ಬರೆ ಭಿವಚಾರಿಕ ಮಾತುಗಳನ್ನು ಆಡುವುದರಿಂದಲೇ ಲೊ. ಚೆಮ್ಸ್‌ಫರ್ಡರ ಕರ್ತವ್ಯವು ಮುಗಿಯುವುದಿಲ್ಲ.

೯. ನೊನ್-ಕೊ-ಒಪರೇಶನಿನೊಳಗಿನ ಕೌನ್ಸಿಲ್ ಬಹಿಷ್ಕಾರದ ಕಾರ್ಯಕ್ರಮದ ವ್ಯಾಪ್ತಿಯು ಕೌನ್ಸಿಲ್ ಇಲೆಕ್ಶನಿನ ವರೆಗೆ ಇರುವುದರಿಂದ ಈ ಇಲೆಕ್ಶನ್ ಈಗ ಮುಂಬಯಿ ಮದ್ರಾಸ ಮುಂತಾದ ಪ್ರಾಂತಗಳಲ್ಲಿ ಮುಗಿದದರಿಂದ ಈ ತರಾವಿನೊಳಗಿನ ಇತರ ಕಾರ್ಯಕ್ರಮಗಳ ಕಡೆಗೆ ಅಸಹಕಾರಿತಾವಾದಿಗಳು ತಮ್ಮ ಮನಸ್ಸನ್ನು ಕೊಡಹತ್ತಿದ್ದಾರೆ. ಮುಂಬಯಿ ಪ್ರಾಂತದಲ್ಲಿ ಯಾಕೆ, ನಮ್ಮ ಕರ್ನಾಟಕದಲ್ಲಿ ಕೂಡ ಈ ಕಾರ್ಯವು ಪ್ರಾರಂಭವಾಗಿದೆ. ಬೆಳಗಾಂವಿನ ಸುಪ್ರಸಿದ್ಧ ವಕೀಲರಾದ ಮತ್ತು ಕರ್ನಾಟಕದೊಳಗಿನ ರಾಷ್ಟ್ರೀಯ ಪಕ್ಷದ ಮುಖಂಡರಾದ ಶ್ರೀಯುತ ದತ್ತಾತ್ರೇಯ ವೆಂಕಟೇಶ ಬೆಳವಿ ಇವರು ವಕಾಲತನ್ನು ಬಿಟ್ಟಿದ್ದಾರೆ. ಇವರು ಮೊದಲೆ ಕೌನ್ಸಿಲಿನ ಉಮೇದವಾರಿಕೆಯನ್ನು ಹಿಂದಕ್ಕೆ ತೆಕ್ಕೊಂಡಿದ್ದರು. ಬೆಳಗಾಂವಿನ ಶ್ರೀಯುತ ಗಂಗಾಧರರಾವ ದೇಶಪಾಂಡೆ, ಶ್ರೀಯುತ ಕೌಜಲಗಿ ಮುಂತಾದ ಮುಖಂಡರು ಕೌನ್ಸಿಲ್ ಬಹಿಷ್ಕಾರದಂತೆಯೆ ಕೋರ್ಟಿನ ಬಹಿಷ್ಕಾರವನ್ನು ಕೂಡಾ ಮಾಡಿದ್ದಾರೆ. ಮುಂಬಯಿ, ಪುಣೆ ಇತ್ಯಾದಿ ದೊಡ್ಡ ದೊಡ್ಡ ಶಹರುಗಳಲ್ಲಿ ಬೇರೆ ಬೇರೆ ವಕೀಲರು ತಮ್ಮ ವಕಾಲತನ್ನು ಬಿಡಹತ್ತಿದ್ದಾರೆ. ಪುಣೆಯಲ್ಲಿ ಸರಕಾರಿ ಗ್ರೇಂಟನ್ನು ಸ್ವೀಕರಿಸದ ಒಂದು ಹಾಯ್‌ಸ್ಕೂಲ್ ಹಾಗು ಒಂದು ಕೊಲೇಜು ಈ ಮೇರೆಗೆ ರಾಷ್ಟ್ರೀಯ ಶಿಕ್ಷಣದ ಸಂಸ್ಥೆಗಳು ತೆರೆಯಲ್ಪಟ್ಟಿದ್ದಾವೆ. ಗುಜರಾಥದಲ್ಲಿ ಗುಜರಾಥ ಮಹಾ ವಿದ್ಯಾಲಯ, ಅಲ್ಲಿಗಡದಲ್ಲಿ ಮುಸಲ್ಮಾನ ಯೂನಿವರ್ಸಿಟಿ, ಮುಂಬಯಿಯಲ್ಲಿ ರಾಷ್ಟ್ರೀಯ ಶಾಲೆ ಮುಂತಾದ ಸಂಸ್ಥೆಗಳು ಆಗಹತ್ತಿವೆ. ಸಾರಾಂಶ ನೊನ್-ಕೊ-ಒಪರೇಶನಿನ ಹೆಜ್ಜೆಯು ಈ ಮೇರೆಗೆ ಮುಂದೆ ಮುಂದಕ್ಕೆ ಬೀಳಹತ್ತಿದೆ.

೭. ಒಬ್ಬ ಬಾತಮಿದಾರನು ಕರ್ನಲ್ ವೆಜ್‌ವುಡರ ಭೇಟಿಯನ್ನು ಪಡಕೊಂಡನು. ಈ ಬಾತಮಿದಾರನೊಡನೆ ಕರ್ನಲ ಸಾಹೇಬರು ಈಗಿನ ಹಿಂದುಸ್ಥಾನ ರಾಜಕೀಯ ಸ್ಥಿತಿಯನ್ನು ಕುರಿತು— ವಿಶೇಷತಃ ಅಸಹಕಾರಿತೆಯನ್ನು ಕುರಿತು ತಮ್ಮ ವಿಚಾರಗಳನ್ನು ಪ್ರದರ್ಶಿಸಿದರು. ಅವರ ಅಭಿಪ್ರಾಯದ ಮೇರೆಗೆ ಕಾಯಿದೆ ಕೌನ್ಸಿಲುಗಳ ಬಹಿಷ್ಕಾರವು ಅಷ್ಟೊಂದು ಜಾಣತನದ್ದಲ್ಲ. ಆದರೂ ಅವರು ಒಟ್ಟಿನ ಮೇಲೆ ಹಿಂದುಸ್ಥಾನದವರಿಗೆ ಅಸಹಕಾರಿತೆಯನ್ನು ಕೈಕೊಳ್ಳುವುದು ಅನಿವಾರ್ಯವಾಗಿದೆ ಎಂದೇ ಅಭಿಪ್ರಾಯಪಡುತ್ತಾರೆ. ಹಿಂದುಸ್ಥಾನದಲ್ಲಿ ಅಸಹಕಾರಿತೆಯು ನಿಜವಾಗಿ ಹೇಳಬೇಕಾದರೆ, ಒಡ್ವಾಯರರಂಥವರ ಮತ್ತು ಅಧಿಕಾರಿ ವರ್ಗದೊಳಗಿನ ಕಠಿಣ ಮೂರ್ತಿಗಳ ಸ್ವೇಚ್ಛಾಪ್ರವೃತ್ತಿಯಿಂದ ಜನ್ಮವೆತ್ತಿದೆ ಎಂದು ವೆಜ್‌ವುಡ್ ದೊರೆಗಳು ಸ್ಪಷ್ಟವಾಗಿ ಹೇಳಿದ್ದಾರೆ. ಸರಕಾರಿ ಅಧಿಕಾರಿಗಳು ತಮ್ಮ ಕೃತ್ಯಗಳಿಂದಲೆ ಅಸಹಕಾರಿತೆಯನ್ನು ಉಂಟು ಮಾಡಹತ್ತಿದ್ದಾರೆ. ಬಾದಶಹರು ಅಪರಾಧಿಗಳಿಗೆ ಮಾಫಿಯನ್ನು ವಿಧಿಸಿದ ಮೇಲೂ ಪಂಜಾಬ ಸರಕಾರವು ಸಂಪೂರ್ಣ ಜನರಿಗೆ ಮಾಫಿಕೊಡಲಿಲ್ಲ; ಮಾರ್ಶಲ್ ಕಾನೂನಿನ ಮೇರೆಗೆ ಶಿಕ್ಷೆ ಹೊಂದಿದ ೬೭ ಜನರನ್ನು ಹಾಗೆಯೆ ಇಡಗೊಟ್ಟಿತು. ಇದರ ಮೇಲಿಂದ ಏನು ಕಂಡು ಬರುತ್ತದೆ? ಸರಕಾರಿ ಅಧಿಕಾರಿಗಳಿಗೆ ಜನತೆಯ ನಿಜವಾದ ಸಹಕಾರ್ಯವು ಬೇಕೆಂದು ಇಂಥ ಉದಾಹರಣೆಗಳ ಮೇಲಿಂದ ಹೇಳಬಹುದೆ? ಈ ಪ್ರಕಾರ ಸವಾಲು ಹಾಕಿ ವೆಜ್‌ವುಡರು ಹಿಂದುಸ್ಥಾನದಲ್ಲಿ ಅಸಹಕಾರಿತೆಯು ಉಂಟಾದೀತೆಂಬ ಸ್ವಪ್ನವು ತನಗೆ ೧೯೧೭ನೆ ಇಸವಿಯಲ್ಲೆ ಹೇಗೆ ಬಿತ್ತು, ಮತ್ತು ಆಗ ತಾನು ಮಿ. ಚೆಂಬರಲೇನರಿಗೆ ಹಿಂದುಸ್ಥಾನಕ್ಕೆ ಸ್ವರಾಜ್ಯವನ್ನು ಕೊಡುವ ವಿಷಯವಾಗಿ ಹೇಗೆ ಒಂದು ಪತ್ರವನ್ನು ಬರೆದೆ ಎಂಬುದನ್ನೆಲ್ಲ ವಿವರಿಸಿ ಮುಂದೆ ಹೇಳುತ್ತಾರೆ:— ಈ ಮೇರೆಗೆ ಹಿಂದಿಗಳಿಗೆ ಅಸಹಕಾರಿತೆಯು ಅಪರಿಹಾರ್ಯವಾಗಿ ಬಂದದ್ದಾದರೂ ಅವರು ಬ್ರಿಟಿಷ ಜನಾಂಗದೊಡನೆ ದ್ವೇಷವನ್ನು ಕಟ್ಟಿಕೊಳ್ಳಬಾರದು. ದ್ವೇಷವು ಅಥವಾ ಹಗೆಯು ಆತ್ಮವನ್ನು ಕೆಡಿಸಿ ಬಿಡುತ್ತದೆ. ಈ ಸಂಗತಿಯು ಮಹಾತ್ಮಾ ಗಾಂಧಿಗಳಿಗೆ ಸರಿಯಾಗಿ ಗೊತ್ತಿರುವುದರಿಂದ ಅವರು ಈ ದ್ವೇಷ ಮನೋವೃತ್ತಿಯಿಂದ ದೂರವಿದ್ದಾರೆ. ಅವರಂತೆಯೆ ಅವರ ಅನುಯಾಯಿಗಳೂ ಇರಬೇಕಾದ್ದು. ರಾಷ್ಟ್ರೀಯ ಸಭೆಯು ಅಧಿಕಾರಿಗಳ ಮತ್ತು ಲೋಕಮುಖಂಡರ ಒಂದು ಪರಿಷತ್ತನ್ನು ಜರಗಿಸುವ ಠರಾವು ಪಾಸು ಮಾಡಿ ಆ ಬಗ್ಗೆ ಯತ್ನಿಸಬೇಕು. ಸದರಿ ಪರಿಷತ್ತಿಗೆ ಲೊರ್ಡ ಚೆಮ್ಸ್‌ಫೊರ್ಡರು ಒಂದು ವೇಳೆ ಅಧ್ಯಕ್ಷರಾಗಲು ಒಪ್ಪಿಕೊಳ್ಳುವುದಿಲ್ಲವಾದರೆ— ಮತ್ತೆ ಅವರನ್ನು ಹಿಂದಕ್ಕೆ ಕರೆಯಿಸಬೇಕೆಂದು ರಾಷ್ಟ್ರೀಯ ಸಭೆಯು ಮೊದಲೇ ಹೇಳಿದೆ.—ಡ್ಯೂಕ್ ಒಫ್ ಕೊನೊಟರು ಅಧ್ಯಕ್ಷರಾಗಿ ಜನತೆಯ ಮತ್ತು ಅಧಿಕಾರಿಗಳ ಮನಃಶುದ್ಧತೆಯನ್ನು ಮಾಡಿ, ಸ್ವರಾಜ್ಯ ದಾನದ ವಾಗ್ದಾನದಿಂದ ಹಿಂದುಸ್ಥಾನದಲ್ಲಿ ಶಾಂತತೆಯನ್ನು ಸ್ಥಾಪಿಸಬೇಕು. ರಾಷ್ಟ್ರೀಯ ಸಭೆಯ ಈ ಪ್ರಯತ್ನಕ್ಕೆ ಯಶಸ್ಸು ಬರುವುದಿಲ್ಲವೆಂದಾದರೆ ವಿಲಾಯತಿಯ ಲೇಬರ್ ಪಾರ್ಟಿ ಮತ್ತು ಉದಾರಮತಾನುಯಾಯಿಗಳು ಹಿಂದಿ ಲೋಕ ಮತದ ಬೆಂಬಲಕ್ಕೆ ನಿಲ್ಲದೆ ಇರಲಿಕ್ಕಿಲ್ಲ. ಕರ್ನಲ ವೆಜ್‌ವುಡರ ಈ ವಿಚಾರಸರಣಿಯೂ, ಆಲೋಚನೆಗಳೂ ನಿಜವಾಗಿ ಮನನೀಯವಾಗಿವೆ. ಅಧಿಕಾರಿಗಳು ಹೆಚ್ಚಾಗಿ ಇವುಗಳನ್ನು ಆಲೋಚಿಸಬೇಕು.

ಮಂಗಳೂರು.

ಮದ್ರಾಸು ವಿದ್ಯಾ ಇಲಾಖೆಯ ಡಿರೆಕ್ಟರ್ ಮಿ| ಆರ್. ಜಿ. ಗ್ರೀನ್ ಸಾಹೇಬರು ಇದೇ ಡಿಸೆಂಬರ್ ೧ನೆ ಕಾಳಿಕರಂಬದಿಂದ (ಮಲಬಾರ) ಉಡುಪಿಗೆ ಹೋಗಿ ೧೧ನೆ ತಾರೀಕಿನ ವರೆಗೆ ಅಲ್ಲಿ ಉಳುಕೊಂಡು ೧೨ನೆ ತಾರೀಕಿಗೆ ಮಂಗಳೂರಿಗೆ ಮರಳಿ ೧೩, ೧೪, ೧೫ನೆ ತಾರೀಕುಗಳಲ್ಲಿ ಮಂಗಳೂರಲ್ಲಿಯೆ ಮೊಕ್ಕಾಂ ಮಾಡಿ, ೧೬ನೆ ತಾರೀಕಿಗೆ ಮದ್ರಾಸಿಗೆ ಹಿಂದಿರುಗುವರು.

ಕಳೆದ ಆದಿತ್ಯವಾರ ಮತ್ತು ಸೋಮವಾರ 'ನೋನ್-ಕೊ-ಒಪರೆಶನ್' ಮತದ ಪರವಾಗಿ ಕೌನ್ಸಿಲುಗಳಿಗೆ ವೋಟುದಾರರು ಓಟುಕೊಡದಂತೆ ಬೋಧಿಸುವುದಕ್ಕೆ ಮಂಗಳೂರಿನ ಮೈದಾನಿನಲ್ಲಿ ಸಾಯಂಕಾಲದಲ್ಲಿ ಭಾಷಣಗಳಿದ್ದವು. ಜನಸಂದಣಿ ಒಂದೆರಡುಸಾವಿರಕ್ಕೆ ಮೇಲೆ ಇತ್ತು. ರಾ| ಗಂಗೊಳ್ಳಿ ಕೃಷ್ಣರಾಯರು, ಮಿ| ಪುತ್ತೂರು ಸಾಹೇಬರು, ಮಿ| ಮಿಯಾಸಾಹೇಬರು, ರಾ| ಅರೆದೈಲು ಭೋಜರಾವ್, ರಾ| ಬಡಬೈಲು ಪರಮೇಶ್ವರಯ್ಯ, ರಾ| ಬಿ. ಜಡ್ಡು ನಾರಾಯಣ ಬಾಳಿಗಾ, ರಾ| ಡಿ. ಕೆ. ಭಾರದ್ವಾಜ ಇವರ ಭಾಷಣಗಳಿದ್ದವು.

ಇದೇ ಬರುವ ತಾರೀಕು ೧೨ನೇ ಆದಿತ್ಯವಾರ ಸಾಯಂಕಾಲ ೫ ಗಂಟೆಗೆ ಕೊಸ್ಮೊಪೊಲಿಟನ್ ಕ್ಲಬ್ಬಿನಲ್ಲಿ ಡಿಸ್ಟ್ರಿಕ್ಟ ಎಸೋಸಿಯೇಶನ ಅಧಿವೇಶನವು ಕೂಡುವುದು. ನಾಗಪುರದಲ್ಲಿ ಜರಗುವ ರಾಷ್ಟ್ರೀಯ ಕೊಂಗ್ರೆಸಿಗೆ ಈ ಜಿಲ್ಲೆಯಿಂದ ಕಳುಹಿಸತಕ್ಕ ಪ್ರತಿನಿಧಿಗಳನ್ನು ಆರಿಸುವುದು ಮತ್ತು ಜಿಲ್ಲೆಯಲ್ಲಿ ಕಟ್ಟಿಗೆಯ ಕ್ರಯವು ದಿನೇ ದಿನೇ ಏರುತ್ತಿರುವುದರಿಂದ, ಇದನ್ನು ತಗ್ಗಿಸುವಂತೆ ಮಾಡಬೇಕಾಗಿ ಗವರ್ನರ್ ದೊರೆಗಳ ಸಮಕ್ಷಮ ಈ ಮುಂಚೆ ನಿವೇದಿಸಿಕೊಂಡುದಕ್ಕೆ ದೊರೆಗಳು ಇದನ್ನು ಜಿಲ್ಲೆಯ ಕಲೆಕ್ಟರ ಸಾಹೇಬರಿಗೆ ಬರಕೊಳ್ಳಬೇಕಾಗಿ ಆಜ್ಞಾಪಿಸಿದ ಮೇರೆಗೆ ಸದರಿಯವರಿಗೆ ಬರಕೊಂಡಲ್ಲಿ ಅವರಿಂದ ಬಂದ ಉತ್ತರ, ಇವನ್ನು ಈ ಅಧಿವೇಶನದ ಮುಂದಿಡಲಾಗುವುದು.

ಕಳೆದ ಒಕ್ಟೋಬರ ತಾ. ೧೭ರಲ್ಲಿ ಅಸಹಕಾರದ ಪ್ರಚಾರವನ್ನು ಸಾರಲು ಇಲ್ಲಿಗೆ ಬಂದಿದ್ದ ರಾಜಗೋಪಾಲಾಚಾರ್ಯ ಮುಂತಾದವರ ಹಾಜರಿನಲ್ಲಿ ಅಸಹಕಾರದ ಪ್ರಚಾರದ ಬಗ್ಗೆ ಇಲ್ಲಿ ನೇಮವಾದ ಸಬ್ ಕಮ್ಮಿಟಿಯವರ ಒಂದು ಮೀಟಿಂಗು ಈ ದಿನ ಸಾಯಂಕಾಲ ೫ ಗಂಟೆಗೆ ಇಸ್ಲಾಮಿಯಾ ಕ್ಲಬ್ಬಿನಲ್ಲಿ ಕೂಡತಕ್ಕದಿದೆ.

ಹೊಸ ಕೌನ್ಸಿಲುಗಳ ಬಹಿಷ್ಕಾರವನ್ನು ಅನುಮೋದಿಸಿ ಜಿಲ್ಲೆಯ ವೋಟರುಗಳಿಂದ ಮಹಾತ್ಮಾ ಗಾಂಧಿಗಳ ಡಿಕ್ಲರೇಶನ್ ಫೋರ್ಮುಗಳಿಗೆ ದಸ್ಕತನ್ನು ಪಡೆದಿದ್ದ ಸ್ವಯಂ ಸೇವಕರು ಹೊಸ ಕೌನ್ಸಿಲು ಕೂಡುವ ವರೇಗೆ ತಮ್ಮ ಕಾರ್ಯವನ್ನು ನಡಿಸುತ್ತ ವರೇಗೆ ಕೌನ್ಸಿಲಿಗೆ ತಮ್ಮ ವೋಟುಗಳನ್ನು ಕೊಡದೆ ಇದ್ದ ವೋಟರುಗಳಿಂದ ಡಿಕ್ಲರೇಶನ್ ಫೋರ್ಮುಗಳಿಗೆ ಸಹಿಗಳನ್ನು ಪಡೆಯಬಹುದೆಂದು ರಾ| ಕಾರ್ನಾಡ ಸದಾಶಿವರಾಯರು ವಿಜ್ಞಾಪಿಸಿ ಕೊಂಡಿರುತ್ತಾರೆ.

ಮಂಗಳೂರಿನ ವೈ. ಯಂ. ಸಿ. ಎ. ಸಂಘದ ಪಂದ್ಯಾಟಗಳು ಈ ತಿಂಗಳ ತಾ. ೨೮ರಲ್ಲಿ ನಡಿಯುವುವು.

ಕೆನರಾ ಹೈಸ್ಕೂಲಿನ ೨೯ನೇ ವರ್ಷಂತಿ ಉತ್ಸವದ ಕಾರ್ಯಕ್ರಮ:—ತಾರೀಕು ೨೮ನೇ ಪ್ರಾತಃಕಾಲ ೮ ಗಂಟೆಗೆ ವಸ್ತುಪ್ರದರ್ಶನ ಶಾಲೆ ಮತ್ತು ಲಕ್ಕಿಬೇಗ ಸ್ಟೋರ್‍ಸ್ ಪ್ರಾರಂಭವಾಗುವುದು. ಮಧ್ಯಾಹ್ನ ಪಂದ್ಯಾಟಗಳು, ಮರುದಿನ ಸಾಯಂಕಾಲ ಮಕ್ಕಳ ಬಗ್ಗೆ ವಸ್ತುಪ್ರದರ್ಶನ ತೆರೆದಿಡುವುದು, ಮತ್ತು ನಾಟಕವನ್ನು ಆಡಿತೋರಿಸುವುದು, ಲೋವರ್ ಸೆಕೆಂಡರಿ ಶಾಲೆಯ ವಿದ್ಯಾರ್ಥಿಗಳಿಗೆ ಇನಾಮುಗಳನ್ನು ಹಂಚುವುದು. ಮೂರನೆ ದಿನ ಬೆಳಿಗ್ಗೆ ಈಗಣ ಮತ್ತು ಹಿಂದಣ ವಿದ್ಯಾರ್ಥಿಗಳು ಸಭೆ ಕೂಡುವುದು, ಆಟಗಳನ್ನಾಡುವುದು. ಮತ್ತು ಉಪಹಾರ. ಪಂದ್ಯಾಟಗಳಲ್ಲಿ ಗೆದ್ದವರಿಗೆ ಬಹುಮಾನಗಳನ್ನು ಹಂಚುವುದು. ಸಾಯಂಕಾಲ ಫಲ ಉಪಹಾರ, ನಂತರ ವರ್ಷಂತಿ ಉತ್ಸವ ಸಮಾರಂಭೆ, ಮೇಲಿನ ದರ್ಜೆಯ ಹುಡುಗರಿಗೆ ಇನಾಮುಗಳನ್ನು ಹಂಚುವುದು ಮತ್ತು ನಾಟಕ.

ಹೊಸ ನ್ಯಾಯವಿಧಾಯಕ ಸಭೆಗೆ ವೋಟರುಗಳಿಂದ ಎಷ್ಟು ವೋಟುಗಳು ಸಂಗ್ರಹವಾಗಿದ್ದಾವೆ ಎಂಬುದು ನಾಳೆ ದಿನ ಸಾಯಂಕಾಲ ಪ್ರಕಟವಾಗುವುದು.

ಕಳೆದ ಎಪ್ರಿಲ್ ತಿಂಗಳ ಶುರುವಿನಿಂದ ಕಳೆದ ತಾ. ೨೯ ವರೇಗೆ ಇಲ್ಲಿ ೧೨೨-೫೬ ಇಂಚ್ ಮಳೆ ಬಿದ್ದಿರುತ್ತದೆ.

ಚಂದಾದಾರರಿಗೆ ಸೂಚನೆ.

ಈಗ ಟಪಾಲ ಇಲಾಖೆಯವರು ವಿ. ಪಿ. ಯಾಗಿ ಕಳುಹಿಸುವ ಯಾವತ್ತೂ ವಸ್ತುಗಳನ್ನು ರಿಜಿಸ್ಟರ್ ಮಾಡಿಯೇ ಕಳುಹಿಸಬೇಕೆಂಬ ಹೊಸ ಕ್ರಮವನ್ನು ಜಾರಿಗೆ ತಂದಿರುತ್ತಾರೆ. ಇದರಿಂದ ಪತ್ರವನ್ನು ವಿ. ಪಿ. ಯಾಗಿ ಪಡದು ಚಂದಾ ಹಣವನ್ನು ತಲಪಿಸುವವರು ರೂ. ೨-೯-೦ ತೆರಬೇಕಾಗುತ್ತದೆ. ಆದರೆ ಚಂದಾಹಣವನ್ನು ಮನಿಯಾರ್ಡರ ಮೂಲಕ ಕಳುಹಿಸುವವರಿಗೆ (ಒಂದು ವರುಷದ ಚಂದಾ ರೂ. ೨-೮ ಮತ್ತು ಮನಿಯಾರ್ಡರ ಕಮ್ಮಿಶನ್ ೧ ಆಣೆ ಕೂಡಿ) ಬರೇ ರು. ೨-೯-೦ ಮಾತ್ರ ಬೀಳುವುದು. ಅದುಕಾರಣ ಚಂದಾಹಣವನ್ನು ಮನಿಯಾರ್ಡರ ಮೂಲಕವಾಗಿಯೇ ಕಳುಹಿಸುವುದು ಉತ್ತಮ.

ಮೆನೇಜರ್.

[illegible]

ದಕ್ಷಿಣ ಕನ್ನಡ.

ಮುಳಲಿ:— ಇಲ್ಲಿ ಬೋರ್ಡು ಎಲಿಮೆಂಟರಿ ಶಾಲೆಯಲ್ಲಿ ಇದೇ ತಿಂಗಳ ತಾ. [illegible] ನೆರೆಕರೆಯ ಕರಿಯಂಗಳ ಮತ್ತು ಪೊಳಲಿ ಶಾಲೆಗಳ ಉಪಾಧ್ಯಾಯರು [illegible] ಶಾಲಾ ಮಕ್ಕಳು ಸೇರಿ ಒಂದು ಒಳ್ಳೆ ಸಭೆಯು ಜರಗಿತು. ಊರ [illegible] ಹಾಜರಿದ್ದರು. ಅಂದಿನ ಸಭೆಗೆ ಕರಿಯಂಗಳ ಶಾಲೆಯ ಮುಖ್ಯೋಪಾಧ್ಯಾಯರನ್ನು ಅಧ್ಯಕ್ಷರನ್ನಾಗಿ ಚುನಾಯಿಸಿದ ಬಳಿಕ ಕ್ರಮದಂತೆ ದೇವರ ಸ್ತುತಿ [illegible] ತರುವಾಯ ಆಯಾಯ ಶಾಲೆಯ ಮಕ್ಕಳೇ ತಯಾರು ಮಾಡಿದ ಉಪನ್ಯಾಸಗಳನ್ನು ಅವರವರೇ ಓದಿದರು. ಕೆಲವರು ಕಥೆಗಳನ್ನು ಹೇಳಿದರು. [illegible] ಊರ ಗೃಹಸ್ಥರ ಪೈಕಿ ಕೆಲವರೂ ಸದರಿ ಶಾಲೆಯ ಮುಖ್ಯ ಉಪಾಧ್ಯಾಯರೂ, ಕರಿಯಂಗಳ ಶಾಲೆಯ ಮತ್ತೊಬ್ಬ ಉಪಾಧ್ಯಾಯರೂ ಮಕ್ಕಳಿಗೆ ತಕ್ಕ ಬುದ್ಧಿ ಮಾರ್ಗವನ್ನು ತಿಳಿಸಿದ ತರುವಾಯ ಅಧ್ಯಕ್ಷರು ವಿದ್ಯೆಯ ವಿಷಯ [illegible] ಮಟ್ಟಿಗೆ ಮಾತ್ರವಾದ "ಭೂಪತಿಗೆ ಭುಜಬಲ ವಿದ್ವಾಂಸನಿಗೆ ವಾಕ್ಬಲ" ನೀತಿ ವಾಕ್ಯದ ಅಭಿಪ್ರಾಯವನ್ನು ತಿಳಿಸಿ ಅದಕ್ಕೆ ಸರಿಯಾದ ದೃಷ್ಟಾಂತದಿಂದ ಅರಸನಿಗೂ, ವಿದ್ವಾಂಸನಿಗೂ ಇರುವ ತಾರತಮ್ಯವನ್ನು ಕುರಿತು ಒಂದು ಕಥೆಯನ್ನು ಹೇಳಿ ಮಕ್ಕಳ ಮನಸ್ಸನ್ನು ಆಕರ್ಷಿಸಿದರು. ಆ ಮೇಲೆ [illegible] ಓದಿದ ಬಾಲಕರಲ್ಲಿ ಚಟುವಟಿಕೆ ತೋರಿಸಿದವರಿಗೆ ಪ್ರತಿ ಶಾಲೆಯ [illegible] ವಿದ್ಯಾರ್ಥಿಗೆ ಅಂದರೆ ಕರಿಯಂಗಳ ಶಾಲೆಯ ಐದನೆಯ ವರ್ಗದ ವಿದ್ಯಾರ್ಥಿ ಬಿ. ರಂಗಯ್ಯನಿಗೂ, ಪೊಳಲಿ ಶಾಲೆಯ ಎರಡನೆಯ ಕ್ಲಾಸಿನ ಬಾಲಕಿ [illegible] ಲಕ್ಷ್ಮಿ ಎಂಬವಳಿಗೂ, ಮೊಳಲಿ ಶಾಲೆಯ ವಿದ್ಯಾರ್ಥಿಗಳ ಪೈಕಿ ಮೂರನೆ [illegible] ವೆಂಕಪ್ಪ ಎಂಬವನಿಗೂ ಒಂದೊಂದು ಪುಸ್ತಕವನ್ನು ಇನಾಂ ಕೊಡಲಾಯಿತು. ತರುವಾಯ ಹೀಗೆಯೇ ಇನ್ನು ಮುಂದೆಯೂ ತಮ್ಮ ತಮ್ಮ ಕ್ಲಾಸ್ [illegible] ಆಗಾಗ ಅಲ್ಲಲ್ಲಿ ಸಭೆ ಕೂಡಬೇಕೆಂದು ನಿರ್ಣಯಿಸಿ ಬರುವ [illegible] ದಸರೆಯ ದಿನ ಸದರಿ ಮೊಳಲಿ ಶಾಲೆಯಲ್ಲಿಯೇ ಕೂಡಿಸುವ ನಿಶ್ಚಯಿಸಿ, ಮಕ್ಕಳ ಹಾಡು, ಆಟಗಳಾದ ತರುವಾಯ ಸಭೆಯು ಮುಕ್ತಾಯವಾಯಿತು. ಎಲ್ಲರೂ ಸಂತೋಷ ಚಿತ್ತರಾಗಿ ತೆರಳಿದರು.

ಪುತ್ತೂರು:— ಇಲ್ಲಿಯ ರೆವಿನ್ಯೂ ಡಿವಿಜನಲ್ ಆಫೀಸರರು ಈ [illegible] ತಾ. ೩ರಿಂದ ೭ರ ವರೆಗೆ ಕಾಸರಗೋಡು, ತಾ. ೮ ಮಂಗಳೂರು, ೯ರಿಂದ [illegible] ಪುತ್ತೂರು, ತಾ. ೧೩, ೧೪ ಬೈರಪಾಡಿ, ತಾ. ೧೫ ಪಂಜ, ತಾ. ೧೬ರಿಂದ ೧೯ [illegible] ಮೈ, ತಾ. ೨೦ ಪಂಜ, ತಾ. ೨೧ ಬೈರಪಾಡಿ, ತಾ. ೨೨ ಪುತ್ತೂರು, ತಾ. [illegible] ಕಾಸರಗೋಡು ಈ ರೀತಿ ಸರ್ಕೀಟನ್ನು ಬೆಳಸುವರು.

ಪಡುಬಿದ್ರೆ— ನಮ್ಮಲ್ಲಿ ಮಾಮೂಲು ಪ್ರಕಾರ ಆಗುವ ಪಡುಬಿದ್ರೆ [illegible] ಕಂಬಳವು ಇದೇ ಬರುವ ರಾಧ್ರಿ ಸಂವತ್ಸರದ ಮಾರ್ಗಶಿರ ಬಹುಳ ಸೋಮ (ತಾ. ೨೦–೧೨–೨೦)ಕ್ಕೆ ಎಂತ ನಿಶ್ಚಯಿಸಿಯದೆ.

ಸುಳ್ಯ:— ಮಾಫಿ ಪರ್ಮಿಟು ಅರ್ಜಿಗಳನ್ನು ಕೆರಾ ರವಿನ್ಯೂ ಇನ್ಸ್ [illegible] ರರ ಮುಖಾಂತರ ತನ್ನಿಗೆ ಕೊಟ್ಟರೆ ಸಕಾಲಕ್ಕೆ ನಮಗೆ ಮರಗಳು ಸಿಕ್ಕದೆ [illegible] ಕಟ್ಟುವರೆ ಜಬ್ಬಿನ ಕಷ್ಟನಷ್ಟ ಉಂಟಾಗುತ್ತದೆ. ಆದ್ದರಿಂದ ಮುಂದೆ [illegible] ಗ್ರಾಮ ಉದ್ಯೋಗಸ್ಥರ ಮುಖಾಂತರ ತನಿಖೆ ನಡಸಿ ಅವರು ಬೇಗನೆ ಪರ್ಮಿಟು ಸಿಗುವ ಏರ್ಪಾಡು ನಡಿಯುತ್ತಿದ್ದರೆ ತುಂಬಾ ಉಪಕಾರವಾಗುತ್ತು.

ಕಾಸರಗೋಡು ತಾಲೂಕಿಗೆ ಸಂಬಂಧಪಟ್ಟ ದೇಲಂಪಾಡಿ ಗ್ರಾಮವನ್ನು [illegible] ನಂಗಡಿ ತಾಲೂಕಿಗೆ ಸೇರಿಸಬೇಕಾಗಿ ಆಗಾಗ್ಯೆ ವರ್ತಮಾನ ಪತ್ರಿಕೆಗಳ [illegible] ಮತ್ತು ಕಳೆದ ಜಮಾಬಂದಿ ಸಮಯ ನಡೆದ ಕಾನ್ಫರೆನ್ಸಿನಲ್ಲಿ ಕೂಡಾ [illegible] ಮಾಡಿಕೊಂಡದ್ದಕ್ಕೆ ಈ ವರೆಗೆ ಯಾವ ತರದ ಹುಕುಂ ಸಾದರಾಗದ [illegible] ದರಿಂದ ತುಂಬಾ ವಿಷಾದಕರ.

ಸುಳ್ಯ ಆಸ್ಪತ್ರೆಯನ್ನು ಬರುವ ತಿಂಗಳಿಂದ ಜಾನುವಾರು ಸಂತೆ ಸಮಯ [illegible] ತಿಂಗಳು ಮುಚ್ಚಿದರೆ [illegible] ಬಂದು ಇಲ್ಲಿಯೇ ಬಿಡಾರಮಾಡಿಕೊಂಡು ದೀರ್ಘಕಾಲದಿಂದ [illegible] ಕೊಳ್ಳುವ ರೋಗಿಗಳು ಆಕಸ್ಮಿಕವಾಗಿ ಉಂಟಾಗಬಹುದಾದ [illegible] ವೈದ್ಯರ ಕೂಡಾ ಇಲ್ಲದೆ [illegible] ಅದ್ದರಿಂದ ತತ್ಕಾಲಿಕ್ಕೆ ಕೆಲಸ [illegible] ವೈದ್ಯ ಉದ್ಯೋಗಸ್ಥರು ಇಲ್ಲದಿದ್ದರೆ ಖಾಸಗಿ ವೈದ್ಯರು. ಇರುವ [illegible] ಆಸ್ಪತ್ರೆಯನ್ನಾದರೂ ಮುಚ್ಚಿಸಿ ಅಲ್ಲಿಯ ವೈದ್ಯ, ಉದ್ಯೋಗಸ್ಥರನ್ನು [illegible] ಕಳುಹಿಸುತ್ತಿದ್ದರೆ ಬಹಳ ಉಪಕಾರವಾಗುತ್ತು.

ಹಳ್ಳಿಗಳಿಗೆ ಒತ್ತಾಗಿರುವ ರಿಜರ್ವ ಕಾಡುಗಳು:— ೧೯೨೦ನೆ [illegible] ನೆ ತಾರೀಕಿನ ಮದ್ರಾಸು ನ್ಯಾಯವಿಧಾಯಕ ಸಭೆಯ ಅಧಿವೇಶನದಲ್ಲಿ [illegible] ಚರ್ಚೆಗೆ ಕಳದ ಸೋಮಿಗೆ ಆನುಸರಣೆಗೆ [illegible] ಒತ್ತಾಗಿರುವ ರಿಜರ್ವ ಕಾಡುಗಳನ್ನು ರಿಜರ್ವ ಪಟ್ಟಿಯಿಂದ ತೆಗೆದುಹಾಕಿ [illegible] ಪಟ್ಟಿಗೆ ಸೇರಿಸಬೇಕೆಂತಲೂ ಅವನ್ನು ಫೂ. ತಿ. ಹೊ. ವರ್ಗಕ್ಕೆ [illegible] ಚೀಫ್ ಕನ್ಸರವೇಟರ್ ಆಫ್ ಫಾರೆಸ್ಟ ಇವರ ಅನುಮತಿಯನ್ನು

[illegible]

[illegible] ಭಾಷಿತವಾದ ಅನಂತರ ಈ ಸಭೆ [illegible]

[illegible] ಫಾರೆಸ್ಟ ರಿಜರ್ವ ಕಾಡುಗಳ ದೆಸೆಯಿಂದ ಪ್ರಜೆಗಳಿಗೆ ಸಂಭವಿಸುವ ಅನಾನುಕೂಲತೆಗಳನ್ನು ನಿವೃತ್ತಿಗೊಳಿಸಿಕೊಳ್ಳುವ ಕ್ರಮಗಳ [illegible] ಸಭೆಯು ಮುಖ್ಯ ಕರ್ತವ್ಯವಾಗಿರುವುದರಿಂದ ಈ ಬಗ್ಗೆ [illegible] ಹೆಸರಿನಿಂದ ಒಂದು ಸ್ಥಾಯಿ ಸಂಘವನ್ನು ಸ್ಥಾಪಿಸಬೇಕೆಂದೂ ಮ. ರಾ. ಶಂಕರ ಹೊಳ್ಳರೂ ಮ. ರಾ. ಕೃಷ್ಣಪ್ಪ ಶೆಟ್ಟರೂ ಇದರ ಮುಖ್ಯ ಚಾಲಕರಾಗಿದ್ದು ಈ ಸಂಘದ ಉಪಯೋಗಕ್ಕೋಸ್ಕರ ಒಂದು ನಿಧಿಯನ್ನೇರ್ಪಡಿಸಬೇಕೆಂದೂ ಪ್ರತಿ ಗ್ರಾಮದ ಪ್ರಮುಖರಲ್ಲಿ [illegible] ಜನರನ್ನು ಪ್ರತಿನಿಧಿಗಳಾಗಿ ಆರಿಸಿ ಆಯಾ ಪ್ರಾಂತ್ಯದಲ್ಲಿ ಸಂಭವಿಸುವ ಸಂಕಷ್ಟಗಳನ್ನು ಅವರ ಮುಖಾಂತರ ಸಂಘಕ್ಕೆ ತಿಳಿಯುವಂತೆ ವ್ಯವಸ್ಥೆ ಮಾಡಬೇಕೆಂದೂ ನಿರ್ಣಯಿಸಲಾಗಿದೆ.

೨. ಫಾರೆಸ್ಟ ರಿಜರ್ವ ಕಾಡಿನಿಂದ ವ್ಯವಸಾಯಕ ಮತ್ತು ಗೃಹೋಪಯೋಗಿ [illegible] ಸಾಹಿತ್ಯಗಳು ಫೀಸು ಮೊಫಿಯಿಂದಲೇ ದೊರಕುವ, ಮತ್ತು ಜಾನುವಾರುಗಳ ಮೇವಿನ ಬಗ್ಗೆ ಫೀಸು ವಸೂಲ್ಮಾಡುವ ಕ್ರಮವನ್ನು ವಜಾಮಾಡಿಸುವ — ಬಗ್ಗೆ [illegible] ಸಾಧ್ಯವಾದಷ್ಟರಂಗೆ [illegible] ಕಾಡಿನಿಂದಲೇ ಕೊಡಿಸುವ ಬಗ್ಗೆ, ಗ್ರಾಮ ಪಂಚಾಯತರ ಅಧಿಕಾರದಲ್ಲಿ ಈಗಿರುವ ಸಂಕೋಚಗಳು ದೂರಾಗುವ ಬಗ್ಗೆ ದರ್ಖಾಸ್ತು ಸ್ಥಳಗಳ ಕುತ್ತಿಗಾಣಿಕೆ ಇದು ಅತ್ಯಂತ ಕಡಿಮೆ ಆಗುವ ಬಗ್ಗೆ — ಅವಶ್ಯವಿರುವ ಸೌಕರ್ಯಗಳನ್ನು ಒದಗಿಸಿಕೊಡಬೇಕೆಂಗಿ ಗವರ್ನಮೆಂಟಿಗೆ ಬಿನ್ನವಿಸಿಕೊಳ್ಳಬೇಕಾಗಿ ಈ ಸಭೆಯು ನಿರ್ಣಯಿಸಿಯದೆ.

೩. ಈಗಿನ ರಿಫಾರ್ಮ ಬಿಲ್ ಪ್ರಕಾರ ನಮ್ಮ ಮುಖ್ಯ ಸಂಕಟಹೇತುವಾದ ಫಾರೆಸ್ಟ ಇಲಾಖಾಧಿಕಾರವೇ ಸರಕಾರದವರ ಕೈಯಲ್ಲಿರುವುದರಿಂದ ವಗೈರೆ ಈಗಿನ ಕೌನ್ಸಿಲಿಗೆ ನಮ್ಮ ಕಡೆಯಿಂದ ಪ್ರತಿನಿಧಿಯಾಗಿ ಮೆಂಬರರನ್ನು ಆರಿಸುವುದು ಆವಶ್ಯವೇ ಇಲ್ಲವೆಂದು ಈ ಸಭೆಯವರು ನಿರ್ಣಯಿಸುತ್ತಾರೆ.
... ಶೀತ ಜ್ವರ ಪಕ್ಕೆಗಳ ವೇದನೆ ರಕ್ತಕಾಸ ಕ್ಷಯ, ಉಬ್ಬಸ, ... ಮೊದಲಾದ ಶ್ವಾಸಕೋಶದ ಯಾವತ್ತು ರೋಗಗಳಿಗೆ ಅತ್ಯುತ್ತಮವಾದ್ದು ... ವಿಶೇಷ ಗುಣಕಾರಿ ಎಂದು ... ಎಂಬ ಗಿಡದ ಎಲೆಯಿಂದ ತಯಾರಿಸಲ್ಪಟ್ಟದ್ದು ... ಶ್ಲೇಷ್ಮವು ಬೇಗನೆ ಕಳೆವಾಗುವದರಿಂದ ... ರುಚಿಯಲ್ಲಿ ಸಿಹಿಯಾಗಿರುವದರಿಂದ ... ಪ್ರೀತಿ

ಬಾಟ್ಲಿ 1ರ ಕ್ರಯ ... ರೂಪಾಯಿ ಮಾತ್ರ

ಬೆಂಗಾಲ ಕೆಮಿಕಲ ಮತ್ತು ಫರ್ಮಾಸ್ಯೂಟಿಕಲ ವರ್ಕ್ಸ್ ಕಂಪೆನಿ ಲಿಮಿಟೆಡ್ ಕಲ್ಕತ್ತಾ

ಸೋಲ ಏಜಂಟ್ಸ್ —

ಪಿ ಎ ಪೈ ಬ್ರದರ್ಸ್, ಉಡುಪಿ
ಮಿಜಾರಕರ್ ಬ್ರದರ್ಸ್, ಮಂಗಳೂರು,
ಇವರಲ್ಲಿಯೂ ಸಿಗುವದು

ಮುಫತ್ತು!! ಇಂಥಾದ್ದು ಬೇಕು

ಗುಲ್ಷನ್ ಜೋಬಿನ್

ಸರಕಾರದಲ್ಲಿ ರಿಜಿಸ್ಟರು ಮಾಡಲ್ಪಟ್ಟ ನಂ. 253

ಒಂದಾಣೆ ಸ್ಟ್ಯಾಂಪಿನೊಳಗೆ ರುಜುವಾತು ಶಿಕ್ಕೆಯುಳ್ಳ ರಶೀದು— ಈ 32 ಮಾತ್ರೆಗಳುಳ್ಳ ಬಾಟ್ಲಿಗಳನ್ನು ಖರೀದಿಸುವವರಿಗೆ ಕೊಡಲ್ಪಡುತ್ತದೆ. ಈ ಮಾತ್ರೆಗಳನ್ನು ಸೇವಿಸಿ ಗುಣತೋರದಿದ್ದರೆ ಮನಸಾಕ್ಷಿಯಾಗಿ ಆ ರಶೀದಿಯೊಳಗೆ ದಸ್ಕತುಮಾಡಿ ಒಂದು ತಿಂಗಳೊಳಗಾಗಿ ವಾಪಸು ಕಳಿಸಿದರೆ ಬಾಟ್ಲಿಯ ಕ್ರಯವನ್ನು ವಾಪಸು ಮಾಡುತ್ತೇವೆಂದು ಪ್ರತಿಜ್ಞೆಯನ್ನು ನಾವು ದೃಢವಾಗಿ ಮಾಡುತ್ತೇವೆ

ಗುಲ್ಷನ್ ಜೋಬಿನ್.

ಶಕ್ತಿವರ್ಧಕ! ಧಾತುಪೌಷ್ಟಿಕ!! ರೋಗನಿವಾರಕ!!!

ಈ ಮಾತ್ರೆಗಳು ಸೇವಿಸಿದ ಪ್ರಥಮ ದಿವಸದಲ್ಲಿಯೇ ಆಶ್ಚರ್ಯಕರವಾದ ಗುಣಗಳನ್ನು ತೋರಿಸುವವು. ಕಳೆಗುಂದಿದ ಕಪೋಲಗಳಿಗೆ ಪುಷ್ಟಿ ಮತ್ತು ಕಾಂತಿಯನ್ನು ಕೊಟ್ಟು ಶರೀರಕ್ಕೆ ಧಾತುಪುಷ್ಟಿ ಸುಖನಿದ್ರೆಗಳನ್ನು ಕೊಡುತ್ತವೆ. ಕಟಿಶೂಲೆ, ವಾಯುರೋಗ, ಕ್ಷಯ, ಶ್ವಾಸ, ಕಾಸ, ಉದರಶೂಲೆ, ಅಜೀರ್ಣ, ಮೂತ್ರರೋಗ, ಮಲಬದ್ಧತೆ, ಜ್ವರಗಳು, ಮೂಲವ್ಯಾಧಿ, ಅನಿಯಮಿತಯಾದ ಋತುಗಳನ್ನು ಸಮತೂಲನೆಗಿಸಿ, ರಕ್ತಶುದ್ಧಿಯೂ ವೃದ್ಧಿಯೂ ಹೊಂದು ಚರ್ಮವ್ಯಾಧಿಗಳನ್ನು ನಿವಾರಣೆಮಾಡುತ್ತವೆ.

ಬಾಟ್ಲಿ 1ಕ್ಕೆ ರೂ. 1 3ಕ್ಕೆ ರೂ 2—10—0, ವಿ. ಪಿ. ಖರ್ಚು ಬೇರೆ.

ಏಜಂಟರುಗಳು ಬೇಕು. ಎಲ್ಲ ಸ್ಥಳಗಳಲ್ಲಿ ಸಿಕ್ಕುವದು

ವಿಳಾಸ — ದಿ. ಗುಲ್ಷನ್ ಜೋಬಿನ್ ಕಂಪೆನಿ, ದೊಂಡೈ 3.

Mr. ALEX ALVAREZ Dentist.

OF MANDALAY UPPER BURMA

Will attend patie ts here for the following Particular —

Charges Moderate

Painless extraction of teeth 2 Making of false teeth 3 Filling the teeth with silver, gold porceline 4 Gold bridge and Crowns 5 Porceline Crowns 6 Cleaning the teeth 7 Pyorrhoea treatment

Can be consulted at —

The Electro Homoeopathic Dispensary
Hampankatta MANGALORE

ಮಿ. ಅಲೆಕ್ಸ್ ಆಲ್ವರಿಸ್ ದಂತವೈದ್ಯ

ಇವರು ಹಲ್ಲು ಬೇನೆಯಿಂದ ನರಳುವರವರ ಹಲ್ಲುಗಳನ್ನು ಸ್ವಲ್ಪವೂ ನೋಯದಂತೆ ಬುಡಸಹಿತ ತೆಗೆದು, ಕೃತ್ರಿಮ ಹಲ್ಲುಗಳನ್ನು ಮಾಡಿ ಇಡೋದು, ಹಲ್ಲುಗಳಲ್ಲಿ ಉಂಟಾದ ರಂಧ್ರಗಳನ್ನು ಬೆಳ್ಳಿ ಬಂಗಾರ, ಪಿಂಗಾಣಿ ಇವುಗಳಿಂದ ಮುಚ್ಚೋದು ಬಂಗಾರದ ಕೃತ್ರಿಮ ದಂತಮಾಲೆಯನ್ನು ಬುಡ ಸಹಿತ ಇಡೋದು, ಪಿಂಗಾಣಿ ಹಲ್ಲುಮಾಲೆಯನ್ನು ಇಡೋದು ಮತ್ತು ಹಲ್ಲುಗಳನ್ನು ಶುಚಿಮಾಡೋದು ಮುಂತಾದ ದಂತಚಿಕಿತ್ಸೆಯನ್ನು ... ಚಿಕಿತ್ಸೆಯನ್ನು ಮಾಡುವರು. ಇವರು ಹಂಪನಕಟ್ಟೆಯಲ್ಲಿರುವ ಮಿ ಎ ಫೆರ್ನಾಂಡಿಸ್, ಇಲೆಕ್ಟ್ರೊ ಹೊಮಿಯೊಪತಿಕ್ ಡಿಸ್ಪೆನ್ಸರಿಯಲ್ಲಿ ಮೊಕ್ಕಾಂ ಮಾಡಿರುತ್ತಾರೆ

ಗೊನೊಕ್ಯೂರಾ.

ಮೇಹ ರೋಗಕ್ಕೆ (Gonorrhea) ಪರಮೌಷಧವು

ಎಲ್ಲಾ ತರದ ಮೇಹಗಳಲ್ಲಿ, ದಪ್ಪವಾದ ಕೀವಿನಂಥಾ ಮೇಹವು ಹರಿಯುವದಕ್ಕೆ, ಮೂತ್ರದ್ವಾರದಲ್ಲಿಯ ಉರಿ, ಕೆಳದಿವರ್ಣದ ಅಥವಾ ಹಸುರುವರ್ಣದ ಕಠಿಣ ಉರಿಯುಳ್ಳ ಮೇಹವು ಹರಿಯುವದಕ್ಕೆ, ಮೂತ್ರಮಾಡುವಾಗ ಇಂದ್ರಿಯದಲ್ಲಿ ಉರಿ ಮುಂತಾದ ಮೇಹ ಸಮ್ಮಂಧವಾದ ಎಲ್ಲಾ ಚುರುಕುರೋಗಗಳಲ್ಲಿ ಉತ್ತಮ ಔಷಧವು. ಇದರ ಸೇವನೆಯಿಂದ ಎಷ್ಟುಕಾಲದ ಹಳೆ ಮೇಹರೋಗಗಳಾದರೂ

ಖಂಡಿತವಾಗಿ ಗುಣಹೊಂದುವವು

ಔಷಧ ಸೇವಿಸುವ ಕ್ರಮ— 2 ಘಂಟೆಗೆ ಒಂದಾವರ್ತಿ 5 ಬಿಂದು ಔಷಧವನ್ನು ಒಂದು ಚಮಚದಷ್ಟು ನೀರಿನಲ್ಲಿ ಹಾಕಿ ಸೇವಿಸುವದು ಕ್ರಯ — ರೂ 1—0—0

ಬೇಕಾಗಿದ್ದವರು ಕೆಳಗಿನ ವಿಳಾಸಕ್ಕೆ ಬರಿಯತಕ್ಕದ್ದು

ವಿಳಾಸ:— ಎ ಫೆರ್ನಾಂಡಿಸ್,
ಇಲೆಕ್ಟ್ರೊ ಹೊಮಿಯೊಪತಿ ಡಿಸ್ಪೆನ್ಸರಿ,
ಮಂಗಳೂರು.

The Canara Bank Limited, Mangalore.
ಕೆನರಾ ಬ್ಯಾಂಕ್ ಲಿಮಿಟೆಡ್, ಮಂಗಳೂರು.

[illegible] July 1906. 1906ನೇ ಇಸವಿ ಜುಲಾಯಿ ತಿಂಗಳಲ್ಲಿ ಸ್ಥಾಪಿಸಲ್ಪಟ್ಟಿತು.

Authorised and fully-paid up Capital Rs. 300,000—0—0	ಅಧಿಕಾರಗೊಳಿಸಲ್ಪಟ್ಟ ಪೂರ್ಣವಾಗಿ ಕೊಟ್ಟ ಮೂಲಧನವು ರೂ. 300,000—0—0
Reserve and other sinking Funds „ 138,697—7—2	ಕ್ಷೇಮನಿಧಿ ಮತ್ತು ಇತರ ಫಂಡುಗಳು „ 138,697—7—2

THE BANK RECEIVES FIXED, CURRENT ACCOUNT, & SAVINGS BANK DEPOSITS.

ಕಾಯಂ ಮತ್ತು ಚಾಲ್ತಿ ಠೇವಣಾತಿಗಳೂ, ಸೇವಿಂಗ್ಸ್ ಬ್ಯಾಂಕ್ ಠೇವಣಾತಿಗಳೂ, ಪಡಕೊಳ್ಳಲಾಗುತ್ತವೆ.

For further particulars apply to the Secretary.

ವಿಶೇಷ ಮಾಹಿತಿ ಬಗ್ಗೆ ಸೆಕ್ರೆಟರಿಗಳಿಗೆ ಬರಕೊಳ್ಳುವದು.

Canara Bank Ltd.,
Mangalore, 1st September 1920.

K. Venkat Rao,
Secretary.

ಪಾಳ್ಯದ ವೆಂಕಟಾಚಲ ಪಂಡಿತರ ಸಿದ್ಧೌಷಧಗಳು.

ಲೋಕಾಮಯಹರ ಕಸ್ತೂರಿ ಮಾತ್ರೆಗಳನ್ನು ಈಗಲಾದರೂ ಪರೀಕ್ಷಿಸಿ ನೋಡಿರಿ!

ಪ್ರತಿವರ್ಷವೂ ಲಕ್ಷಾಂತರ ಸೀಸೆಗಳು ವಿಕ್ರಯವಾಗುತ್ತವೆ.

ಇಂಡಿಯಾದವರು ಮಾತ್ರವಲ್ಲ; ಬರ್ಮಾ, ಸಿಲೋನ್, ಮಲೆಯ ಸ್ಟೇಟ್, ಗೋವಾ, ಫೀಜಿಐಲೆಂಡ್, ಈಸ್ಟ್ ಆಫ್ರಿಕಾ ಮೊದಲಾದ ಕಡೆಯವರು ಕೂಡ ಈ ಸಿದ್ಧೌಷಧಿಯನ್ನು ಉಪಯೋಗಿಸುತ್ತಿರುತ್ತಾರೆ.

ಮಹಾಭಾಗ, ಒಂದೇ ಒಂದು ಲೋಕಾಮಯಹರ ಕಸ್ತೂರಿ ಮಾತ್ರೆಯ ಸೀಸೆಯು ನಿಮ್ಮ ಮನೆಯಲ್ಲಿದ್ದರೆ ಸಮಯವನ್ನು ಕಾದಿ ತೊರೆಯುದುವುದು ನಿಜವಾಗಿಯೂ ತಪ್ಪುವುದು.

ಶೀತ, ಶೀತವಾಯು, ಅಜೀರ್ಣ, ಪಾರ್ಶ್ವವಾಯು, ಜ್ವರ, ಮಂದ, ಮಲಬದ್ಧ, ಕೆಮ್ಮು, ಗಸವೇನ, ಬಲಹೀನತೆ, ಕಟ್ಟು ಜವಾ, ಮತ್ತು ಕೆಡುಕಾದ ನೀರಿನಿಂದುಂಟಾಗುವ ವಿಕಾರ, ಮಕ್ಕಳ ಎಳವು, ಜ್ವರ, ಕೆಮ್ಮು, ವಾಯು, ಇನ್ನು ಅನೇಕ ರೋಗಗಳನ್ನು ಈ ಸಿದ್ಧಾಮೃತ ಆಶ್ಚರ್ಯವಾಗುವಂತೆ ಗುಣಪಡಿಸುತ್ತದೆ.

ಪ್ರತಿ 6 ಸೀಸೆಗಳನ್ನು ಒಟ್ಟಿಗೆ ತರಿಸಿದರೆ ಟಪಾಲು ಖರ್ಚು ಸೇರಿ 1—8—0.
ಪ್ರತಿ 12 ಸೀಸೆಗಳನ್ನು ಒಟ್ಟಿಗೆ ತರಿಸಿದರೆ ಟಪಾಲು ಖರ್ಚು ಸೇರಿ 2—13—0.
ಪ್ರತಿ 25 ಸೀಸೆಗಳನ್ನು ಒಟ್ಟಿಗೆ ತರಿಸಿದರೆ ಟಪಾಲು ಖರ್ಚು ಸೇರಿ 6—3—0.

ರಿಜಿಸ್ಟರಾದ ಈ ವ್ಯಾಪಾರದ ಗುರ್ತು ಪ್ರತಿ ಸೀಸೆಯ ಮೇಲೂ ಇರುವುದನ್ನೇ ನೋಡಿ ತೆಗೆದುಕೊಳ್ಳಬೇಕಾಗಿದೆ.
ಅನುಪಾನ ಪತ್ರವು ಪ್ರತಿ ಸೀಸೆಯೊಡನೆಯೂ ಇರುವುದು. 26 ಮಾತ್ರೆಗಳುಳ್ಳ ಡಬ್ಬಿಗೆ 4 ಆಣೆ ಮಾತ್ರ.

ಲಕ್ಷ್ಮೀವಿಲಾಸ ರಸ (ಪ್ಲೇಗಿಗೆ)—ಲಕ್ಷೋಪಲಕ್ಷ ಪ್ಲೇಗುರೋಗಿಗಳು ಈ ಲಕ್ಷ್ಮೀವಿಲಾಸ ರಸದಿಂದ ಆರೋಗ್ಯವನ್ನು ಪಡೆದಿರುತ್ತಾರೆ. ಒಂದೇ ಒಂದು ಲಕ್ಷ್ಮೀವಿಲಾಸ ರಸದ ಸೀಸೆಯು ನಮ್ಮಲ್ಲಿದ್ದರೆ ಪ್ಲೇಗಿಗೆ ಸರ್ವೋತ್ತಮವಾದ ಸಿದ್ಧೌಷಧಿಯು ಬೇರೊಂದಿಲ್ಲವೆಂದು ತಾವೇ ಹೇಳುವಿರಿ. ದಿನಕ್ಕೊ ಮೂರರ ನಾಲ್ಕರ ಜ್ವರಗಳು, ಸನ್ನಿಪಾತ ಇವುಗಳು ಕೂಡಾ ಗುಣವಾಗುತ್ತವೆ. ಸೀಸೆಗೆ ರೂ. 1. 6ಕ್ಕೆ ಒಂದು ಇನಾಮು.

ಶ್ರೀನಿವಾಸತೈಲ—ಕ್ಲೇಗಿನ ಗಡ್ಡೆ ಕರಗುತ್ತದೆ. ಸಂಧುಗಳ ನೋವು ಸೇದಲು ಹೋಗುತ್ತದೆ. ಸೀಸೆಗೆ 8 ಆಣೆ. 6ಕ್ಕೆ ಒಂದು ಇನಾಮು.

ವೈಶ್ವಾನರಾಸವ—ಸೇವಿಸಿದ ಮೊದಲನೇ ವೇಳೆಯಿಂದಲೇ ವಾಂತಿಭೇದಿ, ಶೀತಭೇದಿ, ಅಜೀರ್ಣದ ಭೇದಿಗಳು ಗುಣವಾಗುತ್ತಾ ಬರುತ್ತವೆ. ಸೀಸೆಗೆ 1.6ಕ್ಕೆ ಒಂದು ಇನಾಮು.

ಬಾಲಸುಧೋದಯ—ಮಕ್ಕಳಿಗೆ ಬಲಕಾರಿ, ಸಿಹಿಯಾಗಿರುತ್ತದೆ. ಮಂದ, ಮಲಬದ್ಧ, ಅಜೀರ್ಣದ ಭೇದಿ, ಕೃಶತ್ವ, ಹೊಟ್ಟೆ ದಪ್ಪವಾಗಿರುವುದು, ಹಸಿವಿಲ್ಲದಿರುವುದು ಇವೆಲ್ಲವೂ ಗುಣವಾಗಿ ದಷ್ಟಪುಷ್ಟರಾಗುತ್ತಾರೆ. ವೃಷ್ಟಿಯ ಚಟುವಟಿಕೆ ಸೀಸೆಗೆ ಆಣೆ 12. 6ಕ್ಕೆ ಒಂದು ಇನಾಮು.

ಈ ನಾಲ್ಕಕ್ಕೂ ಟಪಾಲು ಖರ್ಚು ಬೇರೆ.

ಸಮಸ್ತ ರೋಗಗಳಿಗೂ ನಮ್ಮಲ್ಲಿ ಆಯುರ್ವೇದೀಯ ಸಿದ್ಧೌಷಧಿಗಳು ದೊರೆಯುತ್ತವೆ. ಕ್ಯಾಟಲಾಗು ಉಚಿತ.

ವಿಳಾಸ: ಶ್ರೀ ಸೀತಾರಾಘವ ವೈದ್ಯಶಾಲಾ ಮೈಸೂರು.

ಒಂದು ಕುಪ್ಪಿಯ ಕ್ರಯ ೧೪ ಆಣೆ. ಮಂಗಳೂರು ಏಜಂಟ್,

ಕೇ. ಟೀ. ಡೋಂಗರೆ ಕಂಪೆನಿ. ಡಿ. ಉಲನ್‌ಮಾರ್ಟ್, ಮಂಗಳೂರು.

ಗಿರಿಗಾಂ ಮುಂಬಯಿ.

[illegible] ಪಂಚಾಂಗ.

ತಾರೀಖು	ವಾರ	[illegible]	[illegible]	[illegible]	[illegible]	[illegible]	ಸೂರ್ಯ ಉ.	ಅಸ್ತ.
11	[illegible]	[illegible]	[illegible]	[illegible]	[illegible]	[illegible]	6-44	6. 3
12	ರವಿ	[illegible]	[illegible]	[illegible]	[illegible]	[illegible]	6-45	6. 4
13	ಸೋಮ	[illegible]	[illegible]	[illegible]	[illegible]	[illegible]	6-45	6. 4
14	ಕುಜ	[illegible]	[illegible]	[illegible]	[illegible]	[illegible]	6-46	6. 4
15	ಬುಧ	[illegible]	[illegible]	ಕೃತ್ತಿಕಾ	[illegible]	[illegible]	6-46	6. 5
16	ಗುರು	[illegible]	[illegible]	ಧನಿಷ್ಠ	[illegible]	[illegible]	6-47	6.
17	ಶುಕ್ರ	[illegible]	[illegible]	ಶತಭಿಷಾ	[illegible]	[illegible]	6-47	6. 6

ಮಂಗಳೂರಿನ ವಾಯುಸ್ಥಿತಿ.
(೧೯೨೦ನೆಯ ನವಂಬರ)

Date ತಾರೀಖು	Temperature. ಉಷ್ಣ (ಕಾವು)		Rainfall. ಮಳೆ	
	Maximum ಹೆಚ್ಚಿನದು	Minimum ಕಡಿಮೆ	ದಿನದ ಮಳೆ	ಏಪ್ರಿಲ್ ೧ರಿಂದ
3	86—1	76—2	—	...
4	90—2	76—2	—	...
5	87—5	72—8	—	...
6	87—9	69—1	—	...
7	89—8	73—9	—	...
8	89—4	74—5	—	—
9	88—3	71—8	—	—

ಮಂಗಳೂರಿನ ಪೇಟೆ ಧಾರಣೆ.

ಜೀನಸು	ಇಂದ	ವರೆಗೆ
	ರೂ. ಆ.	ರೂ. ಆ.
ಮಸ್ಕತಿ ಅಕ್ಕಿ ಮುಡಿ ೧ಕ್ಕೆ ...	7— 8	7—12
ಗುಡ್ಡ, ಸುಗ್ಗಿ ...	6—14	7— 6
ಹೊಸ ಮಸ್ಕತಿ ಅಕ್ಕಿ ...	6—12	7— 0
ಹೊಸ ರಾಶಿ „ ...	6— 6	6—13
ಅತ್ತಲ್ ಬೆಳ್ತಿಗೆ „ ...	8— 4	8— 8
ಗುಡ್ಡ ಬೆಳ್ತಿಗೆ „ ...	7— 0	7— 6
ರಂಗೂನ ಬೆಳ್ತಿಗೆ ಗೋಣಿ ೧ಕ್ಕೆ ...	17— 4	17— 8
ಗೋದಿ ಗೋಣಿ ೧ಕ್ಕೆ ...	25— 0	22— 0
ಹುರುಳಿ ಗೋಣಿ ೧ಕ್ಕೆ ...	14— 8	15— 4
ಕಡಲೆ ಗೋಣಿ ೧ಕ್ಕೆ ...	16— 8	17— 8
ತೊಗರಿ ಗೋಣಿ ೧ಕ್ಕೆ ...	19— 8	20— 0
ಕೊಗಂಟೀರ ಗೋಣಿ ೧ಕ್ಕೆ ...	22— 0	30— 0
ಉದ್ದು ಗೋಣಿ ೧ಕ್ಕೆ ...	16— 8	18— 0
ಹೆಸರು ಗೋಣಿ ೧ಕ್ಕೆ ...	16— 0	18— 8
ಊರು ಬೆಲ್ಲ ಖಂಡಿ ೧ಕ್ಕೆ ...	97— 8	105— 0
ಉಪ್ಪು ಗೋಣಿ ೧ಕ್ಕೆ ...	4— 4	4— 6
ಮೆಣ್ಸು ಖಂಡಿ ೧ಕ್ಕೆ ...	150— 0	160— 0
ಮೆಣ್ಸು ಹಿಂಡಿ ಖಂಡಿ ೧ಕ್ಕೆ ...	50— 0	[illegible]— 0
ಎಳ್ಳಿಂಡಿ ಖಂಡಿ ೧ಕ್ಕೆ ...	52— 2	
ಕೊಬ್ರಿ ಎಣ್ಣೆ ಮಣ ೧ಕ್ಕೆ ...	11—14	12— 0
ಎಳ್ಳೆಣ್ಣೆ ಮಣ ೧ಕ್ಕೆ ...	9— 8	11— 8
ಚಿಮಿಣಿ ಎಣ್ಣೆ ಪೆಟ್ಟಿಗೆ ೧ಕ್ಕೆ ...	9— 6	9— 0
ಮೋರಿಸ ಸಕ್ಕರೆ ಮಣ ೧ಕ್ಕೆ ...	9— 4	9— 6
ಊರ ಮೆಣಸಿನ ಕಾಯಿ ಮಣ ೧ಕ್ಕೆ ...	8— 0	8— 8
ಸಾಸಿವೆ ಮುಡಿ ೧ಕ್ಕೆ ...	10— 0	10— 0
ಕೊತ್ತಂಬರಿ ಮುಡಿ ೧ಕ್ಕೆ ...	5— 4	5— 6
ಕಾಫಿ ಖಂಡಿ ೧ಕ್ಕೆ ...	220— 0	230— 0
ಬೆಳ್ಗೋಟು ಅಡಿಕೆ ಖಂಡಿ ೧ಕ್ಕೆ ...	100— 0	115— 0
ಬೆಳ್ಗೋಟು ...	95— 0	100— 0
ಕಾಳುಮೆಣಸು ಖಂಡಿ ೧ಕ್ಕೆ ...	135— 0	140— 0
ಯಾಲಕ್ಕಿ ಮಣ ೧ಕ್ಕೆ ...	22— 0	25— 0
ಗೇರುಬೀಜ ಮುಡಿ ೧ಕ್ಕೆ ...	3— 8	3—12
ಕೊಬ್ಬರಿ ಖಂಡಿ ೧ಕ್ಕೆ ...	100— 0	120— 0
ಕಾಂಟ್ರ [illegible] ಮಣ ೧ಕ್ಕೆ ...	22— 0	22— 4
ಕಾಂಟ್ರ [illegible] ಮಣ ೧ಕ್ಕೆ ...	32— 0	34— 0
[illegible] ೧ಕ್ಕೆ ...	31— 8	[illegible]
[illegible] ಮಣ ೧ಕ್ಕೆ ...	24— 0	25— 0

ಪರದೇಶ ವರ್ತಮಾನ.

[illegible]

ಗ್ರೀಸ್ — [illegible] ರಾಜ್ಯ [illegible] ಕ್ಷೇತ್ರದ ಅಧಿಕಾರ ಇನ್ನೂ ಆಗಿಲ್ಲ. [illegible] ಸ್ವಾತಂತ್ರ್ಯ ಕೊಟ್ಟರೆ ಬರುವುದಾದರೆ ಏನು ಮಾಡಬೇಕಾದೀತು ಎಂದು ಇಂಗ್ಲೆಂಡಿ [illegible] ಮತ್ತು [illegible] ಮಂತ್ರಿಗಳು ಆಲೋಚಿಸುತ್ತಿದ್ದ ತಮ್ಮ [illegible] ಗ್ರೀಕ್ ಸರಕಾರದವರಿಗೆ ತಕ್ಕಮಟ್ಟಿಗೆ ವ್ಯಕ್ತಗೊಳಿಸಿದ್ದಾರೆ.

ತುರ್ಕಿ — ಇದರೊಂದಿಗೆ ಆದ ಒಪ್ಪಂದವು ಕಷ್ಟೀಕಾರಿದೇ [illegible] ಎಂಬ ಶಂಕೆಯು ಹುಟ್ಟಿದೆ. ಕಾನ್‌ಸ್ಟಂಟೈನ್ನನು ಗ್ರೀಕ್ ದೇಶದ ಅರಸನಾದರೆ ಆವನು [illegible] ಯೊಂದಿಗೂ [illegible] ಯೊಂದಿಗೂ ಬೆಳಸಿಟ್ಟ ಸ್ನೇಹ ಬಾಲ್ಕನ್ [illegible] ಯ ಸ್ಥಿತಿ ಸ್ವಾತಂತ್ರ್ಯವು ಏಟಬರುವುದರಿಂದ ಈ ಸಂಧಿಯಲ್ಲಿನ ಶರ್ತುಗಳನ್ನೆ ಬದಲಾಯಿಸಿ ಗ್ರೀಸ್ ದೇಶಕ್ಕೆ ತುರ್ಕಿಯಿಂದ ಒಪ್ಪಿಸಿಕೊಟ್ಟ ಪ್ರದೇಶಗಳಲ್ಲಿ ಅಧಿಕಾರವನ್ನು ಪುನಃ ತುರ್ಕಿಗೆ ಬಿಟ್ಟುಕೊಡುವ ಅಗತ್ಯ ಬಿದ್ದೀತು ಎಂಬಂತೆ ಕಾಣುತ್ತದೆ.

ಒಳದೇಶ ವರ್ತಮಾನ.

ಕೊಚ್ಚಿಯಲ್ಲಿ ನ್ಯಾಯವಿಧಾಯಕ ಸಭೆ — ಕೊಚ್ಚಿ ಸಂಸ್ಥಾನದಲ್ಲಿ ನ್ಯಾಯವಿಧಾಯಕ ಸಭೆಯನ್ನು ಸ್ಥಾಪಿಸುವುದಾಗಿ ಅಲ್ಲಿಯ ರಾಜರ ಹುಕುಂ ಹೊರಟಿದೆ. ಈ ಸಭೆಗೆ ೫೦ಕ್ಕೆ ಕಡಿಮೆಯಾಗದೆ ೬೦ಕ್ಕೆ ಮೀರದೆ ಇರುವ ಮೆಂಬರರು ಇರುವರು. ಇವರ ಪೈಕಿ ೪೦ ಮಂದಿ ಪ್ರಜೆಗಳಿಂದ ಆರಿಸಲ್ಪಡತಕ್ಕವರು. ಸಂಸ್ಥಾನಕ್ಕೆ ಸಂಬಂಧಪಟ್ಟ ಶಾಸನಗಳನ್ನು ವಿರಚಿಸುವುದು, ರಾಜ್ಯಾಡಳಿತೆಯ ಕಾರ್ಯಕ್ರಮಗಳನ್ನು ಕುರಿತು ಪ್ರಶ್ನೆಗಳನ್ನು ಕೇಳುವುದು, ವರ್ಷದ ಜಮಾಖರ್ಚಿನ ಅಂದಾಜು ಪಟ್ಟಿಯನ್ನು ಚರ್ಚಿಸುವುದು ಮುಂತಾದ ಅಧಿಕಾರಗಳು ಈ ಸಭೆಗೆ ಇರುವವು. ದಿವಾನಸಾಹೇಬರು ಈ ಸಭೆಯ ಅಧ್ಯಕ್ಷರಾಗುವರು. ಈ ಸಭೆಯಲ್ಲಿ ಪಾಸು ಆಗುವ ಠರಾವು ಅಥವಾ ಶಾಸನಗಳನ್ನು ಮರಿಸ್ಥಾಪನ ಮಾಡುವ ಅಧಿಕಾರ ಮತ್ತು ಸ್ವತಂತ್ರವಾಗಿ ಆವಶ್ಯಕತೆಗೆ ಅನುಸರಿಸಿ ಹೊರಡಿಸುವ ಹುಕುಂಗಳನ್ನು ಕೊಡುವ ಅಧಿಕಾರಗಳನ್ನು ರಾಜರು ತಮ್ಮ ಕೈಯಲ್ಲಿ ಇಟ್ಟುಕೊಂಡಿರುವರು.

ಬಕ್ಕಿಂಗ್ಹಾಮ್ ಮಿಲ್ಲ್ ಮಜೂರರು — ಮದ್ರಾಸಿನ ಲೇಬರ್ ಯೂನಿಯನ್ ಬಂಧನ್ನು ಉಲ್ಲಂಘಿಸುವ ಈ ಮಿಲ್ಲಿನ ಮಜೂರರಿಗೆ ಆಗಾಗ ಬೋಧನೆ ಕೊಟ್ಟು ಒಡೆದು ಕೊಟ್ಟವನ್ನು ಮಾಡಿದ್ದರಿಂದ, ಈ ಮಜೂರರು ಇಲ್ಲದ ಸಲ್ಲದ ನೆವಗಳನ್ನು ಕಲ್ಪಿಸಿ ಕೆಲಸಕ್ಕೆ ಬಾರದೆ ಮಿಲ್ಲಿನ ಯುರೋಪಿಯನ ಸಮೀಪದ ನಿಮ್ಮ [illegible] ಯತ್ನಿಸಿದರು, ಇವಕ್ಕೆ ಮಿ। ವಾಡಿಯಾ ಎಂಬವರು ಈ ಯೂನಿಯನ್ನಿನ ಪ್ರೆಸಿಡೆಂಟರಾಗಿ ಮಾಡಿದ ಬೋಧನೆಯೇ ಕಾರಣವಾದ್ದರಿಂದ ತಮ್ಮ ಕಾರ್ಖಾನೆಗೆ ಹೇರಳ ನಷ್ಟವಾಯಿತು ಎಂದು ಈ ಕಾರ್ಖಾನೆಯವರು ಸದರಿ ಮಿ। ಬಿ. ಪಿ. ವಾಡಿಯಾ ಎಂಬವರ ಮೇಲೆ ಒಂದು ವ್ಯಾಜ್ಯವನ್ನು ಮದ್ರಾಸು ಹೈಕೋರ್ಟಿನಲ್ಲಿ ಹೂಡಿದ್ದಾರೆ. ಈ ವ್ಯಾಜ್ಯದ ತೀರ್ಮಾನವಾಗುವ ವರೆಗೆ ಸದರಿಯವರು ಈ ಮಜೂರರನ್ನು ಕೆಲಸಕ್ಕೆ ಹೋಗದಂತೆ ತಡೆಸದಿರುವದಾಗಿ ಹೈಕೋರ್ಟಿನಿಂದ ಒಂದು ಇಂಜಂಕ್ಷನ್ ಹುಕುಂ ಹೊರಟಿದೆ. ಈ ಇಂಜಂಕ್ಷನ್ ಅರ್ಜಿಯ ವಿಚಾರದ ಸಮಯದಲ್ಲಿ ಕಂಪೆನಿಯ ಕಡೆಯಿಂದಲೂ ಮಿ। ವಾಡಿಯರ ಕಡೆಯಿಂದಲೂ ಬಹಳ ವಾದಗಳೂ ನಡೆದಿದ್ದವು. ಈ ವಾಡಿಯರು ಕೆಲವು ಸಮಯದ ವರೆಗೆ 'ನ್ಯೂ-ಇಂಡಿಯಾ' ಎಂಬ ಪತ್ರಿಕೆಯ ಸಬ್ ಎಡಿಟರರಾಗಿದ್ದರು. ಮತ್ತು ಮಿಸ್ಸೆಸ್ ಎನ್ನಿಬೆಸೆಂಟರ ರಾಜಕೀಯ, ಆಳವಳಿಗಳಲ್ಲಿ ಮಿ। ಆರುಂಡೇಲರೊಂದಿಗೆ ವಿಶೇಷ ಭಾಗಿಯಾಗಿದ್ದು ಈ ಮೂವರನ್ನು ಲಾರ್ಡ್ ಪೆಂಟಲೆಂಡರ ಆಳ್ವಿಕೆಯ ಕಾಲದಲ್ಲಿ ಮದ್ರಾಸು ಸರಕಾರದವರು ಉಟಕಮಂಡದಲ್ಲಿ ಕೆಲವು ಸಮಯದ ವರೆಗೆ ನಿರ್ಬಂಧದಲ್ಲಿ ಇರಿಸಿದ್ದರು.

ಗ್ಯುಂಟೂರು ಕಾಲೇಜಿನ ವಿದ್ಯಾರ್ಥಿಗಳ ಮುಷ್ಕರ — ಕಳೆದ ೨೫ನೆ ತಾರೀಕಿಗೆ ಅಮೇರಿಕನ್ ಇವೆಂಜಲಿಕಲ್ ಮಿಷ್ಯನ್ ಕಾಲೇಜಿನ ವಿದ್ಯಾರ್ಥಿಗಳು ಕೆಲವರು ಹಿಂದೂ ಹಬ್ಬದ ನಿಮಿತ್ತ ತಮಗೆ ರಜೆ ಕೊಡಬೇಕೆಂದು ಕೇಳಿದ್ದರೂ ಶಾಲಾ ಅಧಿಕಾರಿಗಳು ಒಪ್ಪದ್ದರಿಂದ ಶಾಲೆಗೆ ಬಾರದೆ ನಿಂತುಬಿಟ್ಟರು. ಮರುದಿನ ಇವರಿಗೆ ಭರುವನ್ಸ ವಿಧಿಸಲ್ಪಟ್ಟದ್ದರಿಂದ ವಿದ್ಯಾರ್ಥಿಗಳು ಕ್ಷಮಾಪಣೆ ಬೇಡಬೇಕೆಂದು ಒತ್ತಾಯ ಪಡಿಸಿದ್ದರಿಂದ ಮುಷ್ಕರ ಹಿಡಿದಿದ್ದಾರೆ.

ಜಯಪುರದ ಮಹಾರಾಜರ ಸಹಾಯ — ಇವರು ತಮಗೆ ಬ್ರಿಟಿಷ ಸರಕಾರದಿಂದ ಸೈನ್ಯದ ಖರ್ಚಿಗಾಗಿ ಬರತಕ್ಕ ರೂ. ೩,೨೭೧,೮೮೧ನ್ನು ಯುದ್ಧದ ಖರ್ಚಿಗೆ ತಮ್ಮ ವಂತಿಗೆಯಾಗಿ ವಿನಿಯೋಗಿಸಬೇಕೆಂದು ಬ್ರಿಟಿಷ ಸರಕಾರದವರಿಗೆ ತಿಳಿಸಿರುವರು.

ವರಿಷ್ಟ ಕೌನ್ಸಿಲುಗಳು — ಇಂಡಿಯಾ ಸರಕಾರದಲ್ಲಿ ರಿಫೋರ್ಮ್ ಎಕ್ಟಿನ ಮೇರೆಗೆ ಕಲ್ಪಿಸಿದ ಇಂಡಿಯನ್ ಲೆಜಿಸ್ಲೇಟಿವ್ ಎಸೆಂಬ್ಲಿ ಮತ್ತು ಕೌನ್ಸಿಲು ಒಫ್ ಸ್ಟೇಟ್ ಇವು ಇದೇ ತಿಂಗಳ ೧ನೆ ತಾರೀಕಿನಿಂದ ಅಸ್ತಿತ್ವಕ್ಕೆ ಬಂದಿವೆ ಎಂದು ಇಂಡಿಯಾ ಸರಕಾರದ ಪ್ರಕಟನೆ ಇದೆ.

ಕೌನ್ಸಿಲು ಇಲೆಕ್ಷನ್ — ಮದ್ರಾಸು ಮ್ಯುನಿಸಿಪಲ್ ಕೋರ್ಪೊರೇಶನ ಗಡಿಯೊಳಗಿನ ವೋಟರುಗಳಿಂದ ಚುನಾಯಿಸಲ್ಪಡಬೇಕಾಗಿದ್ದ ಕೌನ್ಸಿಲರು ಮೆಂಬರುಗಳ ಸ್ಥಾನಕ್ಕೆ ಸರ್ ಪಿ. ತ್ಯಾಗರಾಯ ಚೆಟ್ಟಿ (೪,[illegible]) ಮಿ। ಸಿ. ಪಿ. ರಾಮಸ್ವಾಮಿ ಅಯ್ಯರ್ (೪[illegible]), ಡಾ। ಯು. ರಾಮರಾವ್ (೪,೪೦೬) ಮಿ। ಓ. ತಣಿಕಾಚಲ ಚೆಟ್ಟಿ (೪[illegible]) ಇವರು ಆರಿಸಲ್ಪಟ್ಟಿರುವರು. ಮದ್ರಾಸಿನ ವೋಟರರ ಪೈಕಿ ಸೇಕಡಾ [illegible] ಕ್ಕೆ ಮಿಕ್ಕಿ ವೋಟರರು ವೋಟು ಕೊಟ್ಟಿರುವರೆಂದು ತಿಳಿಯುತ್ತದೆ. ಲೆಜಿಸ್ಲೇಟಿವ್ ಎಸೆಂಬ್ಲಿಗೆ [illegible] ವೋಟು ಪಡೆದು ರಾವ ಬಹದ್ದೂರ ಟಿ. ರಂಗಾಚಾರಿಯರು ಆರಿಸಲ್ಪಟ್ಟಿರುವರು.

ತಲ್ಲಿಚ್ಚೇರಿ ಕಚೇರಿಗಳ ಕೆಲಸ ನಿಬಂಧಿ — [illegible] ಕೆಲಸವನ್ನು ನಿಬಂಧಿಯನ್ನು ಹೇಗೆ ಕಡಿಮೆ ಮಾಡಬಹುದು ಎಂದು ಗೊತ್ತು ಹಚ್ಚಲಿಕ್ಕೆ ನೇಮಕವಾದ ಮಿ। [illegible] ಸಾಹೇಬರ ಸೂಚನೆ ಮೇರೆಗೆ ಮದ್ರಾಸು ಸಂಸ್ಥಾನದ ಜಿಲ್ಲೆಗಳಲ್ಲಿ ೧೯೫ ಮಂದಿ ಗುಮಾಸ್ತರು ಮತ್ತು ಜವಾನರ ಸಂಖ್ಯೆಯನ್ನು ಕಡಿಮೆ ಮಾಡುವರು. ಆಗತ್ಯ ಕೆಲಸವಿದ್ದಾಗ ವೇತನ ಬದಲಾಗಿ ದಿನ ಕೂಲಿ

ಯಲ್ಲಿ ಕಾರ್ಖಾನೆಗಳನ್ನು ತೆರೆಯುವ ಕ್ರಮವನ್ನು ಮುಖ್ಯವಾಗಿ [illegible] ಮುಂತಾದ ವಿಚಾರ ಇದೆ.

ಮದ್ರಾಸಿನ ಮುಸಲ್ಮಾನ ಕಾಲೇಜು — ಇದರ ವಿದ್ಯಾರ್ಥಿಗಳು [illegible] ಒಂದ್ ಹಜ್ರತ್ ನಾಸಿರ್‌ಹುಸೇನ [illegible] ಮುಸ್ಲೀಮರ ಹುಸೇನ ಸಾಹೇಬರ ಅಕಸ್ಮಾತ್ ಮರಣದ ಬಗೆಯಿಂದ ಅತಿ ವ್ಯಸನಿಯನ್ನು [illegible] ಡಿಸೆಂಬರ್ ೨ನೆ ತಾರೀಕಿಗೆ ರಜೆ ಕೇಳಿದಾಗ ಪ್ರಿನ್ಸಿಪಾಲರು ಕೊಡದಿದ್ದುದರಿಂದ ವಿದ್ಯಾರ್ಥಿಗಳೆಲ್ಲರು ಗೈರಹಾಜರಾದರು. ಸಾಯಂಕಾಲ ಸಯ್ಯದ್ ಇಮಾಮ ಎಂಬ ವಿದ್ಯಾರ್ಥಿಯ ಅಧ್ಯಕ್ಷತೆಯಲ್ಲಿ ಸಭೆ ಸೇರಿ ತಮ್ಮ ದುಃಖವನ್ನು ಸೂಚಿಸಿ ಒಂದು ಠರಾವು ಮಾಡಿ ಈ ವಿದ್ಯಾರ್ಥಿಗಳು ಆ ಕುರಿತು ಗತಿಸಿದವರ ಸಂತತಿಯವರಿಗೆ ತಂತಿ ಮೂಲಕ ತಿಳಿಸಿದರು.

ಪಂಡಿತರೂ ಮಹನ್ನರಗಳೂ — ಸರಕಾರಿ ವಿದ್ಯಾಶಾಲೆಗಳಲ್ಲಿ ಕೆಲಸ ನೋಡುತ್ತಿದ್ದ ಪಂಡಿತರೂ ಮುನ್ಷಿಗಳೂ ಸಭೆ ಸೇರಿ ತಮ್ಮ ಕೆಲವು ಪ್ರತಿನಿಧಿಗಳನ್ನು ಮಿ। ಡಿರೆಕ್ಟರ ಸಾಹೇಬರ ಬಳಿಯಲ್ಲಿ ಕಳುಹಿಸಿ ತಮ್ಮ ಸಂಬಳದ ದರಗಳನ್ನು ಕುರಿತು ೨-೧೨-'೨೦ಕ್ಕೆ ಬಾಯ್ದರೆ ಮನವಿ ಮಾಡಿದರು.

ಅಲ್ಲಹಾಬಾದದಲ್ಲಿ ರಾಷ್ಟ್ರೀಯ ಶಾಲೆ — ಇಲ್ಲಿ ನೂತನವಾದ ರಾಷ್ಟ್ರೀಯ ಶಾಲೆಯ ಪ್ರವೇಶವು ಮಹಾತ್ಮಾ ಗಾಂಧಿಯವರ ಅಧ್ಯಕ್ಷತೆಯಲ್ಲಿ ನಡೆಯಿತು.

ಒಂದು ತಿಂಗಳ ಶಿಶುವಿನ ಸುದ್ದಿ — ಧಾರವಾಡ ಜಿಲ್ಲಾ ಹಿರೇಕೆರೂರು ತಾಲೂಕು ಪೈಕಿ ಹಾದ್ರಿಹಳ್ಳಿ ಎಂಬ ಗ್ರಾಮದಲ್ಲಿ ರಾ. ಗುರು ಬಸವಯ್ಯನವರ ಪುತ್ರಿಯ ಗರ್ಭದಿಂದ ಜನಿಸಿದ ಗಂಡು ಶಿಶುವು ಹುಟ್ಟಿದ ಒಂದೆ ತಿಂಗಳಲ್ಲಿ ಮಾತುಗಳನ್ನಾಡುತ್ತಿರುವುದು.

ಸರ್. ಎಂ. ವಿಶ್ವೇಶ್ವರಯ್ಯನವರು — ಜಪಾನ್, ಅಮೇರಿಕಾ, ಯುರೋಪ ದೇಶಗಳ ಸಂಚಾರವನ್ನು ಮುಗಿಸಿಕೊಂಡು ಕಳೆದ ತಾ. ೨೮ಕ್ಕೆ ಬೆಂಗಳೂರನ್ನು ಸೇರಿರುವರು.

ಶಿರ್ಶಿ — ಯಾವತ್ತೂ ವ್ಯಾಪಾರಸ್ಥರ ಸಭೆಯು ಇಲ್ಲಿಯ ಪ್ರಸಿದ್ಧ ದಲಾಲ ತಿಪ್ಪಲಿಂಗಪ್ಪ ಪಕೀರಪ್ಪ ಮುಂಡ್ಲಿ ಇವರ ಅಧ್ಯಕ್ಷತೆ ಕೆಳಗೆ ಕೂಡಿ ಅತಿಶಯ ಅವಶ್ಯವುಳ್ಳ ಅಂದರೆ ಕಾಗದ, ಪೆನ್ನು, ಬೆಂಕಿಪೆಟ್ಟಿಗೆ ವಗೈರೆ ಬಿಟ್ಟು ಬಾಕಿ ಎಲ್ಲ ಪರದೇಶೀ ವಸ್ತುಗಳಿಗೆ ವಿಶೇಷವಾಗಿ ಬಟ್ಟೆ ಮತ್ತು ಪರದೇಶಿ ಸಕ್ಕರೆಗೆ ಪ್ರತಿಜ್ಞಾಪೂರ್ವಕ ಬಹಿಷ್ಕಾರವು ಸರ್ವಾನುಮತದಿಂದ ಪಾಸಾಯಿತು.

ಫರ್ಗುಸನ್ ಕಾಲೇಜು, ಪೂನೆ — ಇಲ್ಲಿಯ ವಿದ್ಯಾರ್ಥಿಗಳು ಡಿಸೆಂಬರ ೨ನೆ ತಾರೀಕಿಗೆ ಸಭೆ ಸೇರಿ ರಾಷ್ಟ್ರೀಯ ಶಿಕ್ಷಣವು ತಮ್ಮ ಕಾಲೇಜಿನಲ್ಲಿಯೆ ಈಗಿನ ಅಧ್ಯಾಪಕರಿಂದಲೆ ಸಿಗಬೇಕು, ಆದರೆ ಈ ವಿಷಯದಲ್ಲಿ ಕಾಲೇಜಿನ ಅಧಿಕಾರಿಗಳ ಮತ್ತು ತಮ್ಮ ರಕ್ಷಕರ ಅನುಮತಿಯನ್ನು ಈ ರಜಾದಿನಗಳಲ್ಲಿ ಪಡೆದು ಅನಂತರ ಮುಂದರಿಸಬೇಕು ಎಂದು ಠರಾವು ಮಾಡಿರುವರು.

ಟೆಲಿಫೋನ್ ಸರ್ವಿಸ್ — ಮುಂಬಯಿಯಿಂದ ಸೂರತಿಗೆ ಸರಕಾರಿ ಟೆಲಿಫೋನ್ ಚಲಾವಣೆ ಇದೇ ಡಿಸೆಂಬರ ೧ನೆ ತಾರೀಕಿನಿಂದ ಪ್ರಾರಂಭಿಸುವುದು. ಅದರ ಮೂಲಕ ೩ ಮಿನಿಟು ಮಾತಾಡಲಿಕ್ಕೆ ರೂ. ೧-೧೨-೦ ಫೀಸು ನಿರ್ಣಯಿಸಿದೆ.

ರೈಲ್ವೆ ಮೈಲ್ ಸರ್ವಿಸ್ ಎಸೋಸಿಯೇಶನ್ — ಈ ಸರ್ವಿಸಿಗೆ ಈಚೆಗೆ ತಯಾರಾದ ಸ್ಕೀಮು ಅಸಮಾಧಾನಕರವಾಗಿದೆ, ಹೆಚ್ಚು ಸರ್ವಿಸುಳ್ಳವರಿಗೆ ಅದು ಅನ್ಯಾಯ ಮಾಡುತ್ತಿದೆ, ಸರ್ವಿಸು ಮೇರೆಗೆ ಸಂಬಳದ ದರಗಳು ಏರುತ್ತ ಬರಬೇಕು ಎಂದು ಡಿರೆಕ್ಟರ್ ಜನರಲರಿಗೆ ಮತ್ತು ಸರ್ ಜೋರ್ಜ ಬಾರ್ನೆಸ್ (ವರಿಷ್ಠ ಕೌನ್ಸಿಲಿನ ಮೆಂಬರ)ರಿಗೂ ಈ ಎಸೋಸಿಯೇಶನ್ನಿನವರು ತಂತಿ ಕಳುಹಿದ್ದಾರೆ.

ಒವರ್ಸೀ ಅಕ್ಕಿಯ ಕಂಟ್ರೋಲ್ — ಹಿಂದುಸ್ಥಾನಕ್ಕೆ ಬರ್ಮಾದಿಂದ ಅಕ್ಕಿ ಬರುವುದಕ್ಕೆ ಇದ್ದ ನಿರ್ಬಂಧವನ್ನು ಇದೇ ಬರುವ ಜನವರಿ ೧ನೇ ತಾರೀಕಿನಿಂದ ತೆಗೆದು ಹಾಕಿದೆ. ಆದರೆ ಅದೇ ಅಕ್ಕಿಯನ್ನು ಹಿಂದುಸ್ಥಾನದಿಂದ ಪುನಃ ಬೇರೆ ದೇಶಕ್ಕೆ ಸಾಗಿಸುವುದಕ್ಕೆ ಲೈಸನ್ಸು ಪಡೆಯಬೇಕಾಗುವುದು ಎಂದು ಡೆಲ್ಲಿಯಿಂದ ಒಂದು ಪ್ರಕಟನೆ ಹೊರಟಿದೆ.

ಮಲಬಾರ ತಾಲೂಕು ಬೋರ್ಡುಗಳ ವಿಭಜನೆ — ಪಾಲಘಾಟ ಮತ್ತು ಮಲ್ಲಾಪುರಂ ಈ ಎರಡು ತಾಲೂಕು ಬೋರ್ಡುಗಳನ್ನು ಪಾಲಘಾಟು ಪೊನ್ನಾನಿ, ಏರನಾಡ, ವಲವನಾಡ ಎಂಬ ನಾಲ್ಕು ತಾಲೂಕು ಬೋರ್ಡುಗಳಾಗಿ ವಿಭಾಗಿಸಲಾಗುವುದು. ಪೊನ್ನಾನಿ ತಾಲೂಕು ಬೋರ್ಡಿಗೆ ೨೧ ಮೆಂಬರುಗಳು, ಈ ಪೈಕಿ ೧೪ ಜನರಿಂದ ಚುನಾವಣೆಯಾಗತಕ್ಕವರು. ಉಳಿದ ಮೂರು ತಾಲೂಕು ಬೋರ್ಡುಗಳಿಗೆ ಪ್ರತಿಯೊಂದಕ್ಕೆ ೧೨ ಚುನಾಯಿಸಿದ ಮೆಂಬರರು ಮತ್ತು ೬ ಸರಕಾರದವರಿಂದ ನೇಮಕವಾಗುವ ಮೆಂಬರರು ಬೇಕಾಗುವುದು.

ಖಾಲ್ಸಾ ಕಾಲೇಜು, ಲಾಹೋರು — ಇದರ ಆಡಳಿತೆಯ ಸಭೆಯ ಅಧಿವೇಶನದಲ್ಲಿ ಆಡಳಿತ ನಿಬಂಧನೆಗಳನ್ನು ಬದಲಾಯಿಸಿ ಈ ಮೊದಲು ಅದರ ಮೇಲೆ ಸರಕಾರದ ಪ್ರತಿನಿಧಿಗಳಿಗೆ ಇದ್ದ ಅಧಿಕಾರವನ್ನು ತೆಗೆದು ಹಾಕಲಾಯಿತು. ಇದು ಪಂಜಾಬು ಲೆಫ್ಟಿನೆಂಟ ಗವರ್ನರ್ ಸಾಹೇಬರ ಅನುಮತಿಯಿಂದ ಆಯಿತು.

ಸರಕಾರಿ ಪೆನ್ಶನರುಗಳು — ಸಿವಿಲ್ ಪೆನ್ಶನರುಗಳಿಗೆ ಸಿಗುವ ಪೆನ್ಶನುಗಳನ್ನು ಹೆಚ್ಚಿಸುವುದಕ್ಕೆ ಇಂಡಿಯಾ ಸೆಕ್ರೆಟರಿಗಳು ಒಪ್ಪಿ ಹುಕುಂ ಇಂಡಿಯಾ ಸರಕಾರದವರಿಗೆ ಬಂದಿದೆ. ಕಡಿಮೆ ದರದಲ್ಲಿ ಪೆನ್ಶನು ಪಡೆಯುವಂಥವರ ವಿಷಯವಾಗಿ ಮಾತ್ರ ಇವರಲ್ಲಿ ಸೂಚನೆಗಳಿವೆ ಎಂದು ಪ್ರಕಟನೆ ಇದೆ. ಇದರ ಸಂಪೂರ್ಣ ವಿವರಣೆಯು ಇನ್ನೂ ಗೊತ್ತಾಗಲಿಲ್ಲ.

ಮುಂಬಯಿ ಯೂನಿವರ್ಸಿಟಿ — ಈ ಯೂನಿವರ್ಸಿಟಿಯವರು ಲೋರ್ಡ ಸಿಂಹ, ಸರ್. ನಾರಾಯಣ ಚಂದಾವರಕರ, ಸರ್. ಚಿಮನ್‌ಲಾಲ ಸೆಟಲವಡರಿಗೆ ಎಲ್. ಎಲ್. ಡಿ. (ಡಾಕ್ಟರ್ ಒಫ ಲೋ)ಯ ಬಿರುದನ್ನು ಬಹುಮಾನಾರ್ಥವಾಗಿ ಕೊಟ್ಟಿರುವರು.

ವೋಟುಗಳ ವಿಚಾರ.

ನೋನ್ ಮಹಮ್ಮದನ್ ಸೀಟುಗಳ ವೋಟಿನ ಸಂಖ್ಯೆ ಈ ಕೆಳಗೆ ಕೊಟ್ಟಿರುವೆವು.

ಜಿಲ್ಲೆಯ ಹೆಸರು.	ವೋಟು ಕೊಟ್ಟವರ ಸಂಖ್ಯೆ.	ವೋಟರರ ಸಂಖ್ಯೆ.
೧. ಅನಂತಪುರ	೧೦,೫೪೪	೨೩,೧೯೯
೨. ಉತ್ತರ ಆರ್ಕಾಡು	೭,೭೪೭	೫೯,೬೮೬
೩. ಗೋದಾವರಿ	೯,೯೫೦	೪೪,೨೮೧
೪. ಕರ್ನೂಲು	[illegible]	[illegible]
೫. ಬಳ್ಳಾರಿ	೧೪,೦೪೭	[illegible]
೬. ಗಂಜಾಂ	[illegible]	[illegible]
೭. ಚೆಂಗಲ್ಪಟ್ಟು	[illegible]	[illegible]
೮. ಕಡಪಾ	[illegible]	[illegible]
೯. ಮಧುರೆ	೧೦,೦೦೪	೬೨,೪೪೯
೧೦. ಸೇಲಂ ಜಿಲ್ಲೆ	೯,೧೧೩	[illegible]
ಸೇಲಂ ಮುನ್ಸಿಪಾಲಿಟಿ	೬೯೮	[illegible]
೧೧. ದಕ್ಷಿಣ ಆರ್ಕಾಡು	೧೩,೭೮೨	[illegible]
೧೨. ಚಿತ್ತೂರು	೧೧,೫೨೨	[illegible]
೧೩. ಕೊಯಮುತ್ತೂರು	೧೩,೨೫೭	[illegible]
೧೪. ಗುಂಟೂರು	[illegible]	[illegible]
೧೫. ನೆಲ್ಲೂರು	[illegible]	[illegible]
೧೬. ತಿನ್ನವೆಲ್ಲಿ	೧೦,೬೧೪	[illegible]
೧೭. ಮದ್ರಾಸು	೮,೭೦೦	[illegible]
೧೮. ದಕ್ಷಿಣ ಕನ್ನಡ	೪೩೬೬	೨೧,೧೨೧

ದಕ್ಷಿಣಕನ್ನಡ.

ಸ್ವೀಕಾರ — ಮಂಗಳೂರು ಬಾಸೆಲ್ ಮಿಶನ ಪ್ರೆಸ್ಸಿನವರು [illegible] ೧೯೨೧ನೆ ಡಿಸೆಂಬರ್ ೩೧ನೆ ತಾರೀಕಿಗೆ ಅಂತ್ಯವಾಗುವ ವರ್ಷದ ಪಂಚಾಂಗ ನಮ್ಮ ಬಳಿಗೆ ಬಂದದ್ದನ್ನು ಆದರಪೂರ್ವಕವಾಗಿ ಸ್ವೀಕರಿಸಿರುವೆವು. ಇದರ ವಿಮರ್ಶೆಯನ್ನು ಸ್ಥಳಾಭಾವದ ದೆಸೆಯಿಂದ ಈ ಸಲ ಪ್ರಕಟಿಸಲು ಸಾಧ್ಯವಾಗಲಿಲ್ಲ. (ಪತ್ರಕರ್ತ.)

೨. ಲಿಂಗಸೂರ ಪ್ರಿಂಟಿಂಗ್ ಮತ್ತು ಪಬ್ಲಿಶಿಂಗ್ ಕಂಪೆನಿ ಲಿಮಿಟೆಡ್ ಬೆಂಗಳೂರ ಸಿಟಿ ಇವರಿಂದ ಕಳುಹಲ್ಪಟ್ಟ ೧೯೨೧ನೇ ಇಸವಿಯ ಪಾಕೆಟ್ ಡೈರಿಯನ್ನು ಆದರ ಪೂರ್ವಕ ಸ್ವೀಕರಿಸಿದ್ದೇವೆ. ಇದು ಫುಲ್ಸ್‌ಕೇಪ ೩ ಸೈಜಿನ ಪ ನ್ನಾಂಗದ್ದಾಗಿ, ದಪ್ಪನಾದ ಕಾಗದ ಮತ್ತು ಚಲಿಕೊ ಬೈಂಡಿಂಗಿನಿಂದ ತಯಾರಿಸಿದ್ದು ಪೆನ್ಸಿಲ್‌ನಿಂದ ಸಹ ಕೂಡಿರುತ್ತದೆ. ಕ್ರಯ ರೂ. 1—0—0.

ಬೈಂದೂರು — ಇದೇ ಕಳೆದ ನವೆಂಬರ ತಾ. ೩೦ನೇ ದಿವಸ ಬೈಂದೂರು ಪೋಲಿಂಗ್ ಸ್ಟೇಶನನಲ್ಲಿ ಕೌನ್ಸಿಲ್ ಇಲೆಕ್ಷನ್ ಕೆಲಸ ನಡೆದಾಗ್ಗೆ — ಈ ಸ್ಟೇಶನಿನ ಸರಹದ್ದಿಗೆ ಸೇರಿದ ಹಿಂದೂ ಜನರಲ್ ವೋಟರರು ೩೪೮ ಜನರ ಪೈಕಿ ಯಾರೂ ವೋಟು ಕೊಡಲಿಕ್ಕೆ ಬರಲೇ ಇಲ್ಲ. ಕುಂದಾಪುರ ಸ್ಟೇಶನಿಗೆ ಸೇರಿದವರಾಗಿದ್ದು, ಪ್ರಸ್ತುತ ಬೈಂದೂರು ಡಿ. ಪಿ. ಇನ್ಸ್‌ಪೆಕ್ಟರರು ಮಾತ್ರ ತಮ್ಮ ಒಂದು ವೋಟು ಕೊಟ್ಟು ಪೆಟ್ಟಿಗೆಯು ಖಾಲಿಯಾಗದಂತೆ ಮಾಡಿರುವರು. ಕ್ರಿಶ್ಚಿಯನ್ ಓಟರರು ೩ ಜನರ ಪೈಕಿ ೨ ಜನರು ವೋಟು ಕೊಟ್ಟಿದ್ದಾರೆ. ಅವರು ಈ ಬೈಂದೂರು ಮೂಲ ನಿವಾಸಿಗಳಲ್ಲ. ಒಬ್ಬರು ಇಲ್ಲಿಯ ಸಬ್ ರಿಜಿಸ್ಟ್ರಾರರು. ಇನ್ನೊಬ್ಬರು ಇಗರ್ಜಿ ಗುರುಗಳು. ಇವರಿಬ್ಬರು ಉಡುಪಿ ತಾಲೂಕಿನವರು.

ಬೈಂದೂರು ಡಿವಿಜನಿನಲ್ಲಿ ೩ ಕತೆ ಇಲೆಕ್ಷನ್ ಆದ್ದರಿಂದ ಹಿಂದೂ ವೋಟರರ ಸಂಖ್ಯೆ ೧೯೯ರಲ್ಲಿ ೪ ಜನರು ಮಾತ್ರ ವೋಟು ಕೊಟ್ಟಂತಾಯಿತು. ಕ್ರಿಶ್ಚಿಯನ್ ವೋಟರರು ೭ರಲ್ಲಿ ೫ ಜನರು ಕೊಟ್ಟಂತಾಯಿತು. ಈ ಡಿವಿಜನಿನಲ್ಲಿ ಎಲ್ಲಾ ಜಾತಿಯ ಓಟರರು ೯೭೭ರಲ್ಲಿ ಸುಮಾರು ೭೦೦ ಜನರು ಅಸಹಕಾರಿತೆಯ ಘೋಷಣೆಗೆ ಮನ್ನಣೆ ಮಾಡಿರುತ್ತಾರೆ.

ಕಿರಿಮಂಜೇಶ್ವರ — ಇಲ್ಲಿಯ ಜನರಲ್ ವೋಟರು ೧ ೯೯ ಜನರ ಪೈಕಿ ಒಬ್ಬರೇ ಒಬ್ಬರು (ಆಧವೂ ಗ್ರಾಮದ ಪಟೇಲರು) ಮಾತ್ರ ವೋಟು ಕೊಟ್ಟಿದ್ದಾರೆ. ಬೇರೆ ವೋಟರರು ಯಾರೂ ಬರಲಿಲ್ಲ. ಕ್ರಿಶ್ಚಿಯನರು ೪೨ ಪೈಕಿ ೩ ಜನರು ಮಾತ್ರ ವೋಟು ಕೊಟ್ಟಿದ್ದಾರೆ.

ಕೊಲ್ಲೂರು — ಇಲ್ಲಿಯ ೧೭೬ ಜನ ವೋಟರ ಪೈಕಿ ೨ ಜನರು ಮಾತ್ರ ವೋಟು ಕೊಟ್ಟಿದ್ದಾರೆ. ಬೇರೆ ಯಾರೂ ವೋಟು ಕೊಡಲಿಲ್ಲ.

ಹೆರಿಂಜಾಲು — ಕಳೆದ ನವೆಂಬರ ತಾ. ೨೮ನೇ ಆದಿತ್ಯವಾರ ದಿವಸ ಹೆರಿಂಜಾಲು, ಕಾಲ್ತೋಡು, ಹೇರೂರು ಈ ೩ ಗ್ರಾಮಗಳ ದೊಡ್ಡ ದೊಡ್ಡ ಪೈಕಿಯಿಂದಲೂ ಬಡಜನರಿಂದಲೂ ಕೂಡಾ ೪೦೦ಕ್ಕು ಮಿಗಿಲಾಗಿ ಹೇರೂರು ಗ್ರಾಮದ ಶ್ರೀ ಮಹಾಲಿಂಗೇಶ್ವರ ದೇವಸ್ಥಾನದ ರಥಬೀದಿಯಲ್ಲಿ ಒಂದು ಮಹಾ ಸಭೆಯು ಮ. ರಾ। ರಾ। ಕಾಲ್ತೋಡ ನಾಗಪ್ಪ ಮೇರ್ಟರ ಅಧ್ಯಕ್ಷತೆಯಲ್ಲಿ ಜರಗಿತು. ಈ ಮಹಾಸಭೆಗೆ ಕುಂದಾಪುರ ತಾಲೂಕ ಬೋರ್ಡ ಮೆಂಬರರಾದ ಮ। ರಾ। ರಾ। ಬೈಂದೂರ ಶಂಕರ ಹೊಳ್ಳರು ಮ। ರಾ। ರಾ। ಎಡ್ತರೆ ಸೂರಪ್ಪ ಸೆಟ್ಟಿ, ಮ। ರಾ। ರಾ। ಶಿರೂರು ನಾಗೇಶ ರಾಯರು, ಮ। ರಾ। ರಾ। ಬಿಜೂರು ಸುಬ್ಬಪ್ಪಯ್ಯನವರು ಮೊದಲಾದ ಅನೇಕ ಜನ ಮುಖಂಡರು ಹಾಜರಿದ್ದರು. ಕೈ ತಪ್ಪ ಇಲಾಖೆಯವರು ಇಟ್ಟ ನಿರ್ಬಂಧ ಕಾನೂನುಗಳಿಂದ ಜನರಿಗೆ ಉಂಟಾದ ಸಂಕಷ್ಟಗಳ ವಿಷಯ ಚಳೋ ಭಾಷಣಗಳಾದವು. ಮ। ರಾ। ರಾ। ಬಿಜೂರು ಸುಬ್ಬಪ್ಪಯ್ಯನವರು ತಂದ ಠರಾವಿನಂತೆ ಈ ಸಭೆಗೆ 'ವನಮುಖ ನಿವಾರಿಣಿ' ಯೆಂಬ ಒಂದು ಸಂಘವೆಂತ ಹೆಸರಿಡಲಾಯಿತು. ಈ ಸಂಘಕ್ಕೆ ಸೇರಿದ ಹೆರಿಂಜಾಲ ಕಾಲ್ತೋಡು ಹೇರೂರು ಮೊದಲಾದ ಗ್ರಾಮಗಳಲ್ಲಿ ಅಲ್ಲಲ್ಲಿಯ ಗ್ರಾಮಗಳಲ್ಲಿ ಇವ ಪ್ರತ್ಯಪ್ರತ್ಯೇಕ ಯೋಗ್ಯತೆನ್ನು ಆರಿಸಿ ಆಯಾಯ ಗ್ರಾಮಗಳಲ್ಲಿ ಒಂದೊಂದು ಸಂಘವನ್ನು ಸ್ಥಾಪಿಸಬೇಕೆಂತ ನಿಶ್ಚಯಿಸಲಾಯಿತು. ಆಯಾಯ ಗ್ರಾಮಗಳಲ್ಲಿರುವ ಪ್ರತಿಯೊಬ್ಬ ಮನುಷ್ಯನು ಆಯಾಯ ಸಂಘಕ್ಕೆ ಒಳಪಟ್ಟವನಾಗಿರಬೇಕೆಂತಲೂ, ಸ್ವ. ಮೋದು ಸಂಘವು ಬೈಂದೂರಲ್ಲಿ ಸ್ಥಾಪಿತವಾದ 'ವನಮುಖ ನಿವಾರಿಣಿ ಸಂಘ'ಕ್ಕೆ ಒಳಗಾಗಿರಬೇಕೆಂತಲೂ, ನಾಳೆ ಬರುವ ಡಿಸೆಂಬರ ೫ನೇ ತಾರೀಕಿಗೆ ಬೈಂದೂರಲ್ಲಿ ಜರಗಿಸುವ ಆ ಮಹಾಸಭೆಗೆ ಎಲ್ಲಾ ಗ್ರಾಮಸ್ಥರು ಹೋಗಬೇಕೆಂತಲೂ ನಿರ್ಣಯ ಮಾಡಲಾಯಿತು. ಈ ಸಂಘಕ್ಕೆ ೧೩ ಗ್ರಾಮಗಳು ಸೇರಲ್ಪಟ್ಟಿವೆ. ಅನಂತರ ಬಂದ ಸಭಿಕರೆಲ್ಲರಿಗೂ ಅಧ್ಯಕ್ಷರು ಧನ್ಯವಾದವನಿತ್ತು ಪಾನಸುಪಾರಿ ಮೊದಲಾದವುಗಳನ್ನು ಅರ್ಪಿಸಿ ಸಭೆ ವಿಸರ್ಜನೆ ಮಾಡಲಾಯಿತು.

ಸುರತ್‌ಕಲ್ — ಇಲ್ಲಿ ವಾಸವಾಗಿದ್ದ ಚೇಳ್ಯಾರು ಬೋರ್ಡ ಶಾಲೆಯ ಉಪಾಧ್ಯಾಯರಾಗಿರುವ ರಾ। ನರಸಿಂಹ ನ್ಯಾಕರ ಮಗ ಸುಮಾರು ೨೦ ವರ್ಷ ಪ್ರಾಯದ ದಯಾನಂದ ನ್ಯಾಕನೆಂಬ ತರುಣನು ತಾ. ೨೯—೧೧—೧೯೨೦ನೇ ಸೋಮವಾರ ಸಂಜೆಯಲ್ಲಿ ತನ್ನ ಗೆಳೆಯನ ಮನೆಗೆಂದು ಇಲ್ಲಿಯ ಬ್ಲೋಕಲ್‌ಫಂಡ್ ಬಂಗ್ಲೆಯ ಹಿಂದು ಗಡೆಯಿಂದ ಹೋಗುವಾಗ ದಾರಿಯಲ್ಲಿ ಮುಳ್ಳುಗಳು ಬೆಳೆದಿರುವ ವ್ಯವಧಾನದಲ್ಲಿದ್ದ ಬಾವಿಯನ್ನು ಕಾಣದೆ ಮೊಣಕಾಲು ತುಂಬ ನೀರಿರುವ ಹಾಳು ಬಾವಿಗೆ ಬಿದ್ದನು. ಆ ದಾರಿಯಲ್ಲಿ ಹೆಚ್ಚಾಗಿ ಜನರ ಚಲಾವಣೆ ಇಲ್ಲದ್ದರಿಂದ ಇವನನ್ನು ಯಾರೂ ನೋಡಲಿಲ್ಲ. — ಆತನು ಮೇಲೇರುವುದಕ್ಕೆ ಐದು ದಿನಗಳ ಪರಿಯಂತರ ಸಾಧಿಸುತ್ತಾ ಬಾವಿಯಲ್ಲೇ ಇದ್ದು ಕೊನೆಗೆ ತಾ. ೫—೧೨—೨೦ನೇ ಆದಿತ್ಯವಾರ ಬೆಳಿಗ್ಗೆ ದೈವಕೃಪೆಯಿಂದ ಬಹಳ ಪ್ರಯತ್ನಪಟ್ಟು ಮೇಲೇರಿ ಬಂದ. ಈ ಸಮಾಚಾರವು ಆತನು ಮೇಲೇರಿದ ನಂತರ ಸರ್ವರಿಗೂ ತಿಳಿಯಬಂತು. ಇದು ಆತನ ತಂದೆಯ ಪುಣ್ಯವಲ್ಲದೆ ಬೇರೇನೂ ಅಲ್ಲ. ಆದುದರಿಂದ ಪ್ರತಿ ಒಬ್ಬರು ತಮ್ಮ ಸ್ಥಳದಲ್ಲಿರುವ ಬಾವಿಗಳಿಗೆ ಆವರಣವನ್ನು ಮಾಡಿಸುವುದು ಅತೀ ಅಗತ್ಯವೆಂದು ಇದರಿಂದ ತಿಳಿದು ಬರುತ್ತದೆ.

[illegible]

... ನೂರ ... ಗಂ ... ತ್ತಂಡೂರು, ತಿರುಮಣೀಶ್ವರ, ಕೊಲ್ಲೂರು, ... ಹುಬ್ಬಳ್ಳಿ ...

[illegible]

... ವಿದ್ಯಾರ್ಥಿ ಸಹಾಯಕ ಫಂಡ್ ...

ಸ್ವದೇಶಾಭಿಮಾನಿ.

ಶಕ ೧೮೪೩ ಕಾರ್ತಿಕ ಬ ೩೦ ಶುಕ್ರವಾರ.

ಲೋರ್ಡ ಸಿಂಹರ ಉದ್ಗಾರಗಳು.

ಲೋರ್ಡ ಸಿಂಹರು ಮುಂಬಯಿ ಯುನಿವರ್ಸಿಟಿಯು ಎಲ್ ಎಲ್ ಡಿ. ಎಂಬ ಬಹುಮಾನದ ಪದವಿಯನ್ನು ಸ್ವೀಕರಿಸುವ ಉದ್ದೇಶದಿಂದ ಮುಂಬಯಿಗೆ ಬಂದಿದ್ದರು. ಲೋರ್ಡ ಸಿಂಹರು ಸ್ವತಃ ಕಾಯಿದೆ ಪಂಡಿತರು, ಬುದ್ಧಿಮತ್ತೆಯುಳ್ಳವರು, ರಾಜಕಾರಣ ಧುರೀಣರು ಮತ್ತು ಸಾಮರ್ಥ್ಯವಂತರು ಲೋರ್ಡ ಸಿಂಹರಲ್ಲಿ ಇವೇ ಎಂದಲ್ಲ, ಇನ್ನೂ ಅನೇಕ ಗುಣಗಳು ಅಧಿಷ್ಠಿತವಾಗಿವೆ ಎಂಬುದಕ್ಕೆ ಯಾವ ಸಂದೇಹವೂ ಇಲ್ಲ ಅವರು ಈ ಮೇರೆಗೆ ಇಂಥ ಗುಣಸಮುಚ್ಚಯದಿಂದ ಕೂಡಿದವರಾಗಿದ್ದ ಕಾರಣ ಈ ಹೊತ್ತು ಗವರ್ನರಿಯಂಥ ಉಚ್ಚ ಬಹುಮಾನದ ಸ್ಥಾನವನ್ನು ಹೊಂದಿದ್ದಾರೆ ಅವರು ಹೊಂದಿರುವ ಇದು ವರೆಗಿನ ಸ್ಥಾನಗಳೆ ಅವರ ಯೋಗ್ಯತೆಯ ಸಾಕ್ಷಿಯನ್ನು ಕೊಡುತ್ತವೆಂದು ಹೇಳಿದರೆ ಅದು ಅತಿಶಯೋಕ್ತಿಯ ಮಾತಾಗಲಿಕ್ಕಿಲ್ಲ ಹಿಂದಿಗಳಲ್ಲಿ ಮೊದಲನೆ ಎಗ್ಝಿಕ್ಯುಟಿವ್ ಕೌನ್ಸಿಲರ್, ಮೊದಲನೆ ಅಂಡರ್ ಸೆಕ್ರೆಟರಿ, ಮೊದಲನೆ ಲೋರ್ಡ ಹಾಗು ಮೊದಲನೆ ಗವರ್ನರ ಈ ಮೇರೆಗೆ ಅನೇಕ ಉಚ್ಚಸ್ಥಾನಗಳನ್ನು ಪಡೆದಿರುವ ಲೋರ್ಡ ಸಿಂಹರಿಗೆ ಮುಂಬಯಿ ಯೂನಿವರ್ಸಿಟಿಯು ತನ್ನ ಗುಣಗ್ರಾಹಕತೆಯನ್ನು ವ್ಯಕ್ತಪಡಿಸಲು ಎಲ್ ಎಲ್ ಡಿ.ಯ ಬಹುಮಾನದ ಪದವಿಯನ್ನು ಕೊಟ್ಟರೆ ಅದು ಲೋರ್ಡ ಮಹಾಶಯರ ಗುಣಕ್ಕೂ ಮುಂಬಯಿ ಯುನಿವರ್ಸಿಟಿಯ ಗುಣಜ್ಞತೆಗೂ ಅನುರೂಪವಾದ ವಿಷಯವೆ ಸರಿ ಯುನಿವರ್ಸಿಟಿಯಿಂದ ಸಮರ್ಪಿಸಲ್ಪಡುವ ಪದವಿಯನ್ನು ಸ್ವೀಕರಿಸುವುದಕ್ಕಾಗಿ ಲೋರ್ಡ ಮಹಾಶಯರು ಕಳೆದ ವಾರ ಮುಂಬಯಿಗೆ ಬಂದಿದ್ದರು

ಅವರು ಮುಂಬಯಿಗೆ ದಯಮಾಡಿಸಿರುವ ಈ ಸಂದರ್ಭವನ್ನು ಸಾಧಿಸಿ ಮುಂಬಯಿಯ ಲಿಬರಲ್ ಎಸೋಸಿಯೇಶನಿನವರು ಹಾಗು ಪ್ರುಹೆಯ ಡೆಕ್ಕಾನ ಸಭೆಯವರು ಲೋರ್ಡ ಮಹಾಶಯರಿಗೆ ಒಂದು ಔತಣವನ್ನು ಕೊಟ್ಟರು ಈ ಪ್ರಸಂಗದಲ್ಲಿ ದಿನಶಹಾವಾಛಾ, ಚಂದಾವರಕರ, ಸೆಟಲವಾಡ, ಶಹಾ, ವಾಡಿಯಾ ಮುಂತಾದ 'ಸರ'ದಾರರು ಹಾಜರಿದ್ದರಲ್ಲದೆ ಪರಾಂಜಪೆ ಪಾರೆಖ ಜೋಶಿ ಇತ್ಯಾದಿ ರಾಜಶ್ರೀಗಳು ಸನ್ನಿಹಿತರಾಗಿದ್ದರು. ಈ ಔತಣದ ಸಮಾರಂಭದಲ್ಲಿ ಲೋರ್ಡ ಸಿಂಹರು ಒಂದು ವಿಸ್ತೃತವಾದ ಭಾಷಣವನ್ನು ಕೊಟ್ಟರು ಅವರ ಈ ವಿಸ್ತೃತವಾದ ಭಾಷಣದಲ್ಲಿ ಹಿಂದುಸ್ಥಾನದ ಈಗಿನ ರಾಜಕೀಯ ಪರಿಸ್ಥಿತಿ, ವಿಶೇಷವಾಗಿ ಮಹಾತ್ಮಾ ಗಾಂಧಿಗಳ ನೊನ್-ಕೊ-ಒಪರೇಶನಿನ ವಿಷಯ ಇವು ಪ್ರಸ್ತಾಪಿಸಲ್ಪಟ್ಟಿದ್ದವೆಂಬುದು ಹೇಳಬೇಕಾದ ಅಗತ್ಯವಿಲ್ಲ ಲೋರ್ಡ ಸಿಂಹರು ಒಂದು ಕಾಲದಲ್ಲಿ ಹಿಂದುಸ್ಥಾನದ ರಾಜಕೀಯ ಚಳವಳದಲ್ಲಿ ಭಾಗವನ್ನು ವಹಿಸಿದವರಾಗಿದ್ದು ಕೊಂಗ್ರೆಸಿನ ಅಧ್ಯಕ್ಷಸ್ಥಾನವನ್ನು ಕೂಡ ಒಮ್ಮೆ ಅಲಂಕರಿಸಿದವರಾಗಿದ್ದರು ಆಗ ಅವರು ಹಿಂದುಸ್ಥಾನದ ರಾಜಕೀಯ ಸಂಕಷ್ಟಗಳ ಬಗ್ಗೆ ಯೋಗ್ಯವಾದ ವಕಾಲತನ್ನು ನಡಿಸಿದ್ದರು ಹಿಂದುಸ್ಥಾನದ ಬಾಯಾರಿಕೆಯು ಸ್ವರಾಜ್ಯದ ಗಂಗೋದಕದಿಂದಲೆ ಶಾಂತವಾದೀತೆಂಬ ಮಾತನ್ನು ಆಗ ಅವರು ತಮ್ಮ ಭಾಷಣದಲ್ಲಿ ಧ್ವನಿಸಿದ್ದರು. ಈಹೊತ್ತಿನ ಅವರ ಮತವಾದರೂ ಅದಕ್ಕೆ ಅನ್ಯಥಾ

[illegible]

... ವನ್ನು ಪಡೆದವರಾಗಿದ್ದಾರೆ ಹಿಂದುಸ್ಥಾನದ ಸ್ವರಾಜ್ಯದ ... ಸಮೀಪಿಸ್ಥ ಆಗಿದೆ ಎಂಬುದೇ ... ಇದು ಬರಿ ನಮ್ಮ ಕಲ್ಪನೆಯು ಮಾತ್ರವಲ್ಲ, ಲೋರ್ಡ ಸಿಂಹರು ತಮ್ಮ ಮೊನ್ನೆಯ ಭಾಷಣದಲ್ಲಿ ಮೊಂಟೆಗ್ಯು ಸುಧಾರಣೆಯು 'ರಿಸ್ಪೊನ್ಸಿಬಲ್ ಸೆಲ್ಫ ಗವರ್ನಮೆಂಟಿ'ನ ಹತ್ತರದ ದಾರಿಯಾಗಿದೆ ಎಂದು ಹೇಳಿ, ಈ ದಾರಿಯನ್ನು ಆಕ್ರಮಿಸುವಾಗ ಜನರ ಸಹಕಾರಿತೆಯು ಅವಶ್ಯವಾಗಿ ಬೇಕು ಎಂದು ಸೂಚಿಸಿ ಅಂಥ ಸಹಕಾರಿತೆಯು ತನ್ನ ಮಿತ್ರವರ್ಗದಿಂದ ಹಾಗು ಇತರರಿಂದ ದೊರಕೀತೆಂದು ಆಸೆಯನ್ನು ಪ್ರದರ್ಶಿಸಿದ್ದಾರೆ

ಹಿಂದುಸ್ಥಾನಕ್ಕೆ ಸ್ವರಾಜ್ಯ ಸಿಗುವುದು ಅವಶ್ಯಕವೆಂದು ಲೋರ್ಡ ಸಿಂಹರಿಗೆ ತೋರುತ್ತಿದೆಯಾದರೂ ಜನರ ಒಂದು ಕ್ರಮವು ಮಾತ್ರ ಅವರಿಗೆ ಸೇರುವುದಿಲ್ಲ ಜನರು ಸ್ವರಾಜ್ಯವನ್ನು ಅಪೇಕ್ಷಿಸಲಿ, ಅದು ನ್ಯಾಯ, ಆದರೆ ಅವರು ಗಾಂಧಿಗಳ ನಾಯಕತ್ವದ ಕೆಳಗೆ ಅಸಹಕಾರಿತೆಯ ಯಾವ ಚಳವಳವನ್ನು ಮಾಡುತ್ತಿದ್ದಾರೊ ಅದು ಸರ್ವಥಾ ಯೋಗ್ಯವಲ್ಲ, ಅದು ಘಾತಕವಾದುದೆಂದು ಸಿಂಹರು ಅಭಿಪ್ರಾಯ ಪಡುತ್ತಾರೆಂದು ಅವರ ಉದ್ಗಾರಗಳ ಮೇಲಿಂದ ಹೇಳಬೇಕಾಗುತ್ತದೆ ಲೋರ್ಡ ಸಿಂಹರ ದೃಷ್ಟಿಯಿಂದ ಅಸಹಕಾರಿತೆಯನ್ನು ಚಿತ್ರಿಸಬಹುದಾದರೆ, ಅದು ಅವಿಶ್ವಾಸ, ತಪ್ಪು ತಿಳಿವು, ದುರಭಿಪ್ರಾಯ ಮತ್ತು ದ್ವೇಷ ಈ ಮನೋವೃತ್ತಿಗಳನ್ನು ಹುಟ್ಟಿಸುವುದು ಮನುಷ್ಯನು ಒಂದು ಸಿಂಹದ ಚಿತ್ರವನ್ನು ಬರೆಯಹತ್ತಿದರೆ ಅವನು ಆ ಸಿಂಹವನ್ನು ಒಂದು ಪಂಜರದಲ್ಲಿ ಕಟ್ಟಿಹಾಕಿದ್ದಂತೆ ಹೇಗೆ ರೂಪಿಸುತ್ತಾನೊ ಹಾಗೆಯೆ ಸರಕಾರಿ ಅಧಿಕಾರಿಗಳಾದ ಸಿಂಹರು ಅಸಹಕಾರಿತೆಯನ್ನು ಮೇಲಿನಂತೆ ಚಿತ್ರಿಸುವುದು ಸಹಜವೆ ಆದರೆ ಅಸಹಕಾರಿತೆಯು ಅವಿಶ್ವಾಸ, ಅಪ್ರೀತಿ ತಪ್ಪು ತಿಳವಳಿಕೆ ಮುಂತಾದ್ದನ್ನು ಹುಟ್ಟಿಸೀತೆಂದು ಹೇಳಿದ ಮಾತು ಅಷ್ಟೊಂದು ನಿಜವಲ್ಲ ಅವರು ಈ ರೀತಿಯಿಂದ ಅದರ ಮೀಮಾಂಸೆಯನ್ನು ಮಾಡುವುದಕ್ಕಿಂತ ಸರಕಾರಿ ಅಧಿಕಾರಿಗಳು ಜನರ ಮೇಲೆ ವಿಶ್ವಾಸವನ್ನು ಇಟ್ಟಿರಲಿಲ್ಲ, ಜನರನ್ನು ಬೇಕಷ್ಟು ಪ್ರೀತಿಸಿರಲಿಲ್ಲ ಜನರ ವಿಷಯವಾಗಿ ತಪ್ಪು ತಿಳಿವಳಿಕೆಯನ್ನು ಕಟ್ಟಿಕೊಂಡರು, ಮತ್ತು ಈ ಕಾರಣದಿಂದಲೆ ಜನತೆಯು ಗಾಂಧಿಗಳ ಮತ್ತು ರಾಷ್ಟ್ರೀಯ ಸಭೆಯ ನೇತೃತ್ವದ ಕೆಳಗೆ ಅಸಹಕಾರಿತೆಯ ಅಂಗೀಕಾರವನ್ನು ಮಾಡಿದೆ ಎಂದು ಹೇಳಿದರೆ ಆ ಮಾತು ಹೆಚ್ಚು ಅನುರೂಪವೂ ಅಧಿಕಾರಿಗಳಿಗೆ ಬೋಧಪ್ರದವಾದ್ದೂ ಆಗುತಿತ್ತು ಎಂದರೆ ಅಸಹಕಾರಿತೆಯ ಬಳ್ಳಿಯು ಅವಿಶ್ವಾಸ ಮುಂತಾದ ಕಾಯಿಗಳನ್ನು ಬಿಟ್ಟೀತೆಂಬುದು ನಿಜವಲ್ಲ, ಆದರೆ ಅದು ಸರಕಾರಿ ಅಧಿಕಾರಿಗಳ ಅಸಹಾನುಭೂತಿಯ ಬಳ್ಳಿಯಾಗಿದೆ ಎಂಬುದೆ ಹೌದು ಈ ಅಸಹಕಾರಿತೆಯಿಂದ ದ್ವೇಷವುಂಟಾದೀತೆಂದು ಲೋರ್ಡ ಮಹಾಶಯರು ವರ್ತಿಸಿದ ಭವಿಷ್ಯವು ಸರ್ವಥಾ ಒಪ್ಪತಕ್ಕದ್ದಲ್ಲವೆಂದು ಹೇಳಬಹುದು ಅತ್ಯಾಚಾರ ಪರಾಙ್ಮುಖವಾದ ಮತ್ತು ಸತ್ಯಪ್ರೀತಿಯ ತಳಮನೆಯ ಆಧಾರದ ಮೇಲೆ ನಿಂತಿರುವ ಪರಿಶುದ್ಧವಾದ ಅಸಹಕಾರಿತೆಯು ದ್ವೇಷವನ್ನು ಹುಟ್ಟಿಸೀತೆಂದು ಹೇಳುವುದು ದ್ರಾಕ್ಷಿಯ ಬಳ್ಳಿಯಿಂದ ಕಾಸರ್ಕಿನ ಕಾಯನ್ನು ಅಪೇಕ್ಷಿಸುವಂತೆ ನಿಸರ್ಗವಿರುದ್ಧವಾದ ಸಂಗತಿಯಾಗಿದೆ ಸತ್ಯಾಗ್ರಹ ಇಲ್ಲವೆ ಅಸಹಕಾರಿತೆಯು ಹಿಂದುಸ್ಥಾನದೊಳಗಿನ ಮಾತ್ರವಲ್ಲ, ಲೋಕದೊಳಗಿನ ಅತ್ಯಾಚಾರದ ಮತ್ತು ಪಶುವೃತ್ತಿಯ ದುಷ್ಟ ದೋಷವನ್ನು ತೆಗೆದುಹಾಕಿ ವಸಿಷ್ಠನ ಆಶ್ರಮದಲ್ಲಿ ಹೇಗೆ ಹುಲಿಮರಿಗಳೂ ಮತ್ತು ದನಕರುಗಳೂ ಏಕತ್ರ ಕ್ರೀಡಿಸಿಕೊಂಡಿದ್ದವೊ ಹಾಗೆಯೆ ಲೋಕದೊಳಗಿನ ಎಲ್ಲ ಮಾನವ ಜನಾಂಗವು ಶುದ್ಧಪ್ರೇಮದಿಂದ ಪರಸ್ಪರ ಬದ್ಧವಾಗಬೇಕೆಂಬುದೆ ಈ ಚಳವಳದ ಬುಡದಲ್ಲಿದ್ದ ಮುಖ್ಯವಾದ ಉದ್ದೇಶವು ಅದನ್ನು ಮರತು ಬಿಟ್ಟು ಆ ಚಳವಳದ ಮೇಲೆ ದೋಷಾರೋಪವನ್ನು ಮಾಡುವುದು ಚಂದವಲ್ಲ

ಲೋರ್ಡ ಸಿಂಹರು ಅಸಹಕಾರಿತೆಯ ಸಾಮಾನ್ಯ ತತ್ವವನ್ನು ಮೇಲಿನಂತೆ ರೂಪಿಸಿ ಅದರ ಶಾಖೆಗಳಾದ ಕೌನ್ಸಿಲ್ ಬಹಿಷ್ಕಾರ ಶಾಲಾ ಬಹಿಷ್ಕಾರ, ಕೋರ್ಟು ಬಹಿಷ್ಕಾರ ಸರಕಾರಿ ಪದನಿಸನ್ಯಾಸ ಇವುಗಳ ವಿಷಯವಾಗಿ ತಮ್ಮ ಅಸಮ್ಮತಿಯನ್ನು ವ್ಯಕ್ತಮಾಡಿದ್ದಾರೆ ಆದರೂ ಕೌನ್ಸಿಲ್ ಬಹಿಷ್ಕಾರದ ಚಳವಳದ ಪ್ರಭಾವದಿಂದ ಯೋಗ್ಯ ಮನುಷ್ಯರು ಕೌನ್ಸಿಲುಗಳ ಹೊರಗೆ ನಿಂತಂತೆ ಆಗಿದೆ ಎಂದು ಹೇಳಿ ಅವರು ಈ ವಿಷಯದಲ್ಲಿ ತಮ್ಮ ವಿಷಾದವನ್ನು ವ್ಯಕ್ತಗೊಳಿಸಿದ್ದಾರೆ ಲೋರ್ಡ ಸಿಂಹರ ಈ ಉದ್ಗಾರದ ಮೇಲಿಂದ, ಅವರ ಈ ಸಾಕ್ಷಿಯ ಮೇಲಿಂದ, ಒಂದು ಸಂಗತಿಯು ಸಿದ್ಧವಾಗುತ್ತದೆ ಏನೆಂದರೆ, ಯೋಗ್ಯರಾದವರು ಕೌನ್ಸಿಲುಗಳನ್ನು ಬಹಿಷ್ಕರಿಸಿರುವುದರಿಂದ ಅಸಹಕಾರಿತೆಗೆ ಈ ಮಟ್ಟಿಗಾದರೂ ಯಶಸ್ಸು ಪ್ರಾಪ್ತವಾಗಿದೆ. ಆದ್ದರೆ ಈಗ ಒಂದು ಪ್ರಶ್ನೆಯು ಬರುವುದು ಅದೇನೆಂದರೆ, ಯೋಗ್ಯ ಮನುಷ್ಯರನ್ನು ಬಿಟ್ಟು ನೀವು ದೇಶದ ಕಾರಭಾರವನ್ನು ನಡಿಸಲು ಆ

[illegible]

... ಬಹಿಷ್ಕಾರ ... ಅಭಿಪ್ರಾಯ ... ಮುಖ್ಯ ... ಮಾಡಿದರು.

ಸ್ಫುಟ ವಿಚಾರಗಳು.

... ಇತ್ತಲಾಗಿ ಹೊಸಶಿಕ್ಷಣದ ಚಳವಳವು ಸಾರ್ವತ್ರಿಕವಾಗಿ ಎಲ್ಲ ಪ್ರಾಂತಗಳಲ್ಲಿ ಪ್ರಾರಂಭವಾಗಿದೆ ಎಂಬುದು ಹೌದಾದರೂ ಗುಜರಾಥ ಪ್ರಾಂತದಲ್ಲಿ ಈ ಚಳವಳವು ವಿಶೇಷ ಸ್ಥಾನವನ್ನು ಹೊಂದಿದೆ ಎಂದು ಕಂಡುಬರುತ್ತದೆ. ಅಲ್ಲಿಯ ರಾಷ್ಟ್ರೀಯ ಶಿಕ್ಷಣದ ಸ್ಥಿತಿಯನ್ನು ನಿರೀಕ್ಷಿಸುವ ಉದ್ದೇಶದಿಂದ ಶ್ರೀಯುತ ದಿನಕರ ವಾಸುದೇವ ... ಕರೆಂಬ ಸದ್ಗೃಹಸ್ಥರು ಗುಜರಾಥ ಪ್ರಾಂತದಲ್ಲಿ ಸಂಚರಿಸಿ ಅಲ್ಲಿಯ ಶಿಕ್ಷಣಾಲಯಗಳ ಮಾಹಿತಿಯನ್ನು ಸಂಗ್ರಹಿಸಿದ್ದಾರೆ. ಅವರು ತಾವು ಸಂಗ್ರಹಿಸಿದ ಈ ಮಾಹಿತಿಯನ್ನು 'ಕೇಸರೀ' ಎಂಬ ಪತ್ರಿಕೆಯಲ್ಲಿ ಪ್ರಕಟಿಸಿದ್ದಾರೆ ಆ ಮಾಹಿತಿಯೊಳಗಿನ ಮುಖ್ಯ ಮುಖ್ಯ ಅಂಶವನ್ನು ನಮ್ಮ ವಾಚಕರಿಗಾಗಿ ಇಲ್ಲಿ ಕೊಡುವೆವು ಗುಜರಾಥ ಯುನಿವರ್ಸಿಟಿಯು (ವಿದ್ಯಾಪೀಠವು) ಅಲ್ಲಿಯ ರಾಷ್ಟ್ರೀಯ ಶಿಕ್ಷಣದ ಉತ್ತಮಾಂಗವಾಗಿದೆ ಮ ಗಾಂಧಿಗಳು ಇದರ ಚೆನ್ಸಲರ್ ಎಂದರೆ 'ಕುಲಪತಿ'ಗಳಾಗಿದ್ದಾರೆ. ಮತ್ತು ಮಿ ಗಿಡ್ವಾನಿ ಎಂಬವರು ಇದರ ವಾಯ್ಸ್ ಚೆನ್ಸಲರ ಎಂದರೆ 'ಕುಲನಾಯಕ'ರಾಗಿದ್ದಾರೆ ವಾಯ್ಸ ಚೆನ್ಸಲರರಾದ ಮಿ ಗಿಡ್ವಾನಿ ಇವರು ಪ್ರತಿಗಾಂಧಿಗಳಾಗಿರುವುದರಿಂದ ದಿಲ್ಲಿಯ ತಮ್ಮ ೪೦೦ ರೂಪಾಯಿ ತಲಬಿನ ಜಾಗೆಯನ್ನು ಬಿಟ್ಟುಕೊಟ್ಟು ರಾಷ್ಟ್ರೀಯಶಿಕ್ಷಣಕ್ಕಾಗಿ ತಮ್ಮ ಶರೀರವನ್ನು ಅರ್ಪಿಸಿದ್ದಾರೆ. ಈ ವಿದ್ಯಾಪೀಠದ ಮುಖ್ಯ ಉದ್ದೇಶಗಳು ಯಾವವೆಂದರೆ, ಸ್ವದೇಶದ ಹಿತಕ್ಕೆ ಆವಶ್ಯಕವಾದ ಮತ್ತು ಪರಿಸ್ಥಿತಿಗೆ ಅನುಕೂಲವಾದ ಶಿಕ್ಷಣವನ್ನು ಕೊಟ್ಟು ವಿದ್ಯಾರ್ಥಿಗಳನ್ನು ಧಾರ್ಮಿಕರನ್ನಾಗಿಯೂ ಸ್ವದೇಶಭಕ್ತರನ್ನಾಗಿಯೂ, ಸ್ವಾವಲಂಬಿಗಳನ್ನಾಗಿಯೂ, ಬಲಶೀಲರನ್ನಾಗಿಯೂ ಮಾಡುವುದು, ಶಾಲೆಗಳನ್ನೂ ಸಂಸ್ಥೆಗಳನ್ನೂ ನಿರೀಕ್ಷಿಸಿ ಅವುಗಳೊಳಗಿನ ವಿದ್ಯಾರ್ಥಿಗಳ ಪರೀಕ್ಷೆಯನ್ನು ತೆಕ್ಕೊಂಡು ಅವರಿಗೆ ಯೋಗ್ಯತಾನುಸಾರವಾಗಿ ಪದವಿಗಳನ್ನು ಕೊಡುವುದು, ಛಾತ್ರಾಲಯ, ಗ್ರಂಥಾಲಯ, ಪ್ರಯೋಗಶಾಲೆ, ವೇಧಶಾಲೆ, ಸಂಗ್ರಹಸ್ಥಾನ ಮುಂತಾದವುಗಳನ್ನು ಸ್ಥಾಪಿಸುವುದು, ಹಲವು ವಿಧದ ಅತ್ಯುಪಯುಕ್ತವಾದ ಕಲಾಕೌಶಲ್ಯ, ಕೈಗಾರಿಕೆ ಮುಂತಾದವುಗಳ ಶಿಕ್ಷಣವನ್ನು ಕೊಡುವುದು, ಈ ಶಿಕ್ಷಣಕ್ಕೆ ಬೇಕಾಗಿರುವ ಕ್ರಮಿಕ ಪುಸ್ತಕಗಳನ್ನು ಪ್ರಕಟಿಸುವುದು, ಇತ್ಯಾದಿ ಈ ಉದ್ದೇಶಗಳನ್ನು ಕಣ್ಣಮುಂದೆ ಇಟ್ಟುಕೊಂಡು ಈ ವಿದ್ಯಾಪೀಠವು ಶಿಕ್ಷಣದಾನದ ಪವಿತ್ರ ಕಾರ್ಯವನ್ನು ಮಾಡ ತೊಡಗಿದೆ

ಈ ಉಚ್ಚ ಉದ್ದೇಶಗಳನ್ನಿಟ್ಟುಕೊಂಡಿರುವ ಈ ಮಹಾವಿದ್ಯಾಪೀಠದಲ್ಲಿ ಸೇರಿಕೊಂಡು ಎರಡು ಮೂರು ಕೊಲೆಜುಗಳು (ಮಹಾ ವಿದ್ಯಾಲಯಗಳು), ಐದಾರು ಹೈಸ್ಕೂಲುಗಳು (ವಿನಯ ಮಂದಿರಗಳು) ಹಾಗು ಕೆಳತರಗತಿಯ ಇತರ ಹಲವು ಶಾಲೆಗಳಿವೆ ಕೊಲೆಜುಗಳಲ್ಲಿಯ (ಮಹಾ ವಿದ್ಯಾಲಯಗಳೊಳಗಿನ) ಶಿಕ್ಷಣಕ್ರಮವು ಕೇವಲ ದೇಶೀಯ ಪದ್ಧತಿಯಿಂದ ನಡೆಯುತ್ತಿದೆ. ಗುರುಗಳಿಗೆ ಮತ್ತು ವಿದ್ಯಾರ್ಥಿಗಳಿಗೆ ಕುಳಿತುಕೊಳ್ಳಲು ನಮ್ಮ ಪೂರ್ವದ ಪದ್ಧತಿಗನುಸಾರವಾಗಿ 'ಬೈಠಕು' ಇದೆ, ಕುರ್ಚಿ-ಮೇಜು ಬೆಂಚು ಇತ್ಯಾದಿ ಖರ್ಚಿನ ಬಾಬಿನ ಗಲಾಟೆಯು ಇಲ್ಲ ಈ ಎರಡು ಕೊಲೆಜುಗಳು ಅಹಮದಾಬಾದ ಮತ್ತು ಸುರತ ಈ ಪಟ್ಟಣಗಳಲ್ಲಿಯವು ಅಹಮದಾಬಾದದೊಳಗಿನ ಎರಡು ಹೈಸ್ಕೂಲುಗಳಲ್ಲದೆ ಗೋಧ್ರಾ, ನಡಿಯಾದ ಅಂಕಲೇಶ್ವರ, ಸುರತ ಈ ಪಟ್ಟಣಗಳಲ್ಲಿಯ ಹೈಸ್ಕೂಲುಗಳು ಈ ವಿದ್ಯಾಪೀಠಕ್ಕೆ ಸೇರಿದವುಗಳಾಗಿದ್ದಾವೆ ಹತ್ತು ವರ್ಷಗಳ ಹಿಂದೆ ಸರಕಾರದ ವಿದ್ಯಾ ಇಲಾಖೆಯಲ್ಲಿ ಕೆಲಸ ಮಾಡಿದ ಇಬ್ಬರು ಗುಜರಾಥಿ ಗೃಹಸ್ಥರು ಬೇಸತ್ತು ಸ್ವತಂತ್ರವಾದ 'ಪ್ರೊಪ್ರಾಯಟರಿ' ಹೈಸ್ಕೂಲ ಒಂದನ್ನು ಸ್ಥಾಪಿಸಿದ್ದರು ಈ ಹೈಸ್ಕೂಲು ಮುಂಬಯಿ ಯುನಿವರ್ಸಿಟಿಯ ಮೆಟ್ರಿಕ್ ಪರೀಕ್ಷೆಗೆ ವಿದ್ಯಾರ್ಥಿಗಳನ್ನು ತಯಾರಿಸಿ ಕಳುಹಿಸುತ್ತಿದ್ದರೂ ಸರಕಾರಿ ಗ್ರೆಂಟು ಪಡಕೊಳ್ಳುತ್ತಿರಲಿಲ್ಲ ಈಗ ಈ ಹೈಸ್ಕೂಲು ಸರಕಾರಿ ಯುನಿವರ್ಸಿಟಿಯ ಸಂಬಂಧವನ್ನು ಕಳೆದು ಗುಜರಾಥ ವಿದ್ಯಾಪೀಠಕ್ಕೆ ಸೇರಿದೆ. ಈ ವಿನಯ ಮಂದಿರದಲ್ಲಿ (ಹೈಸ್ಕೂಲಿನಲ್ಲಿ) ಈಗ ೧೩೦೦ ವಿದ್ಯಾರ್ಥಿಗಳಿದ್ದಾರೆ ಇದಲ್ಲದೆ ಅದೇ ಅಹಮದಾಬಾದಿನೊಳಗಿನ ಇನ್ನೊಂದು 'ಮೊಡೆಲ್ ಹೈಸ್ಕೂಲ' ಈ ಸಂಸ್ಥೆಗೆ ಸೇರಿಸಲ್ಪಟ್ಟಿದೆ, ಅದರಲ್ಲಿ ೫೦೦ ಹುಡುಗರು ವಿದ್ಯಾರ್ಜನೆಯನ್ನು ಮಾಡುತ್ತಿದ್ದಾರೆ. ಖೇಡಾ ಜಿಲ್ಲೆಯೊಳಗಿನ ಇನ್ನೊಂದು ವಿನಯ ಮಂದಿರದಲ್ಲಿ ೩೫೦ ವಿದ್ಯಾರ್ಥಿಗಳಿದ್ದಾರೆ ಗೋಧ್ರಾದೊಳಗಿನ ವಿನಯ ಮಂದಿರದಲ್ಲಿ ... ಹುಡುಗರಿದ್ದಾರೆ. ಈ ಶಿಕ್ಷಣ ಸಂಸ್ಥೆಗಳಲ್ಲದೆ ಇನ್ನೂ ಬೇರೆ ಕೆಲವು ಶಿಕ್ಷಣಾಲಯಗಳಿವೆ. ಗುಜರಾಥ ವಿದ್ಯಾಪೀಠದ ಛತ್ರದ ಕೆಳಗೆ ಶಿಕ್ಷಣವನ್ನು ಹೊಂದುತಿದ್ದ

[illegible]

[illegible] ವಿದ್ಯಾರ್ಥಿಗಳಿಗೆ ರಾಜಕೀಯ ವಿಷಯ [illegible] ಗ್ರಂಥಭಾಂಡಾರವನ್ನು [illegible] ಲಜಪತ ರಾಯರಿಗೆ [illegible] ದ್ರವ್ಯ ಹಾಗು ಇತರ ಸಂಗತಿ [illegible] ದೊರಕೊಂಬ ಆಸೆ ಮಾತ್ರ [illegible] ಲಸುಲಭವಾಗಿ ಶಿಕ್ಷಣಸಂಸ್ಥೆಗಳು ಸ್ಥಾಪಿಸಲ್ಪಡುವುದು ಎಷ್ಟು ಆವಶ್ಯಕ ಮತ್ತು ಅನುಕೂಲವೋ ಅಷ್ಟೇ ಶಿಕ್ಷಣದ ವಿಷಯದಲ್ಲಿ ಹಿಂದು [illegible] ಅಗತ್ಯದ್ದು. ಈ ದೃಷ್ಟಿಯಿಂದ ನೋಡಿದ್ದಲ್ಲಿ ಲಜಪತರಾಯರವರ ಈ ಪ್ರಯತ್ನವು ಶ್ಲಾಘ್ಯವೆಂದೇ ಹೇಳಬೇಕಾಗುತ್ತದೆ.

ಈ ಸರಕಾರದ ಮುಖಾಂತರ ಕೊಡಲ್ಪಡುವ ಈಗಿನ ಶಿಕ್ಷಣದಲ್ಲಿ ದೋಷಗಳಿವೆ ಎಂದು ಗಾಂಧಿ, ಲಜಪತರಾಯ ಮೊದಲಾದವರೆ ಹೇಳುತ್ತಿರುವುದಲ್ಲ; ಸೆಡ್ಲರ ಕಮಿಷನಿನ ರಿಪೋರ್ಟಿನ ಅಭಿಪ್ರಾಯವು ಕೂಡ ಹಾಗೆಯೆ ಇದೆ. ಇಷ್ಟೆ ಅಲ್ಲ, ಪ್ರಾರಂಭದಿಂದ ಕೊನೆತನಕ ಶಿಕ್ಷಣಭಾಗದ ಪುಣ್ಯಕಾರ್ಯವನ್ನು ಮಾಡಿದವರ ಅಭಿಪ್ರಾಯವನ್ನು ಕೇಳಹೋದರೆ ಅವರು ಕೂಡ ಅನ್ಯಥಾ ವಾದಿಸುವುದಿಲ್ಲ. ಇದಕ್ಕೆ ಧಾರವಾಡದಿಂದ ಇಲ್ಲಿಗೆ ಬಂದಿರುವ ಮ. ರಾ. ರಾಮಚಂದ್ರ ಹನುಮಂತ ದೇಶಪಾಂಡೆಗಳ ಮೊನ್ನೆಯ ಉಪನ್ಯಾಸವೆ ಸಾಕ್ಷಿಯಾಗಿದೆ. ರಾ. ದೇಶಪಾಂಡೆಯವರು ತಮ್ಮ ವಿದ್ಯಾರ್ಥಿದಶೆಯಲ್ಲಿ ವಿಶ್ವವಿದ್ಯಾಲಯದ ಕೊನೆಯ ಮೆಟ್ಟಲಾದ ಎಮ್. ಎ. ಪರೀಕ್ಷೆಯ ತನಕ ವ್ಯಾಸಂಗವಾಡಿ, ಅನಂತರದ ತಮ್ಮ ಆಯುಷ್ಯವನ್ನು ಹೈಸ್ಕೂಲಿನ ಹೆಡ್‌ಮಾಸ್ಟರ್, ಟ್ರೇನಿಂಗ ಕಾಲೇಜಿನ ಪ್ರಿನ್ಸಿಪಾಲ ಮತ್ತು ಎಜ್ಯುಕೇಶನಲ್ ಇನ್ಸಪೆಕ್ಟರ ಇತ್ಯಾದಿ ಹುದ್ದೆಗಳನ್ನು ಕೈಕೊಂಡ ಗೃಹಸ್ಥರು. ಎಂದ ಮೇಲೆ ಪ್ರಕೃತದ ಶಿಕ್ಷಣದಲ್ಲಿಯ ದೋಷಗಳನ್ನು ಹೇಳುವ ಅಧಿಕಾರವು ಎರಡು ಮೂರು ತರದಿಂದ ಅವರಿಗೆ ಇದೆ ಎಂಬುದು ಒಪ್ಪಿಕೊಳ್ಳಬೇಕಾದ ಸಂಗತಿ. ಮ. ರಾ. ದೇಶಪಾಂಡೆಯವರು ತಮ್ಮ ಮೊನ್ನೆಯ ಉಪನ್ಯಾಸದಲ್ಲಿ ಈಗಿನ ಶಿಕ್ಷಣದೊಳಗಿನ ದೋಷಗಳನ್ನು ಉದ್ಘಾಟಿಸುವಾಗ ಮುಖ್ಯವಾಗಿ ಪರಕೀಯ ಭಾಷೆಯಲ್ಲಿ ಶಿಕ್ಷಣವು ನಡಿಯುತ್ತಿರುವುದರಿಂದ ವಿದ್ಯಾರ್ಥಿಗಳ ಎಳೆ ಮೆದುಳಿಗೆ ಎಷ್ಟು ತೀವ್ರವಾದ ಪರಿಶ್ರಮವು ಬೀಳುತ್ತದೆ, ಮತ್ತು ಆ ಮೂಲಕ ಅವರ ವಿಚಾರಶಕ್ತಿ, ಬುದ್ಧಿಶಕ್ತಿ, ಆರೋಗ್ಯ ಇವುಗಳಿಗೆ ಹೇಗೆ ಕುಂದುಗಳು ಬರುತ್ತವೆ, ಈ ಕಾರಣದಿಂದ ವಿದ್ಯಾರ್ಥಿಗಳು ಬರಿ ಸ್ಮೃತಿದಾಸರು ಮಾತ್ರ ಹೇಗೆ ಆಗುತ್ತಾರೆ, ಹಾಗು ಅಲ್ಪಾಯುಷಿಗಳೂ, ದುರ್ಬಲರೂ ಹೇಗಾಗುತ್ತಾರೆ ಎಂಬದನ್ನು ವಿವರಿಸಿ ಹೇಳಿದರು. ಈ ಮೇರೆಗೆ ಅನ್ಯಭಾಷೆಯಿಂದ ಶಿಕ್ಷಣವನ್ನು ಕೊಡುವುದರಿಂದ ವಿದ್ಯಾರ್ಥಿಗಳಿಗೆ ವಿಷಯ ಬೋಧೆ, ಮತ್ತು ಜ್ಞಾನ ಇವೆಲ್ಲ ಸರಿಯಾಗಿ ಉಂಟಾಗುವುದಿಲ್ಲ ಎಂಬುದನ್ನು ಕೂಡ ವ್ಯಾಖ್ಯಾತರು ಸೂಚಿಸಿದರು. ದೇಶೀಯ ಭಾಷೆಯಿಂದ ಶಿಕ್ಷಣವನ್ನು ಕೊಡುವುದು ಶ್ರಮ, ಕಾಲ, ವ್ಯವಸಾಯ ಮತ್ತು ಫಲ, ಈ ಎಲ್ಲ ದೃಷ್ಟಿಯಿಂದ ಹಿತಾವಹವಾದ್ದೆಂಬುದಕ್ಕೆ ಸಂಶಯವಿಲ್ಲ. ಆದರೆ ಈ ಉಪಕ್ರಮವು ಎಂದಾದೀತು ಎಂಬುದೊಂದೆ ವಿಚಾರಣೀಯವಾದ ಪ್ರಶ್ನೆಯು. ಈ ಪ್ರಶ್ನೆಯನ್ನು ಸರಕಾರವು ಕೈಕೊಂಡು ಬಿಡಿಸುವಷ್ಟರೊಳಗೆ ದೇಶೀಯರೆ ತಮ್ಮ ದೃಢಪ್ರಯತ್ನದಿಂದ ಬಿಡಿಸಲುದ್ಯುಕ್ತರಾದರೆ ಅದೊಂದು ಸ್ವಾವಲಂಬನದ ಉತ್ತಮವಾದ ಪಾಠವಾದೀತೆಂಬುದಕ್ಕೆ ಸಂಶಯವಿಲ್ಲ.

ಸುಧಾರಿಸಿದವರು ಎನ್ನಿಸಿಕೊಳ್ಳುವವರು ಹಿಂದಿಗಳ ಮೇಲೆ ಯಾವ ಆರೋಪಣೆಯನ್ನು ಮಾಡಿದರೂ ಅದು ನಡೆದು ಹೋಗುತ್ತದೆ. ಹಿಂದುಗಳು ಅಂಧ ವಿಶ್ವಾಸವುಳ್ಳವರು, ಮರಮಟ್ಟುಗಳನ್ನು ಪೂಜಿಸುವವರು, ಅಂಥವರು, ಇಂಥವರು ಎಂಬುದಾಗಿ ಇವರ ಮೇಲೆ ಹಲವರು ಹಲವು ವಿಧದ ಆರೋಪಣೆಗಳನ್ನು ಮಾಡುತ್ತಲೆ ಇದ್ದಾರೆ. ಈ ಆರೋಪಗಳಲ್ಲಿ ತಥ್ಯಾಂಶವು ಎಷ್ಟಿದೆ ಎಂಬುದನ್ನು ನಾವು ಇಲ್ಲಿ ವಿವೇಚಿಸುವುದಿಲ್ಲ. ಆದರೆ ಇದೇ ನಮೂನೆಯ ಹೊಸದೊಂದು ಆರೋಪವು ಇತ್ತಲಾಗೆ ಹಿಂದಿಗಳ ಮೇಲೆ ಇಡೋಣಾಗಿದೆ. ಹಿಂದುಗಳು ಹಾವುಗಳನ್ನು ಸಾಕುವವರೆಂದು 'ಲ್ಯಾಂಡ್ ಎಂಡ್ ವಾಟರ್' ಎಂಬ ಪತ್ರಿಕೆಯಲ್ಲಿ ಒಬ್ಬ ಲೇಖಕನು ಬರೆದಿದ್ದಾನೆಂದು ಈ ತಿಂಗಳ 'ಮೊಡರ್ನ ರಿವ್ಯೂ' ಪತ್ರಿಕೆಯಿಂದ ತಿಳಿಯುತ್ತದೆ. ಹಿಂದುಸ್ಥಾನದಲ್ಲಿ ಸರ್ಪದಂಶದ ಮರಣಗಳು ಯಾಕೆ ಹೆಚ್ಚು ಸಂಭವಿಸುತ್ತವೆಂಬುದನ್ನು ಮೀಮಾಂಸೆ ಮಾಡುವಾಗ ಸದರಿ ಲೇಖಕನು 'ಹಿಂದುಗಳು ಸರ್ಪಗಳನ್ನು ಸಾಕುತ್ತಾರೆ' ಎಂದು ಹೇಳುವನು! ಆದರೆ ಇವನು ಯಾವ ಅರ್ಥದಿಂದ ಇದನ್ನು ಹೇಳುವನು ಇದು ನಮಗೆ ಗೊತ್ತಾಗದು! ಹಾವುಗಳನ್ನೂ, ಸರ್ಪಗಳನ್ನೂ ಹಿಂದುಸ್ಥಾನದ ಯಾವ ಭಾಗದಲ್ಲಿ ಯಾರು ಸಾಕುತ್ತಿದ್ದಾರೆ ಎಂಬುದು ಹಿಂದುಸ್ಥಾನದವರಿಗೆ ಗೊತ್ತಿಲ್ಲವಾದರೂ ಈ ದೊರೆ ಮಹಾಶಯರು ಈ ಹೊಸ ಶೋಧವನ್ನು ಹಚ್ಚಿದ್ದಾರೆ. ಈ ಬಗ್ಗೆ ಲೇಖಕನ ಸೂಕ್ಷ್ಮ ದೃಷ್ಟಿಯ ಕುರಿತು ಏನು ಹೇಳಿದರೂ ಸಾಲದೆನ್ನಬಹುದು!

[illegible]

[illegible] ಜರ್ಮನ ಪ್ರಾಂತ್ಯದ ಲೆಫ್ಟಿನೆಂಟ ಗವರ್ನರ್ ಸರ್ [illegible] ಸಾಹೇಬರು ರಂಗೂನದಲ್ಲಿ [illegible] ಎಂಬ ಪತ್ರ ಭೋಜನದ ನಂತರ ಒಂದು ಭಾಷಣವನ್ನಿತ್ತರು. ಇತರ ಪ್ರಾಂತಗಳೊಂದಿಗೆ ಬ್ರಹ್ಮ ದೇಶಕ್ಕೆ ಸುಧಾರಣೆ ಎಕ್ಸಿನಲ್ಲಿ ಸಹ ಶಕ್ತಿ ಸಿಗದಿರುವುದಕ್ಕೆ ಈ ಮಹಾ ಪುರುಷರು ಎಷ್ಟರ ಮಟ್ಟಿಗೆ ಜವಾಬ್ದಾರರು ಎಂಬದನ್ನು ಈಗ ವಿಚಾರಿಸುವುದು ಅಗತ್ಯವಿಲ್ಲ. ಪರಂತು ಹಿಂದುಸ್ಥಾನದಲ್ಲಿ ಪ್ರಚಲಿತವಾದ ಈಗಿನ ಚಳವಳಿಯನ್ನು ಕುರಿತು ಅವರು ಒಂದು ಸಾದೃಶ್ಯವನ್ನು ಕೊಟ್ಟಿದ್ದಾರೆ. ಅಟ್ಟಳಿಗೆ ಹತ್ತಿದ ಮೇಲೆ ನಿಚ್ಚಣಿಕೆಯನ್ನು ಒದ್ದುಬಿಡಲು ಯತ್ನಿಸುವವನ ಮನೋವಿಚಾರ [illegible] ನಿಂತು ಸ್ವಗುಟ್ಟುವವರ ಧೋರಣೆ ಇವು 'ಎಂಥಾ ಭ್ರಮೆ' ಎಂದು ಸರ್. ಕ್ರಡೂಕರು ಒಂದೇ ಮಾತಿನಿಂದ ಮಹಾತ್ಮಾ ಗಾಂಧಿಯವರ ಮತ್ತು ಅವರ ಅನುಯಾಯಿಗಳ ಧೋರಣವನ್ನು ಹೆಸರಿಕ್ಕಿದ್ದಾರೆ. ಈ ಸಾದೃಶ್ಯವು ಸ್ವಲ್ಪ ಬದಲಾವಣೆಯಿಂದ ಇನ್ನೊಂದು ಕಡೆಯಲ್ಲಿ ಬಲು ಚೆನ್ನಾಗಿ ಒಪ್ಪುತಿತ್ತು. ಹಿಂದೀ ಸೈನ್ಯವೂ ಹಿಂದೀ ರಾಜಭಕ್ತಿಯೂ ಬ್ರಿಟಿಷ್ ಸೈನ್ಯವು ಇನ್ನೂ ರೂಪುಗೊಳ್ಳದೆ ಅವ್ಯಕ್ತ ಸ್ವರೂಪವಾಗಿರುವಲ್ಲಿ ಬ್ರಿಟಿಷ ಗೌರವವನ್ನೂ ಸುರಕ್ಷಿತ ಪಡಿಸಿ, ಪೆರಿಸ್ ಪಟ್ಟಣಕ್ಕೆ ಬಲಿಕ್ಕಿದ್ದ ಭಯಂಕರ ಗಂಡಾಂತರದ ಪ್ರವಾಹಕ್ಕೆ ಅಡ್ಡನಿಂತು ಅದರ ರಭಸವನ್ನು ಮುರಿದ ನಂತರ, ಪಾರ್ಲಿಮೆಂಟಿನಲ್ಲಿ ಈಗಿನ ಇಂಡಿಯಾ ಸೆಕ್ರೆಟರಿಗಳೂ, ಸ್ವತಃ ಮಿ| ಲೊಯ್ಡ ಜೋರ್ಜರೂ ಬೆನ್ನು ತಟ್ಟಿ, ಈಗ ಹಿಂದೀ ಜನರ ರಾಜಭಕ್ತಿಯ ಸ್ಮಾರಕವಾಗಿ ಕೊಟ್ಟ ಉಡುಗೆರೆಗಳನ್ನು ಬಿಚ್ಚಿ ನೋಡಿದಾಗ ನಮಗೆ ಒಂದು ದೃಷ್ಟಾಂತವು ನೆನಪಿಗೆ ಬರುತ್ತಿದೆ. ಉಪ್ಪರಿಗೆಯ ಕಿಟಕಿಯಿಂದ ಒಳನುಗ್ಗುವ ಮನುಷ್ಯನು ನಿಚ್ಚಣಿಕೆಯಿಲ್ಲದೆ ವ್ಯಥೆಪಡುವಾಗ ಅವನಲ್ಲಿ ವಿಶ್ವಾಸವಿದ್ದವನು ಕಾರಣ ಕೇಳಿದನು. 'ಒಳಗೆ ಭಯಂಕರ ಕೂಗು ಕೇಳಿಸುತ್ತದೆ, ಏನೊ ಭಯಂಕರ ಕೃತ್ಯ ನಡೆಯುತ್ತಲಿದೆ, ಅದನ್ನು ಈಗಲೇ ತಡಿಸದಿದ್ದರೆ ವಿಶೇಷ ಪ್ರಮಾದವಾದೀತು' ಎಂದಾಗ, ಎದೆ ಕರಗಿ ಆ ವಿಶ್ವಾಸಿಕನು ಗೋಡೆಯ ಬಳಿಯಲ್ಲಿ ನಿಂತು ತನ್ನ ಹೆಗಲ ಮೇಲೇರಿಸಿ ಕಿಟಕಿಯ ದೊಣ್ಣೆ ಕೈಗೆ ಎಟಕುವಂತೆ ಮಾಡಿದನು. ದೊಣ್ಣೆಯನ್ನು ಬಿಗಿದು ಹಿಡಿದನಂತರ ನುಗ್ಗಿ ಉದ್ದೇಶ ಮುಗಿಸಿ ಬಂದ ಮೇಲೆ ಪುನಃ ಕಿಟ್ಕಿಯಿಂದ ಇಳಿಯುವಾಗ ಹೆಗಲು ತನ್ನ ಕಾಲಿಗೆ ಎಟಕಿದೊಡನೆ ತನ್ನ ಉನ್ಮತ್ತತೆಯಿಂದ ಅವನ ಕಪಾಲಕ್ಕೊ ಕೆನ್ನೆಗೊ ತುಳಿದು ಬಿಟ್ಟು 'ಸರಿ ನಿಲ್ಲು' ಎಂದು ಗದರಿಸುವುದಾದರೆ ಅಡಿಗೆ ನಿಂತ ಮನುಷ್ಯನು ಹೆಗಲು ಒಡ್ಡುವ ಬದಲಾಗಿ ಅಸಹಕಾರಿತೆಯನ್ನು ಕೈಕೊಂಡು ದೂರ ನಿಂತು ಕಿಟಕಿಯ ದೊಣ್ಣೆಗೆ ಹಿಡಿದು ನೇತಾಡುವವನನ್ನು ಕಣ್ಣೆವೆ ಇಕ್ಕದೆ ನೋಡುತ್ತಿದ್ದರೆ ತಪ್ಪೇನು? ಅಂತು ನಮಗೆ ಒಂದು ಸೂಚನೆ ಕೊಡಬೇಕಾಗುತ್ತಿದೆ. ಈಗಿನ ರಾಜಕಾರಣ ಕರ್ತರು ಅಧಿಕಾರದ ಬಲದಿಂದ ಕಾಲವರಿಯದೆ ಬಾಯ್ಬಿಚ್ಚುವ ಬದಲಾಗಿ ಬಾಯ್ಮುಚ್ಚಿಕೊಂಡಿದ್ದರೆ ಈಗ ಕರಳಿದ ಕ್ರೋಧಕ್ಕೆ ತುಪ್ಪ ಹೊಯ್ದಂತೆ. ಆಗುವುದು ಕಮ್ಮಿಯಾದೀತಲ್ಲವೆ?

ಮಂಗಳೂರು.

ಈ ತಿಂಗಳಲ್ಲಿ ಮಂಗಳೂರ ತಾಲೂಕು ಬೋರ್ಡಿನ ಅಧಿವೇಶನವು ತಾ. ೧೬ನೇ ಗುರುವಾರ ಮಧ್ಯಾಹ್ನ ೧೨ ಘಂಟೆಗೆ ಪಾಣೆಮಂಗಳೂರ ಮುಸಾಫರ್ ಬಂಗಲೆಯಲ್ಲೂ, ಉಪ್ಪಿನಂಗಡಿ ತಾಲೂಕು ಬೋರ್ಡಿನ ಅಧಿವೇಶನವು ತಾ. ೧೭ನೇ ಶುಕ್ರವಾರ ಪ್ರಾತಃಕಾಲ ೧೦ ಗಂಟೆಗೆ ಸುಬ್ರಮಣ್ಯ (ತಾಲೂಕು ಫಂಡು) ಛತ್ರದಲ್ಲಿ ಮತ್ತು ಕಾಸರಗೋಡು ತಾಲೂಕು ಬೋರ್ಡಿನ ಅಧಿವೇಶನವು ತಾರೀಕು ೨೩ನೇ ಮಧ್ಯಾಹ್ನ ೨ ಘಂಟೆಗೆ ಸದರಿ ತಾಲೂಕು ಬೋರ್ಡಿನ ಆಫೀಸಿನಲ್ಲೂ ನೆರೆಯುವುದು.

ಓಲ್ ಇಂಡಿಯ ಕೊಂಗ್ರೆಸ ಕಮ್ಮಿಟಿಯವರು ನೇಮಿಸಿದ ಸಬ್ ಕಮ್ಮಿಟಿಯು ತಯಾರಿಸಿದ ವರದಿಯಲ್ಲಿ ರಾಷ್ಟ್ರೀಯ ಸಭೆಯ ಮುಖ್ಯ ಧ್ಯೇಯ ಮತ್ತು ಸೂತ್ರಗಳಲ್ಲಿ ಯಾವ ತರದ ಬದಲಾವಣೆಗಳನ್ನು ಮಾಡತಕ್ಕದೆಂದು ದೇಶದ ಎಲ್ಲಾ ಕಡೆಗಳಲ್ಲಿ ಕೊಂಗ್ರೆಸಿನ ಪರವಾಗಿ ಕೆಲಸ ಮಾಡುವ ಸಂಸ್ಥೆಗಳ ಅಭಿಪ್ರಾಯಗಳನ್ನು ಕೇಳಿರುವುದರಿಂದ ನಮ್ಮ ಜಿಲ್ಲೆಯು ಯಾವ ಸೂಚನೆಗಳನ್ನು ಕಳುಹಿಸತಕ್ಕದ್ದು ಎಂಬುದನ್ನು ಬರುವ ತಾ. ೧೯ನೇ ಆದಿತ್ಯವಾರ ಕೂಡುವ ಡಿಸ್ಟ್ರಿಕ್ಟ್ ಎಸೋಸಿಯೇಶನಿನ ಸಭೆಯಲ್ಲಿ ನಿರ್ಧರಿಸಲಿಕ್ಕಿದೆ.

ಬರುವ ಡಿಸೆಂಬರ ತಾರೀಕು ೨೫ರಲ್ಲಿ ನಾಗಪುರದಲ್ಲಿ ಕೂಡುವ ಇಡಿ ಹಿಂದೂದೇಶದ ವಿದ್ಯಾರ್ಥಿಗಳ ಸಾರ್ವಜನಿಕ ಸಭೆಗೆ ನಮ್ಮ ಜಿಲ್ಲೆಯ ವಿದ್ಯಾರ್ಥಿಗಳ ಕಡೆಯಿಂದ ಕಳುಹಿಸುವ ಪ್ರತಿನಿಧಿಗಳನ್ನು ಆರಿಸಲು ಇಂದಿನ ಸಾಯಂಕಾಲ ೫ ಗಂಟೆಗೆ ರಾಷ್ಟ್ರೀಯ ಬಾಲಿಕಾ ಪಾಠಶಾಲೆಯಲ್ಲಿ ಒಂದು ಸಭೆ ಕೂಡಲಿಕ್ಕಿದೆ.

ನಿರ್ಜೀವಾವಸ್ಥೆಯನ್ನು ಹೊಂದಿದ್ದ ಸ್ವದೇಶದ ಕೈಗಾರಿಕೆಯನ್ನು ಪುನರುಜ್ಜೀವಿಸಲು ರಾಷ್ಟ್ರೀಯ ಕೈಗಾರಿಕೆ ಶಾಲೆಯೊಂದನ್ನು ನಮ್ಮ ಪಟ್ಟಣದಲ್ಲೂ ತೆರೆಯುವುದು; ಮತ್ತು ಜನರಲ್ಲಿನ ವಾದವಿವಾದಗಳನ್ನು ಸರಕಾರಿ ಕೋರ್ಟುಗಳ ಮೂಲಕ ತೀರ್ಮಾನಿಸುವ ಬದಲು ಜನರ ಸ್ವತಂತ್ರವಾದ ನ್ಯಾಯಸ್ಥಾನಗಳನ್ನು (Arbitration Courts)ಗಳನ್ನು ತೆರೆದು ಇವುಗಳ ಮೂಲಕ ಇತ್ಯರ್ಥಿಸಲು ಇಂಥಾ ಪಂಚಾಯತ ನ್ಯಾಯಸ್ಥಾನಗಳನ್ನು ಸ್ಥಾಪಿಸುವುದು, ಈ ವಿಷಯಗಳನ್ನು ಆಲೋಚಿಸಲು ನಾಳೆ ಸಾಯಂಕಾಲ ೫॥ ಗಂಟೆಗೆ ಇಸ್ಲಾಮಿಯಾ ಕ್ಲಬ್ಬಿನಲ್ಲಿ ಒಂದು ಸಭೆ ಕೂಡುವುದು.

ಕಳೆದ ಸೋಮವಾರ ಮಂಗಳೂರ ಟೈನ್ ಮೈದಾನಿನಲ್ಲಿ ಶ್ರೀಯುತ ಕೃಪಾಶಂಕರ ಜನಾರ್ಧನಾಚಾರ್ಯರ ಅಧ್ಯಕ್ಷತೆಯಲ್ಲಿ ಒಂದು ದೊಡ್ಡ ಸಭೆ ಕೂಡಿ ಕೆಳಗಿನ ಠರಾವುಗಳು ಪಾಸಾದವು—ಮಹಾತ್ಮಾ ಗಾಂಧಿಗಳ ಯೋಜನೆಯಂತೆ—ಹೊಸ ನ್ಯಾಯವಿಧಾಯಕ ಸಭೆಗೆ ಈಗ ಇಲ್ಲಿಂದ ಮೆಂಬರರಾಗಿ ಹೋಗತಕ್ಕವರು ನಿಜವಾಗಿ ಸಾರ್ವಜನಿಕರಿಂದ ಆರಿಸಲ್ಪಟ್ಟ ಪ್ರತಿನಿಧಿಗಳಲ್ಲ. ಇವರ ಮೂಲಕ ಜನರು ತಮ್ಮ ಅಂದೋಲನಗಳನ್ನು ಬರುವ ಸಭೆಯ ಮುಂದೆ ಇಡಲಾರರು [illegible]

[illegible] ಮಹಮ್ಮದೀಯರಲ್ಲಿ ಅಗ್ರ ಮುಖಂಡರಾದ ಶೇಕವುಲ್ ಹಿಂದ ಮೌಲಾನಾ ಮಹಮ್ಮದ್ ಹಸನ್ ಸಾಹೇಬ್ ಎಂಬ ದೇಶಭಕ್ತರ ವಿಯೋಗದ ಸಂತಾಪವನ್ನು ಇಲ್ಲಿಯ ಕೆಲಜನರು ಇಸ್ಲಾಮಿಯಾ ಕ್ಲಬ್ಬಿನಲ್ಲಿ ಕಳೆದ ಆದಿತ್ಯವಾರ ಒಂದು ದುಃಖ ಸೂಚಕ ಸಭೆಯ ಮೂಲಕ ವ್ಯಕ್ತಪಡಿಸಿದರು.

ಪಟ್ಟಣದ ಎಲಿಮೆಂಟರಿ ಶಾಲೆಯ ಉಪಾಧ್ಯಾಯರ ಎಸೋಸಿಯೇಶನು ಎಂದಿನಂತೆ ಈ ವರುಷವೂ ತಾರೀಕು ೧೩ನೇ ದಿನ ಗವರ್ನಮೆಂಟ ಕಾಲೇಜಿನ ಮಹೋಪಾಧ್ಯಾಯರಾದ ರಾ| ಆರ್. ಯಂ. ಸತ್ಯೋ ಇವರ ಅಧ್ಯಕ್ಷತೆಯಲ್ಲಿ ಢಿಲ್ಲಿ ದರ್ಬಾರ ಸಮಾರಂಭವನ್ನು ಇಲ್ಲಿಯ ಎಲಿಮೆಂಟರಿ ಶಾಲೆಗಳ ಪಂದ್ಯಾಟ ಮೊದಲಾದ ವಿನೋದಗಳಿಂದ ನೆರವೇರಿಸಲಿಕ್ಕಿರುವರು.

ಜಿಲ್ಲಾ ಕಲೆಕ್ಟರರು ಈ ತಿಂಗಳ ತಾ. ೧೧ರಿಂದ ೧೩ ಉಪ್ಪಿನಂಗಡಿ, ತಾ. ೧೪ ಗುಂಡ್ಯ, ತಾ. ೧೫ ಸುಬ್ರಮಣ್ಯ, ತಾ. ೧೭ ಕುಳಗುಂದ, ತಾ. ೧೮ರಿಂದ ೧೯ ಶಿರಾಡಿ, ತಾ. ೨೦ ಮಂಗಳೂರು ಈ ಪ್ರಕಾರ ಸರ್ಕೀಟು ಬೆಳಸುವರು.

ಕಳೆದ ನವೆಂಬರ ತಿಂಗಳಲ್ಲಿ ಪಟ್ಟಣದಲ್ಲಿ ೬೭ ಮರಣಗಳು ಮತ್ತು ೯೩ ಜನನಗಳು ಇದ್ದವು.

ದಕ್ಷಿಣ ಕನ್ನಡ ಜಿಲ್ಲೆಯಿಂದ ಜನರಲ್ ಸೀಟಿಗೆ ನಿಂತಿದ್ದ ಉಮೇದ್ವಾರರ ಪೈಕಿ ದಿವಾನ ಬಹದ್ದೂರ ರಾಮಯ್ಯ ಪೂಂಜರಿಗೆ ೩,೩೯೩ ವೋಟುಗಳೂ ಮ| ರಾ| ಕೆ. ಸದಾಶಿವ ಭಟ್ಟರಿಗೆ ೨,೭೨೮ ವೋಟುಗಳೂ ಮ| ರಾ| ಬಿ. ಮಹಾಬಲ ಹೆಗಡೆಯವರಿಗೆ ೧,೬೩೩ ವೋಟುಗಳೂ ಮ| ರಾ| ರಾಜಗೋಪಾಲಕೃಷ್ಣರಾಯರಿಗೆ ೧೪೭ ವೋಟುಗಳೂ ಸಿಕ್ಕಿದವು ಎಂದು ಗೊತ್ತಾಗಿದೆ. ಈ ಜಿಲ್ಲೆಯ ೨೧,೧೪೧ ವೋಟರರ ಪೈಕಿ ೪,೩೭೭ ಮಂದಿ ಮಾತ್ರ ವೋಟು ಕೊಟ್ಟರು; ಅವರಲ್ಲಿಯೂ ಸುಮಾರು ೧೩೭ ವೋಟುಗಳು ನಿರರ್ಥಕವಾಗಿದ್ದವು ಎಂದೂ ತಿಳಿಯುತ್ತೇವೆ. ಪಶ್ಚಿಮ ಕರಾವಳಿಯ ಕ್ರಿಶ್ಚನ್ ವೋಟರರಿಂದ ರಾವಸಾಹೇಬ ಇ. ಸಿ. ಯಮ್. ಮಸ್ಕೆರೆಂಞಾಸು ಮದ್ರಾಸಿನ ಸಭೆಗೆ ಆರಿಸಲ್ಪಟ್ಟಿರುವರು. ಇಂಡಿಯನ್ ಲೆಜಿಸ್ಲೇಟಿವ್ ಎಸೆಂಬ್ಲಿಗೆ ಮಲಬಾರಿನ ಮ. ರಾ. ರಾ. ಕಾವಲಪಾರಾ ಮೂಪಿಲ್ ನಾಯರರು ಪಶ್ಚಿಮ ಕರಾವಳಿ ಮತ್ತು ನೀಲಗಿರಿ ಜಿಲ್ಲೆಯ ಪರವಾಗಿ ಆರಿಸಲ್ಪಟ್ಟಿರುವರು.

ಡಿಪ್ರೆಸ್ಸಡ್ ಕ್ಲಾಸು ಮಿಶ್ಯನಿನ ಆಡಳಿತೆಯ ಸಭೆಯ ಜೊಯಿಂಟ್ ಸೆಕ್ರೆಟರಿಗಳಾಗಿದ್ದ ಮ| ರಾ| ಕಾರ್ನಾಡ ಸದಾಶಿವರಾಯರು ನೊನ್ ಕೊಓಪರೇಶನ್ನಿನ ನಿಮಿತ್ತವಾಗಿ ಸದರಿ ಕೆಲಸಕ್ಕೆ ರಾಜಿನಾಮೆ ಕೊಟ್ಟರು; ಅವರ ಸ್ಥಾನದಲ್ಲಿ ಮ| ರಾ| ಯಮ್. ಎಸ್. ಮಾಧವರಾಯರು ಆರಿಸಲ್ಪಟ್ಟಿದ್ದಾರೆ, ಖಾನಬಹದ್ದೂರ ಹಾಜಿ ಅಬ್ದುಲ್ಲಾ ಹಾಜಿ ಕಾಸಿಂ ಸಾಹೇಬ ಬಹದ್ದೂರರು ಈ ಆಡಳಿತೆ ಸಭೆಯ ಒಬ್ಬ ಮೆಂಬರರಾಗಿ ಆರಿಸಲ್ಪಟ್ಟಿದ್ದಾರೆ ಎಂದು ಮ| ರಾ| ರಾಯ ಸಾಹೇಬ ಕುದ್ಮುಲ್ ರಂಗರಾವ್ (ಸದರಿ ಸಂಘದ ಸೆಕ್ರೆಟರಿಗಳು) ಬರೆಯುತ್ತಾರೆ.

ಮಿ| ಟಿ. ಇ. ಮೊಯಿರ್ ಸಾಹೇಬರು ಲೇಬರ್ ಕಮ್ಮಿಶನರಾಗಿದ್ದು ಈ ಜಿಲ್ಲೆಯನ್ನು ಇದೇ ೧೦ನೆ ತಾರೀಕಿಗೆ ಸಂದರ್ಶಿಸುವರು.

ಮಿ| ಆರ್. ಎಚ್. ದೇಶಪಾಂಡೆ ಎಮ್. ಎ. ಇವರು ಮುಂಬಯಿ ಕರ್ನಾಟಕ ಪ್ರಾಂತದಲ್ಲಿ ಎಡ್ಯುಕೇಶನಲ್ ಇನ್ಸ್‌ಪೆಕ್ಟರರಾಗಿದ್ದು ಪೆನ್ಶನ್ ಹೊಂದಿದವರು. ಇವರು ಕನ್ನಡ ಭಾಷಾಭಿಮಾನಿಗಳು, ಧಾರ್ವಾಡ ಕನ್ನಡ ವಿದ್ಯಾವರ್ಧಕ ಸಂಘದ ಸ್ಥಾಪಕರು. ಇವರು ಕನ್ನಡ ಜಿಲ್ಲೆಯಲ್ಲಿ ಈಗ ಕೆಲವು ದಿವಸ ಪ್ರವಾಸ ಮಾಡುತಿದ್ದು, ಇದೇ ಮಂಗಳವಾರ ನೆಶನಲ್ ಸ್ಕೂಲಿನಲ್ಲಿ 'ತರುಣ ಭಾರತಸಂಘ'ದವರ ಆಮಂತ್ರಣದಿಂದ 'ಈಗಿನ ಶಿಕ್ಷಣ' ಎಂಬದನ್ನು ಕುರಿತು ಚಲೋ ಭಾಷಣಮಾಡಿದರು. ಮ| ರಾ| ಅ. ಶ್ರೀನಿವಾಸ ಪೈ, ಬಿ. ಎ. ಬಿ. ಎಲ್. ಇವರು ಅಧ್ಯಕ್ಷಸ್ಥಾನವನ್ನು ಸೇರಿದ್ದರು. ಮಿ| ದೇಶಪಾಂಡೆಯವರ ಕನ್ನಡ ಭಾಷಣದಲ್ಲಿ ದೇಶಭಾಷೆಯ ಕಡೆಗೆ ಉದಾಸೀನತೆ ಮತ್ತು ಇಂಗ್ಲಿಷ ಭಾಷೆಯ ಪ್ರಾಶಸ್ತ್ಯದಿಂದ ದೇಶೋನ್ನತಿಗೆ ಹೇಗೆ ಬಾಧಕಗಳು ಇವೆ, ವಿದ್ಯಾರ್ಥಿಗಳ ಜೀವಕಾಲವು ಅನ್ಯಭಾಷೆಯನ್ನು ಮಥನ ಮಾಡುವುದರಲ್ಲಿ ಎಷ್ಟು ಅನಾವ್ರಯವಾಗುತ್ತಿದೆ ಎಂಬದನ್ನು ಕುರಿತು ಮುಖ್ಯ ವಿಚಾರವಿತ್ತು.

ಇವರು ದ್ರಾವಿಡ ವಿದ್ಯಾರ್ಥಿಗಳ ಭವನದಲ್ಲಿ "ಕನ್ನಡಿಗರರ ಕರ್ತವ್ಯ" ಎಂಬೀ ವಿಷಯದಲ್ಲಿ ಒಂದು ಉಪನ್ಯಾಸವನ್ನು ಮಾಡಿದರು. ಉಪನ್ಯಾಸಕರ್ತರು ಸ್ವರಾಜ್ಯವೇ ಹಿಂದಿಗಳ ಧ್ಯೇಯವಾಗಿರುವುದರಿಂದ ಕನ್ನಡಿಗರು ತಮ್ಮ ಮುಂದೆಯೂ ಇದೇ ಧ್ಯೇಯವನ್ನು ಇಟ್ಟುಕೊಂಡು ಅದಕ್ಕೆ ಬೇಕಾಗಿರುವ ಕಾರ್ಯಗಳನ್ನು ಸಾಧಿಸಬೇಕು ಎಂದು ಹೇಳಿದರು.

ತಲಗಿ ಹರವನಹಳ್ಳಿ ಮಠದ ಬ್ರ॥ ಶ್ರೀ॥ ಸಿದ್ಧಾಂತಿ ಹೊಳೆಬಸವ ಶಾಸ್ತ್ರಿಗಳಿಂದ ರಚಿಸಲ್ಪಟ್ಟ ದುರ್ಮತಿ ಸಂವತ್ಸರದ ಪಂಚಾಂಗದ ಪ್ರತಿಯೊಂದನ್ನು ಈ ಸಂಚಿಕೆಯೊಂದಿಗೆ ಕಳುಹಿಸಿರುತ್ತೇವೆ.

[illegible]

ಸ್ವದೇಶಾಭಿಮಾನಿ.

ಶಕ ೧೮೪೩ ಕಾರ್ತಿಕ ಬ॥ ೩೦ ಶುಕ್ರವಾರ.

ಲೋರ್ಡ ಸಿಂಹರ ಉದ್ಗಾರಗಳು.

ಲೋರ್ಡ ಸಿಂಹರು ಮುಂಬಯಿ ಯುನಿವರ್ಸಿಟಿಯ ಎಲ್. ಎಲ್. ಡಿ. ಎಂಬ ಬಹುಮಾನದ ಪದವಿಯನ್ನು ಸ್ವೀಕರಿಸುವ ಉದ್ದೇಶದಿಂದ ಮುಂಬಯಿಗೆ ಬಂದಿದ್ದರು. ಲೋರ್ಡ ಸಿಂಹರು ಸ್ವತಃ ಕಾಯಿದೆ ಪಂಡಿತರು, ಬುದ್ಧಿಮತ್ತೆಯುಳ್ಳವರು, ರಾಜಕಾರಣ ಧುರೀಣರು ಮತ್ತು ಸಾಮರ್ಥ್ಯವಂತರು. ಲೋರ್ಡ ಸಿಂಹರಲ್ಲಿ ಇವೇ ಎಂದಲ್ಲ, ಇನ್ನೂ ಅನೇಕ ಗುಣಗಳು ಅಧಿಷ್ಠಿತವಾಗಿವೆ ಎಂಬುದಕ್ಕೆ ಯಾವ ಸಂದೇಹವೂ ಇಲ್ಲ. ಅವರು ಈ ಮೇರೆಗೆ ಇಂಥ ಗುಣಸಮುಚ್ಚಯದಿಂದ ಕೂಡಿದವರಾಗಿದ್ದ ಕಾರಣ ಈ ಹೊತ್ತು ಗವರ್ನರಿಯಂಥ ಉಚ್ಚ ಬಹುಮಾನದ ಸ್ಥಾನವನ್ನು ಹೊಂದಿದ್ದಾರೆ. ಅವರು ಹೊಂದಿರುವ ಇದು ವರೆಗಿನ ಸ್ಥಾನಗಳೆ ಅವರ ಯೋಗ್ಯತೆಯ ಸಾಕ್ಷಿಯನ್ನು ಕೊಡುತ್ತವೆಂದು ಹೇಳಿದರೆ ಅದು ಅತಿಶಯೋಕ್ತಿಯ ಮಾತಾಗಲಿಕ್ಕಿಲ್ಲ. ಹಿಂದಿಗಳಲ್ಲಿ ಮೊದಲನೆ ಎಗ್-ಝಿಕ್ಯುಟಿವ್ ಕೌನ್ಸಿಲರ್, ಮೊದಲನೆ ಅಂಡರ್ ಸಕ್ರೆಟರಿ, ಮೊದಲನೆ ಲೋರ್ಡ ಹಾಗು ಮೊದಲನೆ ಗವರ್ನರ ಈ ಮೇರೆಗೆ ಅನೇಕ ಉಚ್ಚ ಸ್ಥಾನಗಳನ್ನು ಪಡೆದಿರುವ ಲೋರ್ಡ ಸಿಂಹರಿಗೆ ಮುಂಬಯಿ ಯುನಿವರ್ಸಿಟಿಯು ತನ್ನ ಗುಣಗ್ರಾಹಕತೆಯನ್ನು ವ್ಯಕ್ತಪಡಿಸಲು ಎಲ್. ಎಲ್. ಡಿ.ಯ ಬಹುಮಾನದ ಪದವಿಯನ್ನು ಕೊಟ್ಟರೆ ಅದು ಲೋರ್ಡ ಮಹಾಶಯರ ಗುಣಕ್ಕೂ ಮುಂಬಯಿ ಯುನಿವರ್ಸಿಟಿಯ ಗುಣಜ್ಞತೆಗೂ ಅನುರೂಪವಾದ ವಿಷಯವೆ ಸರಿ. ಯುನಿವರ್ಸಿಟಿಯಿಂದ ಸಮರ್ಪಿಸಲ್ಪಡುವ ಪದವಿಯನ್ನು ಸ್ವೀಕರಿಸುವುದಕ್ಕಾಗಿ ಲೋರ್ಡ ಮಹಾಶಯರು ಕಳೆದ ವಾರ ಮುಂಬಯಿಗೆ ಬಂದಿದ್ದರು.

ಅವರು ಮುಂಬಯಿಗೆ ದಯಮಾಡಿಸಿರುವ ಈ ಸಂದರ್ಭವನ್ನು ಸಾಧಿಸಿ ಮುಂಬಯಿಯ ಲಿಬರಲ್ ಎಸೋಸಿಯೇಶನಿನವರು ಹಾಗು ಪ್ರಜೆಯ ಕಖ್ಯಾನ ಸಭೆಯವರು ಲೋರ್ಡ ಮಹಾಶಯರಿಗೆ ಒಂದು ಔತಣವನ್ನು ಕೊಟ್ಟರು. ಈ ಪ್ರಸಂಗದಲ್ಲಿ ದಿನಶಹಾವಾಛಾ, ಚಂದಾವರಕರ, ಸೆಟಲವಾಡ, ಶಹಾ, ವಾಡಿಯಾ ಮುಂತಾದ ಸರದಾರರು ಹಾಜರಿದ್ದರಲ್ಲದೆ ಪರಾಂಜಪೆ, ಪಾರೆಖ, ಜೋಶಿ ಇತ್ಯಾದಿ ಶಾಸ್ತ್ರಿಗಳು ಸನ್ನಿಹಿತರಾಗಿದ್ದರು. ಈ ಔತಣದ ಸಮಾರಂಭದಲ್ಲಿ ಲೋರ್ಡ ಸಿಂಹರು ಒಂದು ವಿಸ್ತೃತವಾದ ಭಾಷಣವನ್ನು ಕೊಟ್ಟರು. ಅವರ ಈ ವಿಸ್ತೃತವಾದ ಭಾಷಣದಲ್ಲಿ ಹಿಂದುಸ್ಥಾನದ ಈಗಿನ ರಾಜಕೀಯ ಪರಿಸ್ಥಿತಿ, ವಿಶೇಷವಾಗಿ ಮಹಾತ್ಮಾ ಗಾಂಧಿಗಳ ನೊನ್-ಕೊ-ಒಪರೇಶನಿನ ವಿಷಯ ಇವು ಪ್ರಸ್ತಾಪಿಸಲ್ಪಟ್ಟಿದ್ದವೆಂಬುದು ಹೇಳಬೇಕಾದ ಆಗತ್ಯವಿಲ್ಲ. ಲೋರ್ಡ ಸಿಂಹರು ಒಂದು ಕಾಲದಲ್ಲಿ ಹಿಂದುಸ್ಥಾನದ ರಾಜಕೀಯ ಚಳವಳದಲ್ಲಿ ಭಾಗವನ್ನು ವಹಿಸಿದವರಾಗಿದ್ದು ಕೊಂಗ್ರೆಸಿನ ಅಧ್ಯಕ್ಷಸ್ಥಾನವನ್ನು ಕೂಡ ಒಮ್ಮೆ ಅಲಂಕರಿಸಿದವರಾಗಿದ್ದರು. ಆಗ ಅವರು ಹಿಂದುಸ್ಥಾನದ ರಾಜಕೀಯ ಸಂಕಷ್ಟಗಳ ಬಗ್ಗೆ ಯೋಗ್ಯವಾದ ವಕಾಲತನ್ನು ನಡಿಸಿದ್ದರು. ಹಿಂದುಸ್ಥಾನದ ಬಾಯಾರಿಕೆಯು ಸ್ವರಾಜ್ಯದ ಗಂಗೋದಕದಿಂದಲೆ ಶಾಂತವಾದೀತೆಂಬ ಮಾತನ್ನು ಆಗ ಅವರು ತಮ್ಮ ಭಾಷಣದಲ್ಲಿ ಧ್ವನಿಸಿದ್ದರು. ಈಹೊತ್ತಿನ ಅವರ ಮತವಾದರೂ ಅದಕ್ಕೆ ಅನ್ಯಥಾ [illegible] ಒಂದು ಈ ಚಳವಳಿಯು [illegible] ತ್ತಿರುವ ನ್ಯಾಯವನ್ನು [illegible] ಗಾಂಧಿ ಸವ್ಯಾಖ್ಯಾನ ಮಾಡುವದರ [illegible] ದಲ್ಲಿ ಒಂದು [illegible] ವನ್ನು ಪಡೆದವರಾಗಿದ್ದಾರೆ ಎಂದ ಮೇಲೆ ಈಗ ಹಿಂದುಸ್ಥಾನದ ಸ್ವರಾಜ್ಯದ ದಾರಿಯು ಕೊಂಚ ಸಮೀಪವೇ ಆಗಿದೆ ಎಂಬುದಕ್ಕೆ ಅಡ್ಡಿ ಇಲ್ಲ. ಇದು ಬರೆ ನಮ್ಮ ಕಲ್ಪನೆಯು ಮಾತ್ರವಲ್ಲ. ಲೋರ್ಡ ಸಿಂಹರು ತಮ್ಮ ಮೊನ್ನೆಯ ಭಾಷಣದಲ್ಲಿ ಮೊಂಟೆಗ್ಯು ಸುಧಾರಣೆಯು ರಿಸ್‌ಪೊನ್ಸಿಬಲ್ ಸೆಲ್ಫ ಗವರ್ನಮೆಂಟಿನ ಹತ್ತರದ ದಾರಿಯಾಗಿದೆ ಎಂದು ಹೇಳಿ, ಈ ದಾರಿಯನ್ನು ಆಕ್ರಮಿಸುವಾಗ ಜನರ ಸಹಕಾರಿತೆಯು ಅವಶ್ಯಕವಾಗಿ ಬೇಕು ಎಂದು ಸೂಚಿಸಿ ಅಂಥ ಸಹಕಾರಿತೆಯು ತನ್ನ ಮಿತ್ರವರ್ಗದಿಂದ ಹಾಗು ಇತರರಿಂದ ದೊರಕೀತೆಂದು ಆಸೆಯನ್ನು ಪ್ರದರ್ಶಿಸಿದ್ದಾರೆ.

ಹಿಂದುಸ್ಥಾನಕ್ಕೆ ಸ್ವರಾಜ್ಯ ಸಿಗುವುದು ಅವಶ್ಯಕವೆಂದು ಲೋರ್ಡ ಸಿಂಹರಿಗೆ ತೋರುತ್ತಿದೆಯಾದರೂ ಜನರ ಒಂದು ಕ್ರಮವು ಮಾತ್ರ ಅವರಿಗೆ ಸೇರುವುದಿಲ್ಲ. ಜನರು ಸ್ವರಾಜ್ಯವನ್ನು ಅಪೇಕ್ಷಿಸಲಿ, ಅದು ನ್ಯಾಯ; ಆದರೆ ಅವರು ಗಾಂಧಿಗಳ ನಾಯಕತ್ವದ ಕೆಳಗೆ ಅಸಹಕಾರಿತೆಯ ಯಾವ ಚಳವಳವನ್ನು ಮಾಡುತ್ತಿದ್ದಾರೊ ಅದು ಸರ್ವಥಾ ಯೋಗ್ಯವಲ್ಲ, ಅದು ಘಾತಕವಾದುದೆಂದು ಸಿಂಹರು ಅಭಿಪ್ರಾಯ ಪಡುತ್ತಾರೆಂದು ಅವರ ಉದ್ಗಾರಗಳ ಮೇಲಿಂದ ಹೇಳಬೇಕಾಗುತ್ತದೆ. ಲೋರ್ಡ ಸಿಂಹರ ದೃಷ್ಟಿಯಿಂದ ಅಸಹಕಾರಿತೆಯನ್ನು ಚಿತ್ರಿಸಬಹುದಾದರೆ, ಅದು ಅವಿಶ್ವಾಸ, ತಪ್ಪು ತಿಳಿವು, ದುರಭಿಪ್ರಾಯ ಮತ್ತು ದ್ವೇಷ ಈ ಮನೋವೃತ್ತಿಗಳನ್ನು ಹುಟ್ಟಿಸುವುದು, ಮನುಷ್ಯನು ಒಂದು ಸಿಂಹದ ಚಿತ್ರವನ್ನು ಬರೆಯಹತ್ತಿದರೆ ಅವನು ಆ ಸಿಂಹವನ್ನು ಒಂದು ಪಂಜರದಲ್ಲಿ ಕಟ್ಟಿಹಾಕಿದ್ದಂತೆ ಹೇಗೆ ರೂಪಿಸುತ್ತಾನೊ ಹಾಗೆಯೆ ಸರಕಾರಿ ಅಧಿಕಾರಿಗಳಾದ ಸಿಂಹರು ಅಸಹಕಾರಿತೆಯನ್ನು ಮೇಲಿನಂತೆ ಚಿತ್ರಿಸುವುದು ಸಹಜವೆ. ಆದರೆ ಅಸಹಕಾರಿತೆಯು ಅವಿಶ್ವಾಸ, ಅಪ್ರೀತಿ, ತಪ್ಪು ತಿಳಿವಳಿಕೆ ಮುಂತಾದ್ದನ್ನು ಹುಟ್ಟಿಸೀತೆಂದು ಹೇಳಿದ ಮಾತು ಅಷ್ಟೊಂದು ನಿಜವಲ್ಲ. ಅವರು ಈ ರೀತಿಯಿಂದ ಅದರ ಮೀಮಾಂಸೆಯನ್ನು ಮಾಡುವುದಕ್ಕಿಂತ ಸರಕಾರಿ ಅಧಿಕಾರಿಗಳು ಜನರ ಮೇಲೆ ವಿಶ್ವಾಸವನ್ನು ಇಟ್ಟಿರಲಿಲ್ಲ, ಜನರನ್ನು ಬೇಕಷ್ಟು ಪ್ರೀತಿಸಿರಲಿಲ್ಲ, ಜನರ ವಿಷಯವಾಗಿ ತಪ್ಪು ತಿಳಿವಳಿಕೆಯನ್ನು ಕಟ್ಟಿಕೊಂಡರು, ಮತ್ತು ಈ ಕಾರಣದಿಂದಲೆ ಜನತೆಯು ಗಾಂಧಿಗಳ ಮತ್ತು ರಾಷ್ಟ್ರೀಯ ಸಭೆಯ ನೇತೃತ್ವದ ಕೆಳಗೆ ಅಸಹಕಾರಿತೆಯ ಅಂಗೀಕಾರವನ್ನು ಮಾಡಿದೆ ಎಂದು ಹೇಳಿದರೆ ಆ ಮಾತು ಹೆಚ್ಚು ಅನುರೂಪವೂ, ಅಧಿಕಾರಿಗಳಿಗೆ ಬೋಧಪ್ರದವಾದ್ದೂ ಆಗುತಿತ್ತು; ಎಂದರೆ ಅಸಹಕಾರಿತೆಯ ಬಳ್ಳಿಯು ಅವಿಶ್ವಾಸ ಮುಂತಾದ ಕಾಯಿಗಳನ್ನು ಬಿಟ್ಟೀತೆಂಬುದು ನಿಜವಲ್ಲ, ಆದರೆ ಅದು ಸರಕಾರಿ ಅಧಿಕಾರಿಗಳ ಅಸಹಾನುಭೂತಿಯ ಬಳ್ಳಿಯಾಗಿದೆ ಎಂಬುದೆ ಹೌದು. ಈ ಅಸಹಕಾರಿತೆಯಿಂದ ದ್ವೇಷವುಂಟಾದೀತೆಂದು ಲೋರ್ಡ ಮಹಾಶಯರು ವರ್ತಿಸಿದ ಭವಿಷ್ಯವು ಸರ್ವಥಾ ಒಪ್ಪತಕ್ಕದ್ದಲ್ಲವೆಂದು ಹೇಳಬಹುದು. ಅತ್ಯಾಚಾರ ಪರಾಙ್ಮುಖವಾದ ಮತ್ತು ಸತ್ಯಪ್ರೀತಿಯ ತಳಹದಿಯ ಆಧಾರದ ಮೇಲೆ ನಿಂತಿರುವ ಪರಿಶುದ್ಧವಾದ ಅಸಹಕಾರಿತೆಯು ದ್ವೇಷವನ್ನು ಹುಟ್ಟಿಸೀತೆಂದು ಹೇಳುವುದು ದ್ರಾಕ್ಷೆಯ ಬಳ್ಳಿಯಿಂದ ಕಾಸರ್ಕನ ಕಾಯನ್ನು ಅಪೇಕ್ಷಿಸುವಂತೆ ನಿಸರ್ಗವಿರುದ್ಧವಾದ ಸಂಗತಿಯಾಗಿದೆ. ಸತ್ಯಾಗ್ರಹ ಇಲ್ಲವೆ ಅಸಹಕಾರಿತೆಯು ಹಿಂದುಸ್ಥಾನದೊಳಗಿನ, ಮಾತ್ರವಲ್ಲ, ಲೋಕದೊಳಗಿನ ಅತ್ಯಾಚಾರದ ಮತ್ತು ಪಶುವೃತ್ತಿಯ ದುಷ್ಟ ದೋಷವನ್ನು ತೆಗೆದುಹಾಕಿ ವಸಿಷ್ಠನ ಆಶ್ರಮದಲ್ಲಿ ಹೇಗೆ ಹುಲಿಮರಿಗಳೂ ಮತ್ತು ದನಕರುಗಳೂ ಏಕತ್ರ ಕ್ರೀಡಿಸಿಕೊಂಡಿದ್ದವೊ ಹಾಗೆಯೆ ಲೋಕದೊಳಗಿನ ಎಲ್ಲ ಮಾನವ ಜನಾಂಗವು ಶುದ್ಧಪ್ರೇಮದಿಂದ ಪರಸ್ಪರ ಬದ್ಧನಾಗಬೇಕೆಂಬುದೆ ಈ ಚಳವಳದ ಬುಡದಲ್ಲಿದ್ದ ಮುಖ್ಯವಾದ ಉದ್ದೇಶವು. ಅದನ್ನು ಮರೆತು ಬಿಟ್ಟು ಆ ಚಳವಳದ ಮೇಲೆ ದೋಷಾರೋಪವನ್ನು ಮಾಡುವುದು ಚಂದವಲ್ಲ.

ಲೋರ್ಡ ಸಿಂಹರು ಅಸಹಕಾರಿತೆಯ ಸಾಮಾನ್ಯ ತತ್ವವನ್ನು ಮೇಲಿನಂತೆ ರೂಪಿಸಿ ಅದರ ಶಾಖೆಗಳಾದ ಕೌನ್ಸಿಲ್ ಬಹಿಷ್ಕಾರ, ಶಾಲಾ ಬಹಿಷ್ಕಾರ, ಕೋರ್ಟು ಬಹಿಷ್ಕಾರ, ಸರಕಾರಿ ಪದವಿಸನ್ಯಾಸ ಇವುಗಳ ವಿಷಯವಾಗಿ ತಮ್ಮ ಅಸಮ್ಮತಿಯನ್ನು ವ್ಯಕ್ತಮಾಡಿದ್ದಾರೆ. ಆದರೂ ಕೌನ್ಸಿಲ್ ಬಹಿಷ್ಕಾರದ ಚಳವಳದ ಪ್ರಭಾವದಿಂದ ಯೋಗ್ಯ ಮನುಷ್ಯರು ಕೌನ್ಸಿಲುಗಳ ಹೊರಗೆ ನಿಂತಂತೆ ಆಗಿದೆ ಎಂದು ಹೇಳಿ ಅವರು ಈ ವಿಷಯದಲ್ಲಿ ತಮ್ಮ ವಿಷಾದವನ್ನು ವ್ಯಕ್ತಗೊಳಿಸಿದ್ದಾರೆ. ಲೋರ್ಡ ಸಿಂಹರ ಈ ಉದ್ಗಾರದ ಮೇಲಿಂದ, ಅವರ ಈ ಸಾಕ್ಷಿಯ ಮೇಲಿಂದ, ಒಂದು ಸಂಗತಿಯು ಸಿದ್ಧವಾಗುತ್ತದೆ ಏನೆಂದರೆ, ಯೋಗ್ಯರಾದವರು ಕೌನ್ಸಿಲುಗಳನ್ನು ಬಹಿಷ್ಕರಿಸಿರುವುದರಿಂದ ಅಸಹಕಾರಿತೆಗೆ ಈ ಮಟ್ಟಿಗಾದರೂ ಯಶಸ್ಸು ಪ್ರಾಪ್ತವಾಗಿದೆ. ಆದರೆ ಈಗ ಒಂದು ಪ್ರಶ್ನೆಯು ಬರುವುದು. ಅದೇನೆಂದರೆ, ಯೋಗ್ಯ ಮನುಷ್ಯರನ್ನು ಬಿಟ್ಟು ನೀವು ದೇಶದ ಕಾರಭಾರವನ್ನು ನಡಿಸಲು ಆ [illegible] ಸ್ಕಾರ ಮುಂತಾದ [illegible] ಅಭಿಪ್ರಾಯವನ್ನು ಕೊಟ್ಟು ತಮ್ಮ ಭಾಷಣವನ್ನು ಮುಕ್ತಾಯ ಮಾಡಿದರು.

ಸ್ಫುಟ ವಿಚಾರಗಳು.

೧. ಇತ್ತಲಾಗೆ ಹೊಸ ಶಿಕ್ಷಣದ ಚಳವಳವು ಸಾಮಾನ್ಯವಾಗಿ ಎಲ್ಲ ಪ್ರಾಂತಗಳಲ್ಲಿ ಪ್ರಾರಂಭವಾಗಿದೆ ಎಂಬದು ಹೌದಾದರೂ ಗುಜರಾಥ ಪ್ರಾಂತದಲ್ಲಿ ಈ ಚಳವಳವು ವಿಶೇಷ ಸ್ಥಾನವನ್ನು ಹೊಂದಿದೆ ಎಂದು ಕಂಡುಬರುತ್ತದೆ. ಅಲ್ಲಿಯ ರಾಷ್ಟ್ರೀಯ ಶಿಕ್ಷಣದ ಸ್ಥಿತಿಯನ್ನು ನಿರೀಕ್ಷಿಸುವ ಉದ್ದೇಶದಿಂದ ಶ್ರೀಯುತ ದಿನಕರ-ವಾಸ[illegible]ರರೆಂಬ ಸದ್‌ಗೃಹಸ್ಥರು ಗುಜರಾಥ ಪ್ರಾಂತದಲ್ಲಿ ಸಂಚರಿಸಿ ಅಲ್ಲಿಯ ಶಿಕ್ಷಣಾಲಯಗಳ ಮಾಹಿತಿಯನ್ನು ಸಂಗ್ರಹಿಸಿದ್ದಾರೆ. ಅವರು ತಾವು ಸಂಗ್ರಹಿಸಿದ ಈ ಮಾಹಿತಿಯನ್ನು 'ಕೇಸರೀ' ಎಂಬ ಪತ್ರಿಕೆಯಲ್ಲಿ ಪ್ರಕಟಿಸಿದ್ದಾರೆ. ಆ ಮಾಹಿತಿಯೊಳಗಿನ ಮುಖ್ಯ ಮುಖ್ಯ ಅಂಶವನ್ನು ನಮ್ಮ ವಾಚಕರಿಗಾಗಿ ಇಲ್ಲಿ ಕೊಡುವೆವು. ಗುಜರಾಥ ಯುನಿವರ್ಸಿಟಿಯು (ವಿದ್ಯಾಪೀಠವು) ಅಲ್ಲಿಯ ರಾಷ್ಟ್ರೀಯ ಶಿಕ್ಷಣದ ಉತ್ತಮಾಂಗವಾಗಿದೆ. ಮ. ಗಾಂಧಿಗಳು ಇದರ ಚೆನ್ಸಲರ್ ಎಂದರೆ 'ಕುಲಪತಿ'ಗಳಾಗಿದ್ದಾರೆ. ಮತ್ತು ಮಿ. ಗಿಡ್‌ವಾನಿ ಎಂಬವರು ಇದರ ವಾಯ್ಸ್‌ಚೆನ್‌ಸಲರ ಎಂದರೆ 'ಕುಲನಾಯಕ'ರಾಗಿದ್ದಾರೆ. ವಾಯಚೆನ್‌ಸಲರರಾದ ಮಿ. ಗಿಡ್‌ವಾನಿ ಇವರು ಪ್ರತಿಗಾಂಧಿಗಳಾಗಿರುವುದರಿಂದ ಡಿಲ್ಲಿಯ ತಮ್ಮ ೮೦೦ ರೂಪಾಯಿ ತಲಬಿನ ಜಾಗೆಯನ್ನು ಬಿಟ್ಟುಕೊಟ್ಟು ರಾಷ್ಟ್ರೀಯಶಿಕ್ಷಣಕ್ಕಾಗಿ ತಮ್ಮ ಶರೀರವನ್ನು ಅರ್ಪಿಸಿದ್ದಾರೆ. ಈ ವಿದ್ಯಾಪೀಠದ ಮುಖ್ಯ ಉದ್ದೇಶಗಳು ಯಾವವೆಂದರೆ, ಸ್ವದೇಶದ ಹಿತಕ್ಕೆ ಆವಶ್ಯಕವಾದ ಮತ್ತು ಪರಿಸ್ಥಿತಿಗೆ ಅನುಕೂಲವಾದ ಶಿಕ್ಷಣವನ್ನು ಕೊಟ್ಟು ವಿದ್ಯಾರ್ಥಿಗಳನ್ನು ಧಾರ್ಮಿಕರನ್ನಾಗಿಯೂ ಸ್ವದೇಶಭಕ್ತರನ್ನಾಗಿಯೂ, ಸ್ವಾವಲಂಬಿಗಳನ್ನಾಗಿಯೂ, ಬಲಶೀಲರನ್ನಾಗಿಯೂ ಮಾಡುವುದು; ಶಾಲೆಗಳನ್ನೂ - ಸಂಸ್ಥೆಗಳನ್ನೂ ನಿರೀಕ್ಷಿಸಿ ಅವುಗಳೊಳಗಿನ ವಿದ್ಯಾರ್ಥಿಗಳ ಪರೀಕ್ಷೆಯನ್ನು ತೆಕ್ಕೊಂಡು ಅವರಿಗೆ ಯೋಗ್ಯತಾನುಸಾರವಾಗಿ ಪದವಿಗಳನ್ನು ಕೊಡುವುದು; ಛಾತ್ರಾಲಯ, ಗ್ರಂಥಾಲಯ, ಪ್ರಯೋಗಶಾಲೆ, ವೇಧಶಾಲೆ, ಸಂಗ್ರಹಸ್ಥಾನ ಮುಂತಾದವುಗಳನ್ನು ಸ್ಥಾಪಿಸುವುದು; ಹಲವು ವಿಧದ ಅತ್ಯುಪಯುಕ್ತವಾದ ಕಲಾಕೌಶಲ್ಯ, ಕೈಗಾರಿಕೆ ಮುಂತಾದವುಗಳ ಶಿಕ್ಷಣವನ್ನು ಕೊಡುವುದು; ಈ ಶಿಕ್ಷಣಕ್ಕೆ ಬೇಕಾಗಿರುವ ಕ್ರಮಿಕ ಪುಸ್ತಕಗಳನ್ನು ಪ್ರಕಟಿಸುವುದು, ಇತ್ಯಾದಿ ಈ ಉದ್ದೇಶಗಳನ್ನು ಕಣ್ಣಮುಂದೆ ಇಟ್ಟುಕೊಂಡು ಈ ವಿದ್ಯಾಪೀಠವು ಶಿಕ್ಷಣದಾನದ ಪವಿತ್ರ ಕಾರ್ಯವನ್ನು ಮಾಡತೊಡಗಿದೆ.

೨. ಈ ಉಚ್ಚ ಉದ್ದೇಶಗಳನ್ನಿಟ್ಟುಕೊಂಡಿರುವ ಈ ಮಹಾವಿದ್ಯಾಪೀಠದಲ್ಲಿ ಸೇರಿಕೊಂಡು ಎರಡು ಮೂರು ಕೊಲೆಜುಗಳು (ಮಹಾ ವಿದ್ಯಾಲಯಗಳು), ಐದಾರು ಹೈಸ್ಕೂಲುಗಳು (ವಿನಯ ಮಂದಿರಗಳು)-ಹಾಗು ಕೆಳತರಗತಿಯ ಇತರ ಹಲವು ಶಾಲೆಗಳಿವೆ. ಕೊಲೆಜುಗಳಲ್ಲಿಯ (ಮಹಾ ವಿದ್ಯಾಲಯಗಳೊಳಗಿನ) ಶಿಕ್ಷಣಕ್ರಮವು ಕೇವಲ ದೇಶೀಯ ಪದ್ಧತಿಯಿಂದ ನಡೆಯುತ್ತದೆ. ಗುರುಗಳಿಗೆ ಮತ್ತು ವಿದ್ಯಾರ್ಥಿಗಳಿಗೆ ಕುಳಿತುಕೊಳ್ಳಲು ನಮ್ಮ ಪೂರ್ವದ ಪದ್ಧತಿಗನುಸಾರವಾಗಿ 'ಬೈಠಕು' ಇದೆ; ಕುರ್ಚಿ ಮೇಜು, ಬೆಂಚು ಇತ್ಯಾದಿ ಖರ್ಚಿನ ಬಾಬಿನ ಗಲಾಟೆಯು ಇಲ್ಲ. ಈ ಎರಡು ಕೊಲೆಜುಗಳು ಅಹಮದಾಬಾದ ಮತ್ತು ಸುರತ ಈ ಪಟ್ಟಣಗಳಲ್ಲಿಯವು. ಅಹಮದಬಾದದೊಳಗಿನ ಎರಡು ಹೈಸ್ಕೂಲುಗಳಲ್ಲದೆ ಗೋಧ್ರಾ, ನ[illegible]ಂದ ಅಂಕಲೇಶ್ವರ, ಸುರತ ಈ ಪಟ್ಟಣಗಳಲ್ಲಿಯ ಹೈಸ್ಕೂಲುಗಳು ಈ ವಿದ್ಯಾಪೀಠಕ್ಕೆ ಸೇರಿದವುಗಳಾಗಿದ್ದಾವೆ. ಹತ್ತು ವರ್ಷಗಳ ಹಿಂದೆ ಸರಕಾರದ ವಿದ್ಯಾ ಇಲಾಖೆಯಲ್ಲಿ ಕೆಲಸ ಮಾಡಿದ ಇಬ್ಬರು ಗುಜರಾಥಿ ಗೃಹಸ್ಥರು ದೇಸತ್ತು ಸ್ವತಂತ್ರವಾದ 'ಪ್ರೊಪ್ರಾಯಟರಿ ಹೈಸ್ಕೂಲ' ಒಂದನ್ನು ಸ್ಥಾಪಿಸಿದ್ದರು. ಈ ಹೈಸ್ಕೂಲು ಮುಂಬಯಿ ಯುನಿವರ್ಸಿಟಿಯ ಮೆಟ್ರಿಕ್ ಪರೀಕ್ಷೆಗೆ ವಿದ್ಯಾರ್ಥಿಗಳನ್ನು ತಯಾರಿಸಿ ಕಳುಹಿಸುತ್ತಿದ್ದರೂ ಸರಕಾರಿ ಗ್ರೆಂಟು ಪಡಕೊಳ್ಳುತ್ತಿರಲಿಲ್ಲ. ಈಗ ಈ ಹೈಸ್ಕೂಲು ಸರಕಾರಿ ಯುನಿವರ್ಸಿಟಿಯ ಸಂಬಂಧವನ್ನು ಕಳೆದು ಗುಜರಾಥ ವಿದ್ಯಾಪೀಠಕ್ಕೆ ಸೇರಿದೆ. ಈ ವಿನಯ ಮಂದಿರದಲ್ಲಿ (ಹೈಸ್ಕೂಲಿನಲ್ಲಿ), ಈಗ [illegible] ವಿದ್ಯಾರ್ಥಿಗಳಿದ್ದಾರೆ. ಇದಲ್ಲದೆ ಅದೇ ಅಹಮದಾಬಾದಿನೊಳಗಿನ ಇನ್ನೊಂದು 'ಮೊಡೆಲ್ ಹೈಸ್ಕೂಲ್' ಈ ಸಂಸ್ಥೆಗೆ ಸೇರಿಸಲ್ಪಟ್ಟಿದೆ. ಅದರಲ್ಲಿ ೫೦೦ ಹುಡುಗರು ವಿದ್ಯಾರ್ಜನೆಯನ್ನು ಮಾಡುತ್ತಿದ್ದಾರೆ. ಬೇಡಾ ಜಿಲ್ಲೆಯೊಳಗಿನ ಇನ್ನೊಂದು ವಿನಯ ಮಂದಿರದಲ್ಲಿ ೩೦೦ ವಿದ್ಯಾರ್ಥಿಗಳಿದ್ದಾರೆ. ಗೋಧ್ರದೊಳಗಿನ ವಿನಯ ಮಂದಿರದಲ್ಲಿ [illegible] ಹುಡುಗರಿದ್ದಾರೆ. ಈ ಶಿಕ್ಷಣ ಸಂಸ್ಥೆಗಳಲ್ಲದೆ ಇನ್ನೂ ಬೇರೆ ಕೆಲವು ಶಿಕ್ಷಣಾಲಯಗಳಿವೆ. ಗುಜರಾಥ ವಿದ್ಯಾಪೀಠದ ಛತ್ರದ ಕೆಳಗೆ ಶಿಕ್ಷಣವನ್ನು ಹೊಂದುತ್ತಿದ್ದ

ವಿದ್ಯಾರ್ಥಿಗಳ ಸಂಖ್ಯೆಯು [illegible] ಶಿಕ್ಷಕರಾಗಿರುವವರು [illegible] ಗಳಲ್ಲಿ ಈ ರೀತಿ ಸ್ವಾರ್ಥತ್ಯಾಗ ಪ್ರವೃತ್ತರಾಗಿ ಲಾಹೋರಿನಲ್ಲಿ ಲಾಲಾ ಲಜಪತರಾಯರು ತಿಲಕ ಸ್ಕೂಲ್ ಎಂಬುದನ್ನು ತೆರೆದು ವಿದ್ಯಾರ್ಥಿಗಳಿಗೆ ರಾಜಕೀಯ ವಿಷಯ ಸ್ವಾವಲಂಬನ ಮುಂತಾದ್ದನ್ನು ಕಲಿಸುತ್ತಿದ್ದಾರೆ. ಲಾಲಾಜಿಯವರು ತಮ್ಮ [illegible] ರೂಪಾಯಿಯ ಗ್ರಂಥಭಾಂಡಾರವನ್ನು ಈ ಶಾಲಾ ಸಂಸ್ಥೆಗೆ ಬಿಟ್ಟುಕೊಟ್ಟಿದ್ದಾರೆ. ಪಂಜಾಬಿನಿಂದ ಲಜಪತರಾಯರಿಗೆ ಈ ಕಾರ್ಯದಲ್ಲಿ ದ್ರವ್ಯ [illegible] ಇತರ ಸಂಗತಿಗಳಲ್ಲಿ [illegible] ಸಹಾಯವು ದೊರಕೀತೆಂಬ ಆಸೆ ಮಾತ್ರ [illegible] ದೇಶಕಾಲವರ್ತಮಾನ ಪರಿಸ್ಥಿತಿಗೆ ಅನುರೂಪವಾಗಿ ಶಿಕ್ಷಣಸಂಸ್ಥೆಗಳು ಸ್ಥಾಪಿಸಲ್ಪಡುವುದು ಎಷ್ಟು ಅವಶ್ಯಕ ಮತ್ತು ಅನುರೂಪವೋ ಅಷ್ಟೇ ಶಿಕ್ಷಣದ ವಿಷಯದಲ್ಲಿ ಹಿಂದುಳಿದ ಜನಾಂಗಕ್ಕೆ ಈ ಕಾರ್ಯವು ಅಗತ್ಯದ್ದು. ಈ ದೃಷ್ಟಿಯಿಂದ ನೋಡಿದ್ದಲ್ಲಿ ಲಜಪತರಾಯರವರ ಈ ಪ್ರಯತ್ನವು ಶ್ಲಾಘ್ಯವೆಂದೇ ಹೇಳಬೇಕಾಗುತ್ತದೆ.

೩. ಸರಕಾರದ ಮುಖಾಂತರ ಕೊಡಲ್ಪಡುವ ಈಗಿನ ಶಿಕ್ಷಣದಲ್ಲಿ ದೋಷಗಳಿವೆ ಎಂದು ಗಾಂಧಿ, ಲಜಪತರಾಯ ಮುಂತಾದವರೇ ಹೇಳುತ್ತಾ ಇರುವದಲ್ಲ, ಸೆಡ್ಲರ ಕಮಿಷನಿನ ರಿಪೋರ್ಟಿನ ಅಭಿಪ್ರಾಯವು ಕೂಡ ಹಾಗೆಯೇ ಇದೆ. ಇಷ್ಟೆ ಅಲ್ಲ, ಪ್ರಾರಂಭದಿಂದ ಕೊನೆತನಕ ಶಿಕ್ಷಣದಾನದ ಪುಣ್ಯಕಾರ್ಯವನ್ನು ಮಾಡಿದವರ ಅಭಿಪ್ರಾಯವನ್ನು ಕೇಳಹೋದರೆ ಅವರು ಕೂಡ ಅನ್ಯಥಾ ವಾದಿಸುವುದಿಲ್ಲ. ಇದಕ್ಕೆ ಧಾರವಾಡದಿಂದ ಇಲ್ಲಿಗೆ ಬಂದಿರುವ ಮ. ರಾ. ರಾಮಚಂದ್ರ ಹನುಮಂತ ದೇಶಪಾಂಡೆಗಳ ಮೊನ್ನೆಯ ಉಪನ್ಯಾಸವೆ ಸಾಕ್ಷಿಯಾಗಿದೆ. ರಾ. ದೇಶಪಾಂಡೆಯವರು ತಮ್ಮ ವಿದ್ಯಾರ್ಥಿದಶೆಯಲ್ಲಿ ವಿಶ್ವವಿದ್ಯಾಲಯದ ಕೊನೆಯ ಮೆಟ್ಟಲಾದ ಎಮ್. ಎ. ಪರೀಕ್ಷೆಯ ತನಕ ವ್ಯಾಸಂಗವಮಾಡಿ, ಅನಂತರದ ತಮ್ಮ ಆಯುಷ್ಯವನ್ನು ಹೈಸ್ಕೂಲಿನ ಹೆಡ್‌ಮಾಸ್ಟರ್, ಟ್ರೇನಿಂಗ ಕೊಲೆಜಿನ ಪ್ರಿನ್ಸಿಪಾಲ ಮತ್ತು ಎಜ್ಯುಕೇಶನಲ್ ಇನ್ಸಪೆಕ್ಟರ ಇತ್ಯಾದಿ ಹುದ್ದೆಗಳನ್ನು ಕೈಕೊಂಡ ಗೃಹಸ್ಥರು ಎಂದ ಮೇಲೆ ಪ್ರಕೃತದ ಶಿಕ್ಷಣದಲ್ಲಿಯ ದೋಷಗಳನ್ನು ಹೇಳುವ ಅಧಿಕಾರವು ಎರಡು ಮೂರು ತರದಿಂದ ಅವರಿಗೆ ಇದೆ ಎಂಬುದು ಒಪ್ಪಿಕೊಳ್ಳಬೇಕಾದ ಸಂಗತಿ. ಮ. ರಾ. ದೇಶಪಾಂಡೆಯವರು ತಮ್ಮ ಮೊನ್ನೆಯ ಉಪನ್ಯಾಸದಲ್ಲಿ ಈಗಿನ ಶಿಕ್ಷಣದೊಳಗಿನ ದೋಷಗಳನ್ನು ಉದ್‌ಘಾಟಿಸುವಾಗ ಮುಖ್ಯವಾಗಿ ಪರಕೀಯ ಭಾಷೆಯಲ್ಲಿ ಶಿಕ್ಷಣವು ನಡಿಯುತ್ತಿರುವುದರಿಂದ ವಿದ್ಯಾರ್ಥಿಗಳ ಎಳೆ ಮಿದುಳಿಗೆ ಎಷ್ಟು ತೀವ್ರವಾದ ಪರಿಶ್ರಮವು ಬೀಳುತ್ತದೆ, ಮತ್ತು ಆ ಮೂಲಕ ಅವರ ವಿಚಾರಶಕ್ತಿ, ಬುದ್ಧಿಶಕ್ತಿ, ಆರೋಗ್ಯ ಇವುಗಳಿಗೆ ಹೇಗೆ ಕುಂದುಗಳು ಬರುತ್ತವೆ, ಈ ಕಾರಣದಿಂದ ವಿದ್ಯಾರ್ಥಿಗಳು ಬರಿ ಸ್ಮೃತಿದಾಸರು ಮಾತ್ರ ಹೇಗೆ ಆಗುತ್ತಾರೆ, ಹಾಗು ಅಲ್ಪಾಯುಷಿಗಳೂ, ದುರ್ಬಲರೂ ಹೇಗಾಗುತ್ತಾರೆ ಎಂಬದನ್ನು ವಿವರಿಸಿ ಹೇಳಿದರು. ಈ ಮೇರೆಗೆ ಅನ್ಯಭಾಷೆಯಿಂದ ಶಿಕ್ಷಣವನ್ನು ಕೊಡುವುದರಿಂದ ವಿದ್ಯಾರ್ಥಿಗಳಿಗೆ ವಿಷಯ ಬೋಧೆ, ವಸ್ತು ಜ್ಞಾನ ಇವೆಲ್ಲ ಸರಿಯಾಗಿ ಉಂಟಾಗುವುದಿಲ್ಲ ಎಂಬುದನ್ನು ಕೂಡ ವ್ಯಾಖ್ಯಾತರು ಸೂಚಿಸಿದರು. ದೇಶೀಯ ಭಾಷೆಯಿಂದ ಶಿಕ್ಷಣವನ್ನು ಕೊಡುವುದು ಶ್ರಮ, ಕಾಲ, ವ್ಯವಸಾಯ, ಮತ್ತು ಫಲ, ಈ ಎಲ್ಲ ದೃಷ್ಟಿಯಿಂದ ಹಿತಾವಹವಾದ್ದೆಂಬುದಕ್ಕೆ ಸಂಶಯವಿಲ್ಲ. ಆದರೆ ಈ ಉಪಕ್ರಮವು ಎಂದಾದೀತು ಎಂಬುದೊಂದೇ ವಿಚಾರಣೀಯವಾದ ಪ್ರಶ್ನೆಯು. ಈ ಪ್ರಶ್ನೆಯನ್ನು ಸರಕಾರವು ಕೈಕೊಂಡು ಬಿಡಿಸುವಷ್ಟರೊಳಗೆ ದೇಶೀಯರೆ ತಮ್ಮ ದೃಢಪ್ರಯತ್ನದಿಂದ ಬಿಡಿಸಲುದ್ಯುಕ್ತರಾದರೆ ಅದೊಂದು ಸ್ವಾವಲಂಬನದ ಉತ್ತಮವಾದ ಪಾಠವಾದೀತೆಂಬುದಕ್ಕೆ ಸಂಶಯವಿಲ್ಲ.

೪. ಸುಧಾರಿಸ್ಟರವರು ಎನ್ನಿಸಿಕೊಳ್ಳುವವರು ಹಿಂದಿಗಳ ಮೇಲೆ ಯಾವ ಆರೋಪಣೆಯನ್ನು ಮಾಡಿದರೂ ಅದು ನಡೆದು ಹೋಗುತ್ತದೆ ಹಿಂದುಗಳು ಅಂಧ ವಿಶ್ವಾಸವುಳ್ಳವರು, ಮರಮಟ್ಟುಗಳನ್ನು ಪೂಜಿಸುವವರು, ಅಂಥವರು, ಇಂಥವರು ಎಂಬುದಾಗಿ ಇವರ ಮೇಲೆ ಹಲವರು ಹಲವು ವಿಧದ ಆರೋಪಣೆಗಳನ್ನು ಮಾಡುತ್ತಲೆ ಇದ್ದಾರೆ. ಈ ಆರೋಪಗಳಲ್ಲಿ ತಥ್ಯಾಂಶವು ಎಷ್ಟಿದೆ ಎಂಬುದನ್ನು ನಾವು ಇಲ್ಲಿ ವಿವೇಚಿಸುವುದಿಲ್ಲ. ಆದರೆ ಇದೇ ನಮೂನೆಯ ಹೊಸದೊಂದು ಆರೋಪವು ಇತ್ತಲಾಗೆ ಹಿಂದಿಗಳ ಮೇಲೆ ಹಿಡೋಣವಾಗಿದೆ. ಹಿಂದುಗಳು ಹಾವುಗಳನ್ನು ಸಾಕುವವರೆಂದು 'ಲೆಂಡ್ ಎಂಡ್ ವಾಟರ್' ಎಂಬ ಪತ್ರಿಕೆಯಲ್ಲಿ ಒಬ್ಬ ಲೇಖಕನು ಬರೆದಿದ್ದಾನೆಂದು ಈ ತಿಂಗಳ 'ಮೊಡರ್ನ ರಿವ್ಯೂ' ಪತ್ರಿಕೆಯಿಂದ ತಿಳಿಯುತ್ತದೆ. ಹಿಂದುಸ್ಥಾನದಲ್ಲಿ ಸರ್ಪದಂಶದ ಮರಣಗಳು ಯಾಕೆ ಹೆಚ್ಚು ಸಂಭವಿಸುತ್ತವೆಂಬುದನ್ನು ಮೀಮಾಂಸೆ ಮಾಡುವಾಗ ಸದರಿ ಲೇಖಕನು ಹಿಂದುಗಳು ಸರ್ಪಗಳನ್ನು ಸಾಕುತ್ತಾರೆ ಎಂದು ಹೇಳುವನು! ಆದರೆ ಇವನು ಯಾವ ಅರ್ಥದಿಂದ ಇದನ್ನು ಹೇಳುವನು ಇದು ನಮಗೆ ಗೊತ್ತಾಗದು! ಹಾವುಗಳನ್ನೂ, ಸರ್ಪಗಳನ್ನೂ ಹಿಂದುಸ್ಥಾನದ ಯಾವ ಭಾಗದಲ್ಲಿ ಯಾರು ಸಾಕುತ್ತಿದ್ದಾರೆ ಎಂಬುದು ಹಿಂದುಸ್ಥಾನದವರಿಗೆ ಗೊತ್ತಿಲ್ಲವಾದರೂ ಈ ದೊರೆ ಮಹಾಶಯರು ಈ ಹೊಸ ಶೋಧವನ್ನು ಹಚ್ಚಿದ್ದಾರೆ. ಈ ಬಗ್ಗೆ ಲೇಖಕನ ಸೂಕ್ಷ್ಮ ದೃಷ್ಟಿಯ ಕುರಿತು ಏನು ಹೇಳಿದರೂ ಸಾಲದೆನ್ನಬಹುದು!

೫. ಬರ್ಮಾ ಪ್ರಾಂತ್ಯದ ಲೆಫ್ಟಿನೆಂಟ್ ಗವರ್ನರ್ ಸರ್ ಹಾರ್ಕೋರ್ಟ್ ಬಟ್ಲರ್ ಸಾಹೇಬರು ರಂಗೂನದಲ್ಲಿ ಸೇಂಟ್ ಎಂಡ್ರೂಸ್ ಡಿನ್ನರ್ ಎಂಬ ಮಿತ್ರ ಭೋಜನದ ನಂತರ ಒಂದು ಭಾಷಣವನ್ನಿತ್ತರು. ಇತರ ಪ್ರಾಂತಗಳೊಂದಿಗೆ ಬ್ರಹ್ಮದೇಶಕ್ಕೆ ಸುಧಾರಣೆ ಎಷ್ಟರಲ್ಲಿ ಸಹ ಮಂಜೂರಾಗದಿರುವುದಕ್ಕೆ ಈ ಮಹಾಪುರುಷರು ಎಷ್ಟರ ಮಟ್ಟಿಗೆ ಜವಾಬ್ದಾರರು ಎಂಬದನ್ನು ಈಗ ವಿಚಾರಿಸುವುದು ಅಗತ್ಯವಿಲ್ಲ. ಪರಂತು ಹಿಂದುಸ್ಥಾನದಲ್ಲಿ ಪ್ರಚಲಿತವಾದ ಈಗಿನ ಚಳವಳವನ್ನು ಕುರಿತು ಅವರು ಒಂದು ಸಾದೃಶ್ಯವನ್ನು ಕೊಟ್ಟಿದ್ದಾರೆ. ಅಟ್ಟಳಿಗೆ ಹತ್ತಿದ ಮೇಲೆ ನಿಚ್ಚಣಿಕೆಯನ್ನು ಒದ್ದು ಬಿಡಲು ಯತ್ನಿಸುವವನ ಮನೋವಿಚಾರ ಮತ್ತು ಇಂಥವನ ಬೆಂಬಲಕ್ಕೆ ನಿಂತು ಕೈಗುಟ್ಟುವವರ ಧೋರಣ ಇವು 'ಪಂಥಾ ಭ್ರಮೆ' ಎಂದು ಸರ್. ಹಾರ್ಕೋರ್ಟರು ಒಂದೇ ಮಾತಿನಿಂದ ಮಹಾತ್ಮಾ ಗಾಂಧಿಯವರ ಮತ್ತು ಅವರ ಅನುಯಾಯಿಗಳ ಧೋರಣವನ್ನು ಹೆಸರಿಸಿದ್ದಾರೆ. ಈ ಸಾದೃಶ್ಯವು ಸ್ವಲ್ಪ ಬದಲಾವಣೆಯಿಂದ ಇನ್ನೊಂದು ಕಡೆಯಲ್ಲಿ ಬಲು ಚೆನ್ನಾಗಿ ಒಪ್ಪುತಿತ್ತು. ಹಿಂದೀ ಸೈನ್ಯವೂ ಹಿಂದೀ ರಾಜಭಕ್ತಿಯೂ ಬ್ರಿಟಿಷ್ ಸೈನ್ಯವು ಇನ್ನೂ ರೂಪುಗೊಳ್ಳದೆ ಅವ್ಯಕ್ತ ಸ್ವರೂಪವಾಗಿರುವಲ್ಲಿ ಬ್ರಿಟಿಷ ಗೌರವವನ್ನೂ ಸುರಕ್ಷಿತ ಪಡಿಸಿ, ಪೆರಿಸ್ ಪಟ್ಟಣಕ್ಕೆ ಬರಲಿಕ್ಕಿದ್ದ ಭಯಂಕರ ಗಂಡಾಂತರದ ಪ್ರವಾಹಕ್ಕೆ ಅಡ್ಡನಿಂತು ಅದರ ರಭಸವನ್ನು ಮುರಿದ ನಂತರ, ಪಾರ್ಲಿಮೆಂಟನಲ್ಲಿ ಆಗಿನ ಇಂಡಿಯಾ ಸೆಕ್ರೆಟರಿಗಳೂ, ಸ್ವತಃ ಮಿ| ಲೊಯ್ಡ ಜೊರ್ಜರೂ ಬೆನ್ನು ತಟ್ಟಿ, ಈಗ ಹಿಂದೀ ಜನರ ರಾಜಭಕ್ತಿಯ ಸ್ಮಾರಕವಾಗಿ ಕೊಟ್ಟ ಉಡುಗೆರೆಗಳನ್ನು ಬಿಚ್ಚಿ ನೋಡಿದಾಗ ನಮಗೆ ಒಂದು ದೃಷ್ಟಾಂತವು ನೆನಪಿಗೆ ಬರುತ್ತಿದೆ. ಉಪ್ಪರಿಗೆಯ ಕಿಟಕಿಯಿಂದ ಒಳನುಗ್ಗುವ ಮನುಷ್ಯನು ನಿಚ್ಚಣಿಕೆಯಿಲ್ಲದೆ ವ್ಯಥೆ ಪಡುವಾಗ ಅವನಲ್ಲಿ ವಿಶ್ವಾಸವಿದ್ದವನು ಕಾರಣ ಕೇಳಿದನು. 'ಒಳಗೆ ಭಯಂಕರ ಕೂಗು ಕೇಳಿಸುತ್ತದೆ, ಏನೊ ಭಯಂಕರ ಕೃತ್ಯ ನಡೆಯುತ್ತಲಿದೆ, ಅದನ್ನು ಈಗಲೇ ತಡಿಸದಿದ್ದರೆ ವಿಶೇಷ ಪ್ರಮಾದವಾದೀತು' ಎಂದಾಗ, ಎದೆ ಕರಗಿ ಈ ವಿಶ್ವಾಸಿಕನು ಗೋಡೆಯ ಬಳಿಯಲ್ಲಿ ನಿಂತು ತನ್ನ ಹೆಗಲ ಮೇಲೇರಿಸಿ ಕಿಟಕಿಯ ದೊಣ್ಣೆ ಕೈಗೆ ಎಟಕುವಂತೆ ಮಾಡಿದನು. ದೊಣ್ಣೆಯನ್ನು ಬಿಗಿದು ಹಿಡಿದನಂತರ ನುಗ್ಗಿ ಉದ್ದೇಶ ಮುಗಿಸಿ ಬಂದ ಮೇಲೆ ಪುನಃ ಕಿಟ್ಕಿಯಿಂದ ಇಳಿಯುವಾಗ ಹೆಗಲು ತನ್ನ ಕಾಲಿಗೆ ಎಟಕಿದೊಡನೆ ತನ್ನ ಉನ್ಮತ್ತತೆಯಿಂದ ಅವನ ಕಪಾಲಕ್ಕೊ ಕೆನ್ನೆಗೊ ತುಳಿದು ಬಿಟ್ಟು 'ಸರಿ ನಿಲ್ಲು' ಎಂದು ಗದರಿಸುವುದಾದರೆ ಅಡಿಗೆ ನಿಂತ ಮನುಷ್ಯನು ಹೆಗಲು ಒಡ್ಡುವ ಬದಲಾಗಿ ಅಸಹಕಾರಿತೆಯನ್ನು ಕೈಕೊಂಡು ದೂರ ನಿಂತು ಕಿಟಕಿಯ ದೊಣ್ಣೆಗೆ ಹಿಡಿದು ನೇತಾಡುವವನನ್ನು ಕಣ್ಣೆವೆ ಇಕ್ಕದೆ ನೋಡುತಿದ್ದರೆ ತಪ್ಪೇನು? ಅಂತು ನಮಗೆ ಒಂದು ಸೂಚನೆ ಕೊಡಬೇಕಾಗುತ್ತಿದೆ. ಈಗಿನ ರಾಜಕಾರಣ ಕರ್ತರು ಅಧಿಕಾರದ ಬಲದಿಂದ ಕಾಲವರಿಯದೆ ಬಾಯ್ಮುಚ್ಚುವ ಬದಲಾಗಿ ಬಾಯ್ಮುಚ್ಚಿ ಕೂಂಡಿದ್ದರೆ ಈಗ ಕೆರಳಿದ ಕ್ರೋಧಕ್ಕೆ ತುಪ್ಪ ಹೊಯ್ದಂತೆ ಆಗುವುದು ಕಮ್ಮಿಯಾದೀತಲ್ಲವೆ?

ಮಂಗಳೂರು.

ಈ ತಿಂಗಳಲ್ಲಿ ಮಂಗಳೂರ ತಾಲೂಕು ಬೋರ್ಡಿನ ಅಧಿವೇಶನವು ತಾ. ೧೬ನೇ ಗುರುವಾರ ಮಧ್ಯಾಹ್ನ ೧೨ ಘಂಟೆಗೆ ಪಾಣೆಮಂಗಳೂರ ಮುಸಾಫರ್ ಬಂಗಲೆಯಲ್ಲೂ, ಉಪ್ಪಿನಂಗಡಿ ತಾಲೂಕು ಬೋರ್ಡಿನ ಅಧಿವೇಶನವು ತಾ. ೧೭ನೇ ಶುಕ್ರವಾರ ಪ್ರಾತಃಕಾಲ ೧೦ ಗಂಟೆಗೆ ಸುಬ್ರಮಣ್ಯ (ತಾಲೂಕು ಫಂಡು) ಛತ್ರದಲ್ಲಿ ಮತ್ತು ಕಾಸರಗೋಡು ತಾಲೂಕು ಬೋರ್ಡಿನ ಅಧಿವೇಶನವು ತಾರೀಕು ೨೩ನೇ ಮಧ್ಯಾಹ್ನ ೨ ಘಂಟೆಗೆ ಸದರಿ ತಾಲೂಕು ಬೋರ್ಡಿನ ಆಫೀಸಿನಲ್ಲೂ ನೆರೆಯುವುದು.

ಓಲ್ ಇಂಡಿಯ ಕೊಂಗ್ರೆಸ ಕಮ್ಮಿಟಿಯವರು ನೇಮಿಸಿದ ಸಬ್ ಕಮ್ಮಿಟಿಯು ತಯಾರಿಸಿದ ವರದಿಯಲ್ಲಿ ರಾಷ್ಟ್ರೀಯ ಸಭೆಯ ಮುಖ್ಯ ಧ್ಯೇಯ ಮತ್ತು ಸೂತ್ರಗಳಲ್ಲಿ ಯಾವ ತರದ ಬದಲಾವಣೆಗಳನ್ನು ಮಾಡತಕ್ಕದೆಂದು ದೇಶದ ಎಲ್ಲಾ ಕಡೆಗಳಲ್ಲಿ ಕೊಂಗ್ರೆಸಿನ ಪರವಾಗಿ ಕೆಲಸ ಮಾಡುವ ಸಂಸ್ಥೆಗಳ ಅಭಿಪ್ರಾಯಗಳನ್ನು ಕೇಳಿರುವುದರಿಂದ ನಮ್ಮ ಜಿಲ್ಲೆಯು ಯಾವ ಸೂಚನೆಗಳನ್ನು ಕಳುಹಿಸತಕ್ಕದ್ದು ಎಂಬುದನ್ನು ಬರುವ ತಾ. ೧೯ನೇ ಆದಿತ್ಯವಾರ ಕೂಡುವ ಡಿಸ್ಟ್ರಿಕ್ಟ್ ಎಸೋಸಿಯೇಶನಿನ ಸಭೆಯಲ್ಲಿ ನಿರ್ಧರಿಸಲಿಕ್ಕಿದೆ.

ಬರುವ ಡಿಸೆಂಬರ ತಾರೀಕು ೨೬ರಲ್ಲಿ ನಾಗಪುರದಲ್ಲಿ ಕೂಡುವ ಇಡಿ ಹಿಂದೂದೇಶದ ವಿದ್ಯಾರ್ಥಿಗಳ ಸಾರ್ವಜನಿಕ ಸಭೆಗೆ ನಮ್ಮ ಜಿಲ್ಲೆಯ ವಿದ್ಯಾರ್ಥಿಗಳ ಕಡೆಯಿಂದ ಕಳುಹಿಸುವ ಪ್ರತಿನಿಧಿಗಳನ್ನು ಆರಿಸಲು ಇಂದಿನ ಸಾಯಂಕಾಲ ೫ ಗಂಟೆಗೆ ರಾಷ್ಟ್ರೀಯ ಬಾಲಿಕಾ ಪಾಠಶಾಲೆಯಲ್ಲಿ ಒಂದು ಸಭೆ ಕೂಡಲಿಕ್ಕಿದೆ.

ನಿರ್ಜೀವಾವಸ್ಥೆಯನ್ನು ಹೊಂದಿದ್ದ ಸ್ವದೇಶದ ಕೈಗಾರಿಕೆಯನ್ನು ಪುನರುಜ್ಜೀವಿಸಲು ರಾಷ್ಟ್ರೀಯ ಕೈಗಾರಿಕೆ ಶಾಲೆಯೊಂದನ್ನು ನಮ್ಮ ಪಟ್ಟಣದಲ್ಲೂ ತೆರೆಯುವುದು, ಮತ್ತು ಜನರಲ್ಲಿನ ವಾದವಿವಾದಗಳನ್ನು ಸರಕಾರಿ ಕೋರ್ಟುಗಳ ಮೂಲಕ ತೀರ್ಮಾನಿಸುವ ಬದಲು ಜನರ ಸ್ವತಂತ್ರವಾದ ನ್ಯಾಯಸ್ಥಾನಗಳನ್ನು (Arbitration Courts)ಗಳನ್ನು ತೆರೆದು ಇವುಗಳ ಮೂಲಕ ಇತ್ಯರ್ಥಿಸಲು ಇಂಥಾ ಪಂಚಾಯತ ನ್ಯಾಯಸ್ಥಾನಗಳನ್ನು ಸ್ಥಾಪಿಸುವುದು, ಈ ವಿಷಯಗಳನ್ನು ಆಲೋಚಿಸಲು ನಾಳೆ ಸಾಯಂಕಾಲ ೫॥ ಗಂಟೆಗೆ [illegible] ಮಿಷನ್ ಕಂಪೌಂಡಿನಲ್ಲಿ ಒಂದು ಸಭೆ ಕೂಡುವುದು.

ಕಳೆದ ಸೋಮವಾರ ಮಂಗಳೂರ ನೆಹರೂ ಮೈದಾನದಲ್ಲಿ ಶ್ರೀಯುತ ಕೃಪಾಶಂಕರ ದೇವಾಧ್ಯಾಯರವರ ಅಧ್ಯಕ್ಷತೆಯಲ್ಲಿ ಒಂದು ದೊಡ್ಡ ಸಭೆ ಕೂಡಿ ಕೆಳಗಿನ ಠರಾವುಗಳು ಪಾಸಾದವು—ಮಹಾತ್ಮಾ ಗಾಂಧಿಗಳ ಯೋಜನೆಯಂತೆ—ಹೊಸ ನ್ಯಾಯವಿಧಾಯಕ ಸಭೆಗೆ ಈಗ ಇಲ್ಲಿಂದ ಮೆಂಬರರಾಗಿ ಹೋಗತಕ್ಕವರು ನಿಜವಾಗಿ ಸಾರ್ವಜನಿಕರಿಂದ ಆರಿಸಲ್ಪಟ್ಟ ಪ್ರತಿನಿಧಿಗಳಲ್ಲ. ಇವರ ಮೂಲಕ ಜನರು ತಮ್ಮ ಅಂದೋಲನಗಳನ್ನು ಬರುವ ಸಭೆಯ ಮುಂದೆ ಇಡಬಾರದು.

ಮಹಮ್ಮದಿಯರಲ್ಲಿ ಅಗ್ರ ಮುಖಂಡರಾದ ಶೇಖುಲ್ ಹಿಂದ್ ಮೌಲಾನಾ ಮಹಮ್ಮದ್ ಹಸನ್ ಸಾಹೇಬ್ ಎಂಬ ದೇಶಭಕ್ತರ ವಿಯೋಗದ ಸಂತಾಪವನ್ನು ಇಲ್ಲಿಯ ಕೆಲಜನರು ಇಸ್ಲಾಮಿಯಾ ಕ್ಲಬ್ಬಿನಲ್ಲಿ ಕಳೆದ ಆದಿತ್ಯವಾರ ಒಂದು ದುಃಖ ಸೂಚಕ ಸಭೆಯ ಮೂಲಕ ವ್ಯಕ್ತಪಡಿಸಿದರು.

ಪಟ್ಟಣದ ಎಲಿಮೆಂಟರಿ ಶಾಲೆಯ ಉಪಾಧ್ಯಾಯರ ಎಸೋಸಿಯೇಶನು ಎಂದಿನಂತೆ ಈ ವರುಷವೂ ತಾರೀಕು ೧೩ನೇ ದಿನ ಗವರ್ನಮೆಂಟ ಕೋಲೇಜಿನ ಮಹೋಪಧ್ಯಾಯರಾದ ರಾ| ಆರ್. ಯಂ. ಸ್ಟಾತಂ ಇವರ ಅಧ್ಯಕ್ಷತೆಯಲ್ಲಿ ಡಿಲ್ಲಿ ದರ್ಬಾರ ಸಮಾರಂಭವನ್ನು ಇಲ್ಲಿಯ ಎಲಿಮೆಂಟರಿ ಶಾಲೆಗಳಪಂದ್ಯಾಟ ಮೊದಲಾದ ವಿನೋದಗಳಿಂದ ನೆರವೇರಿಸಲಿಕ್ಕಿರುವರು.

ಜಿಲ್ಲಾ ಕಲೆಕ್ಟರರು ಈ ತಿಂಗಳ ತಾ. ೧೧ರಿಂದ ೧೩ ಉಪ್ಪಿನಂಗಡಿ, ತಾ. ೧೪ ಗುಂಡ್ಯ, ತಾ. ೧೫ ಸುಬ್ರಮಣ್ಯ, ತಾ. ೧೭ ಕುಳಗುಂದ, ತಾ. ೧೮ರಿಂದ ೧೯ ಶಿರಾಡಿ, ತಾ. ೨೦ ಮಂಗಳೂರು ಈ ಪ್ರಕಾರ ಸರ್ಕೀಟು ಬೆಳೆಸುವರು.

ಕಳೆದ ನವಂಬರ ತಿಂಗಳಲ್ಲಿ ಪಟ್ಟಣದಲ್ಲಿ ೬೩ ಮರಣಗಳು ಮತ್ತು ೯೫ ಜನನಗಳು ಇದ್ದವು.

ದಕ್ಷಿಣ ಕನ್ನಡ ಜಿಲ್ಲೆಯಿಂದ ಜನರಲ್ ಸೀಟಿಗೆ ನಿಂತಿದ್ದ ಉಮೇದ್ವಾರರ ಪೈಕಿ ದಿವಾನ ಬಹದ್ದೂರ ರಾಮಯ್ಯ ಪೂಂಜರಿಗೆ ೩,೬೯೭ ವೋಟುಗಳೂ ಮ| ರಾ| ಕೆ. ಸದಾಶಿವ ಭಟ್ಟರಿಗೆ ೨,೬೭೮ ವೋಟುಗಳೂ ಮ| ರಾ| ಬಿ. ಮಹಾಬಲ ಹೆಗಡೆಯವರಿಗೆ ೧,೬೩೩ ವೋಟುಗಳೂ ಮ| ರಾ| ರಾಜಗೋಪಾಲಕೃಷ್ಣ ರಾಯರಿಗೆ ೧೩೦೬ ವೋಟುಗಳೂ ಸಿಕ್ಕಿದವು ಎಂದು ಗೊತ್ತಾಗಿದೆ. ಈ ಜಿಲ್ಲೆಯ ೨೧,೧೫೧ ವೋಟರರ ಪೈಕಿ ೪,೩೬೬ ಮಂದಿ ಮಾತ್ರ ವೋಟು ಕೊಟ್ಟರು; ಅವರಲ್ಲಿಯೂ ಸುಮಾರು ೧೩೬ ವೋಟುಗಳು ನಿರರ್ಥಕವಾಗಿದ್ದವು ಎಂದೂ ತಿಳಿಯುತ್ತೇವೆ. ಪಶ್ಚಿಮ ಕರಾವಳಿಯ ಕ್ರಿಶ್ಚನ್ ವೋಟರರಿಂದ ರಾವ ಸಾಹೇಬ ಇ. ಸಿ. ಯಮ್. ಮಸ್ಕರೇಂಞರು ಮದ್ರಾಸಿನ ಸಭೆಗೆ ಆರಿಸಲ್ಪಟ್ಟಿರುವರು. ಇಂಡಿಯನ್ ಲೆಜಿಸ್ಲೇಟಿವ್ ಎಸೆಂಬ್ಲಿಗೆ ಮಲಬಾರಿನ ಮ. ರಾ. ರಾ. ಕಾವಲಪಾರಾ ಮೂಪಿಲ್ ನಾಯರರು ಪಶ್ಚಿಮ ಕರಾವಳಿ ಮತ್ತು ನೀಲಗಿರಿ ಜಿಲ್ಲೆಯ ಪರವಾಗಿ ಆರಿಸಲ್ಪಟ್ಟಿರುವರು.

ಡಿಪ್ರೆಸ್ಸಡ್ ಕ್ಲಾಸು ಮಿಶ್ಯನಿನ ಆಡಳಿತೆಯ ಸಭೆಯ ಜೊಯಂಟ್ ಸೆಕ್ರೆಟರಿಗಳಾಗಿದ್ದ ಮ| ರಾ| ಕಾರ್ನಾಡ ಸದಾಶಿವರಾಯರು ನೊನ್ ಕೊಓಪರೇಶನ್ನಿನ ನಿಮಿತ್ತವಾಗಿ ಸದರಿ ಕೆಲಸಕ್ಕೆ ರಾಜೀನಾಮೆ ಕೊಟ್ಟರು; ಅವರ ಸ್ಥಾನದಲ್ಲಿ ಮ| ರಾ| ಯಮ್. ಎಸ್. ಮಾಧವರಾಯರು ಆರಿಸಲ್ಪಟ್ಟಿದ್ದಾರೆ, ಖಾನಬಹದ್ದೂರ ಹಾಜಿ ಅಬ್ದುಲ್ಲಾ ಹಾಜಿ ಕಾಸಿಂ ಸಾಹೇಬ ಬಹದ್ದೂರವರು ಈ ಆಡಳಿತೆ ಸಭೆಯ ಒಬ್ಬ ಮೆಂಬರರಾಗಿ ಆರಿಸಲ್ಪಟ್ಟಿದ್ದಾರೆ ಎಂದು ಮ| ರಾ| ರಾಯ ಸಾಹೇಬ ಕುದ್ಮುಲ್ ರಂಗರಾವ್ (ಸದರಿ ಸಂಘದ ಸೆಕ್ರೆಟರಿಗಳು) ಬರೆಯುತ್ತಾರೆ.

ಮಿ| ಟಿ. ಇ. ಮೊಯರ್ ಸಾಹೇಬರು ಲೇಬರ್ ಕಮ್ಮಿಶನರಾಗಿದ್ದು ಈ ಜಿಲ್ಲೆಯನ್ನು ಇದೇ ೧೧ನೆ ತಾರೀಕಿಗೆ ಸಂದರ್ಶಿಸುವರು.

ಮಿ| ಆರ್. ಎಚ್. ದೇಶಪಾಂಡೆ ಎಮ್. ಎ. ಇವರು ಮುಂಬಯಿ ಕರ್ನಾಟಕ ಪ್ರಾಂತದಲ್ಲಿ ಎಡ್ಯುಕೇಶನಲ್ ಇನ್ಸ್‌ಪೆಕ್ಟರರಾಗಿದ್ದು ಪೆನ್ಶನ್ ಹೊಂದಿದವರು. ಇವರು ಕನ್ನಡ ಭಾಷಾಭಿಮಾನಿಗಳು, ಧಾರ್ವಾಡ ಕನ್ನಡ ವಿದ್ಯಾವರ್ಧಕ ಸಂಘದ ಸ್ಥಾಪಕರು. ಇವರು ಕನ್ನಡ ಜಿಲ್ಲೆಯಲ್ಲಿ ಈಗ ಕೆಲವು ದಿವಸ ಪ್ರವಾಸ ಮಾಡುತ್ತಿದ್ದು, ಇದೇ ಮಂಗಳವಾರ ನೆಶನಲ್ ಸ್ಕೂಲಿನಲ್ಲಿ 'ತರುಣ ಭಾರತ ಸಂಘ'ದವರ ಆಮಂತ್ರಣದಿಂದ 'ಈಗಿನ ಶಿಕ್ಷಣ' ಎಂಬದನ್ನು ಕುರಿತು ಚಲೋ ಭಾಷಣಮಾಡಿದರು. ಮ| ರಾ| ಅ. ಶ್ರೀನಿವಾಸ ಪೈ, ಬಿ. ಎ. ಬಿ. ಎಲ್. ಇವರು ಅಧ್ಯಕ್ಷಸ್ಥಾನವನ್ನು ಸ್ವೀಕರಿಸಿದ್ದರು. ಮಿ| ದೇಶಪಾಂಡೆಯವರ ಕನ್ನಡ ಭಾಷಣದಲ್ಲಿ ದೇಶಭಾಷೆಯ ಕಡೆಗೆ ಉದಾಸೀನತೆ ಮತ್ತು ಇಂಗ್ಲಿಷ ಭಾಷೆಯ ಪ್ರಾಶಸ್ತ್ಯದಿಂದ ದೇಶೋನ್ನತಿಗೆ ಹೇಗೆ ಬಾಧಕಗಳು ಇವೆ, ವಿದ್ಯಾರ್ಥಿಗಳ ಜೀವಕಾಲವು ಅನ್ಯಭಾಷೆಯನ್ನು ಮಥನ ಮಾಡುವುದರಲ್ಲಿ ಎಷ್ಟು ಅಪಾವ್ಯಯವಾಗುತ್ತಿದೆ ಎಂಬದನ್ನು ಕುರಿತು ಮುಖ್ಯ ವಿಚಾರವಿತ್ತು.

ಇವರು ದ್ರಾವಿಡ ವಿದ್ಯಾರ್ಥಿಗಳ ಭವನದಲ್ಲಿ "ಕನ್ನಡಿಗರ ಕರ್ತವ್ಯ" ಎಂಬೀ ವಿಷಯದಲ್ಲಿ ಒಂದು ಉಪನ್ಯಾಸವನ್ನು ಮಾಡಿದರು. ಉಪನ್ಯಾಸಕರ್ತರು ಸ್ವರಾಜ್ಯವೇ ಹಿಂದಿಗಳ ಧ್ಯೇಯವಾಗಿರುವುದರಿಂದ ಕನ್ನಡಿಗರು ತಮ್ಮ ಮುಂದೆಯೂ ಇದೇ ಧ್ಯೇಯವನ್ನು ಇಟ್ಟುಕೊಂಡು ಅದಕ್ಕೆ ಬೇಕಾಗಿರುವ ಕಾರ್ಯಗಳನ್ನು ಸಾಧಿಸಬೇಕು ಎಂದು ಹೇಳಿದರು.

ತೆಲಗಿ ಹರಪನಹಳ್ಳಿ ಮಠದ ಬ್ರಂ|| ಶ್ರೀ|| ಸಿದ್ಧಾಂತಿ ಹೊಳೆಬಸವ ಶಾಸ್ತ್ರಿಗಳಿಂದ ರಚಿಸಲ್ಪಟ್ಟ ದುರ್ಮತಿ ಸಂವತ್ಸರದ ಪಂಚಾಂಗದ ಜ್ಯಾಹೀರಾತನ್ನು ಈ ಸಂಚಿಕೆಯೊಂದಿಗೆ ಕಳುಹಿಸಿರುತ್ತೇವೆ.

[illegible]

...ಇದನ್ನು ಗ್ರಾಮಸ್ಥರ ಮೇಲೆ ಕ್ಷೂರ್ಕ ... ಎಂದು ಪೂರ್ಣ ನಂಬಿರುತ್ತೇನೆ.

ಹಾವು ಕಡಿದವನಿಗೆ ಮದ್ದು:— ಬೊಂಬಾಯಿ ನಗರದಲ್ಲಿ ಪ್ರಕಟವಾಗುವ ಟಾಯಿಮ್ಸ್ ಆಫ್ ಇಂಡಿಯಾ ಪತ್ರವು ಹಾವು ಕಡಿದವನಿಗೆ ಬಾಳೆಗಿಡದ ರಸವನ್ನು ಹೊಟ್ಟೆಗೆ ಕುಡಿಸಿ ಅದೇ ರಸವನ್ನು ಕಡಿದ ಸ್ಥಳಕ್ಕೆ ಹಚ್ಚುತ್ತಿದ್ದರೆ [illegible] ಏನೂ ಇರದೇ ಮನುಷ್ಯನು ಬದುಕಿಕೊಳ್ಳುವನೆಂದು ತಿಳಿಸುತ್ತದೆ.

ಯೂನಿವರ್ಸಿಟಿಗಳ ವಿಚಾರ.

"ಈ ದೇಶದಲ್ಲಿ ಪ್ರಚಾರಕ್ಕೆ ಬರಬೇಕಾದ ಶಿಕ್ಷಣವು ಇಲ್ಲಿಯ ಜನರ ಮನೋವೃತ್ತಿಗಳಿಗೂ, ಪ್ರಾಚೀನ ಇತಿಹಾಸ ಮತ್ತು ನಡತೆ ನಡವಳಿಕೆಗಳಿಗೂ ಅನುಸಾರವಾಗಿಯೇ ಇರಬೇಕು" ಎಂಬ ಅರ್ಥಗರ್ಭಿತವಾದ ಮಾತನ್ನು ಮಿ| ಶ್ರೀನಿವಾಸ ಅಯ್ಯಂಗಾರರು ಪಚ್ಚಯ್ಯಪ್ಪ ಹೈಸ್ಕೂಲ್ ವಿದ್ಯಾರ್ಥಿಗಳ ಸಭೆಯಲ್ಲಿ ನುಡಿದರು. ಮಿ| ಶ್ರೀನಿವಾಸಯ್ಯಂಗಾರರು ಕೆಲವು ಸಮಯದ ವರೆಗೆ ಮದ್ರಾಸಿನ ಎಡ್ವೋಕೇಟ್ ಜನರಲರಾಗಿದ್ದು ಆ ಹುದ್ದೆಗೆ ರಾಜಿನಾಮೆ ಕೊಟ್ಟು, ಈಗ ದೇಶಸೇವೆಯನ್ನು ಮಾಡುವ ಕಾರ್ಯದಲ್ಲಿ [illegible]. ಯೂನಿವರ್ಸಿಟಿಯ ಪರವಾಗಿ ಮದ್ರಾಸು ಲೆಜಿಸ್ಲೇಟಿವ್ ಕೌನ್ಸಿಲಿಗೆ [illegible] ಆರಿಸಲ್ಪಟ್ಟಿದ್ದಾರೆ. ಈಗಿನ ಯೂನಿವರ್ಸಿಟಿಗಳ ಗುರಿ ಉದ್ದೇಶಗಳನ್ನು ತಿಳಿದು, ಅವುಗಳಲ್ಲಿ ಯಾವ ಸುಧಾರಣೆಗಳು ಬರಬೇಕಾಗಿವೆ ಎಂಬುದನ್ನು ವಿವರಿಸುವ ಸಂದರ್ಭದಲ್ಲಿ ಮೇಲಿನ ವಾಕ್ಯವು ಅವರ ಬಾಯಿಂದ ಹೊರಟಿತು. "ದೇಶೀಯರ ಚಿತ್ತವೃತ್ತಿಯಿಂದಲೇ ಈ ಶಿಕ್ಷಣಕ್ಕೆ ರೂಪುಗೊಳ್ಳಬೇಕು, ಈ ಶಿಕ್ಷಣದ ಕರ್ಣಧಾರರೂ ದೇಶೀಯರೇ ಆಗಬೇಕು" ಎಂದು ಅವರು ಹೇಳುವುದರಿಂದ ನಮ್ಮಲ್ಲಿ ಉಂಟಾಗುವ ಮನೋಭಾವಗಳನ್ನು ಇನ್ನೂ ಸ್ಪಷ್ಟಗೊಳಿಸುವ ಉದ್ದೇಶದಿಂದ ಅವರು ಹೀಗೆಂದಿದ್ದಾರೆ:— "ಇಂಗ್ಲೆಂಡದ ಪರಿಸ್ಥಿತಿಗೆ ಇಲ್ಲಿಯ ಶಿಕ್ಷಣದ ಕ್ರಮವು ಅನುರೂಪವಾಗಿಯೇ ಇದ್ದಿರಬಹುದು. ಆದರೆ ಹಿಂದುದೇಶದ ಪರಿಸ್ಥಿತಿಗೆ ಇದು ಏನೇನೂ ಸಮಂಜಸವಾದ್ದಲ್ಲ. ಈಗಿನ ಶಿಕ್ಷಣ ಕ್ರಮವನ್ನು ಇಲ್ಲಿ ಪ್ರಥಮತಃ ಬಿತ್ತಿದವರಿಗೆ ಹಿಂದಿಗಳ ಮನೋವೃತ್ತಿಯ ಜ್ಞಾನವೂ ಇರಲಿಲ್ಲ, ಅವರ ಚಿತ್ತಶಕ್ತಿ, ಮತ್ತು ಸ್ವಭಾವಗಳ ಸಂಪೂರ್ಣ ಪರಿಚಯವೂ ಇರಲಿಲ್ಲ; ಹೀಗಾಗಿ 'ತಮ್ಮಂತೆಯೇ ಪರರು' ಎಂಬ ಭಾವನೆಯಿಂದ ಈ ಪಾಶ್ಚಾತ್ಯ ಶಿಕ್ಷಣಕ್ರಮವೆಲ್ಲ ಸಿದ್ಧ ಮುಕರಪ್ರಚುರವನ್ನು ಎಲ್ಲೆಲ್ಲಿಯೂ ಪ್ರಚಾರಕ್ಕೆ ತರಲು ಯತ್ನಿಸುವಾಗ ಬೇರೆ ಬೇರೆ ದೇಶಪ್ರಕೃತಿಯ ಸ್ವಾತಂತ್ರ್ಯಗಳನ್ನು ಈ ಶಿಕ್ಷಣದ ಮೂಲಕರ್ತೃಗಳು ಸರಿಯಾಗಿ ಗಮನಿಸಲಿಲ್ಲವೆಂಬ್ಬು ಮಿ| ಶ್ರೀನಿವಾಸಯ್ಯಂಗಾರರ ಮಾತಿನ ಮುಖ್ಯ ತಾತ್ಪರ್ಯವೆನ್ನಬಹುದು.

ಕಲ್ಕತ್ತೆಯ ಯೂನಿವರ್ಸಿಟಿಯ ಪರಿಸ್ಥಿತಿಯನ್ನು ಶೋಧಿಸಿ ರಿಪೋರ್ಟ್ ಮಾಡುವುದಕ್ಕೆ ನೇಮಕಸಟ್ಟ ಸೆಡ್ಲರ್ ಕಮಿಷನ್ ಅಂತೂ ಬಂಗಾಳದ ಸೆಕೆಂಡರಿ ಶಿಕ್ಷಣಕ್ರಮವನ್ನು ತೀರಾ ಖಂಡಿಸಿಬಿಟ್ಟಿದೆ. ಹಿಂದುಸ್ಥಾನದಲ್ಲಿ ಪಾಶ್ಚಾತ್ಯ ಶಿಕ್ಷಣವು ದೊರಕಿದ್ದು ಬಂಗಾಳದಲ್ಲಿ ಮೊದಲು. ಅಲ್ಲಿಯ ಸ್ಥಿತಿಯನ್ನೆ ಈ ಕಮಿಶನ್ನವರು ನಿಸ್ಸಾರವಾದ್ದೆಂದು ಹೇಳಿದ ಮೇಲೆ ಬೇರೆ ಪ್ರಾಂತಗಳು ಅದೇ ಪಂಕ್ತಿಯಲ್ಲಿ ನಿಲ್ಲದೆ ಗತ್ಯಂತರವಿಲ್ಲ. ಈ ಕುಂದುಕಗಳನ್ನು ಹೋಗಲಾಡಿಸುವುದಕ್ಕೆ ಸೆಡ್ಲರ್ ಕಮಿಶನ್ನವರು ಹಲವು ಹುನಿಸೊಂಟು ಸೂಚನೆಗಳನ್ನು ಕೊಟ್ಟಿದ್ದಾರೆ. ಆದರೆ, ಈ ಸೂಚನೆಗಳಲ್ಲಿ ಕಮ್ಮಿಟಿಯಲ್ಲಿದ್ದ ಯುರೋಪಿಯನ್ ಮೆಂಬರರ ಮನೋವೃತ್ತಿಯೇ ಬಹಳವಾಗಿ ವ್ಯಾಪಿಸಿದ್ದು, ವಿಸ್ತರಿಂದ ಧನವ್ಯಯದ ವ್ಯವಸ್ಥಾ ಕ್ರಮವನ್ನು ಅನುಸರಿಸಲಿಕ್ಕಿರುವದರಿಂದ ಆ ಸೂಚನೆಗಳು ನಮ್ಮ ಗಂಟಲೊಳಗೆ ಇಳಿಯಲಾಗದು" ಎಂದು ಮಿ| ಶ್ರೀನಿವಾಸ ಅಯ್ಯಂಗಾರರು ಸ್ಪಷ್ಟವಾಗಿ ಹೇಳುತ್ತಾರೆ.

ಯೂನಿವರ್ಸಿಟಿ ಕಮ್ಮಿಶನನ್ನು ಲೋರ್ಡ ಕರ್ಝನರು ಹಿಂದುಸ್ಥಾನದ ವೈಸರಾಯಿಗಳಾಗಿದ್ದ ಕಾಲದಲ್ಲಿ ಏರ್ಪಡಿಸಿದಾಗ, ಅದರಲ್ಲಿ ಮೆಂಬರರಾಗಿದ್ದ ಜಸ್ಟೀಸ್ ಗುರುದಾಸ ಬ್ಯಾನರ್ಜಿಯವರು ಬರೆದ ರಿಪೋರ್ಟಿನಲ್ಲಿಯೂ ಅನಂತರ ಪ್ರಕಟಿಸಿದ ಗ್ರಂಥದಲ್ಲಿಯೂ ಇದೇ ಬಗೆಯ ಉದ್ಗಾರಗಳನ್ನು ಎತ್ತಿದ್ದಾರೆ. ಬಂಗಾಳದ ನೆಶನಲ್ ಕೌನ್ಸಿಲ್ ಆಫ್ ಎಡ್ಯುಕೇಶನ್ ಜನ್ಮವೆತ್ತಲಿಕ್ಕೆ ಈ ಬಗೆಯ ಪಾಶ್ಚಾತ್ಯ ಶಿಕ್ಷಣದ ಕುಂದುಕ ನಿವಾರಣೆಯ ಸಾಹಸವೇ ಕಾರಣವಾಯಿತು. ಕಾಂಗ್ರಾದ ಗುರುಕುಲವಾಸವೂ, ಬೋಲಪುರದಲ್ಲಿ ಡಾ| ರವೀಂದ್ರನಾಥ ಟಾಗೋರರು ಸ್ಥಾಪಿಸಿದ ವಿದ್ಯಾಶಾಲೆಯೂ ಈ ಪಾಶ್ಚಾತ್ಯ ಶಿಕ್ಷಣದ ಲೋಪದಿಂದ ಉಂಟಾದ ರೋಗನಿವಾರಣೆಗೆ ತಯಾರಿಸಿದ ಗುಳಿಗೆಗಳು. ಲಾಲಾ ಲಜಪತರಾಯರು ಈಗಿನ ಶಿಕ್ಷಣ ಕ್ರಮದಿಂದ ಜನತೆಯ ಮನೋವೃತ್ತಿಗಳಲ್ಲಿ ಯಾವ ಪರಿಣಾಮವು ಆಗಿದೆ, ಅಂಥ ಪರಿಣಾಮವು ಯಾಕೆ ಶುಭಸೂಚಕವಲ್ಲ, ಅದರ ನಿವಾರಣೆಯ ಬಗೆ ಹೇಗೆ ಎಂಬುದನ್ನು ಈಚೆಗೆ ಕೆಲವು ವರ್ಷಗಳಿಂದ ತಮ್ಮ ಭಾಷಣ ಮತ್ತು ಲೇಖನಗಳಲ್ಲಿ ಪ್ರಚುರಗೊಳಿಸಿದ್ದಾರೆ. ಅವರು ಅಮೇರಿಕದಲ್ಲಿದ್ದಾಗಲೂ ಇದೇ ಸರ್ವದಾ ಅವರ ಚಿಂತನೆಯಾಗಿತ್ತು. ಮಿಸೆಸ್ ಎನ್ನಿಬಿಸೆಂಟರು ಸ್ಥಾಪಿಸಿದ ನೆಶನಲ್ ಸ್ಕೂಲು ಮತ್ತು ಕಾಲೇಜುಗಳಂತೂ ಈ ಪಾಶ್ಚಾತ್ಯ ಶಿಕ್ಷಣ ಭೂತೋಚ್ಚಾಟನೆಗೆ ಮಂತ್ರಿಸಿಕೊಟ್ಟ ಯಂತ್ರಗಳೆಂದು ಒಂದು ಕಾಲದಲ್ಲಿ ಅಭಿಪ್ರಾಯವಿತ್ತು. ಹೀಗೆ ಈಗಿನ ಶಿಕ್ಷಣಕ್ರಮವನ್ನು ನಿರ್ಧಾಕ್ಷಿಣ್ಯದಿಂದ ಖಂಡಿಸಿ ತಮತಮಗೆ ಕಂಡ ಶಿಕ್ಷಾಕ್ರಮವನ್ನು ಸೂಚಿಸಿ ಅವರವರೇ ಸಫೋಪಕಮನವಾದೀತೆಂದು ಪ್ರತಿ

[illegible]

...ಕಾರ್ಯಗಳನ್ನು ಕೊಂಡುಕೊಳ್ಳಬಾರದು, ಐಹಿಕ ಸುಖಾಕಾಂಕ್ಷೆಯು ಜನಾಂಗಗಳಲ್ಲಿ ಬುದ್ಧಿಭ್ರಂಶಕ್ಕೆ ಕಾರಣವು, ಅದರಿಂದ ಲೋಕದ ನಾನಾಗೆ ಭಂಗವನ್ನು ತರುತ್ತದೆ [illegible] ಮಾರ್ಗದರ್ಶಕಯು ಆದಾಗ ಹೇಳುತ್ತಲೇ ಬಂದಿದ್ದಾರೆ. ಆದರೆ ಮೇಲೆ ಹೇಳಿದ ಚಿಕಿತ್ಸೆ ಪ್ರಯತ್ನಗಳೆಲ್ಲವೂ ವಿಶೇಷ ಫಲಕಾರಿಯಾಗದಿರುವುದಕ್ಕೆ ಕಾರಣವೇನಾಗಿರಬಹುದು?

ಲಾಲಾ ಲಜಪತರಾಯರು ಈ ವಿಷಯವನ್ನು ಬಹಳ ಚೆನ್ನಾಗಿ ಟೀಕಿಸಿದ್ದಾರೆ. ಬೋಲಪುರದ ಮಾತ್ರವೇ ಇನ್ನೂ ಪ್ರಚಾರಕ್ಕೆ ವಿಶೇಷವಾಗಿ ಬರಲಿಲ್ಲ. ಅದು ಉಪಾಧ್ಯಾಯರ ಕರ್ತವ್ಯದ ಬಗೆಯನ್ನು ವಿಶೇಷ ವರಿಸಿ ಇಟ್ಟಿದೆ. ಅಂಥಾ ಉಪಾಧ್ಯಾಯರು ಇಲ್ಲದಿರೋ ಆಕ್ರಮವು ಪ್ರಯೋಜನಕಾರಿಯಾದೀತಲ್ಲದೆ ಇತರ ಸಾಮಾನ್ಯ ಜನರ ಕೈಯಲ್ಲಿ ಅಂದರೆ ಗುಣಸ್ವಭಾವಗಳ ಪುಲ್ಲನ ಮಾಡುವಷ್ಟು ಸಾಮರ್ಥ್ಯವೂ ಅವಕಾಶವೂ ತಾಳ್ಮೆಯೂ ಇಲ್ಲದವರಲ್ಲಿ ತೀರಾ ಬಾಧಕರವಾಗಿ ಪರಿಣಮಿಸೀತೊ ಎಂಬ ಸಂದೇಹವು ಇದೆ. ಗುರುಕುಲವಾಸವು ಈಗಿನ ಪರಿಸ್ಥಿತಿಗೆ ಎಂದೆಂದಿಗೂ ಒಪ್ಪಲಾರದು. ಬಹು ಪುರಾತನ ಸ್ಥಿತಿಯನ್ನೆ ಈಗ ಪುನಃ ತಂದಿಕ್ಕುವುದೆಂದರೆ ಪ್ರಗತಿಯ ರಥವನ್ನು ಹಿಂದಕ್ಕೆ ಹೊತ್ತದಂತಾದೀತು ಎಂದು ಲಜಪತರಾಯರು ಹೇಳುತ್ತಾರೆ. ನೆಶನಲ್ ಸ್ಕೂಲ್ ಮತ್ತು ಕಾಲೇಜುಗಳ ಪರಿಸ್ಥಿತಿಯು ಈಗಿನ ಸಾಮಾನ್ಯ ಕಾಲೇಜುಗಳಿಗಿಂತ ವಿಶೇಷ ಬೇರೆಯಾಗಿಲ್ಲ. ಆರಂಭದಲ್ಲಿ ಅವು 'ಸರ್ವಸಂಕಟಹಾರಿ' ಎಂಬ ಘೋಷವು ಎಲ್ಲೆಲ್ಲಿಯೂ ಏಳುವಂತೆ ಅವುಗಳ ಚಾಲಕರು ಯತ್ನಿಸಿದರೂ ಸಾಮಾನ್ಯ ಕ್ವಿನೀನಿಗೆ ಹೊರಗೆ ಸಕ್ಕರೆ ಗಿಲಾವು ಕೊಟ್ಟದ್ದಲ್ಲದೆ ಬೇರೇನೂ ಇಲ್ಲ, ಕೆಲವು ಸಮಯದಲ್ಲಿ ಚಿತ್ತಶುದ್ಧಿ ಕ್ಷುಧೆಯಾಗ ಬಳಲಿದವರಿಗೆ ಕಾರಣವಾದರೂ ಒಂದು ಬಗೆಯ ಪ್ರಯೋಜನವು ಸಾಮಾನ್ಯ ಕ್ವಿನೀನಿಂದ ಸಿಗುತ್ತಿದೆ, ಈ ಗಿಲಾವಿನ ಗುಳಿಗೆಗಳಲ್ಲಿ ಕೆಲವು ಸಲ ಆ ಕ್ವಿನೀನು ಕೂಡ ಇಲ್ಲದೆ ಬರೆ ಬಾಯಿಸವಿಯಲ್ಲದೆ ಬೇರೆ ಉಪಕಾರವಾಗಲಿಲ್ಲ. ಹೀಗೆ ಈ ವರೆಗಿನ ಪ್ರಯತ್ನಗಳು ಏನೇನೂ ಫಲಕಾರಿಯಾಗಲಿಲ್ಲವೆಂದು ಮೊದಲು ರೆಟ್ಟಿ ಸೆಶಸಬ್ಬ್, ಸರಕಾರದ ಪ್ರತಿನಿಧಿ, ಅಸಹಕಾರಿ ಮುಂತಾದ ಸರ್ವಮತಗಳವರೂ ಏಕವಾಕ್ಯತೆಯಿಂದ ದೂಷಣೆ ಮಾಡಿದ್ದಾರೆ.

ಹಿಂದೀ ಕ್ರಿಶ್ಚಿಯನ್ನರನ್ನು ಕಳಕೊಳ್ಳದೆ ಪಾಶ್ಚಾತ್ಯ ಚರಸ್ವತ್ತನ್ನು ವಿವೇಚಿಸಿ ತಗ್ಗಿಸಿಕೊಳ್ಳುವ ಕಾಂಕ್ಷೆಯಿಂದಲೇ ಅಲಿಘಡದಲ್ಲಿ ಮುಸಲ್ಮಾನರೂ ಬನಾರಸದಲ್ಲಿ ಹಿಂದೂಗಳೂ ನೂತನ ಯೂನಿವರ್ಸಿಟಿಗಳನ್ನು ಸೃಜಿಸಿದರು. ಅವುಗಳ ವಾದಾದರೂ ಏನೇನೂ ಸ್ವತಂತ್ರವಾದ ರೂಪವನ್ನು ಹೊಂದಲಿಲ್ಲ. ಈಗ ಹೊಸ ರಿಫೋರ್ಮ್ ಎಕ್ಟಿನ ಮೇರೆಗೆ ವಿದ್ಯಾಖಾತೆಯು ಲೋಕನಿಯುಕ್ತ ಮಂತ್ರಿಗಳ ಕೈಸೇರಿತಲ್ಲಿಕ್ಕೆ ಮುಂದಿನಿಂದ ಇನ್ನೂ ವ್ಯುತ್ಪತ್ತಿಯಾದ ವ್ಯವಸ್ಥಿತವಾದ ಶಿಕ್ಷಣಕ್ರಮಕ್ಕೆ ಅವಕಾಶವನ್ನು ಹಾಕಲು ಸಾಧ್ಯವಿದೆಯೋ ಎಂಬ ಆಸೆಯು ಹುಟ್ಟುವಷ್ಟರಲ್ಲಿ ಮಿ| ಅಯ್ಯಂಗಾರರ ಮಾತಿನಿಂದಲೂ ಮದ್ರಾಸಿನ ಟೀಚರ್ಸ್ ಕಾಲೇಜಿನಲ್ಲಿ ಕೆಲವು ದಿನಗಳ ಹಿಂದೆ ನಾಮಧಾರಿ ಶ್ರೀನಿವಾಸ ಶಾಸ್ತ್ರಿಗಳು ಮಾಡಿದ ಭಾಷಣದಿಂದಲೂ ಈ ಆಸೆಯು ಮಾಯವಾಗಬೇಕಾಗುತ್ತದೆ. ಈಗಿನ ಶಿಕ್ಷಣಪರಿಸ್ಥಿತಿಯಲ್ಲಿ ತೀರಾ ಪರಿವರ್ತನೆಗಳು ಉಂಟಾದಾವು ಎಂದು ಹಿಗ್ಗುವುದಕ್ಕೆ ಕಾರಣವಿಲ್ಲವೆಂದು ಇವರಿಬ್ಬರೂ ಸ್ಪಷ್ಟವಾಗಿ ಹೇಳಿದ್ದಾರೆ. ಹಾಗಾದರೆ ಈ ಪೀಡೆಗೆ ಮಹಾತ್ಮಾ ಗಾಂಧಿಯವರು ಸೂಚಿಸಿದ ಔಷಧಿಯೇ ಉಪಶಮನಕಾರಿಯಾಗಬಹುದೇ ಎಂಬ ಪ್ರಶ್ನೆಯು ವಿಚಾರಕ್ಕೆ ಅರ್ಹವಾಗಿದೆ. ಈ ವಿಷಯದಲ್ಲಿ ನಾವು ನಮ್ಮ ಮನಸ್ಸನ್ನು ಇನ್ನೂ ಖಂಡಿತ ಮಾಡಿಲ್ಲ. ಇದು ಆ ಭೀತಿಯಲ್ಲವಾದರೆ ಬೇರೇನಾದರೂ ಉತ್ತಮ ವಿಧದ ಚಿಕಿತ್ಸೆಯು ಈಗಿನ ಸರ್ಕಾರಿಶ್ರಾವಾದಿಗಳ ಸಂಯುಕ್ತ ಮಥನದಿಂದ ಉಂಟಾದರೆ ದೇಶದ ಒಳ್ಳೆತಕ್ಕೆ ದಾರಿಯಾದೀತು ಎಂದು ನಮ್ಮ ಕಾಂಕ್ಷೆ.

ಅಸಹಕಾರ.

ಮಂಗಳೂರು ಅಸಹಕಾರಿತೆಯ ಕಮ್ಮಿಟಿ ಕಡೆಯಿಂದ— ಕಳೆದ ಡಿಸ್ಟ್ರಿಕ್ಟ್ ಸಭೆಯಲ್ಲಿ ನಿರ್ಣಯಿಸಿದ ಅಸಹಕಾರಿತೆಯ ಠರಾವನ್ನು ಜಾರಿಯಲ್ಲಿ ತರುವುದಕ್ಕಾಗಿ ಈಗ ಊರ್ಜಿತದಲ್ಲಿರುವ ಕಮ್ಮಿಟಿಯ ಮೆಂಬರುಗಳಾದ ಮ| ರಾ| ರಾ| ಉಳ್ಳಾಲ ರಾಮರಾಯರು, ಅರಿಬೈಲು ಭೋಜರಾಯರು, ಪ್ರ ಶ್ರೀಸರು ಮಹಮ್ಮದ್ ಸಾಹೇಬರು, ಪಡಕ ಬೈಲು ಪರಮೇಶ್ವರಯ್ಯನವರು, ಎಚ್. ಕೆ. ಪಟ್ಟಾಭಿರಾಮಯ್ಯನವರು, ಹಾಜಿ ಅಹಮ್ಮದ್ ಫಕ್ರುದ್ದೀನ್ ಸಾಹೇಬರು, ಪಿ. ಎಸ್. ಕಾಮತರು, ಡಿ. ಎಫ್ ಜಲಾಲುದ್ದೀನ್ ಸಾಹೇಬರು, ಕಾರ್ನಾಡು ಸದಾಶಿವರಾಯರು, ಗಂಗೊಳ್ಳಿ ಕೃಷ್ಣರಾಯರು, ಯು. ಎಫ್. ಬಂತಪ್ಪನವರು, ನಾರಾಯಣ ಚಡ್ಡು ಬಾಳಿಗರು, ಮತ್ತು ಅಫಾನ ಸಾಹೇಬರು, ಈ ಕೆಳಗೆ ಕಾಣಿಸಿದ ವ ಆಗಿಂದಾಗ್ಯೆ ಅವರು ಮಾಡಬಹುದಾದ ನಿರ್ಣಯಗಳನ್ನು ಜಾರಿಯಲ್ಲಿ ತರುವುದಕ್ಕೆ ಸರ್ವರೂ ಸಹಾಯ ಮಾಡಬೇಕಾಗಿ ವಿನಯಪೂರ್ವಕವಾಗಿ ವಿಜ್ಞಾಪಿಸುತ್ತಾರೆ.

(೧) ಸರಕಾರಿ ಶಾಲೆಗಳನ್ನು ವ ಸರಕಾರ ಸಹಾಯ ಪಡೆಯುವ ಶಾಲೆಗಳನ್ನು ವಿದ್ಯಾರ್ಥಿಗಳು ಕೂಡಲೇ ಬಿಡುವ ಹಾಗೂ ಅವರ ಬಗ್ಗೆ ದೇಶೀಯ ಶಾಲೆಗಳನ್ನು ಮಾಡುವ ಹಾಗೂ ಕೂಡಲೆ ಪ್ರಯತ್ನ ಮಾಡಬೇಕು. ಇವರಿ ಶಾಲೆಗಳಲ್ಲಿ ಹಿಂದುಸ್ಥಾನದಲ್ಲಿ ಆಗುವ ನೂಲಿನಿಂದಲೇ ಬಟ್ಟೆಯನ್ನು ಮಾಡುವ ವೃತ್ತಿಯಲಾದ ಉದ್ಯೋಗಗಳನ್ನು ಕಲಿಸುವ ಏರ್ಪಾಡು ಕೂಡ ಮಾಡಬೇಕು.

(೨) ಅಸಹಕಾರಿತೆಯನ್ನು ಕುರಿತು ಮಾತಬಹುದಾದ ಕೆಲಸಕಾರ್ಯಕ್ಕಾಗಿ ಒಂದು ಫಂಡನ್ನು ಏರ್ಪಡಿಸಬೇಕು ಮತ್ತು ಇದರ ಫಂಡನ್ನು ಕೂಡಿಸಲಿಕ್ಕೆ ಮ| ರಾ| ರಾ| ಗಳಾದ ಉಳ್ಳಾಲದ ರಾಮರಾಯರು, ಡಿ. ಎಫ್. ಜಲಾಲುದ್ದೀನ ಸಾಹೇಬರು, ಕಾರ್ನಾಡ ಸದಾಶಿವರಾಯರು (ಖಜಾನ್ಚಿ) ಮತ್ತು ಅರಿಬೈಲ್ ಭೋಜರಾಯರು ಇವರಿಂದ ಕೂಡಿದ ಒಂದು ಕಮ್ಮಿಟಿಯು ಮಾಡಲ್ಪಟ್ಟಿರುತ್ತದೆ.

(೩) ಸ್ವಯಂ ಸೇವಕರು ವೋಟು ಕೊಡದೆ ಇರುವದರಿಂದ ಗಾಂಧಿ ಪುಸ್ತಕದಲ್ಲಿ ದಸ್ಕತು ತೆಗೊಳ್ಳುವ ಹಾಗೂ ಅಂಥಾ ವೋಟರರು ತಮ್ಮ ದಸ್ಕತುಗಳನ್ನು ಕೊಡುವುದಲ್ಲದೆ ಇತರರು ಕೂಡ ಸ್ವಯಂ ಸೇವಕರಿಗೆ ಸಹಾಯ ಮಾಡಬೇಕಾಗಿ ಪ್ರಾರ್ಥನೆ.

[illegible]

...ಹೊಂದುವದು [illegible]

'ಡಿಸ್ಟ್ರಿಕ್ಟ್ ಎಡವಾನ್ಸ್ ಮೆಂಟ್ ಎಸೋಸಿಯೇಶನ್'... ಮೇಲ್ಗೆ ೧೦೦ ರೂಪಾಯಿಗಳನ್ನು ಡಿಸೆಂಬರದ ಪತ್ರಸ್ಥಾಪನೆ ... ಸಹಾಯಧನವಾಗಿ ಕೊಡಲು ನಿಶ್ಚಯಿಸಲಾಯಿತು.

ಸೆಕೆಂಡರಿ ಟ್ರೇನಿಂಗ್ ಶಾಲೆಯಲ್ಲಿ ಕಲಿಯಲು ಆಗಿರುವ ಮ| ನ್| ನಾರಾಯಣಾಚಾರ್ಯರಿಗೆ ಸಂಬಳದ ಬಾಕಿಯಾಗಿ ರೂ ೫ ಕೊಡುವುದಾಗಿ ನಿಶ್ಚಯಿಸಲಾಯಿತು.

ಜಾಲ್ಸೂರಿನಲ್ಲಿ ಟೋಲ ಪಟ್ಟಿಗೆ ೬೭೦ ರೂಪಾಯಿ, ಹಿಜಮಾಡಿಯಿಂದ ಪಾರಿಗಾಲಕ್ಕೆ ಹೋಗುವ ರಸ್ತೆ ದುರಸ್ತಿಗೆ ರೂ ೫೭೦ ಸಂಕಲ್ಪನಾಯಿತು.

ಕಂಟ್ರಾಕ್ಟರನ ಖರ್ಚಿಂದ ... ಬೋರ್ಡಿಗಳನ್ನು ಸ್ಥಾನ ಬದಲಾಯಿಸಿ ಕಟ್ಟುವುದಕ್ಕೆ ಅಪ್ಪಣೆ ಸಿಕ್ಕಿತು.

ಕುಳಗುಂದದ ಜಾನುವಾರ ಸಂತೆಯ ಕಾಲದಲ್ಲಿ ಕಟ್ಟುವ ತಂಗಾಮಿ ಚಪ್ಪರ ಮುಂತಾದವುಗಳ ಬಗ್ಗೆ ೧,೨೫೦ ರೂ ಸಂಕಲ್ಪನಾಯಿತು.

ಕುಳಗುಂದ ಸಂತೆಯ ಕಾಲದಲ್ಲಿ ಎಂದಿನಂತೆ ಚಿತ್ರಕ್ಕೆ ೮ ಆಣೆ ವಸೂಲು ಮಾಡಬೇಕಾಗಿ ನಿರ್ಣಯವಾಯಿತು, ಮತ್ತು ಅಲ್ಲಿ ಜಾನುವಾರುಗಳ ಬಗ್ಗೆ ಹುಲ್ಲು ಸಂಗ್ರಹಕ್ಕೆ ರೂ ೧೫೦ರನ್ನು ತಹಶೀಲ್ದಾರರ ವಶಪಡಿಸಲಾಯಿತು.

ಕಾಸರಗೋಡಿನಲ್ಲಿ ಹೊರ ರೋಗಿಗಳ ಆಸ್ಪತ್ರೆಯ ಬಗ್ಗೆ ಕೊಂಡುಕೊಂಡ ಸ್ಥಳದಲ್ಲಿ ಹೊಸತಾಗಿ ಕಟ್ಟಿಸಿದ ಕಟ್ಟೋಣದ ಅಂದಾಜು ಬೆಲೆ ... ರನ್ನು ಮ್ಹಾಲಿಕನಿಗೆ ಕೊಡಿಸುವುದಾಗಿ ನಿಶ್ಚಯಿಸಲಾಯಿತು.

ಕುಂದಾಪುರ ಬೋರ್ಡ ಹೈಸ್ಕೂಲಿನ ಹೆಡ್ ಉಪಾಧ್ಯಾಯರಿಗೆ ಸಂಬಳ ರೂ. ... ಏರಿಸುವ ವಿಷಯವನ್ನು ಬಾಕಿ ಇಡಲಾಯಿತು.

ಮುಲ್ಕಿ ಗೌಡಸಾರಸ್ವತ ಬ್ರಾಹ್ಮಣ ಬಡ ವಿದ್ಯಾರ್ಥಿ ಸಹಾಯಕ ಫಂಡ್.

(ಕಳೆದ ಸಂಚಿಕೆಯಿಂದ ಮುಂದರಿಸಿದ್ದು)

ಮ| ರಾ| ರಾ| ಗಳಾದ ಕೆ. ಶ್ರೀನಿವಾಸ ಗಡಿಯಾರ, ಕೇಶವ ಕಾಮತ್, ಮುಲ್ಕಿ ಇವರು ರೂ. ೦-೬-೦ ಪ್ರಕಾರ.

ವೇದಮೂರ್ತಿಗಳಾದ ರಾಮ ಭಟ್ಟಜೀ, ಸುಬ್ರಾಯ ಭಟ್ಟಜೀ, ನರಸಿಂಹ ಭಟ್ಟಜೀ, ಮ| ರಾ| ರಾ| ಗಳಾದ ಕೃಷ್ಣ ನಾಯಕ, ಮಾಧವ ಪ್ರಭು, ಮಿಸೆಸ್ ಚೊಕ್ಕ ಕಾಮರಾವ್, ಮ| ರಾ| ರಾ| ಗಳಾದ ಮು. ವೆಂಕಟಶ್ಯಾಣ್, ವೆಂಡರ್, ನಾರಾಯಣ ಕಾಮತ್, ಜನಾರ್ದನ ಆಚಾರಿ, ಮುಲ್ಕಿ; ಮ| ರಾ| ರಾ| ಗಳಾದ ಕೃಷ್ಣಪ್ಪ ಕಾಮತ್, ವಡೇರ ಬಟ್ಟು, ಶ್ರೀನಿವಾಸ ಪ್ರಭು, ಹ. ನರಸಿಂಹ ಶೆಣೈ, ಪೋಸ್ಟ್ ಮಾಸ್ಟರ್, ಬ. ಸೀತಾರಾಮಯ್ಯ, ಮಿಸೆಸ್ ಬಾಬಣ್ಣ ಕಾಮತ್, ಮ| ರಾ| ರಾ| ಗಳಾದ ಎಮ್. ಮುಕುಂದರಾವ್, ರಾಮಯ್ಯ ಶಣೈ, ಶ್ರೀನಿವಾಸ ಕಾಮತ್, ಗೋವಿಂದ ಭಾಗವತ್, ಪೊಳೆಗಾರ ಅಣ್ಣಪ್ಪ, ಮುಲ್ಕಿ ಅಬ್ದುಲ್ ರಜಾಕ್, ಮೊತ್ತ ಮನೆ, ಸುಬ್ಬಾ ಶೇಷಗಿರಿ ಕಾಮತ್, ಮರ್ತಪ್ಪ ಕಾಮತ್, ಪುಟ್ಟು ಸಾಮ್ಯ, ಅನಂತ ಕಾಮತ್, ಮುಂಡ್ಕೂರು ಸುಬ್ಬರಾವ್, ಎ. ಚೆರ್ನಪ್ಪ ಕಾಮತ್, ವಿ. ರಾಘವೇಂದ್ರ ಕಾಮತ್, ಉ. ವೆಂಕಟ್ರಮಣ ಶೆಣೈ, ಎಮ್. ರಂಗಪ್ಪ ಕಾಮತ್, ಉ. ದೇವರಾವ್, ಎಮ್. ಲಕ್ಷ್ಮಣ ಕಾಮತ್, ಚರ್ಚ್ ನರ್ಸರಿ ಸ್ಕೂಲಿನ ಕಾಮಯ್ಯ ಶಣೈ, ಹ. ದೇವರಾಯ ಶಣೈ, ಶೇಷಗಿರಿ ಅಣ್ಣಪ್ಪ ಕಾಮತ್, ಮುಲ್ಕಿ; ಪ್ರತಿ ಒಬ್ಬರು ರೂ. ೦-೪-೦ಯ ಪ್ರಕಾರ.

ಮ| ರಾ| ಗಳಾದ ಕೆ. ಮಂಜುನಾಥರಾವ್, ಮಿಸೆಸ್ ಪುರುಷೋತ್ತಮ ನಾಯಕ, ಮ| ರಾ| ರಾ| ಗಳಾದ ಪುರುಷೋತ್ತಮ ಹೆಗ್ಡೆ, ದಾಸು ಸಟ್ಟಿ, ರಾಮಕೃಷ್ಣ ನಾಯಕ, ವ. ಗೋವಿಂದರಾಯ ಶೆಣೈ, ಕಾರ್ಲ್ಯಾಡಿ ಸುಬ್ರಾಯ ಪೈ ಮತ್ತು ಕಂಪೆನಿ, ಶಿಬ್ರಾರು ರಾಘವ ಕಾಮತ್, ತಲಚೇರಿ ಶ್ರೀನಿವಾಸ ಶೆಣೈ, ... ರಾಮಕೃಷ್ಣ ಶೆಣೈ, ... ನರಸಿಂಹ ಕಾಮತ್, ಕಾರ್ನಾಡ ಜನಾರ್ದನ ಶೆಣೈ, ಕೃಷ್ಣ ... ಪೈ, ಉ. ವೆಂಕಟರಮಣ ಶೆಣೈ, ಮು| ಶ್ರೀನಿವಾಸ ಹೆಗಡೆ, ಹ. ವಾಮನ ಗಡಿಯಾರ, ವ. ಉಪೇಂದ್ರ ಶೆಣೈ ಪ್ರತಿಯೊಬ್ಬರ ರೂ. ೦-೨-೦ ಪ್ರಕಾರ.

ಮೇಲಿನ ಪಟ್ಟಿಯಲ್ಲಿ ಹೆಸರು ಕಾಣಿಸಿದ ಮಹನೀಯರು ಸಂಸ್ಥೆಗೆ ತಮ್ಮ ಉದಾರ ಹಸ್ತದಿಂದ ಸಹಾಯ ಮಾಡಿದ್ದಕ್ಕಾಗಿ ಸಂಸ್ಥೆಯವರ ಕೃತಜ್ಞತಾಪೂರ್ವಕ ವಂದನೆಗಳು.

(ಸಮಾಪ್ತಿ.)

ಮುಲ್ಕಿ,
ತಾ. ೩೦-೧೧-೧೯೨೦

T. Naraian Shenai,
Secretary.

ಪತ್ರವ್ಯವಹಾರ.

ಅಯ್ಯಾ,

ನಮ್ಮ ದಕ್ಷಿಣ ಕನ್ನಡ ಜಿಲ್ಲಾ ಗೌಡಬ್ರಾಹ್ಮಣ ವಿದ್ಯಾವರ್ಧಕ ಶಾಖೆಯ ... ಇದ್ದಲ್ಲಿ ಸೇರಬೇಕಾಗಿ ಈ ದಿವಸ ಪ್ರಕಟಿಸಿದ್ದರೂ ಬಹುಜನರು ಸದರಿ ಸಮಯ ಸುಬ್ರಮಣ್ಯದಲ್ಲಿ ... ಮತ್ತು ಜಾನುವಾರು ಜಾತ್ರೆ ನಡೆಯುವುದು ಉತ್ತಮವೆಂದು ಸೂಚಿಸುತ್ತದರಿಂದ ಸದರಿ ಗೌಡಬ್ರಾಹ್ಮಣ ವಿದ್ಯಾವರ್ಧಕ ಮಹಾಸಭೆಯ ... ಮದ್ರಾಸ ... ಸುಬ್ರಮಣ್ಯದಲ್ಲಿ ಜರಗುವದಾಗಿ ನಿರ್ಣಯಿಸಿ ಆಯಾಯ ಗ್ರಾಮಗಳಲ್ಲಿ ... [illegible] ... ಮಹನೀಯರು ... ದಯವಿಟ್ಟು ... ಮಾಡಬೇಕಾಗಿ ನನ್ನ ವಿನಂತಿ.

ದಕ್ಷಿಣ ಕನ್ನಡ ದ್ರಾವಿಡ ಬ್ರಾಹ್ಮಣರ ಪರಿಷತ್ತು.

[illegible]

[illegible] ರೂ. ೩ರಿಂದ ೧೦ರ ವರೆಗೆ [illegible] (ವಿದ್ಯಾರ್ಥಿಗಳಿಗೆ [illegible]) ಅಪೇಕ್ಷೆಯುಳ್ಳ [illegible] ಕೆಳಗಿನ ವಿಳಾಸದಾರರಿಂದ ಟಿಕೇಟುಗಳನ್ನು ಪಡೆಯಬಹುದು.

ವಿಳಾಸ:—ಬಡಕಬೈಲ್ ಪರಮೇಶ್ವರಯ್ಯ, ಕೋಟಮುಹಸ್ಥ ಪಕನಾ [illegible], ಕಿನ್ನಿಗೋಳಿ, ದ. ಕನ್ನಡ. ಅಥವಾ ಶೀಕರ್ತಿ ಭಿಡೆ, ವಾಸುದೇವ ರಾವ್, ಕೆ. ಆರ್. ಕಾರಂತ, ಕಾರ್ಯದರ್ಶಿಗಳು, ದ್ರಾವಿಡ ಬ್ರಾಹ್ಮಣರ ಪರಿಷತ್ತು, ಮಂಗಳೂರು.

ಸೂಚನೆ.—ಮನಿಯಾರ್ಡರ ಮೂಲಕವೂ ಹಣ ಕಳುಹಿಸಿ ಟಿಕೇಟು ಪಡೆಯಬಹುದು.

ಬಂಟರ ಯಾನೆ ನಾಡವರ ಮಹಾಸಭೆ, ಪುತ್ತೂರು.

ಕಾರ್ಯಕ್ರಮ.

ಡಿಸೆಂಬರ ೩೦ ಸಾಯಂಕಾಲ ೫ಕ್ಕೆ— ಅಧ್ಯಕ್ಷರನ್ನೂ ವ ಆತಿಥಿಗಳನ್ನು ಎದುರುಗೊಳ್ಳೋಣ.

ಡಿಸೆಂಬರ ೩೧ ಪೂರ್ವಾಹ್ನ ,, ೯ಕ್ಕೆ— ಸಂಘದ ಕಾರ್ಯನಿರ್ವಾಹಕ ಸಭೆ.

ಅಪರಾಹ್ನ ,, ೨ಕ್ಕೆ— ಸಂಘದ ಮಹಾಸಭೆ.

ಜನವರಿ ೧ ಪೂರ್ವಾಹ್ನ ,, ೯ಕ್ಕೆ— ಮಂಗಳೂರಲ್ಲಿ ಸ್ಥಾಪಿಸಿರುವ ಬಂಡಸಾಲೆ ಸಹಕಾರ ಸಂಘ, ಮತ್ತು ಕೆನರಾ ಛಾಪಖಾನೆಯ ಸಂಕ್ಷೇಪ ವೃತ್ತಾಂತವನ್ನು ಓದುವುದು. ಮಂಗಳೂರಲ್ಲಿ ಬೇಂಕು ಸ್ಥಾಪಿಸುವುದನ್ನು ಕುರಿತು ಮತ್ತು ಕಳೆದ ಮಹಾಸಭೆಯ ನಿರ್ಣಯಗಳನ್ನು ಕುರಿತು ಆಲೋಚಿಸುವುದು.

ಅಪರಾಹ್ನ ,, ೨ಕ್ಕೆ— ಉಪನ್ಯಾಸಗಳು ಓದುವುದು. ಸೋಡ್ತಿ ತೆಗೆಯುವುದು, (ಎಲ್ಲಾ ಟಿಕೇಟುಗಳು ಮಾರಾಟವಾಗಿದ್ದರೆ ಮಾತ್ರ)

ಸಭೆಯ ಪ್ರತಿ ದಿವಸ ಸಂಜೆ ವ ರಾತ್ರಿ ಮಾಯಾದೀಪ ಪ್ರದರ್ಶನ, ತಾಳಮದ್ದಳೆ, ಗಾಯನ, ಸ್ಕೌಟ್ ಯುವಕರ ಆಟ ವಗೈರೆ ವಿನೋದಗಳ ಏರ್ಪಾಡು ಮಾಡಲಾದೀತು.

ನೋಟೀಸು.

ಕುಂದಾಪುರ ಡಿಸ್ಟ್ರಿಕ್ಟ್ ಮುನ್ಸಿಫ ಕೋರ್ಟಿನಲ್ಲಿ

ಸ್ಮಾಲಕಾಜ ನಂಬ್ರ 932/1920

ವಾದಿ—ಜೋಸೆಫ ಮಿಂಗೇಲ ಲೋಬೊ.

ಪ್ರತಿವಾದಿ—ಕಾಳಾವರ ನಾಗಪ್ಪಯ್ಯ.

ವಾದಿಗೆ ಪ್ರತಿವಾದಿಯು ತಾ॥ 8—7—1899ರಲ್ಲು ಬರಕೊಟ್ಟ ರೂ. 30ರ ದಿವಾಳ್ಳ ನೋಟಿನ ಅಸಲು ಬಡ್ಡಿ ಹಣಗಳ ಪೈಕಿ ಸದರಿ ನೋಟಿನ ಹಿಂಬದಿಯಲ್ಲಿ ಪ್ರತಿವಾದಿಯು ಬರಕೊಟ್ಟ ಶರಾಗಳ ಪ್ರಕಾರ, ಬಂದದ್ದು ಹೊರ್ತು ಬಾಕಿ ಹಣಗಳನ್ನು ಬರಮಾಡಿಕೊಳ್ಳಲಿಕ್ಕೆ ತಂದ ಮೇಲ್ಕಂಡ ದಾವೆಯು ತಾ. 23-12-'20ಕ್ಕೆ ಆಖೈರ ತೀರ್ಮಾನಕ್ಕೆ ಇಡೋಣಾಗಿಯದೆಂತಲೂ, ಸದರಿ ದಿವಸ ಪ್ರತಿವಾದಿಯು ಸ್ವತಹಾ ಆಗಲಿ, ವಕೀಲರ ಮೂಲಕವಾಗಲಿ ಹಾಜರಾಗಿ ವ್ಯವಹರಿಸಲಿಕ್ಕೆ ತಪ್ಪಿದರೆ ಸದರಿ ದಾವೆಯು ಎಕ್ಸಪಾರ್ಟಿಯಾಗಿ ತೀರ್ಮಾನಿಸಲ್ಪಡುವುದೆಂತ ಈ ಮೂಲಕ ತಿಳಿಸೋಣಾಗುತ್ತದೆ.

ಕುಂದಾಪುರ, ತಾ. 6—12—'20

K. Narayana Shenai,
Pleader for Plaintiff.

ಪ್ರಕಟನೆ.

ದಕ್ಷಿಣ ಕನ್ನಡ ಡಿಸ್ಟ್ರಿಕ್ಟ್ ಕೋರ್ಟಿನಲ್ಲಿ.

O. P. ನಂಬ್ರ 130/1920.

ನಾರಾಯಣ ಭಟ್ಟ—ಅರ್ಜಿದಾರ.

ಮತ್ತು

ತಿಮ್ಮಕ್ಕ—ರೆಸ್ಪೊಂಡೆಂಟ್.

ಕಳೆದ 1919ನೇ ಇಸವಿ ಜುಲಾಯಿ ತಿಂಗಳಲ್ಲಿ ಈ ಕೋರ್ಟ ಚಕಬಂದಿಗೆ ಸೇರಿದ ಉಪ್ಪಿನಂಗಡಿ ತಾಲೂಕು ಕೈದಿಲ ಗ್ರಾಮದಲ್ಲಿ ಮೃತಪಟ್ಟ ಏತ್ತಿ ಕಳೆ ನರಸಿಂಹ ಭಟ್ಟರ ಸ್ಥಿರಾಸ್ತಿ ಕುರಿತು ವ ಆತನ ಮ್ಯಾನರ ಮಕ್ಕಳಾದ ಈಶ್ವರ, ರಾಮಕೃಷ್ಣ ಇವರ ಗಾರ್ಡಿಯನನಾಗಿ ಅರ್ಜಿದಾರನಿಗೆ ನೇಮಿಸುವರೇ ಸದರಿ ಅರ್ಜಿದಾರನು ದಾಖಲು ಮಾಡಿದ ಸದರಿ ಅರ್ಜಿಯು ತಾ. 22—12—1920ನೇ ದಿವಸ ತನಿಖೆಗೆ ಇಟ್ಟಿರುತ್ತದೆ.

MANGALORE, 8—12—1920.

A. Srinivasa Pai,
Vakil for Petitioner.

ಕೊರ್ನಾಡ ಕೆಂಪು ಸೀರೆಗಳು.

ಈ ಊರಿಂದ ತಯಾರಾದ, ಉತ್ತಮವಾದ ಬಾಳುವಿಕೆಯುಳ್ಳ, ನಯವಾದ, ಇಜಿ. ಸುಂದರವಾದ ರೇಷ್ಮೆಯ ಸೆರಗು, ಅಂಚುಳ್ಳ ಅಂತಹ ಸೀರೆಗಳು ಬಣ್ಣ ಹೋಗದು. [illegible] ಸೀರೆಗಳನ್ನು ಇನ್ನೂ ಶಾಲಗಳಲ್ಲಿ ಈ ಪ್ರಯತ್ನಕ್ಕೆ ಯಾವ ಊರಿನಲ್ಲಿಯೂ ಸಿಕ್ಕದಿರುವ ಮಾದರಿಗಾಗಿ ಕೆಲವನ್ನು ತಯಾರಿಸಿರುವೆವು. ಬೇಕಾದವರು ತರಿಸಿಕೊಳ್ಳಲಿ.

ಕ್ರಯ ನಂ. ೧—ರೂ. 6—8—0

" ೨— " 7—8—0

ಕಂಬಳಿ ಟೋಪಿ.

ಈ ಟೋಪಿಗಳನ್ನು ಹಸನು ಊಲನ್ ದಾರದಿಂದ ಹೆಣೆದಿದೆ. ಇವು ಹಿಮ, ಮಳೆಗಳಲ್ಲಿ ಉಪಯೋಗಿಸುವುದರಿಂದ ಶರೀರಕ್ಕೆ ಶಾಖವನ್ನು ಉಂಟುಮಾಡಿ ಸೀತ, ಮುಂತಾದ ವ್ಯಾಧಿಗಳು ಬರುವುದಿಲ್ಲ. ಈ ಟೋಪಿಗಳನ್ನು ಸಾಧಾರಣ ಟೋಪಿಗಳ ಹಾಗೆಯೂ, ಕಿವಿಯ ವರೆವಿಗೂ, ಕತ್ತಿನ ವರೆವಿಗೂ ಯಾವ ರೀತಿಯಲ್ಲಾದರೂ ಉಪಯೋಗಿಸಬಹುದು. ಇದಕ್ಕೆ ತಲೆಯ ಅಳತೆ ಬೇಕಿಲ್ಲ. ಪ್ರತಿಯೊಬ್ಬರ ತಲೆಗೂ ಸರಿಯಾಗಿರುತ್ತೆ. ಇದು ಪ್ರತಿ ಕುಟುಂಬದಲ್ಲಿ ಒಂದು ಇದ್ದರೆ ಎಲ್ಲರಿಗೂ ಆಗುವುದು.

ಕ್ರಯ ನಂಬ್ರ ೧ಕ್ಕೆ ರೂ. 1—8—0.

ಪ್ಯಾರಿಸ್ ಶಾಲ್.

ಈ ಶಾಲುಗಳು ಈಗ ತಾನೆ ತಯಾರಿಸಿದ್ದು. ಚಳಿ, ಮಳೆ ಕಾಲದಲ್ಲಿ ಹೊದಿಯಲಿಕ್ಕೂ ಪ್ರಯಾಣಿಕರಿಗೂ, ಇತರರಿಗೂ ಬಹು ಅನುಕೂಲವಾದದ್ದು. ರೇಷ್ಮೆಯ ಗಟ್ಟಿ ಬಣ್ಣ. ೫ ಮೊಳ ಉದ್ದ, ೨॥ ಮೊಳ ಅಗಲವುಳ್ಳದ್ದು. ಇದರ ಬಣ್ಣವು ಎಂದಿಗೂ ಹೋಗಲಾರದು.

ಕ್ರಯ ಶಾಲು ೧ಕ್ಕೆ ರೂ. 5—0—0.

ವಿಳಾಸ:— ಎಸ್. ಆರ್. ಕೃಷ್ಣ ಅಂಡ್ ಕೊ.

89 ನಾರಾಯಣ ಮೊದಲಿ ಬೀದಿ,

ಮದರಾಸು.

ಒಳ್ಳೇ ಸಂದರ್ಭ

ಹೊಲಿಗೆ ಕೆಲಸವು ಸರ್ವರೂ ಮೋಹಿಸತಕ್ಕ ಅಗತ್ಯವುಳ್ಳ ಕೈಗಾರಿಕೆ ಎಂದರೆ ಅತಿಶಯವಲ್ಲ.

ಈ ಕೆಲಸವನ್ನು ಅತ್ಯುತ್ತಮರೀತಿಯಿಂದ ತಯಾರಿಸುವದರಲ್ಲಿ ಮುಲ್ಕಿ ಯನ್. ಟಿ. ರಾವ್ ಎಂಬವರು ಪ್ರವೀಣತೆ ಹೊಂದಿ ಮದ್ರಾಸ್, ಬೊಂಬ್ಬಾ, ಕಲ್ಕತ್ತಾ ಇತ್ಯಾದಿ ದೇಶಗಳಲ್ಲಿ ಇಪ್ಪತ್ತು ವರ್ಷಗಳಿಂದ ಮಾಹಿತಿ ಪಡದು ವಿಲಾಯತಿಯ ಯಂ. ಐ. ಬಿ. ಟಿ. ಪರೀಕ್ಷೆ ಹೊಂದಿ ಡಿಪ್ಲೋಮಗಳನ್ನು ಪಡದು ಪ್ರಕೃತ ಬೊಂಬ್ಬಾಯಲ್ಲಿ ಈ ವಿದ್ಯೆಯನ್ನು ಕಲಿಸುವ ಸ್ಕೂಲ್ ಮತ್ತು ವಿಲಾಯತಿಯ ಪ್ರತಿವಾರದ ಸ್ಟೈಲುಗಳ ಒಂದು ಸಂಗ್ರಹಾಲಯವನ್ನು ಏರ್ಪಡಿಸಿ ಅನೇಕರಿಂದ ಸರ್ಟಿಫಿಕೇಟುಗಳನ್ನು ಹೊಂದಿರುತ್ತಾರೆ.

ದೇಶಬಾಂಧವರಿಗೆ ಪ್ರೀತಿಪೂರ್ವಕವಾಗಿ ಸುಲಭ ರೀತಿಯಿಂದ ಕತ್ತರಿಸುವದು ಹೊಲಿಯುವದು ಇತ್ಯಾದಿ ಕೆಲಸವನ್ನು ಧರ್ಮಾರ್ಥವಾಗಿ ಕಲಿಸಿ ಈ ಕೈಗಾರಿಕೆಯನ್ನು ಪ್ರಚಾರಿಸಲು ಉದ್ಯುಕ್ತರಾಗಿದ್ದಾರೆ

ಹೆಚ್ಚಿನ ವಿಷಯಗಳನ್ನು ಈ ಕೆಳಗಿನ ವಿಳಾಸಕ್ಕೆ ಬರದು ತಿಳಕೊಳ್ಳಬಹುದು.

N. T. Rao,
English Tailoring Co.,
Princess Street, BOMBAY.

ಶರಾ:ಕಾಲ—ಪ್ರಕೃತ ೨ ತಿಂಗಳ ಪರಿಯಂತರ ಇವರು ಮುಲ್ಕಿಯಲ್ಲೆ ಇರುವರು. ವಿಶೇಷ ಮಾಹಿತಿ ವಿಶೇಷ ಮಾಹಿತಿಯನ್ನು ಅಗತ್ಯವಿದ್ದರೆ ಸಹ ಕೊಳ್ಳಬಹುದು.

ಕಮ್ಮಿ ಕ್ರಯ! ಹೆಚ್ಚಿನ ವಿಕ್ರಯ!

ಎಲ್ಲಾ ತರಹ ಬರಿಯುವ, ಛಾಪಿಸುವ ಕಾಗದಗಳು, ಮದ್ರಾಸು, ಆರಣಿಪೇಟೆ, ಕಂಚಿ ವಗೈರೆ ಶೀರೆಗಳು, ಸ್ಯಾಕಲ್, ಹಾರ್ಮೋನಿಯುಮ್, ಗಡಿಯಾರಗಳನ್ನು ಸ್ವತಹ ಮಾರುವದಲ್ಲದೆ,

ಈ ಸಾಮಾನುಗಳನ್ನು ಮತ್ತು ನೇಯುವ ನೂಲು (yarn), ನಾನಾತರದ ಧೋತಿಗಳು, ಅಂಗಿಬಟ್ಟೆಗಳು ಮುಂತಾದ ವ್ಯಾಪಾರಸ್ಥರಿಗೆ ಬೇಕಾದ ಎಲ್ಲಾ ಸಾಮಾನುಗಳನ್ನು ಚುನಾಯಿಸಿ ರಖಂ ದರದಲ್ಲಿ ಕಳುಹಿಸಬಹುದು.

ಕಾಗದ ಬೇಕಾದವರಿಗೆ ಬೇಲುಕಟ್ಟುಗಳನ್ನು ಬೊಂಬ್ಬಾಯಿಂದಲೇ ನೆಟ್ಟಗೆ ಕಳುಹಿಸುವ ವಿಲೆವಾರಿ ಮಾಡಬಹುದು.

RAO & ROW,
(Bombay and Madras.)
4/57. High Road, Egmore, MADRAS.

"1921ನೇ ಇಸವಿಯ" ಪೋಕೆಟ್ ಡೈರಿಗಳು

ದೊಡ್ಡ ಸೈಜು 0—14—0.

ಸಣ್ಣ ಸೈಜು 0—8—0.

ವಿಳಾಸ—

ಮ್ಯಾನೇಜರ್,
ಶಾರದಾ ಛಾಪಖಾನೆ,
ಮಂಗಳೂರ

ಹೊಸ ನಾಟಕ! ಐತಿಹಾಸಿಕ ಹೊಸ ನಾಟಕ

ಕೇತುಭಂಗ.

ವಿಜಯನಗರದೊಳಗಿನ ಒಂದು ಐತಿಹಾಸಿಕ ಪ್ರಸಂಗವನ್ನು ತೆಕ್ಕೊಂಡು ಇಂಗ್ಲೀಷ್ ಭಾಷೆಯಲ್ಲಿ ಸುಪ್ರಸಿದ್ಧ ಕಾದಂಬರಿಕಾರನಾದ ಸ್ಕೊಟಿನ [illegible] ಆಧಾರದ ಮೇಲೆ ಈ ನಾಟಕವು ಬರೆಯಲ್ಪಟ್ಟಿದೆ. ಇದರಲ್ಲಿ ಕರ್ನಾಟಕದ ಪ್ರೀತಿ ಹಾಗು ಹಿಂದು ಮುಸಲ್ಮಾನರ ಐಕ್ಯ, ಸಮೋಚಿತವಾದ ಉದಾರವೃತ್ತಿ, ಶುದ್ಧಪ್ರೇಮ ಮುಂತಾದ ಗುಣಗಳು ಸರಿಯಾಗಿ ಪ್ರತಿಬಿಂಬಿತವಾಗಿವೆಯಲ್ಲದೆ ಕಥಾಸಂದರ್ಭವೂ ಕೂಡ ಮನಸ್ಸನ್ನು ಎಳೆಯುವಂತಿದೆ. ಪ್ರತಿಗಳು ಹೆಚ್ಚಿಲ್ಲ. ಗ್ರಾಹಕರು ತ್ವರೆಮಾಡಬೇಕು. ಕ್ರಯ ೧೨ ಆಣೆ. ಟಪ್ಪಾಲ ಹಾಸಲು ಪ್ರತ್ಯೇಕ

ವಿಳಾಸ:— ಶಾರದಾ ಛಾಪಖಾನೆ,
ರಥವೀದಿ ಮಂಗಳೂರು, ದ. ಕನ್ನಡ.

ಶ್ರೀ ಶಂಕರಕರ್ನಾಟಕ ಪುಸ್ತಕ ಭಂಡಾರ.

ಮಾಳಮಡ್ಡಿ ಧಾರವಾಡ.

ನಮ್ಮಲ್ಲಿ ೧೬೦೦ ತರದ ಬೇರೆ ಬೇರೆ ಪುಸ್ತಕಗಳು ಅಗ್ಗವಾಗಿ ದೊರೆಯುತ್ತವೆ. ಮಾದರಿಗಾಗಿ ಕೆಲಪುಸ್ತಕಗಳನ್ನು ಬರೆಯುತ್ತೇವೆ:—

೧.	ತಿಲಕರ ಗೀತಾರಹಸ್ಯ	ರೂ.	೩-೦-೦
೨.	ಕರ್ನಾಟಕ ಕವಿಚರಿತ ಸಂಪುಟ ೧.	,,	೩-೦-೦
೩.	,, ,, ೨.	,,	೫-೦-೦
೪.	ಬೂಕರ ಟಿ. ವಾಸಿಂಗ್ಟನ್	,,	೧-೨-೦
೫.	ಶಬ್ದಮಣಿದರ್ಪಣ (ಶಂಕತ್ತು).	,,	೨-೧೧-೦
೬.	ಮಹಾರಾಣಿ ಲಕ್ಷ್ಮೀಬಾಯಿ ಝಾನಿ	,,	೨-೧-೦
೭.	ಕರ್ಮವೀರ ಮಹಾತ್ಮಾಗಾಂಧಿ	,,	೧-೬-೦
೮.	ಚಂದ್ರಾವಳೀ ವಿಲಾಸ	,,	೦-೯-೦
೯.	ಮಹಾತ್ಮಾ ಗಾಂಧಿಯವರ ಹಿಂದೀ ಸ್ವರಾಜ್ಯ	,,	೦-೮-೦
೧೦.	ಹೆಂಡತಿಯ ಕರ್ತವ್ಯ	,,	೦-೮-೦
೧೧.	ಹಗಲಿರುಳು	,,	೦-೮-೦
೧೨.	ಅಕ್ಷರ ತಂತ್ರ (ಸಚಿತ್ರ)	,,	೧-೦-೦

ಶ್ರೀ ರಾ. ದೇಶಪಾಂಡೆ ಬಿ. ಎಸ್. ಸಿ.
ವ್ಯವಸ್ಥಾಪಕ.

ತ್ವರೆ ಗ್ರೈಯಿರಿ! ತ್ವರೆ ಗ್ರೈಯಿರಿ! ತ್ವರೆ ಗ್ರೈಯಿರಿ!

ಪುಸ್ತಕ ಪ್ರತಿ 1ಕ್ಕೆ 0—1—0. ಡಜನಿಗೆ 0—10—0.

ಮೂಲಮುಕ್ತ.

ಕನ್ನಡ:—ಭಜಗೋವಿಂದ.

ತುಳು:—ಭಜಗೋವಿಂದ.

ವಿಳಾಸ:—ಭಜಗೋವಿಂದ,
ಪೊಳಲಿ, ದ. ಕ.

ಅಥವಾ

ಶಾರದಾ ಪ್ರೆಸ್ ಮತ್ತು ಕೆ. ಯಂ. ದಾಸಪ್ರಭು,
ಮಂಗಳೂರು.

ಮಾರಾಟಕ್ಕೆ.

ಕುದುರೆ ಗುಂಡಿ ಯಾನೆ ಆರ್ಡಕ್ ಕಾಫಿತೋಟ.

ಈ ತೋಟದ ವಿವರ:—

ಮೈಸೂರು ಪ್ರಾಂತ್ಯ, ಕೊಪ್ಪ ತಾಲೂಕು, ಸರಕಾರಿ ಮಾರ್ಗಕ್ಕೆ ಸಮೀಪವಾಗಿ, ಕೊಪ್ಪ ಮತ್ತು ನರಸನ ಹರಪುರ ಮಧ್ಯೆ.... ಮಳೆಯು ಎಂಭತ್ತು ಇಂಚಾಗಿರುವುದು.

ಈ ತೋಟ ಮುನ್ನೂರು ಎಕ್ರೆ ವಿಸ್ತಾರ. ಇದರಲ್ಲಿ ನೂರ ಎಂಭತ್ತು ಎಕ್ರೆ ಕಾಫಿ ಮತ್ತು ಒಳ್ಳೆ ಮೆಣಸು ನೆಟ್ಟಿರುವುದು. ಅದಲ್ಲದೆ ಚೊಕ್ಕಟ್ಟವಾದ, ರೈಟರಿಗೆ ಮನೆ ಮುಂತಾದ್ದು ಇರುವುದು.

೧೯೨೧ನೇ ಕಾಫಿ ಮತ್ತು ಒಳ್ಳೆಮೆಣಸಿನ ವಸಲು ಬಹಳ ಚಲೋದಾಗಿ ಈಗಲೇ ಕಾಣುವುದು.

ಹದಿಮೂರು ವರ್ಷಗಳ ಮುನಾಫೆಯ ಬೆಳೆಯ ವಿವರ ಬೇಕಾದ್ದಲ್ಲಿ ಮಂಗಳೂರಲ್ಲಿರುವ ಜೆ. ಜ. ಹೆಮಿಲ್ಟನ್ ದೊರೆಗಳವರಿಂದ ತಿಳಿದುಕೊಳ್ಳಬಹುದು. ಇದರ ಕ್ರಯ— ಔ ೩,೫೦೦/- (ಮೂರು ಸಾವಿರದ ಐನೂರು ಕನ್ನು)

[illegible]

ಉತ್ತಮ ತರದ ಪುಡಿ ನಶ್ಯವು.

[illegible] ಅದು ಕೆಗಡು ತಿನುಕವ ಸ್ಥರಿಂದ ತಯಾರಿಸುವದರಿಂದನಂದಾವರೂ ಈ ಪುಡಿಯನ್ನು ಉಪಯೋಗಿಸಿದವರು ಬೇರೆ [illegible] ನಶ್ಯವನ್ನು ಸೀತಿಯವಾಗಿಯೂ ಬಯಸರು. ತೀರು 1ಕ್ಕೆ ರೂ. 1. ಟಪ್ಪಾಲು ಚಾರ್ಜು 4 ಆಣೆ.

ಎಸ್. ವಿ. ದಂತಚೂರ್ಣವು.

ಇದರ ಉಪಯೋಗದಿಂದ ಹಲ್ಲುಗಳು ಶುಭ್ರವಾಗಿ ಬಿಳುಪಾಗಿ ಪ್ರಕಾಶಿಸುವದಲ್ಲದೆ ಸಕಲ ದಂತರೋಗಗಳನ್ನು ನಿವೃತ್ತಿ ಮಾಡಿ ಹಲ್ಲುಗಳನ್ನು ವಜ್ರದಂತೆ ಗಟ್ಟಿ ಪಡಿಸುವದು. ಡಬ್ಬಿ 1ಕ್ಕೆ 6 ಆಣೆ. ಟಪ್ಪಾಲುಚಾರ್ಜು 2 ಡಬ್ಬಿಗಳವರೆಗೆ 4 ಆಣೆ. ನಮ್ಮ ಕಂಪನಿಯು ಇಂಗ್ಲಿಷ್ ಕೆಟಲಾಗ್ ಬರದರೆ ಉಚಿತವಾಗಿ ಕಳುಹಿಸಿಕೊಡುವೆವು. ನಮ್ಮ ವಿಳಾಸ:—

ತಂತ್ರಿ ವಿಳಾಸ — ಎಸ್. ವಾಸು ಅಂಡ್ ಕಂಪನಿ,

ವಾಸು, ತಿರುಚಿ. ಪಾಲಕೆರೆ, ತಿರುಚಿನಾಪಳ್ಳಿ.

[illegible] ತೃಪ್ತಿ ಇಲ್ಲ!!! ಹಣ ಹಿಂತಿರುಗಿ!!!

[illegible] 8 ಮತ್ತು ಆಣೆ 9.

[illegible]

[illegible] ಮತ್ತು ಕಂಪೆನಿ, [illegible], ಮಂಗಳೂರು

[illegible]ವುದು [illegible] ಖರ್ಚಿಲ್ಲದೆ [illegible] ಬೇಕಾಗಿರುವ

ವೈದ್ಯ ವಿದ್ಯ

ಎಂಬ ಪುಸ್ತಕವು. ಈ ಪುಸ್ತಕವನ್ನು ಓದುವುದರಿಂದ ಕಾರಣಾಂತರಗಳಿಂದ ಉಂಟಾಗುವ ಎಲ್ಲಾ ವ್ಯಾಧಿಗಳನ್ನೂ, ಬಬ್ಬರ ಸಹಾಯವಿಲ್ಲದೆ ಗುಣಮಾಡಿಕೊಳ್ಳಲು ಬಲು ಸೂಕ್ಷ್ಮ ತಿಳುವಳಿಕೆಯನ್ನೂ ಮತ್ತು ತಕ್ಕ ಔಷಧವನು ತಿಳಿಸುವುದು ಈ ಪುಸ್ತಕಕ್ಕೆ ಯಾವ ಖರ್ಚನ್ನೂ ಕೊಡಬೇಡಿರಿ ಕಾಲಾಣೆಯ ಕಾರ್ಡಿನಲ್ಲಿ ನಿಮ್ಮ ವಿಳಾಸವನ್ನು ತಿಳಿಸಿದ ಮಾತ್ರಕ್ಕೆ ಸದರಿ ಪುಸ್ತಕವು ನಿಮ್ಮ ಮನೆಯ ತಲಬಾಗಲಿಗೆ ಬಂದು ಸೇರುವುದು.

ವಿಳಾಸ — ರಾಜವೈದ್ಯ ನಾರಾಯಣಜೀ, ಕೇಶವಜೀ,
27. ಪೈನಬಜಾರು ರೋಡ್, ಮದರಾಸು

BANK OF MADRAS.

ಮದ್ರಾಸ್ ಬ್ಯಾಂಕ್.

ಹೆಡ್ ಆಫೀಸು ಮದ್ರಾಸ್.

ಮೂಲಧನ	ರೂ 75,00 000
ಕ್ಷೇಮನಿಧಿ	,, 45,00,000

ಸೇವಿಂಗ್ಸ್ ಬ್ಯಾಂಕ್.

— ವರ್ಷಕ್ಕೆ ನೇಕಡಾ 4ರ ಬಡ್ಡಿ —

ಇದರಲ್ಲಿ ಡಿಪಾಜಿಟುಗಳು ಕೆಳಗಿನ ಶರ್ತಗಳಲ್ಲಿ ಪಡೆಯಲಾದಾವು ಒಂದು ವರುಷದ ಅವಧಿಯಲ್ಲಿ ಬಟ್ಟು ರೂ 3,000ಕ್ಕೆ ಮಿಗದ ಹಾಗೆ ಬಲಗನ್ನು ಡಿಪಾಜಿಟು ಮಾಡಬಹುದು ಹೀಗೆ ಡಿಪಾಜಿಟು ಇಟ್ಟ ಪ್ರತಿ ಕೆತ್ತು ರೂಪಾಯಿಗಳಿಗೆ ನೇಕಡಾ 4ರಂತೆ ರೂ 10,000ಕ್ಕೆ ಮೀರದ ಮೊಬಲಗಿನ ವರೆಗೆ ಬಡ್ಡಿ ಎಣಿಸಲಾಗುವುದು

ನಿಬಂಧನೆಗಳ ಪ್ರತಿಗಳನ್ನು ಬರೆದು ಬ್ಯಾಂಕಿ ನಿಂದಪಡೆಯಬಹುದು

ಸಿ ಎಲ್ ಗೊರ್ಡನ್,
ಏಜಂಟ್, ಮದ್ರಾಸ್ ಬ್ಯಾಂಕ್, ಮಂಗಳೂರು

ಜಗದ್ವಿಖ್ಯಾತವಾದ ಶ್ರೀ ದೇವೀಪ್ರಸಾದ ಕಂಪೆನಿಯ

ಸುಪ್ರಸಿದ್ಧವಾದ ಮಹೌಷಧಗಳು.

"ಧನ್ವಂತರೀ ಬಾಮ್"

ಶುದ್ಧ ವನಸ್ಪತಿಗಳಿಂದಲೇ ಶಾಸ್ತ್ರೋಕ್ತವಾಗಿ ತಯಾರಿಸಲ್ಪಟ್ಟ ವೇದನಾಹರ ಮುಲಾಮು ಇದರಿಂದ ವಾತ, ಕಫ, ಜಗತ, ಉಳುಕು ಗಾಯ, ತಲೆನೋವು, ಸೊಂಟನೋವು, ದೆನ್ನುನೋವು, ಮುಂತಾದ ಎಲ್ಲಾ ತರದ ಬೇನೆಗಳು ಅತಿ ಕ್ಷಿಪ್ರದಲ್ಲಿ ಸಂಪೂರ್ಣವಾಗಿ ಗುಣ ಹೊಂದುವವು ಬಾಟ್ಲಿ ಗಿರ ಕಿಮ್ಮತು ೦—೭—೦, ಒಂದು ಡಜನಾ ಬಾಟ್ಲಿಗಳಿಗೆ ರೂ ೪—೧೨—೦

"ಗಜಕರ್ಣಾದ ಮುಲಾಮು"

ಗಜಕರ್ಣ, ಉಸಬು, ಖಜ್ಜಿ, ದದ್ರು, ಹುಳಕಡ್ಡಿ, ಸೊಂಟಕಜ್ಜಿ ಮುಂತಾದ ಸಮಸ್ತ ವಿಧವಾದ ಚರ್ಮವ್ಯಾಧಿಗಳು ಒಂದೆರಡು ಸಾರಿ ಹಾಗಿಸುವದರೊಳಗೆ ನಿಸ್ಸಂದೇಹವಾಗಿ ಇದರಿಂದ ನಿವಾರಣೆಯಾಗುವವು ಬಾಟ್ಲಿ ೧ಕ್ಕೆ ೦—೪—೦ ಒಂದು ಡಜನಿಗೆ ರೂ ೩ ೦ ೦

ನಮ್ಮ ಔಷಧಗಳ ಗುಣಶ್ರೇಷ್ಠತೆಯ ಕುರಿತು ಅನೇಕ ಮಹನೀಯರುಗಳಿಂದಲೂ ಡಾಕ್ಟರುಗಳಿಂದಲೂ ಶಿಫಾರಸು ಪತ್ರಗಳು, ನೂರಲು ಸೇರಿರುವವು ಜಾಸ್ತಿಯಾಗಿ ಕೊಂಡುಕೊಳ್ಳತಕ್ಕವರಿಗೂ ವ್ಯಾಪಾರಿಗಳಿಗೂ ಯೋಗ್ಯ ಕಮಿಶನು ಕೊಡಲಾಗುವದು, ಕ್ಯಾಟಲಾಗಿಗೂ ವಿಶೇಷ ಮಾಹಿತಿಯ ಬಗ್ಗೆ ಪತ್ರವ್ಯವಹಾರ ಮುಖೇನ

ದಿ. ಮ್ಯಾನೇಜರ್ — ಶ್ರೀ ದೇವಿಪ್ರಸಾದ ಕಂಪೆನಿ,
ಪೋಸ್ಟ್ ಬಾ ರ[illegible] ೨ ಕಲ್ಕತ್ತ

[illegible] ಪತ್ರ

[illegible]

ಕ್ರಯ ಪ್ರತಿ 1ಕ್ಕೆ ಆಣೆ 0—6—0

ವಿಳಾಸ— D. Srinivasan Pothi,
Photographer,
Archaeological Office,
TRIVANDRUM.

ಅಥವಾ

[illegible], ಮಂಗಳೂರು.

ಇವರಲ್ಲಿಯೂ ದೊರೆಯುವುದು.

ರೂ. 1,000 ಬಹುಮಾನ.

ಲೋಕಪ್ರಸಿದವಾದ ಸಾಲಾಮಿಸ್ರಿ ಮುರಬ್ಬಾ.

(ಗವರ್ನ್ಮೆಂಟಿನಲ್ಲಿ ರಿಜಿಸ್ಟರ್ ಮಾಡಲ್ಪಟ್ಟಿದೆ).

[illegible] ಡಿಲ್ಲಿ ವೈದ್ಯರು, ಎಂದು ಮುದ್ರಿಸಿರುವ ಲೇಬಲು ಇರುವದನ್ನು ನೋಡಿ ತೆಗೆದುಕೊಳ್ಳಿರಿ. ಈ "ಸಾಲಾಮಿಸ್ರಿ ಮುರಬ್ಬಾ" [illegible] ಸೇವನೆಯಿಂದ — ವೀರ್ಯವು ನೀರವಾಗಿ ಇದ್ದರೂ, ಸ್ವಪ್ನದೋಷದಿಂದ ಬಾಧಿತರಾದರೂ, ಮೂತ್ರದೊಂದಿಗೆ ವೀರ್ಯವು ಹೋಗುತ್ತಿದ್ದರೂ, ಕೈಕಾಲು ಮತ್ತು ಸೊಂಟದಲ್ಲಿ ನೋವಿದ್ದರೂ, ಹಸಿವು ಇಲ್ಲದಿದ್ದರೂ, ಮಲಬದ್ಧತೆಯ ತೊಂದರೆಯಾಗಿ ಇದ್ದರೂ, ಶರೀರದಲ್ಲಿ ರಕ್ತವು ಕೆಟ್ಟುಹೋಗಿದ್ದರೂ, ಈ ಸಾಲಾಮಿಸ್ರೀ ಮುರಬ್ಬಾ ಸೇವನೆಯಿಂದ ಗುಣವಾಗಿ ಶರೀರವನ್ನು ಒಳ್ಳೇ ಸ್ಥಿತಿಯಲ್ಲಿಡುವುದು, ಮೆದುಳಿಗೆ ಬಲವನ್ನುಂಟುಮಾಡುವದು, ಹಳೇ ತಲೆನೋವುಗಳನ್ನು ಹೋಗಲಾಡಿಸುವುದು, ಧಾತುವನ್ನು ಕೆಟ್ಟಿಗೊಳಿಸುವದು, ಸೊಂಟ ನೋವು ಸ್ವಲ್ಪಮಾತ್ರವೂ ಇರಲಾರದು. ಈ ಸಾಲಾಮಿಸ್ರೀ ಎಂಬುದು ಅರಬಿ ಕಂದಹಾರ್ ದೇಶಗಳಲ್ಲಿ ಬೆಳೆಯುತ್ತದೆ



ಈ ಮುರಬ್ಬಾ ಸೇವನೆಯಿಂದ ಗುಣಹೊಂದಿದ ಅನೇಕ ದೊಡ್ಡ ಮನುಷ್ಯರಿಂದ ರಂಗೂನ್, ಪಿನಾಂಗ್, ಆಫ್ರಿಕ, ಕಲ್ಕತ್ತ, ಬೊಂಬಾಯಿ, ಮದ್ರಾಸ್ ಮೊದಲಾದ ಅನೇಕ ಪ್ರಾಂತ್ಯಗಳಿಂದ ಯೋಗ್ಯತಾಪತ್ರಗಳು ಬಂದಿವೆ [illegible] ಅವುಗಳ ಪ್ರತಿಯನ್ನು ನೋಡಬಹುದು [illegible] ಎಂದು ಸಿದ್ಧಾಂತಪಡಿಸಿದವರಿಗೆ ರೂ [illegible] ಬಹುಮಾನವು ಕೊಡಲ್ಪಡುತ್ತದೆ. [illegible]

ಒಂದು ಡಬ್ಬಿ ಮುರಬ್ಬವನ್ನು [illegible] ದಿನಗಳು ಉಪಯೋಗಿಸುವುದರಿಂದ [illegible] ಉಪಯೋಗಿಸುವುದರಿಂದ [illegible]

ಕ್ರಯ ಒಂದು ಡಬ್ಬಿಗೆ ರೂಪಾಯಿ 4.

[illegible] ಡಬ್ಬಿಯ ಬೆಲೆ 1 ಡಬ್ಬಿಗೆ ೮ ಆಣೆ, ೪ ಯಾ 3 ಡಬ್ಬಿಗಳಿಗೆ 12 ಆಣೆ.

ಡಿ. ಮನ್ನಾಲಾಲ್, ಡಿಲ್ಲಿ ವೈದ್ಯರು,
ಸಾಲಾಮಿಸ್ರಿ ಮುರಬ್ಬ ಡಿಪೋ, ಬೆಂಗಳೂರು ಸಿಟಿ.

ಆರ್. ಮಾರ್ಟಿನ್ನರ ಲಪ್ತಾ ಎಕ್ಸ್.

ಇದು [illegible] (ಶಂಪುಕವು) ಬಹಳ ಅಂದವಾಗಿಯೂ ಇರುವುದಲ್ಲದೆ, ಬಹಳ ದೊಡ್ಡವರೆಗೂ ಇರುತ್ತದೆ ಈ ಎಣ್ಣೆಯನ್ನು ತಲೆಗೆ ಹಾಕಿಕೊಳ್ಳುವುದರಿಂದ, ಕಣ್ಣುಗಳ ತಂಪಾಗಿಯೂ, [illegible], ಆಗುವುದಲ್ಲದೆ, ಮುದುಲು [illegible] ಬೆಳೆಯುತ್ತದೆ ಇದನ್ನು ಪ್ರತಿದಿವಸವೂ ಉಪಯೋಗಿಸುವುದರಿಂದ ಕೂದಲುಗಳು ಕಪ್ಪಾಗಿ ಹೊಳೆಯುವಂತೆ ಮಾಡುತ್ತದೆ ಕೂದಲುಗಳಲ್ಲಿರುವ ಹೇಣುಗಳು ಮುಂತಾದುವು ನಾಶವಾಗಿ ತಲೆಬುರುಡೆಯನ್ನು ಚೆನ್ನಾಗಿ ಬೆಳೆಯುವಂತೆ ಮಾಡುತ್ತದೆ [illegible] ಇದನ್ನು ಉಪಯೋಗಿಸಿದ ಜನರು ಇದಕ್ಕಿಂತ ಉತ್ತಮವಾದ ಎಣ್ಣೆಯು ಬೇರೆ ಇಲ್ಲವೆಂದು ಹೇಳುತ್ತಾರೆ.

ಕ್ರಯ ಬಾಟ್ಲಿ ೧ಕ್ಕೆ ರೂಪಾಯಿ ೧—೪—೦

ಆರ್ ಮಾರ್ಟಿನ್ನರ ಕೆಮ್ಮಿನ ಔಷಧ.

ಒಂದೇ ಒಂದು ಸೀಸೆ ಔಷಧ, ಎಲ್ಲಾ ವಿಧವಾದ ಕೆಮ್ಮುಗಳು, ಗೂರಲು [illegible], ನೆಗಡಿ, ಗಂಟಲುನೋವು, ಎದೆನೋವುಗಳನ್ನು ಗುಣಪಡಿಸುತ್ತಿರುವಲ್ಲಿ ಯಾಕೆ ಈ ರೋಗಗಳಿಂದ ಇಷ್ಟೊಂದು ಜನರು ನರಳುತ್ತಿರಬೇಕು? [illegible] ಒಂದು ಸೀಸೆಯನ್ನು ತರಿಸಿ ಸೇವನೆಮಾಡಿ ಪರೀಕ್ಷಿಸಿನೋಡಿರಿ. ಅನಂತರ ಯಾವ ಬೇರೆ ಔಷಧಕ್ಕೂ ಗಮನ ಕೊಡದಿರುವಿರಿ. ಎಲ್ಲಾ ವಿಧವಾದ ಕೆಮ್ಮುಗಳೂ ರಾತ್ರಿಯಾಗಿಯೂ, ಎದೆಗೆ ಬಲಕೊಟ್ಟು ಮೇಲ್ಪಂಡ ರೋಗಗಳು ತಲೆಯೆತ್ತದಂತೆ ಮಾಡುತ್ತದೆ.

ಒಂ ಮಾತ್ರೆಗಳ ಸೀಸೆ ಒಂದಕ್ಕೆ [illegible]

ಆರ್ ಮಾರ್ಟಿನ್ನರ [illegible]

ಗಂಡಸರಿಗೂ ಮತ್ತು ಹೆಂಗಸರಿಗೂ ಎಲ್ಲಾ ತರದ ಮೇಹರೋಗಗಳಿಗೆ ಎರಡು ಸೀಸೆಗಳ ಔಷಧಿಯನ್ನು ಉಪಯೋಗಿಸುವುದರಲ್ಲಿ [illegible] ಗುಣವಾಗುತ್ತ. ಎಷ್ಟು ದಿವಸಗಳ ಹಳೇ ರೋಗವಾಗಿದ್ದರೂ ಸರಿ, ಅಥವಾ ಹೊಸದಾಗಿದ್ದರೂ ಸರಿ, ಬಿರುವು ಹೋಗುವುದು, ಉರಿಯುವುದು ಮುಂತಾದ್ದೆಲ್ಲಾ ನಿಂತುಹೋಗುವುದಲ್ಲದೆ ಒಂದಾವರ್ತಿ ಸೇವಿಸಿದ ಮಾತ್ರಕ್ಕೆ ಉರುಮೂತ್ರವನ್ನು [illegible] ನಿರ್ಮಲವಾಗುತ್ತದಲ್ಲದೆ ರೋಗದ [illegible] ಯು ಕುಡಿಯುವುದಕ್ಕೆ ರುಚಿಯಾಗಿಯೂ, ನಿರ್ಮಲವಾಗಿಯೂ ಇರುತ್ತೆ. ಬೆಲೆ ಸೀಸೆ ಒಂದಕ್ಕೆ ರೂ ೨—೦—೦.

ವಿಳಾಸ:— ಆರ್. ಡಿ. ಕಟ್ಲಿ ಮತ್ತು ಕಂಪೆನಿ,
ನಂ. ಡಿ. ಫ್ರಿಯರ್ ರೋಡ್,
ರೈಟ್ ಎಂಡ್ ಕೋ ಹತ್ತರ, ಫೋರ್ಟ್, ಮುಂಬಯಿ.

R. D. Kately & Co.
No. D. Frere Road,
Near Wright & Co Fort Bombay.

← ಆಯುರ್ವೇದಾಶ್ರಮ. →

ವೈದ್ಯರತ್ನ ಪಂಡಿತ ಡಿ. ಗೋಪಾಲಾಚಾರ್ಲು

ಇವರಿಂದ ಸ್ಥಾಪಿತವಾಗಿ ನಡಿಸಲ್ಪಟ್ಟಿರುತ್ತದೆ

ಪ್ಲೇಗ್, ಕಾಲೇರಾ ಮತ್ತು ಇನ್ಫ್ಲುಯೆಂಜಾ

ಇವಕ್ಕೆ ಮುಖ್ಯವಾದ ಚಿಕಿತ್ಸಾಲಯ

ಸಕಲ ರೋಗಗಳನ್ನು ದೂರಮಾಡುವ ಗುಣಪಡಿಸುವ ಹಾಗೂ ಆರೋಗ್ಯವನ್ನು ಉಂಟುಮಾಡುವ ಔಷಧಗಳು ಇಲ್ಲಿ ದೊರೆಯುವವು ಕೆಟಲಾಗನ್ನು ಅಪೇಕ್ಷಿಸುವವರಿಗೆ ಉಚಿತವಾಗಿ ಕಳುಹಿಸುವೆವು.

ಪ್ಲೇಗು ಔಷಧದ ದೊಡ್ಡ ಸೀಸೆಗೆ ರೂ 2—2—0	ಕಾಲೇರಾ ಔಷಧದ ದೊಡ್ಡ ಸೀಸೆಗೆ ರೂ 1—2—0
,, ಸಣ್ಣ ,, ,, 1—6—0	,, ಸಣ್ಣ ,, , 0-12—0

ಇನ್ಫ್ಲುಯೆಂಜಾ ಔಷಧದ ಪ್ರತಿ ಸೀಸೆಗೆ ರೂ. 1—12—0.

ಎಲ್ಲಾ ಔಷಧಗಳನ್ನು ಕಳುಹಿಸುವಾಗಲೂ ಟಪ್ಪಾಲ ಹಾಸಲು ಮತ್ತು ಪೇಕಿಂಗ್ ಪ್ರತ್ಯೇಕ

ವಿಳಾಸ:— ಮೆನೇಜರ್, ಆಯುರ್ವೇದಾಶ್ರಮ,

ತಂತಿ ವಿಳಾಸ:— 55 ಅಚಾರಪ್ಪನ ಬೀದಿ,

ಪಂಡಿತ್, ಮದರಾಸ್ ಜೋರ್ಜಟೌನ್, ಮದರಾಸ್.

The Canara Banking Corporation, Udipi, (Limited).

ದಿ. ಕೆನರಾ ಬ್ಯಾಂಕಿಂಗ್ ಕೊರ್ಪೊರೇಶನ್, ಉಡುಪಿ ಲಿಮಿಟೆಡ್.

ರೂ 50ರ 1000 ಶೇರುಗಳು ರೂ. 52—8—0ರಂತೆ ಈವರೆಗಿನ ಪಾಲುವ್ಯಾಪಾರಿಗಳಿಗೂ, ಸಾರ್ವಜನಿಕ ಸಂಸ್ಥೆಗಳಿಗೂ, ರೂ. 55—0—0ರಂತೆ ಇತರರಿಗೂ ಮಾರಲು ಸಿದ್ಧವಿದೆ

ಡೈರೆಕ್ಟರರು.

1. ... ಖಾನ್ ಬಹದ್ದೂರ್ ಹಾಜಿ ಅಬ್ದುಲ್ಲಾ ಹಾಜಿ ಖಾಸಿಂ ಸಾಹೇಬ ಬಹದ್ದೂರ್,—(ಪ್ರೆಸಿಡೆಂಟ್) ರೈತ, ವ್ಯಾಪಾರ, ಉಡುಪಿ ತಾಲೂಕುಬೋರ್ಡು ಪ್ರೆಸಿಡೆಂಟು
2. ರಾವ್ ಬಹದ್ದೂರ್ ... ರಘುನಾಥಯ್ಯ—ರಿಟಾಯರ್ಡ್ ಸಬ್‌ಜಡ್ಜ್, ಮಂಗಳೂರು ತಾಲೂಕುಬೋರ್ಡು ಪ್ರೆಸಿಡೆಂಟು, ಮಂಗಳೂರು
3. ಮಂಜೇಶ್ವರ ಶ್ರೀನಿವಾಸ ಪ್ರಭು—(ಟ್ರೆಜರರ್) ವ್ಯಾಪಾರ, ಉಡುಪಿ
4. ಎಮ್. ವಿಟ್ಠಲ ಕಾಮತ್—ವಕೀಲ, ಉಡುಪಿ
5. ... ಅನಂತಯ್ಯ ಯಾನೆ ಶೇಷಗಿರಿ ಪೈ—ರೈತ, ವ್ಯಾಪಾರ, ಒನರರಿ ಮೆಜಿಸ್ಟ್ರೇಟ ಉಡುಪಿ
6. ಕೇದಿಂಜೆ ವೆಂಕಟಯ್ಯ ಹೆಗ್ಡೆ—ರೈತ, ವ್ಯಾಪಾರ, ಉಡುಪಿ
7. ಯು. ಎಸ್. ಅಬ್ದುಲ್ ... ಸಾಹೇಬ, ಬಹದ್ದೂರ್—ರೈತ, ವ್ಯಾಪಾರ, ಒನರರಿ ಮೆಜಿಸ್ಟ್ರೇಟ, ಉಡುಪಿ
8. ... ಪದ್ಮನಾಭ ಪೈ—ಸೆಕ್ರೆಟರಿ, ಮುಂಬಯಿ ಲ್ಯಾಫ್ ಇನ್ಸ್ಯೂರೆನ್ಸ್ ಕಂಪೆನಿ
9. ... ವಾಮನ ... ಶೆಣೈ—ರೈತ, ವ್ಯಾಪಾರ, ಮಲ್ಪೆ
10. ... ಮೆನೇಜರ್, ಮಲಬಾರ್ ಓಯಿಲ್ ಎಕ್ಸ್‌ಟ್ರೇಕ್ಟಿಂಗ್ ಕೋ. ಕಲ್ಯಾಣಪುರ
11. ಉಡುಪಿ ವಾಸುದೇವ ಕೃಷ್ಣ ಪಡಿಯಾರ—ಒಯ್ಲ್ ಮಿಲ್ಲ್, ಉಡುಪಿ
12. ಬೈಲೂರು ನರಸಿಂಹ ಶೆಣೈ—ರೈತ, ವ್ಯಾಪಾರ, ಉಡುಪಿ

	ರೂ	ಆ	ಪೈ
1. ಅಧಿಕಾರಕೊಡಲ್ಪಟ್ಟ ಮೂಲಧನ	3 50,000	0	0
2. ಶೇರುದಾರರಿಗೆ ಅರ್ಪಿಸಿದ ಮೂಲಧನ	1 00,000	0	0
3. ಶೇರುದಾರರು ಎತ್ತಿದ ಮೂಲಧನ	53,400	0	0
4. ಮೀಸಲು ಮೂಲಧನ	47 012	9	11
5. ಠೇವಣಾತಿಗಳು	89,088	1	6
6. ಕ್ಷೇಮನಿಧಿ ಇತರ ಫಂಡುಗಳು	10 741	5	2
7. ಯೋಗ್ಯ ಜವಾಬ್ದಾರಿ ಮೇಲೆ ಮತ್ತು ಅಡವಿನ ಮೇಲೆ ಸಾಲಕೊಟ್ಟ ಹಣ	140,764	13	7

ಯೋಗ್ಯ ಜವಾಬ್ದಾರಿ ಮೇಲೆ ಮತ್ತು ಅಡವಿನ ಮೇಲೆ ಸಾಲಕೊಡೋಣವಾಗುವದು ಸಂಘಕ್ಕೆ ಕೊಡೋಣವಾಗುವ ಹಣಗಳನ್ನು ಸಂಘದ ಲೆಖ್ಖಕ್ಕೆ ಮಂಗಳೂರಲ್ಲಿ ಮದ್ರಾಸ್ ಬೇಂಕಿನಲ್ಲಿಯಾಗಲೀ ಕೆನರಾ ಬೇಂಕಿನಲ್ಲಿಯಾಗಲೀ ಮರ್ಕೆಂಟೈಲ್ ಬೇಂಕ್ ಒಫ್ ಇಂಡಿಯಾ, ಲಿಮಿಟೆಡ್, ಮುಂಬಾಯಿಯಲ್ಲಾಗಲಿ, ವಸೂಲು ಕೊಡಬಹುದು ದೀರ್ಘ ವಾಯಿದೆಯ ಹೆಚ್ಚು ಮೊಬಲಗಿನ ಠೇವಣಾತಿಗಳ ಮೇಲೆ ಕೊಡಲ್ಪಡುವ ವಿಶೇಷ ದರದ ಬಡ್ಡಿ ವಿಷಯ ಕೆಳಗಿನ ವಿಳಾಸಕ್ಕೆ ಬರಕೊಳ್ಳಿರಿ

ಬ್ಯಾಂಕಿನ ಆಫೀಸು,
ತಾ 4—12—1920.

ನ ಆನಂದರಾವ್,
ಕಾರ್ಯದರ್ಶಿ

ಒಂದೇ ಸಾರಿ ಹಲ್ಲು ... ತರಿಸುವವರಿಗೆ ಪ್ಯಾಕಿಂಗ್ ಮತ್ತು ಹಾಸಲು ಮುಕ್ತ.

ಮಧುರೆ ಚುನ್ನದ ಅಂಚಿನ ಸೀರೆಗೆ ರೂ. 4-8-0. 1 ಸೀರೆಗೆ ಐದು ತೆರಹಳ್ಳಿ ... ಒಂದು ಸಾಗರ ಖಾನ.

ಇದು ... ಹೋಗುವ ಸೀರೆಯು ಉದ್ದ 18 ಮೊಳ ಸುಂದರವಾದ ಸೆರಗು ಒಂದನ್ನು ತರಿಸಿ ಪರೀಕ್ಷಿಸಿ ಕ್ರಯ ರೂ 4—8—0. [2074]

ನರಸಾಪುರಂ ಸೀರೆ ರೂ 6 12-0. ಬೀಟೆ ರಂಗಾಯಿ ರೂ 5-0 0, ಶೀರ ತನಕೋಡಿ 4-12-0. ಸಾಧಾ ಸೀರೆ ರೂ. 8 4 0 ಖಾದಿಯಂ ರೂ 5 12-0 ಕಾಂಚೀಪುರಂ ರೂ 7 8-0.

C. C. Lingam & Co,
2 *Ramanuja Ayer St*
Sowcarpet MADRAS.

ಭೃಂಗರಾಜ ತೈಲ.

ಇದನ್ನು ತಲೆಗೆ ಇಟ್ಟರೆ ಎಲ್ಲಾ ತರದ ರೋಗಗಳು ಗುಣವಾಗುತ್ತವೆ ನರೆಕೂದಲು ಕಪ್ಪಾಗುತ್ತದೆ ಕೇಶ ದಾವುಗಳು ವೃದ್ಧಿಹೊಂದುತ್ತವೆ ಕಂಠದ ಮೇಲಿನ ಎಲ್ಲಾ ಇಂದ್ರಿಯಗಳಿಗೆ ಬಲಕೊಡುತ್ತದೆ ಪಿತ್ತನಾಶ ಮಾಡುತ್ತದೆ ನಾಲ್ಕು ಔನ್ಸಿನ ಸೀಸೆ ಒಂದರ ಕ್ರಯ ರೂ 0—12—0

ತ್ರಿಫಲಾದಿ ತೈಲ—ವಾತ, ಪಿತ್ತ, ಶ್ಲೇಷ್ಮ ಇವುಗಳಿಂದ ಉಂಟಾದ ರೋಗಗಳೆಲ್ಲಾ ಇದನ್ನು ತಲೆಗೆಹಚ್ಚಿಕೊಂಡರೆ ಪರಿಹಾರವಾಗುತ್ತದೆ ಎಲ್ಲಾ ಇಂದ್ರಿಯಗಳಿಗೆ ಬಲಕೊಡುತ್ತದೆ ನಾಲ್ಕು ಔನ್ಸಿನ ಸೀಸೆ ಒಂದರ ಕ್ರಯ ರೂ. 1.

ಜ್ವರಾಂತಕ ಮಾತ್ರೆ—ಈ ಮಾತ್ರೆಯನ್ನು ಉಪಯೋಗಿಸಿದರೆ ಎಲ್ಲಾ ಜ್ವರಗಳು ಪರಿಹಾರವಾಗುತ್ತದೆ ಉಪಯೋಗಿಸುವ ಕ್ರಮ, ಮತ್ತು ಗುಣ ಪರೀಕ್ಷೆಯಿಂದ ಪ್ರಮಾಣಿಕ ಪಡಿಸುತ್ತದೆ 25 ಮಾತ್ರೆಗಳುಳ್ಳ ಒಂದರ ರೂ. 1

ಪಂಚಸಾರ ಲೇಹ—ಅಜೀರ್ಣ, ಪಿತ್ತ ವಾತಶ್ಲೇಷ್ಮ ಇವುಗಳಿಂದ ಉಂಟಾದ ರೋಗಗಳೆಲ್ಲಾ ಇದರಿಂದ ಪರಿಹಾರವಾಗುತ್ತದೆ ಮತ್ತು ಇಂದ್ರಿಯವನ್ನು ಬಲಪಡಿಸಿ ಅನೇಕ ತರದ ಇಂದ್ರಿಯ ದೋಷಗಳನ್ನು ಗುಣಪಡಿಸುತ್ತದೆ ಒಂದು ಸೆರಿಗೆ ರೂ 1—4—0

ಮೇಲೆ ಬರೆದ ಔಷಧಿಗಳು ಸರ್ವ ವೈದ್ಯರಿಗೂ ಶಿಖಾಮಣಿಯಾದ ಶ್ರೀ ಆರ್ಯಮತಾವಲಂಬಿಗಳಾದ ಶ್ರೀ ಪೂಜ್ಯವಾದ ಋಷಿ ಪ್ರಣೀತ ವೈದ್ಯಗ್ರಂಥ ಆಧಾರದಿಂದ ಆ ಪರವ ಪೂಜ್ಯರ ಅನುಯಾಯಿಗಳಾದ ನಮ್ಮಿಂದ ತಯಾರಿಸಲ್ಪಟ್ಟಿರುತ್ತವೆ ಆರ್ಷವಚನವು ನವಗ ಎಷ್ಟು ಸತ್ಯವಾಗಿ ತೋರುತ್ತದೋ ಅಷ್ಟೇ ಭರವಸೆಯಿಂದ ಈ ಔಷಧಗಳ ರೋಗ ಪರಿಹಾರಕವಾಗಿರುತ್ತವೆ

ಸೂಚನೆ—ಅಪೇಕ್ಷಿಸುವವರು ಕೆಟಲಾಗ ತರಿಸಿಕೊಳ್ಳುವುದು ಉಚಿತವಾಗಿ ಕಳುಹಿಸಲಾಗುತ್ತದೆ

ಆಯುರ್ವೇದಿಕ್ ಮತ್ತು ಹೋಮಿಯೋಪತಿಕ್

ಧರ್ಮ ವೈದ್ಯಶಾಲಾ,
ಧರ್ಮಸ್ಥಳ ದಕ್ಷಿಣ ಕನ್ನಡ

CINEMATOGRAPH.

ಸಿನೆಮೊಟೋಗ್ರಾಫ್.

ಈ ಯಂತ್ರವು ಸೀಮೆಯಲ್ಲಿ ತಯಾರಾದದ್ದು ಇದರಲ್ಲಿರುವ ಫಿಲಂಸ್ (ಚಿತ್ರಗಳ)ಗಳನ್ನು ಹಾಕಿದ ಬಳಿಕ ತಿರುಗಿಸುವಾಗಲೂ ನೋಡಿದರೆ ಬೈಯಸ್ಕೋಪಿನಲ್ಲಿ ಕಂಡಂತೆ ರೈಲು, ಮೋಟರು ಓಡುವದು, ಆಕಾಶವಿಮಾನಗಳ ಯುದ್ಧ, ಜಹಜುಗಳ ಜಗಳ, ಹುಲಿ, ಕರಡಿಗಳ ಸರ್ಕಸ್, ಚೀನಾದೇಶಿಯ ಮನೆ, ಗುಡಿಸಲು, ಕೈಗಾರಿಕೆ ಮುಂತಾದವುಗಳು ವಿವರವಾಗಿ ಕಾಣುವವು ಈ ಯಂತ್ರದ ಪೆಟ್ಟಿಗೆ ಒಂದು ಇದ್ದರೆ ಜಾತ್ರೆ, ಪರಿಷೆ, ಸಂತೆ ಮುಂತಾದವುಗಳಲ್ಲಿ ಬಂದವರಿಗೆ ತೋರಿಸಿ, ಹಣ ಸಂಪಾದನೆ ಮಾಡಬಹುದು ಈ ಯಂತ್ರವು ಭಾರವಿಲ್ಲದೆ ನೋಡಲಿಕ್ಕೆ ಕೈಕನ್ನಡಿಯಂತೆ ಇರುವದು. ಕ್ರಯ 1ಕ್ಕೆ ರೂ 1—4

ವಿಳಾಸ— ಎಸ್. ಪಾಲ್ ಆಂಡ್ ಕೊ,
ಪೋಸ್ಟ್ ಬಾಕ್ಸ್ ನಂ 542 ಪಾರ್ಕಟೌನ್ ಮದರಾಸು

ಲೂಸ್ ಕಿಲ್ಲರ್

(ತಲೆಯ ಹೇನು, ಹುಣ್ಣುಗಳ ಸಂಹಾರಿ)

ಈ ಔಷಧವನ್ನು ತಲೆಗೆ ಹಾಕುವುದರಿಂದ ತಲೆಯಲ್ಲಿರುವ ಹೇನುಗಳು ಸತ್ತು ಉದುರಿಹೋಗಿ ಪುನಃ ಅವರ ಸುಳಿಯೇ ಇಲ್ಲದಂತಾಗುವುದು ಮತ್ತು ತಲೆಯಲ್ಲಿ ಯಾವ ವಿಧವಾದ ಹುಣ್ಣುಗಳಿದ್ದರೂ ಖಂಡಿತವಾಗಿ ಗುಣವಾಗುವುದು ಈ ಔಷಧದಿಂದ ತಲೆಯ ಕೂದಲಿಗೆ ಯಾವ ಕೆಡಕ ಆಗಲಾರದು ಈ ಔಷಧವನ್ನು ಕಜ್ಜಿ ಕುರು ನವೆ ಮುಂತಾದವುಗಳಿಗೆ ಸೋಪು ಸೀಗೆಕಾಯಿಗೆ ಬದಲಾಗಿ ಉಪಯೋಗಿಸಿದರೆ ತಪ್ಪದೆ ಗುಣವಾಗುವುದು

ಕ್ರಯ ಡಬ್ಬಿಗಕ್ಕೆ ರೂ 1—9—0

ವಿಳಾಸ ಎಸ್ ಆರ್ ಕೃಷ್ಣ ಆಂಡ್ ಕೊ.
89 ನಾರಾಯಣ ಮೊದಲಿ ಸ್ಟ್ರೀಟ್,
ಮದರಾಸು

ಸೆಪ್ಟಂಬರ ತಿಂಗಳಿಂದ ಆರಂಭ } **ಸದ್ಬೋಧಕ ಗ್ರಂಥಮಾಲೆ.** (ತ್ರೈಮಾಸಿಕ ಪುಸ್ತಕ) } ವಾರ್ಷಿಕ ಚಂದಾ ಅಂಚೆ ಸಹಿತ ರೂ 1 ಮಾತ್ರ

ಪ್ರತಿ ಮೂರು ತಿಂಗಳಿಗೊಮ್ಮೆ ಕನ್ನಡ ಕಥಾ, ಕಾದಂಬರಿ, ನಾಟಕ, ಕಾವ್ಯ ಪ್ರಬಂಧವೇ ಮೊದಲಾದ ಗ್ರಂಥಗಳಲ್ಲಿ ಯಾವುದಾದರೊಂದು ಪೂರ್ಣ ಪುಸ್ತಕವೂ ಉಲ್ಲೇಖನ, ವಿನೋದಲಹರಿ, ಸ್ಥಳೀಯವಾರ್ತೆ, ವಿಮರ್ಶೆ ಮತ್ತು ಸ್ವೀಕಾರ ಇತ್ಯಾದಿ ಲೇಖನವೂ ಪ್ರಕಟವಾಗುವವು ಸಮಸ್ತ ಕನ್ನಡಿಗರಿಗೂ ಸಂಗ್ರಹಿಸಿಕೊಳ್ಳಲು ಯೋಗ್ಯವಾಗಿರದೇಕೆಂದ್ರೆ ವಾರ್ಷಿಕ ಚಂದಾ ಅಂಚೆವೆಚ್ಚ ಸಹಿತ ಒಂದೇ ರೂಪಾಯಿ ... ಈಗಲೇ ತಮ್ಮ ಹೆಸರನ್ನು ತಿಳಿಸಿ, ವರ್ಗಣೆದಾರರಾಗಿ ಸೇರುವ ... ಭಾಷಾ ಪೋಷಕರಾದ ಕನ್ನಡಿಗರೆಲ್ಲರೂ ಪ್ರೋತ್ಸಾಹಿಸಬೇಕು

ವಿಳಾಸ:—... ರಂಗಪ್ಪಯ್ಯ, ಸಂಪಾದಕ ಮತ್ತು ಪ್ರಕಾಶಕ
"ಸದ್ಬೋಧಕ ಗ್ರಂಥಮಾಲಾ" ಕಾರ್ಯಾಲಯ,
ಸುರತಕಲ್, (ದಕ್ಷಿಣ ಕನ್ನಡ)

ಅಥವಾ— S. R. Hebbar & Bros,
General Merchants, SURATKAL, S K

ಇನ್‌ಫ್ಲುಯೇನ್ಜಾ ಜ್ವರಕ್ಕೆ

ಎಮ್ಕೊ

ಖಾತ್ರಿ ಚಿಕಿತ್ಸೆ!

ಇನ್‌ಫ್ಲುಯೆನ್ಜಾ, ನಿಮೋನಿಯಾ, ಮಲೇರಿಯಾ, ಸಾಧಾರಣ ಜ್ವರ, ಬಿಟ್ಟು ಬಿಟ್ಟು ಬರುವ ಜ್ವರ, ವಿಷಮ ಜ್ವರ ಕೆಮ್ಮು, ಶೀತ, ಮೊದಲಾದ ಬಾಧ್ಯಗಳಿಗೆ ಖಾತ್ರಿ ಚಿಕಿತ್ಸೆಗಳ ಆವಶ್ಯಕತೆಯು ದಿನೇದಿನೇ ಹೆಚ್ಚಾಗುತ್ತಿರುವ ಕಾರಣ ನಾವು ಈ "ಎಮ್ಕೊ" ಎಂಬ ಆವಿಷ್ಕಾರವಾದ ಖಾತ್ರಿ ಔಷಧಿಯನ್ನು ಈಗತಾನೇ ಪ್ರಚಾರಕ್ಕೆ ತಂದಿರುತ್ತೇವೆ ಮೇಲಿನ ಬಾಧ್ಯಗಳಿಗೆ ಇದು ಖಾತ್ರಿ ಚಿಕಿತ್ಸೆ ಎಂಬದಕ್ಕೆ ಕಳೆದ ಕೆಲವು ವರ್ಷಗಳಿಂದ ನಾವು ಇದನ್ನು ಕೊಟ್ಟು ಗುಣಪಡಿಸಿದ ನೂರಾರು ರೋಗಿಗಳೇ ಸಾಕ್ಷಿ

ಎಮ್ಕೊ. ಇದು ಎಲ್ಲಾ ರೋಗಾಣುಗಳನ್ನು ಕೊಂದು ಅದರ ವಿಷವನ್ನು ನಾಶಪಡಿಸಿ ಇನ್‌ಫ್ಲುಯೇನ್ಜಾ, ನಿಮೋನಿಯಾ ಮತ್ತು ಅದರಂತಿನ ಇತರ ಸೋಂಕು ರೋಗಗಳು ಹತ್ತದಂತೆ ಹತ್ತಿದರೆ ಅದು ಉಲ್ಬಣವಾಗದಂತೆ ಮಾಡುತ್ತದೆ.

ಎಮ್ಕೊ ಇದು ಇನ್‌ಫ್ಲುಯೇನ್ಜಾ ಮೊದಲಾದ ಎಲ್ಲಾ ತರದ ಜ್ವರಗಳನ್ನು ತಪ್ಪದೆ ಗುಣಮಾಡುತ್ತದೆ

ಎಮ್ಕೊ. ಇದನ್ನು ಹಾನಿಕರವಲ್ಲದ ಔಷಧಿಗಳ ಕೂಟದಿಂದ ಅತಿ ಜಾಗರೂಕತೆಯಿಂದ ತಯಾರಿಸಿರುತ್ತದಾದಕಾರಣ ಜ್ವರ ಇರುವ ಕಾಲದಲ್ಲಿಯೂ ಜ್ವರ ಇಲ್ಲದ ಕಾಲದಲ್ಲಿಯೂ ಏನೂ ಭಯವಿಲ್ಲದೆ ಎಲ್ಲಾ ವಿಧದ ಜ್ವರಗಳಿಗೆ ಇದನು ಕೊಡಬಹುದು ಹೆಂಗಸರೂ, ಮಕ್ಕಳೂ ಭಯ ಭೀತಿ ಇಲ್ಲದೆ ಸೇವಿಸಬಹುದು

ಎಮ್ಕೊ. ಇತ್ತೀಚೆಗೆ ಇದು ಕೋಲೇರಾ ರೋಗಿಗಳನ್ನೂ ಗುಣಪಡಿಸಿರುತ್ತದೆ

ಕ್ರಯ ಸೀಸೆ ಗಿರ ರೂ. ೦—೧೨—೦ ಮಾತ್ರ. ವಿ ಪಿ ಬೇರೆ.

ಪ್ರಾಮುಖ್ಯ ಏಜಂಟರು — ದಿ ಇಕ್ವಿಪ್ಸ್ ಏಜನ್ಸಿ,
ಬಲ್ಮಠ ರಸ್ತೆ, ಮಂಗಳೂರು.

"ಟಿಸ್ಯುರೆಮಿಡಿಸ್"

ಎಂಬ

ಶುಸ್ಲರ್ ಪಂಡಿತರ ಹನ್ನೆರಡು ಲವಣ ಔಷಧಗಳು

1 ಕಲ್ಕೇರಿಯ ಫ್ಲೋರ್	5 ಕಾಲಿ ಮ್ಯುರ್	9 ನಾಟ್ರಮ್ ಮ್ಯುರ್
2 ಕಲ್ಕೇರಿಯ ಫೋಸ್	6 ಕಾಲಿ ಫೋಸ್	10 ನಾಟ್ರಮ್ ಫೋಸ್
3 ಕಲ್ಕೇರಿಯ ಸಲ್ಫ್	7 ಕಾಲಿ ಸಲ್ಫ್	11 ನಾಟ್ರಮ್ ಸಲ್ಫ್
4 ಫೆರಮ್ ಫೋಸ್	8 ಮಗ್ನೇಸಿಯ ಫೋಸ್	12 ಸಿಲಿಸಿಯಾ

ಕ್ರಯ — ರೂ ಆ ಪೈ

ಎರಡು ಡ್ರಾಮಿನ ಸೈಜ್ D ಸೀಸೆ ಒಂದರ		0—3—6
ನಾಲ್ಕು ,,	C ,, ,,	0—6—0
ಒಂದು ಔನ್ಸಿನ	A ,, ,, ,,	0—12—6
ಹನ್ನೆರಡು ಲವಣಗಳ ಎರಡು ಡ್ರಾಮಿನ ಶೀಸೆಗಳುಳ್ಳ ಒಳ್ಳೇ ನಮೂನೆಯ ಚಿಕ್ಕ ಪೆಟ್ಟಿಗೆಗೆ		3—0—0
ಹನ್ನೆರಡು ಲವಣಗಳ ಒಂದು ಔನ್ಸಿನ ಶೀಸೆಗಳುಳ್ಳ ಪೆಟ್ಟಿಗೆಗೆ ಜೀವರಸಾಯನ ವೈದ್ಯ ಶಾಸ್ತ್ರ ಪುಸ್ತಕ ಸಮೇತ		10—0—0

ಜೀವರಸಾಯನ ವೈದ್ಯಶಾಸ್ತ್ರ ಎಂಬ ಹೊಸಪುಸ್ತಕವು ಇದು ಮೇಲೆ ಹೇಳಿದ ಟಿಶ್ಯು ಔಷಧಗಳನ್ನು ಸರ್ವಸಾಧಾರಣವಾದ ಎಲ್ಲಾ ಕಾಹಿಲೆ ಕಸಾಂಕೆಗಳಲ್ಲಿ ಉಪಯೋಗಿಸುವ ಕ್ರಮವನ್ನು ಸೂಚಿಸುತ್ತದೆ ಈ ಪುಸ್ತಕವು ಎಲರಿಗೂ ಸುಲಭ ದರದಲ್ಲಿ ಸಿಕ್ಕುವಂತೆ ಪ್ರಕಟಿಸಿದ್ದೇವೆ ಕ್ರಯ 12 ಆಣೆ ಮಾತ್ರ ಬೇಕಾಗಿದ್ದವರು ಕೆಳಗಿನ ವಿಳಾಸಕ್ಕೆ ಬರೆಯಬಹುದು.

ಎ ಫೆರ್ನಾಂಡಿಸ್,
ಎಲೆಕ್ಟ್ರೊ ಹೋಮಿಯೊಪತಿ ಡಿಸ್ಪೆನ್ಸರಿ, ಮಂಗ್ಳೂರು.

ಇಂಡಿಯನ್ ಮೋಟರ್ ಸರ್ವಿಸ್.

ಈ ಸರ್ವಿಸಿನ ಮೋಟರ ಬಸ್ಸುಗಳು ಮಂಗಳೂರಿನಿಂದ ಬಂಟ್ವಾಳಕ್ಕೂ, ಬೆಳ್ತಂಗಡಿಗೂ, ಪುತ್ತೂರಿಗೂ, ಗುರುಪುರಕ್ಕೂ ಮೂಡಬಿದ್ರೆ ಕಾರ್ಕಳ ಮಾರ್ಗವಾಗಿ ಉಡುಪಿಗೂ ವ ಆಯಾಯ ಸ್ಟೇಶನುಗಳಿಂದ ವಾಪಾಸು ಮಂಗಳೂರಿಗೂ ಚಲಾವಣೆ ಆಗುವವು.

ಬೇರೆ ಯಾವ ಮಾಹಿತಿ ಬೇಕಾಗಿದ್ದರೆ ನಮ್ಮ ಕದ್ರಿ ವ ಹಂಪನಕಟ್ಟೆ ಆಫೀಸುಗಳಲ್ಲಿ ವ ಇತರ ಬ್ರೇಂಚ್ ಆಫೀಸುಗಳಲ್ಲಿ ವಿಚಾರಿಸಿದಲ್ಲಿ ತಿಳಿಯಬರುವದು.

ಹಂಪನ ಕಟ್ಟೆ, ಮಂಗಳೂರು, ಮಾಧವ ಬಿಲ್ಡಿಂಗ್ಸ್, } ಎ. ಸಿ. ಅಂದ್ರಾದೆ
ಸಹಿತ. ಪ್ರೊಪ್ರೈಟರ್.

ಇದು ನರಸಂಸಾರವನ್ನು ಕಾಯುತ್ತಿರುವ [illegible]
ಇದು ಆಹಾರ ಮತ್ತು ಔಷಧಿ [illegible]
ಇದು ತ್ರಾಪಾ ಆಯಿಲ್ ಎಂಬುದಕ್ಕೆ ಹಾರ್ಲೆಮ್ [illegible]
ಇದು ಮುನ್ನೂರು ವರುಷಗಳಿಂದ ಲೋಕದಲ್ಲೆಲ್ಲಾ [illegible]
ಇದು ಜಗದೀಶನೇ ಅನುಗ್ರಹಿಸಿದಂಥಾ "ಅಮೃತ" ಎಂಬ [illegible]

ಹೆಚ್ಚೇಕೆ? ಅಂಗೈ ನೋಡಲು ಕನ್ನಡಿ ಬೇಕೆ?

ವಾನಿಂಗ್‌ಟಿಲ್ಲಿ ಜೆನ್‌ವಿನ್ ಹಾರ್ಲೆಮ್ ಆಯಿಲನ್ನು ಪ್ರಥಮತಃ [illegible] ಹೆರ್ಮನ್ ಬ್ರೇಕ್ಕೆಯವರು ಇದೇ ಮಾರ್ಚಿ ತಾ. 10ರಲ್ಲು [illegible] ರೀತಿ ಬರೆದಿರುವರು:—ದಯವಿಟ್ಟು ನಿಮ್ಮ ಹಾರ್ಲೆಮ್ ಆಯಿಲಿನ 25 ಸೀಸೆಗಳನ್ನು [illegible] ಮಾತ್ರ ಔಷಧಿಯೆಂದು ನನ್ನ ಅನುಭವಕ್ಕೆ ಬಂದಿದೆ. ನಾನು 1910ನೇ ಇಸವಿಯಲ್ಲಿ ಮಂಗಳೂರಿಗೆ [illegible] ನಿಮ್ಮ ಹಾರ್ಲೆಮ್ ಆಯಿಲಿನ 12 ಸೀಸೆಗಳನ್ನು ಕೊಂಡುಹೋಗಿದ್ದೆನು. ಇದನ್ನು ಹಿಂದೀಯರೊಳಗೆ ಪ್ರಯೋಗಿಸಿದ್ದಕ್ಕೆ ಅತಿ [illegible] ಸಿತು. ಹಿಂದೀಯರೊಳಗೆ ಪ್ರಬಲವಿರುವ ಜ್ವರಕ್ಕೆ ಇದು ಖಾತರಿ ಔಷಧಿ ಎಂದು [illegible] ಅವರು 25—100—1000 ಸೀಸೆಗಳಂತೆ ತರಿಸಿದರು. ಇದರಿಂದ ಎಷ್ಟೋ ಜನರು ಪ್ರಯೋಜನ ಹೊಂದಿದರು. ಅನೇಕ ಕುಟುಂಬಗಳು "ಕುಟುಂಬಸಂಜೀವನಿ" ಎಂಬಂತೆ ಇದನ್ನು ಮನೆಮನೆಯಲ್ಲಿ ಇಟ್ಟುಕೊಳ್ಳಲು ತೊಡಗಿದರು. ಇತ್ಯಾದಿ.

ಮ॥ ರಾ॥ ಬೆಳಿಯಪ್ಪ ಅಮ್ಮತಿ—ತಾ. 28—4—'20, ನಿಮ್ಮಿಂದ ತರಿಸಿದ ಹಾರ್ಲೆಮ್ ಆಯಿಲ್ ಜ್ವರಕ್ಕೆ ಖಾತರಿ ಔಷಧಿಯಾಗಿದೆ. ದಯಮಾಡಿ 12 ಸೀಸೆ ವಾನಿಂಗ್‌ಟಿಲ್ಲಿ ಜೆನ್‌ವಿನ್ ಹಾರ್ಲೆಮ್ ಆಯಿಲ್ ವಿ. ಪಿ. ಮಾಡಿ ಕಳುಹಿಸಿರಿ.

ರೆವರೆಂಡ್ ಅಂಬಟ್, ಎಸ್. ತಲಚೇರಿ—ನಿಮ್ಮಿಂದ ತರಿಸಿದ ವಾನಿಂಗ್ ಟಿಲ್ಲಿ ಜೆನ್‌ವಿನ್ ಹಾರ್ಲೆಮ್ ಆಯಿಲ್ ಪ್ರಯೋಗಿಸಿ ನನಗೆ ದೀರ್ಘ ಕಾಲದಿಂದಿದ್ದ ನರಗಳ ಅಶಕ್ತಿಯು ಪೂರ್ಣವಾಗಿ ಗುಣವಾಗಿದೆ.

ಮ॥ ರಾ॥ ಶಂಕರನ್ ನಂಬಿಯಾರ್, ಕುಟ್ಟಿಪರಂಬ, 20—8—'20:—ನಿಮ್ಮಿಂದ ತರಿಸಿದ ವಾನಿಂಗ್‌ಟಿಲ್ಲಿ ಜೆನ್‌ವಿನ್ ಹಾರ್ಲೆಮ್ ಆಯಿಲಿನಲ್ಲಿ ಅತಿ ಮಾನುಷ್ಯ ಶಕ್ತಿಯಿದೆ. ನಾನು ಪ್ರಯೋಗಿಸಿದ ಹಲವು ಬಗೆಯ ರೋಗಗಳು ಇದರ ಸೇವನೆಯಿಂದ ಪೂರ್ಣ ಗುಣ ಹೊಂದಿವೆ. 6 ಸೀಸೆಗಳನ್ನು ವಿ. ಪಿ. ಮಾಡಿ ಕಳುಹಿಸಿರಿ.

ವಾನಿಂಗ್ ಟಿಲ್ಲಿ ಬ್ರದರ್ಸ್—ಜೆನ್‌ವಿನ್ ಹಾರ್ಲೆಮ್ ಆಯಿಲ್

ಪ್ರಯೋಗಿಸಿ, ಮೂಲವ್ಯಾಧಿ, ಅಪಸ್ಮಾರ, ಮೂತ್ರದೋಷಗಳು, ಪಕ್ಷವಾತ, ಸೂತಕದ ಅಕ್ರಮಗಳು, ವಾತ, ಜ್ವರ, ಇತ್ಯಾದಿ ರೋಗಗಳಿಂದ ಪೂರ್ಣ ಗುಣಹೊಂದಿದವರ ನೂರಾರು ಪತ್ರಗಳು ಬರುತ್ತಲೇ ಇವೆ. ಆದ್ದರಿಂದ ವಾನಿಂಗ್‌ಟಿಲ್ಲಿ ಜೆನ್‌ವಿನ್ ಹಾರ್ಲೆಮ್ ಆಯಿಲಿನ ಸೀಸೆಗಳನ್ನು ಕೊಂಡುಕೊಳ್ಳುವಾಗ ಮಾತ್ರ ಸೀಸೆಯ ಮೇಲಿರುವ ಟ್ರೇಡ್ ಮಾರ್ಕ್ ಮತ್ತು "Wanning Tilly Bros." ಎಂಬ ದಸ್ಕತು ನೋಡಿ ಕೊಂಡುಕೊಂಡು ಆರೋಗ್ಯ ಪಡೆಯಿರಿ.

ಕ್ರಯ ಸೀಸೆ 1ಕ್ಕೆ ರೂ. 0—8—0; ಡಜನ್ ಸೀಸೆಗಳಿಗೆ ರೂ. 6—0—0; ವಿ. ಪಿ. ಮಾಫಿ.

ಬ್ರಿಟಿಷ್, ಫ್ರೆಂಚ್, ಪೋರ್ತುಗೀಸ್ ಹಿಂದುಸ್ಥಾನದ ಸೋಲ್ ಏಜಂಟರು:— ಎಸ್. ಇ. ಐಮನ್, ದಿ. ಎಕ್ಲಿಪ್ಸ್ ಏಜನ್ಸಿ,
ಬಲ್ಮಠ ರಸ್ತೆ, ಮಂಗಳೂರು.

ಆಯುರ್ವೇದ ಶಾಸ್ತ್ರಾನುಸಾರ

ಡಾಕ್ಟರ್ ಎಚ್. ಲಕ್ಷ್ಮೀನಾರ್ಣಪ್ಪಾ ಮತ್ತು ಸನ್ಸ್

ಇವರಿಂದ ತಯಾರಿಸಲ್ಪಟ್ಟ ಸಿದ್ಧೌಷಧಗಳು.

1. ಶತಮೂಲಿಕೆಯ ಸತ್ವವು. ಈ ಮಹೌಷಧಿಯ ಸೇವನೆಯಿಂದ ಕ್ಷಯ, ಅಸ್ಥಿಜ್ವರ, ಸಿಂತು ಸಿಂತು ಬರುವ ಜ್ವರ, ಬಹುಕಾಲದ ಕೆಮ್ಮು, ರಕ್ತವಾಂತಿಯಾಗುವಿಕೆ, ಹೃದಯದ ದುರ್ಬಲತೆ ಲಿಪ್ಪರ (ಕಾಳಜಿ), ಮೂತ್ರಕೋಶದ ವ್ಯಾಧಿಗಳು ವ ಎಲ್ಲ ತರದ ದುರ್ಬಲತೆಯು ನಾಶಹೊಂದಿ, ಶರೀರಕ್ಕೆ ಆರೋಗ್ಯವನ್ನುಂಟುಮಾಡುವದು. ಇನ್‌ಫ್ಲುಯೆಂಜಾ ಜ್ವರಕ್ಕೂ, ಅಶಕ್ತ ಜನರಿಗೂ, ಬತ್ತಿ ಬರುವ ಸಣ್ಣ ಹುಡುಗರಿಗೂ, ಪ್ರಸೂತರಾದ ಹೆಂಗಸರಿಗೂ, ಶಕ್ತಿ ಪುಷ್ಟಿಯನ್ನೀಡುವ ದಿವ್ಯ ಔಷಧಿಯು ಇಂಗ್ಲಿಷ ಯಾ ಬೇರೆ ಔಷಧದಿಂದ ಗುಣ ಹೊಂದದ ಅಸಂಖ್ಯ ರೋಗಿಗಳು ಈ ಜೀವನಾಮೃತದ ಸೇವನೆಯಿಂದ ಪೂರ್ಣಗುಣಹೊಂದಿ ಸಾವಿನಿಂದ ತಮ್ಮ ಜೀವರಕ್ಷಣೆ ಮಾಡಿಕೊಂಡಿರುವರು.
೧೭ ಔನ್ಸಿನ ಬಾಟ್ಲಿ ೧ಕ್ಕೆ ರೂ. ३—೧३—೦ ಟಿ. ಪಿ. ವಗೈರೆ ಬೇರೆ.

2. ವಿಜಯಸಂಜೀವಿನಿ ತೈಲ. ಕಾಲಕ್ಕೆ ಒಹಿಷ್ಠೆಯಾಗುವುದು, ಬಹಿಷ್ಠೆಯ ಕಾಲ ನೋವು, ಸಂದುಗಳಲ್ಲಿ ಬೇನೆ, ಉದರ ಶೂಲೆ, ಗರ್ಭಸ್ರಾವ ಮತ್ತು ಇದಕ್ಕೆ ಸಮ್ಮಂಧಪಟ್ಟ ವ್ಯಾಧಿಗಳಿಗೆ ದಿವ್ಯ ಔಷಧ. ಸ್ತ್ರೀಯರ ರೋಗಗಳಿಗೆ ಇದು ಮುಖ್ಯ ಔಷಧವಾಗಿರುವುದಲ್ಲದೆ, ಸ್ವಾಭಾವಿಕವಾಗಿ ಕಾಲಕಾಲಕ್ಕೆ ಉಂಟಾಗುವ ಹೊಟ್ಟೆನೋವಿಗೆ ಅನುಭವಸಿದ್ಧವಾದ ಔಷಧ. ಕ್ರಯ ಸೀಸೆ ೧ಕ್ಕೆ ರೂ. ೨.

3. ಕೊಲೇರಾ ಗುಳಿಗೆಗಳು. ಇವನ್ನು ವಾಂತಿಭೇದಿಯ ಯಾವ ಸ್ಥಿತಿಯಲ್ಲೂ ಕೊಡಬಹುದು, ಸಕಲ ಗೃಹಗಳಲ್ಲಿಯೂ ಇದನ್ನು ಸಂಗ್ರಹಿಸಿ ಇಡತಕ್ಕದಾಗಿದೆ. ನಾಲ್ಕು ಮಾತ್ರೆಗಳೊಳಗೆ ಗುಣ ಖಂಡಿತ. ಅಜೀರ್ಣದ ರೋಗಕ್ಕೂ ಅತಿಸಾರಕ್ಕೂ ಉತ್ತಮ.
೪೮ ಗುಳಿಗೆಗಳ ಬಾಟ್ಲಿಗೆ ಕ್ರಯ ರೂ. ೧—೦—೦.

4. ವಾತಾಂತಕ. ದೀರ್ಘ ಕಾಲದ ಮತ್ತು ಯಾವ ತರದ ವಾತ, ಪಕ್ಷವಾತ ಮುಂತಾದ ಭೀಕರ ರೋಗಗಳ ಮೇಲೆ ರಾಮಬಾಣ. ಒಂದು ಸಲ ಉಪಯೋಗಿಸುವುದರಲ್ಲಿ ಇದರ ಶ್ರೇಷ್ಠತೆಯು ತಾನಾಗಿಯೇ ಕಂಡುಬರುವುದು. ಕ್ರಯ ಬಾಟ್ಲಿ ೧ಕ್ಕೆ ರೂ. ೧-೮-೦.

ಈ ಔಷಧಿಗಳ ದಿವ್ಯ ಗುಣಗಳ ಬಗ್ಗೆ ಪ್ರಸಿದ್ಧ ವೈದ್ಯರಿಂದಲೂ, ಜಮೀನದಾರರಿಂದಲೂ, ದೊಡ್ಡ ದೊಡ್ಡ ಸಂಸ್ಥೆಗಳಿಂದಲೂ, ಸುವರ್ಣ ಪದಕಗಳೂ, ಸರ್ಟಿಫಿಕೇಟುಗಳೂ ಸಿಕ್ಕಿರುತ್ತವೆ. ಪತ್ರವ್ಯವಹಾರವು ಇಂಗ್ಲಿಷಿನಲ್ಲಿರಬೇಕು. ಆರ್ಡರ ಕಳುಹಿಸುವಾಗ ಈ ಪತ್ರದ ಉಲ್ಲೇಖ ಮಾಡಿರಿ. ವಿಳಾಸ:—

ಡಾಕ್ಟರ್ ಎಚ್. ಲಕ್ಷ್ಮೀನಾರ್ಣಪ್ಪಾ ಮತ್ತು ಸನ್ಸ್,
ಭವಾನ್‌ಸಿಂಗ್ ಕಂಪೆನಿ ಸಮೀಪ, ತಿರುಪೂರ, (ಕೊಯಿಮುತ್ತೂರು ಜಿಲ್ಲೆ.)

ಅಮೃತಕಲ್ಪ ವೈದ್ಯಶಾಲಾ,

ಕಾಸರಗೋಡು.

ಆಯುರ್ವೇದ ವಿಧಿ ಪ್ರಕಾರ ತಯಾರಿಸಲ್ಪಟ್ಟ ಕಷಾಯ, ಚೂರ್ಣ, ಅವಲೇಹ, ಭಸ್ಮ, ಘೃತ, ತೈಲ, ಆಸವ ಅರಿಷ್ಟ, ದ್ರಾವಕ ಮೊದಲಾದುವುಗಳು, ಕಣ್ಣು ಚಿಕಿತ್ಸೆಗಳ ಎಲ್ಲಾ ಔಷಧಗಳೂ ಅತಿ ವಿಶೇಷವಾದ ಗುಣ [illegible] ಕೆಲವು ಸಿದ್ಧೌಷಧಗಳೂ ಸುಲಭವಾದ ಕ್ರಯಕ್ಕೆ ಇಲ್ಲಿ ಎಲ್ಲಾ ಸಮಯದಲ್ಲಿಯೂ [illegible] ಔಷಧಗಳ ಗುಣವು [illegible] ಉಪಯೋಗಿಸಿದ್ದಲ್ಲಿ ತಿಳಿದು ಬರುವುದು.

ವೈದ್ಯಶಾಲೆಯ ಮಾಲೀಕರೂ ಮೆನೇಜರರೂ ಆದ ದಾಮೋದರ ನಂಬೀಶನರು ಅಧಿಕ್ಕವಾರ ಹೊರತು ವಾರ್ಕ್ಕ ಎಲ್ಲಾ ದಿವಸಗಳಲ್ಲಿಯೂ ವೈದ್ಯಶಾಲೆಗೆ ಬರುವ ರೋಗಿಗಳನ್ನು ಪ್ರತಿಫಲವಿಲ್ಲದೆನೇ ಪರಿಶೋಧಿಸಿ [illegible] ಔಷಧ ಕೊಡುವರೆ ಸಿದ್ಧರಾಗಿರುವರು. ಅಪೇಕ್ಷಿಸಿದಲ್ಲಿ ಎಲ್ಲಾ ಔಷಧಗಳನ್ನು [illegible] ಯಿಂದ ವಿಳಂಬವಿಲ್ಲದೆ ವಿ. ಪಿ. ಮೂಲಕ ಕಳುಹಿಸಲಾಗುವುದು.

೧. ಕುಮಾರ ಶಕ್ತಿವರ್ಧಕ—

ಇದು ಮಕ್ಕಳ ಆರೋಗ್ಯಾಭಿವೃದ್ಧಿಗೆ ದಿವ್ಯ ಔಷಧ.

1. ಇದು ಶಕ್ತಿವರ್ಧಕ—[illegible]

[illegible]

The Indian Tooth-ache Specific.

ಹಲ್ಲುನೋವಿಗೆ ಖಾತ್ರಿಯಾದ ಔಷಧ.

ಇದನ್ನು ಒಂದು ಬಾರಿ ಉಪಯೋಗಿಸುವದರಿಂದ ಎಲ್ಲಾ ವಿಧದ ಹಲ್ಲುನೋವುಗಳು, ವಸಡಿನ ರೋಗಗಳು ಅಂದರೆ ವಸಡಿನ ಶಿಥಿಲತೆ, ಬಾವು, ವ್ರಣ, [illegible]

[illegible]

STANY BROTHERS, MANGALORE.

ಸೊಗಸಾದ ಕಾಫಿಹುಡಿ.

I ಕ್ಲಾಸ್	0—10—0
II ಕ್ಲಾಸ್	0—8—0
III ಕ್ಲಾಸ್	0—6—0

[illegible]

STANY BROTHERS, MANGALORE.

ಸ್ವದೇಶಾಭಿಮಾನಿ

ಪ್ರತಿ ಶುಕ್ರವಾರವೂ ಪ್ರಕಟಸಲ್ಪಡುವುದು.

ರತ್ನೈರ್ಮಹಾರ್ಹೈಸ್ತುತುಷುರ್ನ ದೇವಾ । ನ ಭೇಜಿರೇ ಭೀಮವಿಷೇಣ ಭೀತಿಮ್ ॥
ಸುಧಾಂ ವಿನಾ ನ ಪ್ರಯಯುರ್ವಿರಾಮಂ । ನ ನಿಶ್ಚಿತಾರ್ಥಾದ್ವಿರಮಂತಿ ಧೀರಾಃ ॥ ೧ ॥

ಬೆಲೆಯುಳ್ಳನುಪಮರತ್ನಗಳು ಸಾ । ಗರವ ಮಥಿಸಲು ಸುರರಿಗದರಿಂ । ಹರುಷವಾಯಿತೆ! ಮತ್ತೆ ವಿಶ್ವವ ಸುಡುತ ಬರುತಿರುವ ॥
ಗರಳಕಿವರಂಜಿದರೆ! ಸುಧೆಯನು । ಮರೆತು ಕ್ಷುದ್ರರ ತೆರದಿ ಕುಳಿತರೆ! । ತೆರಳಬಲ್ಲರೆ! ತೊರೆದು ಧೀರರು ನಿಶ್ಚಿತಾರ್ಥವನು ॥ ೧ ॥

ಪುಸ್ತಕ ೧೯ | ಮಂಗಳೂರು, ತಾರೀಖು ೧೭ನೇ ದಶಂಬರ ಶುಕ್ರವಾರ ೧೯೨೦. | ಸಂಚಿಕೆ ೫೧

'ನೈಟ್ರೇಟ್ ಒಫ್ ಸೋಡಾ'

ಹೊಗೆಸೊಪ್ಪು, ಕಬ್ಬು, ತೆಂಗು, ಅಡಕೆ, ಮಾವು, ವೀಳ್ಯದೆಲೆ, ಬತ್ತ, ತರಕಾರಿ ಮೊದಲಾದ ಪೈರುಗಳಿಗೆ ಮತ್ತು ತೋಟಗಳಿಗೆ ಬಹಳ ಲಾಭಕರ ಗೊಬ್ಬರ.

ಈ ಗೊಬ್ಬರವು ಒಂದು ಬಗೆಯ ರಾಸಾಯನಿಕ ಉಪ್ಪು, ಹಲವು ಪ್ರಾಂತ್ಯಗಳಲ್ಲಿ ಇದರ ಉಪಯೋಗದಿಂದ ಹುಲುಸಾದ ಬೆಳೆಯನ್ನು ಪಡೆದಿರುತ್ತಾರೆ.

ಬೆಳೆಗಳಿಗೆ ಅಗತ್ಯವಿರುವ ನೈಟ್ರೊಜನ್ ಅಥವಾ ಸಾರಜನಕವು 15—16% ಇದರಲ್ಲಿ ಮೀನುಗೊಬ್ಬರದಲ್ಲಿ ಸಕ್ಕಿಂತ ಎರಡು ಮೂರು ಪಾಲಷ್ಟು ಜಾಸ್ತಿ ದೊರೆತಿರುವದು. ಎಕ್ರೆಗೆ 100—200 ರಾತ್ತಲು ಸಾಕಾಗುವದು.

ಪರಸ್ಪರ ಸಹಾಯಕ ಸಂಘಗಳು ಇದನ್ನು ಹಳ್ಳಿಯವರಿಗೆ ಒದಗಿಸಿಕೊಡುವುದಕ್ಕೆ ಅನುಕೂಲವಾಗುವ ಹಾಗೆ ಏರ್ಪಾಡುಗಳನ್ನು ಮಾಡಬಹುದು.

"ಕೃಷಿ ಸುಧಾರಣೆ" ಎಂಬ ಸಚಿತ್ರ ಪಹಿಯನ್ನು ಕನ್ನಡ ಭಾಷೆಯಲ್ಲಿ ನಮ್ಮಿಂದ ಧರ್ಮಾರ್ಥವಾಗಿ ಪಡೆಯಬಹುದು.

ದಿ ಚಿಲಿಯನ್ ನೈಟ್ರೇಟ್ ಕಮಿಟಿ,
1 ರೋಯಲ್ ಎಕ್ಸ್‌ಚೇಂಜ್ ಪ್ಲೇಸ್, ಕಲ್ಕತ್ತಾ.

The Director, Chilean Nitrate Committee,
(INDIAN DELEGATION),
1, *Royal Exchange Place*, CALCUTTA.

For Sale!

THE WELL KNOWN
"MISSION" UMBRELLAS
(MADE IN ENGLAND)
Strong and well made

Sizes	23	25	27
Prices	Rs. 6-4-0.	6-8-0.	6—12—0 each.

The Famous Acme Razors
(SWEDISH MADE)
Now available at the premar price of
Rs. 2—8—0 each.
Cheap at double the price

Apply to—
The Commonwealth Stores,
(Late M. M. Branch, Mangalore).

ವಿಕ್ರಯಕ್ಕೆ ಇಟ್ಟಿವೆ!

ಇಂಗ್ಲೆಂಡಿನಲ್ಲಿ ತಯಾರಾಗಿ "ಮಿಶ್ಶನ್ ಕೊಡೆಗಳು" ಎಂದು ಹೆಸರುವಾಸಿಯಾಗಿರುವ
ಬಲವಾದ ಕೊಡೆಗಳು.

ಅಳತೆ	23 ಇಂಚು ಉದ್ದ	25 ಇಂಚು	27 ಇಂಚು
ಬೆಲೆ	ರೂ. 6-4-0.	ರೂ. 6-8-0.	ರೂ. 6-12-0.

ಪ್ರಖ್ಯಾತ ಏಕ್ಮೆ ಕ್ಷೌರಕತ್ತಿಗಳು.
(ಸ್ವೀಡನ್ನಿನಲ್ಲಿ ತಯಾರಾದವುಗಳು)
ಯುದ್ಧದ ಹಿಂದಣ ಕಾಲದ ಧಾರಣೆಯಲ್ಲಿಯೇ ವಿಕ್ರಯಕ್ಕೆ ಇಟ್ಟಿವೆ! ಬೆಲೆ ರೂ. 2—8—0 ಮಾತ್ರ!
ಇದಕ್ಕಿಂತ ಇಮ್ಮಡಿ ಬೆಲೆ ಕೊಟ್ಟರೂ ಅಗ್ಗವೆಂತ ಹೇಳುವಷ್ಟು ಒಳ್ಳೆ ಮಾಲು!
ಕೆಳಗಿನ ವಿಳಾಸಕ್ಕೆ ಬರೆದು ತರಿಸಿಕೊಳ್ಳಬಹುದು—
ದಿ ಕೋಮನ್‌ವೆಲ್ತ್ ಸ್ಟೋರ್ಸ್,
(ಮೊದಲು ಮಂಗಳೂರಿನ ಮರ್ಕಂಟೈಲ್ ಮಿಶನ್ ಶಾಖೆ).

ದೇನೆಯುಂಟಾದಾಗ ಚೇತನವು ಕಡಿಮೆಯಾಗುವುದೆಂಬುದು ಸಕಲರಿಗೂ ತಿಳಿದಿರುವ ವಿಷಯ. ಯೋಚಿಸಿ ನೋಡಿದರೆ ಬಹು ವೇಗದಿಂದ ಶಕ್ತಿಯನ್ನು ಕುಂದಿಸಿ ಬಿಡುವ ಶತ್ರುಗಳು ದೇನೆಗಲ್ಲದೆ ಮತ್ತೊಂದಕ್ಕಿರದು. ಅಂಥಾ ದೇನೆಯನ್ನು ನಿವಾರಣೆ ಮಾಡುವುದಕ್ಕೆ ತಕ್ಕ ಔಷಧವು

ಅಮೃತಾಂಜನ

ಹೊರತು ಮತ್ತೊಂದಿಲ್ಲವೆಂಬುದು ಖಾತ್ರಿ.

ಇದನ್ನು ಉಪಯೋಗಿಸುವುದರಿಂದ ದೇನೆಯು ಒಂದೇ ಕಡೆಯಲ್ಲಿ ನಿಲ್ಲದು. ಇದು ಯಾವ ತರದ ಕಿಡಿತವನ್ನಾದರೂ ನೋವನ್ನಾದರೂ ಗುಣಪಡಿಸುವುದು.— ದೇನೆಯನ್ನು ಉಪಶಮನ ಮಾಡುವ ವಿಶೇಷವಾದ ಲಕ್ಷಣಗಳಿಂದ ಕೂಡಿ, ಹಲ ತರದ ನೋವನ್ನು ಗುಣಪಡಿಸಿ ನಿವಾರಣೆ ಮಾಡುವ ದಿವ್ಯ ಔಷಧ.

ಕ್ರಯ ಡಬ್ಬಿ 1ರ 10 ಆಣೆ. ಡಜನ್ 1ಕ್ಕೆ ರೂ. 5—12—0

ಗಜಕರ್ಣದ ಮುಲಾಮು:— ಮೂರು ಸರ್ತಿ ಹಾಗಿಸುವುದರೊಳಗೆ ಗಜಕರ್ಣವು ಖಂಡಿತವಾಗಿ ನಾಶವಾಗುವುದು. ಕ್ರಯ ಡಬ್ಬಿ ಒಂದರ ರೂ. 0—6—0.

ದಂತಮಂಜನ:— ಈ ಉತ್ತಮವಾದ ದಂತಮಂಜನವನ್ನು ಉಪಯೋಗಿಸುವುದರಿಂದ ಹಲ್ಲುಗಳು ಶುಭ್ರವಾಗುತ್ತವೆ. ರಕ್ತ ಬರುವುದು ನಿಲ್ಲುತ್ತದೆ. ಹಲ್ಲುಗಳು ಗಟ್ಟಿಯಾಗುತ್ತವೆ. ಇದು ಸುವಾಸನೆಯಿಂದ ಕೂಡಿ ಉತ್ತಮವಾಗಿರುತ್ತದೆ. ಡಬ್ಬಿ ೧ರ ಆಣೆ 2.

ಅಮೃತಾಂಜನ ಡಿಪೋ,
6. 7 ತಂಬುಚೆಟ್ಟಿ ಸ್ಟ್ರೀಟ್, ಜೋರ್ಜ್ ಟೌನ್, ಮದ್ರಾಸು.
109 ಫ್ರೇಯರ್ ರೋಡ್, ಮುಂಬಯಿ.
ಮಂಗಳೂರಲ್ಲಿ—ಊಲನ್ ಮಾರ್ಟ್, ಹಂಪನಕಟ್ಟೆ, ಇವರಲ್ಲಿಯೂ ದೊರಕುವುದು.

ವಾತಕಷಾಯ
U. B. DUTT & Co. CALICUT.

ಮಲೆಯಾಳ ದೇಶವು ಔಷಧಗಳಿಗೆ ಕೀರ್ತಿಹೊಂದಿದ ಪ್ರದೇಶವು. ಅಲ್ಲಿನ ಕಾಡುಗಳಲ್ಲಿ ಅತಿ ಪ್ರಯಾಸದಿಂದ ಮಾತ್ರವೇ ಸಿಕ್ಕುವ ನಾರುಬೇರುಗಳಿಂದ ನಾವು ಅನೇಕ ಉತ್ಕೃಷ್ಟ ಔಷಧಗಳನ್ನು ಸಿದ್ಧಪಡಿಸಿ, ಅನೇಕ ಕಾಲದಿಂದ ಉಪಯೋಗಿಸುತ್ತಿದ್ದೇವೆ. ಇದಕ್ಕೆ ಪ್ರತಿಫಲವಾಗಿ, ಅನೇಕಾನೇಕರು ಅವುಗಳಿಂದ ಗುಣಹೊಂದಿರುವುದಲ್ಲದೆ, ನಮಗೆ ಪ್ರತಿನಿತ್ಯವೂ "ಆರ್ಡರ್‌ಗಳೂ" ಬರುತ್ತಲಿವೆ. ಈ ಭಾಗದಲ್ಲಿ, ಗುಣಹೊಂದಿದ್ದವರಿಂದ ನಮಗೆ ಬಂದಿರುವ ಕಾಗದಗಳೂ, ಯೋಗ್ಯತಾಪತ್ರಗಳೂ ಹೇರಳವಾಗಿವೆ.

ಅಂಥಾ ಉತ್ಕೃಷ್ಟ ಔಷಧಿಗಳಲ್ಲಿ ನಮ್ಮ "ವಾತಕಷಾಯವು" ಎಲ್ಲಾ ವಿಧದ ವಾತಗಳನ್ನು ಗುಣಪಡಿಸುತ್ತದೆ. ಗಂಟುಗಳಲ್ಲಿರುವ ನೋವು, ಅವಯವಗಳಲ್ಲಿ ಉರಿಯುವ ಸ್ವಭಾವ, ಗಂಟು, ಸಂಧು, ಅವಯವ, ಅಂಡಕೋಶ ಮೊದಲಾದವು ಕೆಂಪಾಗಿ ನೋವುಂಟಾಗುವುದು; ನಡೆಯಲು ಆಗದೆ ಇರುವುದು, ಕೈಕಾಲು ಅಲ್ಲಾಡಿಸುವಾಗ ವಿಪರೀತ ನೋವಾಗುವುದು; ಮೂತ್ರದಲ್ಲಿ ದೋಷ ವಿರುವುದು; ಇತ್ಯಾದಿಗಳಲ್ಲಿ ಯಾವುದಾದರೂ ಒಂದು ನಿಮ್ಮಲ್ಲಿಯಾಗಲೀ ನಿಮ್ಮ ಸ್ನೇಹಿತರಲ್ಲಿಯಾಗಲೀ ಕಾಣಿಸಿಕೊಂಡರೆ, ಕೂಡಲೇ ನಮ್ಮ "ಕಷಾಯ" ತೆಗೆದುಕೊಳ್ಳಲು ಪ್ರಾರಂಭಿಸಿರಿ. ಇದನ್ನು ಕ್ರಮವಾಗಿ ಸೇವಿಸುವುದರಿಂದ ನಿಮ್ಮ ರೋಗವು ಸಂಪೂರ್ಣ ಗುಣಹೊಂದುವುದರಲ್ಲಿ ಯಾವ ಸಂಶಯವೂ ಇಲ್ಲ. ಇದಲ್ಲದೆ ಪಿತ್ತ, ವಾತ, ಕಫ, ಅಜೀರ್ಣ, ಕೋಲೆರಾ, ಕಾಮಿಲೆ, ಉಬ್ಬಸ, ಕೆಮ್ಮು, ಜ್ವರ, ತಲೆನೋವು, ಧಾತುಪುಷ್ಟಿ, ಹಲ್ಲುನೋವು, ಕಿವಿನೋವು, ಆಮಶಂಕೆ, ಮೊದಲಾದವಲ್ಲಕ್ಕೂ ದಿವ್ಯೌಷಧಗಳಿವೆ. "ಕ್ಯಾಟಲಾಗ್"ನ್ನು ನೋಡಿ.

ಕ್ರಯ ರೂ. 4—4—0.

ಯು. ಬಿ. ದತ್ತ ಕಂಪೆನಿ,
ಕಲ್ಲಿಕೋಟೆ ಮಲಬಾರ.

ಪ್ರತಿಯೊಬ್ಬ ಕುಟುಂಬಿಕನೂ ಹತ್ತಿರವೇ ಇಟ್ಟುಕೊಳ್ಳಬೇಕಾದ

ಸರಸ್ವತಿ ವಿಲಾಸದವರ
ಸುದರ್ಶನ ತೈಲ.
M.S.G.B & SONS. MANGALORE.

ಮುಧ್ದಣ, ಕಣ್ಣು ಕುರು, ಕರ್ಣಶೂಲೆ, ಅಸಾಧ್ಯವಾದ ಕುರು, ಪೈಲು ಯಾನೆ ಬಾವು, ಕಠಿಣವಾದ ಗಜಕರ್ಣ, ತುರಿಕಜ್ಜಿ, ಮುಂತಾದ್ದನ್ನು ನಿಸ್ಸಂದೇಹವಾಗಿ ನಿರ್ಮೂಲ ಮಾಡುವ ದಿವ್ಯೌಷಧ.—ಅನುಪಾನ ಪಟ್ಟಿ ಸಮೇತ ಬಾಟ್ಲಿ 1ರ ಕ್ರಯ 0—4—0. ವಿ. ಪಿ. ಬೇರೆ.

ಸರಸ್ವತಿ ವಿಲಾಸದವರ ರಿಂಗ್ವರ್ಮ್ ಮುಲಾಂ.

ಗಜಕರ್ಣ—ಸೊಂಟಕಜ್ಜಿ, ಕೂದಲು ನಾಶಮಾಡುವ ಹುಳುಗಳ ಮೇಲೆ ರಾಮಬಾಣ. ಬಾಟ್ಲಿ 1ರ ಕ್ರಯ 0—5—0. ವಿ. ಪಿ. ಬೇರೆ.

ನಮ್ಮ ವಿಳಾಸ:—
ಯಮ್. ಸುಬ್ರಾಯಗಿರಿಭಟ್ಟ ಎಂಡ್ ಸನ್ಸ್,
ಸರಸ್ವತಿ ವಿಲಾಸ, ರಥಬೀದಿ, ಮಂಗಳೂರು.

Come! See! & Try!

P. Narayana Vaijappa Bhandary & Co.,
Cloth Merchants,
Car Street, MANGALORE.

ಮದಿವೆ ಉಪನಯನಗಳ, ಹಬ್ಬ ಉತ್ಸವಗಳ ಕಾಲದಲ್ಲಿ ಮತ್ತು ನಿತ್ಯದಲ್ಲಿ ಉಪಯೋಗಕ್ಕೆ ಬೇಕಾದಂಥಾ ಸೀರೆಗಳು, ರವಕೆ ಕಣಗಳು, ಧೋತ್ರಗಳು, ನಾನಾ ಬಗೆಯ ಅಂಗೀ ವಸ್ತ್ರಗಳು, ಧೋತಿಗಳು, ಚೌಕಿಗಳು ಇತ್ಯಾದಿ ಉಡುಪುತೊಡುಪುಗಳಿಂದ ನಮ್ಮ ಮಳಿಗೆಯನ್ನು ತುಂಬಿಸಿರುತ್ತೇವೆ.

ಸಗಟು ವ್ಯಾಪಾರಸ್ಥರಿಗೆ ವಿಶೇಷವಾದ ಸುಲಭ ದರಗಳು. ನಗದಿ ಗಿರಾಕಿಗಳಿಗೆ ಡಿಸ್ಕೌಂಟು ಕೊಡಲ್ಪಡುತ್ತದೆ.

ಪಿ. ನಾರಾಯಣ ವೈಜಪ್ಪ ಭಂಡಾರಿ ಮತ್ತು ಕಂಪೆನಿ,
ರಥಬೀದಿ, ಮಂಗಳೂರು.

HAARLEM OIL.

OF THE ORIGINAL INVENTOR—CLASS TIELY.

Avoid Imitations—Write or call for the papers dealing with the history of the origin HAARLEM OIL.

Available only for— **The Bombay Stores,**
Mangalore.
Sole distributers for India, Burma and Ceylon

ಲೋಕ ಪ್ರಸಿದ್ಧವಾದ

ಚೊಕ್ಕ ಹಾರ್ಲೆಮ್ ತೈಲ ಕಲ್ಪಕನಾದ ಕ್ಲೆಸ್ ಟಿಲ್ಲಿಯ ಜಿನ್ಯುಇನ್ ಯಾನೆ ತಾಜಾ ಹಾರ್ಲೆಮ್ಸ್ ತೈಲವು.

ಬಾಟ್ಲಿ ೧ಕ್ಕೆ ಕ್ರಯ ಬರೇ ೮ ಆಣೆ ಮಾತ್ರ ೧ ಡಜನ್ ಗಿರಾಕಿಗಳಿಗೆ ಪ್ರತ್ಯೇಕ ದರ ಕೃತ್ರಿಮ ಹಾರ್ಲೆಮ್ ತೈಲವನ್ನು ನೋಡಿ! ಮೂಲ ಶೋಧಿತನಾದ ಕ್ಲೆಸ್ ಟಿಲ್ಲಿಯ ಹಾರ್ಲೆಮ್ ತೈಲ ಯಾವುದು? ಎಂಬುದನ್ನು ತಿಳಿಯಪಡಿಸುವ ಪತ್ರಗಳನ್ನು ಕರೆಸಿರಿ.

ದೊರಕುವ ವಿಳಾಸ.— **ದಿ. ಬೊಂಬೇ ಸ್ಟೋರ್ಸ್,**
ಮಂಗಳೂರು. (ದ. ಕನ್ನಡ)

ಪುತ್ತೂರಿನಲ್ಲಿ: ಬೆಳ್ತಾರೆ ನರಸಿಂಹ ಮಲ್ಯ,
ಬೊಂಬಾಯಿ ಸ್ಟೋರಿನ ಹಾರ್ಲೆಮ್ ತೈಲ ಮಾರುವ ಏಜಂಟರು.

(ಇಂಡಿಯಾ, ಬರ್ಮಾ, ಮತ್ತು ಸಿಲೋನು ಪ್ರಾಂತ್ಯಗಳಲ್ಲಿ ಕ್ಲೆಸ್ ಟಿಲ್ಲಿಯ ತಾಜಾ ಹಾರ್ಲೆಮ್ ತೈಲವನ್ನು ಮಾರಾಟ ಮಾಡಲು ಸಂಪೂರ್ಣ ಸ್ವತಂತ್ರ ವಹಿಸಲ್ಪಟ್ಟ ಪ್ರಾಮುಖ್ಯ ವಿಕ್ರಯದಾರರು)

[illegible]
ಮಿಕ್ಸ್ಚರ್
[illegible] ಉತ್ತಮ [illegible]

[illegible] ಜ್ವರ [illegible] ರೋಗ [illegible] ರೋಗಗಳು [illegible]

[illegible]

ಪ್ರಸಿದ್ಧ ಕೃಷಿಕೋಳಿಜಿನ ಅಧ್ಯಾಪಕರಾದ [illegible] ರೀತಿಯಾಗಿ ಬರೆದಿರುತ್ತಾರೆ — ಬೇರೆ ಬೇರೆ ಜ್ವರಗಳ ಸಂದರ್ಭದಲ್ಲಿ ನಾನು ಈ ಔಷಧವನ್ನು ಪ್ರಯೋಗಿಸಿದಾಗ ಅದರಿಂದ ಕ್ಷಿಪ್ರದಲ್ಲಿ ಗುಣಾಂಶ ಸಿಕ್ಕಿತು.

ನಮ್ಮ ಏಜಂಟರು ಈ ನೇಮಕವಾಗದ ಸ್ಥಳದಲ್ಲಿ ತಮಗೆ ಏಜಂಟರು ಬೇಕು ಕಮ್ಮಿಶನ್ ಮುಂತಾದ ಶರ್ತಗಳನ್ನು ನಮಗೆ ಬರೆದು ತಿಳಿದುಕೊಳ್ಳಬಹುದು

ಕರ್ಣಾಟಕ ಬ್ರದರ್ಸ್,
65 ಗಿರಗಾಂವ, ಮುಂಬಯಿ

Agent —
The Woollen Mart, *Mangalore*

ಶ್ರೀಮತ್ ಕಲ್ಯಾಣ ಬಂಧುಗಳೇ!

ಈ ಕಡೆ ನೋಡಿರಿ.

ಕಲ್ಯಾಣಕಾರಕವೆಂಬ ವೈದ್ಯಗ್ರಂಥಾಧಾರದಿಂದಲೂ ಅನೇಕ ರಾಜ ವೈದ್ಯರುಗಳಿಂದಲೂ ಪರಿಶೋಧಿಸಿ ತಯಾರಿಸಲ್ಪಟ್ಟ ಅನುಭವ ಸಿದ್ಧೌಷಧಗಳು ಈ ಕೆಳಗಣ ವಿಳಾಸದಾರರಲ್ಲಿ ದೊರೆಯುವವು ಅಪೇಕ್ಷಕರು ಕೆಟಲಾಗನ್ನು ತರಿಸಿಕೊಂಡರೆ ಸಮಾಧಾನವಾಗುವದು.

S P RAJA & Co
Kalyanakaraka Bishagmandir
POLALY POST S C

ಎಸ್. ಪಿ. ರಾಜಾ ಮತ್ತು ಕಂಪೆನಿ,
ಕಲ್ಯಾಣಕಾರಕ ಭಿಷಗ್ಮಂದಿರ, ಪೋಸ್ಟು ಪೊಳಲಿ ದ. ಕ.

NETRANAND SAREES
Cheap and Fashionable
Sarees in all brilliant colours with lustrous borders
Liberal Commission for wholesale Orders

ಚೆಲೋ ಬಣ್ಣದ ಶೀರೆಗಳು! ಬಹಳ ಕಮ್ಮಿ ಕ್ರಯ!

ವಿವಿಧ ಬಣ್ಣಗಳ ಛಾಪಾದೊಡನೆ "ನೇತ್ರಾನಂದ" ಕರವಾದ ಶೀರೆಗಳ ಕೆಳಗಿನ ಕಂಪೆನಿಯವರ ಹತ್ತರ ದೊರಕುತ್ತವೆ

ವ್ಯಾಪಾರಸ್ಥರಿಗೆ ಒಳ್ಳೇ ಕಮಿಷನ ಕೊಡುವದು

ನೂಲಿನ ಕೆಂಪು (Congo Red) ಹಳದಿ ಮತ್ತು ಇತರ ಬಣ್ಣಗಳು ಕಡಿಮೆ ಕ್ರಯದಲ್ಲಿ ದೊರಕುವವು

ವಿಶೇಷ ಮಾಹಿತಿಗೆ ಕೆಳಗಿನ ವಿಳಾಸಕ್ಕೆ ಬರೆಯಿರಿ

ಶ್ರೀ ಸೀತಾರಾಮವಿಠ್ಠಲ ಕಂಪೆನಿ,
ಮಿಲಾಗ್ರಿ ಇಗರ್ಜಿ ಎದುರು, ಹಂಪನಕಟ್ಟೆ ಮಂಗಳೂರು.

ಆರೋಗ್ಯ ಅಂದರೇ ಸೌಖ್ಯ.

ಇದನ್ನು
ಯಾವ ರೀತಿಯಿಂದ ಸಂಪಾದಿಸುವದು ತಮಗೆ ನಾವು
ಹಾದಿಯನ್ನು ತೋರಿಸುವೆವು
ಇದು
ಪ್ರಸಿದ್ಧವಾದ ಆತಂಕನಿಗ್ರಹ ಗುಳಿಗೆಗಳನ್ನು ಉಪಯೋಗಿಸುವದರಿಂದ ಅಮೃತದ ಹಾಗೆ ಉತ್ತಮ ಶರೀರಸೌಖ್ಯವನ್ನುಂಟು
ಮಾಡುವದು ಕ್ರಯ ೧ ರೂಪಾಯಿ
ಅದಲ್ಲದೇ
ಶಾಶ್ವತವಾಗಿ ಸುಖ ಅನುಭವಿಸುವದನ್ನು ಬೋಧಿಸುವ

ಕಾಮಶಾಸ್ತ್ರ.

ಅಂಚೆಯ ಹಾಸಲು ಸಹಾ ಇಲ್ಲದೆ ಕಳುಹಿಸುವೆವು ಈ ದಿನವೇ ಬರೆಯಿರಿ

ವಿಳಾಸ —
ವೈದ್ಯಶಾಸ್ತ್ರಿ ಮಣಿಶಂಕರ ಗೋವಿಂದಜೀ,
ಆತಂಕನಿಗ್ರಹ ಔಷಧಾಲಯ, ೭೮, ಬ್ರಾಡ್ವೇ, ಮದರಾಸು

Local Agents **Raphael & Co.**
Brito Buildings
Hampankatta, MANGALORE

ನೇಟಿವ್ ಡಾಕ್ಟರ್ಸ್ ಮೂಲ್ಕಿ ಗಣಪಯ್ಯ ಎಂಡ್ ಸನ್ಸರವರ

ಖ್ಯಾತಿಯಿಂದ ಗುಣಪಡಿಸುವ ಔಷಧಗಳು

1. ಮಹಾಮದನ ಕಾಮೇಶ್ವರಿ ಲೇಹ — ಬಹಳ ಶ್ರಮಪಟ್ಟು ಕೆಲಸಮಾಡುವ ಲೇಖಕರೂ ಮತ್ತು ಇಂದ್ರಿಯ ದೌರ್ಬಲ್ಯ ಅಜೀರ್ಣ, ಬದನೋವು, ಮಲಬದ್ಧತೆ, ಶರೀರಗಳ ಘಳಿತದಿಂದ ಅಶಕ್ತ ಮೊದಲಾದ ಪ್ರಕೃತಿಯುಳ್ಳವರೂ ಇದನ್ನು ಸೇವಿಸಿದ್ದಲ್ಲಿ ರಕ್ತಶುದ್ಧಿ, ಧಾತುಪುಷ್ಟಿ ಮತ್ತು ಮುಖದಲ್ಲಿ ಕಾಂತಿಗೊಳಿಸುವುದು

2. ಮಹಾಜ್ವರಾಂಕುಶ (ಖಾತ್ರಿ ಗುಣ) — ಇನ್‌ಫ್ಲುಯೆಂಜಾ ನಿಮೋನಿಯಾ, ಮಲೇರಿಯಾ, ದಿವಸಕೊಮ್ಮೆ, ದ್ವಿತೀಯ ತೃತೀಯ ಚಾತುರ್ಥಿಕ ಜ್ವರಗಳ ಮೇಲೆ ರಾಮಬಾಣ ಬಾಟ್ಲಿ 1ಕ್ಕೆ ಆಣೆ 8

3 ಬಾಲಗ್ರಹಗುಟಿಕೆ — ಕೂಸು ವ ಮಕ್ಕಳ ಅಪಸ್ಮಾರಕ್ಕೆ ರಾಮಬಾಣ ಡಜನಿಗೆ ಆಣೆ 10

4 ಕೊಲೆರಾ ಯಾನೆ ವಾಂತಿಬೇದಿ ಗುಟಿಕೆ — ಒಂದೆರಡು ಗುಟಿಕೆಯಿಂದ ವಾಂತಿಬೇದಿ ಕೂಡಲೆ ಗುಣ, ಬರಿ ಅತಿಸಾರ ರಕ್ತಾತಿಸಾರ, ಜ್ವರಕೂಡಿರುವ ರಕ್ತಾತಿಸಾರ, ಗ್ರಹಣಿಯಿಂದ ಯಾ ಹುಳದ ಉಪದ್ರದಿಂದ ಆಗುವ ಹೊರಕಡೆ ಗುಣ ಬಾಟ್ಲಿ 1ಕ್ಕೆ ಆಣೆ 8

5. ಶ್ವಾಸಕುಠಾರ ಗುಟಿಕೆ — ಇದು ಶ್ವಾಸಕ್ಕೆ ಸಿದ್ಧ ಔಷಧಿ. ಒಂದೇ ಗುಟಿಕೆಯಿಂದ ಕಫ, ಉಬ್ಬಸ, ಕೆಮ್ಮು, ಶೆಪು ಗುಣ ಡಜನಿಗೆ ಆಣೆ 10

6. ಮೇಹಕುಠಾರ — ಮೂತ್ರ ಕೃಚ್ಛ್ರ, ಅಶ್ಮರಿ ವ್ರಣ ಮೂತ್ರಹೋಗುವಾಗ್ಯೆ ಉರಿಯನ್ನೂ ಕೀವನ್ನೂ ಕೂಡಲೆ ನಿಲ್ಲಿಸಿ ಪಥ್ಯವಿಲ್ಲದೆ ಖಂಡಿತ ಗುಣಕೊಡುವದು, ಕಠಿಣ ರೋಗಿಗೂ ಕೂಡಾ 2 ದಿವಸದೊಳಗೆ ಗುಣಸಿಕ್ಕುತ್ತದೆ 16 ದಿವಸದ ಔಷಧಿ ಕ್ರಯ ರೂ 2

7 ಇಚ್ಛಾ ಭೇದಿ — ಆಯಾಸವನ್ನು ಉಂಟುಮಾಡದ ಸುಖ ವಿರೋಚಕ ಬಾಟ್ಲಿ 1ಕ್ಕೆ ಆಣೆ 12

8. ಭೃಂಗರಾಜತೈಲ — ತಲೆ ಉರಿ, ಕಣ್ಣು ಉರಿ, ಕಣ್ಣು ನೋವು, ನಿದ್ರೆ ಬಾರದೆ ಇರುವುದು, ಅರ್ಧ ತಲೆನೋವು, ಜ್ಞಾಪಕಶಕ್ತಿ ಕುಂದಿಹೋಗುವುದು, ಕೂದಲು ಉದುರಿ ಹೋಗುವುದು, ತಲೆ ತಿರುಗುವದು, ಕೂದಲಿನ ಕಪ್ಪು ಬಣ್ಣವನ್ನು ಹೆಚ್ಚಿಸಿ ಉದ್ದವಾಗಿಯೂ ಮೃದುವಾಗಿಯೂ ಮಾಡುವುದು ಬಾಟ್ಲಿ 1ಕ್ಕೆ ಆಣೆ 12.

9. ದಂತಮಂಜನ — (ಕರ್ಪೂರ ಮಿತ್ರ) ಹಲ್ಲಿನ ಕ್ರಿಮಿ ವಸಡುಗಳ ಬೀಗು, ಕೀವು ಯಾ ರಕ್ತ ಬರುವುದು, ಮುಂತಾದ ದಂತ ಸಂಬಂಧವಾದ ಸರ್ವ ಬಾಧೆಗಳನ್ನು ಶಾಂತಪಡಿಸುತ್ತದೆ. ಕರಡಿಗೆ 1ಕ್ಕೆ ಆಣೆ 2

ವಿಳಾಸ — **ಮೂಲ್ಕಿ ಗಣಪಯ್ಯ ಎಂಡ್ ಸನ್ಸ್,**
ನೇಟಿವ್ ಡಾಕ್ಟರ್ಸ್, ಮಂಗಳೂರು ದ. ಕ.

ಇಲ್ಲಿ ಬನ್ನಿ! ಬೆಲೆ ನೋಡಿ! ಸಾಮಾನುಗಳನ್ನು ಪರೀಕ್ಷಿಸಿರಿ!

ಶ್ರೀ

ಗಜಾನನ ಮೆಡಿಕಲ್ ಹೋಲ್

ಬಹು ನೂತನ ಅಲೋಪತಿ ಮತ್ತು ಹೋಮಿಯೋಪತಿ
ಔಷಧ ಮಂದಿರ, ರಥಬೀದಿ, ಮಂಗಳೂರು

ಇಲ್ಲಿಗೆ ಒಂದು ಸಾರಿ ಬಂದು ಪರೀಕ್ಷಿಸಿ!
ಆ ಮೇಲೆ ನೀವು ಬೇರೆಕಡೆ ಹೋಗಲಾರಿರಿ!!

ನಮ್ಮಲ್ಲಿ ಎಲ್ಲಾ ವಿಧವಾದ ಔಷಧ ದ್ರವ್ಯಗಳೂ ಪೇಟೆಂಟ್ ಇಂಗ್ಲೀಷ ಔಷಧಗಳೂ ಸುಗಂಧ ದ್ರವ್ಯಗಳೂ ಸೋಪುಗಳೂ ಫೌಂಟನ್‌ಪೆನ್‌ಗಳೂ ಥರ್ಮಾಮೀಟರ್ ಎಂಬ ಅತ್ಯುತ್ತಮ ಉಷ್ಣಮಾಪಕ ಯಂತ್ರಗಳೂ, ರಬ್ಬರಿನ ಹೊಟ್ ವಾಟರ್ ಬೇಗುಗಳೂ ಐಸ್‌ಕ್ಯಾಪ್ ಮುಂತಾದ ಸರ್ವ ವಿಧವಾದ ಚಿಕಿತ್ಸಕ ಸಾಮಗ್ರಿಗಳೂ ಸ್ಟವ್ ಮುಂತಾದವುಗಳಿಗೆ ಉಪಯುಕ್ತವಾದ ಸ್ಪಿರಿಟ್ ದ್ರವವೂ ಸೀಲಗಿರಿಯ ಎಣ್ಣೆ ಎಂಬ ಯೂಕಲಿಪ್ಟಸ್ ತೈಲವೂ ಬಹಳ ಸುಲಭ ಬೆಲೆಗೆ ತಾಜಾ ರೀತಿಯಲ್ಲಿ ದೊರೆಯುವವು

ಹೋಮಿಯೋಪತಿ ಮತ್ತು ಬಿಶ್ಯೂ ಔಷಧಗಳು

ನಿಮಗೆ ತಾಜಾ ಆಗಬೇಕಾದರೆ ನಮ್ಮಲ್ಲಿ ಬನ್ನಿ!

ಬಡವರಿಗೋಸ್ಕರ ಧರ್ಮಾರ್ಥ ಚಿಕಿತ್ಸೆ

ಪ್ರತಿನಿತ್ಯವೂ ಬೆಳಗ್ಗೆ ೯ ಗಂಟೆಯಿಂದ ೧೦ ಗಂಟೆಯ ವರೆಗೆ ಬಡವರಿಗೆ ಹೋಮಿಯೋಪತಿ ಮತ್ತು ಬಿಶ್ಯೂ ಔಷಧಗಳನ್ನು ರೋಗಿಯನ್ನು ಪರೀಕ್ಷೆಮಾಡಿ ಧರ್ಮಾರ್ಥವಾಗಿ ಕೊಡುವೆವು

ಈ ಔಷಧಗಳನ್ನು ಶಾಸ್ತ್ರೀಯವಾಗಿ ತಯಾರಿಸುವುದಕ್ಕೆ ನಮ್ಮಲ್ಲಿ ೨೦ ವರ್ಷಗಳ ಅನುಭವವುಳ್ಳವರಿರುವರು

ನಮ್ಮಲ್ಲಿ ಔಷಧಗಳು ಹಗಲಿರುಳು ದೊರೆಯುವವು

ಸುಲಭ ಬೆಲೆ! ನಗದು ವ್ಯಾಪಾರ! ರೋಗಗಳು ಗುಣವಾಗುವುದು ಬೇಗ!

ಇಲ್ಲಿ ಒಂದುಸಾರಿ ಪರೀಕ್ಷಿಸಿ!

ಎಮ್. ರಾಮ ಕಾಮತ್,
ಪ್ರೊಪ್ರೈಟರ್.

ಲೂಯಿಸರ ಎಲಿಕ್ಸಿರ್ ಫೋರ್ ಹೆಲ್ತ್.

ಎಂಬುವ ಪಾನಕವು ಚಾ ಮತ್ತು ಕಾಫಿಗಳಿಗಿಂತ ಅತ್ಯಂತ ಹಿತಕರವಾದ ಪಾನವಾಗಿದ್ದು ಬಹುಮೂತ್ರಪೀಡೆ ಬಾರದಂತೆ ಆರೋಗ್ಯ ಕಾಪಾಡುತ್ತದೆ ಬಾಯಾರಿಕೆ ತಗ್ಗಿಸುತ್ತದೆ ಮೂತ್ರದ ಹಲವು ದೋಷಗಳನ್ನು ಹೋಗಲಾಡಿಸುತ್ತದೆ. ಒಮ್ಮೆ ಉಪಯೋಗಿಸಿದರೆ ಮತ್ತೆ ಇದನ್ನು ಬಿಡರು ಪರೀಕ್ಷಾರ್ಥವಾಗಿ ಒಂದು ಸೀಸೆ ತರಿಸಿರಿ

8 ಔನ್ಸಿನ ಸೀಸೆಗೆ ಕ್ರಯ ರೂ 2–8–0 ಮಾತ್ರ

ಡಾಯಬೆಟೋನ್.

ಇದು ಬಹುಮೂತ್ರದ ಪೀಡೆಗೆ ಅತ್ಯುತ್ತಮ ಔಷಧ. ಪೂರ್ಣ ಗುಣವಾಡುತ್ತದೆ ರೋಗಿಗಳಿಗೆ ಅಮೃತಪ್ರಾಯವಾಗಿದೆ. 8 ಔನ್ಸಿನ ಸೀಸೆಗೆ ರೂ 5 ಮಾತ್ರ. ಅಂಚೆಹಾಸಲು ವಗೈರೆ ಇದರಲ್ಲಿ ಸೇರಿಲ್ಲ ಸೇವನೆಯ ಸೂಚನೆಗಳು ಸೀಸೆಯೊಡನೆ ಸಿಗುವುವು

P. M. Kamath & Co.
Chemists & General Merchants,
New Court Road, MANGALORE

ಅಥವಾ ಕುಂದಾಪುರದಲ್ಲಿ ಈ ಔಷಧವನ್ನು ತಯಾರಿಸುವ ಮಿ! ಕೆ ಆರ್ ಲೂಯಿಸರನ್ನು ವಿಚಾರಿಸಿದರೆ ಈ ಔಷಧವನ್ನು ಹೊಂದಬಹುದು

ಪುಸ್ತಕಗಳು.

ವಿಷವೃಕ್ಷ ೧ — ೦ ಸುಭದ್ರ ೦ — ೬ — ೦, ರಾಮಾಯಣ ಸಂಗ್ರಹ ಬಾಲಕಾಂಡ ೦ — ೬ — ೬ ಶ್ಯಾಮಸುಂದರ ೦ — ೧೦ — ೦, ಚಿಕ್ಕ ಉಪಾಧ್ಯಾಯರ ಶುಕಸಪ್ತತಿ ೩ — ೦ — ೦ ಜನಪದ ೦ — ೧೩ — ೦, ಸಚಿತ್ರ ಆಂಗ್ಲ ಭಾಷಾ ಪ್ರಕಾರಕಾ ಮೂರು ಭಾಗಗಳ ಕ್ರಯ ೨ — ೮ — ೦

ತೆಲುಗು ಅಕ್ಷರದ ಸಂಗೀತ ಪುಸ್ತಕಗಳು

ಸಂಗೀತ ಪ್ರದಾಯಿನಿ ೩ — ೩ — ೨, ಗಾಂಧರ್ವ ಕಲ್ಪವಲ್ಲಿ ೩ — ೦ — ೦, ಸಂಗೀತ ಶೃತಿದರ್ಪಣ ಪ್ರಥಮ ಭಾಗ ೨ — ೨ — ೯ ಎರಡನೇ ಭಾಗ ೨ ೩ ೦, ಸಂಗೀತ ಸ್ವರ ಪ್ರಸ್ತಾರಸಾಗರ ೫ — ೮ — ೦ ಅಡ್ವಾನ್ಸ್ ಅವಶ್ಯಕ.

ವಿಳಾಸ —
ಎಚ್. ಎಸ್. ರಾವ್. ಬ್ರದರ್
ಚಿಕ್ಕಪೇಟೆ, ಬೆಂಗಳೂರು ಸಿಟಿ

ಪ್ರಖ್ಯಾತಿಪಟ್ಟ

ಮಂಗಳೂರು ನಶ್ಯದ ಹುಡಿ.

ಸೊಗಸಾದ ಹೊಗೆಸೊಪ್ಪನ್ನು ಉಪಯೋಗಿಸಿ ಒಳ್ಳೇ — ಅನುಭವಸ್ಥರಿಂದ ತಯಾರಿಸಲ್ಪಡುತ್ತದೆ. ಈ ನಶ್ಯವು ಒಂದೆರಡು ತಿಂಗಳವರೆಗಾದರೂ ಕೆಡುವುದಿಲ್ಲ.

ರಾತ್ತಲು 1ಕ್ಕೆ ಕ್ರಯ 8 — 4 — 0. ಹೆಚ್ಚಿಗೆ ತೆಗೆಯುವವರಿಗೆ ರೂ 3 ನಾಸಿಕ ಚೂರ್ಣ ಇದು ಕಂಠದ ಮೇಲಿನ ಯಾವತ್ತು ರೋಗಗಳನ್ನು ಗುಣಪಡಿಸುತ್ತದೆ ತೊಲೆ 1ಕ್ಕೆ ಕ್ರಯ 0-8-0 [illegible] ಸ್ಯಾಂಪಲನ್ನು ಅಪೇಕ್ಷಿಸುವವರು 2 ಆಣೆ ಸ್ಟ್ಯಾಂಪನ್ನು ಕಳುಹಿಸುವದು ರಖಂ ಪಡೆಕೊಳ್ಳುವವರಿಗೆ ಯೋಗ್ಯವಾದ ಕಮ್ಮಿಶನ್ ದೊರಕುವುದು ನಮ್ಮ ವಿಳಾಸ —

ಎಮ್. ಪದ್ಮನಾಭ ಭಂಡಾರಿ ಎಂಡ್ ಕೊ.

ಜನ್‌ಟಲ್‌ಮೆನ್ ಪಾಕೆಟ್ ವಾಚ್.

ಈ ಗಡಿಯಾರವು ಅಮೇರಿಕಾ ದೇಶದಲ್ಲಿ ತಯಾರಾದದ್ದು. [illegible] ಚಕ್ರಗಳಲ್ಲಿ [illegible] ಧೂಳು ಸೇರದಂತೆ [illegible] ಗ್ಲಾಸ್‌ದಿಂದ್ದು ಇರುವದು. [illegible] ರಲ್ಲಿ ಯಾರೇ [illegible] ಘಂಟೆಯನ್ನು ಬೇಗನೆ ಗುರುತು ಹಿಡಿಯಬಹುದು. ಈ [illegible] ವರಿಗೆ ಒಂದು ಸರಪಳಿ, ಅಂದ, ಪೆಟ್ಟಿಗೆ, ಬಂದ್ [illegible] ಗಡಿಯಾರದ ಗ್ಲಾಸು ಇನಾಮಾಗಿ ಕೊಡುವೆವು.

ಕ್ರಯ ಗಡಿಯಾರ 1ಕ್ಕೆ ರೂ. 4—8—0

ಜಗತ್ಪ್ರಸಿದ್ಧವಾದ ಅನೇಕ ರೋಗಗಳಿಗೆ ಒಂದೇ ಔಷಧವು.

ಇಂಡಿಯಾ ಸರಕಾರದಲ್ಲಿ [illegible] ನೇ ಇಸವಿಯ [illegible] ನೇ

ಆಕ್ಟಿನಂತೆ ರಿಜಿಸ್ಟರ ಮಾಡಲ್ಪಟ್ಟ

ಅರ್ಕುಶಫಾ ಅಥವಾ ಆರೋಗ್ಯಬಿಂದು.

ಈ ಅರ್ಕುಶಫಾ ಎಂಬ ಔಷಧವು ಯಾವತ್ತು ರೋಗಗಳ್ಗೆ ಮಹದೌಷಧಿಯಾಗಿ [illegible] ನೇ ಇಸ್ವಿಯಿಂದ [illegible] ನೇ ಇಸವಿಯವರೆಗೆ ಮೂವತ್ತು ಸಾವಿರ ಬಾಟಲಿಗಳು ಖರ್ಚಾದವು ಮತ್ತು [illegible] ನೇ ಇಸವಿ ಅಕ್ಟೋಬರ್ ತಿಂಗಳಲ್ಲಿ ಇನ್‌ಫ್ಲುಯಂಜಾ ಜ್ವರಕ್ಕೆ ಒಂದೇ ತಿಂಗಳಲ್ಲಿ ಒಂಭತ್ತು ಸಾವಿರ ಬಾಟಲಿಗಳು ಖರ್ಚಾದವು, ಅಂತು ಈವತ್ತಿನ ವರೆಗೆ ಸಣ್ಣ ದೊಡ್ಡ ಬಾಟ್ಲಿಗಳು ಕೂಡಿ ಮೂವತ್ತೊಂಭತ್ತು ಸಾವಿರ ಬಾಟಲಿಗಳು ಖರ್ಚಾದವು. ಅಂದ ಮೇಲೆ ಈ ಔಷಧವು ಎಷ್ಟು ಮೌಲ್ಯವಾನ ಅದೆ ಇದು ಯಾವತ್ತರು ತಾವೇ ಅನುಭವಕ್ಕೆ ತಂದು ಪ್ರತಿಯೊಬ್ಬರು ತಮ್ಮ ಸಂಗ್ರಹದಲ್ಲಿ ಒಂದು ಬಾಟ್ಲ ಇಟ್ಟುಕೊಂಡು ಅಮೃತವೇ ಎಂದು ತಿಳಿದು ಸ್ವೀಕಾರಮಾಡುತ್ತಿರಬೇಕು. ಈ ಆರೋಗ್ಯಬಿಂದು ಇದೀ ಕರ್ನಾಟಕ ದೇಶಕ್ಕೆಲ್ಲಾ ಹೊಸಾ. ರೋಗಿಗಳು ಈ ಅರ್ಕುಶಫಾದಿಂದಲೇ ಗುಣಹೊಂದಿದ ಬಗ್ಗೆ ಮತ್ತು ಯಾವತ್ತು ರೋಗಗಳ್ಗೆ ಉಪಯೋಗ ಆದಪ್ರಯುಕ್ತ ಎಷ್ಟೋ ಅನಾಮ ಸರ್ಟಿಫಿಕೇಟುಗಳು ಸಹ ದೊರೆದಿರ ಪ್ರವ ಅವು ಬರೆಯಲಿಕ್ಕೆ ಕಾಗದವು ಸಾಲದು. ಇಂಥ ಅಮೂಲ್ಯವಾದ ಈ ಔಷಧವನ್ನು ಎಲ್ಲರೂ ಸ್ವೀಕರಿಸಿ ರೋಗರಹಿತರಾಗುವಿರೆಂದು ನಂಬುತ್ತೇನೆ. ರೋಗದ ಪರೀಕ್ಷೆಯ ಸಲುವಾಗಿ ಬೇರೆ ಡಾಕ್ಟರ ಮತ್ತು ವೈದ್ಯರ [illegible] ಈ ಆರೋಗ್ಯಬಿಂದು [illegible] ದ ಉಪಯೋಗ ಕೆಳಗೆ ಬರೆದ ರೋಗಗಳ ಮೇಲೆ [illegible] ಮಾಡಿಕೊಳ್ಳಬೇಕು.

ರೋಗದ ನಾಮಗಳು

ಕ್ಷಯರೋಗ, ಹೃದಯರೋಗ, ಪಾಂಡುರೋಗ, ಗುಲ್ಮರೋಗ, ಮೂಲರೋಗ, ವಿಷಜ್ವರ, (ಕಾಲರಾ), ಪ್ಲೇಗು, ಚಳಿಜ್ವರ, ವಿಷಮಜ್ವರ, ಇನ್‌ಫ್ಲುಯಂಜಾ ಜ್ವರ, ಅನೇಕ ಪ್ರಕಾರದ ಜ್ವರ, ಗಂಡಮಾಲೆ, [illegible] ದೊಡ್ಡ ರೋಗವು [illegible] ಮತ್ತು [illegible] ಕೆಮ್ಮು, ಶ್ವಾಸ, [illegible] ಆಜೀರ್ಣ, ಹೊಟ್ಟೆಶೂಲೆ, ತಲೆಶೂಲೆ, [illegible] ಬರುವ ಕೆಮ್ಮು, ತಲೆತಿರುಗುವಿಕೆ, [illegible] ಕೂಡಿ ಹಲವು ರೋಗಗಳು, [illegible] ಮತ್ತು ಸರ್ಪದಂಶ [illegible] ಅನೇಕ ರೋಗಗಳು [illegible] ಗುಣವಾಗುತ್ತವೆ. ಈ ಆರೋಗ್ಯಬಿಂದು [illegible] ಕ್ರಯ [illegible] ಬಾಟ್ಲಿಗೆ [illegible] ರೂಪಾಯಿ [illegible] ಬಾಟ್ಲಿ ತೆಗೆದುಕೊಂಡರೆ [illegible] ವರು ಒಂದು ಬಾಟ್ಲ [illegible] ಬಾಟಲಿ ಕಮಿಷನ್ ಕೊಡುತ್ತೇವೆ. ಇದಕ್ಕೆ ಖರ್ಚು ಅಂಚೆ ಅವರೇ ಕೊಡುವರು. ನಮ್ಮ ಔಷಧವು [illegible] ಶಾಖೆಗಳಲ್ಲಿ ಸಿಕ್ಕುವುದು. [illegible] ನಮ್ಮ ವಿಳಾಸ ಇಂಗ್ಲೀಷ್ ಅಥವಾ ಕನ್ನಡದಲ್ಲಿ ಹೆಸರು ಮತ್ತು ಪೋಸ್ಟ ವಗೈರೆ ಸ್ಪಷ್ಟವಾಗಿ ಬರೆಯುತ್ತಿರಬೇಕು.

ಹೆಚ್. ಎಂ. ಮುಲ್ಲಾ, ಸಂಪಾದಕ ಅರ್ಕುಶಫಾ,

33 ಹೆಡ್ ಆಫೀಸ್ ಶಹಾಪೂರ, (ಬೆಳಗಾಂವ)

ಗುಪ್ತ ಪ್ರಲಾಪ

[illegible] ವರುಷಗಳಿಂದಲೂ, ವೈದ್ಯರಿಂದ ನಡೆದು, ಬರುತ್ತಿರುವ [illegible] ವಾಡದೇಶದ ಮಹಾರಾಜರ [illegible] ದರಾದ ರಾಜವೈದ್ಯ ನಾರಾಯಣ [illegible] ಕೇಶವಜೀಯವರ ಲೋಕ ಪ್ರಸಿದ್ಧಿಯಾದ

ಮದನ ಮಂಜರಿ ಮಾತ್ರೆಗಳು

[illegible] ಮಾತ್ರೆಗಳನ್ನು ಸೇವಿಸುವ [illegible] ದ ಧಾತುಪುಷ್ಟಿ ರಕ್ತಪುಷ್ಟಿಯನ್ನು [illegible] ಗನೆ ಕೊಡುವದು ಮತ್ತು ಧಾತುವು ಹೋಗುತಿದ್ದರೂ, ಹಸಿವಿಲ್ಲದಿದ್ದರೂ, ಕಾಲಕಾಲಕ್ಕೆ ಮಲವಿಸರ್ಜನೆಯಾಗದಿದ್ದರೂ, [illegible] ಕಾಲು ಸೊಂಟದಲ್ಲಿ ನೋವಿದ್ದರೂ ಗುಣಮಾಡುವುದು. ಈ ಮಾತ್ರೆಗಳನ್ನು ವನಸ್ಪತಿ ಮೂಲಿಕೆಗಳಿಂದ ತಯಾರಿಸಿದ್ದಾಗಿದೆ.

ವಿಳಾಸ:— ಕ್ರಯ ಡಬ್ಬಿ ೧ಕ್ಕೆ ೧—೦—೦

ರಾಜವೈದ್ಯ ನಾರಾಯಣಜೀ, ಕೇಶವಜೀ,

27 ಚೈನ ಬಜಾರು ರೋಡ್,

ಮದರಾಸು

ರೇಡಿಯಂ ರಿಸ್ಟ್‌ಲೆಟ್ ವಾಚ್.



ಈ ಗಡಿಯಾರವು ಅಮೇರಿಕಾ ದೇಶದಲ್ಲಿ ತಯಾರಾದದ್ದು. ಇತರ ಗಡಿಯಾರಗಳಲ್ಲಿ ರಾತ್ರೆವೇಳೆ ಘಂಟೆ ನೋಡಬೇಕಾದರೆ ಬೆಳಕು ಅವಶ್ಯಕವಾಗಿ ಬೇಕು. ಆದರೆ ಈ ಗಡಿಯಾರಗಳಿಗೆ ಬೆಳಕು ಬೇಕಾಗಿಲ್ಲ. ಎಷ್ಟು ಕತ್ತಲಾಗಿರುತ್ತೋ ಅಷ್ಟು ಚೆನ್ನಾಗಿ ಸೂರ್ಯನಂತೆ ಪ್ರಕಾಶವಾನವಾಗಿ ಘಂಟೆ ತೋರಿಸುವದು. ಹಗಲುವೇಳೆ ಇತರ ಗಡಿಯಾರಗಳಂತೆಯೇ ಇರುವದು. ನಮ್ಮಲ್ಲಿ ಕೆಲವೇ ಮಾತ್ರ ಇರುವೆವಂದ ಬೇಕಾದವರು ಬೇಗನೆ ಬರೆಯಿರಿ. ಕೈಗೆ ಕಟ್ಟುವ ಇಂಗ್ಲೀಷು ಪಟ್ಟಿ ಸಹಿತ ಗಡಿಯಾರ 1ಕ್ಕೆ ರೂ. ೬—೮—೦

ವಿಳಾಸ:— ಎಸ್. ಪಾಲ್ ಅಂಡ್ ಕೊ,

ಪೋಸ್ಟ್‌ಬಾಕ್ಸ್ ನಂ. 542

ಪಾರ್ಕ್‌ಟೌನ್ ಮದರಾಸು

ಮದ್ರಾಸ್ ಸರ್ಕಾರದವರಿಂದ 1920ನೇ ವರ್ಷದ ಶಾಲೆಗಳಿಗೆ ನೇಮಿಸಲ್ಪಟ್ಟಿರುವ

ಕನ್ನಡ ಪಾಠಪುಸ್ತಕಗಳು

	ರೂ.	ಆ.	ಪೈ.		ರೂ.	ಆ.	ಪೈ.
ರಾಮಾಯಣ ಸಂಗ್ರಹ— ಬಾಲಕಾಂಡ.	0	8	0	ಚಂದ್ರಹಾಸ	0	4	0
ಸುಭದ್ರೆ	0	6	0	ಗುಣನಿರೂಪಣೆ	0	8	0
ಪಂಪಮಾಲೆ	0	12	0	ನೀತಿಚಿಂತಾಮಣಿ ಭಾಗ I	0	4	0
ಪದ್ಯಸಾರ ಭಾಗ 1	0	8	0	,, ,, II	0	3	0
ಅಕ್ಬರ್ ಚರಿತ್ರೆ	1	1	0	,, ,, III	0	4	6
ರಾಜಶೇಖರ ಚರಿತ್ರೆ	1	0	0	ಹೊಸ ಪುಸ್ತಕಗಳು			
ಸುಮತಿಮದನಕುಮಾರ				ಸುಶೀಲ	0	6	[illegible]
ಚರಿತ್ರೆ I	0	8	6	ಸುಕೀಲು	0	1	6
ಅಧಿಕಪಾಠಗಳ ಪುಸ್ತಕ	0	6	0	ಚಂದ್ರಮುಖಿ	0	8	0
ಸಾವಿತ್ರೀ ಚರಿತ್ರೆ	0	2	3	ಸಂತಾಪಕ	0	8	0
ರಮಾನಂದ	0	10	0	ಅಬಲಾಸಚ್ಚರಿತ್ರ ರತ್ನಮಾಲೆ	2	[illegible]	0
ಧ್ರುವ	0	13	0	ಸಿಮಾಲಿ	0	1[illegible]	0
ಪ್ರಬಂಧಮಂಜರಿ	0	14	0	ಪದತ್ರಯ (ಬಾಲವ್ಯಾಕರಣ)	0	3	6
ಪದಾರ್ಥವಿಜ್ಞಾನಶಾಸ್ತ್ರ	0	14	0	ಹಿಂದೂ ವ್ರತವಿವೇಕ	0	10	0
ಜ್ಯೋತಿಶ್ಶಾಸ್ತ್ರ	1	0	0	ಪದ್ಮಿನಿ	0	12	6
ಪ್ರಹ್ಲಾದ	0	2	0	ಕಾತ್ಯಾಯಿನಿ	0	8	
ಧ್ರುವ	0	4	0	ಮಹಾರಾಣಿ ಲಕ್ಷ್ಮೀಬಾಯಿ	0	12	0

ಇನ್ನುಳಿದ ಎಲ್ಲಾ ಸ್ಕೂಲ್ ಪುಸ್ತಕಗಳೂ ನಮ್ಮಲ್ಲಿ ಸಲಭ ಬೆಲೆಗೆ ದೊರೆಯುತ್ತವೆ

ಎಂ. ಎಸ್. ರಾವ್ ಕಂಪೆನಿ,

ಪುಸ್ತಕವ್ಯಾಪಾರಿಗಳು, ಬೆಂಗಳೂರು ಸಿಟಿ

"ವೈದ್ಯಾಮೃತ ಮಂದಿರಂ"

ಎಂಬ

ನಮ್ಮ ಆಯುರ್ವೇದ ವೈದ್ಯಶಾಲೆಯಲ್ಲಿ ಶಾಸ್ತ್ರೋಕ್ತವಾಗಿ ತಯಾರಿಸಲ್ಪಟ್ಟ ಎಲ್ಲಾ ತೈಲಗಳೂ, ಆಸವಾರಿಷ್ಟಗಳೂ, ಕಷಾಯಗಳೂ, ದ್ರವದ್ರಾವಕಗಳೂ, ಭಸ್ಮಗಳೂ, ಚೂರ್ಣಗಳೂ, ಮಾತ್ರೆಗಳು ಇತ್ಯಾದಿ ಔಷಧಿಗಳೂ ಮತ್ತು ಕಾಶ್ಮೀರ, ನೇಪಾಲ ದೇಶಗಳಿಂದ ತರಿಸಿದ ಕಸ್ತೂರಿ, ಪಚ್ಚ ಕರ್ಪೂರ ಕುಂಕುಮಕೇಸರ ಮುಂತಾದವುಗಳು ಸುಲಭವಾದ ಕ್ರಯಕ್ಕೆ ದೊರಕುತ್ತವೆ. ಪರಸ್ಥಳ ದವರು ರೋಗ ಪ್ರಕೃತಿಯನ್ನು ವಿಶದವಾಗಿಬರೆದು ತಿಳಿಸಿದರೆ ಅಗತ್ಯವಿರುವ ಔಷಧಿಗಳನ್ನು ಅನುಪಾನಪತ್ರಿಕೆ ಸಮೇತ ವಿ. ಪಿ. ಮೂಲಕ ಕಳುಹಿಸುವೆವು

ವಿಳಾಸ — ಕೆ. ಕೆ. ನಾಯರ್

ಎಂಡ್ ಬ್ರದರ್ಸ್,

ವೈದ್ಯಾಮೃತ ಮಂದಿರಂ,

ತಿರೂರಂಗಡಿ, ದ. ಕನ್ನಡ

ಕ್ಷಿಪ್ರಗುಣಕಾರಿ' ಮಹೌಷಧ'

ಸಿರಪ್ ವಾಸಕಾ

ಕೆಮ್ಮು, ತೀವ್ರ ಜ್ವರ ಪಕ್ಕೆಗಳ ನೋವು, ರಕ್ತಕಾಸ, ಕ್ಷಯ, ಉಬ್ಬಸ, ಬ್ರಾಂಕೈಟಿಸ್ ನ್ಯುಮೋನಿಯಾ ಮುಂತಾದ ಶ್ವಾಸಕೋಶದ ಯಾವತ್ತು ರೋಗಗಳಿಗೆ ಅತ್ಯುತ್ತಮವಾದ್ದು. ಪ್ರಾಚೀನಾರಣ್ಯ ಕಾಸರೋಗಗಳಿಗೆ ವಿಶೇಷ ಗುಣಕಾರಿ ಎಂದ ಹೆಸರುಗೊಂಡ 'ಆಡಸೋಗೆ' ಎಂಬ ಗಿಡಮೂಲಿಕೆಯಿಂದ ತಯಾರಿಸಲ್ಪಟ್ಟದ್ದು. ಇದರಿಂದ ದೂಷಿತವಾದ ಶ್ಲೇಷ್ಮವು ಬೇಗನೆ ಕಳೆದುಹೋಗುವದರಿಂದ ಕೆಮ್ಮು ಬರ ವಾಗ ಕಷ್ಟವಾಗುವದಿಲ್ಲ. ರುಚಿಯಲ್ಲಿ ಸಿಹಿಯಾಗಿರುವದರಿಂದ ಮಕ್ಕಳಿಗೆ ಇದರ ಸೇವನೆಯಲ್ಲಿ ಬಹಳ ಪ್ರೀತಿ.

ಬಾಟ್ಲಿ 1ರ ಕ್ರಯ ಬರೇ ಒಂದು ರೂಪಾಯಿ ಮಾತ್ರ.

ಒಂಗಾಲ ಕೆಮಿಕಲ ಮತ್ತು ಫಾರ್ಮಾಸ್ಯೂಟಿಕಲ ವರ್ಕ್ಸ್ ಕಂಪೆನಿ ಲಿಮಿಟೆಡ್ ಕಲ್ಕತ್ತಾ

ಸೋಲ ಏಜಂಟ್ಸ್ —

[illegible] ಎ. ಪೈ ಬ್ರದರ್ಸ್, ಉಡುಪಿ

ಮಿಠಾಕಾರ್ಕರ ಬ್ರದರ್ಸ್, ಮಂಗಳೂರು,

ಇವರಲ್ಲಿಯೂ ಸಿಗುವದು.

ಮುಫತ್ತು!! ಇಂಥಾದ್ದು ಬೇಕು

ಗಲ್ಬ್ ಜೋಬಿನ್

ಸರಕಾರದಲ್ಲಿ ರಿಜಿಸ್ಟರು ಮಾಡಲ್ಪಟ್ಟ ನಂ. 253

ಒಂದಾಣೆ ಸ್ಟ್ಯಾಂಪಿನೊಳಗೆ ರುಜುವಾತು ತಿಕ್ಷ್ಯೆಯುಳ್ಳ [illegible] — ಈ 32 ಮಾತ್ರೆಗಳುಳ್ಳ ಬಾಟ್ಲಿಗಳನ್ನು ಖರೀದಿಸ ವವರಿಗೆ ಕೊಡಲ್ಪಡುತ್ತದೆ. ಈ ಮಾತ್ರೆಗಳನ್ನು ಸೇವಿಸಿ ಗುಣಹೊಂದದಿದ್ದರೆ ಮನಸಾಕ್ಷ್ಯಯಾಗಿ ಆ ರಶೀದಿಯೊಳಗೆ ದಸ್ತಖತುಮಾಡಿ ಒಂದು ತಿಂಗಳೊಳಗಾಗಿ ವಾಪಸ್ಸು ಕೊಟ್ಟರೆ ಬಾಟ್ಲಿಯ ಕ್ರಯವನ್ನು ವಾಪಸ ಮಾಡುತ್ತೇವೆಂದು ಪ್ರತಿಜ್ಞೆಯನ್ನು ನಾವು ದೃಢವಾಗಿ ಮಾಡುತ್ತೇವೆ.

ಗುಲ್ಬನ್ ಜೋಬಿನ್.

ಶಕ್ತಿವರ್ಧಕ! ಧಾತುಪುಷ್ಟಿಕ!! ರೋಗನಿವಾರಕ!!!

ಈ ಮಾತ್ರೆಗಳು ಪ್ರತಿದಿನ ಪ್ರಕಟವು ದಿವಸದಲ್ಲಿಯೇ ಅಶ್ಚರ್ಯಕಾರಕವಾದ ಗುಣಗಳನ್ನು ತೋರಿಸುತ್ತವೆ. ಕಳೆಗುಂದಿದ ಶರೀರಗಳಿಗೆ ಪುಷ್ಟಿ ಮತ್ತು ಕಾಂತಿಯನ್ನು ಕೊಟ್ಟು, ಶರೀರದಲ್ಲಿ ಧಾತುಪುಷ್ಟಿ ಸುಖಾನಂದಗಳನ್ನು ಕೊಡುತ್ತವೆ. ಕಟಿಶೂಲ, ವಾಯುರೋಗ, ಕ್ಷಯ, ಪ್ರಮೇಹ, ಶ್ವಾಸ, ಉದರಶೂಲೆ, ಅಜೀರ್ಣ, ಮೂತ್ರರೋಗ, ಮುಖಪುಷ್ಟಿ, ಜ್ವರಗಳು, ಮೂಲವ್ಯಾಧಿ! ಅಲ್ಲದೆಯೇ ಮುಂತಾದ ರೋಗಗಳನ್ನು ನಿವಾರಿಸುತ್ತವೆ, ರಕ್ತಶುದ್ಧಿಯೂ ವೃದ್ಧಿಯೂ ತಂದು ವೀರ್ಯವ್ಯಾಧಿಗಳನ್ನು ನಿವಾರಣೆಮಾಡುತ್ತವೆ.

ಬಾಟ್ಲಿ 1ಕ್ಕೆ ರೂ. 2, 3ಕ್ಕೆ ರೂ. 2—10—0. ವಿ. ಪಿ. ಆ ಬೇರೆ

ಏಜಂಟರುಗಳು ಬೇಕು. ಎಲ್ಲ ಸ್ಥಳಗಳಲ್ಲಿ ಸಿಕ್ಕುವದು.

ವಿಳಾಸ — ದಿ. ಗುಲ್ಬನ್ ಜೋಬಿನ್ ಕಂಪೆನಿ, ಬೊಂಬಾಯಿ 3

Mr. ALEX ALVAREZ Dentist.

OF MANDALAY UPPER BURMA

Will attend patients here for the following in Particular —

Charges Moderate

1 Painless extraction of teeth 2 Making of false teeth 3 Filling the teeth with silver, gold, porceline 4 Gold bridge and Crowns 5 Porceline Crowns 6 Cleaning the teeth 7 Pyorrhoea treatment

Can be consulted at —

The Electro Homoeopathic Dispensary

Hampankatta, MANGALORE

ಮಿ. ಅಲೆಕ್ಸ್ ಅಲ್ವರಿಸ್ ದಂತವೈದ್ಯ

ಇವರು ಹಲ್ಲು ಬೇನೆಯಿಂದ ನರಳುತ್ತಿರುವವರ ಹಲ್ಲುಗಳನ್ನು ಸ್ವಲ್ಪವೂ ನೋಯದಂತೆ ಬಾಧಿಸದೆ ಕಿತ್ತು ತೆಗೆಯುವರು, ಕೃತ್ರಿಮ ಹಲ್ಲುಗಳನ್ನು ಮಾಡಿ ಇಡುವರು, ಹಲ್ಲುಗಳಲ್ಲಿ ಉಂಟಾದ ರಂಧ್ರಗಳನ್ನು ಬೆಳ್ಳಿ ಬಂಗಾರ, ಪಿಂಗಾಣಿ ಇವುಗಳಿಂದ ಮುಚ್ಚುವರು. ಬಂಗಾರದ ಕೃತ್ರಿಮ ದಂತಪಾಲಿಯನ್ನು ಟೊಪ್ಪಿ ಸಹಿತ ಜೋಡಿಸುವರು, ಪಿಂಗಾಣಿ ದಂತಪಾಲಿಯನ್ನು ಇಡುವರು ತ ತ. ಹಲ್ಲುಗಳನ್ನು ಶುಚಿಮಾಡುವರು ಮುಂತಾದ ದಂತಚಿಕಿತ್ಸೆಯನ್ನು ಕಲಿತು ಚಿಕಿತ್ಸೆಯನ್ನು ಮಾಡುವರು. ಇವರು ಹಂಪನಕಟ್ಟೆಯಲ್ಲಿರುವ ಮಿ. ಎ. ಫೆರ್ನಾಂಡಿಸ್, ಇಲೆಕ್ಟ್ರೋ ಹೋಮಿಯೊಪತಿ ಡಿಸ್ಪೆನ್ಸರಿಯಲ್ಲಿ ವಾಸ್ತವ್ಯ ಮಾಡುತ್ತಾರೆ.

ಗೊನೊಕ್ಯೂರಾ.

ಮೇಹ ರೋಗಕ್ಕೆ (Gonorrhea) ಪರಮೌಷಧವು.

ಎಲ್ಲಾ ತರದ ಮೇಹಗಳಲ್ಲಿ, ಧಾತ್ವವಾದ ಕೀವಿನಂಥಾ ಪೋಷವು ಹರಿಯುವದಕ್ಕೂ, ಮೂತ್ರದ್ವಾರದಲ್ಲಿಯ ಉರಿ, ಹಳದಿವರ್ಣದ ಅಥವಾ ಹಸುರುವರ್ಣದ ಕಠಿಣ ಉರಿಯುಳ್ಳ ಮೇಹವು ಹರಿಯುವದಕ್ಕೆ, ಮೂತ್ರವಾಡುವಾಗ ಇಂದ್ರಿಯದಲ್ಲಿ ಉರಿ ಮುಂತಾದ ರೋಗ ಸಮ್ಮಂಧವಾದ ಎಲ್ಲಾ ಚುರುಕುರೋಗಗಳಿಗೆ ಉತ್ತಮ ಔಷಧವು. ಇದರ ಸೇವನೆಯಿಂದ ಎಷ್ಟುಕಾಲದ ಹಳೆ ಮೇಹರೋಗಗಳಾದರೂ

ಖಂಡಿತವಾಗಿ ಗುಣಹೊಂದುವವು.

ಔಷಧ ಸೇವಿಸುವ ಕ್ರಮ— 2 ಘಂಟೆಗೆ ಒಂದಾವರ್ತಿ 1 ಔಂಸ ಔಷಧವನ್ನು ಒಂದು ಚಮಚದಷ್ಟು ನೀರಿನಲ್ಲಿ ಹಾಕಿ ಸೇವಿಸುವದು. ಕ್ರಯ — ರೂ. 1—0—0

ಬೇಕಾದ್ದವರು ಕೆಳಗಿನ ವಿಳಾಸಕ್ಕೆ ಬರಿಯತಕ್ಕದ್ದು

ವಿಳಾಸ— ಎ. ಫೆರ್ನಾಂಡಿಸ್,

ಇಲೆಕ್ಟ್ರೋ ಹೋಮಿಯೊಪತಿ ಡಿಸ್ಪೆನ್ಸರಿ

ಮಂಗಳೂರು

The Canara Bank, Limited, Mangalore.

[illegible] ಬ್ಯಾಂಕ್ ಲಿಮಿಟೆಡ್, ಮಂಗಳೂರು.

[illegible]	ಅಧಿಕಾರಗೊಳಿಸಲ್ಪಟ್ಟ ಪೂರ್ಣವಾಗಿ
[illegible] Capital Rs. 100,000—0—0	ತೆತ್ತ ಮೂಲಧನವು ರೂ. 300,000—0—0
Reserve and other sinking Funds 138,697—7—2	ಕ್ಷೇಮನಿಧಿ ಮತ್ತು ಇತರ ಫಂಡುಗಳು 138,697—7—2

THE BANK RECEIVES FIXED, CURRENT ACCOUNT, & SAVINGS BANK DEPOSITS

[illegible] ಸೇವಿಂಗ್ಸ್ ಬೇಂಕ್ ಠೇವಣಾತಿಗಳೂ ಪಡಕೊಳ್ಳಲಾಗುತ್ತವೆ

For further particulars apply to the Secretary

☞ ವಿಶೇಷ ಮಾಹಿತಿ ಬಗ್ಗೆ ಸೆಕ್ರೆಟರಿಗಳಿಗೆ ಬರಕೊಳ್ಳುವದು.

Canara Bank Ltd.,
Mangalore, 1st September 1920.

K. Venkat Rao,
Secretary

ಪಾಳ್ಯದ ವೆಂಕಟಾಚಲ ಪಂಡಿತರ ಸಿದ್ಧೌಷಧಗಳು.

ಲೋಕಾಮಯಹರ ಕಸ್ತೂರಿ ಮಾತ್ರೆಗಳನ್ನು ಈಗಲಾದರೂ ಪರೀಕ್ಷಿಸಿ ನೋಡಿರಿ!

ಪ್ರತಿವರ್ಷವೂ ಲಕ್ಷಾಂತರ ಸೀಸೆಗಳು ವಿಕ್ರಯವಾಗುತ್ತಿವೆ.

ಇಂಡಿಯಾದವರು ಮಾತ್ರವಲ್ಲ, ಬರ್ಮಾ, ಸಿಲೋನ್, ಮಲೆಯ ಸ್ಟೇಟ್, ಗೋವಾ, ಫೀಜಿಐಲೆಂಡ್, ಆಫ್ರಿಕಾ ಮೊದಲಾದ ಕಡೆಯವರೂ ಕೂಡ ಈ ಸಿದ್ಧೌಷಧಿಯನ್ನು ಉಪಯೋಗಿಸುತ್ತಿರುತ್ತಾರೆ

ಮಹಾಭಾಗ್ಯ, ಹಿಂದೀ ಒಂದು ಲೋಕಾಮಯಹರ ಕಸ್ತೂರಿ ಮಾತ್ರೆಯ ಸೀಸೆಯು ನಿಮ್ಮ ಮನೆಯಲ್ಲಿದ್ದರೆ ಸಮಯವನ್ನು ಕಾದ ತೊರೆಯುತ್ತುತು [illegible] ತಪ್ಪುವುದು

[illegible], ಶೀತವಾಯು, ಅಜೀರ್ಣ, ವಾತ್ಸರವಾಯು, ಜ್ವರ, ಮಂದ ಮಲಬದ್ಧ, ಕೆಮ್ಮು, ಗಸೆಟೀಸ ಬಲಹೀನತೆ ಕೆಟ್ಟ ಹವಾ, ಮತ್ತು ಕೆಡುಕಾದ ನೀರಿನಿಂದುಂಟಾಗುವ ವಿಕಾರ, ಮಕ್ಕಳ ಎಳವು ಜ್ವರ ಕೆಮ್ಮು ವಾಯು ಇನ್ನೂ ಅನೇಕ ರೋಗಗಳನ್ನು ಈ ಸಿದ್ಧೌಷಧ ಆಶ್ಚರ್ಯವಾಗುವಂತೆ ಗುಣಪಡಿಸುತ್ತದೆ

ಪ್ರತಿ 6 ಸೀಸೆಗಳನ್ನು ಒಟ್ಟಿಗೆ ತರಿಸಿದರೆ ಟಪಾಲು ಖರ್ಚು ಸೇರಿ 1 — 8 — 0
ಪ್ರತಿ 12 ಸೀಸೆಗಳನ್ನು ಒಟ್ಟಿಗೆ ತರಿಸಿದರೆ ಟಪಾಲು ಖರ್ಚು ಸೇರಿ 2 — 13 — 0
ಪ್ರತಿ 25 ಸೀಸೆಗಳನ್ನು ಒಟ್ಟಿಗೆ ತರಿಸಿದರೆ ಟಪಾಲು ಖರ್ಚು ಸೇರಿ 5 — 3 — 0

ರಿಜಿಸ್ಟರಾದ ಈ ವ್ಯಾಪಾರದ ಗುರ್ತು ಪ್ರತಿ ಸೀಸೆಯ ಮೇಲೂ ಇರುವುದನ್ನೇ ನೋಡಿ ತೆಗೆದುಕೊಳ್ಳಬೇಕಾಗಿದೆ

ಈ ಅಮೂಲ್ಯವಾದ ಪತ್ರವು ಪ್ರತಿ ಸೀಸೆಯೊಡನೆಯೂ ಇರುವುದು 460 ಮಾತ್ರೆಗಳುಳ್ಳ ಡಬ್ಬಿಗೆ 4 ಆಣೆ ಮಾತ್ರ

ಲಕ್ಷ್ಮೀವಿಲಾಸ ರಸ (ಪ್ಲೇಗಿಗೆ) — ಲಕ್ಷಾಂತರ ಪ್ಲೇಗುರೋಗಿಗಳು ಈ ಲಕ್ಷ್ಮೀವಿಲಾಸ ರಸದಿಂದ ಆರೋಗ್ಯವನ್ನು ಪಡೆದಿರುತ್ತಾರೆ ಒಂದೇ ಒಂದು ಲಕ್ಷ್ಮೀವಿಲಾಸ ರಸದ ಸೀಸೆಯು ನಮ್ಮಲ್ಲಿದ್ದರೆ ಪ್ಲೇಗಿಗೆ ಸರ್ವೋತ್ತಮವಾದ ಸಿದ್ಧೌಷಧಿಯು ಬೇರೊಂದಿಲ್ಲವೆಂದು ತಾವೇ ಹೇಳುವಿರಿ ದಿನಕ್ಕೆ ಮೂರರ ನಾಲ್ಕರ ಜ್ವರಗಳು, ಸನ್ನಿಪಾತ ಜ್ವರಗಳು ಕೂಡಾ ಗುಣವಾಗುತ್ತವೆ ಸೀಸೆಗೆ ರೂ 1 ರಿಕ್ಕೆ ಒಂದು ಇನಾಮು

ತ್ರೀನಿವಾಸತೈಲ — ಕ್ಷೇಗಿನ ಗಡ್ಡೆ ಕರಗುತ್ತದೆ ಸಂದುಗಳ ನೋವು ಸೆಡಲ ಹೋಗುತ್ತದೆ ಸೀಸೆಗೆ 8 ಆಣೆ ರಿಕೆ ಒಂದು ಇನಾಮು

ವೈಶ್ವಾನರಾಸವ — ಸೇವಿಸಿದ ಮೊದಲನೇ ವೇಳೆಯಿಂದಲೇ ವಾಂತಿಭೇದಿ ಶೀತಭೇದಿ ಅಜೀರ್ಣದ ಭೇದಿಗಳ ಗುಣವಾಗುತ್ತಾ ಬರುತ್ತವೆ ಸೀಸೆಗೆ ರೂ 1 ರಿಕ್ಕೆ ಒಂದು ಇನಾಮು

ಬಾಲಸುಧೋದಯ — ಮಕ್ಕಳಿಗೆ ಬಲಕಾರಿ ಸಿಹಿಯಾಗಿರುತ್ತದೆ ಮಂದ ಮಲಬದ್ಧ ಅಜೀರ್ಣದ ಭೇದಿ ಕೈಕಟ್ಟು ಹೊಟ್ಟೆ ದಪ್ಪವಾಗಿರುವುದು ಹಸಿವಿಲ್ಲದಿರುವುದು ಇವೆಲ್ಲವೂ ಗುಣವಾಗಿ ಮಕ್ಕಳು ಪುಷ್ಟರಾಗುತ್ತಾರೆ ಪುಷ್ಟಿಯ ಚಟುವಟಿಕೆ ಸೀಸೆಗೆ ಆಣೆ 12 ರಿಕ್ಕೆ ಒಂದು ಇನಾಮು

ಈ ನಾಲ್ಕಕ್ಕೂ ಟಪಾಲು ಖರ್ಚು ಬೇರೆ

ಸಮಸ್ತ ರೋಗಗಳಿಗೂ ನಮ್ಮಲ್ಲಿ ಆಯುರ್ವೇದೀಯ ಸಿದ್ಧೌಷಧಿಗಳು ದೊರೆಯುತ್ತವೆ ಕ್ಯಾಟಲಾಗು ಉಚಿತ

ವಿಳಾಸ ಶ್ರೀ ಸೀತಾರಾಘವ ವೈದ್ಯಶಾಲಾ ಮೈಸೂರು

ಒಂದು ಕುಪ್ಪಿಯ ಕ್ರಯ ೧೨ ಆಣೆ. ಮಂಗಳೂರು ಏಜಂಟ್,

ಕೇ. ಟೀ. ಡೋಂಗರೆ ಕಂಪೆನಿ, ದಿ, ಯೂನಿಯನ್ ಮಾರ್ಟ್, ಮಂಗಳೂರು

ಗಿರಿಗಾಂ ಮುಂಬಯಿ.

[illegible]

[illegible]	[illegible]	[illegible]	[illegible]	[illegible]	[illegible]	[illegible]	ಸೂರ್ಯ ಉ.	ಅಸ್ತ
18	[illegible]	[illegible]	[illegible]	[illegible]	[illegible]	[illegible]	6 48	6 6
19	[illegible]	[illegible]	[illegible]	[illegible]	[illegible]	[illegible]	6 48	6 7
20	ಸೋಮ	[illegible]	[illegible]	[illegible]	[illegible]	[illegible]	6 49	6 7
21	[illegible]	[illegible]	[illegible]	[illegible]	[illegible]	[illegible]	6 49	6 8
22	ಬುಧ	[illegible]	[illegible]	ಭರಣಿ	[illegible]	[illegible]	6 50	6 8
23	ಗುರು	[illegible]	[illegible]	ಕೃತ್ತಿಕಾ	[illegible]	[illegible]	6 50	6 9
24	ಶುಕ್ರ	[illegible]	[illegible]	ರೋಹಿಣಿ	[illegible]	[illegible]	6 51	6 9

ಮಂಗಳೂರಿನ ವಾಯುಸ್ಥಿತಿ.

(೧೯೨೦ನೆಯ ಡಿಸೆಂಬರ)

Date ತಾರೀಖು	Temperature. ಉಷ್ಣ (ಕಾವು) Maximum ಹೆಚ್ಚಿನದು	Minimum ಕಡಿಮೆ	Rainfall ಮಳೆ ದಿನದ ಮಳೆ	ಎಪ್ರಿಲ್ ಗಿಂದ
10	89—8	68—2	—	...
11	89—3	66—5	—	...
12	89—8	67—7	—	..
13	90—2	64—8	—	
14	92—3	68—9	—	
15	91—5	72—2	—	—
16	91—8	67—8	—	—

ಮಂಗಳೂರಿನ ಪೇಟೆ ಧಾರಣೆ.

ದೇನಸು	ಇಂದ ರೂ ಆ	ವರೆಗೆ ರೂ. ಆ.
ಮಸ್ಕತಿ ಅಕ್ಕಿಮುಡಿ ಗಳ್ಳೆ	7— 4	7— 8
ಹೊಸ ಗುಡ್ಡು	6—12	6—14
ಹೊಸ ಮಸ್ಕತಿ ಅಕ್ಕಿ	6—12	7— 0
ಹೊಸ ರಾಶಿ	6— 4	6— 8
ಅವ್ವಲ್ ಬೆಳ್ತಿಗೆ „	8— 4	8— 8
ಗುಡ್ಡು ಬೆಳ್ತಿಗೆ	7— 0	— 6
ರಂಗೂನ ಬೆಳ್ತಿಗೆ ಗೋಣಿ ಗಳ್ಳೆ	17— 4	17— 8
ಗೋಧಿ ಗೋಣಿ ಗಳ್ಳೆ	25— 0	22— 0
ಹುರುಳಿ ಗೋಣಿ ಗಳ್ಳೆ	14— 8	15— 4
ಕಡಲೆ ಗೋಣಿ ಗಳ್ಳೆ	16— 8	1‑— 8
ತೊಗರಿ ಗೋಣಿ ಗಳ್ಳೆ	19— 8	2‑— 0
ತೊಗರಿಬೇಳೆ ಗೋಣಿ ಗಳ್ಳೆ	22— 0	‑—
ಉದ್ದು ಗೋಣಿ ಗಳ್ಳೆ	16— 8	18— 0
ಹೆಸರು ಗೋಣಿ ಗಳ್ಳೆ	16— 0	18— 8
ಊರು ಬೆಲ್ಲ ಖಂಡಿ ಗಳ್ಳೆ	85— 0	90— 0
ಉಪ್ಪು ಗೋಣಿ ಗಳ್ಳೆ	4— 4	—
ಕೊಬ್ಬರಿ ಖಂಡಿ ಗಳ್ಳೆ	150— 0	160— 0
ಕೊಪ್ರ ಹಿಂಡಿ ಖಂಡಿ ಗಳ್ಳೆ	50— 0	51— 0
ಎಳ್ಳಿಂಡಿ ಖಂಡಿ ಗಳ್ಳೆ	55— 0	
ಕೊಪ್ರ ಎಣ್ಣೆ ಮುಡಿ ಗಳ್ಳೆ	12— 0	13—14
ಎಳ್ಳೆಣ್ಣೆ ಮುಡಿ ಗಳ್ಳೆ	9— 8	11— 8
ಹರಳೆಣ್ಣೆ ಕಟ್ಟಿಗೆ ಗಳ್ಳೆ	9— 6	9— 0
ಮೋರಿಸ ಸಕ್ಕರೆ ಮುಡಿ ಗಳ್ಳೆ	9— 0	—
ಊರ ಮೆಣಸಿನ ಕಾಯಿ ಮುಡಿ ಗಳ್ಳೆ	7— 8	—
ಸಾಸಿವೆ ಮುಡಿ ಗಳ್ಳೆ	10— 0	10— 0
ಕೊತ್ತುಂಬರಿ ಮುಡಿ ಗಳ್ಳೆ	5— 4	5— 6
ಕಾಫಿ ಖಂಡಿ ಗಳ್ಳೆ	220— 0	230— 0
ಬೀಗೋಟು ಅಡಿಕೆ ಖಂಡಿ ಗಳ್ಳೆ	100— 0	115— 0
ಬೀಗೋಟು	95— 0	100— 0
ಕಾಳುಮೆಣಸು ಖಂಡಿ ಗಳ್ಳೆ	135— 0	140— 0
ಯಾಲಕ್ಕಿ ಮುಡಿ ಗಳ್ಳೆ	22— 0	25— 0
ಗೇರುಬೀಜ ಮುಡಿ ಗಳ್ಳೆ	3— 8	3—12
ಕಲ್ಲಿನ ಖಂಡಿ ಗಳ್ಳೆ	100— 0	120— 0
ಕಾಂಪ್ರ ಕೆಗೆಸು ಮುಡಿ ಗಳ್ಳೆ	22— 0	22— 4
ಕಾಂಪ್ರ [illegible] ಮುಡಿ ಗಳ್ಳೆ	32— 0	34— 0
[illegible] ಸೇರು ಗಳ್ಳೆ	31— 8	. .
[illegible] ಮುಡಿ ಗಳ್ಳೆ	24— 0	25— 0

[illegible] ವರ್ತಮಾನ.

[illegible]

...ಸಂದರ್ಭವನ್ನು ಬಿಟ್ಟು [illegible] ಎಂದೂ, ಯುದ್ಧಕಾಲದಲ್ಲಿ [illegible] ನಡಿಸಿದ ಕೊನಸ್ಟಂಟಿನೋಪಲನ್ನು [illegible] ಯುರೋಪಿನ ರಾಜಕಾರಣ [illegible] ಎಂದೇ ಭಾವಿಸಬೇಕಾದೀತು. ಹಾಗೆ ಆಗಲಿಲ್ಲವೆಂಬುದಕ್ಕೆ ಇಟಲಿ ಫ್ರಾನ್ಸ್ ಮತ್ತು ಬ್ರಿಟಿಷ ದೇಶದ ಮಂತ್ರಿವರ್ಯರು ಲಂಡನ್ ನಗರದಲ್ಲಿ ಸೇರಿ ಗ್ರೀಸ್ ದೇಶಕ್ಕೆ ಕಳುಹಿಸಿದ ಪತ್ರವೇ ಸಾಕ್ಷಿಯಾಗಿದೆ. ಗ್ರೀಸ್ ದೇಶವು ತಾತ್ಕಾಲಿಕವಾಗಿ ಈ ಮಿತ್ರಪಕ್ಷದ ಮುಖಂಡರ ಅಭಿಪ್ರಾಯಕ್ಕೆ ತಲೆಬಾಗಿ [illegible] ಆಗಮನದ ದಾರಿಯನ್ನು ಸುಗಮವಾಗಿ ಮಾಡುವುದಾದರೂ ಕೊನೆವರೆಗೆ ಅದೇ ಧೋರಣವು ನಿಂತೀತು ಎಂಬುದು ಸಂದೇಹಾಸ್ಪದವಾಗಿದೆ. ಇಷ್ಟೇ ಅಲ್ಲ, ಈ ಕಾರಣದಿಂದ ತುರ್ಕಿಯಿಂದ ಕೊಸುಕೊಂಡ [illegible]ಗಳನ್ನು ಅವರಿಗೆ ಪುನಃ ಒಪ್ಪಿಸಿಕೊಟ್ಟು ತುರ್ಕಿಯ ಒಪ್ಪಂದದ ಶರ್ತುಗಳನ್ನು ತಿದ್ದುಪಡಿ ಮಾಡುವ ಸಂದರ್ಭ ಬಂದಿದೆ ಎಂದು ಕೆಲವರು ಅಭಿಪ್ರಾಯಪಡುತ್ತಾರೆ. ಇದಕ್ಕೆ ಕಾರಣಗಳೂ ಇವೆ. ಅಮೇರಿಕೆಯವು ಸೋವಿಯೆಟ್ ರಿಪಬ್ಲಿಕ್ ಆಯಿತು ಎಂಬ ಒಂದು ವರ್ತಮಾನವಿದೆ. ಎಂದರೆ ಬೊಲಶೆವಿಕ ರಾಜ್ಯಕ್ರಮವನ್ನು ಅದು ಅನುಸರಿಸಿತೆಂದು ತಿಳಿಯಬೇಕಾಗಿದೆ. ಅಫ್ಘಾನಿಸ್ಥಾನದಲ್ಲಿ ಕೆಮಾಲಪಾಶಾ ಮುಂತಾದ ನ್ಯಾಶನಲಿಸ್ಟ್ ಪಂಥದವರ ಬಲವು ಹೆಚ್ಚುತ್ತಾ ಬಂದರೆ, ತುರ್ಕಿಯ ಸುಲ್ತಾನರು ಬಲತ್ಕಾರದಿಂದ ಒಪ್ಪಿಕೊಂಡ ಶರ್ತುಗಳು ತಿದ್ದುಪಡಿಯಾಗದಿದ್ದರೆ ಈ ಸಂದರ್ಭದಲ್ಲಿ ಗ್ರೀಕ್ ದಿವಾಂಗವು ಪುನಃ ಅಧಿಕಾರಕ್ಕೆ ಬಂದರೆ ಮಿತ್ರಪಕ್ಷದ ಗೌರವವು ಆ ಪ್ರಾಂತದಲ್ಲಿ ಕಡಿಮೆಯಾಗುವುದು. ತುರ್ಕಿಯ ಶರ್ತುಗಳು ತಿದ್ದುಪಡಿಯಾದರೂ, ಆಗದೇ ಇದ್ದರೂ, ಈಗಿನ ಪರಿಸ್ಥಿತಿಯಲ್ಲಿ ಕೊನಸ್ಟಂಟಿನೋಪಲದಲ್ಲಿಯೇ ಸುಲ್ತಾನರ ಅಧಿಕಾರವು ಸಂಕುಚಿತವಾಗಿ ಇದ್ದುದರಿಂದ ಇನ್ನು ಈಗಿನಗಿಂತ ಅಧೋಗತಿಗೆ ಇಳಿಯುವುದಕ್ಕೆ ಎಡೆಯಿಲ್ಲ. ಯಾವ ತಿದ್ದುಪಡಿಯಾದರೂ ತುರ್ಕಿಯ ಅಧಿಕಾರವು ಹೆಚ್ಚುವಂತೆ ಆದೀತಲ್ಲದೆ ಬೇರೆ ಉಪಾಯವಿಲ್ಲ. ಇದಲ್ಲದೆ ಮೆಸೊಪೊಟೇಮಿಯದಲ್ಲಿ ಬ್ರಿಟಿಷರು ದೇಶೀಯ ಕೌನ್ಸಿಲನ್ನು ಸ್ಥಾಪನೆ ಮಾಡಿ ಅಲ್ಲಿಂದ ತಮ್ಮ ಸೈನ್ಯವನ್ನು ಹಿಂದೆಗೆಯುತ್ತಾರೆ ಎಂತಲೂ ಸಾಯಿರಿಯಾದಲ್ಲಿ ಫ್ರೆಂಚರೊಗವು ಅಲ್ಲಿಯ ಜನರ ಹೆಗಲ ಮೇಲೆ ಒತ್ತದೆ ಇಲ್ಲ, ಅಮೀರ ಫೈಜಲರು ತನ್ನನ್ನು ಪಟ್ಟದಿಂದ ತೆಗದುಹಾಕಿದ ನಿಮಿತ್ತ ತನ್ನ ಹಕ್ಕನ್ನು ವಿಚಾರಿಸಲಿಕ್ಕೆ ಈಗ ಇಂಗ್ಲೆಂಡಿಗೆ ಬಂದಿದ್ದಾರೆ ಎಂತಲೂ ಕೇಳಿಬರುತ್ತಿರುವದರಿಂದ ಮುಂದಿನ ಪರಿಸ್ಥಿತಿಯು ಯಾವ ರೂಪವನ್ನು ಹೊಂದೀತು ಎಂಬದು ಸ್ಪಷ್ಟವಾಗಿ ಗೊತ್ತಾಗುವುದಿಲ್ಲ. ಆದರೆ ಇಷ್ಟೆ ಹೇಳಬಹುದು. ತುರ್ಕಿಯ ಸಂಧಿಶರ್ತುಗಳನ್ನು ಬದಲಾಯಿಸಬೇಕೆಂದು ಹಿಂದುಸ್ಥಾನದಲ್ಲಿ ಉಂಟಾದ ಅಸಮಾಧಾನವನ್ನು ಶಾಂತಿಗೊಳಿಸುವುದಕ್ಕೂ, ಮಿ। ಲೊಯ್ಡ ಜ್ಯೋರ್ಜ ಮುಂತಾದವರು ಯುದ್ಧಕಾಲದಲ್ಲಿ ಕೊಟ್ಟ ಭಾಷೆಯನ್ನು ಸಲಿಸುವುದಕ್ಕೂ ವಿರೋಧ ರೀತಿಯ ರಾಜಕಾರಣವು ಇಡೀ ಯುರೋಪನ್ನು ವ್ಯಾಪಿಸಿಕೊಂಡು ಮುಸಲ್ಮಾನರ ಕಾಂಕ್ಷೆಯು ಸಮಾಧಾನಕರವಾದ ರೀತಿಯಲ್ಲಿ ಕೈಗೂಡುವುದು ದುರ್ಲಭವೆಂದು ಎಲ್ಲರೂ ತಿಳಿಯುತ್ತಿರುವಾಗ [illegible] ಗ್ರೀಕದೇಶದ ರಾಜನ ಜೀವನವನ್ನು ಕಡ್ಡೊಯ್ಯು ನಿಮಿತ್ತ ತುರ್ಕಿಯ [illegible] ಬದಲಾಯಿಸಲಿಕ್ಕಿದ್ದಾನೆ ಎಂದರೆ ರಾಜಕಾರಣ ಧುರೀಣರಿಂದ ಆಗದ ಕಾರ್ಯವು ಬೇರೆ ಒಂದು ಮಾರ್ಗದಿಂದ ಕೈಗೂಡಿತು ಎಂಬದು "ದೈವೀ ವಿಚಿತ್ರಗತಿ" ಎಂಬವರ ನಿದರ್ಶನವಾದೀತು.

ಒಳ್ದೇಶ ವರ್ತಮಾನ.

ಬಕ್ಕಿಂಗಹ್ಯಾಮ್ ಮಿಲ್ಲಿನ ಮಜೂರರ ಗಲಾಟೆ:—ಈ ಮಜೂರರ ಯೂನಿಯನ್ನುಗಳಿಗೆ ಚಾಲಕರಾಗಿ, ಮಿ। ಬಿ. ಪಿ. ವಾಡಿಯರು ಈ ಮಜೂರರು ಗಿರಣಿಯಲ್ಲಿ ಕೆಲಸಕ್ಕೆ ಹೋಗದಂತೆ ತಡೆಪಡಿಸುವುದು ಸರಿಯಲ್ಲವೆಂದು ಅವರಿಗೆ ಮದ್ರಾಸು ಹೈಕೋರ್ಟಿನ ಇಂಜಂಕ್ಷನ್ ಹುಕುಂ ಆಗಿದೆ ಎಂದು ಹಿಂದೆ ಹೇಳಿದ್ದೇವೆ. ಈ ಮಿಲ್ಲಿಗೆ ಹೋಗುವ ಹೊಸ ಮಜೂರರಿಗೆ ಹಳೆ ಮಜೂರರು ಕಲ್ಲೆಸೆದು ಪೀಡಿಸುತ್ತಿರುವದರಿಂದ ಅವರನ್ನು ಮೋಟಾರ್ ಲೋರ್ರಿಗಳಲ್ಲಿ ಕೂರಿಸಿ ಪೋಲೀಸ್ [illegible] ಸಮೇತ ಗಿರಣಿಗೂ ಅಲ್ಲಿಂದ ಅವರ ಮನೆಗಳ ಸಮೀಪಕ್ಕೂ ಸಾಗಿಸಲು ಆರಂಭವಾಗಿತ್ತು. [illegible]ನೇ ತಾರೀಕಿಗೆ ಈ ಪೋಲೀಸ ಪಹರೆಯವರು ಈ ಹಳೆ ಮಜೂರರ ಉಪಟಳವನ್ನು ಸಹಿಸಲಾರದೆ ಕೋವಿ ಸುಟ್ಟದರಿಂದ ಒಬ್ಬ [illegible] ಹುಡುಗನು ಸತ್ತು ಬಿದ್ದನು; ೧೫ ಮಂದಿಗೆ ಗಾಯವಾಯಿತು. ಜನರಿಗೆ ಎಚ್ಚರಿಸದೆ ಕೋವಿ ಸುಟ್ಟದ್ದು ಸರಿಯಲ್ಲವೆಂದು ಕೆಲವರ ಅಭಿಪ್ರಾಯವಿದೆ.

ಮಹಾಭಾರತದ ಮುದ್ರಣ:—ಸಂಸ್ಕೃತ ಮಹಾಭಾರತದ ಮೂಲ ಪ್ರತಿಗಳನ್ನು ಶೋಧಿಸಿ ವಿಮರ್ಶಾಪೂರ್ವಕವಾಗಿ ಅಚ್ಚು ಹಾಕಿಸುವ ಕೆಲಸವನ್ನು ಭಂಡಾರಕರ ಇನ್ಸ್ಟಿಟ್ಯೂಟದವರು ವಹಿಸಿದ್ದರಿಂದ ಅವರ ಖರ್ಚಿನ ಒಂದಂಶವಾಗಿ [illegible] ಮಿಗದಷ್ಟು [illegible] ಮುಂಬಯಿ ಸರಕಾರದವರು ವಾಗ್ದತ್ತ ಮಾಡಿರುವರು. [illegible] ಸರಕಾರದವರು ವರ್ಷಕ್ಕೆ [illegible] ರೂಪಾಯಿ ಮೇರೆಗೆ [illegible] ವರ್ಷಗಳ ವರೆಗೆ ಸಹಾಯ ಕೊಡಲಿಕ್ಕಿರುವರು.

ದಿಲ್ಲಿಯಲ್ಲಿ ಪ್ರತಿಬಂಧಕಗಳು:—[illegible]

[illegible] ಹೇರಲ್ಪಟ್ಟ [illegible] ಭಾಷೆಗೆ ಕಾಯಿದೆ [illegible]ಯಲ್ಲಿರುವದು. [illegible] ಉಮೇದ್ವಾರರ ಕಾಟಗಳು [illegible] ಕಳೆಯುತ್ತ ಇದ್ದು ದೇಶದಲ್ಲಿ ನೆಮ್ಮದಿ ಭಂಗಕ್ಕೆ ಕಾರಣವಾದಾವು ಎಂಬ ಸಂದೇಹವೆ ಇಲ್ಲಿ ಪ್ರಾಂತಿಕ ಸರಕಾರದವರಿಗೆ ಉಂಟಾಗಿ ಇಂಡಿಯಾ ಸರಕಾರದ ಅನುಮತಿಯಿಂದಲೇ ಈ ಪ್ರಕಟನೆಯು ಹೊರಟಿದೆ ಎಂದು ಸದರಿ ಪ್ರಕಟನೆಯೇ ಹೇಳುತ್ತಿದೆ.

ಕನ್ನಡ ಕೊಂಗ್ರೆಸ್ ಸರ್ಕಲ್:—ಕನ್ನಡ ಪ್ರಾಂತದಲ್ಲಿ ರಾಜಕೀಯ ಚಳುವಳಿಯು [illegible] ಕನ್ನಡ ಪ್ರಾಂತವು ಏಕಾಧಿಪತ್ಯದೊಳಗೆ ಸೇರದಿದ್ದರೆ ಇಂಥ ಚಟುವಟಿಕೆಯು ತಲೆದೋರಲಿಕ್ಕೆ ಸಾಧ್ಯವೇ ಇಲ್ಲವೆಂದು ಅನುಭವಸಿದ್ಧವಾದ್ದರಿಂದಲೂ ದಿವಾನ ಬಹದ್ದೂರ ವಿ. ಪಿ. ಮಾಧವರಾಯರ ಅಧ್ಯಕ್ಷತೆಯಲ್ಲಿ ೧೯೨೦ನೆ ಮೇ ತಿಂಗಳಲ್ಲಿ ಧಾರವಾಡದಲ್ಲಿ ಜರೆಗಿದ ಪ್ರಥಮ ಕರ್ನಾಟಕ ರಾಜಕೀಯ ಪರಿಷತ್ತಿನ ಅಧಿವೇಶನದಲ್ಲಿ ಆದ ಠರಾವನ್ನು ಮಂಜೂರು ಮಾಡುವದಲ್ಲದೆ ಆಂಧ್ರರಿಗೂ ಸಿಂಧ ಜನರಿಗೂ ೧೯೧೬ನೆ ಇಸವಿಯಲ್ಲಿ ಪ್ರತ್ಯೇಕ ಪ್ರತಿನಿಧಿಗಳನ್ನು ಆರಿಸುವ ಅಧಿಕಾರವನ್ನು ಕೊಟ್ಟಂತೆ ಕೊಂಗ್ರೆಸದವರು ಕನ್ನಡ ಪ್ರಾಂತಕ್ಕೂ ಪ್ರತ್ಯೇಕ ಪ್ರತಿನಿಧಿಗಳ ಹಕ್ಕನ್ನು ಕೊಟ್ಟು ಅದೂ ಒಂದು ಸರ್ಕಲೆಂದು ಭಾವಿಸಬೇಕೆಂಬ ಠರಾವು ನಾಗಪುರದ ಕೊಂಗ್ರೆಸ ಅಧಿವೇಶನದ ಮುಂದೆ ಬರಲಿಕ್ಕಿರುವುದು.

ಪೂಣೆಯ ರಾಷ್ಟ್ರೀಯ ವಿದ್ಯಾಲಯ:—ತಿಲಕ ಮಹಾ ವಿದ್ಯಾಲಯವೆಂಬ ಹೆಸರಿನ ನೂತನ ಸಂಸ್ಥೆಯೊಂದು ಶ್ರೀಯುತ ಚಿಂತಾಮಣರಾವ್ ವೈದ್ಯ ಇವರ ಅಧ್ಯಕ್ಷತೆಯಲ್ಲಿ ಪೂಣೆಯಲ್ಲಿ ತೆರೆಯಲಾಯಿತು. [illegible] ವಿದ್ಯಾರ್ಥಿಗಳು ಆಗಲೇ ಸೇರಿದ್ದರು. ೧೦ ಸಾವಿರ ರೂಪಾಯಿಯ ಸಹಾಯಧನವು ಆಗಲೇ ಸಿಕ್ಕಿದೆಯಂತೆ. ಮುಂಬಯಿ ಅವಂತಿಕಾ ಬಾಯಿ ಗೋಖಲೆ ಎಂಬವರು ವೇತನಗಳ ಬಗ್ಗೆ ೧೦೦೦ ರೂಪಾಯಿ ಕೊಟ್ಟಿರುವರು.

ದಕ್ಷಿಣಕನ್ನಡ.

ಉಡುಪಿ:—ಇಲ್ಲಿಗೆ ಈಗ ಹೊಸದಾಗಿ ಮ। ರಾ। ರಾ। ಬಿ. ಸೀತಾರಾಮ ರಾವ್ ಇವರು ವೆಟರಿನರಿ ಡಾಕ್ಟರರಾಗಿ ನೇಮಿಸಲ್ಪಟ್ಟು ಬಂದು ಚಾರ್ಜು ವಹಿಸಿಕೊಂಡಿರುವರು. ಕುಂದಾಪುರ, ಉಡುಪಿ, ಕಾರ್ಕಳ, ಈ ಮೂರು ತಾಲೂಕುಗಳು ಇವರ ಚಾರ್ಜಿನಲ್ಲಿದ್ದು ಉಡುಪಿ ಹೆಡ್‌ಕ್ವಾರ್ಟರ್ಸ್ ಮಾಡಿಕೊಂಡಿರುವರು.

ಕಟಪಾಡಿ:—ಇತ್ತಲಾಗೆ ಮಹಾರಾಜಶ್ರೀಗಳಾದ ಕಾರ್ನಾಡ ಸದಾಶಿವರಾಯರವರು ಇಲ್ಲಿಗೆ ಚಿತ್ತೈಸಿ ಒಂದು ಸಭೆ ಕೂಡಿಸಿ ಅಸಹಕಾರ ತತ್ವವನ್ನು ಬೋಧಿಸಿ ಮಹಾತ್ಮಾ ಗಾಂಧಿಗಳವರ ಪತ್ರಕ್ಕೆ ಇಲ್ಲಿಯ ಕೆಲವು ವೋಟರರು ತಾವು ವೋಟು ಕೊಡುವುದಿಲ್ಲವಾಗಿ ದಸ್ಕತು ಕೊಟ್ಟು ಆ ನಂತರ ಪೋಲಿಂಗ್ ಸ್ಟೇಶನಿಗೆ ಹಾಜರಾಗಿ ಕೌನ್ಸಿಲ್ ಮೆಂಬರರಿಗೆ ವೋಟು ಕೊಟ್ಟಿರುವರು. ಇದಲ್ಲವೇ! ನಮ್ಮಲ್ಲಿಯ ಸಹಕಾರ ನಮಗೆ ಸಹಕಾರವೂ ಬೇಕು ಅಸಹಕಾರವೂ ಬೇಕು ಎಂದು ಹೇಳುವುದು ಚೋದ್ಯವಾದ ಸಂಗತಿಯಾಗಿದೆ ಎಂದು ಹಲವರು ಅನ್ನುವರು.

ಇಲ್ಲಿಯ ಶ್ರೀವೆಂಕಟರಮಣಸ್ವಾಮಿ ಎಲಿಮೆಂಟರಿ ಶಾಲೆಯು, ಹಾಯರ್ ಎಲಿಮೆಂಟರಿ ಶಾಲೆಯಾಯಿತು. ಈ ವರ್ಷಕ್ಕೆ ೬ನೇ ತರಗತಿಯನ್ನು ತೆರೆದು ೧ನೇ ತರಗತಿಯ ಎಲ್ಲಾ ಮಕ್ಕಳಿಗೆ ಸ್ಕೂಲ್ ಫೀಸು ಮಾಫಿ ಮಾಡಿ ಹೆಡ್ ಮಾಸ್ಟರರಾಗಿ ಸೆಕೆಂಡರಿ ಗ್ರೇಡ್ ಟ್ರೈನ್ಡ್ ಆದ ರಾಜಶ್ರೀ ಕೆ. ಆರ್. ಶೆಣೈ ಇವರನ್ನು ನೇಮಿಸಿದ ಕಾರಣ ಹತ್ತಿರ ವಿದ್ಯಾಲಾಭವು ಸಿಗುವುದಾಗಿ ಎಲ್ಲರೂ ಸಂತೋಷಗೊಂಡಿರುವರು.

ಇಲ್ಲಿ ಸಮೀಪ ಯೇಣಗುಡ್ಡೆ ಉದಿಯಾವರ ಕಡವಿನ ಬಳಿಕದ ಪಟೇಲ್ ರಾಮಯ್ಯ ಹೆಗ್ಡೇರ ಬಂಡಸಾಲೆ ಮಾಳಿಗೆಯಲ್ಲಿ "ದುರ್ಗಾ ಪರಮೇಶ್ವರಿ ಎಲಿಮೆಂಟರಿ ಶಾಲೆ" ಎಂಬ ಹೆಸರಿನ ಒಂದು ವಿದ್ಯಾಗೃಹವೂ ಇಲ್ಲ ಸಮೀಪ ಮಟ್ಟುಯೆಂಬಲ್ಲಿಯೂ ಇತ್ತಲಾಗೆ ಒಂದು ಮನೆಯಲ್ಲಿ ಒಂದು ಶಾಲಾ ಕೂಡು ಜನಿಸಿದ ಎಂತಲೂ ವರ್ತಮಾನ ಕೇಳುತ್ತೇವೆ. ಮುಂದಣಯ ಈ ಕಾಲದಲ್ಲಿ ಎಲ್ಲೆಲ್ಲಿಯೂ ವಿದ್ಯಾಲಯಗಳು ಸ್ಥಾಪನೆಯಾಗಿ ಗ್ರಾಮನಿವಾಸಿಗಳು ವಿದ್ಯೆಯ ಪ್ರಯೋಜನ ಹೊಂದಲೆಂದು ಕೋರುತ್ತೇವೆ.

ಬಂಟವಾಳ:—ಕಳೆದ ಮಂಗಳವಾರ ಇಲ್ಲಿಯ ಸಾಹುಕಾರ ರಾ। ನಂದಾವರ ಅನಂತ ಶಾನುಭಾಗರು ನರ ಮಂಡಲದ ರೋಗದಿಂದ ಕಾಲವಾದರೆಂದು ತಿಳಿಸಲು ತುಂಬಾ ವ್ಯಸನವಾಗುತ್ತದೆ.

ಕಾಪು:—ಇಲ್ಲಿಯ ಬೋರ್ಡು ಪಂಚಮ ಶಾಲಾ ಅಕ್ಟೋಬರ ಅಲ್ಲಿಯೇ ನಿಲ್ಲಿಸಬೇಕೆಂದು ಕಂಟ್ರಾಕ್ಟುದಾರರಿಗೆ ಹುಕುಂ ಇದೆ. ಕಾರಣ ಗೊತ್ತಾಗಲಿಲ್ಲ.

ಬಳ್ಳು ಗ್ರಾಮದಲ್ಲಿರುವ ಬೋರ್ಡು ಪಂಚಮ ಶಾಲೆ. ಶಾಲೆ ಅಲ್ಲಿ ಮಾಸ್ಟರರು ಇಲ್ಲ. ಕೇಳುವವರು ಎಲ್ಲಿ?

ತಾ ೩೦-೧೧-'೨೦ನೇ ದಿನದ ಮೆಂಬರರ ಚುನಾವಣೆಯ ಕಾಲದಲ್ಲಿ ನಮ್ಮೂರಲ್ಲಿ ಬಂದ ವೋಟರರ ಸಂಖ್ಯೆ ಸರಾಸರಿ ಸೇಕಡಾ ೨೮ ಮಂದಿ ಎಂದೆನ್ನಬಹುದು. ಈ ಸಂದರ್ಭ ಮ। ರಾ। ರಾ। ಕಾರ್ನಾಡ ಸದಾಶಿವ ಭಟ್ಟರವರಿಗೂ ಮ। ರಾ। ರಾ। ರಾಮಯ್ಯ ಪುಂಜರವರಿಗೂ ಮೆಂಬರಿಕೆ ಆದ ವಾರ್ತೆ ಕೇಳಿ ತುಂಬಾ ಸಂತೋಷಪಡುತ್ತೇವೆ.

(೪) ತಾ. ೧೫-೧೨-'೨೦ನೇ ದಿನ ಅಯನೋತ್ಸವ, ತಾ. ೧೯-೧೨-'೨೦ನೇ ದಿನ ರಥೋತ್ಸವ, ಯಮಾರ್ಗಳ ಶ್ರೀ ಜನಾರ್ಧನ ದೇವಸ್ಥಾನದಲ್ಲಿ ನಡೆಯುವುದು.

(೫) ನಮ್ಮೂರಲ್ಲಿ ಇನ್ನೊಂದು ಹೊಸ ಮಾರಿಗುಡಿ ಸದ್ಯ ಆಗುವುದಾಗಿ ವಾರ್ತೆ ಇದೆ.

(೬) 'ನಮ್ಮ ದಿನದ ಆಚರಣೆ' ಇಲ್ಲಿಯ ಹಾಯರ್ ಎಲಿಮೆಂಟರಿ ಶಾಲೆಯಲ್ಲಿ ಬಹು ವಿಜೃಂಭಣೆಯಿಂದ ಈ ವರ್ಷ ನಡೆಯುವುದು. ಅಂದಿನ ಮಕ್ಕಳಿಗೆಲ್ಲಾ ತಿಂಡಿಯನ್ನು ಹಂಚುವ ಉದ್ದೇಶ್ಯ ರೂ. ೧೨ನ್ನು ಕೋತಲಗುತ್ತು ಪಿಲಿಪಡುವ ಕೃಷ್ಣ ಪಂಡಿತರು ಕೊಟ್ಟಿರುವರು. ಇವರ ಮಗಳಾದ ಬೋರ್ಡು ಹುಡುಗಿಯರ ಶಾಲೆಯ ಹೆಡ್ ಮಿಸ್ಟ್ರೆಸ್, ಶ್ರೀಮತಿ ಕಲ್ಯಾಣಿಬಾಯಿ ಎಂಬವಳಿಗೆ ನಡೆದ ವಿವಾಹವೇ ಇದಕ್ಕೆ ಕಾರಣ. ವಧೂವರರಿಗೆ ಚಿರಕಾಲ ಒಳ್ಳೇದನ್ನು ಕೊಡಲಿ ಎಂದು ಮಕ್ಕಳ ಕೂಡೆ ನಾವೂ ಹಾರೈಸುತ್ತೇವೆ.

[illegible] ತಾಲೂಕು ಬೋರ್ಡು ಮೆಂಬರರು ಈ ಚುನಾವಣೆಯ ಕಾಲದಲ್ಲಿ ಎಷ್ಟೋ ಗದ್ದಲವಿದ್ದಿತಲ್ಲವೇ. ಅನಂತರ [illegible] ತಾಲೂಕು ಬೋರ್ಡು ಮೆಂಬರರಾದವರು ಎಷ್ಟು ಬೋರ್ಡು ಶಾಲೆಗಳನ್ನು ಸಂದರ್ಶಿಸಿದರು? ಜನರಿಗೋಸ್ಕರ ಯಾವ ಯಾವ ಸವಲತ್ತುಗಳನ್ನು ಮಾಡಿದರು? ಎಂಬುದಾಗಿ ಒಬ್ಬರು ಬಂದು ಕೇಳುತ್ತಾರೆ.

ಕೌನ್ಸಿಲು ಚುನಾವಣೆ.

ಮದರಾಸು ಪ್ರಾವಿನ್ಸಿಟಿ ವಿರೋಧದವರು ಈ ಕೆಳಗಿನ ಸಂಖ್ಯೆಗಳನ್ನು ಪ್ರಕಟಿಸಿರುವರು.—

ಮ್ಯುನಿಸಿಪಾಲಿಟಿಗಳಲ್ಲಿ	ಒಟ್ಟು ವೋಟರರ ಸಂಖ್ಯೆ	ವೋಟು ಕೊಟ್ಟವರ ಸಂಖ್ಯೆ	ಸೇ
ಮದರಾಸು	16,553	8,700	52
ಮಧುರೆ	6,583	3,110	48
ತಿರುಚಿನಾಪಳ್ಳಿ ಶ್ರೀರಂಗಂ	4,507	1,961	43.5
ತಿನ್ನವೆಲ್ಲಿ ಪಾಳ್ಯಂಕೋಟೆ	3,156	2,258	71
ಕಾಕಿನಾಡ	1,287	—	—
ವಿಶಾಖಪಟ್ಟಣದ ಜಿಲ್ಲೆಗಳಲ್ಲಿ	992	718	72
ಗಂಜಾಂ	65,761	14,975	22.7
ವಿಶಾಖಪಟ್ಟಣ	70,628	12,846	18.2
ಗೋದಾವರಿ	44,281	9,950	22
ಕೃಷ್ಣಾ	87,669	12,214	13.9
ಗುಂಟೂರು	83,014	9,594	11.5
ನೆಲ್ಲೂರು	51,795	8,688	16.7
ಚಿತ್ತೂರು	39,897	11,522	29
ಕಡಪೆ	25,156	9,293	37
ಕರ್ನೂಲು	27,666	12,110	43
ಅನಂತಪುರ	23,199	10,538	45.8
ಬಳ್ಳಾರಿ	27,676	14,087	50.9
ಚೆಂಗಲ್ಪಟ್ಟು	43,426	22,872	52.6
ಉತ್ತರ ಆರ್ಕಾಡು	52,686	7,747	13
ದಕ್ಷಿಣ ಆರ್ಕಾಡು	58,970	13,782	23
ಸೇಲಂ	59,323	9,811	16.5
ಕೊಯಮುತ್ತೂರು	57,075	13,257	23.0
ತಂಜಾವೂರು	54,733	14,279	26
ತಿರುಚಿನಾಪಳ್ಳಿ	45,445	7,286	16
ಮದುರೆ	65,489	10,005	15
ರಾಮನಾಡು	46,680	12,584	26.9
ತಿನ್ನವೆಲ್ಲಿ	44,110	10,614	24.0
ಮಲಬಾರು	30,901	15,906	59.0
ದಕ್ಷಿಣ ಕನ್ನಡ	21,139	4,360	20.6
ನೀಲಗಿರಿ	1,291	1059	82
ಮುಸಲ್ಮಾನರು (ಮ್ಯುನಿಸಿಪಾಲಿಟಿಗಳಲ್ಲಿ).			
ಮದರಾಸು	2,839	—	—
ಮಧುರೆ ತಿರುಚಿನಾಪಳ್ಳಿ	1,197	101	8.4
ಮುಸಲ್ಮಾನರು (ಜಿಲ್ಲೆಗಳಲ್ಲಿ).			
ಉತ್ತರ ಸರ್ಕಾರುಗಳಲ್ಲಿ	3,529	—	—
ಪೂರ್ವ ಕರಾವಳಿ ಜಿಲ್ಲೆಗಳು	6,156	—	—
ಸಿಡೆಡ್ ಡಿಸ್ಟ್ರಿಕ್ಟುಗಳು	6,715	—	—
ಉತ್ತರ ಆರ್ಕಾಡು, ಚೆಂಗಲ್ಪಟ್ಟು	4,125	—	—
ಮಧ್ಯ ಜಿಲ್ಲೆಗಳು	4,118	491	11.8
ತಂಜಾವೂರು	4,054	835	20.5
ತಿರುಚಿನಾಪಳ್ಳಿ, ಮದುರೆ	3,441	—	—
ರಾಮನಾಡು, ತಿನ್ನವೆಲ್ಲಿ	5,436	—	—
ಮಲಬಾರು	12,055	—	—
ದಕ್ಷಿಣಕನ್ನಡ	1,772	—	—
ಯುರೋಪಿಯನರು	1,489	132	39
ಎಂಗ್ಲೊ ಇಂಡಿಯನರು. ದೇಶೀಯ ಕ್ರೈಸ್ತರು			
ಉತ್ತರದ ಜಿಲ್ಲೆಗಳಲ್ಲಿ	3,848	1,328	34.5
ಮಧ್ಯ ಜಿಲ್ಲೆಗಳು ಮತ್ತು ಮದರಾಸು	3,014	1,984	65.8
ಪಶ್ಚಿಮ ಕರಾವಳಿ	2,607	1,816	62
ತಂಜಾವೂರು, ತಿರುಚಿನಾಪಳ್ಳಿ, ಮದುರೆ	4,386	1,726	39.3
ರಾಮನಾಡು, ತಿನ್ನವೆಲ್ಲಿ	5,544	2,872	51.8
ಪ್ಲಾಂಟರುಗಳು	349	—	—
ಯುನಿವರ್ಸಿಟಿ ಗ್ರ್ಯಾಜುವೇಟರು	5,463	3,612	66.1
ವರ್ಗದಾರರು.			
ಉತ್ತರ ಜಿಲ್ಲೆಗಳು, 1 ನೆ ಭಾಗ	86		—
ಉತ್ತರ ಜಿಲ್ಲೆಗಳು, 2ನೆ ಭಾಗ	66	29	43.9
ಉತ್ತರ ಮಧ್ಯ ಜಿಲ್ಲೆಗಳು ಮತ್ತು ಮದರಾಸು	95	57	60
ದಕ್ಷಿಣ ಮಧ್ಯ ಜಿಲ್ಲೆಗಳು	55	40	72.7
ದಕ್ಷಿಣ ಜಿಲ್ಲೆಗಳು	56	—	—
ಪಶ್ಚಿಮ ಜಿಲ್ಲೆಗಳು	200	144	72
ಚೇಂಬರ್ಸ್ ಒಫ್ ಕೊಮರ್ಸ್.			
ಮದ್ರಾಸು ಚೇಂಬರ್	95	—	—
ಮದರಾಸು ಟ್ರೇಡ್ಸ್ ಎಸೋಸಿಯೇಶನ್	26	—	—
ದಕ್ಷಿಣ ಇಂಡಿಯಾ ಚೇಂಬರ್	235	142	60.4
[illegible] ಕೋಟಿ ನಗರತ್ತಾರರ ಸಂಘ	619	—	—
ಲೆಜಿಸ್ಲೇಟಿವ್ ಎಸೆಂಬ್ಲಿ. (ಜನರಲ್ ಮಹಮ್ಮದೀಯರಲ್ಲದವರು).			
ಮದರಾಸು ನಗರ	5,781	3,172	54.8
ಗಂಜಾಂ, ವಿಶಾಖಪಟ್ಟಣ	35,152	—	—
ಗೋದಾವರಿ, ಕೃಷ್ಣಾ	50,358	9,009	17.9
ಗುಂಟೂರು, ನೆಲ್ಲೂರು	32,229	4,655	14.6
ಚಿತ್ತೂರು, ಮತ್ತು ಸಿಡೆಡ್ ಡಿಸ್ಟ್ರಿಕ್ಟುಗಳು	22,834	—	—
ಚೆಂಗಲ್ಪಟ್ಟು, ದಕ್ಷಿಣ ಆರ್ಕಾಡು	18,980	7,457	39.3
ಉತ್ತರಆರ್ಕಾಡು ಸೇಲಂ ಕೊಯಮುತ್ತೂರು	18,467	4,755	25.7
ತಂಜಾವೂರು, ತಿರುಚಿನಾಪಳ್ಳಿ	20,326	5,038	24.7
ಮದುರೆ, ರಾಮನಾಡು ತಿನ್ನವೆಲ್ಲಿ	26,961	9,205	34.5
ಪಶ್ಚಿಮ ಕರಾವಳಿ, ಮತ್ತು ನೀಲಗಿರಿ	15,509	4,688	30.2
ಮುಸಲ್ಮಾನರು.			
ಗಂಜಾಂನಿಂದ ಚಿತ್ತೂರುವರೆಗಿನ ಜಿಲ್ಲೆಗಳು	2,045	—	—
ಮದ್ರಾಸಿನಿಂದ ತಿನ್ನವೆಲ್ಲಿ ವರೆಗಿನ ಜಿಲ್ಲೆಗಳು	5,373	428	8
ಪಶ್ಚಿಮ ಕರಾವಳಿ, ಮತ್ತು ನೀಲಗಿರಿ	2,694	—	—
ಯುರೋಪಿಯನರು	1,153	—	—
ವರ್ಗದಾರರು	558	296	53
ವರ್ತಕರು	2,066	857	41.4
ಕೌನ್ಸಿಲ್ ಒಫ್ ಸ್ಟೇಟ್.			
ಜನರಲ್	2,169	1,620	74.7
ಮಹಮ್ಮದೀ	121	74	61.2

[illegible]

ಸ್ವದೇಶಾಭಿಮಾನಿ.

ಶಕ ೧೮೪೪ ಮಾರ್ಗಶಿರ ಶು. ೭ ಶುಕ್ರವಾರ.

ಕೊಂಗ್ರೆಸಿನ ಮುಂದೆ ಬರತಕ್ಕ ಮಹತ್ವದ ಪ್ರಶ್ನೆಗಳು.

ನಾಗಪುರದಲ್ಲಿ ಡಿಸೆಂಬರ ತಾ. ೨೬ನೆ ದಿವಸ ರಾಷ್ಟ್ರೀಯ ಸಭೆಯು ಸೇರಲಿಕ್ಕಿದೆ. ರಾಷ್ಟ್ರೀಯ ಸಭೆಯ ಈ ವರ್ಷದ ಅಧಿವೇಶನವು ಎರಡು ಮೂರು ಕಾರಣಗಳಿಂದ ಅತಿ ಮಹತ್ವದ್ದು ಆದೀತು. ಈಗಿನ ಕಾಲವು ಹಿಂದೂಸ್ಥಾನದಲ್ಲಿ ಎಂದಲ್ಲ, ಇಡೀ ಲೋಕದಲ್ಲಿ ವಿಚಾರ ಸಂಕ್ರಮಣದ ಸಮಯವಾಗಿದೆ. ಹಿಂದುಸ್ಥಾನದಲ್ಲಿ ನೊನ್-ಕೊ-ಒಪರೇಶನಿನ ಅವತಾರವಾದಂದಿನಿಂದ ದಿನೇ ದಿನೇ ಹೆಚ್ಚು ಹೆಚ್ಚು ಮಹತ್ವದ ಮತ್ತು ಗಡುಸಾದ ಪ್ರಶ್ನೆಗಳು ರಾಷ್ಟ್ರೀಯ ಸಭೆಯ ಮುಂದೆ ಬರಹತ್ತಿವೆ. ಒಂದು ಕಾಲದಲ್ಲಿ ರಾಷ್ಟ್ರೀಯ ಸಭೆಯೆಂದರೆ 'ವಕ್ತೃತ್ವ ಪೂರ್ಣವಾದ ಭಾಷೆಯಲ್ಲಿ ಮುಂದಿಡಲ್ಪಟ್ಟ ಕೆಲವು ೨೦-೩೦ ಠರಾವುಗಳನ್ನು ಪಾಸು ಮಾಡುವ ಒಂದು ಯಂತ್ರವಾಗಿತ್ತು. ಆದರೆ ಸ್ವರಾಜ್ಯದ ಕಲ್ಪನೆಯು ಪ್ರಾದುರ್ಭವಿಸಿ ರಾಷ್ಟ್ರೀಯ ಪಕ್ಷವು ಅದರಲ್ಲಿ ಭಾಗವನ್ನೆತ್ತಿದಂದಿನಿಂದ ಮೇಲಿನ ಸಂಪ್ರದಾಯದ ಮೇಲೆ ಮೆಲ್ಲಮೆಲ್ಲನೆ 'ಹರತಾಳ' ಬೀಳಹತ್ತಿತು; ರಾಷ್ಟ್ರೀಯ ಸಭೆಯು ಹೇಳಿರುವ ಸ್ವರಾಜ್ಯವೆಂದರೇನೆಂಬುದನ್ನು ಅಶಿಕ್ಷಿತ ವರ್ಗಕ್ಕೆ ತಿಳಿಸುವ ಶ್ಲಾಘ್ಯವಾದ ಪ್ರಯತ್ನವನ್ನು ಬೇರೆ ಕಡೆಯಲ್ಲಿ ಅನೇಕ ಮಹನೀಯರು ಮಾಡಹತ್ತಿದರು. ಈಗಲಂತೂ ನೊನ್-ಕೊ-ಒಪರೇಶನಿನ ಠರಾವು ಪಾಸಾದ ಬಳಿಕ ರಾಷ್ಟ್ರೀಯ ಸಭೆಯು ಸುಮ್ಮನೆ ಬಿದ್ದಿರುವ ಪೂರ್ವ ಸಂಪ್ರದಾಯದ ಮೇಲೆ ಸಂಪೂರ್ಣವಾದ 'ಹರತಾಳ' ಹಾಕುವ ಸಮಯವು ಬಂದೊದಗಿದೆ. ರಾಷ್ಟ್ರೀಯ ಸಭೆಯ ಮೇಲೆ ಇಂಥ ಮಹತ್ವದ ಜವಾಬದಾರಿಯು ಒಂದು ಕಡೆಯಿಂದ ಬಂದಿರುವಾಗ, ಇನ್ನೊಂದು ಕಡೆಯಿಂದ ಅದರ ಮೂಲ ಘಟನೆಯಲ್ಲೆ ಪರಿವರ್ತನೆಯ ಪ್ರಶ್ನೆಗಳು ಬಂದಿವೆ. ಅಲ್ಲದೆ, ಕರ್ನಲ ವೆಜವುಡ್, ಮಿ. ಬೆನ್ ಸ್ಪೂರರಂಥ ಲೇಬರ ಪಾರ್ಟಿಯ ಮುಂದಾಳುಗಳು ಈ ಸುಪ್ರಸಿದ್ಧ ಅಧಿವೇಶನದಲ್ಲಿ ಹಾಜರಿರುವರು; ಮಾತ್ರವಲ್ಲ, ಅವರು ರಾಷ್ಟ್ರೀಯ ಸಭೆ ಮತ್ತು ಅಧಿಕಾರಿವರ್ಗ ಇವರೊಳಗೆ ಒಪ್ಪಂದವಾಗಬೇಕೆಂಬ ಪ್ರಯತ್ನದಲ್ಲಿದ್ದಾರೆ. ಈ ಇಬ್ಬರು ಸದ್‌ಗೃಹಸ್ಥರಲ್ಲದೆ ಸರ್ ವೆಲೆಂಟಾಯ ಚಿರೋಲರೆಂಬ ಸುಪ್ರಸಿದ್ಧ ಗೃಹಸ್ಥರು ಕೂಡ ಈ ಅಧಿವೇಶನದಲ್ಲಿ ಹಾಜರಿರುವವರಿದ್ದಾರೆ. ಈ ಮೇರೆಗೆ ಈ ವರ್ಷದ ರಾಷ್ಟ್ರೀಯ ಸಭೆಯ ಅಧಿವೇಶನವು ಅನೇಕ ದೃಷ್ಟಿಯಿಂದ ಮಹತ್ವದ್ದು ಆದೀತೆಂಬುದಕ್ಕೆ ಸಂಶಯವಿಲ್ಲ.

ರಾಷ್ಟ್ರೀಯ ಸಭೆಯ ಮುಂದೆ ಬರತಕ್ಕ ಮಹತ್ವದ ಪ್ರಶ್ನೆಗಳಲ್ಲಿ ರಾಷ್ಟ್ರೀಯ ಸಭೆಯ ಘಟನೆಯ ವಿಷಯವು ಒಂದಾಗಿದೆ. ರಾಷ್ಟ್ರೀಯ ಸಭೆಯ ಘಟನೆ ಎಂದರೇನೆಂಬುದನ್ನು ಮೊದಲಾಗಿ ಒಂದೆರಡು ಮಾತುಗಳೊಳಗೆ ವಿವರಿಸೋಣ. ರಾಷ್ಟ್ರೀಯ ಸಭೆಯು ಅಸ್ತಿತ್ವದಲ್ಲಿ ಬಂದು ೧೯೦೭ನೆಯ ಇಸವಿಯ ವರೆಗೆ ಅದು ಕೆಲವು ಸಾಮಾನ್ಯ ನಿಯಮಗಳ ಮತ್ತು ಸಂಕೇತದ ಮೇರೆಗೆ ನಡೆಯಹತ್ತಿತು. ಆದರೆ ಮುಂದೆ ಸಭೆಯಲ್ಲಿ ಮತಭೇದವು ಉಂಟಾಗಿ ಗಲಾಟೆ ಎದ್ದದರಿಂದ ಲೇಖಿ ನಿಯಮಗಳ ಅವಶ್ಯಕತೆಯು ಬಿತ್ತು. ಆಗ 'ಕೊಂಗ್ರೆಸ್ ಕೊನ್‌ಸ್ಟಿಟ್ಯೂಶನ್' ಹಾಗು ಅದರ ಕಾರ್ಯನಿರ್ವಾಹದ ಇತರ ನಿಯಮಗಳು ತಯಾರಾದವು. ಈ ನಿಯಮಗಳ ದೆಸೆಯಿಂದ ದೇಶದೊಳಗಿನ ಒಂದು ದೊಡ್ಡ ಪಕ್ಷವು ರಾಷ್ಟ್ರೀಯ ಸಭೆಯಿಂದ ಹೊರಗೆ ನಿಂತಿತು. ಸ್ವತಃ ನಿಯಮಗಳಲ್ಲಿಯೂ ಅಪೂರ್ಣತೆಯ ಮತ್ತು ಅವ್ಯವಹಾರ್ಯತೆಯ ದೋಷ [illegible] [illegible] ಸಭೆಯಲ್ಲಿ ಸೇರಿತು. ಇದು ರಾಷ್ಟ್ರೀಯ ಸಭೆಯ ೩-೪ ವರ್ಷಗಳ ಹಿಂದಿನ ವರೆಗಿನ ಚರಿತ್ರವಾಯಿತು. ಇತ್ತಲಾಗೆ ಆ ರಾಷ್ಟ್ರೀಯ ಸಭೆಯಲ್ಲಿ ಪ್ರತಿನಿಧಿಗಳ ಸಂಖ್ಯೆಯು ಅಧಿಕವಾಗುತ್ತ ಹೋದ್ದರಿಂದ ರಾಷ್ಟ್ರೀಯ ಸಭೆಯ ಕೆಲಸದ ದಿವಸಗಳು ಹೆಚ್ಚಾಗುತ್ತ ಬಂದವು. ಪ್ರತಿನಿಧಿಗಳ ಸಂಖ್ಯೆಯು ಅಧಿಕವಾಗುವುದು ಒಂದು ದೃಷ್ಟಿಯಿಂದ ಹಿತಾವಹವೆ. ಆದರೆ ಒಂದು ಪ್ರಾಂತದಿಂದ ೫೦೦ ಪ್ರತಿನಿಧಿಗಳು ಬರೋಣ, ಮತ್ತು ಇನ್ನೊಂದು ಪ್ರಾಂತದಿಂದ ೧೫೦-೨೦೦ ಬರೋಣ ಇದರಿಂದ ಅದಕ್ಕೆ ನಿಜವಾದ ಪ್ರಾತಿನಿಧಿಕ ಸ್ವರೂಪವು ಬರುವುದಿಲ್ಲ. ಆದ್ದರಿಂದ ಲೋಕಸಂಖ್ಯೆಯ ಮೇರೆಗೆ ಪ್ರತಿನಿಧಿಗಳು ಬರುವಂತೆ ಮಾಡಿ ರಾಷ್ಟ್ರೀಯ ಸಭೆಗೆ ಪ್ರಾತಿನಿಧಿಕತ್ವವನ್ನು ತರಬೇಕೆಂದು, ಹಾಗು ಅದರ ಅಧಿವೇಶನದ ದಿವಸಗಳನ್ನು ಇಂತಿಷ್ಟೆಂದು ನಿಯಮಿಸಬೇಕೆಂದು ಈಗ ಕೆಲವು ನಿಯಮಗಳು ತಯಾರಾಗಿವೆ. ಪ್ರತಿನಿಧಿಗಳ ಸಂಖ್ಯೆಯ ಬಗ್ಗೆ ನಿಯಮಗಳನ್ನು ತಯಾರಿಸಿದ ಕಮಿಟಿಯ ಮುಖ್ಯ ಸೂಚನೆಯು ಯಾವುದೆಂದರೆ, ಮೂರು ಸಾವಿರ ಪ್ರತಿನಿಧಿಗಳಿಗಿಂತ ಹೆಚ್ಚು ಪ್ರತಿನಿಧಿಗಳ ಆಡಂಬರವನ್ನು ಕಟ್ಟಿಕೊಳ್ಳುವುದು ಪ್ರಯಾಸದ ಕಾರ್ಯವಾಗುತ್ತದೆ. ಸ್ವಾಗತದ ವ್ಯವಸ್ಥೆಯ ಮಟ್ಟಿಗೆನೆ ಅಲ್ಲ, ಸಭಾಕಾರ್ಯವು ಕೂಡ ಒಮ್ಮೊಮ್ಮೆ ದೀರ್ಘವೂ, ಅವ್ಯವಸ್ಥಿತವೂ ಆಗಿಹೋಗುತ್ತದೆ. ಆದ್ದರಿಂದ ಹೆಚ್ಚೆಂದರೆ ಕೊಂಗ್ರೆಸಿಗೆ ಮೂರು ಸಾವಿರ ಪ್ರತಿನಿಧಿಗಳಿರಬಹುದು. ಎಂದ ಮೇಲೆ ಒಂದು ಲಕ್ಷಕ್ಕೆ ಒಬ್ಬ ಪ್ರತಿನಿಧಿಯು ಎಂದು ಹೇಳಿದ ಹಾಗಾಯಿತು. ಪ್ರತಿನಿಧಿಗಳ ಸಂಖ್ಯೆಯ ವ್ಯವಸ್ಥೆಯನ್ನು ಈ ಮೇರೆಗೆ ನಿರ್ಧರಿಸಿ ವಿಷಯನಿಯಾಮಕ ಕಮಿಟಿಯ ಸಂಗತಿಯನ್ನು ಸದರಿ ಕಮಿಟಿಯು ಎತ್ತಿಕೊಂಡಿದೆ. ವಿಷಯ ನಿಯಾಮಕ ಕಮಿಟಿಯ ವಿಷಯವು ಬಹಳ ನಾಜೂಕಾದ್ದು. ಕೊಂಗ್ರೆಸಿನ ಮುಖ್ಯ ಮಂಟಪದಲ್ಲಿ ಬೇಕಾಗುವ ಸಮಯಕ್ಕಿಂತ ಹೆಚ್ಚು ಸಮಯವು ಈಗ ಎರಡು ಮೂರು ವರ್ಷಗಳಿಂದ ಈ ವಿಷಯನಿಯಾಮಕ ಕಮಿಟಿಯಲ್ಲೆ ಹೋಗುತ್ತದೆ. ಇದರಿಂದ ಈ ಕಮಿಟಿಯಲ್ಲಿ ಅಂತರ್ಭವಿಸದ ಅನ್ಯ ಪ್ರತಿನಿಧಿಗಳ ವ್ಯರ್ಥವಾಗಿ ಕಾಲಾಪವ್ಯಯವಾಗುತ್ತದೆ. ಮತಭೇದಾಸ್ಪದವಾದ ವಿಷಯಗಳಿದ್ದಲ್ಲಂತೂ ಆ ಸಂಗತಿಯನ್ನು ಹೇಳುವುದೆ ಅಗತ್ಯವಿಲ್ಲ. ಸಾರಾಂಶ ಈ ವಿಧದಿಂದ ಉಂಟಾಗುವ ಕಾಲಾಪವ್ಯಯವನ್ನು ಹೋಗಲಾಡಿಸಲು ಮುಖ್ಯ ಉಪಾಯವು ಒಂದೆ. ಮತ್ತು ಅದು ಯಾವುದೆಂದರೆ, ಆಯಾ ಪ್ರಾಂತದ ಮುಖ್ಯ ಪ್ರಶ್ನೆಯನ್ನು ಪ್ರಾಂತಿಕ ಕಮಿಟಿಯಲ್ಲಿ ಬಹುಮತದಿಂದ ಮೊದಲೇ ನಿರ್ಣಯಿಸಿಕೊಳ್ಳಬೇಕು; ವಿವಾದ್ಯವಾದ ಪ್ರಶ್ನೆಯು ಎಲ್ಲ ಪ್ರಾಂತಗಳ ಕಮಿಟಿಯಲ್ಲಿ ಚರ್ಚಿಸಲ್ಪಟ್ಟು ಆಯಾ ಪ್ರಾಂತದವರು ತಂತಮ್ಮ ನಿಶ್ಚಿತ ಅಭಿಪ್ರಾಯವನ್ನು ಕೊಡಬೇಕು, ಅದರ ಮೇಲೆ ಬೇಕಾದರೆ ಒಂದು ವೇಳೆ ವಾದವಾಗಬಹುದು. ಪರಂತು ಈ ವಾದದಿಂದ ವಿನಾಕಾರಣ ಪಕ್ಷಭೇದಗಳು ಉಂಟಾಗಲಾರವು. ಹಾಗು ಕಾಲಾಪವ್ಯಯವು ಹೆಚ್ಚಿನ ಪಟ್ಟಿಗೆ ಉಂಟಾಗಲಿಕ್ಕಿಲ್ಲ. ಈಗ ಅಂಥ ಒಂದು ಅತಿ ಮಹತ್ವದ ವಿಷಯದ ಮೇಲೆ ಬೇಕಾದರೆ ಸಭೆಯ ಮಂಟಪದಲ್ಲಿ ಬಹಿರಂಗವಾಗಿ ಉಪಸೂಚನೆಯನ್ನು ತರಬಹುದು. ಯಾಕೆಂದರೆ ಹೀಗೆ ಉಪಸೂಚನೆಯ ಹಕ್ಕನ್ನು ತೆಗೆದುಕೊಂಡರೆ ವಾದ ವಿವಾದದ ಯಾವ ಸ್ವಾರಸ್ಯವುಂಟೊ ಅಥವಾ ಅದರ ಯಾವ ರುಚಿಯುಂಟೊ ಅದೇ ಹೋದಂತಾದೀತು. ಈ ಕಾರಣದಿಂದ ಮೇಲಿನ ಅನುಕೂಲತೆಯು ಇಡೋಣಾಗಿದೆ.

ರಾಷ್ಟ್ರೀಯ ಸಭೆಯ ಮುಂದೆ ಬರತಕ್ಕ ಇನ್ನೊಂದು ಮಹತ್ವದ ಮತ್ತು ವಾದಗ್ರಸ್ತವಾದ ಪ್ರಶ್ನೆಯು ಯಾವುದೆಂದರೆ: ದೇಶೀ ಸಂಸ್ಥಾನಗಳನ್ನು ಕೊಂಗ್ರೆಸು ತನ್ನಲ್ಲಿ ಸೇರಿಸಿಕೊಳ್ಳಬಹುದೊ ಹೇಗೆ? ದೇಶೀಯ ಸಂಸ್ಥಾನಗಳನ್ನು ಸೇರಿಸಿಕೊಳ್ಳುವುದು ಎಂಬುದರ ಅರ್ಥವು ಆ ಸಂಸ್ಥಾನಗಳ ರಾಜ್ಯಭಾರದ ಬಗ್ಗೆ ಬ್ರಿಟಿಶ ಹಿಂದುಸ್ಥಾನದಲ್ಲಿ ಸುಧಾರಣೆಗಳಾಗುವಂತೆ ಸೂಚನೆಗಳನ್ನು ಕೊಡುವುದೂ, ಅದಕ್ಕೆ ಬೇಕಾದ ಚಳವಳವನ್ನು ಮಾಡುವುದೂ ಎಂದಾಗಿರುತ್ತದೆ. ಈ ಪ್ರಶ್ನೆಯ ವಿಷಯವಾಗಿ ಮುಖಂಡರಲ್ಲಿ ವಿಧಿನಿಷೇಧ ರೂಪದಿಂದ ಎರಡು ಪಕ್ಷಗಳಿವೆ. ಈಗಿನ ಕಾಲದಲ್ಲಿ ಬ್ರಿಟಿಷ್ ಹಿಂದುಸ್ಥಾನದವರು ಮುಂದರಿಸಹತ್ತಿದ್ದಲ್ಲಿ ಅವರ ನೆರೆಯವರು ಸಂಸ್ಥಾನಾಧಿಪತಿಗಳ ಲಹರಿಯ ಮೇಲೆಯೆ ಸುಮ್ಮನೆ ಕುಳಿತುಕೊಂಡಾರು, ಅಷ್ಟರಿಂದಲೆ ಸಂತುಷ್ಟರಾದಾರು ಎಂದು ಹೇಳಲಾಗುವುದಿಲ್ಲ. ಈ ವಿಷಯವು ಹೇಗೂ ಇರಲಿ; ಕೊಂಗ್ರೆಸಿನಲ್ಲಿ ಅದರ ಭವಿತವ್ಯತೆಯು ಏನಾಗುತ್ತದೆ ಎಂಬುದನ್ನು ನೋಡೋಣ.

ರಾಷ್ಟ್ರೀಯ ಸಭೆಯ ಘಟನೆಯ ಮೊದಲನೆಯ ಸೂತ್ರದಲ್ಲಿ ಬದಲಾವಣೆಯಾಗಬೇಕೆಂಬ ಸೂಚನೆಯನ್ನು ಸದರಿ ಕಮಿಟಿಯು ಕೊಟ್ಟಿದೆ. ರಾಷ್ಟ್ರೀಯ ಸಭೆಯ ಸಂಸ್ಥೆಯ ದೃಷ್ಟಿಯಿಂದ ಈ ವಿಷಯವು ಬಹು ನಾಜೂಕಾಗಿ ಇದೆ. ಇದು ವರೆಗೆ ರಾಷ್ಟ್ರೀಯ [illegible] ಸಾಧ್ಯವನ್ನು ಯಾವ ಸಾಧನದಿಂದ ಸಾಧಿಸಬೇಕು? ಎಂಬಿತ್ಯಾದಿ ಪ್ರಶ್ನೆಗಳು ಕಮಿಟಿಯ ಮುಂದೆ ಬಂದವೆ. ಈ ಬಗ್ಗೆ ಮತಭೇದ ಉಂಟಾಗಿದೆಯಾದರೂ ಬರುವ ಅಧಿವೇಶನದಲ್ಲಿ ಈ ಪ್ರಶ್ನೆಯು ಸರಿಯಾಗಿ ತೀರ್ಮಾನಿಸಲ್ಪಡುವದೆಂಬ ಭರವಸೆ ಇದೆ.

ಶಿಕ್ಷಣ, ನ್ಯಾಯ ತೀರ್ಮಾನ, ಹಣದ ವ್ಯವಸ್ಥೆ ಮುಂತಾದ ಬೇರೆ ಅವಶ್ಯಕವಾದ ಪ್ರಶ್ನೆಗಳು ಕೂಡಾ ನಾಳೆಯ ಅಧಿವೇಶನದ ಮುಂದೆ ಬರಲಿಕ್ಕಿವೆ. ದೇಶಕ್ಕೆ ಬೇಕಾಗಿರುವ ರಾಷ್ಟ್ರೀಯ ಶಾಲೆಗಳನ್ನು ಸ್ಥಾಪಿಸಲು ರಾಷ್ಟ್ರೀಯ ಸಭೆಯು ಯಾವ ವ್ಯವಸ್ಥೆಯನ್ನು ಮಾಡುತ್ತದೆ, ಏನು ಆಜ್ಞಾಪಿಸುತ್ತದೆ, ಈ ಸಂಗತಿಯ ಕಡೆಗೆ ಅನೇಕರು ಕುತೂಹಲ ಪೂರ್ಣರಾಗಿ ನೋಡಹತ್ತಿದ್ದಾರೆ. ಇಡೀ ದೇಶದ [illegible] ಸ್ಥಾನದಲ್ಲಿ ಶಿಕ್ಷಣ ಹಾಗು ನ್ಯಾಯ ನಿರ್ಣಯಸ್ಥಾನ ಇತ್ಯಾದಿಗಳ ಬಗ್ಗೆ ಒಂದೇ ಧೋರಣ, ಒಂದೇ ಕ್ರಮ, ಮತ್ತು ಒಂದೇ ಬಗೆಯ ಪ್ರಯತ್ನ ನಡಿಯುವುದು ಅವಶ್ಯಕ ಮತ್ತು ಹಿತಾವಹವಾಗಿರುವುದರಿಂದ ರಾಷ್ಟ್ರೀಯ ಸಭೆಯ ಛತ್ರದಲ್ಲಿ ಮೇಲಿನ ಇಲಾಖೆಗಳನ್ನು ಸ್ಥಾಪಿಸಬೇಕೆಂದು ಅನೇಕ ವಿಚಾರವಂತರು ಆಲೋಚಿಸ ಹತ್ತಿದ್ದಾರೆ. ಆದ್ದರಿಂದ ರಾಷ್ಟ್ರೀಯ ಸಭೆಯು ಇವುಗಳ ಬಗ್ಗೆ ಯಾವ ವ್ಯವಸ್ಥೆಯನ್ನು ಮಾಡುತ್ತದೆ ಎಂಬುದು ಮುಖ್ಯ ಪ್ರಶ್ನೆಯು. ಯಾಕೆಂದರೆ ವರ್ಷದ ೩-೪ ದಿವಸಗಳಲ್ಲಿ ದೊಡ್ಡ ದೊಡ್ಡವರು ಒಟ್ಟಿಗೆ ಸೇರಿ ಯಾವುದೋ ಒಂದು ವಿಧದಿಂದ ಆಲೋಚನೆಯನ್ನು ಮಾತ್ರ ಕೊಟ್ಟರೆ ಸಾಲದು; ಈಗಿನ ಪರಿಸ್ಥಿತಿಯಲ್ಲಿ ರಾಷ್ಟ್ರೀಯ ಸಭೆಯಂಥ ಸರ್ವಮಾನ್ಯ ಸಂಸ್ಥೆಯು ತನ್ನ ಪೂರ್ಣ ಜವಾಬದಾರಿಯನ್ನು ಅರಿತು ತಾನು ಕೊಡುವ ಆಲೋಚನೆಯನ್ನು ತನ್ನ ಆಚರಣದಲ್ಲಿ ತರುವಂತೆ ಮಾಡಬೇಕು. ಮತ್ತು ಹಾಗೆ ಮಾಡಿದ್ದಲ್ಲಿ ಆ ಸಂಸ್ಥೆಯ ಮಹತ್ವವು ಉಳಿಯುತ್ತದೆ. ಮಾತ್ರವಲ್ಲ, ಅದು ಕಾರ್ಯತಃ ಲೋಕೋಪಕಾರಿಯಾಗುತ್ತದೆ.

ಈ ಎಲ್ಲ ಪ್ರಶ್ನೆಗಳು ಕನ್ನಡಿಗರಿಗೆ ಇತರರಂತೆ ಮಹತ್ವವುಳ್ಳವುಗಳಾದರೂ ರಾಷ್ಟ್ರೀಯ ಸಭೆಯ ಮುಂದೆ ಬರಲಿಕ್ಕಿದ್ದ ಕರ್ನಾಟಕಕ್ಕೆ ಪ್ರಾಂತಿಕ ಕಮಿಟಿಯನ್ನು ಕೊಡಬೇಕೆಂದಿರುವ ಸೂಚನೆಯು ಅವರಿಗೆ ಹೆಚ್ಚು ಮಹತ್ವದ್ದಾಗಿದೆ. ಭಾಷಾನುರೂಪವಾಗಿ ಪ್ರಾಂತರಚನೆಯನ್ನು ಮಾಡಬೇಕೆಂದು ನಾವು ಸರಕಾರದೊಡನೆ ಕೇಳಿಕೊಳ್ಳುತ್ತೇವಷ್ಟೆ. ನಮ್ಮ ಸಂಸ್ಥೆಯಾದ ರಾಷ್ಟ್ರೀಯ ಸಭೆಯು ಅದರಂತೆ ಉಪಕ್ರಮವನ್ನು ಮಾಡದಿದ್ದರೆ ನಮ್ಮ ಕೇಳಿಕೆಗೆ ನಾವೆ ಬೆಲೆಕೊಟ್ಟಂತಾಗುವುದಿಲ್ಲ. ಆದರೆ ರಾಷ್ಟ್ರೀಯ ಸಭೆಯು ಆಂಧ್ರರಿಗೂ, ಸಿಂಧಿಗಳಿಗೂ ಪ್ರತ್ಯೆ ಪ್ರತ್ಯೇಕವಾದ ಕೊಂಗ್ರೆಸಕಮಿಟಿಯ ಹಕ್ಕನ್ನು ಕೊಟ್ಟು ಭಾಷಾನುರೂಪ ಪ್ರಾಂತರಚನೆಯ ತತ್ವಕ್ಕೆ ತನ್ನ ಸಮ್ಮತಿಯನ್ನು ಕೊಟ್ಟಿದೆ ಮಾತ್ರವಲ್ಲ, ಉಪಕ್ರಮವನ್ನು ಕೂಡ ಮಾಡಿದೆ ಎಂದು ತಿಳಿಸಲು ನಾವು ಸಂತೋಷಪಡುವೆವು. ಈ ವರ್ಷದ ಅಧಿವೇಶನದಲ್ಲಿ ಕನ್ನಡಿಗರ ಕೇಳಿಕೆಯು ರಾಷ್ಟ್ರೀಯ ಸಭೆಯ ಮುಂದೆ ಬಂದಿರುವುದು. ಈ ಪ್ರಶ್ನೆಯ ಜಾಗೃತಿಯನ್ನು ಹುಟ್ಟಿಸುವುದಕ್ಕಾಗಿ ಧಾರವಾಡದಿಂದ ಮ. ರಾ. ರಾಘವೇಂದ್ರರಾವ ಕಡಪಾ ಎಂಬವರು ಕರ್ನಾಟಕದ ಇತರ ಭಾಗಗಳಲಿ ಹೋದಂತೆ ಇಲ್ಲಿಯೂ ಬಂದಿದ್ದರು. ಕನ್ನಡಿಗರು ತಮ್ಮ ತಮ್ಮ ಜಿಲ್ಲೆಗಳಿಂದ ಕಳುಹಿಸುವ ಪ್ರತಿನಿಧಿಗಳ ಮುಖಾಂತರ ಈ ಪ್ರಶ್ನೆಯನ್ನು ಡಿಸೆಂಬರ ತಾ. ೨೪ರಲ್ಲಿ ಜರಗಲಿಕ್ಕಿರುವ ಓಲ್ ಇಂಡಿಯಾ ಕೊಂಗ್ರೆಸ ಕಮಿಟಿಯ ಮುಂದೆಯೂ, ರಾಷ್ಟ್ರೀಯ ಸಭೆಯ ಮುಂದೆಯೂ ಇಟ್ಟು ಅದನ್ನು ಈ ಪ್ರಾಂತದ ಗುಣಕ್ಕೆ ತೀರ್ಮಾನಿಸಿಕೊಳ್ಳಬೇಕೆಂದು ಸದರಿ ಗೃಹಸ್ಥರ ಅಂಬೋಣವಿದೆ. ಈ ಅಂಬೋಣವನ್ನು ನಾವು ಅನುಮೋದಿಸುತ್ತೇವೆ.

ಸ್ಫುಟ ವಿಚಾರಗಳು.

- ೧. ಅಸಹಕಾರಿತೆಯು ಪ್ರಾರಂಭವಾದ ಬಳಿಕ ಮಿ[illegible] ಮೊಂಟೆಗ್ಯು ಮೊದಲು ಮಾಡಿಕೊಂಡು ಲೆಫ್ಟಿನೆಂಟ ಗವರ್ನರರ ವರೆಗಿ[illegible] ದೊಡ್ಡ ಅಧಿಕಾರಿಗಳು ಬಾಯಿಯಿಂದ ಸದರಿ ಚಳವಳವು [illegible] ಶೀಣಾದದ್ದೆಂದು ಹೇಳುತಿದ್ದರಷ್ಟೆ. ಈ ಭಾಷಣಗಳ ಮೇಲಿಂ[illegible] ಒತ್ತಾಟವು ಪ್ರಾರಂಭವಾದೀತೆಂದು ಸಕಾರಣವಾದ ಅನುಮಾನ[illegible] ಮಾಡಲ್ಪಡುತಿತ್ತು. ಹಾಗು ಈ ಅನುಮಾನಕ್ಕೆ ಪಂಜಾಬದ ಕೆಲ[illegible] ಜಿಲ್ಲೆಗಳಲ್ಲಿ 'ಸೆಡಿಶನ್ ಮೀಟಿಂಗ್ಸ ಏಕ್ಟ'ನ್ನು ಲಾಗುಮಾಡಿ[illegible] ಕೆಲವು ಪತ್ರಗಳ ಮೇಲೆ ಮೊಕದ್ದಮೆಯನ್ನು ಪ್ರಾರಂಭಿಸಿ[illegible] ಕೊಂಡಮಟ್ಟಿಗೆ ಆಧಾರವೆಂದು ತೋರಿಸಬಹುದಿತ್ತು. ಆದರೆ ಹಿಂದಿ[illegible]

[illegible] ದಿಲ್ಲಿಯಲ್ಲಿ [illegible] ವಾಗಿರುವ ಸಂಗತಿಗಳು [illegible] ದಿಲ್ಲಿಯಲ್ಲಿ ಕೆಲವು ಸ್ವಯಂ ಸೇವಕರ ಸಮಾಜಗಳು [illegible] ಎಂಬ ಕಾರಣ [illegible] ದಿಲ್ಲಿ [illegible] ಮೀಟಿಂಗ್ [illegible] ಪ್ರಾರಂಭಿಸುವಾಗ ದಿಲ್ಲಿ ಕಮಿಷನರರು ಒಂದು ಜಾಹೀರ ಪ್ರಕಟನೆಯನ್ನು ಹೊರಡಿಸಿ ಅದರಲ್ಲಿ ಅವರು [illegible] ಧೋರಣವನ್ನು [illegible] ಬೇಕಾಗಿದೆ ಎಂಬುದರ ಸಮರ್ಥನವನ್ನು ಮಾಡಿದ್ದಾರೆ [illegible] ಸಮಾಜಗಳು ಪ್ರಥಮತಃ ಸಾಮಾಜಿಕ ಮತ್ತು ಸಾತ್ವಿಕವಾದ ರಾಜಕೀಯ ಸೇವೆಗೋಸ್ಕರ ಕೆಲಸಮಾಡುತಿದ್ದವು, ಆದರೆ ಅನಂತರ ಅವು ರಾಜಕೀಯ ವಿಷಯದಲ್ಲಿ ವಿವಕ್ಷಿತ ಮರ್ಯಾದೆಯನ್ನು ಉಲ್ಲಂಘಿಸಿ ತಮ್ಮ ಮತಗಳಿಗೆ ಅಧೀನರಾಗದವರ ಮೇಲೆ ಸಾಮಾಜಿಕ-ಬಹಿಷ್ಕಾರ, ಇತರ ವಿಧದ [illegible] ಮುಂತಾದ್ದನ್ನು ಪ್ರಾರಂಭಿಸಿದವು, ಕೆಲವು ಸಂಗತಿಗಳಲ್ಲಿ ಈ ಸಮಾಜಗಳು ಸಾರ್ವಜನಿಕ ಶಾಂತತೆಯನ್ನು ಭಂಗಪಡಿಸುವಂತೆ ಯತ್ನಿಸಿದವು ಎಂದು ಹೇಳಿ ಸದರಿ ಜಾಹೀರ ಪ್ರಕಟನಾಕಾರರಾದ ದಿಲ್ಲಿ ಕಮಿಷನರರು ಇಂಥ ಸಂಘಗಳಿಂದ ಸಾರ್ವಜನಿಕ ಸೇವೆಯ ಉದ್ದೇಶವಿರುವವರು ತಮ್ಮ ಸಂಬಂಧವನ್ನು ತೆಗೆದುಬಿಡಬೇಕೆಂದು ಸೂಚಿಸಿದ್ದಾರೆ. ಮತ್ತು ಅವರು ಗವರ್ನರ ಜನರಲ್ ಇವರ ಸಮ್ಮತಿಯನ್ನು ಪಡಕೊಂಡೇ ಸೆಡಿಶಸ್ ಮೀಟಿಂಗ್ಸ್ ಯಕ್ಟ್ ದಿಲ್ಲಿಯಲ್ಲಿ ಜಾರಿಗೆ ತಂದಿದ್ದಾರೆಂದು ಸ್ಪಷ್ಟವಾಗಿ ತಿಳಿಸಿದ್ದಾರೆ

೨ ದಿಲ್ಲಿಯಲ್ಲಿ ಮೇಲಿನಂತೆ ಜಾಹೀರ ಪತ್ರಕವು ಮಾತ್ರ ಹೊರಟಿದೆ ಎಂದಲ್ಲ, ಆ ಮೇರೆಗೆ ಕೆಲವರನ್ನು ಕೈದುಮಾಡುವ ಕಾರ್ಯವು ಕೂಡ ಭರದಿಂದ ನಡೆಯುತ್ತಿದೆ ಖಿಲಾಫತ್ ಕಮಿಟಿಯಲ್ಲಿ ಕೆಲಸ ಮಾಡುತಿದ್ದ ಮಿ ಎರಿಫಹಸನ ಎಂಬವರನ್ನು ಪ್ರತಿಬಂಧಿಸಿದ್ದಾರೆ. ಮೆಜಿಸ್ಟ್ರೇಟರ ಮುಂದೆ ಅವರನ್ನು ತಂದು ನಿಲ್ಲಿಸಿದ್ದಲ್ಲಿ ಆರೋಪಿತರು ತಾನು ಜಾಮೀನು ಕೊಡುವುದಿಲ್ಲವೆಂದು ಹೇಳಿದರು. ಆ ಮೇಲೆ ಸದರಿ ಪ್ರಕರಣವು ಮುಂದರಿಸಲ್ಪಟ್ಟಿದೆ ದಿಲ್ಲಿ ಕಮಿಶನರರು ಮೇಲಿನಂತೆ ಸ್ವಯಂಸೇವಕ ಸಂಘಗಳನ್ನು ತೆಗೆದು ಹಾಕಬೇಕೆಂದು ಅಪ್ಪಣೆ ಕೊಡಿಸಿದ ಮೇರೆಗೆ ಆ ಸಂಘಗಳ ಅಧ್ಯಕ್ಷರಾದ ಮಿ ಅಸಫಅಲ್ಲಿ ಎಂಬವರು ಒಂದು ಜಾಹೀರ ಪತ್ರಕವನ್ನು ಹೊರಡಿಸಿ, ಕಮಿಶನರ್ ದೊರೆ ಮಹಾಶಯರ ಇಚ್ಛೆಯನ್ನು ರಾಜನಿಷ್ಠೆಯಿಂದ ಪೂರಯಿಸಿದ್ದಾರೆ ಮಿ ಅಸಫಅಲ್ಲಿ ಇವರು ಸ್ವಯಂಸೇವಕರ ಸಂಘಗಳನ್ನು ನಿಲ್ಲಿಸುವ ಪತ್ರಕದಲ್ಲಿ ಸದರಿ ಸಂಘಗಳು ಇದು ವರೆಗೆ ಸಾವರ್ಜನಿಕ ದೃಷ್ಟಿಯಿಂದ ಮಾಡಿದ ಅಮೂಲ್ಯ ಸೇವೆಯನ್ನು ಕೊಂಡಾಡಿ, ಹಾಗು ದೇಶಭಕ್ತಿಯ ಬಗ್ಗೆ ಅವುಗಳ ಆಭಾರವನ್ನು ಪ್ರದರ್ಶಿಸಿದ್ದಾರೆ ಇಂಥ ಉಪಯುಕ್ತವಾದ ಸಂಘಗಳನ್ನು ಮುಚ್ಚುವಾಗ ಅಧ್ಯಕ್ಷರಾದ ಮಿ ಅಸಫಅಲ್ಲಿಗಳಿಗೆ ಬಹು ವಿಷಾದವುಂಟಾಗಿದೆ ಆದರೂ ಕಮಿಶನರ್ ಮಹಾಶಯರ ಹುಕುಮಿನ ಮೇರೆಗೆ ಅವರು ತಮ್ಮ ಸಂಘಗಳನ್ನು ನಿಲ್ಲಿಸಿದ್ದಾರೆ ಇರಲಿ, ದಿಲ್ಲಿ ಕಮಿಶನರ ಮುಂತಾದ ಅಧಿಕಾರಿಗಳು ಈ ಮೇರೆಗೆ ತಮ್ಮ ಉಗ್ರ ಧೋರಣವನ್ನು ಪುನಃ ಪ್ರಾರಂಭಿಸಿದ್ದಾರೆಂಬುದು ನಿಜ ಸುಧಾರಣೆಗಳು ಬರುವ ಸುಮುಹೂರ್ತದಲ್ಲಿ ಇಂಥ ಒತ್ತಾಟವು ಕೂಡ ಯಾಕೆ ಅವಶ್ಯಕವೆಂದು ತೋರುವುದಿಲ್ಲ. ಮೊದಲು ಮಿಂಟೋ ಸುಧಾರಣೆಯ ಕಾಲದಲ್ಲೂ ಇದೇ ಕ್ರಮವಿತ್ತು. ಈಗಲೂ ಪುನಃ ಪ್ರಾರಂಭವಾಗಿದೆ! ಇದರ ಸಂಗತಿ ಏನೆಂಬುದು ಗೊತ್ತಾಗುವುದಿಲ್ಲ

೩ ಬಕ್ಕಿಂಗ್ಹಾಮಮಿಲ್ಲ್ ಮಜೂರರ ಕಲ್ಲೆಸೆಯುವಿಕೆಯ ದೆಸೆಯಿಂದ ಪೋಲೀಸಿನವರು ಕೋವಿ ಸುಡಬೇಕಾಯಿತು ಎಂದು ಸರಕಾರದ ಪ್ರಕಟನೆಯ ಮುಖ್ಯ ಸಾರಾಂಶ ಇಷ್ಟೆ ಅಲ್ಲ ಗವರ್ನರ್ ಸಾಹೇಬರ ಕಡೆಯಿಂದ ಸೆಕ್ರೆಟರಿಗಳು ಮಿ| ವಾಡಿಯಾ ಇವರಿಗೆ ಬರೆದ ಪತ್ರದಲ್ಲಿಯೂ ಈ ಚಳವಳವು ಇನ್ನೂ ಬೆಳೆದರೆ ಇದಕ್ಕೆ ಮಿ| ವಾಡಿಯಾ ಮತ್ತು ಅವರೊಂದಿಗೆ ಮದ್ರಾಸ ಲೇಬರ್ ಯೂನಿಯನ್ನಿನ ಚಾಲಕರಾಗಿದ್ದವರು ಕೂಡಾ ಜವಾಬ್ದಾರರಾಗುವ ಸಂದರ್ಭ ಬಂದೊದಗೀತು ಎಂಬ ಬೆದರಿಕೆಯ ಮಾತಿದೆ. ಅದಕ್ಕೆ ಕೊಟ್ಟ ಪ್ರತ್ಯುತ್ತರದಲ್ಲಿ ಮಿ| ವಾಡಿಯರು ತನಗೆ ಕೋರ್ಟಿನ ಇಂಜಂಕ್ಷನ್ ಹುಕುಂ ಇರುವುದರಿಂದ ತಾನು ಈ ಮಿಲ್ಲ್ ಮಜೂರರನ್ನು ತಡೆಹಿಡಿಸಲಾರದೆ ಈ ಅನಾಹುತಗಳಿಗೆ ಕಾರಣವಾಯಿತು ಎಂದು ಪ್ರತ್ಯುತ್ತರ ಬರೆದಿದ್ದಾರೆ ಇದಲ್ಲದೆ ಮಿ| ವಾಡಿಯರು ಪ್ರಕಟಿಸಿದ ಇನ್ನೊಂದು ಪತ್ರದಲ್ಲಿ ತನಗೆ ಈ ಅನಾಹುತದ ವರ್ತಮಾನ ತಿಳಿದು ಬಂದದ್ದನ್ನು ವಿವರಿಸಿದ ಅನಂತರ ಒಂದು ಪ್ರಶ್ನೆಯನ್ನು ಕೇಳಿದ್ದಾರೆ "ಪೋಲೀಸ ಸಹಾಯವನ್ನು ಮೋಟರ್ ಬಂಡಿಗಳಲ್ಲಿ ಸಾಗಿಸಲ್ಪಡುವ ಹೊಸ ಮಜೂರರಿಗೆ ಒದಗಿಸಿದ ನಂತರ ಜನರು ಆ ಬಂಡಿಗಳ ಕಡೆಗೆ ಕಲ್ಲೆಸೆಯಲು ಪ್ರಾರಂಭಿಸಿದರು ಎಂದು ಸರಕಾರದ ಪ್ರಕಟನೆಯಲ್ಲಿ ಇದೆ. ಈ ಸಮಾಚಾರವು ಪೋಲೀಸಿನವರ ತಿಳುವಳಿಕೆಗೆ ಬಂದ ಮೇಲೆ ಅವರು ಯಾವ ಮೂಲಕ ಜನರಿಗೆ ಮುಂದಾಗಿ ಎಚ್ಚರಿಸಿದರು" ಎಂದು ಮಿ| ವಾಡಿಯರು ಕೇಳಿದ್ದಾರೆ ಇದರಲ್ಲಿ ಇನ್ನೂ ಕೆಲವು ವಿಚಾರಗಳು ಬರುವುದು ಸ್ವಾಭಾವಿಕವಾಗಿದೆ. ಮೋಟರ್ ಲೋರಿಗಳಲ್ಲಿ ಈ ಹೊಸ ಮಜೂರರನ್ನು ಸಾಗಿಸಬೇಕಾಗಿದ್ದರೆ ಅದರೊಂದಿಗೆ ಪೋಲೀಸ್ ಸಹಾಯವನ್ನು ಮಿಲ್ಲಿನ ಮನೆವರರು ಅಥವಾ ಆಡಳಿತೆದಾರರು ಅಪೇಕ್ಷಿಸುವುದಾದರೆ ಅವರಿಗೆ ಹಳೆ ಮಜೂರ ಜನರು ಪೋಕರಿತನವನ್ನು ನಡೆಸ್ಯಾರು ಎಂಬ ಸಂದೇಹ ಬಂದಿರಬೇಕು ಇಂಥ ದ್ವೇಷದ ಮಾತುಗಳೇನಾದರೂ ಇವೆಯೇ? ಇದ್ದರೆ ಆ ಕುರಿತು ಟಮಟೆಯ ಮೂಲಕ ಜನಗಳಿಗೆ ಎಚ್ಚರಿಸುವುದು ಮತ್ತು ಲೇಬರ್ ಯೂನಿಯನ್ನಿನ ಆಡಳಿತೆ ಸಭೆಯವರಿಗೆ ಎಚ್ಚರಿಸುವುದು ಪೋಲೀಸಿನವರ ಪ್ರಥಮ ಕರ್ತವ್ಯವಲ್ಲವೇ? ಪೋಲೀಸಿನವರು ಹೀಗೇಕೆ ಮಾಡದೇ ಹೋಗಿರುವುದಕ್ಕೆ ಬಲವತ್ತಾದ ಕಾರಣಗಳಾವವು? ಮದ್ರಾಸಿನಲ್ಲಿ ಇಂಥ ಪ್ರಸಂಗವು ಈ ಮೊದಲು ಬಂದಿತ್ತೆ? ಅಥವಾ ಬರ್ಮಾ ರೆಗ್ಯುಲೇಶನ್ ಲಾಟಿಗಳಿಂದ ಗುಂಪನ್ನು ಚದರಿಸಲು ಸಾಧ್ಯವಿರಲಿಲ್ಲವೋ? ಗುಂಡುಹಾರಿಸಬೇಕಾದರೆ ದಂಗೆಎಕ್ಟನ್ನು ಮೆಜಿಸ್ಟ್ರೇಟರು ಓದಿ ಜನರಿಗೆ ಎಚ್ಚರಿಸಬೇಕು ಎಂಬ ನಿಯಮವಿದೆಯೋ? ಇಂಥ ನಿಯಮವನ್ನು ಬರೆ ಕಲ್ಲೆಸೆಯುತಿದ್ದವರ ಮೇಲೆ ಜಾರಿ ಮಾಡುವುದಕ್ಕೆ ಅವಕಾಶವಿರಲಿಲ್ಲವೋ? ಮೋಟರ್ ಲೋರಿಗಳಲ್ಲಿ ಒಡ್ಯಾಡುವ ಮತ್ತು ಸರಕಾರದ ಬೆಂಬಲ ತಮಗಿದೆ ಎಂದು ಉನ್ಮತ್ತರಾದ ಹೊಸ ಮಜೂರರು ಹಸಿದಿರುವ ಹಳೆ ಮಜೂರರನ್ನು ಪೋಕರಿ ಮಾತುಗಳಿಂದ ಏನಾದರೂ ಕೆಣಕಿಸಿದರೊ? ಅದರಲ್ಲಿ ಪೋಲೀಸು ಜವಾನರು ಎಷ್ಟರಮಟ್ಟಿಗೆ ಪಾಲುಗಾರರಾಗಿದ್ದರು? ಇವೆಲ್ಲ ಪ್ರಶ್ನೆಗಳು ಸಹಜವಾಗಿಯೆ ಬರಬೇಕಾಗಿವೆ ಈ ವಿಚಾರವನ್ನು ದೇಶೀಯ ಕಮ್ಮಿಟಿಯೊಂದು ಏರ್ಪಟ್ಟು ಮಾಡಲಿಕ್ಕಿದೆ ಎಂದು ನಾವು ಕೇಳುತ್ತೇವೆ ಆ ವರೆಗೆ ನಮ್ಮ ಅಭಿಪ್ರಾಯವನ್ನು ನಾವು ಹೇಳುವುದು ಯೋಗ್ಯವಲ್ಲ ಅಂತು ಕ್ಷುತ್ತು ತುತ್ತಿಗೆ ಬ್ರಹ್ಮಾರ್ಪಣ'ವೆಂಬಂತೆ ಅಲ್ಪ ಸ್ವಲ್ಪ ಗಲಾಟೆ ಎದ್ದೊಡನೆ ಸರಕಾರದ ಬಲವು ಸಾಮರ್ಥ್ಯವು ಎಷ್ಟಿದೆ ಎಂಬದನ್ನು ತೋರ್ಪಡಿಸುವ ಕಾಂಕ್ಷೆಯು ಸರಕಾರಿ ನವುಕರರಲ್ಲಿ ತುಂಬಿಕೊಂಡಿರುವುದು ಪ್ರಜಾಜನರಲ್ಲಿ ಇನ್ನೂ ಕ್ರೋಧಾಗ್ನಿಗೆ ತುಪ್ಪವೆರೆದಂತಾಗಿ ಸಮ್ಮಿಶ್ರಂಗಳ ಮೊಕದ್ದಮೆಗಳು ಹೆಚ್ಚಾಗುವುವೊ ಎಂದು ಸಂದೇಹವು ಬಂದೇಬರುತ್ತದೆ

ಮಂಗಳೂರು

ಕೆನರಾ ಹೈಸ್ಕೂಲಿನ ಡ್ರೋಯಿಂಗ ಮಾಸ್ತರ ಮ ರಾ ಪಾವಂಜೆ ಗೋಪಾಲಕೃಷ್ಣಯ್ಯನವರಿಗೆ ಕಲ್ಕತ್ತೆಯ ನಿಖಿಲ ಭಾರತ ಸಾಹಿತ್ಯ ಸಂಘದವರು ಚಿತ್ರಕಲಾನಿಧಿ ಎಂಬ ಬಿರುದನ್ನೂ ಒಂದು ಚಿನ್ನದ ಪದಕದ ಉಚಿತವನ್ನೂ ಕೊಟ್ಟಿರುವರು

ಕಾರ್ಲೇಕಾರ ಸರ್ಕಸ್ಸಿನವರು ಇಲ್ಲಿಗ ಬಂದಿರುವರು

ಕಳೆದ ತಾರೀಕು ೧೨ನೇ ಆದಿತ್ಯವಾರ ಕೂಡಿದ ಡಿಸ್ಟ್ರಿಕ್ಟ ಎಸೋಸಿಯೇಶನಿನ ಅಧಿವೇಶನದಲ್ಲಿ ಮ ರಾ ಗಳಾದ ಕಾರ್ನಾಡ ಸದಾಶಿವರಾವ್ ಅರಿಬೈಲು ಭೋಜರಾವ್ ಒಡ್ಡಮನೆ ಆತ್ಮಾರಾಮ ಶಾಸ್ತ್ರಿ ಯಂ ಕೇಶವ ಆಚಾರ್ಯ ಎಮ್ ಆರ್ ಭಟ್ಟ ಉಡುಪಿ ಆನಂದರಾವ್ ನಾರಾಯಣ ಚಡ್ಡು ಬಾಳಿಗ ನಾರ್ಣಪ್ಪ ಸುವರ್ಣ, ಪುಂಜಲಕಟ್ಟೆ ರಂಗ ಬಾಳಿಗ ಎಚ್ ರಾಮಯ್ಯ ಶೆಟ್ಟಿ (ಉಡುಪಿ) ಮಿ ಎಚ್ ಎಮ್ ಪುತ್ತೂರ ಸಾಹೇಬ ಮತ್ತು ಮಿ ಅಬ್ದುಲ್ ಖಾದರ ಅಸಾದಿ ಇವರೆಲ್ಲರೂ ನಾಗಪುರದಲ್ಲಿ ಜರಗುವ ರಾಷ್ಟ್ರೀಯ ಸಭೆಗೆ ನಮ್ಮ ಜಿಲ್ಲೆಯ ಪ್ರತಿನಿಧಿಗಳಾಗಿ ಹೋಗತಕ್ಕವರೆಂದು ನಿರ್ಧರಿಸಲಾಯಿತು ಮತ್ತು ಕೊಂಗ್ರೆಸ ಕೊನಸ್ಟಿಟ್ಯುಶನು ತಯಾರಿಸಿದ ನೇಮಗಳಲ್ಲಿ ಕೊಂಗ್ರೆಸಿನ ಉತ್ಪನ್ನದ ಪೈಕಿ ಅರೆವಾಸಿ ಅಂಶವನ್ನು ಬ್ರಿಟನ್ನಿನಲ್ಲಿ ನಮ್ಮ ರಾಷ್ಟ್ರೀಯ ಸಭೆಯ ಪರವಾಗಿ ಕೆಲಸ ಮಾಡುವ ಸಂಸ್ಥೆಗಳಿಗೆ ಕಳುಹಿಸತಕ್ಕದ್ದು ಎಂಬುದರ ಬದಲಾಗಿ ಸದರಿ ಹಣವನ್ನು ನಮ್ಮ ರಾಷ್ಟ್ರೀಯ ಸಭೆಯ ಉನ್ನತಿ ಕುರಿತು ಇತರ ದೇಶಗಳಲ್ಲಿಯೂ ಸೇವೆಮಾಡುತ್ತಿದ್ದ ಸಂಸ್ಥೆಗಳಿಗೂ ಕಳುಹಿಸಬೇಕು ಎಂಬ ಒಂದು ಸಂಗತಿಯನ್ನು ತಬ್ದಿಲ್ ಮಾಡಿ ಬಾಕಿ ಎಲ್ಲಾ ನೇಮಗಳನ್ನು ಈ ಡಿಸ್ಟ್ರಿಕ್ಟ ಏಸೋಸಿಯೇಶನು ಸಹ ಅನುಮೋದಿಸಿದೆ

ಮಂಗಳೂರ ಸ್ಟೇಶನರಿ ಸಬ್ ಮೆಜಿಸ್ಟ್ರೇಟರಾದ ಮ ರಾ| ಯಂ. ಗಣೇಶರಾಯರು ಇನ್‌ಕಮ್ ಟೆಕ್ಸ್ ತಹಶಿಲ್ದಾರರಾಗಿ ನೇಮಕವಾಗಿ ಮ| ರಾ ಯಂ ರಾಘವೇಂದ್ರರಾಯರಿಗೆ ಮಂಗಳೂರ ಸ್ಟೇಶನರಿ ಸಬ್ ಮೇಜಿಸ್ಟ್ರೇಟರಾಗಿ ವರ್ಗವಾಗಿದೆ

ಸರಕಾರಿ ಶಾಲೆಗಳನ್ನು ಮತ್ತು ಸರಕಾರಿ ಸಹಾಯವನ್ನು ಪಡೆಯುವ ಶಾಲೆಗಳನ್ನು ಬಿಟ್ಟಿರುವ ವಿದ್ಯಾರ್ಥಿಗಳ ಬಗ್ಗೆ ಒಂದು ರಾಷ್ಟ್ರೀಯ ಶಾಲೆಯು ಮಂಗಳೂರಲ್ಲೂ ಬರುವ ಜನವರಿ ತಿಂಗಳಿಂದ ತೆರೆಯುವ ಆಲೋಚನೆ ಇದೆ ಈ ಶಾಲೆಗೆ ಸೇರತಕ್ಕವರು ಇವರ ಅನುಮತಿಯನ್ನು ಮ ರಾ| ಅರಿಬೈಲು ಭೋಜರಾವ್ ಮಣ್ಣಗುಡ್ಡೆ, ಇವರಿಂದ ಪಡೆಯಬಹುದು

ಕೆನರಾ ಹೈಸ್ಕೂಲಿನ ವರ್ಧಂತಿ ಉತ್ಸವದ ಅಧ್ಯಕ್ಷಸ್ಥಾನವನ್ನು ತಲಚೇರಿಯ ಡಿಸ್ಟ್ರಿಕ್ಟ ಜಡ್ಜರಾದ ಮ| ರಾ ಎ ಪಿ ರಾವ್ ಇವರು ವಹಿಸಿಕೊಳ್ಳಲಿಕ್ಕಿರುವರು

ಅಮ್ಮೆಂಬಳ ಸುಬ್ರಾಯಪೈಗಳ ಸ್ಮಾರಕ ದಿನವು ಕಳೆದ ಸೋಮವಾರ ದಿನ ಕೆನರಾ ಹೈಸ್ಕೂಲಿನಲ್ಲಿ ಆಚರಿಸಲ್ಪಟ್ಟಿತು

ಕಳೆದ ಶನಿವಾರ ಸಾಯಂಕಾಲ ಕೆ ಪಿ ಕಿಣಿ ಬಿ. ಎ ಎಲ್ ಎಲ್ ಬಿ ಲೆಂಡ್ ರಿಕಾರ್ಡ ತಹಸಿಲ್‌ದಾರ ಇವರು ಕ್ಷೌರಕತ್ತಿಯ ಗಾಯದಿಂದ ವಿಷದ ರಕ್ತವೇರಿ ಅಕಾಲ ಮೃತ್ಯುವನ್ನು ಹೊಂದಿದರೆಂಬುದನ್ನು ತಿಳಿಸಲು ಅತಿಶಯವಾದ ವ್ಯಸನವಾಗುತ್ತಿದೆ. ಇವರ ಆತ್ಮಕ್ಕೂ ಕುಟುಂಬಕ್ಕೂ ದೇವರು ಶಾಂತಿಯನ್ನೀಯಲಿ

ಮಂಗಳೂರ ಕೆಥೊಲಿಕ ಕೊ ಒಪರೇಟಿವ್ ಸೊಸ್ಯಾಟಿಯ ಸೆಕ್ರೆಟರಿಗಳಾದ ವಿ. ಎಂ ಪಿಂಟೋರವರು ದುರ್ವಿನಿಯೋಗ ಪಡಿಸಿದ ಖಾದರ ಲುನಾಚಿಯವರಿಗೆ ಸಲ್ಲತಕ್ಕ ರೂ ೩೩,೦೦೦ನ್ನು ಸಂಘದಿಂದ ಕೊಡಲಾಗದೆಂದು ಕಳೆದ ತಾ ೧೦ರಲ್ಲಿ ಕೂಡಿದ ಸಭೆಯಲ್ಲಿ ಬಹುಪಕ್ಷದಿಂದ ನಿರ್ಧಾರವಾಗಿದೆ ಎಂದು 'ಕೊಂಕಣದಿವೆ'ಯಲ್ಲಿ ಪ್ರಕಟವಾಗಿದೆ

ಮದ್ರಾಸು ಕೌನ್ಸಿಲಿನಲ್ಲಿ ಆಗತಕ್ಕ ಮಿನಿಸ್ಟರ್ ಅಥವಾ ಮಂತ್ರಿ ಪದಕ್ಕೆ ದಿವಾನ ಬಹದ್ದೂರ ಸುಬ್ಬರಾಯಲು ರೆಡ್ಡಿಯಾರ್, ಮಿ| ಪಿ. ರಾಮರಾಯನಿಂಗಾರ್, ರಾವಬಹದ್ದೂರ ವೆಂಕಟ ರೆಡ್ಡಿ ಈ ಮೂವರನ್ನು ಆರಿಸುವರು. ಸರ್. ಪಿ ರಾಜಗೋಪಾಲಾಚಾರ್ಯರು ಕೌನ್ಸಿಲಿನ ಪ್ರೆಸಿಡೆಂಟರಾಗುವರು, ಎಗ್ಸಿಕ್ಯೂಟಿವ್ ಕೌನ್ಸಿಲಿಗೆ ದೇಶೀಯ ಮೆಂಬರರಾಗತಕ್ಕ ಇಬ್ಬರಲ್ಲಿ ಒಬ್ಬರು ಈಗಿನ ಎಡ್ವೊಕೆಟ ಜನರಲ್ ಮ| ರಾ| ರಾ| ಕೆ. ಶ್ರೀನಿವಾಸಯ್ಯಂಗಾರರು. ಇನ್ನೊಬ್ಬರು ಮದ್ರಾಸು ಮ್ಯುನ್ಸಿಪಲ್ ಕೊರ್ಪೊರೇಶನ್ನಿನ ಕಮಿಶನರ್ ಆಗಿರುವ ಮತ್ತು ಕೆಲವು ಸಮಯ ಸರ್ ಪಿ. ರಾಜಗೋಪಾಲಾಚಾರ್ಯರ ಸ್ಥಾನದಲ್ಲಿ ಬದಲಿ ನೋಡುತಿದ್ದ ಹಬಿಬುಲ್ಲಾ ಸಾಹೇಬ ಬಹದ್ದೂರರವರು ಮ| ರಾ| ರಾ| ಸಿ. ಪಿ ರಾಮಸ್ವಾಮಿ ಅಯ್ಯರು ಎಡ್ವೊಕೆಟ ಜನರಲರಾಗುವರಂತೆ

ರೈಲ್ವೆ ಅಪಘಾಡ — ಸೇಲಂ ಮತ್ತು ಮೋರಾಪುರ ಎಂಬ ಸ್ಟೇಶನುಗಳ ನಡುವೆ ಬೊಮ್ಮಿಡಿ ಸ್ಟೇಶನ್ನಿನಲ್ಲಿ ನಿಂತ ಗೂಡ್ಸ್ ಟ್ರೈನಿಗೆ ಮೈಲ್ ಟ್ರೈನ್ ತಗಲಿ ೩೯ ಜನರಿಗೆ ದೇಹನಾಶ ಮತ್ತು ೪೭ ಮಂದಿಗೆ ಜಖಂ ಆಗಿದೆ ಎಂದು ತಿಳಿಯುತ್ತೇವೆ

ವಿಜ್ಞಾಪನೆ.

ಕಳೆದ ತಾ ೧೫ನೇ ಸಾಯಂಕಾಲ ಟೈನ್‌ಮೈದಾನಿನಲ್ಲಿ ಅಸಹಕಾರಿತೆಯ ಕುರಿತು ನಡೆದ ಸಭೆಯ ಸಮಾರಂಭದಲ್ಲಿ ರಾ| ಡಿ ಕೆ ಬಾರದಾ ಜರ From Poverty to Power ಎಂಬ ಒಂದು ಪುಸ್ತಕವು ನನ್ನಿಂದ ಯಾರಿಗಾದರೂ ಕೈಸೇರಿದ್ದರೆ ಅದನ್ನು ದಯವಿಟ್ಟು ನನಗೆ ಹಿಂದಕ್ಕೆ ಕೊಟ್ಟರೆ ಕೃತಜ್ಞತಾ ಪೂರ್ವಕವಾಗಿ ಅವರ ಬಗ್ಗೆ ಸ್ವೀಕರಿಸುವೆನು ಕಳೆದ ತಾ ೧೦ರಲ್ಲಿ ರೈಲ್ ಬಂಡಿಯಲ್ಲಿ ಬರುತ್ತಿರುವಾಗ ನನಗೆ ಒಂದು ಕೊಡೆ ದೊರಕಿರುವುದು. ಅದರ ಮಾಲಕರು ನನ್ನ ಬಳಿಗೆ ಬಂದು ಕೇಳಿದರೆ ನಾನು ಅದನ್ನು ಹಿಂದಕ್ಕೆ ಕೊಡುವೆನು. ಇಲ್ಲವೆ ಒಂದು ತಿಂಗಳ ಅನಂತರ ಇದು ಯಾವನೊಬ್ಬ ಬಡವನಿಗೆ ಕೊಡಲಾಗುವುದು.

ಇಂತಿ ಅರಿಬೈಲು ಭೋಜರಾವ್.

THE

Bombay Steam Nevigation Company, Ltd.

It is hereby notified for general information that this Company cannot guarantee regular steamer service at present until further notice.

W. W. Fanaken,
Agent

ಬೊಂಬಾಯಿ ಸ್ಟೀಮ್ ನೆವಿಗೇಶನ್ ಕಂಪೆನಿ, ಲಿಮಿಟೆಡ್

ಈ ಕಂಪೆನಿಯ ಹಡಗು ಚಲಾವಣೆಯು ಪ್ರಕೃತಕ್ಕೆ ನಿರ್ಧರಿಸಿದ ಸಮಯಗಳಲ್ಲಿ ಸಕಾಲದಲ್ಲಿಯೇ ಆಗುವುದೆಂಬ ಭರವಸೆಯನ್ನು ಎರಡನೆ ತಿಳಿಸೋಣಾಗುವ ವರೆಗೆ ಕೊಡಲು ಅನನುಕೂಲವೆಂಬುದನ್ನು ಈ ಮೂಲಕ ಸರ್ವರಿಗೂ ತಿಳಿಸೋಣಾಗುತ್ತದೆ

ಡಬ್ಲ್ಯು. ಡಬ್ಲ್ಯು ಫೆನಕನ್,
ಏಜಂಟ್

ನೋಟೀಸು.

ಇದೇ ಡಿಸೆಂಬರ ತಾ ೧೯ನ್ನು ಬೆಳಿಗ್ಗೆ 8 ಘಂಟೆಯಿಂದ 11½ ಘಂಟೆವರೆಗೂ ಪೈಸಾರಿ [illegible] ವರೆಗೂ ದಕ್ಷಿಣಕನ್ನಡಾ ಜಿಲ್ಲೆಯ ಎಲಿಮೆಂಟರಿ ಶಾಲೆಗಳ ಉಪಾಧ್ಯಾಯರುಗಳ "ಕೊನ್ಫರೆನ್ಸ್" ಮಂಗಳೂರು ಗಣಪತಿ ಸೆಕೆಂಡರಿ ಶಾಲಾ ಕಟ್ಟೋಣದಲ್ಲಿ ಜರಗುವದು ಆ ಸಭೆಗೆ ಎಲ್ಲಾ ಉಪಾಧ್ಯಾಯರುಗಳು ದಯಮಾಡಿ ಬಂದು ಪರಿಷತ್ತಿನ ಉದ್ದೇಶವನ್ನು ನೆರವೇರಿಸಿ ಕೊಡುವರೆಂದು ಕೋರಿಕೆ ಇದೆ

MANGALORE
12—12—1920.

A N Hebbar,
Secretary,
Elementary School Teachers' Association S Kanara.

ಬಹುಮಾನ 25 ರೂಪಾಯಿ ಬಹುಮಾನ.

ನಮ್ಮ ಭಂಡಸಾಲೆಯಲ್ಲಿಟ್ಟ ರೂ. ೧೦೦ರ ಬಾಬ್ತು ೧೦ ನೋಟುಗಳ ಅರ್ಧ ತುಂಡುಗಳು ಇದೇ ಕಳೆದ ತಾ ೧೪ನೇ ರಾತ್ರಿ ಕಳವಾಗಿ ಹೋಗಿರುತ್ತದೆ ಸದರಿ ತುಂಡುಗಳನ್ನು ಪತ್ತೆ ಮಾಡಿ ಕೊಟ್ಟವರಿಗೆ ರೂ ೨೫ ಬಹುಮಾನವಾಗಿ ಕೊಡಲ್ಪಡುವುದು

ನೋಟುಗಳ ನಂಬ್ರ Madras $\frac{J\ D}{40}$ 45301, $\frac{J\ D}{39}$ 48020, $\frac{J\ D}{42}$ 67395, $\frac{J\ D}{43}$ 32931, $\frac{J\ D}{38}$ 61153, $\frac{J\ D}{43}$ 32930, $\frac{J\ D}{43}$ 32928, $\frac{J\ D}{86}$ 13109, Bombay $\frac{O\ D}{2}$ 10135, $\frac{O\ D}{5}$ 4117[illegible]

ಪಡುಬಿದ್ರೆ ವಾಮನ ಕಾಮತ್ ಮತ್ತು ಕಂಪೆನಿ,
ಬಂದರ, ಮಂಗಳೂರು.

[illegible]

(೬) ಎಯಿಡೆಡ್ ಶಾಲೆಗಳಲ್ಲಿಯೂ ಬೋರ್ಡು ಶಾಲೆಗಳಲ್ಲಿರುವಂತೆಯೇ ಪ್ರೊವಿಡೆಂಟ್ ಫಂಡ್ ನಡೆಸುವರೆ ತಕ್ಕ ಸಹಾಯವನ್ನು ಕೊಡಿಸತಕ್ಕದ್ದು.

(೭) ಜಿಲ್ಲಾ ವಿದ್ಯಾಇಲಾಖೆ ಕಮಿಟಿಯಲ್ಲು, ಜಿಲ್ಲಾ ಬೋರ್ಡಿನಲ್ಲಿಯೂ, ತಾಲೂಕು ಬೋರ್ಡಿನಲ್ಲಿಯೂ, ಮುನ್ಸಿಪಾಲಿಟಿಯಲ್ಲು, ಬಬ್ಬೊಬ್ಬ ಉಪಾಧ್ಯಾಯನನ್ನು ಮೆಂಬರನನ್ನಾಗಿ ಮಾಡತಕ್ಕದ್ದು; ಮತ್ತು ಉಪಾಧ್ಯಾಯರುಗಳಿಗೆ ಸಭೆಗಳಿಗೆ ಓಟು ಕೊಡಿಸುವ ಹಕ್ಕು ಇರತಕ್ಕದ್ದು.

(೮) ಮೇಲಿನ ಸಂಗತಿಗಳನ್ನು ಹಜರತ್ ವಿದ್ಯಾಇಲಾಖೆಯ ಡೈರೆಕ್ಟರ್ ಮೊದಲಾದವರ ಮುಂದೆ ಇಡುವರೆ ಪ್ರತಿನಿಧಿಗಳನ್ನು ಆರಿಸಲಾಯಿತು.

ಈ ಸಭೆಯು ಮಂಗಳೂರು ಹಾಯರ್ ಎಲಿಮೆಂಟರಿ ಟ್ರೈನಿಂಗ್ ಶಾಲೆಯಲ್ಲಿ ಸರಕಾರೀ ವಿದ್ಯಾದಾಯಿ-ಶಾಲಾ ಹೆಡ್ ಮಾಸ್ತರರಾದ ಮ। ರಾ। ರಾ। ಎಚ್. [illegible] ಅಧ್ಯಕ್ಷತೆಯಲ್ಲಿ ಇದೇ ಡಿಸೆಂಬರ ತಾ. ೧೧ಕ್ಕೆ ಜರಗಿತು.

ಸಂ ೧೯೨೦ನೇ ಇಸವಿ ಡಿಸೆಂಬರ ತಾ. ೧೨ರಲ್ಲು ಮಂಗಳೂರು ಗವರ್ನಮೆಂಟ್ ಹಾಯರ್ ಎಲಿಮೆಂಟರಿ ಟ್ರೈನಿಂಗ್ ಶಾಲೆಯಲ್ಲಿ ದಕ್ಷಿಣ-ಕನ್ನಡಾ ಜಿಲ್ಲಾ ಟೀಚರ್ಸ್ ಎಸೋಸಿಯೇಶನಿನ ಸೆಕ್ರೆಟರಿ ಯಾಗಿದ್ದ ಮ। ರಾ। ರಾ। ಎ. ಎನ್. ಹೆಬ್ಬಾರರವರ ಅಧ್ಯಕ್ಷತೆಯಲ್ಲಿ ಜರಗಿದ ಸಭೆಯಲ್ಲಿ ಮಂಗಳೂರು, ಉಡುಪಿ, ಕುಂದಾಪುರ, ಕಾರ್ಕಳ, ಪುತ್ತೂರು, ಮತ್ತು ಕಾಸರಗೋಡಿನ ಉಪಾಧ್ಯಾಯರ ಪ್ರತಿನಿಧಿಗಳು ಮಾಡಿದ ಕಾರ್ಯನಿರ್ಣಯಗಳು.

ಇದೇ ಡಿಸೆಂಬರ ತಾ. ೩೧ನೇ ಬೆಳಗ್ಗೆ ೧೧ ಗಂಟೆ ಆಕ್ಕೆ ಈ ಜಿಲ್ಲಾ ... ರಿಮೆಂಟರಿ ಶಾಲಾ ಉಪಾಧ್ಯಾಯರುಗಳ ಕಷ್ಟಗಳನ್ನು ಗಣಪತಿ ಸೆಕೆಂಡರಿ ಶಾಲಾ ... ಕೊಡುವದೆಂದು ನಿರ್ಣಯಿಸಲಾಯಿತು. ಎಲ್ಲಾ ಉಪಾಧ್ಯಾಯರುಗಳು ತಮ್ಮ ತಮ್ಮಗೆ ಇರುವ ಹಾಲಾವಳಿಗಳನ್ನು ಪ್ರತಿ ತಾಲೂಕಿನಿಂದ ... [illegible]

ಕಾರ್ಕಳ ತಾ. ೧೧-೧೧-೧೯೨೦ರಲ್ಲು ಕಾರ್ಕಳದಲ್ಲಿ ಜರಗಿದ ಗ್ರಾಮ ಉದ್ಯೋಗಸ್ಥರ ಪರಿಷತ್ತಿನಲ್ಲಿ ಓದಲ್ಪಟ್ಟು ಅನುಮೋದಿಸಿದ ಕುಂದಾಪುರ ತಾಲ್ಲೂಕು ಬಿಜೂರು ತರ್ಫು ಪಟೇಲ್ ಸೂರಪ್ಪಯ್ಯ ಮತ್ತು ಶ್ಯಾನಭಾಗ ಜಂಬೆ ಕೃಷ್ಣಯ್ಯ, ಹೆಬ್ಬಾರರು, ಕೂಡಾ ಬರೆದು ಕಳುಹಿಸಿದ ಭಾಷಣವು.

ಸ್ವಾಗತ ಭಾಂಧವರೇ!

[illegible]

...ಬಾಬುಗಳಲ್ಲಿ ಶ್ಯಾನಭಾಗರ ಮೇಲಾದರೂ ಜನರು ಕಡಿಮೆ ಗೌರವದಿಂದ ನಡೆಯುತ್ತಾರೆಂದು ಭಾವಿಸಲು ಆಸ್ಪದವಿಲ್ಲ. ಮುಖ್ಯವಾಗಿ ಗೌರವ ಪ್ರತಿಷ್ಠೆಗಳುಂಟಾಗಲಿಕ್ಕೆ ಬೇಕಾದುದು ಆವರವರ ಗುಣಕರ್ಮಗಳೇ ಅಲ್ಲದೆ ಅಧಿಕಾರ ತಾರತಮ್ಯದಿಂದಾಗಲಿ, ಮನುಷ್ಯನಲ್ಲಿರುವ ಶಬ್ದ ಸಾಮರ್ಥ್ಯದಿಂದಾಗಲಿ ಅಲ್ಲವೇ ಅಲ್ಲವೆಂಬುದನ್ನು ತಮಗೆ ನಾವು ಪ್ರತ್ಯೇಕ ಹೇಳಬೇಕೆಂದಿಲ್ಲ.

ಒಂದೇ ರಥಕ್ಕೆ ೨ ಚಕ್ರಗಳಿರುವಂತೆ, ಗ್ರಾಮವೆಂಬ ರಥಕ್ಕೆ ಪಟೇಲ ಶ್ಯಾನಭಾಗರು ಎರಡು ಚಕ್ರಗಳೇ ಎನ್ನಬಹುದು. ಶರೀರಕ್ಕೆರಡು ಕೈಕಾಲುಗಳಿರುವಂತೆ ಗ್ರಾಮವೆಂಬ ಶರೀರಕ್ಕೆ ಇವರು ಕೈಕಾಲುಗಳೆನ್ನಬಹುದು. ಇವುಗಳಲ್ಲಿ ವಾಮ, ದಕ್ಷಿಣಗಳೆಂಬ ಅಲ್ಪಸ್ವಲ್ಪ ಭೇದವಿದ್ದರೂ, ವಾಮ ದಕ್ಷಿಣ ಭಾಗಗಳು ಪರಸ್ಪರ ಸಹಾಯವಿಲ್ಲದೇ ಶರೀರಕ್ಕೆ ಪ್ರತಿಷ್ಠೆಯುಂಟಲ್ಲದೆ. ಪಕ್ಷವಾತ ರೋಗದ ಹಾಗೆ ಒಂದೇ ಭಾಗದಿಂದ ದೇಹಕ್ಕೆ ಪ್ರಯೋಜನವಿಲ್ಲ. ಪ್ರಕೃತಿ ನಿಯಮವೇ ಹೀಗಿರುವಾಗ ಇಂಥಾ ಕ್ಷುಲ್ಲಕ ಕಾರಣಗಳಿಂದ ತಾನು ಮೇಲು ನಾನು ಮೇಲೆಂದು ಹೊಡೆದಾಡುವವರಲ್ಲಿ ಹುರುಳಿಲ್ಲ. ಆದ್ದರಿಂದ ಪಟೇಲ ಶ್ಯಾನಭಾಗರು ಗ್ರಾಮದಲ್ಲಿ ತಮ್ಮ ತಮ್ಮೊಳಗೆ ಪರಸ್ಪರ ಸೌಹಾರ್ದ ಭಾವದಿಂದಿದ್ದು, ನ್ಯಾಯಪ್ರಿಯರೂ ಸಾತ್ವಿಕ ಪ್ರಕೃತಿಯವರೂ ಆಗಿದ್ದರೆ, ಅವರಿಗೆ ಗಾಂಭೀರ್ಯವೂ, ಸನ್ಮಾನವೂ, ಗೌರವವೂ ಸ್ವಾಭಾವಿಕವಾಗಿ ದೊರಿಯುವುದಲ್ಲದೆ ಗ್ರಾಮಸ್ಥರಲ್ಲಿಯೂ ಶಾಂತಿ, ವಿವೇಕ ನೆಲೆಗೊಳ್ಳುತ್ತದೆ.

ಮುಖ್ಯವಾಗಿ ಗ್ರಾಮ ಉದ್ಯೋಗಸ್ಥರಲ್ಲಿ ಪರಸ್ಪರ ಜಗಳ ಹುಟ್ಟುವುದಕ್ಕೆ ಕೆಲವು ಖಾಸಗಿ ದ್ವೇಷಗಳೇ ಕಾರಣವಲ್ಲದೆ, ಹಲವು ಪಟೇಲರು ವಿದ್ಯಾಭ್ಯಾಸ ಸಾಕಷ್ಟಿಲ್ಲದೆ, ಸ್ವಾರ್ಥಪರರೂ ಒಣ ಶ್ರೀಮದ್ಗಂಭೀರತ್ವದವರೂ ಇರುವುದರಿಂದಲೂ ಶ್ಯಾನಭಾಗರಲ್ಲಿ ಕೆಲವರು ಸ್ವಾರ್ಥೈಕಪರಾಯಣರಾಗಿಯೂ ಸೌಜನ್ಯ ಶೂನ್ಯರಾಗಿಯೂ ಇರುವುದರಿಂದ ಕೂಡಾ ಈ ಭಿನ್ನಾಭಿಪ್ರಾಯಗಳಿಗೆ ಕಾರಣವಾಗಿರುತ್ತದೆ.

ಸಾಮಾನ್ಯವಾಗಿ ಪಟೇಲ ಶ್ಯಾನಭಾಗರ ತಾರತಮ್ಯವೆಂದರೆ, ಒಂದು ಸರಕಾರ ಸಂಘದ ಅಧ್ಯಕ್ಷ, ಕಾರ್ಯದರ್ಶಿ ಇವರೊಳಗಿರುವಷ್ಟೇ ಅಲ್ಲದೆ ಹೆಚ್ಚಿನದಲ್ಲ. ಮೊದಲು ಇವರಿಗೆ ಸಿಕ್ಕುತ್ತಿದ್ದ ಮಾನಮರ್ಯಾದೆಗಳನ್ನು ನೋಡಿದರೂ, ಇವರಲ್ಲಿ ಸಮಾನಸತ್ವವಿದ್ದಿತೆಂಬುದೇ ಅರ್ಥವಾಗುತ್ತದೆ. ಮುಂಚೆ "ರಸ್ತೆ ಮಾಮೂಲ್" ವೆಂಬ ... [illegible]

[illegible]

...ಯೂ ಹೆಚ್ಚು ಸಮಯದವರ ಸಂಘಟನೆ ಶ್ರೇಯಸ್ಕರವೆಂದು ... [illegible]

ಆದುದರಿಂದ ಗ್ರಾಮ ಉದ್ಯೋಗಸ್ಥರ ... [illegible]

...ಅಂತಃಕಲಹಗಳಿಗೆ ಕಾರಣವಾಗಿರುವ ಗ್ರಾಮ ಮೈತ್ರಿ ... [illegible] ... ಈ ಬಗ್ಗೆ ತಮಗೊಂದು ಆದೇಶನ ಸತ್ಯಾಗ್ರಹವನ್ನು ... [illegible] ... ಲಕನನ್ನು ವಿನಯದಿಂದಪ್ರಾರ್ಥಿಸುವೆವು.

ಇತಿ ತಮ್ಮ ಅತ್ಯಂತ ವಿಧೇಯ ಕಿಂಕರರು. ಕುಂದಾಪುರ ತಾಲು

ಬಿಜೂರು ಫಿರ್ಕಾ ಶ್ಯಾನಭಾಗ ಜಂಬೆ ಕೃಷ್ಣಯ್ಯ.

ಬಿಜೂರು ಪಟೇಲ್ ಬಿ. ಸೂರಪ್ಪಯ್ಯ.

ಮಹಾರಾಜೇಶ್ರಿ ಬಂಟವಾಳ ಡಿಪ್ಯುಟಿ ತಹಶೀಲ್ದಾರರವರ ಸನ್ನಿಧಾನಕ್ಕೆ.

ಮಂಗಳೂರು ತಾಲ್ಲೂಕು ತುಂಬೆ ಫಿರ್ಕಾ ಶ್ಯಾನಭಾಗ ಪತ್ತುಮುಡಿ ವಾಸುದೇವನು ಬರಕೊಂಡ ರಿಪೋರ್ಟು—

ಸರಕಾರದವರಿಂದ ನನಗೆ ಕೊಡತಕ್ಕ ವೇತನವು ಕಮ್ಮಿ ಆಗಿ ಆ ಬಗ್ಗೆ ಹಲವು ವರ್ಷದಿಂದ ನಾನು ವಗೈರೆರು ಚಳುವಳಿ ಮಾಡಿಕೊಂಡದಕ್ಕೆ ಸರಿಯಾದ ವ್ಯವಸ್ಥೆಯನ್ನು ಈ ವರೆಗೂ ಮಾಡಲಿಲ್ಲ. ಈಗಿನ ಹೊಸತರವಾದ ಸಂಬಳವನ್ನು ಪಡದು ಅಧಿಕಾರಿಗಳವರಿಂದ ನಡಿಸುವ ಈಗಿನ ಕಾಲದ ಪಿಷ್ಟಪೇಷಣದಲ್ಲಿ ಕಾಲಕ್ಷೇಪ ತಗಿಯುವುದು ಕಷ್ಟವಾದ್ದರಿಂದ ಈ ಶ್ಯಾನುಭೋಗಿ ಕೆಲಸದಲ್ಲಿ ಮುಂದು ಕೆಲಸ ಮಾಡಲಿಕ್ಕೆ ಸಾಧ್ಯವಲ್ಲಾದ್ದರಿಂದ ನಾನು ರಾಜಿಕೊಟ್ಟಿದ್ದೇನೆ. ನನ್ನಿಂದ ಶ್ಯಾನುಭೋಗಿ ಕೆಲಸದ ಚಾರ್ಜನ್ನು ಈ ಹೊತ್ತಿನಿಂದ ಹದಿನೈದು ದಿವಸಗಳೊಳಗೆ ಬೇರೆ ಜನರಿಗೆ ತಗಸಿ ಕೊಡುವ ವಿಲೆವಾರಿ ಮಾಡಬೇಕಾಗಿ ಕೋರುತ್ತೇನೆ. ಇನ್ನು ಮುಂದೆ ಕೆಲಸದ ಬಗ್ಗೆ ಆದರೆ ನಾನು ಜವಾಬುದಾರನಲ್ಲ.

ಮಹಾರಾಜೇಶ್ರಿ ಮಂಗಳೂರು ತಾಲ್ಲೂಕು ತಹಶೀಲ್ದಾರರವರ ಸನ್ನಿಧಾನಕ್ಕೆ.

ತುಂಬೆ ಫಿರ್ಕಾ ಶ್ಯಾನುಭಾಗನು ಬರಕೊಂಡ ರಿಪೋರ್ಟು—

ಮೇಲ್ಕಂಡ ರಿಪೋರ್ಟನ್ನು ಮಹಾರಾಜೇಶ್ರಿ ಬಂಟ್ವಾಳ ಡಿಪ್ಯುಟಿ ತಹಶೀಲ್ದಾರರವರ ಮುಂದೆ ಈ ದಿನ ಸ್ವತಹಾ ಹಾಜರಾಗಿ ದಾಖಲು ಮಾಡಿದ್ದೇನೆ. ಆದ್ದರಿಂದ ಸನ್ನಿಧಾನದ ಮಾಹಿತಿಗೆ ಕೂಡಾ ರವಾನಿಸಿದ್ದೇನೆ.

ಈ ಪತ್ರವ ನಮ್ಮ ಬಳಿಗೆ ಪ್ರಕಟಿಸಲು ಬಂದಿದೆ:— ಪತ್ರಕರ್ತ.

ಪತ್ರವ್ಯವಹಾರ.

ಅಯ್ಯಾ,— ಸ್ವದೇಶ ಭಾಷಾಭಿಮಾನಿಗಳೇ!

ಈ ನಮ್ಮ ದಕ್ಷಿಣ ಕನ್ನಡಾ ಜಿಲ್ಲೆಯಿಂದ ಮೈಸೂರಿಗೆ ಹೋಗಿರುವ— "ಪೆರಡೂರು — ಶ್ರೀ ಅನಂತಪದ್ಮನಾಭ ಪ್ರಸಾದಿತ ದಶಾವತಾರ — ಆಟದ ಮಿತ್ರ ಮಂಡಳಿ" ಯವರು, ಅಲ್ಲಿ ನವರಾತ್ರಿಯಲ್ಲಿ ಜರಗುವ — ದಸರಾ ಮಹೋತ್ಸವಕ್ಕಾಗಿ ಕೂಡಿದ ಮಹಾಜನ ಸಮುದಾಯದ ಮುಂದೆ ತಮ್ಮ ಈ ಆಟ... ಅವರಿಗೆಲ್ಲಾ ಮೆಚ್ಚಿಸಿ,— ಅಲ್ಲಿ ಚಿನ್ನದ ಪದಕವೇ ಮುಂತಾದ ಬಹುಮಾನ... ಇವರು ಪಡೆದಿದ್ದಲ್ಲದೆ,— ಅರಮನೆಯಲ್ಲಿಯೂ ಕೂಡ ಇವರನ್ನು ಕರಸಿ, ಇವರಿಂದ 'ಮೀನಾಕ್ಷಿ ಕಲ್ಯಾಣ' ವೆಂಬ ಆಟವನ್ನಾಡಿಸಿ, ಸಂತೋಷಪಟ್ಟು ಯಥೋಚಿತ ಸನ್ಮಾನವನ್ನು ದಯಪಾಲಿಸಿರುತ್ತಾರೆಂಬ ಈ ವಾರ್ತೆಯನ್ನು ಕೇಳಲು ಅತಿ ಸಂತೋಷವಾಗುತ್ತಿದೆ.

ಇಷ್ಟು ಮಾತ್ರವೇ ಅಲ್ಲ ಅಲ್ಲಿಯ ನಾಟಕಮಂಡಳಿಯವರಲ್ಲಿ ಉತ್ತಮ ಹೆಸರುವಾಸಿಯನ್ನು ಸಂಪಾದಿಸಿಕೊಂಡಿರುವ ಮ। ರಾ। "ವರದಾಚಾರ್ಯ" ರೆಂಬ, ಮಹನೀಯರು, ಇಂತಹ ಕಾಲದಲ್ಲಿ ತನಗಾಗಬಹುದಾದ ಹೇರಳ ಸಂಪಾದನೆಯನ್ನು ಸಹ ತೃಣೀಕರಿಸಿ, ಈ ಉದಾರ ಮನಸ್ಸಿನಿಂದಲೇ ತಾವು ನಾಟಕವಾಡುವ ಆ ಇದೇ ಸ್ಟೇಜನ್ನೇ ನಮ್ಮ ಈ ದಶಾವತಾರ ಆಟದವರಿಗೆ ಬಿಟ್ಟುಕೊಟ್ಟು, ಅವರಿಂದ ಅಲ್ಲಿ ಆಟವಾಡಿಸಿ, ನಮ್ಮ ಈ ದಶಾವತಾರ ಮಂಡಳಿಯವರಿಗೆ ಮಹೋಪಕಾರಯುಕ್ತವಾದ ಇಂತಹ ಉಪಚಾರ ಮಾಡಿರುತ್ತಾರೆಂಬುವದನ್ನು ಸಹ ಕೇಳಿ, ಬಹಳ ಆನಂದವಾಗುತ್ತದೆ. ಸ್ವಾರ್ಥತ್ಯಾಗಿಗಳಾದ ಈ ಮಹನೀಯರನ್ನು ಇದಕ್ಕಾಗಿ ಎಷ್ಟು ಕೊಂಡಾಡಿದರೂ ಅಲ್ಪವೇ ಸರಿ. ... ಇರಲಿ!

ನಮ್ಮ ಈ ಪೆರಡೂರಿನ ಯಕ್ಷಗಾನ ಆಟದ ಮಿತ್ರಮಂಡಳಿಯವರಿಗೆ ದೊರೆತ ಇಂತಹ ಬಹುಮಾನಗಳಿಗಾಗಿ, ಉಂಟಾಗುವ ಆನಂದವು ಇಲ್ಲಿಯ ಪೆರಡೂರಿನವರಾದ ನಮಗೆ ಮಾತ್ರವೇ ಅಲ್ಲ, ಈ ಇಡೀ ದಕ್ಷಿಣ ಕನ್ನಡಾ ಜಿಲ್ಲೆಯವರಿಗೇನೇ ಇದು ಒಂದು ಭೂಷಣವೆಂದೇ ಭಾವಿಸಬೇಕು.

ಪೆರಡೂರು,
ತಾ. 12—12—'20

ಕರ್ನಾಟಕ ಭಾಷಾಸೇವಕ.

ಬಂಟರ ಯಾನೆ ನಾಡವರ ಮಹಾಸಭೆ, ಪುತ್ತೂರು.

ಮಹಾಸಭೆಯ ಸಂದರ್ಭದಲ್ಲಿ ... [illegible] ... ಶ್ರೀ ರಾಮಕೃಷ್ಣ ವಿದ್ಯಾರ್ಥಿ ...

[illegible]

ಮಾರಾಟಕ್ಕೆ

ಕುದುರೆಗುಂಡಿ ಯೆಂಬ ... ಕಾಫಿತೋಟ.

ಈ ತೋಟದ ವಿವರ:—

... ಸರಕಾರಿ ಮಾರ್ಗದಲ್ಲಿ ... ಮಧ್ಯೆ ... ಇದೆ.

... ಮುನ್ನೂರು ಎಕ್ರೆ ವಿಸ್ತಾರ. ಇದರಲ್ಲಿ ನೂರ ... ಮೆಣಸು ನಟ್ಟಿರುವುದು ಅದಲ್ಲದೆ ... ಇರುವುದು.

೧೯೩೦ನೇ ... ಮತ್ತು ಒಳ್ಳೆಮೆಣಸಿನ ಫಸಲು ಬಹಳ ಚಲೋದಾಗಿ ಈಗಲೇ ಕಾಣುವುದು.

ಹದಿಮೂರು ವರ್ಷಗಳ ಮುನ್ನಾಯಿ ಬೆಲೆಯ ವಿವರ ಬೇಕಾದ್ದಲ್ಲಿ ಮಂಗಳೂರಲ್ಲಿರುವ ಜಿ. ಜೆ. ಹಮಿಲ್‌ಟನ್ ದೊರೆಗಳವರಿಂದ ತಿಳಿದುಕೊಳ್ಳಬಹುದು. ಇದರ ಕ್ರಯ:— ೩೦,೦೦೦ (ಮೂರು ಸಾವಿರದ ಐನೂರು ಪವನು)

ತ್ವರೆ ಗೈಯಿರಿ! ತ್ವರೆ ಗೈಯಿರಿ! ತ್ವರೆ ಗೈಯಿರಿ!

ಪುಸ್ತಕ ಪ್ರತಿ 1ಕ್ಕೆ 0—1—0, ಡಜನಿಗೆ—10—0

ಮೂಲಯುಕ್ತ.

ಕನ್ನಡ—ಭಜಗೋವಿಂದ.

ತುಳು.—ಭಜಗೋವಿಂದ.

ವಿಳಾಸ—ಭಜಗೋವಿಂದ ಪೊಳಲಿ ದ ಕ

ಅಥವಾ

ಶಾರದ್ಹಾ ಪ್ರೆಸ್ ಮತ್ತು ಕೆ. ಯಂ. ದಾಸಪ್ರಭು,
ಮಂಗಳೂರು

ಹೊಸ ನಾಟಕ! ಐತಿಹಾಸಿಕ ಹೊಸ ನಾಟಕ!

ಕೇತುಭಂಗ.

ಇಂಗ್ಲೀಷ್ ಭಾಷೆಯಲ್ಲಿ ಸುಪ್ರಸಿದ್ಧ ಕಾದಂಬರಿಕಾರನಾದ ... ಸ್ಕಾಟನ ಆಧಾರದ ಮೇಲೆ ವಿಜಯನಗರದೊಳಗಿನ ಒಂದು ಐತಿಹಾಸಿಕ ಪ್ರಸಂಗವನ್ನು ತೆಗೆದುಕೊಂಡು, ಈ ನಾಟಕವು ಬರೆಯಲ್ಪಟ್ಟಿದೆ. ಇದರಲ್ಲಿ ನಾಟಕದ ಪ್ರೀತಿ ಹಾಗು ಹಿಂದು ಮುಸಲ್ಮಾನರ ಐಕ್ಯ, ವಿರೋಚಿತವಾದ ... ಶುದ್ಧಪ್ರೇಮ ಮುಂತಾದ ಗುಣಗಳು ಸರಿಯಾಗಿ ಪ್ರತಿಬಿಂಬಿತವಾಗಿಯಲ್ಲದೆ ಕಥಾಸಂದರ್ಭವೂ ಕೂಡ ಮನಸ್ಸನ್ನು ಎಳೆಯುವಂತಿದೆ. ಪ್ರತಿಗಳು ಹೆಚ್ಚಿಲ್ಲ. ಗ್ರಾಹಕರು ತ್ವರೆಮಾಡಬೇಕು. ಕ್ರಯ ೧೨ ಆಣೆ. ಟಪ್ಪಾಲ ಹಾಸಲು ಪ್ರತ್ಯೇಕ.

ವಿಳಾಸ:— ಶಾರದಾ ಛಾಪಖಾನೆ,
ರಥಬೀದಿ ಮಂಗಳೂರು ದ ಕನ್ನಡ.

ಒಳ್ಳೇ ಸಂದರ್ಭ

ಹೊಲಿಗೆ ಕೆಲಸವು ಸರ್ವರೂ ಮೋಹಿಸತಕ್ಕ
ಅಗತ್ಯವುಳ್ಳ ಕೈಗಾರಿಕೆ ಎಂದರೆ ಅತಿಶಯವಲ್ಲ

ಈ ಕೆಲಸವನ್ನು ಅತ್ಯುತ್ತಮರೀತಿಯಿಂದ ತಯಾರಿಸುವದರಲ್ಲಿ ಮುಲ್ಕಿ ಯೆನ್ ಟಿ. ರಾವು ಎಂಬವರು ಪ್ರವೀಣತೆ ಹೊಂದಿ ಮದ್ರಾಸ್, ಬೊಂಬ್ಯಾ, ಕಲ್ಕತ್ತಾ ಇತ್ಯಾದಿ ದೇಶಗಳ ಇಷ್ಟತ್ತು ವರ್ಷಗಳಿಂದ ಮಾಹಿತಿ ಪಡೆದು ವಿಲಾಯತಿಯ ಯಂ. ಬಿ. ... ಪರೀಕ್ಷೆ ಹೊಂದಿ ಡಿಪ್ಲೋಮಗಳನ್ನು ಪಡೆದು ಪ್ರಕೃತ ಬೊಂಬಾಯಲ್ಲಿ ಈ ವಿದ್ಯೆಯನ್ನು ಕಲಿಸುವ ಸ್ಕೂಲ್ ಮತ್ತು ವಿಲಾಯತಿಯ ... ವಾರದ ಸ್ಟೈಲುಗಳ ಒಂದು ಸಂಗ್ರಹಾಲಯವನ್ನು ಏರ್ಪಡಿಸಿ ಅನೇಕರಿಂದ ಸರ್ಟಿಫಿಕೇಟುಗಳನ್ನು ಹೊಂದಿರುತ್ತಾರೆ.

ದೇಶಬಾಂಧವರಿಗೆ ಪ್ರೀತಿಪೂರ್ವಕವಾಗಿ ಸುಲಭ ರೀತಿಯಿಂದ ಕತ್ತರಿಸುವದು ಹೊಲಿಯುವದು ಇತ್ಯಾದಿ ಕೆಲಸವನ್ನು ಧರ್ಮಾರ್ಥವಾಗಿ ಕಲಿಸಿ ಈ ಕೈಗಾರಿಕೆಯನ್ನು ಪ್ರಚಾರಿಸಲು ಉದ್ಯುಕ್ತರಾಗಿದ್ದಾರೆ.

ಹೆಚ್ಚಿನ ವಿಷಯಗಳನ್ನು ಈ ಕೆಳಗಿನ ವಿಳಾಸಕ್ಕೆ ಬರೆದು ತಿಳಕೊಳ್ಳಬಹುದು.

N. T. Rao
English Tailoring Co.,
Princess Street, BOMBAY

ತಾತ್ಕಾಲಿಕ—ಪ್ರಕೃತ ೨ ತಿಂಗಳು ಪರಿಯಂತರ ಇವರು ಮುಲ್ಕಿಯಲ್ಲಿ ಇರುವರು. ... ವಿಶೇಷ ಮಾಹಿತಿಯನ್ನು ಅಗತ್ಯವಿದ್ದರೆ ಪಡಕೊಳ್ಳಬಹುದು.

ಕೈಮಗ್ಗದ, ರಂಗು ಸೀರೆಗಳು.

... ಈ ನಾಣ್ಯದಿಂದ ತಯಾರಿಸಿದ್ದು, ಉಡುವವರಿಗೆ ಲಕ್ಷಣವಾಗಿಯೂ, ನಯವಾಗಿಯೂ ಇದೆ. ಸುಂದರವಾದ ರೇಶ್ಮೆಯ ಸೆರಗೂ, ಅಂದವಾದ ಅಂಚೂ ಇರುವುದು. ಬಣ್ಣ ಹೋಗದು, ೧೭ ಮೊಳ ಉದ್ದ ಇದೆ. ದೊಡ್ಡವನ್ನು ಈಗಿನ ಕಾಲದಲ್ಲಿ ಈ ಕ್ರಯಕ್ಕೆ ಯಾವ ಊರಿನಲ್ಲಿಯೂ ಸಿಕ್ಕಲಾರವು. ಮಾದರಿಗಾಗಿ ಕೆಲವನ್ನು ತಯಾರಿಸಿರುವೆವು ಬೇಕಾದವರು ತರಿಸಿ ಪರೀಕ್ಷಿಸಿರಿ.

ಕ್ರಯ ನಂ. ೧—ರೂ 6—8—0
" ೨—" 7—8—0

ಕಂಬಳಿ ಟೋಪಿ.

ಈ ಟೋಪಿಗಳನ್ನು ಹಸನು ಊಲನ್ ದಾರದಿಂದ ಹೆಣೆದಿದೆ. ಇವು ಹಿಮ, ಮಳೆಗಳಲ್ಲಿ ಉಪಯೋಗಿಸುವುದರಿಂದ ಶರೀರಕ್ಕೆ ಕಾವನ್ನು ಉಂಟುಮಾಡಿ ಸೀತ, ಮುಂತಾದ ವ್ಯಾಧಿಗಳು ಬರುವದಿಲ್ಲ. ಈ ಟೋಪಿಗಳನ್ನು ಸಾಧಾರಣ ಟೋಪಿಗಳ ಹಾಗೆಯೂ ಕಿವಿಯ ವರೆವಿಗೂ, ಕತ್ತಿನ ವರೆವಿಗೂ ಯಾವ ರೀತಿಯಿಲ್ಲಾದರೂ ಉಪಯೋಗಿಸಬಹುದು. ಇದಕ್ಕೆ ತಲೆಯ ಅಳತೆ ಬೇಕಿಲ್ಲ. ಪ್ರತಿಯೊಬ್ಬರ ತಲೆಗೂ ಸರಿಯಾಗಿರುತ್ತೆ. ಇದು ಪ್ರತಿ ಕುಟುಂಬದಲ್ಲಿ ಒಂದು ಇದ್ದರೆ ಎಲ್ಲರಿಗೂ ಆಗುವುದು. ಕ್ರಯ ನಂಬ್ರ ೧ಕ್ಕೆ ರೂ 1—8—0

ಪ್ಯಾರಿಸ್ ಶಾಲ್



ಈ ಶಾಲುಗಳು ಈಗ ತಾನೆ ತಯಾರಿಸಿದ್ದು. ಚಳಿ, ಮಳೆ ಕಾಲದಲ್ಲಿ ಹೊದಿಯಲಿಕ್ಕೂ ಪ್ರಯಾಣಿಕರಿಗೂ ಇತರರಿಗೂ ಬಹು ಅನುಕೂಲವಾದದ್ದು. ರೇಶ್ಮೆಯ ಗಿಟ್ಟಿ ಬಣ್ಣ ೫ ಮೊಳ ಉದ್ದ, ೩॥ ಮೊಳ ಅಗಲವಿರುವುದು. ಇದರ ಬಣ್ಣವು ಎಂದಿಗೂ ಹೋಗಲಾರದು

ಕ್ರಯ ಶಾಲು ೧ಕ್ಕೆ ರೂ 5—0—0

ವಿಳಾಸ — ಎಸ್ ಆರ್ ಕೃಷ್ಣ ಅಂಡ್ ಕೊ.
೩೨ ನಾರಾಯಣ ಮೊದಲಿ ಬೀದಿ
ಮದರಾಸು

"1931ನೇ ಇಸವಿಯ"

ಪೊಕೆಟ್ ಡೈರಿಗಳು

ದೊಡ್ಡ ಸೈಜು 0—14—0.
ಸಣ್ಣ ಸೈಜು 0— 8—0.

ವಿಳಾಸ

ಮ್ಯಾನೇಜರ್,
ಶಾರದಾ ಛಾಪಖಾನೆ,
ಮಂಗಳೂರು.

ಶ್ರೀ ಶಂಕರಕರ್ನಾಟಕ ಪುಸ್ತಕ ಭಂಡಾರ,
ಮಾಳಮಡ್ಡಿ ಧಾರವಾಡ.

ನಮ್ಮಲ್ಲಿ ೧೬೦೦ ತರದ ಬೇರೆ ಬೇರೆ ಪುಸ್ತಕಗಳು ಅಗ್ಗವಾಗಿ ದೊರೆಯುತ್ತವೆ. ಮಾದರಿಗಾಗಿ ಕೆಲಪುಸ್ತಕಗಳನ್ನು ಬರೆಯುತ್ತೇವೆ —

೧	ಟಿಳಕರ ಗೀತಾರಹಸ್ಯ	ರೂ ೩—೦—೦
೨	ಕರ್ನಾಟಕ ಕವಿಚರಿತೆ ಸಂಪುಟ ೧	, ೩—೦—೦
೩	೨	" ೫—೦—೦
೪	ಬೂಕರ ಟಿ. ವಾಶಿಂಗ್ಟನ್	" ೧—೨—೦
೫	ಶಬ್ದಮಣಿದರ್ಪಣ (ಪರಿಷತ್ತು)	, ೨—೧೧—೦
೬	ಮಹಾರಾಣಿ ಲಕ್ಷ್ಮೀಬಾಯಿ ಝಾಸಿ	೨—೧—೦
೭	ಕರ್ಮವೀರ ಮಹಾತ್ಮಾಗಾಂಧಿ	೧—೬—೦
೮	ಚಂದ್ರಾವಳೀ ವಿಳಾಸ	" ೦—೮—೦
೯	ಮಹಾತ್ಮಾ ಗಾಂಧಿಯವರ ಹಿಂದೀ ಸ್ವರಾಜ್ಯ	೦—೮—೦
೧೦	ಹೆಂಡತಿಯ ಕರ್ತವ್ಯ	, ೦—೮—೦
೧೧	ಹಗಲಿರುಳ	, ೦—೮—೦
೧೨	ಅಕ್ಬರ ಚರಿತ್ರ (ಸಚಿತ್ರ)	, ೧—೦—೦

ಶ್ರೀ ಗ. ದೇಶಪಾಂಡೆ ಬಿ ಎಸ್ ಸಿ
ವ್ಯವಸ್ಥಾಪಕ



ಕ್ರಯ ಆಣೆ 5 ಮತ್ತು ಆಣೆ 9.

ಏಜಂಟರು:— ಶ್ರೀ ... ಮತ್ತು ಕಂಪೆನಿ,

ಮಂಗಳೂರು

ಬಿಡುವುದು—ಯಾವುದೊಂದು ಖರ್ಚಿಲ್ಲದೆ ಗುಳಿ ಪೇಜುಗಳುಳ್ಳ

ವೈದ್ಯ ವಿದ್ಯ

ಎಂಬ ಪುಸ್ತಕವು. ಈ ಪುಸ್ತಕವನ್ನು ಓದುವುದರಿಂದ ಕಾರಣಾಂತರಗಳಿಂದ ಉಂಟಾಗುವ ಎಲ್ಲಾ ವ್ಯಾಧಿಗಳನ್ನೂ ಒಬ್ಬರ ಸಹಾಯವಿಲ್ಲದೆ ಗುಣಪಡಿಸಿಕೊಳ್ಳಲು ಒಲು ಸೂಕ್ಷ್ಮ ತಿಳುವಳಿಕೆಯನ್ನೂ ಮತ್ತು ತಕ್ಕ ಔಷಧವನ್ನೂ ತಿಳಿಸುವುದು ಈ ಪುಸ್ತಕಕ್ಕೆ ಯಾವ ಖರ್ಚನ್ನೂ ಕೊಡಬೇಡಿರಿ ಕಾಲಾಣೆಯ ಕಾರ್ಡಿನಲ್ಲಿ ನಿಮ್ಮ ವಿಳಾಸವನ್ನು ತಿಳಿಸಿದ ಮಾತ್ರಕ್ಕೆ ಸದರಿ ಪುಸ್ತಕವು ನಿಮ್ಮ ಮನೆಯ ತಲಬಾಗಲಿಗೆ ಬಂದು ಸೇರುವುದು.

ವಿಳಾಸ— ರಾಜವೈದ್ಯ ನಾರಾಯಣಜೀ, ಕೇಶವಜೀ,
27. ಜೈನಬಜಾರು ರೋಡ್, ಮದರಾಸು

BANK OF MADRAS.

ಮದ್ರಾಸ್ ಬ್ಯಾಂಕ್.

ಹೆಡ್ ಆಫೀಸು ಮದ್ರಾಸ್.

ಮೂಲಧನ	ರೂ 75,00,000
ಕ್ಷೇಮನಿಧಿ	45,00,000

ಸೇವಿಂಗ್ಸ್ ಬ್ಯಾಂಕ್.

— ವರ್ಷಕ್ಕೆ ಸೇಕಡಾ 4ರ ಬಡ್ಡಿ —

ಇದರಲ್ಲಿ ಠೇವಣಾತಿಗಳು ಕೆಳಗಿನ ಶರ್ತಗಳಲ್ಲಿ ಪಡೆಯಲಾಗುವವು. ಒಂದು ವರುಷದ ಅವಧಿಯಲ್ಲಿ ಒಟ್ಟು ರೂ 3,000ಕ್ಕೆ ಮಿಗದ ಮೊಬಲಗನ್ನು ಠೇವಣಾತಿ ಮಾಡಿಗೊಡಬಹುದು

ಹೀಗೆ ಠೇವಣಾತಿ ಇಟ್ಟ ಪ್ರತಿ ಖಾತೆ ರೂಪಾಯಿಗಳಿಗೆ ಸೇಕಡಾ 4ರಂತೆ ರೂ 10,000ಕ್ಕೆ ಮೀರದ ಮೊಬಲಗಿನ ವರೆಗೆ ಬಡ್ಡಿ ಎಣಿಸಲಾಗುವುದು

ನಿಬಂಧನೆಗಳ ಪ್ರತಿಗಳನ್ನು ಬರೆದು ಬ್ಯಾಂಕಿನಿಂದ ಪಡೆಯಬಹುದು

ಸಿ ಎಲ್ ಗೊರ್ಡನ್,

ಏಜಂಟ್, ಮದ್ರಾಸ್ ಬ್ಯಾಂಕ್ ಮಂಗಳೂರ

12 ಚಾಟಗಳನ್ನು ತರಿಸಿಕೊಂಡರೆ 1 ಚಾಟ ಉಚಿತವು.

ಉತ್ತಮ ಪರಮೌಷಧಿ ನಶ್ಯವು.

ಬೇರೆ ಪ್ರತಿ ನಶ್ಯವನ್ನು ನಿಶ್ಚಯವಾಗಿಯೂ ಬಯಸರು. ಸೀಸೆ 1ಕ್ಕೆ ರೂ. 1 ಟಪ್ಪಾಲು ಚಾರ್ಜು 4 ಆಣೆ.

ಎಸ್. ಪಿ. ದಂತಚೂರ್ಣವು.

ಇದರ ಉಪಯೋಗದಿಂದ ಹಲ್ಲುಗಳು ಶುಭ್ರವಾಗಿ ಬಿಳುಪಾಗಿ ಪ್ರಕಾಶಿಸುವವು ದಂತರೋಗಗಳನ್ನು ನಿವೃತ್ತಿ ಮಾಡಿ ಹಲ್ಲುಗಳನ್ನು ವಜ್ರದಂತೆ ಗಟ್ಟಿ ಮಾಡುವದು. ಡಬ್ಬಿ 1ಕ್ಕೆ 6 ಆಣೆ. ಟಪ್ಪಾಲು ಚಾರ್ಜು 2 ಡಬ್ಬಿಗಳವರೆಗೆ 4 ಆಣೆ. ನಮ್ಮ ಕಂಪನಿಯ ಇಂಗ್ಲಿಷ್ ಕೆಟಲಾಗಿಗೆ ಬರೆದರೆ ಉಚಿತವಾಗಿ ಕಳುಹಿಸಿಕೊಡುವೆವು. ನಮ್ಮ ವಿಳಾಸ —

ತಂತಿ ವಿಳಾಸ— ಎಸ್. ವಾಸು ಅಂಡ್ ಕಂಪನಿ,

ವಾಸು, ತಿರುಚಿ. ಪಾಲಕರೆ, ತಿರುಚಿನಾಪಳ್ಳಿ.

ಜಗದ್ವಿಖ್ಯಾತವಾದ ಶ್ರೀ ದೇವೀಪ್ರಸಾದ ಕಂಪೆನಿಯ

ಸುಪ್ರಸಿದ್ಧವಾದ ಮಹೌಷಧಗಳು.



"ಧನ್ವಂತರೀ ಬಾಮ್."

ಮಳೆಗಾಲದಲ್ಲಿ ಕೆಸರು ಕೊಳೆಗಳಿಂದಲೂ ಬೇಸಿಗೆಯಲ್ಲಿ ಕಸದ ರಾಶಿಗಳಿಂದಲೂ ಮೀನಿನ ಸಂಬಂಧ ನೊಣಗಳ ಕಾಟದಿಂದ ಶೋಭಿಸುವ ಈ ಪೇಟೆಗೆ ಒಬ್ಬ ಹಂಗಾಮಿ ತೋಟಿ. ಕೇರಿಗಳೂ ಸಂದುಗೊಂದುಗಳೂ ಕಸಕೊಳೆಗಳಿಂದ ತುಂಬಿದ್ದರೂ ಹತ್ತಿಗೊಮ್ಮೆ ದೊಡ್ಡ ರಸ್ತೆಯ ಒಂದಂಶ ಮಾತ್ರ ಆತನು ಗುಡಿಸಿದರೆ ಸಾಕಂತೆ! ಇಲ್ಲಿ ನ್ಯೂಸೆನ್ಸು ಎಕ್ಟು ಜಾರಿಯಲ್ಲಿ ಇದೆ. ಹೊಲಸಾದ ಆ ಮೀನು ಮಾರ್ಕೆಟ್ ಪೇಟೆಯಲ್ಲೇ ಇದೆ. ಅದೂ ದೂರವಿಲ್ಲ, ನಮಗಿಷ್ಟೆ ಸಾಕು!

ಕುಂಬ್ಳಾಲು:—ಇಲ್ಲಿಯ ಗೌಡಸಾರಸ್ವತ ಬ್ರಾಹ್ಮಣ ವೃಂದದವರು ಕಳೆದ ಕಾರ್ತಿಕ ಬಹುಳ ೯ಯು ಶನಿವಾರ ದಿವಸ ಶ್ರೀ ರಾಮಭಜನೆಯನ್ನು ಪ್ರಾರಂಭಿಸಿ ಇದೇ ಮಾರ್ಗಶಿರ ಶುದ್ಧ ೬ಯು (ತಾ. ೧೬-೧೨-೧೯೨೦ನೇ) ಗುರುವಾರ ಮಂಗಲಾಚರಣೆ ಸಮಾರಾಧನೆಯನ್ನು ಬಹಳ ವಿಜೃಂಭಣೆಯಿಂದ ನಡೆಯಿಸಿದರು, ಸಾಯಂಕಾಲ ೬ ಗಂಟೆ ಸಮಯ ಮ॥ ರಾ॥ ರಾ॥ ಆರೂರು ಕಿನ್ನಿ ಅನಂತ ಪದ್ಮನಾಭಯ್ಯನವರು, ಮ. ರಾ. ಭಾಗವತ ಶೇಷಗಿರಿ ಶೆಣೆಯರು, ಮ. ರಾ. ಹಾರಾಡಿ ಮುಕುಂದಪ್ಪ, ಮ. ರಾ. ಕೂರಾಡಿ ಅಣ್ಣಯ್ಯ ಪೈ ಮ. ರಾ. ಗಂಗೊಳ್ಳಿ ಕೃಷ್ಣಯ ಕಾಮತ್, ಮ. ರಾ. ಕಟಪಾಡಿ ರಂಗಪ್ಪ ಕಾಮತ್, ಮ. ರಾ. ಮಂಜಪ್ಪ ಕಾಮತ್, ಮ. ರಾ. ನರಸಿಂಹ ರಾ ಬೇಂದ್ರ ನಾಯಕ್, ಕೋಣಿ, ಮತ್ತು ಅನೇಕ ಸದ್ಗೃಹಸ್ಥರು ನೆರೆದಿದ್ದರಲ್ಲದೆ ಪರವೂರಿನ ಮ. ರಾ. ಕಟಪಾಡಿ ಬಾಬ ಕಾಮತರು, ಪಡೂರ ಅಣ್ಣಪ್ಪ ನ್ಯಾಕರು, ವ. ಇವರ ಅಗ್ರಜರು ಸಹ ನೆರೆದಿದ್ದರು. ಮ॥ ರಾ॥ ರಾ॥ ಕಿನ್ನಿ ಅನಂತ ಪದ್ಮನಾಭಯ್ಯನವರು ಅಧ್ಯಕ್ಷಸ್ಥಾನವನ್ನು ಅಲಂಕರಿಸಿದ ಕೂಡಲೆ ಸಂತ ಮಂಡಲಿಯವರಲ್ಲಿ ಪ್ರಮುಖರಾದ ಮ. ರಾ. ಮುಕುಂದ ಪೈಗಳು ಕೀರ್ತನಾ ಮಹತ್ವವನ್ನು ಚಲೋ ರೀತಿಯಿಂದ ವಿವರಿಸಿದ ತರುವಾಯ ಗಂಗೊಳ್ಳಿ ಕೃಷ್ಣಯ ಕಾಮತರು ಕುಂಬ್ಳಾಲು ಪೇಟೆಯ ಅಭಿವೃದ್ಧಿ ವಿಷಯವಾಗಿ ಸಭಿಕರಿಗೆ ಕರ್ಣಾನಂದಕರವಾದ ಭಾಷಣವನ್ನಿತ್ತರು. ತದನಂತರ ಮ. ರಾ. ಅಧ್ಯಕ್ಷರು ನೆರೆದ ಸಭಿಕರಿಗೆ ತಮ್ಮ ಪ್ರೇಮಭಾವವನ್ನು ತೋರ್ಪಡಿಸಿದ ಕೂಡಲೆ ಸಭಿಕರೆಲ್ಲರು ಅತ್ಯಾನಂದದಿಂದ ತಾಂಬೂಲಾದಿಗಳನ್ನು ಸ್ವೀಕರಿಸಿದ ಕೂಡಲೆ ಸಭೆಯು ಮುಕ್ತಾಯವಾಯಿತು.

ಅಂಗಡಿಮೊಗ್ರು:—ಕಳೆದ ತಾ. ೨೪ನೇ ಸಾಯಂಕಾಲ ೬-೪೦ಕ್ಕೆ ಇಲ್ಲಿಯ ಮದ್ರಸತುಲ್ ಇಸ್ಲಾಂ ಶಾಲೆಯಲ್ಲಿ ನುಸ್ರತುಲ್ ಇಸ್ಲಾಂ ಸಂಘದ ವಾರದ ಸಭೆಯೊಂದು ಸಂಘದ ಪ್ರೆಸಿಡೆಂಟರವರ ಅಧ್ಯಕ್ಷತೆಯಲ್ಲಿ ಜರಗಿತು. ಇದರಲ್ಲಿ ಸುಮಾರು ೧೫೦ಕ್ಕೆ ಮಿಕ್ಕ ಜನರು ಹಾಜರಿದ್ದರು. ಸಂಘದ ಒಬ್ಬರು ಸೆಕ್ರೆಟರಿಯು ಮೌಲಾನಾ ಶೈಖುಲ್ ಹಿಂದ್, ಮೌಲವಿ ಮಹಮ್ಮದ್ ಹಸ್ಸನರವರ ದೇಶಭಕ್ತಿ, ಮೊದಲಾದವುಗಳನ್ನು ವಿವರಿಸಿ ಹೇಳಿದ ನಂತರ ಇವರ ಆಕಸ್ಮಿಕವಾದ ಮರಣದಿಂದುಂಟಾದ ವ್ಯಸನವನ್ನು ಠರಾವು ಮಾಡಿತು. ಅದನ್ನು ಅವರ ಕುಟುಂಬಕ್ಕೆ ತಂತಿ ಮೂಲಕ ತಿಳಿಸಲು ನಿಶ್ಚಯಿಸಲಾಯಿತು.

ಕಾರ್ಕಳ:—ನಾವು (ಬಂಟರಯಾನೆ ನಾಡವರ ವಿದ್ಯಾರ್ಥಿಗಳು) ಮತ್ತು ನಮ್ಮ ಕಾರ್ಕಳ ಹೈಸ್ಕೂಲಿನ ಇತರ ಕೆಲವು ವಿದ್ಯಾರ್ಥಿಗಳು ಕೂಡಿ ಇಲ್ಲಿಂದ ಕಾಸರಗೋಡು ಹೈಸ್ಕೂಲಿಗೆ ವರ್ಗವಾಗಿ ಹೋದ ಮ. ರಾ. ರಾ. ಕೊರ್ಡೇಕಲ್ ಶ್ರೀನಿವಾಸರಾಯರಿಗೆ ಅವರ ಮೇಲಿನ ಪ್ರೀತಿಗೂ, ಅವರು ಇಲ್ಲಿ ತೋರಿಸಿದ ಉಮೇದಿನ ಗೌರವಕ್ಕೂ ಒಂದು, ಚಿನ್ನದ, ಮತ್ತೊಂದು ಬೆಳ್ಳಿಯ, ಹೀಗೆ ಎರಡು ಮೆಡ್ಲುಗಳನ್ನು ದಕ್ಷಿಣ ಕನ್ನಡ, ಡಿಸ್ಟ್ರಿಕ್ಟ್ ಬೋರ್ಡು ಪ್ರೆಸಿಡೆಂಟರ ಮುಖಾಂತರ ಕೊಟ್ಟಿರುವೆವು.

ಬೇಳ:—ಬೋರ್ಡು ಶಾಲೆಯಲ್ಲಿ ಇದೇ ಕಳೆದ ೧೩ನೇ ತಾರೀಕಿಗೆ ನಮ್ಮ ಶಾಲೆಯಲ್ಲಿ ಮಹಾರಾಜರ ಪಟ್ಟಾಭಿಷೇಕದ ದಿವಸವಾದ್ದರಿಂದ ನಮ್ಮ ಶಾಲೆಯ ಮಕ್ಕಳನ್ನು ವಾದ್ಯಗಳ ಘೋಷದಿಂದಲೂ, ಕೋಲಾಟ ಮೊದಲಾದ ವಿನೋದವಾದ ಆಟಗಳ ಮೂಲಕವಾಗಿಯೂ ವಿಜೃಂಭಣೆಯಿಂದ ಮೆರವಣಿಗೆ ಮಾಡಿಸಿ— ವಾಪಾಸು ನಮ್ಮ ಶಾಲೆಗೆ ಬಂದು ಮಕ್ಕಳಿಗೆ ಯಥಾನುಶಕ್ತಿ ಪ್ರಸಾದ ತಿನ್ನಲಿಕ್ಕೆ ಕೊಟ್ಟು ಸಂತೋಷಗೊಳಿಸಿದ್ದೇವೆ.

ಸುಳ್ಯ:—ಮಡಿಕೇರಿ ರಸ್ತೆಯ $\frac{53}{3}$ನೇ ಮೈಲುಕಲ್ಲಿನ ಮಧ್ಯ ಗದ್ದೆಯ ನೀರು ಹೋಗುವರೆ ಮಾಡಿದ ಮೋರಿಯು ಬಹು ಸಣ್ಣದಾಗಿ ಮಳೆಗಾಲದ ನೀರು ಸರಿಯಾಗಿ ಹೋಗದೆ ಗದ್ದೆಗಳಲ್ಲಿ ನೀರು ನಿಂತು ಗದ್ದೆಗಳ ಪೈರು ನಾಶವಾಗುವುದಲ್ಲದೆ ಸಮೀಪದಲ್ಲಿರುವ ಕಟ್ಟೋಣಗಳ ಪಂಚಾಂಗ ವಗೈರೆಗೆ ನೀರು ತಾಗಿ ಹೆಚ್ಚಿನ ಕಷ್ಟ ನಷ್ಟ ಉಂಟಾಗುವುದರಿಂದ ಈ ಮೋರಿಯನ್ನು ಆದಷ್ಟು ಬೇಗನೆ ದೊಡ್ಡದು ಮಾಡುತಿದ್ದರೆ ಬಹಳ ಉಪಕಾರವಾಗುತ್ತಿತ್ತು.

ಸದರಿ ರಸ್ತೆಯ $\frac{54}{3}$ನೇ ಮೈಲುಕಲ್ಲಿನ ಸಮೀಪ ದೇವಸ್ಥಾನದ ಕಡೆಗೆ ತಿರುಗುವಲ್ಲಿ ಮಧ್ಯ ಇರುವ ನೀರ ಜರಿಯಿಂದ ಗಾಡಿಗಳು ಮಗುಚಿ ಬೀಳುವುದರಿಂದ ಇಲ್ಲಿ ಒಂದು ಮೋರಿ ಹೊಸತಾಗಿ ಕಟ್ಟಿಸುತಿದ್ದರೆ ಕಾವೇರಿ ಮತ್ತು ಸುಳ್ಯ ಜಾತ್ರೆಗಳ ಸಮಯ ಕಷ್ಟಪಡುವ ಗಾಡಿ ಪ್ರಯಾಣಿಕರಿಗೆ ಬಹಳ ಉಪಕಾರವಿತ್ತು.

ಸುಳ್ಯ ಜಾತ್ರೆಯು ೮—೧—೧೯೨೧ಕ್ಕೆ ಪ್ರಾರಂಭವಾಗಿ ೭ ದಿವಸಗಳ ವರೆಗೆ ಇರುವುದಲ್ಲದೆ ಕೋಳಿ ಜೂಜು ೫ ದಿವಸಗಳ ವರೆಗೆ ನಡಿಯುತ್ತದೆ. ಆದ್ದರಿಂದ ಹೆಚ್ಚಾಗಿ ಜನಗಳು ಸೇರುವ ತೇರು ಬೀದಿಯಲ್ಲಿಯೂ ಸಮಯಕ್ಕೆ ದೀಪಗಳು ಇಲ್ಲದೆ ಇರುವುದು ಬಹು ಕಷ್ಟವಾಗಿದೆ. ತೇರು ಬೀದಿಯ ಸಂತೆ ಅಂಗಡಿಗಳ ಪೀಸು ಯಾನೆ ಸ್ಥಳ ಬಾಡಿಗೆಯನ್ನು ೨ ತಂದವಾಗಿ ಪೃಥಕ್ಕೃತ್ಯೇಕ ವ್ಯಯ ಮಾಡುವ ಪ್ರಯತ್ನ ಮಾಡುವುದಲ್ಲದೆ ದೀಪಗಳ ಗೋಜಿಗೆ ಹೋಗದೆ ಇದ್ದಷ್ಟು ಬದ ಪ್ರಯಾಣಿಕರು ದುರಾದೃಷ್ಟವ ಸರಿ.

[illegible]

ಸ್ವದೇಶಾಭಿಮಾನಿ.

ಶಕ ೧೮೪೨ ಮಾರ್ಗಶಿರ ಶು. ೧೪ ಶುಕ್ರವಾರ.

ಎಗ್ಸಿಕ್ಯೂಟಿವ್ ಕೌನ್ಸಿಲು ಚುನಾವಣಾ ಮತ್ತು ನೇಮಕಗಳು.

ಕೌನ್ಸಿಲು ಚುನಾವಣೆಯು ಆಯಿತು. ಎಗ್ಸಿಕ್ಯೂಟಿವ್ ಕೌನ್ಸಿಲಿನ ಮೆಂಬರ ಮತ್ತು ಮಿನಿಷ್ಟರ್ ಅಥವಾ ಅಮಾತ್ಯರ ನೇಮಕವೂ ಆಯಿತು. ಇವರ ಹೆಸರುಗಳನ್ನು ಇನ್ನೊಂದು ಕಡೆಯಲ್ಲಿ ಕೊಟ್ಟಿದ್ದೇವೆ. ಹಳೇ ಕೌನ್ಸಿಲಿನ ಎಗ್ಸಿಕ್ಯೂಟಿವ್ ಮೆಂಬರರಲ್ಲಿ ಸಿವಿಲಿಯನ್ ಮೆಂಬರರಿಬ್ಬರೂ ಪುನಃ ನೇಮಕವಾಗಿರುವರು. ೩ನೆ ಮೆಂಬರ ಸರ್ ಪಿ. ರಾಜಗೋಪಾಲಾಚಾರ್ಯರ ಕೆಲಸದ ಅವಧಿಯು ಮುಗಿದಾಗಿದ್ದರೂ ಅವರು ಕೊಚ್ಚಿ, ತಿರುವಾಂಕೂರು ಮುಂತಾದ ದೇಶೀಯ ಸಂಸ್ಥಾನಗಳಲ್ಲಿ ದಿವಾನರಾಗಿಯೂ ಇಲ್ಲಿ ಕೌನ್ಸಿಲು ಮೆಂಬರರಾಗಿಯೂ ಪಡೆದ ಅನುಭವವು ಹೊಸ ಆಡಳಿತೆಯ ಬೆಂಬಲಕ್ಕೆ ಇರುವಂತೆ ಅವರನ್ನು ತೀರಾ ಕೆಲಸದಿಂದ ನಿವೃತ್ತಿಪಡಿಸದೆ ಇನ್ನೊಂದು ರೂಪವಾಗಿ ಸರಕಾರದಲ್ಲಿ ಇರಗೊಡಿಸಿದ್ದಾರೆ. ನಾಮದಾರ ಹಬೀಬುಲ್ಲಾ ಸಾಹೇಬರು ಇವರ ಬದಲಿಯನ್ನು ಒಂದು ಕಾಲದಲ್ಲಿ ನೋಡಿದ್ದು ಈಗ ಮದ್ರಾಸು ಮ್ಯುನಿಸಿಪಾಲಿಟಿಯ ಕಮಿಶನರಾಗಿದ್ದವರು; ಮಹಮ್ಮದಿ ಮತಸ್ಥರ ಪ್ರತಿನಿಧಿಯಾಗಿ ಇವರನ್ನು ಆರಿಸಿರಬೇಕು. ೩ ಮಂದಿ ಅಮಾತ್ಯರು. ಬ್ರಾಹ್ಮಣೇತರರು. ಗವರ್ನರ್ ಸಾಹೇಬರಿಗೂ ಸರ್ ತ್ಯಾಗರಾಯ ಚೆಟ್ಟಿಗಳಿಗೂ ನಡೆದ ಪತ್ರವ್ಯವಹಾರದ ಮೇರೆಗೆ ಪ್ರಥಮ ಅಮಾತ್ಯ ಪದವಿಗೆ ಸರ್. ತ್ಯಾಗರಾಯ ಚೆಟ್ಟಿಯವರನ್ನೆ ಗವರ್ನರ್ ಸಾಹೇಬರು ಆರಿಸಿ ಇನ್ನೆರಡು ಮಂದಿಯನ್ನು 'ನೀವೇ ಚುನಾಯಿಸಿರಿ' ಎಂದು ಕೇಳಿದ್ದಕ್ಕೆ, ತನ್ನ ಸಹಾನುಭೂತಿಯು ಈಗಿನ ಹೊಸ ಕೌನ್ಸಿಲಿಗೆ ಸಂಪೂರ್ಣವಾಗಿ ಇದ್ದರೂ ತನ್ನ ವಯೋವೃದ್ಧತೆಯ ನಿಮಿತ್ತ ಅಮಾತ್ಯರ ಜವಾಬ್ದಾರಿಯನ್ನು ವಹಿಸಲು ಸಾಧ್ಯವಿಲ್ಲ, ಮತ್ತು ಮದ್ರಾಸು ಮ್ಯುನಿಸಿಪಲ್ ಕೊರ್ಪೊರೇಶನ್ನಿನಲ್ಲಿ ಅನೇಕ ಮಹತ್ವದ ಕೆಲಸಗಳು ಆಗಲಿಕ್ಕೆ ಬಾಕಿ ಇವೆ, ಅವುಗಳ ಕಾಲದಲ್ಲಿ ತಾನೇ ಅಲ್ಲಿ ಇದ್ದು ಅವುಗಳನ್ನು ಕೊನೆಗಾಣಿಸಬೇಕೆಂದು ತನ್ನ ಅಪೇಕ್ಷೆ ಇದೆ ಎಂದು ಸರ್ ತ್ಯಾಗರಾಯ ಚೆಟ್ಟಿಯವರು ತಿಳಿಸಿದ್ದನ್ನು ನಿರ್ವಾಹವಿಲ್ಲದೆ ಅಂಗೀಕರಿಸಿ, ಸರ್ ತ್ಯಾಗರಾಯ ಚೆಟ್ಟಿಯವರ ಸೂಚನೆ ಮೇರೆಗನೇ ಈ ಮೂವರನ್ನು ಅಮಾತ್ಯರಾಗಿ ನೇಮಿಸಲಾಯಿತು ಎಂದು ಕಾಣುತ್ತದೆ. ಈ ಹೊಸ ಕೌನ್ಸಿಲಿನಲ್ಲಿ ಬಹುಮತವು ಅಬ್ರಾಹ್ಮಣರದಾಗಿ ಇರುವುದರಿಂದ ಅವರ ಮುಖಂಡರಾದ ಸರ್ ತ್ಯಾಗರಾಯ ಚೆಟ್ಟಿಯವರನ್ನು ಆರಿಸದಿದ್ದರೆ ಆ ಜನಗಳಲ್ಲಿ ಒಂದು ಬಗೆಯ ಕ್ಷೋಭವು ಹುಟ್ಟೀತು ಎಂಬ ಕಾರಣದಿಂದಲೇ ಈ ಖಾಸಗಿ ಪತ್ರವ್ಯವಹಾರವು ಪ್ರಕಟವಾಗುವಂತೆ ಗವರ್ನರ್ ಸಾಹೇಬರು ತನ್ನ ಸಮ್ಮತಿ ಕೊಟ್ಟಿದ್ದರೆಂದು ಆ ಪತ್ರದಲ್ಲಿಯೇ ಕಾಣುತ್ತದೆ. ಯಾವ ತಂಗಡದ ಕಡೆಗೆ ಬಹುಮತವು ಇದೆಯೋ ಅಂಥಾ ತಂಡದ ಮುಖಂಡರನ್ನು ಮುಖ್ಯ ಮಂತ್ರಿಯಾಗಿ ಚುನಾಯಿಸುವ ಪಾರ್ಲಿಮೆಂಟ ಕ್ರಮಗಳನ್ನು ಅನುಸರಿಸಿ ಸರ್ ತ್ಯಾಗರಾಯ ಚೆಟ್ಟಿಯವರಿಗೆ ಈ ರೀತಿಯ ಆಮಂತ್ರಣವು ಗವರ್ನರ್ ಸಾಹೇಬರ ಕಡೆಯಿಂದ ಉಂಟಾಯಿತು ಎಂದೂ ಸದರಿ ಪತ್ರದಲ್ಲಿ [illegible] ಬಹುಮತವು ಅವರ ಪಕ್ಷದಲ್ಲಿ [illegible] ಅಥವಾ ಮಿನಿಷ್ಟರುಗಳು ತಮ್ಮ ಕೆಲಸದಿಂದ ನಿವೃತ್ತರಾಗಬೇಕೆಂದು ನಿಯಮವಿದೆ. ಒಂದು ವೇಳೆ ಬಹುಮತವು ಅವರ ಪಕ್ಷದಲ್ಲಿ ಇದ್ದರೂ ಅವರ ಧೋರಣವು ಸರಕಾರದ ಸುವ್ಯವಸ್ಥಿತ ಕ್ರಮಕ್ಕೆ ಸರಿಹೋಗದಿದ್ದರೆ ಅಂಥಾ ಮಿನಿಷ್ಟರನ್ನು ಗವರ್ನರ್ ಸಾಹೇಬರು ಅವರ ಪದವಿಯಿಂದ ತಳ್ಳಿಹಾಕಬಹುದು—ಅಥವಾ ಇಡೀ ಕೌನ್ಸಿಲನ್ನೆ ರದ್ದುಪಡಿಸಿ ಹೊಸ ಚುನಾವಣೆಯನ್ನು ಇಡೀ ಸಂಸ್ಥಾನದಲ್ಲಿ ಮಾಡಬಹುದಾಗಿ ಎಕ್ಟು ಹೇಳುತ್ತಿದೆ. ಇಂಥ ನಿರಂಕುಶ ಅಧಿಕಾರಗಳು ಗವರ್ನರರ ಪಾಲಿಗೆ ಬಂದಾಗ ನ್ಯಾಯವಿಧಾಯಕ ಸಭೆಯ ಬಹುಮತವನ್ನು ಸರಿಯಾಗಿ ಕಟ್ಟಿಕೊಂಡು ಎಗ್ಸಿಕ್ಯೂಟಿವ್ ಕೌನ್ಸಿಲಿಗೂ ಗವರ್ನರರಿಗೂ ಸಮ್ಮತವಾಗುವ ರೀತಿಯಲ್ಲಿ ಕೌನ್ಸಿಲಿನ ಕಾರ್ಯಕ್ರಮವನ್ನು ಕೈಕೊಳ್ಳುವವರೇ ಈಗಿನ ಸ್ಥಿತಿಯಲ್ಲಿ ಮಿನಿಷ್ಟರರಾಗಬೇಕಾಗಿದೆ.

ಇಷ್ಟೆ ಅಲ್ಲ; ಈಗಿನ ಎಗ್ಸಿಕ್ಯೂಟಿವ್ ಕೌನ್ಸಿಲಿನ ಸಿವಿಲಿಯನ್ ಮೆಂಬರರು ಥಕ್ಕನೆ ಜನಾಪವಾದಕ್ಕೆ ಬಗ್ಗುವವರಲ್ಲ, ತಮಗೆ ಅನುಭವ ಸಿದ್ಧವಾದ್ದನ್ನು ಮಾಡಿಯೇ ತೀರಿಸುವಂಥ ದೃಢಮನಸ್ಸಿನವರಾದ ಕಾರಣ ಅವರಿಗೆ ಪರಿಚಯವೂ ವಿಶ್ವಾಸವೂ ಇದ್ದ ಮಿನಿಷ್ಟರರೇ ನೇಮಕವಾದ್ದಲ್ಲಿ ಒಂದು ವೇಳೆ ಈಗೀಗ ಬ್ರಿಟಿಷ ವರ್ತಮಾನ ಪತ್ರಗಳಲ್ಲಿ ಸುಳಿಯುವ ಸುದ್ಧಿಯಂತೆ ಲೊರ್ಡ ವಿಲ್ಲಿಂಗ್‌ಡನ್ ಸಾಹೇಬರು ಮದ್ರಾಸು ಗವರ್ನರ್ ಪದವಿಯನ್ನು ಬಿಟ್ಟು ವೈಸರಾಯಿಗಳಾಗಿ ಹೋಗುವ ಸಂಭವವಿದ್ದಲ್ಲಿ ಕೂಡಾ ಕೌನ್ಸಿಲು ರಥದ ದಾರಿಗೆ ಎಡರು ಬಾರದಂತಾದೀತು ಎಂದು ಗವರ್ನರ್ ಸಾಹೇಬರು ನೆನಸಿರಬೇಕು.

ನೇಮಿಸಲ್ಪಟ್ಟ ಮಿನಿಷ್ಟರುಗಳಾದರೂ ಆಡಳಿತೆಯ ಕ್ರಮಗಳಿಗೆ ಅಪರಿಚಿತರಲ್ಲ. ನಾಮದಾರ ಎ. ಸುಬ್ಬರಾಯರು ರೆಡ್ಡಿಯಾರರು ದಕ್ಷಿಣ ಆರ್ಕಾಡು ಜಿಲ್ಲೆಯ ಡಿಸ್ಟ್ರಿಕ್ಟ ಬೋರ್ಡ ಪ್ರೆಸಿಡೆಂಟರಾಗಿ ಅನುಭವಶಾಲಿಗಳು; ನಾಮದಾರ ರಾಮರಾಯ ನಿಂಗಾರು ಮದ್ರಾಸು ಜಮೀನುದಾರರ ಪರವಾಗಿ ವರಿಷ್ಠ ಕೌನ್ಸಿಲಿನಲ್ಲಿ ಮೆಂಬರರಾಗಿ ಪ್ರಜೆಗಳ ಪರವಾಗಿ ಕಾದಾಡಿದವರು; ೩ನೆಯವರಾದ ವೆಂಕಟರೆಡ್ಡಿ ನಾಯುಡು ಇವರೂ ಕೂಡಾ ಜನೋಪಕಾರದ ಕೆಲಸಗಳಲ್ಲಿ ಅನುರಕ್ತರಾಗಿದ್ದವರೇ; ಈ ಮೂವರೂ ಡಾ. ಟಿ. ಯಮ್. ನಾಯರ್ ಮತ್ತು ಸರ್ ತ್ಯಾಗರಾಯ ಚೆಟ್ಟಿಯವರ 'ಜಸ್ಟೀಸ್' ತಂಡದವರು; ಹೀಗಿರುವುದರಿಂದ ಈ ತಂಡದವರ ಕೈಯಲ್ಲಿ 'ಟ್ರೆನ್ಸ್‌ಫರ್ಡ' ಅಂದರೆ ಜನತೆಗೆ ಒಪ್ಪಿಸಿದ ಇಲಾಖೆಗಳ ಆಡಳಿತೆಯು ಸೇರುವುದು ಯುಕ್ತವೆಂದು ಗವರ್ನರ್ ಸಾಹೇಬರ ಮತವೂ ಇದ್ದಿರಬಹುದು.

'ಜಸ್ಟೀಸ್' ತಂಡದವರ ಕೈಯಲ್ಲಿ ಈ ಅಧಿಕಾರವು ಬಂದುದರಿಂದ ಸರ್ವನಾಶವಾಯಿತು ಎಂಬಂತೆ 'ಹಿಂದೂ' ಪತ್ರಿಕೆ ಮತ್ತು 'ನ್ಯೂ ಇಂಡಿಯಾ' ಇವೆರಡು ಪತ್ರಿಕೆಗಳು ಸಾರತೊಡಗಿವೆ. ಇಲ್ಲಿ ಈ ಚರ್ಚೆ ತಿಳಿಯಬೇಕಾದರೆ 'ಜಸ್ಟೀಸ್' ತಂಡದ ಪರಿಚಯವನ್ನು ವಾಚಕರಿಗೆ ಸ್ವಲ್ಪ ಮಾಡಿಸಬೇಕಾಗುವುದು. ಮದ್ರಾಸಿನ ಆಡಳಿತೆಯಲ್ಲಿ ಬ್ರಾಹ್ಮಣರೇ ದೊಡ್ಡ ದೊಡ್ಡ ಪದವಿಗಳನ್ನು ತಮ್ಮೊಳಗೆ ಹಂಚಿಕೊಂಡು ಅಬ್ರಾಹ್ಮಣರ ಏಳ್ಗೆಗೆ ತಡೆಯಾಗಿದ್ದಾರೆ, ಈ ವಿಷಯವನ್ನು ಜನತೆಯ ಮುಂದಿಟ್ಟು ಅಬ್ರಾಹ್ಮಣರಿಗೆ ನ್ಯಾಯ ಸಿಗುವಂತೆ ಮಾಡಬೇಕೆಂದು ಈ ತಂಡದವರ ಮತ. ಇದಕ್ಕಾಗಿಯೆ 'ಜಸ್ಟೀಸ್' ಅಂದರೆ ನ್ಯಾಯವೆಂಬ ಹೆಸರಿನ ಒಂದು ದೈನಿಕ ಪತ್ರಿಕೆಯನ್ನು ಈ ತಂಡದವರು ಈಚೆಗೆ ಒಂದೆರಡು ವರ್ಷಗಳಿಂದ ಹೊರಪಡಿಸುತ್ತಿದ್ದು ಅದರಲ್ಲಿ ಪ್ರತಿ ಇಲಾಖೆಯಲ್ಲಿಯೂ ಬ್ರಾಹ್ಮಣ ಅಬ್ರಾಹ್ಮಣ ನವುಕರರ ಸಂಖ್ಯೆಯನ್ನು ಎತ್ತಿ ತೋರಿಸಿ ಅಬ್ರಾಹ್ಮಣ ವರ್ಗಕ್ಕೆ ಈ ನೇಮಕಗಳಲ್ಲಿ ತುಂಬಾ ಅನ್ಯಾಯವಾಗಿದೆ ಎಂದು ಪ್ರತಿಪಾದಿಸಿದ್ದಾರೆ. ಬ್ರಾಹ್ಮಣರು ಒಂದು ಕೂಟವಾಗಿ ಈ ಅಬ್ರಾಹ್ಮಣರಿಗೆ ದೊಡ್ಡ ಪದವಿಗಳು ಸಿಗದಂತೆ ಒಳಸಂಚು ನಡಿಸುತ್ತಿದ್ದಾರೆ ಎಂದು ಅಬ್ರಾಹ್ಮಣರು ಹೇಳುವುದಕ್ಕೆ ಕಾರಣಗಳು ಇವೆ. ಆದರೆ ಈ ಪದವಿ ಬಹಿಷ್ಕಾರದಲ್ಲಿ ಅಬ್ರಾಹ್ಮಣರೆಂತಲೇ ಅಲ್ಲ, ತಮಿಳು ಬ್ರಾಹ್ಮಣರಲ್ಲದ ತೆಲುಗು, ಕನ್ನಡ, ಮಲೆಯಾಳ ಜಿಲ್ಲೆಗಳ ಬ್ರಾಹ್ಮಣರೂ ಅಬ್ರಾಹ್ಮಣರೂ ಏಕಪ್ರಕಾರವಾಗಿ ಸಹಭಾಗಿಗಳಾಗಿದ್ದಾರೆ ಎಂದು ಹೇಳುವುದು ವಸ್ತುಸ್ಥಿತಿಗೆ ಸರಿಯಾದೀತು. ಆಂಧ್ರರಾಷ್ಟ್ರವನ್ನು ಪ್ರತ್ಯೇಕಿಸಬೇಕೆಂದು ಆಂಧ್ರರು ಈಗ ಕೆಲವು ಕಾಲಗಳಿಂದಲೂ ಪರಿಷತ್ತುಗಳನ್ನು ಜರಗಿಸುವುದಕ್ಕೆ ಇದೇ ಕಾರಣವಾಗಿದೆ. ತಮಿಳು ಜಿಲ್ಲೆಯಲ್ಲಿಯೆ ಸಂಸ್ಥಾನದ ರಾಜಧಾನಿ ಇದ್ದುದರಿಂದ ತಮಿಳರಿಗೆ ಮತ್ತು ಅವರಲ್ಲಿ ಸುಶಿಕ್ಷಿತರಾದ ಬ್ರಾಹ್ಮಣರಿಗೆ ಸರಕಾರದ ದೊಡ್ಡ ಪದವಿಧರರೊಡನೆ ಪರಿಚಯದ ಸೌಕರ್ಯಗಳು ಇದ್ದಂತೆ ತೆಲುಗು ಮಲೆಯಾಳ, ಕನ್ನಡದವರಿಗೆ ಇಲ್ಲ. ಹೀಗಾಗಿ ಕಾಲಗತಿಯಿಂದ ತಮಿಳು ಬ್ರಾಹ್ಮಣರ ಸಂಖ್ಯೆಯೇ ಸರಕಾರ ಇಲಾಖೆಗಳಲ್ಲಿ ಹೆಚ್ಚಾಗಿದ್ದುದು ಸರಕಾರದ ದೃಷ್ಟಿಗೆ ಬಿದ್ದು ಈಚೀಚೆಗೆ ಸ್ವಲ್ಪ ಸುಧಾರಣೆಗಳು ಆಗುತ್ತಲೇ ಇವೆ. ಮತ್ತು ಸರಕಾರ ಕೆಲಸಗಳ ಹವಿಭಾಗಿ [illegible] ಅಬ್ರಾಹ್ಮಣರಿಗೆ [illegible] ಪಾರ್ಲಿಮೆಂಟ [illegible] ಅವರ ಕಡೆಗೆ [illegible] ಅಸಮಾಧಾನವಾಗಿತ್ತು. ಅಂದವರಿಗೆ [illegible] ಆಡಳಿತೆಯಲ್ಲಿ ಸೇರದಂತೆ ಕೊಂಚ [illegible] ಸ್ವಲ್ಪ [illegible] ಹೆಚ್ಚದಂತಿದೆ.

ಆಗ ಮದ್ರಾಸು ಸಂಸ್ಥಾನದಲ್ಲಿ ರಾಷ್ಟ್ರೀಯ ಪಕ್ಷದ ನವಜೀವನವನ್ನು [illegible] ಎಂಬ ಸದುದ್ದೇಶದಿಂದ ಜನ್ಮವೆತ್ತಿದ 'ನ್ಯೂ ಇಂಡಿಯಾ' ಪತ್ರಿಕೆಯು ಬ್ರಾಹ್ಮಣರ ಪರವಾಗಿ ವಾದಿಸಿ ಬ್ರಾಹ್ಮಣ ಅಬ್ರಾಹ್ಮಣರ ಒಳಗೆ ಬಿದ್ದ ಬಿರುಕನ್ನು ಇನ್ನೂ ದೊಡ್ಡದಾಗಿ ಮಾಡಲು ಯತ್ನಿಸುವುದು. ಯಾವ ನ್ಯಾಯ [illegible] 'ನ್ಯೂ ಇಂಡಿಯಾ' ಪತ್ರಿಕೆಯ ಪಕ್ಷಪಾತಿಗಳಾದ ಮಿ[illegible] ರಾಮಸ್ವಾಮಿ ಅಯ್ಯರರಿಗೆ ಒಂದು ಮೆಂಬರಿಕೆ ಸಿಗಲಿಲ್ಲವೆಂದು ಹೇಳಿದಂತೆ ಅವರಿಗೆ ಎಡ್ವೊಕೇಟ ಜನರಲರಾಗಿ ನೇಮಿಸಿ ಆ ಇಸಮಿನ ಸಂಬಳವನ್ನು ಏರಿಸಬೇಕಾಗಿ ಸರಕಾರದವರು ನಿರ್ಣಯ ಮಾಡಿದ್ದರೆ ಅದು ಸಾಲದೆ? ಈ ಸಂದರ್ಭದಲ್ಲಿ ತೆಲುಗು ಜಿಲ್ಲೆಗಳಲ್ಲಿ ನಿವಾಸಿಯಾಗಿ ಕೌನ್ಸಿಲು ಚರ್ಚೆಗಳಲ್ಲಿ ಪ್ರಚಂಡರಾಗಿದ್ದ ನಾಮದಾರ ರಾಮಚಂದ್ರರಾಯರಿಗೆ ಸಿಗಲಿಲ್ಲವೆಂದು ತೆಲುಗರೂ, ಅಥವಾ ಮಲಬಾರದವರಾಗಿದ್ದು ತಿರುವಾಂಕೂರಿನ ದಿವಾನ ಪದವಿಯಿಂದ ಆಗಲೇ ನಿವೃತ್ತರಾಗಿ ಅದರ ಶಾಕವು ಇನ್ನೂ ತನೆಯುದಿರುವ ನಾಮದಾರ ಕೃಷ್ಣನ್ನಾಯರನ್ನು ಏಕೆ ನೇಮಿಸಲಿಲ್ಲವೆಂದು ಮಲೆಯಾಳದವರೂ ಅಥವಾ ಕನ್ನಡ ಜಿಲ್ಲೆಯಲ್ಲಿ ಮುನ್ಸಿಪಲ್ ಮತ್ತು ಡಿಸ್ಟ್ರಿಕ್ಟ ಬೋರ್ಡ ಆಡಳಿತೆಯಲ್ಲಿ ಹಲವು ವರ್ಷ ಪ್ರೆಸಿಡೆಂಟರಾಗಿ ಅನುಭವಶಾಲಿಯಾಗಿದ್ದ ರಾವ ಬಹದ್ದೂರ ನಂ ಸುಬ್ಬರಾಯರನ್ನು ಏಕೆ ನೇಮಿಸಲಿಲ್ಲವೆಂದು ದಕ್ಷಿಣ ಕನ್ನಡದವರೂ ಕಳವಳಗೊಂಡರೆ ಅದು ಸಕಾರಣವಾಗುತಿತ್ತು.

ಇರಲಿ. ಮೊಣಕೈಗೆ ಬೆಲ್ಲ ಹಚ್ಚಿದೊಂದು ವಿಲೆವಾರಿಯನ್ನು ಮೇಲೆ ಪ್ರಸ್ತಾಪಿಸಿದೆವು. ಅದನ್ನು ಸಮರ್ಥಿಸಬೇಕಾಗಿದೆ. ಮೇಸ್ಟನ್ ಕಮ್ಮಿಟಿಯ ಎವಾರ್ಡ ಮೇರೆಗೆ ಪ್ರಾಂತಿಕ ಸರಕಾರಗಳಿಗೆ ಕೆಲವು ಕಂದಾಯಗಳನ್ನು ಒಪ್ಪಿಸಿಕೊಟ್ಟಿದೆ. ಇದರಿಂದ ವರಿಷ್ಠ ಸರಕಾರದ ಆಧಾಯಕ್ಕಿಂತ ಖರ್ಚು ವಿಶೇಷ ಜಾಸ್ತಿಯಾಗುವುದೂ, ಪ್ರಾಂತಿಕ ಸರಕಾರಗಳಲ್ಲಿ ಬಹಳ ಹಣ ಶಿಲಕು ಉಳಿಯುವುದೂ ಇರುವುದರಿಂದ ವರಿಷ್ಠ ಸರಕಾರದ ನಷ್ಟವನ್ನು ಯಾವ ರೀತಿಯಲ್ಲಿ ಭರ್ತಿ ಮಾಡಬಹುದೆಂದು ಅದೇ ಹಂಚಿಕೆಯಲ್ಲಿ ಹೇಳಿದೆ. ಇದನ್ನು ಆ ಕಾಲದಲ್ಲಿಯೇ ನಾವು ಪ್ರಸ್ತಾಪಿಸಿದ್ದೇವೆ. ಆದರೆ ಈಗಿನ ಪರಿಸ್ಥಿತಿಯಲ್ಲಿ ಅದಕ್ಕಿಂತ ಇಮ್ಮಡಿ ನಷ್ಟವಾದೀತು ಎಂದು 'ಇಂಗ್ಲಿಷ ಮೇನ್' ಎಂಬ ಪತ್ರಿಕೆಯು ಹೇಳುತ್ತಿದೆ. ಇದು ನಿಜವಾಗಿದ್ದರೆ ಮತ್ತು ಈಗ ಏರಿದ ಮತ್ತು ಏರಲಿಕ್ಕಿರುವ ಸಂಬಳ ದರಗಳನ್ನೆಲ್ಲ ಲೆಕ್ಕ ಹಾಕಿದರೆ ಪ್ರಾಂತಿಕ ಸರಕಾರಗಳಲ್ಲಿ ಉಳಿಯುವ ಶಿಲಕು ಬಾಲವಿಲ್ಲದ ಒಂಭತ್ತು ಆಗಬಹುದೆಂಬ ಶಂಕೆ ಇದೆ. ದೇಶಕ್ಕೆ ಬೇಕಾದ ಶಿಕ್ಷಣ, ಆರೋಗ್ಯರಕ್ಷಣೆ, ಕೈಗಾರಿಕೆ, ಮುಂತಾದವುಗಳ ಬಗ್ಗೆ ಹಣವನ್ನು ಜನರಿಂದ ಎತ್ತುವ ಸಾಲಗಳಿಂದಾಗಲಿ ಅಥವಾ ನೂತನ ಕಂದಾಯಗಳ ಮೂಲಕವಾಗಲಿ ಒದಗಿಸಿಕೊಳ್ಳಬೇಕು. ಅಥವಾ ಈಗಿದ್ದ ಸ್ಥಿತಿಯಲ್ಲಿಯೇ ತಾಳಹಾಕಬೇಕು. ಈ ನಾಜೂಕ ಪರಿಸ್ಥಿತಿಯಲ್ಲಿ ಅಬ್ರಾಹ್ಮಣ ಬಹುಮತವೇ ಕೌನ್ಸಿಲಿನಲ್ಲಿದ್ದಾಗ ಅದನ್ನೂ ಅದರೊಂದಿಗೆ ಸಂಸ್ಥಾನದ ಅಬ್ರಾಹ್ಮಣ ಜನಸಂಖ್ಯೆಯನ್ನೂ ತನ್ನ ಬೆನ್ನಿಗೆ ಕಟ್ಟಿಕೊಂಡು ರಾಜಕಾರ್ಯವು ಸರಾಗವಾಗಿ ನಡೆಸುವಂತೆ ನೇಮಕಗಳನ್ನು ಮಾಡುವುದು ದೂರದರ್ಶಿಗಳ ಕರ್ತವ್ಯವಲ್ಲವೆ? ಈ ದೃಷ್ಟಿಯಿಂದ ಗವರ್ನರ್ ಸಾಹೇಬರು ಈ 'ಜಸ್ಟೀಸ್' ತಂಡದವರನ್ನೆ ಆರಿಸಿದ್ದರೆ ಅದು ಉಪಯುಕ್ತವೇ ಆಗಿದೆನ್ನಬೇಕು. ಆದರೆ ದೇಶದ ಒಳಿತಿಗೆ ಮತ್ತೊಗೆ ಈ ಚುನಾವಣೆಗಳ ತುಲನೆಯನ್ನು ಇನ್ನೊಮ್ಮೆ ಮಾಡುವೆವು.

ಸ್ಫುಟ ವಿಚಾರಗಳು.

೧. ಕೊಡಗು ಜಿಲ್ಲೆಗೆ ಈ ಸುಧಾರಣೆ ಎಕ್ಟಿನ ಚಳವಳದ ಕಾಲದಲ್ಲಿ ಒಂದು ಲೆಜಿಸ್ಲೇಟಿವ್ ಕೌನ್ಸಿಲ್ ಸಿಗಬೇಕೆಂದು ಅಲ್ಲಿಯ ನಿವಾಸಿಗಳ ಮನವಿಯು ಇಂಡಿಯಾ ಸರಕಾರಕ್ಕೆ ಚೀಫ್ ಕಮ್ಮಿಶನರ ಮೂಲಕ ತಲಪಿತ್ತು. ಅಷ್ಟು ಸಣ್ಣ ಸಂಸ್ಥಾನಕ್ಕೆ ಒಂದು ಕೌನ್ಸಿಲನ್ನು ಕೊಡುವುದು ಪ್ರಶಸ್ತವಲ್ಲ, ಒಂದು ಎಡವೈಸರಿ ಕೌನ್ಸಿಲನ್ನು ಏರ್ಪಡಿಸಬಹುದು ಎಂದು ಇಂಡಿಯಾ ಸರಕಾರದವರಿಂದ ಬಂದ ಹುಕುಂ ಸರಿಯಾದ್ದಲ್ಲವೆಂದು ಅಲ್ಲಿಯ ಕೆಲವರ ಅಭಿಪ್ರಾಯವು ಇನ್ನೂ ಇದ್ದಂತೆ ತೋರುತ್ತದೆ. ಕೊಡಗು ರಾಜರಿಂದ ಅದನ್ನು ಪಡೆಯುವಾಗ ಮೈಸೂರಿನಿಂದ ಪಶ್ಚಿಮ ಕರಾವಳಿಗೆ ಬರುವ ದಾರಿಯಾಗಿದ್ದ ಈ ಪ್ರದೇಶವನ್ನು ಮೈಸೂರಿನ ಭದ್ರತೆಗಾಗಿ ಬೆಂಗಳೂರಿನ ರೆಸಿಡೆಂಟರ ಕೈಕೆಳಗೆ ಇಡಬೇಕಾಗಿ ಬಂತು. ಆಗ ಬೆಂಗಳೂರಿನ ರೆಸಿಡೆಂಟರನ್ನು ಕೊಡಗಿನ ಚೀಫ್ ಕಮ್ಮಿಶನರ್ ಮಾಡಿ ಅವರ ಕೈಕೆಳಗೆ ನಮ್ಮ ಜಿಲ್ಲೆಗಳ ಕಲೆಕ್ಟರರಂತೆ ಒಬ್ಬ ಕಮ್ಮಿಶನರನ್ನು ಇಟ್ಟದ್ದು ಅದೇ ಕ್ರಮವು [illegible]

[illegible] ... ಇವರು ... ಜಿಲ್ಲೆಯಂದರೆ ನಮ್ಮ ... ಮತ್ತು ... ತಾಲೂಕು ಗಳಲ್ಲಿ ... ನಮ್ಮ ... ಜಿಲ್ಲೆಯ ... ೭೦೦ ... [illegible] ... ಅಲ್ಲಿಯ ... ಆದರೆ ಇವರು ಅಸಿಸ್ಟಂಟ ... [illegible] ... ಸಬ್ ಜಡ್ಜರೂ ಬಬ್ಬರೇ ... [illegible] ... ಅಡಳಿತೆಯ ಕ್ರಮವು ಇನ್ನೂ ಬಾಬರ್ ... ಕಾಲದ್ದೇ ಇದೆ. ಆದರೆ ಸರ್ವಾಧಿಕಾರಿಯಾದ ಕಮ್ಮಿಶನರ ಉದಾರ ಮನಸ್ಸಿದ್ದರೆ ಬೇರೆ ಸಂಸ್ಥಾನಗಳಿಗಿಂತಲೂ ಇಂಡಿಯಾ ಸರಕಾರದಿಂದ ಈ ಪುಟ್ಟ ಸಂಸ್ಥಾನಕ್ಕೆ ಸಹಾಯವು ವಿಶೇಷವಾಗಿ ಬರುತ್ತದೆ. ಹೀಗಾಗಿ ಅಲ್ಲಿ ವಿದ್ಯಾ ಸೌಕರ್ಯಗಳು ಹೆಚ್ಚಿವೆ. ಆದರೂ ಆ ದಾವಣಿಯದಲ್ಲಿ ಪ್ರೌಢ ಶಿಕ್ಷಣ ಹೊಂದಿದವರ ಸಂಖ್ಯೆ ಬಹಳ ಕಡಿಮೆ. ಹೀಗಿದ್ದರೂ ಇತರ ಪ್ರಾಂತಗಳಂತೆ ಅವರೂ ಸ್ವಾತಂತ್ರ್ಯ ರಾಜ್ಯಭಾರದ ಹಕ್ಕನ್ನು ಪಡೆಯುವ ತವಕದಿಂದ ಒಂದು ಕಾಯಿದೆ ಕೌನ್ಸಿಲನ್ನು ಕೇಳಿದಂತೆ ತೋರುತ್ತದೆ. ಇನ್ನೂ ಕೆಲವು ಪ್ರೌಢರು ಅದಕ್ಕೆ ಬದಲಾಗಿ ತಮ್ಮ ಜಿಲ್ಲೆಯನ್ನು ಮದ್ರಾಸು ಸಂಸ್ಥಾನಕ್ಕೆ ಸೇರಿಸುವುದು ಒಳ್ಳೆಯದೆಂದು ತಿಳಿಯುತ್ತಾರೆ. ಆದರೆ ನಮ್ಮ ದೇಶ ಬಂಧುಗಳಾದ ಇವರಿಗೆ ಒಂದು ಮಾತನ್ನು ಈ ಸಂದರ್ಭದಲ್ಲಿ ಹೇಳಬೇಕಾಗಿದೆ. ಈಗ ಹಾಲಿ ತಮಗ ಇರುವ ಎಡರುಗಳಿಂದ ತಪ್ಪಿಸಿಕೊಳ್ಳಲು ಈ ಜನಗಳು ಈ ಚಳವಳವನ್ನು ಎಬ್ಬಿಸುವಂತೆ ತೋರುತ್ತಿದೆ. ಇಷ್ಟು ಸಣ್ಣ ಸಂಸ್ಥಾನಕ್ಕೆ ಒಂದು ಕಾಯಿದೆ ಕೌನ್ಸಿಲನ್ನು ಸ್ಥಾಪಿಸುವ ಖರ್ಚನ್ನು ಅವರು ಸಹಿಸಲಾರರು. ಚೀಫ್ ಕಮ್ಮಿಶನರ ನಿರಂಕುಶ ಪ್ರಭುತ್ವಕ್ಕೆ (ಇಲ್ಲಿ ಚೀಫ್ ಕಮ್ಮಿಶನರೇ ಹೈಕೋರ್ಟು ಅಂದರೆ ರೆವಿನ್ಯೂ, ಸಿವಿಲ್, ಜುಡಿಶಿಯಲ್ ಮುಂತಾದ ಎಲ್ಲಾ ಅಧಿಕಾರಗಳು ಇವರಲ್ಲಿಯೆ ಅಡಗಿವೆ) ಅಂಕುಶವನ್ನು ಹಾಕುವ ನೆವದಿಂದ ತಮಗೆ ಈಗ ಇರುವ ಕಂದಾಯದ ಮಿತಿಯನ್ನು ಏರಿಸುವುದಕ್ಕೆ ಎಡೆ ಮಾಡುವುದೂ ಯುಕ್ತವಲ್ಲ. ಅಥವಾ ತಮ್ಮ ಸೌಕರ್ಯಕ್ಕಾಗಿ ಬೇಕಾದ ಹಣಕ್ಕೋಸ್ಕರ ಇತರ ಸಂಸ್ಥಾನಗಳ ಆದಾಯದ ಮೇಲೆ ಹೊಂದಿಕೊಂಡಿರುವುದು ನ್ಯಾಯವಲ್ಲ. ಈಗಿನ ಆಡಳಿತೆಯ ಹಲವು ಶಾಖೆಗಳು ಮದ್ರಾಸಿನ ಇಲಾಖೆಗಳ ವಿಚಾರದಲ್ಲಿವೆ ಎಂಬದೇನೊ ನಿಜ. ಆದ್ದರಿಂದ ಇಡೀ ಜಿಲ್ಲೆಯನ್ನು ಮದ್ರಾಸಿಗೆ ಸೇರಿಸುವುದು ಒಳ್ಳೇದಲ್ಲವೆ ಎಂಬ ಪ್ರಶ್ನೆಯು ಕೆಲವರಿಗೆ ಬಂದಿರಬಹುದು. ದಕ್ಷಿಣ ಕನ್ನಡವಾಗಲೀ ಬಳ್ಳಾರಿಯಾಗಲೀ ಕನ್ನಡ ಜಿಲ್ಲೆಯಾಗಿದ್ದು ದಕ್ಷಿಣ ಕನ್ನಡದಲ್ಲಿ ಮಲೆಯಾಳದವರೂ ಬಳ್ಳಾರಿಯಲ್ಲಿ ತೆಲುಗು ಜನರೂ ಅಧಿಕಾರ ನಡಿಸುವಂತೆ ಕೊಡಗಿನಲ್ಲಿ ಬೇರೊಂದು ಜಿಲ್ಲೆಯವರು ಅಧಿಕಾರ ನಡಿಸುವ ಅವಸ್ಥೆ ಒಂದೊದಗುವುದು ಒಂದು, ರಾಜಧಾನಿಯಿಂದ ದೂರವಾಗಿದ್ದು ತಮ್ಮ ಮೊರೆಗೆ ಸರಕಾರದ ಕಿವಿ ಸರಿಯಾಗಿ ಸಿಗದೆ ಇರುವುದು ಒಂದು, ಈ ತರದ ಸಂಕಷ್ಟಗಳಿಗೆ ಗುರಿಯಾಗಬೇಕಾದೀತು. ಕನ್ನಡಿಗರ ದೆಸೆಯೇ ಹೀಗಾಗಿದೆ. ಧಾರವಾಡ ಅತ್ತಕಡೆಗೆ ಮರಾಟಿಯರ ಅತಿಕ್ರಮಣ ಎಲ್ಲಲ್ಲಿಯೂ ಕಣ್ಣಿಗೆ ಹೊಡೆಯುವುದಲ್ಲದೆ ಕನ್ನಡಿಗರೂ ಮೂಲೆ ಸೇರಲಾಗಿದ್ದಾರೆ. ಆದ್ದರಿಂದ ಈ ಕನ್ನಡಿಗರೆಲ್ಲ ಕೂಡಿ ಕನ್ನಡ ಪ್ರಾಂತವನ್ನೆ ಬೇರೆ ಮಾಡಲು ಯತ್ನಿಸುವುದೇ ಒಳ್ಳೇಯದು. ಆಗ ಬೆಂಗಳೂರನ್ನೆ ಅದರ ರಾಜಧಾನಿಯಾಗಿ ಮಾಡಿದರೆ ಕನ್ನಡ ಪ್ರಾಂತವು ಸಮಕಟ್ಟಾಗಿ ಬಂದೀತಾದ್ದರಿಂದ ಈ ಚಳವಳದ ಕಡೆಗೆ ಕೊಡಗು ಜನರು ದೃಷ್ಟಿ ಇಡುವುದು ಯುಕ್ತವಾಗಿದೆ.

೨. ಅಸಹಕಾರದ ಚಳವಳವು ಫಲಕಾರಿಯಾಗಿಲ್ಲವೆಂದು ... ವಿಕರಿಂದ ಪಬ್ಲಿಸಿಟಿ ಬಿರೋದವರು ವೋಟರರ ಮತ್ತು ವೋಟು ಕೊಡಲು ಬಂದವರ ದಾಮಾಶಯವನ್ನು ಪರಿಶೀಲಿಸಿ ಒಂದು ಪತ್ರಿಕವನ್ನು ಹೊರಡಿಸಿರುವರು. ಮದ್ರಾಸಿನ ಸಭೆಗೆ ಮಹಮ್ಮದೀಯರಲ್ಲದ ನಗರವಾಸಿಗಳ ವೋಟುಗಳನ್ನು ಎಣಿಸಿದರೆ ಸೇಕಡಾ ೫೩.೬ ರಷ್ಟು ಮಂದಿ ವೋಟು ಕೊಟ್ಟರು ಎಂದು ಬಿರೋದವರು ಹೇಳಿದ್ದಾರೆ. ಆರಿಸಲ್ಪಟ್ಟ ೯ ಮಂದಿಯಲ್ಲಿ ಬ್ರಾಹ್ಮಣರು ೩ ಮಂದಿ, ಅದರಲ್ಲಿ ಕಾಕಿನಾಡದಲ್ಲಿ ವೋಟು ಸಂಗ್ರಹವಾಗಲೇ ಇಲ್ಲ. ಈ ಮ್ಯುನಿಸಿಪಾಲಿಟಿಗಳನ್ನು ಏರಹಿತವಡಿಸಿದರೆ ಜಿಲ್ಲೆಗಳಲ್ಲಿ ೩೩.೮ ಮಂದಿ ವೋಟು ಕೊಟ್ಟವರು. ಆರಿಸಲ್ಪಟ್ಟವರೆಲ್ಲರು ಬಹಳ ಮಟ್ಟಿಗೆ ಅಬ್ರಾಹ್ಮಣರು. ಮುಸಲ್ಮಾನ ವೋಟರುಗಳಲ್ಲಿ ೧೯.೭ ಮಂದಿ ಮಾತ್ರ ವೋಟು ಕೊಟ್ಟಿರುವರು. ಈ ಪೈಕಿ ಮಧ್ಯ ಜಿಲ್ಲೆಗಳಲ್ಲಿಯೂ ತಂಜಾವೂರಿನಲ್ಲಿಯೂ ಹೊರತು ಇತರ ಭಾಗಗಳಲ್ಲಿ ನಿಯಮಿತ ಸಂಖ್ಯೆಯಷ್ಟೆ ಉಮೇದ್ವಾರರಿದ್ದ ಕಾರಣ ಚುನಾವಣೆಯ ಕೆಲಸವೇ ಇದ್ದಿಲ್ಲ. ಯುರೋಪಿಯನರು, ಎಂಗ್ಲೋ ಇಂಡಿಯನರೂ ಕ್ರೈಸ್ತರೂ ನೊನ್-ಕೊ-ಒಪರೇಶನ್ ದೀಕ್ಷೆಯನ್ನು ಅನುಸರಿಸದಿದ್ದರೂ ೪೬.೨ರಷ್ಟು ಮಾತ್ರ ವೋಟು ಕೊಟ್ಟರು. ವರ್ಗದಾರರ ಸಂಖ್ಯೆ ಬರೀ ೪೧೭. ಆ ಪೈಕಿ ಸೇಕಡಾ ... ರಷ್ಟು ಮಂದಿ ವೋಟು ಕೊಟ್ಟದ್ದು ವಿಚಿತ್ರವಲ್ಲ. ಅವರಿಗೆ ನೋನ್-ಕೊ-ಒಪರೇಶನ್ನಿನ ಗಂಧವೇ ತಿಳಿಯದು. ಇಂಡಿಯನ್ ಕ್ರೈಸ್ತರು ... ಶಿಕ್ಷಿತ ವರ್ಗದ ... [illegible] ... ಯುರೋಪಿಯನ್ ವರ್ತಕರ ಕೈಯಲ್ಲಿದೆ. ಆದ್ದರಿಂದ ಸೇಕಡಾ ೭೦.೪ರಷ್ಟು ವೋಟು ಮಾಡಿದ್ದು ವಿಶೇಷವಲ್ಲ. ಅದರಲ್ಲಿಯೂ ಈ ವೋಟರರ ಸಂಖ್ಯೆ ೨೩೫ ಮಾತ್ರ. ಯೂನಿವರ್ಸಿಟಿಯ ಗ್ರೇಜುವೇಟರು ೩೬.೧ ರಷ್ಟು ಮಂದಿ ವೋಟು ಕೊಟ್ಟಿದ್ದಾರೆಂದು ಹೇಳುವಾಗ ಇದರಲ್ಲಿ ಸರಕಾರಿ ನವುಕರರೂ ಸರಕಾರದ ಮೇಲೆ ಹೊಂದಿರುವ ವಕೀಲರೂ ಇತರ ನವುಕರರೂ ವಜಾವಮಾಡಲ್ಪಟ್ಟಲ್ಲಿ ಉಳಿಯುವ ಸಂಖ್ಯೆ ಅತ್ಯಲ್ಪವೇ. ಹೀಗನ್ನುವಾಗ ಹಳ್ಳಿಹಳ್ಳಿಗಳಿಂದ ಪ್ರಯಾಣ ಸೌಕರ್ಯದ ಅಭಾವವನ್ನು ಆಲೋಚಿಸಿದರೂ ಬ್ರಾಹ್ಮಣ ಅಬ್ರಾಹ್ಮಣ ವಾದವು ಹಬ್ಬದೆ ಇದ್ದಲ್ಲಿ ವೋಟುಗಳ ಸಂಖ್ಯೆಯನ್ನು ಪರಿಶೀಲಿಸುವಾಗ ನೊನ್-ಕೊ-ಒಪರೇಶನ್ ಚಳವಳವು ಪ್ರಾರಂಭಿಸಿ ಒಂದೆರಡು ತಿಂಗಳ ಅವಧಿಯಲ್ಲಿ ತನ್ನ ಕೊಂಚ ಪ್ರತಾಪವನ್ನು ತೋರಿಸಿದೆ ಎನ್ನದೆ ಇರಲಾರೆವು.

೩. ಕಳೆದ ನವಂಬರ ೧೧ನೆ ತಾರೀಕಿಗೆ ಲಂಡನ್ನಿನಲ್ಲಿ ಲಷ್ಕರಿನಿಂದ ನಿವೃತ್ತರಾದವರ ಸಂಕಲ್ಪ ನಿವೇದನದ ಪ್ರದರ್ಶನವು ಇತ್ತು. ಅದರಲ್ಲಿ ಹಿಂದುಸ್ಥಾನದಲ್ಲಿಯೂ ಯುದ್ಧರಂಗಗಳಲ್ಲಿಯೂ ಈ ಯುದ್ಧಕಾಲದಲ್ಲಿ ಕೆಲಸ ಮಾಡಿದ ಲಷ್ಕರಿನ ನಾಯಕರು ಕೆಲವರು ಭಾಷಣಗಳನ್ನು ಮಾಡಿದ್ದರು. ಮುಖ್ಯವಾಗಿ ಹಿಂದೀ ಮುಸಲ್ಮಾನರಿಗೆ ಯುದ್ಧಕಾಲದಲ್ಲಿ ಮಿ| ಲೊಯಿಡ ಜೋರ್ಜರು ಕೊಟ್ಟ ಭಾಷೆಯನ್ನು ಮುಂತುಬಿಟ್ಟದ್ದು ಸರಿಯಲ್ಲ, ಆ ಭಾಷೆಯನ್ನು ಪಾಲಿಸುವ ನಿಮಿತ್ತ ತುರ್ಕಿಯೊಡನೆ ಒಪ್ಪಂದದ ಶರ್ತಗಳನ್ನು ಬದಲಾಯಿಸುವುದು ನ್ಯಾಯಸಮ್ಮತವಾದೀತೆಂದು, ಈ ಭಾಷಣಗಳ ತಾತ್ಪರ್ಯವಿತ್ತು. ಅದಂತಿರಲಿ, ಈ ನಿವೃತ್ತರ ನೆಶನಲ್ ಯೂನಿಯನ್ನಿನ ಚೆಯರ್ಮನರಾಗಿ ಮೊದಲು ಇದ್ದ ಮಿ| ಜೊನ್ ಬೆಕ್ಕೆಟ್ ಎಂಬವರು ಒಂದು ನೂತನ ಸಂಗತಿಯನ್ನು ಬಯಲಿಗೆ ತಂದರು. ಪರ್ಸಿಯಕ್ಕೆ ಹೊರಡಲು ಅಪ್ಪಣೆ ಹೊಂದಿದ ಹಿಂದೀ ಲಷ್ಕರಿನ ಸಿಪಾಯರು ತಮ್ಮ ಧರ್ಮಬಂಧುಗಳಾದವರ ಮೇಲೆ ಕೈಮಾಡಲು ತಾವು ಹೋಗಲಾರೆವು ಎಂದು ದಂಗೆ ಮಾಡಿದ್ದಕ್ಕೆ ಆ ದಂಗೆಯನ್ನು ಅಡಗಿಸುವ ಪ್ರಯತ್ನವು ಈ ಬೆಕ್ಕೆಟರು ದಾಖಲಾಗಿದ್ದ ಸೈನ್ಯದ ಮೇಲೆ ಬಿತ್ತಂತೆ. ೯ ಸಿಪಾಯರನ್ನು ಕೋವಿಯಿಂದ ಸುಟ್ಟಿದ್ದಲ್ಲದೆ ಹಲವರನ್ನು ಟಾಪು ಶಿಕ್ಷೆಗೆ ಗುರಿಮಾಡಲಾಯಿತು, ಕಡೆಗೆ ತುರ್ಕಿಯ ವಸಾಹತುಗಳಲ್ಲಿ ತಮಗೆ ಕಷ್ಟವಿಲ್ಲವೆಂದು ಭರವಸೆಯನ್ನು ಕೊಟ್ಟ ಮೇಲೆಯೇ ಉಳಿದ ಸಿಪಾಯರು ಶಾಂತರಾದರು ಎಂದು ಈ ಬೆಕ್ಕೆಟರು ಹೇಳಿದರು. ಈ ವಿಧದ ದಂಗೆಯಾಯಿತು ಎಂಬ ವರ್ತಮಾನವು ಆಗ ಬಜಾರಿನಲ್ಲಿ ಬಂದಿದ್ದರೂ ವರ್ತಮಾನಪತ್ರಿಕೆಗಳಲ್ಲಿ ಇಲ್ಲದ್ದರಿಂದ ಆ ಕಾಲದಲ್ಲಿ ಇಲ್ಲಿ ಯಾರೂ ನಂಬಲಿಲ್ಲ. ಅಂತು ಈ ಹಿಂದೀ ಸೈನಿಕರಿಗೂ ತಮ್ಮ ಧರ್ಮಬಂಧುಗಳ ಮೇಲೆ ಕೈಮಾಡುವುದು ಸಮ್ಮತಿಯಿದ್ದಿಲ್ಲವೆಂಬದು ಇದರಿಂದ ಸ್ಪಷ್ಟವಾಗುತ್ತಿದೆ.

೪. ಯುದ್ಧಕಾಲದಲ್ಲಿಯೂ ಅನಂತರವೂ ಆಹಾರ ಸಾಮಗ್ರಿಗಳ ಧಾರಣೆ ಹೆಚ್ಚಿ ಜೀವನವನ್ನು ಮಾಡುವುದು ಕಷ್ಟಸಾಧ್ಯವಾಗಿದೆ ಎಂದು ಸರಕಾರಿ ನವುಕರೆಲ್ಲರೂ ಮೊರೆ ಇಟ್ಟಾಗ ಸಂಬಳದ ದರಗಳನ್ನು ಪರಿಶೀಲಿಸಿದ್ದರಲ್ಲಿ 'ಇಂಡಿಯನ್ ಸರ್ವಿಸು' 'ಪ್ರೊವಿನಶಲ್ ಸರ್ವಿಸು'ಗಳಿಗೆ ಕಳೆದ ಡಿಸೆಂಬರ್ ತಿಂಗಳಿಂದಲೇ ಬಡ್ತಿಯ ದರಗಳು ಜೇಬಿಗೆ ಬಿದ್ದವು. ಈಗ ಒಂದು ವರ್ಷಕಾಲ ದಾಟಿತು. ಸಲರಿ ಕಮ್ಮಿಟಿಯವರ ಸೂಚನೆಗಳು ಹೊರ ಬಿದ್ದು ೭ಯಾ ೮ ತಿಂಗಳು ದಾಟಿತು. ಆದರೂ ನೊನ್‌ಗೆಜೆಟೆಡ್ ಆಫಿಸರರ ಮತ್ತು ಕೆಳ ನವುಕರರ ಸಂಬಳಗಳನ್ನು ಕಾಯಮವಾಗಿ ಏರಿಸುವ ಸಂಕಲ್ಪವು ಇನ್ನೂ ಅವ್ಯಕ್ತ ರೂಪದಲ್ಲಿಯೇ ಇದೆ. ಹಂಗಾಮಿ ದರಗಳೂ ಸಲರಿ ಕಮ್ಮಿಟಿಯ ಸೂಚನೆಗಳೂ ಏನೇನೂ ಸಮಾಧಾನಕರವಲ್ಲವೆಂದು ಅಲ್ಲಲ್ಲಿಯ ನೊನ್‌ಗೆಜೆಟೆಡ್ ಆಫಿಸರರ ಸಂಘಗಳು ಠರಾವುಗಳನ್ನು ಪಾಸ್ ಮಾಡಿ ಸರಕಾರದವರಿಗೆ ಮನವಿಗಳನ್ನು ಅರ್ಪಿಸಿದ್ದಲ್ಲದೆ ಈಚೀಚೆಗೆ ಇಂಡಿಯಾ ಸರಕಾರದವರಿಗೂ ತಂತಿ ಬಿಟ್ಟಂತೆ ಕೇಳಿಸುತ್ತದೆ. ಆದರೂ ಸರಕಾರದ ಕಾರ್ಖಾನೆಯಲ್ಲಿ ಈ ಹೊಸ ದರಗಳನ್ನು ಎರಕ ಹೊಯ್ಯುವ ಕೆಲಸವು ಇನ್ನೂ ಮುಗಿಯಲಿಲ್ಲವೆಂಬದು ತುಂಬಾ ವಿಷಾದಕರ. ಅಷ್ಟರಲ್ಲಿ ಹೊಸ ದರಗಳು ಮುಂದಿನ ಎಪ್ರಿಲ್ ತಿಂಗಳಿಂದ ಅಂದರೆ ಇಂಡಿಯನ್ ಮತ್ತು ಪ್ರೊವಿನಶಲ್ ಸರ್ವಿಸುಗಳಿಗೆ ಕಾಯಂ ಬಡ್ತಿ ಸಿಕ್ಕಿದ ಒಂದು ವರ್ಷ ನಾಲ್ಕು ತಿಂಗಳನಂತರ ಜಾರಿಗೆ ಬರುವವು ಎಂಬಂತೆ ಬಾಜಾರ ವರ್ತಮಾನಗಳು ಪತ್ರಿಕೆಗಳಲ್ಲಿ ಇವೆ. ತಮ್ಮ ಉದರ ನಿರ್ವಾಹಕ್ಕೋಸ್ಕರ ಸರಕಾರಿ ಕೆಳ ನವುಕರರು ಎಷ್ಟು ಸಾಲಮಾಡಿದ್ದಾರೆ ಎಂಬದನ್ನು ನೋಡಲಿಕ್ಕೆ ಅಲ್ಲಲ್ಲಿ ಸ್ಥಾಪಿಸಿದ ಸರಕಾರಿ ನವುಕರರ ಸಹಕಾರಿ ಸಂಘಗಳ ಲೆಕ್ಕಪತ್ರಗಳನ್ನು ಪರಿಶೋಧಿಸಿದರೆ ಗೊತ್ತಾಗುವುದು. ಮೇಲ್ವಿಚಾರದ ನವುಕರರ ಸಂಬಳಗಳನ್ನು ಅವರ ಮನಃಪೂರ್ತಿಯಾಗುವಂತೆ ಹೆಚ್ಚಿಸಿದರೆ ಸಾಲದು. ದಿನವಹಿ ಈ ಸರಕಾರದ ಕೆಲಸದ ಕಾರ್ಯಭಾರವನ್ನು ಹೊತ್ತು ದಣಿಯುತ್ತಿರುವ ಕೂಲಿಯಾಳುಗಳಂತಿರುವ ನವುಕರರ ಹೊಟ್ಟೆಗೋಳನ್ನು ನಿವಾರಿಸದೆ ಇದ್ದರೆ ಅದರಿಂದ ಉಂಟಾಗುವ ಪರಿಣಾಮವು ಸುವ್ಯವಸ್ಥಿತ ಕಾರ್ಯಕ್ರಮಕ್ಕೆ ಎಷ್ಟು ಕಂಟಕಕರವಾಗುವುದು ಎಂದು ಸರಕಾರದವರಿಗೆ ನಾವು ಬೇರೆ ತಿಳಿಸಬೇಕಾದ್ದಿಲ್ಲ. ಇನ್ನಾದರೂ ಕಾಲಯಾಪನೆ ಮಾಡದೆ ಹೊಸ ದರಗಳನ್ನು ಬೇಗನೆ ಪ್ರಕಟಿಸಿ ಬಾಯಾರಿದ ಈ ಬಡ ಪ್ರಾಣಿಗಳ ಅನುತಾಪವನ್ನು ಪರಿಹರಿಸಬೇಕೆಂದು ಅವರ ಪರವಾಗಿ ನಾವು ಕೇಳಿಕೊಳ್ಳುತ್ತೇವೆ.

ಮಂಗಳೂರು.

ಬರುವ ವಾರದಲ್ಲಿ ಜರಗುವ ಜಿಲ್ಲೆಯ ವ್ಯವಸಾಯಿಕ ಮತ್ತು ಕೈಗಾರಿಕೆಯ ಪ್ರದರ್ಶನವು ಕಳೆದ ೧೯೧೭ನೇ ಇಸವಿಯಲ್ಲಿ ನಡೆದ ಮೊದಲನೇ ಪ್ರದರ್ಶನಕ್ಕಿಂತಲೂ ಹೆಚ್ಚು ಪ್ರಯೋಜನಕರವೂ ವಿನೋದಕರವೂ ಆಗುವ ಪ್ರಯತ್ನಗಳು ನಡಿಯುತ್ತಿವೆ. ಗವರ್ನಮೆಂಟ ಕೋಲೇಜಿನ ಕಂಪೌಂಡಿನಲ್ಲಿ ಪ್ರದರ್ಶನ ಮಂಟಪವು ಅಣಿಯಾಗುತ್ತಿದೆ. ಇದು ಕಳೆದ ಪ್ರದರ್ಶನ ಮಂಟಪಕ್ಕಿಂತ ದುಬಾರಿ ವಿಸ್ತೀರ್ಣವಾಗುವುದು. ದೇಖಾವೆಗಳೂ ವಿಶೇಷವಾಗಿರುವುವು. ಪ್ರದರ್ಶನ ಮಂಟಪದ ಹೊರಗಿನ ಆವರಣದಲ್ಲಿ ಈ ಕಾಲದಲ್ಲಿ ಕೂಡುವ ಸಂತೆ (stall) ಗಳ ಬಗ್ಗೆ ಸ್ಥಳ ಸಿದ್ಧವಾಗುತ್ತಿದೆ. ಪ್ರದರ್ಶನವು ತಾರೀಕು ೩೧ನೇ ಸೋಮವಾರ ಬೆಳಗ್ಗೆ ೮ ಘಂಟೆಗೆ ಶುರುವಾಗಿ ನಂತರದ ಎರಡು ದಿವಸಗಳಲ್ಲಿ ಸಹ ನಡಿಯುವುದು.

ಸರಕಾರಿ ಎಗ್ರಿಕಲ್ಚರಲ್ ಮತ್ತು ಇಂಡಸ್ಟ್ರಿಯಲ್ ಇಲಾಖೆಯವರು ಈ ಕಾಲದಲ್ಲಿ ಹೆಚ್ಚಿನ ಚಟುವಟಿಕೆಯನ್ನು ತೋರಿಸಲಿಕ್ಕಿರುವರು. ಸರಕಾರಿ ನೇಯಿಗೆ ಇಲಾಖೆಯವರು ತಮ್ಮಿಂದ ತಯಾರಿಸಿದ ಕೈ ಮಗ್ಗಗಳು ಇವುಗಳನ್ನು ಚಲಾಯಿಸುವ ವಿಧಾನಗಳು ಇವನ್ನು ತೋರಿಸುವರು. ಈ ಮಗ್ಗಗಳನ್ನು ಯೋಗ್ಯ ರೀತಿಯಲ್ಲಿ ನಡಿಸಿದರೆ ಮಿಶ್ಶನ ಮಗ್ಗಗಳಿಗಿಂತಲೂ ದುಬಾರಿ ವಸ್ತ್ರವನ್ನು ನೇಯಬಹುದೆಂಬ ಅನುಭವವನ್ನು ಮಗ್ಗದ ಕೆಲಸದವರಿಗೆ ದೃಷ್ಟಾಂತ ಮೂಲಕ ಮಂದಟ್ಟು ಮಾಡುವರು. ಫಿಶ್ಶರಿಸ್ ಡಿಪಾರ್ಟಮೆಂಟಿನವರು ಸಹ ಅನೇಕ ವಿಚಿತ್ರ ಜಲಜಂತುಗಳು ಮತ್ಸ್ಯಗಳು ಮೊದಲಾದವನ್ನು ಪ್ರೇಕ್ಷಕರ ಬಗ್ಗೆ ತಂದಿಡುವರು. ಎಗ್ರಿಕಲ್ಚರಲ್ ಡಿಪಾರ್ಟಮೆಂಟಿನವರು ಪೈರುಗಳಿಗೆ ಕ್ರಿಮಿಗಳು ತಗಲಿ ನಾಶ ಮಾಡುವುದನ್ನು ಹೇಗೆ ನಿಲ್ಲಿಸಬಹುದು ಎಂದು ಮುಂತಾದ ವ್ಯವಸಾಯಿಕ ಮಾಹಿತಿಯನ್ನು ದೃಷ್ಟಾಂತ ಮೂಲಕ ವಿಶದಪಡಿಸುವರು. ಪ್ರದರ್ಶನವು ಸಕಲರಿಗೂ ಕಾಣಲು ಸಾಧ್ಯವಾಗುವಂತೆ ಪ್ರವೇಶ ದರವು ಕಡಿಮೆ ಮಾಡಿದೆ. ಮೊದಲನೇ ದಿನಕ್ಕೆ ರೂ. ೧ ನಂತರದ ದಿನಗಳಿಗೆ ಆರೆ ಆಣೆಯಂತೆ. ಈ ಪ್ರದರ್ಶನವನ್ನು ಗ್ರಾಮವಾಸಿಗಳೂ ನಗರವಾಸಿಗಳೂ ಕೂಡಿ ಎಲ್ಲರೂ ಪ್ರೋತ್ಸಾಹಿಸಬೇಕಾಗಿದೆ.

ಮದರಾಸ ನ್ಯಾಯವಿಧಾಯಕ ಸಭೆಯ ಮೆಂಬರಿಕೆಗೆ ಪಶ್ಚಿಮ ಕರಾವಳಿಯ ಕ್ರೈಸ್ತನರಿಂದ ಆದ ಚುನಾವಣೆಯು ರದ್ದಾಗಿ ಹೊಸ ಚುನಾವಣೆಯು ಪುನಃ ನಡಿಯುವುದು ಅಗತ್ಯವೆಂದು ಇಲ್ಲಿಯ ಕ್ರೈಸ್ತನರ ಮನವಿಯು ಸರಕಾರಕ್ಕೆ ಹೋಗಿದೆಯಾಗಿ ವದಂತಿ ಇದೆ.

ದಕ್ಷಿಣ ಕನ್ನಡಾ ಡಿಸ್ಟ್ರಿಕ್ಟ ರಿಜಿಸ್ಟ್ರಾರಾದ ಮ| ರಾ| ಮಂಗಳೂರ ನಾರಾಯಣರಾಯರಿಗೆ ಬರುವ ಜನವರಿ ತಾ. ೩ರಿಂದ ಐದು ತಿಂಗಳು ೧೩ ದಿನಗಳ ಪ್ರಿವಿಲೆಜ್ ರಜೆಯು ಸಿಕ್ಕಿದೆ.

ಗತಿಸಿದ ರಾ| ಕೆ. ಪಿ. ಕಿಣಿಯರ ಲೆಂಡ್ ರಿಕೋರ್ಡ್ ತಹಸೀಲದಾರಿಕೆಯ ಹುದ್ದೆಗೆ ಮದರಾಸಿನಲ್ಲಿ ಎಕ್ಟಿಂಗ ಲೆಂಡ್ ರಿಕೋರ್ಡ್ ತಹಸಿಲದಾರರಾಗಿದ್ದ ಮ| ರಾ| ಪಿ. ಮಹಾಬಲೇಶ್ವರರಾಯರು ನೇಮಕ ಪಟ್ಟಿದ್ದಾರೆ.

ಸರಕಾರಿ ಶಾಲೆಗಳನ್ನು ಮತ್ತು ಸರಕಾರ ಸಹಾಯವನ್ನು ಪಡೆಯುವ ಶಾಲೆಗಳನ್ನು ಬಿಟ್ಟಿರುವ ವಿದ್ಯಾರ್ಥಿಗಳ ಬಗ್ಗೆ ಸ್ಥಾಪಿಸುವ ರಾಷ್ಟ್ರೀಯ ಶಾಲೆಯು ಬರುವ ತಿಂಗಳ ತಾರೀಕು ೧೦ರಲ್ಲಿ ತೆರೆಯಲ್ಪಡಲಿಕ್ಕಿದೆಯಂತೆ.

ಬಂಟರ ಯಾನೆ ನಾಡವರ ಸಂಘದ ವಾರ್ಷಿಕ ಪರಿಷತ್ತು ಈ ತಿಂಗಳ ತಾರೀಕು ೩೧ನೇ ಮಧ್ಯಾಹ್ನ ಮೂರು ಘಂಟೆಗೆ ಪುತ್ತೂರಲ್ಲಿ ಕೂಡುವುದು.

ನಾಳೆ ನಾಗಪುರದಲ್ಲಿ ಕೂಡುವ ಇಡೀ ಭರತ ಖಂಡದ ವಿದ್ಯಾರ್ಥಿಗಳ ಪರಿಷತ್ತಿಗೆ ಈ ಜಿಲ್ಲೆಯ ವಿದ್ಯಾರ್ಥಿಗಳ ಪ್ರತಿನಿಧಿಯಾಗಿ ಜೂನಿಯರ್ ಇಂಟರ ಮಿಡಿಯೇಟ್ ಕ್ಲಾಸಿನಲ್ಲಿ ಕಲಿಯುತ್ತಿದ್ದ ಪದ್ಮರಾಜ ಯೆಂಬ ವಿದ್ಯಾರ್ಥಿಯು ಹೋಗಿರುವನು.

ದಕ್ಷಿಣ ಕನ್ನಡಾ ದ್ರಾವಿಡ ಬ್ರಾಹ್ಮಣರ ಪರಿಷದವು ಬರುವ ಸೋಮವಾರ ಪ್ರಾತಃಕಾಲ ೯ ಘಂಟೆಗೆ ಮಂಗಳೂರ ವಿದ್ಯಾರ್ಥಿ ಭವನದಲ್ಲಿ ಕೂಡುವದಾಗುವುದು. ಪರಿಷತ್ತಿನ ಕಾರ್ಯಕ್ರಮದ ಪಟ್ಟಿಯು ಸಭೆಯಲ್ಲಿ ದೊರೆಯುವುದು.

THE

Bombay Steam Nevigation Company, Ltd.

This Company's steamers will now ply regularly as hither to..

ಬೊಂಬಾಯಿ ಸ್ಟೀಮ್ ನೆವಿಗೇಶನ್ ಕಂಪೆನಿ,

ಲಿಮಿಟೆಡ್.

ಈ ಕಂಪೆನಿಯ ಸ್ಟೀಮರುಗಳು ಈಗ ಎಂದಿನಂತೆ ಸರಿಯಾಗಿ ಚಲಾವಣೆಯಾಗುವುವು.

W. W. Fanaken, Agent.

[illegible]

[illegible] ಬಹಿಷ್ಕಾರ ಎಲ್ಲಿ ವರೆಗೆ ಸಾಗಿ ತಲುಪುವದೆಂಬ ವಿಷಯಕ್ಕೆ [illegible] ಈ ಗುರುಕುಲ ಸಂಸ್ಥೆಯು [illegible] ಮುಂತಾದ ಗೃಹಸ್ಥರು [illegible] ಧರ್ಮ [illegible] ಗೃಹಸ್ಥರ ಸಹಾಯ [illegible] ಆದರೆ ಈ ಸಂಸ್ಥೆಯನ್ನು ಸದ್ಯಕ್ಕೆ [illegible] ವ್ಯವಸ್ಥೆ ಮಾಡುವನೆಂದು ಭರವಸೆ ಕೊಟ್ಟಿರು. ಆದರಂತೆ [illegible] ಗೃಹಸ್ಥರು ಒಂದು ಸಭೆಯನ್ನು ಕರೆಯುವ ಆಲೋಚನೆಯಲ್ಲಿದ್ದಾರೆ.

ರಾಷ್ಟ್ರೀಯ ಶಿಕ್ಷಣದ ವಿಚಾರ.

ಪಕ್ಕದ ಶಿಕ್ಷಣಶಾಸ್ತ್ರದಲ್ಲಿ ಬೇರೆ ಬೇರೆ ವಿಚಾರಶೀಲರು ಕಂಡು ಹಿಡಿದ ಕ್ರಮಗಳ ಪರಿಚಯವನ್ನು ಹಿಂದಿನ ಸಂಚಿಕೆಯಲ್ಲಿ ಮಾಡಿದೆವು. [illegible] ಶಿಕ್ಷಣವನ್ನು ಖಂಡಿಸುವಾಗ [illegible] ಈ ಸೆಕೆಂಡರಿ ಶಾಲೆಗಳು [illegible] ಇಂಗ್ಲಿಷ ಭಾಷೆ, ಗಣಿತ, ಕೆಲವು ಶಾಸ್ತ್ರಗಳು ಅತ್ಯಲ್ಪ ಸ್ಥಿತಿಯಲ್ಲಿ [illegible] ವಾಗಿದ್ದು, ಮಕ್ಕಳ ಮಾನಸಿಕ, ಶಾರೀರಿಕ ಅಭಿವೃದ್ಧಿಗಳ ಕಡೆಗೂ ಗುಣ್ಯಸ್ವಭಾವಗಳ ಕಡೆಗೂ ಏನೇನೂ ಲಕ್ಷ್ಯಕೊಡುವುದಿಲ್ಲ, ಶಾಸ್ತ್ರಗಳ ಸರಿಯಾದ ಪರಿಚಯವನ್ನು [illegible] ಆಗತ್ಯವಿರುವ ಸಾಹಿತ್ಯಸಾಮಗ್ರಿಗಳ ಅಭಾವದ ದೆಸೆಯಿಂದ ಈ ಶಾಸ್ತ್ರಗಳ ಜ್ಞಾನವಾದರೂ ಅಸ್ಪಷ್ಟವಾಗಿದೆ. ಬರಿ ಬಾಯಿಪಾಠದ ಶಕ್ತಿಯೇ ಈ ಶಾಲೆಗಳಲ್ಲಿ ಬೆಳೆಯುತ್ತದಲ್ಲದೆ ಇಂದ್ರಿಯಗಳ ಚಟುವಟಿಕೆಯಾಗಲಿ ವಿಚಾರಶಕ್ತಿಯಾಗಲಿ ಬೆಳೆಯುವುದಕ್ಕೆ ಅವಕಾಶವಿಲ್ಲವೆಂದು ಈ [illegible] ಅಭಿಪ್ರಾಯ. [illegible] ಕೈಕೆಲಸ ಇವುಗಳ ಕಡೆಗೆ ಒಂದು ಬಗೆಯ ತಿರಸ್ಕಾರವು ಈ ವಿದ್ಯಾರ್ಥಿಗಳಲ್ಲಿ ಉಂಟಾಗುವದೊಂದು ಮಹತ್ವದ ದೋಷವೆಂದು [illegible] ಹೇಳುತ್ತಾರೆ. ಆದರೆ ಶಿಕ್ಷಣ ಕ್ರಮದಲ್ಲಿ ಸುಧಾರಣೆಯಾಗಬೇಕು ಎನ್ನುವಾಗ ಶಿಕ್ಷಣದ ವಿಷಯಗಳು ಪಾಶ್ಚಾತ್ಯ ಯೂನಿವರ್ಸಿಟಿಗಳಲ್ಲಿ ಪ್ರಚಾರಕ್ಕೆ ಬಂದಿರುವವುಗಳೇ ಇರಬೇಕು [illegible] ಕಲಿಸುವದಕ್ಕೆ ದೇಶಭಾಷೆಯಲ್ಲಿ ಉದ್ಗ್ರಂಥಗಳು ಇಲ್ಲವಾದ್ದರಿಂದ ಇಂಗ್ಲಿಷ ಭಾಷೆಯೇ ಯೂನಿವರ್ಸಿಟಿಯಲ್ಲಿ ಪ್ರಧಾನವಾಗಿರಬೇಕು ಎಂದು ಅವರ ಮತ. ಇಂಗ್ಲಿಷ ಭಾಷೆಯು ಯೂನಿವರ್ಸಿಟಿಗಳಲ್ಲಿ ಪ್ರಧಾನವಾಗಿರಲಿಕ್ಕೆ ಮತ್ತೊಂದು ಪ್ರಭುಗಳ [illegible] ಕಾರಣ. [illegible] ಇವರು ಹಿಂದುಸ್ಥಾನದ ಶಿಕ್ಷಣಪ್ರಚಾರದ ವಿಷಯ [illegible] ಸಲಹೆ ಕೊಡುವಾಗ ವಿಲಾಯತಿ ಯೂನಿವರ್ಸಿಟಿಗಳನ್ನೆ ಆದರ್ಶವಾಗಿಟ್ಟು [illegible] ಇಂಗ್ಲಿಷ ಭಾಷೆಯೇ ಸುಧಾರಿತ ಶಿಕ್ಷಣದ ವಾಹನವೆಂದು ಭಾವಿಸಿದರು. ಇಂಗ್ಲಿಷಭಾಷೆ, ಇಂಗ್ಲಿಷ ವಾಙ್ಮಯ, ಇಂಗ್ಲಿಷ ಕಲಾಕೌಶಲ, ಇಂಗ್ಲಿಷ ರಾಜಕೀಯ ವ್ಯವಸ್ಥೆಯ ಕ್ರಮ ಇವುಗಳ ಜ್ಞಾನದಿಂದಲೇ ಹಿಂದೂ ದೇಶದ ಸುಧಾರಣೆಯಾಗಬೇಕಾದೀತೆ ಎಂದು ಅವರು ದೃಢವಾಗಿ ನಂಬಿದ್ದರು. ಬರೇ ಇಂಗ್ಲಿಷ [illegible] ಗುಮಾಸ್ತೆಯರನ್ನು ಒದಗಿಕೊಳ್ಳುವುದಕ್ಕೆ ಇವರಿಂದ ಸುಲಭ ಉಪಾಯ [illegible] ರಾಜಕೀಯ ರಥದ [illegible] ಎಂಬ ಆಸೆಯೂ ಕೆಲವು [illegible] ಹೇಳುವ ಹಾಗೆ ಅವರಲ್ಲಿ [illegible] ಇಂಗ್ಲಿಷ ವಾಙ್ಮಯದಲ್ಲಿ ಪೂಜ್ಯ ಬುದ್ಧಿಯುಳ್ಳ ಮತ್ತೊಂದು ಪ್ರಭುಗಳಿಗೆ ಇಂಗ್ಲಿಷ ಯೂನಿವರ್ಸಿಟಿಯ ಶಿಕ್ಷಣಕ್ರಮದಿಂದಲೇ ಹಿಂದುಸ್ಥಾನದ ಸುಧಾರಣೆಯಾಗಬೇಕು ಎಂದು [illegible] ಈ ಹಿಂದುಸ್ಥಾನದಲ್ಲಿ ಸಂಸ್ಕೃತ ಪಾರಶಾಲೆಗಳೂ ಮುಸಲ್ಮಾನ [illegible] ಆಗ ಅಲ್ಲಲ್ಲಿ ಇದ್ದವು. ಎಂದು ಅವರು ತಿಳಿದರೂ ಇವುಗಳಲ್ಲಿಯ ಶಿಕ್ಷಣವು ಸಂಸ್ಕೃತಿಯನ್ನು ಪಡೆಯಲಿಲ್ಲವೆಂದೇ ಅವರ ಭಾವನೆಯಿತ್ತು. ಕಡೆಗೆ ಸ್ವಾಭಾವಿಕವಾಗಿ [illegible] ಇವುಗಳ ಪರಿಶ್ರಮಕ್ಕೆ ಸರಕಾರದಲ್ಲಿ ಬೆಲೆ ಇರುವುದಿಲ್ಲ [illegible] ವಿದ್ಯಾಲಯಗಳೂ ಮದ್ರಸಗಳೂ [illegible] ಇಂಗ್ಲಿಷ ಶಿಕ್ಷಣದ ಮುಂದೆ ಬ್ರಿಟಿಷ ರಾಜಕೀಯ [illegible] ಕಲಿಯುವ ಜನರು ಬ್ರಿಟಿಷ ಸಲ್ತನತಿಗೆ [illegible] ಬ್ರಿಟಿಷರಂತೆ ಅಧಿಕಾರ ಸ್ವಾತಂತ್ರ್ಯ [illegible] ಇಂಥ ಕಾಲದಲ್ಲಿ ರಾಜ್ಯವು [illegible] ಬಿಟ್ಟುಕೊಡಬೇಕಾದೀತು ಎಂಬ [illegible] ಇಂಗ್ಲಿಷ ಯೂನಿವರ್ಸಿಟಿಯ ಶಿಕ್ಷಣ ಕ್ರಮವನ್ನು ಹಿಂದೀ ಜನರಿಗೆ ಕೊಡದೆ ಇರುವುದು ಬರೇ ಸ್ವಾರ್ಥದ ನೀತಿಯಾದೀತು ಎಂದು ಮೆಕಾಲೆ [illegible] ಹೇಳಿದ್ದರಿಂದ ಇಂಗ್ಲಿಷ ಶಿಕ್ಷಣ ಕ್ರಮದ ಮೇಲೆ ಅವರಿಗೆ ಇದ್ದ ಗೌರವ [illegible] ಪ್ರೇಮವು ವ್ಯಕ್ತವಾಗುವದಲ್ಲದೆ ಅವರ ಮೇಲೆ ಅನ್ಯಥಾ ಗ್ರಹಿಸಲೂ ಎಡೆ [illegible]

[illegible] ಶಿಕ್ಷಣದ ಪರಿಣಾಮವು ಮೇಲೆ ಹೇಳಿದಂತೆ ಆಯಿತು. ವಾಙ್ಮಯ [illegible] ವಿಲಾಯತಿಯ ಕಟ್ಟುಕಟ್ಟಳೆ, ಧರ್ಮ, ಶಿಲ್ಪ ಇಂಥ ಜನರ ಕಣ್ಣಿಗೆ [illegible] ಆದರ್ಶರೂಪವಾಗಿ ನಿಂತವು. ಹಿಂದೀ ವಾಙ್ಮಯವಾಗಲಿ ಉದ್ಗ್ರಂಥ [illegible] ಬರೆ ಪ್ರಾಚೀನ ಬದನೆಕಾಯಿಯಾದವು. ಏತಾದೃಶವಿಚಾರಸರಣಿಯ ಪಾಶ್ಚಾತ್ಯ [illegible] ಎಲ್ಲಾ ಬಗೆಯಲ್ಲಿಯೂ ಅನುಸರಿಸತೊಡಗಿತು. ರಾಜಾ ರಾಮ ಮೋಹನ ರಾಯ್, ಕೇಶವ ಚಂದ್ರಸೇನ ಮೊದಲಾದವರು ಈ ಬಗೆಯ ಶಿಕ್ಷಣದ [illegible] ಮಕ್ಕಳು. ಇವರ ಪಡತ, [illegible] ಸರ್ವತ್ರದಲ್ಲಿ ಆಘಾತ [illegible] ಜನರಲ್ಲಿ [illegible] ಗೌರವ ಇವುಗಳಿಂದ ಇತರ ಜನರಲ್ಲಿಯೂ ಇದೇ ಬಗೆಯ ವಿಚಾರ [illegible] ಹಬ್ಬಿತು.

ಹೀಗೆ ಇಂಗ್ಲಿಷ ವಾಙ್ಮಯವು ಹಬ್ಬುತ್ತಿದ್ದಂತೆ ಇಂಗ್ಲಿಷ ಭಾಷೆಯಲ್ಲಿ [illegible] ಮ್ಯಾಕ್ಸ ಮುಲ್ಲರ್, ವಿಲ್ಸನ್ ಇವರ ಸಂಸ್ಕೃತ ವಾಙ್ಮಯದ ಭಾಷಾಂತರಗಳು [illegible] ಜನರ ಕೈಗೆ ಸಿಕ್ಕಿದವು. [illegible] ಇಂಗ್ಲಿಷ [illegible] ಜನಗಳ ಕಣ್ಣನ್ನು ತೆರೆದವು. [illegible] ವಾಙ್ಮಯವೆಂದು [illegible] ಹಿಂದೀ ವಾಙ್ಮಯವು [illegible] ಸೀರೆ ವಿಷ್ಕರಗಳು [illegible] ಇರುವುದರಿಂದ [illegible] ಎಂದು ನಾವು ತಿರಸ್ಕರಿಸಿದೆವು ಎಂದು ಆಗ ನಮಗೆ ಭಾಸವಾಯಿತು.

[illegible] ಪ್ರಾಚೀನ [illegible] ವಿಷಯದ [illegible] ಸ್ವಾಭಿಮಾನದ ಸ್ಥಿತಿಯು ಪ್ರಾಪ್ತವಾಯಿತು.

'ಗುರುಕುಲವಾಸ'ವೆಂಬ ಸಂಸ್ಥೆಯು ಈ ಬಗೆಯ ವಿಚಾರದ ಮೂರ್ತಸ್ವರೂಪವಾಗಿದೆ ಎನ್ನಬಹುದು. ಈ ಗುರುಕುಲವಾಸವೆಂದರೆ ಅಖಂಡ ಬ್ರಹ್ಮಚರ್ಯ [illegible] ಶಾಸ್ತ್ರ ಅಧ್ಯಯನ, ದೇಶಚರಿತ್ರೆ ಮುಂತಾದವುಗಳನ್ನು ಒಳಗೊಂಡಿದೆ. ಇದರಲ್ಲಿ [illegible] ಮಕ್ಕಳಿಗೆ ಲೌಕಿಕ [illegible] ಅನುಭವ ಇನ್ನೂ ಆಗಬೇಕಷ್ಟೆ. ಈ [illegible] ಎರಡು ವರ್ಷಗಳಲ್ಲಿ [illegible] ಸ್ನಾತಕರು ಈಗೀಗಲೇ ಹೊರಬಿದ್ದರು. ಇವರುಗಳಿಂದ ದೇಶೋದ್ಧಾರದ ಕೆಲಸವು ಎಷ್ಟರ ಮಟ್ಟಿಗೆ ಆದೀತು ಎಂಬುದು ಸಂದೇಹವಿದೆ ಎಂದು ಲಾಲಾ ಲಜಪತರಾಯರ ಅಭಿಪ್ರಾಯ. ವೈರಾಗ್ಯಮಾರ್ಗ [illegible] ಕಲಿಸುವ ಈ ಸಂಸ್ಥೆಯು ಸರ್ವಜನೋಪಕಾರಿಯು ಆಗಲಾರದು, ಇಂಥ ಸಂಸ್ಥೆಯೊಳಗೆ ಜನ ಸಾಮಾನ್ಯರಿಗೆ ಇದ್ದು ಸಾಧಿಸಲಿಕ್ಕೆ ಕಷ್ಟ ತರವೂ ಇದೆ ಎಂದು ಲಜಪತರಾಯರು ಹೇಳುತ್ತಾರೆ. ಇಷ್ಟೇ ಅಲ್ಲ, [illegible] ಮೂಲಸ್ಥಾಪಕರಾಗಿ ಇದ್ದ ದಯಾನಂದ ಎಂಗ್ಲೋವೇದಿಕ ಕೊಲೇಜಿನ ವಿಷಯವಾಗಿಯೂ ಇವರ ಅಭಿಪ್ರಾಯವು ಅಷ್ಟೊಂದು ಉತ್ತೇಜಕವಲ್ಲ. ಈ ಕೊಲೇಜಿನ ಚಾಲಕರಾದ ಲಾಲಾ ಹಂಸರಾಜ ಮುಂತಾದ ಹಿಂದೀ ಸತ್ಪುತ್ರರ ಕಡೆಗೆ ಲಾಲಾಲಜಪತರಾಯರು ವಿನಯದಿಂದ ಪರಿಗಣಿಸುತ್ತಿರುವರಾದರೂ ಈ ಸಂಸ್ಥೆಯು ಸಾರ್ವಜನಿಕ ಉಪಯೋಗದ್ದಾಗಲಿಲ್ಲ ಮತ್ತು ಸಾಮಾನ್ಯ ಜನರ ಏಳ್ಗೆಗೆ ಉಪಯುಕ್ತವಾಗಿಲ್ಲ ಎಂದು ಅವರು ಬಾಯಿಬಿಟ್ಟು ಹೇಳುತ್ತಾರೆ. ಇದಕ್ಕೆ ಅವರು ಕಾರಣಗಳನ್ನು ಕೊಟ್ಟಿದ್ದಾರೆ. ಇಲ್ಲಿಯ ಶಿಕ್ಷಣವು ಬರೇ ಬ್ರಾಹ್ಮಣ ವೃಂದದ ಮಟ್ಟಿಗೆ ಸುಸಾಧ್ಯವೂ ಪ್ರಯೋಜನಕಾರಿಯಾಗಿಯೂ ಆಗಿದ್ದರೂ ಜನ ಸಾಮಾನ್ಯದ ಸುಧಾರಣೆಗೆ ಯೋಗ್ಯವಾದ್ದಲ್ಲ. ಜನರಲ್ಲಿ ಏಕೀಭಾವ ಮತ್ತು ವ್ಯಕ್ತಿವಿಕಾಸಕ್ಕೆ ಇವುಗಳಲ್ಲಿ ದಾರಿಯಿಲ್ಲ. ಮತ್ತಿವು ಸಂಕುಚಿತವಾಗಿಯೇ ಹೋಗುತ್ತವೆ. ಆದರಿಂದ ರಾಷ್ಟ್ರೀಯತ್ವವು ಎಂದೆಂದಿಗೂ ಬರಲಾರದು ಎಂದು ಲಾಲಾ ಲಜಪತರಾಯರು ತಮ್ಮ ಕಲ್ಪನೆಯಾಗಿರುವ ಈ ಕೊಲೇಜಿನ್ನು ಕುರಿತು ಹೇಳಿದ್ದಾರೆ. ಈ ಎರಡು ಬಗೆಯ ಸಂಸ್ಥೆಗಳಲ್ಲಿ ಹಿಂದೀ ಧರ್ಮಬೋಧೆಯೂ ಸಂಸ್ಕೃತ ವಾಙ್ಮಯವೂ ಪಾಶ್ಚಾತ್ಯ ಉದ್ಗ್ರಂಥಗಳೂ ಕಲಿಸಲ್ಪಡುತ್ತಿದ್ದವು.

ಬಂಗಾಳದಲ್ಲಿ ಬಂಕಿಮ ಚಂದ್ರ ಮುಂತಾದವರು ಇನ್ನೊಂದು ಬಗೆಯ ವಿಚಾರ ಸರಣಿಯನ್ನು ಹಚ್ಚಿ ಕೊಟ್ಟಿದ್ದರು. ಇವರಲ್ಲಿ ರಾಷ್ಟ್ರೀಯತ್ವದ ಮೊಳಕೆಯು ಪ್ರಥಮತಃ ತಲೆದೋರಿತು. ಇವರ ಬಂಗಾಳಿ ಗ್ರಂಥಗಳಲ್ಲಿ ನವ ಸುಧಾರಣೆಯನ್ನು ಕುರಿತು ಒಂದು ಬಗೆಯ ಔದಾಸೀನ್ಯವು ಹಿಂದೀ ಧರ್ಮ ವಾಙ್ಮಯಗಳ ಕಡೆಗೆ ಪೂಜ್ಯಬುದ್ಧಿಯು ವ್ಯಾಪಕವಾಗಿದ್ದವು.

ರಾಜಾರಾಮ ಮೋಹನರಾಯ ಕೇಶವ ಚಂದ್ರಸೇನ ಇವರು ಪಾಶ್ಚಾತ್ಯ ಶಿಕ್ಷಣದಿಂದ ಯಾವ ಸಾಮಾಜಿಕ ಸುಧಾರಣೆಯನ್ನು ಎತ್ತಿ [illegible] ಅವರಲ್ಲಿ ಕಂಡು ಬಂದ ಪುಷ್ಪಭೃಂಗನ್ಯಾಯವನ್ನು ಇವರು ಅಲ್ಲಲ್ಲಿ ಎತ್ತಿ ತೋರಿ ಪ್ರಕಾಶಕ್ಕೆ ತಂದರು. ಅದೇ ಸಮಯದಲ್ಲಿ ಯೋಗಿ ರಾಮಕೃಷ್ಣ ಪರಮಹಂಸರ ಶಿಷ್ಯರಾದ ಸ್ವಾಮಿ ವಿವೇಕಾನಂದರು ಅಮೇರಿಕ ಮುಂತಾದ ಪಾಶ್ಚಿಮಾತ್ಯ ದೇಶಗಳ [illegible] ಹಿಂದೂ ದೇಶದ ಪ್ರಾಚೀನ ನಾಗರಿಕತೆ ಅಪೂರ್ವವೆಂದು ವಿಚಾರ ಪ್ರತಿಪಾದಿಸಿ ಇವುಗಳ ಕಡೆಗೆ ಅನ್ಯ ಜನಾಂಗಗಳಲ್ಲಿಯೂ ಒಂದು ಬಗೆಯ ಪೂಜ್ಯ ಬುದ್ಧಿಯನ್ನು ಹುಟ್ಟಿಸಿದರು. ಹೀಗಾಗಿ [illegible] ಪರಿವರ್ತನೆಯು ವಿಚಾರಶೀಲರಾದವರಲ್ಲಿ ಉಂಟಾಯಿತು. ನಮ್ಮ ಪತ್ರದ [illegible] ನಮ್ಮಲ್ಲಿ ಯಥೇಷ್ಟ [illegible] ಅವುಗಳನ್ನು ಉಪಭೋಗಿಸ [illegible] ಅನ್ಯಧರ್ಮ [illegible] ವಾಙ್ಮಯ ಇಂಥ ಕೀಳು [illegible] ಕಡೆಗೆ ನಾಲಗೆಯೊಡ್ಡುವುದು ಅಧಮ ಪತಿತತನವೆಂಬ ವಿಚಾರವು ಹುಟ್ಟಿತ್ತು.

ಇಂಥಹ ವಾದಿಗಳ ಮಧ್ಯ [illegible] ನಮ್ಮ ಹಿಂದೂ ವಾಙ್ಮಯ [illegible] ಧರ್ಮಬೋಧಕ ಗ್ರಂಥ ಇವುಗಳ [illegible] ಪರಿಚಯವೇ ರಾಷ್ಟ್ರೀಯ ಶಿಕ್ಷಣದ ಬೆನ್ನೆ. ಇವರು ಇಂಗ್ಲೀಷ ಭಾಷೆಯನ್ನು ನಿರ್ವಾಹವಿಲ್ಲದೆ ಒಪ್ಪಿಕೊಳ್ಳುವರಲ್ಲದೆ ಸಾಧ್ಯವಿದ್ದರೆ ಅದಕ್ಕೆ ತೀರಾ ಬಹಿಷ್ಕಾರ ಹಾಕಲು ಸಿದ್ಧವಿದ್ದಾರೆ. ಪಾಶ್ಚಾತ್ಯ ಕಲೆಗಳನ್ನು ದೇಶಭಾಷೆಯಲ್ಲಿ ಪ್ರಕಟಿಸಿ, ಇಡೀ ಹಿಂದುಸ್ಥಾನಕ್ಕೆ ಸಾರ್ವತ್ರಿಕ ಭಾಷೆ ಬೇಕಾಗಿದ್ದರೆ ಅದು ಹಿಂದೀಯಾಗಲಿ. ಅದಕ್ಕೆ ಲಿಪಿಯು [illegible] ಗಳಿಗೆ ದೇವನಾಗರಿಯಾಗಲಿ ಮುಸಲ್ಮಾನರಿಗೆ ಫಾರಸಿಯಾಗಲಿ [illegible] ಪಾಶ್ಚಾತ್ಯಭಾಷೆಯ ಸಂಸರ್ಗವು ನಮಗೆ ಬೇಡವೆಂದು ಹೇಳುವ [illegible] ವಿಚಾರಸರಣಿಯು ಈಗೀಗ ಪ್ರಬಲವಾಗುತ್ತ ಬಂದಿದೆ.

ಇದಕ್ಕೆ ಮೂಲ ಕಾರಣವೇನೆಂದರೆ — ಪಾಶ್ಚಾತ್ಯ ಭಾಷೆಯು ನ ಆಗುವ ಶಿಕ್ಷಣವು ಅಷ್ಟುಸಾಧ್ಯವಾಗದು. ಸಾರ್ವತ್ರಿಕವಾಗುವುದಿಲ್ಲ. ಪಾಶ್ಚಾತ್ಯ ವಾಙ್ಮಯವು ನಮ್ಮ ದೇಶೀಯ ವಾಙ್ಮಯದ ಬೆಳವಣಿಗೆಗೆ ಕಂಟಕಪ್ರಾಯವಾಗಿದೆ. ಅನ್ಯ ಭಾಷೆಯಿಂದ ಆಲೋಚನ ಶಕ್ತಿಯು [illegible] ಆ ಭಾಷೆಯನ್ನಾಡುವ ಜನರ [illegible] ಗುಲಾಮತನಕ್ಕೆ ಹಚ್ಚಿಕೊಳ್ಳುತ್ತಾನೆ. ಇದರಿಂದ ಸ್ವಾವಲಂಬನ ಸ್ವಗೌರವ ಇವೆಲ್ಲವೂ ಕಾಲಕ್ರಮದಿಂದ ನಾಶವಾಗುತ್ತವೆ. ನಮ್ಮ ಸ್ವಂತ ಸಂಸ್ಥೆಗಳ ಕಡೆಗೆ ತಿರಸ್ಕಾರ ಹುಟ್ಟುತ್ತದೆ. ಇವೆಲ್ಲ ತಿರಸ್ಕಾರವು ತುಚ್ಛವೆಂಬುದು ಈ ರಾಷ್ಟ್ರೀಯ ತತ್ವವಾದಿಗಳ ಮೂಲ ಮಂತ್ರವಾಗಿದೆ.

ಕರ್ನಾಟಕ ಸಭಾ, ಮದ್ರಾಸು.

ಕಳೆದ ಡಿಸೆಂಬರು ೧೬ನೇ ತಾರೀಖಿನ ಸಂಜೆ ೪ ಘಂಟೆಗೆ, ವೇಪೇರಿಯೊಳಗೆ [illegible] ಭವನದಲ್ಲಿ, ಮದ್ರಾಸು ಕರ್ನಾಟಕ ಸಭೆಯವರ ಆಶ್ರಯದಲ್ಲಿ [illegible] ಸಂಬಂಧವಾದ ಮೀಟಿಂಗು ನಡೆಯಿತು. [illegible] ನಡೆದ [illegible] ವಿಷಯದ [illegible] ಸಂಗೀತದ [illegible] ನಂತರ [illegible] ಇಂಡಿಯನ್ [illegible]

[illegible]

[illegible] ಕುಮಾರಿ [illegible] ಮಧುರವಾದ ಸ್ವರದಿಂದ ವಂದೇ ಮಾತರಂ ಗೀತವನ್ನು ಹಾಡಿದಳು. ಈ ಮೇಳಾಟದ ಕೂಟವು ಬಹಳ ಪರಿಷ್ಕಾರವಾಗಿ ನಡೆದು ಸಂಜೆ ೬ ಗಂಟೆಗೆ ಮುಗಿಯಿತು.

ಪತ್ರವ್ಯವಹಾರ.

ಮಾರಿಯ ಈಗಿನ ಅವಸ್ಥೆ ಏನು?

ಅಯ್ಯಾ ಪತ್ರಿಕಾಕರ್ತರೇ,

ಮಾರಿಯ ಅವಸ್ಥೆ ಏನು ಎಂಬುದರ ವಿಷಯವಾಗಿ ಹಿಂದೊಮ್ಮೆ ತಮ್ಮ ಅಮೂಲ್ಯ ಪತ್ರಿಕೆಯಲ್ಲಿ ವಾಚಕರು ಓದಿರಬಹುದು. [illegible] ಆಗಿದೆ ಎಂಬುವದನ್ನು ವಾಚಕರ ತಿಳುವಳಿಕೆಗೆ ತರಬೇಕೆಂಬ ಉದ್ದೇಶದಿಂದ ಬರೆಯಬೇಕೆಂದಿರುವ ನನ್ನ ಒಂದೆರಡು ಮಾತುಗಳಿಗೆ ಪತ್ರಿಕೆಯಲ್ಲಿ ಎಡೆ ಕೊಟ್ಟಲ್ಲಿ ತುಂಬಾ ಉಪಕಾರ.

ಗೌಡ ಸಾರಸ್ವತರ-ಜಾತಿ ಉಳಿದು ಮಿಕ್ಕ ಎಲ್ಲಾ ಜಾತಿಯವರ ಹಕ್ಕಿನ ಮಾರಿಗುಡಿ ಹೊಸ ಸ್ಕೀಮು ಪ್ರಕಾರ [illegible] ಗುಡಿಯ ಮೊದಲಿನ ಆಡಳಿತದಾರರಾಗಿದ್ದ ಡಾ॥ ಸಂಕಪ್ಪ ಸಟ್ಟೂರ ಆಡಳಿತೆ ರದ್ದಾಯಿತು. ಮಾರಿಗುಡಿಯು ಸೀಮೆಯವರ ಹಕ್ಕಿನದು ಎಂತ ಆಯಿತು. ಸೀಮೆಯವರು ಹೊಸತಾಗಿ ಸ್ಕೀಮು ತಯಾರಿಸುವ ತನಕ ಸರಕಾರದಿಂದ ರಿಸೀವರರನ್ನು ಮೊಕರ್ರರು ಮಾಡಲಾಯಿತು. ಮೊಗವೀರರ ಶ್ರೀ ಜನಾರ್ದನನು ಮುಟ್ಟಿ ಕಾದದೆಂತಾಯಿತು. ಇದರಿಂದ ಜನಾರ್ದನನಿಗೆ ಬಂದಂತಾಯಿತು. ರಿಸೀವರರಾಗಿ ಮಾ॥ ರಾ॥ ಮಂಗಳೂರು ವಕೀಲರು ಕೇಶವ ಭಟ್ಟ ಭಿಡೆಯವರು ಬಂದರೆಂತಾಯಿತು. ಅಷ್ಟರಲ್ಲಿ ಮಾರಿಯ ಪಾತ್ರಿಯೊಬ್ಬನು ಬಿಟ್ಟುಹೋದನು. ಪೂಜೆಯ ಭಟ್ಟನು ಕಾಣೆಯಾದನು. ಮಡಿಕಟ್ಟೆ ಚೆಲುವೆಗೆ ಹೇಳುತ್ತಿದ್ದ, ಅದಕ್ಕೆ ಪ್ರೀತಿಗೆ ಪಾತ್ರರಾಗಿದ್ದ ರಾ॥ ಕುಪ್ಪಣ್ಣ ಭಾಗವತರೆಂದರು. ಕಡೆಗೆ ಮುಖ್ಯ ಕೆಲಸಗಾರನಾದ ಅನಾದಿಯಿಂದಲೂ ಇದ್ದ ಹವಾಲುದಾರನು ಮನೆಗೆ ಹೋದನು. ಅಂತು ಇಂತೂ ಎಲ್ಲವೂ ಹೊಸತು. ಮಾರಿಯೇ ಹೊಸತಾಯಿತು ಎಂದು ಹೇಳಬಹುದು. ಆದಾಗ್ಯೂ ರಿಸೀವರು ಎದೆಗುಂದದೆ ಧೀರತನದಿಂದ ಮಾರಿಯ [illegible] ಕೆಲಸಗಳನ್ನು ಬೇರೆ ನಡೆಸಿದ್ದೊಂದು ಸಂತೋಷವೇ. ಹೀಗಿರುವಾಗ ಪಾದಿಯವರ ಹೇಳಿಕೆ ಮೇರೆಗೆ ಅಲ್ಲದೆ ಪೋಲೀಸ ಮೂಲಕ ಆದಿಸಿದ ನ್ಯಾಯದ [illegible] ಮುಂಬರ ಬಂದಿದ್ದಾರೆಯೂ ಇದ್ದಂತಿದ್ದ ಮುಂದಾಯಿತು. ಮುಂಬರ [illegible] ಹಾಗೂ ಹತ್ತು ನಮ್ಮವರಿಗೆ ಬೇಕಾದವರೋ ಎಂಬುವ ವಾಚಕರೇ! [illegible] ಅಲ್ಲಿಯ, ತಮ್ಮ ಜಾತಿಯವರ ಕೈಕೆ ಒಬ್ಬರಿದ್ದರೂ [illegible] ಮ ಬರಲಿಕ್ಕೆ ಆರಿಸಲಿಲ್ಲವೆಂತು ವರ್ತಮಾನದಲ್ಲಿ ಕೂಡಿ ಹೊಸ ಮಾರಿಗುಡಿಗೆ ಯಾರೂ ಹೋಗ ಕೂಡದೆಂದು ಕಟ್ಟು ಮಾಡಿಕೊಂಡಿದ್ದಾರೆ. ಇದೊಂದು ನ್ಯಾಯವೆ? ಇದನ್ನು ಕಂಡು ಬ್ರಾಹ್ಮಣರ ಮನೆಗಳು ಹಚ್ಚಿರುತ್ತಾ ವಾದ ಯಾರ ಪೈಕಿ ಒಬ್ಬೆ ಬ್ರಾಹ್ಮಣರನ್ನು ಮಾತ್ರ ಆರಿಸಿದ್ದು [illegible] ಅಲ್ಲವೆಂದು ಬ್ರಾಹ್ಮಣರಲ್ಲಾ ಎಷ್ಟಾದರೂ ಯಾರೂ ಊರವರು ಮಾರಿಯ ಯಾವ ಕೆಲಸಕ್ಕಾಗಲೀ ಹೊ [illegible] ಕಟ್ಟು ಮಾಡಿಕೊಂಡಿದ್ದಾರೆ. ಹಾಗೆ ಈಗ ಮಾರಿಗುಡಿ ಯಾವ ಜಾತಿಯವರದು ಆಯಿತು. ಸ್ವಾಮಿ ಸ್ವಲ್ಪ ಹೀ ಉಪ್ಪಿ [illegible] ಸ್ಥಿತಿಗೆ ಮಾರಿಗುಡಿ ಬರುವ ಈ ಸಂದರ್ಭ ಸ್ವೀಮಿನ ಬಿಡುವಿನ ವಶ ಬಿಟ್ಟು [illegible] ಇನ್ನು ನೋಡಬೇಕು. ಹ್ಯಾಗಿದ್ದಾಗ್ಯೂ ಮಾರಿಯ ಸ್ಕೀಮು ಇದ್ದಿನ್ನೂ ಆದಮೆಯಾಗಿ [illegible] ಮುಂದಿನವರೇ, ಭಕ್ತರೆಲ್ಲ ಮಾರಿಯ ಪಾಲಿಗೆ ಇಷ್ಟ ಭಕ್ತಿ ಹಚ್ಚಾಗುವಂತೆ ನೋಡಿದ್ದ ಇನ್ನೊಂದು ಮಾರಿಗುಡಿ ಆದಂತೆ ವಿಶ್ವಾಮಿತ್ರನಿಂದಿದ್ದರೆ [illegible] ಒಂದು ಆಗಲಿಯಲ್ಲವೇ? ಶ್ರೀ ಜನಾರ್ದನನಿಗೆ ಕ್ಷಾದಿಕೆ ಬಂದಂತೆ ಆಗಾಗ ಬ ಕೇ ಎಂದು ಜನರು ಹೇಳುವಂತೆ ನೋಡಿರಿ. ಈ ಮಾರಿಗುಡಿಯ ಅವಸ್ಥೆ ಹೀಗಿರುವಾಗ ಹಳೇ ಪದ್ಧತಿಯಿಂದ ಅವನ್ನೆ ಹೇಗಿದೆ ಎಂದು ತಿಳಿಸಲಿಕ್ಕಿಲ್ಲವೇ? ಇದಾದರೂ ಗೌಡ ಸಾರಸ್ವತರ ಜಾತಿಗೆ ಸಂಬಂಧ ಪಟ್ಟ ಮಾರಿಗುಡಿ [illegible] ಜಾತಿಗೆ ಹಗೆ [illegible] ಆಡಳಿತದಾರರು ಯಾರಂತ ಇನ್ನೂ ಗೊತ್ತಿಲ್ಲ. ಮೂರೂ ಕಟ್ಟ ಎಲ್ಲಿದೆ ಹಣವೆಲ್ಲಿದೆ ಎಲ್ಲಿದೆ ಎಂದು ಕೇಳುವವರಿಲ್ಲ. ಕೊನೆಗೆ ಕಲಿಯುವವರಿಲ್ಲ. ಇದೇನು ಗೌಡ ಸಾರಸ್ವತ ಬ್ರಾಹ್ಮಣರೆ, ನಮ್ಮಲ್ಲಿ ಕೂಡಾ ಕೆಲವರು ರಿಸೀವರರನ್ನು ಕೇಳಿದರೆ ಸರಕಾರಕ್ಕೆ ಅರ್ಜಿ ಮಾಡಿ [illegible] ಹೋಯಿತು. ನಮ್ಮವರು ಕ್ರಿಯೆ ಅದುವರೆಗೂ ಬಿಟ್ಟು ಸರಕಾರವನ್ನು ಮಧ್ಯಸ್ಥರಾಗಿ ಕರೆಯುವವರು ಇನ್ನೂ ಹುಟ್ಟಲಿಲ್ಲ. [illegible] ಹೀಗಿರುವುದು ತಪ್ಪು [illegible] ನಮ್ಮ ಜಾತಿಯವರೆ [illegible] ನಮ್ಮ [illegible]

ನಾನೊಬ್ಬ ಸತ್ಯಾರ್ಥಿ.

ಮಂಗಳೂರು ಸ್ತ್ರೀ [illegible] ಗಳ್ಸ್ ಸ್ಕೂಲಿಗೆ ದ್ರವ್ಯಸಹಾಯ ಮಾಡಿದವರ ಹೆಸರುಗಳು.

[illegible] ನವೆಂಬರ ೩೦ನೇ ತಾರೀಖಿನ ವರೆಗೆ ವಸೂಲಾದ ಮೊಬಲಗು.

೧. ಮ। ರಾ। ರಾ। [illegible], ಮಂಗಳೂರು.	ರೂ.	೫೦
೨. [illegible]	,,	೫೦
೩. [illegible]	,,	೫೦
೪. [illegible]	,,	೨೫
೫. ಮ। ರಾ। ರಾ। [illegible]	,,	೨೦
[illegible], ಮಂಗಳೂರು.	,,	೧೫
[illegible] ಮುಂಬಯಿ ನಾರ್ಶಿಕ ಚಂದಾ ರೂ		೧೨
೮. [illegible] ೧೦ ರೂಪಾಯಿಗಳಿಗೆ ಕಡಿಮೆ ಮೊಬಲಗಿನ ವಂತಿಗೆ	,,	೨೨

[illegible] ಮೊಬಲಗು ವಾರ್ಷಿಕ ವರದಿಯು ಪ್ರಕಟವಾಗುವ [illegible] ಅವರ ಕೃತಜ್ಞತೆಯಿಂದ ವರದಿಯಲ್ಲಿ ಬಿಟ್ಟುಹೋಯಿತು.

೯. ಮಿಸೆಸ್ ರಾಧಾಬಾಯಿ ಗೋಪಾಳರಾವ್ ಉಡುಪುಕರ್, ಮುಂಬಯಿ	೫	೦
೧೦. ಮಿಸೆಸ್, [illegible] ಮಂಗೇಶರಾವ್, ಭಟ್ಕಳ, (ಪ್ರಥಮ ಕಂತು).	೧	೪
೧೧. ಸುಭೇದಾರ [illegible] ಎ. ಚಂದಾವರಕರ್ ಅಪ್ಪರ್ ಮೆಸೊಪೊಟೇಮಿಯಾ	ರೂ.	೫
೧೨. ಮ। ರಾ। ರಾ। ಬಳಗಾರ ಲಕ್ಷ್ಮಣರಾವ್	,,	೪೦
೧೩. ,, ಶ್ರೀನಿವಾಸ ಆರ್. ಹಟ್ಟಂಗಡಿ (ವಾರ್ಷಿಕ ಚಂದಾ)		೧೦
೧೪. ,, ಆಳಿಕೆ ನರಸಿಂಗರಾವ್ ಬಂಟ್ವಾಳ	,,	೨
೧೫. ,, ಕೊಂಬ್ರಬೈಲ್ ಶ್ರೀಪಾದರಾವ್ ಬಂಟ್ವಾಳ	,,	೨
೧೬. ಮಿಸೆಸ್ ಆಗ್ನೆಸ್ ಡಿ ಸೋಜ, ಮಂಗಳೂರು	,,	೩
೧೭. ಮ। ರಾ। ರಾ। ಕೆ. ಸುಂದರರಾವ್, ಕಲ್ಕತ್ತ.	,,	೨

ಯಸ್ ಲಲಿತಾಬಾಯಿ,
ಕಾರ್ಯದರ್ಶಿ.

ಬಡಿಲ ದೂಮಪ್ಪೈಗಳ ಸ್ಮಾರಕ ಫಂಡು.

ಕೀರ್ತಿಶೇಷರಾದ ಮ। ರಾ। ರಾ। ಬಡಿಲ ದೊಮಪ್ಪೈಗಳವರ ಸ್ಮರಣಾರ್ಥವಾಗಿ ಏರ್ಪಡಿಸಿದ ಫಂಡಿಗೆ ವಾಗ್ದಾನವಾದ ಜುಮ್ಲಾ ಮೊಬಲಗು ರೂ. ೨೫೯—೦—೦ ಪೈಕಿ ಈ ಕೆಳಗೆ ಬರೆದಿರುವ ಮಾನ್ಯಗೃಹಸ್ಥರು ಮಾತ್ರ ಕೆಳಗೆ ಕಾಣಿಸಿದ ಐವಜುಗಳನ್ನು ವಸೂಲು ಕೊಟ್ಟಿರುತ್ತಾರೆ. ವಾಗ್ದಾನ ಮಾಡಿರುವವರು ಮತ್ತು ಫಂಡಿಗೆ ಸಹಾಯ ಮಾಡಬೇಕಾಗಿ ಅಪೇಕ್ಷಿಸುವವರು ಕೂಡಾ ವಂತಿಗೆ ಮೊಬಲಗುಗಳನ್ನು ಆದಷ್ಟು ಬೇಗನೆ ಕಳುಹಿಸಿ ಕೊಡಬೇಕಾಗಿದೆ.

ಮ। ರಾ। ರಾ। ಆ. ರಾಮಯ್ಯ ಪುಂಜರು.	ರೂ.	೨೦—೦—೦.
,, ಆ. ಬಾಲಕೃಷ್ಣ ಶೆಟ್ಟಿ,	,,	೨೦—೦—೦.
,, ಮು. ದೇವಪ್ಪ ಶೇಣವರು	,,	೧೫—೦—೦.
,, ಕೆ. ಟಿ. ಆಳ್ವರು	,,	೧೫—೦—೦.
,, ಕೆ. ಕೃಷ್ಣ ಸೂಡಾಯರು	,,	೧೨—೦—೦.
,, ಕಲ್ಯಂಗಳ ಮುತ್ತಯ್ಯ ಶೆಟ್ಟಿ,	,,	೧೦—೦—೦.
,, ಪೇಲರ ನಾಂಞು ಶೆಟ್ಟಿ	,,	೧೦—೦—೦.
,, ಆ. ತಿಮ್ಮಪ್ಪ ಪುಂಜರು ಮತ್ತು ತಮ್ಮ,	,,	೧೦—೦—೦.
,, ಆ. ದೇವಪ್ಪ ಪುಂಜರು	,,	೫—೦—೦.
ಜುಮ್ಲಾ ರೂಪಾಯಿ.		೧೧೭—೦—೦.

ಪಿ. ಆರ್. ರಂಗನಾಥ ಪುಂಜ ಮಂಗಳೂರು.

ಸುಬ್ರಹ್ಮಣ್ಯ ಸಭಾ, ಮಂಗಳೂರು.

ಈ ವರ್ಷದ ಮಹಾ ಸಭೆಯು ಇದೇ ದಶಂಬರ ತಿಂಗಳ ತಾ. ೩೧ನೇ ಶುಕ್ರವಾರ ಮತ್ತು ೧—೧—೧೯೨೧ನೇ ಶನಿವಾರ ಈ ಎರಡು ದಿವಸಗಳಲ್ಲಿ ಮ। ರಾ। ರಾ। ಕೆಡಬ ಕುಂಬಾಟೆ ಕೃಷ್ಣಯ್ಯ ಶ್ಯಾನಭಾಗರ ಮನೆಯಲ್ಲಿ ನೆರವೇರುವುದು. ಆದ ಪ್ರಯುಕ್ತ ಸ್ವಜಾತಿ ಗೃಹಸ್ಥರೆಲ್ಲರೂ ಈ ಮಹಾ ಸಭೆಗೆ ದಯವಿಟ್ಟು ದಿಕ್ಕೈಸಿ ಸದರಿ ಸಭೆಯ ಮುಂದಿನ ಕ್ಷೇಮಚಿಂತನ ಕಾರ್ಯಭಾರದಲ್ಲಿ ಪ್ರೋತ್ಸಾಹಿಸುವವರಾಗಿ ಭೂಷೆ ನಂಬಿರುವ [illegible] ತಮ್ಮ ಕೃಪಾಭಿಲಾಷಿಗಳು,

ಎನ್. ದೇವರಾವ್,
ಕಾರ್ಯದರ್ಶಿ.
ಕೆಡಬ ಕುಂಬಾಟೆ ಕೃಷ್ಣಯ್ಯ.

ಬಂಟರ ಯಾನೆ ನಾಡವರ ಮಹಾಸಭೆ, ಪುತ್ತೂರು.

ಲಾಟ್ರಿ ಟಿಕೇಟುಗಳು ಪೂರಾ ಮಾರಾಟವಾಗದೆ ಇರುವುದರಿಂದ ಸಭೆಯಲ್ಲಿ ಲಾಟ್ರಿ ತೆಗೆಯುವುದು ಸಾಧ್ಯತೋರುವುದಿಲ್ಲ. ಆದಕಾರಣ ವಿಕ್ರಯವಾಗದೆ ಉಳಿದಿರುವ ಲಾಟ್ರಿ ಪುಸ್ತಕಗಳನ್ನು ಈಗವಾಪಸು ಕಳುಹಿಸುವುದು ಆಗತ್ಯವಿಲ್ಲ.

ಮಂಗಳೂರು,
23-12-20.

A. B. SHETTY.
ಲಾಟ್ರಿ ಕಮಿಟಿ ಕಾರ್ಯದರ್ಶಿ.

ನೋಟೀಸು.

ಈ ಮೂಲಕ ಸರ್ವ ಜನರಿಗೆ ತಿಳಿಯಪಡಿಸುವದೇನಂದರೆ:—

ನಾನು ಮತ್ತು ನನ್ನ ದೊಡ್ಡತಾಯಿ ಬಿಮ್ಮುಹೆಂಗಸಿನ ಮಗ ಅಪ್ಪುಯಾನೆ ಶಿವಯ ಹೆಗ್ಗಡೆ ಕೂಡಾ 1906ನೇ ಇಸವಿಯಲ್ಲಿ ಮಾಡಿಕೊಂಡ ಕರಾರು ಪ್ರಕಾರ ಸದರಿ ಅಪ್ಪುಹೆಗ್ಗಡೆರು ಮಾಡುವ ಸಾಲವು ಕುಟುಂಬದ ಸ್ಥಿರಚರ ಸೊತ್ತುಗಳ ಮೇಲೆ ಬಾಧಿಸಕೂಡದ್ದಾಗಿರುತ್ತದೆ. ಇತ್ತಲಾಗೆ ಸದರಿ ಅಪ್ಪುಹೆಗ್ಗಡೆಯರಿಗೆ ಸ್ಥಿರಬುದ್ಧಿ ಸರಿಯಾಗಿರುವದಿಲ್ಲ. ಆದ್ದರಿಂದ ಅವರ ಮೇಲೆ ಆದ ಡಿಕ್ರಿ ವಗೈರೆಗೆ ನಮ್ಮ ಕುಟುಂಬದ ಸ್ಥಿರಚರ ಸೊತ್ತುಗಳು ಹೊಣೆಯಾಗ ಕೂಡದು.

ಮಂಗಳೂರು,
ತಾ. 20-12-20

ಶಾಂತಿರಾಜ ಹೆಗ್ಡೆ.

॥ ಶ್ರೀ ಭಗವತ್ಪ್ರೇರಣಾತ್ ಹಿ [illegible] ॥

ಶ್ರೀಮನ್ಮಧ್ವ ಮತಾನುಯಾಯಿಗಳಾದ ವೈಷ್ಣವ ಬ್ರಾಹ್ಮಣರುಗಳಿಗೆ ಮಾತ್ರ! ಕೇವಲ ೧ ತಿಂಗಳು ಅವಧಿ! ಆ ಮೇಲೆ ಸಿಕ್ಕಲಾರದು! [illegible] ಸಂಗ್ರಾಹ್ಯವಾದ ಸುಂದರವಾದ ಕನ್ನಡ ವೇದಾಂತ ಪುಸ್ತಕವು!

ಇನಾಮ್! ಇನಾಮ್!! ಇನಾಮ್!!!

ಬುಕ್ ಪೋಸ್ಟಿನ ಖರ್ಚಿಗಾಗಿ ಮಾತ್ರ ೧ ಆಣೆಯ-ಸ್ಟಾಂಪನ್ನು ಕೂಡಲೆ ಕಳುಹಿಸಬೇಕು! ತಮ್ಮ ತಮ್ಮ ಹೆಸರು ವಿಳಾಸಗಳನ್ನು ಸ್ಪಷ್ಟವಾಗಿಯೇ ಬರೆಯಿರಿ! ನಮ್ಮ ಈ ನಿಶ್ಚಯವನ್ನು ಸ್ನೇಹಿತರಿಗೂ ತಿಳುಹಿಸಿರಿ.

ಕುಮಠಾ-ನಾರಾಯಣಾಚಾರ್ಯ,
ಶ್ರೀ ವೆಂಕಟರಮಣ ದೇವಸ್ಥಾನ, ಮಂಗಳೂರು.

ತ್ವರೆ ಗೈಯಿರಿ! ತ್ವರೆ ಗೈಯಿರಿ! ತ್ವರೆ ಗೈಯಿರಿ!

ಪುಸ್ತಕ ಪ್ರತಿ 1ಕ್ಕೆ 0—1—0. ಡಜನಿಗೆ 0—10—0.

ಮೂಲಯುಕ್ತ.

ಕನ್ನಡ:—ಭಜಗೋವಿಂದ.

ತುಳು:—ಭಜಗೋವಿಂದ.

ವಿಳಾಸ:—ಭಜಗೋವಿಂದ,
ಪೊಳಲಿ, ದ. ಕ.

ಅಥವಾ

ಶಾರದಾ ಪ್ರೆಸ್ ಮತ್ತು ಕೆ. ಯಂ. ದಾಸಪ್ರಭು,
ಮಂಗಳೂರು.

ಕೊಣಾಡ, ಕಂಚಿ ಸೀರೆಗಳು.

ಈ [illegible] ತಯಾರಿಸಿದೆ. [illegible] ಆಗಿಯೂ, ನಯವಾಗಿಯೂ ಇದೆ. [illegible] ವಾದ ರೇಶ್ಮೆಯ ಸೆರಗೂ, ಅಂದವಾದ [illegible] ಇರುವುದು. ಬಣ್ಣ ಹೋಗದು, ೧೭ ಮೊಳ [illegible] ಇದೆ. ದೊಡ್ಡವನ್ನು ಈಗಿನ ಕಾಲದಲ್ಲಿ ಕ್ರಯಕ್ಕೆ ಯಾವ ಊರಿನಲ್ಲಿಯೂ [illegible] ಮಾದರಿಗಾಗಿ ಕೆಲವನ್ನು ತಯಾರಿಸಿರುತ್ತ[illegible] ಬೇಕಾದವರು ತರಿಸಿ ಪರೀಕ್ಷಿಸಿರಿ.

ಕ್ರಯ ನಂ. ೧—ರೂ. 6—8—0
,, ೨—,, 7—8—0

ಕಂಟಳಿ ಟೋಪಿ.

ಈ ಟೋಪಿಗಳನ್ನು ಹಸನು ಉಲನ್ ದಾರದಿಂದ ಹೆಣಿದಿದೆ. ಇವು ಹಿಮು, ಮಳೆಗಳಲ್ಲಿ ಉಪಯೋಗಿಸುವದರಿಂದ ಶರೀರಕ್ಕೆ ತಾಳವನ್ನು ಉಂಟುಮಾಡಿ ಸೀತ, ಮುಂತಾದ ವ್ಯಾಧಿಗಳು ಬರುವದಿಲ್ಲ. ಈ ಟೋಪಿಗಳನ್ನು ಸಾಧಾರಣ ಟೋಪಿಗಳ ಹಾಗೆಯೂ, ಕಿವಿಯ ವರೆವಿಗೂ, ಕತ್ತಿನ ವರೆವಿಗೂ ಯಾವ ರೀತಿಯಲ್ಲಾದರೂ ಉಪಯೋಗಿಸಬಹುದು. ಇದಕ್ಕೆ ತಲೆಯ ಅಳತೆ ಬೇಕಿಲ್ಲ. ಪ್ರತಿಯೊಬ್ಬರ ತಲೆಗೂ ಸರಿಯಾಗಿರುತ್ತೆ. ಇದು ಪ್ರತಿ ಕುಟುಂಬದಲ್ಲಿ ಒಂದು ಇದ್ದರೆ ಎ[illegible] ರಿಗೂ ಆಗುವುದು. ಕ್ರಯ ನಂಬ್ರ ೧ಕ್ಕೆ ರೂ. 1—8—0.

ಪ್ಯಾರಿಸ್ ಶಾಲ್.

ಈ ಶಾಲುಗಳು ಈಗ ಹಾಸೆ ತಯಾರಿಸಿದ್ದು ಚಳಿ, ಮಳೆ ಕಾಲದ ಹೊದಿಯಲಿಕ್ಕೂ, ಪ್ರಯಾಣಿಕರಿಗೂ, ಇತರರಿಗೂ ಬಹು ಅನುಕೂಲವಾದದ್ದು. ರೇಶ್ಮೆಯ ಗಟ್ಟಿ ಬಣ್ಣ. ೩ ಮೊಳ ಉದ್ದ, ೩॥ ಮೊಳ ಅಗಲವಿರುವುದು. ಇದರ ಬಣ್ಣವು ಎಂದಿಗೂ ಹೋಗಲಾರದು.

ಕ್ರಯ ಶಾಲು ೧ಕ್ಕೆ ರೂ. 5—0—0.

ವಿಳಾಸ:— ಎಸ್. ಆರ್. ಕೃಷ್ಣ ಅಂಡ್ ಕೊ.,
89 ನಾರಾಯಣ ಮೊದಲಿ ಬೀದಿ,
ಮದರಾಸು

ಸೌಂದರ್ಯದ ಉತ್ತಮ ಮಿತ್ರ

ಲೋಕದಲ್ಲಿ ಅತಿ ಸೌಂದರ್ಯಕ್ಕೆ ಯಶಸ್ವಿಪಡೆದಂತಾ ಸ್ತ್ರೀಯರು ಉಪಯೋಗಿಸುವದು

"ಹಾಜಿಲೀನ್ ಸ್ನೋ"
(ಟ್ರೇಡ್ ಮಾರ್ಕ್)

"HAZELINE"
(Trade Mark)
SNOW"

[illegible]
"ಹೇಜಿಲೀನ್ ಸ್ನೋ"
[illegible]

[illegible]

ಬರ್ರೋಸ್ ವೆಲ್‌ಕಂ ಅಂಡ್ ಕೋ.
ಲಂಡನ್ ಅಂಡ್ ಬೊಂಬಾಯಿ.

Burroughs Wellcome & Co.
London and Bombay
Can. 2, All Rights Reserved

ಎಲ್ಲಾ ಬಗೆಯ ಟೈಪ್‌ರ್ರೈಟಿಂಗ್ ಕೆಲಸ
ಶಾರದಾ ಪ್ರೆಸ್ಸಿನಲ್ಲಿ
ಸುಲಭವಾದ ದರದಲ್ಲಿ ಮಾಡಲ್ಪಡುತ್ತದೆ.

Jobwork in Typewriting
WILL BE UNDERTAKEN
AT THE
Sharada Press, Mangalore.

[illegible]

ಹೊಸ ಸಾಟಿಕೆ!

[illegible] ವರ್ಷಮುನ್ನಗಳಿಂದ [illegible] ಸಿದ್ಧವಾಗುವುದು

ಕ್ರಯ [illegible] 0—6—0

[illegible] — D. Srinivasa Pothi,

Photographer,

Archæological Office,

TRIVANDERUM.

ಅಥವಾ

[illegible], ಮಂಗಳೂರು.

ಇವರಲ್ಲಿಯೂ ದೊರೆಯುವುದು.

[illegible] ಸಾಮಾಜಿಕ [illegible]

[illegible] ಮನೆ [illegible]

[illegible]

[illegible] ಮಾರ್ಗದಲ್ಲಿ [illegible] ಮತ್ತು ನೇರವಾದ ಹರಪ್ಪರ ಮಧ್ಯೆ ಮಳೆಯು ಎಂಭತ್ತು ಇಂಚಾಗಿರುವುದು.

ಈ [illegible] ಮುನ್ನೂರು ಎಕ್ರೆ ವಿಸ್ತಾರ. ಇದರಲ್ಲಿ ನೂರೆಂಭತ್ತು ಎಕ್ರೆ ಕಾಫಿ ಮತ್ತು ಒಳ್ಳೆ ಮೆಣಸು ನೆಟ್ಟಿರುವುದು [illegible] ಇರುವುದು.

[illegible] ಕಾಫಿ ಮತ್ತು ಒಳ್ಳೆಮೆಣಸಿನ ಪಸಲು ಬಹಳ ಚಲೋದಾಗಿ ಈಗಲೇ ಕಾಣುವುದು.

ಹದಿಮೂರು ವರ್ಷಗಳ ಮುನಾಫೆಯ ಬೆಲೆಯು ವಿವರ ಬೇಕಾದ್ದಲ್ಲಿ ಮಂಗಳೂರಲ್ಲಿರುವ ಜೆ. ಜ. ಹೆಮಿಲ್‌ಟನ್ ದೊರೆಗಳ ಹರಿಂದ ತಿಳಿದುಕೊಳ್ಳಬಹುದು. ಇದರ ಕ್ರಯ— ರೂ. 3,500 (ಮೂರು ಸಾವಿರದ ಐನೂರು ರುಪಾಯಿ)

[illegible]

[illegible] ವಿಕೇಶ! ಕ್ರಯ ಕಮ್ಮಿ!! ಹುಡಿ ಹೆಚ್ಚು!!!

ಕ್ರಯ [illegible]

[illegible]

[illegible] — ಜಿ. ಎಸ್. [illegible] ಮತ್ತು ಕಂಪೆನಿ,

[illegible], ಮಂಗಳೂರು

ಧನ್ವಂ [illegible]

ವೈದ್ಯ ವಿದ್ಯೆ

ಎಂಬ ಪುಸ್ತಕವು ಈ ಪುಸ್ತಕವನ್ನು ಓದುವುದರಿಂದ ಕಾರ [illegible]ಗಳಿಂದ ಉಂಟಾಗುವ ಎಲ್ಲಾ ವ್ಯಾಧಿಗಳನ್ನೂ [illegible] ಸಹಾಯವಿಲ್ಲದೆ ಗುಣವಾಡಿಕೊಳ್ಳಲು ಒಳ್ಳೆ [illegible] ತಿಳುವಳಿಕೆಯನ್ನೂ ಮತ್ತು [illegible] ಔಷಧವನ್ನೂ ತಿಳಿಸುವುದು. ಈ ಪುಸ್ತಕಕ್ಕೆ ಯಾವ ಖರ್ಚನ್ನೂ [illegible]. ಕಾರ್ಡಿನಲ್ಲಿ ನಿಮ್ಮ ವಿಳಾಸವನ್ನು ತಿಳಿಸಿದರೆ ಪುಸ್ತಕವು ನಿಮ್ಮ ಮನೆಯ ತಲಬಾಗಲಿಗೆ [illegible] ಸೇರುವದು.

ವಿಳಾಸ — ರಾಜವೈದ್ಯ ನಾರಾಯಣಜೀ, ಕೇಶವಜೀ,

27. ಜೈನಬಜ್ಜಾರು ರೋಡ್, ಮದರಾಸು

BANK OF MADRAS.

ಮದ್ರಾಸ್ ಬ್ಯಾಂಕ್.

ಹೆಡ್ ಆಫೀಸು ಮದ್ರಾಸ್.

ಮೂಲಧನ	ರೂ 75,00,000
ನಿಮಧಿ	„ 45,00,000

ಸೇವಿಂಗ್ಸ್ ಬ್ಯಾಂಕ್.

— ವರ್ಷಕ್ಕೆ ಸೇಕಡಾ 4 ರ ಬಡ್ಡಿ —

[illegible] ಠೇವಣಾತಿಗಳು [illegible] ಶರ್ತುಗಳಲ್ಲಿ ಪಡೆಯಲಾದಾವು [illegible] ವರುಷದ ಅವಧಿಗೆ [illegible] ರೂ 1000ಕ್ಕೆ ಮಿಗದ [illegible] ರೇವಣಾತಿ [illegible]

ಹೀಗೆ ರೇವಣಾತಿ ಇಟ್ಟ ಪ್ರತಿ ಕತ್ತು [illegible] ಸೇಕಡಾ [illegible] ರೂ 1000ಕ್ಕೆ [illegible] ಬಡ್ಡಿ ಕೊಡಲಾಗುವುದು.

ನಿಬಂಧನೆಗಳ ಪ್ರತಿಗಳನ್ನು ಬರೆದು ಬ್ಯಾಂಕಿ [illegible]

ಸಿ. ಎಲ್. ಗೊರ್ಡನ್,

ಏಜಂಟ್, ಮದ್ರಾಸ್ ಬ್ಯಾಂಕ್ ಮಂಗಳೂರ

ಜಗದ್ವಿಖ್ಯಾತವಾದ ಶ್ರೀ ದೇವೀಪ್ರಸಾದ ಕಂಪೆನಿಯ

ಸುಪ್ರಸಿದ್ಧವಾದ ಮಹೌಷಧಗಳು.

“ಧನ್ವಂತರೀ ಬಾಮಾ”

ಶುದ್ಧ ವನಸ್ಪತಿಗಳಿಂದಲೇ ಶಾಸ್ತ್ರೋಕ್ತವಾಗಿ ತಯಾರಿಸಲ್ಪಟ್ಟ ವೇದನಾಹಾರಿ ಮುಲಾಮು. ಇದರಿಂದ ವಾತ, ಕಫ, ಜಗಳ [illegible], ಕಲೆನೋವು, ಸೊಂಟನೋವು, ದೆನ್ನುನೋವು, ಮುಂತಾದ ಎಲ್ಲಾ ತರದ ಬೇನೆಗಳು ಅತಿ ಕ್ಷಿಪ್ರದಲ್ಲಿ ಸಂಪೂರ್ಣವಾಗಿ ಗುಣ ಹೊಂದುವವು. ಬಾಟ್ಲಿ ಗಿರ ಕಿಮ್ಮತು 0—8—0 ಒಂದು ಡಜನು ಬಾಟ್ಲಿಗಳಿಗೆ ರೂ [illegible]—0

“ಗಜಕರ್ಣದ ಮುಲಾಮು”

ಗಜಕರ್ಣ ಉಸಬು, ಖಜ್ಜಿ, ದದ್ರು, ಹಳಕಡ್ಡಿ, ಸೊಂಟಕಡ್ಡಿ ಮುಂತಾದ ಸಮಸ್ತ ವಿಧವಾದ ಚರ್ಮವ್ಯಾಧಿಗಳು ಒಂದೆರಡು [illegible] ನಿಸ್ಸಂದೇಹವಾಗಿ ಇದರಿಂದ ನಿವಾರಣೆಯಾಗುವವು. ಬಾಟ್ಲಿ ಗಿಕ್ಕೆ 0—4—0 ಒಂದು ಡಜನಿಗೆ ರೂ [illegible]—0

ನಮ್ಮ ಔಷಧಗಳ ಗುಣೋನ್ನತಿಯ [illegible] ಅನೇಕ ಮಹನೀಯರುಗಳಿಂದಲೂ ಡಾಕ್ಟರುಗಳಿಂದಲೂ ಶಿಫಾರಸು ಪತ್ರಗಳು, ಮೆಡಲು ದೊರೆತಿರುವವು. [illegible] ವ್ಯಾಪಾರಿಗಳಿಗೂ ಯೋಗ್ಯ ಕಮಿಶನು ಕೊಡಲಾಗುವದು. [illegible] ವಿಶೇಷ ಮಾಹಿತಿಯು [illegible]

ದಿ ಮ್ಯಾನೆಜರ್ — ಶ್ರೀ ದೇವೀಪ್ರಸಾದ ಕಂಪೆನಿ,

[illegible]

ರೂ. 1,000 ಬಹುಮಾನ.

ಲೋಕಪ್ರಸಿದ್ಧವಾದ ಸಾಲಾಮಿಸ್ರಿ ಮುರಬ್ಬಾ.

(ಗವರ್ನಮೆಂಟಿನಲ್ಲಿ ರಜಿಸ್ಟರ್ ಮಾಡಲ್ಪಟ್ಟಿದೆ).

ನಮ್ಮಿಂದ ಕಳುಹಿಸುವ [illegible] ಸಾಲಾಮಿಸ್ರಿ ಮುರಬ್ಬಾ [illegible]

ಇದ್ದರೂ ಸ್ವಕ್ಷೇಂದ್ರಿಯವಾದರೂ [illegible] ಪ್ರಭೋಧಿಗೆ ಶಿಲ್ಪವ ಹೋಗುತ್ತಿದ್ದರೂ ಕೈಕಾಲು ಮತ್ತು ಸೊಂಟದಲ್ಲಿ ನೋವಿದ್ದರೂ, ಹಸಿವು ಇಲ್ಲದಿದ್ದರೂ, ಮಲವಿಸರ್ಜನೆಯು ಸರಿಯಾಗಿ ಆಗದಿದ್ದರೂ, ಶರೀರದಲ್ಲಿ ರಕ್ತವು ಕೆಟ್ಟುಹೋಗಿದ್ದರೂ, ಈ ಸಾಲಾಮಿಸ್ರೀ ಮುರಬ್ಬಾ ಸೇವನೆಯಿಂದ ಗುಣವಾಗಿ ಶರೀರವನ್ನು ಒಳ್ಳೇ ಸ್ಥಿತಿಯಲ್ಲಿಡುವುದು ಮೆದುಳಿಗೆ ಬಲವನ್ನುಂಟುಮಾಡುವುದು ಹಳೇ ತಲೆನೋವುಗಳನ್ನು ಹೋಗಲಾಡಿಸುವುದು, ಧಾತುವನ್ನು ಹೆಚ್ಚಿಸುವುದು, ಸೊಂಟ ನೋವು ಸ್ವಲ್ಪಮಾತ್ರವೂ ಇರಲಾರದು. ಈ ಸಾಲಾಮಿಸ್ರೀ ಎಂಬುದು [illegible] ಕಂದಹಾರ್ ಪರ್ವತಗಳಲ್ಲಿ ಬೆಳೆಯುತ್ತದೆ.

ಈ ಮುರಬ್ಬಾ ಸೇವನೆಯಿಂದ ಗುಣಹೊಂದಿದ ಅನೇಕ ದೊಡ್ಡ ಮನುಷ್ಯರಿಂದ ರಂಗೂನ್, ಪಿನಾಂಗ್, ಆಫ್ರಿಕ, ಕಲ್ಕತ್ತ, ಬೊಂಬಾಯಿ, ಮದ್ರಾಸ್ ಮೊದಲಾದ ಅನೇಕ ಪ್ರಾಂತ್ಯಗಳಿಂದ ಯೋಗ್ಯತಾಪತ್ರಗಳು ಬಂದಿವೆ. [illegible] ಹೋಗಲು ಸುಳ್ಳು ಎಂದು [illegible] ಕೊಡಲ್ಪಡುತ್ತ [illegible]

ಒಂದು ಡಬ್ಬಾ ಮುರಬ್ಬಾವನ್ನು [illegible] ದಿನಗಳ ಉಪಯೋಗಿಸುವುದರಿಂದ [illegible] ಡಬ್ಬಿಗಳನ್ನು ಉಪಯೋಗಿಸುವುದರಿಂದ [illegible]

ಕ್ರಯ ಒಂದು ಡಬ್ಬಿಗೆ ರೂಪಾಯಿ 4

ಈಗ ಭಾಂಗಿಯ ಚಾರ್ಜ ಹೆಚ್ಚಿರುವುದರಿಂದ ಕೆಲವು ದಿನಗಳ ವರೆಗೆ [illegible] 1 ಡಬ್ಬಿಗೆ 3 [illegible] 12 [illegible]

ಡಿ. ಮನ್ನಾಲಾಲ್, ಡಿಲ್ಲಿ ವೈದ್ಯರು,

ಸಾಲಾಮಿಸ್ರಿ ಮುರಬ್ಬ ಡಿಪ್ಪೊ, ಬೆಂಗಳೂರು ಸಿಟಿ

ಆರ್. ಮಾರ್ಟನ್ನರ

ಎಕ್ಸ್‌ಟ್ರ ಸಾರ್ಸಪರಿಲ್ಲಾ

ಈ ಸಾರ್ಸಪರಿಲ್ಲಾ ಔಷಧವನ್ನು ಪ್ರತಿದಿನವೂ ನಿರಂತರವೂ ತೆಗೆದುಕೊಳ್ಳುವದರಿಂದ ದೇಹದೊಳಗಿನ ರಕ್ತವನ್ನು ಚೆನ್ನಾಗಿ ಶುದ್ಧಿಮಾಡುತ್ತದೆ. ಸುಖಭೋಗಿ, [illegible] ಸಂಬಂಧದಿಂದುಂಟಾದ ಎಲ್ಲಾ ತರದ [illegible], ಉಬ್ಬಿದ ನರಗಳ [illegible] ನೋವು, ವಾತ, ಸಂಧಿವಾತ, ಯಕೃತ್ಸಂಬಂಧ, ತರಂಗ [illegible], [illegible] ಚರ್ಮದ ರೋಗಗಳು, ವಿಷಕಾರಿತದಿಂದುಂಟಾದ ವ್ಯಾಧಿ, ಸಿಫಲಿಸಿಸ್, ಇವೇ ಮೊದಲಾದುವನ್ನು ನಾಶಮಾಡಿ, ರಕ್ತದಲ್ಲಿರುವ ವಿಷವನ್ನು [illegible] ಹೋಗಲಾಡಿಸಿ ರಕ್ತವನ್ನು ಚೆನ್ನಾಗಿ ಶುದ್ಧಿಯಾಗಿಟ್ಟು ಮನುಷ್ಯನನ್ನು [illegible] ಆರೋಗ್ಯದಲ್ಲಿಡುತ್ತದೆ. ಇದು ಶುದ್ಧವಾದ ವನಸ್ಪತಿಗಳಿಂದ ತಯಾರಿಸಲ್ಪಟ್ಟದ್ದಾಗಿರುತ್ತದೆ. ಬಾಟ್ಲಿ ಗಿಕ್ಕೆ ಕ್ರಯ ರೂ [illegible]

ಆರ್ ಮಾರ್ಟನ್ನರ ಎಗ್ಯೂ ಮಿಕ್ಸ್‌ಚರ್

ಇದು ಜ್ವರ, ಶೀತಜ್ವರ, ಮಲೇರಿಯಾ, [illegible], ಸನ್ನಿಪಾತ, ಕೆಟ್ಟವಾಯುವಿನಿಂದುಂಟಾದ ರೋಗ ಇವೇ ಮೊದಲಾದ ಎಲ್ಲಾ ತರಹದ ಜ್ವರ [illegible] ನಾಶಮಾಡುತ್ತದೆ. [illegible] ಜ್ವರವನ್ನು [illegible] ಇದು ಸಿಹಿಯಾಗಿರುವುದರಿಂದ ಸಣ್ಣ ಕೂಸುಗಳು ಸಹ ಕುಡಿಯಬಹುದು. ಅನೇಕ ಜನ ವಿದ್ವಾಂಸ ವೈದ್ಯರಿಂದ ಗುಣಮಾಡುವದಕ್ಕಾದ [illegible] ಈ ಎರಡೇ ಎರಡು ಬಾಟ್ಲಿಗಳ ಸೇವನೆಯಿಂದ ಹುಷಾರಾಗಿದೆ. ಬಾಟ್ಲಿ 1ಕ್ಕೆ ರೂ 0—[illegible]—0

ಆರ್ ಮಾರ್ಟನ್ನರ ಮೂಲವ್ಯಾಧಿ ಮುಲಾಮು.

ಮನುಷ್ಯನಿಗೆ ಮೂಲವ್ಯಾಧಿ ಆದಾಗ, ಬಹಳ ಸಲ [illegible] ಮರ್ಮಸ್ಥಾನದಲ್ಲಿ ಉರಿಯುವುದು, ಮಲಬದ್ಧತೆ ಇವೇ ಮುಂತಾದ್ದರಿಂದ ವ್ಯಥೆಪಡುತ್ತಾನೆ. ಈ ಔಷಧದ ಒಂದೇ ಒಂದು ಬಾಟ್ಲಿಯ ಉಪಯೋಗದಿಂದ, ರಕ್ತ ಸುರಿಯುವ ಮೂಲವ್ಯಾಧಿ, ಕಂಕುಳಲ್ಲಿ ನೋಯುವ ಮೂಲವ್ಯಾಧಿ ಮತ್ತು ಎಂಥ ತರಹದ [illegible] ಮೂಲವ್ಯಾಧಿಯಾದರೂ ಕಡೆಗೆ ವಾಸಿಯಾಗುತ್ತದೆ. ಇದು ಒಳ್ಳೇ ಔಷಧಗಳಿಂದ ತಯಾರಿಸಲ್ಪಟ್ಟು ತೆಗೆದುಕೊಳ್ಳುವದರಿಂದ ಏನೊಂದೂ ನೋವನ್ನು ಕೊಡದೆ ತಂಪಾಗಿ ಮಾಡುತ್ತದೆ. ಬಾಟ್ಲಿ ಗಿಕ್ಕೆ ರೂ. 0—[illegible]—0.

ವಿಳಾಸ — ಆರ್. ಡಿ. ಕಟ್ಲೆ ಮತ್ತು ಕಂಪೆನಿ,

ನಂಬ್ರ ಡಿ. ಫ್ರಿಯರ್ ರೋಡ್,

ರೈಟ್ ಎಂಡ್ ಕೋ ಹತ್ತರ, ಫೋರ್ಟ್, ಮುಂಬಯಿ

R. D. Kately & Co.

No D. Frere Road,

Near Wright & Co Fort Bombay.

ಆಯುರ್ವೇದಾಶ್ರಮ.

ವೈದ್ಯರತ್ನ ಪಂಡಿತ ಡಿ. ಗೋಪಾಲಾಚಾರ್ಲು

ಇವರಿಂದ ಸ್ಥಾಪಿತವಾಗಿ ನಡಿಸಲ್ಪಟ್ಟಿರುತ್ತದೆ

ಪ್ಲೇಗ್, ಕೊಲೇರಾ ಮತ್ತು ಇನ್‌ಫ್ಲುಯೆಂಜಾ

ಇವಕ್ಕೆ ಮುಖ್ಯವಾದ ಚಿಕಿತ್ಸಾಲಯ

ಸಕಲ ರೋಗಗಳನ್ನು ದೂರಮಾಡುವ ಗುಣಪಡಿಸುವ ಹಾಗೂ ಆರೋಗ್ಯವನ್ನು ಉಂಟುಮಾಡುವ

ಔಷಧಗಳು ಇಲ್ಲಿ ದೊರೆಯುವವು. ಕೆಟಲಾಗನ್ನು ಅಪೇಕ್ಷಿಸುವವರಿಗೆ ಉಚಿತವಾಗಿ ಕಳುಹಿಸುವೆವು

ಪ್ಲೇಗು ಔಷಧದ ದೊಡ್ಡ ಸಿಟ್ಟಿಗೆ ರೂ 2—2—0	ಕೊಲೇರಾ ಔಷಧದ ದೊಡ್ಡ ಸಿಟ್ಟಿಗೆ ರೂ 1—2—0
„ ಸಣ್ಣ „ „ 1—6—0	„ ಸಣ್ಣ „ 0—12—0

ಇನ್‌ಫ್ಲುಯೆಂಜಾ ಔಷಧದ ಪ್ರತಿ ಸಿಟ್ಟಿಗೆ ರೂ 1—12—0.

ಎಲ್ಲಾ ಔಷಧಗಳನ್ನು ಕಳುಹಿಸುವಾಗಲೂ ಟಪ್ಪಾಲ ಹಾಸಲು ಮತ್ತು ಪೇಕಿಂಗ್ ಪ್ರತ್ಯೇಕ

ವಿಳಾಸ:— ಮೆನೇಜರ್, ಆಯುರ್ವೇದಾಶ್ರಮ,

ತಂತಿ ವಿಳಾಸ — 55 ಆಚಾರಪ್ಪನ ಬೀದಿ,

ಪಂಡಿತ್, ಮದರಾಸ್ — ಜೋರ್ಜಟೌನ್, ಮದರಾಸ್

The Canara Banking Corporation, Udipi, (Limited).

ದಿ. ಕೆನರಾ ಬ್ಯಾಂಕಿಂಗ್ ಕೊರ್ಪೊರೇಶನ್, ಉಡುಪಿ, ಲಿಮಿಟೆಡ್.

ರೂ. 50ರ 1000 ಶೇರುಗಳು ರೂ. 52—8—0ರಂತೆ ಈಗಿನ ಪಾಲುವಸ್ತಾಲಿಕರಿಗೂ, ಸಾರ್ವಜನಿಕ ಸಂಸ್ಥೆಗಳಿಗೂ ರೂ. 55—0—0ರಂತೆ ಇತರರಿಗೂ ಮಾರಲು ಸಿದ್ಧವಿದೆ.

ಡೈರೆಕ್ಟರರು.

1. ಬನರೇಬಲ್ ಖಾನ್ ಬಹದ್ದೂರ್ ಹಾಜಿ ಅಬ್ದುಲ್ಲಾ ಹಾಜಿ ಕಾಸಿಂ ಸಾಹೇಬ ಬಹದ್ದೂರ್,—(ಪ್ರೆಸಿಡೆಂಟ್) ರೈತ, ವ್ಯಾಪಾರ, ಉಡುಪಿ ತಾಲೂಕು ಬೋರ್ಡ್ ಪ್ರೆಸಿಡೆಂಟ್.
2. ರಾವ್ ಬಹದ್ದೂರ್ ಸುಜಿರ ರಘುನಾಥಯ್ಯ—ರಿಟಾಯರ್ಡ್ ಸಬ್ ಜಡ್ಜ್ ಮಂಗಳೂರು ತಾಲೂಕು ಬೋರ್ಡ್ ಪ್ರೆಸಿಡೆಂಟ್, ಮಂಗಳೂರು
3. ಮಂಜೇಶ್ವರ ಶ್ರೀನಿವಾಸ ಪ್ರಭು—(ಟ್ರೆಜರರ್) ವ್ಯಾಪಾರ, ಉಡುಪಿ
4. ಎಮ್ ವಿಟ್ಟಲ ಕಾಮತ್—ವಕೀಲ, ಉಡುಪಿ.
5. ಉ. ಅನಂತಯ್ಯ ಯಾನೆ ಶೇಷಗಿರಿ ಪೈ—ರೈತ, ವ್ಯಾಪಾರ, ಆನರರಿ ಮೆಜಿಸ್ಟ್ರೇಟ್, ಉಡುಪಿ.
6. ಕೇದಿಂಜೆ ವೆಂಕಟಯ್ಯ ಹೆಗ್ಡೆ—ರೈತ, ವ್ಯಾಪಾರ, ಉಡುಪಿ
7. ಯು. ಎಸ್. ಆಹ್ಮದ್ ದಾವುದ್ ಸಾಹೇಬ ಬಹದ್ದೂರ್—ರೈತ ವ್ಯಾಪಾರ ಆನರರಿ ಮೆಜಿಸ್ಟ್ರೇಟ ಉಡುಪಿ
8. ಕೊಡ್ತಿಕಾರ ಪದ್ಮನಾಭ ಪೈ—ಸೆಕ್ರೆಟರಿ, ಮುಂಬಯಿ ಲೈಫ್ ಇನ್ಶ್ಯುರೆನ್ಸ್ ಕಂಪೆನಿ
9. ಮಲ್ಪೆಸುಕಳ ಪದ್ಮನಾಭ ಶೆಣೈ—ರೈತ ವ್ಯಾಪಾರ, ಮಲ್ಪೆ
10. ಆಲ್ಬರ್ಟ್ ಆರಾಂಹ—ಮೆನೇಜರ್, ಮಲಬಾರ್ ಆಯಿಲ್ ಎಕ್ಸ್‌ಟ್ರೇಕ್ಟಿಂಗ್ ಕೋ ಕಲ್ಯಾಣಪುರ
ಉಡುಪಿ ವಾಸುದೇವ ಕೃಷ್ಣ ಪಡಿಯಾರ—ಬಯ್ಸ್ ಮಿಲ್ಸ್, ಉಡುಪಿ
ಬೈಲೂರು ನರಸಿಂಹ ಶೆಣೈ—ರೈತ, ವ್ಯಾಪಾರ, ಉಡುಪಿ

		ರೂ	ಅ	ಪೈ
1	ಅಧಿಕಾರಗೊಳಿಸಲ್ಪಟ್ಟ ಮೂಲಧನ			
2	ಚಂದಾ ಹಾಕಲಿಕ್ಕೆ ಅರ್ಪಿಸಿದ ಮೂಲಧನ	3,50 000	0	0
3	ಚಂದಾ ಹಾಕಿ ಎತ್ತಿದ ಮೂಲಧನ	1,00,000	0	0
4	ಮೌಲ್ಯಕಿತ್ತ ಮೂಲಧನ	58 400	0	0
5	ಠೇವಣಾತಿಗಳು	47 012	9	11
6.	ಕ್ಷೇಮನಿಧಿ ವ ಇತರ ಫಂಡುಗಳು	89,088	1	6
7	ಯೋಗ್ಯ ಜವಾಬ್ದಾರಿ ಮೇಲೆ ಮತ್ತು ಅಡವಿನ ಮೇಲ ಸಾಲಕೊಟ್ಟ ಹಣ	10 741	5	2
		140 754	13	7

ಯೋಗ್ಯ ಜವಾಬ್ದಾರಿ ಮೇಲೆ ಮತ್ತು ಅಡಿನ ಮೇಲ ಸಾಲಕೊಡೋಣಾಗುವದು ಸಂಘಕ್ಕೆ ಕೊಡೋಣಾಗುವ ಹಣಗಳನ್ನು ಸಂಘದ ಲೆಖ್ಖಕ್ಕೆ ಮಂಗಳೂರಲ್ಲಿ ಮದ್ರಾಸ್ ಬೇಂಕಿನಲ್ಲಿಯಾಗಲೀ ಕೆನರಾ ಬೇಂಕಿನಲ್ಲಿಯಾಗಲೀ, ಮರ್ಕೆಂಟೈಲ್ ಬೇಂಕ್ ಒಫ್ ಇಂಡಿಯಾ, ಲಿಮಿಟೆಡ್, ಮುಂಬಾಯಿಯಲ್ಲಾಗಲಿ, ವಸೂಲು ಕೊಡಬಹುದು ದೀರ್ಘ ವಾಯಿದೆಯ ಹೆಚ್ಚು ಮೊಬಲಗಿನ ಠೇವಣಾತಿಗಳ ಮೇಲೆ ಕೊಡಲ್ಪಡುವ ವಿಶೇಷ ದರದ ಬಡ್ಡಿ ವಿಷಯ ಕೆಳಗಿನ ವಿಳಾಸಕ್ಕೆ ಬರೆಕೊಳ್ಳಿರಿ

ಬ್ಯಾಂಕಿನ ಆಫೀಸು,
ತಾ 4—12—1920

ನ ಆನಂದರಾವ್,
ಕಾರ್ಯದರ್ಶಿ

ಒಂದೇ ಸಾರಿ ನಾಲ್ಕು ಸೀರೆಗಳನ್ನು ಖರಿಸುವವರಿಗೆ ಪ್ಯಾಕಿಂಗ್ ಮಹಸೂಲು ಮುಕ್ತ್ಯ.

ಮಧುರೆ ಜುನ್ನಡಿ ಅಂಚಿನ ಸೀರೆಗೆ ರೂ. 4-8-0. 1 ಸೀರೆಗೆ ಒ. ಶಿರಸುತ್ತು ಗಲ್ಲಿ ಕಟ್ಟುವ ಒಂದು ಸಾಗರ ಉಚಿತ.

ಇದು ಉಡುವುದಕ್ಕೆ ಘನವಾಗಿಯೂ, ನೋಟ ಚಂದವಾಗಿಯೂ, ಕ್ರಯ ಸುಲಭವಾಗಿಯೂ ಇದೆ ಬಣ್ಣ ಹೋಗದು ಸೀರೆಯ ಉದ್ದ 18 ಮೊಳ ಸುಂದರ ಸೆರಗು ಒಂದನ್ನು ಖರಿಸಿ ಪರೀಕ್ಷಿಸಿ. ಕ್ರಯ ರೂ 4—8—0. [2074]

ನಲಪಾಡಿಯಂ ಜರಿ ರೂ 6-12-0. ಮಂಗಳಾಯುತ ರೂ 5-0 0 ಆಕೀ ಪತಕೋಟ 4 12-0 ಸಾವಿತ್ರಿ ಜರಿ ರೂ 8-4-0 ಪದಿಯೇರಿ ರೂ 5-12-0 ಕಾಂಜಿಂವರ ರೂ 7 8-0

C C Lingam & Co
2 *Ramanuja Ayer St*
Gowarpet, MADRAS

ಭೃಂಗರಾಜ ತೈಲ

ಇದನ್ನು ತಲೆಗೆ ಹಚ್ಚಿದರೆ ಎಲ್ಲಾ ತರದ ರೋಗಗಳ ಗುಣವಾಗುತ್ತವೆ. ತಲೆಯ ಕೂದಲು ಕಪ್ಪಾಗುತ್ತದೆ ಕೇಶ ದಾನುಗಳು ವೃದ್ಧಿಹೊಂದುತ್ತವೆ ಕಂಠದ ಮತ್ತು ಎಲ್ಲಾ ಇಂದ್ರಿಯಗಳಿಗೆ ಬಲಕೊಡುತ್ತದೆ ಪಿತ್ತನಾಶ ಮಾಡುತ್ತದೆ. ನಾಲ್ಕು ಔನ್ಸಿನ ಸೀಸೆ ಒಂದರ ಕ್ರಯ ರೂ 0—12—0

ತ್ರಿಫಲಾದಿ ತೈಲ—ವಾತ, ಪಿತ್ತ, ಶ್ಲೇಷ್ಮ ಇವುಗಳಿಂದ ಉಂಟಾದ ರೋಗಗಳೆಲ್ಲಾ ಇದನ್ನು ತಲೆಗೆ ಹಚ್ಚಿಕೊಂಡರೆ ಪರಿಹಾರವಾಗುತ್ತದೆ ಎಲ್ಲಾ ಇಂದ್ರಿಯಗಳಿಗೆ ಬಲಕೊಡುತ್ತದೆ ನಾಲ್ಕು ಔನ್ಸಿನ ಸೀಸೆ ಒಂದರ ಕ್ರಯ ರೂ

ಜ್ವರಾಂತಕ ಮಾತ್ರೆ—ಈ ಮಾತ್ರೆಯನ್ನು ಉಪಯೋಗಿಸಿ ಎಲ್ಲಾ ಜ್ವರಗಳು ಪರಿಹಾರವಾಗುತ್ತದೆ ಉಪಯೋಗಿಸುವ ಕ್ರಮ, ಮಾತ್ರೆಗಳ ಕೂಡೆ ಕೊಡುವ ಪ್ರಮಾಣಕ ಪಡಿಸುತ್ತದೆ 20 ಮಾತ್ರೆಗಳುಳ್ಳ ಒಂದರ ರೂ

ಪಂಚಸಾರ ಲೇಹ—ಅಜೀರ್ಣ ಪಿತ್ತ ವಾತಶ್ಲೇಷ್ಮ ಇವುಗಳ ಉಂಟಾದ ರೋಗಗಳೆಲ್ಲಾ ಇದರಿಂದ ಪರಿಹಾರವಾಗುತ್ತದೆ ಮತ್ತು ಇಂದ್ರಿಯವನ್ನು ಬಲಪಡಿಸಿ ಅನೇಕ ತರದ ಇಂದ್ರಿಯ ದೋಷಗಳನ್ನು ಗುಣಪಡಿಸುತ್ತದೆ ಒಂದು ಸೇರಿಗೆ ರೂ 1—4—0

ಮೈಲೆ ಬರೆದ ಔಷಧಿಗಳು ಸರ್ವ ವೈದ್ಯರಿಗೂ ಶಿರೋಮಣಿಯಾದ ಆಯುರ್ವೇದಾವಲಂಬಿಗಳಾದ ಶ್ರೀ ಧನ್ವಂತ್ರಿ ಮುನಿ ಪ್ರಣೀತ ವೈದ್ಯಗ್ರಂಥ ಆಧಾರದಿಂದ ಆವರನು ಧನ್ವಂತ್ರಿ ಅನುಯಾಯಿಗಳಾದ ನಮ್ಮಿಂದ ತಯಾರಿಸಲ್ಪಟ್ಟಿರುತ್ತವೆ ಆರ್ಷವಚನವು ನಮಗೆ ಎಷ್ಟು ಸತ್ಯವಾಗಿ ತೋರುತ್ತದೋ ಅಷ್ಟೇ ಧೃಢತೆಯಿಂದ ಈ ಔಷಧಗಳ ರೋಗ ಪರಿಹಾರಕವಾಗಿರುತ್ತವೆ

ಸೂಚನೆ—ಅಪೇಕ್ಷಿಸುವವರು ಕೆಳಗಿನ ಬರೆದುಕೊಳ್ಳುವುದು ಉಚಿತವಾಗಿ ಕಳುಹಿಸಲಾಗುವುದು

ಆಯುರ್ವೇದಿಕ್ ಮತ್ತು ಹೋಮಿಯೋಪತಿಕ್
ವಿಳಾಸ —
ಧರ್ಮ ವೈದ್ಯಶಾಲಾ
ಧರ್ಮಸ್ಥಳ ದಕ್ಷಿಣ ಕನ್ನಡ

GINEMATOGRAPH.
ಸಿನೆಮೊಟೋಗ್ರಾಫ್

ಈ ಯಂತ್ರವು ಸೀಮೆಯಲ್ಲಿ ತಯಾರಾದದ್ದು ಇದರಲ್ಲಿರುವ ಫಿಲಂಸ್ (ಚಿತ್ರಪಟ)ಗಳನ್ನು ಹಾಕುವಾಗಲೂ ತಿರುಗಿಸುವಾಗಲೂ ನೋಡಿದರೆ ಬೈಯಸ್ಕೋಪಿನಲ್ಲಿ ಕಂಡಂತೆ ರೈಲು, ಮೋಟರು ಓಡುವದ, ಆಕಾಶವಿಮಾನಗಳ ಯುದ್ಧ, ಹಡಗುಗಳ ಚಲನೆ, ಹುಲಿ, ಕರಡಿಗಳ ಸರ್ಕಸ್ ಚೀನಾ ದೇಶಿಯ ಮನೆ, ಗುಡಿಸಲು, ಕೈಗಾರಿಕೆ ಮುಂತಾದವುಗಳು ವಿವರವಾಗಿ ಕಾಣುವವು ಈ ಯಂತ್ರ

ಪೆಟ್ಟಿಗೆ ಒಂದು ಇದ್ದರೆ ಜಾತ್ರೆ ಪರಿಷೆ ಸಂತೆ ಮುಂತಾದವುಗಳಲ್ಲಿ ಬಯಲಿಗೆ ತೋರಿಸಿ ಹಣ ಸಂಪಾದನೆ ಮಾಡಬಹುದು ಈ ಯಂತ್ರವು ಭಾರವಿಲ್ಲದೆ ಸೊಗಸಾಗಿ ಲಕ್ಷ್ಯ ಕೈಕನ್ನಡಿಯಂತೆ ಇರುವದು ಕ್ರಯ ೧ಕ್ಕೆ ರೂ 1 4

ವಿಳಾಸ — ಎಸ್ ಪಾಲ್ ಅಂಡ್ ಕೊ,
ಪೋಸ್ಟ್ ಬಾಕ್ಸ್ ನಂ 64 ಪಾರ್ಕ್‌ಟೌನ್ ಮದರಾಸು

ಲೂಸ್ ಕಿಲ್ಲರ್
(ತಲೆಯ ಹೇನು, ಹುಣ್ಣುಗಳ ಸಂಹಾರಿ)

ಈ ಔಷಧವನ್ನು ತಲೆಗೆ ಹಾಕುವುದರಿಂದ ತಲೆಯಲ್ಲಿರುವ ಹೇನುಗಳು ಸತ್ತು ಉದುರಿಹೋಗಿ ಪುನಃ ಅವರ ಸುಳಿಯೇ ಇಲ್ಲದಂತಾಗವುದು ಮತ್ತು ತಲೆಯಲ್ಲಿ ಯಾವ ವಿಧವಾದ ಹುಣ್ಣುಗಳಿದ್ದರೂ ಖಂಡಿತವಾಗಿ ಗುಣವಾಗುವುದು ಈ ಔಷಧದಿಂದ ತಲೆಯ ಕೂದಲಿಗೆ ಯಾವ ಕೆಡಕ ಆಗದಾರದು ಈ ಔಷಧವನ್ನು ಕಜ್ಜಿ ಕುರು ಸಣ ಮುಂತಾದವುಗಳಿಗೆ ಸೋಪು ಸೀಗೆಕಾಯಿಗೆ ಬದಲಾಗಿ ಉಪಯೋಗಿಸಿದರೆ ತಪ್ಪದೆ ಗುಣವಾಗುವುದು

ಕ್ರಯ ಡಬ್ಬಿಗಕ್ಕೆ ರೂ 1—0—0

ವಿಳಾಸ ಎಸ್ ಆರ್ ಕೃಷ್ಣ ಅಂಡ್ ಕೊ
89 ನಾರಾಯಣ ಮೊದಲಿ ಸ್ಟ್ರೀಟ್,
ಮದರಾಸು

ಸದ್ಬೋಧಕ ಗ್ರಂಥಮಾಲೆ
(ತ್ರೈಮಾಸಿಕ ಪುಸ್ತಕ)

೧೯೨೧ನೇ ಜನವರಿಯಿಂದ ಆರಂಭ | ವಾರ್ಷಿಕ ಚಂದಾ ಅಂಚೆ ಸಹಿತ ರೂ 1 ಮಾತ್ರ.

ಪ್ರತಿ ಮೂರು ತಿಂಗಳಿಗೊಮ್ಮೆ ಕನ್ನಡ ಕಥಾ ಕಾದಂಬರಿ ನಾಟಕ ಕಾವ್ಯ ಪ್ರಬಂಧವೇ ಮೊದಲಾದ ಗ್ರಂಥಗಳಲ್ಲಿ ಯಾವುದಾದರೊಂದು ಪೂರ್ಣ ಪುಸ್ತಕವೂ ಉಲ್ಲೇಖವ, ವಿನೋದಲಹರಿ, ಸ್ಥಳೀಯವಾರ್ತೆ ವಿಮರ್ಶೆ ನ ತ್ತ ಸ್ವೀಕಾರ ಇತ್ಯಾದಿ ಶೀರ್ಷಿಕೆಗಳೂ ಪ್ರಕಟವಾಗುವವು ಸಮಸ್ತ ಕನ್ನಡಿಗರಿಗೂ ಸಂಗ್ರಹಿಸಿಕೊಳ್ಳಲು ಶಕ್ಯವಾಗಿರಬೇಕೆಂದೇ ವಾರ್ಷಿಕ ಚಂದಾ ಇಂಚವೆಷ್ಟು ಕಡಿಮೆ ಒಂದೇ ರೂಪಾಯಿ ಇಟ್ಟಿರುವೆವು ಈಗಲೇ ತಮ್ಮ ಹೆಸರನ್ನು ತಿಳಿಸಿ ವರ್ಗಣೆದಾರರಾಗಿ ಸೇರುವುದರ ಮೂಲಕ ಭಾಷಾ ಪೋಷಕರಾದ ಕನ್ನಡಿಗರೆಲ್ಲರೂ ಪ್ರೋತ್ಸಾಹಿಸಬೇಕಾಗಿ ಸಂಪ್ರಾರ್ಥನೆ

ವಿಳಾಸ— ಎಸ್ ರಂಗಪ್ಪಯ್ಯ ಸಂಪಾದಕ ಮತ್ತು ಪ್ರಕಾಶಕ
ಸದ್ಬೋಧಕ ಗ್ರಂಥಮಾಲಾ ಕಾರ್ಯಾಲಯ,
ಸುರತಕಲ್, (ದಕ್ಷಿಣ ಕನ್ನಡ)

ಅಥವಾ—
S R Hebbar & Bros
General Merchants SURATKAL, S K

ಇಂಡಿಯನ್ ಮೋಟರ್ ಸರ್ವಿಸ್.

ಈ ಸರ್ವಿಸಿನ ಮೋಟರ ಬಸ್ಸುಗಳು ಮಂಗಳೂರಿನಿಂದ ಬಂಟ್ವಾಳಕ್ಕೂ, ಬೆಳ್ತಂಗಡಿಗೂ, ಪುತ್ತೂರಿಗೂ, ಗುರುಪುರಕ್ಕೂ ವ ಕಾರ್ಕಳ ಮಾರ್ಗವಾಗಿ ಉಡುಪಿಗೂ ವ ಆಯಾಯ ಸ್ಟೇಶನುಗಳಿಂದ ವಾಪಾಸು ಮಂಗಳೂರಿಗೂ ಚಲಾವಣೆ ಆಗುವವು

ಬೇರೆ ಯಾವ ಮಾಹಿತಿ ಬೇಕಾಗಿದ್ದರೆ ನಮ್ಮ ಕದ್ರಿ ವ ಹಂಪನಕಟ್ಟೆ ಆಫೀಸುಗಳಲ್ಲಿ ವ ಇತರ ಬ್ರೇಂಚ್ ಆಫೀಸುಗಳಲ್ಲಿ ವಿಚಾರಿಸಿದ್ದಲ್ಲಿ ತಿಳಿಯಬರುವದು

ಹಂಪನ ಕಟ್ಟೆ, ಮಂಗಳೂರು ಮಾಧವ ಬಿಲ್ಡಿಂಗ್ಸ್ ಸಮೀಪ

ಎ. ಸಿ. ಅಂದ್ರಾದೆ
ಪ್ರೊಪ್ರೈಟರ್

ಒಳ್ಳೇ ಸಂದರ್ಭ

ಹೊಲಿಗೆ ಕೆಲಸವು ಸರ್ವರೂ ಮೋಹಿಸತಕ್ಕ ಆಗತ್ಯವುಳ್ಳ ಕೈಗಾರಿಕೆ ಎಂದರೆ ಅತಿಶಯವಲ್ಲ

ಈ ಕೆಲಸವನ್ನು ಅತ್ಯುತ್ತಮರೀತಿಯಿಂದ ತಯಾರಿಸುವದರಲ್ಲಿ ಮುಲ್ಕಿ ಯನ್ ಟಿ ರಾವು ಎಂಬವರು ಪ್ರಾವೀಣ್ಯತೆ ಹೊಂದಿ ಮದ್ರಾಸ್ ಬೊಂಬಾಯಿ ಕಲ್ಕತ್ತಾ ಇತ್ಯಾದಿ ದೇಶಗಳಲ್ಲಿ ಇಪ್ಪತ್ತು ವರ್ಷಗಳಿಂದ ಮಾಹಿತಿ ಪಡೆದು ವಿಲಾಯತಿಯ ಯಂ ಪ ಬಿ ಟಿ ಪರೀಕ್ಷೆ ಹೊಂದಿ ಡಿಪ್ಲೋಮಗಳನ್ನು ಪಡೆದು ಪ್ರಸ್ತುತ ಬೊಂಬಾಯಲ್ಲಿ ಈ ವಿದ್ಯೆಯನ್ನು ಕಲಿಸುವ ಸ್ಕೂಲ್ ಮತ್ತು ವಿಲಾಯತಿಯ ಪ್ರತಿವಾರದ ಸ್ಟೈಲುಗಳ ಒಂದು ಸಂಗ್ರಹಾಲಯವನ್ನು ಏರ್ಪಡಿಸಿ ಅನೇಕರಿಂದ ಸರ್ಟಿಫಿಕೇಟುಗಳನ್ನು ಹೊಂದಿರುತ್ತಾರೆ

ದೇಶಬಾಂಧವರಿಗೆ ಪ್ರೀತಿಪೂರ್ವಕವಾಗಿ ಸುಲಭ ರೀತಿಯಿಂದ ಕತ್ತರಿಸುವದು ಹೊಲಿಯುವದು ಇತ್ಯಾದಿ ಕೆಲಸವನ್ನು ಧರ್ಮಾರ್ಥವಾಗಿ ಕಲಿಸಿ ಈ ಕೈಗಾರಿಕೆಯನ್ನು ಪ್ರಚಾರಿಸಲು ಉದ್ಯುಕ್ತರಾಗಿದ್ದಾರೆ

ಹೆಚ್ಚಿನ ವಿಷಯಗಳನ್ನು ಈ ಕೆಳಗಿನ ವಿಳಾಸಕ್ಕೆ ಬರದು ತಿಳಕೊಳ್ಳಬಹುದು

N. T. Rao,
English Tailoring Co
Princess Street BOMBAY

ಕಾಣಾಕಲಂ—ಪ್ರಸ್ತುತ 3 ತಿಂಗಳ ಪರಿಯಂತರ ಇವರು ಮುಲ್ಕಿಯಲ್ಲಿ ಇರುವರು ಭೇಟಿ ಮಾಡಿ ವಿಶೇಷ ಮಾಹಿತಿಯನ್ನು ಅಗತ್ಯವಿದ್ದರೆ ಪಡಕೊಳ್ಳಬಹುದು

'ಟಿಶ್ಯುರೆಮಿಡಿಸ್'
ಎಂಬ
ಶುಸ್ಲರ್ ಪಂಡಿತರ ಹನ್ನೆರಡು ಲವಣ ಔಷಧಗಳು

ಕಲ್ಕೇರಿಯ ಫ್ಲೋರ್	ಕಾಲಿ ಮ್ಯುರ್	೮ ನಾಟ್ರಮ್ ಮ್ಯುರ್
- ಕಲ್ಕೇರಿಯ ಫೊಸ್ 6	ಕಾಲಿ ಫೊಸ್	1 ನಾಟ್ರಮ್ ಫೊಸ್
3 ಕಲ್ಕೇರಿಯ ಸಲ್ಫ್	ಕಾಲಿ ಸಲ್ಫ್	1 ನಾಟ್ರಮ್ ಸಲ್ಫ್
4 ಫೆರಮ್ ಫೊಸ್	ಮಗ್ನೆಶಿಯ ಫೊಸ್	1. ಸಿಲಿಸಿಯಾ

ಕ್ರಯ		ರೂ ಅ ಪೈ
ಎರಡು	ಡ್ರಾಮಿನ ಸೈಜ್ D ಸೀಸೆ ಒಂದ	—3—6
ನಾಲ್ಕು	„ C	—6—0
ಒಂದ ಔನ್ಸಿನ	A	—1 —6

ಹನ್ನೆರಡು ಲವಣಗಳ ಎರಡು ಡ್ರಾಮಿನ ಸೀಸೆಗಳುಳ್ಳ ಒಳ್ಳೇ ನಮೂನೆಯ ಚಕ್ಕ ಪೆಟ್ಟಿಗೆಗೆ 3—0—

ಹನ್ನೆರಡು ಲವಣಗಳ ಒಂದ ಔನ್ಸಿನ ಸೀಸೆಗಳುಳ್ಳ ಪೆಟ್ಟಿಗೆಗೆ ಜೀವರಸಾಯನ ವೈದ್ಯ ಶಾಸ್ತ್ರ ಪುಸ್ತಕ ಸಮೇತ 1 —

ಜೀವರಸಾಯನ ವೈದ್ಯಶಾಸ್ತ್ರ ಎಂಬ ಹೊಸಪುಸ್ತಕವು ಇದು ಮೇಲೆ ಹೇಳಿದ ಟಿಶ್ಯು ಔಷಧಗಳನ್ನು ಸರ್ವಸಾಧಾರಣವಾದ ಎಲ್ಲಾ ಕಾಹಿಲೆ ಕಸಾಲೆಗಳಲ್ಲಿ ಉಪಯೋಗಿಸುವ ಕ್ರಮವನ್ನು ಸೂಚಿಸುತ್ತದೆ ಈ ಪುಸ್ತಕವು ಎಲ್ಲರಿಗೂ ಸುಲಭ ದರದಲ್ಲಿ ಸಿಕ್ಕುವಂತೆ ಪ್ರಕಟಿಸಿದ್ದೇವೆ ಕ್ರಯ 12 ಆಣೆ ಮಾತ್ರ ಬೇಕಾಗಿದ್ದವರು ಕೆಳಗಿನ ವಿಳಾಸಕ್ಕೆ ಬರೆಯಬಹುದು

ಎ ಫೆರ್ನಾಂಡಿಸ್,
ಎಲಿಕ್ಸಿ ಹೋಮಿಯೋಪತಿ ಡಿಸ್ಪೆನ್ಸರಿ, ಮಂಗಳೂರು

ಜೆನ್‌ವಿನ್ ಹಾರ್ಲೆಮ್ ಆಯಿಲ್

ಇದು ನರಸಂತಾನವನ್ನು [illegible]
ಇದು ಆಹಾರ ಮತ್ತು ಔಷಧಿ ಸರಬರಾಯಿ [illegible]
ಇದು ಹಾರ್ಲೆಮ್ ಆಯಿಲ್ ಎಂಬುದಕ್ಕೆ ಹಾರ್ಲೆಮ್ [illegible]
ಇದು ಮುನ್ನೂರು ವರುಷಗಳಿಂದ ಲೋಕದಲ್ಲೆಲ್ಲಾ [illegible]
ಇದು ಜಗದೀಶನೇ ಅನುಗ್ರಹಿಸಿದಂಥಾ "ಅಮೃತ" ಎಂಬ ಹೆಸರಿನ [illegible]

ಹೆಚ್ಚೇಕೆ? ಅಂಗೈ ನೋಡಲು ಕನ್ನಡಿ ಬೇಕೆ?

ವಾನಿಂಗ್‌ಟಿಲ್ಲಿ ಜೆನ್‌ವಿನ್ ಹಾರ್ಲೆಮ್ ಆಯಿಲನ್ನು ಪ್ರಥಮತಃ ಮಂಗಳೂರಿಗೆ [illegible] ಹರ್ಮನ್ ಬ್ರೀಕ್ಕೆಯವರು ಇದೇ ಮಾರ್ಚ ತಾ. 10ರಲ್ಲು [illegible] ವಾನಿಂಗ್‌ಟಿಲ್ಲಿ [illegible] ರೀತಿ ಬರೆದಿರುವರು:—ದಯವಿಟ್ಟು ನಿಮ್ಮ ಹಾರ್ಲೆಮ್ ಆಯಿಲಿನ 25 ಸೀಸೆಗಳನ್ನು ಕಳುಹಿಸಬೇಕು. ಇದು [illegible] ಖಾತ್ರಿ ಔಷಧಿಯೆಂದು ನನ್ನ ಅನುಭವಕ್ಕೆ ಬಂದಿದೆ. ನಾನು 1910ನೇ ಇಸವಿಯಲ್ಲಿ ಮಂಗಳೂರಿಗೆ [illegible] ನಿಮ್ಮ ಹಾರ್ಲೆಮ್ ಆಯಿಲಿನ 12 ಸೀಸೆಗಳನ್ನು ಕೊಂಡುಹೋಗಿದ್ದೆನು. ಇದನ್ನು ಹಿಂದೀಯರೊಳಗೆ ಪ್ರಯೋಗಿಸಿದ್ದರಲ್ಲಿ ಅತಿ ಸಾಫಲ್ಯವಾಗಿ ಪರಿಣಮಿಸಿತು. ಹಿಂದೀಯರೊಳಗೆ ಪ್ರಬಲವಿರುವ ಜ್ವರಕ್ಕೆ ಇದು ಖಾತರಿ ಔಷಧ ಎಂದು [illegible] ತಿಳಿದಾಕ್ಷಣ ಅವರು 25—100—1000 ಸೀಸೆಗಳಂತೆ ತರಿಸಿದರು. ಇದರಿಂದ ಎಷ್ಟೋ ಜನರು ಪ್ರಯೋಜನ ಹೊಂದಿದರು. [illegible] ಕುಟುಂಬಗಳು "ಕುಟುಂಬಸಂಜೀವನಿ" ಎಂಬಂತೆ ಇದನ್ನು ಮನೆಮನೆಯಲ್ಲಿ ಇಟ್ಟುಕೊಳ್ಳಲು ತೊಡಗಿದರು. ಇತ್ಯಾದಿ [illegible]

ಮ॥ ರಾ॥ ಬೆಳಿಯಪ್ಪ ಅಮ್ಮತಿ—ತಾ 28—4—'20, ನಿಮ್ಮಿಂದ ತರಿಸಿದ ಹಾರ್ಲೆಮ್ ಆಯಿಲ್ ಜ್ವರಕ್ಕೆ [illegible] ಔಷಧಿಯಾಗಿದೆ. ದಯಮಾಡಿ 12 ಸೀಸೆ ವಾನಿಂಗ್‌ಟಿಲ್ಲಿ ಜೆನ್‌ವಿನ್ ಹಾರ್ಲೆಮ್ ಆಯಿಲ್ ವಿ. ಪಿ. ಮಾಡಿ ಕಳುಹಿಸಿರಿ.

ರಿವರೆಂಡ್ ಅಂಟಟ್, ಎಸ್. ತಲಚೇರಿ—ನಿಮ್ಮಿಂದ ತರಿಸಿದ ವಾನಿಂಗ್ ಟಿಲ್ಲಿ ಜೆನ್‌ವಿನ್ ಹಾರ್ಲೆಮ್ ಆಯಿಲ್ ಪ್ರಯೋಗಿಸಿ ನನಗೆ ದೀರ್ಘಕಾಲದಿಂದಿದ್ದ ನರಗಳ ಅಶಕ್ತಿಯು ಪೂರ್ಣವಾಗಿ ಗುಣವಾಗಿದೆ.

ಮ॥ ರಾ॥ ಶಂಕರನ್ ನಂಬಿಯಾರ್, ಕುಟ್ಟಿಪರಂಬ, 20—8—'20—ನಿಮ್ಮಿಂದ ತರಿಸಿದ ವಾನಿಂಗ್‌ಟಿಲ್ಲಿ ಜೆನ್‌ವಿನ್ ಹಾರ್ಲೆಮ್ ಆಯಿಲಿನಲ್ಲಿ ಅತಿಮಾನುಷ್ಯ ಶಕ್ತಿಯಿದೆ. ನಾನು ಪ್ರಯೋಗಿಸಿದ ಹಲವು ಬಗೆಯ ರೋಗಗಳು ಇದರ ಸೇವನೆಯಿಂದ ಪೂರ್ಣ ಗುಣ ಹೊಂದಿದೆ. 6 ಸೀಸೆಗಳನ್ನು ವಿ. ಪಿ. ಮಾಡಿ ಕಳುಹಿಸಿರಿ.

ವಾನಿಂಗ್ ಟಿಲ್ಲಿ ಬ್ರದರ್ಸ್—ಜೆನ್‌ವಿನ್ ಹಾರ್ಲೆಮ್ ಆಯಿಲ್

ಪ್ರಯೋಗಿಸಿ, ಮೂಲವ್ಯಾಧಿ, ಅಪಸ್ಮಾರ, ಮೂತ್ರದೋಷಗಳು, ಪಕ್ಷವಾತ, ಸೂತಕದ ಅಕ್ರಮಗಳು, ವಾತ, ಜ್ವರ, ಇತ್ಯಾದಿ ರೋಗಗಳಿಂದ ಪೂರ್ಣ ಗುಣಹೊಂದಿದವರ ನೂರಾರು ಪತ್ರಗಳು ಬರುತ್ತಲೇ ಇವೆ. ಆದ್ದರಿಂದ ವಾನಿಂಗ್‌ಟಿಲ್ಲಿ ಜೆನ್‌ವಿನ್ ಹಾರ್ಲೆಮ್ ಆಯಿಲಿನ ಸೀಸೆಗಳನ್ನು ಕೊಂಡುಕೊಳ್ಳುವಾಗ ಮಾತ್ರ ಸೀಸೆಯ ಮೇಲಿರುವ ಈ ಟ್ರೇಡ್‌ಮಾರ್ಕ್ ಮತ್ತು Wanning Tilly Bros, ಎಂಬ ದಸ್ಕತು ನೋಡಿ ಕೊಂಡುಕೊಂಡು ಆರೋಗ್ಯ ಪಡೆಯಿರಿ.

ಕ್ರಯ ಸೀಸೆ 1ಕ್ಕೆ ರೂ. 0—8—0; ಡಜನ್ ಸೀಸೆಗಳಿಗೆ ರೂ. 6—0—0; ವಿ. ಪಿ. ಮಾಫಿ.

ನಮ್ಮ ಏಜಂಟರು:—
ಕಾರ್ಕಳ—ಮೆಸ್ಸರ್ಸ್ ಪಿ. ವಿ. ಶೆಣೈ, ಕೆಮಿಸ್ಟ್
ಪುತ್ತೂರು—ವಾಮನ ಭಂಡಾರಿ, ಕೋರ್ಟುರಸ್ತೆ
ಉಡುಪಿ—ಮೆಸ್ಸರ್ಸ್ ಮುತ್ತು ಎಂಡ್ ಸನ್ಸ್
ಕುಂದಾಪುರ—ಮೆ. ಎ. ಸಾಲಿನ್ಸ್—ಬುಕ್ ಡಿಪೋ

ಬ್ರಿಟಿಷ್, ಫ್ರೆಂಚ್, ಪೋರ್ತುಗೀಸ್ ಹಿಂದುಸ್ಥಾನದ ಸೋಲ್ ಏಜಂಟರು:—

ಎಸ್. ಇ. ಐಮನ್, ದಿ. ಎಕ್ಲಿಪ್ಸ್ ಏಜನ್ಸಿ,
ಬಲ್ಮಠ ರಸ್ತೆ, ಮಂಗಳೂರು.

ಆಯುರ್ವೇದ ಶಾಸ್ತ್ರಾನುಸಾರ

ಡಾಕ್ಟರ್ ಎಚ್. ಲಕ್ಷ್ಮೀನಾರ್ಣಪ್ಪಾ ಮತ್ತು ಸನ್ಸ್

ಇವರಿಂದ ತಯಾರಿಸಲ್ಪಟ್ಟ ಸಿದ್ಧೌಷಧಗಳು.

1. ಶತಮೂಲಿಕೆಯ ಸತ್ವವು. ಈ ಮಹೌಷಧಿಯ ಸೇವನೆಯಿಂದ ಕ್ಷಯ, ಅಸ್ಥಿಜ್ವರ, ನಿಂತು ನಿಂತು ಬರುವ ಜ್ವರ, ಬಹುಕಾಲದ ಕಫ, ರಕ್ತವಾಂತಿಯಾಗುವಿಕೆ ಹೃದಯದ ದುರ್ಬಲತೆ ಲಕ್ವರ (ಕಾಳಿದಿ), ಮೂತ್ರಕೋಶದ ವ್ಯಾಧಿಗಳು ವ ಎಲ್ಲಾ ತರದ ದುರ್ಬಲತೆಯು ನಾಶಹೊಂದಿ ಶರೀರಕ್ಕೆ ಆರೋಗ್ಯವನ್ನುಂಟುಮಾಡುವದು ಇನ್‌ಫ್ಲುಯೆಂಜಾ [illegible], ಅಶಕ್ತ ಜನರಿಗೂ, ಬತ್ತಿಬರುವ ಮಕ್ಕಳು ಹುಡುಗರಿಗೂ, ಪ್ರಸೂತರಾದ ಹೆಂಗಸರಿಗೂ, ಶಕ್ತಿ ಪುಷ್ಟಿಯನ್ನೀಯುವ ದಿವ್ಯ ಔಷಧಿಯು ಇಂಗ್ಲಿಷ ಯಾ ಬೇರೆ ಔಷಧದಿಂದ ಗುಣಹೊಂದದ ಅಸಂಖ್ಯ ರೋಗಿಗಳು ಈ ಜೀವನಾಮೃತದ ಸೇವನೆಯಿಂದ ಪೂರ್ಣ ಗುಣಹೊಂದಿ ಸಾವಿನಿಂದ ತ[illegible] ಜೀವರಕ್ಷಣೆ ಮಾಡಿಕೊಂಡಿರುವರು. ೧೬ ಔನ್ಸಿನ ಬಾಟ್ಲಿ ೧ಕ್ಕೆ ರೂ ೨—೧೨—೦ ಟ. ಖ. ವಗೈರೆ ಬೇರೆ

2. ವಿಜಯಸಂಜೀವಿನಿ ತೈಲ ಕಾಲಕ್ಕೆ ಋತುವಾಗದಿರುವುದು, ಋತುವಾಗುವಾಗ ಬಹಳ ನೋವು, ಸಂದುಗಳಲ್ಲಿ ಬೇನೆ, ಉದರ ಶೂಲೆ, ಗರ್ಭಸ್ರಾವ ಮತ್ತು ಇವಕ್ಕೆ ಸಮ್ಬಂಧಪಟ್ಟ ವ್ಯಾಧಿಗಳಿಗ ದಿವ್ಯ ಔಷಧ ಸ್ತ್ರೀಯರ ರೋಗಗಳಿಗೆ ಇದು ಮುಖ್ಯ ಔಷಧವಾಗಿರುವುದಲ್ಲದೆ, ಸ್ವಾಭಾವಿಕವಾಗಿ ಕಾಲಕಾಲಕ್ಕೆ ಋತು ಆಗುವ ಹೊಟ್ಟೆನೋವಿಗೆ ಅನುಭವಸಿದ್ಧವಾದ ಔಷಧ. ಕ್ರಯ ಸೀಸೆ ೧ಕ್ಕೆ ರೂ. ೨

3. ಕೊಲೇರಾ ಗುಳಿಗೆಗಳು ಇವನ್ನು ವಾಂತಿಭೇದಿಯ ಯಾವ ಸ್ಥಿತಿಯಲ್ಲೂ ಕೊಡಬಹುದು, ಸಕಲ ಗೃಹಗಳಲ್ಲಿಯೂ ಇದನ್ನು ಸಂಗ್ರಹಿಸಿ ಇಡತಕ್ಕದ್ದಾಗಿದೆ. ನಾಲ್ಕು ಮಾತ್ರೆಗಳೊಳಗೆ ಗುಣ ಖಂಡಿತ. ಅಜೀರ್ಣದ ರೋಗಕ್ಕೂ ಅತಿಸಾರಕ್ಕೂ ಉತ್ತಮ. ೪೮ ಗುಳಿಗೆಗಳ ಬಾಟ್ಲಿಗೆ ಕ್ರಯ ರೂ ೧—೦—೦.

4 ವಾತಾಂತಕ ದೀರ್ಘ ಕಾಲದ ಮತ್ತು ಯಾವ ತರದ ವಾತ ಪಕ್ಷವಾತ ಮುಂತಾದ ಭೀಕರ ರೋಗಗಳ ಮೇಲೆ ರಾಮಬಾಣ. ಒಂದು ಸಲ ಉಪಯೋಗಿಸುವುದರಲ್ಲಿ ಇದರ ಶ್ರೇಷ್ಠತೆಯು ಕಾಣಬರುವುದು. ಕ್ರಯ ಬಾಟ್ಲಿ ೧ಕ್ಕೆ ರೂ. ೧-೮-೦

ಈ ಔಷಧಿಗಳ ದಿವ್ಯ ಗುಣಗಳ ಬಗ್ಗೆ ಪ್ರಸಿದ್ಧ ವೈದ್ಯರಿಂದಲೂ, ಜಮೀನದಾರರಿಂದಲೂ, ದೊಡ್ಡ ದೊಡ್ಡ ಸಂಸ್ಥೆಗಳಿಂದಲೂ ಸುವರ್ಣ ಪದಕಗಳೂ, ಸರ್ಟಿಫಿಕೇಟುಗಳೂ ಸಿಕ್ಕಿರುತ್ತವೆ. ಪತ್ರವ್ಯವಹಾರವು ಇಂಗ್ಲಿಷಿನಲ್ಲಿರಬೇಕು. ಆರ್ಡರ ಕಳುಹಿಸುವಾಗ ಈ ಪತ್ರದ ಉಲ್ಲೇಖ ಮಾಡಿರಿ. ವಿಳಾಸ.—

ಡಾಕ್ಟರ್ ಎಚ್. ಲಕ್ಷ್ಮೀನಾರ್ಣಪ್ಪಾ ಮತ್ತು ಸನ್ಸ್,
ಭವಾನ್‌ಸಿಂಗ್ ಕಂಪೆನಿ ಸಮೀಪ, ತಿರುಪೂರು, (ಕೊಯಮುತ್ತೂರು ಜಿಲ್ಲೆ.)

ಅಮೃತಕಲ್ಪ ವೈದ್ಯಶಾಲಾ,

ಕಾಸರಗೋಡು.

ಆಯುರ್ವೇದ ವಿಧಿ ಪ್ರಕಾರ ತಯಾರಿಸಲ್ಪಟ್ಟ ಕಷಾಯ, ಚೂರ್ಣ, ಅವಲೇಹ, ಭಸ್ಮ, ಘೃತ, ತೈಲ, ಆಸವ ಅರಿಷ್ಟ, ದ್ರಾವಕ ಮೊದಲಾದುವುಗಳು, ಶಲ್ಯ ಚಿಕಿತ್ಸೆಗಳ ಎಲ್ಲಾ ಔಷಧಗಳೂ ಅತಿ ವಿಶೇಷವಾದ ಗುರು ಲಕ್ಷಣಾದ ಕೆಲವು ಸಿದ್ಧೌಷಧಗಳೂ ಸುಲಭವಾದ ಕ್ರಯಕ್ಕೆ ಇಲ್ಲಿ ಎಲ್ಲಾ ಸಮಯದಲ್ಲಿಯೂ ಮಾರುವರೆ ತಯಾರಿವೆ. ಔಷಧಗಳ ಗುಣವು ಒಮ್ಮೆ ಉಪಯೋಗಿಸಿದ್ದಲ್ಲಿ ತಿಳಿದು ಬರುವುದು.

ವೈದ್ಯಶಾಲೆಯ ಮಾಲಿಕರೂ ಮನೇಜರರೂ ಆದ ದಾಮೋದರ ನಂಬೀಶನು ಆದಿತ್ಯವಾರ ಹೊರತು ಮಿಕ್ಕ ಎಲ್ಲಾ ದಿವಸಗಳಲ್ಲಿಯೂ ವೈದ್ಯಶಾಲೆಗೆ ಬರುವ ರೋಗಿಗಳನ್ನು ಪ್ರತಿಫಲವಿಲ್ಲದನೇ ಪರಿಶೋಧಿಸಿ, ಚಿಕಿತ್ಸೆ ನಿಶ್ಚಯಿಸಿ ಔಷಧ ಕೊಡುವರೆ ಸಿದ್ಧರಾಗಿರುವರು. ಅಪೇಕ್ಷಿಸಿದಲ್ಲಿ ಎಲ್ಲಾ ಔಷಧಗಳನ್ನು ಜಾಗ್ರತೆಯಿಂದ ವಿಳಂಬವಿಲ್ಲದೆ, ವಿ. ಪಿ. ಮೂಲಕ ಕಳುಹಿಸಲಾಗುವುದು.

೧. ಕುಮಾರ ಶಕ್ತಿವರ್ಧಕ—

ಇದು ಮಕ್ಕಳ ಆರೋಗ್ಯಾಭಿವೃದ್ಧಿಗೆ ದಿವ್ಯ ಔಷಧ.

1 ಇದು ಶಕ್ತಿವರ್ಧಕ—ರಕ್ತ ಪುಷ್ಟಿಕಾರಿಯಾಗಿರುತ್ತದೆ ಮತ್ತು ಜ್ವರ, ಗ್ರಹಣಿ, ಕ್ರಿಮಿದೋಷ ವಗೈರೆ ಮಕ್ಕಳ ಎಲ್ಲಾ ರೋಗಗಳನ್ನು ಕೂಡಲೆ ಪರಿಹರಿಸಿ ದೇಹವನ್ನು ಪುಷ್ಟಿ ಮಾಡುತ್ತದೆ. ಇದು ರೋಗವಿಲ್ಲದ ಮಕ್ಕಳ ಆರೋಗ್ಯ ಸೌಖ್ಯಕ್ಕಾಗಿ ಉಪಯೋಗಿಸಬಹುದು—೧ ಸೀಸೆ ಇರುವ ಡಬ್ಬಿ ೧ ಕ್ರಯ ೨—೮—೦

೨ ಕೇಶ ಭೂಷಣ ತೈಲ—ಇದರಿಂದ ತಲೆ ಕೂದಲು ಪುಷ್ಟಿಯಾಗಿಯೂ, ಕಪ್ಪಾಗಿಯೂ, ಉದ್ದವಾಗಿಯೂ ಬರುತ್ತದೆ. ಮೆದುಳಿಗೆ ಅತ್ಯಂತ ಹಿತಕಾರಿಯಾಗಿರುತ್ತದೆ—೬ ಔನ್ಸಿನ ಬಾಟ್ಲಿ ೧ಕ್ಕೆ ಕ್ರಯ ೧—೮—೦

೩ ಮದನಾನಂದ ಲೇಹ್ಯ—ಇದು ಗಿಡಮೂಲಿಕೆಗಳಿಂದಲೇ ತಯ್ಯಾರಿಸಿದ್ದಾಗಿಯೂ, ಸ್ತ್ರೀ ಪುರುಷರಿಗೆ ಇದರ ಸೇವನೆಯಿಂದ ದೇಹಾಲಸ್ಯವನ್ನು ಪರಿಹರಿಸಿ ಸಂಭೋಗೇಚ್ಛೆಯನ್ನು ಆನಂದಗೊಳಿಸಿ ನಂತರದಲ್ಲಿ ಆಯಾಸವನ್ನು ಸಹ ಕಾಣದಂತೆ ಮಾಡುವದಲ್ಲದೆ ವೀರ್ಯ ಶಕ್ತಿಯನ್ನು ರಕ್ತ ಪುಷ್ಟಿಯನ್ನು ಉಂಟು ಮಾಡುತ್ತದೆ. ಕ್ರಯ ಡಬ್ಬಿ ೧ಕ್ಕೆ ರೂ. ೩—೦—೦(೧ ಶೇರು.)

೪ ನಯನಾಮೃತ—ಕಣ್ಣು ಕುರುಡುಬಿದ್ದು ದೃಷ್ಟಿ ಮಾಂದ್ಯ, ಇರುಳುಗಣ್ಣು, ಕೀವು ಬರುವುದು, ಪಿಸರ ಮುಂತಾದ ಕಣ್ಣಿನ ಎಲ್ಲಾ ತರದ ರೋಗಗಳಿಗೆ ಬಹು ಜಾಗ್ರತೆಯಾಗಿ ಗುಣಪಡಿಸುವುದು. ಅರ್ಧ ತೊಲೆಯ ಸೀಸೆ ೧ಕ್ಕೆ ಕ್ರಯ ರೂ ೧—೦—೦.

ವೈದ್ಯರ್ ವಿ. ಕೆ. ದಾಮೋದರ ನಂಬೀಶನ್
ಅಮೃತಕಲ್ಪ ವೈದ್ಯಶಾಲಾ,
ಕಾಸರಗೋಡು, ದ. ಕನ್ನಡ

NETRANAND SAREES
Cheap and Fashionable
Sarees in all brilliant colours with lustrous borders
Liberal Commission for wholesale Orders.

ಚಲೋ ಬಣ್ಣದ ಸೀರೆಗಳು! ಬಹಳ ಕಮ್ಮಿ ಕ್ರಯ!
ವಿವಿಧ ಬಣ್ಣಗಳ ಥಾಡಾಹೊಡದ "ನೇತ್ರಾನಂದ"ಕರವಾದ ಸೀರೆಗಳು ಕೆಳಗಿನ ಕಂಪೆನಿಯವರ ಹತ್ತಿರ ದೊರಕುತ್ತವೆ.
ವ್ಯಾಪಾರಸ್ಥರಿಗೆ ಒಳ್ಳೇ ಕಮಿಷನ ಸಿಕ್ಕುವದು.
ನೂಲಿನ ಕೆಂಪು (Congo Red) ಹಳದಿ ಮತ್ತು ಇತರ ಬಣ್ಣಗಳು ಕಮ್ಮಿಕ್ರಯದಲ್ಲಿ ದೊರಕುವವು.
ವಿಶೇಷ ಮಾಹಿತಿಗಳಿಗೆ ಕೆಳಗಿನ ವಿಳಾಸಕ್ಕೆ ಬರೆಯಿರಿ.

ಶ್ರೀ ಶೀತಾರಾಮವಿಠ್ಠಲ ಕಂಪೆನಿ,
ಲಾಗ್ರಿ ಇಗರ್ಜಿ ಎದುರು, ಹಂಪನಕಟ್ಟೆ ಮಂಗಳೂರು.

ಶ್ರೀಮತ್ ಕಲ್ಯಾಣ ಬಂಧುಗಳೇ!

ಈ ಕಡೆ ನೋಡಿರಿ.

ಕಲ್ಯಾಣಕಾರಕ [illegible] ಅನೇಕ ರಾಜವೈದ್ಯರುಗಳಿಂದಲೂ ಪರಿಶೋಧಿಸಿ ತಯಾರಿಸಲ್ಪಟ್ಟ ಅನುಭವ ಸಿದ್ಧೌಷಧಿಗಳು [illegible] ದೊರಿಯುವವು. ಅಪೇಕ್ಷಕರು ಕಾಗದ ಬರೆದು ತರಿಸಿಕೊಂಡರೆ ಸಮಾಧಾನವಾಗುವದು.

S. P. RAJA & Co.
Kalyanakaraka Bishagmandir.
POLALY, POST [illegible]

ಎಸ್. ಪಿ. ರಾಜಾ ಮತ್ತು ಕಂಪೆನಿ,
ಕಲ್ಯಾಣಕಾರಕ ಭಿಷಗ್ಮಂದಿರ, ಪೊಳಲಿ ಪೋಸ್ಟ, ದ. ಕ.

Printed & Published by V. S. Kamath at the Mangalore Trading Association's Sharada Press, Mangalore

ಸ್ವದೇಶಾಭಿಮಾನಿ

ಪ್ರತಿ ಶುಕ್ರವಾರವೂ ಪ್ರಕಟಿಸಲ್ಪಡುವುದು.

ಸ್ವಾರ್ಥಾಹಸ್ತುತುಮರ್ಹ ದೇವಾ । ನ ಭೇಜಿರೇ ಭೀಮವಿಷೇಣ ಭೀತಿಮ್ ॥
ಸುಧಾಂ ವಿನಾ ನ ಪ್ರಯಯುರ್ವಿರಾಮಂ । ನ ನಿಶ್ಚಿತಾರ್ಥಾದ್ವಿರಮಂತಿ ಧೀರಾಃ ॥ ೧ ॥

ದೇವಿಯರು ರತ್ನಗಳು ಸಾ- । ಗರವ ಮಥಿಸಲು ಸುರರಿಗದರಿಂ । ಹರುಷವಾಯಿತೆ । ಮತ್ತೆ ವಿಷವ ಸುಡುತ ಭಯತಿರುವ ॥
ಸರುಷವಾಗಿದರೆ । ಸುಧೆಯನು । ಮರೆತು ಕ್ಷುದ್ರರ ತೆರದಿ ಕುಳಿತರೆ । । ತೆರಳಬಲ್ಲರೆ! ತೊರೆದು ಧೀರರು ನಿಶ್ಚಿತಾರ್ಥವನು ॥ ೧ ॥

ಮಂಗಳೂರು, ಕಾರ್ತೀಕ ೨೫ನೇ ದಶಂಬರ ಶುಕ್ರವಾರ ೧೯೨೦. ಸಂಚಿಕೆ ೫೪

ನೈಟ್ರೇಟ್ ಆಫ್ ಸೋಡಾ

ಹೊಗೆಸೊಪ್ಪು, ಕಬ್ಬು, ತೆಂಗು, ಅಡಕೆ, ಮಾವು, ವೀಳ್ಯದೆಲೆ, ಬತ್ತ ಮೊದಲಾದ ಪೈರುಗಳಿಗೆ ಮತ್ತು ತೋಟಗಳಿಗೆ ಬಹಳ ಉಪಯುಕ್ತವಾದ ಗೊಬ್ಬರ.

[illegible] ಗೊಬ್ಬರವು ಬಿಳಿದು ಹರಳು (ರಾಸಾಯನಿಕ ಉಪ್ಪು), ಹಲವು ದೇಶಗಳಲ್ಲಿ ಇದರ ಉಪಯೋಗದಿಂದ ಹುಲುಸಾದ ಬೆಳೆಯನ್ನು ಪಡೆದಿರುತ್ತಾರೆ.

ಬೆಳೆಗಳಿಗೆ ಅಗತ್ಯವಿರುವ ನೈಟ್ರೊಜನ್ ಅಥವಾ ಸಾರಜನಕವು 15—16% ಅಂದರೆ ಬೇರೆ ಗೊಬ್ಬರದಲ್ಲಿ ನಕ್ಕಿಂತ ಎರಡು ಮೂರು ಪಾಲಷ್ಟು ಜಾಸ್ತಿ ದೊರೆಯುವದು. ಎಕ್ರೆಗೆ 100—200 ರಾತ್ತಲು [illegible]ಗುವದು.

ಪರಸ್ಪರ ಸಹಾಯಕ ಸಂಘಗಳು ಇದನ್ನು ಕೊಳ್ಳುವವರಿಗೆ ಒದಗಿಸಿ ಕೊಡುವದಕ್ಕೆ ಅನುಕೂಲವಾಗುವ ಹಾಗೆ ಏರ್ಪಾಡುಗಳನ್ನು ಮಾಡ [illegible]ರುತ್ತದೆ.

"ಕೃಷಿ ಸುಧಾರಣೆ" ಎಂಬ ಸಚಿತ್ರ ಪುಸ್ತಕವನ್ನು ಕನ್ನಡ ಭಾಷೆಯಲ್ಲಿ ನಮ್ಮಿಂದ ಧರ್ಮಾರ್ಥವಾಗಿ ಪಡೆಯಬಹುದು.

ದಿ ಚಿಲಿಯನ್ ನೈಟ್ರೇಟ್ ಕಮಿಟಿ,
1 ರೋಯಲ್ ಎಕ್ಸ್‌ಚೇಂಜ್ ಪ್ಲೇಸ್, ಕಲ್ಕತ್ತಾ.

The Director, Chilean Nitrate Committee,
(INDIAN DELEGATION),
1, Royal Exchange Place, CALCUTTA.

ಬೇನೆಯುಂಟಾದಾಗ ಚೇತನವು ಕಡಿಮೆಯಾಗುವುದೆಂಬುದು ಸಕಲರಿಗೂ ತಿಳಿದಿರುವ ವಿಷಯ. ಯೋಚಿಸಿ ನೋಡಿದರೆ ಬಹು ವೇಗದಿಂದ ಶಕ್ತಿಯನ್ನು ಕುಂದಿಸಿ ಬಿಡುವ ಪ್ರಾಣವು ಬೇನೆಗಲ್ಲದೆ ಮತ್ತೊಂದಕ್ಕಿರದು. ಅಂಥಾ ಬೇನೆಯನ್ನು ನಿವಾರಣೆ ಮಾಡುವುದಕ್ಕೆ ತಕ್ಕ ಔಷಧವು

ಅಮೃತಾಂಜನ

ಹೊರತು ಮತ್ತೊಂದಿಲ್ಲವೆಂಬುದು ಖಾತ್ರಿ.

ಇದನ್ನು ಉಪಯೋಗಿಸುವುದರಿಂದ ಬೇನೆಯು ಒಂದೇ ಕಡೆಯಲ್ಲಿ ನಿಲ್ಲದು. ಇದು ಯಾವ ತರದ ಶೀತವನ್ನಾದರೂ ನೋವನ್ನಾದರೂ ಗುಣಪಡಿಸುವುದು. ಬೇನೆಯನ್ನು ಉಪಶಮನ ಮಾಡುವ ವಿಶೇಷವಾದ ಲಕ್ಷಣಗಳಿಂದ ಕೂಡಿ, ತರ ತರದ ನೋವನ್ನು ಗುಣಪಡಿಸಿ ನಿವಾರಣೆ ಮಾಡುವ ದಿವ್ಯ ಔಷಧ.

ಕ್ರಯ ಡಬ್ಬಿ 1ರ 10 ಆಣೆ. ಡಜನ್ 1ಕ್ಕೆ ರೂ. 5—12—0

ಗಜಕರ್ಣದ ಮುಲಾಮು:—ಮೂರು ಸರ್ತಿ ಹಾಗಿಸುವುದರೊಳಗೆ ಗಜಕರ್ಣವು ಖಂಡಿತವಾಗಿ ನಾಶವಾಗುವುದು. ಕ್ರಯ ಡಬ್ಬಿ ಒಂದರ ರೂ. 0—6—0.

ದಂತಮಂಜನ:—ಈ ಉತ್ತಮವಾದ ದಂತಮಂಜನವನ್ನು ಉಪಯೋಗಿಸುವುದರಿಂದ ಹಲ್ಲುಗಳು ಶುಭ್ರವಾಗುತ್ತವೆ. ರಕ್ತ ಬರುವುದು ನಿಲ್ಲುತ್ತದೆ. ಹಲ್ಲುಗಳು ಗಟ್ಟಿಯಾಗುತ್ತವೆ. ಇದು ಸುವಾಸನೆಯಿಂದ ಕೂಡಿ ಉತ್ತಮವಾಗಿರುತ್ತದೆ. ಡಬ್ಬಿ ೧ರ ಆಣೆ 2.

ಅಮೃತಾಂಜನ ಡಿಪೊ,

6. 7 ತಂಬುಚೆಟ್ಟಿ ಸ್ಟ್ರೀಟ್, ಜೋರ್ಜ ಟೌನ್, ಮದ್ರಾಸು. — 109 ಫ್ರೇಯರ್ ರೋಡ್, ಮುಂಬಯಿ.

ಮಂಗಳೂರಲ್ಲಿ — ಖಿಯಾಬ್ ಮಾರ್ಟ್, ಹಂಪನಕಟ್ಟೆ. ಇವರಲ್ಲಿಯೂ ದೊರಕುವುದು.

For Sale!

THE WELL KNOWN
"MISSION" UMBRELLAS
(MADE IN ENGLAND)
Strong and well made.

Sizes	23	25	27
Prices	Rs. 6-4-0.	6—8—0.	6—12—0 each.

The Famous Acme Razors
(SWEDISH MADE)
Now available at the premar price of
Rs. 2—8—0 each.
Cheap at double the price.

[App]ly to—
The Commonwealth Stores,
(Late M. M. Branch, Mangalore).

ವಾತಕ್ಷಯ

U. B. DUTT & Co. CALICUT.

ಮಲೆಯಾಳ ದೇಶವು ಔಷಧಗಳಿಗೆ ಕೀರ್ತಿಹೊಂದಿದ ಪ್ರದೇಶವು. ಅಲ್ಲಿನ ಕಾಡುಗಳಲ್ಲಿ ಅತಿ ಪ್ರಯತ್ನದಿಂದ ವಿಶೇಷವಾದ ನಾರುಬೇರುಗಳಿಂದ ನಾವು ಅನೇಕ ಉತ್ಕೃಷ್ಟ ಔಷಧಗಳನ್ನು ನಿರ್ಮಿಸಿ, ಅನೇಕ ಕಾಲದಿಂದ ಉಪಯೋಗಿಸುತ್ತಿದ್ದೇವೆ. ಇದಕ್ಕೆ ಪ್ರತಿಫಲವಾಗಿ, ಅನೇಕಾನೇಕರು ಅವುಗಳಿಂದ ಗುಣಹೊಂದಿರುವುದಲ್ಲದೆ, ನಮಗೆ ಪ್ರತಿನಿತ್ಯವೂ "ಆರ್ಡರ್‌ಗಳು" ಬರುತ್ತಲಿವೆ. ಈ ಥಾನದಲ್ಲಿ, ಗುಣಹೊಂದಿದವರಿಂದ ನಮಗೆ ಬಂದಿರುವ ಕಾಗದಗಳೂ, ಯೋಗ್ಯತಾಪತ್ರಗಳೂ ಹೇರಳವಾಗಿವೆ.

ಅಂಥಾ ಉತ್ಕೃಷ್ಟ ಔಷಧಗಳಲ್ಲಿ ನಮ್ಮ "ವಾತಕ್ಷಯವು" ಎಲ್ಲಾ ವಿಧದ ವಾತಗಳನ್ನು ಗುಣಪಡಿಸುತ್ತದೆ. ಗಂಟುಗಳಲ್ಲಿರುವ ನೋವು, ಅವಯವಗಳಲ್ಲಿ ಉರಿಯುವ ಸ್ವಭಾವ, ಗಂಟು, ಸಂಧು, ಅವಯವ, ಅಂಗಾಂಗ ಮೊದಲಾದವು ಕೆಂಪಾಗಿ ನೋವುಂಟಾಗುವುದು; ನಡೆಯಲು ಆಗದೆ ಇರುವುದು, ಕೈಕಾಲು ಅಲ್ಲಾಡಿಸುವಾಗ ವಿಪರೀತ ನೋವಾಗುವುದು; ಮೂತ್ರದಲ್ಲಿ ದೋಷವಿರುವುದು; ಇತ್ಯಾದಿಗಳಲ್ಲಿ ಯಾವುದಾದರೂ ಒಂದು ನಿಮ್ಮಲ್ಲಿಯಾಗಲೀ ನಿಮ್ಮ ಸ್ನೇಹಿತರಲ್ಲಿಯಾಗಲೀ ಕಾಣಿಸಿಕೊಂಡರೆ, ಕೂಡಲೇ ನಮ್ಮ "ಕಷಾಯ"ವನ್ನು ತೆಗೆದುಕೊಳ್ಳಲು ಪ್ರಾರಂಭಿಸಬೇಕು. ಅದನ್ನು ಕ್ರಮವಾಗಿ ಸೇವಿಸುವುದರಿಂದ ನಿಮ್ಮ ರೋಗವು ಸಂಪೂರ್ಣ ಗುಣಹೊಂದುವುದರಲ್ಲಿ ಯಾವ ಸಂಶಯವೂ ಇಲ್ಲ. ಇದಲ್ಲದೆ ಪಿತ್ತ, ವಾತ, ಕಫ, ಅಜೀರ್ಣ, ಕೆಮ್ಮು, ಜ್ವರ, ತಲೆನೋವು, ಧಾತುಪುಷ್ಟಿ, ಹಲ್ಲುನೋವು, ಕಿವಿನೋವು, ಅತಿಶಂಕೆ, ಮೊದಲಾದವುಗಳಿಗೂ ದಿವ್ಯೌಷಧಗಳಿವೆ. "ಕ್ಯಾಟಲಾಗ್"ನ್ನು ನೋಡಿ.

ಕ್ರಯ ರೂ. 4—4—0.

ಯು. ಬಿ. ದತ್ತ ಕಂಪೆನಿ,
ಕಲ್ಲಿಕೋಟೆ ಮಲಬಾರ.

ವಿಕ್ರಯಕ್ಕೆ ಇಟ್ಟಿವೆ!

[illegible]ದಲ್ಲಿ ತಯಾರಾಗಿ "ಮಿಶ್ಶನ್ ಕೊಡೆಗಳು" ಎಂದು ಹೆಸರುವಾಸಿಯಾಗಿರುವ

ಬಲವಾದ ಕೊಡೆಗಳು.

ಅಳತೆ	23 ಇಂಚು ಉದ್ದ	25 ಇಂಚು	27 ಇಂಚು
ಬೆಲೆ	ರೂ. 6-4-0.	ರೂ. 6-8-0.	ರೂ. 6-12-0.

ಪ್ರಖ್ಯಾತ ಎಕ್ಮೆ ಕ್ಷೌರಕತ್ತಿಗಳು.

(ಸ್ವೀಡನ್ನಿನಲ್ಲಿ ತಯಾರಾದವುಗಳು)

ಯುದ್ಧದ ಹಿಂದಿನ ಕಾಲದ ಧಾರಣೆಯಲ್ಲಿಯೇ ಮಾರಾಟಕ್ಕೆ ಇಟ್ಟಿವೆ! ಬೆಲೆ ರೂ. 2—8—0 ಮಾತ್ರ! ಇದಕ್ಕಿಂತ ಇಮ್ಮಡಿ ಬೆಲೆ ಕೊಟ್ಟರೂ ಅಗ್ಗವೆಂತಲೇ ಹೇಳುವಷ್ಟು ಒಳ್ಳೇ ಮಾಲು!

[illegible] ಬರೆಯಬೇಕಾದ ವಿಳಾಸ:—

ದಿ. ಕೋಮನ್‌ವೆಲ್ತ್ ಸ್ಟೋರ್ಸ್,
(ಮೊದಲು ಮಂಗಳೂರಿನ ಎಮ್. ಎಮ್. ಬ್ರಾಂಚ್).

"1921ನೇ ಇಸವಿಯ"

ಪೊಕೆಟ್ ಡೈರಿಗಳು

ದೊಡ್ಡ ಸೈಜು 0—14—0.
ಸಣ್ಣ ಸೈಜು 0— 8 —0.

ಶಾರದಾ ಛಾಪಖಾನೆ,
ಮಂಗಳೂರು.

ಹೊಸ ನಾಟಕ! ಐತಿಹಾಸಿಕ ಹೊಸ ನಾಟಕ!

ಕೇತುಭಂಗ.

ಇಂಗ್ಲೀಷ್ ಭಾಷೆಯಲ್ಲಿ ಪ್ರಸಿದ್ಧ [illegible] ಆಧಾರದ ಮೇಲೆ ವಿಜಯನಗರದೊಳಗಿನ ಒಂದು ಐತಿಹಾಸಿಕ ಪ್ರಸಂಗವನ್ನು ತೆಗೆದುಕೊಂಡು ಈ ನಾಟಕವು ಬರೆಯಲ್ಪಟ್ಟಿದೆ. ಇದರಲ್ಲಿ [illegible] ಪ್ರೀತಿ [illegible] ವಿಶೋಚಿತವಾದ ಉದಾರವೃತ್ತಿ [illegible] ಮುಂತಾದ ಗುಣಗಳು [illegible] ಪ್ರತಿಬಿಂಬಿತವಾಗಿವೆಯಲ್ಲದೆ [illegible]

ವಿಳಾಸ:— ಶಾರದಾ ಛಾಪಖಾನೆ, ರಥಬೀದಿ ಮಂಗಳೂರು, ದ. ಕನ್ನಡ.

Come! See! & Try!

P. Narayana Vaijappa Bhandary & Co.,

Cloth Merchants,
Car Street, MANGALORE.

ಮದುವೆ ಉಪನಯನಗಳ, ಹಬ್ಬ ಉತ್ಸವಗಳ ಕಾಲದಲ್ಲಿ ಮತ್ತು ನಿತ್ಯದಲ್ಲಿ ಉಪಯೋಗಕ್ಕೆ ಬೇಕಾದಂಥಾ ಸೀರೆಗಳು, ರವಕೆ ಕಣಗಳು, ಧೋತ್ರಗಳು, ನಾನಾ ಬಗೆಯ ಅಂಗೀ ವಸ್ತ್ರಗಳು, ಧೋತಿಗಳು, ಟೋಪಿಗಳು ಇತ್ಯಾದಿ ಉಡುಪುತೊಡುಪುಗಳಿಂದ ನಮ್ಮ ಮಳಿಗೆಯನ್ನು ತುಂಬಿಸಿರುತ್ತೇವೆ.

[illegible]ರಖಂ ವ್ಯಾಪಾರಸ್ಥರಿಗೆ ವಿಶೇಷವಾದ ಸುಲಭ ದರಗಳು. ನಗದಿ ಗಿರಾಕಿಗಳಿಗೆ ಡಿಸ್ಕೌಂಟು ಕೊಡೋಣಾಗುತ್ತದೆ.

ಪ. ನಾರಾಯಣ ವೈಜಪ್ಪ ಭಂಡಾರಿ ಮತ್ತು ಕಂಪೆನಿ,
ರಥಬೀದಿ, ಮಂಗಳೂರು.

HAARLEM OIL.

—CLAES TILLY

Avoid Imitations—Write or call for the papers dealing with the history of origin HAARLEM OIL.

Available only for:— **The Bombay Stores,** Mangalore,

Sole distributors for India, Burma and Ceylon.

ಲೋಕ ಪ್ರಸಿದ್ಧವಾದ

ಚೊಕ್ಕ ಹಾರ್ಲೆಮ್ ತೈಲ ಕಲ್ಪಕನಾದ ಕ್ಲಸ್ ಟಿಲ್ಲಿಯ ಜನ್ಯನನ್ ಯಾನೆ ತಾಜಾ ಹಾರ್ಲೆಮ್ ತೈಲವು.

ಕೃತ್ರಿಮ ಹಾರ್ಲೆಮ್ ತೈಲವನ್ನು ... ಮೂಲ ಶೋಧಕನಾದ ಕ್ಲಸ್ ಟಿಲ್ಲಿಯ ಹಾರ್ಲೆಮ್ ತೈಲ ಯಾವುದು? ಎಂಬುದನ್ನು ತಿಳಿಯಬಯಸುವ ಪತ್ರಗಳನ್ನು ...

ದೊರಕುವ ವಿಳಾಸ:— **ದಿ. ಬೊಂಬೇ ಸ್ಟೋರ್ಸ್,** ಮಂಗಳೂರು. (ದ. ಕನ್ನಡ)

ಪುತ್ತೂರಿನಲ್ಲಿ: ಬೆಳ್ಳಾರೆ ನರಸಿಂಹ ಮಲ್ಯ,

ಇಂಡಿಯಾ, ಬರ್ಮಾ ಮತ್ತು ಸೀಲೋನ ಪ್ರಾಂತ್ಯಗಳಲ್ಲಿ ಕ್ಲಸ್ ಟಿಲ್ಲಿಯ ತಾಜಾ ಹಾರ್ಲೆಮ ತೈಲವನ್ನು ಮಾರಾಟ ಮಾಡಲು ಸಂಪೂರ್ಣ ಸ್ವತಂತ್ರ ಏಕಸ್ವಾಮ್ಯ ಹಕ್ಕುದಾರರು.

ಆರೋಗ್ಯ ಅಂದರೇ ಸೌಖ್ಯ

ಇದನ್ನು

ಯಾವ ರೀತಿಯಿಂದ ಸಂಪಾದಿಸುವದು ತಮಗೆ ನಾವು

ಹಾದಿಯನ್ನು ತೋರಿಸುವೆವು

ಇದು

ಪ್ರಸಿದ್ಧವಾದ ಆತಂಕನಿಗ್ರಹ ಗುಳಿಗೆಗಳನ್ನು ಉಪಯೋಗಿಸುವದರಿಂದ ಅಮೃತದ ಹಾಗೆ ಉತ್ತಮ ಶರೀರಸೌಖ್ಯವನ್ನುಂಟು

ಮಾಡುವದು. ಕ್ರಯ ೧ ರೂಪಾಯಿ

ಅಲ್ಲದೇ

ಶಾಶ್ವತವಾಗಿ ಸುಖ ಅನುಭವಿಸುವದನ್ನು ಬೋಧಿಸುವ

ಕಾಮಶಾಸ್ತ್ರ.

ಅಂಚೆಯ ಹಾಸಲು ಸಹಾ ಇಲ್ಲದೆ ಕಳುಹಿಸುವೆವು. ಈ ದಿನವೇ ಬರೆಯಿರಿ.

ವಿಳಾಸ:—

ವೈದ್ಯಶಾಸ್ತ್ರಿ ಮಣಿಶಂಕರ ಗೋವಿಂದಜೀ,

ಆತಂಕನಿಗ್ರಹ ಔಷಧಾಲಯ, 26, ಜಾಮ್ನಗರ, ಮದರಾಸು.

Local Agents: **Raphael & Co.,**

Brito Buildings,

Hampankatta, MANGALORE.

ನೋಟೀಸು.

ಕುಂದಾಪುರ ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟಿನಲ್ಲಿ.

ಸ್ಮಾಲಿಕಾಸ್ ನಂ. $\frac{481}{1920}$.

ಕೋಟ ಸನ್ಯಯ ಹೆಂಡೆ—ವಾದಿ.

ಕಕ್ಕುಂಜೆ ಮಂಜಪ್ಪ ಅಡಿಗ—ಪ್ರತಿವಾದಿ.

ಪ್ರತಿವಾದಿಯು ವಾದಿಯ ಮಳಗಿಯಲ್ಲಿ ತಾ. 16-5-17ರಲ್ಲಿ ಪಡಕೊಂಡ ಜವಳಿ ಕ್ರಯ ರೂ. 26-2-0. ಬಡ್ಡಿ ರೂ. 8-4-0, ಸಹ ರೂ. 34—6—0 ಬರಮಾಡಿಕೊಳ್ಳಲಿಕ್ಕೆ ವಾದಿಯು ಸದರಿ ವ್ಯಾಜ್ಯ ಮಾಡಿದ್ದಾರೆ. ಅದು ತಾರೀಕು 24—1—'21ಕ್ಕೆ ತನಿಖೆಗೆ ಇಟ್ಟಿರುತ್ತದೆ.

ಕುಂದಾಪುರ, ತಾ. 24-12-'20.

N. Subbannaya,
Pleader for plaintiff.

ನೋಟೀಸು.

... ತಿಮ್ಮಪ್ಪೈಯು ... ಕಾಣಿಸಿದವರು ... ಇರುವುದರಿಂದ ಅವನ್ನು ... ಸುಬ್ರಾಯ ಪೈಗಳವರ ಮನೆ ... 31—1—1921ನೇ ಸೋಮವಾರ ಬಹಿರಂಗವಾಗಿ ... ವಾದ ಸಾವಿಗೆ ಸದರಿಯವರ ಮನೆ ...

ತಾ. 30—12—16ರಲ್ಲು ಕಣಂಬೂರು ಕಸಬೆಯಲ್ಲಿರುವ ... ಕಂಟ್ರಾಕ್ಟರ ಹನೀಫ ಸಾಹೇಬರ ಮಗ ಮೊಯಾ ಸಾಹೇಬರು ರೂ. 30ಕ್ಕೆ ಸರಪಣಿ ಕೂಡಿಕಳಸ ಮುಗುಳು ಜೋಡು 1, ಕರ್ಣಫೂಲ ಜೋಡು 1, ಕೈಬಳೆ ಜೋಡು 1, ಒಟ್ಟು ಅಂದಾಜು ತೂಕ 7. ಈ ಪೈಕಿ ಬಂದದ್ದು ರೂ. 5.

ತಾ. 29—5—17ಕ್ಕೆ ಮಂಗಳೂರು ... ದಲ್ಲಿರುವ ... ಅಳಿಯ ಬಿ. ... ಚಿನ್ನದ ಬಾಬ್ತು ಕಿವಿಯ ಸರಪಣಿ ಜೋಡು 1, ಕುತ್ತಿಗೆ ಸಿಂಗಾರ ಕರಿಮಣಿ 1, ಒಟ್ಟು ಅಂದಾಜು ತೂಕ ... ಬೆಳ್ಳಿಯ ಬಾಬ್ತು ಕಾಲಿನ ಜಂಟಿರಿ ಜೋಡು 1, ಗೆಜ್ಜೆ ಜೋಡು 1, ಸರಪಣಿ ಜೋಡು ೧, ಗಗ್ಗರಿ ಜೋಡು 1, ಅಂದಾಜು ಸೇರು 1½. ಈ ಪೈಕಿ ಬಂದ ರೂ. 5—0—0.

ತಾ. 11—3—1918ರಲ್ಲು ಕಣಂಬೂರು ಕಸಬೆಯಲ್ಲಿರುವ ಲೋಕಲ್ ಫಂಡ ಕಂಟ್ರಾಕ್ಟರ ಹನೀಫ ಸಾಹೇಬರ ಮಗ ಮೊಯಾ ಸಾಹೇಬರು ರೂ. 60ಕ್ಕೆ ಚಿನ್ನದ ದಂಡಿಗಳು 28, ಅಂದಾಜು ತೂಕ 10.

ತಾ. 20—8—1919ರಲ್ಲು ಬಾಳೆಪುಣಿ ಮಾಗಣೆ ನರಿಂಗಣ ಗ್ರಾಮದ ಮೊರ್ಲ-ಐತಾಳ್ವರ ಮೊಮ್ಮಗ ಐತಪ್ಪ ಶೆಟ್ಟಿ ಸೇಕಡಾ 12½ ದರದ ಬಡ್ಡಿಯಲ್ಲಿ ಪಟ್ಟಿ ಬರಕೊಟ್ಟು ಪಡಕೊಂಡ ರೂ. 110 ಹೂಕ್ ಕೂಡಿರುವ ಚಕ್ರಸರ ನಮೂನೆ ವಾಡು ಚೈನು ಅಂದಾಜು ತೊಲೆ 5½.

ಮಂಗಳೂರು, ತಾ. 30—12—'20

ಮಿಜಾರ ತಿಮ್ಮ ಪೈ.

ಶ್ರೀ ಶಂಕರಕರ್ನಾಟಕ ಪುಸ್ತಕ ಭಂಡಾರ,

ಮಾಳಮಡ್ಡಿ ಧಾರವಾಡ.

ನಮ್ಮಲ್ಲಿ ೧೬೦೦ ಕಂಡ ಬೇರೆ ಬೇರೆ ಪುಸ್ತಕಗಳು ಅಗ್ಗವಾಗಿ ದೊರೆಯುತ್ತವೆ. ಮಾದರಿಗಾಗಿ ಕೆಲಪುಸ್ತಕಗಳನ್ನು ಬರೆಯುತ್ತೇವೆ:—

೧.	ಟಿಳಕರ ಗೀತಾರಹಸ್ಯ	ರೂ. ೩-೦-೦
೨.	ಕರ್ನಾಟಕ ಕವಿಚರಿತೆ ಸಂಪುಟ ೧.	,, ೩-೦-೦
೩.	,, ,, ೨.	,, ೫-೦-೦
೪.	ಬೂಕರ ಟಿ. ವಾಸಿಂಗ್ಟನ್	,, ೧-೨-೦
೫.	ತತ್ವಮಣಿದರ್ಪಣ (ಪರಿಷತ್ತು).	,, ೨-೧೧-೦
೬.	ಮಹಾರಾಣಿ ಲಕ್ಷ್ಮೀಬಾಯಿ ಝಾನ್ಸಿ	,, ೨-೧-೦
೭.	ಕರ್ಮವೀರ ಮಹಾತ್ಮಾಗಾಂಧಿ.	,, ೧-೬-೦
೮.	ಚಂದ್ರಾವಳೀ ವಿಲಾಸ	,, ೦-೮-೦
೯.	ಮಹಾತ್ಮಾ ಗಾಂಧಿಯವರ ಹಿಂದ ಸ್ವರಾಜ್ಯ	,, ೦-೮-೦
೧೦.	ಹೆಂಡತಿಯ ಕರ್ತವ್ಯ	,, ೦-೮-೦
೧೧.	ಹಗಲುಗನಸು	,, ೦-೮-೦
೧೨.	ಅಕ್ಬರ ಚರಿತ್ರ (ಸಚಿತ್ರ)	,, ೧-೦-೦

ಶ್ರೀ ರಾ. ದೇಶಪಾಂಡೆ ಬಿ. ಎಸ್. ಸಿ.

ವ್ಯವಸ್ಥಾಪಕ.

ಪುಸ್ತಕಗಳು.

ವಿಶ್ವವೃಕ್ಷ ೧—೫—೦, ಸುಭದ್ರೆ ೦—೬—೦, ರಾಮಾಯಣ ಸಂಗ್ರಹ ಬಾಲಕಾಂಡ ೦—೬—೬, ಶ್ಯಾಮಸುಬ್ಬ ೦—೧೦—೦, ಚಿಕ್ಕ ಉಪಾಧ್ಯಾಯರ ಕುಶಸಪ್ತತಿ ೩—೦—೦, ಅಮಲೆ ೦—೧೨—೦, ಸಚಿತ್ರ ಆಂಗ್ಲ ಭಾಷಾ ಪ್ರಕಾಶಿಕಾ ಮೂರು ಭಾಗಗಳುಳ್ಳದ್ದು ೩—೮—೦.

ತೆಲುಗು ಅಕ್ಷರದ ಸಂಗೀತ ಪುಸ್ತಕಗಳು.

ಸಂಗೀತ ಪ್ರದಾಯಿನಿ ೩—೩—೦, ಗಾಂಧರ್ವಕಲ್ಪವಲ್ಲಿ ೩—೦—೦, ಸಂಗೀತ ಕೃತಿದರ್ಪಣ ಪ್ರಥಮ ಭಾಗ ೨—೨—೦, ಎರಡನೇ ಭಾಗ ೨—೩—೦, ಸಂಗೀತ ಸ್ವರ ಪ್ರಸ್ತಾರಸಾಗರ ೫—೮—೦. ಅಂಚೆ ಖರ್ಚು ಅಧಿಕ.

ವಿಳಾಸ:— ಎಚ್. ಎಸ್. ರಾವ್, ಬ್ರದರ್ಸ್

ಚಿಕ್ಕಪೇಟೆ, ಬೆಂಗಳೂರು ಸಿಟಿ.

ನಿಮ್ಮ ಚರ್ಮವನ್ನು ವಿಧವು ಮಾಡುವದು

ನಿಮ್ಮ ಚರ್ಮಕ್ಕೆ ಸೌಂದರ್ಯವನ್ನು ... ಅಲಂಕಾರವನ್ನು ಕೊಡುವದಕ್ಕೆ

"ಹಾಜಿಲೀನ್ ಸ್ನೋ"

(ಟ್ರೇಡ್ ಮಾರ್ಕ)

"'Hazeline' Snow"

(Trade Mark)

"ಹಾಜಿಲೀನ್ ಸ್ನೋ" ಚರ್ಮದ ಸೀಳುವ ಬಿರುಕನ್ನು ... ನಿಂದ ನಿಜವಾದ ಸೌಂದರ್ಯವನ್ನು ಕೊಡುವದು ಅದರಲ್ಲಿ ಯಾವ ವಿಧವಾದ ಕೊಬ್ಬು ಇಲ್ಲ ಅದಕಾರಣ ಅದನ್ನು ಯಾವಕಾಲದಲ್ಲಿಯು ಪ್ರಶಸ್ತವಾಗಿ ಉಪಯೋಗಿಸಬಹುದು

ಇದು ಕಂಚಿನ ಪಾತ್ರೆಗಳಲ್ಲಿ ಕೆಮಿಸ್ಟ ಮತ್ತು ಉಗ್ರಾಣದ ಮನೆಯವರಿಂದಲ್ಲು ಮಾರಲ್ಪಡುವದು.

ಬರ್ರೋಸ ವೆಲ್‌ಕಂ ಅಂಡ್ ಕೋ ಲಂಡನ್ ಅಂಡ್ ಬಂಬಾಯಿ.

Burroughs Wellcome & Co., London and Bombay

CAN. 3 All Rights Reserved

Jobwork in Typewriting
WILL BE UNDERTAKEN
AT THE
Sharada Press, Mangalore.

ಎಲ್ಲಾ ಬಗೆಯ ಟೈಪ್‌ರೈಟಿಂಗ್ ಕೆಲಸ

ಶಾರದಾ ಛಾಪಖಾನೆಯಲ್ಲಿ

ಸುಲಭವಾದ ದರಗಳಲ್ಲಿ ಮಾಡಲ್ಪಡುತ್ತದೆ.

ಕ್ರಯ ಗಡಿಯಾರ 1ಕ್ಕೆ ರೂ. 4—8—0



ಜಗತ್ಪ್ರಸಿದ್ಧವಾದ ಅನೇಕ ರೋಗಗಳಿಗೆ ಒಂದೇ ಔಷಧವು.

ಇಂಡಿಯಾ ಸರಕಾರದಲ್ಲಿ ಸನ್ ೧೯೧೭ನೇ ಇಸವಿಯ ಆಕ್ಟನೇ ಆಕ್ಟಿನಂತೆ ರಿಜಿಸ್ಟರ ಮಾಡಲ್ಪಟ್ಟಿ

ಗೊತ್ತೇ ಇಲ್ಲವೋ ಕಳೆದ ೩೦ ವರುಷಗಳಿಂದಲೂ, ವಂಶ ಪಾರಂಪರ್ಯದಿಂದ ನಡೆದು ಬರುತ್ತಿರುವ ಖಾಂದೇಶದ ಮಹಾರಾಜರ ಖಾಸಾ ವೈದ್ಯರಾದ ರಾಜವೈದ್ಯ ನಾರಾಯಣ್ಜೀ ಕೇಶವಜೀಯವರ ಲೋಕ ಪ್ರಸಿದ್ಧಿಯಾದ

ಮದನ ಮಂಜರಿ ಮಾತ್ರೆಗಳು

ಈ ಮಾತ್ರೆಗಳನ್ನು ಸೇವಿಸುವುದರಿಂದ ಧಾತುಪುಷ್ಟಿ ರಕ್ತಪುಷ್ಟಿಯನ್ನೂ ಬೇಗನೆ ಕೊಡುವುದು ಮತ್ತು ಧಾತುವು ಹೋಗುತಿದ್ದರೂ, ಹಸಿವಿಲ್ಲದಿದ್ದರೂ, ಕಾಲಕಾಲಕ್ಕೆ ಮಲವಿಸರ್ಜನೆಯಾಗದಿದ್ದರೂ, ಕೈ, ಕಾಲು ಸೊಂಟದಲ್ಲಿ ನೋವಿದ್ದರೂ ಗುಣಮಾಡುವುದು ಈ ಮಾತ್ರೆಗಳನ್ನು ವನಸ್ಪತಿ ಮೂಲಿಕೆಗಳಿಂದ ತಯಾರಿಸಿದ್ದಾಗಿದೆ.

ವಿಳಾಸ— ಕ್ರಯ ಡಬ್ಬಿಗೆ ೧—೦—೦

ರಾಜವೈದ್ಯ ನಾರಾಯಣಜೀ, ಕೇಶವಜೀ,
27 ಜೈನ ಬಜಾರು ರೋಡ್
ಮದರಾಸು

ರೇಡಿಯಂ ... ವಾಚ್.

ಈ ಗಡಿಯಾರವು ಅಮೇರಿಕಾ ದೇಶದಲ್ಲಿ ತಯಾರಾದದ್ದು. ಇತರ ಗಡಿಯಾರಗಳಲ್ಲಿ ರಾತ್ರಿ ವೇಳೆ ಟೈಂ ನೋಡಬೇಕಾದರೆ ಬೆಳಕು ಅವಶ್ಯಕವಾಗಿ ಬೇಕು ಆದರೆ ಈ ಗಡಿಯಾರಗಳಿಗೆ ಬೆಳಕು ಬೇಕಾಗಿಲ್ಲ. ಎಷ್ಟು ಕತ್ತಲಾಗಿರುತ್ತೋ ಅಷ್ಟು ಚೆನ್ನಾಗಿ ಸೂರ್ಯನಂತೆ ಪ್ರಕಾಶಮಾನವಾಗಿ ಟೈಂ ತೋರಿಸುವವು. ಹಗಲು ವೇಳೆ ಇತರ ಗಡಿಯಾರಗಳಂತೆಯೇ ಇರುವವು. ನಮ್ಮಲ್ಲಿ ಕೆಲವೆ ಮಾತ್ರ ಇರುವದರಿಂದ ಬೇಕಾದವರು ಬೇಗನೆ ಬರೆಯಿರಿ ಕೈಗೆ ಕಟ್ಟುವ ಇಂಗ್ಲೀಷು ಪಟ್ಟಿ ಸಹಿತ ಗಡಿಯಾರ 1ಕ್ಕೆ ರೂ. 6-8-0

ವಿಳಾಸ:— ಎಸ್. ಪಾಲ್ ಆಂಡ್ ಕೋ,
ಪೋಸ್ಟ್ ಬಾಕ್ಸ್ ನಂ. 642
ಪಾರ್ಕ್‌ಟೌನ್, ಮದರಾಸು

ಮದ್ರಾಸ್ ಸರಕಾರದವರಿಂದ 1920ನೇ ವರ್ಷದ ಪರೀಕ್ಷೆಗಳಿಗೆ ನೇಮಿಸಲ್ಪಟ್ಟಿರುವ

ಕನ್ನಡ ಪಾಠಪುಸ್ತಕಗಳು

	ರೂ	ಆ	ಪೈ		ರೂ	ಆ	ಪೈ
ರಾಮಾಯಣ ಸಂಗ್ರಹ— ಬಾಲಕಾಂಡ.	0	6	0	ಚಂದ್ರಹಾಸ	0	2	0
ಸುಭದ್ರೆ	0	6	0	ಗುಣಾರೂಪಣೆ	0	6	0
ಪಂಪಾಖ್ಯಾ	0	12	0	ನೀತಿಚಿಂತಾಮಣಿ ಭಾಗ I	0	4	0
ಪದ್ಯಸಾರ ಭಾಗ I	0	8	0	„ „ II	0	3	0
ಅಕ್ಬರ್ ಚರಿತ್ರೆ	1	1	0	„ „ III	0	4	6
ರಾಜಶೇಖರ ಚರಿತ್ರೆ	1	0	0	ಹೊಸ ಪುಸ್ತಕಗಳು			
ಕುಮುದಿನೀ ಕುಮಾರ ಚರಿತ್ರೆ I	0	8	6	ವಿಷವಲ್ಲರಿ	0	6	0
				ಸುಶೀಲ	0	1	6
ಅಧಿಕಾರಿಗಳ ಪುಸ್ತಕ	0	6	0	ಚಂದ್ರಮುಖಿ	0	8	0
ಸಾವಿತ್ರೀ ಚರಿತ್ರೆ	0	2	3	ಸಂತಾಪಕ	0	6	0
ರಮಾನಂದ	0	11	0	ಅಬಲಾಸಚ್ಚರಿತ್ರ ರತ್ನಮಾಲೆ	2	0	0
ಸುವ್ರತ	0	13	0	ನಿರ್ಮಲೆ	0	12	0
ಪ್ರಬಂಧಮಂಜರಿ	0	14	0	ಪದತ್ರಯ (ಬಾಲವ್ಯಾಕರಣ)	0	3	6
ಪದಾರ್ಥವಿಜ್ಞಾನಶಾಸ್ತ್ರ	0	14	0	ಹಿಂದೂ ವ್ರತವಿವೇಕ	0	1	0
ಜ್ಯೋತಿಶ್ಶಾಸ್ತ್ರ	1	0	0	ಪದ್ಮಿನಿ	0	12	6
ಪ್ರಹ್ಲಾದ	0	2	0	ದಾಕ್ಷಾಯಣಿ	0	8	
ಧ್ರುವ	0	4	0	ಮಹಾರಾಣಿ ಲಕ್ಷ್ಮೀಬಾಯಿ	0	12	

ಇತ್ಯಾದಿ ಎಲ್ಲಾ ಸ್ಕೂಲ್ ಪುಸ್ತಕಗಳೂ ನಮ್ಮಲ್ಲಿ ಸುಲಭ ಬೆಲೆಗೆ ದೊರೆಯುತ್ತವೆ

ಎಂ. ಎಸ್. ರಾವ್ ಕಂಪೆನಿ,
ಪುಸ್ತಕವ್ಯಾಪಾರಿಗಳು, ಬೆಂಗಳೂರು ಸಿಟಿ

ಅರ್ಕಶಫಾ ಅಥವಾ ಆರೋಗ್ಯಬಿಂದು.

ಈ ಅರ್ಕಶಫಾ ಎಂಬ ಔಷಧವು ಯಾವತ್ತು ರೋಗಕ್ಕೆ ಮನವರಿಕೆಯಾಗಿ ಸಾ ೧೯೦೮ನೇ ಇಸವಿಯಿಂದ ಸಾ ೧೯೧೯ನೇ ಇಸವಿಯವರೆಗೆ ಮೂವತ್ತು ಸಾವಿರ ಬಾಟಲಿಗಳು ಖರ್ಚಾದವು ಮತ್ತು ಸನ್ ೧೯೧೮ನೇ ಇಸವಿ ಅಕ್ಟೋಬರ್ ತಿಂಗಳಲ್ಲಿ ಇನ್‌ಫ್ಲುಯಂಜಾ ಜ್ವರಕ್ಕೆ ಒಂದೇ ತಿಂಗಳಲ್ಲಿ ಒಂಭತ್ತು ಸಾವಿರ ಬಾಟಲಿಗಳು ಖರ್ಚಾದವು ಅಂತು ಈವತ್ತಿನ ವರೆಗೆ ಸಣ್ಣ ದೊಡ್ಡ ಬಾಟಲಿಗಳು ಕೂಡಿ ಮೂವತ್ತೊಂಭತ್ತು ಸಾವಿರ ಬಾಟಲಿಗಳು ಖರ್ಚಾದವು ಅಂದ ಮೇಲೆ ಈ ಔಷಧವು ಎಷ್ಟು ಮೌಲ್ಯವಾನ ಅದೆ ಇದು ಯಾವತ್ತರು ತಾವೇ ಅನುಭವಕ್ಕೆ ತಂದು ಪ್ರತಿಯೊಬ್ಬರು ತಮ್ಮ ಸಂಗ್ರಹದಲ್ಲಿ ಒಂದು ಬಾಟ್ಲಿ ಇಟ್ಟುಕೊಂಡು ಅವ್ಯಶವೇ ಎಂದು ತಿಳಿದು ಸ್ವೀಕಾರಮಾಡುತ್ತಿರಬೇಕು ಈ ಆರೋಗ್ಯಬಿಂದ ಇಡೀ ಕರ್ನಾಟಕ ದೇಶಕ್ಕೆಲ್ಲಾ ಹೋಗಿ ರೋಗಿಗಳು ಈ ಅರ್ಕಶಫಾದಿಂದಲೇ ಗುಣಹೊಂದಿದ ಬಗ್ಗೆ ಮತ್ತು ಯಾವತ್ತು ರೋಗಕ್ಕೆ ಉಪಯೋಗ ಆದಪ್ಪಯುಕ್ತ ಎಷ್ಟೋ ಇನಾಮು ಸರ್ಟಿಫಿಕೇಟುಗಳು ಸಹ ದೊರಿಧಿರುತ್ತವೆ ಅವು ಬರೆಯಲಿಕ್ಕೆ ಕಾಗದವು ಸಾಲದು ಇಂಥ ಅಮೂಲ್ಯವಾದ ಈ ಔಷಧವನ್ನು ಎಲ್ಲರೂ ಸ್ವೀಕರಿಸಿ ರೋಗರಹಿತರಾಗುವರೆಂದು ನಂಬುತ್ತೇನೆ ರೋಗದ ಪರೀಕ್ಷೆಯು ಸಲುವಾಗಿ ಬೇರೆ ಡಾಕ್ಟರರ ಮತ್ತು ವೈದ್ಯರ ದರಾರ ಬೀಳ ಧಿಲ ಅಂದ ಮೇಲೆ ಈ ಆರೋಗ್ಯಬಿಂದುವಿನ ಮೇಲೆ ರಾರ್ಲ ... ವನ್ನು ಕೆಳಗೆ ಬರೆದ ರೋಗಗಳ ಮೇಲೆ ಉಪಯೋಗಮಾಡಿ ರೋಗ ನಿವಾರಣ ಮಾಡಿಕೊಳ್ಳಬೇಕು

ರೋಗದ ನಾಮಗಳು

ಕ್ಷಯರೋಗ, ಹಡದರೋಗ, ಪಾಂಡುರೋಗ ಗುಲ್ಮರೋಗ ಮಲರೋಗ ಮಹಾಮಾರಿ, (ಕಾಲರಾ) ಪ್ಲೇಗು, ಚಳಿಜ್ವರ, ವಿಷಮಜ್ವರ ಇನ್‌ಫ್ಲುಯಂಜಾ ಜ್ವರ ಅನೇಕ ಪ್ರಕಾರದ ಜ್ವರ, ಗಂಡಮಾಲೆ, ಕಿವಿಶೂಲೆ ಮೂಗಿನೊಳಗಿನ ಪಿನಿಸ, ಮೊದಲಾದ ರೋಗವು, ಕಣ್ಣಿನೊಳಗೆ ಹೂವು ಬೀಳೋದು ಮತ್ತು ಕಣ್ಣುನೋವು ದಮ್ಮು, ಕೆಮ್ಮು, ಶ್ವಾಸ ಅಡಗ್ಯ, ಇದ್ದಲಿ, ಅಜೀರ್ಣ ಹೊಟ್ಟೆಶೂಲಿ ಮೈಶೂಲಿ, ಅರದಲೆಶೂಲಿ, ಪಡಶೂಲಿ, ವಾತಶೂಲಿ, ರೇಚ್ಚಿಬಡು, ಗುಧ್ವವ್ಯನ ಬೇನೆ ಹುರಕು ಕಜ್ಜಿ, ಗಜಗರ್ಣ ಇದ್ದು, ಇಸಬು, ಘಾಯವ್ರಣ, ನಾರುಹುಣ್ಣು ಸ್ತ್ರೀಯರ ಮುಟ್ಟು ಶೂಲಿ, ಹಡದ ಪಂಡ, ಸಣ್ಣ ಕೂಸುಗಳ ಬಾಲಗ್ರಹ ಕೋಡಗೆಮ್ಮು, ಅರವಿ, ಮುಟ್ಟಿದೋಷ, ಹೊಟ್ಟೆ ದೊಡ್ಡದಾಗೋದು ಪ್ಲೆ ಹೊರಬೀಳೋದು, ಮತ್ತು ಸಣ್ಣ ಕೂಸುಗಳಿಗೆ ವೈದ್ಯರಿಗೂ ಸಹ ತಿಳಿಯದ ಇದ ಅನೇಕ ರೋಗಗಳು, ಬೇಳು ಮತ್ತು ಸರ್ಪದಂಶ ಇದರ ಹೊರತು ಇನ್ನೂ ಅನೇಕ ರೋಗಗಳು ಖಾತ್ರಿಯಿಂದ ಗುಣವಾಗುತ್ತವೆ ಈ ಆರೋಗ್ಯಬಿಂದುವಿನ ಕ್ರಯ ಅವಾಲ್ಯ ಕಂಡು ಬಂದಲ್ಲಿ ಬಡವರಿಗೂ ಧನವಂತರಿಗೂ ಸರಿಯಾಗಿ ಬಹಳ ಕಡಿಮೆ ಕ್ರಯ ಇಟ್ಟಿರುತ್ತದೆ ಒಂದು ಕಾಲು ಶೇರಿ ಬಾಟಲಿ ಒಂದಕ್ಕೆ 4 ರೂಪಾಯಿ ನಮೂನೆ ಉಪ್ಪಿಕ್ಕ ೨ ಆಣೆ ಹೊರದ ಬಾಟ್ಲಿ ಒಂದಕ್ಕೆ 8 ಆಣೆ ವಿ ಪಿ ಖರ್ಚ ಬೇರೆ ಬೀಳುವದು ಒಂದು ಡಜನ್ ಬಾಟ್ಲಿ ತಕ್ಕೊಂಡರೆ ನಾಲ್ಕು ಬಾಟ್ಲಿಗಳನ್ನು ಕಮಿಶನ್ ಕೊಡುತ್ತೇವೆ ಇದಕ್ಕೆ ಎಂಟು ಆಣೆ ಖರ್ಚು ಬರುವದು ೧೦ರಿಂದ ೧೧ ಬಾಟಲಿಗಳ ವರೆಗೆ ತೆಗೆದುಕೊಂಡರ ಕಮಿಶನ್ ಇರುವದಿಲ್ಲ ಇದಕ್ಕೆ ನಾಲ್ಕು ಆಣೆ ಖರ್ಚು ಬರುವದು ಒಂದು ಕಾಲು ತೊಳೆಯ ೪ ಬಾಟಲಿಗಳ ಒಂದೆ ಸಾರಿ ತಕ್ಕೊಂಡರೆ ಒಂದು ಬಾಟಲಿ ಕಮಿಶನ್ ಕೊಡುತ್ತೇವೆ ಇದಕ್ಕೆ ಖರ್ಚು ಎಂಟು ಆಣೆ ಬರುವದು ನಮ್ಮ ಔಷಧವು ಹೋಟ ಹೊರಟರೆ ... ಮಾಡುತ್ತೇವೆ ... ಮಾಹಿತಿ ... ಬೇಕಾದಲ್ಲಿ ಪೋಸ್ಟು ತಿಕೀಟು ಬಗೆ ಇದರ ಹೊರತು ದೊರೆಯಲಿಕ್ಕಿಲ್ಲ ಅನುಪಾನ ಪತ್ರಗಳು ಕನ್ನಡ ಮರಾಠಿ, ಮುಸಲ್ಮಾನಿ ಭಾಷೆಗಳಲ್ಲಿ ಛಾಪಿಸಿರುತ್ತವೆ ಪಕಂದಿ ಪ್ರಕಾರ ... ಸೋಬತಿ ಸಿಗುವವು ನಿಮ್ಮ ವಿಳಾಸ ಇಂಗ್ಲೀಷ್ ಅಥವಾ ಕನ್ನಡದಲ್ಲಿ ನಾಮ ಮತ್ತು ಪೋಸ್ಟ ವಗೈರ ಸ್ಪಷ್ಟವಾಗಿ ಬರೆಯುತ್ತಿರಬೇಕು

ಹೆಚ್. ಎಂ. ಮುಲ್ಲಾ, ಸಂಪಾದಕ ಅರ್ಕಶಫಾ,
33 ಹೆಡ್ ಆಫೀಸ್ ಶಹಾಪೂರ, (ಬೆಳಗಾಂವ)

"ವೈದ್ಯಾಮೃತ ಮಂದಿರಂ"

ಎಂಬ

ನಮ್ಮ ಆಯುರ್ವೇದ ವೈದ್ಯಶಾಲೆಯಲ್ಲಿ ಶಾಸ್ತ್ರೋಕ್ತವಾಗಿ ತಯಾರಿಸಲ್ಪಟ್ಟ ಎಲ್ಲಾ ತೈಲಗಳೂ, ಆಸವಾರಿಷ್ಟಗಳೂ, ಕಷಾಯಗಳೂ ದ್ರವದ್ರಾವಕಗಳೂ, ಭಸ್ಮಗಳೂ, ಚೂರ್ಣಗಳೂ, ಮಾತ್ರೆಗಳು ಇತ್ಯಾದಿ ಔಷಧಿಗಳೂ ಮತ್ತು ಕಾಶ್ಮೀರ, ನೇಪಾಲ ದೇಶಗಳಿಂದ ತರಿಸಿದ ಕಸ್ತೂರಿ, ಪಚ್ಚ ಕರ್ಪೂರ, ಕುಂಕುಮಕೇಸರ ಮುಂತಾದವುಗಳೂ ಸುಲಭವಾದ ಕ್ರಯಕ್ಕೆ ದೊರಕುತ್ತವೆ ಪರಸ್ಥಳದವರು ರೋಗ ಪ್ರಕೃತಿಯನ್ನು ವಿಶದವಾಗಿಬರೆದು ತಿಳಿಸಿದರೆ ಅಗತ್ಯವಿರುವ ಔಷಧಿಗಳನ್ನು ಅನುಪಾನಪತ್ರಿಕೆ ಸಮೇತ ವಿ ಪಿ ಮೂಲಕ ಕಳುಹಿಸುವೆವು

ವಿಳಾಸ — ಕೆ ಕೆ. ನಾಯರ್
ಎಂಡ್ ಬ್ರದರ್,
ವೈದ್ಯಾಮೃತ ಮಂದಿರಂ
ನೀಲೇಶ್ವರ ದ ಕನ್ನಡ

ಕ್ಷಿಪ್ರಗುಣಕಾರಿ! ಮಹೌಷಧ!

ಸಿರಪ್ ವಾಸಕಾ

ಕೆಮ್ಮು ಶೀತ ಜ್ವರ ಪಕ್ಕೆಗಳ ವೇದನೆ ಯಕ್ಷ್ಮಕಾಸ ಕ್ಷಯ, ಉಬ್ಬಸ ಬ್ರಾಂಕಾಯಿಟಿಸ, ನ್ಯುಮೋನಿಯಾ ಮುಂತಾದ ಶ್ವಾಸಕೋಶದ ಯಾವತ್ತು ರೋಗಗಳಿಗೆ ಅತ್ಯುತ್ತಮವಾದ್ದು ಪ್ರಾಚೀನಾರಭ್ಯ ಕಾಸರೋಗಗಳಿಗೆ ವಿಶೇಷ ಗುಣಕಾರಿ ಎಂದು ಹೆಸರುಗೊಂಡ "ಆಡಸೋಗೆ" ಎಂಬ ಗಿಡಮೂಲಿಕೆಯಿಂದ ತಯಾರಿಸಲ್ಪಟ್ಟದ್ದು ಇದರಿಂದ ಪೀಡಿತವಾದ ಕಫವು ಬೇಗನೆ ಕಳುವಾಗುವದರಿಂದ ಕೆಮ್ಮು ಬಹ ಬೇಗ ಕಡಿಮೆಯಾಗುವದಲ್ಲದೆ ರುಚಿಯಾಗಿರುವದರಿಂದ ಮಕ್ಕಳಿಗೆ ಇದರ ಸೇವನೆಯಲ್ಲಿ ಬಹಳ ಪ್ರೀತಿ

ಬಾಟ್ಲಿ 1ರ ಕ್ರಯ ಬರೇ ಒಂದು ರೂಪಾಯಿ ಮಾತ್ರ

ಬೆಂಗಾಲ ಕೆಮಿಕಲ ಮತ್ತು ಫರ್ಮಾಸ್ಯೂಟಿಕಲ ವರ್ಕ್ಸ ಕಂಪೆನಿ ಲಿಮಿಟೆಡ್, ಕಲ್ಕತಾ,

ಸೋಲ ಏಜಂಟ್ಸ —

ಪಿ ಎ ಪೈ ಬ್ರದರ್ಸ್ ಉಡು
ಮಿಠಾಕರ್ಕಾರ ಬಜರ್ಸ್ ...

ಮುಫತ್ತು!! ಇಂಥಾದ್ದು ಬೇಕು.

ಗುಲ್ಷನ್ ಜೋಬನ್

ಸರಕಾರದಲ್ಲಿ ರಿಜಿಸ್ಟರು ಮಾಡಲ್ಪಟ್ಟ ನಂ. 253

ಒಂದಾಣೆ ಸ್ಟ್ಯಾಂಪಿನೊಳಗೆ ರುಜುವಾತು ಶಿಕ್ಕೆಯುಳ್ಳ ರಶೀದು— ಈ 32 ಮಾತ್ರೆಗಳುಳ್ಳ ಬಾಟ್ಲಿಗಳನ್ನು ಖರೀದಿಸುವವರಿಗೆ ಕೊಡಲ್ಪಡುತ್ತದೆ ಈ ಮಾತ್ರೆಗಳನ್ನು ಸೇವಿಸಿ ಗುಣತೋರಿಸದಿದ್ದರೆ ಮನಸಾಕ್ಷಿಯಾಗಿ ಆ ರಶೀದಿಯೊಳಗೆ ದಸ್ಕತುಮಾಡಿ ಒಂದು ತಿಂಗಳೊಳಗಾಗಿ ವಾಪಸು ಕೊಟ್ಟರೆ ಬಾಟ್ಲಿಯ ಕ್ರಯವನ್ನು ವಾಪಸು ಮಾಡುತ್ತೇವೆಂದು ಪ್ರತಿಜ್ಞೆಯನ್ನು ನಾವು ದೃಢವಾಗಿ ಮಾಡುತ್ತೇವೆ

ಗುಲ್ಷನ್ ಜೋಬನ್.

ಶಕ್ತಿವರ್ಧಕ! ಧಾತುಪೌಷ್ಟಿಕ!! ರೋಗನಿವಾರಣ!!!

ಈ ಮಾತ್ರೆಗಳು ಸೇವಿಸಿದ ಪ್ರಥಮ ದಿವಸದಲ್ಲಿಯೇ ಆಶ್ಚರ್ಯಕರವಾದ ಗುಣಗಳನ್ನು ತೋರಿಸುವವು. ಕಳೆಗುಂದಿದ ಕಪೋಲಗಳಿಗೆ ಪುಷ್ಟಿ ಮತ್ತು ಕಾಂತಿಯನ್ನು ಕೊಟ್ಟು ಶರೀರಕ್ಕೆ ಧಾತುಪುಷ್ಟಿ ಸುಖಾನಂದಗಳನ್ನು ಕೊಡುತ್ತವೆ ಕಟಿಶೂಲ, ವಾಯುರೋಗ, ಕ್ಷಯ, ಶ್ವಾಸ, ಕಾಸ, ಉದರಶೂಲೆ, ಅಜೀರ್ಣ, ಮೂತ್ರರೋಗ, ಮಲಬದ್ಧತೆ, ಜ್ವರಗಳು, ಮೂಲವ್ಯಾಧಿ, ಆನೆಯಮಿಳಾಳು ಇವುಗಳನ್ನು ನಿವಾರಿಸಿಸಿ, ರಕ್ತಶುದ್ಧಿಯೂ ವೃದ್ಧಿಯೂ ತಂದು ಚರ್ಮವ್ಯಾಧಿಗಳನ್ನು ನಿವಾರಣೆಮಾಡುತ್ತವೆ

ಬಾಟ್ಲಿ 1ಕ್ಕೆ ರೂ 1 3ಕ್ಕೆ ರೂ 2—10—0 ವಿ. ಪಿ. ಖರ್ಚು ಬೇರೆ ಏಜಂಟರುಗಳು ಬೇಕು ಎಲ್ಲ ಸ್ಥಳಗಳಲ್ಲಿ ಸಿಕ್ಕುವದು

ವಿಳಾಸ — ದಿ ಗುಲ್ಷನ್ ಜೋಬನ್ ಕಂಪೆನಿ, ಬೊಂಬಾಯಿ 3

Mr. ALEX ALVAREZ Dentist.

OF MANDALAY, UPPER BURMA

Will attend patients here for the following Particulars —

Charges Moderate

1 Painless extraction of teeth 2 Making of false teeth 3 Filling the teeth with silver, gold, porceline 4 Gold bridge and Crowns 5 Porceline Crowns 6 Cleaning the teeth 7 Pyorrhoea treatment

Can be consulted at —

The Electro Homoeopathic Dispensary
Hampankatta, MANGALORE

ಮಿ ಆಲೆಕ್ಸ್ ಆಲ್ವರಿಸ್ ದಂತವೈದ್ಯ.

ಇವರು ಹಲ್ಲು ಬೇನೆಯಿಂದ ನರಳುತ್ತಿರುವವರ ಹಲ್ಲುಗಳನ್ನು ಸ್ವಲ್ಪವೂ ನೋಯದಂತೆ ಬುಡಸಹಿತ ಕಿತ್ತು ತಗೆಯೋದು, ಕೃತ್ರಿಮ ಹಲ್ಲುಗಳನ್ನು ಮಾಡಿ ಇಡೋದು, ಹಲ್ಲುಗಳಲ್ಲಿ ಉಂಟಾದ ರಂಧ್ರಗಳನ್ನು ಬೆಳ್ಳಿ, ಬಂಗಾರ, ಪಿಂಗಾಣಿ ಇವುಗಳಿಂದ ಮುಚ್ಚೋದು, ಬಂಗಾರದ ಕೃತ್ರಿಮ ದಂತಮಾಲೆಯನ್ನು ಬುಡ ಸಹಿತ ಇರಿಸೋದು, ಪಿಂಗಾಣಿ ಹಲ್ಲುಮಾಲೆಯನ್ನು ಇಡೋದು ಮತ್ತು ಹಲ್ಲುಗಳನ್ನು ಶುಚಿಮಾಡೋದು ಮುಂತಾದ ದಂತಚಿಕಿತ್ಸೆಯಲ್ಲಿ ಪರಿಣಾಮ ಚಿಕಿತ್ಸೆಯನ್ನು ಮಾಡುವರು ಇವರು ಹಂಪನಕಟ್ಟೆಯಲ್ಲಿರುವ ಮಿ ಎ ಫೆರ್ನಾಂಡಿಸ್, ಇಲೆಕ್ಟ್ರೊ ಹೋಮಿಯೊಪತಿಕ ಡಿಸ್ಪೆನ್ಸರಿಯಲ್ಲಿ ನೋಡ ಸಿಗುತ್ತಾರೆ

ಗೊನೊಕ್ಯೂರಾ

ಮೇಹ ರೋಗಕ್ಕೆ (Gonorrhoea) ...

ಎಲ್ಲಾ ತರದ ಮೇಹಗಳಲ್ಲಿ, ದುಷ್ಟ ... ಹರಿಯುವದಕ್ಕೆ ಮೂತ್ರದ್ವಾರದಲ್ಲಿಯ ... ಹಸುರುವರ್ಣದ ಕರಣ ಉರಿಯುಳ್ಳ ... ಮೂತ್ರಮಾಡುವಾಗ ಇಂದ್ರಿಯದಲ್ಲಿ ... ಸಮ್ಮಂಧವಾದ ಎಲ್ಲಾ ಚುರುಕುರೋಗಗಳಲ್ಲಿ ... ಇದರ ಸೇವನೆಯಿಂದ ಎಷ್ಟುಕಾಲದ ಹಳೆ ಮೇಹ

ಖಂಡಿತವಾಗಿ ಗುಣಹೊಂದುವವು

ಔಷಧ ಸೇವಿಸುವ ಕ್ರಮ— 5 ಥಾಂಬಿ ಬಿಂದು ಔಷಧವನ್ನು ಒಂದು ಚಮಚದಷ್ಟು ಸೇವಿಸುವದು ಕ್ರಯ — ರೂ 1—0—

ಬೇಕಾಗಿದ್ದವರು ಕೆಳಗಿನ ವಿಳಾಸಕ್ಕೆ ಬರಿ

ವಿಳಾಸ — ಎ ಫೆರ್ನಾಂಡಿಸ್
ಇಲೆಕ್ಟ್ರೊ ಹೋಮಿಯೊಪತಿ ಡಿಸ್ಪೆನ್ಸರಿ,
ಮಂಗಳೂರು.

THE BANK RECEIVES FIXED, CURRENT ACCOUNT, & SAVINGS BANK DEPOSITS

For further particulars apply to the Secretary.

Canara Bank Ltd.,
Mangalore, 1st September 1920.

K. Venkat Rao,
Secretary.

1							6.54	6 14
2							6.55	6.15
3							6.55	6 15
4							6.55	6 16
5							6.56	6 16
6							6.56	6.1
7							6.57	6 17

ಪಾಳ್ಯದ ವೆಂಕಟಾಚಲ ಪಂಡಿತರ ಸಿದ್ಧೌಷಧಗಳು.

ರೋಚನಾಮಯಹರ ಕಸ್ತೂರಿ ಮಾತ್ರೆಗಳನ್ನು ಈಗಲಾದರೂ ಪರೀಕ್ಷಿಸಿ ನೋಡಿರಿ!

ಪ್ರತಿವರ್ಷವೂ ಲಕ್ಷಾಂತರ ಸೀಸೆಗಳು ವಿಕ್ರಯವಾಗುತ್ತಿವೆ.

ಇಂಡಿಯಾದವರು ಮಾತ್ರವಲ್ಲ; ಬರ್ಮಾ, ಸಿಲೋನ್, ಮಲೆಯ ಸ್ಟೇಟ್, ಗೋವಾ, ಸ್ಟ್ರೇಟ್ಸೆಟಲ್‌ಮೆಂಟ್ಸ್, ಮುಂತಾದ ಸ್ಥಳಗಳಲ್ಲಿ ವಾಸವಾಗಿರುವವರು ಕೂಡ ಈ ಸಿದ್ಧೌಷಧಿಯನ್ನು ಉಪಯೋಗಿಸುತ್ತಿರುತ್ತಾರೆ.

ಮನೆಯಲ್ಲಿ ಒಂದು ರೋಚನಾಮಯಹರ ಕಸ್ತೂರಿ ಮಾತ್ರೆಯ ಸೀಸೆಯು ಇದ್ದರೆ ಸಮಯಕ್ಕೆ ದೊರೆಯುವುದು ಅನುಕೂಲವು.

ಕೆಮ್ಮು, ಶೀತ, ಅಜೀರ್ಣ, ವಾತ್ಸಲ್ಯ, ಜ್ವರ, ಮಂದ, ಮಲಬದ್ಧ, ಕೆಮ್ಮು, ಗುಲ್ಮ, ಬಲಹೀನತೆ, ಮಕ್ಕಳ ಎಳವು, ಜ್ವರ, ಕೆಮ್ಮು ಮುಂತಾದ ಅನೇಕ ರೋಗಗಳನ್ನು ಈ ಸಿದ್ಧೌಷಧಿಯು ಗುಣಪಡಿಸುತ್ತದೆ.

ಪ್ರತಿ 6 ಸೀಸೆಗಳನ್ನು ಒಟ್ಟಿಗೆ ತರಿಸಿದರೆ ಟಪಾಲು ಖರ್ಚು ಸೇರಿ 1—8—0

ಪ್ರತಿ 12 ಸೀಸೆಗಳನ್ನು ಒಟ್ಟಿಗೆ ತರಿಸಿದರೆ ಟಪಾಲು ಖರ್ಚು ಸೇರಿ 2—13—0

ಪ್ರತಿ 25 ಸೀಸೆಗಳನ್ನು ಒಟ್ಟಿಗೆ ತರಿಸಿದರೆ ಟಪಾಲು ಖರ್ಚು ಸೇರಿ 5—3—0

ರಿಜಿಸ್ಟರಾದ ಈ ವ್ಯಾಪಾರದ ಗುರ್ತು ಪ್ರತಿ ಸೀಸೆಯ ಮೇಲೂ ಇರುವುದನ್ನೇ ನೋಡಿ ತೆಗೆದುಕೊಳ್ಳಬೇಕಾಗಿದೆ

ಅನುಪಾನ ಪತ್ರವು ಪ್ರತಿ ಸೀಸೆಯೊಡನೆಯೂ ಇರುವುದು, 260 ಮಾತ್ರೆಗಳುಳ್ಳ ಬುಡ್ಡಿಗೆ 4 ಆಣೆ ಮಾತ್ರ.

ಲಕ್ಷ್ಮೀವಿಲಾಸ ರಸ (ಕ್ಷಯಕ್ಕೆ) — ಕ್ಷಯರೋಗಿಗಳು ಈ ಲಕ್ಷ್ಮೀವಿಲಾಸ ರಸದಿಂದ ಆರೋಗ್ಯವನ್ನು ಪಡೆದಿರುತ್ತಾರೆ ಒಂದೇ ಒಂದು ಲಕ್ಷ್ಮೀವಿಲಾಸ ರಸದ ಸೀಸೆಯು ತಮ್ಮಲ್ಲಿದ್ದರೆ ಕ್ಷಯಕ್ಕೆ ಸರ್ವೋತ್ತಮವಾದ ಸಿದ್ಧೌಷಧಿಯು ಬೇರೊಂದಿಲ್ಲವೆಂದು ತಾವೇ ಹೇಳುವಿರಿ ದಿನಜ್ವರ ಮುಂತಾದ ನಾಲ್ಕರ ಜ್ವರಗಳು, ಸನ್ನಿಪಾತ ಜ್ವರಗಳು ಕೂಡಾ ಗುಣವಾಗುತ್ತವೆ ಸೀಸೆಗೆ ರು 1 ರಿಕ್ಕೆ ಒಂದು ಇನಾಮು

ಶ್ರೀನಿವಾಸತೈಲ—ತಲೆಗೆ ಹಚ್ಚೆ ತಲೆನೋವು ಮುಂತಾದ ನೋವು ಹೋಗುತ್ತದೆ ಸೀಸೆಗೆ 8 ಆಣೆ ರಿಕ್ಕೆ ಒಂದು ಇನಾಮು.

ವೈಶ್ವಾನರಾಸವ—ಸೇವಿಸಿದ ಮೊದಲನೆ ವೇಳೆಯಿಂದಲೇ ವಾಂತಿಭೇದಿ, ಶೀತಭೇದಿ, ಅಜೀರ್ಣದ ಭೇದಿಗಳು ಗುಣವಾಗುತ್ತಾ ಬರುತ್ತವೆ ಸೀಸೆಗೆ ರೂ 1 ರಿಕ್ಕೆ ಒಂದು ಇನಾಮು.

ಬಾಲಸುಧೋದಯ—ಮಕ್ಕಳಿಗೆ ಬಲಕಾರಿ, ಸಿಹಿಯಾಗಿರುತ್ತದೆ ಮಂದ, ಮಲಬದ್ಧ, ಅಜೀರ್ಣದ ಭೇದಿ, ಕೃಶತ್ವ ಹೊಟ್ಟೆ ಉಬ್ಬರವಾಗಿರುವುದು ಮುಂತಾದ ಇವೆಲ್ಲವೂ ಗುಣವಾಗಿ ಮಕ್ಕಳು ಆರೋಗ್ಯವಾಗಿ ಪುಷ್ಟಿಯ ಬೆಳೆಯುವರು ಸೀಸೆಗೆ ಆಣೆ 12 ರಿಕ್ಕೆ ಒಂದು ಇನಾಮು

ಈ ನಾಲ್ಕಕ್ಕೂ ಟಪಾಲು ಖರ್ಚು ಬೇರೆ

ಸಮಸ್ತ ರೋಗಗಳಿಗೂ ನಮ್ಮಲ್ಲಿ ಆಯುರ್ವೇದೀಯ ಸಿದ್ಧೌಷಧಿಗಳು ದೊರೆಯುತ್ತವೆ ಕ್ಯಾಟಲಾಗು ಉಚಿತ

ವಿಳಾಸ: ಶ್ರೀ ಸೀತಾರಾಘವ ವೈದ್ಯಶಾಲಾ ಮೈಸೂರು.

ಒಂದು ಕುಪ್ಪಿಯ ಕ್ರಯ ೧೪ ಆಣೆ. ಮಂಗಳೂರು ಏಜಂಟ್,
ಕೇ. ಟೀ. ಡೋಂಗರೆ ಕಂಪೆನಿ, ದಿ. ಉಲನ್ ಮಾರ್ಟ್,
ಮಂಗಳೂರು.
ಗಿರಿಗಾಂವ್ ಮುಂಬಯಿ.

ಪ್ರಖ್ಯಾತಿಪಡೆದ

ಎಸ್ ವಿ. ಸುಗಂಧಪುಡಿ ನಶ್ಯವು.

ಸಾಧಾರಣ ಪುಡಿ ಶವನ್ನು 10 12 ದಿನ ಹಾಕಿಕೊಳ್ಳುವವರು ಒಂದಾವರ್ತಿ ಇದನ್ನು ಹಾಕಿಕೊಂಡರೆ ಸಾಕು ಎಷ್ಟೋ ಆನಂದವಾಗಿರುವದು. ಇದರ ಖಾರವು ಮತ್ತು ಪರಿಮಳವು ಎಷ್ಟು ತಿಂಗಳಾದರೂ ಕೆಡದೆ ಹಾಗೆಯೇ ಇರುವದು ಬಾಟ್ಲಿ 1ಕ್ಕೆ 4 ಆಣೆ. ಟಪ್ಪಾಲು ಚಾರ್ಜು 1-3 ವರೆಗೆ 4 ಆಣೆ ವಂದೇಸರ್ತಿ 12 ಬಾಟ್ಲಿಗಳನ್ನು ತರಿಸಿಕೊಂಡರೆ 1 ಬಾಟ್ಲಿ ಉಚಿತವು.

ಉತ್ತಮ ತರದ ಪುಡಿ ನಶ್ಯವು

ಪ್ರಖ್ಯಾತಿಪಡೆದ ಖಾರವಾದ ಹೊಗೆಸೊಪ್ಪಿನಿಂದ ಅದು ತಗನು ಆನುಭವಸ್ಥರಿಂದ ತಯಾರಿಸಿರುವದರಿಂದ ಒಂದಾವರ್ತಿ ಈ ಪುಡಿಯನ್ನು ಉಪಯೋಗಿಸಿದವರು ಬೇರೆ ಪುಡಿ ನಶ್ಯವನ್ನು ನಿಶ್ಚಯವಾಗಿಯೂ ಬಯಸರು. ಸೇರು 1ಕ್ಕೆ ರೂ 1 ಟಪ್ಪಾಲು ಚಾರ್ಜು 4 ಆಣೆ

ಎಸ್. ವಿ. ದಂತಚೂರ್ಣವು.

ಇವರ ಉಪಯೋಗದಿಂದ ಹಲ್ಲುಗಳು ಶುಭ್ರವಾಗಿ ಬಿಳುಪಾಗಿ ಪ್ರಕಾಶಿಸುವದಲ್ಲದೆ ಸಕಲ ದಂತರೋಗಗಳನ್ನು ನಿವೃತ್ತಿ ಮಾಡಿ ಹಲ್ಲುಗಳನ್ನು ವಜ್ರದಂತೆ ಗಟ್ಟಿಪಡಿಸುವದು. ಡಬ್ಬಿ 1ಕ್ಕೆ 6 ಆಣೆ. ಟಪ್ಪಾಲು ಚಾರ್ಜು 2 ಡಬ್ಬಿಗಳವರೆಗೆ 4 ಆಣೆ. ನಮ್ಮ ಕಂಪನಿಯ ಇಂಗ್ಲಿಷ್ ಕೆಟಲಾಗಿಗೆ ಬರೆದರೆ ಉಚಿತವಾಗಿ ಕಳುಹಿಸಿ ಕೊಡುವೆವು.

ನಮ್ಮ ವಿಳಾಸ—

ಎಸ್. ವಾಸು ಅಂಡ್ ಕಂಪನಿ,

ತಂತಿ ವಿಳಾಸ—

ವಾಸು, ತಿರುಚಿ.

ಪಾಲಕರೆ, ತಿರುಚಿನಾಪಳ್ಳಿ.

ಮಂಗಳೂರಿನ ವಾಯುಸ್ಥಿತಿ.
(ಸರಕಾರಿ ಮಾಹಿತಿ)

Date	Temperature. ಉಷ್ಣ (ಶಾಖ) Maximum	Minimum	Rainfall ಮಳೆ	
24	90—5	68—6	—	...
25	88—9	69—8	—	...
26	88—9	70—2	—	...
27	89—2	70—2	—	...
28	92—5	69—7	—	...
29	94—0	68—7	—	—
30	91—5	67—2	—	—

ಮಂಗಳೂರಿನ ಪೇಟೆ ಧಾರಣೆ

ಜೀವಸು	ಇಂದ ರೂ ಆ	ವರೆಗೆ ರೂ ಆ
ಮುಸ್ತಾ ಅಕ್ಕಿ ಮುಡಿ ಗಳ್ಳಿ	6—12	7— 2
ಹೊಸ ಗುಡ್ಡು	6— 6	6—10
ಹೊಸ ರಾಶಿ ,,	6— 2	6— 6
ಆವ್ವಲ್ ಬೆಳ್ತಿಗೆ ,,	—10	—14
ಗುಡ್ಡು ಬೆಳ್ತಿಗೆ ,,	—	7— 4
ರಂಗೂನ ಬೆಳ್ತಿಗೆ ಗೋಣಿ ಗಳ್ಳಿ	1 — 4	17— 8
ಗೋಧಿ ಗೋಣಿ ಗಳ್ಳಿ	20 — 0	22—
ತುರುಳಿ ಗೋಣಿ ಗಳ್ಳಿ	13— 4	15— 0
ಕಡಲೆ ಗೋಣಿ ಗಳ್ಳಿ	16— 8	17— 5
ತೊಗರಿ ಗೋಣಿ ಗಳ್ಳಿ	19 8	2
ತೊಗರಿಬೇಳೆ ಗೋಣಿ ಗಳ್ಳಿ	22— 0	30
ಉದ್ದು ಗೋಣಿ ಗಳ್ಳಿ	16— 8	18 0
ಹೆಸರು ಗೋಣಿ ಗಳ್ಳಿ	16— 0	18 8
ಊರು ಬೆಲ್ಲ ಖಂಡಿ ಗಳ್ಳಿ	66— 0	70— 0
ಉಪ್ಪು ಗೋಣಿ ಗಳ್ಳಿ		3—12
ಕೊಬ್ರಿ ಖಂಡಿ ಗಳ್ಳಿ	150— 0	160— 0
ಕೊಬ್ರಿ ಹಿಂಡಿ ಖಂಡಿ ಗಳ್ಳಿ	50— 0	51— 0
ಎಳ್ಳಿಂಡಿ ಖಂಡಿ ಗಳ್ಳಿ	55— 0	60— 0
ಕೊಬ್ರಿ ಎಣ್ಣೆ ಮುಡಿ ಗಳ್ಳಿ	13— 0	13—14
ಎಳ್ಳೆಣ್ಣೆ ಮುಡಿ ಗಳ್ಳಿ	9— 8	11— 8
ಚಿಮಿಣಿಎಣ್ಣೆ ಪೆಟ್ಟಿಗೆ ಗಳ್ಳಿ	9— 6	9—
ಮೋರಿಷ ಸಕ್ಕರೆ ಮುಡಿ ಗಳ್ಳಿ	7—12	9—
ಊರ ಮೆಣಸಿನ ಕಾಯಿ ಮುಡಿ ಗಳ್ಳಿ	7— 8	—
ಸಾಸಿವೆ ಮುಡಿ ಗಳ್ಳಿ	9— 8	10— 0
ಕೊತ್ತಂಬರಿ ಮುಡಿ ಗಳ್ಳಿ	5— 4	5— 8
ಕಾಫಿ ಖಂಡಿ ಗಳ್ಳಿ	220— 0	230— 0
ಅಡಿಕೆ ಹೊಸ ಅಡಿಕೆ ಖಂಡಿ ಗಳ್ಳಿ	100— 0	115— 0
ಅಡಿಕೆ	95— 0	100— 0
ಕಾಳುಮೆಣಸು ಖಂಡಿ ಗಳ್ಳಿ	135— 0	140— 0
ಯಾಲಕ್ಕಿ ಮುಡಿ ಗಳ್ಳಿ	22— 0	25— 0
ಗೇರುಬೀಜ ಮುಡಿ ಗಳ್ಳಿ	2—12	3—12
ಕಬ್ಬಿಣ ಖಂಡಿ ಗಳ್ಳಿ	100— 0	120— 0
ಹಾಂಟ್ಸ್ ಪಟ್ಟೆ ಮುಡಿ ಗಳ್ಳಿ	22— 0	22— 4
ಹಾಂಟ್ಸ್ ಪಾತ್ರೆಗಳು ಮುಡಿ ಗಳ್ಳಿ	32— 0	34— 0
[illegible] ಗಳ್ಳಿ	31— 8	
[illegible] ಮುಡಿ ಗಳ್ಳಿ	24—	26— 0

ಮಂಗಳೂರು ವ್ಯವಸಾಯ ಮತ್ತು ಕೈಗಾರಿಕೆಯ ಪ್ರದರ್ಶನ

[illegible] ಅದ ಮೈಸೂರು ... ಪ್ರದರ್ಶನ ... ಇದು ಪ್ರತಿ ವರುಷ ದಸರಾ ... ದಿನಗಳಲ್ಲಿ ... ಶ್ರೀಮನ್ ಮಹಾರಾಜರವರ ಆಶ್ರಯದಲ್ಲಿ ... ನಡೆಯುತ್ತದೆ. ... ಜಿಲ್ಲೆಯ ಜನರು ಅನೇಕರು ಹೋಗು ... [illegible] ಸಾಧಾರಣ.

ನಮ್ಮ ಮಂಗಳೂರು ಪಟ್ಟಣದಲ್ಲಿ ವ್ಯವಸಾಯ ಮತ್ತು ಕೈಗಾರಿಕೆಯ ಮೊದಲನೇ ಪ್ರದರ್ಶನವು ೧೯೧೫ನೇ ಇಸವಿಯ ಕ್ರಿಸ್ತಮಸ್ ರಜಾ ದಿನಗಳಲ್ಲಿ ಜರಗಿತು. ಸರಕಾರದ ಮತ್ತು ಜನತೆಯ ಯತ್ನದಿಂದ ಇದು ತಕ್ಕ ಮಟ್ಟಿನ ಯೋಗ್ಯತೆಯಲ್ಲಿ ನಡೆದು ರೂ. ೭೦೦೦ ವರೆಗೆ ಹಣ ಜಮೆಯಾಯಿತು. ಎರಡನೇ ಪ್ರದರ್ಶನವು ಮೂರು ವರ್ಷಗಳ ತರುವಾಯ ಕಳೆದ ವಾರ ಜರಗಿತು. ಈ ಪ್ರದರ್ಶನದ ಪ್ರಯೋಜನವನ್ನು ಹೆಚ್ಚಿನ ಜನರು ಪಡೆಯಲೆಂದು ಪ್ರೇಕ್ಷಕರಿಗೆ ಟಿಕೇಟಿನ ದರಗಳು ಸಹ ಕಡಿಮೆ ಮಾಡಲಾಯಿತು. ಆದರೆ ಸುಮಾರು ರೂ. ೧೦೦೦ ಮಾತ್ರ ಜಮೆಯಾಗಿರುವುದೆಂದು ತಿಳಿಯುತ್ತದೆ.

ಕಳೆದ ಸಮರ-ಯುದ್ಧ ಸಂಬಂಧ ಹಣ ಶೇಖರಿಸುವ ಉದ್ದೇಶವನ್ನು ಕಟ್ಟಿಕೊಂಡ ಆ ಕಾಲದ ಅಧಿಕಾರಿಗಳು ತಮ್ಮ ಕೆಳಗಿನವರ ಮೂಲಕ ಸರ್ವಸಾಧಾರಣವಾಗಿ ಟಿಕೇಟುಗಳನ್ನು ಹಳ್ಳಿಯ ಮೂಲೆಗಳಲ್ಲಿ ಸಹ ದೂಡಿದ್ದರಿಂದ ರೂ. ೭೦೦೦ ಸಂಗ್ರಹವಾಗಲು ಕಾರಣವಾಗಿರಬಹುದಲ್ಲದೆ ಪ್ರದರ್ಶಿಸಲ್ಪಟ್ಟ ವಸ್ತುಸಂಗ್ರಹದಲ್ಲಿ ಎರಡು ಪ್ರದರ್ಶನಗಳೊಳಗೆ ಅಂತರವು ವಿಶೇಷವಾಗಿರಲಿಲ್ಲ.

ಈ ಪ್ರದರ್ಶನವು ತಾ. ೩೦ನೇ ಸೋಮವಾರ ಬೆಳಗ್ಗೆ ೮ ಗಂಟೆಗೆ ಗವರ್ನಮೆಂಟ್ ಕೋಲೇಜಿನ ಕಂಪೌಂಡಿನಲ್ಲಿ ಸಿದ್ಧಪಡಿಸಿದ್ದ ಸ್ಥಳದಲ್ಲಿ ಜಿಲ್ಲಾ ಕಲೆಕ್ಟರ ಮ. ಆರ್. ಯಚ್. ಎಲ್ಲಿಸ್‌ರವರ ಹಸ್ತದಿಂದ ತೆರೆಯಲಾಯಿತು. ಈ ಸಂದರ್ಭದಲ್ಲಿ ಜಿಲ್ಲಾ ಕಲೆಕ್ಟರರಾದ ಮಿ. ಎಲಿಸ್ ದೊರೆಗಳೂ, ಎಕ್ಟಿಂಗ್ ಕಲೆಕ್ಟರ ... ಬಹದೂರ ... ಯು ... ರಾಮರಾಯರೂ, ಇತರ ಅನೇಕ ಗೃಹಸ್ಥರೂ ಹಾಜರಿದ್ದರು. ನಾಲ್ಕು ದಿನಗಳ ಪರಿಯಂತ ಪ್ರದರ್ಶನ ನಡೆಯಿತು. ಸುಮಾರು ೧೫೦ ಮಳಿಗೆಗಳು ಕಟ್ಟಿದ್ದವು: ಇವುಗಳಲ್ಲಿ ಸರಕಾರದ, ಫಾರೆಸ್ಟ ಡಿಪಾರ್ಟ್ಮೆಂಟು, ಇಂಡಸ್ಟ್ರಿಯಲ್ (ಕೈಗಾರಿಕೆಯ) ಡಿಪಾರ್ಟ್ಮೆಂಟು, ಫಿಷರೀಸ ಡಿಪಾರ್ಟ್ಮೆಂಟು ಇವು ತಮ್ಮ ಚಟುವಟಿಕೆಯನ್ನು ತೋರಿಸಲು ಪ್ರದರ್ಶನ ಮಂಟಪದ ಹೆಚ್ಚಿನ ಭಾಗವನ್ನು ಆಕ್ರಮಿಸಿದ್ದರು.

ಪಟ್ಟಣದ ಮತ್ತು ಹೊರಗಿನ ವಿದ್ಯಾ ಸಂಸ್ಥೆಗಳು, ಕಾರಖಾನೆಗಳು, ಮಹಿಳೆಯರ ಸಂಘಗಳು ಮತ್ತು ಸ್ವತಂತ್ರ ವ್ಯಕ್ತಿಗಳು ಸಹ ತಮ್ಮ ತಮ್ಮ ಪ್ರದರ್ಶನಗಳನ್ನು ತೋರಿಸಲು ಒಂದೊಂದು ಮಳಿಗೆಯನ್ನು ಇಟ್ಟುಕೊಂಡಿದ್ದರು. ಅಲ್ಲದೇ ಸಿರಿಚಿಲ್ಲಿಯಾದ ಮಲಬಾರಿನಿಂದಲೂ ಕೂಡ ಹಲವರು ಬಂದು, ವಸ್ತ್ರ ಮೊದಲಾದವುಗಳ ಕೆಲವು ಸ್ಟೋಲುಗಳನ್ನು ಇಟ್ಟಿದ್ದರು.

ಫಾರೆಸ್ಟ ಡಿಪಾರ್ಟಮೆಂಟಿನವರು ಬಗೆಬಗೆಯ ಚರ್ಮಗಳು, ಕೊಂಬುಗಳು, ಚಿತ್ರಗಳು ಹಲವು ಮೂಲ ಧಾತುಗಳು, ನಾರುಗಳು ಮುಂತಾದ ಕಾಡು ಉತ್ಪತ್ತಿಗಳನ್ನು ಪ್ರದರ್ಶನಕ್ಕೆ ಇಟ್ಟಿದ್ದರು. ಎಗ್ರಿಕಲ್ಚರಲ್ ಡಿಪಾರ್ಟ್ಮೆಂಟಿನವರು ನಿರಿದವರಿಗೆ ಜಿಲ್ಲೆಯ ಮುಖ್ಯ ಸೈರಾಟಿನ ಭತ್ತ, ಕಬ್ಬು ಮುಂತಾದ್ದನ್ನು ಯೋಗ್ಯ ರೀತಿಯಲ್ಲಿ ಬೆಳೆಸುವ ಸಾಧನಗಳನ್ನೂ, ಕಬ್ಬಿನಿಂದ ಬೆಲ್ಲವನ್ನು ಮಾಡುವ ವಿಧಾನವನ್ನೂ, ಎಂಟಮೋಲಜಿಕಲ್ ಶಾಖೆಯವರು ಬೆಳೆಗಳಿಗೆ ತಗಲಿ ಹಾನಿಯನ್ನು ಉಂಟುಮಾಡುವ ಕ್ರಿಮಿಗಳನ್ನು ನಾಶ ಮಾಡುವ ರೀತಿಯನ್ನೂ, ಫಿಶರೀಸ್ ಡಿಪಾರ್ಟ್ಮೆಂಟಿನವರು ಮೀನಿನ ಎಣ್ಣೆಯನ್ನು ತೆಗೆದು ಸ್ವಚ್ಛ ಮಾಡುವ ವಿಧಾನವನ್ನೂ, ದೃಷ್ಟಾಂತ ಪೂರ್ವಕ ಬಂದವರಿಗೆ ತಿಳಿಸಿಕೊಡುತ್ತಿದ್ದರು.

ಇನ್ನೊಂದು ಕಡೆಯಲ್ಲಿ ಇಂಡಸ್ಟ್ರಿಯಲ್ ಇಲಾಖೆಯವರು ಕೈಮಗ್ಗಗಳಲ್ಲಿ ಬಗೆಬಗೆಯ ಮಗ್ಗಗಳನ್ನು ಪ್ರದರ್ಶನದ ಬಗ್ಗೆ ತಂದಿರಿಸಿದ್ದಲ್ಲದೆ ನೇಯುವವರಿಗೆ ಬೇಕಾಗಿರುವ ಇತರ ಸಣ್ಣಸಣ್ಣ ಕೈಯಂತ್ರಗಳನ್ನು ಸಹ ಇಟ್ಟಿದ್ದರು. ಮಗ್ಗಗಳ ಈ ಪ್ರದರ್ಶನವು ಜನರಿಗೆ ಹೆಚ್ಚಿನ ಪ್ರಯೋಜನದ್ದಾಗಿತ್ತು. ಬೇರೊಂದು ಕಡೆಯಲ್ಲಿ ಹೆಲ್ತ ಎಂಡ್ ವೆಲ್‌ಫೇರ್ ಎಸೋಸಿಯೇಶನಿನವರು ಚಿತ್ರಪಟಗಳ ಮೂಲಕ ಆರೋಗ್ಯ ಪಾಲನೆಯ ಸೂತ್ರಗಳನ್ನು ಕುರಿತು ವಿವರಿಸುತ್ತಿದ್ದರು.

ಜನರಿಂದ ತಂದು ಇಟ್ಟ ಪ್ರದರ್ಶನಗಳಲ್ಲಿ ನಮ್ಮ ಜಿಲ್ಲೆಯ ಮುಖ್ಯ ಕೈಗಾರಿಕೆಯಾದ ಹಂಚು ಮತ್ತು ಅವೆ ಮಣ್ಣಿನ ಸಾಮಾನುಗಳು. ಇವುಗಳನ್ನು ನಾವು ಪಟ್ಟಣದಲ್ಲಿ ಪ್ರತಿಯೊಂದು ಕಾರಖಾನೆಗಳಲ್ಲೂ ನೋಡುವುದರಿಂದ ವಿಶೇಷವಾಗಿ ವರ್ಣಿಸತಕ್ಕ ಆವಶ್ಯವಿಲ್ಲ. ಆದರೂ ಪಟ್ಟಣದ ಹೊರಗಿನ ಭಾಗವಾದ ಉಳ್ಳಾಲ ...ಗಡಿಯಿಂದ ಶಾ. ಪುರುಷೋತ್ತಮ ಭಟ್ಟರು ಹೊರಸಲೀನ ನಮೂನೆಯಲ್ಲಿ ತಯಾರಿಸಿದ ಪಾತ್ರೆಗಳು ವಿಲಾಯತಿ ಮಾಲನ್ನು ಹೋಲುತ್ತಿದ್ದವು. ಕೈ ಮಗ್ಗದಿಂದ ನೇಯುವ ಬಟ್ಟೆಗಳು; ಇವುಗಳಲ್ಲಿ ಸಿಲೋಶ್ವರದ ಬಡರ ಮಕ್ಕಳ ಶಾಲೆಯ ವಿದ್ಯಾರ್ಥಿಗಳು ಹತ್ತಿಯಿಂದ ನೂಲನ್ನು ಹಿಂಜಿ ತಯಾರಿಸಿದ ಬಟ್ಟೆಗಳು, ಬಾಲಕರಿಂದ ತಯಾರಿಸಿದ್ದಾದರೂ ಯೋಗ್ಯವಾಗಿದ್ದವು. ಮರದ ಕೆಲಸಗಳು; ಇವುಗಳಲ್ಲಿ ಗಣಪತಿ ಸೆಕೆಂಡರಿ ಶಾಲೆಯಲ್ಲಿ ತೆರೆದಿರುವ ಕಾರಪೆಂಟರಿ ಕ್ಲಾಸಿನ ಉಪಾಧ್ಯಾಯರಿಂದ ತಯಾರಿಸಿದ ಮೇಜುಗಳೂ ಕುರ್ಚಿಗಳೂ ಬಹಳ ನಾಜೂಕಾಗಿದ್ದು ಉಪಾಧ್ಯಾಯನ ಕೌಶಲವನ್ನು ತೋರ್ಪಡಿಸುತ್ತಿತ್ತು. ಶಾಲಾ ಮಕ್ಕಳ ಕಿಂಟರಗಾರ್ಡನ ಸಾಮಾನುಗಳು; ಇವುಗಳಲ್ಲಿ ಮಂಗಳೂರು ಗವರ್ನಮೆಂಟ ಎಲಿಮೆಂಟರಿ ಟ್ರೈನಿಂಗ್ ಶಾಲೆಯವರು ತಾವು ಸ್ವಂತವಾಗಿ ಆವೆ ಮಣ್ಣಿನಿಂದ ತಯಾರಿಸಿದ ದೇಹರಚನೆಯ ಆಕೃತಿ-ಚಿತ್ರದ ಸಾಮಾನುಗಳು, ಮುಲ್ಕಿಯ ಸುಬ್ರಾಯ ಆಚಾರಿ ಎಂಬವರಿಂದ ಯಂತ್ರೋಪಕರಣಗಳನ್ನು ಹೋಲುವ (ಮೊಡೆಲ್) ಮೋಟಾರಗಾಡಿ, ನೀರು ಹಾಯಿಸುವ ಯಂತ್ರ ಮೊದಲಾದವು, ರಾ। ಮಂಜೇಶ್ವರ ಕುಂಞಪ್ಪರೆಂಬವರಿಂದ ತಯಾರಿಸಿದ ಕೋವಿ, ಕೋಟೆ ಇವೆಲ್ಲ ಎಲ್ಲರ ಮನಸ್ಸನ್ನು ಎಳೆಯುವಂತಿತ್ತು. ಕಾಗದದ ಮುದ್ದೆ (Pulp) ನಿಂದ ನಿಲೇಶ್ವರದ ರಾ. ವಿನಾಯಕರೆಂಬವರು ತಯಾರಿಸಿದ ಜಿಂಕೆ ಪ್ರೇಕ್ಷಣೀಯವಾಗಿತ್ತು, ರಾ. ಹಾವಂಜೆ ಗೋಪಾಲಕೃಷ್ಣಯ್ಯನವರೇ ಮೊದಲಾದ ಕಲಾಕೌಶಲದಲ್ಲಿ ಹೆಸರುಗೊಂಡವರು ತಯಾರಿಸಿದ್ದ ವಿಚಿತ್ರ ಚಿತ್ರಗಳು, ಸ್ತ್ರೀಯರ ಕಸೂತಿ ಕೆಲಸಗಳು, ಕಂಚಿನ ಪಾತ್ರೆಗಳು ಮೀನು ಎಣ್ಣೆಗಳು, ಸಾಬೂನು, ಕಾಯಿ, ಅನೇಕ ತರದ ಮದ್ದುಗಳು ಸಹ ಅನೇಕರಿಂದ ಪ್ರದರ್ಶನಕ್ಕೆ ಬಂದಿದ್ದವು. ಪ್ರದರ್ಶನಕ್ಕೆ ಬಂದ ವಸ್ತುಗಳ ಯೋಗ್ಯತೆಯನ್ನು ತುಲನೆಮಾಡಿ ಬಹುಮಾನಗಳನ್ನು ಕೊಡಲು ಯೋಗ್ಯವಾದವುಗಳು ಯಾವುವೆಂದು ನಿರ್ಧರಿಸಲು ನೇಮಕವಾದ ಕಮಿಟಿಯವರು ತಮಗೆ ಯುಕ್ತ ತೋರಿದವರಿಗೆ ಬಹುಮಾನಗಳನ್ನು ಕೊಡಬಹುದು. ... ನಿನ್ನೆ ಸಾಯಂಕಾಲ ನಿಶ್ಚಯಿಸಿದ್ದಾರೆ. ಬಹುಮಾನಗಳ ಚಿನ್ನದ ಮತ್ತು ಬೆಳ್ಳಿಯ ಪದಕಗಳೂ ಅನೇಕ ಶಿಫಾರಸು ಪತ್ರಗಳೂ ಕೊಡಲಾಗುವವು.

ಎಲಿಮೆಂಟರಿ ಉಪಾಧ್ಯಾಯರುಗಳ ಪ್ರಥಮ ಜಿಲ್ಲಾ ಪರಿಷತ್ತು.

ಈ ಪರಿಷತ್ತು ... ಕಾಲೇಜಿನ ಸಭಾಮಂದಿರದಲ್ಲಿ ತಾ. ... ಗುರುವಾರ ಬೆಳಿಗ್ಗೆ ... ಗಂಟೆಗೆ ಸೇರಿತು. ಜಿಲ್ಲೆಯ ಆಯಾ ತಾಲೂಕುಬೋರ್ಡು ಶಾಲೆಗಳ ಉಪಾಧ್ಯಾಯರೂ, ಖಾಸಗಿ ಶಾಲೆಗಳ ಮೆನೇಜರರೂ, ಉಪಾಧ್ಯಾಯರುಗಳೂ ಬಹಳವಾಗಿ ಸಭೆಗೆ ಬಂದಿದ್ದರು. ಉಪಾಧ್ಯಾಯರುಗಳ ಇಷ್ಟು ದೊಡ್ಡ ಸಭೆಯು ಈ ಜಿಲ್ಲೆಯಲ್ಲಿ ಸೇರಿದ್ದು ಇದೇ ಪ್ರಥಮ ಸಾರಿ ಎಂತ ಹೇಳಬಹುದು. ಸಭಾಕಾರ್ಯಗಳು ತುಂಬಾ ಉತ್ಸಾಹದಿಂದ ನೆರವೇರಿಸಲ್ಪಟ್ಟವು. ಈ ಪರಿಷತ್ತಿನ ಕಾರ್ಯದರ್ಶಿಗಳಾದ ಮ। ರಾ। ಕೆ. ಎನ್. ಹೆಬ್ಬಾರರವರು ಉಪಾಧ್ಯಾಯರ ದೀನಸ್ಥಿತಿ ಇದನ್ನು ಹೋಗಲಾಡಿಸುವ ಉದ್ದೇಶದಿಂದ ಎಂತೆಂತಾ ಪ್ರಯತ್ನಗಳು ಮಾಡಲಾದವು, ಅವುಗಳು ಫಲವಿಲ್ಲದೆ ಎಷ್ಟರಮಟ್ಟಿಗೆ ನಿಂತುಹೋದವು. ಮುಂದಿನ ಪ್ರಯತ್ನಗಳು ಹೇಗೆ ವ್ಯವಸ್ಥಿತವಾಗಬೇಕು. ಈ ಬಗ್ಗೆ ಉಪಾಧ್ಯಾಯರುಗಳ ಜಿಲ್ಲಾ ಸಂಘವೊಂದು ಏಕೆ ಅಗತ್ಯ, ತಾಲೂಕು ಸಂಘಗಳ ರಚನೆ ಇವುಗಳ ಮುಂದಿನ ಸಂಯೋಜನೆ ಈ ವಿಷಯಗಳನ್ನೆಲ್ಲಾ ಎತ್ತಿಕೊಂಡು ಈತನಕ ನಡೆದ ಎಲ್ಲಾ ಪ್ರಯತ್ನಗಳನ್ನು ವಿವರವಾಗಿ ತಮ್ಮ ಸ್ವಾಗತಭಾಷಣದಲ್ಲಿ ಪ್ರಸ್ತಾಪಿಸಿದರು. ಕಾರ್ಕಳ ತಾಲೂಕು ಬೋರ್ಡಿನ ವೈಸ್ ಪ್ರೆಸಿಡೆಂಟರೂ, ಹೈ ಕೋರ್ಟು ವಕೀಲರೂ ಆದ ಮ। ರಾ। ಇದ್ಯ ವಾಸುದೇವರಾವ್‌ರವರನ್ನು ಸರ್ವಸಮ್ಮತವಾಗಿ ಸಭೆಯ ಅಧ್ಯಕ್ಷರನ್ನಾಗಿ ಆರಿಸಲಾಯಿತು. ಅಧ್ಯಕ್ಷರವರು ಎಲಿಮೆಂಟರಿ ವಿದ್ಯಾಪ್ರಸರಣೆಯ ವಿಶೇಷತ್ವವನ್ನು ಕುರಿತು ಮಾತಾಡಿ ಈಗಿನ ಕಾಲದಲ್ಲಿ ಇದರ ಪ್ರಸರಣೆಯಲ್ಲಿ ದೇಶಕ್ಕೆ ಮಹದುಪಕಾರವನ್ನು ಮಾಡುವಂಥ ಮತ್ತು ಮಾಡತಕ್ಕ ಮೂಲ ಶಾಲಾ ಉಪಾಧ್ಯಾಯರುಗಳ ವರ್ಗದ ಒಳ್ಳೇತನ್ನು ಸಾಧಿಸುವದು ಕರ್ತವ್ಯವಾಗಿದೆಂದು ಮಾಸ್ತರುಗಳ ಪರವಾಗಿ ತಮ್ಮ ಸಂಪೂರ್ಣ ಸಹಾನುಭೂತಿಯನ್ನು ಸೂಚಿಸಿ ಮಾತಾಡಿದರು. ನಂತರ ಸಭೆಯ ಮುಂದಿಟ್ಟ ೨೪ ನಿರ್ಣಯಗಳಲ್ಲಿ ಆರು ನಿರ್ಣಯಗಳು ಮಂಜೂರಾಗಿ ಸಭೆಯು ಮಾರನೆದಿನ ಬೆಳಗ್ಗೆ ೮ಗಂಟೆಗೆ ಕೂಡ ಬೇಕೆಂತ ನಿಶ್ಚಯಿಸಲ್ಪಟ್ಟಿತು. ಈ ಪರಿಷತ್ತಿನ ಹೆಚ್ಚಿನ ವಿವರವನ್ನು ಮುಂದಿನ ಸಂಚಿಕೆಯಲ್ಲಿ ಪ್ರಕಟಿಸುವೆವು.

ಕೆನರಾ ಹೈಸ್ಕೂಲಿನ ವರ್ಧಂತಿ ಉತ್ಸವವು.

ಕೆನರಾ ಹೈಸ್ಕೂಲಿನ ವಾರ್ಷಿಕೋತ್ಸವವು ಮ। ರಾ। ರಾ। ಪಿ. ಪಿ. ರಾವ್ ಐ. ಸಿ. ಎಸ್. ರವರ ಅಧ್ಯಕ್ಷತೆಯಲ್ಲಿ ತಾ. ೨೮ನೇ ಆದಿತ್ಯವಾರ ಬಹಳ ಸಂಭ್ರಮದಿಂದ ನೆರವೇರಿತು. ಈ ಉತ್ಸವವು ತಾ. ೨೮ನೇ ದಿನ ಕೊನೆಗೊಂಡರೂ ಇದರ ಪ್ರಾರಂಭವು ತಾ. ೨೪ನೇ ದಿನವೇ ಆಗಿತ್ತು. ಕೈಗಾರಿಕೆಯ ವಸ್ತು ಪ್ರದರ್ಶನ ಮತ್ತು ಲಕ್ಚರ್ ಇವುಗಳಿಗೆ ತಾ. ೨೪ನೇ ದಿನ ಪ್ರಾತಃಕಾಲ ಮುಹೂರ್ತವಾಯಿತು. ಮಧ್ಯಾಹ್ನ ಶಾಲಾ ಹುಡುಗರಲ್ಲಿ ಪಂದ್ಯಾಟಗಳು ನಡೆದವು. ತಾ. ೨೫ನೇ ಶನಿವಾರ ಬಾಲಿಕಾ ಪಾಠಶಾಲೆಯ ಬಾಲಿಕೆಯರಿಗೂ ಕೆನರಾ ಹೈಸ್ಕೂಲಿನ ಲೋವರ್ ಸೆಕೆಂಡರಿ ದರ್ಜೆಗಳ ವಿದ್ಯಾರ್ಥಿಗಳಿಗೂ ಇನಾಮುಗಳು ಮಿಸ್ಸಸ್ ಶ್ರೀನಿವಾಸ ಇವರಿಂದ ಹಂಚೋಣವಾದವು. ವಾರ್ಷಿಕೋತ್ಸವದ ಸಲುವಾಗಿ ತಯಾರಿಸಿದ ತುಕಾರಾಮ ನಾಟಕವು ಈ ದಿನ ಸ್ತ್ರೀಯರ ಬಗ್ಗೆ ಶಾಲಾ ಹುಡುಗರು ಆಡಿ ತೋರಿಸಿದರು. ತಾ. ೨೬ನೇ ಆದಿತ್ಯವಾರ ಬೆಳಗ್ಗೆ ಮತ್ತು ಸಾಯಂಕಾಲ ಸಹ ಮುಂಚಿನ ಮತ್ತು ಈಗಿನ ವಿದ್ಯಾರ್ಥಿಗಳಿಗೆ ಸುಮಾರು ರೂ. ೧೦೦ರ ಖರ್ಚಿನ ಫಲಾಹಾರವಿತ್ತು. ತಿಂಡಿಗಳನ್ನೆಲ್ಲವನ್ನು ಮಂಗಳೂರಿನ ಹೆಸರುವಾಸಿಯಾದ ಕೆಫೇ ... ತಯಾರಿಸಿ ವಿದ್ಯಾರ್ಥಿಗಳಿಗೆ ಬಹಳ ಸಮರ್ಪಕವಾದ ರೀತಿಯಲ್ಲಿ ಹಂಚಿದರು. ಪಂದ್ಯಾಟಗಳಲ್ಲಿ ಗೆದ್ದ ವಿದ್ಯಾರ್ಥಿಗಳಿಗೆ ಮದ್ರಾಸಿನ ಹೈಕೋರ್ಟು ವಕೀಲರಾದ ಮ। ರಾ। ರಾ। ಕೆ. ಯು. ರಾಮರಾವ್‌ರವರು ಇನಾಮುಗಳನ್ನು ಹಂಚಿದರು. ಇದು ಮುಗಿದ ನಂತರ ಶಾಲೆಯ ಹೆಡ್‌ಮಾಸ್ತರರ ಅಧ್ಯಕ್ಷತೆಯಲ್ಲಿ ಶಾಲೆಯ ಹಳೆ ವಿದ್ಯಾರ್ಥಿಗಳ ಕೂಟವು ಜರಗಿತು. ಹಳೆ ವಿದ್ಯಾರ್ಥಿಗಳಲ್ಲೊಬ್ಬರಾದ ಪ್ರಕೃತ ಮಲಬಾರು ಪ್ರಾಂತ್ಯಗಳಲ್ಲಿ ಡಿಸ್ಟ್ರಿಕ್ಟ್ ಮುನ್ಸಿಫರಾಗಿರುವ ಮ। ರಾ। ರಾ। ಬಂಟವಾಳ ವಂಕಟರಾವ್‌ರವರು ಮಾಡಿದ ಭಾಷಣವು ಆಲೋಚಿತ ಸೂಚನೆಗಳಿಂದ ಕೂಡಿತ್ತು. ವಿದ್ಯಾ ಪ್ರಸರಣೆಯಲ್ಲಿ ಕಳೆದ ಮೂರು ದಶಾಬ್ದಗಳಿಂದ ಈ ಶಾಲೆಯು ಮಾಡಿದ ಸಾಧನವು ಎಷ್ಟು ವಿಸ್ತಾರವಾದ ಖ್ಯಾತಿಯನ್ನು ಹೊಂದಿದೆ, ಈ ಸಂಸ್ಥೆಗೆ ಯಾವ ಭಾವದಿಂದ ಸಹಾಯವನ್ನೀಯಬೇಕೆಂಬುವ ವಿಷಯ ಬಹಳ ಆಸಕ್ತಿಯಿಂದ ಮಾತಾಡಿದರು. ಸಾಯಂಕಾಲ ಆಟ ಫಲಾಹಾರಗಳು ತೀರಿದ ನಂತರ ಶಾಲಾಧಿಕಾರಿಗಳಿಂದ ಆಮಂತ್ರಿಸಲ್ಪಟ್ಟ ಪುರಜನರ ಮತ್ತು ವಿದ್ಯಾರ್ಥಿಗಳ ಮಹಾಸಭೆಯು ಜರಗಿತು. ಸಭೆಗೆ ಆಕ್ಟಿಂಗ್ ಡಿಸ್ಟ್ರಿಕ್ಟ್ ಕಲೆಕ್ಟರರೂ ಶಾಲೆಯ ಹಳೆಯ ವಿದ್ಯಾರ್ಥಿಗಳೂ ಆದ ರಾವ್ ಬಹದ್ದೂರ್ ಉಪ್ಪಿನಂಗಡಿ ರಾಮರಾಯರೂ, ಇಂಥಾ ಪದವಿಯಲ್ಲಿ ಇನ್ನ ಇನ್ನೊಬ್ಬ ಶಾಲೆಯ ವಿದ್ಯಾರ್ಥಿಗಳಾದ ರಾ। ಅಮ್ಮೆಂಬಳ ಉಪೇಂದ್ರಪೈಗಳೂ ಹಾಜರಿದ್ದರು. ರಾ। ಸಾಹುಕಾರ ಎಮ್. ಎನ್. ಶೆಣಯವರು ತಮ್ಮ ಚೊಕ್ಕಟದ ಭಾಷಣದಲ್ಲಿ ಶಾಲೆಯ ಹಿತವನ್ನು ಬಯಸಿ, ಶಾಲೆಯನ್ನು ವಂದಿಸಿದನಂತರ, ಶಾಲಾವರದಿಯು ಓದಲಾಯಿತು. ವರದಿಯಲ್ಲಿ ವಿಶೇಷ ಸಂಗತಿಗಳಿದ್ದಿಲ್ಲ. ಸಾಮಾನ್ಯವಾಗಿ ಈಗಿನ ಶಾಲಾ ವರದಿಗಳಲ್ಲಿರುವಂತೆ ಶಾಲಾ ವಿಸ್ತಾರಕ್ಕೆ ಇರುವ ಸ್ಥಳಸಂಕೋಚ, ಸರಕಾರದಿಂದ ದೊರೆತ ಸಹಾಯಪ್ರಸ್ತಾಪ ನಂತರ ಇನ್ಸ್‌ಪೆಕ್ಟರುಗಳ ಡಿರೆಕ್ಟರುಗಳ ಶಿಫಾರಸು — ಇವುಗಳು ಎಂದಿನಂತೆ ಶಾಲೆಯ ಖ್ಯಾತಿಯನ್ನು ಬಲವಾಗಿ ರುಜುಪಡಿಸುತ್ತಿವೆ. ಶಾಲೆಯ ಮಾಜಿ ಹೆಡ್ ಮಾಸ್ತರಾಗಿದ್ದ ಮ। ರಾ। ಅರ್ಕುಳ ವಾಸುದೇವರಾಯರ ಹೆಸರಿನಲ್ಲಿ ಈಗಿರುವ ಶಾಲಾ ಹೋಸ್ಟೆಲಿಗೆ ಒಂದು ಕಟ್ಟಡವನ್ನು ಕಟ್ಟಿಸಲು ಸ್ಮಾರಕ ಕಮಿಟಿಯವರು ರೂ. ೧೫೦೦ನ್ನು ಕೊಟ್ಟಿರುವರೆಂತ ವರದಿಯಿಂದ ತೋರಿಬರುತ್ತದೆ. ಈ ಜಿಲ್ಲೆಯಲ್ಲಿ ಇಂತಹ ಬಲವತ್ತಾದ ಶಾಲೆಯನ್ನು ಸ್ಥಾಪಿಸಿದಂಥವರಿಗೆ ಇದನ್ನು ಕೋಲೇಜನ್ನಾಗಿ ಮಾಡುವುದು ಸುಲಭಸಾಧ್ಯವಾದ್ದರಿಂದ ಆ ಕಡೆಗೆ ಪ್ರಯತ್ನಪಡಿಸುವುದು ಅಗತ್ಯವೆಂತ ಸಭಾಧ್ಯಕ್ಷರು ತಮ್ಮ ಭಾಷಣದಲ್ಲಿ ಸೂಚಿಸಿರುತ್ತಾರೆ. ಮ। ರಾ। ಅಮ್ಮೆಂಬಳ ಶ್ರೀನಿವಾಸ ಪೈಗಳವರು ಅಧ್ಯಕ್ಷರನ್ನು ವಂದಿಸಿ ಉಪಕಾರಸ್ಮರಣೆಯ ತಮ್ಮ ಭಾಷಣವನ್ನು ಮಾಡಿದ ನಂತರ ತುಕಾರಾಮ ನಾಟಕವು ಅಭಿನಯಿಸಲ್ಪಟ್ಟಿತು. ಇಲ್ಲಿಗೆ ಶಾಲಾ ವಾರ್ಷಿಕೋತ್ಸವವು ಮುಕ್ತಾಯವಾಯಿತು.

THE EDITOR,

"SWADESHABHIMANI."

My dear Sir,

With the object of promoting a spirit of brotherhood among the members of the boy-scout organizations of our two Saraswat schools in Mangalore, I venture to suggest that fund to be named, "The Mangalore Boy Scouts' outing Fund" may be instituted under the joint auspices of our managing Boards. The v[...] and administration may be entru[sted ...] formation of a local Branch of [...] SARASWAT BRAHMAN SABHA [...] Committee consisting of the se[...] members of the sabha from a[...] Saraswats and two from amo[ng ...] Saraswats, elected by the manag[...] Canara High School and the Gan[...] School respectively.

The object of the fund is to [...] joint outings for the Boy Scouts [...]tutions, and the proceeds, or bette[r ...] thereon, should be utilized for [...] providing refreshments and, wh[...] granting railway fares to these [...] students irrespective of caste [...] Schools and belonging to the [...] Troops should be particularly e[...] and share the advantages of suc[h ...] without saying that periodical [...] this kind among the rising generat[ion ...] their outlook, enable them to c[...] spirit of the scout and foster a [...]ship and unity among them for [...]selves and ultimate advancemen[t ...]

I am sending you a nominal [...] as a nucleus towards the suggest[ed ...] as contributions have reached a [...] I shall be glad to lend a furthe[r ...] and when the total has reached [...] instalment of Rs. 5. Contributi[ons ...] from all sections of the Hindu [...] city as the scheme is intended [...] students irrespecive of caste.

Will my enlightened country[men ...] progressive Mangalore as we [...] are proud to acknowledge fro[m ...] experience, rise to the occasio[n ...] scheme materalizes with as littl[e ...] It is for the Gowd and Chitrap[ur ...] Community to give the lead i[n ...] schools are maintained by them. I suggest that the authorities c[...] arrange a joint outing of the [...] early date together with a gr[...] the Troop with their Scout M[...] the event? On hearing from [...] has been done I shall be p[...] whether the Fund suggested [...] the meantime or not, a draft [...] contribution to the coast of [...] photo and the expense of [...] copies of the photograph to [...] of the respective institutions.

Thanking you in anticip[ation ...] publication of this rather l[...] esteemed Journal.

Bombay, 7.

18th Dec. 1920.

ಮಂಗಳೂರು

ದಕ್ಷಿಣ ಕನ್ನಡ ಜಿಲ್ಲೆಯ ದ್ರಾವಿ[...] ಪರಿಷದವು ರಾವಸಾಹೇಬ ಡಾಕ್ಟರ [...] ಎಲ್. ಸಿ.ಯವರ ಅಧ್ಯಕ್ಷತೆಯಲ್ಲಿ [...] ವಿದ್ಯಾರ್ಥಿ ಭವನದಲ್ಲಿ ತಾರೀಕು ೨೭ನೇ [...] ಗಂಟೆಗೆ ಕೂಡಿತು. ಪ್ರಥಮತಃ [...]ಯರ ಹಾಡುವಿಕೆಯಾದ ಮೇಲೆ [...] ಈ ಭಾಷಣದ ಮುಖ್ಯ ಅಂಶಗಳನ್ನು [...]ಸಿದ್ದೇವೆ. ಈ ಪರಿಷದದಲ್ಲಿ ಸುಮಾರು [...]ಸ್ಥರು ಹಾಜರಿದ್ದರು. ಎರಡು ದಿನಗಳ[...]ದು ಹಲವು ಉಪಯುಕ್ತ ಸೂಚನೆಗಳ[...] ಇರುವ ವಿದ್ಯಾರ್ಥಿ ಭವನವನ್ನು ವೃದ್ಧಿ [...] ವಿದ್ಯಾರ್ಥಿಗಳ ಬಗ್ಗೆ ಒಂದು ವೇತನ[...] ಬಡ ಮಕ್ಕಳ ಶಿಕ್ಷಣ ಮೊದಲಾದವುದರ [...] ಒಂದು ಬೇಂಕನ್ನು ಸ್ಥಾಪಿಸುವುದು, [...]ವುದು, ವರ್ತಮಾನ ಪತ್ರಿಕೆಯನ್ನು [...]ವಿದ್ದರೆ ಒಂದು ಔದ್ಯೋಗಿಕ ಶಾಲೆ[...] ಈ ಎಲ್ಲಾ ಕಾರ್ಯಗಳನ್ನು ನೆರವೇ[...] ಕಮ್ಮಿಟಿಯು ಸಭೆಯಲ್ಲಿ ನೇಮಕವಾಯಿ[ತು ...] ಸಾಧನೆಯ ಸಾಮರ್ಥ್ಯದ ಕೆಲವು ಆಟ[...] ಗೋಪಾಲ ಕೃಷ್ಣರಾಯರಿಗೆ ಒಂದು [...] ಭೀಮ'ನೆಂಬ ಬಿರುದು ಅಧ್ಯಕ್ಷರಿಂದ [...]ಸ್ವತಃ ಅಧ್ಯಕ್ಷರು ಹೆಲ್ತ ಎಂಡ್ ವೆಲ್‌ಫೇ[ರ್ ...]ಸಿದರು, ಬರುವ ವರುಷ ಈ ಪರಿಷ[ತ್ತು ...]ಯಲ್ಲಿ ಕೂಡತಕ್ಕದ್ದಾಗಿ ನಿರ್ಧಾರವಾ[ಯಿತು].

[illegible]

ಸ್ವದೇಶಾಭಿಮಾನಿ.

[illegible] ಶುಕ್ರವಾರ.

ನಾಗಪುರದಲ್ಲಿ ರಾಷ್ಟ್ರೀಯ ಸಭೆ.

ಕಲ್ಕತ್ತೆಯಲ್ಲಿ ಕೆಲ ತಿಂಗಳ ಹಿಂದೆ ನಡೆದ ವಿಶೇಷ ಅಧಿವೇಶನದಲ್ಲಿ ಮಂಜೂರಾದ ಅಸಹಕಾರಿತ್ವದ ತತ್ವವನ್ನು ಇನ್ನೂ ಮುಂದ ... ಗೊಳಿಸುವುದು ಈ ತಿಂಗಳ ... ತಾರೀಕಿನಿಂದ ನಾಗಪುರದಲ್ಲಿ ಜರಗಿದ ರಾಷ್ಟ್ರೀಯ ಸಭೆಯ ಅಧಿವೇಶನದ ಮುಖ್ಯ ಕೆಲಸವು. ... ರಾಷ್ಟ್ರೀಯ ಸಭೆಯು ... ವರ್ಷಗಳ ಇತಿಹಾಸದಲ್ಲಿ ನಾಗಪುರವು ಈ ಸಲ ವಿಶೇಷ ರೀತಿಯಲ್ಲಿ ಖ್ಯಾತಿಗೊಂಡಿದೆ. ... ವರ್ಷಗಳ ಹಿಂದಿನ ಅಧಿವೇಶನದಲ್ಲಿ ನಾಗಪುರದಲ್ಲಿ ಪ್ರಥಮತಃ ಸನ್ನಿಂದ ... ನವರಿಗೂ ಉಗ್ರಪಕ್ಷದವರಿಗೂ ಬಿರುಕು ... ಬಿಟ್ಟಿತು. ಅಸಹಕಾರದ ತತ್ವಗಳನ್ನು ಒಪ್ಪಿದರೂ ... ಕಲ್ಕತ್ತೆಯಲ್ಲಿ ತಯಾರು ಮಾಡಿದ ... ಗಳು ... ಅವುಗಳಲ್ಲಿ ... ಆಸ್ಪದವಿದೆ ... ಭಿನ್ನ ಭಿನ್ನ ಅಭಿಪ್ರಾಯಗಳು ಹಿಂದೀ ಮುಖಂಡರಲ್ಲಿ ಇದ್ದಿದ್ದು, ಇವರೆಲ್ಲರೂ ಏಕಮತಸ್ಥರಾಗಿಲ್ಲ. ... ಈ ಕಾಂಗ್ರೆಸಿನಲ್ಲಿ ... ಹಾಗೆ ... ಬಾರದಿದ್ದರೆ ಮಹಾತ್ಮಾಗಾಂಧಿಯವರ ಅನುಯಾಯಿಗಳು ಈ ಸಲ ತಮ್ಮ ಒಂದು ಬಲವಾದ ಪಂಗಡವನ್ನು ಕಟ್ಟಿಕೊಂಡು ರಾಷ್ಟ್ರೀಯ ಸಭೆಯನ್ನೆ ತಮ್ಮದಾಗಿ ಮಾಡಿಕೊಂಡು ಇತರ ಮುಖಂಡರು ಈ ಸಭೆಯಿಂದ ವಿಮುಖರಾಗುವರೋ ಎಂಬ ಪ್ರಶ್ನೆಯು ಈಗ ದೇಶಭಕ್ತರಲ್ಲಿ ಕಳ್ಳೋಲವನ್ನು ಉಂಟುಮಾಡಿದೆ. ... ಜನರಲ್ಲಿ ಬಂದ ಈ ವಿಶೇಷ ವಿಚಾರದಿಂದಲೇ ಈ ಸಲ ಸಾವಿರ ... ಡೆಲಿಗೇಟರು ಬಂದು ಸೇರಲಿಕ್ಕೆ ಎಡೆಕೊಟ್ಟಿತೆಂದು ಭಾವಿಸ... ಕ್ರೆಡೋಕ್ ಟೌನಿನಲ್ಲಿ ಹಾಕಿದ ... ಎಷ್ಟು ವಿಸ್ತಾರವಾಗಿದ್ದರೂ ಸಾಲದೆ, ಗಲಾಟೆ ... ತ್ತೇವೆ. ದ್ವಾರಕೆಯ ಶ್ರೀ ಶಂಕರಾಚಾರ್ಯರೂ ... ಗಳೂ ಈ ಅಧಿವೇಶನದಲ್ಲಿ ಹಾಜರಿದ್ದದ್ದು ಉತ್ತ ... ಹೊಂದಿರುವುದಾಗಿ ವ್ಯಕ್ತಗೊಳಿಸುತ್ತದೆ.

... ಗೇನರಾದ ಮಿ। ಸೇಠ್ ಜಮುನಾ ... ಸ್ವಾಗತದ ಭಾಷಣವನ್ನು ಮುಗಿಸಿದ ನಂತರ ಪ್ರೆಸಿಡೆಂಟರಾದ ... ವಿ. ವಿಜಯರಾಘವಾಚಾರ್ಯರು ತಮ್ಮ ... ವನ್ನು ಓದತೊಡಗಲು ಮೊದಲೇ ಅಧ್ಯಕ್ಷರು ಅಸಹಕಾರಿತ್ವ ... ಮಟ್ಟಿಗೆ ಖಂಡಿಸಿದ್ದರಿಂದ ... ವರ್ತಮಾನವಿದ್ದುದರಿಂದ ... ಕೇಳಿಸದೆ ಇದ್ದು ಜನರ ಗಲಾಟೆ ಹೆಚ್ಚಿತು. ಕಡೆಗೆ ... ಬಿಪಿನ ಚಂದ್ರಪಾಲರು ದೊಡ್ಡದಾದ ಸ್ವರದಿಂದ ಅದನ್ನು ... ಓದಿ ಆ ಮೇಲೆ ಪುನಃ ಅಧ್ಯಕ್ಷರೇ ಅದನ್ನು ಓದಿ ... ದರು. ಇದರ ಸಾರಾಂಶವನ್ನು ಕೆಳಗೆ ಕೊಟ್ಟಿರುವೆವು.

ಹಿಂದುಸ್ಥಾನದ ಆಡಳಿತೆಯ ಸೂತ್ರಗಳ ಚಾಲಕರ ವರ್ತನವು ... ಬಗೆಯ ವಿಪರೀತ ಪರಿಣಾಮವನ್ನು ಉಂಟುಮಾಡಿದ್ದ... ಪರಮಪೂಜ್ಯರಾದ ... ಗೂ ಇಡೀ ಲೋಕದ ... ನಾಂಗಗಳಿಗೂ ನಾವು ಸಾರಿ ಹೇಳ... ಒಂದು ಮಾತಿದೆ. ನಮ್ಮ ... ರಮಣೀಯವಾದ ದೇಶದಲ್ಲಿ ಹುಟ್ಟಿ ಬೆಳೆದ ನಾವೂ ನಮ್ಮ ... ಮರಿ ಸಹ ನಿಶ್ಚಿಂತರಾಗಿ ಸುಖವನ್ನು ಅನುಭವಿಸುವುದಾದರೆ ... ಗೆ ಏನು ಬೇಕು ಎಂಬದನ್ನು ನಾವು ಅವರಿಗೆ ಸ್ವನ್ಯೋಕ್ತಿಗಳಿಂದ ... ಸಬೇಕು. ಈಗಿನ ಪರಿಸ್ಥಿತಿಯಲ್ಲಿ ನಾವು ಬ್ರಿಟಿಷ ಸಾಮ್ರಾಜ್ಯದಲ್ಲಿ ... ಅಂಗವಾಗಿದ್ದೇವೆ. ಅಂಥ ಅಂಗವು ಸ್ವತಂತ್ರ ರಾಜ್ಯ ... ಕ್ರಮಗಳನ್ನು ಅನುಸರಿಸಿ ... ದಲ್ಲಿ ... ವಾಗಿ ... ನ್ನು ಸ್ಥಾಪಿಸಬೇಕಾದರೆ ಪ್ರಜೆಗಳ ಮೂಲಹಕ್ಕುಗಳು ... ವನ್ನು ಹೇಗೆ ಕಾಪಾಡಬೇಕು ಎಂಬುದನ್ನು ನಾವು ತೋರಿಸಿ ... ಬೇಕು. ಹಿಂದುಸ್ಥಾನದಲ್ಲಿ ಸ್ವದೇಶೀಯ ರಾಜ್ಯಭಾರವನ್ನು ... ಸಿ ಪ್ರಜೆಯ ಈ ಹಕ್ಕುಗಳನ್ನು ರಕ್ಷಣೆಮಾಡುವುದಕ್ಕೆ ... ಶಾಸನವನ್ನು ಹೊರಡಿಸಿದ್ದರೆ ... ಶಾಂತಿಸುಖಗಳು ... ಕ್ಕೆ ಬರಲಾರವು ... [illegible] ... ನಾಚಿಕೊಂಡು ನಮ್ಮನ್ನು ... ಎಚ್ಚರಗೊಳಿಸಿದೆ.

[illegible]

ಮೂಲಕವಾಗಿಯೂ ಪಾರ್ಲಿಮೆಂಟಿನವರು ಮಾಡುವ ಶಾಸನ ... ದಿಂದಲೂ ಅಥವಾ ... ಮಂಜೂರುಮಾಡುವ ಕಾನೂನುಗಳ ಮೂಲಕವಾಗಿಯೂ ... ಬಹುದು. ಆದರೆ ... ಗಿನ ... ಬರುವ ಪರಿಣಾಮವು ... ಸಮಾಧಾನಕರವು ಅಲ್ಲ. ಪಾರ್ಲಿಮೆಂಟಿನ ಹೌಸ್ ಆಫ್ ಕಾಮನ್ಸ್ ಸಭೆಯಲ್ಲಿ ರಿಫಾರ್ಮ್ ಎಕ್ಟು ಮತ್ತು ಪಂಜಾಬದ ಗಲಾಟೆಯನ್ನು ಕುರಿತು ಕೈಕೊಂಡ ಧೋರಣವು ನಮ್ಮ ಮೂಲಹಕ್ಕುಗಳ ವಿಷಯದಲ್ಲಿ ಅವರಿಗೆ ಇರುವ ತಾತ್ಸಾರವನ್ನು ಸ್ಪಷ್ಟಗೊಳಿಸುತ್ತದೆ. ಹೀಗಾಗಿ ಈ ಬಗ್ಗೆ ನೆಲದ ಮೇಲೆ ಅಸ್ತಿವಾರ ಹಾಕುವುದರಿಂದ ನಮ್ಮ ಹಕ್ಕುಗಳ ಇಮಾರತು ಎಂದಿಗೂ ಸ್ಥಿರವಾದಿ ನಿಲ್ಲದು. ಯುನೈಟೆಡ್ ಸ್ಟೇಟ್ಸ್ ಸಂಸ್ಥಾನವು ಬ್ರಿಟಿಷ ಸಾಮ್ರಾಜ್ಯದ ವಸಾಹತುಗಳ ಮಾಲೆಯಿಂದ ಕಳಚಿಕೊಳ್ಳುವಾಗ ತನ್ನ ಸ್ವಾತಂತ್ರ್ಯವು ದೈವನಿರ್ಮಿತ ಹಕ್ಕುಗಳ ಪ್ರತಿಪಾದನವೆಂಬ ತತ್ವವನ್ನು ಅನುಸರಿಸಿತು. ಜನತೆಯೇ ತನಗೆ ಇಷ್ಟವಾದ ಮತ್ತು ಉಪಯುಕ್ತವಾದ ರಾಜ್ಯಭಾರಕ್ರಮವನ್ನು ಅನುಸರಿಸಬೇಕು. ಅನ್ಯ ಜನಾಂಗಗಳು ಅದನ್ನು ಸೂಚಿಸಲು ಅರ್ಹರಲ್ಲ ಎಂಬದನ್ನು ಹಿಂದೂ ಧರ್ಮಶಾಸ್ತ್ರ ಬ್ರಿಟಿಷ ಜನಾಂಗದ ಇತಿಹಾಸ, ಮುಸಲ್ಮಾನ ಮತದ ಧರ್ಮಶಾಸ್ತ್ರಗಳ ದೃಷ್ಟಿಯಿಂದ ವ್ಯಾಖ್ಯಾನಮಾಡಿ ಮಿ। ವಿಜಯರಾಘವಾಚಾರ್ಯರು ಹಿಂದೂಸ್ಥಾನವು ಬ್ರಿಟಿಷರ ಕತ್ತಿಯ ಸಹಾಯದಿಂದ ಜಯಿಸಿದ ಪ್ರಾಂತವೆಂಬ ಭಾವನೆಯು ಶುದ್ಧ ತಪ್ಪು. ಹಿಂದೀ ಜನರಿಗೆ ಬ್ರಿಟಿಷರ ಕಾರ್ಯಕ್ರಮಗಳಲ್ಲಿದ್ದ ವಿಶ್ವಾಸವೇ ಈ ಅನುಬಂಧಕ್ಕೆ ಕಾರಣವಾಯಿತು. ಅಂಥ ವಿಶ್ವಾಸವನ್ನು ಬ್ರಿಟಿಷ ಮಂತ್ರಿ ಕೂಟದವರು ಖಿಲಾಫತ್ತು ಮತ್ತು ಪಂಜಾಬದ ಪ್ರಕರಣಗಳ ನಿಕಾಲೆಯಲ್ಲಿ ತಗ್ಗಿಸಿಬಿಟ್ಟರು. ಅಂಥ ಪರಿಸ್ಥಿತಿಯು ಮುಂದೆ ಬಾರದಂತೆ ಮಾಡುವುದಕ್ಕೆ ತಾನು ತಯಾರಿಸಿದ ವಿಧದ ಶಾಸನವೇ ತಕ್ಕ ಉಪಾಯವೆಂದು ಹೇಳಿದರು.

ಅನಂತರ ರಿಫೋರ್ಮ್ ಎಕ್ಟನ್ನು ಕುರಿತು ಟೀಕಿಸುವಾಗ ಅಧ್ಯಕ್ಷರು ಹೀಗೆಂದರು:—ಜವಾಬ್ದಾರಿ ರಾಜ್ಯಭಾರ ಕ್ರಮದಲ್ಲಿ ಹೆಜ್ಜೆ ಇಡುವಾಗ ಮುಂದಿನ ಹೆಜ್ಜೆ ಇಡುವ ತ್ರಾಣವು ನಮ್ಮಲ್ಲಿ ಬಂದಿದೆಯೊ ಎಂದು ನಿರ್ಣಯ ಮಾಡುವ ಅಧಿಕಾರವನ್ನು ಪಾರ್ಲಿಮೆಂಟಿಗೆ ಇಟ್ಟಿರುವುದು ಈ ಎಕ್ಟಿನ ದೊಡ್ಡದೊಂದು ಕುಂದುಕ. ಮುಂದಿನ ಹೆಜ್ಜೆ ಇಡಲು ನಾವು ಪ್ರಾಪ್ತರಾಗಿಲ್ಲವೆಂದು ಪಾರ್ಲಿಮೆಂಟಿನವರು ನಿರ್ಧರಿಸುವುದಾದರೆ ನಾವು ಮುಂದೆ ಹೋಗಕೂಡದೆಂದು ಇಡುವ ನಿರ್ಬಂಧವು ಬ್ರಿಟಿಷರ ಬೇರೆ ಯಾವ ವಸಾಹತಿಗೂ ಇಲ್ಲ. ವರಿಷ್ಠ ಸರಕಾರವು ನಿರಂಕುಶವಾಗಿ ಆಳ್ವಿಕೆಗೆ ಎಡೆ ಇಟ್ಟು, ಅದರ ಆಶ್ರಯದಲ್ಲಿ ಹಲವು ಸಂಸ್ಥಾನಗಳನ್ನು ಸಂಯೋಜಿಸಿದ ರೀತಿಯು ಪರಿಷ್ಕಾರವಾದ್ದಲ್ಲ. ಈಗಲೇ ಕಂದಾಯದ ಹಂಚಿಕೆಯಲ್ಲಿ ಅಸಮಾಧಾನವು ಈ ಬೇರೆ ಬೇರೆ ಪ್ರಾಂತಗಳಲ್ಲಿ ಉಂಟಾಗಿದೆ. ಇಷ್ಟೇ ಅಲ್ಲ; ಈ ಪ್ರಾಂತಗಳಲ್ಲಿಯೂ ರಾಜ್ಯಭಾರದ ಪ್ರಮುಖ ಇಲಾಖೆಗಳು ಕೆಲವು ಬಿರೋಕ್ರಸಿಯ ಕೈಯಲ್ಲಿ, ಇತರ ಇಲಾಖೆಗಳನ್ನು ಮಾತ್ರ ಜನತೆಯೊಳಗಿಂದ ನೇಮಿಸಿದ ಮಂತ್ರಿಗಳಲ್ಲಿ ಇಡುವ ಕ್ರಮವು ಸಮಾಧಾನಕರವಾದ್ದಲ್ಲ; ಇಂಥ ಮಾದರಿಯ ದ್ವಿಮುಖಿ ಸಂಸ್ಥೆಗಳು ಬೇರೆ ಎಲ್ಲಿಯೂ ಇಲ್ಲ ಎಂದು ಮುಂತಾಗಿ ಟೀಕಿಸಿದರು.

ಹೀಗೆ ವಿಶ್ವಾಸವು ಕೆಟ್ಟುಹೋದ್ದರಿಂದ ಮೇಲೆ ಹೇಳಿದ ದೈವೀ ಹಕ್ಕುಗಳನ್ನು ಸಂಪಾದಿಸುವ ನಿಮಿತ್ತವಾಗಿ ನಿರ್ಗತಿಕರಾದ ನಾವು ಸರಕಾರದೊಡನೆ ಅಸಹಕಾರಿತೆಯನ್ನು ಕೈಕೊಳ್ಳುವುದು ಅಗತ್ಯವೆಂದು ಕಳೆದ ಕಲ್ಕತ್ತೆಯ ಅಧಿವೇಶನದಲ್ಲಿ ನಿಷ್ಕರ್ಷಿಸಿದೆವು. ಆದರೆ ಈ ಅಸಹಕಾರಿತ್ವವು ನ್ಯಾಯ ಸಮ್ಮತವಾದ್ದಲ್ಲ, ಕಾಯಿದೇಶೀರವಾದ್ದಲ್ಲವೆಂದು ನಮ್ಮ ವೈಸರಾಯರುಗಳು ಹೇಳುವ ಮಾತು ಇಡೀ ಯೂರೋಪಿನ ಬಿಳೀ ಜನರು ಕರಿಜನರಕಡೆಗೆ ಅಸಹಕಾರಿತೆಯನ್ನು ತೋರುತಲಿದ್ದು, ಅವರಿಗೆ ಬಹಿಷ್ಕಾರ ಹಾಕುವಾಗ ಎಂದೆಂದಿಗೂ ಸಮಂಜಸವಾಗಲಾರದು. ದ್ವಿಮುಖಿಸರಕಾರದ ಕ್ರಮವನ್ನು ಜಾರಿಯಲ್ಲಿ ತರುವಾಗಲೇ ಬಿರೋಕ್ರಸಿಯು ದೇಶೀಯರೊಡನೆ ಅಸಹಕಾರಿತ್ವವನ್ನು ಆಚರಿಸಿದೆ ಎನ್ನುವಾಗ ಮಹಾತ್ಮಾಗಾಂಧಿಯವರು ಪ್ರಾರಂಭಿಸಿದ ಈ ಚಳವಳವನ್ನು ಖಂಡಿಸಿದರೂ ನಾವು ನಿಷ್ಕಾಮತೆಯಿಂದಲೂ ನಿರ್ಭೀತಿಯಿಂದಲೂ ಅದನ್ನು ಅನುಸರಿಸುವುದು ನಮ್ಮ ಕರ್ತವ್ಯ. ಆದರೆ ಅದರಲ್ಲಿ ಹಲವು ಸೂಚನೆಗಳನ್ನು ಮಾತ್ರ ಈಗ ಅನುಭವದ ಮೇಲಿಂದ ಪುನಃ ವಿಮರ್ಶೆಮಾಡುವುದು ಅಗತ್ಯವಿದೆ. ಸರಕಾರದಿಂದ ... [illegible]

[illegible]

... ನಿಲ್ಲವೆ ... ಶಾಸನಾಂಗ ... ತಪ್ಪು ... ಗಳ ... ಕಾಂಗ್ರೆಸಿನ ... ವರ್ತನವು ... ತಮ್ಮ ... ಅನೇಕ ಸಲ ಅವರ ... ಸಂಸ್ಥೆಯು ... ಯಲ್ಲಿ ಪ್ರತಿಬಂಧಕಗಳನ್ನು ಹಾಕಿದೆ. ಇದು ಮಾತ್ರವಲ್ಲ, ನ್ಯಾಯಸಾಮ್ಯಗಳು ಜನಸಾಮಾನ್ಯರ ಪಂಚಾಯತಿಕೆಯಿಂದ ಆಗುವುದು ಸಮರ್ಪಕವಾದೀತು. ಎರಡು ಕಂಡರೂ ಗೂಢವಾದ ಕಾನೂನಿನ ಪ್ರಶ್ನೆಗಳು ಅಧಿಕವಾಗಿರುವ ವ್ಯಾಜ್ಯಗಳಲ್ಲಿ ಕಾನೂನಿನ ಪರಿಚಯವಿಲ್ಲದವರು ತೀರ್ಮಾನಿಸುವುದಾಗಲೀ, ಅವನ್ನು ನ್ಯಾಯ ಹರಿಸುವುದಕ್ಕೆ ಕಾನೂನಿನ ಅನುಭವವಿರುವ ವಕೀಲರ ಆಶ್ರಯ ಸಿಗದೆ ಇರುವುದಾಗಲಿ ದೇಶಕ್ಕೆ ಕ್ಷೇಮಕರವಲ್ಲ. ಇದಕ್ಕೆ ಬಿನ ಸಮುದಾಯದ ಶಿಕ್ಷಣ, ಪರಸ್ಪರ ಮೈತ್ರಿ ಪ್ರೇಮಗಳನ್ನು ವರ್ಧಿಸಿ, ದೇಶಪ್ರೇಮವನ್ನು ಅವರಲ್ಲಿ ಬೇರೂರಿಸಿ ಬ್ರಿಟಿಷ ವರ್ತಕರ ವ್ಯಾಪಾರಕ್ಕೆ ಪೆಟ್ಟು ತಗಲುವ ರೀತಿಯಲ್ಲಿ ಸ್ವದೇಶಿ ವಸ್ತುಗಳ ಪ್ರಚಾರ, ಸ್ವದೇಶೀ ಕೈಗಾರಿಕೆಯ ಪ್ರೋತ್ಸಾಹ, ಅನ್ಯ ದೇಶೀಯ ವಸ್ತುಗಳಿಗೆ ವಿಚಾರದಿಂದ, ಬಹಿಷ್ಕಾರ ಮುಂತಾದುವುಗಳನ್ನು ಕೈಕೊಳ್ಳುವುದೂ ದೇಶದಲ್ಲಿ ಈ ಚಳವಳದ ಜ್ಞಾನವನ್ನು ಧಾರಾಳವಾಗಿ ಪಸರಿಸುವುದೂ ಬ್ರಿಟಿಷ ಮಜೂರರೊಡನೆ ಹಸ್ತಲಾಘವ ಮಾಡಿ ಅವರ ಬೆಂಬಲವನ್ನು ಪಡೆಯುವುದೂ ಇವೇ ನಮ್ಮ ಧ್ಯೇಯವನ್ನು ಕೊನೆಗಾಣಿಸುವುದಕ್ಕೆ ಸಾಧನಗಳು.

ಇಷ್ಟನ್ನು ಹೇಳಿದ ಮೇಲೆ ಅಧ್ಯಕ್ಷರು ಕಾಂಗ್ರೆಸಿನ ಧ್ಯೇಯವೇನು ಎಂಬ ಪ್ರಶ್ನೆಯನ್ನು ಎತ್ತಿ ವಾದಿಸಿದರು. ಹಿಂದುಸ್ಥಾನಕ್ಕೆ ಸ್ವಾತಂತ್ರ್ಯವು ಬ್ರಿಟಿಷರ ಅನುಬಂಧವಿದ್ದಾಗಲೀ ಇಲ್ಲದೆಯಾಗಲಿ ಸಿಗುವಂತೆ ಯತ್ನಿಸುವುದೇ ಕಾಂಗ್ರೆಸಿನ ಧ್ಯೇಯವೆಂಬದಾಗಿ ಹೇಳಿ ಈಗ ತಯಾರಿಸಿದ ಮಸೂದೆಯು ತನ್ನ ಮನಸ್ಸಿಗೆ ರುಚಿಸುವುದಿಲ್ಲ, ತಾನು ಎಷ್ಟು ದೀರ್ಘಾಲೋಚನೆ ಮಾಡಿದರೂ ಬ್ರಿಟಿಷರ ಅನುಬಂಧವಿದ್ದು ನಮಗೆ ಸಿಗಬಹುದಾದ ಸ್ವಾತಂತ್ರ್ಯವು ಆ ಅನುಬಂಧವನ್ನು ಕಡಿದ ಸ್ವಾತಂತ್ರ್ಯಕ್ಕಿಂತ ಬಲವಾದೀತು ಮತ್ತು ಹಿಂದುಸ್ಥಾನದ ಯಶಸ್ಸಿಗೆ ಕಾರಣವಾದೀತು ಎಂದು ನನ್ನ ದೃಢವಾದ ನಂಬಿಕೆ. ಜಪಾನು ಸ್ವತಂತ್ರವಾಗಿದ್ದೂ ಬ್ರಿಟಿಷರ ಮೈತ್ರಿಯು ಅವರಿಗೆ ಇದ್ದುದು ತಕ್ಕಕಾಲದಲ್ಲಿ ಅವರ ಗೌರವವನ್ನು ಕಾಪಾಡಲಿಕ್ಕೆ ದಾರಿ ಮಾಡಿತು. ಇದನ್ನು ನಾವು ಆಲೋಚಿಸಬೇಕು. ನಾವು ಸ್ವಾತಂತ್ರ್ಯಪ್ರಿಯರಾದರೂ ಅದು ಯಾವ ಬಗೆಯದಾಗಿರಬೇಕೆಂದು ನೀವು ಈ ಅಧಿವೇಶನದಲ್ಲಿ ಇತ್ಯರ್ಥಿಸಬೇಕು.

ಈಗ ಅಧ್ಯಕ್ಷನಾಗಿ ಮಹಾತ್ಮಾಗಾಂಧಿಯವರಿಗೆ ನನ್ನ ಒಂದು ಸಂದೇಶ, ಮಿ: ಮೊಂಟೆಗ್ಯು ಸಾಹೇಬರಿಗೆ ನಿಮ್ಮದೊಂದು ಸಂದೇಶ ಇರಬೇಕು. ಮೊಂಟೆಗ್ಯು ಸಾಹೇಬರಿಗೆ 'ನೀವು ಮಾಡಿರಿ' ಎಂದು ಹೇಳಿರಿ. ಮಹಾತ್ಮಾ ಗಾಂಧಿಯವರಿಗೆ ನೀವು 'ಮಾಡಬೇಡಿರಿ' ಎಂಬ ಮಾತನ್ನು ಹೇಳಲಿಕ್ಕಿದ್ದೇನೆ. ಯುದ್ಧಕಾಲದಲ್ಲಿ ಕೊಟ್ಟ ಭಾಷೆಯನ್ನು 'ಜಾರಿಮಾಡಿರಿ' ಎಂದು ನೀವು ಹೇಳತಕ್ಕದಿದೆ. ನೂತನ ರಾಷ್ಟ್ರದ ಯೋಜನೆಯನ್ನು ಮಾಡುವ ತವಕದಲ್ಲಿ ಅಸ್ವಾಭಾವಿಕವಾದ ಮತ್ತು ದೀರ್ಘಕಾಲ ಬಾಳದ ವಿಧದಲ್ಲಿ ಘಟನೆಯನ್ನು ಮಾಡಿ ಅದಕ್ಕೆ ದ್ವೇಷದ 'ಸಿಮೆಂಟು' ಹಾಕಬೇಡಿರಿ, ಅದು ಎಂದೆಂದಿ ಶಾಶ್ವತವಾಗಿ ನಿಲ್ಲಲಾರದು ಎಂದು ನನ್ನ ಸಂದೇಶವಿದೆ. ಪಂಜಾಬ ಅನಾಹುತಗಳನ್ನು ಕುರಿತು ನಾವು ಇನ್ನೂ ದೀರ್ಘಕಾಲದ ವರೆಗೆ ಯಲ್ಲಿ ಉರಿಸುವುದು ಯೋಗ್ಯವಲ್ಲ. ಆ ಅನಾಹುತಮಾಡಿದವರುಗಳನ್ನು ನಾವು ಮರೆಯಲಾರದಿದ್ದರೂ ಅವರನ್ನು ನಾವು ಕ್ಷಮಿಸೋಣ. ಮುಂದೆ ಇಂಥ ಅನಾಹುತಗಳು ನಡೆಯದಂತೆ ಏರ್ಪಾಡು ಮಾಡಲು ಯತ್ನಿಸೋಣ ಎಂದು ಇದಕ್ಕೆ ಯುನೈಟೆಡ್ ಸ್ಟೇಟ್ಸಿನ ಇತಿಹಾಸದ ಆಧಾರವನ್ನು ಕೊಟ್ಟು ತಮ್ಮ ಉಪನ್ಯಾಸವನ್ನು ಅಧ್ಯಕ್ಷರು ಮುಗಿಸಿದರು.

ಚಂದಾದಾರರಲ್ಲಿ ವಿಜ್ಞಾಪನೆ.

ಕಾಗದ ಇತರ ಮುದ್ರಣ ಸಾಹಿತ್ಯಗಳ ಬೆಲೆಯು ಮಿತಿಮೀರಿ ಏರುತ್ತಿರುವುದರಿಂದ ಇದೇ ಜನವರಿ ತಾರೀಕಿನಿಂದ ಲಾಗಾಯಿತು ನಮ್ಮ ಪತ್ರಿಕೆಯ ವಾರ್ಷಿಕ ಚಂದಾಹಣವನ್ನು ರೂ. 1—8—0ರಿಂದ ರೂ. 2—0—0ಕ್ಕೆ ಹೆಚ್ಚಿಸಿರುತ್ತೇವೆ. ಚಂದಾದಾರರು ಇದುವರೆಗೆ ನಮ್ಮನ್ನು ಪ್ರೋತ್ಸಾಹಿಸಿದಂತೆ ಮುಂದಕ್ಕೂ ಪ್ರೋತ್ಸಾಹಿಸಬೇಕಾಗಿ ವಿನಂತಿ.

ಚಂದಾದಾರರಿಗೆ ನವವರ್ಷದ ಬಹುಮಾನವಾಗಿ ಮಹಾತ್ಮಾ ಗಾಂಧಿ ಮತ್ತು ಲಾಲಾ ಲಜಪತರಾಯರ ಚಿತ್ರಗಳಿಂದ ಕೂಡಿದ 1921ನೇ ಇಸವಿಯ ಕೆಲೆಂಡರನ್ನು ಈ ಸಂಚಿಕೆಯೊಂದಿಗೆ ಕಳುಹುತ್ತೇವೆ.

ಮ್ಯಾನೇಜರ್, ಸ್ವದೇಶಾಭಿಮಾನಿ.

ದಕ್ಷಿಣ ಕನ್ನಡ ... ಸಹಕಾರ ಪರಿಷತ್ತು ... 19...

[illegible]

ಮಹನೀಯರೇ,

[illegible] ... ನನಗೆ ... ದೃಷ್ಟಿಯಲ್ಲಿ ... ಮಂಗಳೂರು ... [illegible] ... ನಮ್ಮ ... ನಮ್ಮಲ್ಲಿ ... ನನಗೆ ದೃಢವಾದ ... ಪ್ರಾಂತದಿಂದ ಮೈಸೂರು ಸೀಮೆಯ ... ನಮ್ಮ ಜನರ ... ಕೆಲಸವನ್ನು ... ನಮ್ಮ ಸಂಸ್ಥಾನದ ... ದಕ್ಷಿಣ ಕನ್ನಡ ಜಿಲ್ಲೆಯ ಜನರಿಗೂ ... [illegible]

... ದಿರುವುದರಿಂದ, ಇಲ್ಲಿಯ ಜನರ ಚಟುವಟಿಕೆಯೂ, ಕಾರ್ಯನಿರ್ವಾಹಕ ಶಕ್ತಿಯೂ ಆ ತಾಲೂಕಿನಲ್ಲಿ ವ್ಯಾಪಿಸಿಕೊಂಡು ಇದೆ ಎಂಬುದಾಗಿ ಸ್ಪಷ್ಟವಾಗಿ ಕಾಣುತ್ತಿದೆ. ಇದಕ್ಕೆ ಪ್ರತಿಫಲವಾಗಿ ಕಳೆದ ವರುಷದ ಸ್ವಾಗತ ಮಂಡಳಿಯ ಅಧ್ಯಕ್ಷರು ಹೇಳಿರುವಂತೆ ಮೈಸೂರು ಸೀಮೆಯಿಂದ ಸ್ವಲ್ಪ ಮಟ್ಟಿಗೆ ಆಹಾರ ಪದಾರ್ಥಗಳು ಒದಗಿಸಲ್ಪಟ್ಟು ಇಲ್ಲಿಯ ನ್ಯೂನತೆಯನ್ನು ಭರ್ತಿಮಾಡಿ ಕೊಡುವುದು ಹೆಚ್ಚೆಂದು ನಾನೇನೂ ಭಾವಿಸುವುದಿಲ್ಲ.

ಈ ಕಾರಣಗಳಿಂದ ಈ ವರ್ಷದ ಸಹಕಾರ ಪರಿಷತ್ತು ಮಂಡಳಿಯ ಪ್ರಮುಖರು ನನ್ನನ್ನು ಈ ಮಹಾಸಭೆಗೆ ಅಧ್ಯಕ್ಷರಾಗಿ ಇರಬೇಕೆಂದು ಅಪೇಕ್ಷಿಸಿದ್ದು ನನಗೆ ಕೇವಲ ಗೌರವವನ್ನು ಮಾಡಿದ್ದಾಯಿತೆಂದು ನಾನು ಭಾವಿಸಿದಲ್ಲದೆ ಈ ಕೆಲಸವನ್ನು ನಾನು ಒಪ್ಪಿಕೊಳ್ಳತಕ್ಕದ್ದು ನನ್ನ ಕರ್ತವ್ಯವೆಂದು ನನ್ನ ಮನಸ್ಸಿನಲ್ಲಿ ಅಭಿಪ್ರಾಯ ಹುಟ್ಟಿತು. ಈ ಮಹಾ ಸಭೆಯನ್ನು ನಡೆಯುವ ಕಾಲದಲ್ಲಿ ನನ್ನ ಅವಜ್ಞತೆಯಿಂದ ತಪ್ಪುಗಳೇನಾದರೂ ಹೆಚ್ಚು ಕಡಿಮೆ ಕಂಡುಬಂದಲ್ಲಿ ಆ ದೋಷವು ನನ್ನಲ್ಲಿ ನೆಲೆಗೊಂಡಿರತಕ್ಕದೆಂದು ಭಾವಿಸಬೇಕೇ ಹೊರತು ಸಹಕಾರ ಪರಿಷತ್ತಿನ ಕಾರ್ಯವನ್ನು ಸಫಲಗೊಳಿಸಲು ಪರಿಷತ್ತ ಮಂಡಳಿಯವರು ಮಾಡಿರುವ ಪ್ರಯತ್ನಗಳಲ್ಲಿ ಯಾಗಲಿ ಅಥವಾ ಈ ಭರತಖಂಡದಲ್ಲಿ ಆಸೇತುಹಿಮಾಚಲ ಪರ್ಯಂತ ವಾಸವಾಗುವ ಜನರು ಈ ಸಹಕಾರ ನಿಯಮವು ನಮ್ಮಗಳ ಪುರೋಭಿವೃದ್ಧಿಗೆ ಅತ್ಯಾವಶ್ಯಕವಾದ ಉಪಾಯವೆಂದು ಏಕವಾಕ್ಯತೆಯಿಂದ ನಡೆವ ಅಭಿಪ್ರಾಯದಲ್ಲೇ ಆಗಲಿ ಯಾವ ನ್ಯೂನತೆಯೇ ಆಗಲಿ ದೋಷವೇ ಆಗಲಿ ಉಂಟೆಂದು ತಾವು ಎಂದಿಗೂ ತಿಳಿಯಕೂಡದು. ಸಹಕಾರದಿಂದ ನಮ್ಮ ದೇಶಕ್ಕೆ ಉಂಟಾಗಬಹುದಾದ ಪ್ರಯೋ... [illegible]

ಹೇಳಿರ ... ಕ್ವ ಸೂರ್ಯ ಪ್ರಭವೋ ವಂಶಃ ... [illegible]

ವಂಶ ... ತಿತೀರ್ಷುರ್ದುಸ್ತರಂ ಮೋಹಾದುಡುಪೇನಾಸ್ಮಿ ಸಾಗರಂ

ಎಂದು ಮಹಾ ಕವಿಯಾದ ಕಾಳಿದಾಸನು ಪ್ರಸಿದ್ಧವಾದ ರಘುವಂಶ ಚರಿತ್ರೆಯನ್ನು ವಿವರಿಸುವುದಕ್ಕೆ ಶಕ್ತಿಸಾಲದೆ ಮಹಾ ಸಮುದ್ರವನ್ನು ಬಂದು ಸಣ್ಣ ಹರಿಗೋಲಿನಿಂದ ದಾಟುವುದಕ್ಕೆ ಪ್ರಯತ್ನಪಟ್ಟಿರುವಂತೆ ಹೇಳಿಕೊಳ್ಳುತ್ತಾನೆ. ಅದೇ ಪ್ರಕಾರ ನನಗೂ ಕಾಳಿದಾಸನಿಗೂ ಬಹಳ ಅಂತರವಿದ್ದರೂ ಈ ಸಹಕಾರ ವಿಷಯಗಳಲ್ಲಿ ಮಾತನಾಡುವಾಗಲೆಲ್ಲಾ ಇದರ ಪ್ರಯೋಜನಗಳನ್ನು ಜನರ ಮನಸ್ಸಿಗೆ ನಾಟುವಂತೆ ವ್ಯಾಖ್ಯಾನಿಸುವ ಶಕ್ತಿಯೇ ಆಗಲಿ ಕಳತೆಯನ್ನೇ ಆಗಲಿ ದೇವರು ಕೊಡಲಿಲ್ಲವಲ್ಲವೆಂದು ನನ್ನ ಮನ ಖೇದವುಂಟಾಗುತ್ತದೆ. ಆದರೆ ಸಹಕಾರ ಪದಾರ್ಥದ ರುಚಿ ಭವಿಸಿರುವ ತಮ್ಮಂಥ ಮಹನೀಯರಿಗೆ ನಾನು ಹೆಚ್ಚಾಗಿ ಇದರಲ್ಲಿ ಹೇಳುವುದು ಚರ್ವಿತಚರ್ವಣವಾಗುತ್ತದೆಯೇ ಮತ್ತೇನೂ ಇಲ್ಲ.

ಪ್ರಕೃತ ನಮ್ಮ ದೇಶದ ಸ್ಥಿತಿಯನ್ನು ಆಲೋಚಿಸಿ ನೋಡಿದರೆ ... ಎಂದಿನ ಪದ್ಧತಿಗಳೆಲ್ಲಾ ಅವ್ಯವಸ್ಥೆಗೆ ತಲಪಿವೆ. ಹೊಸ ದಾರಿಗಳು ಇನ್ನೂ ದೃಷ್ಟಿಗೋಚರಕ್ಕೆ ಸರಿಯಾಗಿ ಬಾರದಂತೆ ಇವೆ. ನಮ್ಮಲ್ಲಿ ... ಕರ್ಮ ... ಎಂಬ ಒಂದು ನ್ಯಾಯವು ಇರುವುದು, ಸಂಪ್ರದಾಯದಲ್ಲಿ ... ಪೂರ್ವದಲ್ಲಿ ನಮ್ಮ ದೇಶದವರು ಅನ್ಯ ದೇಶಗಳಿಗೆ ಹೋಗುತ್ತಿರಲಿಲ್ಲ. ... ಪ್ರಪಂಚವೆಂದು ಭಾವಿಸಿಕೊಂಡಿರುತ್ತಿದ್ದರು ... ಅನೇಕ ... [illegible] ... ಪೂರ್ವದಲ್ಲಿ ಗ್ರಾಮದಲ್ಲಿ ಬೇಕಾದ ... ಸ್ವಲ್ಪ ... ಧಾನ್ಯಗಳು ಬಹು ದೂರ ... [illegible] ... ಇಂಡಿಯಾ ಗವರ್ನಮೆಂಟಿನಿಂದ ... ಎಂಬವರು ಮೈಸೂರು ಸೀಮೆಯಲ್ಲಿಯೂ ಮಂಗಳೂರು

[illegible]

ಈಗ ತಾನೇ ಕೊನೆಗಾಣುತ್ತಿರುವ ಯುದ್ಧ ಕಾಲದಲ್ಲಿ ಉಂಟಾದ ತೊಂದರೆಗಳು ಎಲ್ಲರ ಅನುಭವದಲ್ಲಿಯೂ ಇದ್ದೇ ಇವೆ. ಗ್ರಾಮಗಳಲ್ಲಿ ಸಾಮಾನ್ಯವಾದ ಹತ್ತಿಯ ರಾಟೆಗಳನ್ನಿಟ್ಟುಕೊಂಡು ನೂಲನ್ನು ಮಾಡಿ ಅದರಿಂದ ಬಟ್ಟೆಯನ್ನು ನೇಯ್ದು ಆ ಬಟ್ಟೆಗಳನ್ನು ಜನರ ಉಪಯೋಗಕ್ಕೆ ಒದಗಿಸುತ್ತಿದ್ದರು. ಈಗಿನ ಕಾಲದಲ್ಲಿ ಇಂಥಾ ಬಟ್ಟೆಗಳು ಹೆಚ್ಚಾಗಿ ಒದಗಿಸುವುದಕ್ಕೆ ಸಾಧ್ಯವಿಲ್ಲದಂತೆ ಗಿರಣಿ ಯಂತ್ರಗಳಲ್ಲಿ ತಯಾರಾದ ಬಟ್ಟೆಗಳು ವಿಶೇಷವಾಗಿ ಬರಲಾರಂಭಿಸಿ ಇಲ್ಲಿಯ ನೇಯಿಗೆಯವರ ಕಸುಬಿಗೆ ಬಹಳವಾಗಿ ಕುಂದಕವುಂಟಾಯಿತು. ಈ ದೇಶದಿಂದ ಹತ್ತಿಯನ್ನು ಇಂಗ್ಲಾಂಡ್ ದೇಶಕ್ಕೆ ನೆಲದ ಮೇಲೆ ರೈಲಿನಲ್ಲಿಯೂ ಸಮುದ್ರದಲ್ಲಿ ಜಹಜಿನಲ್ಲಿಯೂ ಸಾಗಿಸಿ, ಅನ್ಯದೇಶಗಳಲ್ಲಿ ಈ ಹತ್ತಿಗಳಿಂದ ನೇಯಿದ ಬಟ್ಟೆಗಳನ್ನು ಅದೇ ಪ್ರಕಾರ ಜಹಜಿನಲ್ಲಿಯೂ ರೈಲಿನಲ್ಲಿಯೂ ಹಿಂದಕ್ಕೆ ತಂದು ನಮ್ಮ ಹಿಂದೂ ದೇಶದಲ್ಲಿ ವಿಕ್ರಯಿಸಿ ವಿಶೇಷವಾಗಿ ಲಾಭವನ್ನು ಪಡೆದು ಆ ಲಾಭ ದ್ರವ್ಯವನ್ನು ಪುನಹ ಅನ್ಯದೇಶಕ್ಕೆ ಸಾಗಿಸಿಕೊಂಡು ಹೋಗುವುದು ಎಷ್ಟರ ಮಟ್ಟಿಗೆ ಇಲ್ಲಿನ ಜನರಿಗೆ ಉಪಕಾರವೋ ತಾವುಗಳೇ ಆಲೋಚಿಸಬಹುದು. ಬೆಣ್ಣೆ ಇಟ್ಟುಕೊಂಡು ತುಪ್ಪಕ್ಕೆ ಅಲೆದರೆ ಹೇಗೋ ಹಾಗೆ ಪ್ರಕೃತ ನಮ್ಮ ಸ್ಥಿತಿಯೆಂದು ಹೇಳಬೇಕಾಗಿದೆ. ನಮ್ಮ ದೇಶದಲ್ಲಿ ಬೆಳೆಯುವ ಪದಾರ್ಥಗಳಿಂದಲೇ ನಮಗೆ ಬೇಕಾಗುವ ಸಾಮಾನುಗಳನ್ನೆಲ್ಲಾ ಮಾಡಿಕೊಳ್ಳುವುದಕ್ಕೆ ಬಹುಮಟ್ಟಿಗೆ ದೇವರು ನಮಗೆ ಸ್ವಭಾವಸಿದ್ಧವಾದ ಅನುಕೂಲಗಳನ್ನು ಕೊಟ್ಟಿದ್ದರೂ ನಾವುಗಳು ಮಾತ್ರ ಕೈಕಟ್ಟಿಕೊಂಡು ಬಹುಕಾಲ ಕೂತುಕೊಂಡಿದ್ದೆವು. ಮನುಷ್ಯನು ಸಾಮಾನ್ಯವಾಗಿ ಪ್ರವೃತ್ತಿ ಮಾರ್ಗ ನಿವೃತ್ತಿ ಮಾರ್ಗ, ಎಂದು ಎರಡು ಮಾರ್ಗಗಳನ್ನು ಅನುಸರಿಸಬಹುದು. ಇಲ್ಲಿಯ ಜನರು ಅನ್ಯದೇಶದವರು ನಮ್ಮ ದೇಶಕ್ಕೆ ಬಂದರೂ ಬರಲಿ, ನಾವು ಮಾತ್ರ ನಿವೃತ್ತಿ ಮಾರ್ಗವನ್ನೇ ಅನುಸರಿಸಿರೋಣವೆಂದು ಬಹು ಮಟ್ಟಿಗೆ ಮೇಲುಪಂಕ್ತಿ ಹಾಕಿಕೊಂಡಿದ್ದದರಿಂದ ನಮ್ಮ ದುರವಸ್ಥೆಗೆ ಅದೂ ಒಂದು ಕಾರಣವೆಂದು ಹೇಳಬೇಕಾಗಿದೆ. ಅನ್ಯದೇಶದವರಾದರೋ ಪ್ರವೃತ್ತಿ ಮಾರ್ಗಾವಲಂಬಿಗಳು. ಪ್ರತಿ ಒಬ್ಬರೂ ತಮ್ಮ ಜೀವಮಾನದಲ್ಲಿ ಆದ ಮಟ್ಟಿಗೆ ದ್ರವ್ಯಸಂಗ್ರಹವನ್ನು ಮಾಡಬೇಕು. ತಮ್ಮ ಶರೀರ ಪೋಷಣೆಗೂ ಮನಸ್ಸಂತೋಷಕ್ಕೂ ಸಹಕಾರಿಯಾಗುವ ಪದಾರ್ಥಗಳನ್ನೆಲ್ಲಾ ಶೇಖರಿಸಬೇಕು. ಸುಖಸಾಧನೆಗಳನ್ನು ಹೆಚ್ಚಿಸಿಕೊಳ್ಳುವುದೇ ಉತ್ತಮವಾದ ಮಾರ್ಗ, ವೈರಾಗ್ಯದಿಂದ ಅಷ್ಟು ಸುಖವಿಲ್ಲವೆಂದು ಭಾವಿಸುವವರು ಅವರು ನಮ್ಮ ದೇಶಕ್ಕೆ ಬಂದು ... ಪ್ರಯೋಜನವನ್ನು ... ಕೊಂಡು ಹೋಗುತ್ತಿರುವುದು ನಿತ್ಯದಲ್ಲಿಯೂ ನಮ್ಮ ಕಣ್ಣಿಗೆ ಕಾಣುತ್ತಲೇ ಇದೆ. ಮೈಸೂರು ಸೀಮೆಯಲ್ಲಿ ಈಗ ಸುಮಾರು ೫೦ ವರ್ಷಗಳಿಂದ ... ಬಂಗಾರವನ್ನು ಗಣಿಗಳನ್ನು ಮಾಡಿಕೊಂಡು ಬಂಡವಾಳವನ್ನು ತೆಗೆಯುತ್ತಿರುವುದು ತಮ್ಮೆಲ್ಲರಿಗೂ ಗೋಚರವಾದ ವಿಷಯವೇ ಆಗಿದೆ. ಸಾಧಾರಣವಾಗಿ ಪ್ರತಿವರ್ಷದಲ್ಲಿಯೂ ಮೂರು ಕೋಟಿ ರೂಪಾಯಿಯಷ್ಟು ಬಂಗಾರವು ಇಲ್ಲಿ ಉತ್ಪತ್ತಿಯಾಗುತ್ತಲಿದೆ. ಇಷ್ಟು ಬಂಗಾರವನ್ನು ದೇವರು ನಿರ್ಮಿಸಿದರೂ ಅದನ್ನು ಭೂಗರ್ಭದಿಂದ ಮೇಲಕ್ಕೆ ತೆಗೆಯುವ ಸಾಧನ ಸಾಮಾಗ್ರಿಗಳು ನಮಗಿಲ್ಲದೆ ನಮ್ಮ ದುರವಸ್ಥೆಯು ಕಾರಣವಾಯಿತು. ಎಂತ ಹೇಳಬಹುದೇ ಹೊರತು ಇದುವರೆಗೆ ಒದಗಿರುವ ಬಂಗಾರವೆಲ್ಲಾ ನಮ್ಮ ಭರತಖಂಡದವರಿಗೆ ಉಳಿದಿದ್ದರೆ ಈ ಖಂಡದ ಜನರು ಎಷ್ಟರ ಮಟ್ಟಿಗೆ ಉಚ್ಛ್ರಾಯ ಸ್ಥಿತಿಯಲ್ಲಿ ಇರುತ್ತಿದ್ದರೆಂದು ನಾನು ತಮ್ಮಗಳಿಗೆ ಹೇಳಬೇಕಾದ ಪ್ರಕೃತವೇ ಇಲ್ಲ. ಬಡತನವೆಂಬುವುದು ಯಾವಾಗಿನಿಂದಲೂ ಇದ್ದೇ ಇದೆ. ಅದು ಕೆಲವು ವೇಳೆ ಮನುಷ್ಯನ ಅವಜ್ಞತೆಯಿಂದಲೂ ಬುದ್ಧಿ ವಿಕಾರದಿಂದಲೂ ಉಂಟಾಗುತ್ತದೆ. ಕೆಲವು ವೇಳೆ ದುರದೃಷ್ಟದಿಂದಲೂ ಪ್ರಾಪ್ತವಾಗುವುದುಂಟು. ಆದರೆ ನಾನು ಬಹು ಮಟ್ಟಿಗೆ ಆಲೋಚಿಸಿರುವುದರಲ್ಲಿ ಬಡತನವು ದೇವರ ಸಂಕಲ್ಪದಿಂದ ಉಂಟಾಯಿತೆಂದು ನನಗೆ ಭರವಸೆ ತಪ್ಪಿದೆ.

ಉದ್ಯಮೇ ನಹಿ ಸಿದ್ಧ್ಯಂತಿ ಕಾರ್ಯಾಣಿ ನ ಮನೋರಥೈಃ ।
ನಹಿ ಸುಪ್ತಸ್ಯ ಸಿಂಹಸ್ಯ ಪ್ರವಿಶಂತಿ ಮುಖೇ ಮೃಗಾಃ ॥

ಈ ಸಂಸ್ಕೃತ ಶ್ಲೋಕದಲ್ಲಿ ಹೇಳಿರುವಂತೆ ಯಾವ ಕಾರ್ಯವನ್ನೇ ಆಗಲಿ ಯಾವ ಫಲವನ್ನೇ ಆಗಲಿ ಪ್ರಯತ್ನದಿಂದ ಸಾಧಿಸಬೇಕೇ ಹೊರತು ಸಿದ್ಧಿಯು ಸುಮ್ಮನೆ ಮನಸ್ಸಿನಲ್ಲಿ ... ಕೊಂಡಿರುವುದರಿಂದ ಆಗುವುದಿಲ್ಲ. ಸಿಂಹವಾದರೂ ಸುಮ್ಮನೆ ಮಲಗಿದ್ದರೆ ... ಬಂದು ... ಬಾಯಿಯೊಳಗೆ ಮೃಗಗಳು ... ದಿದ್ದರಿಂದ ನಾವು ಪ್ರಕೃತ ಕಾಲದ ... ಗಳನ್ನು ಅನುಸರಿಸಿ ನಮ್ಮ ನಡವಳಿಕೆಯನ್ನು ಬದಲಾಯಿಸಿಕೊಂಡ ಹೊರತು ನಮಗೆ ಕ್ಷೇಮವಿಲ್ಲವೆಂದು ನಾನು ... ಹೇಳಿದರೂ ನನಗೆ ತೃಪ್ತಿಯಾಗುವುದಿಲ್ಲ ... ನನಗೆ ಇನ್ನೂ ಅನೇಕ ತೊಂದರೆಗಳು ಉಂಟಾಗುತ್ತಲಿವೆ ...

